ರಾಷ್ಟ್ರಬಂಧು

ಎಸ್. ನಿಜಲಿಂಗಪ್ಪ

ಲೇಖಕರು

ಡಾ. ಕೆ. ರಾಘವೇಂದ್ರರಾವ್

ಕನ್ನಡಕ್ಕೆ

ಡಾ. ಪಿ.ವಿ. ನಾರಾಯಣ

ರಾಷ್ಟ್ರಬಂಧು ಎಸ್. ನಿಜಲಿಂಗಪ್ಪ

ಲೇಖಕರು

ಡಾ. ಕೆ. ರಾಘವೇಂದ್ರ ರಾವ್

ಕನ್ನಡಕ್ಕೆ

ಡಾ. ಪಿ. ವಿ. ನಾರಾಯಣ

ಶ್ರೀ ಎಸ್. ನಿಜಲಿಂಗಪ್ಪ ರಾಷ್ಟ್ರೀಯ ಪ್ರತಿಷ್ಠಾನ

ಬೆಂಗಳೂರು – 560 001

RASHTRABANDHU S. NIJALINGAPPA – A Kannada translation by Dr. P.V. Narayana of the original in English entitled RASHTRABANDHU S. NIJALINGAPPA – MAN AND STATESMAN by **Dr. K. Raghavendra Rao**; Published by Shri S. Nijaligappa National Foundation, # 314 (Terrace Rooms), Karnataka State Cricket Association, M. Chinnaswamy Stadium, Mahatma Gandhi Road, Bangalore – 560 001

© Shri S. Nijalingappa National Foundation

First Impression : 2011

Size : Demy 1/8th

Paper : Used 70 GSM N.S. Maplitho

Price : Rs. 325/-

Pages : xxii + 480

ಮೊದಲ ಮುದ್ರಣ : ೨೦೧೧

ಬೆಲೆ : ರೂ. ೩೨೫/-

ಮುಖಪುಟ : ಮಂಜುನಾಥ್ ಎಸ್.

ಪ್ರಕಾಶಕರು :
ಶ್ರೀ ಎಸ್. ನಿಜಲಿಂಗಪ್ಪ ರಾಷ್ಟ್ರೀಯ ಪ್ರತಿಷ್ಠಾನ
ಬೆಂಗಳೂರು – ೫೬೦ ೦೦೧

ಸ್ವಾನ್ ಪ್ರಿಂಟರ್ಸ್
www.svanprinters.com
☎ 080-2674 2233

सत्यमेव जयते

ಡಾ. ನ್ಯಾಯಮೂರ್ತಿ ವ್ಹಿ.ಎಸ್. ಮಳಿಮಠ
ಅಧ್ಯಕ್ಷರು
ಕರ್ನಾಟಕ ಕಾನೂನು ಆಯೋಗ

ಕೊಠಡಿ : ೩೦೨,
೩ನೇ ಮಹಡಿ, ವಿಧಾನಸೌಧ
ಬೆಂಗಳೂರು – ೫೬೦ ೦೦೧

ಕನ್ನಡ ಆವೃತ್ತಿಗೆ ಮುನ್ನುಡಿ

ಶ್ರೀ ಸಿದ್ದವನಹಳ್ಳಿ ನಿಜಲಿಂಗಪ್ಪನವರ ಆತ್ಮಚರಿತೆ ಇಂಗ್ಲಿಷ್‌ನಲ್ಲಿ "Rashtrabandhu S. Nijalingappa - Man and Statesman" ಎಂಬ ಶೀರ್ಷಿಕೆಯಲ್ಲಿ ಡಾ. ಕೆ. ರಾಘವೇಂದ್ರರಾವ್ ಅವರು ರಚಿಸಿದ್ದು ೧೯೯೯ರಲ್ಲಿ ಪ್ರಕಟವಾಯಿತು. ಇದಕ್ಕೆ ತುಂಬಾ ಬೇಡಿಕೆ ಬಂದದ್ದರಿಂದ ಎರಡನೆಯ ಆವೃತ್ತಿಯನ್ನು ೨೦೦೧ರಲ್ಲಿ ಪ್ರಕಟಿಸಲಾಯಿತು. ಶ್ರೀ ನಿಜಲಿಂಗಪ್ಪನವರ ಜೀವನಚರಿತ್ರೆ ಕನ್ನಡ ಮಾತನಾಡುವವರಿಗೆ ವಂಚಿತವಾಗಿದೆ, ಇದು ದೊಡ್ಡ ಅನ್ಯಾಯ ಎಂಬ ಆಗ್ರಹದ ಕೂಗಿಗೆ ಮಣಿದು, ಸ್ಪಂದಿಸಿ, ಶ್ರೀ ಎಸ್. ನಿಜಲಿಂಗಪ್ಪ ನ್ಯಾಷನಲ್ ಫೌಂಡೇಶನ್ ವತಿಯಿಂದ ಶ್ರೀ ನಿಜಲಿಂಗಪ್ಪನವರ ಜೀವನಚರಿತೆಯನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಲು ನಿರ್ಧರಿಸಿತು. ಅದರ ಪರಿಣಾಮವಾಗಿ ಡಾ. ಪಿ.ವಿ. ನಾರಾಯಣ ಅವರಿಗೆ "Rashtrabandhu S. Nijalingappa - Man and Statesman" ಆಂಗ್ಲ ಶೀರ್ಷಿಕೆಯ ಅವರ ಜೀವನಚರಿತ್ರೆಯನ್ನು ಕನ್ನಡಕ್ಕೆ ಅನುವಾದ ಮಾಡುವ ಜವಾಬ್ದಾರಿಯನ್ನು ವಹಿಸಿಕೊಟ್ಟಿತು. ಅದರಂತೆ ಅವರು ಬಹಳ ಶ್ರಮಪಟ್ಟು ಅತ್ಯಂತ ಕಡಿಮೆ ಸಮಯದಲ್ಲಿ ಎಲ್ಲರೂ ಮೆಚ್ಚುವ ರೀತಿಯಲ್ಲಿ ಅನುವಾದವನ್ನು ಮಾಡಿಕೊಟ್ಟಿದ್ದಾರೆ. ಅವರಿಗೆ ಶ್ರೀ ನಿಜಲಿಂಗಪ್ಪ ನ್ಯಾಷನಲ್ ಫೌಂಡೇಶನ್ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಅತ್ಯಂತ ಶ್ರದ್ಧೆಯಿಂದ ಬಹಳ ಉತ್ತಮ ರೀತಿಯಲ್ಲಿ ಈ ಪುಸ್ತಕವನ್ನು ಮುದ್ರಿಸಿಕೊಟ್ಟ ಬೆಂಗಳೂರಿನ ಸ್ವಾನ್ ಪ್ರಿಂಟರ್ಸ್ ಅವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು. ಈ ಕಾರ್ಯಕ್ಕೆ ಎಲ್ಲ ರೀತಿಯ ಸಹಕಾರ ನೀಡಿದ್ದಕ್ಕಾಗಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಧನ್ಯವಾದಗಳು.

ಕಲುಷಿತ ರಾಜಕೀಯ ವಾತಾವರಣ, ಶೋಚನೀಯ ಮಟ್ಟದ ಮೌಲ್ಯಗಳ ಕುಸಿತ ತಾಂಡವವಾಡುವ ಈಗಿನ ದಿನಮಾನಗಳಲ್ಲಿ ಆದರ್ಶ ಜೀವಿಗಳ ಅವಶ್ಯಕತೆಯಿದೆ. ಆದರ್ಶಗಳನ್ನು ಪ್ರೋತ್ಸಾಹಿಸಲು ಶುದ್ಧ ಚಾರಿತ್ರ್ಯದ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ನಿಃಸ್ವಾರ್ಥ ಅಪ್ಪಟ ಸೇವೆ ಸಲ್ಲಿಸಿದವರ ಆದರ್ಶ ಜೀವನ ಸ್ಫೂರ್ತಿಯ ಸೆಲೆ ಆಗಬೇಕಾಗಿದೆ. ಆದ್ದರಿಂದ ಅಪರೂಪದ ಮೌಲ್ಯಾಧಾರಿತ ರಾಜಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರ ನಿದರ್ಶನಗಳು ಈಗಿನ ಯುವ ಪೀಳಿಗೆಗೆ ಸ್ಫೂರ್ತಿದಾಯಕ ಮಾರ್ಗ ದರ್ಶನದ ಅವಶ್ಯಕತೆ ಇದೆ. ಈ ದಿಶೆಯಲ್ಲಿ ಶ್ರೀ ನಿಜಲಿಂಗಪ್ಪನವರು ನಡೆದು ಬಂದ ಸತ್ಯ, ಶುದ್ಧ, ಪವಿತ್ರ ಜೀವನ, ಅವರ ಮೌಲ್ಯಾಧಾರಿತ ರಾಜಕೀಯ ನಡತೆ ಇಂದಿನ ಹಾಗೂ ಮುಂದಿನ ಪೀಳೀಗೆಗೆ ದಾರಿ ದೀಪವಾಗಲಿ ಎಂಬ ಸದುದ್ದೇಶದಿಂದ ಅವರ ಜೀವನ ಚರಿತೆಯನ್ನು ಕನ್ನಡದಲ್ಲಿ ಪ್ರಕಟಿಸಲಾಗುತ್ತಿದೆ. ಈಗಿನ ಕಲುಷಿತ ರಾಜಕೀಯ ಹಸನಾಗಲು ಶ್ರೀ ನಿಜಲಿಂಗಪ್ಪನವರ ಆದರ್ಶ, ಸ್ಫಟಿಕದಂತಹ ಜೀವನ ಮಾರ್ಗದರ್ಶಿಯಾಗಲಿ, ಸ್ಫೂರ್ತಿದಾಯಕವಾಗಲಿ ಎಂದು ಹಾರೈಸುತ್ತೇನೆ.



೧-೩-೨೦೧೧ (ಡಾ. ನ್ಯಾಯಮೂರ್ತಿ ವ್ಹಿ.ಎಸ್. ಮಳಿಮಠ)

ಮುನ್ನುಡಿ

"ರಾಷ್ಟ್ರಬಂಧು ಎಸ್. ನಿಜಲಿಂಗಪ್ಪ – ಮ್ಯಾನ್ ಅಂಡ್ ಸ್ಟೇಟ್ಸ್‌ಮ್ಯಾನ್" ಎಂಬ ಡಾ. ಕೆ. ರಾಘವೇಂದ್ರ ರಾವ್ ಅವರಿಂದ ರಚಿತವಾದ ಈ ಜೀವನಚರಿತ್ರೆಯ ಕೃತಿಯು ಭಾರತದ ಅತ್ಯಂತ ಶ್ರೇಷ್ಠ ಪುತ್ರರಲ್ಲೊಬ್ಬರ ಜೀವನ ಮತ್ತು ಸಾಧನೆಗಳ ವಿವರಣೆ ಮಾತ್ರವಾಗಿರದೆ, ಶ್ರೀ ಎಸ್. ನಿಜಲಿಂಗಪ್ಪನವರು ಎದುರಿಸಿದ ರಾಷ್ಟ್ರೀಯ ಮಹತ್ವದ ಪ್ರಕ್ಷುಬ್ಧ ಸಂಗತಿಗಳ ಇತಿಹಾಸವೂ ಆಗಿದೆ. ವಿವರವಾಗಿ ದಿನಚರಿಗಳನ್ನು ಬರೆದು, ತಾವು ಕಂಡ ವ್ಯಕ್ತಿಗಳ ಬಗೆಗಿನ ತಮ್ಮ ಕಾಣ್ಕೆಗಳನ್ನು ದಾಖಲಿಸಿ ಮುಂದಿನ ಪೀಳಿಗೆಗಳ ಉಪಯೋಗಕ್ಕಾಗಿ ಬಿಟ್ಟುಹೋದ ಪಶ್ಚಿಮರಾಷ್ಟ್ರಗಳ ಮುತ್ಸದ್ದಿಗಳಂತಲ್ಲದೆ, ಭಾರತದ ನಾಯಕರುಗಳು ಸಮಕಾಲೀನ ಸಂಗತಿಗಳನ್ನು ದಾಖಲಿಸಿ ಅವುಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ಪ್ರತಿಕ್ರಿಯೆಗಳನ್ನು ಬರೆದಿಟ್ಟಿರುವುದು ಅಪರೂಪ. ಹೀಗಾಗಿ ಆನಂತರ ಅವರು ಬರೆಯುವ, ಅಥವಾ ಬರೆಸುವ ಜೀವನಚರಿತ್ರೆಗಳಲ್ಲಿ ಅವುಗಳನ್ನು ಬರೆಯುವ ಹೊತ್ತಿಗಿನ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆಯೇ ಹೊರತು ಅವುಗಳು ಜರುಗಿದ ಕಾಲದಲ್ಲೇ ಉಂಟಾದುವನ್ನಲ್ಲ. ಇದರಿಂದಾಗಿ ಅಂತಹ ಬಹುತೇಕ ಪ್ರಕಟಣೆಗಳ ಮೌಲ್ಯ ಕಡಿಮೆಯಾಗಿಬಿಡುತ್ತದೆ. ವ್ಯವಸ್ಥಿತವಾಗಿ ದಿನಚರಿಯನ್ನು ಬರೆಯುವುದಕ್ಕೆ ದೃಢ ನಿರ್ಧಾರ ಮತ್ತು ಅಪಾರ ಶಿಸ್ತು ಬೇಕಾಗುತ್ತದೆ. ಮರೆತುಹೋಗುವುದಕ್ಕೆ ಅಥವಾ ಮುಂದೆ ನಡೆ ಯುವ ಸಂಗತಿಗಳಿಂದ ಪ್ರಭಾವಿತವಾಗುವುದಕ್ಕೆ ಮುಂಚೆಯೇ ಅವನ್ನು ಬರೆದಿಡಬೇಕಾಗಿದೆ.

ನಮ್ಮ ಅದೃಷ್ಟಕ್ಕೆ, ನಡೆದ ಸಂಗತಿಗಳ ದಾಖಲೆಗಳನ್ನೂ ಮತ್ತು ಆಗಿನ ತಮ್ಮ ಪ್ರತಿಕ್ರಿಯೆಗಳನ್ನೂ ದಿನಾಂಕಕ್ಕೆ ಅನುಕ್ರಮವಾಗಿ ಸೂಕ್ತ ಸಮಯದಲ್ಲಿಯೇ ನಿಜಲಿಂಗಪ್ಪನವರು ದಾಖಲಿಸಿದ್ದಾರೆ. ಹೀಗಾಗಿ ಲೇಖಕರು ಅವರ ದಿನಚರಿಯಿಂದ ನೇರವಾಗಿ ಉಲ್ಲೇಖಿಸಿ ತಮ್ಮ ವ್ಯಾಖ್ಯಾನಗಳನ್ನು ಅಧಿಕೃತಗೊಳಿಸಲು ಸಹಕಾರಿಯಾಗಿದೆ.

ನಿಜಲಿಂಗಪ್ಪನವರ ಬದುಕು ಯುವ ಪೀಳಿಗೆಗಳಿಗೆ ಸ್ಫೂರ್ತಿಯ ಸೆಲೆಯಾಗಿದೆ. ತಮ್ಮ ಹಳ್ಳಿಯ ಮನೆಯಿಂದ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷ ಹುದ್ದೆಯವರೆಗೆ ಅವರು ಬದುಕಿನಲ್ಲಿ ಹೋರಾಟ ನಡೆಸಿದವರು, ಅದರಲ್ಲಿ ಗೆದ್ದವರು. ತಮ್ಮ ಕಾಲದ ಪ್ರಸಿದ್ಧ ಶಿಕ್ಷಣತಜ್ಞ ಮತ್ತು ರಾಜ್ಯದ ಶಿಕ್ಷಣ ಇಲಾಖೆಯ ಮುಖ್ಯಸ್ಥರಾಗಿದ್ದ ಡಾ. ಸಿ.ಆರ್. ರೆಡ್ಡಿಯವರಿಗೆ ಅವರು, "ನಾನು ದೂರದ ಊರಿನ ಒಂದು ಬಡ ಕುಟುಂಬದಿಂದ ಬಂದಿದ್ದೇನೆ. ನನಗೆ ಯಾರದೇ ಬೆಂಬಲವಾಗಲೀ ಯಾವುದೇ ಪ್ರಮುಖ ವ್ಯಕ್ತಿಯ ಶಿಫಾರಸಾಗಲೀ ಇಲ್ಲ.... ನಾನು ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಮೊದಲ ದರ್ಜೆಯಲ್ಲಿ ತೇರ್ಗಡೆಯಾಗಿದ್ದೇನೆ" ಎಂದು ಬರೆದು ಬೆಂಗಳೂರಿನ ಕಾಲೇಜೊಂದರಲ್ಲಿ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಿದರು. ಪದವಿಯನ್ನು ಪಡೆದು ವಕೀಲಿ ವೃತ್ತಿಯನ್ನು ಆರಂಭಿಸಿದರು. ಆ ಕಾಲದಲ್ಲಿ, ಅವರಿಗೆ ಸರ್ಕಾರದಲ್ಲಿ ಒಂದು ನೌಕರಿ ಸಿಗಬಹುದಿತ್ತು, ಆದರೆ ದೇಶದ ಸೇವೆಗಾಗಿ ಒಂದಷ್ಟು ಕಾಲವನ್ನು ವಿನಿಯೋಗಿಸಲು ಸಾಧ್ಯವಾಗುತ್ತದೆಂಬ ಕಾರಣದಿಂದ ಅವರು ವಕೀಲಿ ವೃತ್ತಿಯನ್ನು ಆರಿಸಿಕೊಂಡರು. ಆ ಸಮಯದಲ್ಲಿ, ಅವರು ತಮ್ಮ ವಕೀಲವೃಂದದಲ್ಲಿ ಒಬ್ಬ ಕಿರಿಯ ವಕೀಲರು, ಯಾವುದೇ ಶುಲ್ಕವನ್ನು ತೆಗೆದುಕೊಳ್ಳದೆ ಬಡವರಿಗೆ ಕಾನೂನು ನೆರವನ್ನು ನೀಡುತ್ತಿದ್ದವರು; ತಮ್ಮ ಕೆಲಸದಲ್ಲಿ ಮತ್ತು ಬದುಕಿನಲ್ಲಿ ಅವರು ಪರಿಪೂರ್ಣರಾಗಿದ್ದವರು, ಅಂಥವರ ಗುಣಗಳೇ ಅವರಿಗೆ ಮುಂದಿನ ಬದುಕಿನಲ್ಲಿ ದೊಡ್ಡ ಆಸ್ತಿಗಳೆನಿಸಿದವು.

ಎಲ್ಲಕ್ಕಿಂತ ಮಿಗಿಲಾದ ಅವರ ಸಾಧನೆಯೆಂದರೆ, ಕರ್ನಾಟಕದ ಏಕೀಕರಣ. ಕನ್ನಡಿಗರು ಮಹಾರಾಷ್ಟ್ರ, ಆಂಧ್ರ, ಕೇರಳ ಮತ್ತು ತಮಿಳುನಾಡುಗಳ ಭಾಗವಾಗಿದ್ದರು. ಅರಸೊತ್ತಿಗೆಯ ಮೈಸೂರು ರಾಜ್ಯದಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ತರಲು ಮೈಸೂರು ಕಾಂಗ್ರೆಸ್ ನಡೆಸಿದ ಹಾಗೂ ನೆರೆಹೊರೆಯ ರಾಜ್ಯಗಳಲ್ಲಿ ಹಂಚಿಹೋಗಿದ್ದ ಕನ್ನಡಿಗರನ್ನು ಒಂದುಗೂಡಿಸಲು ಅವರು ನಡೆಸಿದ ಹೋರಾಟದ ಇತಿಹಾಸವನ್ನು ಮತ್ತು ಹೇಗೆ ನಿಜಲಿಂಗಪ್ಪನವರು ಮೈಸೂರು ರಾಜ್ಯ ಕಾಂಗ್ರೆಸ್‌ನಲ್ಲಿಯೂ ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿ ಎರಡರಲ್ಲಿಯೂ ಜನಪ್ರಿಯತೆಯನ್ನು ಗಳಿಸಿದ್ದರೆಂಬುದನ್ನು ಲೇಖಕರು ಸ್ಪಷ್ಟವಾಗಿ ದಾಖಲಿಸುತ್ತಾರೆ.

ಭಾಷಾವಾರು ಪ್ರಾಂತಗಳ ರಚನೆಯ ಪರವಾಗಿ ನಿಜಲಿಂಗಪ್ಪಾಜಿಯವರು ದೃಢವಾಗಿ ನಿಂತಿದ್ದವರು. ಈ ವಿಷಯದಲ್ಲಿ ಅವರಿಗೆ ಸರ್ದಾರ್ ಪಟೇಲ್, ಆಗಿನ ಕಾಂಗ್ರೆಸ್ ಅಧ್ಯಕ್ಷ ಡಾ. ಪಟ್ಟಾಭಿ ಸೀತಾರಾಮಯ್ಯ ಮತ್ತು ತಮಿಳು ನಾಡಿನ ಮುತ್ಸದ್ದಿ ಕಾಮರಾಜ ನಾಡಾರ್ ಬೆಂಬಲವಾಗಿದ್ದರು. ಕರ್ನಾಟಕ ಏಕೀಕರಣ ಸಂಘವು ವ್ಯಾಪಕವಾದ, ವಿಶೇಷವಾಗಿ ಮಹಾರಾಷ್ಟ್ರದ ಗಡಿ ಪ್ರದೇಶಗಳಲ್ಲಿ, ಆಂಧ್ರ ಗಡಿಯ

ಆದೋನಿಯಲ್ಲಿ, ತಮಿಳುನಾಡಿನ ಗಡಿಯ ಹೊಸೂರು ಮತ್ತು ಕೊಳ್ಳೆಗಾಲ ಮತ್ತಿತರ ಅನೇಕ ಕೇಂದ್ರಗಳಲ್ಲಿ, ಪ್ರತಿಭಟನೆಯನ್ನು ನಡೆಸಿತು. ಮಹಾರಾಷ್ಟ್ರ ಮತ್ತು ಮದರಾಸ್ ರಾಜ್ಯಗಳ ಶಾಸನಸಭೆಗಳು ಏಕೀಕೃತ ಕರ್ನಾಟಕದ ಪರವಾಗಿ ನಿರ್ಣಯಗಳನ್ನು ಮಾಡಿದವು. ಈ ಆಂದೋಲನವನ್ನು ಮುನ್ನಡೆಸಿದವರು ನಿಜಲಿಂಗಪ್ಪನವರೇ. ಪ್ರತ್ಯೇಕ ಆಂಧ್ರದ ರಚನೆಗಾಗಿ ಪೊಟ್ಟಿ ಶ್ರೀರಾಮುಲು ಆರಂಭಿಸಿದ ಆಮರಣಾಂತ ಉಪವಾಸವು ಅರವತ್ತು ದಿನಗಳ ನಂತರ ಅವರು ಪ್ರಾಣ ತೆರುವುದರಲ್ಲಿ ಕೊನೆಗೊಂಡದ್ದು, ಇಡೀ ತೆಲುಗು ಭಾಷಿಕ ಪ್ರದೇಶಗಳಲ್ಲಿ ಹಿಂದೆಂದೂ ಕಂಡರಿಯದ ಹಿಂಸಾಚಾರಕ್ಕೆ ಎಡೆಗೊಟ್ಟಿತು. ಬೇಡಿಕೆಯನ್ನು ಈಡೇರಿಸಲು ಅದು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿತು. ಆ ಸಂದರ್ಭದಲ್ಲೇ ಭಾಷಾವಾರು ಪ್ರಾಂತಗಳು ರಚನೆಗೊಂಡುವು.

ನಿಜಲಿಂಗಪ್ಪನವರು ಕರ್ನಾಟಕ ಏಕೀಕರಣಕ್ಕಾಗಿ ಮಾಡಿದ ಹೋರಾಟದ ಬಗ್ಗೆ ನೇರವಾಗಿಯೋ ಪರೋಕ್ಷವಾಗಿಯೋ ಮಾಡಲಾದ ಮೂರು ಟೀಕೆಗಳನ್ನು ಲೇಖಕರು ಪ್ರಸ್ತಾಪಿಸುತ್ತಾರೆ. ಅದರಲ್ಲೊಂದು, ನಿಜಲಿಂಗಪ್ಪನವರು ಕರ್ನಾಟಕದಲ್ಲಿ ವೀರಶೈವರ ಪ್ರಾಬಲ್ಯವನ್ನು ಸ್ಥಾಪಿಸಲು ಬಯಸಿದರು, ಹೀಗಾಗಿ ಇಡೀ ಚಳವಳಿಯು ಜಾತಿನಿಷ್ಠ ವಾಯಿತು ಎಂಬುದು; ಎರಡನೆಯದು, ಏಕೀಕರಣ ಚಳವಳಿಯ ಉದ್ದೇಶ ವೀರಶೈವರು ರಾಜಕೀಯ ಅಧಿಕಾರವನ್ನು ಹಿಡಿಯುವುದು ಎಂಬುದು; ಮತ್ತು, ಮೂರನೆಯದಾಗಿ, ನಿಜಲಿಂಗಪ್ಪನವರೇ ಅಧಿಕಾರದಾಹಿಗಳು ಎಂಬುದು. ಈ ಕ್ಷುಲ್ಲಕ ಆರೋಪಗಳನ್ನು ಲೇಖಕರು ಸಮರ್ಥವಾಗಿ ನಮಗೆಲ್ಲ ಮನವರಿಕೆಯಾಗುವಂತೆ ಅಲ್ಲಗಳೆಯುತ್ತಾರೆ. ಇವಕ್ಕೆ ಲೇಖಕರು ನೀಡಿರುವ ಉತ್ತರಗಳನ್ನು ಓದುಗರು ಅಧಿಕೃತವಾದವು ಎಂದು ಭಾವಿಸಬಹುದು.

ರಾಜ್ಯ ಪುನರ್ವಿಂಗಡಣಾ ವಿಧಿಯ ಜಾರಿಯ ಪರಿಣಾಮ. ಏಕೀಕೃತ ಕರ್ನಾಟಕವು ವಿಶಾಲ ಮೈಸೂರಾಯಿತು, ಮತ್ತು ನಿಜಲಿಂಗಪ್ಪನವರು ಸಹಜವಾಗಿಯೇ ಅದರ ಮೊದಲ ಮುಖ್ಯಮಂತ್ರಿಯಾಗಿ ೧೯೫೬ರಲ್ಲಿ ಅಧಿಕಾರ ಸ್ವೀಕರಿಸಿದರು. ಆದರೆ, ಲೇಖಕರು ಸಮಂಜಸವಾಗಿಯೇ ತೋರಿಸಿರುವಂತೆ, ಅವರು ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ೧೯೫೬–೫೭ ಮತ್ತು ೧೯೬೨–೬೮ರ ನಡುವಣ ಎರಡು ಅವಧಿಗಳನ್ನು ಒಟ್ಟಾರೆಯಾಗಿ ಪರಿಗಣಿಸಿ ಅವರು ತಮ್ಮ ಕನಸಿನ ರಾಜ್ಯವನ್ನು ಕಟ್ಟಲು ನೀಡಿದ ಕೊಡುಗೆಯನ್ನು ಪರಿಶೀಲಿಸಬೇಕು ಎನ್ನುತ್ತಾರೆ. ನೆರೆಹೊರೆಯ ರಾಜ್ಯಗಳೊಡನೆ ಅವರು ಗಡಿ ಸಮಸ್ಯೆ ಗಳನ್ನು ಬಗೆಹರಿಸಿದರು, ಕರ್ನಾಟಕದ ಆಡಳಿತವ್ಯಾಪ್ತಿಗೆ ಬಂದ ವಿವಿಧ ಪ್ರದೇಶಗಳ ನೌಕರರ ಸೇವಾ ನಿಯಮಗಳಲ್ಲಿ ಏಕರೂಪತೆಯನ್ನು ತಂದರು, ಮತ್ತು ರಚನೆಗೊಂಡ ಹೊಸ ರಾಜ್ಯದಲ್ಲಿ ಸೇರಿಕೊಂಡ ವಿವಿಧ ಭಾಗಗಳಿಗೆ ಅನ್ವಯವಾಗುವ ಕಾನೂನುಗಳನ್ನು

ಅನುಭವಿ ಆಡಳಿತಗಾರರಾಗಿ ಕೌಶಲದಿಂದ ಅಳವಡಿಸಿಕೊಂಡರು. ಕೃಷಿ, ನೀರಾವರಿ ಮತ್ತು ವಿದ್ಯುತ್ ಕ್ಷೇತ್ರದ ಅಭಿವೃದ್ಧಿಗೆ ಅವರು ವಿಶೇಷ ಗಮನ ಹರಿಸಿದರು. ಅವರ ದೂರದರ್ಶಿತ್ವದ ಫಲವಾದ ಶರಾವತಿ ಯೋಜನೆಯು ಈ ನಮ್ಮ ಪವಿತ್ರ ಭೂಪ್ರದೇಶದಲ್ಲಿ ಪರ್ವತಗಳಿರುವವರೆಗೂ ನದಿಗಳು ಹರಿಯುತ್ತಿರುವವರೆಗೂ ನೆನಪಿನಲ್ಲಿ ಉಳಿಯು ವಂತಹುದು. ದೇಶದ ನೀರಾವರಿ ಮತ್ತು ನೀರಿನ ದರಗಳ ಸಮಸ್ಯೆಯ ಕುರಿತಂತೆ ವರದಿ ನೀಡಲು ಅವರನ್ನು ಅಧ್ಯಕ್ಷರನ್ನಾಗಿ ಮಾಡುವುದರ ಮೂಲಕ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯು ನೀರಾ ವರಿಯ ಬಗೆಗಿನ ಅವರ ಪರಿಣತಿಗೆ ಮಾನ್ಯತೆ ನೀಡಿತು.

ಬಡವರ ಬಗೆಗಿನ ನಿಜಲಿಂಗಪ್ಪನವರ ಕಳಕಳಿ ಹೊರನೋಟದ್ದಲ್ಲ, ಅದು ಅಸಲಿ ಯಾದುದು ಮತ್ತು ನೈಜ ಭಾವಪೂರ್ಣವಾದುದು. ಗ್ರಾಮೀಣ ಕೈಗಾರಿಕೆಗಳ ಹಾಗೂ ಹಳ್ಳಿಗಳ ಉದ್ಧಾರದ ಬಗೆಗಿನ ಅವರ ತೀವ್ರ ಆಸಕ್ತಿಯು ಸಮಾಜದಲ್ಲಿನ ದುರ್ಬಲ ವರ್ಗಗಳ ಮೇಲೆ ಗಾಢ ಪ್ರಭಾವವನ್ನು ಬೀರಿತು. ಒಟ್ಟಾರೆ, ಗಾಂಧೀಜಿಯವರ ಆದರ್ಶ ಗಳನ್ನು ಅವರು ವಾಸ್ತವ ಕಾರ್ಯಕ್ರಮಗಳನ್ನಾಗಿ ರೂಪಿಸಿದರು. ಅಪಾರ ಆಸಕ್ತಿ ಮತ್ತು ಉತ್ಸಾಹಗಳಿಂದ ಅವರು ತಾಂತ್ರಿಕ ಹಾಗೂ ವೈದ್ಯಕೀಯ ಶಿಕ್ಷಣ ಸಂಸ್ಥೆಗಳನ್ನು ಪ್ರೋತ್ಸಾಹಿಸಿದರು.

ಅತುಲ್ಯ ಘೋಷ್ ಸ್ಮಾರಕೋಪನ್ಯಾಸದಲ್ಲಿ ನಿಜಲಿಂಗಪ್ಪನವರು ತಮ್ಮ ರಾಷ್ಟ್ರೀಯ ಆರ್ಥಿಕ ನೀತಿಯ ಪ್ರಾಮುಖ್ಯತೆಯ ಸಾರವನ್ನೇ ನೀಡಿದ್ದಾರೆ; ಪ್ರಾಯಶಃ ಅದು ಗಾಂಧಿಯವರ ತಾತ್ವಿಕತೆಯ ಅತ್ಯುನ್ನತ ವಿವರಣೆ.

ನಿಜಲಿಂಗಪ್ಪನವರ ಬದುಕಿನ ಮೂರನೆಯ ಹಂತವು ೧೯೬೮ರ ನಂತರ ಅವರು ದೇಶದ ಬಿಕ್ಕಟ್ಟಿನ ಸಂದರ್ಭದಲ್ಲಿ ವಹಿಸಿದ ಪಾತ್ರದ್ದು. ನಿಜಲಿಂಗಪ್ಪನವರ ಮೂಲ ಕಳಕಳಿ ಕರ್ನಾಟಕ ಮತ್ತು ಕನ್ನಡ ಜನತೆಯ ಅಭಿವೃದ್ಧಿ ಮತ್ತು ಸಮೃದ್ಧಿಗಳಾದರೂ, ಅವರು ತಮ್ಮ ವೈಯಕ್ತಿಕ ಆಯ್ಕೆಯನ್ನು ಬಿಟ್ಟುಕೊಟ್ಟದ್ದು ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ವಿದ್ಯಮಾನಗಳ ಹೊಣೆಯನ್ನು ಹೊರುವುದಕ್ಕಾಗಿ.

ಕಾಮರಾಜ್ ಯೋಜನೆಯಿಂದ (೧೯೬೩) ಆರಂಭವಾಗಿ ಇಂದಿನವರೆಗಿನ ಘಟನೆ ಗಳನ್ನು ಲೇಖಕರು ನೀಡಿರುವ ನಿರೂಪಣೆಯು ವ್ಯಾಪಕವಾಗಿಯೂ ಪರಿ ಪೂರ್ಣ ವಾಗಿಯೂ ಸ್ವಾರಸ್ಯಕರವಾಗಿಯೂ ಇದೆ.

ಕಾಮರಾಜ್ ಯೋಜನೆಯು ವಾಸ್ತವದಲ್ಲಿ ನೆಹರೂ ಯೋಜನೆ ಎಂಬ ಅನು ಮಾನಕ್ಕೆ ಆಧಾರವಿಲ್ಲ. ರಾಷ್ಟ್ರ ನಾಯಕರುಗಳೆಲ್ಲರ ಪ್ರತಿಭೆಯೆಲ್ಲ ಆಡಳಿತಕ್ಕೆ ಮೀಸಲಾ ಗಿರುವುದರಿಂದಾಗಿ ಕಾಂಗ್ರೆಸ್ ಪಕ್ಷಕ್ಕೆ ನಾಯಕತ್ವವಿಲ್ಲದಂತಾಗಿ ಅದಕ್ಕೆ ಜನತೆಯ ಸಂಪರ್ಕ ಇಲ್ಲದಂತಾಗಿದೆ ಎಂಬುದು ಕಾಮರಾಜರ ನಿಜವಾದ ಅನಿಸಿಕೆಯಾಗಿತ್ತು. ತಮ್ಮ ಈ

ಆಲೋಚನೆಯನ್ನು ಕುರಿತು ಅವರು ವಿವರಿಸಿ ಕೆಲವು ನಾಯಕರುಗಳು ಹುದ್ದೆಗಳನ್ನು ತೊರೆದು ಪಕ್ಷದ ಕೆಲಸದಲ್ಲಿ ತೊಡಗಬೇಕೆಂಬ ಸಲಹೆಯನ್ನು ಮುಂದಿಟ್ಟಿದ್ದರು. ನನಗೆ ಈ ಬಗ್ಗೆ ಅನುಮಾನಗಳಿದ್ದುವು. ಹೀಗಾಗಿ ನಾನು ಹೇಳಿದ್ದೆಂದರೆ ಒಬ್ಬರು ಮಾತ್ರ (ಅಂದರೆ ಕಾಮರಾಜರೇ) ಹುದ್ದೆಯನ್ನು ತೊರೆಯಬಲ್ಲರೇ ಹೊರತು ಉಳಿದ ವರು ಹೇಗೋ ಅಲ್ಲಿಯೇ ಉಳಿಯುತ್ತಾರೆ ಎಂದಿದ್ದೆ. ಅದು ನಿಜವೇ ಆಯಿತು, ಏಕೆಂದರೆ ತಮ್ಮ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆಯಿತ್ತವರು ಕಾಮರಾಜರೊಬ್ಬರೇ, ಆಮೇಲೆ ಆ ಹುದ್ದೆ ಅವರಿಗೆ ಸಿಕ್ಕಲೇ ಇಲ್ಲ. ಅಧಿಕಾರ ಕಳೆದುಕೊಂಡವರು ಕಹಿಯಾದರು; ಅವರು 'ಕಾಮರಾಜ ಯೋಜನೆ'ಯನ್ನು 'ಯಮರಾಜ ಯೋಜನೆ' ಎಂದು ನನ್ನ ಮುಂದೆ ಬಣ್ಣಿಸಿದರು.

ನೆಹರೂ ಸಾವಿನ ನಂತರದ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಕಾಂಗ್ರೆಸ್ ಅಧ್ಯಕ್ಷರಾಗಿ ಕಾಮರಾಜರು ನಿಭಾಯಿಸಿದರು. ಸನ್ನಿವೇಶವನ್ನು ಜಾಣ್ಮೆಯಿಂದ ನಿರ್ವಹಿಸಿ, 'ನೆಹರೂ ನಂತರ ಯಾರು?' 'ನೆಹರೂ ನಂತರ ಏನು?' ಎಂಬ ಜಾಗತಿಕ ಪ್ರಶ್ನೆಗಳಿಗೆ ಸೂಕ್ತ ಉತ್ತರ ಕೊಟ್ಟರು. ಲಾಲ್ ಬಹಾದ್ದೂರ್ ಶಾಸ್ತ್ರಿಯವರ ಸಾವಿನಿಂದಾಗಿ ೧೯೬೬ರಲ್ಲಿ ಇಂತಹುದೇ ಪರಿಸ್ಥಿತಿ ಮರುಕಳಿಸಿದಾಗ, ಸಲೀಸಾಗಿಯೂ ಕ್ರಮಬದ್ಧವಾಗಿಯೂ ಪ್ರಜಾ ಸತ್ತಾತ್ಮಕವಾಗಿಯೂ ಪ್ರಧಾನಮಂತ್ರಿಗಳಾಗಿ ಇಂದಿರಾ ಗಾಂಧಿಯವರು ಮೂಡಿಬಂದು ದರ ಹಿಂದಿನ ಯಶಸ್ಸೂ ಅವರಿಗೇ ಸಲ್ಲಬೇಕು. ಇಂದಿರಾ ಗಾಂಧಿಯವರು ಕಾಮರಾಜರ ಆಯ್ಕೆಯೇ ಎಂಬುದು ಬಯಲಾಗಿದ್ದ ಗುಟ್ಟು. ಆ ಆಯ್ಕೆಯ ಬಗ್ಗೆ ಕಾಮರಾಜರು ನನಗೆ ವಿವರಿಸಿದ್ದು ಹೀಗೆ: ಇಂದಿರಾಗಾಂಧಿಯವರಿಗೆ ಪ್ರಾದೇಶಿಕ (ಉತ್ತರ) ಪೂರ್ವ ಗ್ರಹಗಳಿಲ್ಲ, ಭಾಷಾ ದುರಭಿಮಾನವಿಲ್ಲ, ಆರ್ಥಿಕ ವಿಷಯಗಳ ಬಗ್ಗೆ ಅವರಿಗೆ ಪ್ರಗತಿಪರ ವಾದ ಕಾಣ್ಕೆಯಿದೆ ಹಾಗೂ ಚುನಾವಣೆಗಳಲ್ಲಿ ತಮ್ಮ ವರ್ಚಸ್ಸಿನಿಂದ ಅವರು ಗೆಲುವನ್ನು ಸಾಧಿಸಬಲ್ಲರು ಎಂದು.

ಸ್ವಾತಂತ್ರ್ಯಾನಂತರ ಪ್ರಧಾನಮಂತ್ರಿಗಳ ಹುದ್ದೆ ಮತ್ತು ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷ ಸ್ಥಾನ–ಇವುಗಳ ನಡುವೆ ಒಂದು ಅಂತರ್ನಿಹಿತ ವಿರೋಧವಿತ್ತು ಎಂಬುದನ್ನು ಕಾಂಗ್ರೆಸ್ ಪಕ್ಷವು ಅರ್ಥಮಾಡಿಕೊಳ್ಳುವುದರಲ್ಲಿ ವಿಫಲವಾಯಿತು. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ, ಕಾಂಗ್ರೆಸ್‌ನ ಅಧ್ಯಕ್ಷರು, ಕಾಂಗ್ರೆಸ್ ಸಂಸದೀಯ ಮಂಡಳಿ ಮತ್ತು ಕಾರ್ಯಕಾರಿ ಸಮಿತಿಗಳು ಪರಮೋಚ್ಚವಾಗಿದ್ದುವು. ಆದರೆ ಅಪಾರ ಪೋಷಕತ್ವ, ಅಧಿಕಾರ ಮತ್ತು ಸಂಪನ್ಮೂಲಗಳನ್ನು ಹೊಂದಿದ ಪ್ರಧಾನ ಮಂತ್ರಿ ಪದವಿ ಮತ್ತು ರಾಜ್ಯಗಳಲ್ಲಿ ಮುಖ್ಯ ಮಂತ್ರಿಗಳ ಪದವಿಗಳು ಸೃಷ್ಟಿಯಾದ ಮೇಲೆ, ಗುರುತ್ವಾಕರ್ಷಣೆಯು ಅವುಗಳ ಕಡೆಗೇ ವಾಲಿತು. ಸ್ವಾತಂತ್ರ್ಯ ಬಂದ ಹೊಸತರಲ್ಲಿಯೇ, ಕಾಂಗ್ರೆಸ್‌ನ ಅಧ್ಯಕ್ಷ ಟಂಡನ್ ಅವರು ಪ್ರಧಾನ ಮಂತ್ರಿ ನೆಹರೂ ಅವರನ್ನು ನಿಯಂತ್ರಿ

ಸಲು ಪ್ರಯತ್ನಿಸಿದರು, ಆದರೆ ಸಫಲರಾಗಲಿಲ್ಲ. ಕಾಮರಾಜರಿಗೆ ವೈಯಕ್ತಿಕವಾಗಿ ಆಪ್ತ ಗೆಳೆಯರಾಗಿದ್ದ ಲಾಲ್ ಬಹಾದ್ದೂರ್ ಶಾಸ್ತ್ರಿಯವರು ಅವರ ಸಲಹೆಯನ್ನು ಕೇಳಿದರೂ ಸಂಪುಟ ರಚನೆ ಮತ್ತು ಆಡಳಿತ ವಿಷಯಗಳ ಬಗೆಗೆ ತೀರ್ಮಾನಗಳನ್ನು ಮಾತ್ರ ತಾವೇ ತೆಗೆದುಕೊಳ್ಳುತ್ತಿದ್ದರು. ಪ್ರಧಾನ ಮಂತ್ರಿಗಳಾಗಿ ಇಂದಿರಾ ಗಾಂಧಿಯವರು ಸಂಪುಟದ ಬಗ್ಗೆ ಕಾಂಗ್ರೆಸ್‌ನ ಅಧ್ಯಕ್ಷ ಕಾಮರಾಜರ ಸಲಹೆ ಕೇಳುತ್ತಿರಲಿಲ್ಲ, ಹೆಸರುಗಳ ಪಟ್ಟಿಯನ್ನು ರಾಷ್ಟ್ರಪತಿಯವರಿಗೆ ಸಲ್ಲಿಸಲು ರಾಷ್ಟ್ರಪತಿ ಭವನಕ್ಕೆ ಹೋಗುವ ದಾರಿಯಲ್ಲಿ ಆ ಪಟ್ಟಿಯನ್ನು ತೋರಿಸುತ್ತಿದ್ದರು. ಭಾರತದ ರಾಷ್ಟ್ರಪತಿಗಳ ಆಯ್ಕೆಯಲ್ಲಿ ಇಂದಿರಾ ಗಾಂಧಿಯವರು ತೋರಿಸಿದ ಪ್ರಭಾವ ಮತ್ತು ರಾಷ್ಟ್ರಪತಿ ಚುನಾವಣೆಯಲ್ಲಿ ಅವರು ವಿಜಯಿಗಳಾದದ್ದು ಪ್ರಧಾನ ಮಂತ್ರಿಗಳು ಕಾಂಗ್ರೆಸ್ ಪಕ್ಷಕ್ಕಿಂತ ಹೆಚ್ಚು ಬಲಿಷ್ಠರು ಎಂಬು ದನ್ನು ಸಾಬೀತುಮಾಡಿತು. ಈ ಮೊದಲು ಮದರಾಸಿನಲ್ಲಿ ರಾಜಾಜಿ ಮುಂತಾದವರಿಗೆ ಮಾಡಿದಂತೆ ಕಾಮರಾಜರು ಅವರನ್ನು ಅಧಿಕಾರದಿಂದ ದೂರ ಮಾಡುತ್ತಾರೆ ಎಂಬ ಭೀತಿಯನ್ನು ಇಂದಿರಾ ಗಾಂಧಿಯವರಲ್ಲಿ ಅವರ ಸುತ್ತಲಿದ್ದ ಸಣ್ಣ ವ್ಯಕ್ತಿಗಳು ಬಿತ್ತಿದ್ದರು. ರೂಪಾಯಿಯ ಅಪಮೌಲ್ಯೀಕರಣದ ಬಗ್ಗೆ ಕಾಮರಾಜರು ಹೊಂದಿದ್ದ ತೀವ್ರ ವಿರೋಧ ಹಾಗೂ ಅವರ ಬಹಿರಂಗ ಟೀಕೆಗಳು ಅವರಿಬ್ಬರ ನಡುವಣ ಬಾಂಧವ್ಯವನ್ನು ಮತ್ತಷ್ಟು ಹದಗೆಡಿಸಿತು. ೧೯೬೭ರ ಮಹಾ ಚುನಾವಣೆಗಳ ಹೊತ್ತಿಗೆ, ಪ್ರಧಾನ ಮಂತ್ರಿಗಳ ಹಾಗೂ ಕಾಂಗ್ರೆಸ್ ಅಧ್ಯಕ್ಷರ ನಡುವಣ ಭಿನ್ನಾಭಿಪ್ರಾಯವು ಸಂಪೂರ್ಣ ಸ್ಥಗಿತವಾಯಿತು.

೧೯೬೭ರ ಚುನಾವಣೆಯಲ್ಲಿ ಕಾಮರಾಜರು ಸೋತಾಗ ಅವರ ಭವಿಷ್ಯ ಸ್ಥಗಿತ ಗೊಂಡಿತು. ತಮ್ಮ ಕಾಂಗ್ರೆಸ್ ಅಧ್ಯಕ್ಷ ಸ್ಥಾನವನ್ನವರು ಬಿಟ್ಟುಕೊಡಬೇಕಾಯಿತು. ಈ ಸಂದರ್ಭದಲ್ಲಿಯೇ, ಕಾಂಗ್ರೆಸ್ ಅಧ್ಯಕ್ಷರ ಕುದಿಯುವ ಜಾಗಕ್ಕೆ ಬರಲು ಕಾಮರಾಜರು ನಿಜಲಿಂಗಪ್ಪನವರ ಮನವೊಲಿಸಿದ್ದು. ಆನಂತರದ ಬೆಳವಣಿಗೆಗಳನ್ನು ಈ ಗ್ರಂಥದಲ್ಲಿ ಲೇಖಕರು ಒಂದಾದ ಮೇಲೊಂದರಂತೆ ಅನೇಕ ಅಭಿಪ್ರಾಯಗಳನ್ನು ಅಧ್ಯಾಯಗಳಲ್ಲಿ ನಿರೂಪಿಸಿದ್ದಾರೆ.

ತುರ್ತು ಪರಿಸ್ಥಿತಿಯ ನಂತರ ರಚನೆಯಾದ ಜನತಾ ಸರ್ಕಾರವು ಪತನಗೊಂಡು, ನಂತರ ಚುನಾವಣೆಗಳಲ್ಲಿ ಅದು ಸೋಲನ್ನು ಕಂಡು, ಭಾರತದ ರಾಜಕೀಯ ಗಗನದಲ್ಲಿ ಪುನಃ ಬಲಿಷ್ಠ ವ್ಯಕ್ತಿಯಾಗಿ ಇಂದಿರಾ ಗಾಂಧಿಯವರ ಪುನರುದಯವಾದ ಬಳಿಕ, ನಿಜಲಿಂಗಪ್ಪನವರ ಆಪ್ತ ಸಹಚರರು ಅವರಿಂದ ದೂರವಾಗಲು ತೊಡಗಿದರು. ನಿಜಲಿಂಗಪ್ಪನವರು ರಾಜಕೀಯ ಜೀವನದಲ್ಲಿ ಬೆಳೆಸಿ ಮೇಲೆ ತಂದಿದ್ದ ವೀರೇಂದ್ರ ಪಾಟೀಲರು ಕಾಂಗ್ರೆಸ್ (ಐ) ಸೇರಿದರು; ಇಂದಿರಾ ಗಾಂಧಿಯವರ ನಾಯಕತ್ವವನ್ನು ಒಪ್ಪಿಕೊಂಡು ಕಾಂಗ್ರೆಸ್ (ಓ) ಅನ್ನು ಅವರ ಪಕ್ಷದಲ್ಲಿ ವಿಲೀನಗೊಳಿಸುವಂತೆ ಎಸ್.ಕೆ.

ಪಾಟೀಲರು ಬಹಿರಂಗವಾಗಿಯೇ ಕರೆಕೊಟ್ಟರು. ಇಂದಿರಾ ಗಾಂಧಿಯವರ ಪರಮ ಟೀಕಾಕಾರರಾಗಿದ್ದ ಕಾಮರಾಜರು, ತಮಿಳು ನಾಡು ರಾಜ್ಯದಲ್ಲಿನ ತಮ್ಮ ರಾಜಕೀಯ ವೈರಿಗಳ ವಿರುದ್ಧ ಹೋರಾಡಲು ಮತ್ತೆ ಇಂದಿರಾ ಗಾಂಧಿಯವರೊಡನೆ ರಾಜಕೀಯ ತೇಪೆ ಹಾಕಿಕೊಂಡರು. ಯಾವ ರಾಜಿಗೂ ಒಳಗಾಗದಿದ್ದವರು ನಿಜಲಿಂಗಪ್ಪನವರು ಮಾತ್ರವೇ. ಆಗ ನಿಜಲಿಂಗಪ್ಪನವರ ಮನಸ್ಸಿನಲ್ಲಿ ಮೂಡಿದ ಹತಾಶೆ ಮತ್ತು ನೋವುಗಳು ಅವರ ದಿನಚರಿಯಲ್ಲಿ ಮಡುಗಟ್ಟಿರುವುದನ್ನು ಕಾಣುತ್ತೇವೆ.

'ಜಾನ್‌ಸನ್‌ಗಳು ಅಪರೂಪ, ಆದರೆ ಬಾಸ್ವೆಲ್‌ಗಳು ಬಲು ಅಪರೂಪ' ಎಂಬ ಹೇಳಿಕೆಯೊಂದಿದೆ. ಈ ಗ್ರಂಥದ ಲೇಖಕರಾದ ಡಾ. ಕೆ. ರಾಘವೇಂದ್ರ ರಾವ್ ಅವರು ಬಲು ಅಪರೂಪದ ಪಂಗಡಕ್ಕೆ ಸೇರಿದವರು. ನಿಜಲಿಂಗಪ್ಪನವರ ವಿಶಿಷ್ಟ ವ್ಯಕ್ತಿತ್ವವನ್ನವರು ತದ್ವತ್ತಾಗಿ, ಆದರೆ ಎಲ್ಲಿಯೂ ಉತ್ಪ್ರೇಕ್ಷೆಯಿಲ್ಲದಂತೆ ಚಿತ್ರಿಸಿದ್ದಾರೆ. ನಿಜಲಿಂಗಪ್ಪನವರ ಸರಳತೆ, ಪ್ರಾಮಾಣಿಕತೆ, ದೇಶಸೇವೆಯ ಬಗೆಗಿನ ಸಮರ್ಪಣಾಭಾವ ಮತ್ತು ಗಾಂಧೀಜಿಯ ತತ್ವಗಳ ಬಗೆಗಿನ ಕಡುನಿಷ್ಠೆ ಇವುಗಳನ್ನು ವಾಸ್ತವ ದೃಷ್ಟಾಂತಗಳ ಮೂಲಕ ಈ ಕೃತಿಯಲ್ಲಿ ನಿರೂಪಿಸಲಾಗಿದೆ. ರಾಜಕೀಯ ವಲಯಗಳಲ್ಲಿ ಅವರನ್ನು ವಿರೋಧಿಸುತ್ತಿದ್ದವರು ಕೂಡ ನಿಜಲಿಂಗಪ್ಪನವರ ಪ್ರಾಮಾಣಿಕತೆಯನ್ನು ಮೆಚ್ಚಿಕೊಳ್ಳುತ್ತಿದ್ದುದು ಮಾತ್ರವಲ್ಲ, ಹೊಗಳುತ್ತಿದ್ದರು ಕೂಡ.

ತಮ್ಮ ೯೬ನೇ ವಯಸ್ಸಿನಲ್ಲಿಯೂ ನಿಜಲಿಗಪ್ಪನವರು ರಾಜಕಾರಣಿಗಳಿಗೆ ಅನುಸರಣೀಯ ಮಾದರಿಯಾಗಿ ಶೋಭಿಸುತ್ತಾರೆ. ಅವರು ಈಗ ಮುಖ್ಯಸ್ಥರಾಗಿರುವ 'ಗಾಂಧಿ ವೇದಿಕೆ'ಯು ಗಾಂಧೀಜಿಯ ತತ್ವಗಳಾದ ಶಾಂತಿ, ಪ್ರಗತಿ ಮತ್ತು ಸಾಮರಸ್ಯಗಳನ್ನು ಭಾರತ ಜನತೆಯಲ್ಲಿ ಪ್ರಚಾರ ಮಾಡುವ ಕೆಲಸದಲ್ಲಿ ನಿರತವಾಗಿದೆ.

ಸ್ವಾತಂತ್ರ್ಯೋತ್ತರ ಭಾರತದ ಪ್ರಕ್ಷುಬ್ಧ ರಾಜಕೀಯ ಇತಿಹಾಸದೊಡನೆ ಮೇಳೈಸಿಕೊಂಡಿರುವ ನಿಜಲಿಂಗಪ್ಪನವರ ದೃಷ್ಟಾಂತಪೂರ್ವಕವಾದ ಜೀವನಚರಿತ್ರೆಯನ್ನು ಬರೆಯುವ ಮೂಲಕ ಡಾ. ರಾಘವೇಂದ್ರ ರಾವ್ ಅವರು ದೇಶಕ್ಕೆ ದೊಡ್ಡ ಉಪಕಾರವನ್ನು ಮಾಡಿದ್ದಾರೆ. ಅವರಿಗೆ ಇಡೀ ದೇಶವು ಕೃತಜ್ಞವಾಗಿರಬೇಕು.

ನವ ದೆಹಲಿ
ಅಕ್ಟೋಬರ್ ೨೫, ೧೯೯೮

ಆರ್. ವೆಂಕಟರಾಮನ್
ಭಾರತದ ಮಾಜಿ ರಾಷ್ಟ್ರಪತಿಗಳು
೫, ಸಫ್ದಾರ್‌ಜಂಗ್ ಮಾರ್ಗ
ನವ ದೆಹಲಿ – ೧೧೦ ೦೧೧, ಭಾರತ
ದೂರವಾಣೀ: ೩೭೭೪೫೬೬,
ಫ್ಯಾಕ್ಸ್: ೯೧–೩೦೧೪೯೨೫

ಒಂದು ಮಾತು

ಶ್ರೀ ನಿಜಲಿಂಗಪ್ಪನವರ ಬಗೆಗೆ ಒಂದು ಪೂರ್ಣಪ್ರಮಾಣದ ಜೀವನ ಚರಿತ್ರೆಯನ್ನು ಪ್ರಕಟಿಸಬೇಕೆಂಬ ಸಲಹೆ ನೀಡಿದ್ದಕ್ಕಾಗಿ ಶ್ರೀ ಎಸ್. ನಿಜಲಿಂಗಪ್ಪ ರಾಷ್ಟ್ರೀಯ ಪ್ರತಿಷ್ಠಾನದ ಟ್ರಸ್ಟಿಗಳಲ್ಲೊಬ್ಬರಾಗಿದ್ದ ಶ್ರೀ ಜೆ.ಬಿ. ಮಹಾಲಿಂಗಶೆಟ್ಟಿ, ವಿಶ್ವೇಶ್ವರನಗರ, ಹುಬ್ಬಳ್ಳಿ ಇವರಿಗೆ ಅದರ ಟ್ರಸ್ಟಿಗಳೆಲ್ಲರೂ ಕೃತಜ್ಞರಾಗಿದ್ದಾರೆ. ಅವರೀಗ ಇದ್ದಿದ್ದರೆ ಇದನ್ನು ಕಂಡು ಅತೀವ ಸಂತೋಷಪಡುತ್ತಿದ್ದರು.

ತಮ್ಮ ಬಗೆಗಿನ ಈ ಜೀವನ ಚರಿತ್ರೆಯನ್ನು ಹೊರತರಲು ಒಪ್ಪಿಗೆ ನೀಡಿದ ಶ್ರೀ ಎಸ್. ನಿಜಲಿಂಗಪ್ಪನವರಿಗೆ, ಶ್ರೀ ಎಸ್. ನಿಜಲಿಂಗಪ್ಪ ರಾಷ್ಟ್ರೀಯ ಪ್ರತಿಷ್ಠಾನದ ಟ್ರಸ್ಟಿಗಳು ಆಭಾರಿಗಳಾಗಿದ್ದಾರೆ.

ಶ್ರೀ ಎಸ್. ನಿಜಲಿಂಗಪ್ಪನವರ ಬಗೆಗಿನ ಸಂಪೂರ್ಣವೂ ಅಧಿಕೃತವೂ ಆದ ಈ ಜೀವನ ಚರಿತ್ರೆಯನ್ನು ಅಪಾರ ಶ್ರಮ ಮತ್ತು ಶ್ರದ್ಧೆಗಳನ್ನು ವಹಿಸಿ ರಚಿಸಿಕೊಟ್ಟುದಕ್ಕಾಗಿ ಡಾ. ಕೆ. ರಾಘವೇಂದ್ರ ರಾವ್, ನಿವೃತ್ತ ರಾಜ್ಯಶಾಸ್ತ್ರ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ಇವರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ.

ಈ ಜೀವನ ಚರಿತ್ರೆಯ ಮುದ್ರಣವೆಚ್ಚಕ್ಕಾಗಿ ಉದಾರ ಧನಸಹಾಯ ಮಾಡಿದ ಶ್ರೀ ಆರ್.ಎನ್. ಶೆಟ್ಟಿ, ನಿರ್ದೇಶಕರು, ಮೆ. ಮುರುಡೇಶ್ವರ ಸಿರಾಮಿಕ್ಸ್, ಹುಬ್ಬಳ್ಳಿ ಅವರಿಗೆ ನಾವು ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಈ ಕೃತಿಯ ಮೌಲ್ಯವನ್ನು ಹೆಚ್ಚಿಸುವಂತಹ ಅಮುಖ್ಯವಾದ ಮುನ್ನುಡಿಯನ್ನು ರಚಿಸಿ ಕೊಟ್ಟುದಕ್ಕಾಗಿ ಶ್ರೀ. ಆರ್. ವೆಂಕಟರಾಮನ್, ಭಾರತದ ಮಾಜಿ ರಾಷ್ಟ್ರಪತಿಗಳು – ಇವರಿಗೆ ನಮ್ಮ ನಮನಗಳು. ದಿನಾಂಕ ೧೦–೧೦–೯೮ರ ತಮ್ಮ ಪತ್ರದಲ್ಲಿ

ಶ್ರೀ. ಆರ್. ವೆಂಕಟರಾಮನ್ ಅವರು ಶ್ರೀ ಎಸ್. ನಿಜಲಿಂಗಪ್ಪನವರನ್ನು ಭಾರತದ ಅತ್ಯಂತ ಶ್ರೇಷ್ಠ ಪುತ್ರರಲ್ಲಿ ಒಬ್ಬರು ಎಂದು ಬಣ್ಣಿಸಿದ್ದಾರೆ.

ನೆಹರೂ ಮತ್ತಿತರರು ಪ್ರತಿಪಾದಿಸಿದ ಸಮಾಜವಾದವನ್ನು ಶ್ರೀ ಎಸ್. ನಿಜಲಿಂಗಪ್ಪನವರು ಅನುಸರಿಸಿದವರು. ಭಾರತ ತೈಲ ಸಂಸ್ಥೆಯ ಅಧ್ಯಕ್ಷರಾಗಿ ತಿಂಗಳಿಗೆ ೧೦,೦೦೦/- ರೂಪಾಯಿಗಳ ಸಂಬಳ ಹಾಗೂ ಇತರ ಭತ್ಯೆಗಳ ಮೇಲೆ ೧೯೫೯ರಲ್ಲಿ ಅವರನ್ನು ನೇಮಿಸಲಾಯಿತು. ಅವರು ಸಂಬಳ ಮತ್ತು ಭತ್ಯೆಗಳನ್ನು ಸ್ವ-ಇಚ್ಛೆಯಿಂದ ನಿರಾಕರಿಸಿ, ತಿಂಗಳಿಗೆ ಒಂದು ರೂಪಾಯಿಯ ಸಾಂಕೇತಿಕ ಸಂಭಾವನೆಯನ್ನು ಸ್ವೀಕರಿಸಿದರು. ಭಾರತದ ಸಂದರ್ಭದಲ್ಲಿ ಸಮಾಜವಾದದ ಬಗ್ಗೆ ಮಾತನಾಡುತ್ತ ದೊಡ್ಡ ಮೊತ್ತದ ಸಂಬಳದ ಮೇಲೆ ನೇಮಕಾತಿ ಮಾಡುವುದರಲ್ಲಿನ ಮಾತು ಮತ್ತು ಕೃತಿಗಳ ನಡುವಣ ವ್ಯತ್ಯಾಸವನ್ನು ಕುರಿತು ಆಗ ಅವರು ಜವಹರಲಾಲ್ ನೆಹರೂ ಅವರಿಗೆ ವಿವರಿಸಿದ್ದರು.

ಶ್ರೀಯುತರುಗಳಾದ ಎ.ಆರ್. ಬದರೀನಾರಾಯಣ, ಕರ್ನಾಟಕದ ಮಾಜಿ ಶಿಕ್ಷಣ ಸಚಿವರು, ಶಾಮನೂರು ಶಿವಶಂಕರಪ್ಪ, ಸಂಸತ್ ಸದಸ್ಯರು, ವೈ. ರಾಮಚಂದ್ರ, ಬೆಂಗಳೂರು ನಗರ ಮಾಜಿ ಮೇಯರ್ ಹಾಗೂ ಸಚಿವರು, ಯಾದಾಳಂ ಗಂಗಾಧರ ಶೆಟ್ಟಿ, ಕೈಗಾರಿಕೋದ್ಯಮಿಗಳು, ಆರ್.ಎನ್. ಶೆಟ್ಟಿ, ನಿರ್ದೇಶಕರು, ಮೆ. ಮುರುಡೇಶ್ವರ ಸಿರಾಮಿಕ್ಸ್, ಹುಬ್ಬಳ್ಳಿ, ಡಾ. ವಿ.ಜಿ. ನೆಲವಗಿ, ಶಿಕ್ಷಣತಜ್ಞರು, ಚಂದ್ರಕಾಂತ ಬೆಲ್ಲದ, ವಿಧಾನಸಭೆಯ ಸದಸ್ಯರು, ದಿವಂಗತ ಕೆ. ಅಭಿಶಂಕರ್, ಕರ್ನಾಟಕ ಗೆಜೆಟಿಯರ್‌ನ ನಿವೃತ್ತ ಪ್ರಧಾನ ಸಂಪಾದಕರು ಮತ್ತು ಸಂಶೋಧನ ವಿದ್ವಾಂಸರು, ಮತ್ತು ಎಲ್.ಎಸ್. ಚಂದ್ರಶೇಖರ್, ಸಂಸ್ಥಾಪಕ ಟ್ರಸ್ಟಿ ಮತ್ತು ಪ್ರತಿಷ್ಠಾನದ ರೂವಾರಿಗಳು - ಇವರೆಲ್ಲರಿಗೆ ನಮ್ಮ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಈ ಪ್ರಕಟಣೆಯನ್ನು ಹೊರತರಲು ಬೆಂಬಲ ನೀಡಿ ಹೃತ್ಪೂರ್ವಕವಾಗಿ ಸಹಾಯ ಮಾಡಿದ ಸಂಯೋಜಿತ ಟ್ರಸ್ಟಿಗಳಾದ ಶ್ರೀಯುತರುಗಳು ಬಿ.ಎಸ್. ಮುದ್ದಪ್ಪ, ಐಎಎಸ್ (ನಿವೃತ್ತ), ಎ.ಬಿ. ಪಾಟೀಲ್, ಕರ್ನಾಟಕ ಸರ್ಕಾರದ ಗಣಿ ಮತ್ತು ಭೂವಿಜ್ಞಾನ ಖಾತೆಯ ಸಚಿವರು, ಎಂ.ವಿ. ರಾಜಶೇಖರನ್, ಮಾಜಿ ಸಂಸತ್ ಸದಸ್ಯರು, ಪ್ರಭಾಕರ ಕೋರೆ, ಮಾಜಿ ರಾಜ್ಯಸಭಾ ಸದಸ್ಯರು, ಅಲ್ಲಂ ವೀರಭದ್ರಪ್ಪ, ವಿಧಾನಸಭಾ ಸದಸ್ಯರು, ಬಸವರಾಜ್. ಎಸ್. ಭೀಮಳ್ಳಿ, ಅಧ್ಯಕ್ಷರು, ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ, ಶ್ರೀಮತಿ ಪ್ರತಿಭಾದೇವಿ ಮುದ್ದಪ್ಪ, ಉಪನ್ಯಾಸಕರು, ಎಚ್‌ಕೆಇಎಸ್ ಕಾಲೇಜು, ಬೆಂಗಳೂರು, ಡಾ. ಮಂಗಳಾ ವಿ. ಬೆಟ್‌ಕೆರೂರು, ಕ್ಯಾಂಟನ್ (ಯುಎಸ್ಎ), ಸತೀಶ್ಚಂದ್ರ

ಹೆಗಡೆ, ಗುತ್ತಿಗೆದಾರರು, ಎಚ್. ಶಿವಲಿಂಗಯ್ಯ, ಚಾರ್ಟರ್ಡ್ ಅಕೌಂಟೆಂಟ್, ಬನ್ಸಿಲಾಲ್, ಹರಿಯಾಣದ ಮುಖ್ಯ ಮಂತ್ರಿಗಳು, ಸಿಕಂದರ್ ಭಕ್ತ್, ಕೇಂದ್ರ ಕೈಗಾರಿಕಾ ಸಚಿವರು, ಎ.ಆರ್. ಆಂಟುಲೆ, ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿಗಳು; ಎಚ್.ಜಿ. ಗೋವಿಂದೇ ಗೌಡ, ಕರ್ನಾಟಕ ಸರ್ಕಾರದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು; ಎಸ್.ಎನ್. ಕಿರಣಶಂಕರ್, ಬೆಂಗಳೂರು ಮತ್ತು ವಿಶೇಷ ಆಹ್ವಾನಿತರಾದ ಚಂದ್ರಕಾಂತ ಎಂ. ಶೆಟ್ಟಿ, ಸಿ. ಉದಯಶಂಕರ್, ಬಿ. ವೀರಭದ್ರಪ್ಪ, ಎನ್. ತಿಪ್ಪಣ್ಣ, ಎಂಎಲ್‌ಸಿ, ಮತ್ತು ಎಂ.ಬಿ. ಪಾಟೀಲ್ ಅವರುಗಳಿಗೆಲ್ಲರಿಗೂ ನಮ್ಮ ಮನಃಪೂರ್ವಕ ವಂದನೆಗಳು

ಶ್ರೀಯುತರುಗಳಾದ ಎಂ.ಬಿ. ಪಾಟೀಲ್, ಕರ್ನಾಟಕ ಗೆಜೆಟಿಯರ್‌ನ ನಿವೃತ್ತ ಪ್ರಧಾನ ಸಂಪಾದಕರು; ಎಲ್.ಎಸ್. ಚಂದ್ರಶೇಖರ್ (ನಿವೃತ್ತ) ಅಭಿವೃದ್ಧಿ ಅಧಿಕಾರಿಗಳು, ಗೊಬ್ಬರ ಅನಿಲ ಯೋಜನೆ ಮತ್ತು ವಿಶೇಷ ಅಧಿಕಾರಿ (ಬ್ಯಾಂಕ್ ಹಣಕಾಸು), ಕರ್ನಾಟಕ ಖಾದಿ ಬೋರ್ಡ್ – ಇವರುಗಳು ನೀಡಿದ ಸಂಪಾದಕೀಯ ಸಹಾಯಕ್ಕಾಗಿ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಶ್ರೀಯುತರುಗಳಾದ ಎಸ್.ಬಿ. ಮುದ್ದಪ್ಪ, ಐಎಎಸ್, ಕರ್ನಾಟಕದ (ನಿವೃತ್ತ) ಮುಖ್ಯ ಕಾರ್ಯದರ್ಶಿಗಳು, ಕೆ. ಚಂದ್ರಶೇಖರ್, ಗೊ.ರು. ಚನ್ನಬಸಪ್ಪ ಅವರುಗಳು ಈ ಬಗ್ಗೆ ನೀಡಿದ ಅಮೂಲ್ಯ ಸಹಕಾರಕ್ಕಾಗಿ ನಮ್ಮ ವಂದನೆಗಳು.

ಈ ಗ್ರಂಥದ ಮುದ್ರಣ ದೋಷಗಳನ್ನು ಕೂಲಂಕಷವಾಗಿ ತಿದ್ದಿದ ಶ್ರೀ ಸಿ.ಆರ್. ಗಡಗೊಳಿ (ನಿವೃತ್ತ) ಸೂಪರಿಂಟೆಂಡೆಂಟ್, ಶಿಕ್ಷಣ ಇಲಾಖೆ ಅವರಿಗೆ ನಮ್ಮ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಅಚ್ಚುಕಟ್ಟಾದ ಮುದ್ರಣಕಾರ್ಯಕ್ಕಾಗಿ ಮುದ್ರಕರಾದ ಮೆ. ಸತ್ಯಶ್ರೀ ಪ್ರಿಂಟರ್ಸ್ ಅವರಿಗೂ, ಕಲಾವಿದರಿಗೂ, ಈ ಪ್ರಕಟಣೆಯನ್ನು ಹೊರತರುವಲ್ಲಿ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಸಹಕರಿಸಿದ ಎಲ್ಲರಿಗೂ ನಮ್ಮ ನಮಸ್ಕಾರಗಳು.

ಬೆಂಗಳೂರು

ಎ.ಆರ್. ಬದರೀನಾರಾಯಣ

ಅಧ್ಯಕ್ಷರು

ಶ್ರೀ ಎಸ್. ನಿಜಲಿಂಗಪ್ಪ ರಾಷ್ಟ್ರೀಯ ಪ್ರತಿಷ್ಠಾನ

ಅಧ್ಯಾಯ ಸೂಚಿ

೧. ಎಳವೆಯ ದಿನಗಳು ೨

೨. ವಕೀಲಿ ಹಾಗೂ ಗೃಹಸ್ಥಾಶ್ರಮ ಪ್ರವೇಶ ೨೫

೩. ರಾಷ್ಟ್ರೀಯ ಚಳವಳಿಯ ಪ್ರವಾಹದಲ್ಲಿ ೪೪

೪. ಏಕೀಕರಣಕ್ಕಾಗಿ ಹೋರಾಟ ೬೪

೫. ಮುಖ್ಯಮಂತ್ರಿಯಾಗಿ ೯೪

೬ ಕಾಂಗ್ರೆಸ್ ವಿಭಜನೆ ಮತ್ತು ಆನಂತರ ೨೦೪

೭. ನವ ಮನ್ವಂತರ: ಆತ್ಮಸಾಕ್ಷಿ ಹಾಗೂ ಪ್ರಜ್ಞಾವಂತ ರಾಜಕಾರಣ ೩೩೩

೮. ನಿಜಲಿಂಗಪ್ಪನವರ ಕಾಣ್ಕೆ ೩೮೫

೯. ನಿಜಲಿಂಗಪ್ಪನವರು ಆಗಿನ ಮುಖ್ಯಮಂತ್ರಿ ಶ್ರೀ ಎಸ್.ಆರ್.
ಬೊಮ್ಮಾಯಿಯವರಿಗೆ ಬರೆದ ಪತ್ರ ೩೯೧

೧೦. ಗ್ರಂಥಸೂಚಿ ೩೯೩

೧೧. ಅನುಬಂಧಗಳು ೩೯೫

೧. ಮುಖ್ಯಮಂತ್ರಿಗಳಾಗಿ ಎಸ್. ನಿಜಲಿಂಗಪ್ಪನವರ ಸಾಧನೆಗಳು (ಪಠ್ಯದಲ್ಲಿ ಇಲ್ಲದವು)

೨. ಕಾಂಗ್ರೆಸ್ ಇಬ್ಭಾಗದ ಸಮಯದಲ್ಲಿ ಇಂದಿರಾ ಗಾಂಧಿ – ನಿಜಲಿಂಗಪ್ಪ ಇವರ ನಡುವೆ ನಡೆದ ಪತ್ರವ್ಯವಹಾರ

೩. ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ೭೧ನೇ ಅಧಿವೇಶನದಲ್ಲಿ ನಿಜಲಿಂಗಪ್ಪನವರು ಮಾಡಿದ ಅಧ್ಯಕ್ಷ ಭಾಷಣ

೪. ನಿಜಲಿಂಗಪ್ಪನವರ ಅತುಲ್ಯ ಘೋಷ್ ಸ್ಮಾರಕೋಪನ್ಯಾಸ

ಕಥನಕ್ಕೆ ತೊಡಗುವ ಮುನ್ನ

ಒಂದು ಸಾಹಿತ್ಯ ಪ್ರಕಾರವಾಗಿ ಜೀವನ ಚರಿತ್ರೆಯು ಭಾರತೀಯ ಸಂಸ್ಕೃತಿಯ ಒಂದು ಸಾಂಪ್ರದಾಯಿಕ ಭಾಗವಲ್ಲ. ಅದರ ಅತೀವ ವ್ಯಕ್ತಿಗತವೂ ವೈಯಕ್ತಿಕವೂ ಆದ ಗಮನವು ವ್ಯಕ್ತಿಯನ್ನು ಹಾಗೂ ಬದುಕಿನ ವ್ಯಕ್ತಿಗತ ನೆಲೆಗಳನ್ನು ಅರಿತುಕೊಳ್ಳುವ ನಮ್ಮ ಪಾರಂಪರಿಕ ಅಪೌರುಷೇಯ ಮಾದರಿಗೆ ಹೊರತಾದವು. ವ್ಯಕ್ತಿ ಮನಸ್ಸನ್ನು ಆಳವಾಗಿಯೂ ಸೂಕ್ಷ್ಮವಾಗಿಯೂ ಶೋಧಿಸುವ ಆಧುನಿಕ ಪಾಶ್ಚಾತ್ಯ ಪದ್ಧತಿಯಿಂದ ಇದು ಆಮದುಗೊಂಡದ್ದು. ಆದರೆ ಮಿಕ್ಕೆಲ್ಲವುಗಳ ಹಾಗೆಯೇ, ಈಗ ಅದೂ ಜಾಗತಿಕ ಪದ್ಧತಿಯೇ ಆಗಿಬಿಟ್ಟಿದೆ; ಪ್ರತಿಯೊಬ್ಬರೂ ಜೀವನ ಚರಿತ್ರೆಯನ್ನು ಬರೆಯುವವರೇ ಆಗಿದ್ದಾರೆ. ಪಾಶ್ಚಾತ್ಯ ಸಂದರ್ಭದಲ್ಲಿ ಜೀವನಚರಿತ್ರೆಯು ಸಾಮಾನ್ಯವಾಗಿ ಒಂದು ವಿಭೂತಿಚರಿತೆಯಾಗಿಬಿಡುವ ಪ್ರವೃತ್ತಿಯನ್ನು ಹೊಂದಿದೆ. ಜೀವನಚರಿತ್ರೆಯು ಛಾಯಾ ಚಿತ್ರಕ್ಕಿಂತ ವ್ಯಕ್ತಿಚಿತ್ರಕ್ಕೆ ಹತ್ತಿರವಾದುದು. ಯಾಕಂದರೆ ಜೀವನಚರಿತ್ರಕಾರನು ತನ್ನ ಕಥನ ನಾಯಕನ ಬದುಕಿನ ಕೆಲವು ಲಕ್ಷಣಗಳನ್ನೂ ವಿವರಗಳನ್ನೂ ಮುಂದುಮಾಡಿ, ಮತ್ತೆ ಕೆಲವನ್ನು ಹಿಂದಕ್ಕೆ ಸರಿಸಿಬಿಡುವುದೋ ಅಥವಾ ಪೂರ್ತಿ ಅಲಕ್ಷಿಸುವುದೋ ಮಾಡು ತ್ತಾನೆ. ಹೀಗಾಗಿ, ಜೀವನಚರಿತ್ರೆಗಳೆಂದರೆ ಗಮನವನ್ನು ಕೇಂದ್ರೀಕರಿಸಬೇಕಾದ ಬಿಂದು ವನ್ನು, ಒಂದು ಚೌಕಟ್ಟನ್ನು ಅಥವಾ ಒಂದು ಪರಿಪ್ರೇಕ್ಷ್ಯವನ್ನು ಆಯ್ಕೆಮಾಡಿಕೊಳ್ಳುವುದು, ಅದರಲ್ಲಿಯೇ ಬದುಕಿನ ಎಲ್ಲ ವಿವರಗಳನ್ನು ಶಸ್ತ್ರಚಿಕಿತ್ಸೆ ಮಾಡುವಾಗಿನ ನಿರ್ಭಾವುಕತೆ ಮತ್ತು ಅನಾಸಕ್ತಿಗಳಿಂದ ಹಿಂಡುವುದು ಎನಿಸಿಬಿಡುತ್ತದೆ. ಹೀಗಾಗಿಯೇ ಒಂದು ಬದುಕನ್ನು ವಿಭಿನ್ನ ದೃಷ್ಟಿಕೋನಗಳಿಂದ ಹಾಗೂ ಪರಿಪ್ರೇಕ್ಷ್ಯಗಳಲ್ಲಿಟ್ಟು ವಿಶ್ಲೇಷಿಸುವ ಅನೇಕ ಜೀವನ ಚರಿತ್ರೆಗಳಿರಲು ಸಾಧ್ಯ. ಒಂದರ್ಥದಲ್ಲಿ, ಇದರಲ್ಲಿ ಕಲ್ಪನಾತ್ಮಕತೆಯಿರುತ್ತದೆ, ಪ್ರತಿಭಾ ವಿಲಾಸವಿರುತ್ತದೆ. ಇದು ನಿಜವಾದ ಪಕ್ಷದಲ್ಲಿ, ಜೀವನಚರಿತ್ರೆಯು ಕಾದಂಬರಿಗೆ ಹತ್ತಿರ

ವಾಗುತ್ತದೆ: ಆದರೆ, ಇದು ಮುಖ್ಯವೆಂಬುದನ್ನು ಗಮನಿಸಿ, ಕಾದಂಬರಿಯಲ್ಲಿ ಆಗದ ಹಾಗೆ ಇದರಲ್ಲಿ ಪ್ರತಿಭಾವಿಲಾಸವು ವ್ಯಾಪಕವೂ ವಾಸ್ತವಾಂಶಗಳ ಚೌಕಟ್ಟಿನಲ್ಲಿಯೂ ಕಾರ್ಯಶೀಲವಾಗಬೇಕಾಗುತ್ತದೆ. ಆದರೆ ಕಾದಂಬರಿಕಾರನಿಗೆ ಈ ಯಾವುದೇ ಒತ್ತಡಗಳಿರುವುದಿಲ್ಲ, ಆದರೆ ಜೀವನಚರಿತ್ರಕಾರನು ಆಯ್ಕೆಮಾಡಿಕೊಳ್ಳಬೇಕು, ಅದೂ ಅಧಿಕೃತವಾದ ವಾಸ್ತವಾಂಶಗಳ ರಾಶಿಯಲ್ಲಿ ಮಾತ್ರ. ವ್ಯಕ್ತಿಯೊಬ್ಬನು ತನ್ನ ಆತ್ಮಚರಿತ್ರೆಯನ್ನು ಬರೆದರೆ, ತನ್ನ ಬದುಕಿನ ವಿವರಗಳನ್ನು ತನ್ನದೇ ಮಾತುಗಳಲ್ಲಿ ಹೇಳಿಕೊಂಡರೆ, ತನ್ನದೇ ದೃಷ್ಟಿಕೋನದ ಪರಿಪ್ರೇಕ್ಷ್ಯದಲ್ಲಿಟ್ಟು ನೋಡಿಕೊಂಡರೆ, ಜೀವನಚರಿತ್ರೆಯೆಂಬುದು ಅನವಶ್ಯಕ ಎನಿಸಿಬಿಡುತ್ತದೆಯೇ? ಪ್ರಸ್ತುತ ಸಂದರ್ಭದಲ್ಲಿ, ಶ್ರೀ ನಿಜಲಿಂಗಪ್ಪನವರು ಇಷ್ಟರಲ್ಲಿಯೇ ತಮ್ಮ ಆತ್ಮಚರಿತ್ರೆಯನ್ನು ಇಂಗ್ಲಿಷಿನಲ್ಲಿ ಬರೆಯುವವರಿದ್ದಾರೆ. ಅವರೊಡನೆ ಇತ್ತೀಚೆಗೆ ಮಾತನಾಡಿದ ಸಂದರ್ಭದಲ್ಲಿ, ಇದೇ ಪ್ರಶ್ನೆಯನ್ನು ನಾನು ಅವರ ಮುಂದಿಟ್ಟೆ. ತಮ್ಮ ಕತೆಯು ನಡೆದುದರ ಹಾಗೂ ತಮ್ಮ ನೆನಪಿಗೆ ನಿಲುಕುವಷ್ಟರ ಮಟ್ಟಿಗೆ ಇತರ ಐತಿಹಾಸಿಕ ವ್ಯಕ್ತಿಗಳ ಜೊತೆಗಿನ ತಮ್ಮ ಸಂಬಂಧದ ವಾಸ್ತವಿಕ ನಿರೂಪಣೆಯಾಗಿರುತ್ತದೆ ಎಂದವರು ಆಗ ವಿವರಿಸಿದರು. ಹೀಗೆ, ಅವರಿಗೆ ಆತ್ಮಚರಿತ್ರೆ ಮತ್ತು ಜೀವನಚರಿತ್ರೆಗಳ ನಡುವೆ ಯಾವುದೇ ವಿರೋಧ ಕಾಣಲಿಲ್ಲ. ಅದರ ಬದಲು ಈ ಎರಡೂ ಬಾಳಿದ ಒಂದು ಬದುಕಿನ ವಾಸ್ತವ ಚಿತ್ರಣವನ್ನು ವಸ್ತುನಿಷ್ಠವಾಗಿ ನೀಡುವಲ್ಲಿ ತನ್ನದೇ ಪಾತ್ರವನ್ನು ವಹಿಸುತ್ತವೆ ಎಂಬುದನ್ನವರು ಗುರುತಿಸಿದರು. ಬದುಕಿನ ಅತ್ಯಂತ ವ್ಯಕ್ತಿಗತವೂ ಖಾಸಗಿಯೂ ಆದ ಕ್ಷಣಗಳ ಮೇಲೆ ಆತ್ಮಚರಿತ್ರೆ ಮಾತ್ರವೇ ಸಮರ್ಪಕ ಬೆಳಕನ್ನು ಬೀರಬಲ್ಲುದಾದರೆ, ಜೀವನಚರಿತ್ರೆಯು ಇಂಥ ಖಾಸಗಿತನದಿಂದ ದೂರವಾಗಿ ವ್ಯಕ್ತಿಕಥನವು ಇತಿಹಾಸದಿಂದ ಅಭಿನ್ನವಾಗುವ ಬಗೆಯಲ್ಲಿ ವ್ಯಾಪಕವಾದ ಚಿತ್ರಣವನ್ನು ನೀಡಬಲ್ಲುದು.

ನಿಜಲಿಂಗಪ್ಪನವರಂತಹ ಸಾರ್ವಜನಿಕ ಹಾಗೂ ಐತಿಹಾಸಿಕವಾಗಿ ಪ್ರಮುಖವಾದ ವ್ಯಕ್ತಿಯೊಬ್ಬರ ಜೀವನಚರಿತ್ರೆಯನ್ನು ರಚಿಸುವಾಗ, ವ್ಯಕ್ತಿ ಬದುಕಿಗೂ ಇತಿಹಾಸಕ್ಕೂ ನಡುವೆ ಖಚಿತವಾಗಿ ಗೆರೆ ಕೊರೆಯುವುದು ಅಸಾಧ್ಯ ಮಾತ್ರವೇ ಅಲ್ಲ, ಅಬದ್ಧವೂ ಆಗುತ್ತದೆ. ಇವೆರಡೂ ಎಷ್ಟು ನಿಕಟವಾಗಿ ಹೆಣೆದುಕೊಂಡಿರುತ್ತವೆಂದರೆ, ತನ್ನ ಕಥನ ನಾಯಕನ ವೈಯಕ್ತಿಕ ಜೀವನ ಮತ್ತದರ ವಿವರಗಳು ಚರಿತ್ರೆಯ ಮೇಲೆ ಬೀರುವ ಪರಿಣಾಮವನ್ನು ನಿರಂತರವಾಗಿ ಗಮನಿಸಬೇಕಾಗುತ್ತದೆ. ನಿದರ್ಶನಕ್ಕೆ, ನಿಜಲಿಂಗಪ್ಪನವರಂತೆ ಐತಿಹಾಸಿಕವಾಗಿ ಉನ್ನತ ನೆಲೆಯಲ್ಲಿನ ವ್ಯಕ್ತಿಯೊಬ್ಬರ ಬಗ್ಗೆ ರಚಿತವಾದ ಯಾವುದೇ ಜೀವನಚರಿತ್ರೆಯು ಕರ್ನಾಟಕದ ಮತ್ತು ಭಾರತದ ರಾಜಕೀಯ ಚರಿತ್ರೆಗೂ ಮಹತ್ವವಾದ ಕೊಡುಗೆಯಾಗುತ್ತದೆ. ಕೆಲವು ಸಂದರ್ಭಗಳಲ್ಲಿ, ನಮ್ಮ ಪ್ರಸ್ತುತ ಕಥನ ನಾಯಕನ ವಿಷಯದಲ್ಲಿ ಅಲ್ಲವಾದರೂ, ಜೀವನಚರಿತ್ರೆಯು ಜಗತ್ತಿನ ಇತಿಹಾಸಕ್ಕೂ

ಒಂದು ಕೊಡುಗೆಯಾಗುತ್ತದೆ. ಇದಕ್ಕೆ ಸ್ಪಷ್ಟವಾದ ಕಾರಣವೆಂದರೆ, ಇತಿಹಾಸನಿರ್ಮಾತೃನ ಬದುಕನ್ನು ವಿಶಾಲ ಇತಿಹಾಸದ ಭಾಗವನ್ನಾಗಿ ನೋಡಬೇಕಾಗುತ್ತದೆ ಎಂಬುದು. ನಿದರ್ಶನಕ್ಕೆ ಈ ಜೀವನ ಚರಿತ್ರೆಯಲ್ಲಿ, ಭಾಷಿಕ ವಲಯಗಳ ಒಕ್ಕೂಟ ಹಾಗೂ ಭಾರತ ರಾಷ್ಟ್ರನಿರ್ಮಾಣದ ವಿಶಾಲ ಐತಿಹಾಸಿಕ ಭೂಮಿಕೆಯ ಇತಿಹಾಸವು ಅಡಕವಾಗಿದೆ. ಇನ್ನೂ ವಿಶಾಲ ಭೂಮಿಕೆಯಲ್ಲಿ, ಅದು ಭಾರತದ ಆಧುನಿಕೀಕರಣ ಪ್ರಕ್ರಿಯೆಯ, ಆ ಗಾಢಾರ್ಥದ ಮತ್ತು ದುರುಪಯೋಗಕ್ಕೊಳಗಾದ ಶಬ್ದದ ಯಾವುದೇ ಅರ್ಥದಲ್ಲಿ, ಇತಿಹಾಸಕ್ಕೆ ಕೂಡ ಕೊಡುಗೆಯಾಗುತ್ತದೆ. ಇದೇ ಕಥನವು, ರಾಜತ್ವರಹಿತ ಬ್ರಿಟಿಷ್ ಸಂಸದೀಯ ಪ್ರಜಾಪ್ರಭುತ್ವ ಹಾಗೂ ಆಧುನಿಕ ಪಾಶ್ಚಾತ್ಯ ಮಾದರಿಯ ನಾಗರಿಕ ಸಮಾಜ ಸ್ಥಾಪನೆಯ ಹಾಗೂ ಸ್ಥೂಲವಾಗಿ ಕೈಗಾರಿಕೀಕೃತವೂ ಬಂಡವಾಳಶಾಹಿ ಪದ್ಧತಿ ಯಲ್ಲಿನ ನಿಯಂತ್ರಣ ಮತ್ತು ಪರವಾನಿಗೆಗಳ ಆರ್ಥಿಕ ವ್ಯವಸ್ಥೆಯ (ಮಿಶ್ರ ಆರ್ಥಿಕ ವ್ಯವಸ್ಥೆ, ಸರ್ಕಾರಿ ಬಂಡವಾಳಶಾಹಿ ಅಥವಾ ಉದಯಿಸುತ್ತಿರುವ ಬಂಡವಾಳಶಾಹಿ ವ್ಯವಸ್ಥೆಯ ನೆರವಿಗೆ ನಿಂತ ಸಮಾಜವಾದಿ ವ್ಯವಸ್ಥೆ ಎಂದೂ ಕರೆಯಲಾಗುವ) ಸ್ಥಾಪನೆಯ ಐತಿಹಾಸಿಕ ಕಾರ್ಯದ ಪುನಾರಚನೆಯಾಗಿಯೂ ಅರ್ಥವಿಸಿಕೊಳ್ಳಬಹುದು. ಈ ಕಥನವು ಇಷ್ಟು ಸರಳವಾದುದೂ ಅಲ್ಲ, ಸರಾಗವಾದುದೂ ಅಲ್ಲ, ಹಾಗಿದ್ದಿದ್ದರೆ ಬಿಕ್ಕಟ್ಟಿನ ನಂತರ ಬಿಕ್ಕಟ್ಟು ಸಿಡಿಯುತ್ತಲೇ ಇರಲಿಲ್ಲ, ಎಂಬುದು ನಿಜ. ಕಥನದ ಪ್ರಮುಖ ಸಂಕೀರ್ಣತೆ ಅಥವಾ ಕಥನದ ತಿರುವು ಈ ಬಗೆಯ ಆಧುನಿಕತೆಗೆ ಸಂಪ್ರದಾಯಶರಣ ಸಂಸ್ಥೆಗಳು ಮತ್ತು ಆಧುನಿಕತೆಗೆ ವಿರುದ್ಧವಾದ ಮೌಲ್ಯಗಳಿಂದ ತುಂಬಿರುವ ಸಮಾಜವು ಒಡ್ಡಿದ ಸವಾಲಿನಲ್ಲಿದೆ. ಗಾಂಧೀಜಿಯವರು, ಅಥವಾ ಜೆಪಿ ಅಥವಾ ಅಂಬೇಡ್ಕರ್ ಅವರುಗಳು ಕೂಡ, ವಹಿಸಿದ ಪಾತ್ರವನ್ನು ಈ ಸಂದರ್ಭದಲ್ಲಿ ತೋರಿದ ಪ್ರತಿಕ್ರಿಯೆಯಾಗಿ ಕಾಣಬಹುದು. ತಮ್ಮದೇ ಆದ ರೀತಿಯಲ್ಲಿ, ನಿಜಲಿಂಗಪ್ಪನವರು ಕೂಡ ತಮ್ಮ ಜೀವನ ದಲ್ಲಿ, ಸಮಾಜ ಸರ್ಕಾರವನ್ನು ಅತಿಕ್ರಮಿಸುವಂತೆಯೇ, ವಿಶಾಲಾರ್ಥದಲ್ಲಿ ಜನ ಸಾಮಾನ್ಯರು ಈ ಬಗ್ಗೆ ಸಂಕೀರ್ಣವೂ ಗೊಂದಲಮಯವೂ ಆದ ರೀತಿಯಲ್ಲಿ ಪ್ರತಿಕ್ರಿಯಿಸುವ ನಗರ ಮೇಲ್ವರ್ಗದಿಂದ ಸ್ಫೂರ್ತಗೊಂಡ ತನ್ನ ಆಧುನಿಕತೆಯ ಪರಿಕಲ್ಪನೆ ಯನ್ನು ಸರ್ಕಾರವೂ ಸಮಾಜದ ಮೇಲೆ ಹೇರುವ ರಾಜಕಾರಣದ ಕೇಂದ್ರ ಸಮಸ್ಯೆಯನ್ನು ಪ್ರತಿನಿಧಿಸುತ್ತಾರೆ. ನೆಹರೂ ಮತ್ತವರ ಪೀಳಿಗೆಯು, ಅದರಲ್ಲಿ ನಿಜಲಿಂಗಪ್ಪನವರೂ ಸೇರುತ್ತಾರೆ, ಈ ಐತಿಹಾಸಿಕ ತುಮುಲವನ್ನು ಪ್ರತಿನಿಧಿಸುತ್ತವೆ. ಆರಂಭದ ಅವರ ಯಶಸ್ಸು ಅಲ್ಪಾಯುಷಿಯಾಗಿತ್ತೆಂಬುದು ಈಗ ಗೊತ್ತಾಗಿದೆ; ಉದಾರ ಪ್ರಜಾಸತ್ತಾತ್ಮಕ ಮೌಲ್ಯಗಳು ಕುಸಿದಿವೆ ಹಾಗೂ ತಮ್ಮ ಪೀಳಿಗೆಯು ನಿರ್ಮಿಸಿದ್ದ ವ್ಯವಸ್ಥಾಬದ್ಧ ಸಾಂಸ್ಥಿಕ ಸಂರಚನೆಯು ಸಡಿಲಗೊಂಡಿದೆ ಎಂಬುದು ನಿಜಲಿಂಗಪ್ಪನವರಿಗೂ ಚೆನ್ನಾಗಿ ತಿಳಿದಿದೆ.

ಆದರೆ, ಒಬ್ಬ ಪ್ರಬುದ್ಧ ಮುತ್ಸದ್ದಿಯಾದ ಅವರು, ಈ ಬಗೆಗಿನ ಪ್ರತಿಕ್ರಿಯೆಯು ಹತಾಶೆಯದ್ದಾಗಲೀ ಸಿನಿಕತನದ್ದಾಗಲೀ ಆಗಿರಬಾರದು, ಅದರ ಬದಲು ಕಡುವಾಸ್ತವ ನೆಲೆಯದ್ದೂ ಆದರ್ಶಗಳಿಗೆ ಪುನರುಜ್ಜೀವಿತ ನೈತಿಕ ಬದ್ಧತೆಯನ್ನು ಹೊಂದಿರುವಂಥದ್ದೂ ಆಗಿರಬೇಕು ಎಂಬ ಮನೋಭಾವದವರು. ಅದಕ್ಕಾಗಿಯೇ, ತೊಂಬತ್ತನ್ನು ಮೀರಿದ್ದರೂ, ಈ ಹಿರಿಯ ಮುತ್ಸದ್ದಿಯು ತನ್ನಲ್ಲಿ ಹೊಸ ಆಲೋಚನೆ ಗಳನ್ನೂ ಭರವಸೆಗಳನ್ನೂ ತುಂಬಿಕೊಂಡು, ಇಳಿ ವಯಸ್ಸು ಮತ್ತು ಅನಾರೋಗ್ಯಗಳನ್ನೂ ಎದುರಿಸಿ ನಿಂತು, ತನ್ನದೇ ಆಧುನಿಕತೆಯ ಅವತರಣಿಕೆಯನ್ನು ಪಡೆದ, ಇನ್ನೂ ಪೂರ್ಣಗೊಳ್ಳದ, ಆಧುನಿಕ ಭಾರತ ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ದುಮುಕಿ ಕಾರ್ಯಶೀಲವಾಗುವುದು. ಈ ಉತ್ಸಾಹೀ ಹಿರಿಯರು ತಮ್ಮ ಜೀವನ ಮಣಿಹವನ್ನು ಅದೇ ಬದ್ಧತೆಯಿಂದ ಇನ್ನೂ ಮುಂದುವರಿಸುತ್ತಿರುವುದನ್ನು ಕಂಡಾಗ ನಮಗೆ ನೆನಪಿಗೆ ಬರುವುದು ತನ್ನ ಇಳಿವಯಸ್ಸಿನಲ್ಲಿ ವಿನಾಶಕಾರೀ ಅಣ್ವಸ್ತ್ರಗಳ ವಿರುದ್ಧ ಹೋರಾಟ ಮಾಡುವ ರಸೆಲ್ ಅಥವಾ ಮಾನವನು ತನ್ನ ವಿವೇಚನೇರಾಹಿತ್ಯದಿಂದಲೂ ದುರಾಸೆಯಿಂದಲೂ ನಾಶ ಮಾಡುತ್ತಿರುವ ಈ ಭೂಮಿಯನ್ನುಳಿಸಲು ಹೋರಾಡುತ್ತಿರುವ ನಮ್ಮವರೇ ಆದ ಶಿವರಾಮ ಕಾರಂತರು.

ಒಟ್ಟಾರೆ, ತನ್ನ ಉದ್ದೇಶವು ವ್ಯಕ್ತಿಯೊಬ್ಬರ ವೈಯಕ್ತಿಕ ಜೀವನವನ್ನು ಚಿತ್ರಿಸುವುದು ಮಾತ್ರವೇ ಆಗಿರದೆ ಆ ಜೀವನವನ್ನು ಸಮಕಾಲೀನ ಐತಿಹಾಸಿಕ ಪ್ರಕ್ರಿಯೆಯ ಒಂದು ಅವಿನಾಭಾಗವಾಗಿ ನಿರೂಪಿಸುವುದಾಗಿದೆ ಎಂದು ಪ್ರಸ್ತುತ ಲೇಖಕನು ಭಾವಿಸುತ್ತಾನೆ. ನಿಜಲಿಂಗಪ್ಪನವರು ತಮ್ಮ ಬದುಕಿನ ಐತಿಹಾಸಿಕ ಮಹತ್ವವನ್ನು ವೈಭವೀಕರಿಸಿಕೊಳ್ಳಲಾರರು, ಅವರು ಅಷ್ಟು ವಿನಯಶೀಲರು. ಈ ಜೀವನಚರಿತ್ರಕಾರನೊಡನೆ ನಡೆಸಿದ ಇತ್ತೀಚಿನ ಒಂದು ಸಂದರ್ಶನದಲ್ಲಿ ಅವರು ಗ್ರಂಥದ ಶೀರ್ಷಿಕೆಯಲ್ಲಿ ತಮ್ಮನ್ನು ಮುತ್ಸದ್ದಿ ಎಂದು ಕರೆದಿರುವುದರ ಬಗ್ಗೆಯೇ ಮುಜುಗರ ವ್ಯಕ್ತಪಡಿಸಿದ್ದರು. ವಿಚಿತ್ರವೆಂದರೆ, ತನ್ನ ವೈಯಕ್ತಿಕ ಲಾಭಗಳಿಗಾಗಿ ರಾಜಕಾರಣವನ್ನು ಮಾಡದೆ, ಗಾಂಧೀಜಿಯ ಸ್ಫೂರ್ತಿದಾಯಕ ನಾಯಕತ್ವದಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ಇಡೀ ಪೀಳಿಗೆಯೊಂದು ಕಂಡ ಕನಸಿನ ರಾಷ್ಟ್ರ ಮತ್ತು ರಾಜ್ಯನಿರ್ಮಾಣದ ದೀರ್ಘಾವಧಿ ಗುರಿಗಳ ಸಾಧನೆಗಾಗಿ ತನ್ನನ್ನು ಅರ್ಪಿಸಿಕೊಂಡು ಆ ಅಪೂರ್ಣ ಕಾರ್ಯದಲ್ಲಿ ಅಪಾರ ತ್ಯಾಗ ಮತ್ತು ಸಂಕಷ್ಟಗಳನ್ನು ಅನುಭವಿಸಿದ ಅವರ ಈ ಸಹಜವೂ ವ್ಯಕ್ತಿತ್ವಾಂತರ್ನಿಹಿತವೂ ಆದ ಈ ವಿನಯವೇ ಅವರನ್ನು ನಿಜವಾದ ಮುತ್ಸದ್ದಿ ಎಂದು ಕರೆಯುವುದು ಸೂಕ್ತ ಎಂಬುದಕ್ಕೆ, ಆವಶ್ಯಕವೇ ಆದರೆ, ಪುರಾವೆಯಾಗುತ್ತದೆ.

ಎಸ್ಸೆನ್ – ಆರಂಭದಲ್ಲಿ

೧

ಎಳವೆಯ ದಿನಗಳು

ನಿಜಲಿಂಗಪ್ಪನವರ ಬದುಕು ಮತ್ತು ಸಾಧನೆಗಳನ್ನು ಕುರಿತು ಹೇಳುವ ಮುಂಚೆ, ಅವರ ವಂಶದ ಹಿನ್ನೆಲೆಯ ಬಗ್ಗೆ ಸಂಕ್ಷಿಪ್ತವಾಗಿ ತಿಳಿದುಕೊಳ್ಳುವುದು ಸೂಕ್ತವಾದೀತು. ಕೌಟುಂಬಿಕ ಹಿನ್ನೆಲೆಯು ಮುಂದೆ ನಡೆಯುವುದನ್ನು ನಿರ್ಧರಿಸುವುದಿಲ್ಲವಾದರೂ, ವ್ಯಕ್ತಿಯೊಬ್ಬನ ಮೇಲೆ, ಎಷ್ಟೇ ಅಲ್ಪವಾಗಿರಲಿ, ಆದ ಪ್ರಭಾವಗಳು ಎಂಥವು ಎಂಬುದನ್ನು ಅದು ಗುರುತಿಸುತ್ತದೆ.

ನಿಜಲಿಂಗಪ್ಪನವರ ಪೂರ್ವಿಕರು ಅಬ್ಬಲೂರಿನವರು; ಮಧ್ಯಕಾಲದಲ್ಲಿ ಅದಕ್ಕೊಂದು ಭವ್ಯ ಇತಿಹಾಸವಿದೆ; ಅದು ಜನಸಾಮಾನ್ಯರ ಕವಿಯೆನಿಸಿದ ಸರ್ವಜ್ಞನ ಹುಟ್ಟಿದೂರು. ಸರ್ವಜ್ಞನ ತ್ರಿಪದಿಗಳು ಕನ್ನಡ ನುಡಿಯ ಆಡುಮಾತಿನ ರಕ್ತಮಾಂಸಗಳಲ್ಲಿ ಸೇರಿಹೋಗಿವೆ. ಅಬ್ಬಲೂರು ವೀರಶೈವದ ಸಮಾಜೋ-ಧಾರ್ಮಿಕ ಚಳವಳಿಯ ಕೇಂದ್ರವೂ ಆಗಿತ್ತು. ಆದರೆ ಇತಿಹಾಸದಲ್ಲಿ ಸಂಭವಿಸುವಂತೆ, ಒಮ್ಮೆ ವರ್ಣಮಯ ಹಿನ್ನೆಲೆಯನ್ನು ಹೊಂದಿದ್ದ ಊರುಗಳು ಮುಂದೆ ಇಳಿಕೆಯ ದಿನಗಳು ಕಾಣುವಂತಾಗುತ್ತದೆ. ಈ ಊರು ತನ್ನ ಮಹತ್ವವನ್ನು ಕಳೆದುಕೊಳ್ಳತೊಡಗಿದ ಬಳಿಕ ಜನರು ತಮ್ಮ ಭವಿಷ್ಯವನ್ನು ಅರಸಿಕೊಂಡು ನೆರೆಯ ಊರುಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಗುಳೆ ಹೋದರು. ಸಹಜವಾಗಿಯೇ ಹೀಗೆ ಹೋದ ಗುಂಪುಗಳಲ್ಲಿ ವರ್ತಕರು ತುಂಬ ಪ್ರಮುಖರಾಗಿದ್ದರು.

ಅಬ್ಬಲೂರಿನ ವರ್ತಕರೆಲ್ಲ ವೀರಶೈವರಲ್ಲಿನ ಪಂಚಮಸಾಲಿ ಜನಾಂಗಕ್ಕೆ ಸೇರಿದವರು. ನಿಜಲಿಂಗಪ್ಪನವರ ಹಿರೀಕರೂ ಈ ಪಂಚಮಸಾಲಿ ಜನಾಂಗಕ್ಕೆ ಸೇರಿದವರು. ಅವರೂ ಸನಿಹದ ಹಲವಾಗಿಲು ಎಂಬ ಊರಿಗೆ ವಲಸೆ ಹೋದರು; ಅದು ಇಂದಿನ ಹರಿಹರದಿಂದ ಹದಿನೆಂಟು ಮೈಲಿ, ಇಂದಿನ ಹರಪನಹಳ್ಳಿಯಿಂದ ಎಂಟು ಮೈಲಿ ಮತ್ತು ಇಂದಿನ ರಾಣೆಬೆನ್ನೂರಿನಿಂದ ಒಂಬತ್ತು ಮೈಲಿಗಳಷ್ಟು ದೂರದ ಊರು. ಹಲವಾಗಿಲಿಗೆ ಕೂಡ ಭವ್ಯವೂ ದೀರ್ಘವೂ ಆದ ಇತಿಹಾಸವಿದೆ. ಆ ಪಟ್ಟಣದ ಬಳಿ ಒಂದು ಕೋಟೆಯಿದೆ, ವೈಭವಯುತ ವಿಜಯನಗರದ ಕಾಲದಲ್ಲಿ ಆ ಊರು ಪಾಳೆಯಗಾರರ ರಾಜಧಾನಿಯಾಗಿತ್ತು. ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನ ನೇತೃತ್ವದಲ್ಲಿ ಜರುಗಿದ ವೀರಶೈವ ಚಳವಳಿಯೂ ಈ ಊರಿನಲ್ಲಿ ದುಮುಗುಡುತ್ತಿದ್ದಂತೆ ತೋರುತ್ತದೆ.

ಹಲವಾಗಿಲಿನ ಜನಸಂಖ್ಯೆಯಲ್ಲಿ ನಾನಾ ಜನಾಂಗಗಳು ಸೇರಿದ್ದವು: ಗೊಲ್ಲರು, ಕುರುಬರು, ಬೇಡರು, ಹರಿಜನರು ಮತ್ತು ಬೆಸ್ತರು ಇತ್ಯಾದಿ. ಆದರೆ ಅಲ್ಲಿನ ಅಧಿಕಾರ ಮತ್ತು ಗೌರವಗಳಲ್ಲಿ ವೀರಶೈವರದು ಸಿಂಹಪಾಲು. ಇದಕ್ಕೆ ಸಾಕ್ಷ್ಯಾಧಾರಗಳಿಲ್ಲದಿದ್ದರೂ, ಅಬ್ಬಲೂರಿನಿಂದ ಇಲ್ಲಿಗೆ ಪ್ರಮುಖ ವರ್ತಕ ಕುಟುಂಬವೊಂದು ಬಂದಿರಬೇಕು, ಏಕೆಂದರೆ ಇಂದಿಗೂ ಆ ಕುಟುಂಬವು ಅಬ್ಬಲೂರು ಶೆಟ್ಟರು ಎಂದು ಪ್ರಸಿದ್ಧವಾಗಿದೆ. ನಿಜಲಿಂಗಪ್ಪನವರ ತಾತನವರ ಕಾಲದಿಂದ ನಮಗೆ ಖಚಿತ ಇತಿಹಾಸ ದೊರೆಯುತ್ತದೆ. ವ್ಯಾವಹಾರಿಕವಾಗಿ ಅಷ್ಟೇನೂ ಮುಂದುವರಿಯದಿದ್ದರೂ, ಅಡಿವೆಪ್ಪ ಮತ್ತವರ ಹೆಂಡತಿ ನೀಲಮ್ಮ ಅಲ್ಲಿ ಆದರ್ಶ ದಂಪತಿಗಳಾಗಿ ಮತ್ತು ನಿಷ್ಠ ವೀರಶೈವರಾಗಿ ಬಾಳಿದವರು; ರೈತರಾಗಿ ಕಷ್ಟಪಟ್ಟು ದುಡಿದು ತಮ್ಮ ಅನ್ನ ಸಂಪಾದಿಸಿದವರು. ಅಡಿವೆಪ್ಪನವರ ಕಾಲಕ್ಕೆ ವಂಶದ ಸಮೃದ್ಧಿ ಇಳಿಮುಖವಾಗಿತ್ತು, ಇದಕ್ಕೆ ಕಾರಣ ಆ ಕುಟುಂಬದವರು ಆದರ್ಶ ಮತ್ತು ಮೌಲ್ಯಗಳಿಗೆ ಬಾಳನ್ನು ತೆತ್ತುಕೊಂಡಿದ್ದದ್ದು. ಯಾವುದೇ ನೈತಿಕ ಮೌಲ್ಯವನ್ನು ಅನುಸರಿಸದೆ ಕೇವಲ ಹಣ ಸಂಪಾದನೆಯೇ ಗುರಿಯಾಗಿದ್ದ ಇತರ ಕುಟುಂಬಗಳನ್ನು ಈ ಕುಟುಂಬ ಅನುಸರಿಸಲಿಲ್ಲ, ಅನೀತಿಯುತ ಪೈಪೋಟಿಯಲ್ಲಿ ಭಾಗಿಯಾಗದ್ದರಿಂದ ಸಹಜವಾಗಿಯೇ ಬೆಲೆ ತೆರಬೇಕಾಯಿತು. ಅಡಿವೆಪ್ಪನವರ ಕಷ್ಟ ಕಾಲದಲ್ಲಿ ಅವರ ನಿಜವಾದ ಅರ್ಥದಲ್ಲಿ ಬಾಳಸಂಗಾತಿಯಾಗಿದ್ದ ನೀಲಮ್ಮ ಗಂಡನ ಬೆಂಬಲಕ್ಕೆ ಕಟ್ಟಿಬದ್ಧರಾಗಿ ನಿಂತಿದ್ದರು. ಆಕೆಯ ತಂದೆ ಹುಲ್ಲಟ್ಟಿ ಚೆನ್ನಮಲ್ಲಪ್ಪನವರು ಊರಿನಲ್ಲಿ ಗಣ್ಯ ವ್ಯಕ್ತಿಗಳೆನಿಸಿದ್ದವರು, ಅವರದ್ದು ಶ್ರೀಮಂತವಾದ ಸಾಂಸ್ಕೃತಿಕ ಹಾಗೂ ಸಾಹಿತ್ಯದ ಹಿನ್ನೆಲೆ; ಅವರ ವ್ಯಾಸಂಗದಲ್ಲಿ ಮಹತ್ವಪೂರ್ಣವಾದ ವಚನ ಸಾಹಿತ್ಯ ಹಾಗೂ ನಡುಗನ್ನಡದ ಮಹಾಕೃತಿ ಲಕ್ಷ್ಮೀಶನ ಜೈಮಿನಿ ಭಾರತಗಳು ಸೇರಿದ್ದವು. ಅವರಿಗೆ ಆಗಿನ ನಾಟಿ ವೈದ್ಯದಲ್ಲಿಯೂ ಪರಿಣತಿಯಿತ್ತು; ಆಧುನಿಕ ವೈದ್ಯ ಗುಣಪಡಿಸ

ಲಾಗದೆ ಕೈಚೆಲ್ಲಿದ್ದ ಲಕ್ವ, ಬೆನ್ನುನೋವು, ಮತ್ತು ಸಂಧಿವಾತಗಳಿಗೆ ನೀಡುತ್ತಿದ್ದ ಚಿಕಿತ್ಸೆಗೆ ಅವರು ಹೆಸರುವಾಸಿಯಾಗಿದ್ದರು. ಅವರು ಚೂಪಾದ ಕಲ್ಲಿನ ಉಪಕರಣಗಳಿಂದ ಶಸ್ತ್ರಚಿಕಿತ್ಸೆಯನ್ನೂ ಮಾಡುತ್ತಿದ್ದರಂತೆ, ಇದು ನಮ್ಮಲ್ಲಿ ಬೆರಗನ್ನು ತರುವಂಥದು! ಅವರು ಔಷಧಿ ಕೊಡುತ್ತಿದ್ದದ್ದು ಮನುಷ್ಯರಿಗೆ ಮಾತ್ರವಲ್ಲ, ಪ್ರಾಣಿಗಳಿಗೂ. ಅವರು ಧಾರ್ಮಿಕ ಪ್ರವಚನಗಳನ್ನು ನೀಡುವುದಕ್ಕೂ ಹೆಸರುವಾಸಿಯಾಗಿದ್ದರು, ಅದನ್ನು ಕೇಳಲು ಜನರು ಸುತ್ತಲಿನ ಊರುಗಳಿಂದ ಬರುತ್ತಿದ್ದರು. ಅಲ್ಲದೆ ಅವರೊಬ್ಬ ಪಳಗಿದ ರಂಗ ನಟರು ಕೂಡ. ತನ್ನ ಭಕ್ತನಾದ ಪ್ರಹ್ಲಾದನನ್ನು ಕಾಪಾಡಲು ಹಿರಣ್ಯಕಶಿಪುವನ್ನು ಸಂಹರಿಸಲು ಅವತರಿಸಿದ ವಿಷ್ಣುವಿನ ಅವತಾರವಾದ ಉಗ್ರನರಸಿಂಹನ ಪಾತ್ರಕ್ಕೆ ಅವರು ಖ್ಯಾತರಾಗಿದ್ದರು. ಒಟ್ಟಾರೆ ಅವರೊಬ್ಬ ಅಸಾಧಾರಣ ವ್ಯಕ್ತಿ, ಇತರರ ಸೇವೆ ಗೈಯುತ್ತ ಸಾರ್ಥಕವಾದ ತುಂಬು ಬಾಳನ್ನು ಬಾಳಿದವರು. ಅಡಿವೆಪ್ಪನವರ ಕುಟುಂಬದಲ್ಲಿ ಏಳು ತಲೆಮಾರುಗಳಿಂದಲೂ ಒಂದೇ ಗಂಡು ಸಂತಾನವಾಗುತ್ತಿತ್ತು, ಉಳಿದುವೆಲ್ಲ ಹೆಣ್ಣುಗಳು. ಅವರ ಮೊದಲ ಇಬ್ಬರು ಮಕ್ಕಳಾದ ಬಸಪ್ಪ ಮತ್ತು ಪುಟ್ಟಮ್ಮನವರ ಬಳಿಕ ಮೂರನೆಯ ಮಗು ಹೆಣ್ಣಾಗುತ್ತದೆಂದೇ ಎಲ್ಲರೂ ಭಾವಿಸಿದ್ದರು. ಆದರೆ ಅದು ಸುಳ್ಳಾಗಿ, ೧೯೦೨ ನೇ ಇಸವಿ ಡಿಸೆಂಬರ್ ಹತ್ತರಂದು ಒಂದು ಗಂಡು ಮಗು ಜನಿಸಿತು! ಈ ಅನಿರೀಕ್ಷಿತ ವರದಾನದಿಂದ ದಂಪತಿಗಳು ಆನಂದತುಂದಿಲರಾದರು. ಮಗು ಮುಂದೆ ಭಾರತ ಹಾಗೂ ಅದರ ಭಾಗವಾದ ಕರ್ನಾಟಕವನ್ನು ಕಟ್ಟುವ ಐತಿಹಾಸಿಕ ಸಾಧನೆಯಲ್ಲಿ ಪ್ರಮುಖ ಪಾಲುದಾರನಾಗಬೇಕಾಗಿತ್ತು. ಸ್ಥಳೀಯವಾದ ಉಜ್ಜನಿ ಮಠದ ಧರ್ಮಗುರುಗಳು ಮಗುವಿಗೆ ಪಂಚಾಕ್ಷರಿ ಮಂತ್ರವನ್ನು ಬೋಧಿಸಿ, ವಿಭೂತಿ ಧಾರಣೆ ಮಾಡಿ, ಇಷ್ಟಲಿಂಗವನ್ನು ಕಟ್ಟಿ ವೀರಶೈವ ದೀಕ್ಷೆಯನ್ನು ನೀಡಿದರು. ಮಗುವಿನ ತಾತನವರ ಅಪೇಕ್ಷೆಯಂತೆ ಅದಕ್ಕೆ ನಿಜಲಿಂಗಪ್ಪ ಎಂದು ನಾಮಕರಣ ವಾಯಿತು. ಮಗುವಿನ ಬಾಲ್ಯ ಸಂತಸಮಯವಾಗಿತ್ತು; ಅದು ಎರಡು ಮನೆಗಳ ನಡುವಣ ಕೊಂಡಿಯಾಗಿ, ಕಣ್ಮಣಿಯಾಗಿ ಬೆಳೆಯಿತು. ಮಗುವಿನದು ಅಪರೂಪದ ಚೆಲುವು, ಮುಖದಲ್ಲಿ ಸದಾ ಮುಗುಳ್ನಗೆ. ಹೀಗೆ ಮೊದಲಿನಿಂದ ಅದರದ್ದು ಪ್ರಸನ್ನ ವದನ. ಅದರ ಚಿಕ್ಕಮ್ಮ ಸಾವಕ್ಕನಿಗೆ ಮಗುವಿನ ಬಗ್ಗೆ ಎಲ್ಲಿಲ್ಲದ ಅಕ್ಕರೆ.

ದಟ್ಟಡಿ ಇಡಲು ತೊಡಗಿದ ಮೇಲೆ ಮಗು ಬೀದಿಯ ಇತರ ಮಕ್ಕಳ ಜೊತೆ ಆಟವಾಡುತ್ತ ದಿನದ ಬಹುಭಾಗ ಮನೆಯ ಹೊರಗೇ ಕಳೆಯುತ್ತಿತ್ತು. ತಂದೆ ಬಾಗಿದಾಗ ಬೆನ್ನ ಮೇಲೆ ಕೂತು ಮಗು ಕುದುರೆ ಸವಾರಿ ಆಡುತ್ತಿತ್ತು. ಹುಡುಗ ಬಹಿರ್ಮುಖಿ. ಎಲ್ಲ ಆಟಗಳಲ್ಲಿ ಪಾಲುಗೊಳ್ಳುತ್ತಿದ್ದ, ಅವುಗಳಲ್ಲೆಲ್ಲ ಯಾವಾಗಲೂ ನಿಜಲಿಂಗಪ್ಪನೇ ಮುಂದಾಳು. ನಿಜಲಿಂಗಪ್ಪನಿಗೆ ಆರು ವರ್ಷವಾಗಿದ್ದಾಗ ತಂದೆ ತೀರಿಕೊಂಡರು.

ಮೂವರು ಮಕ್ಕಳಲ್ಲಿ ಕಿರಿಯನೆಂದು ತಂದೆಗೆ ಈ ಹುಡುಗನ ಮೇಲೆ ವಿಶೇಷ ಮಮತೆ ಇದ್ದರೂ, ನಿಜಲಿಂಗಪ್ಪನವರಿಗೆ ಈಗ ತಂದೆಯ ಬಗ್ಗೆ ಸ್ಪಷ್ಟ ನೆನಪುಗಳು ಉಳಿದಿಲ್ಲ. ಅವರ ಮನಸ್ಸಿನಲ್ಲಿ ಉಳಿದಿರುವುದು ಕಾಯಿಲೆ ಬಿದ್ದು ಮರಣಶಯ್ಯೆಯಲ್ಲಿದ್ದ ತಂದೆಯ ಚಿತ್ರ. ಮಾವನವರ ವೈದ್ಯ ನಿಪುಣತೆಯಾಗಲೀ ಹೆಂಡತಿಯ ಹರಕೆ, ಪ್ರಾರ್ಥನೆಗಳಾಗಲೀ ಅಡಿವೆಪ್ಪನವರನ್ನು ಸಾವಿನಿಂದ ಪಾರುಮಾಡಲಾಗಲಿಲ್ಲ. ಅವರು ಸತ್ತಾಗ ಕುಟುಂಬ ಹೇಳಿಕೊಳ್ಳುವಂತಹ ಅನುಕೂಲ ಸ್ಥಿತಿಯಲ್ಲಿರಲಿಲ್ಲ. ಆಸರೆಯಾಗಿದ್ದದ್ದು ಒಂದು ಸಣ್ಣ ಮನೆ ಮತ್ತು ಮೂರೂವರೆ ಎಕರೆ ಬೇಸಾಯದ ಭೂಮಿ. ನೀಲಮ್ಮನವರ ಮೇಲೆ ಮುನ್ನೂರು ರೂಪಾಯಿಗಳ ಸಾಲದ ಹೊರೆಯೂ ಬಿದ್ದಿತ್ತು, ಆ ಮೊತ್ತ ಆ ಕಾಲಕ್ಕೆ ಸಾಕಷ್ಟು ದೊಡ್ಡದು. ತಂದೆಯ ಸಾಂತ್ವನ ಮತ್ತು ವೀರಶೈವಕ್ಕೆ ಸಹಜವಾದ ಸಮಚಿತ್ತತೆಯ ಕಾರಣದಿಂದ ಅವರು ತಮ್ಮ ದುಃಖವನ್ನು ಅಡಗಿಸಿಕೊಳ್ಳಲು ಸಾಧ್ಯವಾಗಿ, ಕುಟುಂಬದ ನಿರ್ವಹಣೆಯ ಜವಾಬುದಾರಿಯನ್ನು ಹೊರಲು ಸಮರ್ಥರಾದರು. ನಿಜಲಿಂಗಪ್ಪನವರ ನೆನಪಿನಲ್ಲಿ ತಾಯಿಯ ಸಂಕಲ್ಪಶಕ್ತಿ ಹಾಗೂ ಸ್ವತಂತ್ರ ಮನೋ ಭಾವಗಳ ನೆನಪು ಉಳಿದಿದೆ. ನಂಟರಿಷ್ಟರು ಕೊಡಬಂದ ನೆರವನ್ನು ನಿರಾಕರಿಸಿ, ತಮ್ಮ ತುಂಡು ಭೂಮಿಯಲ್ಲಿ ಕಷ್ಟಪಟ್ಟು ದುಡಿದು ಮಕ್ಕಳನ್ನು ಬೆಳೆಸಲು ಆಕೆ ಹೆಣಗಿದರು. ಚಿಕ್ಕಂದಿನಿಂದಲೇ ಹುಡುಗ ನಿಜಲಿಂಗಪ್ಪನಲ್ಲಿ ಒಂದು ಬಗೆಯ ಅಪರೂಪದ ತೇಜಸ್ಸು ಆವರಿಸಿದ್ದಂತೆ ತೋರುತ್ತದೆ. ಮನೆಗೆ ಬರುತ್ತಿದ್ದ ಸಾಧುಸಂತರು ಜ್ಯೋತಿಷಿಗಳು ಅಸಾಧಾರಣ ಚಟುವಟಿಕೆಯ ಹುಡುಗ ನಿಜಲಿಂಗಪ್ಪನ ಭವಿಷ್ಯ ಉಜ್ವಲವಾಗಿದೆಯೆಂದು ಹೇಳುತ್ತಿದ್ದರು. ತಂದೆ ಸಾಯುವ ಮುಂಚಿನಿಂದಲೇ ಅವನ ವಿದ್ಯಾಭ್ಯಾಸ ಸಾಂಪ್ರದಾಯಿಕ ಮಠದ ಶಾಲೆಯಲ್ಲಿ ಆರಂಭವಾಗಿತ್ತು. ಮರಳ ಮೇಲೆ ತಿದ್ದಿ ಹುಡುಗ ಅಕ್ಷರಮಾಲೆಯನ್ನು ಬರೆಯಲು ಕಲಿತ. ಅಲ್ಲಿಂದ ಅವನ ಮುಂದಿನ ಶಿಕ್ಷಣ ಅವರ ಮನೆದೇವರಾದ ಕಲ್ಲೇಶ್ವರನ ದೇವಾಲಯಕ್ಕೆ ಬದಲಾಯಿತು. ಸ್ವಲ್ಪ ಕಾಲ ಉಪಾಧ್ಯಾಯರಾದ ಎತ್ತಿನಹಳ್ಳಿ ರಾಜಪ್ಪನವರ ಮನೆಯಲ್ಲೇ ಅವನ ವಿದ್ಯಾಭ್ಯಾಸ ಸಾಗಿತು. ಆಗಿನ ಅವನ ನಡವಳಿಕೆ ಒಂದೂ ಕಪ್ಪು ಚುಕ್ಕಿಯಿಲ್ಲದೆ ಇತ್ತು, ಗುರುಗಳು ತನಗೆ ಶಿಕ್ಷೆ ನೀಡುವಂತಹ ಯಾವುದೇ ಸಂದರ್ಭಕ್ಕೂ ಅವನು ಎಡೆಗೊಡಲಿಲ್ಲ. ಓದಿನ ಕಡೆಗಿನ ಗಮನ ಆಟಗಳಲ್ಲಿಯೂ ದೈಹಿಕ ಚಟುವಟಿಕೆಗಳಲ್ಲಿಯೂ ಭಾಗಿಯಾಗುವುದಕ್ಕೆ ಅಡ್ಡಿಯಾಗಲಿಲ್ಲ. ಹುಡುಗ ಶುಚಿತ್ವಕ್ಕೆ ತುಂಬ ಗಮನವೀಯುತ್ತಿದ್ದ. ಮನೆಯಲ್ಲಿನ ಶಿಕ್ಷಣ ಬಹುವಾಗಿ ಧಾರ್ಮಿಕವೂ ನೈತಿಕವೂ ಆದ ಸ್ವರೂಪದ್ದು, ರಾಮಾಯಣ ಮಹಾಭಾರತ ಕತೆಗಳು ಹಾಗೂ ಲಿಂಗಾಯತ ಸಂತರ – ಶರಣರ ಚರಿತ್ರೆಗಳ ಮೂಲಕ ಆದದ್ದು. ಇಂಥ ಶ್ರೀಮಂತವೂ ಪ್ರತಿಭಾತ್ಮಕವೂ ಆದ ಹಿನ್ನೆಲೆಯಲ್ಲಿ ನಿತ್ಯದ ಶಾಲೆಯ ಶಿಕ್ಷಣ ಬಣ್ಣವಿಲ್ಲದ್ದೂ ಒಣಕಲೂ

ಆಗಿ ಕಂಡಿತು. ಆದರೆ ಈ ಕೊರತೆಯನ್ನು ನಿಜಗುಣ ಶಿವಯೋಗಿ, ಪುರಂದರದಾಸ ಮತ್ತು ಕನಕದಾಸರ ಹಾಡುಗಳನ್ನು ಹಾಡುವುದರ ಮೂಲಕ ಅವರ ಗುರುಗಳು ತುಂಬುತ್ತಿದ್ದರು. ಹೀಗಾಗಿ ಹುಡುಗ ನಿಜಲಿಂಗಪ್ಪನಲ್ಲಿ ಜಾತಿ ಸಂಕುಚಿತತೆಗೆ ಎಡೆಯಿಲ್ಲದ ಉದಾರತೆ ಮನೆಮಾಡುವಂತಾಯಿತು. ಇದಕ್ಕೆ ವ್ಯತಿರಿಕ್ತವಾಗಿ ಅಣ್ಣ ತೀರ ಮಂಕನಾಗಿದ್ದ, ಇದರಿಂದಾಗಿ ಎಲ್ಲರೂ ನಿಜಲಿಂಗಪ್ಪನೆಡೆಗೇ ಆಕರ್ಷಿತರಾಗುತ್ತಿದ್ದರು. ವಿದ್ಯಾರ್ಥಿಯಾಗಿ ಅವನು ಹೊಂದಿದ್ದ ನೆನಪಿನ ಶಕ್ತಿ ಅಗಾಧವಾದುದು. ಆದರೆ ಅವನು ಹುಡುಗುತನಕ್ಕೆ ಹೊರತಾದ ಬಾಲಕ ಏನಲ್ಲ. ಒಮ್ಮೆ ಅವನು ಜೇಬಿನಲ್ಲಿ ಹೋಳಿಗೆಯನ್ನು ತುಂಬಿಕೊಂಡು ಶಾಲೆಗೆ ಹೋದ, ಗೆಳೆಯರಿಗೆಲ್ಲ ಅದನ್ನು ಹಂಚಿದ, ಅವರೆಲ್ಲ ತಿನ್ನುತ್ತ ಕೂಗುತ್ತ ಕುಣಿದಾಡಿದರು. ಇದಕ್ಕೆ ಕಾರಣರಾರೆಂದು ಶಿಕ್ಷಕರು ವಿಚಾರಿಸಿದರು, ಪ್ರಾಮಾಣಿಕ ಹುಡುಗನಾಗಿದ್ದ ನಿಜಲಿಂಗಪ್ಪ ತಾನೇ ಎಂದು ಎದ್ದು ನಿಂತ. ಕೆಲವು ವೇಳೆ ಅವನೂ ಗೆಳೆಯರ ಮನೆಗಳಿಗೆ ಹೋದಾಗ ಕೊಟ್ಟ ಸಿಹಿತಿಂಡಿಯನ್ನು ಮೆಲ್ಲುತ್ತಿದ್ದ. ತಾಯಿಯು ತಮ್ಮ ಮನೆಯ ಸ್ಥಿತಿಯನ್ನು ವಿವರಿಸಿ ಹುಡುಗನಿಗೆ ಬುದ್ಧಿ ಹೇಳಿದರು, "ನೋಡು ಮರಿ, ನಿಮ್ಮ ಸ್ನೇಹಿತರು ಕೊಟ್ಟದ್ದನ್ನು ತಿನ್ನುವುದು ಸರಿಯೇ, ಆದರೆ ನಾವೂ ಹಾಗೆ ಮಾಡಲು ನಮಗೆ ಶಕ್ತಿ ಬೇಕಲ್ಲ. ಆದರೆ ನಿನಗೇ ಗೊತ್ತು, ಬಡವರಾದ ನಾವು ಹಾಗೆಲ್ಲ ಮಾಡಲಾರೆವು." ಆದರೆ ಬಾಲಕ ಹೇಳುತ್ತಿದ್ದ, "ಅಲ್ಲವ್ವ, ಪ್ರೀತಿಯಿಂದ ಕೊಟ್ಟದ್ದನ್ನು ಬೇಡ ಅಂತ ಹೇಗೆ ಹೇಳುವುದು?" ಆಗ ನೀಲಮ್ಮ ಹೇಳುತ್ತಿದ್ದರು, "ಏನೋ ಒಂದು ನೆವ ಹೇಳು. ಅಲ್ಲದೆ, ಹಬ್ಬಗಳ ದಿನ ಆಟಕ್ಕೆ ಅಂತ ಹೊರಗೆ ಹೋಗಲೇ ಬೇಡ." ಆದರೆ ಹುಡುಗ ಕೇಳಬೇಕಲ್ಲ. "ಇಂಥ ಸಣ್ಣ ವಿಷಯಕ್ಕೆಲ್ಲ ಸುಳ್ಳು ಹೇಳಬೇಕಾ? ಹಬ್ಬಗಳು ಇರೋದೆ ನಮ್ಮಂಥ ಹುಡುಗರು ಸಂತೋಷವಾಗಿರಕ್ಕೆ, ಅಲ್ವಾ? ಆದರೆ ಇನ್ನು ಮೇಲೆ ನೀನು ಹೇಳಿದ ಹಾಗೇ ಮಾಡ್ತೀನಿ, ಅವರ ಮನೆಗಳಿಗೆ ಹೋಗೋದನ್ನು ತಪ್ಪಿಸ್ತೀತಿ ಅಂತ ಮಾತು ಕೊಡ್ತೀನಿ." ಇದು ಮಾತು.

ಬಾಲಕ ನಿಜಲಿಂಗಪ್ಪನ ದೇಹ ಕಸುವಿನಿಂದ ದುಮುಗುಡುತ್ತಿತ್ತು; ಮಾವಿನ ಮರ ಹತ್ತಿ ಕಾಯಿ ಕೀಳುವುದು, ಈಜುವುದು ಮುಂತಾದವುಗಳಲ್ಲಿ ಅಪಾರ ಆಸಕ್ತಿ, ಸಂತೋಷ. ಗೆಳೆಯರೊಡಗೂಡಿ ಸುತ್ತಲಿನ ಬೆಟ್ಟಗುಡ್ಡಗಳಲ್ಲಿ ಅಲೆದಾಡುವುದೂ ಅವನಿಗೆ ಪರಮಪ್ರಿಯವಾದ ಹವ್ಯಾಸ. ಭಕ್ತಿಯ ಹಾಡುಗಳಿಂದ ತುಂಬಿರುತ್ತಿದ್ದ ವಾರದ ಭಜನೆಗಳಲ್ಲಿಯೂ ಅವನದು ಪಾಲು. ಅಂಗಸಾಮು ಮಾಡುವುದರಲ್ಲಿ ಊರಿನ ಗರಡಿಯಲ್ಲಿ ಕುಸ್ತಿ ಕಲಿಕೆಯಲ್ಲಿಯೂ ಉಮೇದು. ಹುಡುಗನಿಗೆ ಎಲ್ಲಿಲ್ಲದ ಕುತೂಹಲ, ಹೊಸ ಅನುಭವಗಳನ್ನು ಪಡೆಯುವುದರಲ್ಲಿ ಕೊನೆಗಾಣದ ಉತ್ಸಾಹ. ಈ ಸಾಹಸೀ ಹುಡುಗ ಊರಿನ ನಾಟಕ ಪ್ರದರ್ಶನಗಳಿಗೆ ಹೋಗುತ್ತಿದ್ದ, ಸತ್ಯದ ಅದರ್ಶ ಹೊತ್ತ ಹರಿಶ್ಚಂದ್ರನ

ಕತೆಯ ನಾಟಕವೆಂದರೆ ಪ್ರಾಣ. ಇದಕ್ಕೆಲ್ಲ ತುಂಗಭದ್ರಾ ನದಿಯನ್ನು ದಾಟಿ ಆಚೆ ದಡಕ್ಕೆ ಹೋಗಬೇಕಾಗಿತ್ತು. ಇದರಿಂದ ಅವನ ತಾಯಿಗೆ ತುಂಬ ಆತಂಕವಾಗುತ್ತಿತ್ತು. ಕ್ಷಮಿಸಬೇಕೆಂದು ತಾಯಿಯನ್ನು ಹುಡುಗ ಅಂಗಲಾಚಿ ಬೇಡುತ್ತಿದ್ದ, ಮುಂದೆ ಹಾಗೆ ಮಾಡುವುದಿಲ್ಲವೆಂದು ಮಾತು ಕೊಡುತ್ತಿದ್ದ.

ಒಂದು ಬೇಸಿಗೆಯ ದಿನ, ನೀಲಮ್ಮ ಮನೆಯಂಗಳದಲ್ಲಿ ಕುಳಿತಿದ್ದರು, ಅವರ ಮನಸ್ಸನ್ನು ಮಕ್ಕಳ ಭವಿಷ್ಯದ ಚಿಂತೆ ತುಂಬಿತ್ತು. ಬಿಕ್ಕೆ ಬೇಡಲು ಬಂದ ಒಬ್ಬ ಸಾಧು ಅವರಿಗೆ ಹೇಳಿದ, "ಯೋಚನೆ ಯಾಕೆ ತಾಯಿ, ನಿನ್ನ ಮಗ ಒಂದು ದಿನ ತುಂಬ ಪ್ರಸಿದ್ಧ ವ್ಯಕ್ತಿಯಾಗ್ತಾನೆ, ಮನೆಗೆ ಕೀರ್ತಿ ತರ್ತಾನೆ. ಅವನಿಗೆ ಒಳ್ಳೆ ವಿದ್ಯೆ ಕೊಡಿಸು." ಆ ಸಾಧು ಮತ್ತೆ ಬರಲಿಲ್ಲ. ನೀಲಮ್ಮ ಆ ಮಾತು ಕೇಳಿ ಎಂದಿನಂತೆ ದೇವರ ಮೇಲೆ ಭಾರ ಹಾಕಿ ನಿಟ್ಟುಸಿರು ಬಿಟ್ಟಿದ್ದರು. 'ಶಿವ ಮಾಡಿಸಿದ ಹಾಗಾಗಲಿ' ಅಂತ ಅಂದು ಕೊಂಡರು. ಅಡಿವೆಪ್ಪನವರ ಮರಣಾನಂತರ, ತಂದೆಯ ಜಾಗವನ್ನು ತುಂಬುವ ಜವಾಬ್ದಾರಿ ಅಜ್ಜ ಚೆನ್ನಮಲ್ಲಪ್ಪನವರ ಹೆಗಲ ಮೇಲೆ ಬಿತ್ತು. ಮೊಮ್ಮಕ್ಕಳಿಗೆ ಅವರು ಬಟ್ಟೆಬರೆ ತಂದು ಕೊಡುವರು, ಜಾತ್ರೆ-ಪರಿಷೆಗಳಿಗೆ ಅವರನ್ನು ಕರೆದೊಯ್ಯುತ್ತಿದ್ದರು. ನಿಜಲಿಂಗಪ್ಪನ ಮನಸ್ಸಿನಲ್ಲಿ ಪುಸ್ತಕಗಳ ಬಗ್ಗೆ ಹಾಗೂ ವಿದ್ಯೆಯ ಬಗ್ಗೆ ಆಳವಾದ ಆಸಕ್ತಿ, ಅಂತೆಯೇ ಪ್ರಕೃತಿಯ ಬಗ್ಗೆ ಮಮತೆ ಬೆಳೆಯುವಂತೆ ಮಾಡಿದರು. ಈ ಹುಡುಗ ಶಿಸ್ತಿನ ಬದುಕು ಮತ್ತು ಧಾರ್ಮಿಕತೆಗಳನ್ನು ಅಳವಡಿಸಿಕೊಳ್ಳುವಲ್ಲಿ ಈ ಅಜ್ಜನೇ ಕಾರಣ. ಆದರೆ ಹುಡುಗನಿಗೆ ಊರಮ್ಮನ ಜಾತ್ರೆಯಂದು ದೇವರು ಧರ್ಮದ ಹೆಸರಿನಲ್ಲಿ ಕೋಣ ಬಲಿ ಕೊಡುತ್ತಿದ್ದುದು ತುಂಬ ನೋವುಂಟುಮಾಡುತ್ತಿತ್ತು. ಎಷ್ಟೋ ವೇಳೆ ರಕ್ತವನ್ನು ಕಂಡರೆ ವಾಕರಿಕೆ ಬರುತ್ತಿತ್ತು, ಇದರಿಂದ ಕೆಲವು ಸಲ ಹುಡುಗ ಪ್ರಜ್ಞೆ ತಪ್ಪುವಂತೆಯೂ ಆಗುತ್ತಿತ್ತು. ಅಜ್ಜ ಹುಡುಗನ ಏಕಮೇವ ಆಪ್ತ ಸಲಹೆಗಾರ ರಾಗಿದ್ದರು, ಸದಾ ಅವನಿಗೆ ತಿಳಿವಳಿಕೆ ನೀಡುತ್ತ, ನಗಿಸುತ್ತ, ಪೂಸಿ ಮಾಡುತ್ತಿದ್ದರು. ಒಮ್ಮೆ ಅವರು ಒಂದು ಹೆಣ್ಣು ನಾಯಿಯ ಹಿಂದೆ ಓಡುತ್ತಿದ್ದ ಹಲವು ಗಂಡು ನಾಯಿ ಗಳನ್ನು ತೋರಿಸಿ, "ನೋಡು ಮರಿ, ಎಷ್ಟೊಂದು ಗಂಡು ನಾಯಿಗಳು ಹೆಣ್ಣು ನಾಯಿಯ ಹಿಂದೆ ಓಡುತ್ತಿವೆ, ಇದನ್ನೇ ನಾಯಿ ನಡವಳಿಕೆ ಅನ್ನೋದು. ಮನುಷ್ಯ ಬೇರೆ, ಅವನು ಏಕಪತ್ನೀ ವ್ರತವನ್ನು ಅನುಸರಿಸ್ತಾನೆ. ನೆನಪಿಡು, ಏಕಪತ್ನಿತ್ವ ಅನ್ನೋದು ಪ್ರಕೃತಿ ನಿಯಮ, ಸಾಮಾಜಿಕ ನೀತಿ, ಸಂಸ್ಕೃತಿಯ ಗುಟ್ಟು. ಇದನ್ನು ನಾವು ಅನುಸರಿಸದೇ ಇದ್ದರೆ ಸಮಾಜ ಕುಸಿದು ಹೋಗತ್ತೆ, ಮನುಷ್ಯರು ನಾಯಿಗಳಿಗಿಂತ ಕಡೆಯಾಗ್ತಾರೆ!" ಎಂದು ಸನ್ನಡತೆಯನ್ನು ವಿವರಿಸಿದ್ದರು. ಇಂಥ ನೀತಿ ಪಾಠಗಳು ಬಾಲಕನ ದೃಷ್ಟಿಕೋನ ವನ್ನೂ ವ್ಯಕ್ತಿತ್ವವನ್ನೂ ರೂಪಿಸಿದವು. ಆದರೆ ಅಡಿವೆಪ್ಪನವರ ನಿಧನದ ಮೂರು

ವರ್ಷದ ಬಳಿಕ ಅಜ್ಜನೂ ತೀರಿಕೊಂಡರು. ಇದು ಈ ಕುಟುಂಬಕ್ಕೆ ಆದ ದೊಡ್ಡ ಆಘಾತ. ಇದರಿಂದಾಗಿ ಮಕ್ಕಳನ್ನು ಬೆಳೆಸಲು ನೀಲಮ್ಮ ಏಕಾಂಗಿಯಾಗಿ ಹೋರಾಟ ಮುಂದುವರೆಸಬೇಕಾಯಿತು. ಒಂದಾದ ಮೇಲೊಂದರಂತೆ ಸಂಭವಿಸಿದ ಈ ಎರಡು ಸಾವುಗಳು, ಅದರಲ್ಲೂ ಹುಡುಗನ ಬದುಕಿನಲ್ಲಿ ತುಂಬಿ ಹೋಗಿದ್ದ ಅಜ್ಜನ ಮರಣ, ಬಾಲಕ ನಿಜಲಿಂಗಪ್ಪನ ಮೇಲೆ ಮಾಯಲಾರದ ಆಘಾತವನ್ನುಂಟುಮಾಡಿತ್ತು.

ಚೆನ್ನಮಲ್ಲಪ್ಪನವರ ಸಾವಿನ ನಂತರ ಈ ಕುಟುಂಬದ ಯೋಗಕ್ಷೇಮದ ಬಗ್ಗೆ ಕಾಳಜಿ ವಹಿಸಿದವರೆಂದರೆ, ಆಗಾಗ ಮನೆಗೆ ಬಂದು ಯೋಗಕ್ಷೇಮ ವಿಚಾರಿಸುತ್ತಿದ್ದ ದಾವಣಗೆರೆ ರುದ್ರಪ್ಪನವರು. ಅವರು ಸಿದ್ದವ್ವನಹಳ್ಳಿಯವರು, ಆದರೆ ವ್ಯಾಪಾರ ಮಾಡಿ ಕೊಂಡು ದಾವಣಗೆರೆಯಲ್ಲಿ ನೆಲೆಸಿದ್ದರು. ಅವರು ತಮ್ಮ ಅಣ್ಣತಮ್ಮಂದಿರ ಪೈಕಿ ನಡುವಿನವರು, ಎಲ್ಲರೂ ಒಟ್ಟಾಗಿ ವ್ಯಾಪಾರ ಮಾಡುತ್ತಿದ್ದರು. ರುದ್ರಪ್ಪನವರು ನೀಲಮ್ಮನ ತಂಗಿ ಸಾವಕ್ಕನವರ ಯಜಮಾನರು, ಹೀಗಾಗಿ ಅವರು ನಿಜಲಿಂಗಪ್ಪನ ಚಿಕ್ಕಪ್ಪನೇ ಆಗಿದ್ದರು. ರುದ್ರಪ್ಪ-ಸಾವಕ್ಕ ದಂಪತಿಗಳಿಗೆ ಮಕ್ಕಳಿರಲಿಲ್ಲ, ಹೀಗಾಗಿ ನೀಲಮ್ಮನ ಮಕ್ಕಳನ್ನು ಹಲವಾಗಿಲಿನಿಂದ ಕರೆತಂದು ಅವರ ವಿದ್ಯಾಭ್ಯಾಸ ಮುಂದುವರೆಸಬೇಕೆಂದು ಗಂಡನಿಗೆ ಸಲಹೆಯಿತ್ತರು. ಹಲವಾಗಿಲಿನಲ್ಲಿ ಪ್ರಾಥಮಿಕ ಶಾಲೆಯ ನಂತರ ಓದುವ ಅನುಕೂಲ ವಿರಲಿಲ್ಲ. ಈ ವಿಷಯವನ್ನು ಮನಸ್ಸಿನಲ್ಲಿ ತುಂಬಿಕೊಂಡು ಅವರಿಬ್ಬರೂ ಒಂದು ಸಂಜೆ ಹಲವಾಗಿಲಿಗೆ ಭೇಟಿ ನೀಡಿ, ನೀಲಮ್ಮನವರಲ್ಲಿ ಆ ಬಗ್ಗೆ ಪ್ರಸ್ತಾಪಿಸಿದರು. ಅವರಿಗೀಗ ಮೂರು ವಿಷಯಗಳು ತಲೆಯನ್ನು ತುಂಬಿದವು: ಮಕ್ಕಳಿಂದ ದೂರ ಇರುವುದು, ಇತರರ ಮೇಲೆ ಅವಲಂಬಿಸಬೇಕಾಗುವುದು ಮತ್ತು ತಮ್ಮ ಮಕ್ಕಳ ಓದು. ಮಕ್ಕಳನ್ನು, ಅದರಲ್ಲಿಯೂ ತುಂಬ ಚುರುಕಾಗಿದ್ದ ನಿಜಲಿಂಗಪ್ಪನನ್ನು ತಮ್ಮ ಜೊತೆ ಕಳಿಸಲು ಸಾವಕ್ಕ ಕೇಳಿಕೊಂಡರು. ಮಕ್ಕಳನ್ನು ಬಿಟ್ಟಿರಬೇಕಾದ ಯೋಚನೆಯಿಂದ ಪಾಪ, ನೀಲಮ್ಮ ರಾತ್ರಿಯೆಲ್ಲ ತಮ್ಮಲ್ಲಿಯೇ ಕಣ್ಣೀರು ಸುರಿಸಿದರು. ಆದರೆ ಬೆಳಗಿನ ಹೊತ್ತಿಗೆ, ಅವರ ಮನಸ್ಸಿನಲ್ಲಿ ಭವಿಷ್ಯದ ದೃಷ್ಟಿಯಿಂದ ಮಕ್ಕಳನ್ನು ಅವರೊಡನೆ ಕಳಿಸುವುದು ಸರಿ ಎಂಬ ನಿಶ್ಚಯ ಮನೆಮಾಡಿತು. ಮಕ್ಕಳು ಮತ್ತವರ ಹುಡುಗಾಟಿಕೆ ಯನ್ನು ಮರೆಯುವುದು ವಿಧವೆ ನೀಲಮ್ಮನವರಿಗೆ ಕಷ್ಟವಾಗಿತ್ತು, ಐದು ವರ್ಷ ಮೊಲೆಯೂಡಿ ಬೆಳೆಸಿದ್ದ ಮಗನಿಂದ ದೂರವಾಗುವುದು ಅವರ ಮನಸ್ಸನ್ನು ಚುಚ್ಚುತ್ತಿತ್ತು. ಜೊತೆಯಲ್ಲಿಯೇ ಮಲಗುತ್ತಿದ್ದ ಮಗನಿಂದ ದೂರವಾಗುವುದೆಂದರೆ ತಾಯಿಗೆ ಎಂಥ ಯಾತನೆ! ಅದು ದೊಡ್ಡ ತ್ಯಾಗವೇ ಸರಿ, ಆದರೆ ಮಕ್ಕಳಿಗೆ ಒಳ್ಳೆ ವಿದ್ಯೆ ಮತ್ತು ಉಜ್ವಲ ಭವಿಷ್ಯ ಇವುಗಳು ದೊರೆಯುವ ಕಾರಣದಿಂದ ನೋವನ್ನು ಮರೆಯಬೇಕಾಗಿತ್ತು. ಎಂದೂ ಲಿಂಗಪೂಜೆಯನ್ನು ಬಿಡದಿರಲು ಹಾಗೂ ಕೆಟ್ಟದಾರಿ ಹಿಡಿಯದಿರಲು ಮತ್ತು

ಚಿಕ್ಕಪ್ಪ-ಚಿಕ್ಕಮ್ಮ ಹೇಳಿದಂತೆ ಕೇಳಿಕೊಂಡಿರುವಂತೆ ನಿಜಲಿಂಗಪ್ಪನಿಗೆ ಬುದ್ಧಿ ಮಾತು ಹೇಳಿ, ನೀಲಮ್ಮ ತಮ್ಮಿಬ್ಬರು ಗಂಡುಮಕ್ಕಳನ್ನು ರುದ್ರಪ್ಪ-ಸಾವಕ್ಕ ದಂಪತಿಗಳ ಮಡಿಲಿಗೆ ಹಾಕಿದರು.

ದಾವಣಗೆರೆ ಕರ್ನಾಟಕದ ಕೇಂದ್ರ ಸ್ಥಾನ, ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕಗಳ ಸಂಸ್ಕೃತಿ ಮತ್ತು ಜೀವನಶೈಲಿಗಳು ಬೆರೆತಿದ್ದ ಪಟ್ಟ ಪ್ರದೇಶ. ಅದೊಂದು ವ್ಯಾಪಾರ- ವ್ಯವಹಾರಗಳ ದೊಡ್ಡ ಕೇಂದ್ರ; ಅಲ್ಲಿ ಎಣ್ಣೆ ಮತ್ತು ಹತ್ತಿ ಗಿರಣಿಗಳು ಭರಾಟೆಯಿಂದ ನಡೆಯುತ್ತಿದ್ದವು. ಅಲ್ಲಿಯ ಸಮೃದ್ಧಿ ಬಡವ-ಬಲ್ಲಿದರ ನಡುವಣ ವ್ಯತ್ಯಾಸವನ್ನು ಎತ್ತಿ ತೋರಿಸುತ್ತಿತ್ತು. ಇದರಿಂದಾಗಿ ನಿಜಲಿಂಗಪ್ಪನ ಬದುಕಿನಲ್ಲಿ ಪ್ರಶಾಂತ ವಾದ ಹಳ್ಳಿಯ ಬದುಕಿನಿಂದ ಗಿಜಿಗುಡುವ ನಗರ ಜೀವನಕ್ಕೆ ದೊಡ್ಡ ಬದಲಾವಣೆ ಯಾದಂತಾಯಿತು. ಎಲ್ಲಕ್ಕಿಂತ ಮಿಗಿಲಾಗಿ, ಹುಡುಗನಿಗೆ ತಾಯಿಯ ಕಣ್ಣಾಸರೆಯಿಂದ ದೂರಾಗಬೇಕಾಯಿತು. ಅವನ ಮನಸ್ಸಿನಲ್ಲಿ ತಾನು ದಾವಣಗೆರೆಗೆ ಬಂದ ಉದ್ದೇಶದ ಅರಿವು ಸ್ಪಷ್ಟವಾಗಿತ್ತು; ಅದೆಂದರೆ ಒಳ್ಳೆಯ ವಿದ್ಯೆ ಪಡೆಯುವುದು. ಹೀಗಾಗಿ ಹೊಸ ಬದುಕು ಮತ್ತು ವಾತಾವರಣಗಳಿಗೆ ಒಗ್ಗಿಕೊಳ್ಳುವುದಕ್ಕೆ ಹೆಚ್ಚುಕಾಲವೇನೂ ಬೇಕಾಗಲಿಲ್ಲ. ದಾವಣಗೆರೆಯನ್ನು ತಲುಪಿದ ಮೇಲೆ ಅವನು ಮಾಡಿದ ಮೊದಲ ಕೆಲಸವೆಂದರೆ, ದಾವಣಗೆರೆಯ ಆಂಗ್ಲೋ-ವರ್ನಾಕ್ಯುಲರ್ ಶಾಲೆಯ ಎರಡನೆಯ ತರಗತಿಗೆ ಸೇರಿದ್ದು. ಅವನೊಬ್ಬ ಆದರ್ಶ ವಿದ್ಯಾರ್ಥಿಯಾಗಿದ್ದ; ಒಂದು ತರಗತಿಯನ್ನೂ ತಪ್ಪಿಸುತ್ತಿರಲಿಲ್ಲ, ಅಥವಾ ತರಗತಿಗೆ ತಡವಾಗಿ ಹೋಗುತ್ತಿರಲಿಲ್ಲ. ಮೊದಲಿನಿಂದಲೂ ಅವನಿಗೆ ಶುಚಿತ್ವದ ಬಗ್ಗೆ ಕಾಳಜಿ ಜೊತೆಗೆ ಅವನು ತನ್ನ ದೇಹಾರೋಗ್ಯ ಮತ್ತು ದೃಢತೆಗಳ ಬಗ್ಗೆ ವಿಶೇಷ ಆಸ್ಥೆ ವಹಿಸುತ್ತಿದ್ದ. ಇತರರೊಂದಿಗೆ ಅವನದು ಸ್ನೇಹಮಯ ನಡವಳಿಕೆ, ಎಂದೂ ಗೆಳೆಯರೊಡನೆ ಕಾದಾಟಕ್ಕೆ ಇಳಿದವನಲ್ಲ. ತಾಯಿ ಮತ್ತು ಅಜ್ಜಂದಿರ ಕಣ್ಗಾವಲಿನಲ್ಲಿ ದೊರಕಿದ್ದ ಶಿಸ್ತುಬದ್ಧತೆ ಈಗ ಅವನ ನೆರವಿಗೆ ಬಂತು. ಅವನು ತನ್ನ ಉಪಾಧ್ಯಾಯರುಗಳ ಕಣ್ಮಣಿಯಾದ, ಆದರ್ಶ ವಿದ್ಯಾರ್ಥಿಯೆಂದು ಅವರು ಇವನೆಡೆ ಇತರರಿಗೆ ತೋರಿಸುತ್ತಿದ್ದರು. ಇನ್ಸ್‌ಪೆಕ್ಷನ್ ಸಮಯದಲ್ಲಿ ತನಗೆ ಕೇಳಿದ ಪ್ರಶ್ನೆಗಳಿಗೆ ಜಾಣ್ಮೆ ಮತ್ತು ಕೌಶಲಗಳಿಂದ ಉತ್ತರಿಸುತ್ತಿದ್ದ ಇವನ ಕಡೆ ಉಪಾಧ್ಯಾಯರುಗಳು ಭರವಸೆಯಿಂದ ನೋಡುತ್ತಿದ್ದರು. ನಿಜಲಿಂಗಪ್ಪ ಆರನೆಯ ತರಗತಿಯಲ್ಲಿದ್ದಾಗ, ಉನ್ನತ ಶಿಕ್ಷಣಾಧಿಕಾರಿಗಳು ಶಾಲೆಗೆ ಬಂದ ಸಮಯದಲ್ಲಿ, ಅವನನ್ನು ಇಂಗ್ಲಿಷಿನಲ್ಲಿ ಭಾಷಣ ಮಾಡಲು ಆರಿಸಲಾಯಿತು. ಹುಡುಗ ಸರಳ ಇಂಗ್ಲಿಷಿನಲ್ಲಿ ಆರೇಳು ವಾಕ್ಯಗಳನ್ನು ರಚಿಸಿ, ಗಟ್ಟಿಮಾಡಿಕೊಂಡು ಅದನ್ನೆಲ್ಲ ಧೈರ್ಯ-ಆತ್ಮವಿಶ್ವಾಸಗಳಿಂದ ಸ್ಪಷ್ಟವಾಗಿ ಹೇಳಿದ. ಇದರಿಂದಾಗಿ ಅಧ್ಯಾಪಕರು ಮತ್ತು ಸಹಪಾಠಿಗಳ ದೃಷ್ಟಿಯಲ್ಲಿ ಅವನ ಸ್ಥಾನ

ಉನ್ನತಿಗೇರಿತು. ಹಾಗೆ ನೋಡಿದರೆ, ಅಂದಿನಿಂದ, ಮುಂದೆಯೂ ಶಾಲಾ ಕಾಲೇಜುಗಳ ಸಮಾರಂಭಗಳಲ್ಲಿ ವಂದನಾರ್ಪಣೆ ಮಾಡುವ ಜವಾಬ್ದಾರಿ ಅವನದಾಯಿತು. ಅವನು ಎಲ್ಲರಂತಲ್ಲ, ಅವನ ಓದು ಕೇವಲ ಪಠ್ಯಪುಸ್ತಕಗಳಿಗೆ ಸೀಮಿತವಾಗಿರಲಿಲ್ಲ. ಸಿಕ್ಕಿದ ಕಡೆಯಿಂದಲ್ಲೆಲ್ಲ ಅವನು ಜ್ಞಾನಭಂಡಾರವನ್ನು ಸೂರೆ ಮಾಡುತ್ತಿದ್ದ. ಪ್ರತಿ ಭಾನುವಾರ ಮಠದ ಗುರುಗಳಾದ ಮೃತ್ಯುಂಜಯ ಸ್ವಾಮಿಗಳು ನಡೆಸುತ್ತಿದ್ದ ಬಾಲಕರ ಸಮ್ಮೇಳನಗಳಿಗೆ ಹೋಗಿ ವಚನ ಸಾಹಿತ್ಯಗಂಗೆಯಲ್ಲಿ ಮೀಯುತ್ತಿದ್ದ. ಬಾಲಕನ ಮೇಲೆ ಧಾರ್ಮಿಕ ವಾಗಿಯೂ ನೈತಿಕವಾಗಿಯೂ ಪ್ರಭಾವ ಬೀರಿದ ಮತ್ತೊಬ್ಬರೆಂದರೆ ಅಲ್ಲಿನ ಜಯದೇವ ಸ್ವಾಮಿಗಳು.

ಹೀಗೆ ಬೌದ್ಧಿಕ ಬೆಳವಣಿಗೆಯೊಡನೆ ನೈತಿಕ ಶಿಕ್ಷಣವೂ ಸೇರಿ ಬಾಲಕನ ಪೂರ್ಣ ವ್ಯಕ್ತಿತ್ವ ವಿಕಾಸಕ್ಕೆ ಕಾರಣವಾಯಿತು. ಚಿಕ್ಕಮ್ಮ ಸಾವಕ್ಕನಿಗೆ ಅವನ ಬಗ್ಗೆ ಎಲ್ಲಿಲ್ಲದ ಹೆಮ್ಮೆ, ಇದಕ್ಕೆ ಕಾರಣ ಆಕೆಗೆ ಮಕ್ಕಳಿಲ್ಲದ್ದೋ ಅಥವಾ ಅವನು ಅಸಾಧಾರಣ ಪ್ರತಿಭಾವಂತನೆಂದೋ; ಅಂತೂ ಅವನ ಮೇಲೆ ಅವರು ಮಮತೆಯ ಹೂ ಮಳೆಯನ್ನೇ ಸುರಿಸಿದರು. ಚಿಕ್ಕಪ್ಪನಿಗೆ ಕೂಡ ಹುಡುಗನ್ನು ಕಂಡರೆ ಅಪಾರ ಪ್ರೀತಿ, ಅವನ ಏಳಿಗೆಯ ಬಗ್ಗೆ ತೃಪ್ತಿ. ಅಪೂರ್ವ ಪ್ರತಿಭೆ ಹಾಗೂ ಅಸಾಧಾರಣ ಯಶಸ್ಸಿಗೆ ಒಂದು ಬೆಲೆ ತೆರಬೇಕಾಗಿ ಬಂತು. ದಾವಣಗೆರೆಯ ಇತರ ಅವಿಭಕ್ತ ಕುಟುಂಬಗಳವರು ಈ ಹುಡುಗನ ಏಳಿಗೆಯ ಬಗ್ಗೆ ಮತ್ಸರ ತಾಳುವಂತಾಯಿತು. ಈ ಕುಟುಂಬದ ಇತರರಿಗೂ ಹುಡುಗನನ್ನು ಕಂಡರೆ ಅಷ್ಟಕ್ಕಷ್ಟೆ, ಅಕಾರಣವಾಗಿ ಅವನ ಬಗ್ಗೆ ಸಿಡಿಮಿಡಿಗೊಂಡು ಕಾಣಿಸುವಂತೆಯೇ ತಮ್ಮ ಅಸಹನೆಯನ್ನು ತೋರಿಸುತ್ತಿದ್ದರು. ಆದರೆ ನಿಜಲಿಂಗಪ್ಪ ಮಾತ್ರ ಅವರ ಬಗ್ಗೆ ಮುಕ್ಕಾಗದ ಗೌರವ ತೋರಿಸುತ್ತಿದ್ದ. ಇದರಿಂದ ಅವರಿಗೆ ಮತ್ತಷ್ಟು ಅಸಹನೆಯುಂಟಾಗು ತ್ತಿದ್ದಿರಬೇಕು! ಇದನ್ನೆಲ್ಲ ಅವನು ಓದಿನ ಮೇಲೆ ನಿಗಾವಹಿಸುವುದರ ಮೂಲಕ, ಅದರಲ್ಲಿಯೇ ಸಂತೋಷ ಕಾಣುವ ಮೂಲಕ, ಸಹಿಸುತ್ತಿದ್ದ. ಹುಡುಗನ ಅಸಾಧಾರಣ ಬುದ್ಧಿವಂತಿಕೆಯನ್ನು ಕಂಡು ಸಂತುಷ್ಟರಾಗಿದ್ದ ರುದ್ರಪ್ಪನವರಿಗೆ ಅವನು ಆದಷ್ಟು ಬೇಗ ಲೋವರ್ ಸೆಕೆಂಡರಿ ಪರೀಕ್ಷೆ ಪಾಸು ಮಾಡಲಿ, ಅವನನ್ನು ಫೀಸು ಕೊಟ್ಟು ಖಾಸಗೀ ಶಾಲೆಯಲ್ಲಿ ಓದಿಸೋಣವೆಂದು ಬಯಸಿದರು. ಹಳೆ ಮೈಸೂರಿನ ಸಾರ್ವಜನಿಕ ಶಾಲೆಗಳು ವಿದ್ಯಾರ್ಥಿಗಳಿಂದ ಶುಲ್ಕವನ್ನು ಸಂಗ್ರಹಿಸುತ್ತಿರಲಿಲ್ಲ. ಖಾಸಗೀ ಶಾಲೆಯನ್ನು ನಡೆಸುತ್ತಿದ್ದವರು ನರಸಿಂಗರಾವ್ ಎಂಬ ಒಬ್ಬ ಅಧ್ಯಾಪಕರು. ಹುಡುಗ ಪರೀಕ್ಷೆಯಲ್ಲಿ ತೇರ್ಗಡೆಯಾದರೆ, ಅವನು ಕುಟುಂಬದ ಇತರರು ನೀಡುತ್ತಿದ್ದ ಮಾನಸಿಕ ಹಿಂಸೆಯಿಂದ ಪಾರಾಗಬಹುದೆಂದು ಚಿಕ್ಕಪ್ಪ ನಿರೀಕ್ಷಿಸಿದರು. ಪಾಪ, ರುದ್ರಪ್ಪನವರನ್ನು ಅಪರಾಧ ಪ್ರಜ್ಞೆ ಕಾಡುತಿತ್ತು, ಆದರೆ ಅವರು ಅಸಹಾಯಕರಾಗಿದ್ದರು. ನಿಜಲಿಂಗಪ್ಪ ಊರಿಗೆ ಹಿಂದಿರುಗಿ, ಕೂಲಿಯಂತೆ ತನ್ನ ಹೊಲದಲ್ಲಿ ಮೈಮುರಿದು ಗೆಯ್ಮೆ ಮಾಡುತಿದ್ದ

ತಾಯಿಗೆ ಮತ್ತಷ್ಟು ನೋವು ತಾರದಿರಲೆಂಬುದು ರುದ್ರಪ್ಪನವರ ಬಯಕೆ. ಆಕೆಯ ಇನ್ನೊಬ್ಬ ಮಗ ಬಸವಪ್ಪನಾದರೋ ಓದಿನಲ್ಲಿ ಅಂಥ ಪ್ರತಿಭಾವಂತನಲ್ಲದ್ದರಿಂದ ತಾಯಿಗೆ ನಿರಾಶೆ ತರುವಂತಿರಲಿಲ್ಲ. ಹುಡುಗನಿಗೆ ತೊಂದರೆ ಕೊಡಲು ನಂಟರೆಲ್ಲ ಕಾಯುತ್ತಿದ್ದರು; ರುದ್ರಪ್ಪ ಬೇರೆ ಊರಿಗೆ ಹೋದಾಗ ಅವರಿಗೆ ಅಂಥದೊಂದು ಸದವಕಾಶ ದೊರೆಯಿತು. ಹುಡುಗನನ್ನು ಚೆನ್ನಾಗಿ ಹೊಡೆದು ಅವನು ಊರಿಗೆ ಹಿಂದಿರುಗುವಂತೆ ಮಾಡುವಲ್ಲಿ ಅವರು ಯಶಸ್ವಿಗಳಾದರು. ಊರಿಗೆ ವಾಪಸಾದ ರುದ್ರಪ್ಪ ತಕ್ಷಣವೇ ಹಲವಾಗಿಲಿಗೆ ಧಾವಿಸಿದರು, ನಾದಿನಿ ಮನ ಒಲಿಸಿ ಮತ್ತೆ ಹುಡುಗನನ್ನು ದಾವಣಗೆರೆಗೆ ಕರೆತಂದರು. ಆದರೆ ಅಂಥ ಸಂದರ್ಭಗಳು ಆಗಾಗ್ಗೆ ಉಂಟಾಗುತ್ತಲೇ ಇದ್ದವು. ಹೀಗಾಗಿ ಅವನನ್ನು ದ್ಯಾವಲಗಿ ಬಸಪ್ಪನವರ ಮನೆಯಲ್ಲಿ ಬಿಡುವುದು ಒಳ್ಳೆಯದೆಂದು ರುದ್ರಪ್ಪ ನಿರ್ಧರಿಸಿದರು. ಅಂತೆಯೇ ಹುಡುಗನ ಊಟ ವಸತಿಗಳಿಗೆ ಅಲ್ಲಿ ವ್ಯವಸ್ಥೆ ಮಾಡಿ ಖರ್ಚನ್ನೆಲ್ಲ ತಾವೇ ವಹಿಸಿಕೊಂಡರು.

ಖಾಸಗಿ ಶಾಲೆಯ ಮುಖ್ಯೋಪಾಧ್ಯಾಯರು ಸುತ್ತಮುತ್ತಲೆಲ್ಲ ಅತ್ಯುತ್ತಮ ಶಿಕ್ಷಕರೆಂಬ ಖ್ಯಾತಿಯನ್ನು ಪಡೆದವರು. ನಿಜಲಿಂಗಪ್ಪನ ಸಾಮರ್ಥ್ಯ ಕಂಡು ಸಂತಸಗೊಂಡು ಅವರು ಅವನ ಓದಿನ ಬಗ್ಗೆ ಹೆಚ್ಚು ಮುತುವರ್ಜಿ ವಹಿಸಿದರು. ಆದರೆ ಅವರು ಮದ್ಯವ್ಯಸನಿ, ಇದರಿಂದ ಅವರ ಅಧ್ಯಾಪನ ಕೆಲಸಕ್ಕೆ ಆಗಾಗ್ಗೆ ಅಡ್ಡಿಯಾಗುತ್ತಿತ್ತು. ಹಗಲು ಹೊತ್ತಿನಲ್ಲಿಯೇ ಕಂಟಮಟ್ಟ ಕುಡಿದು ತರಗತಿಯ ಉಸ್ತುವಾರಿಯನ್ನು ಎಷ್ಟೋ ಸಲ ನಿಜಲಿಂಗಪ್ಪನಿಗೇ ವಹಿಸುತ್ತಿದ್ದುದುಂಟು! ಮೇಷ್ಟರಿಗೆ ಮರಳಿ ಎಂದಿನ ಪ್ರಜ್ಞೆ ಬರುವವರೆಗೆ ಹುಡುಗರಿಗೆ ಉಕ್ತಲೇಖನ ಬರೆಸುತ್ತಲೋ ಪ್ರಶ್ನೆಗಳನ್ನು ಕೇಳುತ್ತಲೋ ತರಗತಿಯನ್ನು ನಿಜಲಿಂಗಪ್ಪ ನಿಭಾಯಿಸುತ್ತಿದ್ದ. ಹಲವಾರು ಹುಡುಗರು ವ್ಯಾಸಂಗದಲ್ಲಿ ಅವನ ಮಾರ್ಗದರ್ಶನ ಪಡೆಯುತ್ತಿದ್ದರು. ಅವನೋ ತುಂಬ ಉದಾರಿಯಾಗಿ ಅಂಥ ಸಹಪಾಠಿಗಳ ನೆರವಿಗೆ ಧಾವಿಸುತ್ತಿದ್ದ. ಶಾಲೆ ನಡೆಯುತ್ತಿದ್ದುದು ಶ್ರೀಮಂತರೊಬ್ಬರಿಗೆ ಸೇರಿದ ಬಾಡಿಗೆ ಮನೆಯಲ್ಲಿ. ಒಂದು ಸಲ, ಯಾರೋ ದುಷ್ಕರ್ಮಿಗಳು ಆ ಶ್ರೀಮಂತನ ಮಗನನ್ನು ರೈಲ್ವೆ ಹಳಿಯ ಬಳಿ ಎಳೆದೊಯ್ದು ಅವನ ಕೈ ಕತ್ತರಿಸಿ ಬಂಗಾರದ ಕಡಗವನ್ನು ಕದ್ದೊಯ್ದರು. ನಿಜಲಿಂಗಪ್ಪನ ಮುಂದಾಳತ್ವದಲ್ಲಿ ಶಾಲೆಯ ಹುಡುಗರು ಅವನನ್ನು ಪಾರು ಮಾಡಿದರೂ, ಹುಡುಗರೇ ಈ ಕೃತ್ಯದ ಹಿಂದಿರುವರೆಂದು ಆ ಶ್ರೀಮಂತ ಭಾವಿಸಿದ. ಅದೃಷ್ಟವಶಾತ್, ಪ್ರಜ್ಞೆ ಮರಳಿದ ಮೇಲೆ ಆ ಹುಡುಗ ನಡೆದುದನ್ನು ತಂದೆಗೆ ವಿವರಿಸಿದ. ಇದರಿಂದ ಸಂತುಷ್ಟರಾದ ಅವರು ನಿಜಲಿಂಗಪ್ಪ ಮತ್ತವನ ಸಹಪಾಠಿಗಳನ್ನು ಹೊಗಳಿದರು. ಎಂಥ ಕಷ್ಟ ಬಂದರೂ ಸಹಿಸಿಕೊಳ್ಳುವುದು ನಿಜಲಿಂಗಪ್ಪನ ಸ್ವಭಾವವೇ ಆಗಿತ್ತು. ಅವನದೆಂತಹ ಬಾಲಪ್ರತಿಭೆಯೆಂದರೆ, ಮೂರು

ವರ್ಷ ಅಭ್ಯಾಸ ಮಾಡಬೇಕಾದ ವಿಷಯವನ್ನೆಲ್ಲ ಒಂದೇ ವರ್ಷದಲ್ಲಿ ಓದಿ ಕಲಿಯ ಬಲ್ಲವನಾಗಿದ್ದ. ಹೀಗೆ ಅವನು ೧೯೧೫ರಲ್ಲಿ ಮೊದಲ ದರ್ಜೆಯಲ್ಲಿ ಲೋವರ್ ಸೆಕೆಂಡರಿ ಪಾಸು ಮಾಡಿದ. ಅವನು ಗಣಿತದಲ್ಲಿ ನೂರಕ್ಕೆ ತೊಂಬತ್ತು ಅಂಕಗಳನ್ನು ಪಡೆದಿದ್ದ ಸುದ್ದಿ ಊರಲೆಲ್ಲ ಹರಡಿತು. ಅದೊಂದು ಐತಿಹಾಸಿಕ ಸಂಗತಿಯೆನಿಸಿತು, ಊರ ಗಣ್ಯರಲ್ಲಿ ಅನೇಕರು ಮನೆಗೆ ಬಂದು ತಮ್ಮ ಮೆಚ್ಚಿಕೆಯನ್ನು ವ್ಯಕ್ತಪಡಿಸಿದರು. ಸಹಜವಾಗಿಯೇ ಇದರಿಂದ ಅತ್ಯಂತ ಸಂತೋಷಗೊಂಡವರೆಂದರೆ ಸಾವಕ್ಕ ಮತ್ತು ರುದ್ರಪ್ಪ ಅವರುಗಳು. ಹೊಸದಾಗಿ ರೂಪುಗೊಳ್ಳುತ್ತಿದ್ದ ಕೆಲವು ನಗರ ಕೇಂದ್ರಗಳಲ್ಲಿ ೧೮೮೫ರಲ್ಲಿ ಆರಂಭಗೊಂಡಿದ್ದ ಭಾರತ ರಾಷ್ಟ್ರೀಯ ಚಳವಳಿಯು ಈ ಹೊತ್ತಿಗೆ, ಕೇವಲ ಮನವಿ ಸಲ್ಲಿಕೆಯ ಹಂತದಿಂದ ಗಾಂಧೀಜಿಯ ನೇತೃತ್ವದಲ್ಲಿ ಅಹಿಂಸಾತ್ಮಕ ಹೋರಾಟ ನಡೆಸುವ ಹೊಸದೊಂದು ಮಜಲಿಗೆ ಪ್ರವೇಶಿಸುತ್ತಲಿತ್ತು. ದಕ್ಷಿಣ ಆಫ್ರಿಕದ ವಸಾಹತುಶಾಹಿಯ ವಿರುದ್ಧ ಯಶಸ್ವಿಯಾಗಿ ಭಾರತೀಯ ಜನರನ್ನು ಸತ್ಯಾಗ್ರಹಕ್ಕೆ ಸಂಘಟಿಸಿದ್ದ ಗಾಂಧೀಜಿಯವರು ೧೯೧೫ರಲ್ಲಿ ಭಾರತಕ್ಕೆ ಮರಳಿ, ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ವಿರುದ್ಧ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಅನ್ನು ಕ್ರಾಂತಿಕಾರಕ ಹೋರಾಟದ ಹಾದಿಯಲ್ಲಿ ಸಾಗುವಂತೆ ಸಜ್ಜುಗೊಳಿಸುತ್ತಿದ್ದರು. ಚಳವಳಿಯನ್ನು ಸಂಘಟಿಸುವ ಮುನ್ನ ದೇಶದ ಸುತ್ತೆಲ್ಲ ಸಂಚಾರ ಮಾಡಿ ಸನ್ನಿವೇಶವನ್ನು ವಾಸ್ತವ ನೆಲೆಯಲ್ಲಿ ಗಮನಿಸಿದ್ದು ಅವರ ವಿಶೇಷ. ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದ ಉದ್ಘಾಟನೆಯ ಸಂದರ್ಭ ದಲ್ಲಿ ಅವರು ಮಾಡಿದ್ದ ಪ್ರಸಿದ್ಧ ಭಾಷಣವು ಕಾಂಗ್ರೆಸ್ ಮುಖಂಡತ್ವದ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಗೆ ಹೊಸದೊಂದು ದಿಕ್ಕನ್ನು ತೋರಿಸಿತು. ನಿಜಲಿಂಗಪ್ಪ ತಮ್ಮ ಸೆಕೆಂಡರಿ ಶಿಕ್ಷಣಕ್ಕೆಂದು ಚಿತ್ರದುರ್ಗ ಹೋಗುವುದಕ್ಕೂ ಗಾಂಧೀಜಿ ಭಾರತ ಪ್ರವೇಶಿಸು ವುದಕ್ಕೂ ಸರಿ ಹೋಯಿತು. ಇಲ್ಲಿನ ವಿದ್ಯಾಭ್ಯಾಸಕ್ಕೂ ರುದ್ರಪ್ಪನವರು ತಮ್ಮ ಆರ್ಥಿಕ ಹಾಗೂ ನೈತಿಕ ಬೆಂಬಲ ಮುಂದುವರಿಸಿದರು. ಈ ಸಮಯದಲ್ಲಿ ಕಾಡಪ್ಪ ಎಂಬ ಉದಾರಿಗಳೊಬ್ಬರು ನಿಜಲಿಂಗಪ್ಪನಿಗೆ ಇರಲು ಜಾಗ ಮತ್ತು ಊಟದ ವ್ಯವಸ್ಥೆ ಮಾಡಲು ಮುಂದಾದರು. ಇದರಿಂದ ರುದ್ರಪ್ಪನವರ ಚಿಂತೆ ಕಡಿಮೆಯಾಯಿತು. ವ್ಯಾಪಾರದಿಂದ ಗಿಜಿಗುಡುತ್ತಿದ್ದ ದಾವಣಗೆರೆಗಿಂತ ಚಿತ್ರದುರ್ಗ ಬಹು ಪ್ರಶಾಂತವಾದ ಊರು, ಹೀಗಾಗಿ ಓದುವವರಿಗೆ ಅನುಕೂಲಕರ ಜಾಗ. ಊರ ಸುತ್ತಲೂ ರಕ್ಷಕ ಸಿಪಾಯಿಗಳಂತೆ ಎದ್ದು ನಿಂತಿದ್ದ ಬೆಟ್ಟಸಾಲು, ಜೊತೆಗೆ ಅದು ಇತಿಹಾಸ ಪ್ರಸಿದ್ಧನಾದ ಪಾಳೆಯಗಾರ ಮದಕರಿ ನಾಯಕನ ರಾಜಧಾನಿ. ಚಿತ್ರದುರ್ಗದ ಐತಿಹಾಸಿಕತೆಯ ಔನ್ನತ್ಯ ಮತ್ತು ಊರಿನ ಸ್ಫೂರ್ತಿದಾಯಕ ಸೌಂದರ್ಯವನ್ನು ಸೂಕ್ಷ್ಮಮತಿಯಾದ ನಿಜಲಿಂಗಪ್ಪ ಗ್ರಹಿಸಬಲ್ಲವ ನಾಗಿದ್ದ. ಕೆಲವು ಕಾಲ ಜೊತೆಯಲ್ಲಿ ವಾಸಿಸುತ್ತಿದ್ದ ಕಾಡಪ್ಪ ಕಾಯಿಲೆಯ ಕಾರಣದಿಂದ

ಮರಣ ಹೊಂದಿದರು. ಮತ್ತೊಮ್ಮೆ ರುದ್ರಪ್ಪನವರು ಪ್ರಯತ್ನ ಪಟ್ಟು ನಿಜಲಿಂಗಪ್ಪನನ್ನು ಸಾಹುಕಾರ ಚಿಕ್ಕವೀರಪ್ಪನವರ ಮನೆಯಲ್ಲಿ ಬಿಟ್ಟರು. ಚಿಕ್ಕವೀರಪ್ಪನವರು ಈ ಹುಡುಗನ್ನು ಬಂಧುವಿನಂತೆ ಕಂಡರು, ಹೀಗಾಗಿ ನಿಜಲಿಂಗಪ್ಪ ಮನೆಯ ಮಗನಂತಾದ. ಕುಟುಂಬದ ಮಕ್ಕಳಿಗೆ ದೊರಕುತ್ತಿದ್ದ ಪ್ರೀತಿ, ಏಕಾಂತ ಮತ್ತು ಆರ್ಥಿಕ ಸೌಲಭ್ಯಗಳೆಲ್ಲ ಇವನಿಗೂ ದೊರೆಯುತ್ತಿದ್ದವು. ಚಿಕ್ಕವೀರಪ್ಪ ತೀರಿಕೊಂಡ ಬಳಿಕವೂ ಹುಡುಗನಿಗೆ ಯಾವುದೇ ತೊಂದರೆಯಾಗಲಿಲ್ಲ, ಯಾಕೆಂದರೆ ಅವರ ಮಗ ವೀರಭದ್ರಪ್ಪನವರು ಅದೇ ಬಗೆಯ ಪ್ರೀತಿ ತೋರಿ ನೆರವನ್ನು ಒದಗಿಸಿದರು. ಸಹಜವಾಗಿಯೇ, ನಿಜಲಿಂಗಪ್ಪ ತನ್ನ ಉತ್ತಮ ವ್ಯಾಸಂಗ ಮತ್ತು ಸನ್ನಡತೆಗಳಿಂದಾಗಿ ಉಪಾಧ್ಯಾಯರ ಮತ್ತು ಸಹಪಾಠಿಗಳ ಪ್ರೀತಿಯನ್ನು ಸಂಪಾದಿಸಿದ. ಎಂದಿನಂತೆ ಅವನ ಓದು ಪಠ್ಯಪುಸ್ತಕಗಳಿಗಷ್ಟೇ ಸೀಮಿತವಾಗಿರಲಿಲ್ಲ. ಊರಿನ ಗ್ರಂಥಾಲಯಕ್ಕೆ ದಾಳಿಯಿಟ್ಟು ಹಿಂದಿನ ಮತ್ತು ಇಂದಿನ ವಿಷಯಗಳನ್ನು ಸೂರೆಗೊಂಡ. ಅವನು ರಾಷ್ಟ್ರಧುರೀಣರಾದ ಆನಿಬೆಸೆಂಟ್ ಸಂಪಾದಿಸುತ್ತಿದ್ದ 'ನ್ಯೂ ಇಂಡಿಯ'ವನ್ನೂ ಹಾಗೆಯೇ ಗಾಂಧೀಜಿ ಮತ್ತಿತರ ನಾಯಕರ ಭಾಷಣಗಳನ್ನೂ ತಪ್ಪದೇ ಓದುತ್ತಿದ್ದ. ನೇರವಾಗಿ ಇನ್ನೂ ಸ್ವಾತಂತ್ರ್ಯ ಹೋರಾಟಕ್ಕೆ ದುಮುಕದಿದ್ದರೂ ವಿದ್ಯಾರ್ಥಿ ದೆಸೆಯಲ್ಲಿಯೇ ಅವನಿಗೆ ರಾಷ್ಟ್ರೀಯ ಚಳವಳಿಯಲ್ಲಿ ಅಪಾರ ಆಸಕ್ತಿ ಮೂಡಿತ್ತು.

ತನ್ನ ಕಾಲದ ಇತರ ವಿದ್ಯಾವಂತರಂತೆ ಯುವಕ ನಿಜಲಿಂಗಪ್ಪ ಕೂಡ ಆಧುನಿಕ ಪಾಶ್ಚಾತ್ಯ ವೈಚಾರಿಕತೆಯಿಂದ ಪ್ರಭಾವಿತನಾದ, ವೈಚಾರಿಕತೆಯ ನೆಲಗಟ್ಟಿನ ಸಮಾಜ ಸುಧಾರಣೆಯ ಕನಸನ್ನು ಕಟ್ಟಿಕೊಂಡ. ಪ್ರೌಢಶಾಲೆಯಲ್ಲಿದ್ದಾಗ ಒಮ್ಮೆ ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಿ ಆತ ಗಂಡು–ಹೆಣ್ಣು ಸಮಾನತೆಯ ಆಧಾರದ ಮೇಲೆ ವಿಧವಾ ವಿವಾಹ ವನ್ನು ಬೆಂಬಲಿಸಿ ಮಾತನಾಡಿದ್ದ. ಆತನ ಆಧುನಿಕ ವೈಚಾರಿಕ ದೃಷ್ಟಿಕೋನದ ಮೇಲೆ ತನ್ನ ಲಿಂಗಾಯತ ಪರಂಪರೆಯ, ಅದರಲ್ಲಿಯೂ ಬಸವಣ್ಣನ ಮಾನವ ಸಮಾನತೆ ಮತ್ತು ಸ್ವಾತಂತ್ರ್ಯಗಳ ಪ್ರತಿಪಾದನೆಯ ಪ್ರಭಾವವೂ ಆತನಿಗರಿವಿಲ್ಲದಂತೆಯೇ ಆಗಿರಬೇಕು. ಆತನ ಉಪಾಧ್ಯಾಯರುಗಳಿಗೆ ಗಂಡು–ಹೆಣ್ಣು ಸಮಾನತೆಯ ಪರಿಕಲ್ಪನೆ ಅಷ್ಟೊಂದು ಮನವರಿಕೆಯಾಗಿರಲಿಲ್ಲ, ಹೀಗಾಗಿ ಅವರು ಅಸಮಾನತೆಯ ಪ್ರತಿಪಾದಕರೇ ಆಗಿದ್ದರು. ಆಧುನಿಕ ಲಿಂಗಾಯತರು ತಮ್ಮ ಮತೋದ್ಧಾರಕ ಬಸವಣ್ಣನ ಕ್ರಾಂತಿಕಾರಕ ಮಾನವತಾ ವಾದವನ್ನು ತೊರೆದಿದ್ದ ಕುರುಹೂ ಇದಾಗಿದ್ದಿತೆಂದು ಹೇಳಬಹುದು. ಹೊರ ಚಟುವಟಿಕೆ ಗಳಲ್ಲಿ ಆತ ವಹಿಸುತ್ತಿದ್ದ ಆಸ್ಥೆಯ ಹಿನ್ನೆಲೆಯಲ್ಲಿ, ನಿಜಲಿಂಗಪ್ಪ ಬಾಲಚಮೂ(ಸ್ಕೌಟ್) ಆದುದರಲ್ಲಿ ಅಚ್ಚರಿಯೇನಿಲ್ಲ. ಅದರ ಪ್ರತಿ ಚಟುವಟಿಕೆಯಲ್ಲಿಯೂ ಆತ ಸಕ್ರಿಯನಾಗಿ ಪಾಲುಗೊಳ್ಳುತ್ತಿದ್ದ. ಅದುವರೆಗೂ ಆತನಿಗೆ ತನ್ನ ಜನಾಂಗದವರ ಅಂದರೆ ವೀರಶೈವ

ಅಥವಾ ಲಿಂಗಾಯತರಲ್ಲದವರ ಮನೆಯಲ್ಲಿ ಒಂದು ಲೋಟ ನೀರು ಕುಡಿಯುವ ಅವಕಾಶವೂ ಬಂದಿರಲಿಲ್ಲ. ಆದರೀಗ ಬಾಲಚಮೂ ಆಗಿ ಇತರ ಜಾತಿ ಜನಾಂಗಗಳ ಹುಡುಗರ ಜೊತೆಯಲ್ಲಿ ಬೆರಯಬೇಕಾಗಿತ್ತು. ಮೊತ್ತ ಮೊದಲ ಬಾರಿಗೆ ಆತ ತಿಂದದ್ದು ತನ್ನ ಅಧ್ಯಾಪಕರಾದ ಪುರಿ ಪಾಳ್ಯದ ಕೃಷ್ಣರಾವ್ ಅವರ ಮನೆಯಲ್ಲಿ. ಈ ಅನುಭವದಿಂದಾಗಿ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಭಾವನೆ ಆತನಲ್ಲಿ ಬಲಿಯಲು ಸಹಕಾರಿಯಾಯಿತು. ಮುಂದೆ ಆತ ತನ್ನ ಹಣೆಯ ಮೇಲೆ ಸಾಂಪ್ರದಾಯಿಕ ವಿಭೂತಿ ಪಟ್ಟೆ ಧರಿಸುವುದನ್ನೂ ಬಿಟ್ಟುಬಿಟ್ಟ. ಇದು ಆ ಯುವಕನಲ್ಲಿ ಒಂದು ಅದ್ಭುತ ಅನುಭವವೆನಿಸಿರಬೇಕು. ಈ ಬದಲಾವಣೆಯು ಎಷ್ಟು ಕ್ರಾಂತಿಕಾರಕವಾದುದು ಎಂಬು ದನ್ನು ಅರ್ಥಮಾಡಿಕೊಳ್ಳಬೇಕಾದರೆ, ಆತನ ಅತ್ಯಂತ ಸಂಪ್ರದಾಯಶರಣ ಲಿಂಗಾಯತ ನಂಬಿಕೆ ಆಚರಣೆಗಳ ಕೌಟುಂಬಿಕ ಹಿನ್ನೆಲೆಯನ್ನು ಗಮನಿಸಬೇಕು, ಒಮ್ಮೆ ಊರಿನ ಸ್ಕೌಟ್ ಕಮಿಷನರ್ ಘಟಕವನ್ನು ವಿದೇಶೀಯರೊಬ್ಬರು ಸಂದರ್ಶಿಸಿದರು. ಅದೊಂದು ಸಮುದಾಯ ಚಟುವಟಿಕೆ, ಹೀಗಾಗಿ ಎಲ್ಲ ಒಟ್ಟಾಗಿ ಅಡುಗೆ ಮಾಡುವುದರಲ್ಲಿ ಭಾಗಿ ಗಳಾದರು, ಸ್ವತಃ ಕಮಿಷನರ್ ಅವರೇ ನೀರು ತರುವ ಮೂಲಕ ಅದರಲ್ಲಿ ಪಾಲು ಗೊಂಡರು. ಮೈಲಿಗೆಯ ನೆವಹೇಳಿ ಕೆಲವು ಹುಡುಗರು ಊಟ ಮಾಡಲಿಲ್ಲ, ಇದರಿಂದ ನಿಜಲಿಂಗಪ್ಪನ ಕೋಪ ನೆತ್ತಿಗೇರಿತು. "ಕಮಿಷನರ್ ಅಂತಹ ದೊಡ್ಡ ಅಧಿಕಾರಿಯೊಬ್ಬರು ನೀರು ತಂದು ಕೊಟ್ಟದ್ದರಿಂದ ಅಡುಗೆ ಮತ್ತಷ್ಟು ಮಡಿಯಾಯಿತು. ಅದನ್ನು ಮೈಲಿಗೆ ಅಂತ ಹೇಗೆ ಹೇಳ್ತೀರಿ? ಕೆಲಸದ ಮಹತ್ವವನ್ನು ಎತ್ತಿ ಹಿಡಿದ ಅವರ ಆದರ್ಶವನ್ನು ನಾವು ಅನುಸರಿಸಬೇಕು" ಅಂತ ಕೂಗಾಡಿದ.

ಆತ ಎಲ್ಲ ಕ್ರೀಡೆಗಳಲ್ಲಿಯೂ ಭಾಗವಹಿಸುತ್ತಿದ್ದ, ಅವುಗಳಲ್ಲಿ ಕೂಡ ಓದಿನಲ್ಲಿ ಹೇಗೆ ಮುಂದಿದ್ದನೋ ಹಾಗೆಯೇ ಮುಂದಿದ್ದ. ಕ್ರಿಕೆಟ್, ಫುಟ್‌ಬಾಲ್ ಹಾಕಿಗಳನ್ನು ಆಡುತ್ತಿದ್ದ, ಜೊತೆಗೆ ಅಂಗಸಾಧನೆಯಲ್ಲಿಯೂ ಆತನಿಗೆ ಅಪಾರ ಆಸಕ್ತಿ. ಹೆಚ್ಚಿನ ಅಂಕ ಗಳಿಸಿ ಎಂಟನೆಯ ಸ್ಟಾಂಡರ್ಡ್ ತೇರ್ಗಡೆಯಾದ ಬಳಿಕ ಆತ ಒಂಬತ್ತನೆಯ ತರಗತಿಗೆ ಸೇರಿದ, ಅಂದರೆ ಆ ವರ್ಷ ಆತ ಐಚ್ಛಿಕ ವಿಷಯಗಳನ್ನು ಆರಿಸಿಕೊಳ್ಳ ಬೇಕಾಗಿತ್ತು. ಆತನ ಮೊದಲ ಆಕರ್ಷಣೆ ವಿಜ್ಞಾನ ಮತ್ತು ಗಣಿತಗಳ ಕಡೆಗೆ, ಅವುಗಳಲ್ಲಿ ಹಿಂದಿನ ತರಗತಿಯಲ್ಲಿ ಪಡೆದಿದ್ದ ಅಂಕಗಳು ಶೇಕಡ ಎಂಬತ್ತು. ಆದರೆ ಆತನ ಉಪಾಧ್ಯಾಯರು ಜಾತಿಯ ಬಗ್ಗೆ ಕುರುಡಾಗಿದ್ದವರು, ಹೀಗಾಗಿ ನಿಜಲಿಂಗಪ್ಪ ಈ ವಿಷಯಗಳನ್ನಾರಿಸಿಕೊಳ್ಳಲು ಅವರು ಒಪ್ಪದೆ ಚರಿತ್ರೆಯನ್ನು ಆರಿಸಿಕೊಳ್ಳುವಂತೆ ಹೇಳಿದರು. ನಿಜಲಿಂಗಪ್ಪ ಮುಖ್ಯೋಪಾಧ್ಯಾಯರನ್ನು ಕೇಳಿಕೊಂಡ ಮೇಲೆ ಅವನಿಗೆ ತನ್ನ ಇಷ್ಟದ ವಿಷಯಗಳನ್ನು ಆರಿಸಿಕೊಳ್ಳುವ ಅವಕಾಶ ಸಿಕ್ಕಿತು. ೧೯೧೮ರಲ್ಲಿ

ಚಿತ್ರದುರ್ಗವನ್ನು ಪ್ಲೇಗ್ ಮಾರಿ ತಲ್ಲಣಗೊಳಿಸಿತು. ಜಾತಿ ಮತ ಜನಾಂಗಗಳೆನ್ನದೆ ವಯಸ್ಸಿನ ಭೇದವಿಲ್ಲದೆ ಅಸಂಖ್ಯ ಜನ ಅದಕ್ಕೆ ಆಹುತಿಯಾದರು. ವೀರಭದ್ರಪ್ಪನವರ ಕುಟುಂಬ ಮೆಕ್ಕಾಪುರಕ್ಕೆ ತನ್ನ ತಾತ್ಕಾಲಿಕ ವಾಸ್ತವ್ಯವನ್ನು ಬದಲಾಯಿಸಿತು. ಅದರೊಡನೆ ನಿಜಲಿಂಗಪ್ಪ ಕೂಡ ಅಲ್ಲಿಗೆ ಹೋದ. ಹೋಗಿ ಒಂದು ತಿಂಗಳ ಬಳಿಕ, ವೀರಭದ್ರಪ್ಪ ಮತ್ತವರ ಹೆಂಡತಿಗೆ ಇನ್‌ಫ್ಲುಯೆಂಜ಼ ಅಂಟಿಕೊಂಡಿತು. ಇಡೀ ಕುಟುಂಬವು ಭಯದಿಂದ ತತ್ತರಿಸಿತು. ಕುಟುಂಬದಲ್ಲಿ ಅಡುಗೆಯವನಾಗಿದ್ದ ಈಶ ಎಂಬ ಹುಡುಗನಿಗೂ ಇನ್‌ಫ್ಲುಯೆಂಜ಼ ಬಂತು. ಕಾಯಿಲೆ ಹುಡುಗನ ಶುಶ್ರೂಷೆಯ ಹೊಣೆಯನ್ನು ನಿಜಲಿಂಗಪ್ಪ ಹೊತ್ತ. ಆದರೆ ಅವನ ಹೋರಾಟದಿಂದ ಹುಡುಗನ ಪ್ರಾಣವನ್ನು ಉಳಿಸಲು ಸಾಧ್ಯವಾಗಲಿಲ್ಲ. ಮತ್ತೊಮ್ಮೆ ಸಾವಿನ ಹೆಡೆಯಡಿಯಲ್ಲಿ ಸಿಲುಕಿದ ಈಶನ ಮರಣದಿಂದ ನಿಜಲಿಂಗಪ್ಪ ಮಮ್ಮಲ ಮರುಗಿದ. ತಂದೆ ಸತ್ತಾಗ ಇವನಿಗೆ ಅದರ ಬಿಸಿ ತಟ್ಟುವಷ್ಟು ತಿಳಿವಳಿಕೆ ಇರಲಿಲ್ಲ. ಆದರೆ ಈಗ ಪರಿಸ್ಥಿತಿ ಬದಲಾಗಿತ್ತು, ಸಾವಿನೊಡನೆ ಅತಿ ಸನಿಹದಿಂದ ಮುಖಾಮುಖಿಯಾಗುವ ಹಾಗೂ ಸಾವು ಗೆದ್ದು ಅಟ್ಟಹಾಸಗೈದ ಪ್ರಸಂಗ ಎದುರಾಯಿತು. ಈ ಅನುಭವದಿಂದ ಹುಡುಗನಿಗೆ ವಿಧಿಯೆದುರು ಮನುಷ್ಯ ಎಷ್ಟು ನಿಸ್ಸಹಾಯಕ ಎಂಬ ಅರಿವುಂಟಾಯಿತು. ಕುಟುಂಬದ ಇತರ ರೋಗಿಗಳ ಶುಶ್ರೂಷೆಯನ್ನು ಮುಂದುವರಿಸಿದ. ಅದೇನೂ ಸುಲಭದ ಕೆಲಸವಾಗಿರಲಿಲ್ಲ. ಔಷಧಿ ತರಲು ಮೂರು ಮೈಲಿ ದೂರದಲ್ಲಿದ್ದ ಆಸ್ಪತ್ರೆಗೆ ಹೋಗಬೇಕಾಗಿತ್ತು. ರೋಗಿಗಳಿಗೆ ಗಂಜಿ ಮಾಡಬೇಕಾಗಿತ್ತು. ಎಲ್ಲಕ್ಕಿಂತ ಮಿಗಿಲಾಗಿ ಕುಟುಂಬದ ಇತರರು, ಅದರಲ್ಲೂ ಮಕ್ಕಳು, ಹೊತ್ತು ಹೊತ್ತಿಗೆ ಊಟ ಕಾಣಬೇಕಾಗಿತ್ತು. ಹಲವಾಗಿಲು ಮನೆಯ ಸುಭದ್ರ ನೆಲೆಗೆ ಹಾರಿ ಹೋಗುವುದರ ಬದಲು ಇಲ್ಲಿಯೇ ಸಮಸ್ಯೆಗಳ ಸವಾಲನ್ನು ದಿಟ್ಟತನದಿಂದ ಎದುರಿಸಿದ್ದರಲ್ಲಿಯೇ ಅವನ ಹೆಚ್ಚುಗಾರಿಕೆಯಿತ್ತು. ಆ ವರ್ಷ ಇಡೀ ದೇಶವು ಇನ್‌ಫ್ಲುಯೆಂಜ಼ದ ಮುಷ್ಟಿಗೆ ಸಿಲುಕಿತ್ತು, ಸಾವಿನ ರುದ್ರ ನರ್ತನ ನಡೆದಿತ್ತು. ಇಂಥ ಕಷ್ಟಕಾಲದಲ್ಲಿ ಅವನು ಈ ಕುಟುಂಬಕ್ಕೆ ನೀಡಿದ ನೆರವು ವೀರಭದ್ರಪ್ಪನವರಿಗೆ ಮತ್ತಷ್ಟು ಅವನನ್ನು ಹತ್ತಿರವಾಗುವಂತೆ ಮಾಡಿತು. ನಿಜಲಿಂಗಪ್ಪನ ವಿದ್ಯಾಭ್ಯಾಸಕ್ಕೆ ಯಾವುದೇ ಬಗೆಯ ಸಹಾಯ ನೀಡಲು ಅವರು ನಿರ್ಧರಿಸಿದರು.

೧೯೧೮ ರಲ್ಲಿ ನಿಜಲಿಂಗಪ್ಪನಿಗೇ ಮಲೇರಿಯ ಬಂತು. ಇದರಿಂದ ಅವನೆಷ್ಟು ನಿತ್ರಾಣಗೊಂಡನೆಂದರೆ, ಆ ವರ್ಷ ಅವನು ಮೆಟ್ರಿಕ್ಯುಲೇಷನ್ ಪರೀಕ್ಷೆ ಬರೆಯಲಾಗಲಿಲ್ಲ. ದೈಹಿಕ ನಿಶ್ಶಕ್ತಿಯ ಜೊತೆಗೆ, ಅವನು ಪರೀಕ್ಷೆಗೆ ಕೂಡಲು ಪ್ರಾಪ್ತ ವಯಸ್ಕನಾಗಿಲ್ಲವೆಂದು ಬೇರೆ ಘೋಷಿಸಲಾಯಿತು! ಇದರಿಂದ ಒಳ್ಳೆಯದೇ ಆಯಿತು. ಯಾಕೆಂದರೆ ೧೯೧೮ರಲ್ಲಿಯೇ ಅವನು ಮೆಟ್ರಿಕ್ಯುಲೇಷನ್ ಪಾಸಾಗಿದ್ದಿದ್ದರೆ, ಅವನು ಹೆಚ್ಚಿನ ಶಿಕ್ಷಣಕ್ಕೆ

ತುಮಕೂರಿಗೋ ಬೆಂಗಳೂರಿಗೋ ಹೋಗಬೇಕಾಗಿದ್ದು, ಕಾಯಿಲೆಯ ಸಂದರ್ಭದಲ್ಲಿ ವೀರಭದ್ರಪ್ಪನವರ ಕುಟುಂಬಕ್ಕೆ ಶುಶ್ರೂಷೆ ಮಾಡಲಾಗುತ್ತಿರಲಿಲ್ಲ. ಮಾರನೆಯ ವರ್ಷ ಮೆಟ್ರಿಕ್ಯುಲೇಷನ್ ಪರೀಕ್ಷೆ ಬರೆದು ಮೊದಲ ದರ್ಜೆಯಲ್ಲಿ ತೇರ್ಗಡೆಯಾದ. ಕೆಲವು ಪತ್ರಿಕೆಗಳಲ್ಲಿ ಅವನು ಆವಶ್ಯಕವಾದುದಕ್ಕಿಂತ ಹೆಚ್ಚಿನ ಪ್ರಶ್ನೆಗಳಿಗೆ ಉತ್ತರಿಸಿದ್ದ, ಹೀಗಾಗಿ ಗರಿಷ್ಠ ನೂರು ಅಂಕಕ್ಕೆ ಅವನು ನೂರಿಪ್ಪತ್ತು ಅಂಕ ಗಳಿಸುವಂತಾಗಿತ್ತು!

ಮುಂದಿನ ವಿದ್ಯಾಭ್ಯಾಸಕ್ಕೆ ಅವನು ತುಮಕೂರು ಅಥವಾ ಬೆಂಗಳೂರನ್ನು ಆಯ್ದುಕೊಳ್ಳಬೇಕಾಗಿತ್ತು. ಈ ಊರುಗಳಲ್ಲಿನ ಯಾವುದಾದರೂ ಉಚಿತ ವಿದ್ಯಾರ್ಥಿ ನಿಲಯಗಳಲ್ಲಿ ಅವನು ಊಟ ವಸತಿಗಳನ್ನು ಪಡೆಯಬಹುದಾಗಿತ್ತು. ಆದರೆ ಕಾಲೇಜು ಶುಲ್ಕ, ಪಠ್ಯಪುಸ್ತಕದ ವೆಚ್ಚ ಮುಂತಾದವುಗಳ ಪಾಡೇನು? ಜೊತೆಗೆ ಬಟ್ಟೆಬರೆ ಬೇರೆ. ವೀರಭದ್ರಪ್ಪ ಅಥವಾ ತನ್ನ ತಾಯಿ ವೀರಮ್ಮನವರಿಂದ ನೆರವನ್ನೇನೋ ನಿರೀಕ್ಷಿಸಬಹುದಾಗಿತ್ತು. ಮುಂದೆ ಓದುವ ಯೋಚನೆಯನ್ನು ಕೈಬಿಟ್ಟು ಯಾವುದಾದರೂ ಕೆಲಸವನ್ನು ಸೇರಿ ತಾಯಿಗೆ ನೆರವಾಗಲು ಕೆಲವರು ಸಲಹೆಯಿತ್ತರು. ಸಣ್ಣ ಅಂಗಡಿಯೊಂದನ್ನು ತೆರೆದು ಒಂದಷ್ಟು ಸಂಪಾದನೆ ಮಾಡುವಂತೆ ಮತ್ತೂ ಕೆಲವರು ಸೂಚಿಸಿದರು. ಇದರಿಂದ ಹುಡುಗನಿಗೆ ಗೊಂದಲವುಂಟಾಯಿತು, ಆದರೆ ಕೊನೆಯಲ್ಲಿ ಮುಂದೆ ಓದುವ ಅವನ ಆಸೆಯೇ ಗೆದ್ದಿತು. ಎಂಥ ಪರಿಸ್ಥಿತಿಯೇ ಬರಲಿ ಓದನ್ನು ಮುಂದುವರೆಸಬೇಕೆಂದು ಅವನು ನಿರ್ಧರಿಸಿದ. ಅವನ ತಾಯಿಯಾದರೋ ಮಗನ ಹೆಚ್ಚಿನ ಓದಿಗೆ ಎಂಥ ತ್ಯಾಗಕ್ಕೂ ಸಿದ್ಧರಾಗಿದ್ದರು. ಎಷ್ಟು ಸಾಧ್ಯವೋ ಅಷ್ಟು ಓದನ್ನು ಪಡೆಯಬೇಕೆಂದು ಅವನ ತಂದೆಯ ಆಸೆಯಾಗಿದ್ದುದಲ್ಲದೆ, ಅವನ ಅಜ್ಜನ ನಿರೀಕ್ಷೆಯೂ ಅದೇ ಆಗಿತ್ತು ಎಂಬುದನ್ನು ತಾಯಿ ಅವನಿಗೆ ನೆನಪಿಸಿದರು. ಅವನ ಮುಂದಿನ ಓದಿಗೆ ತಾನೇ ಹೇಗೋ ಹಣವನ್ನು ಹೊಂಚುವುದಾಗಿ ಆಕೆ ಆಶ್ವಾಸನೆಯಿತ್ತರು. ಪೂರ್ಣ ಪ್ರಮಾಣದ ನೆರವನ್ನು ನೀಡುವ ಸ್ಥಿತಿಯಲ್ಲಿ ಇಲ್ಲದಿದ್ದ ರುದ್ರಪ್ಪನವರು ತಮ್ಮ ಕೈಲಾದ ಸಹಾಯ ಮಾಡುವುದಾಗಿ ಭರವಸೆಯಿತ್ತರು. ಸಾಹುಕಾರ ವೀರಭದ್ರಪ್ಪನವರು ತಮ್ಮ ಸಂಪೂರ್ಣ ಬೆಂಬಲವನ್ನು ಘೋಷಿಸಿ, "ಯೋಚನೆ ಮಾಡಬೇಡ, ಯಾವುದೇ ಸಹಾಯ ಬೇಕಾದರೆ ನನ್ನನ್ನು ಕೇಳು. ನಿನಗೆ ಹಣ ಬೇಕಾದಾಗ ನನಗೆ ಬರಿ, ತಕ್ಷಣವೇ ಹಣ ಕಳಿಸ್ತೀನಿ ಅಂತ ಭರವಸೆ ಕೊಡ್ತೀನಿ" ಎಂದು ಧೈರ್ಯ ತುಂಬಿದರು. ಆಶೀರ್ವಾದ ಪಡೆಯಲೆಂದು ಶ್ರೀ ಜಯದೇವ ಜಗದ್ಗುರುಗಳ ಬಳಿಗೆ ಹೋದಾಗ ಗುರುಗಳು "ನೀನು ತುಂಬ ಜಾಣ ಹುಡುಗ ಅಂತ ಕೇಳಿದ್ದೀವಿ. ನೀನು ಮೊದಲ ದರ್ಜೆಯಲ್ಲಿ ಪಾಸಾಗಿದ್ದೀ ಅಂತ ಹೇಳ್ತಾರೆ. ಇದರಿಂದ ಇಡೀ ವೀರಶೈವ ಸಮಾಜಕ್ಕೆ ಗೌರವ ತಂದಂತಾಗಿದೆ. ಬೆಂಗಳೂರಿನಲ್ಲಿ ಗುಬ್ಬಿ ತೋಟದಪ್ಪನವರ ಛತ್ರವಿದೆ. ಅಲ್ಲಿ ನಿನಗೆ ಎಲ್ಲ ಸೌಕರ್ಯ

ದೊರೆಯುತ್ತೆ. ನೀನು ಓದು ಮುಗಿಸಿ ಡಿಗ್ರಿ ಪಡೆದರೆ ವೀರಶೈವ ಸಮಾಜಕ್ಕೆ ನೀನು ಮುಕುಟಮಣಿಯಾಗುತ್ತೀ. ನಿನ್ನಂತಹ ಬುದ್ಧಿವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಕೊಡಲು ಮಠ ಸಿದ್ಧವಿದೆ" ಎಂದು ಹರಸಿದರು.

ವೈದ್ಯನಾದರೆ ಭಾರಿ ಹಣ ಸಂಪಾದನೆ ಮಾಡಬಹುದೆಂದು ಹಾಗೆ ಮಾಡಲು ಕೆಲವರು ಸಲಹೆಯಿತ್ತರೂ, ನಿಜಲಿಂಗಪ್ಪ ತನ್ನ ವಿಜ್ಞಾನ ವಿಷಯಗಳ ಒಲವಿನಿಂದಾಗಿ ಅದನ್ನು ವಿನಯದಿಂದಲೇ ತಿರಸ್ಕರಿಸಿದ. ಬೆಂಗಳೂರಿನ ಕೊಲಿಜಿಯೇಟ್ ಸ್ಕೂಲಿಗೆ ಪ್ರವೇಶಕ್ಕಾಗಿ ಅವನು ಅರ್ಜಿ ಸಲ್ಲಿಸಿದಾಗ, ಅವನಿಗೆ ತುಮಕೂರಿನಲ್ಲಿ ಪ್ರವೇಶ ದೊರೆಯಿತು. ಅಲ್ಲಿಯೂ ಊಟ ವಸತಿಗಳಿಗೆ ಅವನಿಗೆ ಯಾವ ಸಮಸ್ಯೆಯೂ ಎದುರಾಗಲಿಲ್ಲ. ಆದರೆ ಸಾಂಸ್ಕೃತಿಕ ಕೇಂದ್ರವೂ ಅವನಂಥ ಯುವಕರಿಗೆ ಅಪಾರ ಅವಕಾಶಗಳ ತಾಣವೂ ಆಗಿದ್ದ ಬೆಂಗಳೂರಿಗೆ ತುಮಕೂರು ಸಾಟಿಯಾಗಿರಲಿಲ್ಲ. ಸಂಸ್ಥಾನದ ಶಿಕ್ಷಣ ಇಲಾಖೆಯ ಮುಖ್ಯಸ್ಥರಾಗಿದ್ದ ಡಾ. ಸಿ. ಆರ್. ರೆಡ್ಡಿಯವರಿಗೆ ಆಗಲೇ ಒಂದು ಪತ್ರ ಬರೆದು, ಹೀಗೆ ವಿವರಿಸಿದ್ದ: "....ನಾನು ದೂರದ ಊರಿನ ಒಂದು ಬಡ ಕುಟುಂಬದಿಂದ ಬಂದವನು. ಯಾವ ಗಣ್ಯರ ಶಿಫಾರಸಾಗಲೀ ಬೆಂಬಲವಾಗಲೀ ನನಗೆ ಇಲ್ಲ. ತಮ್ಮಂತಹ ಪ್ರಸಿದ್ಧರಿಗೆ ಅರಿಕೆ ಮಾಡಿಕೊಂಡು ಬರುವ ಸಹಾಯದ ಮೇಲೆ ಭರವಸೆ ಇಟ್ಟವನು. ನಾನು ಮೊದಲ ದರ್ಜೆಯಲ್ಲಿ ಮೆಟ್ರಿಕ್ಯುಲೇಷನ್ ತೇರ್ಗಡೆಯಾಗಿದ್ದೇನೆ. ನನಗೆ ವಿಜ್ಞಾನ ವಿಷಯವೆಂದರೆ ತುಂಬ ಇಷ್ಟ. ಸದ್ಯಕ್ಕೆ, ನನಗೆ ತುಮಕೂರಿನಲ್ಲಿ ಪ್ರವೇಶಾವಕಾಶ ದೊರೆತಿದೆ. ನನಗೆ ತುಮಕೂರಿನ ವಾತಾವರಣಕ್ಕೆ ಹೊಂದಿಕೊಳ್ಳುವುದು ಕಷ್ಟಕರವಾಗುತ್ತಿದೆ. ಬೆಂಗಳೂರಿನ ಕೊಲಿಜಿಯೇಟ್ ಶಾಲೆಯಲ್ಲಿ ಓದುವ ಅವಕಾಶ ದೊರೆತರೆ ತುಂಬ ಉಪಕಾರವಾಗುತ್ತದೆ. ತಾವು ನೆರವಾದರೆ, ಒಬ್ಬ ಹಳ್ಳಿಯ ಹೈದ ವಿದ್ಯೆಯ ಹಾದಿಯಲ್ಲಿ ಸುಗಮವಾಗಿ ನಡೆಯುವಂತಾಗುತ್ತದೆ. ಹೀಗೆ ಮಾಡಲಾಗದಿದ್ದರೆ ತಮ್ಮಿಂದ ಹಳ್ಳಿಯ ಹುಡುಗನೊಬ್ಬನ ಭವಿಷ್ಯವೇ ಹಾಳಾಗುವಂತಾಗುತ್ತದೆ...." ತುಮಕೂರಿನಲ್ಲಿ ಓದಲು ಇಷ್ಟವಿಲ್ಲದೆ ಗಂಟುಮೂಟೆ ಕಟ್ಟಿಕೊಂಡು ಚಿತ್ರದುರ್ಗಕ್ಕೆ ಬಂದುಬಿಟ್ಟ. ಒಂದು ವಾರದೊಳಗಾಗಿ, ಅವನಿಗೆ ಬೆಂಗಳೂರಿನಲ್ಲಿ ಪ್ರವೇಶ ನೀಡಿದ ವಿಷಯವನ್ನು ತಿಳಿಸುವ ಪತ್ರ ರೆಡ್ಡಿಯವರಿಂದ ಬಂತು.

ಬೆಂಗಳೂರಿನಂತಹ ದೊಡ್ಡ ನಗರವನ್ನು ಹಿಂದೆಂದೂ ನಿಜಲಿಂಗಪ್ಪ ನೋಡಿರಲಿಲ್ಲ. ಆದರೆ ಇಲ್ಲಿ ಬಂದ ಮೇಲೆ ಅದು ತುಂಬ ಅನುಕೂಲಕರವಾದ ಊರಾಗಿ ಕಾಣಿಸಿತು. ಚಿತ್ರದುರ್ಗದಿಂದ ಮೂವತ್ತು ಮೈಲಿ ದೂರವಿದ್ದ ಹೊಳಲ್ಕೆರೆಯೇ ಅತ್ಯಂತ ಸಮೀಪದ ರೈಲ್ವೆ ಸ್ಟೇಷನ್ ಆಗಿತ್ತು. ಅಲ್ಲಿಗೆ ಹೋಗಿ ರೈಲು ಹಿಡಿದರೆ ಈ ಪುಟ್ಟ ಪಂಡಿತ ಬೆಂಗಳೂರಿಗೆ ಹೋಗಬಹುದಾಗಿತ್ತು. ಹಳ್ಳದಿಣ್ಣೆಗಳ ರಸ್ತೆಯಲ್ಲಿ ಪ್ರಯಾಣಮಾಡಿ ಅಂತೂ

ನಿಜಲಿಂಗಪ್ಪ ಹೊಳಲ್ಕೆರೆ ತಲುಪಿ ಮಧ್ಯರಾತ್ರಿಯಲ್ಲಿ ಪೂನಾ-ಬೆಂಗಳೂರು ರೈಲನ್ನು ಹಿಡಿದ. ಬೆಳಿಗ್ಗೆ ರೈಲಿನಿಂದ ಇಳಿದವನೇ ನಮ್ಮ ಹುಡುಗ ತನ್ನ ಚಿಕ್ಕ ಟ್ರಂಕ್ ಹೊತ್ತು ನೇರವಾಗಿ ತೋಟದಪ್ಪ ಛತ್ರಕ್ಕೆ ನಡೆದ. ಛತ್ರದಲ್ಲಿ ನೀಡುತ್ತಿದ್ದ ಆಹಾರ ಜೀವ ಹಿಡಿದುಕೊಂಡಿರಲು ಸಾಕಾಗುವಷ್ಟಿತ್ತು, ಆದರೆ ಇದನ್ನು ಹುಡುಗ ತಲೆಗೆ ಹಚ್ಚಿಕೊಳ್ಳಲಿಲ್ಲ. ಮುಂದೆ ಓದುವುದೇ ಅವನ ಮುಖ್ಯ ಗುರಿಯಾಗಿತ್ತು. ಬಹು ಬೇಗ ಛತ್ರದ ಜೀವನಕ್ಕೆ ಹೊಂದಿಕೊಂಡು, ದೊರಕುವಷ್ಟರಲ್ಲಿಯೇ ತೃಪ್ತಿ ಪಡೆಯವುದು ಅವನ ಸ್ವಭಾವವಾಗಿತ್ತು. ಮೊದಲ ದಿನವೇ ಅವನು ಎಂಟ್ರೆನ್ಸ್ ತರಗತಿಗೆ ಸೇರಿಕೊಂಡ. ಆ ಕಾಲದಲ್ಲಿ ಶಾಲಾ ಕಾಲೇಜು ತರಗತಿಗಳಲ್ಲಿ ವಿದ್ಯಾರ್ಥಿಗಳು ಗಿಜಿಗುಟ್ಟುವಷ್ಟು ಸಂಖ್ಯೆಯಲ್ಲಿರುತ್ತಿರಲಿಲ್ಲ. ಗಾಢ ಆಸಕ್ತಿಯಿದ್ದ ಕೆಲವೇ ವಿದ್ಯಾರ್ಥಿಗಳು ಇಂಥ ಸಂಸ್ಥೆಗಳಿಗೆ ಬಂದು ಸೇರುತ್ತಿದ್ದರು. ಇದರಿಂದಾಗಿ ಪ್ರಿನ್ಸಿಪಾಲರು ಪ್ರತಿಯೊಬ್ಬ ವಿದ್ಯಾರ್ಥಿಯ ಹೆಸರನ್ನೂ ನೆನಪಿನಲ್ಲಿಟ್ಟು ಕೊಳ್ಳುವುದು ಸಾಧ್ಯವಿತ್ತು, ಅಲ್ಲದೆ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ನಡುವೆ ಹೆಚ್ಚಿನ ಒಡನಾಟಕ್ಕೆ ಅವಕಾಶವಿರುತ್ತಿತ್ತು. ಮೊದಲ ದರ್ಜೆಯಲ್ಲಿ ತೇರ್ಗಡೆಯಾಗಿದ್ದುದರಿಂದಾಗಿ ನಿಜಲಿಂಗಪ್ಪ ತನ್ನ ಉಪಾಧ್ಯಾಯರ ಹಾಗೂ ಸಹಪಾಠಿಗಳ ಆದರಕ್ಕೆ ಪಾತ್ರನಾದ. ಸಾಮಾನ್ಯವಾಗಿ, ದೂರದ ಹಳ್ಳಿಗಳಿಂದ ಬಂದ ಹುಡುಗರು ನಗರ ಜೀವನದ ಆಮಿಷ ಗಳಿಗೆ ಬಲಿಯಾಗಿ ಕೆಟ್ಟ ಹವ್ಯಾಸಗಳಿಗೆ ಒಳಗಾಗುವುದು ವಾಡಿಕೆ. ಆದರೆ ಚಿಕ್ಕಂದಿನಲ್ಲಿ ಅನುಭವಿಸಿದ ಕಷ್ಟಕಾರ್ಪಣ್ಯಗಳ ಕಾರಣದಿಂದಾಗಿ ನಿಜಲಿಂಗಪ್ಪ ಹದಗೊಂಡಿದ್ದ, ಹೀಗಾಗಿ ಅವನಿಗೆ ಓದಿನ ಮೇಲೆ ಧ್ಯಾನವೇ ಹೊರತು ಬೇರೇನನ್ನೂ ಅವನು ಗಮನಿಸುತ್ತಿರಲಿಲ್ಲ. ೧೯೨೦ರಲ್ಲಿ ಎಂಟ್ರೆನ್ಸ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಬಳಿಕ ಸೆಂಟ್ರಲ್ ಕಾಲೇಜು ಸೇರಿದ. ತನ್ನ ಹಿಂದಿನ ನಿರ್ಧಾರವನ್ನು ಬದಲಿಸಿ, ಮಾನವಿಕಗಳನ್ನು ಐಚ್ಛಿಕ ವಿಷಯಗಳನ್ನಾಗಿ ಆಯ್ದುಕೊಂಡ. ಆದರೆ ಪಠ್ಯವಿಷಯದಲ್ಲಿ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರದಂತಹ ವಿಜ್ಞಾನ ವಿಷಯಗಳಿಗೂ ಅವಕಾಶವಿತ್ತು. ಆ ನೆಮ್ಮದಿಯ ದಿನಗಳಲ್ಲಿನ ವಿದ್ಯಾರ್ಥಿ ಹವ್ಯಾಸಗಳ ಪರಿಯು ನಾನಾ ಆಕರ್ಷಣೆಗಳಿರುವ ಈಗಿನವರದ ಕ್ಕಿಂತ ಬೇರೆ ರೀತಿಯಿರುತ್ತಿದ್ದವು. ತರಗತಿಗಳಿಲ್ಲದಾಗ ಅವನು ಗ್ರಂಥಾಲಯದಲ್ಲಿಯೋ, ಸಣ್ಣ ಸಣ್ಣ ಗುಂಪುಗಳಲ್ಲಿ ಸಾರ್ವತ್ರಿಕ ಆಸಕ್ತಿಯ ವಿಷಯಗಳ ಬಗ್ಗೆ ಗಂಭೀರ ಚರ್ಚೆ ನಡೆಸುತ್ತಲೋ ಇರುತ್ತಿದ್ದ. ಆಟ-ವ್ಯಾಯಾಮಗಳಂತಹದರಲ್ಲಿ ತೊಡಗಿ ಅವನು ಕಠಿಣ ದೈಹಿಕ ಶ್ರಮಕ್ಕೂ ತನ್ನನ್ನು ಒಡ್ಡಿಕೊಳ್ಳುತ್ತಿದ್ದ. ನಿರಂತರ ಅಭ್ಯಾಸದಿಂದ ನಿಜಲಿಂಗಪ್ಪ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳ ಮೇಲೆ ಒಳ್ಳೆಯ ಪ್ರಭುತ್ವವನ್ನು ಸಂಪಾದಿಸಿದ. ಅಲ್ಲದೆ, ತಮಿಳು ತೆಲುಗು ಹುಡುಗರ ಒಡನಾಟದಿಂದ ಆ ಭಾಷೆಗಳ ತಕ್ಕಮಟ್ಟಿಗಿನ ಪರಿಚಯವೂ ಅವನಿಗಾಯಿತು.

೧೯೨೩ನೇ ಇಸವಿ ಜುಲೈ ೨೩ ರಂದು ಸೆಂಟ್ರಲ್ ಕಾಲೇಜಿನಲ್ಲಿ ತಿಲಕ್ ದಿನ ವನ್ನು ಆಚರಿಸಲಾಯಿತು. 'ಸ್ವಾತಂತ್ರ್ಯ ತಮ್ಮ ಜನ್ಮಸಿದ್ಧ ಹಕ್ಕು' ಎಂದು ಸಾರಿದ್ದ ರಾಷ್ಟ್ರೀಯ ವಾದಿಯ ಹೆಸರಿನ ಆಚರಣೆಗೆ ಸಿದ್ಧತೆಗಳು ನಡೆಯತೊಡಗಿದವು. ಗಾಂಧೀಜಿ ಮತ್ತು ಗಾಂಧಿವಾದಗಳು ಪ್ರಾಮುಖ್ಯಕ್ಕೆ ಬರುವ ಮೊದಲು, ತಿಲಕ್, ಬಿಪಿನ್ ಚಂದ್ರ ಪಾಲ್ ಮತ್ತು ಲಾಲಾ ಲಜಪತ್ ರಾಯ್ ಅವರುಗಳು ರಾಷ್ಟ್ರೀಯ ಚಳವಳಿ ಹಾಗೂ ಕಾಂಗ್ರೆಸ್‌ಗಳಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದವರು. ಈ ಆಚರಣೆಯಿಂದ ಜನರ ರಾಷ್ಟ್ರೀಯ ಭಾವನೆ ಮೊನಚುಗೊಳ್ಳುವುದೆಂದು ನಿರೀಕ್ಷಿಸಲಾಗಿತ್ತು. ದಿನಾಚರಣೆಯ ಬಳಿಕ, ಅಧ್ಯಾಪಕ ರಲ್ಲಿ ಒಬ್ಬರಾದ ಮ್ಯಾಕ್ಲಿಯನ್ ಅವರು ತರಗತಿಯಲ್ಲಿ ವಿದ್ಯಾರ್ಥಿಗಳಲ್ಲಿನ ಚಟುವಟಿಕೆ ದೇಶ ದ್ರೋಹ ಮತ್ತು ಅಶಿಸ್ತುಗಳೆಂದು ಖಂಡಿಸಿ ಮಾತನಾಡಿದರು. ಇದರಿಂದ ಕ್ರೋಧಗೊಂಡ ವಿದ್ಯಾರ್ಥಿ ಸಮೂಹ ನಿಜಲಿಂಗಪ್ಪನ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿತು. ಉನ್ನತ ಅಧಿಕಾರಿಗಳಿಗೆ ಟೆಲಿಗ್ರಾಂಗಳನ್ನು ಕಳಿಸಿ ಬಹಿರಂಗವಾಗಿ ಅಧ್ಯಾಪಕರ ನಡವಳಿಕೆ ಯನ್ನು ಟೀಕಿಸಿದರು. ಇದರಿಂದ ಅಧ್ಯಾಪಕರು ಪ್ರತಿಭಟನೆ ಕೊನೆಗೊಳ್ಳುವ ಮುನ್ನವೇ ವಿಷಾದವನ್ನು ವ್ಯಕ್ತಪಡಿಸುವಂತಾಯಿತು. ಈ ಘಟನೆಯು ತನ್ನ ಜೀವನದಲ್ಲಿ ಮಹತ್ತರ ತಿರುವನ್ನುಂಟುಮಾಡುತ್ತದೆ ಎಂಬುದು ಬಹುಶಃ ನಿಜಲಿಂಗಪ್ಪನಿಗೇ ತಿಳಿದಿರಲಿಲ್ಲ. ಆತ ಗಾಂಧೀಜಿಯವರ 'ಯಂಗ್ ಇಂಡಿಯ'ದ ಕ್ರಮಬದ್ಧ ಓದುಗನಾಗಿದ್ದು, ಗಾಂಧೀಜಿ ಯವರ ಸತ್ಯಾಗ್ರಹದ ಮನೋಭಾವವನ್ನು ಮೈಗೂಡಿಸಿಕೊಂಡಿದ್ದ. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ನೇತೃತ್ವದ ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧಿಯುಗ ಆರಂಭಗೊಂಡಿತ್ತು. ಆ ಹಿಂದೆ ಹೋರಾಟದಲ್ಲಿ ಕಾಂಗ್ರೆಸ್ ಕೇವಲ ಮನವಿ ಸಲ್ಲಿಕೆ ಮತ್ತು ಕೆಲವು ಸಂದರ್ಭಗಳಲ್ಲಿ ಹಿಂಸಾತ್ಮಕ ಪ್ರತಿಭಟನೆಗಳಿಗೆ ಮೊರೆ ಹೋಗಿತ್ತು. ಆದರೆ ಗಾಂಧೀಜಿ ಅದನ್ನು ಸಂಪೂರ್ಣ ಅಹಿಂಸಾತ್ಮಕವಾಗಿಸಿದರು. ಈ ಕಾಲದಲ್ಲಿಯೇ ಗಾಂಧೀಜಿ ಬೆಂಗಳೂರಿಗೆ ಭೇಟಿ ಕೊಟ್ಟರು. ಇತರ ಯುವಜನರಂತೆ ಯುವಕ ನಿಜಲಿಂಗಪ್ಪ ಕೂಡ ಅವರ ಚುಂಬಕ ವ್ಯಕ್ತಿತ್ವಕ್ಕೆ ಮಾರುಹೋದ. ಗಾಂಧೀಜಿಯ ಮಾತುಗಳನ್ನು ಕೇಳಿದ ಮೇಲೆ ತಾನು ಮುಂದೆ ಖಾದಿಯನ್ನು ಮಾತ್ರ ತೊಡುವುದಾಗಿ ನಿರ್ಧರಿಸಿದ.

ನಿಜಲಿಂಗಪ್ಪನಿಗೆ ಚುನಾವಣಾ ರಾಜಕೀಯದ ಮೊದಲ ರುಚಿ ತಿಳಿದದ್ದು ಆತ ತೋಟದಪ್ಪ ಛತ್ರದ ಸಾಹಿತ್ಯ ಸಂಘಕ್ಕೆ ಕಾರ್ಯದರ್ಶಿಯಾಗಲು ಚುನಾವಣೆಯಲ್ಲಿ ಸ್ಪರ್ಧಿಸಿದಾಗ. ಆತನದು ಶುಭ್ರವೂ ಪ್ರಾಮಾಣಿಕವೂ ಆದ ಹೋರಾಟ, ಆದರೆ ಅವನ ಪ್ರತಿಸ್ಪರ್ಧಿಯು ಹೋಟಲಿನಲ್ಲಿ ತಿಂಡಿ ಕೊಡಿಸುವ ಮೂಲಕ ಮತದಾರರಿಗೆ ಲಂಚ ತಿನ್ನಿಸಿದ. ಹಾಗೆಯೇ ಮಾಡುವಂತೆ ನಿಜಲಿಂಗಪ್ಪನ ಬೆಂಬಲಿಗರು ಆತನಿಗೆ ಸೂಚಿಸಿದರು,

ತಾವು ಹಣಕಾಸಿನ ಸಹಾಯ ಮಾಡುವುದಾಗಿಯೂ ಹೇಳಿದರು. ಆದರೆ ಅಂಥ ಭ್ರಷ್ಟಾಚಾರದ ನಡಾವಳಿಯನ್ನಾತ ತಿರಸ್ಕರಿಸಿದ. ನೈತಿಕ ಮೌಲ್ಯಗಳನ್ನಾಧರಿಸಿದ ಇಂಥ ತತ್ವಾಧಾರಿತ ರಾಜಕಾರಣವು ಆತನ ರಾಜಕೀಯ ಜೀವನದ ಪ್ರಮುಖ ನೆಲೆಯಾಯಿತು. ಅವನು ಚುನಾವಣೆಯಲ್ಲಿ ಆಯ್ಕೆಗೊಂಡದ್ದು, ಅವನ ಕಾರ್ಯದರ್ಶಿತ್ವದಲ್ಲಿ ಸಂಘವು ತುಂಬ ಒಳ್ಳೆಯ ಕೆಲಸ ಮಾಡಿದ್ದು, ನಾನಾ ಕಾರ್ಯಕ್ರಮಗಳನ್ನು ನಡೆಸಿದ್ದು. ಇದೇ ಸಂದರ್ಭದಲ್ಲಿಯೇ ಗ್ರಂಥಾಲಯ ಹಾಗೂ ವಾಚನಾಲಯಗಳ ಸೌಲಭ್ಯವನ್ನು ಉತ್ತಮ ಗೊಳಿಸಲು ಒಂದು ನಿಧಿ ಸಂಗ್ರಹದ ಆಂದೋಲನವು ಬಿರುಸಾಗಿ ನಡೆಯಿತು. ಛತ್ರದ ಸ್ಥಾಪಕರ ಸ್ವಂತ ಊರಾದ ಗುಬ್ಬಿಯಿಂದ ಬಂದಿದ್ದ ಅಲ್ಲಿನ ವಿದ್ಯಾರ್ಥಿಗಳು ಬಹುಮತ ದಲ್ಲಿದ್ದರು, ಹೀಗಾಗಿ ಛತ್ರವು ತಮ್ಮ ಇಚ್ಛೆಗನುಗುಣವಾಗಿ ನಡೆಯಬೇಕೆಂಬುದು ಅವರ ನಿರೀಕ್ಷೆಯಾಗಿತ್ತು. ಇಂಥ ಸಂಕುಚಿತ ಭಾವನೆಯಿದ್ದರೆ ಕರ್ನಾಟಕದ ಏಕೀಕರಣ ಅಸಾಧ್ಯ ವಾಗುವುದು, ಅಲ್ಲದೆ ಸಂಕುಚಿತ ಮನೋಭಾವವು ಲಿಂಗಾಯತ ಸ್ಥಾಪಕ ಬಸವಣ್ಣನ ಆದರ್ಶದ ವಿರುದ್ಧವಾದುದು ಎಂದು ನಿಜಲಿಂಗಪ್ಪ ವಾದಿಸಿದ. ಇದು ಪರಿಣಾಮಕಾರಿ ಯಾಯಿತು. ೧೯೨೩ರ ಮೊದಲಲ್ಲಿ ನಿಜಲಿಂಗಪ್ಪನಿಗೆ ಮಲೇರಿಯ ಅಂಟಿಕೊಂಡಿತು, ಹೀಗಾಗಿ ಅವನು ತನ್ನ ಬಿ.ಎ. ಪರೀಕ್ಷೆಯನ್ನು ಮುಗಿಸುವುದು ಕಷ್ಟಕರವಾಯಿತು. ರೋಗಪೀಡಿತನಾಗಿದ್ದರೂ ಆತ ಪರೀಕ್ಷೆ 'ಎ' ವಿಭಾಗವನ್ನು ಎದುರಿಸಿ ಅದರಲ್ಲಿ ತೇರ್ಗಡೆಯಾಗುವುದರಲ್ಲಿ ಸಫಲನಾದ. ಆದರೆ 'ಬಿ' ವಿಭಾಗವನ್ನವನು ಮಾರನೆಯ ವರ್ಷ ಅಂದರೆ ೧೯೨೪ರಲ್ಲಿ ತೆಗೆದುಕೊಳ್ಳಲು ಸಾಧ್ಯವಾಯಿತು. ೧೯೨೪ನೇ ಶೈಕ್ಷಣಿಕ ವರ್ಷದ ಆರಂಭದಲ್ಲಿ ನಿಜಲಿಂಗಪ್ಪ ತನ್ನ ವಾಸ್ತವ್ಯವನ್ನು ಜಯದೇವ ವಿದ್ಯಾರ್ಥಿನಿಲಯಕ್ಕೆ ಬದಲಾಯಿಸಿದ, ಅದರ ಉಸ್ತುವಾರಿ ಹೊತ್ತಿದ್ದವರು ಮೈಸೂರಿನ ಮಾಜಿ ದಿವಾನರೂ ಪ್ರಸಿದ್ಧ ಲಿಂಗಾಯತ ಮುಖಂಡರೂ ಆಗಿದ್ದ ಕೆ.ಪಿ. ಪುಟ್ಟಣ್ಣ ಶೆಟ್ಟರು. ಅವರ ದರ್ಪ ಹಾಗೂ ಸರ್ವಾಧಿಕಾರಿ ಧೋರಣೆಯನ್ನು ವಿದ್ಯಾರ್ಥಿಗಳು ಪ್ರತಿಭಟಿಸಿದರು. ಮುಂದೆ ನಡೆದ ವಿದ್ಯಾರ್ಥಿ–ನಿರ್ವಾಹಕ ಮಂಡಳಿಯ ನಡುವಣ ಮಾತುಕತೆಯಲ್ಲಿ ನಿಜಲಿಂಗಪ್ಪನ ಸುವರ್ಣ ಮಾಧ್ಯಮ ರೀತಿ ಹಾಗೂ ಸಕಾರಣ ವಾದಗಳು ಪುಟ್ಟಣ್ಣಶೆಟ್ಟರ ಮನಸ್ಸನ್ನು ಗೆದ್ದಿತು. ಅವನನ್ನು ಮನೆಗೆ ಕರೆದು ಔತಣ ನೀಡಿ ಅವನಿಗೆ ಭವ್ಯ ಭವಿತವ್ಯವಿದೆಯೆಂದು ಭವಿಷ್ಯ ನುಡಿದರು.

ಅವನು ಬಿ.ಎ. ಪರೀಕ್ಷೆಯನ್ನು ಪಾಸು ಮಾಡಿದಾಗ ಅತ್ಯಂತ ಸಂಭ್ರಮ ಪಟ್ಟವರೆಂದರೆ, ಅವನ ತಾಯಿ ನೀಲಮ್ಮ ಮತ್ತು ಅವನ ಪೋಷಕರಾದ ವೀರಭದ್ರಪ್ಪ ಮತ್ತವರ ಕುಟುಂಬದವರು. ನಿಜಲಿಂಗಪ್ಪನ ಮುಂದೆ ಈಗೊಂದು ಪ್ರಶ್ನೆ ಎದುರಾಯಿತು;

ಮುಂದೇನು? ಓದು ನಿಲ್ಲಿಸಿ ನೌಕರಿ ಹಿಡಿಯುವುದೇ ಅಥವಾ ಮುಂದೆ ವೃತ್ತಿಪರ ವಿದ್ಯಾಭ್ಯಾಸವನ್ನು ಮುಂದುವರೆಸುವುದೇ? ವಾಸ್ತವವಾಗಿ, ನೌಕರಿ ಹಿಡಿಯುವುದರ ಹೊರತು ಅವನ ಮುಂದೆ ಎರಡು ಆಯ್ಕೆಗಳಿದ್ದವು: ಸ್ನಾತಕೋತ್ತರ ಶಿಕ್ಷಣ ಮಾಡುವುದೇ ಅಥವಾ ಕಾನೂನು ಅಭ್ಯಸಿಸುವುದೇ ಎಂಬುದು. ಎರಡರದ್ದೂ ಎರಡು ವರ್ಷಗಳ ಅವಧಿ. ಎರಡಕ್ಕೂ ಹಣದ ಅವಶ್ಯಕತೆಯಿತ್ತು. ನಿಜಲಿಂಗಪ್ಪನ ಮುಂದಿದ್ದ ನೈತಿಕ ಪ್ರಶ್ನೆಯೆಂದರೆ ತನ್ನ ಹಿತೈಷಿಗಳನ್ನು ಇನ್ನಷ್ಟು ಕಾಡುವುದೇ ಎಂಬುದು! ಅವನ ಕೆಲವು ಆಪ್ತರು ಕೆಲಸ ಹುಡುಕುವಂತೆ ಸಲಹೆಯಿತ್ತರು, ಆ ಸಮಯದಲ್ಲಿ ಪದವೀಧರನಿಗೆ ತಕ್ಕಮಟ್ಟಿಗೆ ಒಳ್ಳೆಯ ನೌಕರಿ ದೊರೆಯುತ್ತಿತ್ತು. ಈ ಹೊತ್ತಿಗೆ ಅವನು ಗಾಂಧಿ ಮಾದರಿಯ ಊಟೋಪಚಾರದ ಪದ್ಧತಿಯನ್ನು ಅಳವಡಿಸಿಕೊಂಡಿದ್ದ, ಶಿಸ್ತುಬದ್ಧನಾಗಿದ್ದ ಮತ್ತು ಎಲ್ಲದರಲ್ಲಿಯೂ ಸಮತೂಕದ ಮನೋಭಾವದವನಾಗಿದ್ದ. ಮುಂದೆ ದೇಶ ಸೇವೆಗೆ ಅನುಕೂಲಕರವಾಗುತ್ತದೆಂಬ ಕಾರಣದಿಂದ ಅವನು ವಕೀಲಿ ವೃತ್ತಿಯನ್ನು ಕೈಗೊಳ್ಳಲು ನಿರ್ಧರಿಸಿದ. ಅಲ್ಲದೆ ಮೊದಲಿನಿಂದ ಅವನಿಗೆ ಸರ್ಕಾರಿ ನೌಕರಿಯ ಬಗ್ಗೆ ಅನಾದರ. ವಕೀಲನ ವೃತ್ತಿಯು ಅಂಥ ಲಾಭದಾಯಕವಲ್ಲವೆಂಬ ಅರಿವು ಅವನಿಗಿತ್ತು; ಆದರೆ ನಿಜಲಿಂಗಪ್ಪನಿಗೆ ಆರ್ಥಿಕ ಅಭಿವೃದ್ಧಿಯೇ ಜೀವನದ ಗುರಿ ಎಂಬ ಭಾವನೆಯಿರಲಿಲ್ಲ. ಕಾನೂನು ಓದಬೇಕೆಂಬ ತನ್ನ ಹಂಬಲವನ್ನು ವ್ಯಕ್ತಡಿಸಿದಾಗ, ವೀರಭದ್ರಪ್ಪನವರು ಹಾಗೂ ಶ್ರೀ ಜಯದೇವ ಮುರುಘರಾಜೇಂದ್ರ ಸ್ವಾಮಿಗಳು ಅವನಿಗೆ ಹಣಕಾಸಿನ ಬೆಂಬಲ ನೀಡುವ ಭರವಸೆಯಿತ್ತರು. ಆಗ ಕರ್ನಾಟಕ ಪರಿಸ್ಥಿತಿ ಎಷ್ಟರ ಮಟ್ಟಿಗಿದ್ದಿತೆಂದರೆ, ಇಲ್ಲಿ ಒಂದಾದರೂ ಕಾನೂನು ಕಾಲೇಜಿರಲಿಲ್ಲ, ಹೀಗಾಗಿ ಕಾನೂನು ಅಭ್ಯಾಸ ಮಾಡಲು ವಿದ್ಯಾರ್ಥಿಗಳು ಪೂನಾಕ್ಕೋ ಮದರಾಸಿಗೋ ಹೋಗಬೇಕಾಗಿತ್ತು. ರುದ್ರಪ್ಪ ಮತ್ತಿತರ ಅವನ ಹಿತೈಷಿಗಳು ಹಣ ಸಂಗ್ರಹ ಮಾಡಿ ಅವನನ್ನು ಪೂನಾಕ್ಕೆ ಕಳಿಸಿದರು. ಆಗ ಅಲ್ಲಿನ ಫರ್ಗ್ಯುಸನ್ ಕಾಲೇಜು ಇಡೀ ದಕ್ಷಿಣ ದೇಶದಲ್ಲಿಯೇ ಕಾನೂನು ಅಧ್ಯಯನಕ್ಕೆ ತುಂಬ ಪ್ರಸಿದ್ಧವಾಗಿತ್ತು. ಬಹುತೇಕ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗದೇ ಸುಳ್ಳು ಹಾಜರಾತಿ ಪಡೆಯುತ್ತಿದ್ದರು. ಆದರೆ ನಿಜಲಿಂಗಪ್ಪ ಅದನ್ನೆಂದೂ ಬೇಕೆಂದು ಮಾಡಲಿಲ್ಲ, ಆದರೆ ಆಗೊಮ್ಮೆ ಈಗೊಮ್ಮೆ ಹಣಕಾಸಿನ ಮುಗ್ಗಟ್ಟಿನಿಂದಾಗಿ ಕಾಲೇಜಿಗೆ ಹಾಜರಾಗಲು ಸಾಧ್ಯವಾಗುತ್ತಿರಲಿಲ್ಲ. ಎಂದಿನಂತೆ ಆತ ಕಾನೂನು ವಿಷಯಗಳನ್ನು ಶ್ರದ್ಧೆಯಿಂದ ಅಭ್ಯಾಸ ಮಾಡುತ್ತಿದ್ದುದಲ್ಲದೆ, ಪಾಶ್ಚಾತ್ಯ ಅಭಿಜಾತ ವೈಚಾರಿಕ ಕೃತಿಗಳನ್ನೂ ಓದುತ್ತಿದ್ದ. ಮರಾಠಿಯ ಅಲ್ಪಸ್ವಲ್ಪ ತಿಳಿವಳಿಕೆಯೂ ಅವನಿಗೆ ಬಂದಿತು. ದೇಹ ಮನಸ್ಸುಗಳೆರಡನ್ನೂ ಶ್ರಮಕ್ಕೆ ಒಡ್ಡಿಕೊಂಡ. ಕ್ರಿಕೆಟ್ ಮತ್ತು ಟೆನಿಸ್‌ಗಳನ್ನಾಡುತ್ತಿದ್ದ, ನಾಟಕಗಳನ್ನು ನೋಡುತ್ತಿದ್ದ, ಕರ್ನಾಟಕ ಹಾಗೂ ಉತ್ತರಾದಿ ಶಾಸ್ತ್ರೀಯ ಸಂಗೀತ ಕಚೇರಿಗಳಿಗೆ

ಹೋಗುತ್ತಿದ್ದ. ವಾಸ್ತವವಾಗಿ ಅವನೊಬ್ಬ ಶಾಸ್ತ್ರೀಯ ಸಂಗಿತ ರಸಿಕನಾದ. ಅವನು ವರ್ಣಚಿತ್ರಕಲೆಯನ್ನೂ ಅಭ್ಯಾಸ ಮಾಡಿದ. ಕೇವಲ ಆಟಕ್ಕಷ್ಟೇ ಅವನ ಕ್ರೀಡಾಪಟುತ್ವ ಸೀಮಿತವಾಗಿರಲಿಲ್ಲ, ಜೀವನದಲ್ಲಿಯೂ ಕ್ರೀಡಾ ಮನೋಭಾವವನ್ನು ಅಳವಡಿಸಿಕೊಂಡ. ಪೂನಾದಲ್ಲಿದ್ದಾಗ ಅವನು ಗಾಂಧೀಜಿಯವರ ಕೃತಿಗಳನ್ನು ಓದಲು ತೊಡಗಿದ ಮತ್ತು ಒಬ್ಬ ಗಾಂಧಿವಾದದ ಮನೋಭಾವ ಬೆಳೆಸಿಕೊಂಡ. ಆಹಾರ ಮತ್ತಿತರ ವಿಷಯಗಳಲ್ಲಿ ಗಾಂಧಿಯವರು ಹೇಳಿದ ಸೂತ್ರಗಳಿಗೆ ಅವನು ಬದ್ಧನಾಗಿದ್ದ.

ಮೈಸೂರು ಕಡೆಯಿಂದ ಬಂದಿದ್ದ ವಿದ್ಯಾರ್ಥಿಗಳಲ್ಲಿ ಬಹುಮಂದಿ ಯೋಗಾಶ್ರಮ ವಸತಿನಿಲಯಲ್ಲಿದ್ದರು. ಮೈಸೂರು ಹಾಗೂ ಮರಾಠಿ ವಿದ್ಯಾರ್ಥಿಗಳ ನಡುವೆ ಪದೇ ಪದೇ ಘರ್ಷಣೆಗಳುಂಟಾಗುತ್ತಿದ್ದವು. ಒಮ್ಮೆ ಇದು ಎಷ್ಟು ಅತಿಗೇರಿತೆಂದರೆ, ಮೈಸೂರು ವಿದ್ಯಾರ್ಥಿಗಳು ಮೈಸೂರು ವಸತಿನಿಲಯವನ್ನು ತೆರೆಯಲು ಮುಂದಾದರು. ಈ ವಿಷಯದ ಬಗ್ಗೆ ನಿಜಲಿಂಗಪ್ಪ ಆಸಕ್ತಿ ತಾಳಿ ಅವನೇ ಅದರ ಉಸ್ತುವಾರಿಯ ಹೊಣೆ ಹೊತ್ತ. ಮೈಸೂರಿನಿಂದ ಸುಬ್ಬಣ್ಣ ಎಂಬೊಬ್ಬ ಅಡುಗೆಯವನನ್ನು ಕರೆತಂದರು; ವಸತಿ ನಿಲಯದ ಊಟ ಸ್ಥಳೀಯರಲ್ಲಿಯೂ ಹೆಸರುವಾಸಿಯಾಯಿತು. ನಿಜಲಿಂಗಪ್ಪನ ಕಾರ್ಯದರ್ಶಿತ್ವದಲ್ಲಿ ವಸತಿನಿಲಯವು ಒಂದು ಸಡಗರದ ಸಾಂಸ್ಕೃತಿಕ ಕೇಂದ್ರವಾಯಿತು, ನಿಲಯದ ವಿದ್ಯಾರ್ಥಿಗಳು ಕೈಲಾಸಂ ಅವರ 'ಟೊಳ್ಳುಗಟ್ಟಿ' ನಾಟಕವನ್ನು ಪ್ರದರ್ಶಿಸಿದರು. ನಿಜಲಿಂಗಪ್ಪನೇ ನಾಟಕದ ನಿರ್ದೇಶನ ಹೊತ್ತಿದ್ದವನು, ಜೊತೆಗೆ ಅದರಲ್ಲಿ ನಾಯಕನ ಪಾತ್ರವನ್ನೂ ವಹಿಸಿದ್ದ. ಹಲವಾಗಿಲಿನಲ್ಲಿದ್ದಾಗಲೇ ಅವನು ಈಜು ಕಲಿತಿದ್ದ, ಹೀಗಾಗಿ ರಜೆ ಸಿಕ್ಕಿದಾಗ ನಗರದ ಮಧ್ಯದಲ್ಲಿದ್ದ ಕೆರೆಯಲ್ಲಿ ಈಜಿನಲ್ಲಿ ಸಾಕಷ್ಟು ಕಾಲ ಕಳೆಯುತ್ತಿದ್ದ. ಒಮ್ಮೆ ಮುಳುಗುತ್ತಿದ್ದ ಹುಡುಗನೊಬ್ಬನನ್ನು ಉಳಿಸಲು ನೀರಿಗೆ ದುಮುಕಿ ಅವನೊಬ್ಬ ಹೀರೋ ಆದ.

೧೯೨೪ರ ಡಿಸೆಂಬರ್‌ನಲ್ಲಿ ಕರ್ನಾಟಕದ ಬೆಳಗಾವಿಯಲ್ಲಿ ಒಂದು ಐತಿಹಾಸಿಕ ಸಂಗತಿ ಜರುಗಿತು. ಆಗ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ವಾರ್ಷಿಕ ಸಮ್ಮೇಳನದ ಸಮಯ. ಸ್ವಾತಂತ್ರ್ಯಪೂರ್ವ ದಿನಗಳಲ್ಲಿ ಕಾಂಗ್ರೆಸ್‌ನ ವಾರ್ಷಿಕ ಸಮ್ಮೇಳನ ನಿಜವಾಗಿಯೂ ಒಂದು ರಾಷ್ಟ್ರೀಯ ಘಟನೆಯಾಗಿತ್ತು, ಸ್ವಾತಂತ್ರ್ಯ ಬಂದನಂತರ ಆದಂತೆ ಅದೊಂದು ಪಕ್ಷದ ಕಾರ್ಯಕ್ರಮವಾಗಿರಲಿಲ್ಲ. ಬೆಳಗಾವಿ ಕಾಂಗ್ರೆಸ್ ಸಮ್ಮೇಳನದ ವಿಶೇಷವೆಂದರೆ ಅದು ಮಹಾತ್ಮಾ ಗಾಂಧೀಜಿ ಅಧ್ಯಕ್ಷತೆ ವಹಿಸಿದ್ದ ಏಕೈಕ ಸಮ್ಮೇಳನವಾಗಿದ್ದುದು. ಈ ಹೊತ್ತಿಗೆ ನಿಜಲಿಂಗಪ್ಪ ಕಾಂಗ್ರೆಸ್‌ನ ಒಬ್ಬ ಸಾಮಾನ್ಯ ಸದಸ್ಯನಾಗಿದ್ದ. ಹಿರಿಯ ನಾಯಕರ ಭಾಷಣಗಳನ್ನು ಕೇಳುವುದರೊಂದಿಗೆ ಗಾಂಧೀಜಿಯವರನ್ನು ಹತ್ತಿರದಿಂದ ನೋಡಬಹು

ದೆಂಬ ಕಾರಣಕ್ಕೆ ಅವನು ಈ ಸಮ್ಮೇಳನಕ್ಕೆ ಹೋಗಲು ಉತ್ಸುಕನಾದ. ಆದರೆ ಪ್ರತಿನಿಧಿ ಶುಲ್ಕ ತೆರಬೇಕಾಗಿತ್ತು, ಜೊತೆಗೆ ಪ್ರಯಾಣದ ಹಾಗೂ ಊಟ ವಸತಿಗಳ ವೆಚ್ಚ ಬೇರೆ. ಅವನ ಅದೃಷ್ಟಕ್ಕೆ, ಶ್ರೀಮಂತರೊಬ್ಬರ ಮಗನಾಗಿದ್ದ ಸಹಪಾಠಿಯೊಬ್ಬ ಅವನ ವೆಚ್ಚಕ್ಕೆ ಬೇಕಾದ ಹಣವನ್ನು ಕೊಡಲು ಮುಂದೆ ಬಂದ. ಈ ಮಹಾ ಸಂದರ್ಭಕ್ಕೆಂದು ಆ ಮಹನೀಯರು ಕಿರಿಯರಿಬ್ಬರನ್ನೂ ಕರೆದೊಯ್ದರು. ಮಿತವ್ಯಯದ ಕಾರಣದಿಂದಾಗಿ ಇಬ್ಬರೂ ಒಂದೇ ಪ್ರವೇಶ ಪತ್ರವನ್ನು ಹಂಚಿಕೊಳ್ಳಲು, ಅಂದರೆ ಪ್ರತಿನಿತ್ಯ ಒಬ್ಬೊಬ್ಬರು ಎರಡೆರಡು ಗಂಟೆಗಳ ಕಾಲ ಮಾತ್ರ ಹಾಜರಾಗಲು ನಿರ್ಧರಿಸಿದರು. ಇದು ನಿಜಲಿಂಗಪ್ಪನ ಮೇಲೆ ಅದ್ಭುತ ಪ್ರಭಾವವನ್ನು ಬೀರಿರುವುದರಲ್ಲಿ ಯಾವ ಸಂಶಯವೂ ಇಲ್ಲ, ಅದರಲ್ಲಿಯೂ ನಾಯಕರುಗಳ ಭಾಷಣಗಳನ್ನು ಕೇಳುವ ಮತ್ತು ಅವರನ್ನು ಸನಿಹದಿಂದ ನೋಡುವ ಈ ಮನೋಭಾವವು ಅವನ ಅಂತರಂಗದ ಮಾರ್ಪಾಡಿಗೆ ಕಾರಣವಾಗಿರ ಬೇಕು. ಅಧ್ಯಯನಕ್ಕೆ ಅವನು ಮರಳಿ ಪೂನಾಕ್ಕೆ ಬಂದಾಗ, ತಾನಿನ್ನೂ ಬೆಳಗಾವಿ ಕಾಂಗ್ರೆಸ್ ಸಮ್ಮೇಳನದಲ್ಲಿಯೇ ಇರುವ ಹಾಗೆ ನಡೆದುಕೊಳ್ಳತೊಡಗಿದ! ಅವನ ಕಿವಿಗಳಲ್ಲಿ ಅಲ್ಲಿನ ದನಿಯೇ ಗುಂಯ್‌ಗುಡುತ್ತಿತ್ತು, ಕಣ್ಣುಗಳಲ್ಲಿ ಅಲ್ಲಿನ ದೃಶ್ಯಗಳೇ ಕಟ್ಟಿದ್ದವು. ಅವನ ನೆನಪುಗಳ ಸರಮಾಲೆಯ ಕೇಂದ್ರಬಿಂದು ವಿರಾಜಮಾನವಾದ್ದುದು ಗಾಂಧೀಜಿಯೇ ಆಗಿದ್ದವು. ಭಾರತದ ರಾಷ್ಟ್ರೀಯ ಚಳವಳಿಯ ಚರಿತ್ರೆಯಲ್ಲಿ ಗಾಂಧಿ ಯುಗ ಆರಂಭ ಗೊಂಡಿತ್ತು. ಸತ್ಯ ಅಹಿಂಸೆಗಳಂತಹ ಗಾಢ ಆಧ್ಯಾತ್ಮಿಕ ಭಾರತೀಯ ಮೌಲ್ಯಗಳನ್ನಾ ಧರಿಸಿದ ಭಾರತೀಯ ರಾಷ್ಟ್ರೀಯತೆಯ ದರ್ಶನವೊಂದನ್ನು ಗಾಂಧೀಜಿ ರೂಪಿಸಿದ್ದರು. ವ್ಯಾವಹಾರಿಕ ನೆಲೆಯಲ್ಲಿ, ಈ ಭಾರತೀಯ ದರ್ಶನದಲ್ಲಿ ಅಸಂಖ್ಯ ಸ್ಥಾನಿಕ ಗಣರಾಜ್ಯ ಗಳು ತುಂಬಿದ್ದವು, ಅವುಗಳಲ್ಲಿ ಪ್ರತಿಯೊಂದೂ ತನ್ನ ಬದುಕನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯವುಳ್ಳ ಘಟಕವಾಗಿತ್ತು. ಗಾಂಧೀಜಿಯ ದೃಷ್ಟಿಯಲ್ಲಿ, ಸ್ವಾತಂತ್ರ್ಯವೆಂದರೆ ಕೇವಲ ರಾಜಕೀಯ ಬಿಡುಗಡೆಯಲ್ಲ, ತನ್ನ ಆಧ್ಯಾತ್ಮಿಕ ಹಾಗೂ ನೈತಿಕ ಪರಂಪರೆಯಲ್ಲಿ ಆಳವಾಗಿ ಬೇರುಬಿಟ್ಟ ರಾಷ್ಟ್ರವೊಂದರ ನಿರ್ಮಾಣ. ಗಾಂಧೀಜಿಯ ಕುರುಡು ಅನುಯಾಗ ದಿದ್ದರೂ, ಇಂದಿಗೂ ನಿಜಲಿಂಗಪ್ಪ ನಿಷ್ಠಾವಂತ ಗಾಂಧೀವಾದಿಯಾಗಿದ್ದಾರೆ.

೧೯೨೬ರಲ್ಲಿ ನಿಜಲಿಂಗಪ್ಪ ತನ್ನ ಎರಡನೆಯ ವರ್ಷದ ಕಾನೂನು ಪರೀಕ್ಷೆಯನ್ನು ಎದುರಿಸಿದ. ಅವನಿಗೆ ಪರೀಕ್ಷೆ ದೊಡ್ಡ ಸವಾಲೇನಾಗಿರಲಿಲ್ಲ, ಪಠ್ಯಪುಸ್ತಕಗಳ ಜೊತೆಗೆ ಇನ್ನೂ ಬೇಕಾದಷ್ಟನ್ನು ಓದಿಕೊಂಡ ಆತ ಕಾನೂನಿನ ಸೂಕ್ಷ್ಮತೆಗಳನ್ನು ಕರತಲಾಮಲಕ ಮಾಡಿಕೊಂಡಿದ್ದ. ಆತನ ಕಾನೂನು ಅಧ್ಯಯನ ಕೊನೆಗೊಂಡಿತು, ವಕೀಲಿ ವೃತ್ತಿಯನ್ನು ಕೈಗೊಳ್ಳಲು ಆತ ಚಿತ್ರದುರ್ಗಕ್ಕೆ ಮರಳಿದ. ಈ ವೃತ್ತಿಯು ನಿಜಲಿಂಗಪ್ಪನಿಗೆ ಸೂಕ್ತವಾದು ದಲ್ಲವೆಂದು ಅವನ ಗೆಳೆಯರನೇಕರು ಭಾವಿಸಿದ್ದರು, ಅದಕ್ಕೆ ಕಾರಣ ನಿಜಲಿಂಗಪ್ಪನ

ಪ್ರಾಮಾಣಿಕತೆ, ಸರಳತೆ, ಸತ್ಯಸಂಧತೆ ಮತ್ತು ನೇರ ನಡವಳಿಕೆಗಳು. ಇಂಥ ಆದರ್ಶಗಳಿಂದ ಸಾಮಾನ್ಯವಾಗಿ ವಕೀಲರು ಅನುಸರಿಸುತ್ತಿದ್ದ ನಯವಿಹೀನ ವಕೀಲಿಯನ್ನೆದುರಿಸಲು ಕಷ್ಟವಾಗುವುದೆಂಬುದು ಅವರ ಅಭಿಪ್ರಾಯ. ಆದರೆ ನಿಜಲಿಂಗಪ್ಪ ಈ ವೃತ್ತಿಯನ್ನು ಆರಿಸಿಕೊಂಡದ್ದು ಅದು ಹಣ ಮಾಡುವ ವೃತ್ತಿಯೆಂದಾಗಲೀ ಭಾರಿ ವಕೀಲನೆನ್ನಿಸಿಕೊಳ್ಳ ಬೇಕೆಂಬ ಚಪಲದಿಂದಾಗಲೀ ಅಲ್ಲ, ಈ ಮೂಲಕ ಸಮಾಜ ಹಾಗೂ ರಾಷ್ಟ್ರಕ್ಕೆ ಸೇವೆಯನ್ನು ಸಲ್ಲಿಸುವ ಅವಕಾಶಗಳಿವೆ ಎಂಬ ಕಾರಣದಿಂದ. ಓದಿದ ಹದಿನಾರು ವರ್ಷಗಳ ಬಳಿಕ ತನ್ನ ತಾಯಿಯ ಆಶೀರ್ವಾದ ಪಡೆಯಲು ಆತ ಹಲವಾಗಿಲಿಗೆ ಹೋದಾಗ, ಪುಷ್ಟವಾಗಿ ಬೆಳೆದು ಬೌದ್ಧಿಕ ತೇಜಸ್ಸುಗಳಿಂದ ಆಕರ್ಷಕವಾಗಿದ್ದ ಮಗನನ್ನು ಕಂಡು ಅವನ ತಾಯಿಗಾದ ಆನಂದಕ್ಕೆ ಪಾರವೇ ಇರಲಿಲ್ಲ. ಮಗನ ಈ ಆಗಮನ ತುಂಬ ಮಹತ್ವದ್ದಾಗಿತ್ತು, ನಿಜಲಿಂಗಪ್ಪ ಇಲ್ಲಿ ತನ್ನ ಹಿಂದಿನ ಅನುಭವಗಳನ್ನು ಮೆಲುಕು ಹಾಕತೊಡಗಿದ. ಸೆಂಟ್ರಲ್ ಕಾಲೇಜಿನ ಅಧ್ಯಾಪಕರುಗಳೂ ಅವನ ನೆನಪಿಗೆ ಬಂದರು. ಅವನ ನೆನಪಿನಲ್ಲಿ ಅಚ್ಚೊತ್ತಿದ್ದುದೆಂದರೆ ಅಸಾಮಾನ್ಯ ವಿದ್ವಾಂಸರಾಗಿದ್ದ ಅವನ ಕನ್ನಡ ಪ್ರಾಧ್ಯಾಪಕ ವೆಂಕಣ್ಣಯ್ಯನವರು. ಹಿಂದಿನದನ್ನೆಲ್ಲ ಬದಿಗಿಟ್ಟು ಅವನು ಮುಂದಿನದರ ಬಗ್ಗೆ ಗಮನ ನೀಡಿದ. ವಿದ್ಯಾರ್ಥಿದೆಸೆಯ ಸುವರ್ಣಕಾಲ ಮುಗಿದಿತ್ತು, ಅವನು ಮುಂದೆ ದುಡಿಯುವ ವ್ಯಕ್ತಿಯಾಗಿ ಗೃಹಸ್ಥನಾಗಿ ಜೀವನ ಆರಂಭಿಸಬೇಕಾಗಿತ್ತು. ಅವನೀಗ ತನ್ನದೇ ಕುಟುಂಬ-ಮನೆಗಳನ್ನು ಹೊಂದುವ ಸ್ಥಿತಿಯಲ್ಲಿದ್ದ.

*

[ಈ ಅಧ್ಯಾಯ ಮತ್ತು ಮುಂದಿನದು ದೇಜಗೌ ಅವರ 'ಕರ್ನಾಟಕ ರೂವಾರಿ' ಎಂಬ ಹೆಸರಿನ ನಿಜಲಿಂಗಪ್ಪನವರ ಜೀವನಚರಿತ್ರೆಗೆ ಆಭಾರಿಯಾಗಿದೆ. ಆದರೆ ಅಲ್ಲಿನಿಂದ ಆಯ್ದ ವಿಷಯವು ಅಲ್ಲಿನ ರೀತಿಯಲ್ಲಿಯೇ ವ್ಯಾಖ್ಯಾನ ಹಾಗೂ ನಿರೂಪಣೆಗಳನ್ನು ಹೊಂದಿಲ್ಲ.]

೨

ವಕೀಲಿ ಹಾಗೂ ಗೃಹಸ್ಥಾಶ್ರಮ ಪ್ರವೇಶ

ವಕೀಲಿ ವೃತ್ತಿಯನ್ನು ಕೈಗೊಳ್ಳಲು ಕೇವಲ ಕಾನೂನು ಪದವಿ ಹಾಗೂ ವಕೀಲಿ ವೃತ್ತಿ ಅನುಸರಿಸುವ ಸನ್ನದು ಅಥವಾ ಸರ್ಕಾರದ ಅನುಮತಿಗಳಿದ್ದರೆ ಸಾಲದು. ಒಬ್ಬ ಹಿರಿಯ ವಕೀಲರ ಬಳಿ ಕಿರಿಯ ವಕೀಲನಾಗಿ ತರಬೇತಿಯನ್ನು ಪಡೆದು ವೃತ್ತಿಯ ಸುಳುಹು ಸೂಕ್ಷ್ಮಗಳನ್ನು ಕಲಿಯಬೇಕು. ಈ ನಮ್ಮ ಕಿರಿಯ ವಕೀಲಿ ಪದವೀಧರರು ತಾವು ಸಹಾಯಕರಾಗಿ ಕೆಲಸ ನಿರ್ವಹಿಸಬಲ್ಲ ಅಂಥ ಒಬ್ಬ ಹಿರಿಯ ವಕೀಲರಿಗಾಗಿ ಹುಡುಕಾಟ ನಡೆಸಿದರು. ಆ ಕಾಲದಲ್ಲಿ ಊರಲ್ಲಿದ್ದ ಹಿರಿಯ ಹಾಗೂ ಅನುಭವೀ ವಕೀಲರೆಲ್ಲ ಬ್ರಾಹ್ಮಣ ಸಮುದಾಯಕ್ಕೆ ಸೇರಿದವರಾಗಿದ್ದರು. ಬ್ರಾಹ್ಮಣ ಹಾಗೂ ಲಿಂಗಾಯತ ವಕೀಲರ ನಡುವಣ ವೃತ್ತಿ ಪೈಪೋಟಿ ಆಗ ಹರಿತವಾಗಿತ್ತು, ಹೀಗಾಗಿ ಅವರನ್ನು ಕಿರಿಯ ವಕೀಲನನ್ನಾಗಿ ತೆಗೆದುಕೊಳ್ಳಲು ಯಾವ ಬ್ರಾಹ್ಮಣ ವಕೀಲನೂ ಸಿದ್ಧನಿರಲಿಲ್ಲ. ಅದನ್ನು ಅವರಾರೂ ಹೊರಗೆ ಅಂದು ತೋರಿಸಿಕೊಳ್ಳದಿದ್ದರೂ, ಯಾವುದಾದರೂ ಒಂದು ಕುಂಟುನೆಪದಿಂದ ಸಹಾಯಕನಾಗಿ ತೆಗೆದುಕೊಳ್ಳಲು ನಿರಾಕರಿಸಿ ತಮ್ಮ ಸಂಕುಚಿತ ಮನೋಭಾವವನ್ನು ತೋರಿಸಿಕೊಳ್ಳುತ್ತಿದ್ದರು. ಇದಕ್ಕೆ ಎದೆಗುಂದದ ನಿಜಲಿಂಗಪ್ಪ ತಮ್ಮ ಸಹಜ ಧೈರ್ಯ ಹಾಗೂ ಮುನ್ನಗ್ಗುವ ಸ್ವಭಾವದಿಂದಾಗಿ ಸಾಂಪ್ರದಾಯಿಕವಾದ ತರಬೇತಿಯನ್ನು ಪಡೆಯದೆಯೇ ಸ್ವತಂತ್ರವಾಗಿ ವಕೀಲಿವೃತ್ತಿಯನ್ನಾ

ರಂಭಿಸಲು ನಿರ್ಧರಿಸಿದರು. ವಕೀಲಿವೃತ್ತಿಯ ಸನ್ನದನ್ನು ಅವರು ೧೯೨೬ರಲ್ಲಿ ಪಡೆದರು. ಆಶ್ಚರ್ಯವೆಂಬಂತೆ, ವಕೀಲಿವೃತ್ತಿ ಆರಂಭಿಸಿ ಕಪ್ಪು ಕೋಟು ಧರಿಸಿದ ಮೊದಲ ದಿನವೇ ಅವರ ಬಳಿ ಕಕ್ಷಿದಾರನೊಬ್ಬ ಬಂದ. ಅದೊಂದು ಸರಳ ಕೇಸು: ಪ್ರಾಮಿಸರಿ ನೋಟಿನ ಆಧಾರದ ಮೇಲೆ ಒಂದು ಸಾವಿರ ರೂಪಾಯಿಯ ಸಾಲವನ್ನು ವಸೂಲಿ ಮಾಡುವಂಥದು. ಇದು ತಮ್ಮ ಮೊದಲ ಕೇಸಾದ್ದರಿಂದ, ನ್ಯಾಯಾಲಯದಲ್ಲಿ ಕೇಸನ್ನು ದಾಖಲಿಸುವುದು ಹೇಗೆಂಬ ಬಗ್ಗೆ ನಿಜಲಿಂಗಪ್ಪನವರಿಗೆ ತಿಳಿದಿರಲಿಲ್ಲ. ಈ ವಿಷಯದಲ್ಲಿ ಅವರ ಸಹಾಯಕ್ಕೆ ಬಂದವರು ನ್ಯಾಯಾಲಯದ ನಿವೃತ್ತ ಗುಮಾಸ್ತರೊಬ್ಬರು. ನಿಜಲಿಂಗಪ್ಪನವರ ಸದ್ಬುದ್ಧಿ ಎಂತದ್ದೆಂದರೆ, ತಾವು ಕೇಸಿನ ಶುಲ್ಕವಾಗಿ ಪಡೆದ ಇಪ್ಪತ್ತೈದು ರೂಪಾಯಿಗಳಲ್ಲಿ ಐದು ರೂಪಾಯಿಗಳನ್ನು ಆ ಗುಮಾಸ್ತರಿಗೆ ಕೊಟ್ಟರು! ಆದರೆ ಆತ ತನ್ನ ಅತ್ಯಲ್ಪ ಸಹಾಯಕ್ಕೆ ಇಂಥ ಮೊತ್ತವನ್ನು ನಿರೀಕ್ಷಿಸಿರಲಿಲ್ಲ, ಹೀಗಾಗಿ ಅದನ್ನವರು ಒಪ್ಪಲಿಲ್ಲ. ಆದರೆ ನಿಜಲಿಂಗಪ್ಪ ಆ ಹಿರಿಯರನ್ನು ಬಲವಂತವಾಗಿ ಒಪ್ಪಿಸಿದರು. ಉಳಿದಿದ್ದರಲ್ಲಿ ಮತ್ತೆ ಐದು ರೂಪಾಯಿಗಳನ್ನು ವೆಚ್ಚ ಮಾಡಿ ತಮ್ಮ ಹೆಸರಿನ ಫಲಕವನ್ನು ಬರೆಯಿಸಿ ವೀರಭದ್ರಪ್ಪನವರ ಮನೆಯ ಹಿಂದುಗಡೆ ಅವರಿದ್ದ ಮನೆಯಲ್ಲಿ ತೂಗು ಹಾಕಿದರು.

ಈ ರೀತಿ ಸಂಪಾದನೆ ಮಾಡಲು ತೊಡಗಿದ ಬಳಿಕ ನಿಜಲಿಂಗಪ್ಪನವರು, ಇನ್ನು ಮುಂದೆ ಹಿತೈಷಿಗಳಾದ ವೀರಭದ್ರಪ್ಪನವರಿಗೆ ಹೊರೆಯಾಗದಿರಲು ನಿರ್ಧರಿಸಿ ಒಂದು ಬಾಡಿಗೆ ಮನೆಯಲ್ಲಿ ವಾಸಿಸುವ ತೀರ್ಮಾನ ತೆಗೆದುಕೊಂಡರು. ಆದರೆ ವೀರಭದ್ರಪ್ಪನವರು ಇದಕ್ಕೆ ಒಪ್ಪಲಿಲ್ಲ, ಇನ್ನು ಮುಂದೆ ನಿಜಲಿಂಗಪ್ಪನವರಿಗೆ ತಮ್ಮ ಮನೆಯ ಕುಟುಂಬದವರಲ್ಲಿ ಒಬ್ಬರಾಗಿರಲು ಇಷ್ಟವಿಲ್ಲವೆಂಬ ಅನಿಸಿಕೆಯೇ ಎಂದು ಕೇಳಿದರು. ಬಲವಂತ ಮಾಡಿದ ಬಳಿಕ, ನಮ್ಮ ಈ ಹೊಸ ವಕೀಲರು ಬೇರೆ ಹೋಗುವ ತಮ್ಮ ನಿರ್ಧಾರವನ್ನು ಮದುವೆಯಾಗಿ ಬೇರೆ ಮನೆ ಮಾಡುವವರೆಗೂ ಮುಂದೆ ಹಾಕಿದರು. ತಮಗೆ ಸಹಜವಾಗಿದ್ದ ಶ್ರದ್ಧೆ ಮತ್ತು ಬದ್ಧತೆಗಳಿಂದಾಗಿ ನಿಜಲಿಂಗಪ್ಪ ನವರು ತಮ್ಮ ಹೊಸ ಬಾಳನ್ನು ಕಟ್ಟಿಕೊಳ್ಳತೊಡಗಿದರು. ಪ್ರಾಮಾಣಿಕತೆ ಹಾಗೂ ಕಠಿಣ ಶ್ರಮಗಳ ಮೂಲಕ ಹಣ ಸಂಪಾದಿಸಲು ಸಾಧ್ಯವೆಂಬ ನಂಬಿಕೆ ಅವರದು, ಆದರೆ ಅವರಿಗೆ ಹಣಸಂಪಾದನೆಯೆಂಬುದು ಕಾಯಕ ನಿರ್ವಹಣೆಯ ಸಂತೋಷದಲ್ಲಿ ಒಂದು ಸಣ್ಣ ಭಾಗ ಮಾತ್ರ, ಈ ವಿಷಯದಲ್ಲಿ ಅವರು ಅನುಸರಿಸುತ್ತಿದ್ದುದು ಬಸವಣ್ಣ ಬೋಧಿಸಿದ್ದ ಕಾಯಕತತ್ವ. ಒಂದು ವರ್ಷ ತುಂಬುವುದರಲ್ಲಿ ಅವರು ನಿಷ್ಣಾತ ವಕೀಲ ರೆನಿಸಿಕೊಂಡರು. ಇದಕ್ಕೆ ಕಾರಣ ಅವರು ತಮ್ಮ ವೃತ್ತಿಯಲ್ಲಿ ತೋರಿದ ಅನನ್ಯ ಶ್ರದ್ಧೆ, ಕೌಶಲ ಹಾಗೂ ಕಕ್ಷಿದಾರರ ಹಿತ ಕಾಯುವ ವಕೀಲಿಗಾರಿಕೆಯಿಂದಾಗಿ. ಮಾತ್ರವಲ್ಲದೆ

ತಮ್ಮ ಸೌಜನ್ಯಯುತ ವ್ಯಕ್ತಿತ್ವ, ಕಕ್ಷಿದಾರರ ಹಿತರಕ್ಷಣೆ ಹಾಗೂ ಮೆಲುನುಡಿಗಳಿಂದಾಗಿ ಅವರೊಬ್ಬ ಜನಾನುರಾಗಿ ವಕೀಲರೆನಿಸಿಕೊಂಡರು. ಇಂತಹವರು ಪೈಪೋಟಿಯನ್ನಾಗಲೀ ದ್ವೇಷವನ್ನಾಗಲೀ ಉಕ್ಕಿಸಲಾರರು. ತಮ್ಮ ವೃತ್ತಿಯ ಮಾರ್ಗದಲ್ಲಿ ಅವರು ನೈತಿಕತೆ ಹಾಗೂ ಗಾಂಧೀಯ ತತ್ವಗಳನ್ನು ಅಳವಡಿಸಿಕೊಂಡರು; ಹೀಗಾಗಿ ಗಿರಾಕಿಹಿಡುಕತನ, ಸಾಕ್ಷಿಗಳ ಸೃಷ್ಟಿ ಮತ್ತು ಅಪ್ರಾಮಾಣಿ ಕತೆ ಮತ್ತು ಸುಳ್ಳುಗಳ ಮೇಲೆ ನಿಂತ ಕೇಸುಗಳ ನಿರ್ಮಾಣದಿಂದ ಅವರು ದೂರವುಳಿದರು. ತಮ್ಮ ಕೇಸು ದುರ್ಬಲವಾದುದೆಂದೋ ದೋಷಪೂರಿತವೆಂದೋ ಅನ್ನಿಸಿದರೆ ಹಾಗೆಂದು ಒಪ್ಪಿಕೊಳ್ಳಲು ಅವರು ಹಿಂದೆ ಮುಂದೆ ನೋಡುತ್ತಿರಲಿಲ್ಲ. ಅದರಿಂದ ಅವರು ಕೇವಲ ನ್ಯಾಯಯುತವೂ ಕಾನೂನುಸಮ್ಮತವೂ ಆದ ಕೇಸುಗಳನ್ನು ಮಾತ್ರ ತೆಗೆದುಕೊಳ್ಳುವ ವಕೀಲರೆಂಬ ಹೆಗ್ಗಳಿಕೆಯನ್ನು ಗಳಿಸಿದರು. ಇದರಿಂದಾಗಿ ಜೊತೆಯ ವಕೀಲರು ಅವರ ಬಗ್ಗೆ ಗೌರವ ಹಾಗೂ ಸದ್ಭಾವನೆಗಳನ್ನು ಬೆಳೆಸಿಕೊಳ್ಳುವಂತೆ ಆಯಿತು.

ತಮ್ಮ ಪ್ರಯತ್ನದಲ್ಲಿ ಸೋಲು ಗೆಲವುಗಳ ಬಗ್ಗೆ ತಲೆಕೆಡಿಸಿಕೊಳ್ಳದೆ, ತಮ್ಮ ಕೇಸಿನಲ್ಲಿ ಕೈಲಾದಷ್ಟೂ ದುಡಿಮೆಯನ್ನು ಹಾಕಿರುವುದರ ಬಗ್ಗೆ ತೃಪ್ತಿ ಪಡೆಯುತ್ತಿದ್ದರು. ಬಡತನ ಹಾಗೂ ಕಷ್ಟಗಳ ಅನುಭವವಿದ್ದುದರಿಂದಾಗಿ ತಮ್ಮ ಕಕ್ಷಿದಾರರನ್ನು, ಅದರಲ್ಲಿಯೂ ಹಳ್ಳಿಗಳಿಂದ ಬಂದ ಬಡವರನ್ನು, ತುಂಬು ಸಹಾನುಭೂತಿಯಿಂದ ಕಂಡು ಆದಷ್ಟೂ ಕಡಿಮೆ ಶುಲ್ಕವನ್ನು ತೆಗೆದುಕೊಳ್ಳುತ್ತಿದ್ದರು. ಜೊತೆಗೆ, ಸುಮ್ಮನೆ ಕೋರ್ಟು ಕಚೇರಿ ಎಂದು ಅಲೆಯುತ್ತ ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಸುರಿದು ವ್ಯರ್ಥ ಮಾಡಬಾರದೆಂದು ಅವರಿಗೆ ತಿಳಿವಳಿಕೆ ಹೇಳುತ್ತಿದ್ದರು. ಅವರ-ಕಕ್ಷಿದಾರರ ನಡುವಣ ಸಂಬಂಧ ಕೇವಲ ಅಷ್ಟಕ್ಕೇ ಸೀಮಿತವಾಗಿರದೆ, ಅದರಿಂದ ಮುಂದೆ ಹೋಗಿ ಎಷ್ಟೋ ವೇಳೆ ಕಾನೂನು ಪರಿಧಿಯ ಹೊರಗಿನ ಸಮಸ್ಯೆಗಳ ಬಗ್ಗೆಯೂ ಅವರು ತಮ್ಮ ಸಲಹೆಗಳನ್ನು ನೀಡುತ್ತಿದ್ದರು. ಈ ರೀತಿ ನಿಜಲಿಂಗಪ್ಪನವರು ವಕೀಲರಾಗಿ ಕೆಲಸ ಆರಂಭಿಸಿದ ಎಂಟು ತಿಂಗಳೊಳಗಾಗಿ ಸುಭದ್ರ ತಳಹದಿಯ ಮೇಲೆ ನಿಂತು, ಹೆಸರನ್ನವರು ಸಂಪಾದಿಸಿದರು. ಅವರ ಕೀರ್ತಿ ಕರ್ನಾಟಕವನ್ನೆಲ್ಲ ವ್ಯಾಪಿಸಿದಂತೆ ಕಾಣುತ್ತದೆ. ಬಡವರ ಹಿತೈಷಿಯಾಗಿ, ಸಾಮಾನ್ಯ ವಕೀಲರಂತೆ ಹಣವನ್ನು ಕೀಳುತ್ತ ಕಾಲ ತಳ್ಳುವ ಪೈಕಿಯವರಲ್ಲ ಎಂಬ ಸದ್ಭಾವನೆ ಜನಜನಿತವಾಯಿತು. ಇದರೊಡನೆ ಇನ್ನೊಂದು ರೀತಿಯಲ್ಲಿಯೂ ಅವರ ಹೆಸರು ಹರಿದಾಡಿತು: ಅವರೊಬ್ಬ ಸ್ಫುರದ್ರೂಪಿಯೂ ಯಶಸ್ವೀ ವೃತ್ತಿಪರನೂ ವಿದ್ಯಾವಂತನೂ ಆದ ಗಂಡು ಎಂಬುದು! ಹೆಣ್ಣು ಹೆತ್ತವರು ಅವರನ್ನೊಬ್ಬ ಆದರ್ಶ ಅಳಿಯನಂತೆ ಕಾಣತೊಡಗಿದರೆ, ಅವರ ಹೆಣ್ಣು ಮಕ್ಕಳು ತಕ್ಕ ಗಂಡನಂತೆ ಕಲ್ಪಿಸಿಕೊಳ್ಳತೊಡಗಿದರು. ಒಂಟಿ ಜೀವನವನ್ನು ಕೊನೆಗೊಳಿಸಿ ಮದುವೆಯಾಗಲು ಅವರ ಸ್ನೇಹಿತರು ಒತ್ತಾಯಿಸಿದರು. ಅವರ ತಾಯಿ ನೀಲಮ್ಮನವರು ಒಬ್ಬ ಸಾಂಪ್ರದಾಯಿಕ ಭಾರತೀಯ

ತಾಯಿ; ಮನೆಯಲ್ಲಿ ಸೊಸೆ ಮೊಮ್ಮಕ್ಕಳು ಬೇಕೆಂದು ಬಯಸಿದರು. ಆದಷ್ಟು ಬೇಗ ಮದುವೆಯಾಗಿ ಗೃಹಸ್ಥನಾಗಲು ಮಗನ ಮೇಲೆ ಒತ್ತಾಯ ಹಾಕಿದರು. ಅವರ ಸ್ನೇಹಿತರು ಇವರಿಗಾಗಿ ಸುಂದರ ಹೆಣ್ಣನ್ನು ನೋಡಲು ಶುರುಮಾಡಿ, ಕೊನೆಗೆ ನಾಲ್ಕು ಹೆಣ್ಣಗಳ ಪಟ್ಟಿಯನ್ನು ಆಯ್ಕೆಗಾಗಿ ಮುಂದಿಟ್ಟರು. ನಿಜಲಿಂಗಪ್ಪ ಈ ವಿಷಯದಲ್ಲಿ ಸಂಪ್ರದಾಯಶರಣರೇ: ತಾನು ಆರಿಸಿಕೊಂಡವಳನ್ನು ಮದುವೆಯಾಗುವುದರ ಬದಲು ಮದುವೆಯಾದ ಹೆಣ್ಣನ್ನು ಪ್ರೀತಿಸುವುದು ಸರಿ ಎಂಬುದು ಅವರ ನಿಲುವಾಗಿತ್ತು.

ಹೆಣ್ಣು ನೋಡುವ ಶಾಸ್ತ್ರಕ್ಕಾಗಿ ಒಮ್ಮೆ ಅವರ ಗೆಳೆಯರು ಅವರನ್ನು ಶ್ರೀಮಂತ ರೊಬ್ಬರ ಮನೆಗೆ ಕರೆದೊಯ್ದರು. ಹೆಣ್ಣಿನ ಕುಟುಂಬದವರು ಇವರನ್ನೆಲ್ಲ ಬಹುವಾಗಿ ಉಪಚರಿಸಿ ಗೌರವಿಸಿದರು. ಈ ವಿಷಯದಲ್ಲಿ ನಿಜಲಿಂಗಪ್ಪ ಎಷ್ಟು ನಿರಾಸಕ್ತರೆಂದರೆ, ಅವರ ಸ್ನೇಹಿತರು ಪುಸಲಾವಣೆ ಮಾಡುತ್ತಿದ್ದರು. ಅವರಿಗೆ ಹುಡುಗಿ ಇಷ್ಟವಾಯಿತೇ ಎಂದು ಕೇಳಿದಾಗ, ತಮ್ಮ ಅಭ್ಯಂತರವೇನೂ ಇಲ್ಲ ಎಂದರು. ಆಗ ಗೆಳೆಯರೆಲ್ಲ ಜೋರಾಗಿ ನಗುತ್ತ ಹುಡುಗಿ ಅವಿದ್ಯಾವಂತೆ ಎಂಬ ವಿಷಯವನ್ನು ತಿಳಿಸಿ, ಹುಡುಗಿ ಯನ್ನು ಆಯುವ ವಿಷಯದಲ್ಲಿ ಅವರು ಲಾಯಕ್ಕಾದವರಲ್ಲ ಎಂದರು. ಆದರೆ ನಿಜಲಿಂಗಪ್ಪನವರ ನಿಲುವು ಗಂಭೀರವಾಗಿತ್ತು, "ಅವರು ನೀಡಿದ ಭಾರಿ ಉಪಚಾರವನ್ನು ಸ್ವೀಕರಿಸಿದ ನಾವು, ಹುಡುಗಿ ಒಪ್ಪಿಗೆಯಿಲ್ಲವೆಂದರೆ ಅವರ ಮನಸ್ಸಿಗೆ ನೋವಾಗು ವುದಿಲ್ಲವೇ" ಎಂದು ಪ್ರಶ್ನಿಸಿದರು. ಹುಡುಗಿಯನ್ನು ನೋಡಲೆಂದು ಒಬ್ಬರ ಮನೆಗೆ ಹೋದಾಕ್ಷಣ ಆ ಹುಡುಗಿಯನ್ನು ಮದುವೆಯಾಗಲೇಬೇಕೆಂದು ಅರ್ಥವಲ್ಲ, ನೋಡಲು ಬಂದ ಹುಡಗರನ್ನೆಲ್ಲ ಹುಡುಗಿ ಮದುವೆಯಾಗುವುದಿಲ್ಲವಲ್ಲ ಎಂದು ಗೆಳೆಯರು ವಾದಿಸಿದರು. ಹುಡುಗಿಯರನ್ನು ನೋಡುತ್ತ ಹೋಗುವುದು ತಮಗೆ ಸರಿ ಬರುವುದಿಲ್ಲ ವೆಂದು ನಿಜಲಿಂಗಪ್ಪ ಹೇಳಿ, ಹಾಗೆ ನೋಡಲು ಹೋಗುವ ಮುನ್ನ ಆ ಮನೆಯವರ ಬಗ್ಗೆ ಆಮೂಲಾಗ್ರವಾಗಿ ವಿಚಾರಿಸುವುದು ತಮ್ಮ ರೀತಿಯ ನಿಲುವು ಎಂದರು. ಅವರೊಬ್ಬ ಮುಗ್ಧಜೀವಿಯೆಂದು ಗೆಳೆಯರು ಭಾವಿಸಿದ್ದು ಸಹಜವೇ ಆಗಿದೆ. ಆದರೆ ಅವರು ತಮ್ಮ ಹುಡುಕಾಟವನ್ನು ಮುಂದುವರಿಸಿದರು. ದಾವಣಗೆರೆಯ ಬೆಳ್ಳುಳ್ಳಿ ಕುಟುಂಬದಲ್ಲಿ ಒಬ್ಬ ಹೆಣ್ಣುಮಗಳು ಮದುವೆಗಿದ್ದಾಳೆಂದು ಅವರಿಗೆ ತಿಳಿಯಿತು; ಆ ಕುಟುಂಬಕ್ಕೆ ಒಂದು ಇತಿಹಾಸವಿತ್ತು. ಅವರು ಪೂರ್ವದಲ್ಲಿ ಪ್ರಸಿದ್ಧ ವಚನಕಾರ ಭೋಗಣ್ಣನ ಊರಾದ ಕೆಂಭಾವಿ ಕಡೆಯವರು. ಅವರ ಮನೆದೇವರು ಕೆಂಭಾವಿಯ ಬಸವೇಶ್ವರ. ಅವರ ಧಾರ್ಮಿಕ ಗುರುಗಳು ಕರ್ನಾಟಕದ ಬಳ್ಳಾರಿ ಜಿಲ್ಲೆಯ ಕೊಟ್ಟೂರು ಬಳಿಯ ಗುಡೇಕೋಟೆಯ ಹಿರೇಮಠದ ಸ್ವಾಮಿಗಳು. ಈ ಕುಟುಂಬವು ಬೆಳ್ಳುಳ್ಳಿ ವ್ಯಾಪಾರ ಮಾಡುತ್ತ ದಾವಣಗೆರೆಗೆ ವಲಸೆ ಬಂದಿತ್ತು. ಆದ್ದರಿಂದಲೇ ಕುಟುಂಬಕ್ಕೆ ಬೆಳ್ಳುಳ್ಳಿ ಎಂಬ ಹೆಸರು ಬಂದಿದ್ದು. ಬೆಳ್ಳುಳ್ಳಿ ಚೆನ್ನಬಸಪ್ಪನವರಿಗೆ ಹತ್ತು ಜನ ಮಕ್ಕಳು; ಅವರಲ್ಲಿ

ಮುರಿಗೆಮ್ಮ ಒಂಬತ್ತನೆಯವಳು; ಆಕೆ ಹುಟ್ಟಿದ್ದು ೧೯೧೦ನೇ ಇಸವಿ ಸೆಪ್ಟೆಂಬರ್ ಮೂವತ್ತರಂದು. ಆಕೆ ಮಾಧ್ಯಮಿಕ ಶಾಲೆಯವರೆಗೂ ಓದಿದ್ದಳು. ಜಾತಕಗಳನ್ನು ಪರಿಶೀಲಿಸಿದ ಜ್ಯೋತಿಷಿ ಆಕೆಯನ್ನು ಮದುವೆಯಾಗುವವನು ಮುಂದೆ ಬಹು ದೊಡ್ಡ ಹೆಸರನ್ನು ಪಡೆಯುತ್ತಾನೆಂದೂ, ಅವರ ಮನೆಯ ಮುಂದೆ ಸದಾ ಮೂರು ಕಾರುಗಳು ಸೇವೆಗೆ ಸಿದ್ಧವಾಗಿ ನಿಂತಿರುತ್ತದೆಂದೂ ಭವಿಷ್ಯ ನುಡಿದಿದ್ದರು! ಈ ಕುಟುಂಬವು ದಾವಣಗೆರೆಯಲ್ಲಿ ತುಂಬ ಪ್ರಸಿದ್ಧವಾಗಿತ್ತು. ಹುಡುಗಿ ಚೆನ್ನಾಗಿದ್ದಾಳೆ ಮಾತ್ರವಲ್ಲ ಶ್ರೀಮಂತವೂ ಗೌರವಾನ್ವಿತವೂ ಆದ ಕುಟುಂಬದವಳಾದ್ದರಿಂದ ಆಕೆಯನ್ನು ಮದುವೆ ಯಾಗುವಂತೆ ಗೆಳೆಯರು ಸಲಹೆಯಿತ್ತರು. ಹುಡುಗಿಗೆ ತಂದೆಯಿರಲಿಲ್ಲ. ಇಂತಹ ಹಿನ್ನೆಲೆಯ ಹುಡುಗಿ ತನ್ನಂಥ ಬಡವನನ್ನು ಒಪ್ಪಿಯಾಳೆ ಎಂಬುದು ನಿಜಲಿಂಗಪ್ಪನವರ ಸಂಶಯವಾಗಿತ್ತು. ತಾನು ಮದುವೆಗೆ ಹೆಚ್ಚು ಹಣ ಖರ್ಚುಮಾಡುವ ಸ್ಥಿತಿಯಲಿಲ್ಲ ವೆಂದೂ ಒಡವೆವಸ್ತ್ರ ತೆಗೆದುಕೊಳ್ಳಲು ಹಣವಿಲ್ಲವೆಂದೂ, ಅವರ ಅಣ್ಣ ಸರಳವಾದ ಮದುವೆಗೆ ಸಿದ್ಧವಿದ್ದರೆ ತನಗೆ ಹುಡುಗಿ ಒಪ್ಪಿಗೆಯೆಂದೂ ನಿಜಲಿಂಗಪ್ಪ ಗೆಳೆಯರಿಗೆ ಹೇಳಿದರು. ಹುಡುಗಿಗೆ ಒಡವೆಯ ಆಸೆಯಿಲ್ಲವೆಂದೂ ಆಕೆ ಬಯಸುವುದು ವಿದ್ಯಾವಂತ ಗಂಡನನ್ನು ಅಷ್ಟೇ ಎಂದೂ ಹಿರಿಯರು ಹೇಳಿದರು. ಮುರಿಗೆಮ್ಮ ಮತ್ತಾಕೆಯ ಅಣ್ಣ ಮುರಿಗೆಪ್ಪನ ಮದುವೆಗಳನ್ನು ಒಟ್ಟಾಗಿ ಮಾಡುವುದೆಂದು ನಿಶ್ಚಯಿಸಲಾಯಿತು. ನೀಲಮ್ಮ ಹಾಗೂ ಸಾವಕ್ಕರಿಗೂ ಹುಡುಗಿ ಒಪ್ಪಿಗೆಯಾಯಿತು. ಮದುವೆಗೆಂದು ನಿಜಲಿಂಗಪ್ಪ ಹುಡುಗಿಗೆ ಮಾಡಿಸಿದ ಒಂದೇ ಒಡವೆಯೆಂದರೆ ಮಾಂಗಲ್ಯ, ಅಷ್ಟೆ. ಒಡವೆಗೆ ಹಣ ಸುರಿಯುವುದು ವ್ಯರ್ಥ ಎಂಬುದು ಅವರ ಭಾವನೆ. ಸುಮ್ಮನೆ ಆಸ್ತಿ ಮಾಡುವುದಕ್ಕೂ ಅವರ ವಿರೋಧವಿತ್ತು. ಒಟ್ಟಾರೆ ಅವರಿಗೆ ವೈಭವ ಶ್ರೀಮಂತಿಕೆಗಳ ಆಸೆಯಿರಲಿಲ್ಲ. ದೈಹಿಕವಾಗಿ ಹಾಗೂ ನೈತಿಕವಾಗಿ ಪರಿಶುದ್ಧ ಬದುಕು ನಡೆಸುವುದು ಮುಖ್ಯ ಎಂಬುದು ಅವರ ನಂಬಿಕೆ. ಅವರಿಬ್ಬರ ವರಸಾಮ್ಯ ಹೇಳಿಮಾಡಿಸಿದ ಹಾಗಿತ್ತು. ಕಾಲರ್ ಇದ್ದ ಕೋಟು ಮತ್ತು ಪೇಟ ಧರಿಸಿದ್ದ ಮದುವೆ ಗಂಡು ಆಕರ್ಷಕವಾಗಿ ಕಾಣಿಸುತ್ತಿದ್ದ. ತನ್ನ ಸರಳ ನಿರಾಭರಣ ಚೆಲುವಿನಿಂದ ಹುಡುಗಿಯೂ ಎಲ್ಲರ ಮನಸೆಳೆದಳು. ಕನ್ನಡ ಮಾತ್ರ ಗೊತ್ತಿದ್ದ ಮುರಿಗೆಮ್ಮ ನೇರ ನಡತೆ, ಸಾಂಪ್ರದಾಯಿಕತೆ ಮತ್ತು ಒಳ್ಳೆಯ ಸ್ವಭಾವಕ್ಕೆ ಹೆಸರಾದವರು.

ಗಂಡ ಮತ್ತು ಕುಟುಂಬಗಳ ಬಗ್ಗೆ ದ್ಯಾಸವುಳ್ಳ ಸಾಂಪ್ರದಾಯಿಕ ಗೃಹಿಣಿಯ ಪ್ರತಿಮೂರ್ತಿಯಂತೆ ಮುರಿಗೆಮ್ಮ ಇದ್ದರು. ನಿಜಲಿಂಗಪ್ಪನವರೂ ಹೆಂಡತಿಯ ಬಗ್ಗೆ ಕಾಳಜಿ ವಹಿಸುವ ಗಂಡನೆನಿಸಿದರು. ಪರಸ್ಪರ ಒಲವು ಮತ್ತು ತಿಳಿವಳಿಕೆಗಳ ಗಟ್ಟಿ ಬುನಾದಿಯ ಮೇಲೆ ಅವರ ವೈವಾಹಿಕ ಬದುಕು ನಿಂತಿತು. ಮದುವೆಯಾದ ಕೂಡಲೆ

ನಿಜಲಿಂಗಪ್ಪ ಸಂಸಾರ ಹೂಡಲಿಲ್ಲ, ಸ್ವಲ್ಪ ಕಾಲ ಮುರಿಗೆಮ್ಮ ತವರು ಮನೆಯಲ್ಲಿಯೇ ವಾಸಿಸುತ್ತಿದ್ದರು. ಅಂದರೆ ಆಕೆ ದಾವಣಗೆರೆಯಲ್ಲಿಯೇ ಇದ್ದರು. ದಾವಣಗೆರೆಯಲ್ಲಿಯೂ ನಿಜಲಿಂಗಪ್ಪನವರಿಗೆ ಸಾಕಷ್ಟು ಮಂದಿ ಕಕ್ಷಿದಾರರಿದ್ದು ಅಲ್ಲಿನ ಕೋರ್ಟಿನಲ್ಲಿ ಅವರಿಗೆ ತುಂಬ ಕೆಲಸವಿರುತ್ತಿತ್ತು. ವಾರದ ಐದು ದಿನಗಳನ್ನು ಅವರು ಚಿತ್ರದುರ್ಗದಲ್ಲಿ ಕಳೆದು ಶನಿವಾರ ಮುಂಜಾನೆಯೇ ದಾವಣಗೆರೆಗೆ ಹೋಗುತ್ತಿದ್ದರು. ಶನಿವಾರ ಪೂರ್ತಿ ಕೆಲಸದಲ್ಲಿ ಕಳೆದುಹೋಗುತ್ತಿತ್ತು, ಭಾನುವಾರವನ್ನವರು ಹೆಂಡತಿಗೆ ಪೂರ್ತಿ ಮುಡಿಪಿಟ್ಟರು. ಸೋಮವಾರ ಬೆಳಿಗ್ಗೆ ಚಿತ್ರದುರ್ಗಕ್ಕೆ ಮರಳುತ್ತಿದ್ದರು. ಕೆಲವು ವೇಳೆ ಅವರು ದೂರದ ಶಿವಮೊಗ್ಗಕ್ಕೂ ಕೆಲಸದ ಮೇಲೆ ಹೋಗಬೇಕಾಗುತ್ತಿತ್ತು. ಅವರು ಸ್ವಂತ ಸಂಸಾರವನ್ನು ಆರಂಭಿಸಿದ್ದು ೧೯೨೭ರಲ್ಲಿ, ತಮ್ಮೊಡನೆ ಇರಲು ಅವರು ತಾಯಿಯನ್ನು ಕರೆಸಿಕೊಂಡರು. ಇವರ ಕುಟುಂಬ ವಾಸವಿದ್ದುದು ವೀರಭದ್ರಪ್ಪನವರ ಮನೆಯ ಹಿಂಬದಿಯಲ್ಲಿ. ತಾನೀಗ ಸಂಪಾದನೆ ಮಾಡುತ್ತಿರುವುದರಿಂದ ಮನೆಗೆ ಸ್ವಲ್ಪ ಬಾಡಿಗೆ ತೆಗೆದುಕೊಳ್ಳಬೇಕೆಂದೂ, ಅದಕ್ಕೆ ಒಪ್ಪದಿದ್ದರೆ ಬೇರೆ ಕಡೆ ಮನೆ ಮಾಡಲು ಅನುಮತಿ ನೀಡಬೇಕೆಂದೂ ನಿಜಲಿಂಗಪ್ಪನವರು ವೀರಭದ್ರಪ್ಪನವರನ್ನು ಒತ್ತಾಯಿಸಿದರು. ಅದಕ್ಕೆ ವೀರಭದ್ರಪ್ಪನವರು ಪ್ರತಿಕ್ರಿಯಿಸಿದ ರೀತಿ ಅವರ ಸ್ವಭಾವಕ್ಕೆ ಅನುಗುಣವಾದುದಾಗಿಯೇ ಇತ್ತು: ತಮ್ಮ ಮನಸ್ಸಿಗೆ ನೋವುಂಟು ಮಾಡಬಾರದೆಂದಿದ್ದರೆ ಸ್ವಂತ ಮನೆಯನ್ನು ಕಟ್ಟಿಸಿಕೊಳ್ಳುವರೆಗೂ ಅವರು ಈ ಮನೆಯಲ್ಲಿ ಬಾಡಿಗೆಯಿಲ್ಲದೆಯೇ ಇರಬೇಕೆಂದು ಹೇಳಿದರು. ಹೀಗಾಗಿ ಹಿಂದಿನ ಕ್ರಮವೇ ಮುಂದುವರಿಯಿತು.

ಅವರದು ಆನಂದಮಯ ಕುಟುಂಬ; ನಿಜಲಿಂಗಪ್ಪನವರು ತಾಯಿ ಮತ್ತು ಮಡದಿಯ ತುಂಬ ಪ್ರೀತಿ-ರಕ್ಷಣೆಗಳ ಬೆಚ್ಚಗಿನ ಮುಂಜಾನೆಯ ಬಿಸಿಲಲ್ಲಿ ಮೀಯುತ್ತಿದ್ದರು. ಈ ನಮ್ಮ ಕಿರಿಯ ವಕೀಲರಿಗೆ ಹಣದ ಬೆನ್ನಟ್ಟುವ ಹವ್ಯಾಸವಿಲ್ಲದ್ದರಿಂದಾಗಿ ಕುಟುಂಬವು ನೆಮ್ಮದಿಯಿಂದಲೂ ಸಂತೋಷದಿಂದಲೂ ಬಾಳುತ್ತಿತ್ತು. ಅವರು ಸಂಪಾದಿಸಿದ್ದ ನಿಜವಾದ ಆಸ್ತಿಯೆಂದರೆ ಸಹ ವೃತ್ತಿಪರರ ಮತ್ತು ಕಕ್ಷಿದಾರರ ನಂಬಿಕೆ ವಿಶ್ವಾಸಗಳು. ಯಾವುದೇ ಕೇಸನ್ನು ಗೆಲ್ಲಲಿ ಈ ಕಿರಿಯ ವಕೀಲರ ಮನೆಯಲ್ಲಿ ಸಂಭ್ರಮಾಚರಣೆ ನಡೆಯುತ್ತಿತ್ತು. ದಿನಗಳೆದಂತೆ ಕಾರ್ಯಬಾಹುಳ್ಯ ಹೆಚ್ಚಾಗಿ ಅವರು ತಮ್ಮ ಕಚೇರಿಯಲ್ಲಿ ಸಹಾಯಕರನ್ನು ನೇಮಿಸಿಕೊಳ್ಳುವಂತಾಯಿತು. ಈ ಕಿರಿಯ ವಕೀಲರಿಗೆ ಅವರು ತಮಗೆ ತಿಳಿದಿದ್ದನ್ನು ನಿರ್ವಂಚನೆಯಿಂದ ತಿಳಿಸಿ ಮಾರ್ಗದರ್ಶನ ಮಾಡುತ್ತಿದ್ದರು. ತಮ್ಮ ಈ ಹಿರಿಯರಿಂದ ಅವರು ವೃತ್ತಿಪರ ಜ್ಞಾನ ಹಾಗೂ ಕೌಶಲಗಳನ್ನು ಸಂಪಾದಿಸಿದ್ದಲ್ಲದೆ, ವೃತ್ತಿ ನೈತಿಕತೆ ಹಾಗೂ ಮಾನವೀಯತೆಗಳನ್ನು, ಅದರಲ್ಲಿಯೂ ಬಡವರು ಹಾಗೂ ನೆರವು ಆವಶ್ಯಕವಾಗಿದ್ದವರ ಬಗ್ಗೆ ಅನುಕಂಪದ ಮನೋಭಾವವನ್ನು ತೋರಿಸುವುದನ್ನು ಕಲಿತರು.

ಇದರಿಂದಾಗಿ ಹೊಸದಾಗಿ ವಕೀಲಿ ವೃತ್ತಿಯನ್ನಾರಂಭಿಸಲು ಹಾತೊರೆಯುತ್ತಿದ್ದ ಕಿರಿಯರಲ್ಲಿ ನಿಜಲಿಂಗಪ್ಪ ಆದರ್ಶ ವ್ಯಕ್ತಿಯೆನಿಸಿದರು. ಅವರು ಮಾಡುತ್ತಿದ್ದ ಕೆಲಸಕ್ಕಾಗಿ ಅವರಿಗೆ ಸೂಕ್ತ ಸಂಭಾವನೆಯನ್ನು ಕೊಡುವ ನ್ಯಾಯಯುತ ನಡವಳಿಕೆ ನಿಜಲಿಂಗಪ್ಪ ನವರದಾಗಿತ್ತು. ಮೂರು ವರ್ಷಗಳಷ್ಟು ಅಲ್ಪಾವಧಿಯಲ್ಲಿಯೇ ಅವರ ತಿಂಗಳ ವರಮಾನ ಒಂದು ಸಾವಿರ ರೂಪಾಯಿಗಳಷ್ಟಾಯಿತು. ಇವತ್ತಿನ ರೂಪಾಯಿ ಮೌಲ್ಯದೊಡನೆ ಹೋಲಿಸಿದರೆ ಆಗ್ಗೆ ಇದೊಂದು ದೊಡ್ಡ ಮೊತ್ತವಾಗಿತ್ತು! ಆದರೆ ಅವರಿಗೆ ಹಣ ಕೂಡಿಡುವುದರಲ್ಲಿಯಾಗಲೀ ಆಸ್ತಿ ಕೊಳ್ಳುವುದರಲ್ಲಾಗಲೀ ಆಸಕ್ತಿಯಿರಲಿಲ್ಲ. ಬೆಳೆಯು ತ್ತಿರುವ ತಮ್ಮ ಕುಟುಂಬಕ್ಕೆ ಸ್ವಂತ ಮನೆಯ ಆವಶ್ಯಕತೆ ಇರುವುದರ ಬಗ್ಗೆ ಅವರಿಗೆ ಅರಿವಿತ್ತು. ಇಷ್ಟು ಹೊತ್ತಿಗೆ ಮಕ್ಕಳು ಹುಟ್ಟಿ ಕುಟುಂಬ ದೊಡ್ಡದಾಗಿತ್ತು. ಮೊದಲ ಮಗು ಪಾರ್ವತಿ ೧೯೨೮ರಲ್ಲಿ ಹುಟ್ಟಿತು; ಮೊದಲ ಮಗ ಉಮಾಕಾಂತ ೧೯೩೦ರಲ್ಲಿ ಜನಿಸಿದ. ಅವನ ನಂತರ ಎರಡನೆಯ ಮಗ ರಾಜಶೇಖರ ಹುಟ್ಟಿದ್ದು ೧೯೩೨ರಲ್ಲಿ. ಸಹಜವಾಗಿಯೇ ಈ ಕುಟುಂಬಕ್ಕೆ ಸದ್ಯದ ಮನೆಗಿಂತ ದೊಡ್ಡದಾದ ಆವರಣ ಬೇಕಾಗಿತ್ತು. ನಿಜಲಿಂಗಪ್ಪ ವೆಂಕಟೇಶ್ವರಪುರ ಬಡಾವಣೆಯಲ್ಲಿ ಒಂದು ಮನೆಯನ್ನು ಕೊಂಡರು, ತಮಗೆ ಬೇಕಾದಂತೆ ಅದನ್ನು ಮಾರ್ಪಡಿಸಿಕೊಂಡರು. ಮುಖ್ಯವಾಗಿ ಸಮೃದ್ಧ ಗಾಳಿ ಬೆಳಕು ಬರುವಂತಿರಬೇಕೆಂಬುದು ಅವರ ಉದ್ದೇಶ. ಹೊರ ಊರಿನಿಂದ ಬಂದು ರಾತ್ರಿ ತಂಗಬೇಕಾದರೆ ಅಪರಿಚಿತರ ಮನೆಯ ಜಗುಲಿ ಮೇಲೆ ಕಾಲಕಳೆಯಬೇಕಾಗಿದ್ದ ಕಕ್ಷಿದಾರರಿಗೆಂದು ಒಂದು ಹೊರಮನೆಯನ್ನೂ ಕಟ್ಟಿಸಿಕೊಂಡರು. ಮನೆ ಸುಂದರವಾಗಿತ್ತು, ಶ್ರೀಮಂತವಾಗಿರದಿದ್ದರೂ ಬೇಕಾದ ಸೌಕರ್ಯಗಳೆಲ್ಲ ಧಾರಾಳವಾಗಿದ್ದವು. ಹೊಸ ಮನೆಯನ್ನು ಅಚ್ಚುಕಟ್ಟಾಗಿ ಇಡುವುದರಲ್ಲಿ ಅವರ ತಾಯಿ ಮತ್ತು ಹೆಂಡತಿಗೆ ಎಲ್ಲಿಲ್ಲದ ಸಡಗರ. ನಿಜಲಿಂಗಪ್ಪ ಈ ಹೊತ್ತಿಗೆ ವಿದೇಶಿ ವಸ್ತ್ರಗಳನ್ನು ತೊಡುವುದನ್ನು ನಿಲ್ಲಿಸಿ ಮುಂದೆಂದೂ ಖಾದಿ ತೊಡುವುದಕ್ಕೆ ಬದ್ಧವಾಗಿದ್ದರು. ಖಾದಿ ಅವರ ಮಟ್ಟಿಗೆ ಭೌತಿಕ ಹಾಗೂ ಆಧ್ಯಾತ್ಮಿಕ ಶುಭ್ರತೆಯ ಸಂಕೇತವಾಗಿತ್ತು. ಅವರೆಂದೂ ಸೋಮಾರಿಯಾಗಿ ಕಾಲ ಕಳೆಯುತ್ತಿರಲಿಲ್ಲ, ಮನೆಯಲ್ಲಿ ಏನಾದರೊಂದು ಕೆಲಸ ಮಾಡುತ್ತಲೇ ಇರುತ್ತಿದ್ದರು. ಕೈತೋಟ ಬೆಳೆಸುವುದರಲ್ಲಿ ಅವರಿಗೆ ಆಸಕ್ತಿ. ಕೆಲಸ ಮತ್ತು ಆಟದಲ್ಲಿ ತೊಡಗುವುದು ಹಾಗೂ ಸಮುಚಿತ ವಿಶ್ರಾಂತಿ ಇವುಗಳು ಪರಸ್ಪರ ವಿರುದ್ಧವೆಂದು ಅವರೆಂದೂ ಭಾವಿಸಲಿಲ್ಲ. ಹಾಗೆ ನೋಡಿದರೆ ಅವು ಪರಸ್ಪರ ಪೂರಕವಾದವು. ಇದನ್ನು ಸರಿದೂಗಿ ಸಲು ಅವರು ಊರಿನ ಆಫೀಸರ್ಸ್ ಕ್ಲಬ್‌ನ ಸದಸ್ಯ ರಾಗಿ ಅದರ ಎಲ್ಲ ಕಾರ್ಯಚಟುವಟಿಕೆ ಗಳಲ್ಲಿ ಪಾಲುಗೊಳ್ಳುತ್ತಿದ್ದರು. ಮುಂದೆ ಅವರು ಕ್ಲಬ್‌ನ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಅವರ ಕಾರ್ಯವ್ಯಾಪ್ತಿಯಲ್ಲಿ ಸಂಸ್ಥೆಯ ಹಣಕಾಸು ವ್ಯವಹಾರವೂ

ಸೇರಿತ್ತು. ಎಷ್ಟೋ ಮಂದಿ ಸದಸ್ಯತ್ವ ಶುಲ್ಕ ಕೊಡದೆಯೇ ಕ್ಲಬ್‌ನ ಸವಲತ್ತು ಪಡೆದಿರುವುದನ್ನು ಕಂಡು ಅವರು ಹೌಹಾರಿದರು! ಅಂಥವರ ಪೈಕಿ ನ್ಯಾಯಾಂಗದ ಅಧಿಕಾರಿ, ಮುನ್ಸೀಫರೊಬ್ಬರೂ ಸೇರಿದ್ದರು! ಕ್ಲಬ್‌ಗೆ ಕಾಲಿರಿಸಿದಾಗಿನಿಂದ ಆ ಮಹನೀಯರು ಒಮ್ಮೆಯಾದರೂ ಸದಸ್ಯತ್ವದ ಶುಲ್ಕ ಕೊಟ್ಟಿರಲಿಲ್ಲ. ಇಂಥ ಅವ್ಯವಹಾರಗಳು ಕೊನೆಗೊಳ್ಳಬೇಕೆಂದು ನಿಜಲಿಂಗಪ್ಪ ನಿರ್ಧರಿಸಿದರು, ಅಕ್ರಮಗಳನ್ನೆಲ್ಲ ಸರಿಪಡಿಸಲು ಆರಂಭಿಸಿದರು. ಶುಲ್ಕ ಪಾವತಿಸಲು ಕೇಳಿದರೆ ಆ ಅಧಿಕಾರಿ ಕೋಪಗೊಳ್ಳುವುದು ಖಚಿತವೆಂದು ಅವರು ಬಲ್ಲರು, ಇದು ಕೋರ್ಟಿನ ತಮ್ಮ ಕೆಲಸದ ಮೇಲೂ ಪರಿಣಾಮ ಬೀರಬಹುದೆಂದೂ ಅವರಿಗೆ ಅರಿವಿತ್ತು. ಆದರೆ ತತ್ವದ ನೆಲಗಟ್ಟಿನ ಮೇಲೆ ಕ್ರಮ ಕೈಗೊಳ್ಳಲು ಅವರೆಂದೂ ಹೆದರಲಿಲ್ಲ. ಶುಲ್ಕ ಪಾವತಿಸದ ಅಧಿಕಾರಿಗಳು ಹಾಗೂ ಇತರರಿಗೆಲ್ಲ ಅವರು ತಿಳಿವಳಿಕೆ ಪತ್ರವನ್ನು ರವಾನಿಸಿ ಬಾಕಿ ಮೊತ್ತ ಎಷ್ಟು ಎಂಬುದನ್ನು ಉಲ್ಲೇಖಿಸುತ್ತಿದ್ದರು. ನಿಜಲಿಂಗಪ್ಪನವರು ಮುನ್ಸೀಫರ ಆಕ್ರೋಶ ದಬ್ಬಾಳಿಕೆಗಳನ್ನು ಎದುರಿಸಬೇಕಾಯಿತು. ಇದಕ್ಕೆ ತಕ್ಕ ಪ್ರತೀಕಾರ ತೆಗೆದುಕೊಳ್ಳುವುದಾಗಿಯೂ ಅವರು ಹೆದರಿಸಿದರು! ನಿಜಲಿಂಗಪ್ಪ ಆಗ ತಕ್ಷಣವೇ ಸರ್ವಸದಸ್ಯರ ಸಭೆಯನ್ನು ಕರೆದು ಆ ಅಧಿಕಾರಿಯ ಅನುಚಿತ ವರ್ತನೆಯ ಬಗ್ಗೆ ಎಲ್ಲರ ಗಮನ ಸೆಳೆದರು. ಸಭೆ ಕೊನೆಗೆ ಮುನ್ಸೀಫರ ನಡವಳಿಕೆಯನ್ನು ಖಂಡಿಸಿ ನಿರ್ಣಯ ಕೈಗೊಂಡಿತು. ಇದನ್ನು ಗಮನಕ್ಕೆ ತಂದುಕೊಂಡ ಸರ್ಕಾರ ಅವರನ್ನು ಬೇರೆಡೆಗೆ ವರ್ಗಾವಣೆ ಮಾಡಿತು. ಇದು ಒಂದು ಸಣ್ಣ ಸಂಗತಿಯಂತೆ ಕಾಣಬಹುದು, ಆದರೆ ಅಪರಾಧಿ ಯಾರೇ ಆಗಿರಲಿ ಎಂದಿಗೂ ಅನ್ಯಾಯ ಮತ್ತು ತಪ್ಪುಗಳ ವಿರುದ್ಧ ತಲೆಬಾಗದ ನಿಜಲಿಂಗಪ್ಪನವರ ಮನೋಭಾವಕ್ಕೆ ಇದು ದ್ಯೋತಕ. ಅವರ ಮೆಲು ಹಾಗೂ ಸೌಜನ್ಯಪೂರಿತ ನಡತೆಯ ಅರಿವು ಮಾತ್ರ ಇದ್ದವರಿಗೆ, ತತ್ವ ಮತ್ತು ನೀತಿಗಳ ವಿಷಯ ಬಂದಾಗ ಅವರು ಎಷ್ಟು ಗಡುಸಾಗಬಲ್ಲರೆಂಬುದಕ್ಕೆ ಈ ಘಟನೆ ಉದಾಹರಣೆಯಾಗಿದೆ.

ಇತರ ಬಾಕಿದಾರರು ತಿಳಿವಳಿಕೆ ಪತ್ರ ಬಂದ ಕೂಡಲೆ ಬಾಕಿ ಪಾವತಿಸಿದರು. ಆದರೆ ಪರಿಸ್ಥಿತಿ ಅಂದುಕೊಂಡಷ್ಟು ಸರಳವಾದುದಾಗಿರಲಿಲ್ಲ. ಅಧಿಕಾರಿ ಸದಸ್ಯರು ಕ್ಲಬ್ ತಮ್ಮದೆಂದೂ, ಅಧಿಕಾರಿಯೇತರ ಸದಸ್ಯರು ಮಾತ್ರ ಸೌಲಭ್ಯಗಳಿಗಾಗಿ ಶುಲ್ಕ ಪಾವತಿಸಬೇಕೆಂದೂ ವಾದಿಸಿದರು. ಈ ವಾದದಲ್ಲಿ ತಮ್ಮನ್ನು ಸಾಮಾನ್ಯರೊಡನೆ ಸಮೀಕರಿಸಬಾರದೆಂಬ ಅಹಂಕಾರದ ಕಿಸುರಿತ್ತು. ಅಧಿಕಾರಿಯೇತರ ಸದಸ್ಯರು ಹಣ ಪಾವತಿಮಾಡುವುದು ಮಾತ್ರವೇ ಅಲ್ಲದೆ ಅಧಿಕಾರಿಗಳ ಕ್ಲಬ್‌ನಲ್ಲಿ ತಮಗೆ ಸೌಲಭ್ಯಗಳನ್ನು ಬಳಸಿಕೊಳ್ಳಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಕೃತಜ್ಞರಾಗಿರಬೇಕೆಂದೂ ವಾದಿಸಿದರು! ಈ ವಿವಾದದಲ್ಲಿ ಅಧಿಕಾರಿಯೇತರ ಸದಸ್ಯರು ತಮ್ಮ ಸದಸ್ಯತ್ವ ತೊರೆದು ನಿಜಲಿಂಗಪ್ಪ

ನವರ ಮುಖಂಡತ್ವದಲ್ಲಿ ತಮ್ಮದೇ ಆದ ಕ್ಲಬ್ ಒಂದನ್ನು ಸ್ಥಾಪಿಸಿಕೊಳ್ಳಲು ನಿರ್ಧರಿಸಿದರು. ಇದರಿಂದ ಕ್ಲಬ್‌ನ ಅಧ್ಯಕ್ಷರಿಗೆ ಚಿಂತೆಯಾಯಿತು; ಕ್ಲಬ್ ಅಧಿಕಾರಿಯೇತರ ಸದಸ್ಯರ ಬೆಂಬಲವನ್ನು ಹೆಚ್ಚಾಗಿ ಆಶ್ರಯಿಸಿತ್ತು, ಏಕೆಂದರೆ ಅವರೆಲ್ಲ ಊರಿನ ಶಾಶ್ವತ ನಿವಾಸಿಗಳು, ಅಧಿಕಾರಿ ಸದಸ್ಯರಾದರೆ ಪದೇ ಪದೇ ವರ್ಗಾವಣೆಗೆ ಒಳಗಾಗುತ್ತಿದ್ದರು. ಜಿಲ್ಲೆಯ ಮುಖ್ಯ ಅಧಿಕಾರಿಗಳಾದ ಜಿಲ್ಲಾಧಿಕಾರಿಗಳು ವಿರುದ್ಧ ಬಣಗಳನ್ನು ಒಟ್ಟಿಗೆ ಸೇರಿಸಿ ಇಬ್ಬರನ್ನೂ ಇದೇ ಕ್ಲಬ್‌ನಲ್ಲಿಯೇ ಮತ್ತೆ ಒಟ್ಟಾಗಿ ಇರುವಂತೆ ಮಾಡುವುದರಲ್ಲಿ ಯಶಸ್ವಿಯಾದರು. ನಿಜಲಿಂಗಪ್ಪನವರು ಇದನ್ನು ಸ್ವಾಗತಿಸಿದರು, ಅವರು ಎಂದೂ ಸಾಮರಸ್ಯ ಮತ್ತು ಶಾಂತಿಗಳ ಪರವಾಗಿದ್ದು ಅನಿವಾರ್ಯ ಸಂದರ್ಭದಲ್ಲಿ ಮಾತ್ರ ತಾತ್ವಿಕ ನೆಲೆಯಲ್ಲಿ ಹೋರಾಟಕ್ಕೆ ಮುಂದಾಗುತ್ತಿದ್ದವರು. ಇದರಲ್ಲಿಯೂ ಅವರು ನಿಜವಾದ ಗಾಂಧೀವಾದಿಯಂತೆ ವರ್ತಿಸಿದರು, ಪ್ರಮುಖ ತಾತ್ವಿಕ ನೆಲೆಯಲ್ಲಿ ರಾಜಿಗೆ ಒಪ್ಪದಿದ್ದರೂ ಆನುಷಂಗಿಕ ವಿವರಗಳಲ್ಲಿ ಒಪ್ಪಂದಕ್ಕೆ ಸಿದ್ಧವಾದರು.

ನಿಜಲಿಂಗಪ್ಪನವರ ಜೀವನ ಅತ್ಯಂತ ಶಿಸ್ತುಬದ್ಧವಾಗಿತ್ತು: ದಿನಚರಿಗಳೆಲ್ಲ ಕ್ರಮಬದ್ಧವಾಗಿದ್ದು ಅವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಅವರ ದಿನಚರಿ ಮುಂಜಾನೆ ಐದಕ್ಕೆ ಆರಂಭವಾಗಿ ಗಡಿಯಾರದಂತೆ ಕರಾರುವಾಕ್ಕಾಗಿ ಮುಂದುವರಿಯುತ್ತಿತ್ತು. ಕಾಲದ ಬೆಲೆಯನ್ನು ತಿಳಿದಿದ್ದ ಅವರು ತಮ್ಮ ನಿಬಿಡವಾದ ಉಪಯುಕ್ತ ಚಟುವಟಿಕೆಗಳ ನಡುವೆ ವ್ಯರ್ಥ ಕಾಲಹರಣಕ್ಕೆ ಆಸ್ಪದವೀಯುತ್ತಿರಲಿಲ್ಲ. ಪ್ರಾತಃರ್ವಿಧಿಗಳನ್ನೆಲ್ಲ ಮುಗಿಸಿದ ಬಳಿಕ ಎಂಟು ಗಂಟೆಗೆ ಅವರು ತಮ್ಮ ಕಚೇರಿಗೆ ಬಂದು ತಮ್ಮ ಕರ್ತವ್ಯವನ್ನು ಮಾಡಲು ತೊಡಗುತ್ತಿದ್ದರು. ಕೆಲಸ ಆರಂಭಿಸುವ ಮೊದಲು ವೃತ್ತಪತ್ರಿಕೆಗಳ ಮೇಲೆ ಕಣ್ಣಾಡಿಸಿ ಕಿರಿಯರಿಗೆ ಸೂಚನೆಗಳನ್ನು ಕೊಡುತ್ತಿದ್ದರು. ಆಮೇಲೆ ಕೇಸುಗಳ ಅಧ್ಯಯನಕ್ಕೆ ತೊಡಗುತ್ತಿದ್ದರು. ಆ ಬಳಿಕ, ಬಂದ ಕಕ್ಷಿದಾರರ ಜೊತೆ ಚರ್ಚೆ ನಡೆಸಿ, ತಮ್ಮ ಕೇಸುಗಳ ವಿಚಾರಣೆಗೆ ಹಾಜರಾಗಲು ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದರು. ಅದೇನಾದರೂ ಕ್ರಿಮಿನಲ್ ಕೇಸ್ ಆಗಿದ್ದರೆ ಮಧ್ಯಾಹ್ನದ ಊಟ ತಪ್ಪುವ ಸಂಭವವಿರುತ್ತಿತ್ತು! ಅಪರಾಹ್ನ ಸುಮಾರು ನಾಲ್ಕೂವರೆಯ ಹೊತ್ತಿಗೆ ಟೀಗೆಂದು ಮನೆಗೆ ಮರಳುತ್ತಿದ್ದರು. ಆಗ ಮತ್ತೆ ವೃತ್ತಪತ್ರಿಕೆಗಳನ್ನು ಓದುತ್ತಿದ್ದರು. ಈ ಕಾಲದಲ್ಲಿ ಅವರು ಮನೆಯವರೊಂದಿಗೆ ಆರಾಮವಾಗಿ ಕಾಲ ಕಳೆಯುತ್ತಿದ್ದರು; ಅದೂ ವಿಶೇಷವಾಗಿ ತಾಯಿ ಮತ್ತು ಹೆಂಡತಿಯೊಡನೆ ಲೋಕಾಭಿರಾಮದ ಮಾತುಕತೆಯಲ್ಲಿ. ಮಕ್ಕಳು ತಂದೆಯ ಜೊತೆಗೆ ಸ್ವಲ್ಪ ಕಾಲ ಕಳೆಯುತ್ತಿದ್ದರೆನ್ನಿ. ಆಮೇಲೆ ಮನೆಯ ತೋಟದಲ್ಲಿ ಅಡ್ಡಾಡಿ ಸಂಜೆ ಆರು ಗಂಟೆಯ ಹೊತ್ತಿಗೆ ಕ್ಲಬ್‌ಗೆ ಭೇಟಿ ನೀಡುತ್ತಿದ್ದರು. ಅವರು ಹಾಕಿ ಮತ್ತಿತರ ಆಟಗಳನ್ನು ತಿಳಿದಿದ್ದರೂ, ಅವರ ನೆಚ್ಚಿನ ಕ್ರೀಡೆಗಳೆಂದರೆ ಕ್ರಿಕೆಟ್ ಮತ್ತು ಟೆನಿಸ್. ಒಂದು ಗಂಟೆ

ಟೆನಿಸ್ ಆಡಿದ ಬಳಿಕ ಮತ್ತೊಂದು ಗಂಟೆ ಇಸ್ಪೀಟಾಟದಲ್ಲಿ ಕಾಲ ಕಳೆಯುತ್ತಿದ್ದು, ಆಮೇಲೆ ಮನೆಗೆ ವಾಪಸ್ಸಾಗುತ್ತಿದ್ದರು. ರಾತ್ರಿ ಊಟದ ಬಳಿಕ ಸ್ವಲ್ಪ ಹೊತ್ತು ವಿಶ್ರಮಿಸಿ ಕೊಂಡು, ನಿದ್ದೆ ಬರುವವರೆಗೂ ಯಾವುದಾದರೊಂದು ಇಂಗ್ಲಿಷ್ ಕಾದಂಬರಿಯನ್ನೋ ನಾಟಕವನ್ನೋ ತಿರುವಿ ಹಾಕುತ್ತಿದ್ದರು. ಸಾಮಾನ್ಯವಾಗಿ ರಾತ್ರಿ ಹತ್ತಕ್ಕೆ ಅವರ ದಿನಚರಿ ಮುಗಿಯುತ್ತಿತ್ತು.

ಕೆಲಸ ಮಾಡುವ ಉತ್ಸುಕತೆಗೆ ಮೌಲ್ಯದ ವಿಷಯದಲ್ಲಿ ತಾಯಿಯನ್ನೂ ಮತ್ತು ತಾತ್ವಿಕ ದೃಷ್ಟಿಕೋನಗಳ ವಿಷಯದಲ್ಲಿ ತಾತನನ್ನೂ ಅವರು ತಮ್ಮ ಆದರ್ಶವನ್ನಾಗಿ ಮಾಡಿಕೊಂಡಿದ್ದರು. ತಾಯಿಯ ಬಗ್ಗೆ ಅವರದು ಪರಿಪೂರ್ಣ ನಿಷ್ಠೆ. ತಾಯಿಯ ಇಷ್ಟಕ್ಕೆ ವಿರುದ್ಧವಾಗಿ ಅವರು ಪ್ರಾಯಶಃ ನಡೆದುಕೊಂಡದ್ದೇ ಇಲ್ಲ. ಆ ಹಿರಿಯಜೀವ ಹಳೆಯ ಕಾಲದ ಹೆಂಗಸು, ಪರಂಪರೆ ಸಂಪ್ರದಾಯದಲ್ಲಿ ಆಕೆಗೆ ಅನನ್ಯ ಶ್ರದ್ಧೆ. ತಮಗೆ ನಂಬಿಕೆಯಿಲ್ಲದಿದ್ದರೂ ನಿಜಲಿಂಗಪ್ಪ ಕೆಲವು ವಿಧಿ-ಆಚರಣೆಗಳನ್ನು ಅನುಸರಿಸು ತ್ತಿದ್ದರು, ಅದಕ್ಕೆ ಕಾರಣ ತಾವು ಹಾಗೆ ಮಾಡದಿದ್ದರೆ ತಾಯಿಗೆ ನೋವಾಗುತ್ತದೆ ಎಂಬುದು. ನೀಲಮ್ಮನವರನ್ನು ತೃಪ್ತಿಪಡಿಸಲು ಮನೆಯ ಪ್ರತಿಯೊಬ್ಬರೂ ಬೆಳಿಗ್ಗೆ ಸ್ನಾನದ ಬಳಿಕ 'ಲಿಂಗಪೂಜೆ' ಮಾಡುತ್ತಿದ್ದರು. ಆ ಕಾಲಕ್ಕೆ ನಿಜಲಿಂಗಪ್ಪನವರಿಗೆ ದೇವರಲ್ಲಿ ನಂಬಿಕೆಯಿದ್ದರೂ ಆಚರಣೆಯಾಗಿ ಪೂಜೆ ಮಾಡುವುದಕ್ಕೆ ಅವರ ವಿರೋಧ ವಿತ್ತು. ಶಿವ ಸರ್ವಾಂತರ್ಯಾಮಿ, ಹೀಗಾಗಿ ಇಷ್ಟಲಿಂಗದಂತಹ ಸಂಕೇತಕ್ಕೆ ಅರ್ಥವಿಲ್ಲ ವೆಂಬುದು ಅವರ ನಂಬಿಕೆ. ಉಪನಿಷತ್ತಿನಲ್ಲಿ ವರ್ಣಿತವಾದ ದೇವರು ನಿರಾಕಾರ, ಸರ್ವಶಕ್ತ, ಅನಿರ್ವಚನೀಯ ಹಾಗೂ ನಿರಂಜನ ಎಂಬುದರಲ್ಲಿ ಅವರಿಗೆ ವಿಶ್ವಾಸ. ದೇವರ ಬಗೆಗಿನ ಚಿಂತನೆ-ಧ್ಯಾನಗಳಿಗೆ ಅವರು ಮಹತ್ವ ಕೊಡುತ್ತಿದ್ದರು. ಇದರಿಂದ ವ್ಯಕ್ತಿ-ಪ್ರಕೃತಿಗಳ ನಡುವಣ ಸಂಬಂಧದ ಸ್ವರೂಪ ಎಂತಹುದು ಎಂಬುದರ ಬಗ್ಗೆ ಏನಾದರೂ ಹೊಳಹು ದೊರೆತೀತು. ಇದರಿಂದಾಗಿ ವ್ಯಕ್ತಿ ಒಳ್ಳೆ ಕಾರ್ಯಗಳನ್ನು ಮಾಡುವಂತಾಗಬಹುದು, ದೇವರಿಗೆ ಅರ್ಪಿಸಬಹುದಾದ ಶ್ರೇಷ್ಠ ಪೂಜೆ ಎಂದರೆ ಸತ್ಕಾರ್ಯವೇ. ೧೯೮೩ನೇ ಇಸವಿ ಅಕ್ಟೋಬರ್ ಮೂರರಂದು ನಿಜಲಿಂಗಪ್ಪನವರು ಪ್ರೊ. ದೇ. ಜವರೇಗೌಡರಿಗೆ ನೀಡಿದ ಸಂದರ್ಶನದಲ್ಲಿ ಈ ಕುರಿತು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದು ಹೀಗೆ: "ಪ್ರತಿ ಜೀವಿಯ ಅಂತರಾಳದಲ್ಲಿಯೂ ಯಾವುದೋ ಒಂದು ಚೇತನ ಅಡಗಿದೆ ಎಂಬುದು ನನ್ನ ತಿಳಿವಳಿಕೆ. ಪ್ರಕೃತಿಯನ್ನು ಕಂಡಾಗ ನಾನು ಮೈಮರೆಯುತ್ತೇನೆ. ನಾನೂ ಪ್ರಕೃತಿಯ ಒಂದು ಭಾಗವೇ ಎಂಬುದು ನನ್ನ ನಿಲವು. ಪ್ರಕೃತಿಯನ್ನು ಕುರಿತು ಚಿಂತಿಸುವುದೂ ಒಂದು ಬಗೆಯ ಧ್ಯಾನವೇ. ಸೃಷ್ಟಿಕರ್ತನ ಅದ್ಭುತ ಶಿಲ್ಪವನ್ನು ಕಂಡು ನಾನು ಕರಗಿಹೋಗುತ್ತೇನೆ. ಸೌಂದರ್ಯವನ್ನು ಸವಿಯಲು

ಅವನು ನಮಗೆ ಸಹಾಯ ಮಾಡುತ್ತಾನೆ. ಕೆಲವು ಬಾರಿ ದೇವಸ್ಥಾನಗಳಿಗೆ ಹೋಗಿರುವುದುಂಟು, ಆದರೆ ಹಾಗೆ ಮಾಡಿದ್ದು ಗೆಳೆಯರಿಗೆ ಸಂತೋಷವಾಗುತ್ತದೆ ಎಂಬ ಕಾರಣಕ್ಕಾಗಿ. ದೇವರ ಮುಂದೆ ಕೈಮುಗಿದಿದ್ದೇನೆ ಕೂಡ. ಸಂತರು ಮಹಾತ್ಮರ ಮುಂದೆ ನಾನು ತಲೆಬಾಗಿ ನಿಂತಿದ್ದೇನೆ. ಅಲ್ಲೆಲ್ಲ ನನಗೆ ದೈವದ ಅಸ್ತಿತ್ವ ಕಾಣಿಸುತ್ತದೆ. ರಾಜಘಾಟ್, ಬೃಂದಾವನ, ಎಡೆಯೂರು, ಮಹದೇಶ್ವರ ಬೆಟ್ಟಗಳಂತಹ ಸ್ಥಳಗಳಿಗೆ ಹೋದಾಗ ನನ್ನ ಅಂತಃಪ್ರಜ್ಞೆ ಜಾಗೃತಗೊಳ್ಳುತ್ತದೆ, ನಾನು ಹೊರ ಜಗತ್ತನ್ನು ಮರೆಯುವಂತಾಗುತ್ತದೆ!" ಇದರಿಂದ ನಿಜಲಿಂಗಪ್ಪನವರಿಗೆ ದೇವರ ಸರ್ವಾಂತರ್ಯಾಮಿತ್ವದಲ್ಲಿ ನಂಬಿಕೆ ಇರುವುದು ವ್ಯಕ್ತವಾಗುತ್ತದೆ. ಹಾಗೆ ನೋಡಿದರೆ, ಅವರು ದೇವರನ್ನು ಕಂಡದ್ದು ತಾಯಿಯಲ್ಲಿಯೇ!

ಅಲ್ಪ ಅಂತರದಲ್ಲಿ ಹುಟ್ಟಿದ ಮೂವರು ಮೊಮ್ಮಕ್ಕಳು ಎಂದರೆ ನಿಜಲಿಂಗಪ್ಪನವರ ತಾಯಿಗೆ ಪರಮ ಪ್ರೀತಿ, ಅವರನ್ನು ಹೆತ್ತ ಸೊಸೆಯ ಬಗ್ಗೆ ಅವರ ಅಕ್ಕರೆ ಹೆಚ್ಚಾಯಿತು. ಜೀವನ ಪೂರ್ತಿ ಬಡತನದ ವಿರುದ್ಧ ಹೋರಾಟ ನಡೆಸಿದ ಅನಕ್ಷರಸ್ಥ ತಾಯಿ, ಅಲ್ಪ ವಿದ್ಯಾವತಿಯಾದರೂ ಚೆಲುವೆಯಾಗಿದ್ದ ಹೆಂಡತಿ ಹಾಗೂ ಅಡೆತಡೆಗಳನ್ನೆದುರಿಸಿ ತನ್ನ ಪ್ರತಿಭೆಯಿಂದಲೇ ವೃತ್ತಿಯಲ್ಲಿ ಮುಂದೆ ಬಂದಿದ್ದ ಗಂಡ – ಒಂದರ್ಥದಲ್ಲಿ ಈ ಮೂರು ಮುಖ್ಯ ಪಾತ್ರಗಳು ಅನುಭವ–ಸಂಸ್ಕೃತಿಗಳ ವಿಷಯದಲ್ಲಿ ಭಿನ್ನವಾಗಿದ್ದವು. ಆದರೆ, ಅವರು ಅತ್ಯಂತ ಸಾಮರಸ್ಯದಿಂದ ಒಟ್ಟಾಗಿ ಬಾಳಿದರು, ಕೌಟುಂಬಿಕ ಸಂತೋಷದಲ್ಲಿ ಭಾಗಿಗಳಾದರು. ಈ ಸಮತೋಲನ ಸೂಕ್ಷ್ಮವಾಗಿದ್ದು ಕೊಂಚದರಲ್ಲಿ ಏರುಪೇರಾಗಬಹುದಾದಂಥದು. ಒಂದು ಸಂದರ್ಭದಲ್ಲಿ, ಎಲ್ಲ ಭಾರತೀಯ ಸಂಸಾರಗಳಲ್ಲಿ ನಡೆಯುವಂತೆಯೇ, ಅತ್ತೆ ಸೊಸೆಯರ ನಡುವೆ ವಿರಸ ಮೂಡಿ ತಾಯಿ ಊಟ ಬಿಟ್ಟರು. ಅವರು ಊಟ ಮಾಡುವಂತೆ ಒಲಿಸಲು ನಿಜಲಿಂಗಪ್ಪನವರು ಹರಸಾಹಸ ಪಡಬೇಕಾಯಿತು. ಆ ಮುಂದೆ, ಇಂಥ ಸನ್ನಿವೇಶಗಳು ಉದ್ಭವವಾಗದಂತೆ ಎಚ್ಚರವಹಿಸಬೇಕೆಂದು ಈ ದಂಪತಿಗಳು ತೀರ್ಮಾನಿಸಿ ಹಿರಿಯಾಕೆಯ ಮಾತುಗಳನ್ನು ಮರುಮಾತಿಲ್ಲದೆ ನಡೆಸಬೇಕೆಂದು ನಿರ್ಧರಿಸಿದರು. ಹೀಗೆ ಈ ಕಿರಿಯ ದಂಪತಿಗಳು ಆತ್ಮಾಭಿಮಾನವನ್ನು ಕಡೆಗಣಿಸಿ, ಕೌಟುಂಬಿಕ ಸಾಮರಸ್ಯವನ್ನು ಸ್ಥಾಪಿಸಿದರು. ನಿಜಲಿಂಗಪ್ಪನವರ ಅಕ್ಕ ಪುಟ್ಟಮ್ಮ ತನ್ನ ಸೋದರ ಮಾವನನ್ನೇ ಮದುವೆಯಾಗಿದ್ದರು, ಮದುವೆಯಾಗಿ ಗಂಡನ ಮನೆಗೆ ಹೋದ ತಕ್ಷಣ, ನಿಜಲಿಂಗಪ್ಪನವರ ತುಂಬ ಕಡಿಮೆ ಓದಿದ್ದ ಅಣ್ಣ ಹಲವಾಗಿಲುನಿಂದ ಚಿತ್ರದುರ್ಗಕ್ಕೆ ವಾಸ್ತವ್ಯ ಬದಲಾಯಿಸಲು ನಿರ್ಧರಿಸಿದರು. ನಿಜಲಿಂಗಪ್ಪನವರ ಹಣಕಾಸಿನ ನೆರವಿನಿಂದ ಅವರಣ್ಣ ಜೀವನೋಪಾಯಕ್ಕಾಗಿ ಒಂದು ಅಂಗಡಿ ತೆರೆದರು. ಮುಂದೆಯೂ ಅವರು ತಮ್ಮ ಸಂಪಾದನೆಯನ್ನು ಕಡಿಮೆ ಅದೃಷ್ಟವಂತರಾಗಿದ್ದ ಅಣ್ಣನೊಡನೆ ಹಂಚಿಕೊಂಡರು. ಹಾಗೆ ನೋಡಿದರೆ, ಪುಟ್ಟಮ್ಮನವರ ಹಿರಿಯ ಮಗ

ಬಸವರಾಜನನ್ನು ಬೆಳೆಸಿದವರೂ ಅವರೇ. ತಮ್ಮ ಸ್ವಂತ ಭವಿಷ್ಯ, ಅಂದರೆ ಮಕ್ಕಳ ಓದು ಮತ್ತು ಮದುವೆಗಳ ಬಗ್ಗೆ ಸ್ವಲ್ಪ ಯೋಚಿಸಬೇಕೆಂದೂ ಅದಕ್ಕಾಗಿ ಒಂದಷ್ಟು ಹಣ ಕೂಡಿಡಬೇಕೆಂದೂ ಮುರಿಗೆಮ್ಮನವರು ಒಮ್ಮೆ ಸೂಚಿಸಿದರು. ಆಗ ನಿಜಲಿಂಗಪ್ಪ ನವರು ಬಸವಣ್ಣನವರ ವಚನವೊಂದನ್ನು ಉದಾಹರಿಸಿ ನಾಳೆಗಾಗಿ ಇಂದಿನ ಸುಖವನ್ನು ಬಲಿಗೊಡಬಾರದೆಂದು ಬುದ್ಧಿ ಹೇಳಿದರು. ಹೆಂಡತಿ ಆಗೇನೋ ಸುಮ್ಮನಾದರು, ಆದರೆ ಮನಸ್ಸಿನಾಳದಲ್ಲಿ ಮಕ್ಕಳ ಭವಿಷ್ಯದ ಚಿಂತೆ ಕೊರೆಯುತ್ತಲೇ ಇತ್ತು. ಸಂಪಾದನೆಯ ಭಾಗವನ್ನು ಇತರರಿಗೆ, ಅದರಲ್ಲಿಯೂ ಅಣ್ಣನಿಗೆ, ಧಾರಾಳವಾಗಿ ಕೊಡುವುದರ ಬಗ್ಗೆ ಹೆಂಡತಿ ತಮ್ಮ ಅಭ್ಯಂತರವನ್ನು ವ್ಯಕ್ತಪಡಿಸಿದರು. ನಿಜಲಿಂಗಪ್ಪನವರು ಸಿಡುಕಿನಿಂದ, ಹೀಗೆ ಪ್ರತಿಕ್ರಿಯಿಸಿದ್ದರು: "ಮೂರು ವರ್ಷಗಳ ಕಾಲ ನನ್ನ ಜೊತೆ ಬಾಳ್ವೆ ಮಾಡಿದ್ದರೂ ನೀನು ನನ್ನನ್ನು ಅರ್ಥಮಾಡಿಕೊಂಡಿಲ್ಲ. ನಮ್ಮ ಅಣ್ಣ ಒಬ್ಬ ನತದೃಷ್ಟ. ಅವನು ಓದಿದ್ದು ಕಡಿಮೆ, ಬಾಳನ್ನೆಲ್ಲ ಬವಣೆಯಲ್ಲೇ ಕಳೆದಿದ್ದಾನೆ. ಅವನಿಗೆ ಸಹಾಯ ಮಾಡು ವುದು ನನ್ನ ಧರ್ಮ. ಇದರಿಂದ ಅವ್ವನಿಗೂ ಸಂತೋಷವಾಗ್ತದೆ. ನಾನು ಜೀವನದಲ್ಲಿ ಮುಂದೆ ಬಂದಿರುವುದೂ ಅನೇಕರ ಧಾರಾಳತನದ ಕಾರಣದಿಂದಲೇ. ನಾನು ಈ ಮಟ್ಟಕ್ಕೆ ಹೇಗೆ ಬೆಳೆದೆ ಎಂಬುದನ್ನು ಮರೆಯುವಂತಿಲ್ಲ. ನನ್ನ ನೆರವು ಬೇಡಿ ಬಂದ ಬಡವರನ್ನು ಬರಿಗೈಲಿ ಹಿಂದಿರುಗಿಸುವುದು ನನ್ನಿಂದ ಸಾಧ್ಯವಿಲ್ಲ. ಅವರು ನೊಂದು ಕೊಂಡರೆ ನಮ್ಮ ಮಕ್ಕಳಿಗೆ ಒಳ್ಳೆಯದಾಗುವುದಿಲ್ಲ. ಬಡವರು ದೈವಸ್ವರೂಪಿಗಳು. ಶಿವ ಕೊಟ್ಟದ್ದನ್ನು ಶಿವನಿಗೆ ತಾನೇ ಅರ್ಪಿಸಬೇಕು? ಹುಟ್ಟುವಾಗ ನಾವು ಏನೂ ತರುವುದಿಲ್ಲ, ಸಾಯುವಾಗ ಏನನ್ನೂ ಕೊಂಡೊಯ್ಯುವುದಿಲ್ಲ." ಆದರೆ ಮುರಿಗೆಮ್ಮನವರು ಮಾತ್ರ "ಕೊನೆಯ ಪಕ್ಷ, ನಮ್ಮ ಹೆಣ್ಣು ಮಕ್ಕಳಿಗೆ ಒಂದಷ್ಟು ಒಡವೆಗಳನ್ನಾದರೂ ಮಾಡಿಸ ಬೇಡವೇ? ಜೊತೆಗೆ ಚಿನ್ನ–ನಮ್ಮ ಆಪತ್ಕಾಲದಲ್ಲಿ ನೆರವಿಗೆ ಬರುತ್ತೆ" ಎಂದು ಒತ್ತಾಯಿಸಿ ದರು. ಚೆನ್ನಾಗಿರುವಾಗ, ಮುಂದೇ ಏನೋ ಆಗಬಾರದ್ದು ಆಗಿಬಿಡಬಹುದು ಎಂದು ಯೋಚಿಸುತ್ತ ಕೂಡಬಾರದು, ಜೊತೆಗೆ ಮದುವೆಯ ಕಾಲಕ್ಕೇ ತಮಗೆ ಚಿನ್ನದ ಬಗ್ಗೆ ವ್ಯಾಮೋಹವಿಲ್ಲ ಎಂದು ಹೇಳಿದ್ದೆನಲ್ಲ ಎಂದು ನಿಜಲಿಂಗಪ್ಪ ವಾದಿಸಿದರು. ಮಕ್ಕಳಿಗೆ ಒಳ್ಳೆಯ ವಿದ್ಯೆ ನೀಡುವುದು ತಮ್ಮ ಕರ್ತವ್ಯ, ಅದರಿಂದ ಅವರು ತಮ್ಮ ಭವಿತವ್ಯವನ್ನು ರೂಪಿಸಿಕೊಳ್ಳಬಹುದು ಎಂದು ಕೊನೆಯ ಮಾತನ್ನಾಡಿದರು. ಅಲ್ಲದೆ ಅತಿ ರಕ್ಷಣೆ ಮಕ್ಕಳನ್ನು ಹಾಳುಮಾಡಬಹುದು ಎಂದೂ ಎಚ್ಚರಿಸಿದರು. ತನ್ನ ಗಂಡನ ವಿವೇಕದ ಬಗ್ಗೆ ಆಕೆಗಿದ್ದ ನಂಬಿಕೆ ಅವರ ಬಾಯನ್ನು ಮುಚ್ಚಿಸಿತು.

ನಿಜಲಿಂಗಪ್ಪನವರ ಸಂಸಾರ ಮುಕ್ತವೂ ಆದರದಿಂದ ಕೂಡಿದ್ದೂ ಆಗಿತ್ತು. ಹೆಚ್ಚು ಮಕ್ಕಳಾದಂತೆ ಸಂಸಾರದ ವೆಚ್ಚವೂ ಹೆಚ್ಚಾಯಿತು, ಜೊತೆಗೆ ಕಕ್ಷಿದಾರರಿಗೂ

ಬಡ ವಿದ್ಯಾರ್ಥಿಗಳಿಗೂ ಮಾಡುತ್ತಿದ್ದ ಊಟೋಪಚಾರದ ಖರ್ಚು ಬೇರೆ. ಬಡವನಾಗಿದ್ದು ಇತರರ ನೆರವಿನಿಂದ ಮುಂದೆ ಬಂದಿದ್ದ ನಿಜಲಿಂಗಪ್ಪನವರು ಬಡ ವಿದ್ಯಾರ್ಥಿಗಳ ಆವಶ್ಯಕತೆಗಳ ಬಗ್ಗೆ ಸಂವೇದನಾಶೀಲರೂ ಸಹಾನುಭೂತಿಪರರೂ ಆಗಿದ್ದರು. ಹೆಚ್ಚುತ್ತಿದ್ದ ವೆಚ್ಚಗಳಿಗೆ ಅವರ ಆದಾಯವು ಸಾಕಾಗುತ್ತಿದ್ದರೂ, ಸಮಸ್ಯೆ ಇದ್ದುದು ಹಣದಲ್ಲಲ್ಲ. ಇವರಿಗೆಲ್ಲ ಅಡುಗೆ ಮಾಡಿ ಬಡಿಸುವವರು ಯಾರು, ಉಳಿದ ಕೆಲಸಗಳನ್ನು ನಿಭಾಯಿಸುವವರು ಯಾರು? ಈ ಬಗ್ಗೆ ಮುರಿಗೆಮ್ಮನವರು ಗಂಡನಿಗೆ ಹೇಳಿದರು. ನಿಜಲಿಂಗಪ್ಪನವರು ಅದನ್ನು ಲಘುವಾಗಿ ಪರಿಗಣಿಸಿ ತಮಾಷೆಯಿಂದ, "ಈ ಬಡ ಹುಡುಗರೆಲ್ಲ ನಿನ್ನ ಮಕ್ಕಳೇ ಆಗಿದ್ದಿದ್ದರೆ ಏನು ಮಾಡುತ್ತಿದ್ದೆ? ಅಲ್ಲದೆ, ತಮಗೆ ಬೇಕಾದಷ್ಟು ಇರುತ್ತಿದ್ದರೆ ಅವರೇಕೆ ಊಟಕ್ಕಾಗಿ ಬೇಡಿಕೊಂಡು ಇಲ್ಲಿಗೆ ಬರುತ್ತಿದ್ದರು? ಜೊತೆಗೆ ಹೆಂಗಸರಿಗೆ ಗಂಡಸರನ್ನು ನಿಭಾಯಿಸುವ ಕಲೆಯನ್ನು ದೇವರು ನೀಡಿರುತ್ತಾನೆ! ಇನ್ನೂ ಹೆಚ್ಚಿಗೆ ಆಳುಗಳು ಬೇಕೂಂತ ಹೇಳಿದ್ದರೆ ನಾನು ಅದನ್ನು ಪರಿಗಣಿಸಬಹುದಾಗಿತ್ತು" ಎಂದರು. ಆಳುಗಳ ದಂಡು ಹೆಚ್ಚಾಯಿತು, ನಿಜಲಿಂಗಪ್ಪನವರು ಸೃಷ್ಟಿಸಿದ್ದ ಮನೆವಾಳ್ತನದ ಸ್ವರೂಪದಲ್ಲಿ ಅವರನ್ನೆಲ್ಲ ಸಂಬಳದಾರ ಆಳುಗಳಿಗಿಂತ ಹೆಚ್ಚಾಗಿ ಮನೆಯವರಂತೆಯೇ ಕಾಣುವುದಾಗಿತ್ತು. ಅವರಿಗೆಲ್ಲ ಉಳಿದುಕೊಳ್ಳಲು ಜಾಗವನ್ನೂ ನಿಜಲಿಂಗಪ್ಪ ನೀಡಿದ್ದರು. ಅವರಿಗೆ ಕೆಲಸಗಾರರೆಂದರೆ ಮಮತೆ, ಗೌರವ, ಎಂದಿಗೂ ಅವರನ್ನು ಶೋಷಿಸಲು ಅವಕಾಶ ಕೊಡುತ್ತಿರಲಿಲ್ಲ. ಅವರೊಡನೆ ಸರಾಗವಾಗಿ ಬೆರೆಯುತ್ತಿದ್ದುದಲ್ಲದೆ, ಹಬ್ಬ ಹರಿದಿನಗಳಲ್ಲಿ ಅವರೊಡನೆ ಊಟವನ್ನೂ ಮಾಡುತ್ತಿದ್ದರು. ಒಮ್ಮೆ ಒಬ್ಬ ಸೇವಕ ಅವರ ಬಳಿ ಬಂದು ಕಂದಾಯದ ಅಧಿಕಾರಿಗಳಿಗೆ ಹೇಳಿ ತನಗೆ ಸರ್ಕಾರಿ ಜಮೀನನ್ನು ಮಂಜೂರು ಮಾಡಿಸಿಕೊಡುವಂತೆ ದುಂಬಾಲು ಬಿದ್ದ. ಹಾಗೆ ಮಾಡಲು ನಿಜಲಿಂಗಪ್ಪನವರು ಒಪ್ಪಲಿಲ್ಲ, ಬದಲಿಗೆ ಮಾರುಕಟ್ಟೆಯಲ್ಲಿ ಜಮೀನು ಕೊಳ್ಳಲು ಅವನಿಗೆ ಹಣ ಸಹಾಯ ಮಾಡುವುದಾಗಿ ಹೇಳಿದರು! ಅಡುಗೆಯವನು ತೀರಿಕೊಂಡಾಗ, ನಿಜಲಿಂಗಪ್ಪನವರು ಸ್ವತಃ ಅವನ ಉತ್ತರಕ್ರಿಯೆಗಳ ಉಸ್ತುವಾರಿ ಹೊತ್ತಿದ್ದರು. ಅವರಿಗೆ ಸೇವಕರು–ಯಜಮಾನರು, ಜಾತಿಮತ ಈ ವಿಷಯಗಳಲ್ಲಿ ಭೇದವಿರಲಿಲ್ಲ. ಮನೆಯ ಇತರರಂತೆಯೇ ಆಳೊಬ್ಬನಿಗೆ ಮನೆಯ ಯಾವ ಭಾಗದಲ್ಲಿ ಬೇಕಾದರೂ ಓಡಾಡುವ ಸ್ವಾತಂತ್ರ್ಯವಿತ್ತು. ವಾಸ್ತವವಾಗಿ, ನಿಜಲಿಂಗಪ್ಪನವರ ಮನೆಯಲ್ಲಿ ಆಳಾಗಿ ಕೆಲಸಕ್ಕೆ ಸೇರುವುದೆಂದರೆ ಜೀವನದ ಪುಣ್ಯ ಎಂಬ ಭಾವನೆಯಿತ್ತು. ಆದರೆ ಈ ಅಸಾಧಾರಣ ಔದಾರ್ಯದೊಡನೆ ಶಿಸ್ತು ಮತ್ತು ಕೆಲಸದ ಬಗ್ಗೆ ನಿಷ್ಠೆಯನ್ನೂ ಅವರು ಕೆಲಸಗಾರರಿಂದ ನಿರೀಕ್ಷಿಸುತ್ತಿದ್ದರು. ಅವರೆಂದೂ ಕೆಲಸದ ಬಗ್ಗೆ ನಿರ್ಲಕ್ಷ್ಯ ಅಥವಾ ಕಿತಾಪತಿ ಮಾಡುವುದನ್ನು ಸಹಿಸುತ್ತಿರಲಿಲ್ಲ. ತಪ್ಪು ಮಾಡಿದವನಿಗೆ ನಿರ್ದಾಕ್ಷಿಣ್ಯದಿಂದ ಶಿಕ್ಷೆ ಕೊಡುತ್ತಿದ್ದರು.

ಒಂದು ನಿದರ್ಶನ: ಒಮ್ಮೆ ಆಳೊಬ್ಬನ ಖೋಟ ನಾಣ್ಯಗಳನ್ನು ಮಾಡುತ್ತಿದ್ದ ಆರೋಪ ಹೊತ್ತ ತಮ್ಮನ ಪರವಾಗಿ ವಾದಿಸಲು ಅವರು ಒಪ್ಪಲಿಲ್ಲ. ಆದರೆ ಆನಂತರ ಅವನು ನಿರಪರಾಧಿ ಎಂಬುದು ಗೊತ್ತಾದಾಗ ನಿಜಲಿಂಗಪ್ಪನವರು ತಮ್ಮ ನಿಲವನ್ನು ಬದಲಾಯಿಸಲು ಹಿಂದೆ ಮುಂದೆ ನೋಡಲಿಲ್ಲ, ತನ್ನ ಗೆಳೆಯ ವಕೀಲರೊಬ್ಬರಿಗೆ ಅವನ ಕೇಸಿನ ವಕಾಲತ್ತು ವಹಿಸಲು ಕೇಳಿಕೊಂಡರು.

ಪ್ರಾಯಶಃ ನಿಜಲಿಂಗಪ್ಪನವರಗೆ 'ದಯವಿಲ್ಲದ ಧರ್ಮವದೇವುದಯ್ಯಾ?' ಎಂಬ ಬಸವಣ್ಣನ ವಚನದಲ್ಲಿ ಅನನ್ಯ ನಿಷ್ಠೆ. ಮುಗ್ಧತೆ ಹಾಗೂ ಅನವಶ್ಯಕ ನೋವನ್ನು ಕಂಡಾಗ ಅವರ ಮನಸ್ಸು ಕರಗಿ ಹೋಗುತ್ತಿತ್ತು. ಮೂಕಪ್ರಾಣಿಗಳ ಬಗ್ಗೆಯೂ ಇದೇ ಭಾವನೆ. ಬೀದಿ ನಾಯಿಗಳೊಡನೆ ತಿಪ್ಪೆಗುಂಡಿಗಳಲ್ಲಿನ ಎಂಜಲನ್ನಕ್ಕಾಗಿ ಪೈಪೋಟಿ ನಡೆಸುತ್ತಿದ್ದ ಬರಿಮೈ ಭಿಕ್ಷುಕರನ್ನಾಗಲೀ ಊಟಕ್ಕಿಲ್ಲದ ಹರಿನಜರನ್ನಾಗಲೀ ಕಂಡಾಗ ಅವರ ಹೊಟ್ಟೆ ಚುರುಗುಟ್ಟುತ್ತಿತ್ತು. ಬೇಕಾದ ಹಾಲಿಗಾಗಿ ಮನೆಯಲ್ಲಿ ಸಾಕಷ್ಟು ಹಸು ಎಮ್ಮೆಗಳಿದ್ದವು, ನಿಜಲಿಂಗಪ್ಪನವರು ಅವುಗಳ ಬಗ್ಗೆ ಸ್ವತಃ ತಾವೇ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು. ಕರುಗಳು ಹೊಟ್ಟೆ ತುಂಬ ಹಾಲುಣ್ಣುವ ಮುಂಚೆ ಹಾಲು ಕರೆಯಬಾರದೆಂದು ಅವರು ಕಟ್ಟಪ್ಪಣೆ ಮಾಡಿದ್ದರು. ತಮ್ಮ ಜೀವನೋಪಾಯಕ್ಕಾಗಿ ಕೋತಿ ನಾಯಿ ಕರಡಿ ಮುಂತಾದ ಪ್ರಾಣಿಗಳನ್ನು ಬಳಸಿಕೊಳ್ಳುವುದನ್ನು ಅವರು ದ್ವೇಷಿಸುತ್ತಿದ್ದರು. ಅವರಿಗೆ ಸರ್ಕಸ್ ಪ್ರಾಣಿಗಳ ಬಗ್ಗೆಯೂ ಅಪಾರ ಕರುಣೆ, ಅವುಗಳಿಗೆ ಹಿಂಸೆ ನೀಡುವುದನ್ನು ಕಂಡು ಅವರಿಗೆ ಸಹಿಸಲಾಗುತ್ತಿರಲಿಲ್ಲ. ಅವರ ಮಮತೆಗೆ ಪಾತ್ರವಾದವುಗಳಲ್ಲಿ ಮನೆಯ ತೋಟದ ಗಿಡಗಳೂ ಸೇರಿದ್ದವು.

ವೃತ್ತಿ ಜೀವನದಲ್ಲಿ ನಿಜಲಿಂಗಪ್ಪನವರದು ಅಮೋಘ ಯಶಸ್ಸು. ಪರಿಪೂರ್ಣ ವಕೀಲಿ ವೃತ್ತಿಯ ಸಾಕಾರವೆಂಬಂತೆ ಅವರ ಹೆಸರು ಜಿಲ್ಲೆಯಲ್ಲೆಲ್ಲ ಕೀರ್ತಿ ಪಡೆದಿತ್ತು. ಬಡಕಕ್ಷಿದಾರರಿಗಂತೂ ಅವರೆಂದರೆ ಅಪಾರ ಗೌರವ, ಅವರಿಂದ ಪಡೆಯುತ್ತಿದ್ದ ಸಂಭಾವನೆ ಅತ್ಯಲ್ಪ ಅಥವಾ ಇಲ್ಲವೇ ಇಲ್ಲ. ಒಮ್ಮೆ ಹೀಗಾಯಿತು: ಮೊಳಕಾಲ್ಮೂರಿನ ರೈತನೊಬ್ಬನಿಗೆ ಅವನ ಬಂಧುವೊಬ್ಬ ಜಮೀನಿನ ವಿಷಯದಲ್ಲಿ ಮೋಸ ಮಾಡಿದ, ಆ ರೈತನಿಗೆ ವಕೀಲರಿಗೆ ಹಣ ಕೊಡುವ ಚೈತನ್ಯವಿರಲಿಲ್ಲ. ನಿಜಲಿಂಗಪ್ಪನವರನ್ನು ಕಾಣುವಂತೆ ಯಾರೋ ಅವನಿಗೆ ಹೇಳಿದರು. ಮತ್ತೊಮ್ಮೆ, ಕುರುಬ ಜನಾಂಗಕ್ಕೆ ಸೇರಿದ ಚಳ್ಳಕೆರೆಯ ಬಡವನೊಬ್ಬ ಒಬ್ಬ ಶ್ರೀಮಂತ ವೀರಶೈವನಿಗೆ ತನ್ನ ಜಮೀನನ್ನು ಅಡವು ಇರಿಸಿದ್ದ. ಆ ಶ್ರೀಮಂತ ಸಾಲಕ್ಕೆ ಚಕ್ರಬಡ್ಡಿ ಹಾಕಿ ಜಮೀನನ್ನು ಲಪಟಾಯಿಸುವ ಹುನ್ನಾರ ಮಾಡಿದ. ಬಡವರ ಬಂಧು, ದೀನರ ಸಹಾಯಕ ಎಂದು ಹೆಸರು ಪಡೆದ ನಿಜಲಿಂಗಪ್ಪನವರನ್ನು ಕಾಣಲು ಅವನಿಗೂ ಯಾರೋ ಸಲಹೆಯಿತ್ತರು. ಆದರೆ

ಅವನಿಗಿದ್ದ ಅನುಮಾನವೆಂದರೆ ವೀರಶೈವನ, ಅದೂ ಹಣವಂತನಾದವನ ವಿರುದ್ಧ ವೀರಶೈವ ವಕೀಲ ವಕಾಲತ್ತು ವಹಿಸುತ್ತಾರೆಯೇ ಎಂಬುದು! ಆದರೆ ಅವನಿಗೆ ಸಲಹೆ ಇತ್ತವರು, ನಿಜಲಿಂಗಪ್ಪನವರು ಜಾತಿಯ ಸಂಕುಚಿತತೆಯನ್ನು ಮೀರಿದವರೆಂದೂ ಅವರು ನ್ಯಾಯಕ್ಕಾಗಿ ಹೋರಾಡುವವರೆಂದೂ ವಿವರಿಸಿದರು. ಅವರಲ್ಲಿ ಪರಿಣತ ವೃತ್ತಿಪರತೆ ಹಾಗೂ ಬಡವರ ಪರವಾಗಿ ನ್ಯಾಯಕ್ಕಾಗಿ ಹೋರಾಡುವ ಮಾನವೀಯತೆಗಳು ಅಪೂರ್ವವಾಗಿ ಮೇಳೈಸಿದ್ದವು. ಜಿಲ್ಲೆಯ ಜನ ಅವರಿಗೆ ಗೌರವ ನೀಡುತ್ತಿದ್ದುದಕ್ಕೆ ಕಾರಣ ಅವರ ವೃತ್ತಿ ಕೌಶಲದೊಡನೆ ಸೇರಿದ್ದ ಮಾನವೀಯ ಕಕ್ಕುಲತೆಗಾಗಿ. ಪ್ರೊ. ಜವರೇ ಗೌಡರ ಪ್ರಕಾರ, ನಿಜಲಿಂಗಪ್ಪನವರ ವಾದವೈಖರಿಯ ಬಗ್ಗೆ ಅವರ ಸಮಕಾಲೀನರು ಅಪಾರ ಗೌರವವಿರಿಸಿಕೊಂಡಿದ್ದರು. ನ್ಯಾಯಾಂಗದ ಹುದ್ದೆಗಳಿಗೆ ನೇಮಿಸಲು ಸರ್ಕಾರವು ಸಾಮಾನ್ಯವಾಗಿ ನಿಜಲಿಂಗಪ್ಪನವರಂತಹ ವಕೀಲರನ್ನು ಆರಿಸುತ್ತಿದ್ದುದು ರೂಢಿ. ಅವರನ್ನು ನ್ಯಾಯಾಂಗದ ಹುದ್ದೆಯಲ್ಲಿ ಕುಳ್ಳಿರಿಸಲು ವಕೀಲಿ ತೊರೆಯುವಂತೆ ಸರ್ಕಾರವೂ ಪ್ರಚೋದಿಸಿತು. ಆದರೆ ನಿಜಲಿಂಗಪ್ಪನವರು ಅದಕ್ಕೆ ಬಲಿಯಾಗಲಿಲ್ಲ, ಮೊದಲಿನಿಂದಲೂ ಸರ್ಕಾರದ ತಾಪೇದಾರಿಯೆಂದರೆ ಅವರಿಗೆ ದ್ವೇಷ. ಅಲ್ಲದೆ, ಸಂಪಾದನೆಯ ದೃಷ್ಟಿಯಿಂದ ವಕೀಲಿ ವೃತ್ತಿಗೆ ಹುದ್ದೆ ಎಂದೂ ಸಮ ಬಾರದು. ಆದರೆ ಅದಷ್ಟೇ ನಿಜಲಿಂಗಪ್ಪನವರ ನಿರ್ಧಾರಕ್ಕೆ ಕಾರಣವಲ್ಲ.

ಒಂದು ಅಂಶವನ್ನಿಲ್ಲಿ ಸ್ಪಷ್ಟಪಡಿಸಬೇಕು. ಮುಂದೆ, ಅವರ ಮೇಲೊಂದು ಆಪಾದನೆ ಕೇಳಿ ಬಂತು; ಅದೆಂದರೆ ರಾಜ್ಯರಾಜಕಾರಣದಲ್ಲಿ ತೊಡಗಿಸಿಕೊಂಡ ಸಂದರ್ಭದಲ್ಲಿ ಅವರು ಕರ್ನಾಟಕ ಏಕೀಕರಣಕ್ಕೆ ಬೆಂಬಲ ನೀಡಿದ್ದರ ಹಿಂದಿನ ಕಾರಣ ವೀರಶೈವ ಪ್ರಾಬಲ್ಯವನ್ನು ನಾಡಿನಲ್ಲಿ ಸ್ಥಾಪಿಸುವ ಉದ್ದೇಶ ಎಂಬುದು. ಆದರೆ ಅದು ನಿಜವಲ್ಲ; ಅವರು ಒಳ್ಳೆ ಅರ್ಥದಲ್ಲಿ ಲಿಂಗಾಯತರಾಗಿದ್ದರೂ ಅವರೆಂದೂ ಕೋಮುವಾದಿಯಾಗಿರಲಿಲ್ಲ. ಅವರೊಬ್ಬ ವಿಚಾರವಾದಿ, ಸ್ವತಂತ್ರವಾಗಿ ಆಲೋಚನೆ ಮಾಡುತ್ತಿದ್ದವರು, ಅವರು ಅನುಸರಿಸುತ್ತಿದ್ದುದು ವೀರಶೈವದ ಕ್ರಾಂತಿಕಾರಕ ಮನೋಭಾವವನ್ನು. ಹಾಗೆ ನೋಡಿದರೆ, ಬಸವಣ್ಣನ ಉನ್ನತ ತತ್ವಗಳನ್ನು ಗಾಳಿಗೆ ತೂರುವ ವೀರಶೈವರ ಬಗ್ಗೆ ಅವರಿಗೆ ತೀವ್ರ ಅಸಂತೋಷವಿತ್ತು. ತನ್ನ ಆತ್ಮಸಾಕ್ಷಿಯಲ್ಲಿ ಹಾಗೂ ನಡವಳಿಕೆಯಲ್ಲಿ ಶುದ್ಧರಾದವರು ಮಠಾಧಿಪತಿಗಳ ಕಾಲಿಗೆ ಬೀಳುವ ಅಥವಾ ಆಳುವವರ ಕಾಲಿಗೆ ಬೀಳುವ ಅವಶ್ಯಕತೆಯಿಲ್ಲ ಎಂದೇ ಅವರ ನಂಬಿಕೆಯಾಗಿತ್ತು. ಊಳಿಗಮಾನ್ಯ ದಬ್ಬಾಳಿಕೆಯ ಮನೋಭಾವದ ವಿರುದ್ಧದ ಮನಸ್ಸು ಅವರದ್ದು. ಅವರು ಧಾರ್ಮಿಕ ವಿಧಿಗಳು ಮತಾಚರಣೆಗಳನ್ನು ವಿರೋಧಿಸುತ್ತಿದ್ದವರು. ಅವರಿಗೆ ಪ್ರಜಾ ಪ್ರಭುತ್ವದ ಬಗ್ಗೆ ಆಳವಾದ ನಿಷ್ಠೆ ಮತ್ತು ನಂಬಿಕೆ; ಮಹಾರಾಜರು ಚಿತ್ರದುರ್ಗಕ್ಕೆ ಭೇಟಿಯಿತ್ತಾಗಲೂ ಅವರೆಂದೂ ಆ ಬಗ್ಗೆ ಆಸಕ್ತಿ ತೋರಿಸಿದವರಲ್ಲ. ಧಾರ್ಮಿಕತೆಯನ್ನು ವಿಚಾರದ

ಒರೆಗಲ್ಲಿಗೆ ಹಚ್ಚಿ ನೋಡುವ ಮನೋಭಾವ ಅವರದ್ದು. ೧೯೨೭ರಲ್ಲಿ ಬೆಂಗಳೂರಿನಲ್ಲಿ ನಡೆದ ವೀರಶೈವ ಮಹಾಸಭೆಯ ಸಮಾವೇಶದಲ್ಲಿ ನಿಜಲಿಂಗಪ್ಪನವರು ವಿಧವಾ ವಿವಾಹವನ್ನು ಬೆಂಬಲಿಸುವ ನಿರ್ಣಯವನ್ನು ಮಂಡಿಸಿದರು; ಇದು ಹಳೆಯ ಮೈಸೂರಿನ ಅನೇಕ ಸಂಪ್ರದಾಯಶರಣರ ಆಕ್ರೋಶಕ್ಕೆ ಕಾರಣವಾಯಿತು. ಆದರೂ ಅವರ ವಾದವೈಖರಿ ವಿಚಾರವಂತಿಕೆಗಳು ಪ್ರೇಕ್ಷಕರಲ್ಲಿನ ಹಲವರ ಮನಸ್ಸನ್ನು ಗೆದ್ದಿತು.

ನಿಜಲಿಂಗಪ್ಪನವರು ಮುಂದೆ ರಾಜ್ಯದ ಹಾಗೂ ರಾಷ್ಟ್ರದ ರಾಜಕಾರಣದಲ್ಲಿ ಮಹತ್ತರ ಪಾತ್ರವನ್ನು ವಹಿಸಿದುದನ್ನು ಗಮನಿಸಿದರೆ, ಅವರು ಈ ಹಂತದಲ್ಲಿ ರಾಜ ಕಾರಣದ ಬಗ್ಗೆ ಒಲವನ್ನೇ ತೋರಿಸಿದವರಲ್ಲ ಎಂಬುದು ಅಚ್ಚರಿಯನ್ನುಂಟುಮಾಡುವ ವಿಷಯ. ಅವರ ಹಿತೈಷಿಗಳು ನಗರಸಭೆಯ ಚುನಾವಣೆಗಳಲ್ಲಿ ಸ್ಪರ್ಧಿಸುವಂತೆ ಸೂಚಿಸಿ ಸ್ಥಳೀಯ ರಾಜಕಾರಣದಲ್ಲಿ ಭಾಗವಹಿಸಲು ಪ್ರೇರಿಸಿದಾಗಲೂ ಆ ಸಲಹೆಯನ್ನವರು ಒಪ್ಪಿಕೊಳ್ಳಲಿಲ್ಲ. ಅವರಿಗೆ ಚುನಾವಣಾ ರಾಜಕೀಯದಲ್ಲಿ ಸಿಲುಕಿಕೊಳ್ಳುವ ಆಸಕ್ತಿಯಿರ ಲಿಲ್ಲ, ಅದಕ್ಕೆ ಕಾರಣ ಅದರಿಂದುಂಟಾಗುವ ಪೈಪೋಟಿ, ಮತ್ಸರ ಮತ್ತು ಸಂಘರ್ಷಗಳು ಮತ್ತು ಇವುಗಳಿಂದಾಗಿ ವಾತಾವರಣವು ದ್ವೇಷಯುಕ್ತವಾಗುವುದರ ಬಗ್ಗೆ ಅಳುಕು. ಅವರ ಅನುಭವ ಹಾಗೂ ವಿವೇಕಗಳನ್ನು ನಗರಸಭೆಯ ಆಡಳಿತಕ್ಕಾಗಿ ಬಳಸಿಕೊಳ್ಳ ಬೇಕೆಂಬ ಅಧಿಕಾರಿಗಳ ಉತ್ಸುಕತೆಯಿಂದಾಗಿ ನಿಜಲಿಂಗಪ್ಪನವರು ಸಭೆಯ ಸದಸ್ಯರಾಗಿ ನಾಮಕರಣಗೊಳ್ಳಲು ಕಾರಣರಾದರು! ಸುಮಾರು ನಾಲ್ಕು ತಿಂಗಳ ಬಳಿಕ, ತಮ್ಮ ನಿರ್ಧಾರ ಸರಿಯಾದುದೆಂದು ಅವರಿಗೆ ಮನವರಿಕೆಯಾಯಿತು; ಆ ಅವಧಿಯಲ್ಲಿ ನಿಜಲಿಂಗಪ್ಪನವರು ನಾಗರಿಕ ಸೌಲಭ್ಯಕ್ಕಾಗಿ ಶ್ರಮಿಸಿದರು. ಕ್ಷುದ್ರ ರಾಜಕಾರಣವನ್ನು ಬದಿಗಿರಿಸಿ ಎಲ್ಲ ರಚನಾತ್ಮಕ ಕಾರ್ಯಕ್ರಮಗಳಲ್ಲೂ ಅವರು ಭಾಗವಹಿಸಿದರು. ನಗರ ಸಭೆಯಲ್ಲಿದ್ದ ವೈಮನಸ್ಯವನ್ನು ಹೋಗಲಾಡಿಸಿ ಸದಸ್ಯರಲ್ಲಿ ಸಾಮರಸ್ಯ ಮೂಡುವಂತೆ ಮಾಡುವುದರಲ್ಲಿ ನಿಜಲಿಂಗಪ್ಪನವರು ಬೀರಿದ ಪ್ರಭಾವ ಉಲ್ಲೇಖನೀಯ. ಆದರೆ ಇದು ತಮ್ಮ ವೃತ್ತಿಜೀವನಕ್ಕೆ ಮಾರಕವಾಗದಂತೆಯೂ ಅವರು ಎಚ್ಚರ ವಹಿಸಿದರು. ಕೌಟುಂಬಿಕ ಸಾಮರಸ್ಯ, ವೃತ್ತಿ ಯಶಸ್ಸು ಹಾಗೂ ಸಮೃದ್ಧಿಗಳು ತುಂಬಿದ್ದ ಅವರ ಪ್ರಶಾಂತ ಬದುಕಿನಲ್ಲಿ ಈ ಪಾತ್ರ ಒಂದು ಸಣ್ಣ ತಿರುವು, ಅಷ್ಟೆ. ಈ ಸನ್ನಿವೇಶದಲ್ಲಿ ಅವರಿಗೆ ರಾಜಕಾರಣ ಆಕರ್ಷಿಸಲಿಲ್ಲ, ಯಾಕೆಂದರೆ ಅವರು ಸಾಧಿಸಿದ್ದಕ್ಕೆ ಹೊರತಾದ ಏನನ್ನೂ ರಾಜಕಾರಣವು ನೀಡುವಂತಿರಲಿಲ್ಲ. ಬ್ರಿಟಿಷ್ ಆಡಳಿತದಲ್ಲಿ ಬಿಸಿಗೊಳ್ಳುತ್ತಿದ್ದ ರಾಷ್ಟ್ರೀಯ ಚಳವಳಿಯು ಇನ್ನೂ ಅರಸರ ಆಳ್ವಿಕೆಯ ರಾಜ್ಯಗಳನ್ನು ತಲುಪಿರಲಿಲ್ಲ. ಮೈಸೂರು ಮಹಾರಾಜರುಗಳ ಆಡಳಿತ ಜನರಲ್ಲಿ ಅತೃಪ್ತಿಯನ್ನೇನೂ ಉಂಟು ಮಾಡಿರಲಿಲ್ಲ. ಹೀಗಾಗಿ ರಾಜ್ಯ ರಾಜಕಾರಣವು ಅವರನ್ನು ಆಕರ್ಷಿಸಲಿಲ್ಲ.

ಅವರು ರಾಷ್ಟ್ರೀಯ ಚಳವಳಿಯಲ್ಲಿ ನೇರವಾಗಿ ಭಾಗಿಯಾಗದಿದ್ದರೂ, ಎಲ್ಲವನ್ನೂ ಆಸಕ್ತಿಯಿಂದ ಗಮನಿಸುತ್ತಿದ್ದರು. ೧೯೨೨ ರಷ್ಟು ಹಿಂದೆಯೇ ಅವರು ಗಾಂಧೀಜಿಯವರ ನಿಷ್ಠಾವಂತ ಹಿಂಬಾಲಕರಾದರು, ಗಾಂಧೀಜಿಯವರ ಬರಹಗಳನ್ನು ತೀವ್ರ ಆಸಕ್ತಿಯಿಂದ ಓದಿದರು, ಅವರ ಕಾರ್ಯಗಳನ್ನು ಕುತೂಹಲದಿಂದ ಗಮನಿಸುತ್ತಿದ್ದರು. ಅವರಿಗೆ ಸತ್ಯಾಗ್ರಹ ತತ್ವದ ಗ್ರಹಿಕೆಯಲ್ಲಿ ತುಂಬ ಕುತೂಹಲ. ಹಿಂದೂ ಮುಸಲ್ಮಾನರ ಐಕಮತ್ಯದ ಬಗ್ಗೆ ಗಾಂಧೀಜಿಯವರು ನೀಡಿದ್ದ ಕರೆ ಅವರ ಮನಸ್ಸನ್ನು ಸೆರೆಹಿಡಿದಿತ್ತು. ಆಗಲೇ ಗಮನಿಸಿದಂತೆ, ಅವರು ೧೯೨೪ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಉತ್ಸಾಹದಿಂದ ಭಾಗಿಗಳಾಗಿದ್ದರು. ೧೯೨೭ರಲ್ಲಿ ಗಾಂಧೀಜಿಯವರು ಆರೋಗ್ಯ ಸುಧಾರಣೆಗಾಗಿ ಬೆಂಗಳೂರಿನ ಬಳಿಯ ನಂದಿಬೆಟ್ಟದಲ್ಲಿ ತಂಗಿದ್ದಾಗ, ಮಹಾತ್ಮರ ಆರೋಗ್ಯದ ಬಗೆಗಿನ ವರದಿಗಳನ್ನು ಪ್ರತಿನಿತ್ಯ ಧಾರ್ಮಿಕ ಕುತೂಹಲದಿಂದ ಓದುತ್ತಿದ್ದರು. ಹೀಗೆ, ಸೈಮನ್ ಸಮಿತಿಯ ಬಹಿಷ್ಕಾರ, ನೆಹ್ರೂ ವರದಿ ಹಾಗೂ ೧೯೩೦ರಲ್ಲಿ ಲಾಹೋರಿನಲ್ಲಿ ಜರುಗಿ ಭಾರತದ ಗಣರಾಜ್ಯ ಸ್ಥಾಪನೆಯ ಬಯಕೆಯಂತಹ ಕ್ರಾಂತಿಕಾರಕ ನಿರ್ಣಯವನ್ನು ತೆಗೆದುಕೊಂಡ ಕಾಂಗ್ರೆಸ್ ಸಮಾವೇಶ – ಈ ಮುಂತಾದ ರಾಜ್ಯದ ಹೊರಗೆ ನಡೆಯುತ್ತಿದ್ದ ರಾಜಕೀಯ ಬೆಳವಣಿಗೆಗಳ ಬಗ್ಗೆ ಅವರು ದೂರದಿಂದಲೇ ಆಸಕ್ತಿಯಿಂದ ಗಮನ ಹರಿಸುತ್ತಿದ್ದರೆಂಬುದು ನಿಜ. ಸರ್ದಾರ್ ಪಟೇಲರ ನಾಯಕತ್ವದಲ್ಲಿ ೧೯೨೮ ರಲ್ಲಿ ನಡೆದ ಬಾರ್ದೋಲಿ ಸತ್ಯಾಗ್ರಹದ ಯಶಸ್ಸಿನ ಬಗ್ಗೆ ನಿಜಲಿಂಗಪ್ಪನವರಿಗೆ ಆದರ ಉಂಟಾಯಿತು. ಚಿಕ್ಕಂದಿನಿಂದಲೇ ಅವರ ಮೇಲೆ ಕರ್ನಾಟಕದ ಗಾಂಧಿ ಎಂದು ಪ್ರಸಿದ್ಧರಾಗಿದ್ದ ಹರ್ಡೇಕರ್ ಮಂಜಪ್ಪನವರ ಪ್ರಭಾವ ಆಗಿತ್ತು. ಇದರಿಂದಾಗಿ ಅವರ ಮನಸ್ಸಿನಲ್ಲಿ ಎಷ್ಟೋ ವೇಳೆ ರಾಜಕೀಯದ ಆಕರ್ಷಣೆ ಹಾಗೂ ವೃತ್ತಿಪರತೆಗಳ ನಡುವೆ ಸಂಘರ್ಷವುಂಟಾಗುತ್ತಿತ್ತು. ಒಂದೇ ಬಾರಿಗೆ ಎರಡು ದೋಣಿಗಳಲ್ಲಿ ಕಾಲಿಡುವುದು ವಿವೇಕವಲ್ಲವೆಂದು ಬಗೆದು ಅವರು ಸದ್ಯಕ್ಕೆ ತಮ್ಮ ವಕೀಲಿ ವೃತ್ತಿಯ ಬಗ್ಗೆ ಗಮನಹರಿಸುವುದೆಂದು ಬಗೆದು ಆ ರಂಗದಲ್ಲಿ ದೊಡ್ಡದನ್ನು ಸಾಧಿಸಲು ನಿರ್ಧರಿಸಿದರು. ಈ ನಡುವೆ ದೇಶದಲ್ಲಿ ಮಹತ್ವದ ಬೆಳವಣಿಗೆಗಳಾಗುತ್ತಿದ್ದವು. ಕಾಂಗ್ರೆಸ್ ಪ್ರತಿನಿಧಿಗಳಿಲ್ಲದೆಯೇ ಲಂಡನ್ನಿನಲ್ಲಿ ದುಂಡುಮೇಜಿನ ಪರಿಷತ್ತು ಜರುಗಿತ್ತು. ನಿರೀಕ್ಷೆಯಂತೆ ಯಾವುದೇ ಗಟ್ಟಿ ನಿರ್ಧಾರವಿಲ್ಲದೆ ಅದು ಮುಗಿಯಿತು. ಗಾಂಧೀಜಿಯವರ ಸಹಕಾರವಿಲ್ಲದೆ ಭಾರತದ ಜನತೆಯೊಡನೆ ಯಾವುದೇ ಅರ್ಥಪೂರ್ಣ ಸಂವಾದ ಸಾಧ್ಯವಿಲ್ಲವೆಂಬ ಅಂಶ ಬ್ರಿಟಿಷರ ಅರಿವಿಗೆ ಬಂತು. ಹೀಗಾಗಿ ಈ ಸಣಕಲು ದೇಹದ ಅರೆಬಟ್ಟೆ ತೊಟ್ಟ ಫಕೀರನನ್ನು ಎರಡನೆಯ ದುಂಡು ಮೇಜಿನ ಸಭೆಗೆ ಆಹ್ವಾನಿಸಿದರು. ಅಲ್ಪಸಂಖ್ಯಾತರಿಗೆ ಬೇರೆಯೇ ಮತದಾನದ ಹಕ್ಕನ್ನು ವಿರೋಧಿಸಿ ಗಾಂಧಿ ಈ ಸಭೆಯಲ್ಲಿ ರಾಷ್ಟ್ರ

ಐಕಮತ್ಯದ ಬಗ್ಗೆ ತಮ್ಮ ನಿಷ್ಠೆಯನ್ನು ಪ್ರದರ್ಶಿಸಿದರು. ಲಂಡನ್ನಿನಿಂದ ಮರಳಿದ ಬಳಿಕ, ಸತ್ಯಾಗ್ರಹ ಮತ್ತು ಅಸಹಕಾರ ಚಳುವಳಿಯನ್ನು ಕಾಂಗ್ರೆಸ್ ಆರಂಭಿಸುವುದೆಂದು ಗಾಂಧೀಜಿ ಸರ್ಕಾರವನ್ನು ಎಚ್ಚರಿಸಿದರು. ಇದಕ್ಕೆ ಆಡಳಿವು ಸ್ಪಂದಿಸಿದ ರೀತಿಯೆಂದರೆ ಕಾಂಗ್ರೆಸ್ ನಾಯಕರನ್ನು ಸೆರೆ ಹಿಡಿದದ್ದು ಹಾಗೂ ಕಾಂಗ್ರೆಸ್ ಅನ್ನು ಬಹಿಷ್ಕರಿಸಿದ್ದು. ೧೯೩೨ರಲ್ಲಿ, ಮುಸ್ಲಿಮರಿಗೂ ಹರಿಜನರಿಗೂ ಪ್ರತ್ಯೇಕ ಮತದಾನದ ಹಕ್ಕು ನೀಡಲು ಆಡಳಿತವು ಆಲೋಚಿಸುತ್ತಿದೆ ಎಂಬ ಆಘಾತಕಾರಿ ಸುದ್ದಿ ಯರವಾಡ ಜೈಲಿನಲ್ಲಿದ್ದ ಗಾಂಧೀಜಿ ಕಿವಿಗೆ ಬಿತ್ತು. ಇದರ ವಿರುದ್ಧ ಅದೇ ವರ್ಷ ಸೆಪ್ಟೆಂಬರ್ ೨೦ ರಿಂದ ಆಮರಣಾಂತ ಉಪವಾಸವನ್ನು ಆರಂಭಿಸುವುದಾಗಿ ಘೋಷಿಸಿದರು. ಇದನ್ನು ಕೇಳಿ ಇಡೀ ದೇಶವೇ ಕತ್ತಲಲ್ಲಿ ಮುಳುಗಿತು. ನಮ್ಮ ದೇಶ ಮಾತ್ರವಲ್ಲದೆ ಇಡೀ ಜಗತ್ತೇ ಈ ಆಗುಹೋಗುಗಳನ್ನು ಗಮನಿಸುತ್ತಿತ್ತು. ನಾಯಕರ ಮಧ್ಯಪ್ರವೇಶ ಹಾಗೂ ಅಂಬೇಡ್ಕರರ ಹೊಂದಾಣಿಕೆಗಳ ಕಾರಣದಿಂದ ಈ ಕಗ್ಗಂಟು ಕರಗಿತು, ಮಹಾತ್ಮರ ಜೀವ ಉಳಿಯಿತು. ಗಾಂಧೀಜಿಯವರು ಹಣ್ಣಿನ ರಸ ಸೇವಿಸಿ ಉಪವಾಸ ಮುಗಿಸಿದ್ದರಿಂದಾಗಿ ನಿಜಲಿಂಗಪ್ಪ ನವರನ್ನೊಳಗೊಂಡಂತೆ ಇತರೆ ನಾಯಕರೂ, ಇಡೀ ದೇಶವು ಸಮಾಧಾನದ ನಿಟ್ಟುಸಿರು ಬಿಡುವಂತಾಯಿತು. ನಿಜಲಿಂಗಪ್ಪನವರಲ್ಲಿ ಸಕ್ರಿಯ ಗಾಂಧೀವಾದಿಯಾಗುವ ತವಕ ಒಳಗೇ ಅರಳುತ್ತಿತ್ತು, ಆದರೆ ಮನೆಯ ಪರಿಸ್ಥಿತಿ ಇದಕ್ಕೆ ಪೂರಕವಾಗಿರಲಿಲ್ಲ. ಗಾಂಧೀಜಿ ಯವರ ಚುಂಬಕ ವ್ಯಕ್ತಿತ್ವ ಹಾಗೂ ನೈತಿಕ ಸತ್ವದಿಂದ ಆಕರ್ಷಿತರಾದವರಲ್ಲಿ ನಿಜಲಿಂಗಪ್ಪ ನವರು ಮಾತ್ರವಲ್ಲದೆ ಇನ್ನೂ ಹಲವಾರು ಮಂದಿಯಿದ್ದರು. ೧೯೩೩ರಲ್ಲಿ ಗಾಂಧೀಜಿ 'ಹರಿಜನ' ಪತ್ರಿಕೆಯನ್ನು ಆರಂಭಿಸಿದಾಗ, ಅದನ್ನು ತಮ್ಮ ಭಗವದ್ಗೀತೆಯೇನೋ ಎಂಬಂತೆ ಓದಿ ಮುಗಿಸುತ್ತಿದ್ದರು! ಈ ಹೊತ್ತಿಗಿನ್ನೂ ಅವರು ಗಾಂಧೀಜಿಯ ಹಿಂಬಾಲಕ ರಾಗಿ ಪೂರ್ತಿ ಸಮಯವನ್ನು ಮೀಸಲಿಡಲು ಸಿದ್ಧರಿಲ್ಲದಿದ್ದರೂ, ಆರೋಗ್ಯ ಮತ್ತು ಶುಚಿತ್ವಗಳ ಬಗ್ಗೆ ಮಹಾತ್ಮರ ಆಚರಣೆಗಳನ್ನು ಅನುಸರಿಸಲು ಪ್ರಯತ್ನಿಸಿದರು. ಕೊಂಚ ಮಟ್ಟಿಗೆ ಅವರು ಗಾಂಧೀಜಿಯವರ ಆಹಾರಪದ್ಧತಿಯನ್ನೂ ಒಪ್ಪಿದರು.

೧೯೩೫ರಲ್ಲಿ, ಬ್ರಿಟಿಷರು ಭಾರತದಲ್ಲಿ ಮಿತವಾದ ಸ್ವಯಮಾಡಳಿತ ಹಾಗೂ ಒಕ್ಕೂಟ ಪದ್ಧತಿಗಳನ್ನು ಜಾರಿಗೆ ತರುವ ಕೊಂಚಮಟ್ಟಿಗಿನ ಸುಧಾರಣೆಯನ್ನು ತರುವ ಬಗ್ಗೆ ಘೋಷಿಸಿದರು. ೧೯೩೫ರ ವಿಧಿಗೆ ಅನುಗುಣವಾಗಿ ಚುನಾವಣೆಗಳಲ್ಲಿ ಭಾಗ ವಹಿಸಲು ಕಾಂಗ್ರೆಸ್ ಒಪ್ಪಿತು; ಆರು ಪ್ರಾಂತಗಳಲ್ಲಿ ಕಾಂಗ್ರೆಸ್ ಬಹುಮತವನ್ನು ಪಡೆಯಿತು, ಹಾಗೂ ಮೂರು ಪ್ರಾಂತಗಳಲ್ಲಿ ಹೆಚ್ಚು ಸಂಖ್ಯೆಯ ಸದಸ್ಯರ ಪಕ್ಷವಾಗಿ ಹೊಮ್ಮಿತು. ಈಗಿನ ಭಾರತವನ್ನು ನಿರೀಕ್ಷಿಸಿದಂತೆಯೋ ಏನೋ, ಲಂಚಕೋರತನ ಹಾಗೂ ಅಧಿಕಾರ ದುರುಪಯೋಗಗಳ ವಿರುದ್ಧ ವೃದ್ಧಪಿತಾಮಹರು ಅಧಿಕಾರಕ್ಕೆ ಬಂದ

ಕಾಂಗ್ರೆಸ್ ಅನ್ನು ಎಚ್ಚರಿಸಿದರು! ೧೯೩೯ರ ಸೆಪ್ಟೆಂಬರ್‌ನಲ್ಲಿ ಯುದ್ಧವು ಆರಂಭಗೊಂಡಾಗ, ಗಾಂಧೀಜಿಯವರು ಹಿಟ್ಲರ್‌ನ ಅಮಾನವೀಯತೆಯನ್ನು ಖಂಡಿಸಿದರೂ, ಭಾರತವನ್ನು ಗುಲಾಮತನದಲ್ಲಿರಿಸಿದ್ದ ಬ್ರಿಟಿಷ್ ಮತ್ತವರ ಒಡನಾಡಿಗಳನ್ನು ಟೀಕಿಸಿದರು. ಅವರ ನಾಯಕತ್ವದಲ್ಲಿದ್ದ ಕಾಂಗ್ರೆಸ್ ಯುದ್ಧಪ್ರಯತ್ನಕ್ಕೆ ಬೆಂಬಲಿಸಲು ನಿರಾಕರಿಸಿತು, ಕಾಂಗ್ರೆಸ್ ಸರ್ಕಾರಗಳು ರಾಜೀನಾಮೆ ನೀಡಿದವು.

ನಿಜಲಿಂಗಪ್ಪನವರು ವಕೀಲರೂ ಗೃಹಸ್ಥರೂ ಆಗಿದ್ದಾಗಿನ ದಿನಗಳ ಕಡೆ ಹಿನ್ನೋಟ ಬೀರಿದಾಗ, ನಮ್ಮನ್ನು ಅಚ್ಚರಿಗೊಳಿಸುವಂಥದೆಂದರೆ ಅವರ ವ್ಯಕ್ತಿತ್ವ ಮತ್ತು ನಡವಳಿಕೆಗಳು. ಇಲ್ಲಿ ನಿರೂಪಣೆಗೊಂಡ ಕಥನವು ಕೆಲವರಿಗೆ ಅತಿಶಯೋಕ್ತಿಯೋ ಕಲ್ಪನಾತ್ಮಕವೋ ಎನಿಸಿಬಹುದು, ಆದರೆ ಇದು ಸಹಜವಾದರೂ ಸರಿಯಲ್ಲ. ಈಗ ನಮ್ಮ ರಾಷ್ಟ್ರೀಯ ಬದುಕು ಎಂತಹ ಸ್ಥಿತಿಯನ್ನು ತಲುಪಿದೆಯೆಂದರೆ, ಯಾರನ್ನೂ, ಅದರಲ್ಲಿಯೂ ವಕೀಲರು ಮತ್ತು ರಾಜಕಾರಣಿಗಳು, ಸಜ್ಜನರೂ ಪ್ರಾಮಾಣಿಕರೂ ಆಗಿರಬಹುದೆಂಬುದನ್ನು ನಂಬುವುದು ಕಷ್ಟವೆನಿಸುತ್ತದೆ. ಆದರೆ ನಿಜಲಿಂಗಪ್ಪ ಇವೆರಡೂ ಆಗಿದ್ದರು, ಇದಕ್ಕೆ ಅಸಂಖ್ಯ ಆಧಾರಗಳನ್ನು ನೀಡಬಹುದು. ಆದರೆ ಬರೀ ಅಪರಾಧಿಗಳು, ಕಳ್ಳಸಂತೆಕೋರರು, ಎಗ್ಗಿಲ್ಲ ಹಾಗೂ ಭ್ರಷ್ಟರೇ ತುಂಬಿರುವ ಸದ್ಯದ ಸಾರ್ವಜನಿಕ ಜೀವನದಲ್ಲಿ ಇಂಥ ವ್ಯಕ್ತಿಗಳು ಏಳಿಗೆ ಹೊಂದುವರೇ ಎಂಬುದು ಬೇರೆಯ ಪ್ರಶ್ನೆ. ಅವರಂಥ ವ್ಯಕ್ತಿಗಳು ಉಳಿಯಲಾರರೆಂಬುದು ನಿಜವಾದರೂ, ಅವರು ಶರಣಾಗತರಾಗಬೇಕಾದ್ದಿಲ್ಲ. ಇದಕ್ಕೆ ಕಾರಣವೆಂದರೆ, ಸದ್ಯದ ಆಗುಹೋಗುಗಳ ಕಡೆ ಬೆರಳು ತೋರಿಸಿ ದೇಶವೊಂದರ ಸ್ವರೂಪವನ್ನು ರಚಿಸುವುದು ಸಾಧ್ಯವಿಲ್ಲ. ಒಂದು ಆಧುನಿಕ ದೇಶವಾಗಿಯಲ್ಲದಿದ್ದರೂ, ಒಂದು ಸಂಸ್ಕೃತಿಯಾಗಿ ಭಾರತವು ಯುಗಯುಗಗಳಿಂದ ಮಹತ್ತರ ಸಾಧನೆಗಳೊಡನೆ ಬಾಳಿಕೊಂಡು ಬಂದಿದೆ. ಅದನ್ನು ಅಷ್ಟು ಬೇಗ ಕಡೆಗಣಿಸುವುದು ಸಲ್ಲದು. ೯೫ರ ಹರೆಯದಲ್ಲಿರವ ನಿಜಲಿಂಗಪ್ಪನವರೇ, ತಮ್ಮ ಸುತ್ತಲಿನ ಪರಿಸ್ಥಿತಿಯನ್ನು ಕಂಡು ವಿಷಣ್ಣರಾದರೂ, ಅವರು ಆಶಾವಾದಿಗಳಾಗಿದ್ದಾರೆ, ಭ್ರಷ್ಟಾಚಾರ ಮತ್ತು ಅಪರಾಧಪೂರ್ಣವಾದ ಪ್ರಸ್ತುತ ಸಂದರ್ಭವನ್ನು ತಮ್ಮ ಕೈಲಾದಷ್ಟು ಶುಚಿಗೊಳಿಸಲು ತಮ್ಮ ಕೈಲಾದುದನ್ನು ಮಾಡುವ ಮನಸ್ಸಿನವರಾಗಿದ್ದಾರೆ. ಅವರದು ವಾಸ್ತವ ಪ್ರಜ್ಞೆ, ಪವಾಡಗಳು ಸಾಧ್ಯವಿಲ್ಲ ಎಂಬುದು ಅವರಿಗೆ ಗೊತ್ತು. ಆದರೆ ವಾಸ್ತವವು ನಿರಾಶಾವಾದಕ್ಕೋ ಸಿನಿಕ ತನಕ್ಕೋ ಕಾರಣವಾಗಬಾರದು. ಹೀಗಾಗಿ, ಇಲ್ಲಿ ಕೊಟ್ಟಿರುವ ಚಿತ್ರವು ಮನಸ್ಸು ಮಾಡಿದರೆ ನಾವು ಸಂಕಲ್ಪಶಕ್ತಿ ಮತ್ತು ಬದ್ಧತೆಗಳಿಂದ ಏನನ್ನೂ ಸಾಧಿಸಬಹುದು ಎಂಬುದಕ್ಕೆ ದಿಕ್ಸೂಚಿಯಾಗುತ್ತದೆ.

*

೩

ರಾಷ್ಟ್ರೀಯ ಚಳವಳಿಯ ಪ್ರವಾಹದಲ್ಲಿ

ರಾಷ್ಟ್ರೀಯ ಚಳುವಳಿಗೆ ದುಮುಕುವುದು ಎಂದರೆ ಅದರ ಪೂರ್ಣ ಅರ್ಥದಲ್ಲಿ ಅಲ್ಲ, ಅಂದರೆ ಇದ್ದಕ್ಕಿದ್ದಂತೆ ಅನಿರೀಕ್ಷಿತವಾಗಿ ಆಯಿತು ಎಂದರ್ಥವಲ್ಲ; ಯಾಕಂದರೆ ಆ ಆಲೋಚನೆ ನಿಜಲಿಂಗಪ್ಪನವರ ಮನಸ್ಸಿನಲ್ಲಿ ದೀರ್ಘಕಾಲದಿಂದ ಗುಂಯ್‌ಗುಡುತ್ತಿತ್ತು. ಆದರೆ, ತಮ್ಮ ಪ್ರದೇಶದ ರಾಜಕೀಯ ಜೀವನದಲ್ಲಿ ಅವರು ನೇರವಾಗಿ ಪ್ರವೇಶ ಮಾಡಿದರು ಹಾಗೂ ರಾಷ್ಟ್ರವು ಅವರ ಬದುಕಿನಲ್ಲಿ ಗುಣಾತ್ಮಕ ಬದಲಾಚಣೆಯನ್ನು ತಂದು ಅದರ ಲಯ ಹಾಗೂ ದಿಕ್ಕುಗಳು ಬದಲಾವಣೆಗೊಂಡವು ಎಂಬರ್ಥದಲ್ಲಿ ಅದನ್ನು ದುಮುಕುವುದು ಎಂದು ಕರೆಯಬಹುದು. ಈ ದುಮುಕಾಟಕ್ಕಿಂತ ತುಂಬ ಮುಂಚೆಯೇ ಅವರನ್ನು ಗಾಂಧೀಜಿಯ ಆದರ್ಶಗಳು ಆಕರ್ಷಿಸಿದ್ದವು, ತಮ್ಮ ಸುತ್ತ ಮುತ್ತಲ ರಾಜಕೀಯ ಆಗುಹೋಗುಗಳನ್ನವರು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಅದರ ಜೊತೆಗೆ ಅವರು ನೇರವಾಗಿ ರಾಜಕೀಯದಲ್ಲಿ ಪಾಲುಗೊಳ್ಳುವುದರಿಂದ ಪ್ರಜ್ಞಾಪೂರ್ವಕ ವಾಗಿಯೇ ದೂರ ಉಳಿದಿದ್ದರು. ಆರಂಭದಲ್ಲಿ ಕಾಂಗ್ರೆಸ್‌ಗೆ ಹಣಕಾಸಿನ ನೆರವು ನೀಡಿ ರಾಷ್ಟ್ರೀಯ ಚಳವಳಿಯಲ್ಲಿ ತಮ್ಮನ್ನು ಸಾಂಕೇತಿಕವಾಗಿ ಗುರುತಿಸಕೊಳ್ಳುವುದಕ್ಕಷ್ಟೇ ಅವರು ತೃಪ್ತರಾಗಿದ್ದರು. ರಾಜಕೀಯದಲ್ಲಿನ ಸಹಜ ಪ್ರಬಲ ಆಕರ್ಷಣೆ ಹಾಗೂ ಅದರಿಂದ ದೂರ ಉಳಿಯುವ ಸಂಕಲ್ಪ ಇವುಗಳ ನಡುವೆ ಅವರ ಅಂತರ್ಯದಲ್ಲಿ

ದೊಡ್ಡ ತುಮುಲ ಏರ್ಪಟ್ಟಿದ್ದುದು ಸ್ಪಷ್ಟವಾಗಿದೆ. ನಿಜಲಿಂಗಪ್ಪನವರಂತೆ ರಾಜಕೀಯ ಪರಿಜ್ಞಾನ ಹಾಗೂ ಆದರ್ಶಗಳನ್ನು ಹೊಂದಿದ್ದ ಆ ಕಾಲದ ಯಾವುದೇ ಯುವಕ ರಾಜಕೀಯಾಕರ್ಷಣೆಯ ಪ್ರಬಲ ಸೆಳವಿನಿಂದ ತಪ್ಪಿಸಿಕೊಳ್ಳುವುದು ತುಂಬ ಕಷ್ಟದಾಯಕ ವಾಗಿತ್ತು. ಇಡೀ ದೇಶವೇ ರಾಷ್ಟ್ರೀಯ ಮನೋಭಾವದಿಂದ ಕುದಿಯುತ್ತಿತ್ತು. ವಿದ್ಯಾರ್ಥಿ ಗಳು ಶಾಲಾಕಾಲೇಜುಗಳನ್ನು ತೊರೆದರು, ವಕೀಲರು ನ್ಯಾಯಾಲಯಗಳಿಗೆ ಹಾಜರಾಗು ವುದನ್ನು ವಿರೋಧಿಸಿದರು, ಕಾರ್ಮಿಕರು ಕೆಲಸಕ್ಕೆ ಗೈರುಹಾಜರಾಗಲು ಹಿಂಜರಿಯಲಿಲ್ಲ; ಇದೆಲ್ಲ ನಡೆಯುತ್ತಿದ್ದು ರಾಷ್ಟ್ರೀಯ ಭಾವನೆಯಿಂದ ಹಾಗೂ ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟವಾಗಿ. ಇದೆಲ್ಲ ಅವರನ್ನು ಸುಮ್ಮನೆ ಬಿಡಲಿಲ್ಲ, ಹೀಗಾಗಿ ತಾವು ಈ ವ್ಯಾಪಕ ಐತಿಹಾಸಿಕ ಪ್ರಕ್ರಿಯೆಯಿಂದ ದೂರ ಉಳಿದಿರುವ ರೀತಿ ಅವರಲ್ಲಿ ಇರುಸುಮುರಿಸು ಉಂಟುಮಾಡಿತ್ತು, ಅಪರಾಧಪ್ರಜ್ಞೆ ಅವರನ್ನು ಕಾಡುತ್ತಿತ್ತು. ಈ ಕರ್ಷಣದಲ್ಲಿ ಅವರು ಸಿಲುಕಿರುವಾಗಲೇ ಮೈಸೂರು ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಟಿ. ಸಿದ್ದಲಿಂಗಯ್ಯನವರು ಕಾಂಗ್ರೆಸ್ ಪರ ಪ್ರಚಾರ ಕೈಗೊಳ್ಳಲು ಚಿತ್ರದುರ್ಗಕ್ಕೆ ಬಂದರು. ನಿಜಲಿಂಗಪ್ಪನವರು ಗಟ್ಟಿ ವ್ಯಕ್ತಿತ್ವದ ಸನ್ನಡತೆಗಳ ವ್ಯಕ್ತಿಯು ಕಾಂಗ್ರೆಸ್‌ಗೆ ಬೆಂಬಲವಾಗಿ ನಿಲ್ಲಬೇಕೆಂಬುದು ಸಿದ್ದಲಿಂಗಯ್ಯನವರ ಅಪೇಕ್ಷೆಯಾಗಿತ್ತು. ಇಂಥ ಅಮೂಲ್ಯ ರತ್ನದ ಮನವೊಲಿಸಲು ಅವರು ತಮ್ಮ ಸಹ ಕಾರ್ಯಕರ್ತರೊಡನೆ ನಿಜಲಿಂಗಪ್ಪನವರನ್ನು ಭೇಟಿಯಾದರು. ಮೊದಲನೆಯ ಭೇಟಿಯಲ್ಲಿಯೇ ಅವರ ಮೇಲೆ ಈ ಯುವ ವಕೀಲರು ಗಾಢವಾದ ಪ್ರಭಾವ ಬೀರಿದರು. ಮೈಸೂರು ಕಾಂಗ್ರೆಸ್ ಅನ್ನು ಸೇರುವಂತೆ ಅವರೆಲ್ಲ ನಿಜಲಿಂಗಪ್ಪನವರನ್ನು ಒತ್ತಾಯಿಸಿದರು. ನಿಜಲಿಂಗಪ್ಪವರು ತಮ್ಮನ್ನೇ ಅವಲಂಬಿಸಿರುವ ತಮ್ಮ ಕೌಟುಂಬಿಕ ಹಿತವನ್ನು ಬದಿಗಿಡಲು ತಾವು ತಯಾರಿಲ್ಲವೆಂದು ವಾದಿಸಿದರು, ಆದರೆ ತಮ್ಮ ಕೈಲಾದ ಸಹಾಯವನ್ನು ಕಾಂಗ್ರೆಸ್‌ಗೆ ಮಾಡಲು ತಾವು ಸಿದ್ಧವೆಂಬದನ್ನು ಸ್ಪಷ್ಟಪಡಿಸಿದರು. ಮಹತ್ಕಾರ್ಯಗಳಿಗೆ ದೊಡ್ಡ ತ್ಯಾಗ ಆವಶ್ಯಕವೆಂಬುದು ಸಿದ್ಧಲಿಂಗಯ್ಯನವರ ವಾದ. ಕೊನೆಯಲ್ಲಿ, "ನನಗೆ ರಾಜಕೀಯ ಸೇರುವುದರಲ್ಲಿ ಆಸಕ್ತಿಯಿಲ್ಲ. ಕ್ಲಬ್‌ಗೆ ಹೋಗಿ ಟೆನಿಸ್ ಆಡುವ ಸಮಯ ಬಂತು, ನಾನು ಬರ್‌ತೀನಿ" ಎಂದು ಅವರಿಂದ ಬೀಳ್ಕೊಂಡರು. ಆದರೆ ಸಿದ್ಧಲಿಂಗಯ್ಯ ಹಾಗೂ ಅವರ ಸಹಚರರು ಇಷ್ಟಕ್ಕೇ ಮುಗಿಸಿಬಿಡಲು ತಯಾರಿರಲಿಲ್ಲ. ಅವರೆಲ್ಲ ನಿಜಲಿಂಗಪ್ಪನವರ ಹಿಂದೆ ಕ್ಲಬ್‌ಗೆ ಹೋಗಿ, ಅವರು ಟೆನಿಸ್ ಆಟವನ್ನು ಮುಗಿಸುವವರೆಗೂ ಕಾದರು. ಆನಂತರ ಅವರ ಮೇಲೆ ಎರಡನೆಯ ದಾಳಿ ನಡೆಸಿದರು, ಆದರೆ ಇದರಿಂದ ಏನೂ ಪ್ರಯೋಜನವಿಲ್ಲ ವೆಂದು ಮನವರಿಕೆಯಾದ ಮೇಲೆ ಅವರನ್ನು ಬಿಟ್ಟು ಹೊರಬಂದರು.

ತಮ್ಮ ಪ್ರದೇಶದ ಅನೇಕ ಕಾಂಗ್ರೆಸ್ ಕಾರ್ಯಕರ್ತರೂ ಕಾಂಗ್ರೆಸ್‌ಗೆ ಸೇರುವಂತೆ ಅವರ ಮೇಲೆ ಒತ್ತಡ ತಂದರು; ಇವರಲ್ಲಿ ದೊಡ್ಡ ನಾಯಕನ ಗುಣ ಅಡಗಿರುವುದನ್ನು ಅವರು ಗುರುತಿಸಿದ್ದರು. ತಾವೇನಾದರೂ ಜೈಲಿಗೆ ಹೋಗುವ ಪ್ರಸಂಗ ಬಂದರೆ ಕುಟುಂಬದ ಗತಿ ಏನು ಎಂಬುದೇ ಅವರ ಚಿಂತೆಯಾಗಿತ್ತು. ಆದರೆ, ಸ್ವಾತಂತ್ರ್ಯ ಹೋರಾಟಕ್ಕಾಗಿ ರಾಷ್ಟ್ರ ಧುರೀಣರು ಮಾಡಿದ್ದ ಅಪಾರ ತ್ಯಾಗವನ್ನು ನೆನಸಿಕೊಂಡಾಗ ನಿಜಲಿಂಗಪ್ಪನವರ ಅಂತರ್ಯದಲ್ಲಿ ಒಳಗುದಿಯು ತೀವ್ರ ಸ್ವರೂಪವನ್ನು ಪಡೆಯುತ್ತಿತ್ತು. ಈ ಹೊತ್ತಿಗೆ ಭಾರತ ಸೇವಾದಳದ ಸಂಸ್ಥಾಪಕರೂ ಮುಂಬೈ ಕರ್ನಾಟಕ ಭಾಗದ ಹಿರಿಯ ಕಾಂಗ್ರೆಸ್ಸಿಗರೂ ಆದ ನಾರಾಯಣ ರಾವ್ ಹರ್ಡಿಕರ್ ಅವರು ಈ ಭಾಗದಲ್ಲಿನ ರಾಜಕೀಯ ಪರಿಸ್ಥಿತಿಯ ಅಧ್ಯಯನ ಮಾಡಲು ಪ್ರವಾಸ ಕೈಗೊಂಡು ಚಿತ್ರದುರ್ಗಕ್ಕೆ ಬಂದರು. ರಾಷ್ಟ್ರೀಯ ಚಳವಳಿಯ ಇನ್ನೊಂದು ಹೆಸರಾಗಿದ್ದ ಕಾಂಗ್ರೆಸ್ ಅನ್ನು ಸೇರುವಂತೆ ನಿಜಲಿಂಗಪ್ಪನವರ ಮನವೊಲಿಸುವುದು ಅವರ ಮುಖ್ಯ ಉದ್ದೇಶವಾಗಿತ್ತು. ಹರ್ಡಿಕರ್ ಅವರು ನಿಜಲಿಂಗಪ್ಪನವರೊಡನೆ ಜಿಲ್ಲೆಯಲ್ಲೆಲ್ಲ ಸುತ್ತಾಡಿದರು. ಹೋದ ಕಡೆಯಲ್ಲೆಲ್ಲ ಜನರು ನಿಜಲಿಂಗಪ್ಪನವರ ಬಗ್ಗೆ ತೋರಿಸುತ್ತಿದ್ದ ಗೌರವಾದರಗಳು ಹರ್ಡಿಕರ್ ಅವರ ಮೇಲೆ ಪ್ರಭಾವ ಬೀರಿತು. ಗಾಂಧೀಜಿಯ ನಾಯಕತ್ವದಲ್ಲಿ ಸ್ವಾತಂತ್ರ್ಯ ಹೋರಾಟ ಅಂತಿಮ ಘಟ್ಟಕ್ಕೆ ತಲುಪಿದೆ, ಇಷ್ಟರಲ್ಲಿಯೇ ದೇಶಕ್ಕೆ ಬ್ರಿಟಿಷ್ ಆಡಳಿತದಿಂದ ಮುಕ್ತಿ ದೊರೆಯುತ್ತದೆ ಎಂದು ಅವರು ಅನಿಶ್ಚಿತ ಮನಸ್ಸಿನ ನಿಜಲಿಂಗಪ್ಪನವರ ಮುಂದೆ ಬಣ್ಣಿಸಿದರು. ಚಳವಳಿಗೆ ದುಮುಕಿ ಭಾರತದ ರಾಷ್ಟ್ರೀಯ ಆಂದೋಲನದ ಇಂತಹ ಸುವರ್ಣ ಸನ್ನಿವೇಶದಲ್ಲಿ ಪಾಲುಗೊಳ್ಳಲು ಅವರನ್ನು ಕೇಳಿಕೊಂಡರು. ನಿಜಲಿಂಗಪ್ಪನವರ ಮನೆಯಲ್ಲಿ ಊಟ ಮಾಡುವ ಒಂದು ಸನ್ನಿವೇಶದಲ್ಲಿ ಹರ್ಡಿಕರ್ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ಭಾಗವಹಿಸುವಂತೆ ನಿಜಲಿಂಗಪ್ಪನವರ ಮನವೊಲಿಸುವಲ್ಲಿ ಅಂತೂ ಸಫಲರಾದರು. ತಾವು ನಿರ್ಧಾರದ ದಾಳವನ್ನು ಉರುಳಿಸಿದ್ದರೂ, ಇದರ ಪರಿಣಾಮವಾಗಿ ತಮ್ಮ ಕುಟುಂಬವು ತೀವ್ರ ಸಂಕಷ್ಟದಲ್ಲಿ ಸಿಲುಕುವಂತಾಗುವುದೆಂಬುದು ಅವರನ್ನು ಚಿಂತೆಗೀಡು ಮಾಡಿತ್ತು. ಈ ಕಠಿಣ ನಿರ್ಧಾರಕ್ಕೆ ಅವರಿಗೆ ಬೆಂಬಲವಾಗಿ ಬಂದದ್ದು ಪರಿಣಾಮಗಳನ್ನು ಲೆಕ್ಕಿಸದೆ ತನ್ನ ಕಾರ್ಯವನ್ನು ನಿರ್ವಹಿಸಬೇಕೆಂಬ ಗೀತೆ ಮತ್ತು ಬಸವಣ್ಣನವರ ವಚನಗಳ ಉಪದೇಶಗಳು. ಮುಂಬಯಿ ಕರ್ನಾಟಕದ ಇತರ ಕಾಂಗ್ರೆಸ್ ನಾಯಕರುಗಳಾದ ಗಂಗಾಧರ ರಾವ್ ದೇಶಪಾಂಡೆ ಹಾಗೂ ಉಮಾಬಾಯಿ ಕುಂದಾಪುರ ಮುಂತಾದವರು ಚಿತ್ರದುರ್ಗಕ್ಕೆ ಭೇಟಿ ಕೊಟ್ಟಿದ್ದರೂ, ನಿಜಲಿಂಗಪ್ಪನವರು ಈ ನಿರ್ಧಾರಕ್ಕೆ ಕಾರಣರಾದವರು ಹರ್ಡಿಕರ್ ಅವರು. ಹರ್ಡಿಕರ್ ಅವರು ಹೋದ ಬಳಿಕ, ನಿಜಲಿಂಗಪ್ಪನವರು ಸದಸ್ಯತ್ವ ಅಭಿಯಾನದಂತಹ ಕ್ರಿಯಾತ್ಮಕ ಕಾಂಗ್ರೆಸ್

ಚಟುವಟಿಕೆಗಳಲ್ಲಿ ನೇರವಾಗಿ ಭಾಗವಹಿಸುವ ಆಸಕ್ತಿಯನ್ನು ತೋರಿದರು. ೧೯೩೬ರಲ್ಲಿ ಅವರು ಜವಾಬ್ದಾರಿಗಳನ್ನು ಹೆಚ್ಚು ಹೆಚ್ಚಾಗಿ ತಮ್ಮ ಸಹಾಯಕರಿಗೆ ಒಪ್ಪಿಸುವ ಮೂಲಕ ತಮ್ಮ ವೃತ್ತಿಯ ಕಾರ್ಯವನ್ನು ಗಣನೀಯ ಪ್ರಮಾಣದಲ್ಲಿ ಇಳಿಸಿಕೊಂಡರು. ೧೯೩೭ಕ್ಕೆ ಮುಂಚೆ ಮೈಸೂರು ಕಾಂಗ್ರೆಸ್‌ನಲ್ಲಿ ಬ್ರಾಹ್ಮಣರು ಹಾಗೂ ಮೇಲುವರ್ಗಗಳವರು ಪ್ರಧಾನ ಪಾತ್ರ ವಹಿಸುತ್ತಿದ್ದರು. ಅದಕ್ಕೆ ವಿರೋಧಿ ಸ್ಥಾನದಲ್ಲಿದ್ದುದೆಂದರೆ ಬ್ರಾಹ್ಮಣ ವಿರೋಧಿ ಪ್ರಜಾಪಕ್ಷ, ಇದಕ್ಕೆ ಸ್ಫೂರ್ತಿಯಿತ್ತುದೆಂದರೆ ಬ್ರಿಟಿಷ್ ಪ್ರಾಂತವಾಗಿದ್ದ ಮದರಾಸಿನ ಬ್ರಾಹ್ಮಣವಿರೋಧಿ ಜಸ್ಟಿಸ್ ಪಕ್ಷ. ತಾನು ಬ್ರಾಹ್ಮಣೇತರರ ಹಾಗೂ ಮೇಲುವರ್ಗಕ್ಕೆ ಹೊರತಾದವರ ಹಿತಕ್ಕಾಗಿ ಕೆಲಸ ಮಾಡುವುದೆಂದು ಈ ಪಕ್ಷವು ಪ್ರಚಾರ ಮಾಡಿಕೊಳ್ಳು ತ್ತಿತ್ತು. ಹೀಗಾಗಿ ಇದು ಕಾಂಗ್ರೆಸ್‌ಗೆ ಪ್ರಬಲ ಪ್ರತಿರೋಧವನ್ನೊಡ್ಡಿತ್ತು. ಕಾಂಗ್ರೆಸ್‌ನ ಗುರಿ ದೇಶದ ಸ್ವಾತಂತ್ರ್ಯ ಮತ್ತು ರಾಜ್ಯದಲ್ಲಿ ಪ್ರಜಾಸತ್ತಾತ್ಮಕ ಆಡಳಿತದ ವಿಶಾಲ ಗುರಿಗಳನ್ನು ಹೊಂದಿದ್ದರೆ, ಪ್ರಜಾಪಕ್ಷದ ಗುರಿಯೆಂದರೆ ಮೈಸೂರು ಅರಸರ ಆಳ್ವಿಕೆಯಡಿ ಯಲ್ಲಿನ ಜವಾಬ್ದಾರಿ ಸರ್ಕಾರ ರಚನೆ. ಆದರೆ ದೇಶ ಸ್ವಾತಂತ್ರ್ಯ ಪಡೆಯದೆ ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರ ರಚನೆ ಅಸಾಧ್ಯವೆಂಬುದು ಹಾಗೂ ಗಾಂಧೀಜಿಯ ನಾಯಕತ್ವ ದಲ್ಲಿನ ಕಾಂಗ್ರೆಸ್ ಮುಖಾಂತರ ಮಾತ್ರವೇ ದೇಶ ಸ್ವಾತಂತ್ರ್ಯ ಪಡೆಯಲು ಸಾಧ್ಯ ಎಂಬುದು ಪ್ರಜಾಪಕ್ಷಕ್ಕೆ ಅರಿವಾಗಿತ್ತು. ಹೀಗಾಗಿ ಅದು ಕಾಂಗ್ರೆಸ್‌ನೊಡನೆ ವಿಲೀನ ಗೊಂಡಿತು. ಕಾಂಗ್ರೆಸ್‌ನ ದೃಷ್ಟಿಯಲ್ಲಿ ಇದು ಹೆಚ್ಚು ಅಪೇಕ್ಷಣೀಯವಾಗಿತ್ತು, ಯಾಕಂದರೆ ಕಾಂಗ್ರೆಸ್‌ಗೆ ಅಬ್ರಾಹ್ಮಣರ ಬೆಂಬಲ ಅತ್ಯವಶ್ಯಕವಾಗಿತ್ತು. ಆ ವರ್ಷ ಏಪ್ರಿಲ್ ೧೭ ರಂದು ವಿಲೀನದ ಈ ಐತಿಹಾಸಿಕ ಘಟನೆ ಚಿತ್ರದುರ್ಗದಲ್ಲಿ ಜರುಗಿತು, ನಿಜಲಿಂಗಪ್ಪ ನವರೇ ಸ್ವಾಗತ ಸಮಿತಿಯ ಅಧ್ಯಕ್ಷರು. ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದವರು ಕೆ.ಸಿ. ರೆಡ್ಡಿ ಎಂದು ಹೆಚ್ಚು ಪ್ರಖ್ಯಾತರಾಗಿದ್ದ ಮೈಸೂರು ಕಾಂಗ್ರೆಸ್‌ನ ಧುರೀಣರಾದ ಕೆ. ಚೆಂಗಲರಾಯರೆಡ್ಡಿ ಅವರು.

೧೯೩೭ರ ನಂತರ ನಿಜಲಿಂಗಪ್ಪನವರು ತಮ್ಮ ಬದುಕಿನ ಹೊಸ ಅಧ್ಯಾಯವನ್ನು ತೆರೆದರು. ರಾಜಕೀಯ ಕರ್ತವ್ಯ ಹಾಗೂ ವೃತ್ತಿಬದ್ಧತೆಗಳನ್ನು ಸಮತೋಲದಲ್ಲಿರಿಸಿ ಕೊಳ್ಳುವ ಸಂಕೀರ್ಣ ಅಧ್ಯಾಯ ಅದು. ಅವರ ಮನೆ ಇಲ್ಲಿಗೆ ಬರುವ ಕಾಂಗ್ರೆಸ್ ನಾಯಕರುಗಳು ಉಳಿದುಕೊಳ್ಳುವ ಅನಧಿಕೃತ ಅತಿಥಿಗೃಹವಾಯಿತು. ಒಮ್ಮೆ, ಎಚ್.ಕೆ. ವೀರಣ್ಣಗೌಡರು ಚಿತ್ರದುರ್ಗಕ್ಕೆ ಬಂದರು, ನಿಜಲಿಂಗಪ್ಪನವರು ವಾಸಿಸುತ್ತಿದ್ದ ಮನೆ ಇದ್ದ ಬೀದಿಯಲ್ಲಿಯೇ ಹಾದುಹೋದರು. ಆ ಹೊತ್ತಿಗೆ ನಿಜಲಿಂಗಪ್ಪನವರು ಟೆನಿಸ್ ರ್‍ಯಾಕೆಟ್ ಹಿಡಿದು ಕ್ಲಬ್ ಕಡೆ ಹೊರಟಿದ್ದರು. ಕಾರಿನ ಮುಂದೆ ಹಾರುತ್ತಿದ್ದ ಕಾಂಗ್ರೆಸ್ ತ್ರಿವರ್ಣಧ್ವಜವನ್ನು ಕಂಡ ತಕ್ಷಣ ಅವರಿಗೆ ಅದು ಕಾಂಗ್ರೆಸ್ ನಾಯಕರದು ಎಂಬುದು

ಹೊಳೆಯಿತು, ಒಳಗಿದ್ದವರನ್ನು ತಮ್ಮ ಮನೆಗೆ ಆಹ್ವಾನಿಸಿದರು. ಆಮೇಲೆ, ತಾವು ಕ್ಲಬ್‌ಗೆ ಹೋಗಿ ಒಂದೇ ಒಂದು ಸೆಟ್ ಆಟವಾಡಿ ವಾಪಸ್ಸಾಗುವುದಾಗಿಯೂ, ಅಲ್ಲಿಯ ವರೆಗೆ ತಮ್ಮ ಮನೆಯಲ್ಲಿ ವಿಶ್ರಾಂತಿ ಪಡೆಯಬೇಕೆಂದೂ ವಿನಂತಿಸಿಕೊಂಡರು. ವೀರಣ್ಣಗೌಡರು ನಿಜಲಿಂಗಪ್ಪನವರನ್ನು ನೋಡುತ್ತಿದ್ದುದು ಇದೇ ಮೊದಲು, ಅವರಿಗೆ ಇವರ ಆತಿಥ್ಯದ ಹಿಂದಿದ್ದ ಆತ್ಮೀಯತೆ ಮನಸೆಳೆಯಿತು. ಆತಿಥ್ಯದಲ್ಲಿ ತಮ್ಮ ಯಜಮಾನ ರಿಗೆ ಸರಿದೊರೆಯಾಗಿದ್ದ ಮುರಿಗೆಮ್ಮನವರೂ ಗೇಟ್ ಬಳಿಯೇ ನಿಂತು ಅತಿಥಿಗಳನ್ನು ನಗೆಮೊಗದಿಂದ ಸ್ವಾಗತಿಸಿದರು. ಇದಾದ ಬಳಿಕ ನಿಜಲಿಂಗಪ್ಪ ಹಾಗೂ ಗೌಡರು ಆಜೀವ ಗೆಳೆಯರಾದರು. ೧೯೩೮ರಲ್ಲಿ, ಮದ್ದೂರು ಬಳಿಯ ಶಿವಪುರದಲ್ಲಿ ಭಾರತದ ರಾಷ್ಟ್ರಧ್ವಜವನ್ನು ಹಾರಿಸಲು ಮೈಸೂರು ಕಾಂಗ್ರೆಸ್ ನಿರ್ಣಯಿಸಿತು. ಈ ನಿರ್ಣಯ ಕೈಗೊಂಡದ್ದು ಟಿ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಸಮಾವೇಶದಲ್ಲಿ; ಇದರಿಂದ ಆ ಕಾಲದಲ್ಲಿ ಕಾಂಗ್ರೆಸ್ ಎಂತಹ ಶಿಸ್ತುಬದ್ಧ, ಪ್ರಾಮಾಣಿಕ ಹಾಗೂ ಉತ್ಸಾಹ ಭರಿತ ಸಂಸ್ಥೆಯಾಗಿತ್ತೆಂಬುದು ತಿಳಿಯುತ್ತದೆ. ಅದು ನಡೆಯಬೇಕಾಗಿದ್ದುದು ಆ ವರ್ಷದ ಏಪ್ರಿಲ್ ತಿಂಗಳಿನಲ್ಲಿ. ಈ ಸಮಾರಂಭ ನಡೆಸಲು ಅವಕಾಶ ನೀಡಬಾರದೆಂದು ಸರ್ಕಾರದ ಆದೇಶವಿದ್ದರೂ, ಮೈಸೂರು ಜಿಲ್ಲಾಡಳಿತವು ಘರ್ಷಣೆಯಿಲ್ಲದ ಶಾಂತಿಯುತ ಸಮಾರಂಭಕ್ಕೆ ಅನುವು ಮಾಡಿಕೊಟ್ಟಿತು. ಅನೇಕರು ಪೊಲೀಸ್ ಗೋಲೀಬಾರನ್ನು ನಿರೀಕ್ಷಿಸಿದ್ದರು, ಆದರೆ ಅದಾವುದೂ ನಡೆಯಲಿಲ್ಲ. ಆದರೆ ಇದರಲ್ಲಿ ಭಾಗವಹಿಸಿದವರನ್ನು ಬಂಧಿಸಿ ಜೈಲಿಗೆ ತುಂಬಲಾಯಿತು. ಈ ನಿರ್ಣಯ ತೆಗೆದುಕೊಂಡ ಮೈಸೂರಿನ ಕಾಂಗ್ರೆಸ್ ಸಭೆಯಲ್ಲಿ ನಿಜಲಿಂಗಪ್ಪನವರೂ ಪಾಲುಗೊಂಡಿದ್ದರು. ಅವರನ್ನೂ ಬಂಧಿಸಲಾಗುವು ದೆಂದು ನಿರೀಕ್ಷಿಸಿದ್ದರೂ ಪೊಲೀಸರು ಅವರನ್ನು ಮುಟ್ಟಲಿಲ್ಲ.

ಶಿವಪುರ ಸತ್ಯಾಗ್ರಹವು ಆಳರಸರ ವ್ಯಾಪ್ತಿಯಲ್ಲಿದ್ದ ಮೈಸೂರು ಸಂಸ್ಥಾನದಲ್ಲಿ ಒಂದು ಮಹತ್ವದ ಘಟನೆ, ಅದರ ಬಗ್ಗೆ ಭಾರತದೆಲ್ಲೆಡೆ ಮೆಚ್ಚುಗೆ ವ್ಯಕ್ತವಾಯಿತು. ಈ ಘಟನೆ ಸರ್ಕಾರದ ಎದೆಗುಂದಿಸಿತ್ತು, ಹೀಗಾಗಿ ಚಳವಳಿಯನ್ನು ಬಗ್ಗುಬಡಿಯಲು ಸರ್ಕಾರ ಸಿದ್ಧವಾಯಿತು. ಆದ್ದರಿಂದಲೇ ಮುಂದೆ ಕೋಲಾರ ಜಿಲ್ಲೆಯ ವಿದುರಾಶ್ವತ್ಥದಲ್ಲಿ ಪೊಲೀಸ್ ಗೋಲಬಾರ್‌ನ ದುರಂತಕ್ಕೆ ಎಡೆಮಾಡಿಕೊಟ್ಟಿತು. ಸರ್ಕಾರದ ಪ್ರತಿಷೇಧದ ಕ್ರಮಗಳಲ್ಲಿ ಪ್ರಕಟಣೆಯ ಮೇಲಿನ ನಿಷೇಧ ಮತ್ತು ನಾಯಕರ ಬಂಧನಗಳು ಸೇರಿದವು. ಇದಕ್ಕೆ ಪ್ರತಿಯಾಗಿ, ಪ್ರಜಾಪ್ರತಿನಿಧಿ ಸಭೆಗೆ ಚುನಾಯಿತರಾಗಿದ್ದ ಸದಸ್ಯರನ್ನು ರಾಜೀನಾಮೆ ನೀಡಲು ಮೈಸೂರು ಕಾಂಗ್ರೆಸ್ ಸೂಚಿಸಿತು. ರಾಜ್ಯದಲ್ಲಿನ ಸರ್ಕಾರ ಹಾಗೂ ಕಾಂಗ್ರೆಸ್‌ಗಳ ನಡುವಣ ಈ ಬಿಕ್ಕಟ್ಟು ನಿವಾರಣೆಯಾದದ್ದು ಎಐಸಿಸಿಯಿಂದ, ಅದು ಸರ್ ದಿವಾನ್ ಮಿರ್ಜಾ ಇಸ್ಮಾಯಿಲ್ ಅವರೊಡನೆ ಸಂಧಾನ ನಡೆಸಲು ತನ್ನ ಪ್ರತಿನಿಧಿಗಳಾಗಿ

ಸರ್ದಾರ್ ವಲ್ಲಭಾಯ್ ಪಟೇಲ್ ಮತ್ತು ಜೆ.ಬಿ. ಕೃಪಲಾನಿ ಅವರನ್ನು ಕಳಿಸಿತು. ಇದರಿಂದಾಗಿ, ಎಲ್ಲ ಪ್ರತಿಬಂಧಕಗಳನ್ನೂ ಹಿಂತೆಗೆದುಕೊಳ್ಳಲು, ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲು ಹಾಗೂ ರಾಜಕೀಯ ಸುಧಾರಣೆಗಳ ಕುರಿತು ಸಲಹೆ ನೀಡಲು ಮೈಸೂರು ಕಾಂಗ್ರೆಸ್ ಸಮಿತಿಯ ಪ್ರತಿನಿಧಿಗಳನ್ನೊಳಗೊಂಡ ಸಮಿತಿಯೊಂದನ್ನು ರಚಿಸಲು ಸರ್ಕಾರ ಸಮ್ಮತಿಸಿತು. ಅಲ್ಲದೆ, ಅಧಿಕೃತ ಮೈಸೂರು ಧ್ವಜದೊಡನೆ ಕಾಂಗ್ರೆಸ್ ಧ್ವಜವನ್ನೂ ಹಾರಿಸಲು ಒಪ್ಪಿತು. ಅಂತಿಮವಾಗಿ, ಮೈಸೂರು ಕಾಂಗ್ರೆಸ್ ಅನ್ನು ಜನರ ಅಧಿಕೃತ ವಕ್ತಾರನೆಂದು ಪರಿಗಣಿಸಲು ಸರ್ಕಾರ ಒಪ್ಪಿತು. ಆದರೆ ಈ ಒಡಂಬಡಿಕೆಗಳನ್ನು ಕಾರ್ಯಗತಗೊಳಿಸುವಲ್ಲಿ ಸರ್ಕಾರ ವಿಫಲವಾಯಿತು; ಗಾಯಕ್ಕೆ ಉಪ್ಪು ಸವರಿದಂತೆ, ಅದು ತನ್ನ ಪ್ರತಿಬಂಧಕ ಕಾರ್ಯಾಚರಣೆಯನ್ನು ಬಲಗೊಳಿಸಿತು; ಎಲ್ಲ ವೃತ್ತಪತ್ರಿಕೆಗಳು ಹಾಗೂ ಪ್ರಕಟಣೆಗಳ ಮೇಲೆ ನಿಷೇಧ ಹೇರಿದ್ದಲ್ಲದೆ ನಾಯಕರ ಬಂಧನಕ್ಕೆ ಆಜ್ಞಾಪಿಸಿತು. ಇದರಿಂದ ಸರ್ಕಾರದೊಡನೆ ಶಾಂತಿಯುತವೂ ಸಾಂವಿಧಾನಿಕವೂ ಆದ ಮಾರ್ಗಗಳಲ್ಲಿ ಸಂಧಾನ ನಡೆಸುವುದು ವ್ಯರ್ಥವೆಂದು ಭಾವಿಸಿದ ಕಾಂಗ್ರೆಸ್ ಪ್ರತಿಬಂಧನಾತ್ಮಕ ಕ್ರಮ ಗಳನ್ನು ಅಹಿಂಸಾತ್ಮಕ ಹೋರಾಟವನ್ನು ಸಂಘಟಿಸಲು ಮತ್ತು ಈ ಮೂಲಕ ಸ್ವಾತಂತ್ರ್ಯ ಹೋರಾಟದ ಭಾಗವಾಗಿ ಮಾಡಲು ತೀರ್ಮಾನಿಸಿತು. ೧೯೩೮ರಲ್ಲಿ ಈ ಹೋರಾಟ ವನ್ನು ಮೈಸೂರು ರಾಜ್ಯ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದ ಟಿ. ಸಿದ್ಧಲಿಂಗಯ್ಯನವರು ಉದ್ಘಾಟಿಸಿದರು. ಇದರಿಂದಾಗಿ ಅನೇಕ ಬಂಧನಗಳಾದವು, ಅಹಿಂಸಾತ್ಮಕ ಚಳವಳಿ ಗಾರರ ಮೇಲೆ ಲಾಠಿ ಚಾರ್ಜ್ ಮಾಡಲಾಯಿತು, ರಾಷ್ಟ್ರಧ್ವಜವನ್ನು ಹಾರಿಸಲು ಪ್ರಯತ್ನಿಸಿದ ಜನರ ಮೇಲೆ ಗುಂಡು ಹಾರಿಸಲಾಯಿತು. ಇಡೀ ಮೈಸೂರು ರಾಜ್ಯ ಪ್ರತಿಭಟನೆಯ ಉರಿಯಲ್ಲಿ ಸಿಲುಕಿತು. ೧೯೩೮ರ ಸೆಪ್ಟೆಂಬರ್‌ನಲ್ಲಿ ರಾಜ್ಯ ಕಾಂಗ್ರೆಸ್ ಮಹತ್ವದ ನಿರ್ಣಯವನ್ನು ತೆಗೆದುಕೊಂಡು ಪ್ರತಿಬಂಧನಾತ್ಮಕ ಕಾನೂನುಗಳ ವಿರುದ್ಧ ಪೂರ್ಣಪ್ರಮಾಣದ ಚಳವಳಿಯನ್ನು ಆರಂಭಿಸಿತು. ಬಹಿರಂಗ ಸಭೆ, ಧ್ವಜಾರೋಹಣಗಳ ಮೇಲಿನ ಪ್ರತಿಷೇಧವನ್ನು ರಾಜ್ಯದೆಲ್ಲೆಡೆ ಮುರಿಯಲಾಯಿತು. ಕಾಂಗ್ರೆಸ್ ಅಧ್ಯಕ್ಷರಾದ ಸಿದ್ಧಲಿಂಗಯ್ಯನವರೇ ಬಂಧನಕ್ಕೊಳಗಾದರು. ಈ ಸನ್ನಿವೇಶವು ತಾವೆಂತಹ ಪ್ರಬುದ್ಧ ಸಂಘಟಕರು ಹಾಗೂ ಹೋರಾಟಗಾರರೆಂಬುದನ್ನು ರುಜುವಾತುಪಡಿಸಲು ನಿಜಲಿಂಗಪ್ಪ ನವರಿಗೆ ಸದವಕಾಶವನ್ನೊದಗಿಸಿತು. ಅರಣ್ಯ ವಿಧಿಯ ವಿರುದ್ಧ ಹೋರಾಡಲು ನಿಜಲಿಂಗಪ್ಪನವರು ನಿರ್ಧರಿಸಿದರು. ಚಿತ್ರದುರ್ಗಕ್ಕೆ ಸುಮಾರು ಹತ್ತು ಮೈಲಿ ದೂರದಲ್ಲಿ ಒಂದು ಈಚಲುವನವಿತ್ತು. ಅಕ್ಕಪಕ್ಕದ ಹಳ್ಳಗಳಿಗೆ ಹೆಂಡ ಸರಬರಾಜು ಮಾಡಲು ಆಕರವಾಗಿದ್ದ ಇಲ್ಲಿನ ಈಚಲು ಮರಗಳನ್ನು ಕತ್ತರಿಸಲು ನಿಜಲಿಂಗಪ್ಪನವರು ತಮ್ಮ ಅನುಯಾಯಿಗಳಿಗೆ ಸೂಚಿಸಿದರು. ಗಾಂಧಿ ಟೋಪಿಯನ್ನು ಧರಿಸಿ ತಾವೇ ಅವರ

ಮುಂದಾಳತ್ವ ವಹಿಸಿ, ಕಾರ್ಯಾಚರಣೆಯು ಶಿಸ್ತುಬದ್ಧವಾಗಿಯೂ ಯೋಜಿತ ರೀತಿಯಲ್ಲಿಯೂ ನಡೆಯಲು ಕಾರಣರಾದರು. ಈಚಲುವನವಿದ್ದ ತುರುವನೂರಿಗೆ ಅನುಯಾಯಿಗಳ ತಂಡದೊಡನೆ ಹೋಗಿ ಮರಗಳನ್ನು ಕತ್ತರಿಸಲು ತೊಡಗಿದರು. ಈ ಕಾರ್ಯಾಚರಣೆಯು ನಡೆದದ್ದು ೧೯೩೯ರ ಸೆಪ್ಟೆಂಬರ್ ೧೮ ರಂದು; ಇದರಲ್ಲಿ ಪ್ರಸಿದ್ಧ ರಾಜ್ಯ ನಾಯಕರುಗಳಾಗಿದ್ದ ರಾಜಶೇಖರಯ್ಯ ಮತ್ತವರ ಹೆಂಡತಿ ಕೆ. ನಾಗರತ್ನಮ್ಮ ಸೇರಿದ್ದರು. ಕಾನೂನು ಮುರಿದವರನ್ನು ಬಂಧಿಸಿ ಚಿತ್ರದುರ್ಗಕ್ಕೆ ಕರೆತರಲಾಯಿತು. ಬಂಧಿತರಲ್ಲಿ ಎಸ್. ರಂಗರಾವ್, ಭೀಮಪ್ಪ ನಾಯಕ ಮತ್ತು ಗೋವಿಂದ ರೆಡ್ಡಿ ಸೇರಿದ್ದರು. ಅವರ ಮೇಲೆ ಆರೋಪಪಟ್ಟಿ ಹೊರಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ತಾವೂ ಸಾಕಷ್ಟು ದೀರ್ಘ ಕಾಲ, ಎರಡು ಮೂರು ವರ್ಷಗಳಷ್ಟು ಕಾಲ, ಜೈಲಿಗೆ ಹೋಗಬೇಕಾಗಬಹುದೆಂದು ನಿಜಲಿಂಗಪ್ಪನವರು ನಿರೀಕ್ಷಿಸಿದ್ದರು. ಹೀಗಾದರೆ ಕುಟುಂಬಕ್ಕೆ ಕ್ರಮಬದ್ಧ ಆದಾಯದ ಮೂಲ ಮುಚ್ಚಿದಂತಾಗುತ್ತದೆ. ತಾವು ಗಳಿಕೆಯ ವೃತ್ತಿಯನ್ನು ತೊರೆಯಬೇಕಾಗುತ್ತದೆ, ಕುಟುಂಬವನ್ನು ಹೇಳಲಾರದ ಹಣಕಾಸು ಹಾಗೂ ಭೌತಿಕ ತೊಂದರೆಗಳಿಗೆ ಸಿಲುಕಿಸಬೇಕಾಗುತ್ತದೆ. ಕುಟುಂಬವು ಇದನ್ನು ಹೇಗೆ ಸ್ವೀಕರಿಸಬಹುದು ಎಂಬುದು ನಿಜಲಿಂಗಪ್ಪನವರಿಗೆ ಸ್ಪಷ್ಟವಿರಲಿಲ್ಲ. ತಾವು ಈ ತ್ಯಾಗಕ್ಕೆ ಸಿದ್ಧರಾಗುವರೇ ಎಂಬ ಯೋಚನೆ ಅವರನ್ನು ಆವರಿಸಿತು. ಈ ಕುರಿತು ಚರ್ಚಿಸಲು ಅವರು ತಾಯಿ ಹಾಗೂ ಹೆಂಡತಿಯನ್ನು ಕೂರಿಸಿಕೊಂಡರು. ಹಾಗೆ ನೋಡಿದರೆ, ಈಚಲು ಮರಗಳನ್ನು ಕಡಿದು ಅವರೆಂತಹ ಪರಿಸ್ಥಿತಿಯಲ್ಲಿ ಸಿಲುಕಿದ್ದಾರೆಂಬ ಅರಿವು ಅವರಿಗೂ ಇತ್ತು. ತಾವು ಜೈಲಿಗೆ ಹೋದರೆ ಅವರು ಎಂತಹ ತೊಂದರೆಗಳನ್ನೆದುರಿಸಬೇಕಾಗುವುದೆಂಬುದನ್ನು ಸಾಕಷ್ಟು ವಿವರವಾಗಿ ತಿಳಿಸಿದರು. ಸಾಧಾರಣ ಹಾಗೂ ಸಂಕಷ್ಟ ಪರಿಸ್ಥಿತಿಗಳೆರಡರಲ್ಲಿಯೂ ಗಂಡನ ಬೆಂಬಲಕ್ಕೆ ನಿಲ್ಲುವ ಮನೋಭಾವದ ಮುರಿಗೆಮ್ಮನವರು ತಮಗೆ ತಿಳಿದಂತೆ ಪರಿಸ್ಥಿತಿಯ ಬಿಗುವನ್ನು ಅರ್ಥಮಾಡಿಕೊಂಡಿದ್ದರು. ತಮ್ಮ ಯಜಮಾನರು ಈ ಕಾರ್ಯವನ್ನು ಗಾಂಧೀಜಿಯವರ ಕರೆಯ ಮೇರೆಗೆ ಕೈಗೊಂಡಿದ್ದರೆಂಬುದನ್ನೂ ನಾಯಕರಾದ್ದರಿಂದ ನಡೆದುದೆಲ್ಲಕ್ಕೂ ಅವರನ್ನು ಹೊಣೆಗಾರನ್ನಾಗಿ ಮಾಡಲಾಗುತ್ತದೆ ಎಂಬುದನ್ನೂ ಅವರು ಬಲ್ಲರು. ತಮ್ಮ ಗಂಡ ಒಂದು ಉದಾರ ಧ್ಯೇಯಕ್ಕಾಗಿ ಹೋರಾಡಿತ್ತಿದ್ದರೆಂಬ ತಿಳಿವೂ ಅವರಿಗಿತ್ತು. ತಮ್ಮ ಗಂಡ ಹೇಳಿದುದಕ್ಕೆ ಉತ್ತರವಾಗಿ ಅವರು, "ಇಲ್ಲಿಯವರೆಗೂ ನೀವು ನನ್ನ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿದ್ದೀರಿ. ಈಗ ನೀವು ಗಾಂಧೀಜಿಯವರ ಪರೀಕ್ಷೆಯಲ್ಲಿ ಪಾಸಾಗಬೇಕು! ನೀವು ಅದಕ್ಕಾಗಿ ಹೋಗಿ. ಕೈಯಲ್ಲಿರುವ ಉಳಿತಾಯದಿಂದ ನಾವು ಹೇಗೋ ಇಲ್ಲಿನ ಪರಿಸ್ಥಿತಿಯನ್ನು ನಿಭಾಯಿಸುತ್ತೇವೆ" ಎಂದರು. ನೀಲಮ್ಮನವರೂ ಹಾಗೆಯೇ ಬೆಂಬಲ ವ್ಯಕ್ತಪಡಿಸಿದರು.

ನಿಜಲಿಂಗಪ್ಪನವರು ಆ ರಾತ್ರಿ ಮಲಗಲು ಹೋದಾಗ, ಅವರ ಮನಸ್ಸು ನಿರಾಳವಾಗಿತ್ತು, ಹಾಗಾಗಿ ಹಾಯಾಗಿ ನಿದ್ದೆ ಮಾಡಿದರು. ನಿರೀಕ್ಷೆಯಂತೆ, ಬೆಳಗಿನ ಜಾವ ನಾಲ್ಕರ ಹೊತ್ತಿಗೆ ಬಾಗಿಲು ಬಡಿಯಿತು. ಅದು ಪೊಲೀಸರದೇ ಕೆಲಸ ಎಂಬುದು ಎಲ್ಲರಿಗೂ ಗೊತ್ತಿತ್ತು. ನಿಜಲಿಂಗಪ್ಪನವರು ಬಾಗಿಲು ತೆರೆದು, ಸಿದ್ಧವಾಗುವವರೆಗೆ ಕಾಯಲು ಪೊಲೀಸರಿಗೆ ಸೂಚಿಸಿದರು. ಒಂದೆರಡು ಕ್ಷಣಗಳಲ್ಲಿಯೇ ಅವರನ್ನು ಕಾನೂನು ಪ್ರಕಾರ ಬಂಧಿಸಲಾಯಿತು. ಆ ಬಳಿಕ ಅವರಿಗೆ ಒಂದೂವರೆ ವರ್ಷಗಳ ಕಠಿಣ ಸಜೆಯ ಶಿಕ್ಷೆ ವಿಧಿಸಲಾಯಿತು. ತುರುವನೂರು ಗ್ರಾಮಸ್ಥರ ಮೇಲೆ ಭಾರಿ ಪುಂಡು ಗಂದಾಯವನ್ನು ವಿಧಿಸುವುದರ ಮೂಲಕ ಸರ್ಕಾರ ಅವರ ಮೇಲೆ ಸೇಡು ತೀರಿಸಿ ಕೊಂಡಿತು. ನಿಜಲಿಂಗಪ್ಪನವರ ನಾಯಕತ್ವದ ಕಾರಣದಿಂದಾಗಿ, ಸರ್ಕಾರ ವಿಧಿಸಿದ್ದ ಪ್ರತಿಬಂಧಕ ಕ್ರಮಗಳು ಹೋರಾಟವನ್ನು ಮತ್ತಷ್ಟು ದೃಢತೆಯಿಂದ ಎದುರಿಸುವ ಛಲವನ್ನು ಜನರಲ್ಲಿ ಮೂಡಿಸಿತ್ತು. ಅವರ ಬಂಧನದ ಸುದ್ದಿ ಕಾಳ್ಗಿಚ್ಚಿನಂತೆ ಚಿತ್ರದುರ್ಗ ದಲ್ಲೆಡೆ ಹರಡಿತು. ಅವರ ಕುಟುಂಬದ ಖರ್ಚುವೆಚ್ಚಗಳನ್ನು ತಾವು ಭರಿಸುವುದಾಗಿ ಅವರ ಹಳೆಯ ಕಕ್ಷಿದಾರರು ಹಾಗೂ ನಗರದ ಸಾರ್ವಜನಿಕರು ಮಾತು ಕೊಟ್ಟರು. ಅವರ ಕಚೇರಿಯ ಉಸ್ತುವಾರಿಯನ್ನು ಮತ್ತೊಬ್ಬ ವಕೀಲರಾದ ಓ. ವೀರಬಸಪ್ಪನವರು ವಹಿಸಿಕೊಂಡರು. ತುರುವನೂರು ಘಟನೆಯು ಬೇರೆ ಊರುಗಳಲ್ಲಿಯೂ ಈಚಲು ಮರಗಳನ್ನು ಕಡಿಯುವ ಚಳವಳಿಗೆ ಸ್ಫೂರ್ತಿ ನೀಡಿತು.

೧೯೩೯ನೇ ಸೆಪ್ಟೆಂಬರ್ ೨೯ ರಂದು ನಿಜಲಿಂಗಪ್ಪನವರನ್ನು ಬೆಂಗಳೂರಿನ ಸೆಂಟ್ರಲ್ ಜೈಲಿಗೆ ಸ್ಥಳಾಂತರಿಸಲಾಯಿತು. ಕಾನೂನಿನ ವಿವಿಧ ವಿಧಿಗಳನ್ನು ಉಲ್ಲಂಘಿಸಿದ್ದ ರಿಂದ ದಸ್ತಗಿರಿಯಾಗಿದ್ದ ಅನೇಕ ನಾಯಕರು ಆಗಲೇ ಅಲ್ಲಿದ್ದರು. ಜೈಲಿನ ಬದುಕು ನರಕವೇ ಸರಿ. ಅವರನ್ನು ಸಾಮಾನ್ಯ ಖೈದಿಗಳಂತೆ ಪರಿಗಣಿಸಲಾಗುತ್ತಿತ್ತು, ಅವರಿಗೆ ರಾಜಕೀಯ ಖೈದಿಗಳ ಸವಲತ್ತುಗಳನ್ನು ನಿರಾಕರಿಸಲಾಯಿತು. ಸೂಕ್ತ ಶೌಚಾಲಯ ವ್ಯವಸ್ಥೆಯಿಲ್ಲದೆ ಖೈದಿಗಳು ಗುಂಡಿಗಳನ್ನು ತೋಡಿ ಶೌಚಾಲಯಗಳಂತೆ ಬಳಸಬೇಕಾಗಿತ್ತು. ಆಹಾರವನ್ನು ಬಣ್ಣಿಸಲಸ ದಳವಾದಷ್ಟು ಕೊಳಕಾದ ಪಾತ್ರೆಗಳಲ್ಲಿ ಮಾಡಲಾಗುತ್ತಿತ್ತು. ತಾನು ತಿನ್ನುವ ದರಿದ್ರ ಊಟವನ್ನು ಗಳಿಸಲು ಪ್ರತಿ ಖೈದಿಯೂ ಹತ್ತು ಸೇರು ರಾಗಿ ಯನ್ನು ಬೀಸಬೇಕಾಗಿತ್ತು. ನೀಡುತ್ತಿದ್ದ ರೊಟ್ಟಿಗಳು ಪೂರ್ತಿ ಬೆಂದಿರದೆ ತಿನ್ನಲು ಅಸಾಧ್ಯವೆನಿಸುವಂತಿರುತ್ತಿದ್ದವು. ಅವರ ಹಾಸಿಗೆಯೆಂದರೆ ಒಂದು ಕೊಳಕು ಕಂಬಳಿ. ಅವರ ಪರಿಸ್ಥಿತಿಯು ಪ್ರತಿಭಟನೆಗೆ ತಕ್ಕುದಾಗಿತ್ತು. ನಿಜಲಿಂಗಪ್ಪನವರೇ ಖೈದಿಗಳ ಸಹಜ ನಾಯಕರು, ಅವರೇ ಪ್ರತಿಭಟನೆಯನ್ನು ಮುನ್ನಡೆಸಿದರು. ಇದರ ಪರಿಣಾಮವಾಗಿ ಅಲ್ಪಸ್ವಲ್ಪ ಉತ್ತಮಿಕೆ ಕಾಣುವಂತಾಯಿತು. ಉದಾಹರಣೆಗೆ ಮಣ್ಣಿನ ತಟ್ಟೆಗಳ ಬದಲು

ಅಲ್ಯೂಮಿನಿಯಂ ತಟ್ಟೆಗಳು ಬಂದವು. ಅವರೊಡನಿದ್ದ ಖೈದಿಗಳಲ್ಲಿ ಟಿ. ಸಿದ್ಧಲಿಂಗಯ್ಯ, ಮತ್ತು ಟಿ. ಸುಬ್ರಹ್ಮಣ್ಯಂ ಅವರಂತಹ ಹಿರಿಯ ನಾಯಕರಿದ್ದರು. ಆಗಿನ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್ ಅವರಿಗೆ ಸಿದ್ಧಲಿಂಗಯ್ಯನವರ ಬಗ್ಗೆ ವಿಶೇಷ ದ್ವೇಷ, ಹೀಗಾಗಿ ಕಾಂಗ್ರೆಸ್ ನಾಯಕರ ಪಾಡು ಕೇಳಿ ಅವರು ಪೀಡನರತಿಯನ್ನು ಅನುಭವಿಸು ತ್ತಿದ್ದರಂತೆ! ಜೈಲಿನ ವಾರ್ಡನ್ ಒಬ್ಬ ಇಂಡೋ-ಆಂಗ್ಲಿಯನ್ ಮಹಿಳೆ; ಆಕೆಯ ಮೇಲೆ ನಿಜಲಿಂಗಪ್ಪನವರ ಸೌಜನ್ಯ ಹಾಗೂ ಸುಸಂಸ್ಕೃತ ನಡವಳಿಕೆಗಳು ತುಂಬ ಪ್ರಭಾವ ಬೀರಿದ್ದವು. ಆಗಾಗ ಬಂದು ಅವರ ಯೋಗಕ್ಷೇಮವನ್ನಾಕೆ ವಿಚಾರಿಸುತ್ತಿದ್ದರು, ಅವರ ಬಗ್ಗೆ ಪ್ರೋತ್ಸಾಹದಾಯಕ ಮಾತುಗಳನ್ನಾಡುತ್ತಿದ್ದರು. ಅವರು ಖೈದಿಗಳಲ್ಲಿ ಗಳಿಸಿದ್ದ ಜನಪ್ರಿಯತೆಯು ಅಧಿಕಾರಿಗಳಲ್ಲಿ ಮತ್ಸರವನ್ನುಂಟುಮಾಡಿದ್ದವು, ಇದರಿಂದಾಗಿ ಅವರಲ್ಲಿ ನೂರು ಮಂದಿ ಸತ್ಯಾಗ್ರಹಿಗಳನ್ನು ಕೋಲಾರ ಜೈಲಿಗೆ ವರ್ಗಾಯಿಸಿ, ಅವರಿಗೆಲ್ಲ ಕಠಿಣ ಕೆಲಸಗಳನ್ನು ಕೊಡಲಾಯಿತು. ಅದೇ ಹೊತ್ತಿಗೆ ಕೆ.ಟಿ. ಭಾಷ್ಯಂ ಮತ್ತು ಹರ್ಡೇಕರ್ ಮಂಜಪ್ಪನವರನ್ನು ಶಿವಮೊಗ್ಗಕ್ಕೆ ವರ್ಗಾಯಿಸಲಾಯಿತು, ನಿಜಲಿಂಗಪ್ಪನವರನ್ನು ಹಾಸನ ಜೈಲಿಗೆ ಕಳಿಸಲಾಯಿತು.

ರಾಜ್ಯದಲ್ಲಾದ ಈ ಬೆಳವಣಿಗೆಗಳನ್ನು ಅಖಿಲ ಭಾರತ ಕಾಂಗ್ರೆಸ್ ನಾಯಕರು ಖಂಡಿಸಿದರು; ಬಹುತೇಕ ಅಹಿಂಸಾತ್ಮಕವಾಗಿದ್ದ ಈ ಚಳವಳಿಯಿಂದ ಪ್ರಭಾವಿತರಾಗಿದ್ದ ಗಾಂಧೀಜಿ ತಮ್ಮ ಆಪ್ತ ಕಾರ್ಯದರ್ಶಿ ಮಹಾದೇವ ದೇಸಾಯಿ ಅವರನ್ನು ಪರಿಸ್ಥಿತಿಯ ಅಧ್ಯಯನ ಮಾಡಲು ರಾಜ್ಯಕ್ಕೆ ಕಳಿಸಿದರು. ಅವರು ಮಾಡಿದ ವರದಿಯು ಗಾಂಧೀಜಿ ಹಾಗೂ ಅಖಿಲ ಭಾರತ ಕಾಂಗ್ರೆಸ್ ನಾಯಕರು, ಅರಸರ ಆಳ್ವಿಕೆಯ ರಾಜ್ಯಗಳಲ್ಲಿನ ಚಳವಳಿಯಿಂದ ತಾವು ದೂರವಿರುವುದು ಸರಿಯಲ್ಲವೆಂದು ನಿರ್ಧರಿಸುವಂತೆ ಮಾಡಿತು. ಚಳವಳಿಯನ್ನು ಸ್ಥಗಿತಗೊಳಿಸಿ, ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆಯೂ ಮುಂಬರುವ ಚುನಾವಣೆಗಳಲ್ಲಿ ಭಾಗವಹಿಸುವಂತೆಯೂ ಮೈಸೂರು ಕಾಂಗ್ರೆಸ್‌ಗೆ ಅವರು ಸೂಚಿಸಿದರು. ಇದೇ ಸಮಯಕ್ಕೆ, ಮೈಸೂರು ಕಾಂಗ್ರೆಸ್‌ನ ಸಮಾವೇಶವು ಕೆ.ಟಿ. ಭಾಷ್ಯಂ ಅವರ ಅಧ್ಯಕ್ಷತೆಯಲ್ಲಿ ಶಿವಮೊಗ್ಗದಲ್ಲಿ ನಡೆಯಿತು; ಅದರಲ್ಲಿ ಮಹಾತ್ಮರ ಸಲಹೆಯನ್ನು ಒಪ್ಪುವ ನಿರ್ಣಯವನ್ನು ಕೈಗೊಳ್ಳಲಾಯಿತು. ಜಯಚಾಮರಾಜ ಒಡೆಯರ್ ಅವರ ಪಟ್ಟಾಭಿಷೇಕ ಮಹೋತ್ಸವದ ಅಂಗವಾಗಿ ನಿಜಲಿಗಪ್ಪನವರನ್ನೊಳ ಗೊಂಡಂತೆ ಜೈಲಿನಲ್ಲಿದ್ದ ನಾಯಕರನ್ನು ೧೯೪೦ನೇ ಸೆಪ್ಟೆಂಬರ್ ೮ ರಂದು ಬಿಡುಗಡೆ ಮಾಡಲಾಯಿತು. ಇದೊಂದು ಸಣ್ಣ ಸಮಾಧಾನ, ಅಷ್ಟೆ; ಅಷ್ಟೂ ಅಲ್ಲ, ಏಕೆಂದರೆ ಸರ್ಕಾರವು ಅವರ ಜೀವನೋಪಾಯದ ಏಕೈಕ ಮಾರ್ಗವಾಗಿದ್ದ ವಕೀಲಿ ವೃತ್ತಿಯನ್ನು ನಡೆಸಲು ಅವರಿಗೆ ನೀಡಿದ್ದ ಸನದನ್ನು ರದುಗೊಳಿಸುವುದರ ಮೂಲಕ ಭಾರಿ ಹೊಡೆತ ವನ್ನೇ ಕೊಟ್ಟಿತು. ಇಂತಹುದೊಂದು ತೀರ್ಮಾನವನ್ನು ಭಾರತದ ಬ್ರಿಟಿಷರು ಕೂಡ

ಮಾಡಿರಲಿಲ್ಲ. ತಮ್ಮ ವೈಯಕ್ತಿಕ ಸಮಸ್ಯೆಗಳನ್ನು ಬದಿಗಿರಿಸಿ ನಿಜಲಿಂಗಪ್ಪನವರು ಕಾಂಗ್ರೆಸ್‌ನ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಜೈಲಿನಲ್ಲಿದ್ದಾಗ ಅವರು ಇಂಗ್ಲಿಷ್ ಕಾದಂಬರಿಗಳ ಜೊತೆಗೆ ಗಾಂಧೀಜಿಯವರ ಬರಹಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ ಅವರ ಆದರ್ಶಗಳನ್ನು ಮೈಗೂಡಿಸಿಕೊಂಡಿದ್ದರು. ಅವರಲ್ಲಿ ಹುದುಗಿದ್ದ ಸಾಮರ್ಥ್ಯವನ್ನು ಗಮನಿಸಿದ ಸರ್ಕಾರವು ಅವರನ್ನು ಕಾಂಗ್ರೆಸ್ ಚಳವಳಿ ಯಿಂದ ದೂರವಿರಿಸಲು ಅನೇಕ ಆಮಿಷಗಳನ್ನೊಡ್ಡಿತು. ಸಹಜವಾಗಿಯೇ ಅವರು ಯಾವ ಹಿಂಜರಿಕೆಯಿಲ್ಲದೆ, ಆದರೆ ವಿನಯದಿಂದಲೇ ಅವನ್ನೆಲ್ಲ ನಿರಾಕರಿಸಿದರು. ರಾಜ್ಯ ಶಾಸನ ಸಭೆಗೆ ಇಷ್ಟರಲ್ಲಿಯೇ ಚುನಾವಣೆಗಳು ನಡೆಯಲಿದ್ದು, ರಾಜ್ಯದ ಕಾಂಗ್ರೆಸ್ ಮಂಡಳಿಯ ಸದಸ್ಯರಾಗಿದ್ದ ನಿಜಲಿಂಗಪ್ಪನವರು ಚುನಾವಣಾ ಪ್ರಚಾರಕ್ಕೆಂದು ರಾಜ್ಯಾದ್ಯಂತ ಪ್ರವಾಸ ಕೈಗೊಂಡರು. ಚುನಾವಣೆಗಳಲ್ಲಿ ಎರಡೂ ಸದನಗಳಲ್ಲಿ ಮೈಸೂರು ಕಾಂಗ್ರೆಸ್ ಭಾರಿ ಬಹುಮತ ಪಡೆಯಿತು. ಚುನಾವಣೆಗಳ ಬಳಿಕ ತನ್ನ ನಾಲ್ಕನೆಯ ರಾಜ್ಯ ಸಮಾವೇಶವನ್ನು ಹರಿಹರ ಬಳಿಯ ಹರಪುರ ಗ್ರಾಮದಲ್ಲಿ ನಡೆಸಲು ಕಾಂಗ್ರೆಸ್ ನಿರ್ಧರಿಸಿತು. ಅದರ ಅಧ್ಯಕ್ಷತೆ ವಹಿಸಲಿದ್ದವರು ಎಚ್. ಸಿದ್ದಯ್ಯನವರು. ನಿಜಲಿಂಗಪ್ಪ ನವರು ಸ್ವಾಗತ ಸಮಿತಿಯ ಅಧ್ಯಕ್ಷರಾದರು. ಅವರ ಅವಿರತ ಪ್ರಯತ್ನದಿಂದಾಗಿ ಸಮಾವೇಶವು ಯಶಸ್ವಿಯಾಯಿತು. ಅಖಿಲ ಭಾರತ ಕಾಂಗ್ರೆಸ್‌ನ ಪ್ರತಿನಿಧಿಯಾಗಿ ಬಾಬು ರಾಜೇಂದ್ರ ಪ್ರಸಾದರು ಸಮಾವೇಶಕ್ಕೆ ಬಂದರು. ಸಮಾವೇಶದ ಸಂಘಟನೆಯಲ್ಲಿ ತೋರಿದ್ದ ಅದ್ಭುತ ಕೌಶಲ ಹಾಗೂ ಶಿಸ್ತುಬದ್ಧತೆಗಳನ್ನು ಕುರಿತು ಬಾಬು ಅವರು ಮುಕ್ತ ಮನಸ್ಸಿನಿಂದ ಹೊಗಳಿದರು, ವಿಶೇಷವಾಗಿ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ನಿಜಲಿಂಗಪ್ಪನವರ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಸಲ್ಲಿಸಿದ ವರದಿಯಲ್ಲಿಯೂ ಗಾಂಧೀಜಿಯವರ ಮುಂದೆಯೂ ಅವರು ತಮ್ಮ ಅಭಿಪ್ರಾಯಗಳನ್ನು ಪುನರುಚ್ಚರಿಸಿದರು. ಸಮಾವೇಶದ ಅನಿರೀಕ್ಷಿತ ಆಕರ್ಷಣೆ ಯೆಂದರೆ ನಿಜಲಿಂಗಪ್ಪನವರ ವರ್ಣಚಿತ್ರಗಳು ಹಾಗೂ ರೇಖಾಚಿತ್ರಗಳ ಪ್ರದರ್ಶನ! ಅವುಗಳನ್ನು ಕಂಡು ಎಲ್ಲರೂ ಹರ್ಷಿಸಿದರು, ಬಾಬು ಅವರಂತೂ ನಿಜಲಿಂಗಪ್ಪನವರೇನು ವೃತ್ತಿಪರ ಚಿತ್ರಕಾರರೇ ಎಂದು ಪ್ರಶ್ನಿಸಿದರು! ತಾವು ಚಿತ್ರಕಲೆಯನ್ನು ಜೈಲಿನಲ್ಲಿದ್ದಾಗ ಅಭ್ಯಾಸ ಮಾಡಿದ್ದಾಗಿಯೂ, ಪ್ರದರ್ಶನದಲ್ಲಿದ್ದ ಬಹುತೇಕ ಚಿತ್ರಗಳು ಜೈಲಿನಲ್ಲಿದ್ದಾಗ ರಚಿಸಿದವು ಎಂದು ನಿಜಲಿಂಗಪ್ಪವನರು ವಿವರಿಸಿದರು. ಕಲೆಗೆ ಹೆಚ್ಚು ಕಾಲ ವಿನಿಯೋಗಿಸುವಂತೆ ರಾಜೇಂದ್ರ ಪ್ರಸಾದರು ಸೂಚಿಸಿದರೂ, ಅದು ನಡೆಯುವಂತಹು ದಾಗಿರಲಿಲ್ಲ. ಅವರ ರಾಜಕೀಯ ಜೀವನ ರಭಸದಿಂದ ಮುನ್ನಡೆಯುತ್ತಿತ್ತು, ಮನೆಯಲ್ಲಿ ಕಾಲ ಕಳೆಯಲು ಅವರಿಗೆ ಸಿಕ್ಕುತ್ತಿದ್ದುದು ವರ್ಷದಲ್ಲಿ ಒಂದೆರಡು ತಿಂಗಳು ಮಾತ್ರ.

ಮೈಸೂರು ಕಾಂಗ್ರೆಸ್ ಸಮಾವೇಶವು ನಿಜಲಿಂಗಪ್ಪನವರೊಬ್ಬ ಪರಿಣತ ಸಂಘಟಕ ಹಾಗೂ ಸಂಪನ್ಮೂಲವ್ಯಕ್ತಿ ಎಂಬುದನ್ನು ಸಾಬೀತುಪಡಿಸಿತು. ಅದಕ್ಕೂ ಮಿಗಿಲಾಗಿ, ಅವರು ಉತ್ತರ ಕರ್ನಾಟಕ ಹಾಗೂ ಹಳೆ ಮೈಸೂರು ಈ ಎರಡೂ ಕಡೆಗಳಲ್ಲಿ ಜನಪ್ರಿಯ ರಾಗಿದ್ದರು ಎಂಬುದನ್ನು ತೋರಿಸಿತು. ಇದು ಅವರಲ್ಲಿ ಅಖಿಲ ಕರ್ನಾಟಕದ, ಹಾಗೂ ಭಾರತ ಮಟ್ಟದಲ್ಲಿ ಒಪ್ಪಿತವಾಗುವ ಹಂಚಿಹೋಗಿದ್ದ ಕರ್ನಾಟಕದ ನಿಜವಾದ ಪ್ರತಿನಿಧಿ ಯಾಗಬಲ್ಲ ನಾಯಕರೊಬ್ಬರು ಹುದುಗಿದ್ದಾರೆ ಎಂಬುದನ್ನು ಸೂಚಿಸಿತು. ಸಮಾವೇಶದ ಮುಖ್ಯ ಸಭಾಂಗಣಕ್ಕೆ ವಿನೋಬಾ ಭಾವೆಯವರ ಹೆಸರಿಡಲಾಗಿತ್ತು; ಕನ್ನಡ ವಾರ ಪತ್ರಿಕೆಯಾದ 'ಪ್ರಜಾಮತ'ವು ತನ್ನ ವರದಿಯಲ್ಲಿ ಆ ಹೆಸರು ಸೂಕ್ತವೆಂಬುದನ್ನು ಉಲ್ಲೇಖಿಸಿತ್ತು. ಅದಕ್ಕೆ ಕಾರಣ ವಿನೋಬಾ ಭಾವೆಯವರ ವಿದ್ವತ್ತಿನ ಗುಣಗಳು ಮಾತ್ರ ವಲ್ಲದೆ ಜನಹಿತದ ಬಗ್ಗೆ ಅವರಿಗಿದ್ದ ನಿಜವಾದ ಕಾಳಜಿ, ಸತ್ಯಪ್ರಿಯತೆ, ದಯೆ ಹಾಗೂ ಬದ್ಧತೆಗಳೆಂದು ವರ್ಣಿಸಿತ್ತು. ಜೊತೆಗೆ, ಭಾವೆಯವರ ಆ ಎಲ್ಲ ಗುಣಗಳೂ ಸಮಾವೇಶದ ಮುಖ್ಯ ಸಂಘಟಕರಾದ ನಿಜಲಿಂಗಪ್ಪನವರಲ್ಲಿಯೂ ಇವೆ ಎಂಬುದನ್ನು ಸೂಚಿಸಿತ್ತು. ಆಗಿನ ನಾಯಕರಾರಿಗೂ ಈ ವರ್ಣನೆ ತಪ್ಪು ಎಂದಾಗಲೀ ಅತಿಶಯೋಕ್ತಿಯದು ಎಂದಾಗಲೀ ಕಾಣಿಸಲಿಲ್ಲ. ಈಗಾಗಲೇ ಗಮನಿಸಿದಂತೆ, ಎರಡನೆಯ ಮಹಾಯುದ್ಧವು ರಾಷ್ಟ್ರೀಯ ಕಾಂಗ್ರೆಸ್ ಅನ್ನು ಮತ್ತೊಮ್ಮೆ ತೀವ್ರ ಹೋರಾಟದಲ್ಲಿ ತೊಡಗಿಸಿತು. ತಾನೊಂದು ಸ್ವತಂತ್ರ ರಾಷ್ಟ್ರವಾಗಿಯಲ್ಲದೆ ಯುದ್ಧಪ್ರಯತ್ನಗಳಿಗೆ ಬೆಂಬಲ ನೀಡಲು ಸಾಧ್ಯವಿಲ್ಲವೆಂದು ಕಾಂಗ್ರೆಸ್ ನಿರಾಕರಿಸಿತು. ಅದೇ ಹೊತ್ತಿಗೆ, ಇಂತಹ ಸಂಕಷ್ಟ ಸಮಯದಲ್ಲಿ ಸಾಮೂಹಿಕ ಸತ್ಯಾಗ್ರಹವನ್ನು ಕೈಗೊಂಡು ಸರ್ಕಾರವನ್ನು ಪೇಚಿಗೆ ಸಿಲುಕಿಸುವ ಇಷ್ಟ ಗಾಂಧೀಜಿಯವರಿಗಿರಲಿಲ್ಲ. ಅದರ ಬದಲು, ವೈಯಕ್ತಿಕ ಸತ್ಯಾಗ್ರಹದ ಮೂಲಕ ಮೌನವಹಿಸುವ ಕ್ರಮವನ್ನವರು ಸೂಚಿಸಿದರು. ಮೊದಲು ಇಂಥ ಸತ್ಯಾಗ್ರಹ ವನ್ನು ಕೈಗೊಳ್ಳಲು ಅವರು ವಿನೋಬಾ ಅವರಿಗೆ ಸೂಚಿಸಿದರು. ಯುದ್ಧಪ್ರಯತ್ನಗಳಿಗೆ ತಡೆಯೊಡ್ಡಿದ ನೆವವೊಡ್ಡಿ ಸರ್ಕಾರವು ಅವರನ್ನು ಬಂಧಿಸಿ ಅವರಿಗೆ ಮೂರು ತಿಂಗಳ ಸೆರೆವಾಸದ ಶಿಕ್ಷೆ ವಿಧಿಸಿತು. ಅವರನ್ನು ನೆಹರೂ ಮತ್ತು ಪಟೇಲರು ಅನುಸರಿಸಿದರು, ಅವರಿಬ್ಬರಿಗೂ ನಾಲ್ಕು ವರ್ಷಗಳ ದೀರ್ಘಕಾಲದ ಸಜೆ ವಿಧಿಸಲಾಯಿತು. ಮಹಾ ಯುದ್ಧವು ಮಹತ್ವದ ಘಟ್ಟವನ್ನು ತಲುಪಿದ್ದ ಕಾರಣದಿಂದಾಗಿ, ೧೯೪೧ರ ಡಿಸೆಂಬರ್ ನಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಸರ್ಕಾರವು ಸೆರೆಯಿಂದ ಬಿಡುಗಡೆ ಮಾಡಿತು; ಅದರ ಹಿಂದೆ ಕಾಂಗ್ರೆಸ್‌ನ ಸಹಕಾರವನ್ನು ಪಡೆಯುವ ಸಂಚಿತ್ತು. ಸರ್ ಸ್ಟಾಫರ್ಡ್ ಕ್ರಿಪ್ಸ್ ಅವರನ್ನು ಸಂಧಾನಕಾರರಾಗಿ ಕಳಿಸಿತು. ಕಾಂಗ್ರೆಸ್ ಅವರ ಸಲಹೆಗಳನ್ನು ತಿರಸ್ಕರಿಸಿತು, ಕಮ್ಯೂನಿಸ್ಟ್ ಪಕ್ಷವು ಮಾತ್ರ ಅವುಗಳನ್ನು ತನ್ನ ಅಂತರ

ರಾಷ್ಟ್ರೀಯತೆಯ ಭಾಗವೆಂಬ ಕಾರಣದಿಂದ ಅಂಗೀಕರಿಸಿತು. ಹೀಗೆ ಕ್ರಿಪ್ಸ್ ಸಂಧಾನವು ಮುರಿದುಬಿದ್ದದ್ದರಿಂದ, ಗಾಂಧೀಜಿಯವರು ಕಾಂಗ್ರೆಸ್‌ನಲ್ಲಿ ಮತ್ತಷ್ಟು ವಿಶಿಷ್ಟ ಸ್ಥಾನಕ್ಕೇರಿದರು. ಅದರಿಂದಾಗಿ ಮುಂದೆ ೧೯೪೨ನೇ ಆಗಸ್ಟ್‌ನಲ್ಲಿ ಮುಂಬಯಿಯಲ್ಲಿ ನಡೆದ ತನ್ನ ವಿಶೇಷ ಸಮಾವೇಶದಲ್ಲಿ ಪ್ರಸಿದ್ಧ 'ಭಾರತ ಬಿಟ್ಟು ತೊಲಗಿ' ನಿರ್ಣಯವನ್ನು ಕಾಂಗ್ರೆಸ್ ತೆಗೆದುಕೊಳ್ಳುವಂತಾಯಿತು. ಇದಕ್ಕೆ ಪ್ರತಿಕ್ರಿಯೆಯಾಗಿ, ಯಾವುದೇ ಸಂಧಾನಗಳಿಗೆ ಅವಕಾಶವಿಲ್ಲದಂತೆ ಗಾಂಧೀಜಿ, ನೆಹರೂ ಮತ್ತಿತರ ನಾಯಕರನ್ನು ಬೆಳಗಿನ ಜಾವದಲ್ಲಿ ಬಂಧಿಸಿತು. ನಿಜಲಿಂಗಪ್ಪನವರೂ ಮೈಸೂರು ಕಾಂಗ್ರೆಸ್‌ನ ಪ್ರತಿನಿಧಿಗಳಾಗಿ ಈ ಐತಿಹಾಸಿಕ ಸಮಾವೇಶದಲ್ಲಿ ಭಾಗವಹಿಸಿದ್ದರು. ಊರಿಗೆ ವಾಪಸ್ಸಾಗುವಾಗ, ರಾಜ್ಯದ ಗಡಿಯಲ್ಲಿ ಅವರನ್ನು ಬಂಧಿಸಲಾಯಿತು.

ಸರ್ಕಾರವು ಇಂಥ ತೀವ್ರವೂ ಕ್ಷಿಪ್ರವೂ ಆದ ಕ್ರಮವನ್ನು ತೆಗೆದುಕೊಳ್ಳತ್ತದೆಂದೂ ಯಾರೂ ನಿರೀಕ್ಷಿಸಿರಲಿಲ್ಲ. ಬಂಧನಗಳಿಂದ ಜನ ಕ್ರುದ್ಧರಾದರು, ರಾಷ್ಟ್ರೀಯ ಚಳವಳಿಯ ಹೋರಾಟದ ಉಗ್ರ ಹಂತ ಅನಿವಾರ್ಯವಾಯಿತು. ಜನಸಮುದಾಯದ ಸಹಜ ಪ್ರತಿಕ್ರಿಯೆಯು ಸರ್ಕಾರದ ಅಸ್ತಿವಾರವನ್ನೇ ಅಲುಗಾಡಿಸಿತು. ಈ ಕ್ಷಿಪ್ರ ಬಂಧನದಿಂದಾಗಿ ಬಂಧಿತ ನಾಯಕರುಗಳ ಕುಟುಂಬಗಳು ಅನಿರ್ವಚನೀಯ ಸಂಕಷ್ಟದಲ್ಲಿ ಮುಳುಗಿದವು. ಪಿತ್ರಾರ್ಜಿತ ಆಸ್ತಿಪಾಸ್ತಿಯಿಲ್ಲದ ಕುಟುಂಬಗಳಂತೂ ಅತೀವ ಕಷ್ಟಕ್ಕೊಳಗಾದವು. ಅಂತಹ ನಾಯಕರು ತಮ್ಮ ಹೆಂಡತಿಯರ ಬಂಧುಗಳ ಕೃಪೆಯನ್ನು ಯಾಚಿಸಬೇಕಾದ ಸನ್ನಿವೇಶ ವೊದಗಿತು. ಇಲ್ಲದಿದ್ದರೆ ಆ ಕುಟುಂಬಗಳಿಗೆ ಉಪವಾಸವೇ ಗತಿಯಾಗಿತ್ತು, ಅವರ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾದರು, ಕೆಲವರಂತೂ ಅಡ್ಡದಾರಿ ಹಿಡಿಯುವಂತಾಯಿತು. ಎಲ್ಲಕ್ಕಿಂತ ಹೆಚ್ಚಾಗಿ, ಅವರೆಲ್ಲ ಮನೆಯ ಯಜಮಾನನಿಂದ ದೂರವಾದರು. ನಿಜಲಿಂಗಪ್ಪನವರ ಕುಟುಬದ ಪರಿಸ್ಥಿತಿಯೂ ಹೆಚ್ಚು ಕಡಿಮೆ ಇದೇ ಆಯಿತು. ಮೊಳಕಾಲ್ಮೂರು, ಚಳ್ಳಕೆರೆ, ದಾವಣಗೆರೆ ಹಾಗೂ ಚಿತ್ರದುರ್ಗಗಳ ಬಹುತೇಕ ಕೇಸುಗಳು ನಿಜಲಿಂಗಪ್ಪನವರಿಗೇ ಬರುತ್ತಿದ್ದವು. ಹಗಲು ರಾತ್ರಿಯೆನ್ನದೆ ಕಕ್ಷಿದಾರರು ಅವರ ಮನೆಯಲ್ಲಿ ಠಳಾಯಿಸುತ್ತಿದ್ದರು. ವಸ್ತುಶಃ ಅವರೆಲ್ಲ ಅವರ ಮನೆಯಂಗಳದಲ್ಲಿಯೇ ತಳವೂರಿರುತ್ತಿದ್ದರು. ಅವರು ಮಾಡಿದ್ದ ದಾಂಧಲೆಯನ್ನು ಬೆಳಿಗ್ಗೆ ಎದ್ದ ತಕ್ಷಣ ನೀಲಮ್ಮನವವರು ಸರಿಪಡಿಸಬೇಕಾಗುತ್ತಿತ್ತು, ಅದರಲ್ಲಿಯೂ ಬೀಡಿ ಸಿಗರೇಟು ತುಂಡುಗಳನ್ನು ಗುಡಿಸಿಹಾಕಬೇಕಾಗಿತ್ತು. ಅವರು ಎಷ್ಟೋ ಸಲ ಮಗನಿಗೆ ಈ ವಿಷಯ ದೂರಿದ್ದರು. ಆದರೆ ನಿಜಲಿಂಗಪ್ಪನವರು ಇದೆಲ್ಲ ಜನರ ಸಹಜ ವ್ಯಾಪಾರವೆಂದು ವಿಷಯವನ್ನು ಹಗುರಾಗಿ ನೋಡುತ್ತಿದ್ದರು. ಇದೇ ಕಕ್ಷಿದಾರರೇ ಈ ಸಂಕಷ್ಟ ಸಮಯದಲ್ಲಿ ನಿಜಲಿಂಗಪ್ಪನವರ ಕುಟುಂಬದ ನೆರವಿಗೆ ಬಂದವರು. ತಮ್ಮ ಕೋಟಲೆಗಳಿಂದ ಕುಟುಂಬದ ಮೇಲೆ

ಭಾರ ಹೊರಿಸಲು ಇಚ್ಛಿಸದ ನಿಜಲಿಂಗಪ್ಪನವರು ರಾಜಕೀಯವನ್ನು ಮನೆಯವರ ಜೊತೆ ಚರ್ಚಿಸುತ್ತಿರಲಿಲ್ಲ. ಹೀಗಾಗಿ ಇಂಥ ಕ್ಷಿಪ್ರ ಬೆಳವಣಿಗೆಗಳನ್ನೆದುರಿಸಲು ಕುಟುಂಬ ಸಿದ್ಧವಾಗಿರಲಿಲ್ಲ.

ಅಲ್ಲದೆ, ಅವರು ತಮ್ಮ ಗಳಿಕೆಯನ್ನು ಉಳಿಸಿರಲಿಲ್ಲ, ಅದಕ್ಕೆ ಕಾರಣ ಹಣ ವಿನಿಯೋಗದಲ್ಲಿನ ಅವರ ಧಾರಾಳ ಬುದ್ಧಿ. ಈ ಕೌಟುಂಬಿಕ ಸಂಕಷ್ಟಕ್ಕೆ ಮೂರು ವರ್ಷಗಳ ಮುಂಚೆ ನಿಜಲಿಂಗಪ್ಪನವರ ವೃತ್ತಿ ಸನದು ರದ್ದಾಗಿತ್ತು. ೧೯೪೧ರಲ್ಲಿ, ಅವರಿಗೆ ತಮ್ಮ ಸೋದರ ಸಂಬಂಧಿಯಾಗಿದ್ದ ಗುರುನಾಥರ ಮೂಲಕ ತುಮಕೂರಿನ ಸಿ.ಆರ್. ಬಸಪ್ಪನವರ ಪರಿಚಯ ಆಗಿತ್ತು. ತಮಗೆ ಕಾನೂನು ಪದವಿ ಇದ್ದರೂ ಬಸಪ್ಪನವರು ತೀರ್ಥಹಳ್ಳಿಯಲ್ಲಿ ಹೈಸ್ಕೂಲು ಉಪಾಧ್ಯಾಯರಾಗಿ ಕೆಲಸ ಮಾಡುತ್ತಿದ್ದರು. ಅವರಿಗೆ ಅವರನ್ನು ತಮ್ಮ ವೃತ್ತಿಗೆ ಆಹ್ವಾನಿಸಿದಾಗ, ಅವರು ತಕ್ಷಣವೇ ಒಪ್ಪಿಕೊಂಡಿದ್ದರು. ಯಥಾಪ್ರಕಾರ, ತಮ್ಮ ಕುಟುಂಬವನ್ನು ಚಿತ್ರದುರ್ಗಕ್ಕೆ ಕರೆತರುವವರೆಗೆ ತಮ್ಮ ಅತಿಥಿಯಾಗಿರಲು ಅವರನ್ನು ನಿಜಲಿಂಗಪ್ಪನವರು ಕೇಳಿಕೊಂಡರು. ಅವರಿಬ್ಬರೂ ಬಹು ಬೇಗ ಆತ್ಮೀಯರಾದರು. ೧೯೪೧ ರಿಂದ ೧೯೪೬ ರವರೆಗೆ ಬಸಪ್ಪನವರು ನಿಜಲಿಂಗಪ್ಪನವರ ಕಚೇರಿಯ ಹೊಣೆ ಹೊತ್ತು ಅವರ ಹೆಸರಲ್ಲಿಯೇ ಕಾರ್ಯ ನಿರ್ವಹಿಸಿದರು. ಅವರಿಗೆ ನಿಜಲಿಂಗಪ್ಪನವರಿಂದ ಅತ್ಯುತ್ತಮ ವೃತ್ತಿ ಮಾರ್ಗದರ್ಶನ ದೊರೆಯಿತು. ನಿಜಲಿಂಗಪ್ಪನವರು ಜೈಲಿನಲ್ಲಿದ್ದಾಗ, ತಮ್ಮ ಸಂಪಾದನೆಯ ಒಂದು ಭಾಗವನ್ನು ಬಸಪ್ಪನವರು ತಮ್ಮ ಹಿರಿಯರ ಕುಟುಂಬಕ್ಕೆ ನೀಡುತ್ತಿದ್ದರು. ನೀಲಮ್ಮ ಹಾಗೂ ಮುರಿಗೆಮ್ಮನವರು ಕುಟುಂಬವನ್ನು ದಕ್ಷತೆಯಿಂದ ನಿಭಾಯಿಸುತ್ತಿದ್ದರು, ಮಕ್ಕಳ ಯೋಗ ಕ್ಷೇಮವನ್ನು ಮುತುವರ್ಜಿಯಿಂದ ನೋಡಿಕೊಳ್ಳುತ್ತಿದ್ದರು. ರುದ್ರಪ್ಪ ಹಾಗೂ ಸಾವಕ್ಕ ದಂಪತಿಗಳ ಮಗನಾದ ಗುರುನಾಥ ಅವರು ಧಾರ್ಮಿಕೇತರ ಕಾರ್ಯಗಳಲ್ಲಿ ಕುಟುಂಬಕ್ಕೆ ನೆರವಾಗುತ್ತಿದ್ದರು. ಕುಟುಂಬದ ಮತ್ತೊಬ್ಬ ಹಿತೈಷಿಗಳಾಗಿದ್ದ ಹೆಗ್ಗೆರೆ ತಿಪ್ಪೇರುದ್ರಪ್ಪನವರು ದವಸ ಧಾನ್ಯಗಳ ಸಹಾಯ ಮಾಡುತ್ತಿದ್ದರು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಈ ವ್ಯವಸ್ಥೆಯು ಸುಲಲಿತವಾಗಿ ಸಾಗಿ ನಿಜಲಿಂಗಪ್ಪನವರು ತಮ್ಮ ಜೈಲುವಾಸವನ್ನು ನಿಶ್ಚಿಂತೆಯಿಂದ ಕಳೆಯುವಂತಾಯಿತು. ಮುಂದೆ ನಿಜಲಿಂಗಪ್ಪನವರ ಕುಟುಂಬವು ಎದುರಿಸಿದ ಸಂಕಷ್ಟಗಳ ಬಗ್ಗೆ ಬಸಪ್ಪವನರು ಮನಕರಗುವಂತೆ ವಿವರಿಸಿದರು. ಅವರ ಪ್ರಕಾರ, ಕುಟುಂಬವು ತನ್ನ ವೆಚ್ಚವನ್ನು ಗಣನೀಯವಾಗಿ ಕಡಿತಗೊಳಿಸಿತ್ತು, ಮನೆಯ ಸಂಕಷ್ಟದ ಕಾರಣದಿಂದ ಮಕ್ಕಳ ಮೇಲೆ ಪರಿಣಾಮವಾಗಬಾರದೆಂದು ಆ ಇಬ್ಬರೂ ಮಹಿಳೆಯರು ತುಂಬ ಕಷ್ಟಪಟ್ಟರು. ಹಣ್ಣು ಹಾಲು ತರಕಾರಿಗಳ ವೆಚ್ಚವನ್ನು ತೀರ ಕಡಿಮೆ ಪ್ರಮಾಣಕ್ಕೆ ಇಳಿಸಿದ್ದರು. ಜೊತೆಗೆ ತಮ್ಮ ಕಷ್ಟ ನೆರೆಹೊರೆಯವರಿಗೆ ಗೊತ್ತಾಗಬಾರದೆಂದು ಪಡುತ್ತಿದ್ದ

ಬವಣೆ. ತಂದೆ ಮನೆಯಲ್ಲಿಲ್ಲದ್ದು ಮಕ್ಕಳಿಗೆ ತೀರ ಬೇಸರದ ಸಂಗತಿ. ಅವರದ್ದು ತಂದೆಯ ಪ್ರೀತಿ ಮತ್ತು ರಕ್ಷಣೆಗಳು ಅತ್ಯವಶ್ಯಕವಾಗಿದ್ದ ವಯಸ್ಸು. ಅದರಿಂದಾಗಿ ಮಕ್ಕಳ ಮನಸ್ಸಿನ ಮೇಲೆ ದುಷ್ಪರಿಣಾಮವುಂಟಾಗುವ ಸಂಭವವೂ ಇತ್ತು. ಹಬ್ಬ ಹರಿದಿನಗಳ ಆಚರಣೆಯ ಕಾಲದಲ್ಲಿ ಮನೆಯಲ್ಲಿ ಉಲ್ಲಾಸದ ವಾತಾವರಣವಿರುತ್ತಿರಲಿಲ್ಲ, ಪ್ರವಾಸವಂತೂ ನಿಂತೇ ಹೋಗಿತ್ತು. ಹೀಗಾಗಿ ಅವರ ವಿದ್ಯಾಭ್ಯಾಸ ಸಹಜವಾಗಿ ಕುಂಠಿತಗೊಂಡಿತು. ಅವರ ಮಗ ರಾಜಶೇಖರ್ ಅವರ ಪ್ರಕಾರ, ಅವರ ತಾಯಿಗೆ ಗಂಡ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲುಗೊಳ್ಳುತ್ತಿದ್ದುದು ಹೆಮ್ಮೆಯ ವಿಷಯ. ಸಾಮಾನ್ಯ ವಾಗಿ ಅವರು ಮಾಡುತ್ತಿದ್ದುದು ಒಂದಷ್ಟು ರೊಟ್ಟಿ ಮತ್ತು ಪಲ್ಯ; ಆದರೆ ರಾಜಕೀಯ ನಾಯಕರು ಮನೆಗೆ ಬಂದಾಗ ಒಂದಷ್ಟು ಅಕ್ಕಿ ತಂದು ಅನ್ನ ಮಾಡುತ್ತಿದ್ದರು, ಅವರಿಗೆ ಆಗ ಅನ್ನ ದುಬಾರಿಯ ವಸ್ತುವಾಗಿತ್ತು. ವಾಸ್ತವವಾಗಿ ಮಕ್ಕಳನ್ನು ಬೆಳೆಸಿದ್ದು ಅಜ್ಜಿ ಎಂದು ಅವರು ನೆನಪಿಸಿಕೊಂಡರು. ಮೊಮ್ಮಕ್ಕಳ ಗುಣ ನಡತೆಯ ಬಗ್ಗೆ ಅವರದು ವಿಶೇಷ ಕಾಳಜಿ. ಅವರನ್ನು ರೂಪಿಸಿದ್ದು ಅಜ್ಜಿಯೇ. ಅವರು ಕತೆಗಳ ಕಣಜ ವಾಗಿದ್ದುದು ಮೊಮ್ಮಕ್ಕಳಿಗೆ ತವನಿಧಿಯೆನಿಸಿತ್ತು! ಮಕ್ಕಳು ಮಲಗುವ ಹೊತ್ತಿನಲ್ಲಿ ಜಾನಪದ ಕತೆಗಳು, ರಾಮಾಯಣ ಮಹಾಭಾರತಗಳ ಪ್ರಸಂಗಗಳನ್ನು ಹೇಳುತ್ತಿದ್ದರು. ಕೆಲವು ವೇಳೆ ಅಜ್ಜಿ ಹಾಡು ಹೇಳಿ ಮಲಗಿಸುತ್ತಿದ್ದರು. ಅವರಿಂದಾಗಿ ಈ ಮಕ್ಕಳಲ್ಲಿ ಕಟ್ಟುನಿಟ್ಟಾದ ಶಿಸ್ತು ಮೈಗೂಡಿತು, ನೈತಿಕ ಪ್ರಜ್ಞೆ ಮೊಳೆಯಿತು. ಅವರಿಗೆ ಮಗನ ಬಗ್ಗೆ ಅತೀವ ಹೆಮ್ಮೆ, ಮೊಮಕ್ಕಳ ಬಗ್ಗೆ ಆಳವಾದ ಪ್ರೀತಿ. ಹಳ್ಳಿಯ ವಾತಾವರಣ ಹಿನ್ನೆಲೆಗಳಲ್ಲಿ ಬೆಳೆದು ಸಂಪ್ರದಾಯಶರಣೆಯಾಗಿದ್ದ ಆಕೆ ರೂಢಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ನಿದರ್ಶನಕ್ಕೆ, ಹರಿಜನರನ್ನು ಮುಟ್ಟುವುದಾಗಲೀ ಮನೆಯಲ್ಲಿ ಅವರನ್ನು ಬಿಟ್ಟುಕೊಳ್ಳುವು ದಾಗಲೀ ಅವರಿಗೆ ಸರಿಹೋಗದು. ನಿಜಲಿಂಗಪ್ಪನವರ ರಾಜಕೀಯ ಬದುಕಿನ ಆರಂಭ ಕಾಲದಲ್ಲಿ ಯಾವ ತಾರತಮ್ಯವಿಲ್ಲದೆ ಮಗ ಹರಿಜನ ಅತಿಥಿಗಳನ್ನು ಕಾಣುತ್ತಿದ್ದ ರೀತಿ ಅವರಿಗೆ ಸರಿಹೋಗುತ್ತಿರಲಿಲ್ಲ. ಆದರೆ ಬಸವಣ್ಣನವರ ವಚನಗಳನ್ನೋ ಗಾಂಧೀಜಿ ಯವರ ಮಾತುಗಳನ್ನೋ ಹೇಳುವ ಮೂಲಕ ಅವರನ್ನು ಬದಲಿಸುವಲ್ಲಿ ನಿಜಲಿಂಗಪ್ಪ ನವರು ಯಶಸ್ವಿಗಳಾದರು. ಕೊನೆಗೆ ತಾವೇ ಹರಿಜನ ಅತಿಥಿಗಳನ್ನು ಉತ್ಸಾಹದಿಂದ ಉಪಚಾರಮಾಡುವಂತಾಯಿತು. ಈ ಪ್ರಸಂಗ ಮಗನ ಒಲಿಸಿಕೊಳ್ಳುವ ರೀತಿಗೂ ತಾಯಿಯ ಮುಕ್ತ ಮನಸ್ಸಿಗೂ ಹಿಡಿದ ಕನ್ನಡಿಯಾಗಿದೆ. ನೀಲಮ್ಮವರಿಗೆ ತಂದೆಯಿಂದ ಬಂದಿದ್ದ ಬಳುವಳಿಯೆಂದರೆ ನಾಟಿ ವೈದ್ಯ. ಆಗ ತಾನೇ ಕಾಣಿಸಿಕೊಂಡಿದ್ದ ಪೆನ್ಸಿಲಿನ್ ಗಿಂತ ತನ್ನ ಔಷಧಿ ಮೇಲೆಂದು ಅಜ್ಜಿ ಹೆಮ್ಮೆಪಟ್ಟುಕೊಳ್ಳುತ್ತಿದ್ದ ರೀತಿಯನ್ನು ಮೊಮ್ಮಗ ಈಗಲೂ ನೆನೆಸಿಕೊಳ್ಳುತ್ತಾರೆ.

ನಿಜಲಿಂಗಪ್ಪನವರು ಮಕ್ಕಳನ್ನೆಂದೂ ಹೊಡೆದವರಲ್ಲ; ಆದರೆ ಒಂದೇ ಒಂದು ಬಾರಿ ಮಗನನ್ನು ಹೊಡೆದರೂ, ತಕ್ಷಣ ಪಶ್ಚಾತ್ತಾಪಪಟ್ಟಿದ್ದರು. ಒಳ್ಳೆಯ ಕೆಲಸ ಮಾಡಿದಾಗ ಅವರು ಮಕ್ಕಳನ್ನು ಪ್ರೋತ್ಸಾಹಿಸುತ್ತಿದ್ದರು. ಉದಾಹರಣೆಗೆ, ತಮ್ಮ ನಾಲ್ಕು ವರ್ಷದ ಪ್ರಭಾ ನಾಲ್ಕು ಸಾಲಿನ ಕಾಗದವೊಂದನ್ನು ತಮಗೆ ಬರೆದಾಗ ಅವರು ತುಂಬ ಸಂತೋಷ ಪಟ್ಟರು. ಕುಟುಂಬಕ್ಕೆಲ್ಲ ಅವರು ಕಟ್ಟುನಿಟ್ಟಾದ ಆರೋಗ್ಯದ ನಿಯಮವನ್ನು ಹಾಕಿದ್ದರು. ಹೊರಗೆ ತಿನ್ನಲು ಹೋಗುವುದಕ್ಕೆ ಬಂದ ಅವಕಾಶವನ್ನು ನಿರಾಕರಿಸದಿದ್ದರೂ, ಅವರೆಂದೂ ಹೆಚ್ಚಿಗೆ ತಿಂದವರಲ್ಲ ಅಥವಾ ಅನಾರೋಗ್ಯಕರವೆಂದು ಪರಿಗಣಿತವಾದುದನ್ನು ಮುಟ್ಟುತ್ತಿರಲಿಲ್ಲ. ಒಳ್ಳೆಯ ಆಹಾರದ ಬಗ್ಗೆ ಮೆಚ್ಚಿಕೆಯನ್ನು ವ್ಯಕ್ತಪಡಿಸುತ್ತಿದ್ದರೂ ಎಂದೂ ವಿಶೇಷ ಬೇಡಿಕೆಗಳನ್ನು ಮುಂದಿಟ್ಟವರಲ್ಲ. ಲಿಂಗಾಯಿತರಿಗೆ ಲಿಂಗಧಾರಣೆ ಕಡ್ಡಾಯವಾದರೂ, ತಮ್ಮ ಮನೆಯಲ್ಲಿ ಯಾರೂ ಲಿಂಗವನ್ನು ಧರಿಸುವ ಗೋಜಿಗೇ ಹೋಗಿರಲಿಲ್ಲ ಎಂದು ಅವರ ಮಗ ಹೇಳಿದರು. ಮನೆಯವರಾರೂ ಧಾರ್ಮಿಕ ಆಚರಣೆಗಳನ್ನಾಗಲೀ ಲಿಂಗಪೂಜೆಯನ್ನಾಗಲೀ ಮಾಡಿದವರಲ್ಲ. ಈ ಮಾನವೀಯವೂ ವೈಚಾರಿಕವೂ ಆದ ನಿಲವಿಗೆ ನಿಜಲಿಂಗಪ್ಪನವರ ನಂಬಿಕೆ ಹಾಗೂ ಆಚರಣೆಗಳೇ ಕಾರಣ. ಅದರಲ್ಲೂ, ಜೈಲಿಗೆ ಹೋಗಿ ಬಂದ ಮೇಲೆ, ಅವರು ಹಣೆಗೆ ವಿಭೂತಿ ಹಚ್ಚುವುದನ್ನಾಗಲೀ ಲಿಂಗಪೂಜೆ ಮಾಡುವುದನ್ನಾಗಲೀ ಮುಂದುವರೆಸಲಿಲ್ಲ. ಹಿಂದೆ ವಕೀಲಿ ವೃತ್ತಿಯನ್ನು ಮಾಡುತ್ತಿದ್ದಾಗ ಹಾಗೆ ಮಾಡುತ್ತಿದ್ದರೆಂಬುದು ನಿಜ. ಧಾರ್ಮಿಕ ಗುರುಗಳಾದ ಮೃತ್ಯುಂಜಯಸ್ವಾಮಿಗಳ ಹೊರತಾಗಿ ಅವರೆಂದೂ ಯಾರ ಪಾದಗಳನ್ನೂ ಮುಟ್ಟಿ ನಮಸ್ಕರಿಸಿದವರಲ್ಲ. ಹೊರಗಿನವರಿಗೆ ಸಹಾಯಮಾಡಲು ಅವರು ಸದಾ ಸಿದ್ಧರಿದ್ದರೂ, ಯಾರ ಬಗ್ಗೆಯೂ ವಿಶೇಷ ಪಕ್ಷಪಾತ ತೋರಿಸಿದವರಲ್ಲ, ಕೊನೆಗೆ ಮಕ್ಕಳಿಗೆ ಕೂಡ ಕನಿಷ್ಠ ಸಹಾಯವನ್ನೂ ಮಾಡಿದವರಲ್ಲ. ರಾಜಕೀಯಕ್ಕೆ ದುಮುಕಿದ ಬಳಿಕ ಕುಟುಂಬದ ಬಗೆಗಿನ ಅವರ ಆಸಕ್ತಿ ಸ್ಥಗಿತಗೊಂಡಿತು, ತಮ್ಮ ಹೆಣ್ಣು ಮಕ್ಕಳ ಮದುವೆಗಳು ಸಹ ಅವರ ಪ್ರಯತ್ನವಿಲ್ಲದೆಯೇ ಜರುಗಿದವು! ಆದರೆ ಅವರ ಮೂವರು ಗಂಡುಮಕ್ಕಳಲ್ಲಿ ಅತ್ಯಂತ ಕಿರಿಯ ಕಿರಣ್ ಶಂಕರ್ ಮದುವೆಯಾಗಲು ಮಾತ್ರ ಅವರದೇ ಉಮೇದು ಮತ್ತು ಪ್ರಯತ್ನಗಳು. ತಮ್ಮ ತಂದೆ ತಮಗೇನೂ ಆಸ್ತಿಯನ್ನು ಮಾಡಿರದ್ದರಿಂದ ಇನ್ನಿಬ್ಬರು ಗಂಡುಮಕ್ಕಳು ಮದುವೆಯಾಗಲು ಸಿದ್ಧರಿರಲಿಲ್ಲ. ಅಂದರೆ, ಅವರು ಸ್ವಾತಂತ್ರ್ಯ ಹೋರಾಟದಲ್ಲಿ ದುಮುಕಿದ ಬೆಲೆಯನ್ನು ಕುಟುಂಬವು ತೆರಬೇಕಾಯಿತು! ಇಬ್ಬರು ಗಂಡುಮಕ್ಕಳು ಮಾತ್ರ ಉತ್ತಮ ವಿದ್ಯಾಭ್ಯಾಸ ಪಡೆದರು, ಮಧ್ಯದ ಮಗ ಅದರಿಂದ ವಂಚಿತರಾದರು. ನಿಜಲಿಂಗಪ್ಪನವರು ತಮ್ಮ ಮಕ್ಕಳಿಗೆ ಯಾವುದೇ ಆಸ್ತಿಯನ್ನು ಮಾಡದಿರಲು ಕಾರಣ ಅವರು ತಮ್ಮ ಬದುಕನ್ನು ತಾವೇ

ರೂಪಿಸಿಕೊಳ್ಳಬೇಕೆಂಬ ನಿಲವು, ಮಕ್ಕಳಿಗಾಗಿ ಅವರು ಶಿಫಾರಸು ಮಾಡುವುದಕ್ಕೂ ಸಿದ್ಧರಿರಲಿಲ್ಲ. ಆದರ್ಶಗಳ ಕಾರಣದಿಂದ ತಮ್ಮ ಬಗ್ಗೆ ಆಸಕ್ತಿಯನ್ನು ತೋರದ ತಂದೆಯ ಬಗ್ಗೆ ಅವರ ಮಕ್ಕಳು ಆನಂತರ ಸ್ವಲ್ಪ ಕಹಿಭಾವವನ್ನು ಹೊಂದಿದರು, ಆದರೆ ಅವರಿಗೆ ತಂದೆಯ ನೈತಿಕ ಔನ್ನತ್ಯದ ಬಗೆಗಿನ ಗೌರವ ಎಂದೂ ಕಡಿಮೆಯಾಗಲಿಲ್ಲ. ಯಜಮಾನರು ಜೈಲಿಗೆ ಹೋದ ಮೇಲೆ ಕುಟುಂಬದ ಎಲ್ಲ ಕಷ್ಟನಷ್ಟಗಳ ಕೇಂದ್ರ ಬಿಂದುವಾದವರೆಂದರೆ ಅವರ ಹೆಂಡತಿ ಮುರಿಗೆಮ್ಮ. ಮದುವೆಗಿಂತ ಮುಂಚೆ ಅವರೆಂದೂ ಬಡತನವನ್ನು ಅನುಭವಿಸಿದವರಲ್ಲ. ಆದರೆ ಈಗ ಮಕ್ಕಳನ್ನು ಬೆಳೆಸಬೇಕಾದ ಕಾರಣದಿಂದ ಬಡತನದಲ್ಲಿ ಬದುಕಬೇಕಾಯಿತು. ಕೊನೆಯ ಮಗ ಬೈಸಿಕಲ್ ಮೇಲೆ ಕಾಲೇಜಿಗೆ ಹೋಗುತ್ತಿದ್ದರೆ, ಹೆಣ್ಣು ಮಕ್ಕಳು ಎರಡೆರಡು ಸೀರೆಗಳಲ್ಲಿಯೇ ತೃಪ್ತರಾಗಬೇಕಾಗಿತ್ತು! ಮುರಿಗೆಮ್ಮನವರ ಆತ್ಮಗೌರವ ಹಾಗೂ ಸ್ವತಂತ್ರ ಮನೋಭಾವಗಳು ಎಂತಹವೆಂದರೆ ಈ ಕುಟುಂಬಕ್ಕೆ ಸಹಾಯ ಮಾಡಲು ತುದಿಗಾಲಿನಲ್ಲಿ ನಿಂತಿದ್ದ ಕಕ್ಷಿಗಾರರಿಂದಾಗಲೀ ಇತರರಿಂದಾಗಲೀ ನೆರವು ಪಡೆಯಲು ಅವರು ಒಪ್ಪಲಿಲ್ಲ. ಇದು ಮುರಿಗೆಮ್ಮನವರ ಗುಣ ಮಾತ್ರವಾಗಿರದೆ ಇಡೀ ಕುಟುಂಬ ಬದುಕಿದ ಚೌಕಟ್ಟಾಗಿತ್ತು.

'ಭಾರತ ಬಿಟ್ಟು ತೊಲಗಿ' ಚಳವಳಿಯಲ್ಲಿ ಭಾರತಾದ್ಯಂತ ಸಾವಿರಾರು ಕಾರ್ಯಕರ್ತರು ಬ್ರಿಟಿಷ್ ಜೈಲುಗಳನ್ನು ತುಂಬಿದರು. ಅವರಲ್ಲಿ ಬಹುಮಂದಿ ದರಿದ್ರ ವಾತಾವರಣದಲ್ಲಿ ಜೈಲುವಾಸ ಅನುಭವಿಸಿದರು. ನಿಜಲಿಂಗಪ್ಪನವರೇ ಒಂಬತ್ತು ತಿಂಗಳ ಕಾಲ ಕೋಲಾರ ಚಿನ್ನದ ಗಣಿ ಪ್ರದೇಶದ ಜೈಲಿನಲಿದ್ದಾಗ ಅಪರಾಧಿಗಳೊಡನೆ ವಾಸ ಮಾಡಬೇಕಾಗಿತ್ತು. ಆನಂತರ ಅವರನ್ನು ಬೆಂಗಳೂರಿನ ಜೈಲಿಗೆ ವರ್ಗಾಯಿಸಲಾಯಿತು. ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಅರ್ಥ ಮಾಡಿಕೊಳ್ಳುವ ಸ್ವಭಾವದ ನಿಜಲಿಂಗಪ್ಪನವರು ಜೈಲಿನಲ್ಲಿ ತಮ್ಮೊಡನಿದ್ದ ಅಪರಾಧಿಗಳ ಸಮಾಜೋ-ಆರ್ಥಿಕ ಹಿನ್ನೆಲೆಯನ್ನು ತಿಳಿಯಲು ಪ್ರಯತ್ನಿಸುತ್ತಿದ್ದರು. ಈ ಬಡಪಾಯಿಗಳ ಸ್ಥಿತಿ ಅರಿಯಲು ಹಾಗೂ ಅವರಿಗೆ ತಮ್ಮ ಕೈಲಾದ ರೀತಿಗಳಲ್ಲಿ ಸಹಾಯ ಮಾಡಲು ಸರ್ವ ಪ್ರಯತ್ನ ಮಾಡುತ್ತಿದ್ದರು. ಅದರಲ್ಲೂ, ಮೇಲಿನ ನ್ಯಾಯಾಲಯಗಳಿಗೆ ಅವರಿಗಾಗಿ ಅಪೀಲುಗಳನ್ನು ಸಿದ್ಧಪಡಿಸುತ್ತಿದ್ದರು. ಭಾರತ ಬಿಟ್ಟು ತೊಲಗಿ ನಿರ್ಣಯದ ನಂತರ ದೇಶದಲ್ಲಾದ ನಾಯಕರ ಬಂಧನದಿಂದ ಜನತೆಯಲ್ಲಿ ಉಂಟಾದ ಆಕ್ರೋಶಕ್ಕೆ ಸರ್ಕಾರವೇ ಕಾರಣವೆಂದು ಗಾಂಧೀಜಿ ದೂರಿದರು. ವೈಸ್‌ರಾಯ್ ಅವರೊಡನೆ ಅವರ ಸಂಧಾನ ವಿಫಲವಾದ ಬಳಿಕ, ಗಾಂಧೀಜಿಯವರು ೧೯೪೩ನೇ ಫೆಬ್ರವರಿ ೧೦ ರಂದು ತಮ್ಮ ಉಪವಾಸ ಆರಂಭಿಸಿದರು; ಅದಾದ ಆರನೇ ದಿನವೇ ಅವರ ಆರೋಗ್ಯ ತೀರ ಕ್ಷೀಣಿಸಿತು. ವೈಸ್‌ರಾಯ್ ಅವರ ಪರಿಷತ್ತಿನ ಮೂವರು ಭಾರತೀಯ ಸದಸ್ಯರು ಸಾವಿನ ಅಂಚಿನಲ್ಲಿದ್ದ

ತಮ್ಮ ನಾಯಕರನ್ನು ನೋಡಿಕೊಳ್ಳುತ್ತಿದ್ದ ಬಗೆಯನ್ನು ಪ್ರತಿಭಟಿಸಿ ರಾಜೀನಾಮೆ ಸಲ್ಲಿಸಿದರು. ಆರೋಗ್ಯದ ಕಾರಣದಿಂದ ಈ ವೃದ್ಧರನ್ನು ಬಿಡುಗಡೆ ಮಾಡಬೇಕಾದ ಬಗ್ಗೆ ಜಗತ್ತಿನ ಎಲ್ಲೆಡೆಯ ನಯಕರೂ ಸರ್ಕಾರವನ್ನು ಒತ್ತಾಯಿಸಿದರು. ಈ ಬೇಡಿಕೆಗಳನ್ನು ಸರ್ಕಾರ ಒಪ್ಪದಿದ್ದುದು ಮಾತ್ರವೇ ಅಲ್ಲ, ತನ್ನ ದಮನ ನೀತಿಯನ್ನು ಮತ್ತಷ್ಟು ತೀವ್ರಗೊಳಿಸಿತು. ಇಷ್ಟಾದರೂ, ಗಾಂಧೀಜಿ ತಮ್ಮ ಮೂವತ್ತೊಂದು ದಿನಗಳ ಉಪವಾಸ ವನ್ನು ಯಶಸ್ವಿಯಾಗಿ ಮುಗಿಸಿದಾಗ ಇಡೀ ಪ್ರಪಂಚ ಸಮಾಧಾನದ ನಿಟ್ಟುಸಿರುಬಿಟ್ಟಿತು. ಏತನ್ಮಧ್ಯೆ, ಮಹಾದೇವ ದೇಸಾಯಿ ಮತ್ತು ಕಸ್ತೂರ ಬಾ ಅವರ ನಿಧನಾನಂತರ ಗಾಂಧೀಜಿಯವರ ಮೇಲೆ ತೀವ್ರ ಸ್ವರೂಪದ ಮಲೇರಿಯ ದಾಳಿ ಮಾಡಿತು; ಇದರಿಂದ ಅವರು ನಿಶ್ಶಕ್ತರಾದರು. ಪಕ್ಷಭೇದವಿಲ್ಲದೆ ಭಾರತೀಯ ನಾಯಕರೆಲ್ಲ ಮಹಾತ್ಮರ ಬಿಡುಗಡೆಗೆ ಒತ್ತಾಯಿಸಿದರು; ಹೀಗಾಗಿ ಸರ್ಕಾರ ಅವರನ್ನು ಬಂಧಮುಕ್ತರನ್ನಾಗಿಸಿತು. ವಿಶ್ರಾಂತಿ ಪಡೆಯಲು ಗಾಂಧೀಜಿ ಮುಂಬಯಿಯ ಜುಹುಗೆ ತಮ್ಮ ವಾಸ್ತವ್ಯ ಬದಲಾ ಯಿಸಿದರು. ಸರ್ಕಾರದ ಮಟ್ಟದಲ್ಲಿ, ಲಾರ್ಡ್ ಲಿನ್‌ಲಿಥ್‌ಗೋ ಬದಲು ಲಾರ್ಡ್ ವೇವೆಲ್ ಅವರು ವೈಸ್‌ರಾಯ್ ಆಗಿ ನೇಮಕಗೊಂಡರು. ಎಲ್ಲ ಕಾಂಗ್ರೆಸ್ ನಾಯಕರನ್ನು ಬಿಡುಗಡೆ ಮಾಡುವಂತೆಯೂ ಕೇಂದ್ರದಲ್ಲಿ ತಕ್ಷಣವೇ ರಾಷ್ಟ್ರೀಯ ಸರ್ಕಾರ ರಚನೆಗೆ ಕ್ರಮ ಕೈಗೊಳ್ಳಬೇಕೆಂದೂ ಕೇಂದ್ರ ಕಾರ್ಯಕಾರಿ ಪರಿಷತ್ತು ಹೊಸ ವೈಸ್‌ರಾಯ್ ಅವರನ್ನು ಒತ್ತಾಯಿಸಿತು.

ಮೈಸೂರು ರಾಜ್ಯದಲ್ಲಿಯೇ, ಉದಾರ ಮನಸ್ಸಿನ ಮಹಮದ್ ಇಮಾಮ್ ಅವರು ಕಾನೂನು ಸಚಿವರಾದರು. ಅವರೂ ಚಿತ್ರದುರ್ಗದಿಂದಲೇ ಬಂದವರಾದ್ದರಿಂದ ಅವರಿಗೆ ನಿಜಲಿಂಗಪ್ಪನವರ ಸ್ನೇಹ ಪರಿಚಯವಿತ್ತು. ಅನಾರೋಗ್ಯದ ಕಾರಣದಿಂದ ಕೆ.ಸಿ. ರೆಡ್ಡಿ, ಕೆ. ಹನುಮಂತಯ್ಯ, ದಾಸಪ್ಪ ಮುಂತಾದ ನಾಯಕರನ್ನು ಜೈಲಿನಿಂದ ಬಿಡುಗಡೆ ಮಾಡಲಾಯಿತು. ಅಂದ ಹಾಗೆ, ಬಿಡುಗಡೆಗೊಳಿಸಿದ್ದು ಜಾಮೀನಿನ ಮೇಲೆ. ನಿಜಲಿಂಗಪ್ಪ ನವರಿಗೂ ಅಂಥದೇ ಸವಲತ್ತು ನೀಡಲು ಇಮಾಮ್ ಅವರು ಕಾತರರಾಗಿದ್ದರು, ಅವರ ಬಳಿಗೆ ಇಬ್ಬರಿಗೂ ಗೆಳೆಯರಾಗಿದ್ದವರೊಬ್ಬರನ್ನು ಕಳಿಸಿ ತಮ್ಮನ್ನೂ ಜಾಮೀನು ಮೇಲೆ ಬಿಡುಗಡೆಗೊಳಿಸಲು ಕೇಳಿಕೊಂಡು ಒಂದು ಕಾಗದವನ್ನು ಸರ್ಕಾರಕ್ಕೆ ಬರೆಯಲು ಸೂಚಿಸಿದರು. ಆದರೆ ಯಾವುದೋ ಕುಂಟು ನೆಪವೊಡ್ಡಿ ಜಾಮೀನಿನ ಮೇಲೆ ಬಿಡುಗಡೆ ಗೊಳ್ಳಲು ನಿಜಲಿಂಗಪ್ಪನವರು ಸಿದ್ಧರಿರಲಿಲ್ಲ. ೧೯೪೪ರಲ್ಲಿ, ರಾಷ್ಟ್ರೀಯ ನಾಯಕರು ಜೈಲುಗಳಲ್ಲಿ ಕೊಳೆಯುತ್ತಿದ್ದರೂ, ಮೈಸೂರು ಸರ್ಕಾರವು ಎಲ್ಲ ರಾಜಕೀಯ ಖೈದಿ ಗಳನ್ನೂ ಷರತ್ತಿಲ್ಲದೆ ಬಿಡುಗಡೆ ಮಾಡಿತು. ನಿಜಲಿಂಗಪ್ಪನವರು ಮೊದಲಿನಿಂದಲೂ ಮೈಸೂರು ಕಾಂಗ್ರೆಸ್‌ನ ಜೊತೆ ಸಂಪರ್ಕವಿದ್ದವರು, ಈಗ ಅದರ ಕಾರ್ಯಕಾರಿ

ಸಮಿತಿಗೆ ಸೇರಿ ತಮ್ಮ ಸೇವೆ ಸಲ್ಲಿಸಲು ಮುಂದಾದರು. ಅದರ ಪ್ರಧಾನ ಕಾರ್ಯದರ್ಶಿಗಳಾಗಿ ಅವರು ರಾಜ್ಯವನ್ನೆಲ್ಲ ಸುತ್ತಿದರು, ಜನಸಾಮಾನ್ಯರೊಂದಿಗೆ ಸಂಪರ್ಕ ಸಾಧಿಸಿಕೊಂಡರು, ಹಾಗೂ ಅವರಲ್ಲಿ ಕಾಂಗ್ರೆಸ್ ಮತ್ತು ಗಾಂಧೀಜಿಯವರ ಆದರ್ಶಗಳನ್ನು ಪ್ರಚಾರ ಮಾಡಿದರು. ಅವರು ಕಾಂಗ್ರೆಸ್‌ನ ಕೆಲಸದಲ್ಲಿ ಎಷ್ಟು ಗಾಢವಾಗಿ ತೊಡಗಿಸಿಕೊಂಡಿದ್ದರೆಂದರೆ, ವಕೀಲಿ ವೃತ್ತಿಗೆ ಮರಳಲು ತಮ್ಮ ಹಳೆಯ ಕಕ್ಷಿದಾರರು ಮಾಡಿಕೊಂಡ ಮನವಿಯನ್ನು ಕಿವುಡುಗೇಳಿದರು! ಅವರ ಮುಂದಿದ್ದುದು ಏಕೈಕವೂ ಸರ್ವೋಚ್ಚವೂ ಆದ ಗುರಿ: ದೇಶದ ರಾಜಕೀಯ ಸ್ವಾತಂತ್ರ್ಯ. ಜೈಲಿನಿಂದ ಅವರು ಬಿಡುಗಡೆಗೊಂಡ ತಕ್ಷಣವೇ ಅವರನ್ನು ಮೈಸೂರು ಕಾಂಗ್ರೆಸ್‌ನ ಅಧ್ಯಕ್ಷಗಿರಿ ಕರೆಯಿತು. ಇವತ್ತಾದರೆ, ಅಂತಹ ಸ್ಥಾನವು ಒಂದು ಅಧಿಕಾರ ಕೇಂದ್ರವೂ ಅಂತಸ್ತಿನ ಸಂಕೇತವೂ ಪ್ರಭಾವ-ಹಣಗಳ ಆಕರವೂ ಆಗುತ್ತಿತ್ತು. ಆದರೆ ಆ ಕಾಲದಲ್ಲಿ ಅದು ತ್ಯಾಗ, ಬಡತನ ಮತ್ತು ದೈಹಿಕ ಶ್ರಮಗಳನ್ನು ಬೇಡುವಂತಹದಾಗಿತ್ತು. ಕಾಂಗ್ರೆಸ್ ಕಚೇರಿಯ ಹಣಕಾಸು ಸ್ಥಿತಿ ಎಷ್ಟು ಹೀನವಾಗಿತ್ತೆಂದರೆ, ಎಷ್ಟೋ ವೇಳೆ ಕಟ್ಟಡದ ಬಾಡಿಗೆ ಕೊಡುವುದೂ, ಕಚೇರಿ ನೌಕರರಿಗೆ ಸಂಬಳ ಕೊಡುವುದೂ, ಪ್ರಯಾಣ ವೆಚ್ಚವನ್ನು ಭರಿಸುವುದೂ ಕಷ್ಟವಾಗುತ್ತಿತ್ತು! ನಿಜಲಿಂಗಪ್ಪನವರು ಸಾಮಾನ್ಯವಾಗಿ ಬೆಂಗಳೂರಿನಲ್ಲಿ ರೈಲಿನಿಂದ ಇಳಿದು, ಅರಳೇಪೇಟೆಯಲ್ಲಿದ್ದ ಕಾಂಗ್ರೆಸ್ ಕಚೇರಿಗೆ ತಮ್ಮ ಸಾಮಾನು ಹೊತ್ತುಕೊಂಡು ನಡೆದೇ ಹೋಗುತ್ತಿದ್ದರು! ಅಲ್ಲಿ ತಮ್ಮ ಗಂಟನ್ನು ಹರವಿ ತಮ್ಮ ಪೀಠವನ್ನಾಗಿ ಮಾಡಿಕೊಳ್ಳುತ್ತಿದ್ದರು! ರಾತ್ರಿಯ ಹೊತ್ತು ಅದೇ ಅವರ ಪಲ್ಲಂಗ! ಕಚೇರಿಯಲ್ಲಿ ಸಾಕಷ್ಟು ಹಣವಿರುವಾಗ, ಅಂಥ ಸಂದರ್ಭಗಳೇ ಕಡಿಮೆ, ಕಚೇರಿ ನೌಕಕರಿಗೆ ಊಟ ಹಾಕಲು ಒಬ್ಬ ಅಡಿಗೆಯವನನ್ನು ನೇಮಿಸಿಕೊಳ್ಳುತ್ತಿತ್ತು. ಮಿಕ್ಕ ಸಮಯಗಳಲ್ಲಿ, ಅಧ್ಯಕ್ಷರು ಹತ್ತಿರದ ರೈಲ್ವೆ ನಿಲ್ದಾಣದಿಂದ ಅನ್ನದ ಪ್ಯಾಕೆಟ್ ಕೊಂಡು ಕಚೇರಿಯ ಸಹೋದ್ಯೋಗಿಗಳ ಜೊತೆ ಹಂಚಿಕೊಂಡು ಕಾಲ ಹಾಕುತ್ತಿದ್ದರು! ಎಷ್ಟೋ ರಾತ್ರಿಗಳಲ್ಲಿ ಈ ಸೌಭಾಗ್ಯವೂ ಇರುತ್ತಿರಲಿಲ್ಲ, ಆಗ ಒಂದೆರಡು ಬಾಳೆಹಣ್ಣು ತಿಂದು ಹೊಟ್ಟೆ ತುಂಬಿತೆಂದು ತಿಳಿಯಬೇಕಾಗಿತ್ತು! ತಾವು ಸಂಗ್ರಹಿಸಿದ ಕಾಂಗ್ರೆಸ್ ನಿಧಿಯನ್ನವರು ಎಚ್ಚರದಿಂದ ವೆಚ್ಚ ಮಾಡಿ, ಕಚೇರಿ ನಡೆಸಲು ಹಾಗೂ ನೌಕರರಿಗೆ ಸಂಬಳ ನೀಡಲು ಸರಿದೂಗಿಸುತ್ತಿದ್ದರು. ತಮ್ಮ ಬಟ್ಟೆಗಳನ್ನು ತಾವೇ ಒಗೆದುಕೊಳ್ಳುತ್ತಿದ್ದರು, ಎಷ್ಟೋ ವೇಳೆ ಅಡಿಗೆ ಮಾಡಲೂ ಸಹಾಯ ಮಾಡುತ್ತಿದ್ದರು. ಕೊನೆಗೆ, ನೆಲ ಒರೆಸುವುದಕ್ಕೂ ಅವರ ಸಹಾಯಹಸ್ತ ಸಿದ್ಧವಿರುತ್ತಿತ್ತು! ಆದರೆ ಈ ಕಷ್ಟಗಳಾವುವೂ ಅವರ ಮಾನಸಿಕ ತಹಬಂದಿಯನ್ನು ಕದಡುತ್ತಿರಲಿಲ್ಲ, ಅವರ ಮುಖದ ಮೇಲಿನ ಮಂದಹಾಸ ಎಂದೂ ಮರೆಯಾಗುತ್ತಿರಲಿಲ್ಲ! ವಾಸ್ತವವಾಗಿ, ಅವರ ಮಾತುಕತೆಯಲ್ಲಿ ಮುಗುಳ್ನಗೆಯು ಹಿನ್ನೆಲೆಯಲ್ಲಿದ್ದು ಅದೇ ಅವರ ಪ್ರಮುಖ ಹೆಗ್ಗುರುತಾಯಿತು! ಅಧ್ಯಕ್ಷಗಿರಿ ಎಂದರೆ ಮನೆಮಂದಿಯಿಂದ ಮತ್ತಷ್ಟು ದೂರ ಎಂದೇ

ಅರ್ಥ; ಮನೆಗಾಗಿ ದುಡಿಯುವ ಉತ್ಸಾಹ ದೇಶದ ಸ್ವಾತಂತ್ರ್ಯದ ಹಂಬಲದಲ್ಲಿ ಕರಗಿ ಹೋಗುತಿತ್ತು ಎಂದೇ ಅರ್ಥ. ಅವರೊಬ್ಬ ದಣಿವರಿಯದ ಕಾರ್ಯಕರ್ತರು, ಪಕ್ಷದ ಕೆಲಸಕ್ಕಾಗಿ ಆಗಾಗ್ಗೆ ಪ್ರವಾಸ ಕೈಗೊಳ್ಳಬೇಕಾಗುತ್ತಿತ್ತು. ಇದರಿಂದಾಗಿ ಅವರು ತಮ್ಮ ಹಾಗೂ ಕಾಂಗ್ರೆಸ್ ಚಳವಳಿಗಳ ಕಡೆ ಜನರ ಒಲವನ್ನು ಸಂಪಾದಿಸಲು ಸಾಧ್ಯವಾಗುತ್ತಿತ್ತು. ಅವರ ಉದಾರ ಮತ್ತು ಒಳ್ಳೆಯತನಗಳಿಂದಾಗಿ ಅವರು ರಾಜಕೀಯ ಕ್ಷೇತ್ರದಲ್ಲಿ ಅಜಾತಶತ್ರುಗಳಾಗಿದ್ದರು.

ಮೈಸೂರು ಕಾಂಗ್ರೆಸ್‌ನ ಅಧ್ಯಕ್ಷ ಪದವಿಯನ್ನು ತೊರೆದ ಕ್ಷಣವೇ ಅವರು ಅದಕ್ಕಿಂತ ಹೆಚ್ಚು ದುಸ್ತರವಾದ ಜವಾಬ್ದಾರಿಯನ್ನು ಹೊರಬೇಕಾಯಿತು, ಅದೆಂದರೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಂದರೆ ಕೆಪಿಸಿಸಿಯ ಅಧ್ಯಕ್ಷತೆ. ಅವರ ಹಿನ್ನೆಲೆಯ ಕಾರಣದಿಂದ ನಿಜಲಿಂಗಪ್ಪ ಛಿದ್ರವಾಗಿದ್ದ ಕರ್ನಾಟಕದ, ವಿಶೇಷವಾಗಿ ಆಗಿನ ಮುಂಬಯಿ ಪ್ರಾಂತವೆಂಬ ಬ್ರಿಟಿಷ್ ಭಾರತದ ಭಾಗವಾಗಿದ್ದ ಉತ್ತರ ಕರ್ನಾಟಕ ಹಾಗೂ ಹಳೆಯ ಮೈಸೂರು ಪ್ರಾಂತಗಳ, ಏಕೀಕರಣದ ಸಂಕೇತವೆನಿಸಿದರು. ಅವರು ಹುಟ್ಟಿದ್ದು ಕರ್ನಾಟಕದ ಉತ್ತರ ಭಾಗದಲ್ಲಾದರೂ, ಅವರ ವಿದ್ಯಾಭ್ಯಾಸ ನಡೆದದ್ದು ಹಳೆಯ ಮೈಸೂರು ಭಾಗದಲ್ಲಾಯಿತು. ಅವರು ಈ ಹುದ್ದೆಗೆ ಚುನಾಯಿತರಾದದ್ದು ದೇಶದ ಇತಿಹಾಸವು ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿದ್ದಾಗ, ಸ್ವಾತಂತ್ರ್ಯವನ್ನು ಪಡೆಯುವುದು ವಾಸ್ತವವಾಗುವ ಸನ್ನಿವೇಶದಲ್ಲಿ. ಆಗ ಬ್ರಿಟಿಷರು ಒಂದು ಕಾಲನ್ನು ಹೊರಗೆ ಇರಿಸಿದ್ದರು, ರಾಷ್ಟ್ರೀಯ ಸರ್ಕಾರವು ಆಡಳಿತದ ಚುಕ್ಕಾಣಿಯನ್ನು ಹಿಡಿಯಲು ಸಿದ್ಧವಾಗಿತ್ತು. ಎಲ್ಲಕ್ಕೂ ಮಿಗಿಲಾಗಿ, ಆಗ ದೇಶಕ್ಕೆ ಹೊಸ ಬುನಾದಿಯನ್ನು ಹಾಕುವ ಕಾಲ, ಸಂವಿಧಾನ ಸಭೆ ರೂಪುಗೊಳ್ಳುತ್ತಿದ್ದ ಸನ್ನಿವೇಶ. ಇತಿಹಾಸದ ಈ ಸಂದಿಗ್ಧ ಸನ್ನಿವೇಶದಲ್ಲಿ, ಕೆಪಿಸಿಸಿಯ ಅಧ್ಯಕ್ಷರಾಗಿದ್ದ ನಿಜಲಿಂಗಪ್ಪನವರು ಸಂವಿಧಾನ ಸಭೆಗೂ ಚುನಾಯಿತರಾದರು. ಈ ಹುದ್ದೆಗಳ ನಿರ್ವಹಣೆಯ ಕಾರಣದಿಂದಾಗಿ ಅವರಿಗೆ ಆಧುನಿಕ ಕರ್ನಾಟಕದ ಅತ್ಯಂತ ಪ್ರಮುಖ ಚಳವಳಿಯನ್ನು ಪ್ರೇರಿಸುವ ಸದವಕಾಶವೊದಗಿತು, ಅದೆಂದರೆ ವಿವಿಧ ಭಾಗಗಳಲ್ಲಿ ಹಂಚಿಹೋಗಿದ್ದ ಕನ್ನಡ ಪ್ರದೇಶಗಳ ಏಕೀಕರಣವಾಗಿ ಭಾರತಾಂತರ್ಗತ ವಾದ ರಾಜ್ಯದ ನಿರ್ಮಾಣ. ಇದು ಅವರ ಜೀವನದುಸಿರಾಯಿತು, ಕರ್ನಾಟಕ ಏಕೀಕರಣ ವಾಗುವವರೆಗೂ ಅವರೆಲ್ಲ ಸಾಮರ್ಥ್ಯವನ್ನೂ ಕಬಳಿಸಿತು. ಮೈಸೂರು ರಾಜ್ಯ ಎಂಬ ಹಣೆಪಟ್ಟಿ ಹೊತ್ತ ಏಕೀಕೃತ ಕನ್ನಡ ನಾಡು ೧೯೫೬ನೇ ನವೆಂಬರ್ ಒಂದರಂದು ಸಾಕಾರಗೊಂಡಿತು. ಆದರೆ ಅದು ಈ ಅಧ್ಯಾಯದ ಒಂದು ಭಾಗವಾಗಿ ನಿರೂಪಿಸುವು ದಕ್ಕೂ ಹೆಚ್ಚಿನ ಮಹತ್ವದ್ದಾದ್ದರಿಂದ ಮುಂದಿನ ಅಧ್ಯಾಯವನ್ನು ಅದಕ್ಕೆಂದೇ ಮೀಸಲಿಡ ಲಾಗುವುದು.

ಈ ಅಧ್ಯಾಯದಲ್ಲಿ ಗಮನಿಸಬೇಕಾದದ್ದೆಂದರೆ, ಕರ್ನಾಟಕ ಏಕೀಕರಣದ ಬಗ್ಗೆ ಅವರಿಗಿದ್ದ ಗಾಢ ಬದ್ಧತೆಯು ಸ್ವಾತಂತ್ರ್ಯಾನಂತರದ ಕಾಲದಲ್ಲಿ ಕಾಂಗ್ರೆಸ್ ನಾಯಕರು ಅವರ ಬಗ್ಗೆ ಅವಜ್ಞೆ ತಾಳಲು ಸಾಧ್ಯವಾಗದಷ್ಟು ಮಟ್ಟಿಗೆ ಅವರು ರಾಜಕಾರಣದಲ್ಲಿ ಗಣ್ಯಸ್ಥಾನವನ್ನು ಪಡೆದಿದ್ದರೆಂಬುದನ್ನು. ಹೀಗಾಗಿ, ಅವರನ್ನು ಅಖಿಲ ಭಾರತೀಯ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಗೆ ನಾಮಕರಣ ಮಾಡಲಾಯಿತು. ಇದಕ್ಕೆ ಕಾರಣ ಕಾಂಗ್ರೆಸ್ ಅಧ್ಯಕ್ಷರಾದ ಪಟ್ಟಾಭಿ ಸೀತಾರಾಮಯ್ಯನವರ ಮಧ್ಯಪ್ರವೇಶ, ಅವರೂ ನಿಜಲಿಂಗಪ್ಪನವರಂತೆಯೇ ಭಾಷಾವಾರು ಪ್ರಾಂತಗಳ ಪರವಾಗಿದ್ದವರು. ತಾವೊಬ್ಬ ತೀವ್ರ ಅಭಿವೃದ್ಧಿ ಕಾಣ್ಕೆಯ ನಾಯಕರೆಂಬುದನ್ನು ನಿಜಲಿಂಗಪ್ಪನವರು ತೋರಿಸಿಕೊಟ್ಟರು. ಉದಾಹರಣೆಗೆ, ೧೯೫೪ಳನೇ ಏಪ್ರಿಲ್ ೬ ರಂದು ಶಿವಮೊಗ್ಗದಲ್ಲಿ ಆಗಿನ ಕೇಂದ್ರ ರೈಲ್ವೆ ಸಚಿವರಾಗಿದ್ದ ರಫಿ ಅಹಮದ್ ಕಿದ್ವಾಯಿ ಅವರಿಂದ ಉದ್ಘಾಟನೆಗೊಂಡ ಮೊದಲ ಮಲೆನಾಡು ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದ ಅವರು, ಅಪಾರ ಪ್ರಾಕೃತಿಕ ಸಂಪತ್ತನ್ನು ಪಡೆದ ಈ ಭಾಗದ ಅಭಿವೃದ್ಧಿಯನ್ನು ಕುರಿತಂತೆ ಒಂದು ಅಮೂಲ್ಯ ಯೋಜನೆಯನ್ನು ಮುಂದಿಟ್ಟರು.

ರಾಷ್ಟ್ರೀಯ ಚಳವಳಿಯಲ್ಲಿ ಅವರು ವಹಿಸಿದ ಪಾತ್ರವನ್ನು ಕುರಿತಾದ ಕಥನವನ್ನು ಈ ಹಂತದಲ್ಲಿ ಮುಗಿಸಬೇಕಾಗಿದೆ, ಏಕೆಂದರೆ ಒಂದರ್ಥದಲ್ಲಿ ಅದು ಸಣ್ಣ ಕತೆ. ಯಾವ ಅರ್ಥದಲ್ಲಿ ಎಂದರೆ ನಿರೂಪಣೆಯ ಅನುಕೂಲಕ್ಕಾಗಿ ಮತ್ತು ವಿಶ್ಲೇಷಣೆಯ ಸೌಲಭ್ಯಕ್ಕಾಗಿ ನಾವು ಪ್ರಾದೇಶಿಕ ರಾಜಕೀಯ ಚಳವಳಿ ಹಾಗೂ ರಾಷ್ಟ್ರೀಯ ಚಳವಳಿಗಳನ್ನು ಬೇರ್ಪಡಿಸಬಹುದು ಎಂಬುದರಿಂದ. ದೀರ್ಘಾವಧಿಯಲ್ಲಿ ಮತ್ತು ಮೂಲಾರ್ಥದಲ್ಲಿ ಅವುಗಳನ್ನು ಭಿನ್ನ ಎಂದು ಪರಿಗಣಿಸಲು ಸಾಧ್ಯವಾಗುವುದಿಲ್ಲ, ಏಕೆಂದರೆ ಅಂದಿನ ನಿಜಲಿಂಗಪ್ಪನವರಂತಹ ರಾಜ್ಯ ಮಟ್ಟದಲ್ಲಿನ ನಾಯಕರಿಗೆ ಅವೆರಡೂ ಭಿನ್ನ ಗುರಿಗಳೆಂಬ ಭಾವನೆಯಿರಲಿಲ್ಲ. ಅವರ ಆದರ್ಶ ಸ್ವತಂತ್ರ ಭಾರತದಲ್ಲಿ ಏಕೀಕೃತ ಕರ್ನಾಟಕ ಸ್ಥಾಪನೆಗೊಳ್ಳುವುದು. ಹಾಗೆ ನೋಡಿದರೆ, ನಿಜಲಿಂಗಪ್ಪನವರು ಅಂಗೀಕರಿಸಿದ್ದ ಏಕೀಕರಣವು ಪ್ರತಿಪಾದಿಸಿದ್ದೆಂದರೆ, ವಿಭಿನ್ನ ಭಾಷಾ ವಲಯಗಳನ್ನು ಹೊಂದಿರುವ ಭಾರತವು ಒಂದು ರಾಷ್ಟ್ರವಾಗಿ ಒಕ್ಕೂಟ ವ್ಯವಸ್ಥೆಯನ್ನು ಹೊಂದಿರಲು ಮಾತ್ರ ಸಾಧ್ಯವೆಂಬುದನ್ನು, ಅದರಲ್ಲಿ ಈ ವಲಯಗಳು ತನ್ನ ವಿಶಿಷ್ಟ ಸ್ಥಾನವನ್ನು ಹೊಂದಬೇಕೆಂಬುದನ್ನು.

*

೬

ಏಕೀಕರಣಕ್ಕಾಗಿ ಹೋರಾಟ

ಬಹಳ ಮಹತ್ವದ ಪ್ರಾದೇಶಿಕ ರಾಜಕಾರಣಿಯಾಗಿ ನಿಜಲಿಂಗಪ್ಪನವರು ತಮ್ಮ ನಾಡಿನ ಏಕೀಕರಣದ ಬಗ್ಗೆ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರೆಂಬುದರ ಬಗ್ಗೆ ಸಂಶಯವೇ ಇಲ್ಲ. ಇದನ್ನು ಒಪ್ಪಿಕೊಂಡೂ ಪ್ರಾದೇಶಿಕ ಆಲೋಚನೆಯು ರಾಷ್ಟ್ರೀಯ ಭಾವನೆಗೆ ವಿರುದ್ಧವಾದದ್ದಲ್ಲ, ಅಷ್ಟೇ ಅಲ್ಲ; ಭಿನ್ನ ಭಾಷೆಗಳು ಹಾಗೂ ಸಂಸ್ಕೃತಿಗಳನ್ನು ಹೊಂದಿರುವ ಮತ್ತು ತಮ್ಮದೇ ಆದ ನಿರ್ದಿಷ್ಟ ಪರಂಪರೆಯನ್ನುಳ್ಳ ಭೂಘಟಕಗಳನ್ನುಳ್ಳ ಭಾರತದ ಭೂಖಂಡದಲ್ಲಿ, ಹಾಗಿರುವ ಮೂಲಕ ಮಾತ್ರವೇ ಆಲೋಚನೆ ಮತ್ತು ನಡತೆಗಳಲ್ಲಿ ನಿಜವಾದ ರಾಷ್ಟ್ರೀಯವಾದಿಯಾಗಬಹುದು ಎಂಬ ಮಾತನ್ನು ಸೇರಿಸಬೇಕು. ತಮ್ಮ ಹಿನ್ನೆಲೆಯ ಕಾರಣದಿಂದ ಅವರು ರಾಷ್ಟ್ರಮಟ್ಟಕ್ಕೇರುವ ಎಲ್ಲ ಅರ್ಹತೆಗಳನ್ನೂ ಧಾರಾಳವಾಗಿ ಪಡೆದಿದ್ದರು; ಆದರೂ ಅವರು ರಾಜ್ಯ ಮಟ್ಟದಲ್ಲಿಯೇ ಪ್ರಮುಖ ಐತಿಹಾಸಿಕ ಪಾತ್ರ ವಹಿಸಲು ನಿರ್ಧರಿಸಿದರು. ಅವರ ತೀವ್ರ ಪ್ರಾದೇಶಿಕ ಭಾವನೆ ಮತ್ತು ಬದ್ಧತೆಗಳ ಕಾರಣದಿಂದಾಗಿ ರಾಷ್ಟ್ರೀಯ ನಾಯಕತ್ವವೂ ಅಂತಹ ಗಾಢ ಪ್ರಾದೇಶಿಕ ಭಾವನೆಯುಳ್ಳವರನ್ನು ತಮ್ಮ ನಡುವೆ ಹೊಂದಲು ಇಷ್ಟಪಡಲಿಲ್ಲ. ವಾಸ್ತವದಲ್ಲಿ ಗಂಭೀರ ರಾಜಕಾರಣವು ಪ್ರಾದೇಶಿಕ ನೆಲೆಯಲ್ಲಿ ಮಾತ್ರವೇ ಇರಬಹುದಾದ ಭಾರತದಂತಹ ದೇಶದಲ್ಲಿ, ನಿಜವಾದ ಯಾವ ಪ್ರಾದೇಶಿಕ ನಾಯಕನೂ ತನ್ನ ರಾಜಕೀಯ ಅಧಿಕಾರ

ಮತ್ತು ಸ್ಥಾನಮಾನಗಳ ಭ್ರಮಾತ್ಮಕವಾದ ರಾಷ್ಟ್ರ ರಾಜಕಾರಣದ ಆಕರ್ಷಣೆಗೆ ಒಳಗಾಗುವುದಿಲ್ಲ. ಬಿ.ಸಿ. ರಾಯ್ ಅಥವಾ ಪ್ರತಾಪ್ ಸಿಂಗ್ ಕೈರಾನ್ ಅವರಂತಹವರು ನವದೆಹಲಿಗೆ ಹೋಗುವುದಕ್ಕೆ ಇಷ್ಟಪಡುವವರಲ್ಲ! ವಾಸ್ತವದಲ್ಲಿ, ೧೯೭೭ರ ಮೇ ೨೮ರಂದು ಚಿತ್ರದುರ್ಗದ ಅವರ ಹಳೆಯ ಸಾಧಾರಣ ಮನೆಯಲ್ಲಿ ಅವರೊಡನೆ ಪ್ರಸ್ತುತ ಲೇಖಕನು ನಡೆಸಿದ ಸಂದರ್ಶನದಲ್ಲಿ ನಿಜಲಿಂಗಪ್ಪನವರು ತಾವು ಕಾಂಗ್ರೆಸ್ ಅಧ್ಯಕ್ಷರಾಗಿ ರಾಷ್ಟ್ರ ರಾಜಕಾರಣಕ್ಕೆ ಹೋದುದಕ್ಕಾಗಿ ವಿಷಾದ ವ್ಯಕ್ತಪಡಿಸಿದರು. ಕಾಮರಾಜ ನಾಡಾರ್ ಅವರು ತಮ್ಮನ್ನು ಬೆಂಗಳೂರಿನಿಂದ ನವದೆಹಲಿಗೆ ಬಲವಂತವಾಗಿ ಹೊತ್ತುಕೊಂಡು ಹೋದರು ಎಂದು ವಿವರಿಸಿದರು! ಹೀಗಾಗಿ, ರಾಷ್ಟ್ರ ರಾಜಕಾರಣಕ್ಕೆ ನಿಜಲಿಂಗಪ್ಪನವರು ನೀಡಿದ ಮಹತ್ವದ ಕಾಣಿಕೆ ಎಂದರೆ ಅವರು ಒಬ್ಬ ಪ್ರಾದೇಶಿಕ ನಾಯಕರಾಗಿದ್ದುದು. ರಾಜ್ಯ ರಾಜಕಾರಣದಲ್ಲಿ ಅವರು ಎರಡು ಪಾತ್ರಗಳನ್ನು ವಹಿಸಿದರೆಂಬುದನ್ನು ಗಮನಿಸಬೇಕು: ಮೊದಲನೆಯದು, ಮೈಸೂರು ಕಾಂಗ್ರೆಸ್‌ನ ನಾಯಕರಾದದ್ದು, ಆನಂತರದ್ದು, ಏಕೀಕರಣಗೊಂಡ ಕನ್ನಡ ನಾಡಿನ ಕಾಂಗ್ರೆಸ್ ನಾಯಕರಾಗಿದ್ದುದು. ಮೊದಲನೆಯ ನೆಲೆಯಲ್ಲಿ, ರಾಷ್ಟ್ರೀಯ ಚಳವಳಿಯನ್ನು ರಾಜ್ಯದಲ್ಲಿ ಭದ್ರಗೊಳಿಸಲು ಅವರಿತ್ತ ಕೊಡುಗೆಯ ಜೊತೆಯಲ್ಲಿ ರಾಜ್ಯದಲ್ಲಿ ಪ್ರಜಾಸತ್ತಾತ್ಮಕ ಸರ್ಕಾರವು ರಚನೆಯಾದಾಗಲೂ ಅವರು ಮಹತ್ವದ ಪಾತ್ರವನ್ನು ನಿರ್ವಹಿಸಿದರು ಎಂಬುದನ್ನು ಮರೆಯಬಾರದು. ೧೯೪೭ರಲ್ಲಿ ಮೈಸೂರನ್ನು ಭಾರತದ ಒಕ್ಕೂಟದಲ್ಲಿ ಉಳಿಯುವಂತೆ ಮಾಡುವುದೂ ಅವರ ಹೋರಾಟದ ಭಾಗವಾಗಿತ್ತು, ಏಕೆಂದರೆ, ಕೊಂಚ ಕಾಲ ಮೈಸೂರು ಮಹಾರಾಜರು ಭಾರತ ಒಕ್ಕೂಟದಿಂದ ದೂರವಿರುವ ಅಪಾಯಕಾರಿ ನಿಲವನ್ನು ಹೊಂದಿದ್ದರು. ಅವರ ಎರಡನೆಯ ಪಾತ್ರದಲ್ಲಿನ ಮೊದಲ ಹಂತವೆಂದರೆ ಭಾರತ ಒಕ್ಕೂಟದಲ್ಲಿಯೇ ಕನ್ನಡ ನಾಡಿನ ಏಕೀಕರಣವನ್ನು ಸಾಧಿಸುವಲ್ಲಿ ಯಶಸ್ವಿಯಾದುದು ಹಾಗೂ ಅದರ ಮೊದಲ ಮುಖ್ಯ ಮಂತ್ರಿಯಾಗಿ ಹೊಸ ರಾಜ್ಯದ ಸರ್ವಾಂಗೀಣ ಏಳಿಗೆಗಾಗಿ ಶ್ರಮಿಸಿದುದು. ಇವೆರಡರಲ್ಲಿ ಯಾವುದು ಹೆಚ್ಚು ಮುಖ್ಯವೆಂದು ಪರಿಗಣಿಸಬೇಕೆಂಬುದು ಮಹತ್ವದ್ದಾದರೂ, ನೆರೆಹೊರೆಯ ಮಹಾರಾಷ್ಟ್ರ, ಆಂಧ್ರ ಮತ್ತು ತಮಿಳು ನಾಡುಗಳ ಗಡಿಗಳಲ್ಲಿನ ವಿವಾದಿತ ಪ್ರದೇಶಗಳನ್ನು ಹೊರತುಪಡಿಸಿದಂತೆ ಕನ್ನಡ ಮಾತನಾಡುವವರ ಭೂಭಾಗಗಳನ್ನು ಒಂದುಗೂಡಿಸಿದುದೇ ಹೆಚ್ಚು ಮಹತ್ವದ ಸಾಧನೆಯೆಂಬುದರಲ್ಲಿ ಅನುಮಾನವಿಲ್ಲ. ಮುಖ್ಯಮಂತ್ರಿಯಾಗಿ ತಮ್ಮ ಸಾಧನೆಯ ಬಗ್ಗೆ ಅವರಿಗೆ ಹೆಮ್ಮೆಯಿದ್ದರೂ ಕರ್ನಾಟಕ ಏಕೀಕರಣದ ಅಡಿಗಲ್ಲನ್ನು ಹಾಕಿದುದೇ ತಮ್ಮ ಭಾವನೆಯಲ್ಲಿ ಹೆಚ್ಚು ಮಹತ್ವದ್ದೆಂಬ ಸೂಚನೆಯನ್ನು ಹಿಂದೆ ಹೇಳಿದ ಸಂದರ್ಶನಲ್ಲಿ ಅವರೇ ವ್ಯಕ್ತಪಡಿಸಿದರು.

ಕನ್ನಡ ನಾಡಿನ ಏಕೀಕರಣಕ್ಕಾಗಿ ನಡೆದ ಚಳವಳಿಯಲ್ಲಿ ನಿಜಲಿಂಗಪ್ಪನವರು ವಹಿಸಿದ ಐತಿಹಾಸಿಕ ಪಾತ್ರವನ್ನು ಬಣ್ಣಿಸುವ ಮೊದಲು, ಅದರ ಚರಿತ್ರೆಯನ್ನು ಸಂಕ್ಷಿಪ್ತವಾಗಿ ನೀಡುವುದು ಸಮಂಜಸ. ಅದಕ್ಕೆ ನಿಡಿದಾದ ಇತಿಹಾಸವಿದೆ, ಹೀಗಾಗಿ ಅದನ್ನು ದೀರ್ಘವಾಗಿ ನಿರೂಪಿಸುವುದು ಇಲ್ಲಿ ಸಾಧ್ಯವೂ ಅಲ್ಲ, ಆವಶ್ಯಕವೂ ಅಲ್ಲ. ಇಡೀ ಸನ್ನಿವೇಶವನ್ನು ಅರ್ಥಮಾಡಿಕೊಳ್ಳಲು ಬೇಕಾದಂತೆ ಅದರ ಸ್ಥೂಲ ಚಿತ್ರವನ್ನಷ್ಟೇ ಇಲ್ಲಿ ನೀಡುವ ಉದ್ದೇಶವಿದೆ. ಅದೊಂದು ಗೋಜಲು ಕತೆ, ಯಾವುದೇ ಬಗೆಯ ತಾತ್ಪರ್ಯದಿಂದಲೂ ಅದಕ್ಕೆ ನ್ಯಾಯ ಒದಗಿಸಲಾಗದು. ಪ್ರತ್ಯೇಕ ಕನ್ನಡ ನಾಡಿನ ನಿರ್ಮಾಣಕ್ಕಾಗಿ ನಡೆದ ಹೋರಾಟದ ಕೇಂದ್ರ ಮುಂಬಯಿ ಕರ್ನಾಟಕ ಭಾಗ. ಬಹು ಭಾಷಾ ಪ್ರದೇಶವಾಗಿದ್ದ ಮುಂಬಯಿ ಪ್ರಾಂತದಲ್ಲಿ ಮರಾಠೀ ಜನರ ದಬ್ಬಾಳಿಕೆ ಯಿಂದ ಕನ್ನಡಿಗರ ಹಿತರಕ್ಷಣೆಯನ್ನು ಕಡೆಗಣಿಸಲಾಗುತ್ತಿದೆ ಎಂಬ ದೂರು ಅದರ ಮೂಲ ನೆಲೆ. ಇಂತಹುದೇ ಗೊಣಗಾಟ ನಾನಾ ಭಾಷಿಕ ವಲಯಗಳಲ್ಲಿ ಬಹುಭಾಷಾ ಪ್ರದೇಶವಾಗಿದ್ದ ಮದರಾಸು ಪ್ರಾಂತದಲ್ಲಿಯೂ ಕೇಳಿಬಂದಿತ್ತು. ಆದರೆ ಹೋರಾಟದ ಮುಂಚೂಣಿಯಲ್ಲಿದ್ದುದು ಮುಂಬಯಿ ಕರ್ನಾಟಕ ಭಾಗ. ನಿಜ಼ಾಂನ ಸರ್ವಾಧಿಕಾರಿ ಆಡಳಿತದಡಿಯಲ್ಲಿ ಮುಸ್ಲಿಂ ಮೇಲ್ವರ್ಗದಿಂದ ಕನ್ನಡಿಗರು ಬವಣೆ ಅನುಭವಿಸುತ್ತಿದ್ದಾರೆ ಎಂಬ ಕೂಗು ಹೈದರಾಬಾದ್ ಕರ್ನಾಟಕದ ಭಾಗದಲ್ಲಿಯೂ ಕೇಳಿಬಂದಿತ್ತು. ರಾಜಾಡಳಿತದಲ್ಲಿದ್ದ ಮೈಸೂರಿನಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗಿರಲಿಲ್ಲ, ಹೀಗಾಗಿ ಅವರಿಗೆ ಏಕೀಕರಣಕ್ಕೆ ಪ್ರೇರಕವಾದ ವಿಷಯವಾವುದೂ ಇರಲಿಲ್ಲ. ಅಲ್ಲಿ ಕನ್ನಡತನ ಎಂಬುದು ಋಣಾತ್ಮಕ ಅಸ್ಮಿತೆಯಾಗಿರದೆ ಕನ್ನಡ ಭಾಷೆ–ಸಾಹಿತ್ಯಗಳು ಪ್ರಮುಖವಾಗಿದ್ದ ಸಾಂಸ್ಕೃತಿಕ ಪರಂಪರೆಯ ಬಗೆಗಿನ ಹೆಮ್ಮೆಯ ವಿಷಯವಾಗಿ ರೂಪುಗೊಂಡಿತ್ತು. ಈ ಕಾರಣದಿಂದ, ಏಕೀಕರಣದ ಉದ್ದೇಶದ ಬಗ್ಗೆ ಹಳೆ ಮೈಸೂರಿಗರ ನಿಲವು ಸಂದಿಗ್ಧಕರವಾಗಿತ್ತು, ಕೆಲವೆಡೆ ಅದಕ್ಕೆ ಬಹಿರಂಗ ಬೆಂಬಲ ವ್ಯಕ್ತವಾದರೆ, ಮತ್ತೆ ಕೆಲವೆಡೆ ಒಳಗೊಳಗೇ ಅದಕ್ಕೆ ವಿರೋಧವಿತ್ತು. ಮಹಾರಾಜರ ಆಡಳಿತದಲ್ಲಿ ಕೆಲವು ಪ್ರತಿಷ್ಠಿತ ವೀರಶೈವ ಹಾಗೂ ಒಕ್ಕಲಿಗ ಕುಟುಂಬಗಳು ವಿಶೇಷ ರಾಜಕೃಪೆಗೆ ಒಳಗಾಗಿದ್ದು ವೆಂಬುದನ್ನು ಗಮನಿಸಬೇಕು. ಈ ಕತೆಯ ಗೋಜಲನ್ನು ಹೆಚ್ಚು ಮಾಡಿದ್ದೆಂದರೆ, ಕಾಂಗ್ರೆಸ್ ಮುಖಂಡತ್ವದ ಸ್ವಾತಂತ್ರ್ಯ ಹೋರಾಟಕ್ಕೆ ಕೆಲವು ವಲಯಗಳಲ್ಲಿ ವಿರೋಧವೂ ಇತ್ತು, ಇದಕ್ಕೆ ಕಾರಣ ಅದು ಮೇಲುವರ್ಣದವರಿಂದ, ವಿಶೇಷವಾಗಿ ಬ್ರಾಹ್ಮಣರ ಕೈಯಲ್ಲಿತ್ತು ಎಂಬುದು. ಆದರೆ ಈ ಗುಂಪುಗಳು ಮುಂಬಯಿ ಕರ್ನಾಟಕ ಭಾಗದಲ್ಲಿ ಏಕೀಕರಣಕ್ಕೆ ಸಂಪೂರ್ಣ ಬೆಂಬಲ ನೀಡಿದ್ದವು.

ಈ ಬೇಡಿಕೆಯು ಹತ್ತೊಂಬತ್ತನೇ ಶತಮಾನದ ಕೊನೆಯ ಭಾಗದಿಂದಲೇ ಇತ್ತು ಎಂದು ಸ್ಥೂಲವಾಗಿ ಹೇಳಬಹುದು. ಮುಂದೆ ಅದಕ್ಕೊಂದು ಸಂಘಟನಾತ್ಮಕ ಸ್ವರೂಪವು ಲಭ್ಯವಾಯಿತು ಹಾಗೂ ಹೆಚ್ಚು ವಿಶಾಲವಾದ ಸೈದ್ಧಾಂತಿಕ ಬುನಾದಿ ದೊರೆಯಿತು. ಸ್ವಾತಂತ್ರ್ಯ ಹೋರಾಟ ಹಾಗೂ ಏಕೀಕರಣ ಚಳವಳಿಗಳ ಪೂರಕ ಸ್ವರೂಪವನ್ನು ಸಂಕೇತಿಸಲೆಂಬಂತೆ ೧೯೨೪ಳ ರಲ್ಲಿ ಬೆಳಗಾವಿಯಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ನಲವತ್ತನೇ ಸಮಾವೇಶ ಜರುಗಿತು. ಅದಕ್ಕೆ ಹಾಜರಾಗಿದ್ದ ನಿಜಲಿಂಗಪ್ಪನವರು ಪ್ರಾಯಶಃ ಅದರೊಡನೆ ಸಂಪರ್ಕ ಪಡೆದಿದ್ದಿರಬೇಕು, ಆದರೆ ಇದಕ್ಕೆ ಸ್ಪಷ್ಟ ಆಧಾರವೇನೂ ಇಲ್ಲ. ಏಕೀಕರಣವು ಸ್ವಂತ ಅಸ್ಮಿತೆಯನ್ನು ಗುರುತಿಸಿಕೊಳ್ಳುವ ಕನ್ನಡಿಗರ ಅಪೇಕ್ಷೆಯ ರೂಪ ವಾಗಿತ್ತು, ಆಧುನಿಕ ಪಾಶ್ಚಾತ್ಯ ಪ್ರಭಾವದಿಂದ ಉಂಟಾದ ಹೊಸ ಬೌದ್ಧಿಕ–ಸಾಂಸ್ಕೃತಿಕ ನವೋದಯದ ಪರಿಣಾಮವಾಗಿತ್ತು ಎಂಬುದು ಅನೇಕ ಚರಿತ್ರೆಕಾರರ ಹಾಗೂ ವಿದ್ವಾಂಸರ ಅಭಿಪ್ರಾಯ. ಇದು ಒಂದು ಕಾರಣವೆಂಬುದು ನಿಜವಾದರೂ, ಏಕೀಕರಣವ ಚಳವಳಿಯು ರಾಜಕೀಯ ರೂಪವನ್ನು ಪಡೆಯಲು ಕಾರಣ ಅಲ್ಪಸಂಖ್ಯಾತರಾಗಿ ಕನ್ನಡಿಗರು ಕಡೆಗಣಿಸಲ್ಪಟ್ಟಿದ್ದುದು ಎಂದು ಹೇಳಬಹುದು.

ಚಳವಳಿ ಆರಂಭಗೊಂಡದ್ದು ಬುದ್ಧಿಜೀವಿಗಳು ಹಾಗೂ ಸೈದ್ಧಾಂತಿಕರಿಂದ ಎನ್ನ ಬಹುದು, ಏಕೆಂದರೆ ಅದರಲ್ಲಿ ಪ್ರಮುಖ ಪಾತ್ರ ವಹಿಸಿದವರು ಕವಿಗಳು, ಸಾಹಿತಿಗಳು ಹಾಗೂ ಪತ್ರಕರ್ತರು. ಆನಂತರ ತಾಯ್ನುಡಿಯ ನಿರ್ಲಕ್ಷ್ಯಕ್ಕೆ ಕಾರಣ ಸಾಮ್ರಾಜ್ಯಶಾಹಿ ಆಡಳಿತ ಮತ್ತು ಅದರಿಂದಾದ ಗುಲಾಮಗಿರಿ ಎಂಬ ಭಾವನೆಯಿಂದ ಅದನ್ನು ಸ್ವಾತಂತ್ರ್ಯ ಚಳವಳಿಗೆ ಪೂರಕವಾಗಿಸುವ ಮೂಲಕ ರಾಜಕಾರಣಿಗಳು ಅದಕ್ಕೊಂದು ರಾಜಕೀಯ ಸ್ವರೂಪವಿತ್ತರು. ಹೀಗೆ, ಏಕೀಕರಣದ ದೃಢತೆಗೆ ಕಾರಣ ಇತರ ಪ್ರಬಲ ಭಾಷಿಕ ವರ್ಗ ಮಾತ್ರವಲ್ಲದೆ ಸಾಮ್ರಾಜ್ಯಶಾಹಿವಿರೋಧಿ ಧೋರಣೆ ಎನ್ನಬಹುದು. ಇವೆರಡೂ ವಿಭಿನ್ನ ಬೇಡಿಕೆಗಳೆಂದು ಪರಿಗಣಿಸಲಾಗಿತ್ತು. ಮೇಲಾಗಿ, ಅದು ಕೇವಲ ಕನ್ನಡಿಗರಿಗೆ ಮಾತ್ರ ಸೀಮಿತವಾಗಿರಲಿಲ್ಲ. ಅದೊಂದು ಭಾರತವ್ಯಾಪೀ ಆಂದೋಲನ, ಇಲ್ಲಿನ ವಿಭಿನ್ನ ಭಾಷಿಕ ಸಮುದಾಯಗಳಿಂದಾಗಿ ಉದ್ಭವಿಸಿದ ಸಹಜ ಪರಿಣಾಮ. ಬ್ರಿಟಿಷ್ ಇಂಡಿಯದ ಹಲವು ಕಡೆಗಳಲ್ಲಿ ಹಾಗೂ ರಾಜಾಡಳಿತ ಪ್ರದೇಶಗಳಲ್ಲಿ ಇಪ್ಪತ್ತು ಆಡಳಿತಗಳಡಿಯಲ್ಲಿ ಛಿದ್ರಗೊಂಡಿದ್ದ ಕನ್ನಡ ಭಾಷಿಕ ಪ್ರದೇಶಗಳನ್ನು ಒಂದುಗೂಡಿಸ ಬೇಕೆಂಬ ಬೇಡಿಕೆ ಅದು. ೧೯೨೪ಳರಲ್ಲಿ ಬೆಳಗಾವಿಯಲ್ಲಿ ನಡೆದ ಮೊದಲ ಏಕೀಕರಣ ಸಮಿತಿಯ ಸಮಾವೇಶಕ್ಕಿಂತ ಮುಂಚೆಯೇ, ೧೯೨೦ರಲ್ಲಿ ವಿ.ಪಿ. ಮಾಧವರಾವ್ ಅವರ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ನಡೆದಿದ್ದ ಕರ್ನಾಟಕ ಪ್ರಾಂತ ರಾಜಕೀಯ ಸಮ್ಮೇಳನವು ಏಕೀಕೃತ ಕರ್ನಾಟಕದ ರಚನೆಯನ್ನು ಒತ್ತಾಯಿಸಿ ಒಂದು ನಿರ್ಣಯವನ್ನು

ಕೈಗೊಂಡಿತ್ತು. ನಾಗಪುರದ ಕಾಂಗ್ರೆಸ್ ಸಮಾವೇಶದಲ್ಲಿ ಅದಕ್ಕೆ ಬೆಂಬಲ ಪಡೆಯಲು ಕಡಪ ರಾಘವೇಂದ್ರರಾವ್ ಅವರಂತಹ ಮುಖಂಡರು ತುಂಬ ಹೆಣಗಿದರು. ಆ ಸಮಾವೇಶಕ್ಕೆ ಕರ್ನಾಟಕದಿಂದ ಸುಮಾರು ೮೦೦ ಮಂದಿ ಪ್ರತಿನಿಧಿಗಳು ಹೋಗಿದ್ದು, ೧೯೨೦ ರಲ್ಲಿ ಕರ್ನಾಟಕಕ್ಕೆ ಪ್ರತ್ಯೇಕ ಕಾಂಗ್ರೆಸ್ ಸಮಿತಿಯನ್ನು ರಚಿಸುವಂತೆ ಮಾಡುವಲ್ಲಿ ಸಫಲರಾಗಿದ್ದರು. ಪ್ರತಿವರ್ಷ ಜರುಗುತ್ತಿದ್ದ ಅಖಿಲ ಕರ್ನಾಟಕ ಖಾದಿ, ಆಯುರ್ವೇದ, ಇತಿಹಾಸ, ಕೈಗಾರಿಕೆ ಮತ್ತು ವಾಣಿಜ್ಯ ಸಮ್ಮೇಳನದಲ್ಲಿ ಕನ್ನಡ ನಾಡಿನ ವಿಶಿಷ್ಟ ಅಸ್ಮಿತೆಯ ಬಗೆಗಿನ ಭಾವನೆ ಬಲಿಯುತ್ತ ಹೋಯಿತು. ಉತ್ತರ ಕರ್ನಾಟಕ ಅಥವಾ ಮುಂಬಯಿ ಕರ್ನಾಟಕ ಭಾಗದಲ್ಲಿ ಚಳವಳಿಯ ಕೇಂದ್ರ ಧಾರವಾಡ. ಮುದವೀಡು, ಕಡಪ, ಹೊನ್ನಾಪುರಮಠ ಮುಂತಾದ ನಾಯಕರಿಗೆ ಬೇಂದ್ರೆಯವರ ಚುಂಬಕ ವ್ಯಕ್ತಿತ್ವದ ಸುತ್ತ ಸಾಹಿತಿಗಳು ಕೂಡಿದ್ದ 'ಗೆಳೆಯರ ಗುಂಪು' ಬೆಂಬಲ ನೀಡಿತು, ಈ ಚಳವಳಿಯ ಸಂಘಟನಾತ್ಮಕ ಸಾಧನವಾಗಿದ್ದುದೆಂದರೆ ಆ ಬಳಿಕ ಕರ್ನಾಟಕ ಏಕೀಕರಣ ಸಂಘ ವೆನ್ನಿಸಿದ ಏಕೀಕರಣ ಸಭಾ. ಅದು ಕರ್ನಾಟಕ ಕಾಂಗ್ರೆಸ್ ಸಮಿತಿಯೊಡನೆ ನಿಕಟವಾಗಿ ಕೆಲಸ ಮಾಡಿತು. ೧೯೪೭ ರವರೆಗೆ, ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಅದು ಹನ್ನೊಂದು ವಾರ್ಷಿಕ ಸಮ್ಮೇಳನಗಳನ್ನು ನಡೆಸಿತು; ಧಾರವಾಡದಲ್ಲಿಯೇ ನಾಲ್ಕು ಬಾರಿ – ೧೯೨೮, ೧೯೩೩, ೧೯೩೮ ಮತ್ತು ೧೯೪೪ – ಸಮ್ಮೇಳನ ಸೇರಿತ್ತು. ೧೯೪೭ಕ್ಕೆ ಮುಂಚೆಯೇ ಕಾಂಗ್ರೆಸ್ ತಮ್ಮ ಒತ್ತಾಯವನ್ನು ಒಪ್ಪಿಕೊಳ್ಳುವಂತೆ ಮಾಡುವಲ್ಲಿ ಅದು ಯಶಸ್ವಿಯಾಗಿತ್ತು. ಉದಾಹರಣೆಗೆ, ೧೯೩೭ರ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ಈ ಪ್ರಸ್ತಾಪವಿತ್ತು.

ಬಹು ಬೇಗ ಈ ಚಳವಳಿಗೆ ಅಖಿಲ ಕರ್ನಾಟಕ ವ್ಯಾಪ್ತಿಯುಂಟಾಯಿತು. ೧೯೩೮ರಲ್ಲಿ ಬೆಂಗಳೂರಿನಲ್ಲಿ ಬೆನೆಗಲ್ ರಾಮರಾವ್ ಅವರು ಅಧ್ಯಕ್ಷರಾಗಿ ಹಾಗೂ ಬಿ. ಶಿವಮೂರ್ತಿ ಶಾಸ್ತ್ರಿಗಳು ಕಾರ್ಯದರ್ಶಿಯಾಗಿದ್ದ ಕರ್ನಾಟಕ ಏಕೀಕರಣ ಸಂಘ ಆರಂಭಗೊಂಡಿತು. ಈ ಕರ್ನಾಟಕ ಏಕೀಕರಣ ಸಂಘವು ಗಡಿ ಪ್ರದೇಶಗಳಾಗಿದ್ದ ಮಡಕಶಿರ, ಹೊಸೂರು, ಕೊಳ್ಳೇಗಾಲ, ಆದೋನಿ ಮುಂತಾದ ಕಡೆಗಳಲ್ಲಿ ಕನ್ನಡ ಪ್ರಾದೇಶಿಕ ಭಾವನೆಯನ್ನು ಜಾಗೃತಗೊಳಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ೧೯೪೬ರ ಹೊತ್ತಿಗೆ, ಬ್ರಿಟಿಷರು ಭಾರತವನ್ನು ಬಿಟ್ಟು ಹೋಗುವುದು ನಿಶ್ಚಿತವಾಯಿತು, ೧೯೪೬ರ ಡಿಸೆಂಬರ್‌ನಲ್ಲಿ ದೆಹಲಿಯಲ್ಲಿ ಕಾರ್ಯಾರಂಭ ಮಾಡಿದ ಸಂವಿಧಾನ ಸಭೆಯು ಇದಕ್ಕೆ ಪುಷ್ಟಿ ಕೊಟ್ಟಿತು. ಈ ಬೆಳವಣಿಗೆಯಿಂದಾಗಿ ಏಕೀಕರಣಕ್ಕೆ ತೀವ್ರತೆ ಮತ್ತು ತುರ್ತುಗಳು ಪ್ರಾಪ್ತವಾದವು. ಈ ಕಾರಣದಿಂದ, ೧೯೪೬ರಲ್ಲಿ ಮುಂಬಯಿಯಲ್ಲಿ

ನಡೆದ ಏಕೀಕರಣ ಸಮಾವೇಶ ಹಾಗೂ ಆ ಬಳಿಕ ಆಗಿನ ಮುಂಬಯಿ ಸರ್ಕಾರದ ಕಂದಾಯ ಸಚಿವರಾಗಿದ್ದ ಎಂ.ಪಿ. ಪಾಟೀಲರ ಅಧ್ಯಕ್ಷತೆಯಲ್ಲಿ ದಾವಣಗೆರೆಯಲ್ಲಿ ನಡೆದ ಅಖಿಲ ಕರ್ನಾಟಕ ಸಮಾವೇಶಗಳು ಕರ್ನಾಟಕ ಏಕೀಕರಣದ ವಿಷಯದ ಬಗ್ಗೆ ಪ್ರಬಲವಾಗಿ ಒತ್ತಾಯಿಸಿತು. ಅದರಲ್ಲಿಯೂ, ಸಂವಿಧಾನ ಸಭೆಯು ಏಕೀಕೃತ ಕರ್ನಾಟಕ ರಚನೆಗೆ ಬೇಕಾದ ಕ್ರಮಗಳನ್ನು ಕೈಗೊಳ್ಳುವಂತೆ ನಿರ್ಣಯಿಸಿತು. ಆನಂತರ, ೧೯೪೭ರ ಏಪ್ರಿಲ್‌ನಲ್ಲಿ ಮುಂಬಯಿ ಹಾಗೂ ಮದರಾಸು ಈ ಎರಡೂ ರಾಜ್ಯಗಳ ಶಾಸನಸಭೆಗಳು ಏಕೀಕೃತ ಕರ್ನಾಟಕ ರಚನೆಯನ್ನು ಒತ್ತಾಯಿಸಿ ನಿರ್ಣಯಗಳನ್ನು ತೆಗೆದುಕೊಂಡವು.

ನಿಜಲಿಂಗಪ್ಪನವರು ಇದರಲ್ಲಿ ನೇರವಾಗಿ ಪ್ರವೇಶಿಸಿದ್ದು ೧೯೪೬ರಲ್ಲಿ, ಕೆಪಿಸಿಸಿಯ ಅಧ್ಯಕ್ಷರಾಗಿ. ಈ ಮೊದಲೇ ಗಮನಿಸಿದಂತೆ, ಕೆಪಿಸಿಸಿ ಮತ್ತು ಏಕೀಕರಣ ಸಂಘಗಳು ಕರ್ನಾಟಕದ ಏಕೀಕರಣದ ವಿಷಯದಲ್ಲಿ ನಿಕಟ ಸಹಕಾರದಿಂದ ಕೆಲಸ ಮಾಡಿದವು. ಅಂದಿನಿಂದ, ನಿಜಲಿಂಗಪ್ಪನವರು ಕನ್ನಡ ನಾಡಿನ ಒಗ್ಗೂಡುವಿಕೆಗಾಗಿನ ಚಳವಳಿಯಲ್ಲಿ ಮನಃಪೂರ್ವಕವಾಗಿ ಭಾಗವಹಿಸಿದರು. ೧೯೪೬ರಲ್ಲಿ ಮುಂಬಯಿಯಲ್ಲಿ ಸೇರಿದ್ದ ಕರ್ನಾಟಕ ಏಕೀಕರಣ ಸಂಘದ ಸಮಾವೇಶವನ್ನವರು ಉದ್ಘಾಟಿಸಿದರು; ತಮ್ಮ ಉದ್ಘಾಟನಾ ಭಾಷಣದಲ್ಲಿ ಸರ್ದಾರ್ ವಲ್ಲಭಭಾಯ್ ಪಟೇಲರು ಕರ್ನಾಟಕ ಏಕೀಕರಣಕ್ಕೆ ಸಂಪೂರ್ಣ ಬೆಂಬಲ ಘೋಷಿಸಿದರು. ಇದರಲ್ಲಿ ಹಾಗೂ ೧೯೪೬ರ ಆಗಸ್ಟ್ ೩೧ ರಂದು ದಾವಣಗೆರೆಯಲ್ಲಿ ನಡೆದ ಅಖಿಲ ಕರ್ನಾಟಕ ಸಮಾವೇಶದಲ್ಲಿ ನಿಜಲಿಂಗಪ್ಪನವರು ಸಕ್ರಿಯವಾಗಿ ಭಾಗವಹಿಸಿದರು, ಏಕೀಕರಣದ ಗುರಿ ಸಾಧನೆಗೆ ತೀವ್ರವಾಗಿಯೂ ಹೃತ್ಪೂರ್ವಕವಾಗಿಯೂ ತೊಡಗಿಸಿಕೊಂಡರು. ಈ ಸಮಾವೇಶವು ಪ್ರತ್ಯೇಕ ಕರ್ನಾಟಕ ರಚನೆಯ ಚಳವಳಿಯನ್ನು ತೀವ್ರಗೊಳಿಸಲು ಒಂದು ಸಮಿತಿಯನ್ನು ರಚಿಸಿತು, ಅದರಲ್ಲಿ ನಿಜಲಿಂಗಪ್ಪ, ಎಂ.ಪಿ. ಪಾಟೀಲ, ಮತ್ತು ಜಿನರಾಜ ಹೆಗಡೆ ಸೇರಿದ್ದರು ಕೆಲಕಾಲದ ಬಳಿಕ, ಕೆ.ಸಿ. ರೆಡ್ಡಿ ಅಧ್ಯಕ್ಷತೆಯ ಮೈಸೂರು ಕಾಂಗ್ರೆಸ್ ಸಮಿತಿಯು ಕೂಡ ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ಒಂದು ನಿರ್ಣಯವನ್ನು ತೆಗೆದುಕೊಂಡು ಕರ್ನಾಟಕದ ರಚನೆಯನ್ನು ಸ್ವಾಗತಿಸಿತು. ೧೯೪೭ರ ಡಿಸೆಂಬರ್‌ನಲ್ಲಿ ಕೇರಳದ ಗಡಿ ಊರಾದ ಕಾಸರಗೋಡಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಏಕೀಕರಣ ಸಮಾವೇಶದೊಡನೆ ಮೇಳೈಸಲಾಯಿತು. ಈ ಮಹತ್ವದ ಸನ್ನಿವೇಶದಲ್ಲಿ ಮಾತನಾಡಿದ ನಿಜಲಿಂಗಪ್ಪನವರು ಪ್ರತ್ಯೇಕ ಕನ್ನಡ ನಾಡಿನ ರಚನೆಗೆ ವಿರುದ್ಧವಾಗಿ ಸಂವಿಧಾನಾತ್ಮಕ ಸಂಚುಗಳನ್ನು ಮಾಡುವುದರ ವಿರುದ್ಧ ಸ್ಪಷ್ಟವಾಗಿಯೂ ಖಡಾಖಂಡಿತವಾಗಿಯೂ ಎಚ್ಚರಿಸಿದರು.

ಈ ಮಧ್ಯೆ, ೧೯೪೭ನೇ ಇಸವಿ ಅಕ್ಟೋಬರ್ ೨೪ ರಂದು ಹಳೇ ಮೈಸೂರಿನಲ್ಲಿ ಮಹಾರಾಜರ ನೇತೃತ್ವದ ಒಂದು ಜವಾಬ್ದಾರಿ ಸರ್ಕಾರ ಅಸ್ತಿತ್ವಕ್ಕೆ ಬಂತು. ೧೯೪೮ನೇ ನವೆಂಬರ್ ೬ ರಂದು ಬೀರೂರಿನಲ್ಲಿ ನಡೆದ ಮೈಸೂರು ಕಾಂಗ್ರೆಸ್‌ನ ಮಹತ್ವದ ಸಮಾವೇಶದಲ್ಲಿ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು ಹಳೆಯ ಮೈಸೂರು ಕರ್ನಾಟಕ ಪ್ರಾಂತ ರಚನೆಗೆ ಅಡ್ಡಿಯಾಗುವುದಿಲ್ಲವೆಂದು ಬಹಿರಂಗವಾಗಿ ಘೋಷಿಸಿದರು. ಆ ಸಮಾವೇಶವು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಭಾಷಾವಾರು ಪ್ರಾಂತಗಳ ರಚನೆಗೆ ಬದ್ಧವಾಗಿದೆ ಎಂದೂ, ಮೈಸೂರು ರಾಜ್ಯ ಕಾಂಗ್ರೆಸ್ ಅದನ್ನು ಒಪ್ಪಿಕೊಂಡಿದೆ ಎಂದೂ, ಏಕೀಕರಣಗೊಳ್ಳದೆ ಛಿದ್ರಗೊಂಡ ನಾಡು ಎಂದೂ ಏಳಿಗೆಯಾಗುವುದಿಲ್ಲವೆಂದೂ, ತಿಳಿಸುವ ನಿರ್ಣಯವೊಂದನ್ನು ಕೈಗೊಂಡಿತು. ನಿರ್ಣಯದಲ್ಲಿ ಕರ್ನಾಟಕದ ಜನತೆಯು ಸಮಾನ ಪಾರ್ಥಿವ ಆಸಕ್ತಿಗಳನ್ನು ಹೊಂದಿದೆ ಎಂಬುದನ್ನೂ ವಿವರಿಸಲಾಗಿತ್ತು. ಹೀಗಾಗಿ, ಮಹಾರಾಜರೇ ಸಂವಿಧಾನಾತ್ಮಕ ಮುಖ್ಯಸ್ಥರಾಗಿರುವ ಏಕೀಕೃತ ಕರ್ನಾಟಕ ರಚನೆಯಾಗಬೇಕೆಂದು ನಿರ್ಣಯವು ವಾದಿಸಿತು. ಈ ನಿರ್ಣಯವು ಒಮ್ಮತದಿಂದ ಅಂಗೀಕೃತವಾಯಿತು. ೧೯೪೬ರಲ್ಲಿ ಸಂವಿಧಾನ ಸಭೆ ಅಸ್ತಿತ್ವಕ್ಕೆ ಬಂದ ಕಾಲದಲ್ಲಿ ಒತ್ತಾಯಿಸಿದ್ದ ಭಾಷಾವಾರು ಪ್ರಾಂತ ರಚನೆಯ ಅಂಶವನ್ನು ಸಂವಿಧಾನದಲ್ಲಿ ಸೇರಿಸ ಬೇಕೆಂದು ಸಂವಿಧಾನ ಸಭೆಯ ಮೇಲೆ ಒತ್ತಡವನ್ನು ಹೇರಲಾಯಿತು. ಇದೇ ಉದ್ದೇಶ ದಿಂದ ೧೯೪೬ನೇ ಡಿಸೆಂಬರ್ ೮ ರಂದು ಪಟ್ಟಾಭಿ ಸೀತಾರಾಮಯ್ಯನವರ ಅಧ್ಯಕ್ಷತೆ ಯಲ್ಲಿ ಭಾಷಾವಾರು ಪ್ರಾಂತ ರಚನೆಯ ಪರವಾಗಿದ್ದವರ ಸಭೆಯೊಂದು ದೆಹಲಿಯಲ್ಲಿ ನಡೆಯಿತು. ಭಾಷಾವಾರು ಪ್ರಾಂತ ರಚನೆಗೆ ಕಾಂಗ್ರೆಸ್ ವ್ಯಕ್ತಪಡಿಸಿದ್ದ ಬದ್ಧತೆಯು ೧೯೨೦ ರಷ್ಟು ಹಳೆಯದೆಂಬುದನ್ನೂ, ೧೯೪೫ರ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಭಾರತದ ಪ್ರಾಂತಗಳನ್ನು ಭಾಷಾಧಾರಿತವಾಗಿ ಪುನಾರಚಿಸುವ ಅದರ ನಿರ್ಣಯವನ್ನು ಸಭೆಯು ನೆನಪಿಸಿತು. ಇದರಿಂದಾಗಿ ಸಂವಿಧಾನ ಸಭೆಯು ಭಾಷಾವಾರು ಪ್ರಾಂತಗಳಿಗೆ ಅನುವು ಮಾಡಿಕೊಡಬೇಕೆಂಬುದನ್ನು ಒತ್ತಾಯಿಸಿತು. ಸಂವಿಧಾನ ಸಭೆಯ ಅಧ್ಯಕ್ಷರಾಗಿದ್ದ ಬಾಬು ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿಯೇ ೧೯೪೮ರ ಫೆಬ್ರವರಿ ೨೪ ರಂದು ದೆಹಲಿಯಲ್ಲಿ ನಡೆದಿದ್ದ ಪ್ರಾಂತ ಕಾಂಗ್ರೆಸ್ ಅಧ್ಯಕ್ಷರುಗಳ ಸಭೆಯೂ ಭಾಷಾವಾರು ಪ್ರಾಂತಗಳ ರಚನೆಯ ಪರವಾದ ನಿರ್ಣಯವನ್ನು ಕೈಗೊಂಡಿತ್ತು. ಮೈಸೂರು ರಾಜ್ಯದಲ್ಲಿ ಉಳಿದ ಕನ್ನಡ ಪ್ರದೇಶಗಳನ್ನು ಸೇರಿಸಿ ರಾಜ್ಯದ ಸ್ವರೂಪವನ್ನು ಬದಲಿಸಬೇಕೆಂಬುದಕ್ಕೆ ಬೆಂಬಲ ಸೂಚಿಸಲೆಂದು ಮೈಸೂರು ಪ್ರಾಂತ ಕಾಂಗ್ರೆಸ್ ಸಮಿತಿಯು ೧೯೪೮ರಲ್ಲಿ ರಾಜೀನಾಮೆಯಿತ್ತಿತು. ಕನ್ನಡ ಪ್ರದೇಶಗಳಲ್ಲಿನ ಅನೇಕ ಬುದ್ಧಿಜೀವಿಗಳು ಏಕೀಕರಣವನ್ನು ಬೆಂಬಲಿಸಿದರು. ಇದಕ್ಕೆ ಏಕೈಕ ಪ್ರಮುಖ ಅಪವಾದವೆಂದರೆ ಡಿವಿಜಿ ಅವರು. ಅವರು

ಎರಡು ಕರ್ನಾಟಕಗಳ ರಚನೆಯ ಪರವಾಗಿದ್ದರು: ಹಳೆಯ ಮೈಸೂರು ಒಂದಾದರೆ, ಉಳಿದ ಕನ್ನಡ ಪ್ರದೇಶಗಳನ್ನೊಳಗೊಂಡ ಮತ್ತೊಂದು ಎರಡನೆಯದು. ಕೇಂದ್ರ ನಾಯಕರು, ಅದರಲ್ಲೂ ನೆಹರೂ ಅವರು, ಈ ಬಗ್ಗೆ ಅಧೈರ್ಯ ತಾಳಿದ್ದಂತೆ ಕಾಣುತ್ತದೆ. ಆದರೆ, ಆಂಧ್ರದ ರಚನೆಯು ಕರ್ನಾಟಕದ ರಚನೆಗಿಂತ ಸುಲಭವೆಂದು ಸಂಸತ್ತಿನಲ್ಲಿ ಅವರು ಹೇಳಿಕೆಯಿತ್ತರು. ಈ ಬಗ್ಗೆ ಸಹಜವಾಗಿಯೇ ಕರ್ನಾಟಕದಲ್ಲಿ ವಿಷಾದ ವ್ಯಕ್ತವಾಯಿತು, ಕೆಲವರಂತೂ ಈ ವಿಷಯದಲ್ಲಿ ಕರ್ನಾಟಕದ ನಾಯಕರಲ್ಲಿನ ಅಭಿಪ್ರಾಯಭೇದವನ್ನು ನೆಹರೂ ದುರುಪಯೋಗಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆಂದೂ ಆರೋಪಿಸಿದರು. ತಕ್ಷಣವೇ ನೆಹರೂ ಅವರ ಹೇಳಿಕೆಗೆ ಪ್ರತಿಕ್ರಿಯೆಯಾಗಿ ಸಂವಿಧಾನ ಸಭೆಯಲ್ಲಿನ ಕರ್ನಾಟಕದ ಪ್ರತಿನಿಧಿಗಳೂ ಮತ್ತು ಈ ಪ್ರದೇಶಗಳ ಶಾಸಕರೂ ನಿಯೋಗವೊಂದರಲ್ಲಿ ದೆಹಲಿಗೆ ಹೋಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಜ್ಞಾಪನಪತ್ರವೊಂದನ್ನು ಸಲ್ಲಿಸಿತು. ಆ ಕಾಲದಲ್ಲಿ ಕೆಪಿಸಿಸಿ ಅಧ್ಯಕ್ಷರಾಗಿದ್ದ ನಿಜಲಿಂಗಪ್ಪನವರು ಈ ನಿಯೋಗದ ನೇತೃತ್ವ ವಹಿಸಿದರು. ನಿಯೋಗದಲ್ಲಿ ಕೆ.ಆರ್. ಕಾರಂತ, ಎಂ.ಪಿ. ಪಾಟೀಲ್, ಮತ್ತು ಆರ್.ಆರ್. ದಿವಾಕರ ಅವರುಗಳೂ ಇದ್ದರು. ಈ ವಿಷಯದಲ್ಲಿ ಕರ್ನಾಟಕ ಮತ್ತು ಆಂದ್ರಗಳ ನಡುವೆ ಭೆದವೆಣಿಸಿ ಆಂಧ್ರಕ್ಕೆ ಅನುಕೂಲಕರವಾಗಿರುವುದರ ವಿರುದ್ಧ ಕರ್ನಾಟಕದ ವಿವಿಧ ಶಾಸನಸಭೆಗಳ ಪ್ರತಿನಿಧಿಗಳೆಲ್ಲ ರಾಜೀನಾಮೆಯನ್ನು ಸಲ್ಲಿಸಬೇಕಾದೀತೆಂದು ನಿಯೋಗವು ಕೇಂದ್ರ ನಾಯಕತ್ವವನ್ನು ಎಚ್ಚರಿಸಿತು. ಅವರೆಲ್ಲ ಗಾಂಧೀಜಿಯವರನ್ನೂ ಭೇಟಿ ಮಾಡಿ ಅವರಿಗೆ ಜ್ಞಾಪನಪತ್ರದ ಪ್ರತಿಯೊಂದನ್ನು ಸಲ್ಲಿಸಿದರು.

ಭಾಷಾವಾರು ಪ್ರಾಂತಗಳಿಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಗಾಂಧೀಜಿ ಹತ್ಯೆಯ ಕಾರಣ ತಾತ್ಕಾಲಿಕ ನಿಲುಗಡೆಯುಂಟಾಯಿತು. ಆದರೆ ಬೇಗನೇ ಕೇರಳ, ಆಂಧ್ರ, ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಜನತೆ ತೀವ್ರತೆಯಿಂದ ತಮ್ಮ ಬೇಡಿಕೆಯನ್ನು ಮುಂದಿಟ್ಟಿದ್ದರಿಂದಾಗಿ ಕಾಂಗ್ರೆಸ್ ನಾಯಕತ್ವವು ಏನನ್ನಾದರೂ ಮಾಡಲೇಬೇಕಾದ ಪರಿಸ್ಥಿತಿಯುಂಟಾಯಿತು. ಯಾವುದರ ಬಗ್ಗೆಯಾದರೂ ಕ್ರಮ ತೆಗೆದುಕೊಳ್ಳಲು ಇಷ್ಟವಿಲ್ಲದಿದ್ದರೆ ಸಾಮಾನ್ಯವಾಗಿ ಸರ್ಕಾರವು ತೀರ್ಮಾನಿಸುವುದೆಂದರೆ ಒಂದು ಆಯೋಗವನ್ನೋ ಸಮಿತಿಯನ್ನೋ ರಚಿಸುವುದು, ಇದರಿಂದ ತೆಗೆದುಕೊಳ್ಳಬೇಕಾದ ನಿರ್ಣಯವನ್ನು ಮುಂದೂಡುವುದು ಸುಲಭ. ಭಾರತೀಯ ಕಾಂಗ್ರೆಸ್ ಮಾಡಿದ್ದೂ ಇದನ್ನೇ. ಎಸ್.ಕೆ. ಧರ್ ಅವರ ನೆತೃತ್ವದ ಧರ್ ಸಮಿತಿಯನ್ನು ನೇಮಿಸಿ ಈ ವಿಷಯವನ್ನು ಪರಿಶೀಲಿಸಲು ಕೇಳಿತು. ಈ ಆಯೋಗ ರಚನೆಯ ನಿರ್ಧಾರವನ್ನು ೧೯೪೮ರಲನೇ ಜೂನ್ ೧೭ ರಂದು ಪ್ರಕಟಿಸಲಾಯಿತು. ಪ್ರಾಯಶಃ ಈ ಆಯೋಗವು ತನ್ನ ನೇಮಕಕ್ಕೆ ಹಿನ್ನೆಲೆಯಾದ

ಅಭೀಷ್ಟವನ್ನೇ ಮಾಡುತ್ತಿತ್ತು, ಹೀಗಾಗಿ, ಈ ವಿಷಯದ ಸಂಕೀರ್ಣತೆ ಮತ್ತು ಒಳಸುಳಿಗಳ ಕಾರಣದಿಂದಾಗಿ ಅದು ಇಡೀ ವಿಷಯವನ್ನು ಮುಂದೂಡುವುದೇ ಒಳ್ಳೆಯದೆಂದು ಶಿಫಾರಸು ಮಾಡಿತು! ಕರ್ನಾಟಕದ ಪ್ರಶ್ನೆಗೆ ಸಂಬಂಧಿಸಿದಂತೆ, ಅದು ಕಂಡುಕೊಂಡ ಮಹತ್ವದ ಅಂಶಗಳೆಂದರೆ, ತೆಲುಗು ಮತ್ತು ತಮಿಳು ಪ್ರದೇಶಗಳಲ್ಲಿನ ಕನ್ನಡ ವಲಯಗಳನ್ನು ಕರ್ನಾಟಕದೊಡನೆ ವಿಲೀನಗೊಳಿಸಬೇಕು, ಕರ್ನಾಟಕ ರಚನೆಗೆ ಇರುವ ಪ್ರಮುಖ ಅಡ್ಡಿಯೆಂದರೆ ಅರಸಾಳ್ವಿಕೆಯ ಮೈಸೂರಿನಲ್ಲಿ ಅದಕ್ಕೆ ವಿರೋಧವಿರುವುದು ಎಂದು ಹೇಳದುದು. ನಿರೀಕ್ಷಿಸಿದಂತೆಯೇ, ಕರ್ನಾಟಕದಲ್ಲಿ ಕೆಪಿಸಿಸಿಯ ನೇತೃತ್ವದಲ್ಲಿ ತೀವ್ರವೂ ವ್ಯಾಪಕವೂ ಆದ ಪ್ರತಿಭಟನೆ ವ್ಯಕ್ತವಾಯಿತು. ಏಕೀಕರಣದ ಉದ್ದೇಶಕ್ಕಾಗಿ ಮಾಡಿದ ಜನಸಂಘಟನೆಯಿಂದಾಗಿ ಆ ಬೃಹತ್ ಪ್ರತಿಭಟನಾ ಸಭೆಯಲ್ಲಿ ನಿಜಲಿಂಗಪ್ಪನವರು ಕೇಂದ್ರ ಬಿಂದುವಾದರು. ಏಕೀಕರಣ ಪರವಾದ ಎಲ್ಲ ಅಂಕಿಅಂಶಗಳೊಡನೆ ಅವರು ಸಂಸತ್ತಿನ ಒಳಗೆ ಹಾಗೂ ಹೊರಗೆ ಕೇಂದ್ರ ನಾಯಕತ್ವವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಈ ವಿಷಯದೊಡನೆ ಅವರು ತೊಡಗಿಕೊಂಡಿದ್ದುದು ಎಷ್ಟು ಸಂಪೂರ್ಣವಾಗಿತ್ತೆಂದರೆ, ಅವರಿಗೆ ಊಟ ನಿದ್ದೆ ಬಿಡುವು ಎಲ್ಲ ಕಾಲಗಳಲ್ಲಿಯೂ ಇದೇ ಯೋಚನೆಯಾಗಿತ್ತು. ರಾಷ್ಟ್ರೀಯ ಕಾಂಗ್ರೆಸ್‌ನ ೫೫ನೇ ಸಮಾವೇಶವು ೧೯೪೮ರ ಡಿಸೆಂಬರ್‌ನಲ್ಲಿ ಜೈಪುರದಲ್ಲಿ ನಡೆದಾಗ, ಅದು ಸಮಸ್ಯೆಯ ಗಂಭಿರತೆಯನ್ನು ಗಮನಿಸಿ ವರದಿಯನ್ನು ಸಲ್ಲಿಸಲು ಕೇಳಿ ಪಟ್ಟಾಭಿರಾಮಯ್ಯ, ನೆಹರೂ ಮತ್ತು ಪಟೇಲ್ ಅವರನ್ನೊಳಗೊಂಡ ಒಂದು ತ್ರಿಸದಸ್ಯ ಸಮಿತಿಯನ್ನು ರಚಿಸಬೇಕಾಯಿತು. ಇದೂ ಮತ್ತೊಂದು ಸಮಿತಿ, ಅದರ ಫಲವೂ ಹಿಂದಿನದರಂತೆಯೇ! ೧೯೪೯ನೇ ಏಪ್ರಿಲ್ ಒಂದರಂದು ಪ್ರಕಟಿಸಿದ ತನ್ನ ವರದಿಯಲ್ಲಿ ಸಮಿತಿಯು ಹಳೆಯ ರಾಗವನ್ನೇ ಹಾಡಿತು, ಈ ಬಗ್ಗೆ ತುಂಬ ಎಚ್ಚರದಿಂದ ಮುಂದುವರಿಯಬೇಕೆಂದು ಹೇಳಿತು, ಇದರಿಂದಾಗಿ ದೇಶದ ಭೌಗೋಳಿಕ ಸಮಗ್ರತೆ ಮತ್ತು ಏಕತೆಗೆ ಭಂಗವುಂಟಾಗಬಾರದೆಂದು ಹೇಳಿತು, ದೇಶದ ಆರ್ಥಿಕ ಅಭಿವೃದ್ಧಿಯ ಮೇಲೆ ದುಷ್ಪರಿಣಾಮವಾಗಬಹುದೆಂದು ಎಚ್ಚರಿಸಿತು. ಜೊತೆಗೆ, ಆಂಧ್ರದ ಬೇಡಿಕೆಗೆ ಹೆಚ್ಚಿನ ಮಹತ್ವ ನೀಡಬೇಕೆಂದೂ ಸೂಚಿಸಿತು, ಅದಕ್ಕೆ ಕಾರಣ ಸಮಿತಿಯ ಸದಸ್ಯರಲ್ಲಿ ಒಬ್ಬರು ಆಂಧ್ರದವರಾಗಿದ್ದುದು! ಈ ವರದಿಯಿಂದ ಕನ್ನಡ ನಾಡಿನ ಜನತೆ ರೋಷದಿಂದ ಸಿಡಿಯುವಂತಾಯಿತು, ತೀವ್ರ ಪ್ರತಿಭಟನೆಗಳು ವ್ಯಕ್ತವಾದವು. ೧೯೪೯ನೇ ಮೇ ಎಂಟರಂದು ಈ ವರದಿಯ ಪರಿಶೀಲನೆಗಾಗಿ ಹುಬ್ಬಳ್ಳಿಯಲ್ಲಿ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸೇರಿದ್ದ ಕೆಪಿಸಿಸಿಯು ಅದರ ಶಿಫಾರಸುಗಳ ಬಗ್ಗೆ ಸಂಪೂರ್ಣ ಭ್ರಮನಿರಸವನ್ನು ವ್ಯಕ್ತಪಡಿಸಿತು. ಕರ್ನಾಟಕ ಮತ್ತು ಆಂಧ್ರಗಳ ಪುನಾರಚನೆಯಾಗಲು ಶ್ರಮಿಸಿದ್ದ ನಿಜಲಿಂಗಪ್ಪ ಮತ್ತಿತರ ನಾಯಕರ ಪ್ರಯತ್ನಗಳನ್ನೂ, ಈ

ವಿಷಯದಲ್ಲಿ ಸಂವಿಧಾನವು ವಿಫಲಗೊಂಡಿರುವುದನ್ನೂ ಸಭೆಯು ಗಮನಿಸಿತು. ಪ್ರತಿಭಟನೆ ಮತ್ತು ಹತಾಶೆಗಳು ಗರಿಷ್ಠ ಪ್ರಮಾಣದಲ್ಲಿ ವ್ಯಕ್ತವಾದುದು ೧೯೪೯ನೇ ಡಿಸೆಂಬರ್ ೩ ರಂದು ಹುಬ್ಬಳ್ಳಿಯಲ್ಲಿ ನಡೆದ ಕೆಪಿಸಿಸಿ ಸಭೆಯು ಕೈಗೊಂಡ ನಿರ್ಣಯ ದಲ್ಲಿ; ಅದರಲ್ಲಿ ಕರ್ನಾಟಕದಿಂದ ಚುನಾಯಿತರಾದ ಎಲ್ಲ ಶಾಸಕರೂ ಪಾರ್ಲಿಮೆಂಟ್ ಸದಸ್ಯರೂ ರಾಜೀನಾಮೆಯೀಯಬೇಕೆಂದು ಕರೆ ಕೊಡಲಾಗಿತ್ತು. ಕಾಂಗ್ರೆಸ್‌ಲ್ಲಿ ಕನ್ನಡ ಜನತೆ ವಿಶ್ವಾಸವನ್ನು ಕಳೆದುಕೊಂಡಿದ್ದಾರೆಂಬುದನ್ನು ನಿರ್ಣಯದಲ್ಲಿ ಸೇರಿಸಲೂ ಅದು ಮರೆಯಲಿಲ್ಲ. ಒಂದಾಗದ ಕನ್ನಡ ಜನತೆ ಪ್ರತಿನಿತ್ಯ ಕಷ್ಟಗಳನ್ನೆದುರಿಸಬೇಕಾಗಿದೆಯೆಂದೂ, ಕನ್ನಡಿಗರ ಹಿತಾಸಕ್ತಿಗಳನ್ನು ವ್ಯವಸ್ಥಿತವಾಗಿ ಹತ್ತಿಕ್ಕಲಾಗುತ್ತಿದೆಯೆಂದೂ, ಕನ್ನಡಿಗರು ದೇಶದ ಅಭಿವೃದ್ಧಿ ಮತ್ತು ಏಳಿಗೆಗಳಲ್ಲಿ ಪಾಲುಗೊಳ್ಳಲು ಇದರಿಂದ ಅಡ್ಡಿಯಾಗಿದೆ ಯೆಂದೂ ಆಕ್ರೋಶ ವ್ಯಕ್ತಪಡಿಸಿತು. ಹೀಗಾಗಿ ತಮ್ಮ ಕರ್ತವ್ಯ ಪಾಲನೆಯಲ್ಲಿ ವಿಫಲ ವಾಗಿರುವ ಪ್ರತಿನಿಧಿಗಳ ರಾಜೀನಾಮೆಯೊಂದೇ ಉಳಿದಿರುವ ಆಯ್ಕೆಯೆಂದೂ ನಿರ್ಣಯ ಹೇಳಿತು. ನಿಜಲಿಂಗಪ್ಪನವರ ನೇತೃತ್ವದಲ್ಲಿ ಒಂದು ನಿಯೋಗವು ವಲ್ಲಭ ಭಾಯ್ ಪಟೇಲರನ್ನು ೧೯೫೦ನೇ ಇಸವಿ ಜನವರಿ ೪ ರಂದು ಮುಂಬಯಿಯಲ್ಲಿ ಭೇಟಿಮಾಡಿ ಈ ಐತಿಹಾಸಿಕ ನಿರ್ಣಯದ ಕಡೆಗೆ ಅವರ ಗಮನ ಸೆಳೆಯಿತು. ಆನಂತರ, ನಿರ್ಣಯವನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಮುಖತಃ ಸಲ್ಲಿಸಲು ನಿಯೋಗವು ದೆಹಲಿಗೆ ತೆರಳಿತು. ಈ ವಿಷಯದಲ್ಲಿ ಕರ್ನಾಟಕದ ವಿರುದ್ಧ ಯಾವುದೇ ಬಗೆಯ ತಾರತಮ್ಯವಾಗಲು ಅವಕಾಶ ಕೊಡುವುದಿಲ್ಲ ಎಂದು ಕಾಂಗ್ರೆಸ್ ಅಧ್ಯಕ್ಷ ರಾಜೇಂದ್ರ ಪ್ರಸಾದರು ಆಶ್ವಾಸನೆಯಿತ್ತರು. ಈ ಮಧ್ಯೆ, ಆಂಧ್ರದ ವಿಷಯವನ್ನೂ ಮುಂದೂಡಲಾಯಿತು; ಇದಕ್ಕೆ ಕಾರಣ ಏಕೀಕೃತ ಆಂಧ್ರ ಪ್ರದೇಶ ರಚನೆಗೆ ರಾಯಲ ಸೀಮೆಗೆ ಸೇರಿದ್ದ ಬಳ್ಳಾರಿ, ಕರ್ನೂಲು, ಕಡಪ ಮತ್ತು ಅನಂತಪುರ ಜಿಲ್ಲೆಗಳ ಜನ ವಿರೋಧ ವ್ಯಕ್ತಪಡಿಸಿದ್ದುದು.

ಅರಸಾಳ್ವಿಕೆಯ ಮೈಸೂರು ರಾಜ್ಯದಲ್ಲಿ ಏಕೀಕರಣಕ್ಕೆ ವಾಸ್ತವವಾಗಿಯೂ ವಿರೋಧ ವಿದ್ದುದು ನಿಜವಾದರೂ, ಅದು ನಾಯಕತ್ವದ ನೆಲೆಯಲ್ಲಲ್ಲದೆ ರಾಜ್ಯದ ಪ್ರಮುಖ ಸಮುದಾಯವಾದ ಸ್ಥಳೀಯ ಲಿಂಗಾಯತ ಜನರಲ್ಲಿತ್ತು. ಏಕೀಕರಣವೆಂದರೆ ರಾಜಾಡಳಿತದಲ್ಲಿ ತಮಗಿದ್ದ ಸವಲತ್ತುಗಳ ಕೊನೆ ಎಂದವರ ಭಾವನೆಯಾಗಿತ್ತು. ಅದರೊಡನೆ, ಈ ಜೀವನಚರಿತ್ರಕಾರನಿಗೆ ಹಿಂದೆ ಹೇಳಿದ ಸಂದರ್ಶನದಲ್ಲಿ ನಿಜಲಿಂಗಪ್ಪ ನವರೇ ವಿವರಿಸಿದಂತೆ, ಇದನ್ನು ಹಿಂದೆ ಸರಿಸುವಂತೆ ಸಾಮಾನ್ಯವಾಗಿ ಜನ ಏಕೀಕರಣದ ಪರವಾಗಿದ್ದರು. ಹಳೆಯ ಮೈಸೂರಿನ ಕೆಲವು ನಾಯಕರು ಏಕೀ ಕರಣಕ್ಕೆ ವ್ಯಕ್ತಪಡಿಸುತ್ತಿದ್ದ ವಿರೋಧ ಕಣ್ಮರೆಯಾಗಲು ವಾಸ್ತವವಾಗಿ ನಿಜಲಿಂಗಪ್ಪನವರ ನಿಷ್ಕಲ್ಮಶ ವ್ಯಕ್ತಿತ್ವ, ಶುದ್ಧ

ಚಾರಿತ್ರ್ಯ ಮತ್ತವರ ವಿಚಾರಶೀಲತೆಗಳು ಕಾರಣ. ಆದರೆ ಎಚ್.ಸಿ. ದಾಸಪ್ಪ, ಕೆ.ಸಿ. ರೆಡ್ಡಿ, ಕೆ.ಟಿ. ಭಾಷ್ಯಂ, ಎ.ಡಿ. ಬಂದಿಗೌಡ ಮುಂತಾದ ಪ್ರಮುಖ ನಾಯಕರು ಎಂದೂ ಏಕೀಕರಣವಿರೋಧಿಗಳಾಗಿರಲಿಲ್ಲ. ನಿಜವಾದ ಸಮಸ್ಯೆ ಎಂದರೆ ಉತ್ತರದ ಕೇಂದ್ರ ನಾಯಕತ್ವದ ಕಣ್ಣಾಮುಚ್ಚಾಲೆಯಾಟ, ಮತ್ತು ಕನ್ನಡಿಗರ ರೋಗವಾದ ಅನೈಕ್ಯದಿಂದಾದ ನಿಧಾನಗತಿ ಇವುಗಳು. ಈ ನಿಧಾನಕ್ಕೆ ಜನರ ಅನೈಕ್ಯ ಮತ್ತು ಪರಿಣಾಮಕಾರಿ ನಾಯಕತ್ವದ ಕೊರತೆ ಇವುಗಳೇ ಕಾರಣವೆಂದು ಹಳೆಯ ಮೈಸೂರಿನ ಪ್ರಮುಖ ನಾಯಕರಾದ ಕೆ. ಹನುಮಂತಯ್ಯನವರು ಹೇಳುತ್ತಿದ್ದರು. ದಕ್ಷಿಣದ ಕೆಲವು ನಾಯಕರು ತಮ್ಮ ಪ್ರಾಂತ ಸಮಸ್ಯೆಯನ್ನು ಬದಿಗಿರಿಸುವ ಮೂಲಕ ರಾಷ್ಟ್ರ ನಾಯಕರಿಗೆ ಹತ್ತಿರವಾಗಲು ಪ್ರಯತ್ನಿಸಿದರು ಎಂದವರು ನೇರವಾಗಿಯೂ ಖಾರವಾಗಿಯೂ ಹೇಳಿದರು.

ಆದರೆ ಏಕೀಕರಣ ಹೋರಾಟವು ನಾನಾ ಸಂಘಟನೆಗಳಿಂದಾಗಿ ಜೀವಂತ ವಾಗಿಯೇ ಇತ್ತು. ಉದಾಹರಣೆಗೆ, ೧೯೫೧ನೇ ಜುಲೈ ೧೨ ರಂದು ಕರ್ನಾಟಕ ಯುವ ಪರಿಷತ್ತಿನ ಕಾರ್ಯಕಾರೀ ಸಮಿತಿಯು ಕೆ. ಎಂ. ರುದ್ರಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಏಕೀಕರಣದ ಉದ್ದೇಶವನ್ನು ಸ್ವಾಗತಿಸುವ ಮತ್ತು ಅದನ್ನು ಸಂಪೂರ್ಣವಾಗಿ ಬೆಂಬಲಿಸುವ ನಿರ್ಣಯವನ್ನು ತೆಗೆದುಕೊಂಡಿತು. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಪುರುಷೋ ತ್ತಮದಾಸ್ ಟಂಡನ್ ಅವರನ್ನು ನಿಜಲಿಂಗಪ್ಪನವರು ಭೇಟಿಯಾಗಿ ಅವರೊಂದಿಗೆ ಭಾಷಾವಾರು ಪ್ರಾಂತಗಳ ರಚನೆಯ ಬಗ್ಗೆ ಸುದೀರ್ಘ ಚರ್ಚೆ ನಡೆಸಿದರು. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲೂ ಅವರು ಪಾಲ್ಗೊಂಡು, ಏಕೀಕರಣದ ಪರವಾಗಿ ಬಹು ಹಿಂದೆಯೇ ನಿರ್ಣಯ ಕೈಗೊಂಡೂ ಆ ಬಗ್ಗೆ ವಿಫಲವಾಗಿರುವುದರಿಂದ ಕನ್ನಡ ಜನತೆ ಕಾಂಗ್ರೆಸ್‌ನಲ್ಲಿ ಎಲ್ಲ ವಿಶ್ವಾಸವನ್ನೂ ಕಳೆದುಕೊಂಡಿದ್ದಾರೆಂದು ನೇರವಾಗಿ ನುಡಿದರು. ಅವರ ಈ ಅತೃಪ್ತಿಯು ಚುನಾವಣೆಗಳಲ್ಲಿ ಕಾಂಗ್ರೆಸ್‌ಗೆ ವಿರುದ್ಧವಾಗಬಹು ದಾದುದರ ಬಗ್ಗೆಯೂ ಎಚ್ಚರಿಸಿದರು. ಅದೇ ಸಮಯಕ್ಕೆ ಅವರು ನೆಹರೂ ಅವರೊಂದಿಗೆ ನಡೆಸಿದ ಖಾಸಗಿ ಭೇಟಿಯಲ್ಲಿ, ಕನ್ನಡ ರಾಜ್ಯದ ರಚನೆಯ ಬಗೆಗಿನ ವಿಳಂಬವು ಕರ್ನಾಟಕದಲ್ಲಿ ವ್ಯಾಪಕ ವಿಷಾದವನ್ನು ಹರಡಿದೆಯೆಂದೂ ಅದನ್ನು ಪ್ರತಿಗಾಮಿ ಹಾಗೂ ಕಾಂಗ್ರೆಸ್‌ವಿರೋಧಿ ಶಕ್ತಿಗಳು ರಾಜಕೀಯ ದಾಳವಾಗಿ ಮಾಡಿಕೊಳ್ಳುತ್ತಿವೆ ಯೆಂದೂ ನಿಜಲಿಂಗಪ್ಪನವರು ವಿವರಿಸಿದರು. ಈ ಎಲ್ಲ ಪ್ರಯತ್ನಗಳ ಫಲವಾಗಿ, ೧೯೫೧ರ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಭಾಷಾವಾರು ಪ್ರಾಂತ ರಚನೆಯ ವಾಗ್ದಾನವನ್ನು ಸೇರಿಸಲು ಸಮ್ಮತಿಸಿತು. ೧೯೫೧ನೇ ಜುಲೈ ೧೭ ರಂದು ಶಂಕರ ರಾವ್ ದೇವ್ ಅವರ ಅಧ್ಯಕ್ಷತೆಯಲ್ಲಿ ನಡೆದ ಪ್ರಾಂತ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರುಗಳ ಸಭೆಯು ಇದನ್ನು ಸ್ವಾಗತಿಸಿತು. ಈ ಬೇಡಿಕೆಯನ್ನು ಪೂರೈಸುವ

ಕುರಿತು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಕೈಗೊಳ್ಳಲು ಹಾಗೂ ಈ ದಿಸೆಯಲ್ಲಿ ಜನರನ್ನು ಮತ್ತು ಸಂಘಸಂಸ್ಥೆಗಳನ್ನು ಸಜ್ಜುಗೊಳಿಸಲು ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಆರು ಮಂದಿಯ ಸಮಿತಿಯನ್ನು ನೇಮಕ ಮಾಡಲಾಯಿತು.

ಈ ಮಧ್ಯೆ, ಸ್ಥಳೀಯ ಅರಸರುಗಳನ್ನೊಳಗೊಂಡ ಪ್ರತಿಗಾಮಿ ಶಕ್ತಿಗಳು ಸೇರಿ ದಕ್ಷಿಣದ ಅರಸರೆಲ್ಲ ಒಗ್ಗೂಡಿ ಒಂದು ಸ್ವತಂತ್ರ ಒಕ್ಕೂಟವನ್ನು ಸ್ಥಾಪಿಸಿಕೊಳ್ಳಲು ಪ್ರಯತ್ನಿಸಿದವು. ಇದರ ಮುಂದಾಳತ್ವವನ್ನು ಈ ಉದ್ದೇಶಕ್ಕಾಗಿ ಸೇರಿದ್ದ ಸಭೆಯಲ್ಲಿ ಸಾಂಗ್ಲಿಯ ಮಹಾರಾಜರಿಗೆ ವಹಿಸಲಾಯಿತು. ಕರ್ನಾಟಕದ ಹದಿನೇಳು ಸ್ಥಳೀಯ ರಾಜ್ಯಗಳು, ಪ್ರತ್ಯೇಕ ರಾಜಕೀಯ ಘಟಕವೂ ಸ್ವತಂತ್ರ ಸಂವಿಧಾನವನ್ನು ಹೊಂದಿರುವಂತದೂ ಆದ ಈ ಒಕ್ಕೂಟವನ್ನು ಸೇರುವ ಬಯಕೆಯನ್ನು ವ್ಯಕ್ತಪಡಿಸಿದವು. ಈ ಉದ್ದೇಶಿತ ಒಕ್ಕೂಟದ ಸಂವಿಧಾನವನ್ನು ರಚಿಸಿದ್ದವರು ಕೆ.ಎಂ. ಮುನಶಿ! ಈ ಉದ್ದೇಶಕ್ಕಾಗಿ ಸಾಂಗ್ಲಿಯ ಮಹಾರಾಜರು ದೆಹಲಿಯ ಇಂಪೀರಿಯಲ್ ಹೋಟಲಿನಲ್ಲಿ ಕರೆದಿದ್ದ ಸಭೆಗೆ ಪಟ್ಟಾಭಿ ಸೀತಾರಾಮಯ್ಯ, ಶಂಕರರಾವ್ ದೇವ್ ಮತ್ತು ಆರ್.ಆರ್. ದಿವಾಕರ್ ಅವರಂತಹ ಕಾಂಗ್ರೆಸ್ ನಾಯಕರು ಹೋಗಿದ್ದರು. ಯಾವಾಗಲೂ ಪ್ರಜಾಸತ್ತಾತ್ಮಕವೂ ಪ್ರಗತಿಪರವೂ ಆದ ಧೋರಣೆಗಳನ್ನು ಹೊಂದಿದ್ದ ನಿಜಲಿಂಗಪ್ಪನವರು ಈ ಒಕ್ಕೂಟದ ವಿರುದ್ಧ ಪ್ರಚಾರಕ್ಕೆ ತೊಡಗಿದರು. ತಮ್ಮ ತತ್ವಗಳಿಗೆ ಬದ್ಧವಾಗಿ ಆ ಬಗ್ಗೆ ಬಹಿರಂಗವಾಗಿ ಕಾರ್ಯನಿರ್ವಹಿಸುತ್ತಿದ್ದ ಅವರು, ಇಂಥದೊಂದು ಒಕ್ಕೂಟದ ರಚನೆಗೆ ತಮ್ಮ ಅನುಮತಿ ನೀಡಿದ್ದರೆನ್ನಲಾದ ಆಗಿನ ಕಾಂಗ್ರೆಸ್ ಅಧ್ಯಕ್ಷರಾದ ಆಚಾರ್ಯ ಕೃಪಲಾನಿ ಅವರನ್ನು ಕಂಡು ಭಾರತವನ್ನು ಇಬ್ಭಾಗ ಮಾಡಲು ಹೊರಟಿದ್ದೀರಾ ಎಂದು ಪ್ರಶ್ನಿಸಿದರು! ಕೃಪಲಾನಿ ಸುಮ್ಮನೆ ನೆಹರೂ ಕಡೆ ಕೈತೋರಿಸಿದರು ಮತ್ತು ಅವರು ಎಂದಿನಂತೆ ಸರ್ದಾರ್ ಪಟೇಲರ ಕಡೆ ಕಣ್ಣು ಹೊರಳಿಸಿದರು! ಈ ಪ್ರಯತ್ನದ ಪರಿಣಾಮಗಳನ್ನು ತಕ್ಷಣವೇ ಗ್ರಹಿಸಿದ ಪಟೇಲ್ ಅವರು ಇದರ ವಿರುದ್ಧ ಎಲ್ಲ ರಾಜ್ಯಗಳಲ್ಲಿ ಸತ್ಯಾಗ್ರಹ ಆರಂಭಿಸಲು ನಾಯಕತ್ವ ವಹಿಸುವಂತೆ ನಿಜಲಿಂಗಪ್ಪನವರನ್ನು ಕೇಳಿಕೊಂಡು ಉಳಿದುದನ್ನು ಸರ್ದಾರ್ ಆದ ತಾವು ನೋಡಿಕೊಳ್ಳುವುದಾಗಿ ಆಶ್ವಾಸನೆಯಿತ್ತರು. ನಿಜಲಿಂಗಪ್ಪನವರ ಕಾರ್ಯಕ್ಕಾಗಿ ಅವರ ಬೆನ್ನು ತಟ್ಟಿದರು. ಮುನಶಿ ಅವರನ್ನು ಕಂಡು ಪ್ರತಿಭಟನೆಯನ್ನೂ ಸಲ್ಲಿಸಿದರು. ತಾವು ಈ ಸಮಸ್ಯೆಯನ್ನು ಒಂದು ತಾಂತ್ರಿಕ ಪ್ರಶ್ನೆಯಾಗಿ ಮಾತ್ರ ನೋಡಿ ಒಬ್ಬ ಸಂವಿಧಾನತಜ್ಞ ವಕೀಲರಾಗಿ ಮಾತ್ರ ಪರಿಶೀಲನೆಯನ್ನು ಮಾಡಿದುದಾಗಿ ಮುನಶಿ ವಿವರಿಸಿದರು. ಈ ಕೆಲಸಕ್ಕಾಗಿ ತಮಗೆ ಮೂವತ್ತು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆಂದೂ, ಆದರೆ ತಾವು ಕಾಂಗ್ರೆಸ್‌ನ ಒಬ್ಬ ಸೈನಿಕನಾಗಿ ನಿಜಲಿಂಗಪ್ಪನವರು ತಮ್ಮ ರಾಜ್ಯದಲ್ಲಿ ಸತ್ಯಾಗ್ರಹ ಆರಂಭಿಸಿದರೆ ತಾವು ಅವರೊಡನೆ

ಸಹಕರಿಸುವುದಾಗಿಯೂ ಹೇಳಿದರು! ಇದು ಬಹಳ ಜನರಿಗೆ ಗೊತ್ತಿರದ ವಿಷಯ, ಈ ವಿಷಯದಲ್ಲಿ ನಿಜಲಿಂಗಪ್ಪನವರು ವಹಿಸಿದ ಪಾತ್ರವು ಭಾಷಾವಾರು ಪ್ರಾಂತಗಳ ರಚನೆಯಲ್ಲಿ ತುಂಬ ಮಹತ್ವದ್ದು, ಭಾರತದ ಪ್ರಜಾಪ್ರಭುತ್ವ ಹಾಗೂ ಒಕ್ಕೂಟದ ಅದೃಷ್ಟದಿಂದಾಗಿ, ನಿಜಲಿಂಗಪ್ಪನವರ ಪ್ರತಿಭಟನೆಯು ಹುಟ್ಟುವ ಮೊದಲೇ ಈ ಒಕ್ಕೂಟವನ್ನು ಕೊಂದಿತ್ತು!

ಅನಿರೀಕ್ಷಿತ ಬೆಳವಣಿಗೆಯಿಂದಾಗಿ ಮೊದಲು ಆಂಧ್ರ ರಾಜ್ಯ ರಚನೆಯನ್ನು ಲೋಕಸಭೆಯಲ್ಲಿ ೧೯೫೨ನೇ ಡಿಸೆಂಬರ್ ೧೯ ರಂದು ಘೋಷಿಸಲಾಯಿತು. ಆ ಬೆಳವಣಿಗೆಯೆಂದರೆ ಆಂಧ್ರಕ್ಕಾಗಿ ಒತ್ತಾಯಿಸಿ ಪೊಟ್ಟಿ ಶ್ರೀರಾಮುಲು ಕೈಗೊಂಡ ಆಮರಣಾಂತ ಉಪವಾಸ. ಐವತ್ತೆಂಟು ದಿನಗಳ ಉಪವಾಸದ ಬಳಿಕ ಶ್ರೀರಾಮುಲುಸತ್ತು ಆಂಧ್ರ ರಾಜ್ಯಕ್ಕಾಗಿ ಹುತಾತ್ಮರಾದರು. ಅದರಿಂದಾಗಿ, ಇಡೀ ತೆಲುಗು ಭಾಷಿಕ ಪ್ರದೇಶದ ಜನ ಒಂದು ರೀತಿಯಲ್ಲಿ ದಂಗೆಯೆದ್ದರು, ಊಹಾತೀತವಾದ ಹಿಂಸಾಚಾರಗಳು ನಡೆದವು, ಆಸ್ತಿಪಾಸ್ತಿ ಹಾನಿಯಾದವು. ಹಿಂಸೆಗೆ ಮಣಿಯುವುದಿಲ್ಲವೆಂದು ಹೇಳಿದರೂ ನೆಹರೂ ಕೊನೆಗೆ ಮಣಿಯಬೇಕಾಯಿತು. ಆದರೆ ಆಂಧ್ರದ ವ್ಯಾಪ್ತಿಯ ನಿರ್ಣಯದಲ್ಲಿ ಪಕ್ಕದ ಕರ್ನಾಟಕದ ಗಡಿಗಳೂ ತಳುಕುಹಾಕಿಕೊಂಡಿದ್ದವು. ಅದರಲ್ಲಿ ಅತ್ಯಂತ ಪ್ರಮುಖ ವಾದುದೆಂದರೆ ಬಳ್ಳಾರಿ ಜಿಲ್ಲೆಯದು, ಅದನ್ನು ರಚನೆಯಾಗಲಿರುವ ಆಂಧ್ರದಲ್ಲಿ ಸೇರಿಸಬೇಕೇ ಎಂಬ ಪ್ರಶ್ನೆ. ಈ ವಿಷಯದಲ್ಲಿ ತೀರ್ಮಾನ ಕೈಗೊಳ್ಳಲು ನೇಮಕಗೊಂಡಿದ್ದ ವಾಂಛೂ ಏಕಸದಸ್ಯ ಆಯೋಗವು ಹೆಚ್ಚು ಕನ್ನಡ ಭಾಷಿಕರಿರುವ ಈ ಜಿಲ್ಲೆಯ ಏಳು ತಾಲ್ಲೂಕುಗಳನ್ನಷ್ಟೇ ಕರ್ನಾಟಕ ರೂಪುಗೊಳ್ಳುವವರೆಗೂ ಆಂಧ್ರದಲ್ಲಿ ಸೇರಿಸಬೇಕೆಂದು ನಿರ್ಣಯವಿತ್ತಿತು. ಅಂದರೆ, ಈ ವಿಷಯವನ್ನು ಕರ್ನಾಟಕ ರಚನೆಯ ಕಾಲದಲ್ಲಿ ಪುನರ್ ಪರಿಶೀಲಿಸಲು ಅವಕಾಶವಿರುವಂತಾಯಿತು. ೧೯೫೩ನೇ ಜನವರಿ ೧೨ ರಂದು, ಕರ್ನಾಟಕ ಏಕೀಕರಣದ ದೃಢ ಪ್ರತಿಪಾದಕರಾದ ನಿಜಲಿಂಗಪ್ಪನವರು ಒಂದು ಗಂಟೆಯ ಕಾಲ ಆವೇಶದಿಂದ ಈ ವಿಷಯದಲ್ಲಿ ಕರ್ನಾಟಕದ ಪರ ವಾದ ಮಾಡಿದರು. ಕೇಂದ್ರ ಸರ್ಕಾರ ಹಾಗೂ ರಾಷ್ಟ್ರೀಯ ಕಾಂಗ್ರೆಸ್ ನಾಯಕತ್ವದ, ಅದರಲ್ಲೂ ನೆಹರೂ ಅವರ, ಅನಿಶ್ಚಿತ ಧೋರಣೆಯು ನಿಜಲಿಂಗಪ್ಪನವರ ಮನಸ್ಸನ್ನು ಹದಗೆಡಿಸಿತು; ಇದನ್ನು ೧೯೫೩ನೇ ಜನವರಿ ೧೫ ರಂದು ಅವರು ಬರೆದಿರುವ ದಿನಚರಿಯಿಂದ ತಿಳಿಯ ಬಹುದು. ಇಡೀ ನಾಯಕತ್ವವೇ ದೇಶದ ವಾಸ್ತವಗಳನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲವಾಗಿದೆ. ಅದಕ್ಕೆ ಕಾರಣ ವಯಸ್ಸಿನಿಂದಾಗಿ ಉಂಟಾಗಿರುವ ಮನೋದೌರ್ಬಲ್ಯ ಎಂದು ಬರೆದಿದ್ದಾರೆ! ರಾಜಾಡಳಿತದ ಹೈದರಾಬಾದ್‌ನ ನಿಜ಼ಾಮ್ ರಾಜ್ಯವನ್ನು ಭಾಷಾವಾರು ಆಧಾರದ ಮೇಲೆ ಒಡೆಯಬಾರದೆಂಬ ನೆಹರೂ ಅವರ ನಿಲವು ಮೌಲಾನಾ

ಆಜ಼ಾದ್ ಅವರನ್ನು ಬಿಟ್ಟರೆ ಬೇರಾರಿಗೂ ಸರಿ ಕಾಣಲಿಲ್ಲ. ನೆಹರೂ ಅವರಿಗೆ ಬಳಲಿಕೆ, ಅದರಿಂದಾಗಿ ಅವರ ಸಮಚಿತ್ತತೆ ಕದಡಿದೆ ಎಂದೂ, ಅವರು ಭಟ್ಟಂಗಿಗಳ ಪಡೆಯ ಕೈಗೊಂಬೆಯಾಗಿಬಿಟ್ಟಿದ್ದಾರೆ ಎಂದೂ ಅವರು ಆರೋಪಿಸಿದರು! ನೆಹರೂ ಅವರು ಹೊಗಳಿಕೆಗೆ ಬಲಿಯಾಗುವ ಪರಿ ಹಾಗೂ ಜನರನ್ನು ಸರಿಯಾಗಿ ಅಳೆಯುವಲ್ಲಿನ ವೈಫಲ್ಯದ ಬಗ್ಗೆ ವಿಷಾದಿಸಿದರು. ನಿಜಲಿಂಗಪ್ಪನವರು ಕೆಲವೇಳೆ ದುರ್ಬಲಗೊಳ್ಳುತ್ತಾರೆ ಎಂದು ಪರಿಗಣಿಸಲಾಗುತ್ತದೆ, ಆದರೆ ಸತ್ಯವೆಂದರೆ ಅವರ ಸಹಜ ಸೌಜನ್ಯ ಮತ್ತು ಸಜ್ಜನಿಕೆಗಳನ್ನು ದೌರ್ಬಲ್ಯವೆಂದು ತಪ್ಪು ತಿಳಿದಿರುವುದು. ಹೈದರಾಬಾದ್ ಪ್ರಕರಣವು ತೋರಿಸಿದಂತೆ, ದೇಶದ ಅತ್ಯಂತ ಪ್ರಬಲ ವ್ಯಕ್ತಿಯಾದ ದೇಶದ ಪ್ರಧಾನ ಮಂತ್ರಿ ನೆಹರೂ ವಿರುದ್ಧ ಅವರು ಗಟ್ಟಿ ನಿಲವನ್ನು ಪ್ರದರ್ಶಿಸಿದರು. ದಾಸಪ್ಪನವರು ಯಾವುದೇ ವಿರೋಧ ವ್ಯಕಪಡಿಸದೆ ವಾಸ್ತವದಲ್ಲಿ ನೆಹರೂ ಹಾದಿಯಲ್ಲೇ ಹೋಗುವುದನ್ನೂ ಅವರು ವಿಷಾದದಿಂದ ಗಮನಿಸಿದರು; ಮಲ್ಯ ಅವರು ಏಕೀಕರಣವನ್ನು ಮುಂಬಯಿ ಕರ್ನಾಟಕದ ಎರಡು ಜಿಲ್ಲೆಗಳ ಬೇಡಿಕೆ ಎಂಬ ಮಟ್ಟಕ್ಕಿಳಿಸಿ ಮತ್ತಷ್ಟು ಹೀನಾಯವಾಗಿ ವರ್ತಿಸಿದ್ದಾರೆ ಎಂದರು! ಈಗ ಹಿಂದಿರುಗಿ ನೋಡಿದರೆ, ನಿಜಲಿಂಗಪ್ಪನವರು ಏಕಾಂಗಿಗಳಾಗಿ ಕರ್ನಾಟಕದ ಪರವಾದ ತಮ್ಮ ಹೋರಾಟವನ್ನು ಕೇಂದ್ರ ನಾಯಕತ್ವದ ಶತತ್ವಕ್ಕೆ ವಿರುದ್ಧವಾಗಿ ನಡೆಸಿದರೆಂಬಂತೆ ತೋರುತ್ತದೆ. ಆದರೆ, ಹಳೆಯ ಮೈಸೂರಿಗೆ ವಿವಿಧ ಕನ್ನಡ ಪ್ರದೇಶಗಳನ್ನು ಸೇರಿಸುವ ಮೂಲಕ ಏಕೀಕೃತ ಕರ್ನಾಟಕವನ್ನು ರಚಿಸಬೇಕೆಂದು ಹನುಮಂತಯ್ಯನವರು ಬೆಂಬಲ ವ್ಯಕ್ತಪಡಿಸಿದುದು ನಿಜಲಿಂಗಪ್ಪನವರಿಗೆ ಸಮಾಧಾನ ತಂದಿತು.

ಬಳ್ಳಾರಿಯನ್ನು ಕರ್ನಾಟಕದಲ್ಲಿ ಉಳಿಸಿಕೊಳ್ಳಬೇಕೆಂದು ನಡೆದ ಹೋರಾಟದಿಂದ ನಿಜಲಿಂಗಪ್ಪನವರು ಎಂಥ ದೃಢತೆ ಹಾಗೂ ಬದ್ಧತೆಗಳಿಂದ ಕರ್ನಾಟಕದ ಹಿತಾಸಕ್ತಿಯನ್ನು ಎತ್ತಿಹಿಡಿದರು ಎಂಬುದು ವ್ಯಕ್ತವಾಗುತ್ತದೆ. ೧೯೫೩ನೇ ಜನವರಿ ೨೮ ರಂದು, ಕೆ. ಎಸ್. ಹೆಗಡೆ ಅವರಂತಹ ಬೆಂಬಲಿಗರೊಡನೆ ನ್ಯಾಯಮೂರ್ತಿ ವಾಂಛೂ ಅವರೊಡನೆ ನಡೆಸಿದ ಎರಡನೆಯ ಸುತ್ತಿನ ಮಾತುಕತೆಯಲ್ಲಿ ನಿಜಲಿಂಗಪ್ಪನವರು ರಚನೆಯಾಗಲಿರುವ ಆಂಧ್ರದಲ್ಲಿ ಬಳ್ಳಾರಿ ಜಿಲ್ಲೆಯನ್ನು ಸೇರಿಸುವುದರ ವಿರುದ್ಧ ಬಲವಾಗಿ ಪ್ರತಿಪಾದಿಸಿದರು. ೧೯೫೩ನೇ ಮಾರ್ಚ್ ೧೧ ರಂದು ನಿಜಲಿಂಗಪ್ಪನವರು ನೆಹರೂ ಅವರಿಗೆ ಪತ್ರವೊಂದನ್ನು ಬರೆದು, ಬಳ್ಳಾರಿ ಜಿಲ್ಲೆ ಹಾಗೂ ಮಡಕಸಿರ ತಾಲ್ಲೂಕುಗಳನ್ನು ಮೈಸೂರು ರಾಜ್ಯಕ್ಕೆ ಸೇರಿಸಬೇಕೆಂದು ಒತ್ತಾಯಿಸಿದರು. ಅಧಿಕೃತವಾಗಿ ಆಂಧ್ರವು ಘೋಷಿತವಾದಾಗ, ಅದರಲ್ಲಿ ಬಳ್ಳಾರಿ ಜಿಲ್ಲೆಯ ಮೂರು ತಾಲ್ಲೂಕುಗಳನ್ನು – ಆದೋನಿ, ಆಲೂರು ಮತ್ತು ರಾಯದುರ್ಗ – ಸೇರಿಸಲಾಗಿತ್ತು, ಅದಕ್ಕೂ ಮಿಗಿಲಾಗಿ

ಬಳ್ಳಾರಿ ನಗರವನ್ನೂ. ಕರ್ನಾಟಕ ರಚನೆಯಾಗದೆ ಆಂಧ್ರ ಅಸ್ತಿತ್ವಕ್ಕೆ ಬಂದುದು ಹಾಗೂ ಬಳ್ಳಾರಿ ನಗರವನ್ನು ಆಂಧ್ರದಲ್ಲಿ ಸೇರಿಸಿದ್ದು ಕನ್ನಡಿಗರನ್ನು ಕೆರಳಿಸಿತು. ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡು ತಾಲ್ಲೂಕಿನ ನಾರಾಯಣ ಪೈ ಎಂಬುವವರು ಉಪವಾಸ ಕೈಗೊಂಡು ಇದನ್ನು ಪ್ರತಿಭಟಿಸಿದರು. ಬಳ್ಳಾರಿಯ ಜನ ಹರತಾಳ ಆಚರಿಸಿದರು, ನಗರದ ಜನಜೀವನ ಅಸ್ತವ್ಯಸ್ತಗೊಂಡಿತು. ಬಹು ಮುಖ್ಯವಾದ ಘಟನೆಯೆಂದರೆ, ಹುಬ್ಬಳ್ಳಿಯ ಬಳಿಯ ಅದರಗುಂಚಿ ಎಂಬ ಹಳ್ಳಿಯ ಶಂಕರೇಗೌಡರು ಕರ್ನಾಟಕದ ಪರವಾಗಿ ಆಮರಣಾಂತ ಉಪವಾಸ ಕೈಗೊಂಡಿದ್ದು. ಪರಿಸ್ಥಿತಿ ಎಷ್ಟು ಗಂಭೀರ ಸ್ಥಿತಿಯನ್ನು ತಲುಪಿತೆಂದರೆ, ಪರಿಸ್ಥಿತಿಯ ಅಧ್ಯಯನ ನಡೆಸಲು ೧೯೫೩ನೇ ಏಪ್ರಿಲ್ ೧೩ ರಂದು ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಕೆಪಿಸಿಸಿ ಸಭೆ ನಡೆಸಿತು. ಪ್ರಧಾನ ಮಂತ್ರಿಯವರ ಧೋರಣೆ ಹಾಗೂ ಕಾರ್ಯಗಳ ವಿರುದ್ಧ ಕರ್ನಾಟಕದ ವಿವಿಧ ಭಾಗಗಳಿಂದ ಬಂದ ಜನರು ಹುಬ್ಬಳ್ಳಿಯಲ್ಲಿ ಸೇರಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು. ಕ್ರೋಧಭರಿತ ಜನಸಂದಣಿಯು ಕಾನೂನು ವ್ಯವಸ್ಥೆಯನ್ನು ಛಿದ್ರಗೊಳಿಸಿತು. ಪರಿಸ್ಥಿತಿ ವಿಕೋಪಕ್ಕೆ ಹೋಗಿ ಜನರನ್ನು ಚದುರಿಸಲು ಪೊಲೀಸರು ಗುಂಡು ಹಾರಿಸಬೇಕಾಯಿತು. ೧೯೫೪ ರೊಳಗೆ ಕರ್ನಾಟಕ ರಚನೆಯಾಗಬೇಕೆಂದೂ, ಪಿಸಿಸಿಯ ಈ ಬೇಡಿಕೆ ನೆರವೇರದಿದ್ದರೆ ಇತರ ರಾಜ್ಯಗಳ ಕಾಂಗ್ರೆಸ್‌ನ ಶಾಸಕರೂ ಪಾರ್ಲಿಮೆಂಟ್ ಸದಸ್ಯರೂ ರಾಜೀನಾಮೆ ಸಲ್ಲಿಸುವರೆಂದೂ ಎಚ್ಚರಿಕೆ ನೀಡುವ ನಿರ್ಣಯವನ್ನು ಕೆಪಿಸಿಸಿ ಕೈಗೊಂಡಿತು. ಜೊತೆಯಲ್ಲಿ ತಮ್ಮ ಉಪವಾಸನ್ನು ಕೈಬಿಡುವಂತೆ ಶಂಕರೇಗೌಡರಿಗೆ ಮನವಿ ಮಾಡಿಕೊಂಡಿತು. ೧೯೫೩ನೇ ಮೇ ೨ ರಂದು ನಿಜಲಿಂಗಪ್ಪನವರು ಬಳ್ಳಾರಿಗೆ ಭೇಟಿ ಕೊಟ್ಟಾಗ ಇಡೀ ನಗರವು ಆಕ್ರೋಶ ಮತ್ತು ಹತಾಶೆಗಳಿಂದ ಕುದಿಯುತ್ತಿದ್ದುದು ಕಾಣಿಸಿತು. ಅವರಿಗೆ ಅದ್ಧೂರಿ ಸ್ವಾಗತ ನೀಡಿ ಅವರನ್ನು ನಗರದ ಸುತ್ತ ವರ್ಣರಂಜಿತ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು. ಅದನ್ನು ತೆಲುಗು ಶಕ್ತಿಗಳು ಕೆಡಿಸಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಬಳ್ಳಾರಿಯ ಕುರಿತಾದ ಈ ಪ್ರತಿಭಟನೆಗಳಿಂದಾಗಿ, ಕೊನೆಗೆ ಈ ವಿಷಯದ ಪುನರ್‌ಪರಿಶೀಲನೆಗಾಗಿ ನ್ಯಾಯಮೂರ್ತಿ ಎಲ್.ಎಸ್. ಮಿಶ್ರಾ ಅವರನ್ನೊಳಗೊಂಡ ಸಮಿತಿಯನ್ನು ರಚಿಸಲು ಕೇಂದ್ರವು ತೀರ್ಮಾನಿಸುವಂತೆ ಆಯಿತು. ೧೯೫೩ ನೇ ಮೇ ೫ ರಂದು ನಿಜಲಿಂಗಪ್ಪನವರು ನ್ಯಾಯಮೂರ್ತಿ ಮಿಶ್ರಾ ಅವರನ್ನು ಭೇಟಿ ಮಾಡಿ, ಈ ವಿಷಯದ ಬಗ್ಗೆ ಕೂಲಂಕಷವಾಗಿ ಮಾತಿನ ವಿವರಣೆ ನೀಡಿ ಕೊನೆಗೆ ಒಂದು ಮನವಿಪತ್ರವನ್ನು ಸಲ್ಲಿಸಿದರು. ಕೊನೆಗೂ, ಬಳ್ಳಾರಿ ಜಿಲ್ಲೆಯನ್ನು ಮೈಸೂರು ರಾಜ್ಯದಲ್ಲಿ ಸೇರಸಿಬೇಕೆಂಬ ತಮ್ಮ ತರ್ಕಬದ್ಧ ವಾದದಿಂದಾಗಿ ನಿಜಲಿಂಗಪ್ಪನವರು ನ್ಯಾಯಮೂರ್ತಿ ಮಿಶ್ರಾ ಅವರ ಮನವೊಲಿಸಲು ಸಾಧ್ಯವಾಯಿತು.

ಮುಸ್ಲಿಂ ಸಮುದಾಯವೂ ಈ ಕುರಿತು ಒಮ್ಮತದ ಒಪ್ಪಿಗೆ ಸೂಚಿಸಿತು. ಈ ಕುರಿತು ಮಿಶ್ರಾ ಅವರ ಶಿಫಾರಸನ್ನು ಕೇಂದ್ರವೂ ಒಪ್ಪಿಕೊಂಡಿತು.

ಏಕೀಕರಣಕ್ಕೆ ಸಂಬಂಧಿಸಿದ್ದ ಪ್ರಮುಖ ಸಮಸ್ಯೆಯೆಂದರೆ ನೆರೆಹೊರೆಯ ರಾಜ್ಯಗಳ ಜೊತೆ ಹೊಂದಿದ್ದ ಗಡಿ ತಕರಾರುಗಳು. ಹೀಗಾಗಿ ಚಳವಳಿಯನ್ನು ಗಡಿಪ್ರದೇಶಗಳಲ್ಲಿ ಪ್ರಬಲವಾಗಿ ಸಂಘಟಿಸಬೇಕಾಗಿತ್ತು. ಹಳೆಯ ಮದರಾಸು ರಾಜ್ಯದಲ್ಲಿದ್ದ ನೀಲಗಿರಿಯ ಮೇಲಿನ ಕನ್ನಡಿಗರ ಹಕ್ಕು ಹಳೆಯದು, ಅದನ್ನು ಕರ್ನಾಟಕದೊಂದಿಗೆ ಸೇರಿಸ ಬೇಕೆಂಬುದು ಅವರ ಒತ್ತಾಯ. ಆ ಭಾಗದ ಬಡಗ ಸಮುದಾಯವನ್ನು ಕನ್ನಡ ನೆಲದೊಡನೆ ಸೇರಿಸಬೇಕೆಂದು ಒತ್ತಾಯಿಸಲು ನೀಲಗಿರಿಯ ಕರ್ನಾಟಕ ಸಂಘವು ೧೯೫೩ನೇ ಮೇ ೨೫ ರಂದು ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಏರ್ಪಡಿಸಿತು. ಆಗಿನ ಹಳೆಯ ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾದ ಕೆ. ಹನುಮಂತಯ್ಯನವರು ಆ ಸಮಾವೇಶವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಬಡಗರೇ ಒಂದು ಮನವಿ ಪತ್ರವನ್ನು ಸಲ್ಲಿಸಿ ತಮ್ಮನ್ನು ಕರ್ನಾಟಕದಲ್ಲಿ ವಿಲೀನಗೊಳಿಸ ಬೇಕೆಂದು ಕೇಳಿಕೊಂಡರು. ೧೯೫೩ರ ಆಗಸ್ಟ್ ೧೩ ರಂದು ದೆಹಲಿಯಲ್ಲಿ ನಡೆದ ಕಾಂಗ್ರೆಸ್ ಸಂಸದೀಯ ಪಕ್ಷದ ಸಭೆಯಲ್ಲಿ ಮಂಡಿತವಾದ ಆಂಧ್ರ ರಚನೆಯ ಮಸೂದೆ ಯನ್ನು ನಿಜಲಿಂಗಪ್ಪ ಸ್ವಾಗತಿಸಿದರು, ಇದರೊಡನೆ ಕರ್ನಾಟಕ ರಚನೆಯ ಮಸೂದೆಯೂ ಸೇರಿದ್ದರೆ ಆಗ ಸಂತಸವು ಇಮ್ಮಡಿಸುತ್ತಿತ್ತು ಎಂಬ ಮಾತನ್ನು ಸೇರಿಸಿದರು. ಆದೋನಿ, ಆಲೂರು ಹಾಗೂ ರಾಯದುರ್ಗಗಳು ಮತ್ತು ನೀಲಗಿರಿಗಳನ್ನು ಕರ್ನಾಟಕದಲ್ಲಿ ಸೇರಿಸಬೇಕೆಂದು ಆಧಾರಗಳೊಡನೆ ವಾದಿಸಿದರು.

ಈ ವಿಷಯವನ್ನು ದೂರವಿರಿಸುವುದಾಗಲೀ ಮುಂದೂಡುವುದಾಗಲೀ ಸಾಧ್ಯವಿಲ್ಲ ವೆಂಬುದನ್ನು ಮನಗಂಡ ನೆಹರೂ ಜನರ ಒತ್ತಾಯಕ್ಕೆ ಮಣಿದು, ಭಾಷಾವಾರು ಆಧಾರಿತ ರಾಜ್ಯ ರಚನೆಗಿರುವ ಸಮಸ್ಯೆಗಳನ್ನು ಕೂಲಂಕಷವಾಗಿ ಪರಿಶಿಲಿಸಿ ಸರ್ಕಾರಕ್ಕೆ ಶಿಫಾರಸುಗಳನ್ನು ಮಾಡಲು ಒಂದು ಆಯೋಗವನ್ನು ರಚಿಸುವುದಾಗಿ ಘೋಷಿಸಿದರು. ೧೯೫೫ರ ಮಧ್ಯಭಾಗದ ಹೊತ್ತಿಗೆ ಒಂದು ತಾತ್ಕಾಲಿಕ ವರದಿಯನ್ನು ಸಲ್ಲಿಸುವಂತೆ ಆಯೋಗವನ್ನು ಕೇಳಲಾಗುವುದೆಂದೂ ಅವರು ತಿಳಿಸಿದರು. ರಾಜ್ಯ ಪುನರ್ವಿಂಗಡಣಾ ಆಯೋಗ (ಎಸ್‌ಆರ್‌ಸಿ)ದ ಮುಖ್ಯಸ್ಥರಾಗಿ ಒರಿಸ್ಸಾದ ಆಗಿನ ರಾಜ್ಯಪಾಲರಾಗಿದ್ದ ಸೈಯದ್ ಫಝಲ್ ಅಲಿ ಅವರೂ, ಪಂಡಿತ್ ಎಚ್.ಎನ್. ಕುಂಝ್ರು ಅವರು ಸದಸ್ಯರು ಗಳಾಗಿಯೂ ನೇಮಕಗೊಂಡರು. ಈ ಘೋಷಣೆಗೆ ವ್ಯಾಪಕ ಸ್ವಾಗತ ದೊರೆಯಿತು. ೧೯೫೪ನೇ ಫೆಬ್ರವರಿ ೪ ರಂದು ಹುಬ್ಬಳ್ಳಿಯಲ್ಲಿ ನಡೆದ ಕಾಂಗ್ರೆಸ್ ಶಾಸಕರುಗಳ

ಸಭೆಯನ್ನು ಹನುಮಂತಯ್ಯನವರು ಉದ್ಘಾಟಿಸಿ ಮಾತನಾಡುತ್ತ ಎಸ್‌ಆರ್‌ಸಿಯ ರಚನೆಯನ್ನು ಸ್ವಾಗತಿಸಿ, ಹಳೆಯ ಮೈಸೂರು ಅದಕ್ಕೆ ಯಾವುದೇ ಬಗೆಯ ಅಡ್ಡಿಯಾಗುವುದಿಲ್ಲವೆಂಬ ಆಶ್ವಾಸನೆಯಿತ್ತರು. ಇಷ್ಟಾದರೂ, ಹಳೆಯ ಮೈಸೂರಿನ ಕೆಲವು ನಾಯಕರುಗಳು ಹಳೆಯ ಮೈಸೂರು ಮತ್ತು ಕೊಡಗು ಸೇರಿದ ಒಂದು ಕರ್ನಾಟಕ ಹಾಗೂ ಉಳಿದ ಹೈದರಾಬಾದ್, ಮದರಾಸು ಹಾಗೂ ಮುಂಬಯಿಯ ಕನ್ನಡ ಪ್ರದೇಶಗಳನ್ನೊಳಗೊಂಡ, ಮತ್ತೊಂದು – ಎರಡು ಕರ್ನಾಟಕಗಳ ಬಗ್ಗೆ ಪ್ರಚಾರ ಮಾಡಲು ತೊಡಗಿದರು. ಈ ರೀತಿಯಲ್ಲಿ ಏಕೀಕರಣ ಕುರಿತಾಗಿ ಹಳೆಯ ಮೈಸೂರು ನಾಯಕರಲ್ಲಿ ಸ್ಪಷ್ಟವಾಗಿ ಎರಡು ಬಣಗಳು ಸೃಷ್ಟಿಯಾದವು. ಆನಂತರ, ಎಸ್‌ಆರ್‌ಸಿಗೆ ಯಾವುದೇ ಮನವಿಯನ್ನು ಸಲ್ಲಿಸದಿರಲು ಮೈಸೂರು ಕಾಂಗ್ರೆಸ್ ಸಮಿತಿಯು ನಿರ್ಣಯಿಸಿತು. ಮೈಸೂರು ಕಾಂಗ್ರೆಸ್ ಹೊರತಾಗಿ, ಕನ್ನಡ ಭಾಗಗಳ ಎಲ್ಲ ಪ್ರಮುಖ ಸಂಘ ಸಂಸ್ಥೆಗಳು – ಕರ್ನಾಟಕ ಪ್ರಾಂತ ರಚನಾ ಸಮಾವೇಶ, ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್, ಕರ್ನಾಟಕ ಯುವಕ ಸಂಘ, ಪತ್ರಕರ್ತರ ಸಂಘ, ಕರ್ನಾಟಕ ಏಕೀಕರಣ ಸಂಘ, ಕರ್ನಾಟಕ ವಣಿಕ ಸಂಘ ಮತ್ತಿತರ ಕಾಂಗ್ರೆಸ್ಸೇತರ ರಾಜಕೀಯ ಪಕ್ಷಗಳೂ ಆಯೋಗಕ್ಕೆ ಕರ್ನಾಟಕ ರಚನೆಗೆ ಬೆಂಬಲ ವ್ಯಕ್ತಪಡಿಸಿ ಮನವಿಪತ್ರಗಳನ್ನು ಸಲ್ಲಸಿದವು. ಈ ಬಗೆಯಲ್ಲಿ ಅಭೂತಪೂರ್ವವೂ ವ್ಯಾಪಕವೂ ಆದ ಬೆಂಬಲ ದೊರೆಯಲು ಕಾರಣ ನಿಜಲಿಂಗಪ್ಪ ನವರ ಅವಿರತವಾದ ಮತ್ತು ದಣಿವರಿಯದ ದುಡಿಮೆ.

ಆದರೆ, ಎಸ್‌ಆರ್‌ಸಿ ರಚನೆಯ ಹಿನ್ನೆಲೆಯಲ್ಲಿ ಮೈಸೂರು ರಾಜ್ಯ ಸರ್ಕಾರವು ಏಕೀಕರಣದ ಪ್ರಶ್ನೆಯನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಲು ಶೇಷಾದ್ರಿ ಆಯೋಗವನ್ನು ನೇಮಿಸಿತು. ಈ ಸಮಿತಿಯು ಈ ಪ್ರಶ್ನೆಗೆ ಸಂಬಂಧಿಸಿದ ಆಧಾರಗಳನ್ನು ಸಂಪೂರ್ಣವೂ ವ್ಯವಸ್ಥಿತವೂ ಆದ ರೀತಿಯಲ್ಲಿ ಸಂಗ್ರಹಿಸಿ, ಹಳೆಯ ಮೈಸೂರು ರಾಜ್ಯದ ಹೊರತಾಗಿ ಉಳಿದ ಕನ್ನಡ ಪ್ರದೇಶಗಳ ಸಮಾಜೋ–ಆರ್ಥಿಕ ಅಭಿವೃದ್ಧಿಯ ಮಟ್ಟಗಳನ್ನು ಪರಿಶೀಲಿಸಿ, ಏಕೀಕರಣವನ್ನು ಒಪ್ಪಿಕೊಂಡರೆ ಎದುರಿಸಬೇಕಾದ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿತು. ಈ ಸಮಸ್ಯೆಗಳ ನಿವಾರಣೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯೂ ಈ ಆಯೋಗವು ಸಲಹೆಗಳನ್ನು ನೀಡಿತು. ಈ ಆಯೋಗವು ಮೂಲತಃ ವಸ್ತುಸ್ಥಿತಿಯ ಅಧ್ಯಯನಕ್ಕಾಗಿ ನೇಮಕಗೊಂಡದ್ದು, ಹೀಗಾಗಿ ಅದು ಏಕೀಕರಣಗೊಂಡಲ್ಲಿ ಎದುರಿಸಬೇಕಾದ ಸಮಸ್ಯೆಗಳ ಸ್ವರೂಪವನ್ನು ಕುರಿತು ವಿವರಣೆ ನೀಡಿತು. ಈ ಮಧ್ಯೆ, ನಿಜಲಿಂಗಪ್ಪನವರು ಈ ಆಯೋಗದ ಮುಂದೆ ೧೯೫೪ರ ಮೇ ೭ ರಂದು ಹಾಜರಾಗಿ ಕನ್ನಡ ನಾಡಿನ ಏಕೀಕರಣದ ಪರವಾಗಿ ಪ್ರಬಲವಾದ ವಾದವನ್ನು ಮಂಡಿಸಿದರು. ಈ ಏಕೀಕರಣದ ಕಥನದ ಮುಂದಿನ ಮಹತ್ವದ ಹಂತವೆಂದರೆ, ಎಸ್‌ಆರ್‌ಸಿಗೆ

ಕರ್ನಾಟಕ ಏಕೀಕರಣದ ಪರವಾದ ಒಂದು ಸರ್ವಾನುಮತದ ಜ್ಞಾಪನ ಪತ್ರವನ್ನು ಸಲ್ಲಿಸಲು ಕರ್ನಾಟಕದಾದ್ಯಂತದ ಎಲ್ಲ ಪಕ್ಷಗಳ ಪ್ರತಿನಿಧಿಗಳ ಒಂದು ಬೃಹತ್ ಸಭೆಯು ದಾವಣಗೆರೆಯಲ್ಲಿ ೧೯೫೪ರ ಮೇ ೨೮ ಮತ್ತು ೨೯ ರಂದು ಎರಡು ದಿನಗಳು ನಡೆದದ್ದು. ಆ ಸಭೆಯು ಜ್ಞಾಪನಪತ್ರವನ್ನು ಸಲ್ಲಿಸಿ ಏಕೀಕರಣದ ಪರವಾದ ವಾದವನ್ನು ಮಂಡಿಸಲು ನಿಜಲಿಂಗಪ್ಪನವರಿಗೆ ಅಧಿಕಾರ ನೀಡಿತು. ಅಂದರೆ ನಿಜಲಿಂಗಪ್ಪನವರನ್ನು ಏಕೀಕರಣ ಉದ್ದೇಶದ ಪ್ರಶ್ನಾತೀತ ಸಂಕೇತ ಎಂಬುದನ್ನು ಸಾರ್ವತ್ರಿಕವಾಗಿ ಒಪ್ಪಿ ಕೊಂಡಂತಾಯಿತು. ನಿಜಲಿಂಗಪ್ಪನವರ ರಾಜಕೀಯ ಶೈಲಿಯೆಂದರೆ ಸ್ನೇಹಪರ ಹಾಗೂ ಕೊಟ್ಟು ತೆಗೆದುಕೊಳ್ಳುವ ಮನೋಭಾವದ ಹಿನ್ನೆಲೆಯಲ್ಲಿ ವಸ್ತುನಿಷ್ಠವಾಗಿಯೂ ನಿರ್ಭಾವುಕವಾಗಿಯೂ ಸಮಸ್ಯೆಗಳನ್ನು ಪರಿಶೀಲಿಸಬಲ್ಲ ರೀತಿ. ಪರಿಸ್ಥಿತಿ ಗಂಭಿರವಾಗಿ ದ್ದರೆ ಮಾತ್ರ ಅವರು ಆಕ್ರಮಣಶೀಲ ಶೈಲಿಯನ್ನು ಅನುಸರಿಸುತ್ತಿದ್ದರು. ತಮಗೆ ವಿಶಿಷ್ಟವಾದ ಶೈಲಿಯ ಕಾರಣದಿಂದಲೇ ನಿಜಲಿಂಗಪ್ಪನವರು ಗಡಿ ತಕರಾರುಗಳನ್ನು ಯಶಸ್ವಿಯಾಗಿ ಎದುರಿಸಲು, ಎಲ್ಲಕ್ಕಿಂತ ಮಿಗಿಲಾಗಿ, ಆಯೋಗದ ಮುಂದೆ ಕರ್ನಾಟಕ ಏಕೀಕರಣದ ಪರವಾದ ವಾದ ಮಂಡಿಸಲು ಸಾಧ್ಯವಾಯಿತು. ಆದರೆ ಕೇಂದ್ರ ಕಾಂಗ್ರೆಸ್ ನಾಯಕತ್ವದೊಡನೆ ವ್ಯವಹರಿಸುವಾಗ ಅವರಿಗೆ ಈ ಶೈಲಿಯನ್ನು ತ್ಯಜಿಸಿ ಹೆಚ್ಚು ಆಕ್ರಮಣಕಾರೀ ಶೈಲಿಯನ್ನು ಅನುಸರಿಸುವ ಅನಿವಾರ್ಯತೆಯುಂಟಾಯಿತು! ಉದಾ ಹರಣೆ ಕೊಡಬೇಕೆಂದರೆ, ೧೯೫೬ನೇ ಜನವರಿ ೨೯ ರಂದು ಅವರು ನೆಹರೂ ಅವರಿಗೆ ಬರೆದ ಪತ್ರದಲ್ಲಿ ಬಳ್ಳಾರಿಯ ಪ್ರಶ್ನೆಯು ತೀರ ಗಂಭೀರವಾದ್ದೆಂದೂ ಆ ಬಗ್ಗೆ ಉದಾಸೀನ ಮನೋಭಾವ ಸಲ್ಲದೆಂದೂ ಎಚ್ಚರಿಸಿದರು.

ಕಾರ್ಯ ನಿರ್ವಹಣೆ ಮಾಡಿದ್ದೇ ಆದರೆ ಎಸ್‌ಆರ್‌ಸಿಯು ಕೊನೆಗೆ ಏನು ತೀರ್ಮಾನ ಕೊಡುವುದೆಂಬ ಬಗ್ಗೆ ಅನೇಕ ಊಹಾಪೋಹಗಳು ಗಾಳಿಯಲ್ಲಿ ತೇಲುತ್ತಿ ದ್ದವು. ನಿಜಲಿಂಗಪ್ಪನವರನ್ನು ಕಂಗೆಡಿಸಿದ ಒಂದು ವದಂತಿಯೆಂದರೆ ಇಡೀ ದಕ್ಷಿಣ ಭಾರತವನ್ನು ಒಗ್ಗೂಡಿಸಿ ಒಂದೇ ರಾಜ್ಯವನ್ನು ನಿರ್ಮಿಸಲು ಆಯೋಗವು ಶಿಫಾರಸು ಮಾಡಲು ಆಲೋಚಿಸುತ್ತಿದೆ ಎಂಬುದು. ತಕ್ಷಣವೇ ಅವರು ಕಾರ್ಯಪ್ರವೃತ್ತರಾದರು; ಈ ವಿಷಯವನ್ನು ಚರ್ಚಿಸಲು ದಕ್ಷಿದ ಪ್ರಮುಖ ನಾಯಕರುಗಳಾದ ಕಾಮರಾಜ ನಾಡಾರ್ ಅಂತಹವರ ಒಂದು ಸಭೆಯನ್ನು ಕರೆದರು. ಇದರ ಫಲಶ್ರುತಿಯೆಂದರೆ ಅವರಾರೂ ಆಯೋಗದ ಈ ನಿಲವನ್ನು ಬೆಂಬಲಿಸುವಂಥವರಾಗಿರಲಿಲ್ಲ. ಕೊನೆಗೆ ಇದು ಕೇವಲ ವದಂತಿಯೇ ವಿನಾ ಅದಕ್ಕೆ ಆಧಾರವಿಲ್ಲ ಎಂಬುದನ್ನು ಕಂಡುಕೊಂಡರು. ಅವರು ಬೆಂಗಳೂರಿನ ಜಯದೇವ ವಿದ್ಯಾರ್ಥಿನಿಲಯದಲ್ಲಿ ೧೯೫೬ನೇ ಜನವರಿ ೨ ರಂದು ನಡೆದ ಗಡಿನಾಡ ಕನ್ನಡಿಗರ ಸಮಾವೇಶದ ಉದ್ಘಾಟನಾ ಭಾಷಣದಲ್ಲಿ ಈ

ಬಗ್ಗೆ ಪ್ರಸ್ತಾಪಿಸಿದರು. ನಾಲ್ಕು ನೂರು ಪ್ರತಿನಿಧಿಗಳು ಸೇರಿದ್ದ ಬೃಹತ್ ಸಮಾವೇಶ ಅದು, ಅದರಲ್ಲಿ ಕೆಲವರು ದಕ್ಷಿಣ ಭಾರತವನ್ನೆಲ್ಲ ಒಂದು ರಾಜ್ಯವಾಗಿ ಮಾಡುವ ವಿಚಾರವನ್ನು ಬಹಿರಂಗವಾಗಿ ಖಂಡಿಸಿದರು. ಏಕೀಕರಣವನ್ನು ತಡೆಯಲು ನೆಹರೂ ಅವರು ಹುನ್ನಾರವಿದು ಎಂದು ಬಗೆದ ಪ್ರತಿನಿಧಿಗಳು ಅವರನ್ನು ನೇರ ಮಾತುಗಳಲ್ಲಿ ಖಂಡಿಸಿದರು. ಕಾಕತಾಳೀಯವಾಗಿ ಬೇರಾವುದೋ ಕಾರಣದಿಂದ ನೆಹರೂ ಆ ಹೊತ್ತಿಗೆ ಬೆಂಗಳೂರಿನಲ್ಲಿಯೇ ಇದ್ದರು. ಅಂಥದೊಂದು ಸಂಯುಕ್ತ ರಾಜ್ಯ ಸ್ಥಾಪನೆಯ ಕುರಿತು ಚರ್ಚಿಸಲು ಸಭೆಯೊಂದನ್ನು ಆಯೋಜಿಸಿದ ಅವರು ಮೈಸೂರು, ಮದರಾಸು ಹಾಗೂ ಆಂಧ್ರಗಳ ಮುಖ್ಯಮಂತ್ರಿಗಳನ್ನು ಆಹ್ವಾನಿಸಿದರು. ಇದರಿಂದ ನೆಹರೂ ಅವರೇ ಈ ಕುಚೇಷ್ಟೆಯ ಹಿಂದಿದ್ದವರು ಎಂಬುದು ಸಾಬೀತಾಯಿತು! ಇಂಥ ಸಂಯುಕ್ತ ರಾಜ್ಯದ ಆಲೋಚನೆಯ ವಿರುದ್ಧ ತಮ್ಮ ದೇಹದಲ್ಲಿ ಕೊನೆಯ ಹನಿ ರಕ್ತವಿರುವ ತನಕ ಹೋರಾಡುವುದಾಗಿ ನಿಜಲಿಂಗಪ್ಪನವರು ಮಾಡಿದ್ದ ಪ್ರತಿಜ್ಞೆ ಅವರ ಕಿವಿಗೂ ಬಿದ್ದಂತೆ ಕಾಣುತ್ತದೆ. ಇದರಿಂದ ನಿಜಲಿಂಗಪ್ಪನವರೇನೂ ವಿಚಲಿತರಾಗಲಿಲ್ಲ. ದಕ್ಷಿಣ ಕನ್ನಡ ಹಾಗೂ ಧಾರವಾಡದ ಕೆಲವು ನಾಯಕರು ತಮ್ಮ ವಿರುದ್ಧ ನೆಹರೂ ಅವರ ಮನಸ್ಸನ್ನು ವಿಷಮಯಗೊಳಿಸಲು ಮಾಡುತ್ತಿದ್ದ ಪ್ರಯತ್ನ ಅವರಿಗೆ ತಿಳಿದಿತ್ತು. ಅವರಿಗೆ ಇವರನ್ನು ಕಂಡರೆ ಆಗದಿರಲು ಕಾರಣ ನಿಜಲಿಂಗಪ್ಪನವರು ಜನಾನುರಾಗದ ಬಗ್ಗೆ ಅವರಿಗಿದ್ದ ಹೊಟ್ಟೆಕಿಚ್ಚು. ಅವರ ಬಗ್ಗೆ ಅವರಿಗೆಲ್ಲ ಭಯವೂ ಇತ್ತು. ತಮ್ಮ ಮುಖ್ಯ ಶತ್ರುವನ್ನು ನೆಹರೂ ಅವರು ವಿರೋಧಿಸುವವರೆಗೂ ತಮ್ಮ ಸ್ಥಾನ ಭದ್ರವೆಂದು ಅವರೆಲ್ಲರೂ ಭಾವಿಸಿದ್ದರು! ನಿಜಲಿಂಗಪ್ಪನವರು ಸ್ಥಾನಕ್ಕೆ ಆಸೆಪಡುವವರಲ್ಲ, ಹೀಗಾಗಿ ತಮ್ಮ ಕ್ಷುಲ್ಲಕ ರಾಜಕಾರಣಕ್ಕೆ ಅವರು ಹೆದರುವವರಲ್ಲ ಎಂಬ ವಿಷಯವೂ ಅವರಿಗೆ ಮನವರಿಕೆಯಾಗಿತ್ತು. ನಿಜಲಿಂಗಪ್ಪನವರು ಭಾವಿಸಿದ್ದಂತೆ ದಕ್ಷಿಣ ಭಾರತವೆಂಬ ಸಂಯುಕ್ತ ರಾಜ್ಯದ ಆಲೋಚನೆ ನೆಹರೂ ಅವರ ಮನಸ್ಸಿನಲ್ಲಿರಲಿಲ್ಲ. ಅಲ್ಲದೆ, ನೆಹರೂ ಅವರೊಡನೆ ಬಳ್ಳಾರಿ ಪ್ರಶ್ನೆಯನ್ನು ಚರ್ಚಿಸಿದಾಗ ಅವರು ಸಂಯುಕ್ತ ರಾಜ್ಯದ ಪ್ರಸ್ತಾಪ ಮಾಡಲೇ ಇಲ್ಲ! ನಿಜಲಿಂಗಪ್ಪನವರಿಗೆ ಭಟ್ಟಂಗಿತನವಾಗಲೀ ತೋರಿಕೆಯ ನಿಷ್ಠೆಯಾಗಲೀ ಸರಿ ಹೋಗುತ್ತಿರಲಿಲ್ಲ. ಮಾರನೆಯ ಬೆಳಿಗ್ಗೆ ನೆಹರೂ ದೆಹಲಿಗೆ ತೆರಳಿದಾಗ, ಅವರನ್ನು ಬೀಳ್ಕೊಡಲು ವಿಮಾನ ನಿಲ್ದಾಣಕ್ಕೆ ಹೋಗಿದ್ದ ಸಮಯಸಾಧಕರೊಡನೆ ನಿಜಲಿಂಗಪ್ಪ ನವರು ಇರಲಿಲ್ಲ. ಭಟ್ಟಂಗಿತನದಿಂದ ಮರುಳಾಗುತ್ತಿದ್ದ ನೆಹರೂ ಅವರು ಈ ಕಾರಣ ದಿಂದ ನಿಜಲಿಂಗಪ್ಪನವರ ವಿರುದ್ಧ ಮನೋಭಾವ ತಾಳಿರಲೂ ಸಾಕು.

೧೯೫೫ನೇ ಇಸವಿ ಸೆಪ್ಟೆಂಬರ್ ೩೦ ರಂದು ಎಸ್‌ಆರ್‌ಸಿಯು ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ಈ ವಿಷಯವು ೧೯೫೬ನೇ ಫೆಬ್ರವರಿ ೧೦ ರಂದು

ಡಾ. ಕೆ. ಶಿವರಾಮ ಕಾರಂತರೊಂದಿಗೆ ಎಸ್ಸೆನ್

ಅಮೃತಸರದಲ್ಲಿ ನಡೆಯಲಿದ್ದ ಕಾಂಗ್ರೆಸ್ ಅಧಿವೇಶನದ ಚರ್ಚಾವಿಷಯವಾಯಿತು. ಚರ್ಚೆಯಲ್ಲಿ ದೇಶದ ಹಿತಾಸಕ್ತಿಯನ್ನು ಗಮನಿಸುವ ವಿಶಾಲ ಮನಸ್ಸಿಗಿಂತ ಸಂಕುಚಿತ ದೃಷ್ಟಿಕೋನವೇ ಪ್ರದರ್ಶಿತವಾಯಿತು. ಬಹು ಮಂದಿ ನಾಯಕರಿಗೆ ಮನಬಿಚ್ಚಿ ಮಾತ ನಾಡುವ ಧೈರ್ಯವಿರಲಿಲ್ಲ. ಹೀಗಾಗಿ ಇಡೀ ಅಧಿವೇಶನ ಏಕವ್ಯಕ್ತಿ ಪ್ರದರ್ಶನವಾಗು ವಂತಾಯಿತು. ಜನರು ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಹೇಳದೆ ಅಧಿಕಾರಶಾಹಿಯ ಜಾಡಿನಲ್ಲಿ ನಡೆಯುವ ಪ್ರವೃತ್ತಿಯ ಬಗ್ಗೆ ನಿಜಲಿಂಗಪ್ಪನವರು ೧೯೫೬ನೇ ಫೆಬ್ರವರಿ ೧೦ ರಂದು ಬರೆದ ತಮ್ಮ ದಿನಚರಿಯಯಲ್ಲಿ ವಿಷಾದ ವ್ಯಕ್ತಪಡಿಸಿದ್ದಾರೆ. ಇದರಿಂದ ದೇಶಕ್ಕೆ ಒಳಿತಾಗುವುದಿಲ್ಲವೆಂಬುದು ಅವರ ಚಿಂತೆ. ಈ ವರದಿಯ ಕುರಿತಾದ ಅಧಿಕೃತ ನಿಲುವಳಿಯನ್ನು ಬೆಂಬಲಿಸಲು ಜಗಜೀವನರಾಂ ಅವರನ್ನು ಕೇಳಿದಾಗ, ನಿಜಲಿಂಗಪ್ಪ ನವರು ಸುಮ್ಮನಿದ್ದರು, ಅದಕ್ಕೆ ಕಾರಣ ಅವರಿಗೆ ಇದರ ಫಲವೇನೆಂಬುದು ತಿಳಿದಿತ್ತು. ಎನ್.ವಿ. ಗಾಡ್ಗಿಲ್ ಅವರು ನಿಲುವಳಿಯನ್ನು ವಿರೋಧಿಸಿದಾಗ, ನೆಹರೂ, ಪಂತ್ ಮತ್ತಿತರ ಹಿರಿಯ ನಾಯಕರು ಅದನ್ನು ವಿರೋಧಿಸಿದರು. ಪ್ರಮುಖ ವಿಷಯವೆಂದರೆ ದ್ವಿಭಾಷಿಕ ರಾಜ್ಯಗಳ ರಚನೆಯ ಸಾಧ್ಯತೆ, ಅದನ್ನು ಮುನ್ನಡೆಸಲು ನಾಯಕರೆಲ್ಲ ಬಯಸಿದ್ದರು. ಚರ್ಚೆಯಲ್ಲಿ ಪ್ರಾದೇಶಿಕ ರಾಜಕೀಯ ಸ್ಪರ್ಧೆಯೂ ಮುಖ್ಯ ಪಾತ್ರ ವಹಿಸಿತ್ತು. ಮದರಾಸ್‌ನ ಸುಬ್ರಹ್ಮಣ್ಯಂ ಅವರು ದಕ್ಷಿಣ ಭಾರತವೆಂಬ ಸಂಯುಕ್ತ ರಾಜ್ಯ ಸ್ಥಾಪನೆಯನ್ನು ಬೆಂಬಲಿಸಿ ಮಾತನಾಡಿದ್ದು, ಅದರ ಪ್ರಬಲ ವಿರೋಧಿಗಳಾಗಿದ್ದ ಕಾಮರಾಜ ನಾಡಾರ್ ಅವರನ್ನು ಇರಿಸುಮುರಿಸುಗೊಳಿಸಲು! ದ್ವಿಭಾಷಿಕ ರಾಜ್ಯಗಳ ರಚನೆ ಕಾರ್ಯಸಾಧುವಲ್ಲವೆಂಬುದು ನಿಜಲಿಂಗಪ್ಪನವರಿಗೆ ಮನವರಿಕೆಯಾಗಿತ್ತು. ಸಾಮಾನ್ಯವಾಗಿ ಕಾಣಿಸಿದ ವ್ಯಕ್ತಿಪೂಜೆ ಅವರನ್ನು ದಿಕ್ಕೆಡಿಸಿತ್ತು. ಆನಂತರ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯು ೧೯೫೬ನೇ ಫೆಬ್ರವರಿ ೧೯ ರಂದು ಬೆಂಗಳೂರಿನಲ್ಲಿ ನಡೆದ ತನ್ನ ಸಭೆಯಲ್ಲಿ ದ್ವಿಭಾಷಿಕ ರಾಜ್ಯಗಳ ಕುರಿತು ಚರ್ಚಿಸಿತು. ಈ ಸೂಚನೆ ಏಕೀಕರಣವಿರೋಧಿಗಳ ಅಸ್ತ್ರವಾಯಿತು; ಅಂತಹವರಲ್ಲಿ ಎಚ್. ಕೆ. ವೀರಣ್ಣಗೌಡ, ಎಚ್.ಸಿ. ದಾಸಪ್ಪ ಮತ್ತು ಎಂ.ವಿ. ಕೃಷ್ಣಪ್ಪ ಅವರುಗಳು ಸೇರಿದ್ದರು. ಇದರ ಅಂತಿಮ ನಿರ್ಧಾರವನ್ನು ಕಾರ್ಯಕಾರಿ ಸಮಿತಿಗೆ ಒಪ್ಪಿಸಲು ಆ ಸಭೆ ನಿರ್ಣಯಿಸಿತು. ದ್ವಿಭಾಷಿಕ ರಾಜ್ಯರಚನೆ ಹಾಗೂ ದಕ್ಷಿಣ ಭಾರತ ಸಂಯುಕ್ತ ರಾಜ್ಯರಚನೆಯ ಯೋಚನೆಗಳನ್ನು ವಿರೋಧಿಸಲು ನಿಜಲಿಂಗಪ್ಪನವರೇ ಸೂಕ್ತ ವ್ಯಕ್ತಿಯೆಂದು ತೀರ್ಮಾನಿಸಿ ಅವರನ್ನು ಎಸ್‌ಆರ್‌ಸಿಯ ಸದಸ್ಯರಾಗಿದ್ದ ಪಣಿಕ್ಕರ್ ಆಹ್ವಾನಿಸಿದರು. ಜೊತೆಗೆ, ಕೇಂದ್ರವು ನಿರ್ವಹಿಸಲು ಕಷ್ಟಕರವಾಗಬಹುದೆಂಬ ಕಾರಣಕ್ಕಾಗಿ ದೊಡ್ಡ ರಾಜ್ಯಗಳ ಸ್ಥಾಪನೆಯ ವಿರೋಧವಾಗಿಯೂ ಅವರು ಚರ್ಚಿಸಿದರು. ಆದರೆ ನಿಜಲಿಂಗಪ್ಪನವರನ್ನು ದ್ವಿಭಾಷಿಕ

ಹಾಗೂ ಬಹುಭಾಷಿಕ ರಾಜ್ಯಗಳ ಭೂತಗಳು ಕಾಡುತ್ತಿದ್ದವು. ಕರ್ನಾಟಕ ರಚನೆಯ ಸಮಸ್ಯೆಯು ಜಾತಿಸಂಘರ್ಷದಿಂದ, ಅದರಲ್ಲಿಯೂ ಪ್ರಮುಖ ಸಮುದಾಯಗಳಾದ ಒಕ್ಕಲಿಗ ಮತ್ತು ಲಿಂಗಾಯತರ ತಿಕ್ಕಾಟದಿಂದಾಗಿ ಸಂಕೀರ್ಣಗೊಂಡಿತ್ತು. ಹೆಚ್ಚಿನ ವಿರೋಧವಿದ್ದುದು ಒಕ್ಕಲಿಗರಿಂದ, ಅವರಿಗೆ ಏಕೀಕರಣದ ಬಳಿಕ ಲಿಂಗಾಯತಪ್ರಧಾನ ಸರ್ಕಾರವನ್ನು ರಚಿಸುವ ಹುನ್ನಾರದ ಅನುಮಾನ. ಈ ವಿರೋಧವೂ ಅಲ್ಪವೂ ತಾತ್ಕಾಲಿಕವೂ ಆದುದೆಂದು ನಿಜಲಿಂಗಪ್ಪನವರಿಗೆ ನಂಬಿಕೆಯಿದ್ದರೂ, ಹಾಗೆಂದು ವಾದಿಸುತ್ತ ಬಂದಿದ್ದರೂ, ಅವರಿಗೆ ತಮ್ಮದು ಪಾಲುಗಾರಿಕೆಯೋ ಕೇವಲ ಆಶಾವಾದವೋ ಎಂಬ ಅನುಮಾನವೂ ಉಂಟಾಗುತ್ತಿತ್ತು. ೧೯೫೬ರ ಮಾರ್ಚಿ ೩ನೇ ತಾರೀಕಿನ ನಮೂದಿನಲ್ಲಿ ಅವರು ಸ್ವಾರಸ್ಯಕರ ವಿಷಯವೊಂದನ್ನು ದಾಖಲಿಸುತ್ತಾರೆ. ಪ್ರಾಯಶಃ ಕಡೂರಿನಿಂದ ಮೈಸೂರಿಗೆ ಪಯಣಿಸುತ್ತಿದ್ದ ಸಂದರ್ಭದಲ್ಲಿ ಎಂದು ಕಾಣುತ್ತದೆ, ಅವರೊಡನೆ ಶಿವರಾಮ ಕಾರಂತರೂ ಪ್ರಯಾಣಿಸುತ್ತಿದ್ದರು. ಸಹಜವಾಗಿಯೇ ಅವರ ಮಾತುಕತೆ ಭಾಷಾವಾರು ರಾಜ್ಯರಚನೆಯ ವಿಷಯದತ್ತ ಸರಿಯಿತು. ಪ್ರಭಾವೀ ಒಕ್ಕಲಿಗ ನಾಯಕರೊಬ್ಬರು ತಮ್ಮೊಡನೆ ಏಕೀಕರಣದ ವಿರುದ್ಧ ಹಾಗೂ ದಕ್ಷಿಣ ಭಾರತದ ಸಂಯುಕ್ತ ರಾಜ್ಯರಚನೆಯ ಪರವೂ ವಾದಿಸಿ, ಇದರಿಂದ ಲಿಂಗಾಯತರನ್ನು ಹದ್ದುಬಸ್ತಿನಲ್ಲಿಡಲು ಸಹಾಯಕವಾಗುವುದೆಂದು ವಾದಿಸಿದರೆಂಬುದನ್ನು ಸ್ವಲ್ಪ ಕೋಪದಿಂದಲೇ ಕಾರಂತರು ವಿವರಿಸಿದರು. ಅವರು ಇಂಥ ಸಂಕುಚಿತ ಮನೋಭಾವದ ವಿರುದ್ಧವಿದ್ದವರು. ಕೆಲದಿನಗಳ ಬಳಿಕ, ಆ ಹಿರಿಯ ಒಕ್ಕಲಿಗ ನಾಯಕರನ್ನು ನಿಜಲಿಂಗಪ್ಪನವರು ಬೆಂಗಳೂರಿನಲ್ಲಿ ಭೇಟಿಯಾದಾಗ, ಅವರು ಏಕೀಕರಣಕ್ಕೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು. ಅವರೆಂದರೆ ಸಾಹುಕಾರ್ ಚೆನ್ನಯ್ಯ ನವರು, ದೆಹಲಿಯ ಕೇಂದ್ರ ನಾಯಕತ್ವದ ಒತ್ತಡಕ್ಕೆ ಸಿಲುಕಿ ಅವರೇನಾದರೂ ತಮ್ಮ ನಿಲವನ್ನು ಬದಲಿಸಬಹುದೇ ಎಂಬ ಭಯ ನಿಜಲಿಂಗಪ್ಪನವರನ್ನು ಕಾಡಿಸಿತು.

೧೯೫೬ನೇ ಏಪ್ರಿಲ್ ೨೩ ರಂದು ಕೇಂದ್ರ ಗೃಹ ಸಚಿವ ಪಂತ್ ಅವರು ಎಸ್‌ಆರ್‌ಸಿಯ ವರದಿಯನ್ನು ಲೋಕಸಭೆಯಲ್ಲಿ ಮಂಡಿಸಿ, ಅದನ್ನು ಪರಿಶೀಲನೆಗಾಗಿ ಆಯ್ದ ಸಮಿತಿಗೆ ಒಪ್ಪಿಸಬೇಕೆಂದು ಸಲಹೆಯಿತ್ತರು. ಆ ಸಮಿತಿಯಲ್ಲಿ ಸಚಿವರು ನಿಜಲಿಂಗಪ್ಪನವರನ್ನೂ ಸೇರಿಸಿದ್ದರಲ್ಲಿ ಆಶ್ಚರ್ಯವೇನಿರಲಿಲ್ಲ. ಪ್ರಾಯಶಃ ಅಷ್ಟೇ ಆಶ್ಚರ್ಯಕಾರಿಯೆಂದರೆ, ಸಭಾಪತಿಗಳು ಸಮಿತಿಯ ಸದಸ್ಯರ ಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಿದಾಗ ಅದರಲ್ಲಿ ನಿಜಲಿಂಗಪ್ಪನವರ ಹೆಸರು ಇರಲಿಲ್ಲ. ಇದಕ್ಕೆ ತಮ್ಮ ಜನಪ್ರಿಯತೆ ಹಾಗೂ ಸ್ಥಾನಮಾನಗಳ ಬಗ್ಗೆ ಮತ್ಸರವಿದ್ದ ದಕ್ಷಿಣ ಕನ್ನಡದ ಒಬ್ಬ ಲೋಕಸಭಾ ಸದಸ್ಯರ ಕೈವಾಡ ಕಾರಣವಿರಬೇಕೆಂದು ನಿಜಲಿಂಗಪ್ಪನವರು ಸಂಶಯ ವ್ಯಕ್ತಪಡಿಸಿದರು.

ಆದರೆ, ಸದನದ ಮತ್ತೊಬ್ಬ ಸದಸ್ಯರಾದ ಸಿ.ಆರ್. ಬಸಪ್ಪವನರು ಈ ಪಟ್ಟಿಗೆ ಆಕ್ಷೇಪ ವ್ಯಕ್ತಪಡಿಸಿದಾಗ. ಗೃಹ ಸಚಿವರು ಪಟ್ಟಿಗೆ ನಿಜಲಿಂಗಪ್ಪನವರ ಹೆಸರನ್ನು ಸೇರಿಸಿದರು, ಸಭಾಪತಿಗಳು ಅಧಿಕೃತ ಪಟ್ಟಿಯಲ್ಲಿ ಅದನ್ನು ಪ್ರಕಟಿಸಿದರು. ಆ ಸಮಿತಿಯಲ್ಲಿ ನಿಜಲಿಂಗಪ್ಪ ನವರು ಬಳ್ಳಾರಿಯನ್ನು ಕರ್ನಾಟಕದಲ್ಲಿಯೂ ಮುಂಬಯಿಯನ್ನು ಮಹಾರಾಷ್ಟ್ರದಲ್ಲಿಯೂ ಸೇರಿಸಬೇಕೆಂದು ವಾದಿಸಿದರು. ಅಸಂಖ್ಯಾತ ಜ್ಞಾತ ಹಾಗೂ ಅಜ್ಞಾತ ಕರ್ನಾಟಕಪ್ರಿಯರ ಹಾಗೂ ನಿಜಲಿಂಗಪ್ಪನವರು ಕೇಂದ್ರ ಬಿಂದುವಾಗಿದ್ದ ಅನೇಕ ರಾಜಕೀಯ ಬದ್ಧ ನಾಯಕರ ಪ್ರಯತ್ನದಿಂದಾಗಿಯೂ, ಭಾಷಾವಾರು ಪ್ರಾಂತ ರಚನೆಗೆ ಇದ್ದ ದೇಶವ್ಯಾಪೀ ಬೆಂಬಲದ ಕಾರಣದಿಂದಾಗಿಯೂ ಏಕೀಕರಣವು ಅನಿವಾರ್ಯವೆಂಬಂತಾಯಿತು. ಅದರ ವಿರುದ್ಧವಾಗಿ ಕೆಲಸ ಮಾಡಿದ್ದವರೂ ಈಗ ಅನಿವಾರ್ಯವಾಗಿ ಕನ್ನಡ ನಾಡಿನ ಒಗ್ಗೂಡುವಿಕೆಯನ್ನು ಒಪ್ಪಿಕೊಳ್ಳುವ ಪರಿಸ್ಥಿತಿ ಬಂತು. ಆದರೂ ಈ ಜನರು ಸಾಂಕೇತಿಕವೂ ಕಿಂಚಿತ್ತೂ ಆದ ಗೆಲವನ್ನು ಸಾಧಿಸಲು ಹೊಸ ರಾಜ್ಯಕ್ಕೆ ಕರ್ನಾಟಕದ ಬದಲು ಮೈಸೂರು ಎಂದು ಹೆಸರಿಡಲು ಒತ್ತಾಯಿಸಿ, ಆಲೂರು ವೆಂಕಟರಾಯರಂತಹ ಕರ್ನಾಟಕ ಏಕೀಕರಣ ಪರವಾದವರಿಗೆ ಸ್ವಲ್ಪಮಟ್ಟಿಗಿನ ಹತಾಶೆಯನ್ನುಂಟುಮಾಡಿದರು. ಒಗ್ಗೂಡುವಿಕೆಗೆ ವಿರುದ್ಧ ವಾಗಿದ್ದವರ ಈ ಕಿಂಚಿತ್ ಗೆಲವಿಗೆ ಕಾರಣರಾದವರಲ್ಲಿ ದೇವರಾಜು ಅರಸು ಮುಖ್ಯರು. ಆಯ್ದ ಸಮಿತಿಯು ದ್ವಿಭಾಷಿಕ ರಾಜ್ಯರಚನೆಯನ್ನು ತಿರಸ್ಕರಿಸಿದಾಗ, ಆಗಿನ ಕಾಂಗ್ರೆಸ್ ಅಧ್ಯಕ್ಷ ಯು.ಎನ್. ದೇಭರ್ ಅವರು ತಮ್ಮ ನಿರಾಶೆಯನ್ನು ನಿಜಲಿಂಗಪ್ಪನವರ ಬಳಿ ತೋಡಿಕೊಂಡರು. ೧೯೫೬ನೇ ಮೇ ೧೩ರ ತಮ್ಮ ದಿನಚರಿಯ ಬರಹದಲ್ಲಿ ನಿಜಲಿಂಗಪ್ಪ ನವರು, ದೇಭರ್ ಅಂತಹ ಉನ್ನತ ನಾಯಕರೂ ದೇಶದ ಭೂವಾಸ್ತವತೆಗಳನ್ನು ಅರಿಯುವಲ್ಲಿ ವಿಫಲರಾಗಿದ್ದಾರೆಂದೂ ಹಲವು ಸಂದರ್ಭಗಳಲ್ಲಿ ತಮ್ಮ ಸುತ್ತಲಿನ ಭಟ್ಟಂಗಿಗಳಿಂದ ತಪ್ಪುದಾರಿ ತುಳಿಯುತ್ತಿರುವರೆಂದೂ ವಿಷಾದಿಸಿದ್ದಾರೆ. ಅವರು ಜನತೆ ಯೊಂದಿಗಿನ ಸಂಪರ್ಕವನ್ನು ಕಳೆದುಕೊಂಡಿದ್ದಾರೆ. ಸರಳರೂ ಸಜ್ಜನರೂ ಆದ ದೇಭರ್ ಅವರು ಪರಿಸ್ಥಿತಿಗಳ ಕೈಗೊಂಬೆಯಾಗಿದ್ದರೆಂದು ಭಾವಿಸಿದರು.

ವರದಿಯ ಪರಿಶೀಲನೆಗಾಗಿ ಆಯ್ದ ಸಮಿತಿಯು ಸಭೆ ಸೇರಿದಾಗ, ದೆಹಲಿಯಲ್ಲಿ ಬಿರುಸಿನ ರಾಜಕೀಯ ಚಟುವಟಿಕೆಗಳು ನಡೆದುವು. ದೇಶದ ಎಲ್ಲೆಡೆಗಳಿಂದ ಜನ ರಾಜಧಾನಿಗೆ ಧಾವಿಸಿ, ಸಮಿತಿಯ ಮೇಲೆ ತಮ್ಮ ಬೇಡಿಕೆಗಳ ಒತ್ತಡವನ್ನು ಹೇರಲು ಪ್ರಯತ್ನಿಸಿದರು. ಶ್ರೀರಾಮರೆಡ್ಡಿ, ಕೆ.ಆರ್. ಕಾರಂತ, ಉಮೇಶ ರಾವ್ ಮತ್ತಿತರರು ಮಡಕಸಿರಾ ಹಾಗೂ ಕಾಸರಗೋಡನ್ನು ಕರ್ನಾಟಕದಲ್ಲಿ ಸೇರಿಸಬೇಕೆಂದು ಒತ್ತಾಯಿಸಿದ್ದು ಇಂತಹುದರ ಒಂದು ನಿದರ್ಶನ. ಸಮಿತಿಯ ಸಭೆಯಲ್ಲಿ ಈ ವಿಚಾರವನ್ನು ನಿಜಲಿಂಗಪ್ಪ ನವರು ಪ್ರಸ್ತಾಪಿಸಿದರೂ, ಈ ಬಗ್ಗೆ ಕಠಿಣ ನಿಲವನ್ನು ತೆಗೆದುಕೊಳ್ಳಲಿಲ್ಲ. ಒಟ್ಟಾರೆ

ಮುಖ್ಯ ವಿಷಯಗಳ ಬಗ್ಗೆ ಅವರದ್ದು ದೃಢನಿಲುವಾದರೂ, ಸಣ್ಣಪುಟ್ಟ ವಿಷಯಗಳ ಬಗ್ಗೆ ಅವರ ಕೊಳ್ಳುಕೊಡುಗೆಯ ನೀತಿಗೆ ಇದೊಂದು ಉದಾಹರಣೆ! ಈ ರೀತಿ ಸಣ್ಣ ಪುಟ್ಟ ವಿಷಯಗಳ ಬಗೆಗಿನ ತಮ್ಮ ರಾಜೀಮನೋಭವವು ಸರಿಯೇ ಎಂಬುದೂ ಅವರನ್ನು ಕಾಡಿದ ಪ್ರಶ್ನೆ. ಆದರೆ ಕಡೆಗಣಿಸಲು ಸಾಧ್ಯವಿಲ್ಲದ ಪ್ರಶ್ನೆಯೆಂದರೆ ಮಹಾ ರಾಷ್ಟ್ರೀಯರು ಕಾರವಾರ ಮತ್ತು ಬೆಳಗಾವಿಗಳನ್ನು ಮಹಾರಾಷ್ಟ್ರದಲ್ಲಿ ವಿಲೀನಗೊಳಿಸಲು ಮಾಡುವ ಒತ್ತಾಯ. ಕಾರ್ಯಕಲಾಪಗಳಲ್ಲಿ ಕರ್ನಾಟಕಕ್ಕೆ ಅತಿ ಹೆಚ್ಚಿನ ಲಾಭವಾಗಿದೆ ಯೆಂದು ಪಂತ್ ಅವರು ಹೇಳಿದರೂ, ಅದನ್ನು ನಿಜಲಿಂಗಪ್ಪನವರು ಪ್ರಶ್ನಿಸಿ, ಕನ್ನಡಿಗರಿಗೆ ದೊಡ್ಡ ಅನ್ಯಾಯವಾಗಿದೆ ಎಂದು ವಾದಿಸಿದರು. ಆದರೆ ಈ ವಿಷಯವನ್ನು ಮುಂದು ವರಿಸಲು ಅವರಿಗಿದ್ದ ಅಳುಕೆಂದರೆ ಈಗ ಪಡೆದುದರಲ್ಲಿಯೂ ಎಲ್ಲಿ ಕಳೆದುಕೊಳ್ಳಬೇಕಾಗು ತ್ತದೋ ಎಂಬುದು ಮತ್ತು ವಿವಾದವನ್ನೇ ನೆಪವನ್ನಾಗಿರಿಸಿಕೊಂಡು ಕೇಂದ್ರ ನಾಯಕತ್ವವು ವಿಷಯವನ್ನೇ ಮುಂದೂಡಲು ಮುಂದಾಗುವುದೇನೋ ಎಂಬುದು! ಕರ್ನಾಟಕ ರಚನೆಗೆ ಅತ್ಯಂತ ಪ್ರಮುಖವಾದ್ದರಿಂದ, ನಿಜಲಿಂಗಪ್ಪನವರು ತಮ್ಮ ವೈಮನಸ್ಸುಗಳನ್ನೆಲ್ಲ ಸಮಿತಿಯ ಕೆಲಸದಲ್ಲಿ ತೊಡಗಿಸಿದರು. ಕೇರಳ ಮತ್ತು ಮಹರಾಷ್ಟ್ರಗಳ ಪ್ರತಿನಿಧಿ ಗಳೊಂದಿಗೆ ಅವರು ನಿರಂತರ ಸಂಪರ್ಕವಿರಿಸಿಕೊಂಡು ಅವರು ಕನ್ನಡ ಜನತೆಯ ಶ್ರೇಯಸ್ಸನ್ನು ಕಾಪಾಡಲು ಎಚ್ಚರದಿಂದ ವರ್ತಿಸಿದರು. ಸಮಿತಿಯ ಶಿಫಾರಸುಗಳು ಲೋಕಸಭೆಯ ಪರಿಶೀಲನೆಗೆ ಬಂದಾಗ, ಮೇಲೆದ್ದು ಅತ್ಯಂತ ಬಿರುಸಿನ ವಾಗ್ವಾದಕ್ಕೆ ಎಡೆಮಾಡಿಕೊಟ್ಟ ಪ್ರಶ್ನೆಯೆಂದರೆ ಮುಂಬಯಿ ನಗರದ ಭವಿಷ್ಯ. ಈ ವಿಷಯದ ಬಗ್ಗೆ ಕೇಂದ್ರ ಅರ್ಥಸಚಿವ ಸಿ.ಡಿ. ದೇಶಮುಖ್ ರಾಜೀನಾಮೆ ನೀಡಿದರು. ಮಹಾರಾಷ್ಟ್ರ ಮತ್ತು ಗುಜರಾತ್‌ಗಳನ್ನು ಸೇರಿಸಿ ಕೆಲಕಾಲ ದ್ವಿಭಾಷಿಕ ರಾಜ್ಯ ಸ್ಥಾಪನೆ ಮಾಡುವಂತೆ ಕೆಲವರು ಸಲಹೆಯಿತ್ತರು. ಕರ್ನಾಟಕಕ್ಕೆ ಸಂಬಂಧಪಟ್ಟ ಅತ್ಯಂತ ಪ್ರಮುಖ ಪ್ರಶ್ನೆಯೆಂದರೆ ಸಹಜವಾಗಿಯೇ ಗಡಿಸಮಸ್ಯೆ. ಸೌಹಾರ್ದದಿಂದ ಗಡಿ ಸಮಸ್ಯೆಯನ್ನು ಪರಿಹರಿಸಲೆಂದು ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಮತ್ತು ಕೇರಳಗಳ ಪ್ರತಿನಿಧಿಗಳು ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದರು. ಭಿನ್ನಾಭಿಪ್ರಾಯವಿದ್ದವರೂ ಅವರ ಬಗ್ಗೆ ಎಂತಹ ಗೌರವವನ್ನು ಹೊಂದಿದ್ದರು ಎಂಬುದಕ್ಕೆ ಇದೊಂದು ಉದಾಹರಣೆ. ಆದರೆ, ಇದರಲ್ಲಿನ ಭಾವನಾತ್ಮಕ ಸಂಬಂಧದ ಕಾರಣದಿಂದಾಗಿ ಸಮಸ್ಯೆ ಬಿಕ್ಕಟ್ಟಿನದಾಯಿತು, ಹೀಗಾಗಿ ಸಭೆಯಲ್ಲಿ ಆದ ಹೋರಾಟ ಕಡೆಗೇ ಎಲ್ಲ ಸ್ಥಗಿತಗೊಂಡಿತು. ಈ ವಿಷಯದಲ್ಲಿ ಸಾಧ್ಯವಾಗಬಹುದಾಗಿದ್ದ ಏಕೈಕ ದಾರಿಯೆಂದರೆ ವಿವಾದಗಳ ಪರಿಹಾರದಲ್ಲಿ ಅನುಸರಿಸ ಬೇಕಾದ ದಿಗ್ದರ್ಶನಗಳನ್ನು ನೀಡಲು ಮತ್ತು ಸಾಧ್ಯವಾದರೆ ನಿಖರ ಪರಿಹಾರವನ್ನು ಕಂಡುಕೊಳ್ಳಲು ಒಂದು ಸಮಿತಿಯನ್ನು ರಚಿಸುವುದು. ಏಕೀಕರಣದ ಕನಸು ಸಾಕಾರ

ಗೊಳ್ಳುವ ಸಮಯದಲ್ಲಿಯೇ ದ್ವಿಭಾಷಿಕ ರಾಜ್ಯ ರಚನೆಯ ಪೆಡಂಭೂತ ಕಾಡತೊಡಗಿತು. ಬಿ. ಶಿವರಾವ್ ಮತ್ತು ಸಿ.ಪಿ. ಮಥೇನ್ ಈ ವಿಷಯಕ್ಕೆ ಮರುಜೀವ ಕೊಟ್ಟರು, ಅದಕ್ಕೆ ದಾಸಪ್ಪನವರು ಬೆಂಬಲ ನೀಡುತ್ತಿರುವುದು ಎಲ್ಲರಿಗೂ ಗೊತ್ತಿತ್ತು. ೧೯೫೬ನೇ ಏಪ್ರಿಲ್ ೮ನೇ ತಾರೀಕಿನ ದಿನಚರಿಯ ನಮೂದಿನಲ್ಲಿ ನಿಜಲಿಂಗಪ್ಪನವರು ಈ ವಿಷಯದ ಬಗ್ಗೆ ದಾಸಪ್ಪವರನ್ನು ದೂರವಾಣಿಯಲ್ಲಿ ಸಂಪರ್ಕಿಸಿದರು. ಎಸ್‌ಆರ್‌ಸಿ ವರದಿಯು ೧೯೫೬ ನೇ ಏಪ್ರಿಲ್ ೯ ರಂದು ಸಂಸತ್ತಿನಲ್ಲಿ ಮೂರನೆಯ ಓದಿನ ಹಂತವನ್ನು ತಲುಪಿತು, ಅದು ತಮ್ಮ ಬದುಕಿನ ಗುರಿಯನ್ನು ತಲುಪಲಿರುವ ಅತ್ಯಂತ ಮಧುರ ಕ್ಷಣವೆನಿಸಿತು. ಮಾರನೆಯ ದಿನ, ಅಂದರೆ ೧೯೫೬ ನೇ ಏಪ್ರಿಲ್ ೧೦, ಮೂರನೆಯ ಓದು ಮುಗಿದ ತಕ್ಷಣ ಅನೇಕ ಲೋಕಸಭಾ ಸದಸ್ಯರು ನಿಜಲಿಂಗಪ್ಪನವರ ಬಳಿ ಧಾವಿಸಿ ಸಂತೋಷದಿಂದಲೂ ಕೃತಜ್ಞತೆಯಿಂದಲೂ ಕೈಕುಲುಕಿದರು, ಕೆಲವರು ಅವರನ್ನು ಅಪ್ಪಿಕೊಂಡು ಸಂತೋಷಪಟ್ಟರು. ಅದು ಅವರಿಗೆ ಸಂದ ಸಹಜ ಗೌರವ, ಆಧುನಿಕ ಭಾರತದ ಇತಿಹಾಸದಲ್ಲಿ ರಾಜ್ಯ ಪುನರ್ವಿಂಗಡಣೆಯ ಅಧ್ಯಾಯದಲ್ಲಿ ನಿಜಲಿಂಗಪ್ಪನವರು ವಹಿಸಿದ್ದ ಮಹತ್ತರ ಪಾತ್ರವನ್ನು ಚಿರವಾಗಿಸಿದ ಕ್ಷಣ.

ಏಕೀಕರಣ ಚಳವಳಿಯ ಇತಿಹಾಸ ಮತ್ತು ನಿಜಲಿಂಗಪ್ಪನವರು ಅದರಲ್ಲಿ ವಹಿಸಿದ್ದ ಪಾತ್ರ ಹಾಗೂ ಅದರಲ್ಲಿನ ಅವರ ಕಾರ್ಯವೈಶಿಷ್ಟ್ಯದ ವ್ಯಾಖ್ಯಾನ ಇವುಗಳನ್ನು ಇಲ್ಲಿಗೇ ಬಿಡುವುದು ಸೂಕ್ತ. ಏಕೀಕರಣದ ಗುರಿ ಸಾಧನೆಯಲ್ಲಿ ಅವರು ವಹಿಸಿದ ಮಹತ್ವದ ಪಾತ್ರವನ್ನು ಯಾರೂ ಪ್ರಶ್ನಿಸಲಾರರು, ಪ್ರಶ್ನಿಸಿಲ್ಲ ಕೂಡ. ಆದರೆ ಅವರ ಕಾರ್ಯವೈಖರಿ ಹಾಗೂ ಕೊಡುಗೆಗಳ ಬಗ್ಗೆ ಕೆಲವು ವೇಳೆ ಮಾಡುವ ಅಸ್ಪಷ್ಟ ಟೀಕೆಗಳ ಹಿಂದೆ ಪ್ರಶ್ನಾರ್ಹ ಉದ್ದೇಶವಿರುತ್ತದೆ. ಅವರ ಬಗ್ಗೆ ಮಾಡಲಾಗುವ ಒಂದು, ಅದೂ ಮೇಲು ನೋಟಕ್ಕೆ ಸಮರ್ಥನೀಯವೆಂಬಂತೆ ಕಾಣುವ, ಟೀಕೆಯೆಂದರೆ, ಏಕೀಕರಣ ಚಳವಳಿಯು ಮಹತ್ವದ ಅರ್ಥದಲ್ಲಿ ಕೋಮುವಾದಿಯಾಗಿತ್ತು, ಆದರೆ ಅದರ ಈ ಸ್ವರೂಪವನ್ನು ಮುಚ್ಚುಮರೆ ಮಾಡಲಾಗುತ್ತಿತ್ತು ಎಂಬುದು. ಅದನ್ನು ಸ್ಪಷ್ಟವಾದ ಮಾತುಗಳಲ್ಲಿ ಹೇಳಬೇಕೆಂದರೆ, ಈ ಚಳವಳಿಯು ಕರ್ನಾಟಕದಲ್ಲಿ ಲಿಂಗಾಯತ ಸಾಮ್ರಾಜ್ಯವನ್ನು ಸ್ಥಾಪಿಸುವುದಾಗಿತ್ತು, ಹೀಗಾಗಿ ಅದರ ಗುರಿ ಸಾಧನೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದ ನಿಜಲಿಂಗಪ್ಪನವರನ್ನೂ ಕೋಮುವಾದಿ ಎಂದು ಕರೆಯಬೇಕಾಗುತ್ತದೆ ಎಂಬುದು. ಒಂದು ಹಂತದಲ್ಲಿ, ಅದೂ ಮೇಲುನೋಟಕ್ಕೆ, ಈ ಟೀಕೆ ಸಾಧುವಾದುದು ಅನ್ನಿಸಬಹುದು; ಆದರೆ ಅದರ ದೌರ್ಬಲ್ಯವನ್ನು ಬಯಲಿಗೆಳೆಯಲು ಹೆಚ್ಚು ಕಷ್ಟಪಡಬೇಕಾಗೇನೂ ಇಲ್ಲ. ಚಳವಳಿಯ ಹಿಂದಿನ ಪ್ರೇರಕ ಶಕ್ತಿ ಲಿಂಗಾಯತರ ಆಕಾಂಕ್ಷೆಗಳು ಎಂಬುದನ್ನು ಒಂದು ಕ್ಷಣ ಒಪ್ಪಿಕೊಂಡರೂ, ನಿಜಲಿಂಗಪ್ಪನವರದ್ದೂ ಅದೇ ಮನೋಭಾವವಾಗಿತ್ತು ಎಂದು ಹೇಳುವುದು ತಾರ್ಕಿಕವಾಗಿ ಒಪ್ಪಿತ

ವಾಗುವಂತಹುದಲ್ಲ. ನಿಜಲಿಂಗಪ್ಪನವರ ವಿರುದ್ಧ ಕೋಮುವಾದದ ಆರೋಪ ಮಾಡುವುದಕ್ಕಿಂತ ಹೆಚ್ಚಿನ ಸುಳ್ಳು ಮತ್ತೊಂದಿಲ್ಲ. ಅವರ ಇಡೀ ಬದುಕಿನ ತೆರೆದ ಪುಟಗಳೇ ಇದರ ವಿರುದ್ಧವಾದ ಪುರಾವೆ. ಈ ಕಥನದಲ್ಲಿ ಈಗಾಗಲೇ ಗಮನಿಸಿರುವಂತೆ, ನಿಜಲಿಂಗಪ್ಪನವರು ಸಂಕುಚಿತ ಅರ್ಥದಲ್ಲಿ ಒಬ್ಬ ಲಿಂಗಾಯತರಾಗಿರಲಿಲ್ಲ. ಲಿಂಗಾಯತ ಧರ್ಮದ ಆದರ್ಶಗಳನ್ನು ಅವರು ಅನುಸರಿಸುತ್ತಿದ್ದರು ಎನ್ನುವುದು ಒಂದು, ಆದರೆ ಜಾತಿ ಕೋಮು ಭೇದವಿಲ್ಲದೆ ಎಲ್ಲ ಕನ್ನಡಿಗರ ಹಿತವನ್ನು ಬದಿಗಿಟ್ಟು ಅವರು ಒಂದು ಕೋಮಿನ ಉನ್ನತಿಯನ್ನು ಅವರು ಬಯಸಿದರು ಎನ್ನುವುದು ಇನ್ನೊಂದು. ಅನೇಕ ಶತಮಾನಗಳ ಹಿಂದೆ ಬಸವಣ್ಣನು ತೋರಿಸಿದ್ದ ಮಾನವೀಯ ಮೌಲ್ಯಗಳನ್ನೊಳಗೊಂಡ ಉಪದೇಶಗಳ ಅನುಷ್ಠಾನಕ್ಕೆ ನಿಜಲಿಂಗಪ್ಪನವರು ಬದ್ಧವಾಗಿದ್ದರೆಂಬುದು ನಿಜ, ಹಾಗೆಯೇ ಅವರು ಗಾಂಧೀಜಿ ಎತ್ತಿ ಹಿಡಿದಿದ್ದ ಆದರ್ಶ ಪಾಲನೆಗೂ ಬದ್ಧವಾಗಿದ್ದರು ಕೂಡ. ಮೇಲಾಗಿ, ಲಿಂಗಾಯತ ಧರ್ಮವನ್ನು ಅಕ್ಷರಶಃ ಪಾಲಿಸುವುದಕ್ಕೂ ಅದರ ಸತ್ವವನ್ನು ಅರಗಿಸಿಕೊಳ್ಳುವುದಕ್ಕೂ, ಅಂದರೆ ಲಿಂಗಾಯತದ ತಿರುಳಿಗೂ ಅದರ ಸಿಪ್ಪೆಗೂ ಇರುವ ವ್ಯತ್ಯಾಸವನ್ನು ಅವರು ಸ್ಪಷ್ಟವಾಗಿ ಅರಿತಿದ್ದರು. ಹೀಗಾಗಿಯೇ ವಿಧಿ ಆಚರಣೆಗಳಂತಹ ಬಾಹ್ಯ ಚಟುವಟಿಕೆಗಳ ಮೂಲಕ ತಮ್ಮ ನಂಬಿಕೆಯನ್ನವರು ಎಂದೂ ತೋರ್ಪಡಿಸಿದವರಲ್ಲ. ನಿಜಲಿಂಗಪ್ಪನವಂತಹವರು ಕೋಮುವಾದಿಯಾಗಿರಬಲ್ಲರು ಎಂದು ಊಹಿಸುವುದೂ ಸತ್ಯವನ್ನು ತಿರುಚಿದಂತೆ. ಅವರೊಡನೆ ಯಾವುದೇ ಬಗೆಯ ಸಂಪರ್ಕವನ್ನು ಹೊಂದಿದ್ದವರಿಗೂ ಅವರಲ್ಲಿನ ಅಂತಸ್ಸತ್ವವಾದ ಮಾನವೀಯತೆಯನ್ನು ಗುರುತಿಸದೇ ಇರಲು ಸಾಧ್ಯವಾಗುತ್ತಿರಲಿಲ್ಲ. ಹಾಗೆ ನೋಡಿದರೆ, ಲಿಂಗಾಯತಧರ್ಮ ಮತ್ತು ಗಾಂಧೀಜಿ ಆದರ್ಶಗಳ ಬಗೆಗಿನ ಅವರ ಬದ್ಧತೆಯ ಹಿಂದೆ ಅವರ ಮೂಲಭೂತ ಬದ್ಧತೆಯಾಗಿದ್ದ ಮಾನವೀಯ ಮೌಲ್ಯಗಳು, ಸತ್ಯ, ವೈಚಾರಿಕತೆ ಹಾಗೂ ನ್ಯಾಯಪರತೆಗಳು ಕಾರ್ಯಶೀಲವಾಗಿದ್ದವು.

ಏಕೀಕರಣ ಚಳವಳಿಯೆಂದರೆ ಲಿಂಗಾಯತರು ರಾಜಕೀಯ ಅಧಿಕಾರವನ್ನು ವಶಪಡಿಸಿಕೊಳ್ಳಲು ಮಾಡಿದ ಪ್ರಯತ್ನ ಎಂಬ ಮಾತೇ ಕುಚೋದ್ಯದ್ದು. ಮೊದಲನೆಯದಾಗಿ, ಈ ಚಳವಳಿಯನ್ನು ವಾಸ್ತವಾಗಿಯಾಗಲೀ ಪ್ರಜ್ಞಾಪೂರ್ವಕವಾಗಿಯಾಗಲೀ ಪ್ರತ್ಯೇಕವಾಗಿಯಾಗಲೀ ಲಿಂಗಾಯತರು ಸಂಘಟಿಸಿದ್ದ ಅಥವಾ ನಿಯಂತ್ರಿಸಿದ ಬಗ್ಗೆ ಯಾವ ಪುರಾವೆಯೂ ಇಲ್ಲ. ಕರ್ನಾಟಕ ಏಕೀಕರಣದ ನಂತರ ಅವರು ಬಹುಸಂಖ್ಯಾತರಾಗುವ, ಹಾಗಾಗಿ ಹೆಚ್ಚು ಪ್ರಬಲರಾಗುವ ಅಂಶವನ್ನು ಯಾರಾದರೂ ಮುಂದುಮಾಡಿ, ಅದರಿಂದಾಗಿ ಈ ಚಳವಳಿಯು ಲಿಂಗಾಯತ ಚಳವಳಿಯಾಗಿತ್ತು ಎಂದು ವಾದಿಸುವುದು ತಾರ್ಕಿಕವಾಗಿಯಾಗಿ ಸಮಂಜಸವಾಗಲಾರದು. ಇತರರಿಗಿಂತ ಲಿಂಗಾಯತರು ಇದರಲ್ಲಿ

ಹೆಚ್ಚು ಆಸಕ್ತಿ ವಹಿಸಿದ್ದರು ಎಂದು ಹೇಳಿದರೆ, ಇದು ವಾಸ್ತವತೆಗೆ ವಿರುದ್ಧವೆಂಬುದು ಸ್ಪಷ್ಟ. ಹಾಗೆ ನೋಡಿದರೆ, ಈ ಚಳವಳಿಯನ್ನು ಆರಂಭಿಸಿದವರು ಬ್ರಾಹ್ಮಣರು, ಆನಂತರ ವಷ್ಟೇ ಇತರ ಕೋಮುಗಳವರು ಅದರಲ್ಲಿ ಸೇರಿದ್ದು. ಅದಕ್ಕೆ ಕಾರಣ ತಮಗೆಲ್ಲರಿಗೂ ಸಾಮಾನ್ಯವಾಗಿದ್ದ ಕನ್ನಡ, ಅಂದರೆ ಇತರ ಎಲ್ಲ ಸಂಕುಚಿತ ನಿಷ್ಠೆ ಹಾಗೂ ಆಸಕ್ತಿಗಳನ್ನು ಮೀರಿದ ಸಾಂಸ್ಕೃತಿಕ ಹಿನ್ನೆಲೆ. ಈ ಲೇಖಕನಿಗೆ ನಿಜಲಿಂಗಪ್ಪನವರು ಸ್ಪಷ್ಟಪಡಿಸಿದಂತೆ, ಹಳೆಯ ಮೈಸೂರಿನಲ್ಲಿ ಅನೇಕ ಒಕ್ಕಲಿಗರು ಕೂಡ ಏಕೀಕರಣವನ್ನು ವಿರೋಧಿಸಲಿಲ್ಲ. ಏಕೀಕರಣ ಚಳವಳಿಯು ಲಿಂಗಾಯತ ಪಿತೂರಿಯ ಫಲವೆಂದಾಗಲೀ ಹಳೆಯ ಮೈಸೂರಿನಲ್ಲಿ ಅದಕ್ಕೆ ವ್ಯಕ್ತವಾದ ವಿರೋಧವು ಒಕ್ಕಲಿಗರದೆಂದಾಗಲೀ ಹೇಳುವುದು ಅದರ ಇತಿಹಾಸದ ಸಂಕೀರ್ಣತೆಯನ್ನು ಸರಳಗೊಳಿಸಿ ದಾರಿತಪ್ಪಿಸುವಂಥದು. ನಮ್ಮ ಅನನ್ಯತೆಗಳು ಯಾವಾಗಲೂ ಬಹುಮುಖಿಯಾದವು, ವಾಸ್ತವದಲ್ಲಿ ನಮಗೆ ಬಹುಮುಖಿ ಅನನ್ಯತೆಗಳಿವೆ ಎಂದು ಹೇಳುವುದು ಸಮಂಜಸ. ಏಕಕಾಲದಲ್ಲಿ ಒಬ್ಬ ವ್ಯಕ್ತಿಗೆ ಒಂದಕ್ಕಿಂತ ಹೆಚ್ಚು ಅನನ್ಯತೆಗಳಿರುತ್ತವೆ: ಲಿಂಗಾಯತ, ಕನ್ನಡಿಗ, ಭಾರತೀಯ, ಒಂದು ಊರಿನ ನಿವಾಸಿ, ಗಂಡು ಅಥವಾ ಹೆಣ್ಣು, ಇನ್ನೂ ಮುಂತಾದವು. ಇವುಗಳು ಕಾರ್ಯಶೀಲ ವಾಗುವುದು ಪರಿಸ್ಥಿತಿಯ ಬಲದಿಂದ. ಲಿಂಗಾಯತ, ಬ್ರಾಹ್ಮಣ ಅಥವಾ ಒಕ್ಕಲಿಗನೊಬ್ಬ ತಮ್ಮ ಪ್ರತ್ಯೇಕ ಅನನ್ಯತೆಯನ್ನು ಬಿಟ್ಟುಕೊಡದೆಯೇ ಕನ್ನಡಿಗನಾಗಿ ಏಕೀಕರಣ ಚಳವಳಿಯಲ್ಲಿ ಭಾಗವಹಿಸಿರಬಹುದಾದುದು ಸಾಧ್ಯ, ಅಂತೆಯೇ ಕನ್ನಡಿಗನೊಬ್ಬ ತನ್ನ ಕನ್ನಡ ಅನನ್ಯತೆಯನ್ನು ಬಿಡದೆಯೇ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗ ವಹಿಸಿರಬಹುದಾದುದು. ಭಾರತದಲ್ಲಿ ಪರಸ್ಪರ ಕೋಮುವಾದದ ಆರೋಪ ಹೊರಿಸು ವುದು ಸುಲಭ, ಹೀಗಾಗಿಯೇ ಇತರರ ಮೇಲೆ ಈ ಅಸ್ತ್ರವನ್ನು ಬಳಸುವಾಗ ಎಚ್ಚರ ದಿಂದಿರಬೇಕು. ಕೆಲವರ ಮನಸ್ಸಿನಲ್ಲಿ ಅಂತಹ ಸಂಕೀರ್ಣ ಐತಿಹಾಸಿಕ ಪ್ರಕ್ರಿಯೆಯಲ್ಲಿ ಸಂಕುಚಿತವೂ ಬರಡೂ ಆದ ಪ್ರೇರಣೆಗಳಿದ್ದಿರಬಹುದಾದರೂ, ಏಕೀಕರಣವೆಂಬುದು ನ್ಯಾಯಯುತವಾದ ಭಾಷಾಧಾರಿತವೂ ಮತ್ತು ಅದರಲ್ಲಿ ಅಂತರ್ಗತವಾದ ಸಂಸ್ಕೃತಿ ಆಧಾರಿತವೂ ಆದ ಪ್ರಾದೇಶಿಕ ಅನನ್ಯತೆಯನ್ನು ಸಾಧಿಸುವ ಪ್ರಾಮಾಣಿಕ ಪ್ರಯೋಗ ಎಂಬುದು ತುಂಬ ಮುಖ್ಯವಾದ ವಿಚಾರ. ಈ ಪ್ರಯೋಗವು ಸಫಲವಾಯಿತೇ ಇಲ್ಲವೇ ಎಂಬ ಪ್ರಶ್ನೆ ಮಹತ್ವದ್ದು. ಆದರೆ ನಾವು ನೆನಪಿಡಬೇಕಾದದ್ದೆಂದರೆ, ಇದನ್ನು ತೀರ ಸರಳವಾಗಿ ಸಫಲ-ವಿಫಲ ಎಂದು ಅಳೆಯುವುದು ಅಸಾಧ್ಯ. ಪ್ರತಿ ಸಾಫಲ್ಯಕ್ಕೂ ಒಂದು ವೈಫಲ್ಯದ ಆಯಾಮವಿರುತ್ತದೆ, ಹಾಗೆಯೇ ವೈಫಲ್ಯಕ್ಕೆ ಸಾಫಲ್ಯದ ಆಯಾಮ.

ನಿಜಲಿಂಗಪ್ಪನವರ ವಿರುದ್ಧ ಮಾಡಲಾದ ಮೂರನೆಯ ಆರೋಪವೆಂದರೆ ಅವರು ಅಧಿಕಾರದಾಹಿಗಳು, ಅವರು ಏಕೀಕರಣಕ್ಕಾಗಿ ದುಡಿದದ್ದೇ ತಮ್ಮ ಸ್ವಾರ್ಥಸಾಧನೆ

ಗಾಗಿ ಎಂಬಿವು ಮತ್ತಷ್ಟು ಸತ್ಯದೂರವಾದವು. ಇಂತಹ ಆರೋಪವನ್ನು ಅವರ ಪರಮ ಶತ್ರುವೂ ಮಾಡಲಾರ. ನಿಜಲಿಂಗಪ್ಪನವರ ಸ್ವಾರ್ಥವು ಸಹಜವಾದದ್ದೂ ಸರಳವಾದದ್ದೂ ಆದುದು, ಅದನ್ನು ಸುಲಭವಾಗಿ ಹೇಳಬಹುದು. ಅವರಿಗೆ ಅಧಿಕಾರ ಅಥವಾ ಹುದ್ದೆ ಬೇಕಾಗಿತ್ತು, ಅದನ್ನವರು ಸಾಧಿಸಿಕೊಂಡರು. ಆದರೆ ಅದರಿಂದ ಅವರು ಸ್ವಾರ್ಥಿಗಳಾಗಿದ್ದ ರೆಂಬುದು ಸಾಬೀತಾಗದು. ಅಧಿಕಾರವು ಭ್ರಷ್ಟಗೊಳಿಸುತ್ತದೆ ಎಂಬ ಲಾರ್ಡ್ ಆಕ್ಟನ್‌ನ ವ್ಯಾಖ್ಯೆಯ ಹೊರತಾಗಿಯೂ, ಅಧಿಕಾರವೆಂದರೆ ಸ್ವಾರ್ಥ ಅಥವಾ ಲಂಚಗುಳಿತನಕ್ಕಿರುವ ಮತ್ತೊಂದು ಹೆಸರು ಎಂಬುದು ತಪ್ಪು ತಿಳಿವಳಿಕೆ. ಅಷ್ಟೇ ಅಲ್ಲದೆ, ಅಧಿಕಾರವಿಲ್ಲದವರೂ ಭ್ರಷ್ಟರಾಗಬಹುದು! ರಾಜಕೀಯ ಹಾಗೂ ಸಾರ್ವಜನಿಕ ಜೀವನದಲ್ಲಿ ಮುಖ್ಯವಾಗುವುದು ಅಧಿಕಾರವನ್ನು ಯಾವುದಕ್ಕೆ ಬಳಕೆಮಾಡಲಾಗುತ್ತದೆ ಎಂಬುದು. ಅದರಿಂದ ಸ್ವಾರ್ಥ ಸಾಧನೆಯೂ ಆಗಬಹುದು, ಉದಾರ ನೈತಿಕ ಗುರಿಗಳ ಸಾಧನೆಗಾಗಿಯೂ ಅದನ್ನು ಬಳಸಿಕೊಳ್ಳಬಹುದು. ನಿಜಲಿಂಗಪ್ಪನವರು ಕೆಪಿಸಿಸಿ ಅಧ್ಯಕ್ಷರಾಗಿಯೋ ಸಂಸತ್ ಸದಸ್ಯ ರಾಗಿಯೋ ಅಥವಾ ಮುಖ್ಯಮಂತ್ರಿಯಾಗಿಯೋ ಅಧಿಕಾರ ಚಲಾಯಿಸಿದರೆಂದರೆ ಅದನ್ನು ಯಾವ ಗುರಿಸಾಧನೆಗಾಗಿ ಬಳಸಿಕೊಂಡರೆಂಬುದು ಮುಖ್ಯ ಪ್ರಶ್ನೆ. ರಾಜಕಾರಣಿ ಗಳು ಅಧಿಕಾರದ ಆಮಿಷಕ್ಕೊಳಗಾಗುವುದು ಸಾಮಾನ್ಯ, ಹೀಗಾಗಿ ಅವರ ವಿರುದ್ಧವೂ ಸಮರ್ಥನೆಯಿಲ್ಲದ ಆಪಾದನೆಗಳನ್ನು ಸುಲಭವಾಗಿ ಮಾಡಬಹುದು. ನಿಜಲಿಂಗಪ್ಪನವರ ವಿಷಯದಲ್ಲಿ ಹೇಳಬೇಕೆಂದರೆ, ಅಂತಹ ಆಪಾದನೆಗಳನ್ನು ಸಮರ್ಥಿಸಿಕೊಳ್ಳುವುದು ಅಸಾಧ್ಯವೇ ಸರಿ. ಇದಕ್ಕೆ ಒಂದೇ ಒಂದು ಉದಾಹರಣೆಯನ್ನು ಕೊಡಬಹುದು: ಅವರು ಕೇಂದ್ರದ ನಾಯಕತ್ವವನ್ನು ಓಲೈಸುವ ಮೂಲಕ ಮತ್ತಷ್ಟು ಅಧಿಕಾರವನ್ನೋ ಉನ್ನತ ಹುದ್ದೆಗಳನ್ನೋ ಪಡೆಯಬಹುದಿತ್ತು, ಆದರೆ ಅವರು ಆದರ್ಶಕ್ಕಾಗಿ ಅವಕಾಶ ಗಳನ್ನು ದೂರವಿಟ್ಟರು. ಅಧಿಕಾರದೊಡನೆ ಭ್ರಷ್ಟತೆಯನ್ನು ಮೇಳೈಸುವುದು ನಮಗೆಷ್ಟು ಸಾಮಾನ್ಯವಾಗಿದೆಯೆಂದರೆ, ನಿಜಲಿಂಗಪ್ಪನವರಂತಹ ಒಬ್ಬ ವ್ಯಕ್ತಿ ಇರಬಹುದೇ ಎಂಬು ದನ್ನು ನಂಬುವುದೂ ಕಷ್ಟವಾಗುತ್ತದೆ. ಅವರು ಮೌಲ್ಯಾಧಾರಿತವೂ ಆದರ್ಶಯುತ ವಾದದ್ದೂ ಆದ ರಾಜಕಾರಣವನ್ನು ಮನುಷ್ಯಮಾತ್ರನಿಗೆ ಸಾಧ್ಯವಾಗುವ ಮಟ್ಟಿಗೂ ಅನುಸರಿಸಿಕೊಂಡು ಬಂದರು. ನಿಜಲಿಂಗಪ್ಪನವರು ಎಂಥ ವ್ಯಕ್ತಿಯಾಗಿದ್ದರೆಂದರೆ, ಅವರು ನಿಧಾನವಾಗಿ ಕಣ್ಮರೆಯಾಗುತ್ತಿರುವ ಗಾಂಧೀವಾದದ ರಾಜಕೀಯ ಸಂಸ್ಕೃತಿ. ನೈತಿಕತೆ ಮತ್ತು ಆದರ್ಶಗಳ ಸಂಕೇತವಾಗಿದ್ದಾರೆ.

ಅವರ ವಿರುದ್ಧ ಅಲ್ಪಸ್ವಲ್ಪ ಸಮರ್ಥನೆಯಿಂದ ಮಾಡಬಹುದಾದ ಟೀಕೆಯೆಂದರೆ, ಅವರಿಗೆ ಬಿಕ್ಕಟ್ಟುಗಳನ್ನು ಎದುರಿಸುವ ಮನೋಕಾಠಿಣ್ಯ ಕಡಿಮೆ ಎಂಬುದು. ಈ ಟೀಕೆಗೂ ಅನೇಕ ವಿಶೇಷಣಗಳನ್ನು ಸೇರಿಸಬೇಕಾಗುತ್ತದೆ. ಕಾಠಿಣ್ಯವೆಂದರೆ ಒಳ್ಳೆಯ

ಗುರಿಗಳ ಸಾಧನೆಗಾಗಿಯೂ ಅನುಸರಿಸುವ ಮಾರ್ಗದ ದಯಾಹೀನತೆ ಮತ್ತು ಸರಿದಾರಿಗಳ ಬಗೆಗಿನ ಅಸಡ್ಡೆ ಎಂಬುದೇ ಅರ್ಥವಾದರೆ, ಹೌದು, ನಿಜಲಿಂಗಪ್ಪನವರು ಸೌಜನ್ಯರಹಿತ ನಡವಳಿಕೆಯೇ ಇರಬಾರದ ಕ್ಷೇತ್ರದಲ್ಲಿ ಹೀಗೆ ಮಾಡಲಾರದಂತಹ ಸಜ್ಜನರು ಎಂದೇ ಹೇಳಬೇಕು. ಆದರೆ, ಗಮನಿಸಬೇಕಾದ ಸತ್ಯವೆಂದರೆ, ಅವರ ಹುಟ್ಟುಗುಣಗಳಾದ ಪಕ್ಷಪಾತರಾಹಿತ್ಯ, ಸೌಜನ್ಯ ಹಾಗೂ ಮಾನವೀಯತೆಗಳನ್ನು ಬಲಿಗೊಡದ ಕ್ರಿಯಾವಂತರಾಗಿ ಎಷ್ಟೊಂದನ್ನು ಸಾಧಿಸಿದರು ಎಂಬುದು.

*

ಕರ್ನಾಟಕ ಸರಕಾರದ ವತಿಯಿಂದ ಎಸ್ಸೆನ್ ಅವರಿಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡಿಕೆ, ಸಚಿವರುಗಳಾದ ಶ್ರೀ ಎಂ.ಪಿ. ಪ್ರಕಾಶ್ ಹಾಗೂ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಶ್ರೀ ಎ.ಆರ್. ಚಂದ್ರಹಾಸ ಗುಪ್ತರವರಿದ್ದಾರೆ.

೫

ಮುಖ್ಯಮಂತ್ರಿಯಾಗಿ

ಮುಖ್ಯಮಂತ್ರಿಯಾಗಿ ನಿಜಲಿಂಗಪ್ಪನವರು ವಹಿಸಿದ ಪಾತ್ರ ಮತ್ತವರ ಸಾಧನೆಗಳನ್ನು ವ್ಯಾಖ್ಯಾನಿಸುವ ಮತ್ತು ಬೆಲೆಗಟ್ಟುವ ಮುಂಚೆ ಒಂದು ಪ್ರಶ್ನೆಯನ್ನು ಕೇಳಿಕೊಂಡರೆ ಸೂಕ್ತವಾದೀತು. ಅದೆಂದರೆ ಅವರು ಇದನ್ನೆಲ್ಲ ಹೇಗೆ ಮಾಡಬಲ್ಲರು? ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಒಬ್ಬ ಮುಖ್ಯಮಂತ್ರಿ ವಹಿಸಬೇಕಾದ ಪಾತ್ರ ಹಾಗೂ ಮಾಡುವ ಕಾರ್ಯಗಳ ಸ್ವರೂಪವನ್ನು ವಿವರಿಸಿ ಅದರ ಬೆಳಕಿನಲ್ಲಿ ನಿಜಲಿಂಗಪ್ಪನವರ ಸಾಧನೆಯನ್ನು ವಿವರಿಸುವುದೇ ಇದಕ್ಕಿರುವ ಸಮಂಜಸ ಮಾರ್ಗ. ಭಾರತದ ಸನ್ನಿವೇಶದಲ್ಲಿ ರಾಜ್ಯದ ಮುಖ್ಯಮಂತ್ರಿಯ ಸ್ಥಾನವು ಬಹುಮುಖ್ಯವಾದ ಹುದ್ದೆ, ಅದನ್ನು ಅಲಂಕರಿಸಿದವನಿಂದ ಅದು ಅನೇಕ ವ್ಯಕ್ತಿಲಕ್ಷಣಗಳನ್ನೂ ಕೌಶಲಗಳನ್ನೂ ಸಾಮರ್ಥ್ಯವನ್ನೂ ನಿರೀಕ್ಷಿಸುತ್ತದೆ, ಜೊತೆಗೆ ಅನುಕೂಲಕರವಾದ ಐತಿಹಾಸಿಕ ಅವಕಾಶಗಳ ಅದೃಷ್ಟ ಕೂಡ. ಹೀಗಾಗಿ ಅದೊಂದು ಸಂಕೀರ್ಣ ಜವಾಬ್ದಾರಿ. ಅದರ ನಿಭಾವಣೆಗೆ ಸಮತೋಲನ ಕಲೆ ಕರಗತವಾಗಿರಬೇಕಾಗುತ್ತದೆ. ಅದರ ಸಂಕೀರ್ಣ ಸ್ವರೂಪ ಹಾಗೂ ಆ ಹುದ್ದೆಯಲ್ಲಿರುವವನು ಹೊರಗಿನ ಶಕ್ತಿಗಳು ಹಾಗೂ ಸನ್ನಿವೇಶಗಳನ್ನು ನಿಯಂತ್ರಿಸಬೇಕಾದ ಕಾರಣದಿಂದಾಗಿ ಮುಖ್ಯಮಂತ್ರಿಯೊಬ್ಬರ ಸಾಧನೆಗಳ ಬಗ್ಗೆ ಕಪ್ಪು-ಬಿಳುಪು ಎಂಬಂತಹ ನಿಖರ ತೀರ್ಮಕೊಡುವುದು ಅಸಾಧ್ಯ. ಆದರೂ ಮುಖ್ಯಮಂತ್ರಿಯ ಕಾರ್ಯಸಾಧನೆಯ ಕುರಿತು

ಒಂದು ಬಗೆಯ ತೀರ್ಪು ನೀಡುವುದು ಸಾಧ್ಯವೂ ಹೌದು, ಆವಶ್ಯಕವೂ ಹೌದು. ಆದರೆ ಇದು ಯಾವಾಗಲೂ ಐತಿಹಾಸಿಕ ಸಂದರ್ಭಗಳು ಹಾಗೂ ಆ ಸ್ಥಾನದಲ್ಲಿರುವವರ ಅವಕಾಶಗಳು ಮತ್ತು ಇತಿಮಿತಿಗಳ ಸಂದರ್ಭದಲ್ಲಿನ ಅನಿವಾರ್ಯತೆಗಳ ಹಿನ್ನೆಲೆಯಲ್ಲಿ ಮಾತ್ರ ಸಾಧ್ಯವಾಗುವಂಥದು.

ಗಣರಾಜ್ಯ ಭಾರತದ ರಾಜ್ಯವೊಂದರ ಮುಖ್ಯಮಂತ್ರಿಯು ಸಂವಿಧಾತ್ಮಕವಾಗಿ ರಾಜ್ಯ ಸರ್ಕಾರದ ಕಾರ್ಯಕಾರೀ ಮುಖ್ಯಸ್ಥರಾಗಿದ್ದರೆ, ರಾಜ್ಯಪಾಲರು ನಾಮಮಾತ್ರ ಮುಖ್ಯಸ್ಥರಾಗಿರುತ್ತಾರೆ. ಏಕೆಂದರೆ, ಚುನಾವಣೆಯಲ್ಲಿ ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತವಿಲ್ಲದಿರುವ ಸಂದರ್ಭದಲ್ಲಿ ಅವರು ವಾಸ್ತವವಾದ ಸಂವಿಧಾನಾತ್ಮಕ ಅಧಿಕಾರ ವನ್ನು ಚಲಾಯಿಸಬಹುದೆಂಬ ಸಂದರ್ಭಗಳ ಹೊರತಾಗಿ, ರಾಜ್ಯಪಾಲರದ್ದು ಆಲಂಕಾರಿಕ ಸ್ಥಾನ. ಹೀಗಾಗಿ, ಮುಖ್ಯಮಂತ್ರಿಯ ಮೊದಲ ಮತ್ತು ಆದ್ಯ ಕಾರ್ಯವೆಂದರೆ ರಾಜ್ಯಾಡಳಿತವನ್ನು ನಿಭಾಯಿಸುವುದು. ಇದರ ನಿರ್ವಹಣೆಯಲ್ಲಿ ಅವರಿಗೆ ತಮ್ಮ ಪಕ್ಷದಿಂದ ಅವರೇ ಆಯ್ದುಕೊಂಡ ಮಂತ್ರಿಮಂಡಲದ ಹಾಗೂ ಶಾಶ್ವತ ಅಧಿಕಾರ ಶಾಹಿಯ ಸಹಾಯವಿರುತ್ತದೆ. ಇಂಥ ಸಂದರ್ಭದಲ್ಲಿ ಅವರು ಸಹೋದ್ಯೋಗಿ ಮಂತ್ರಿಗಳ ಮತ್ತು ಅಧಿಕಾರ ಶಾಹಿಯ ಕೆಲಸವನ್ನು ಸಂಯೋಜಿಸಬೇಕು. ಇದಕ್ಕೆ ರಾಜಕೀಯ ನಿರ್ವಹಣೆ ಹಾಗೂ ಆಡಳಿತಾತ್ಮಕ ನಾಯಕತ್ವಗಳೆರಡೂ ಆವಶ್ಯಕ. ಸರ್ಕಾರದ ಧ್ಯೇಯ ಧೋರಣೆಗಳ ಹಾಗೂ ಅವುಗಳ ಅನುಷ್ಠಾನದ ಹೊಣೆ ಅವರದ್ದು. ಎರಡನೆಯದಾಗಿ, ಅವರು ಶಾಸಕಾಂಗ ಪಕ್ಷದ ನಾಯಕರಾಗಿಯೂ ಇರುತ್ತಾರೆ, ಇದರಿಂದಾಗಿ ಅವರು ಅಂಕಿಅಂಶಗಳು, ಸೂಕ್ತ ವ್ಯಾಖ್ಯಾನಗಳ ಮೂಲಕ ಚರ್ಚಿಸುವ ಕೌಶಲವನ್ನು ಪಡೆದಿರ ಬೇಕು. ಇದಕ್ಕೆ ಅವರು ಭಾಷಣ ಕಲೆಯಲ್ಲಿ ಪಾರಂಗತರಾಗಿರಬೇಕು. ಮೊದಲನೆಯ ಪಾತ್ರದಲ್ಲಿ, ಅವರು ತಮ್ಮ ಮತ್ತು ರಾಜಕೀಯ ಸಹೋದ್ಯೋಗಿಗಳ ನಡುವಣ ಸಂಬಂಧ ಗಳನ್ನು ನಿಭಾಯಿಸಬೇಕಾಗಿದ್ದರೆ, ಎರಡನೆಯ ಪಾತ್ರದಲ್ಲಿ ಅವರು ಸರ್ಕಾರ ಮತ್ತು ಅಧಿಕಾರ ವರ್ಗದ ನಡುವಣ ಸಂಬಂಧವನ್ನು ಸರಿದೂಗಿಸಬೇಕಾಗುತ್ತದೆ. ಮೂರನೆಯ ದಾಗಿ, ರಾಜ್ಯದ ನಾಯಕರಾಗಿ ಅವರು ಸಾರ್ವಜನಿಕ ವ್ಯಕ್ತಿತ್ವವನ್ನು ಪ್ರದರ್ಶಿಸಬೇಕಾಗು ತ್ತದೆ. ಇದಕ್ಕೆ ಒಂದು ಬಗೆಯ ಆಕರ್ಷಕತ್ವ ಮತ್ತು ತಮ್ಮ ವ್ಯಕ್ತಿತ್ವದ ಮೂಲಕ ಸಾರ್ವಜನಿಕ ಅನುಮೋದನೆ ಎಂಬ ನಿಖರವಾಗಿ ಸೂತ್ರೀಕರಿಸಲಾಗದ ಗುಣಗಳನ್ನು ಹೊಂದಿರ ಬೇಕಾಗುತ್ತದೆ. ಇದು ಚುನಾವಣೆಗಳ ಸಂದರ್ಭದಲ್ಲಿ ಬಹಳ ಮುಖ್ಯ. ನಾಲ್ಕನೆಯದಾಗಿ, ಅವರು ಪಕ್ಷದ ಇಬ್ಬರು ನಾಯಕರಲ್ಲಿ ಒಬ್ಬರು, ಮತ್ತೊಬ್ಬರೆಂದರೆ ಆಡಳಿತ ಪಕ್ಷದ ರಾಜ್ಯ ಅಧ್ಯಕ್ಷರು. ಈ ರಾಜಕೀಯವಾಗಿ ಅತ್ಯಂತ ಕಷ್ಟಕರವಾದ ಪಾತ್ರದಲ್ಲಿ ಅವರ ಕರ್ತವ್ಯವೆಂದರೆ ಪಕ್ಷದ ಶಾಸಕಾಂಗ ಹಾಗೂ ಅದರ ಹೊರತಾದ ಪಕ್ಷ ಇವೆರಡರ

ಸಾಮರಸ್ಯವನ್ನು ಕಾಪಾಡುವುದು. ಅನೇಕ ಸಂಸದೀಯ ಪ್ರಜಾಪ್ರಭುತ್ವಗಳ ಇತಿಹಾಸಗಳಲ್ಲಿ, ಅಂತಹದರಲ್ಲಿ ನಮ್ಮದೂ ಒಂದು, ಈ ಪಾತ್ರವು ಅತ್ಯಂತ ಸೂಕ್ಷ್ಮವಾದುದೆಂಬುದು ಸಾಬೀತಾಗಿದೆ. ಜೊತೆಗೆ, ಸದನದ ನಾಯಕನಾಗಿ ಅವರು ವಿರೋಧಪಕ್ಷಗಳ ಜೊತೆಯೂ ಸೂಕ್ತ ಸಂಬಂಧವನ್ನು ಹೊಂದಿರಬೇಕಾಗುತ್ತದೆ. ಎರಡೂ ಪರಸ್ಪರ ವಿರೋಧಿ ಸ್ಥಾನಗಳಲ್ಲಿರುವುದರಿಂದಾಗಿ ಇದೂ ಕಷ್ಟಕರವಾದುದೇ. ಐದನೆಯದಾಗಿ, ಇದು ಬಹು ಪ್ರಮುಖವಾದುದೂ ಹೌದು, ಒಕ್ಕೂಟ ಅಥವಾ ಅರೆಒಕ್ಕೂಟ ಸಂವಿಧಾನ ವ್ಯವಸ್ಥೆಯಲ್ಲಿನ ಸರ್ಕಾರಕ್ಕೆ ಅವರು ಮುಖ್ಯಸ್ಥರಾಗಿರುತ್ತಾರೆ. ಭಾರತದಲ್ಲಿ, ರಾಜ್ಯವು ಕೇಂದ್ರ ಸರ್ಕಾರದ ಆರ್ಥಿಕ ಸಹಾಯವನ್ನು ವಿಶೇಷಾಗಿ ಅವಲಂಬಿಸಬೇಕಾಗುತ್ತದೆ ಎಂಬುದನ್ನು ಗಮನಿಸಿದರೆ, ರಾಜ್ಯ ಸರ್ಕಾರವು ಕೇಂದ್ರದೊಡನೆ ಒಳ್ಳೆಯ ಸಂಬಂಧವನ್ನು ಹೊಂದಿರಬೇಕಾಗುವುದು ಅನಿವಾರ್ಯ. ಒಂದೇ ರಾಜಕೀಯ ಪಕ್ಷ ರಾಜ್ಯ ಹಾಗೂ ಕೇಂದ್ರಗಳಲ್ಲಿ ಅಧಿಕಾರದಲ್ಲಿದ್ದರೆ ಈ ಸಂಬಂಧ ಇದ್ದುದರಲ್ಲಿ ಸುಲಭ; ೧೯೬೭ ರಿಂದ ಈಚೆಗೆ ಈ ಸಂಬಂಧವನ್ನು ಹೊಂದುವುದು ದುಬಾರಿ ಎನಿಸಿಬಿಟ್ಟಿದೆ. ಬೇರೊಂದು ಪಕ್ಷವೇನಾದರೂ ಕೇಂದ್ರದಲ್ಲಿ ಅಧಿಕಾರದಲ್ಲಿದ್ದರೆ, ಮುಖ್ಯಮಂತ್ರಿಯ ಕೆಲಸ ಕಷ್ಟಕರವಾಗುತ್ತದೆ, ಅವರು ಆಡಳಿತ ಹಾಗೂ ರಾಜಕಾರಣ ನಿರ್ವಹಣೆಯಲ್ಲಿ ಹೆಚ್ಚು ಕೌಶಲಪೂರ್ಣವಾಗಿರಬೇಕಾಗುತ್ತದೆ. ಆರನೆಯದಾಗಿ, ಅವರು ಹೆಚ್ಚು ಹೆಚ್ಚಾಗಿ ಆರ್ಥಿಕ ನಿರ್ವಹಣೆಯ ಜವಾಬ್ದಾರಿಯನ್ನೂ ನಿರ್ವಹಿಸಬೇಕಾಗುತ್ತದೆ. ಅಂದರೆ, ಕೈಗಾರಿಕೆ, ತಂತ್ರಜ್ಞಾನ ಹಾಗೂ ಕೃಷಿಕ್ಷೇತ್ರಗಳ ಅಭಿವೃದ್ಧಿ ಸಾಧನೆಯಲ್ಲಿನ ಸಮಸ್ಯೆಗಳ ಕಡೆ ಅವರು ಗಮನ ಹರಿಸಬೇಕಾಗುತ್ತದೆ. ನೇರವಾದ ತೊಡಗುವಿಕೆಯಿಲ್ಲದಿದ್ದರೂ, ಮುಖ್ಯಮಂತ್ರಿಯವರ ಜವಾಬ್ದಾರಿ ಎಂದರೆ ಸರ್ಕಾರ ಮತ್ತು ಆರ್ಥಿಕತೆಗಳು ಹಾಗೂ ಆರ್ಥಿಕ ವ್ಯವಸ್ಥೆಯೊಳಗೇ ಬಂಡವಾಳಿಗರು ಮತ್ತು ಕಾರ್ಮಿಕರ ನಡುವಣ ಸಂಬಂಧಗಳು ಸಾಮರಸ್ಯದಿಂದಿರುವಂತೆ ನೋಡಿಕೊಳ್ಳುವುದು. ಏಳನೆಯದಾಗಿ, ಮುಖ್ಯಮಂತ್ರಿ, ಪ್ರಧಾನಿಗಳೂ ಹೌದು, ಆಧುನೀಕತೆಯೆಂಬ ಸಾಮಾಜಿಕ ಕ್ರಾಂತಿಯ ಪ್ರಕ್ರಿಯೆಯಲ್ಲಿರುವ ಸಮಾಜಗಳಲ್ಲಿ ಸಾಮಾಜಿಕ ನ್ಯಾಯ ಸಾಧನೆಗಾಗಿ ಹೆಚ್ಚು ತೊಡಗಿಕೊಳ್ಳಬೇಕಾಗುತ್ತದೆ. ಇದಕ್ಕೆ ಅವರು ಗುರಿಸಾಧನೆಯ ನೈತಿಕ ಹಾಗೂ ರಾಜಕೀಯ ಬದ್ಧತೆಯನ್ನು, ಹಾಗೂ ಆ ಬದ್ಧತೆಯನ್ನು ನೀತಿನಿರೂಪಣೆ ಹಾಗೂ ಕಾರ್ಯಕ್ರಮಗಳ ಮೂಲಕ ಪ್ರದರ್ಶಿಸಬೇಕಾಗುತ್ತದೆ.

ಮೈಸೂರಿನ, ಮುಖ್ಯಮಂತ್ರಿಗಳಾಗಿದ್ದ ಅವರು ಎರಡೂ ಅವಧಿಗಳಲ್ಲಿ ರಾಜ್ಯಕ್ಕೆ ಆ ಹೆಸರೇ ಇತ್ತು, ಮುಖ್ಯಮಂತ್ರಿಗಳಾಗಿ ನಿಜಲಿಂಗಪ್ಪನವರು ಮಾಡಿದ ಸಾಧನೆಗಳ ಪರಿಶೀಲನೆ ಮಾಡುವ ಮುಂಚೆ, ಏಕೀಕರಣಪೂರ್ವದಲ್ಲಿನ, ಆದರೆ ಪ್ರಜಾಸತ್ತಾತ್ಮಕವಾಗಿದ್ದ ಹಳೇ ಮೈಸೂರು ಸಂಸ್ಥಾನದ ವಿವಿಧ ಮಂತ್ರಿಮಂಡಲಗಳ ಇತಿಹಾಸದತ್ತ

ಕಣ್ಣು ಹಾಯಿಸುವುದು. ಸಂಸದೀಯ ಪ್ರಜಾಪ್ರಭುತ್ವ ಪದ್ಧತಿಯನ್ನು ಅಳವಡಿಸಿಕೊಳ್ಳುವ ಭಾರತದಲ್ಲಿ ಪ್ರಬಲವಾಗಿದ್ದ ಹಾಗೂ ಈಗಲೂ ಪ್ರಬಲವಾಗಿರುವ ರಾಜಕೀಯ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಹಿನ್ನೆಲೆಯಾಗಿ ಅರಿಯುವುದು, ಆವಶ್ಯಕ. ಈ ಸಂಸ್ಕೃತಿಯನ್ನು ಪಾರ್ಶ್ವಿಕ ಎಂದು ಕರೆಯಬಹುದು, ಏಕೆಂದರೆ ಆಡಳಿತ ಪಕ್ಷವು ಭಿನ್ನಮತದ ಒಳಜಗಳ ಗಳ ಪರಿಹಾರದಲ್ಲಿ ಹಾಗೂ ವಿರೋಧಪಕ್ಷಗಳ ಭಯವನ್ನು ಬದಿಗಿಟ್ಟು ಕಾರ್ಯನಿರ್ವಹಿಸ ಬೇಕಾಗುವುದರಲ್ಲಿಯೇ ಮುಖ್ಯಮಂತ್ರಿಗಳ ಕೌಶಲ ಮತ್ತು ಶಕ್ತಿಗಳು ವ್ಯರ್ಥವಾಗಿಬಿಡುತ್ತವೆ! ಪ್ರಜಾಸತ್ತಾತ್ಮಕ ಸರ್ಕಾರ ಸ್ಥಾಪನೆಗಾಗಿ ರಾಜ್ಯದಲ್ಲಿ ನಡೆದ ಹೋರಾಟದ ಫಲವಾಗಿ ೧೯೪೭ರ ಅಕ್ಟೋಬರ್‌ನಲ್ಲಿ ಹಳೆಯ ಮೈಸೂರು ರಾಜ್ಯದಲ್ಲಿ ಪೂರ್ಣಪ್ರಮಾಣದ ಜವಾಬ್ದಾರಿ ಹಾಗೂ ಪ್ರಾತಿನಿಧ್ಯಾತ್ಮಕ ಪ್ರಜಾಪ್ರಭುತ್ವವು ಸ್ಥಾಪನೆಗೊಂಡಿತು. ಆ ತಿಂಗಳಲ್ಲಿ, ಕೆ.ಸಿ. ರೆಡ್ಡಿಯವರು ಮುಖ್ಯಮಂತ್ರಿಗಳಾಗಿದ್ದ ಸಂಪೂರ್ಣ ಜವಾಬ್ದಾರಿ ಸರ್ಕಾರವು ಅಧಿಕಾರ ಸ್ವೀಕರಿಸಿತು. ಸಂಸದೀಯ ಅಥವಾ ಅಧ್ಯಕ್ಷೀಯ ಯಾವುದೇ ಆಗಿರಲಿ, ಆಧುನಿಕ ಪ್ರಜಾಪ್ರಭುತ್ವದ ಸ್ವರೂಪ ಮತ್ತು ಇತಿಹಾಸಗಳ ಬಗ್ಗೆ ತಿಳಿದಿರುವ ಯಾರಿ ಗಾದರೂ ಹೊಸ ರಾಜಕೀಯ ವ್ಯವಸ್ಥೆ ಎಂದರೆ ಗುಂಪುಗಾರಿಕೆ, ಕೋಮುವಾದ ಹಾಗೂ ರಾಜಕೀಯ ಅನೈತಿಕತೆ, ಜೊತೆಗೆ ವೈಯಕ್ತಿಕ ಆಕಾಂಕ್ಷೆಗಳು ಹಾಗೂ ಅಧಿಕಾರ ದಾಹಗಳು ತುಂಬಿದ ರಾಜಕಾರಣಿಗಳು– ಇವುಗಳು ತುಂಬಿರುವುದು ಎನಿಸುವುದರಲ್ಲಿ ಆಶ್ಚರ್ಯಕರವೆನಿಸುವುದಿಲ್ಲ. ಇದು ಸಹಜವೇ. ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆ ಯೆಂದರೆ ಒಂದು ಮುಕ್ತ ವ್ಯವಸ್ಥೆ, ಅದರಲ್ಲಿ ಎಲ್ಲ ವ್ಯಕ್ತಿಗಳು ಹಾಗೂ ಗುಂಪುಗಳಿಗೆ ಅಧಿಕಾರಕ್ಕೆ ಬರಲು ಸಾಂಸ್ಥಿಕ ಸಾಧ್ಯತೆಯಿರುತ್ತದೆ. ಇದರಿಂದಾಗಿ ತೀವ್ರ ರಾಜಕೀಯ ಪೈಪೋಟಿ, ಸಂಚುಗಳು ಹಾಗೂ ಇದುವರೆಗೆ ರಾಜಕೀಯದಿಂದ ಹೊರಗಿದ್ದ ವಿಷಯ ಗಳನ್ನೂ ರಾಜಕೀಯವಾಗಿಸುವ ತಂತ್ರಗಳು ತುಂಬಿದ ವಾತಾವರಣವು ಸೃಷ್ಟಿಯಾಗುತ್ತದೆ. ಸಾಮಾಜಿಕ ವಿಷಯಗಳು ಬರಬರುತ್ತ ರಾಜಕೀಯ ವಿಷಯಗಳಾಗುವುದು ಹೆಚ್ಚುತ್ತ ಹೋಗುತ್ತದೆ! ಮೈಸೂರಿನಲ್ಲಿನ ಹೊಸ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಒಕ್ಕಲಿಗ–ಲಿಂಗಾಯಿತರ ನಡುವಣ ಕೋಮು ಸಂಘರ್ಷವು ತೀವ್ರಗೊಂಡಿತು, ವೈಯಕ್ತಿಕ ಆಕಾಂಕ್ಷೆಗಳು ಪ್ರಬಲಗೊಂಡುವು, ಹೀಗಾಗಿ ಸಾರ್ವಜನಿಕ ಜೀವನ ಹಾಗೂ ಅಧಿಕಾರಗಳ ಕರ್ತವ್ಯಗಳೂ ಜವಾಬ್ದಾರಿಗಳೂ ಹಿಂದೆ ಸರಿದವು. ಇದರಿಂದಾಗಿ ಆಡಳಿತ ಪಕ್ಷದಲ್ಲಿನ ಆಂತರಿಕ ಘರ್ಷಣೆ ಮತ್ತು ಬಿಕ್ಕಟ್ಟುಗಳು ತೀವ್ರಗೊಂಡು ಅಸ್ಥಿರತೆ ಹಾಗೂ ಅನಿಶ್ಚಿತತೆಗಳು ಕಾಣಿಸಿಕೊಂಡವು. ಈ ಕಾರಣದಿಂದಾಗಿ ಮುಖ್ಯಮಂತ್ರಿ ಹಾಗೂ ಅವರ ಸಹೋದ್ಯೋಗಿ ಮಂತ್ರಿಗಳು ತಮ್ಮ ಸಾಮರ್ಥ್ಯ ಮತ್ತು ವೇಳೆಯನ್ನು ವ್ಯಯಿಸಬೇಕಾಗಿ ಬಂದದ್ದು ವಿರೋಧ ಪಕ್ಷವನ್ನು ಎದುರಿಸಬೇಕಾದ್ದರಿಂದಲ್ಲ, ಒಳಗಿನ ವೈರಿಯನ್ನು ಎದುರಿಸಲು.

ಈ ಸನ್ನಿವೇಶವು ಮತ್ತಷ್ಟು ಹದಗೆಟ್ಟದ್ದು ತನ್ನದೇ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಪಕ್ಷದ ಕೇಂದ್ರ ನಾಯಕತ್ವವು ಮೂಗು ತೂರಿಸಿದ್ದರಿಂದ. ಇಂತಹ ಮಧ್ಯಪ್ರವೇಶವು ರಾಜ್ಯ ರಾಜಕೀಯದಲ್ಲಿ ವಿಶೇಷ ಪಾತ್ರವನ್ನು ವಹಿಸಲು ಕಾರಣ, ರಾಜ್ಯ ಸರ್ಕಾರಗಳು ತಮ್ಮ ಸಂಪನ್ಮೂಲಗಳಿಗಾಗಿ ಕೇಂದ್ರದ ಆಜ್ಞೆಯನ್ನು ಪಾಲಿಸಬೇಕಾಗುವುದರಿಂದ. ಕೆ.ಸಿ. ರೆಡ್ಡಿಯವರು ವೈಯಕ್ತಿಕ ನೆಲೆಯಲ್ಲಿ ತಮ್ಮನ್ನು ನೆಹರೂ ಅವರೊಡನೆ ಗುರುತಿಸಿ ಕೊಂಡದ್ದರಿಂದಾಗಿ ಅವರ ಸಂಪುಟವು ಇದ್ದುದರಲ್ಲಿ ಸುಸೂತ್ರವಾಗಿ ಕಾರ್ಯ ನಿರ್ವಹಿಸು ವಂತಾಗಿತ್ತು. ಅವರ ಉತ್ತರಾಧಿಕಾರಿಯಾಗಿ ಮುಖ್ಯಮಂತ್ರಿಯಾದ ಮೊನಚು ಮಾತು ಹಾಗೂ ತಮ್ಮದೇ ನಿಲವುಗಳಿಂದ ಕೂಡಿದ್ದ ಕೆ. ಹನುಮಂತಯ್ಯನವರು ಅನಿವಾರ್ಯ ವಾಗಿ ಕೇಂದ್ರದೊಡನೆ ಮತ್ತೆ ಮತ್ತೆ ಸಂಘರ್ಷವನ್ನೆದುರಿಸಬೇಕಾಯಿತು. ಆದರೆ ಅವರ ಆಡಳಿತ ವಿಚಕ್ಷಣತೆ ಮತ್ತು ಘನತೆಗಳು ಕೇಂದ್ರದ ಮಧ್ಯಪ್ರವೇಶವನ್ನು ಕನಿಷ್ಠಗೊಳಿಸುವ ಅವರ ಶಕ್ತಿಗಳಾಗಿದ್ದವು. ಆದರೆ ಕೋಮುಸಂಘರ್ಷದಿಂದಾದ ಆಂತರಿಕ ಗುಂಪುಗಾರಿಕೆ ಹಾಗೂ ವೈಯಕ್ತಿಕ ಪೈಪೋಟಿಯಿಂದಾಗಿ ಮುಖ್ಯಮಂತ್ರಿಗಳು ಸಮಸ್ಯೆಗಳನ್ನೆದುರಿಸ ಬೇಕಾಗಿತ್ತು. ನಿಜಲಿಂಗಪ್ಪನವರೇ ಹನುಮಂತಯ್ಯನವರಿಂದ ಸಮಸ್ಯೆಯನ್ನೆದುರಿಸಬೇಕಾ ಗಿತ್ತು, ಇದಕ್ಕೆ ಕಾರಣ ಭ್ರಷ್ಟ ಹಾಗೂ ತತ್ವಹೀನ ವ್ಯಕ್ತಿಗಳನ್ನು ಸಂಪುಟದಲ್ಲಿ ಸೇರಿಸಿಕೊಂಡ ದ್ದನ್ನು ಅವರು ವಿರೋಧಿಸಿದುದೂ, ಹನುಮಂತಯ್ಯನವರು ತಮ್ಮ ರಾಜಕೀಯ ಪ್ರತಿಸ್ಪರ್ಧಿ ಯಾಗಿದ್ದ ಸಿದ್ದವೀರಪ್ಪನವರ ಮಾರ್ಗದರ್ಶನವನ್ನು ಪಡೆಯುತ್ತಿದ್ದುದೂ ಹನುಮಂತಯ್ಯ ನವರೊಂದಿಗಿನ ತಮ್ಮ ಸಂಬಂಧವು ಹುಳಿಯಾಗಲು ಕಾರಣವೆಂಬ ವಿಷಯವು ೧೯೫೨ರ ನಿಜಲಿಂಗಪ್ಪನವರ ದಿನಚರಿಯಲ್ಲಿ ದಾಖಲಾಗಿದೆ. ಹನುಮಂತಯ್ಯನವರು ಮಾರ್ಗ ದರ್ಶನಕ್ಕಾಗಿ ತಮ್ಮಲ್ಲಿಗೆ ಬರುತ್ತಿದ್ದುದನ್ನೂ, ಅದಕ್ಕೆ ಕಾರಣವಾಗಿದ್ದುದು ಪ್ರಾಯಶಃ ಸಿದ್ದವೀರಪ್ಪನವರೊಂದಿಗೆ ತಮ್ಮ ಸಂಬಂಧದ ಪರಿಣಾಮವನ್ನು ಇಲ್ಲವಾಗಿ ಸಲು ಎಂಬ ಅನುಮಾನವೂ ಆ ದಿನಚರಿಯಲ್ಲಿ ವ್ಯಕ್ತವಾಗಿದೆ. ಹನುಮಂತಯ್ಯನವರ ಮೂಲ ವ್ಯಕ್ತಿತ್ವವು ಅವರ ಗತ್ತು ಮತ್ತು ಭಟ್ಟಂಗಿಗಳಿಂದಾಗಿ ಮಸುಕಾಗಿತ್ತು. ಅವರ ಸಂಪುಟವು ಬೀಳಲು ಕಾರಣ ವೈಯಕ್ತಿಕ ಸಂಘರ್ಷಗಳೇ ಹೊರತು ತತ್ವ–ಸಿದ್ಧಾಂತಗಳ ಸಂಘರ್ಷವಲ್ಲ. ಅವರ ಪತನದಲ್ಲಿ ನಿಜಲಿಂಗಪ್ಪನವರೂ ಕೊಂಚಮಟ್ಟಿಗೆ ಭಾಗಿಗಳಾಗಿದ್ದಿರ ಬಹುದು; ಹನುಮಂತಯ್ಯನವರನ್ನು ಮುಂದುವರಿಸಲು ಅವರು ಅಸಮಾಧಾನವನ್ನು ೧೯೫೪ರ ದಿನಚರಿಯಲ್ಲಿ ನಿಜಲಿಂಗಪ್ಪನವರು ಪದೇ ಪದೇ ತೋರ್ಪಡಿಸಿಕೊಂಡಿರು ವುದರಿಂದಷ್ಟೇ ಈ ಊಹೆಯನ್ನು ಮಾಡಬಹುದು. ಹನುಮಂತಯ್ಯನವರ ನಿರ್ಗಮನದ ಬಳಿಕ, ಅವರ ಉತ್ತರಾಧಿಕಾರಿಯ ಆಯ್ಕೆಯ ಸಂಘರ್ಷಕ್ಕೆ ವೇದಿಕೆ ಸಿದ್ಧವಾಯಿತು. ಪ್ರಮುಖ ಪ್ರತಿಸ್ಪರ್ಧಿಗಳಾಗಿದ್ದವರೆಂದರೆ ಸಾಹುಕಾರ್ ಚೆನ್ನಯ್ಯ ಮತ್ತು ಎಚ್.ಕೆ. ವೀರಣ್ಣ

ಗೌಡರು. ನಿಜಲಿಂಗಪ್ಪನವರು ಮೂರನೆಯವರೊಬ್ಬರನ್ನು ಬಯಸಿದರು. ಚೆನ್ನಿಗ ರಾಮಯ್ಯನಂತಹವರೊಬ್ಬರು ಹನುಮಂತಯ್ಯನವರ ಬಳಿಕ ಬರಬೇಕೆಂಬುದು ಅವರ ಬಯಕೆಯಾಗಿತ್ತು. ಅವರ ಇಷ್ಟಕ್ಕೆ ವಿರೋಧವಾಗಿ ಕಡಿದಾಳ್ ಮಂಜಪ್ಪನವರು ಮುಖ್ಯ ಮಂತ್ರಿಯಾದರು. ಆದರೆ ಮಂಜಪ್ಪನವರು ಪ್ರಾಮಾಣಿಕರು ಮತ್ತು ಉನ್ನತ ವ್ಯಕ್ತಿತ್ವದವರು ಎಂಬುದು ಅವರಿಗೂ ತಿಳಿದಿತ್ತು.

೧೯೫೬-೫೭ ಮತ್ತು ೧೯೬೨-೬೮ರ ನಡುವಣ ಎರಡು ಅವಧಿಗಳಲ್ಲಿ ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿ ಎದುರಿಸಿದ ಸಂಕಷ್ಟಗಳನ್ನು ಈ ಅರ್ಥದಲ್ಲಿ, ಅಂದರೆ ಸ್ವಾತಂತ್ರ್ಯೋತ್ತರ ಭಾರತದ ಕಾಂಗ್ರೆಸ್ ಸಂಸ್ಕೃತಿಯಾದ ಗುಂಪುಗಾರಿಕೆ ಮತ್ತು ಆಂತರಿಕ ಸಂಘರ್ಷಗಳು ಮುಂದುವರಿದಿದ್ದ ಹಿನ್ನೆಲೆಯಲ್ಲಿ ನೋಡಬೇಕು.

ಸಂಸತ್ತಿನ ವಿಧೇಯಕದ ಮೂಲಕ ವಿಶಾಲ ಮೈಸೂರು ರಾಜ್ಯವು ೧೯೫೬ನೇ ನವೆಂಬರ್ ೧ನೇ ತಾರೀಕು ಅಸ್ತಿತ್ವಕ್ಕೆ ಬಂತು. ಹಿಂದಿನ ಮೈಸೂರು ಮಹಾರಾಜರಾದ ಜಯಚಾಮರಾಜ ಒಡೆಯರ್ ಅವರನ್ನು ಹೊಸ ರಾಜ್ಯದ ಮೊದಲ ರಾಜ್ಯಪಾಲರನ್ನಾಗಿ ನೇಮಿಸಲಾಯಿತು. ತನ್ನ ಜೀವಮಾನದ ಬಹುಭಾಗವನ್ನು ಏಕೀಕರಣಕ್ಕಾಗಿ ಮೀಸಲಿಟ್ಟ ವ್ಯಕ್ತಿಯೊಬ್ಬರು ಹೊಸ ರಾಜ್ಯದ ಉದಯದ ಬಳಿಕ ಅದರ ಮೊದಲ ಮುಖ್ಯಮಂತ್ರಿ ಯಾಗುವುದು ಸಮಂಜಸವೇ ಸರಿ. ನಿಜಲಿಂಗಪ್ಪನವರನ್ನು, ಅವರಾಗ ವಿಧಾನಸಭೆಯ ಸದಸ್ಯರಾಗಿರದಿದ್ದರೂ, ಮುಖ್ಯಮಂತ್ರಿಯಾಗಿ ಆರಿಸಿದ್ದು ಈ ದಿಸೆಯಲ್ಲಿ ಅವರ ಸೇವೆ ಯನ್ನು ಗುರುತಿಸಿದ ಪ್ರತೀಕವಾಗಿತ್ತು. ಭಾರತದ ರಾಷ್ಟ್ರಪತಿಗಳಾದ ರಾಜೇಂದ್ರ ಪ್ರಸಾದರು ೧೯೫೬ನೇ ನವೆಂಬರ್ ೧ ರಂದು ಸೆಂಟ್ರಲ್ ಕಾಲೇಜು ಮೈದಾನದಲ್ಲಿ ಮಧ್ಯಾಹ್ನ ೩.೩೦ಕ್ಕೆ ಹೊಸರಾಜ್ಯವನ್ನು ಉದ್ಘಾಟಿಸಿದರು. ನಿಜಲಿಂಗಪ್ಪನವರು ತಮ್ಮನ್ನೂ ಒಳ ಗೊಂಡಂತೆ ಹನ್ನೆರಡು ಮಂದಿಯಿದ್ದ ಸಂಪುಟವನ್ನು ಪ್ರಕಟಿಸಿದರು. ಮಿಕ್ಕ ಸಚಿವರು ಗಳೆಂದರೆ ಕಡಿದಾಳ್ ಮಂಜಪ್ಪ, ಎ.ಬಿ. ಶೆಟ್ಟಿ, ಎಂ.ಪಿ. ಪಾಟೀಲ್, ಸಿ.ಎಂ. ಪೂಣಚ್ಚ, ಎಚ್.ಎಸ್. ರುದ್ರಪ್ಪ, ಜಗನ್ನಾಥರಾವ್ ಚಂದರ್ಕಿ, ಟಿ. ಮರಿಯಪ್ಪ, ಎಂ.ವಿ. ರಾಮ ರಾವ್, ಆರ್ ಚೆನ್ನಿಗರಾಮಯ್ಯ, ಭೀಮಪ್ಪ ನಾಯಕ್ ಮತ್ತು ಎಚ್.ಕೆ. ವೀರಣ್ಣಗೌಡ. ಒಳ ಪ್ರಾದೇಶಿಕ ಪ್ರಾತಿನಿಧ್ಯದ ಕಾರಣದಿಂದ ಮುಖ್ಯಮಂತ್ರಿಯವರನ್ನೊಳಗೊಂಡಂತೆ ಹಳೆ ಮೈಸೂರಿನ ಎಂಟು ಮಂದಿಯಿದ್ದರು. ಇನ್ನುಳಿದ ನಾಲ್ಕು ವಿಭಾಗಗಳಿಂದ ಒಬ್ಬೊಬ್ಬರು: ಮದರಾಸು ಕರ್ನಾಟಕದಿಂದ ಎ.ಬಿ. ಶೆಟ್ಟಿ, ಮುಂಬಯಿ ಕರ್ನಾಟಕದಿಂದ ಎಂ.ಪಿ. ಪಾಟೀಲ್, ಕೊಡಗಿನಿಂದ ಸಿ.ಎಂ. ಪೂಣಚ್ಚ ಹಾಗೂ ಹೈದರಾಬಾದ್ ಕರ್ನಾಟಕದಿಂದ ಜಗನ್ನಾಥರಾವ್ ಚಂದರ್ಕಿ. ಜಾತಿವಾರು ವಿಂಗಡಣೆಯೆಂದರೆ,

ಮುಖ್ಯಮಂತ್ರಿಯವರನ್ನೊಳಗೊಂಡಂತೆ ಮೂವರು ಲಿಂಗಾಯತರು, ಇಬ್ಬರು ಒಕ್ಕಲಿಗರು, ದಕ್ಷಿಣ ಕನ್ನಡದ ಒಬ್ಬರು ಮತ್ತು ಕೊಡಗಿನ ಒಬ್ಬರು ಬಂಟರು, ಒಬ್ಬ ಬ್ರಾಹ್ಮಣರು ಹಾಗೂ ಒಬ್ಬ ಹರಿಜನರು ಹಾಗೂ ಹಿಂದುಳಿದ ಜಾತಿಗಳಿಂದ ಒಬ್ಬರು. ಇದ್ದ ಕಡಿಮೆ ಅವಧಿ ಹಾಗೂ ಹೊಸ ಸನ್ನಿವೇಶದ ಹಿನ್ನೆಲೆಯಲ್ಲಿ ನೋಡಿದಾಗ, ಅದು ಪ್ರಾದೇಶಿಕ ಹಾಗೂ ಜಾತಿವಾರು ಪ್ರಾತಿನಿಧ್ಯದ ವಿಷಯದಲ್ಲಿ ಬಹುಪಾಲು ಸಮತೋಲನದ ಸಂಪುಟ. ನಿಜಲಿಂಗಪ್ಪನವರು ಜಾತಿ ಪರಿಗಣನೆಗಿಂತ ಪ್ರಾದೇಶಿಕ ಪ್ರಾತಿನಿಧ್ಯಕ್ಕೇ ಹೆಚ್ಚು ಪ್ರಾಮುಖ್ಯವಿತ್ತಂತೆ ಅನ್ನಿಸಬಹುದು. ಅಜ್ಞಾತ ಹಳ್ಳಿಯ ಹುಡುಗನೊಬ್ಬನನ್ನು ಇತಿಹಾಸವು ರಾಜ್ಯದ ಬಹು ಮುಖ್ಯ ಹುದ್ದೆಗೇರಿಸಿದಾಗ ನಿಜಲಿಂಗಪ್ಪನವರು ವಿಚಲಿತಗೊಳ್ಳದೆ, ಸಮಚಿತ್ತದಿಂದಿದ್ದರು, ಎಂದಿನ ಲವಲವಿಕೆಯನ್ನೂ ಉಳಿಸಿಕೊಂಡಿದ್ದರು. "ನೀವು ಮೈಸೂರು ಪೇಟ ಧರಿಸುತ್ತೀರೋ ಗಾಂಧಿ ಟೋಪಿಯನ್ನೋ?" ಎಂದು ವರದಿಗಾರನೊಬ್ಬ ಪ್ರಶ್ನಿಸಿದಾಗ ಅವರು ನಗುತ್ತ, "ಖಂಡಿತ ಪೇಟ ಅಲ್ಲ. ಚಳಿ ಅನ್ನಿಸಿದಾಗ ಟೋಪಿ ಹಾಕಿಕೊಳ್ತೀನಿ, ಇಲ್ಲದಿದ್ದರೆ ಬರಿ ತಲೆಯಲ್ಲೇ ಇರ್ತೀನಿ" ಎಂದು ಉತ್ತರವಿತ್ತಿದ್ದರು. ಸಂಪುಟ ರಚನೆ ಎಂದರೆ ಹಗ್ಗದ ಮೇಲಿನ ನಡೆದಾಟದಷ್ಟು ಕಷ್ಟಕರ, ಹೀಗಾಗಿ ಅದು ನಿಜಲಿಂಗಪ್ಪನವರಿಗೂ ಸುಲಭವಾಗಿರಲಾರದು. ಹಾಗೆ ನೋಡಿದರೆ ನಿಗದಿತ ದಿನಕ್ಕೆ ಒಂದು ದಿನ ತಡವಾಗಿ ಅವರು ಸಂಪುಟವನ್ನು ಪ್ರಕಟಿಸಿದ್ದು; ಅದಕ್ಕೆ ಕಾರಣ ಹಳೆಯ ಮೈಸೂರಿನ ಪ್ರಬಲ ನಾಯಕರಲ್ಲೊಬ್ಬರಾದ ಚೆನ್ನಯ್ಯನವರನ್ನು ಸಂಪುಟ ಸೇರುವಂತೆ ಮನವೊಲಿಸುವಲ್ಲಿ ಅವರು ನಿರತರಾಗಿದ್ದರು, ಆದರೆ ಅವರ ಪ್ರಯತ್ನ ಫಲ ನೀಡಲಿಲ್ಲ. ಇದನ್ನು ಚೆನ್ನಯ್ಯನವರೇ ಪತ್ರಿಕಾ ಹೇಳಿಕೆಯೊಂದರಲ್ಲಿ ತಿಳಿಸಿ, ಸಾಕಷ್ಟು ಆಲೋಚನೆ ಮಾಡಿಯೇ ತಮ್ಮ ತೀರ್ಮಾನವನ್ನು ಕೈಗೊಂಡುದಾಗಿ ವಿವರಿಸಿದರು. ೧೯೫೬ನೇ ನವೆಂಬರ್ ೧ ರಂದು ಮಾಡಿದ ಆಕಾಶವಾಣಿ ಭಾಷಣದಲ್ಲಿ ನಿಜಲಿಂಗಪ್ಪನವರು ಭಾಷಾವಾರು ಪ್ರಾಂತಗಳು ದೇಶವನ್ನು ಬಲಪಡಿಸುತ್ತವೆಂಬ ನಿರೀಕ್ಷೆಯನ್ನು ವ್ಯಕ್ತಪಡಿಸಿದರು, ಆದರೆ ಅದೇನಾದರೂ ದೇಶದ ಹಿತಕ್ಕೆ ಮಾರಕವಾದರೆ ಬದಲಾಯಿಸಲೂ ಸಿದ್ಧರಿರಬೇಕೆಂದು ಎಚ್ಚರಿಸಿದರು. ಇದಿನ್ನೂ ಆರಂಭ, ರಾಜ್ಯ ಕಟ್ಟುವ ಕೆಲಸ ಮುಂದಿದೆ. ಇದಾಗಲೇ ಉತ್ತಮ ಬೆಳವಣಿಗೆಯನ್ನು ತೋರಿಸಿದ್ದರೂ, ಕೃಷಿ, ನೀರಾವರಿ, ಅರಣ್ಯ ಸಂಪತ್ತು, ಹಡಗು ತಯಾರಿಕೆ, ಮೀನುಗಾರಿಕೆ ಮತ್ತು ತಂಬಾಕು ಕ್ಷೇತ್ರಗಳಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಬೇಕಿದೆ. ಕರ್ನಾಟಕವು ಸಂಪನ್ಮೂಲಗಳ ದೃಷ್ಟಿಯಿಂದ ಸಮೃದ್ಧವಾದ ರಾಜ್ಯ. ಆದರೆ ರಾಜ್ಯವು ಕೇಂದ್ರದ ಸಹಾಯವಿಲ್ಲದೆ ತನ್ನ ಗುರಿಗಳನ್ನು ಸಾಧಿಸಲಾರದು, ಎರಡರ ಗುರಿಯೂ ಕಲ್ಯಾಣ ರಾಜ್ಯ ಸ್ಥಾಪನೆಯೇ ಆಗಿದೆ. ರಾಜ್ಯಕ್ಕೆ ವಿಶೇಷ ಸಮಸ್ಯೆಯೊಂದು ಎದುರಿನಲ್ಲಿದೆ, ಅದಕ್ಕೆ ಕಾರಣ ಅದರಲ್ಲಿ

ರಾಷ್ಟ್ರಪತಿ ಡಾ. ರಾಜೇಂದ್ರಪ್ರಸಾದ್ ಮತ್ತು ಶ್ರೀ ಜಯಚಾಮರಾಜೇಂದ್ರ ಒಡೆಯರ್ ಜೊತೆಗೆ ಎಸ್ಸೆನ್

ಐದು ವಿಭಿನ್ನ ವ್ಯವಸ್ಥೆಗಳ ಆಡಳಿತದಲ್ಲಿದ್ದು ಅಭಿವೃದ್ಧಿಯ ವಿವಿಧ ಮಟ್ಟಗಳನ್ನು ಹೊಂದಿರುವ ಭಾಗಗಳು ಸೇರಿರುವುದು. ಮೊದಲ ಆದ್ಯತೆಯೆಂದರೆ ಭಾವೈಕ್ಯ ಏಕೀಕರಣ ಚಳವಳಿಯ ಕಾಲದಲ್ಲಿಯೇ ಇದು ಇರುವುದು ವ್ಯಕ್ತವಾಗಿದೆ ಎಂಬುದು ನಿಜವಾದರೂ, ಅದನ್ನಿನ್ನೂ ಬಲಪಡಿಸಬೇಕಿದೆ ಎಂದೆಲ್ಲ ವಿವರಿಸಿದರು. ಮುಖ್ಯಮಂತ್ರಿಗಳ ದೊಡ್ಡ ತಲೆನೋವೆಂದರೆ ಖಾತೆಗಳ ವಿಂಗಡಣೆ, ಇದರಿಂದ ಸಹೋದ್ಯೋಗಿಗಳಲ್ಲಿ ಅಸಮಾಧಾನ ಮೂಡಬಹುದು. ನಿಜಲಿಂಗಪ್ಪನವರು ಇದರಲ್ಲಿ ಯಶಸ್ವಿಗಳಾದಂತೆ ಕಂಡಿತು. ತಮ್ಮ ಬಳಿ ಸಾಮಾನ್ಯ ಆಡಳಿತ, ನಾಗರಿಕ ಸೇವೆಗಳು, ಭ್ರಷ್ಟಾಚಾರ ನಿರ್ಮೂಲನ, ಸಾರ್ವಜನಿಕ ಸೇವಾ ಆಯೋಗ, ಮತ್ತು ಕೋಲಾರ ಚಿನ್ನದ ಗಣಿಗಳ ರಾಷ್ಟ್ರೀಕರಣ – ಈ ವಿಭಾಗ ಗಳನ್ನಿರಿಸಿಕೊಂಡರು. ಕಡಿದಾಳ್ ಮಂಜಪ್ಪನವರು ವಿದ್ಯಾಮಂತ್ರಿಗಳು, ಎ.ಬಿ. ಶೆಟ್ಟಿ–ಆರೋಗ್ಯ, ಎಂ.ಪಿ. ಪಾಟೀಲ್–ಕಂದಾಯ, ಸಿ.ಎಂ. ಪೂಣಚ್ಚ–ವಾಣಿಜ್ಯ ಮತ್ತು ಕೈಗಾರಿಕೆ, ಎಚ್.ಎಸ್. ರುದ್ರಪ್ಪ–ಕೃಷಿ, ಅರಣ್ಯ, ಮೀನುಗಾರಿಕೆ ಮತ್ತು ಗ್ರಾಮ ಕೈಗಾರಿಕೆ, ಟಿ. ಮರಿಯಪ್ಪ–ಹಣಕಾಸು, ಮತ್ತು ಎಸ್‌ಸಿ ಮತ್ತು ಎಸ್‌ಟಿಗಳನ್ನೊಳಗೊಂಡಂತೆ ದುರ್ಬಲ ವರ್ಗಗಳ ಕಲ್ಯಾಣ, ಎಂ.ವಿ. ರಾಮರಾವ್–ಕಾನೂನು, ವಾರ್ತೆ, ಗೃಹ ಮತ್ತು ಸಾರಿಗೆ, ಆರ್. ಚೆನ್ನಿಗರಾಮಯ್ಯ–ಸ್ಥಳಿಯ ಸಂಸ್ಥೆಗಳು ಮತ್ತು ಎಸ್‌ಸಿ ಮತ್ತು ಎಸ್‌ಟಿಗಳ ಕಲ್ಯಾಣ, ಭೀಮಪ್ಪ ನಾಯಕ್–ಸಹಕಾರ, ಮಾರುಕಟ್ಟೆ ಮತ್ತು ಸರ್ವೋದಯ, ಎಚ್.ಕೆ. ವೀರಣ್ಣಗೌಡ–ಲೋಕೋಪಯೋಗಿ ಮತ್ತು ವಿದ್ಯುತ್ ಖಾತೆಗಳನ್ನು ಪಡೆದರು. ಖಾತೆಗಳನ್ನು ಪ್ರಕಟಿಸಿದ ಬಳಿಕ ಮುಖ್ಯಮಂತ್ರಿಗಳು, ಹೊಸ ಸರ್ಕಾರದ ಕಾರ್ಯ ವೈಖರಿಯೆಂದರೆ ಆಡಂಬರ ರಹಿತತೆಯಿಂದ ಸರಳವೂ ಕಾರ್ಯಸಾಧುವೂ ಆದ ಮಾರ್ಗವನ್ನು ಅನುಸರಿಸುವುದು ಎಂದು ಘೋಷಿಸಿದರು. ಕಾಯಿಲೆಯಲ್ಲಿರುವ ಅಂಬಲಿ ಚನ್ನಬಸಪ್ಪನವರನ್ನು ಚೇತರಿಕೆಯ ಬಳಿಕ ಹದಿಮೂರನೆಯ ಮಂತ್ರಿಯಾಗಿ ತೆಗೆದು ಕೊಳ್ಳಲಾಗುವುದು ಎಂದು ಪತ್ರಿಕೆಗಳು ಪ್ರಕಟಿಸಿದುವು. ನಿಜಲಿಂಗಪ್ಪನವರ ಮುಂದೆ ಐದು ವಿಭಿನ್ನ ಪ್ರದೇಶಗಳ ಸಂಯೋಜನೆಯ ಕಠಿಣ ಪರಿಸ್ಥಿತಿ ಒಂದು ಸವಾಲಾಗಿತ್ತು. ೧೯೫೬ನೇ ನವೆಂಬರ್ ೮ ನೇ ತೇದಿಯಂದು ಹೊರಡಿಸಿದ ಹುಬ್ಬಳ್ಳಿಯ ಒಂದು ಪತ್ರಿಕಾ ಹೇಳಿಕೆಯಲ್ಲಿ, ಉದಾಹರಣೆಗೆ, ಹೊಸ ಸರ್ಕಾರವು ತನ್ನ ಸ್ಥಳಿಯ ಕಚೇರಿ ಗಳೊಂದಿಗೆ ಇನ್ನೂ ಸಮರ್ಪಕವಾದ ನಿಯಂತ್ರಣ ಹಾಗೂ ಸಂಪರ್ಕಗಳನ್ನು ಸಾಧಿಸಿಲ್ಲ ವೆಂದೂ, ಇದರಿಂದಾಗಿ ಆಡಳಿತ ಹಾಗೂ ಸಾರ್ವಜನಿಕರಿಬ್ಬರಿಗೂ ಅನನುಕೂಲವಾಗಿದೆ ಯೆಂದು ಹೇಳಿತು.

ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿ ಮೊದಮೊದಲು ಎದುರಿಸಿದ ಮುಖ್ಯ ಸಮಸ್ಯೆಗಳೆಂದರೆ ಸುಮಾರಾಗಿಯಾದರೂ ಕಾರ್ಯನಿರ್ವಹಿಸುವಂತಹ ಆಡಳಿತ

ವ್ಯವಸ್ಥೆಯನ್ನು ರೂಪಿಸುವುದರ ಕುರಿತು. ೧೯೫೬ನೇ ನವೆಂಬರ್ ೮ ರಂದು ಶಿವಮೊಗ್ಗ ದಲ್ಲಿ ರಾಜ್ಯಸಭೆಯ ಉಪಾಧ್ಯಕ್ಷರಾದ ಎಸ್. ವಿ. ಕೃಷ್ಣಮೂರ್ತಿರಾವ್ ಅವರಿಂದ ಉದ್ಘಾಟನೆಗೊಂಡು ನಡೆದ ಉಪ್ಪಾರ ಸಮ್ಮೇಳನದಲ್ಲಿ, ನಿಜಲಿಂಗಪ್ಪನವರು ಮಾತ ನಾಡುತ್ತ ಅಧಿಕಾರಿಗಳು ಜನರ ಗೆಳೆಯರಂತೆ, ತಾತ್ವಿಕರಂತೆ ಹಾಗೂ ಮಾರ್ಗದರ್ಶಕರಂತೆ ಕೆಲಸ ಮಾಡಬೇಕೆಂದು ಕರೆ ಕೊಟ್ಟರು. ಹೊಸ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ವಿ.ಆರ್. ರಾವ್ ಅವರು ೧೯೫೬ನೇ ನವೆಂಬರ್ ೧೦ ರಂದು ಬೆಂಗಳೂರಿನಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತ, ಹೈದರಾಬಾದ್, ಕೊಡಗು ಮತ್ತು ಮದರಾಸುಗಳಿಂದ ಭಾರಿ ಸಂಖ್ಯೆಯ ನಾನ್-ಗೆಜೆಟೆಡ್ ನೌಕರರು ರಾಜಧಾನಿಗೆ ಬಂದಿಳಿದಿದ್ದಾರೆಂದು ತಿಳಿಸಿ, ಅವರಿಗೆ ಅವಕಾಶಗಳನ್ನು ನೀಡಬೇಕಾಗಿದೆಯೆಂದು ಹೇಳಿದರು. ಅಲ್ಲದೆ, ಸರ್ಕಾರವು ಇವುಗಳಲ್ಲಿ ಬಹುತೇಕ ಕೇಸುಗಳನ್ನು ಬಗೆಹರಿಸಿರುವುದಾಗಿಯೂ ಪ್ರಕಟಿಸಿ ದರು. ಆಡಳಿತದ ಸಣ್ಣ ಪುಟ್ಟ ವಿವರಗಳ ಕಡೆಗೂ ನಿಜಲಿಂಗಪ್ಪನವರು ನೀಡುತ್ತಿದ್ದ ಪ್ರಾಮುಖ್ಯ ಗಮನಾರ್ಹವಾದುದು. ಐಎಂಆರ್‌ಯುಪಿ ಸಂಶೋಧನೆಯ ರಾಜ್ಯ ಘಟಕ ವನ್ನು ಉದ್ಘಾಟಿಸುವ ಸಂದರ್ಭದಲ್ಲಿ ಮೈಸೂರಿನ ಎರಡನೆಯ ಪಂಚವಾರ್ಷಿಕ ಯೋಜನೆ ಯನ್ನು ನಿಜಲಿಂಗಪ್ಪನವರು ಬಿಡುಗಡೆಗೊಳಿಸಿ, ಈ ಘಟಕವು ರಾಜ್ಯ ಸರ್ಕಾರವು ಬದ್ಧವಾಗಿರುವ ಸಮಾಜವಾದೀ ಸ್ವರೂಪದ ಸಮಾಜ ನಿರ್ಮಾಣಕ್ಕನುಗುಣವಾಗಿ ರಾಜ್ಯದ ಆಡಳಿತ ವ್ಯವಸ್ಥೆ ಇರಬೇಕಾದ ರೀತಿಯನ್ನು ಕುರಿತು ಅಧ್ಯಯನ ನಡೆಸುವುದಾಗಿ ಪ್ರಕಟಿಸಿದರು. ಹೊಸ ಸರ್ಕಾರವು ಎದುರಿಸುತ್ತಿದ್ದ ಪ್ರಮುಖ ಸಮಸ್ಯೆಗಳಲ್ಲಿ ಒಂದು ಎಂದರೆ ರಾಜ್ಯದ ಐದು ಪ್ರದೇಶಗಳಲ್ಲಿನ ವಿಭಿನ್ನ ಗೇಣಿ ಕಾನೂನುಗಳು. ಅಲ್ಲದೆ, ಅವುಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಒಬ್ಬೊಬ್ಬರದು ಒಂದೊಂದು ಅಭಿಪ್ರಾಯವಿದ್ದುದರಿಂದ ಸಮಸ್ಯೆಯ ಸ್ವರೂಪವು ಮತ್ತಷ್ಟು ಗೊಂದಲಕ್ಕೀಡಾಗಿತ್ತು. ಮುಂಬಯಿ ಕರ್ನಾಟಕದಲ್ಲಿನ ಕಾನೂನು ವಿಶೇಷದ್ದು. ಈ ಪ್ರದೇಶದ ಬಹುತೇಕ ಶಾಸಕರೂ ಅಧಿಕಾರಿಗಳೂ ಧಾರವಾಡದಲ್ಲಿ ೧೭ನೇ ನವೆಂಬರ್‌ರಂದು ಸಭೆ ಸೇರಿ ಸದ್ಯದ ಮುಂಬಯಿ ಗೇಣಿ ಕಾನೂನುಗಳು ರೈತ ಹಾಗೂ ಭೂಮಾಲೀಕ ಇಬ್ಬರ ಹಿತಾಸಕ್ತಿಗಳನ್ನೂ ಕಡೆಗಣಿಸಿರುವುದರಿಂದ ಅವುಗಳನ್ನು ಬದಲಾಯಿಸಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಕಂದಾಯ ಸಚಿವ ಎಂ.ಪಿ. ಪಾಟೀಲ್ ಆ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶೀಘ್ರವೇ ಏಕರೂಪ ಕಾನೂನನ್ನು ರಚಿಸುವುದಾಗಿ ಸಚಿವರು ಆಶ್ವಾಸನೆಯಿತ್ತರು.

ರಾಜ್ಯದ ಜನತೆಯನ್ನುದ್ದೇಶಿಸಿ ನಿಜಲಿಂಗಪ್ಪನವರು ಮಾಡಿದ್ದ ಪ್ರಸಾರ ಭಾಷಣದಲ್ಲಿ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಗರಿಷ್ಠ ಪ್ರಮಾಣದ ಹಣಕಾಸು ಸಹಾಯವನ್ನು

ಪಡೆಯುವುದು ಬಹು ಮುಖ್ಯ ಕೆಲಸವೆಂದು ಹೇಳಿದ್ದರು. ರಾಜ್ಯ ಉದ್ಘಾಟನೆಗೊಂಡ ಕೆಲವೇ ವಾರಗಳಲ್ಲಿ, ಅಂದರೆ ೨೨ನೇ ತಾರೀಕು, ರಾಜ್ಯವು ಎದುರಿಸುತ್ತಿದ್ದ ತೀವ್ರ ಸಮಸ್ಯೆಗಳ ಬಗ್ಗೆ ಕೇಂದ್ರ ಸಚಿವರುಗಳೊಂದಿಗೆ ಅವರು ಚರ್ಚೆ ನಡೆಸಿದರು. ನೆಹರೂ ಮತ್ತು ಕಾಂಗ್ರೆಸ್ ಅಧ್ಯಕ್ಷ ಯು.ಎನ್. ಧೇಬರ್ ಅವರನ್ನು ಕಂಡು ತಮ್ಮ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಐಕಮತ್ಯದೆಡೆಗೆ ಸಾಗಿದೆಯೆಂಬ ಭರವಸೆಯಿತ್ತರು. ಇದರಿಂದ ತಮ್ಮ ಸರ್ಕಾರಕ್ಕೆ ಹೆಚ್ಚು ಬಲ ಬರುವುದೆಂದು ತಿಳಿಸಿದರು. ನಿರ್ದಿಷ್ಟವಾಗಿ, ಮಂಗಳೂರು–ಹಾಸನ, ಹುಬ್ಬಳ್ಳಿ–ಕಾರವಾರ ರೈಲು ಮಾರ್ಗಗಳ ಬಗ್ಗೆ, ಬಳ್ಳಾರಿ ಮತ್ತು ಬೆಳಗಾವಿಗಳಿಗೆ ರೈಲ್ವೆ ಅನುಕೂಲಗಳು ಹಾಗೂ ರಾಜ್ಯದ ರೈಲುಗಳ ವೇಗವನ್ನು ಹೆಚ್ಚಿಸುವ ಕುರಿತು ಅವರು ರೈಲ್ವೆ ಸಚಿವರೊಂದಿಗೆ ಚರ್ಚಿಸಿದರು. ಕೃಷಿ ಮಂತ್ರಿಗಳನ್ನು ಭೇಟಿ ಮಾಡಿ ರಾಜ್ಯದಲ್ಲಿ ಮೀನುಗಾರಿಕೆ ಹಾಗೂ ಒಳ–ಸಮುದ್ರ ಮೀನುಗಾರಿಕೆಗಳ ಅಭಿವೃದ್ಧಿಗೆ ಹೆಚ್ಚಿನ ನೆರವನ್ನು ಬೇಡಿದರು. ಕೆನಡಾದ ಮೀನುಗಾರಿಕೆ ತಜ್ಞರು ರಾಜ್ಯಕ್ಕೆ ಭೇಟಿ ಕೊಡಲಿರುವ ವಿಷಯವನ್ನೂ ಸಚಿವರಿಗೆ ತಿಳಿಸಿದರು. ನೀರಾವರಿ ಸಚಿವರೊಂದಿಗಿನ ಮಾತುಕತೆಯಲ್ಲಿ ಮಲಪ್ರಭಾ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆಗಳ ತ್ವರಿತಗತಿಗೆ ಆಗ್ರಹಿಸಿದರು. ಯೋಜನಾ ಆಯೋಗದೊಡನೆ ನಡೆಸಿದ ಭೇಟಿಯಲ್ಲಿ ಮಂಗಳೂರು ಬಂದರನ್ನು ಅಭಿವೃದ್ಧಿ ಹಾಗೂ ಆಧುನಿಕೀಕರಣಗಳಿಗೆ ಒಳಪಡಿಸಬೇಕಾದ ತುರ್ತನ್ನೂ, ಕಾರವಾರ, ಭಟ್ಕಳ ಮತ್ತು ಮಲ್ಪೆ ಬಂದರುಗಳ ಅಭಿವೃದ್ಧಿಯ ಆವಶ್ಯಕತೆಯನ್ನೂ ನಿವೇದಿಸಿದರು. ದೆಹಲಿಯಿಂದ ಹಿಂದಿರುಗಿದ ಮೇಲೆ, ನವೆಂಬರ್ ೨೩ ರಂದು ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ಮುಖ್ಯಮಂತ್ರಿ ನಿಜಲಿಂಗಪ್ಪನವರು ಮಾತನಾಡುತ್ತ, ಭಾಷೈಕ್ಯವನ್ನು ಸಾಧಿಸಿದ್ದರೂ ಐದು ಪ್ರದೇಶಗಳಲ್ಲಿನ ಆಡಳಿತ, ಸೇವಾ ನಿಯಮಗಳು ಹಾಗೂ ಕಾನೂನುಗಳ ಏಕರೂಪತೆಯನ್ನು ಇನ್ನೂ ಸಾಧಿಸಬೇಕಾಗಿದೆಯೆಂದು ಅಭಿಪ್ರಾಯ ಪಟ್ಟರು. ತುಂಬ ಸಂಕೀರ್ಣವಾದ ವಿಷಯವಾದ್ದರಿಂದ ಅವನ್ನು ಬಗೆಹರಿಸಲು ಇನ್ನೂ ಕಾಲಾವಕಾಶ ಬೇಕಾಗಿದೆಯೆಂದರು. ತಾವು ದೆಹಲಿಯಲ್ಲಿ ಭೇಟಿಯಾದ ಕೇಂದ್ರ ನಾಯಕರೆಲ್ಲರೂ ರಾಜ್ಯದ ಆವಶ್ಯಕತೆಗಳ ಬಗ್ಗೆ ಸಹಾನುಭೂತಿ ಹೊಂದಿರುವುದಾಗಿಯೂ ಅಭಿಪ್ರಾಯಪಟ್ಟರು. ನಿಜಲಿಂಗಪ್ಪ ಸರ್ಕಾರದ ಒಂದು ಪ್ರಮುಖ ಆರ್ಥಿಕ ಸಾಧನೆಯೆಂದರೆ, ಕೋಲಾರ ಚಿನ್ನದ ಗಣಿಯ ರಾಷ್ಟ್ರೀಕರಣ. ಎಂಬತ್ತು ವರ್ಷಗಳ ವಿದೇಶೀ ಒಡೆತನದ ಬಳಿಕ, ನೀಡಬೇಕಾದ ೧೬೪ ಲಕ್ಷ ರೂಪಾಯಿಗಳಲ್ಲಿ ೧೨೩ ಲಕ್ಷ ರೂಪಾಯಿಗಳ ಚೆಕ್ ಅನ್ನು ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ಎಸ್.ಟಿ.ಎ. ಟೇಲರ್ ಅವರಿಗೆ ನಿಜಲಿಂಗಪ್ಪನವರು ನೀಡುವ ಮೂಲಕ, ೧೯೫೬ ನೇ ನವೆಂಬರ್ ೨೯ ರಂದು ಅದನ್ನು ಜಾನ್ ಟೇಲರ್ ಕಂಪನಿಯಿಂದ ಸರ್ಕಾರದ ವಶಕ್ಕೆ ತೆಗೆದುಕೊಳ್ಳ

ಲಾಯಿತು. ಯಾವ ಸೇವೆಯನ್ನೂ ರಾಜ್ಯಕ್ಕೆ ಮಾಡದಿದ್ದರೂ ಕಂಪೆನಿಗೆ ಕೃತಜ್ಞತೆಯನ್ನು ಸಲ್ಲಿಸಿದುದು ನಿಜಲಿಂಗಪ್ಪನವರ ವಿಶೇಷ. ಅಷ್ಟೇ ಸೌಜನ್ಯದಿಂದ ಆ ಇಂಗ್ಲಿಷ್ ವ್ಯಕ್ತಿ ಚಿನ್ನದ ಗಣಿಯ ಮುಂದಿನ ಕಾರ್ಯನಿರ್ವಹಣೆಗೆ ಸಹಾಯ ಮಾಡುವುದಾಗಿ ಆಶ್ವಾಸನೆಯಿತ್ತರು.

೧೯೫೬ನೇ ಡಿಸೆಂಬರ್ ೧೧ ರಂದು ನಡೆದ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ಮಾತನಾಡುತ್ತ ನಿಜಲಿಂಗಪ್ಪನವರು ರಾಜ್ಯದ ಘಟಪ್ರಭಾ ಹಾಗೂ ಮಲಪ್ರಭಾ ಅಣೆಕಟ್ಟು ಯೋಜನೆಗಳಿಗೆ ಪ್ರಾಮುಖ್ಯ ನೀಡಬೇಕೆಂದು ಪ್ರಬಲವಾಗಿ ಪ್ರತಿಪಾದಿಸಿದರು. ಜೊತೆಗೆ ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳಿಗೆ ಹಾಗೂ ಬೆಂಗಳೂರು ನಗರಕ್ಕೆ ಅಕ್ಕಿ ಸರಬರಾಜು ಮಾಡಬೇಕೆಂದೂ ಕೇಂದ್ರವನ್ನು ಒತ್ತಾಯಿಸಿದರು. ರಾಜ್ಯದಲ್ಲಿ ಈಗಾಗಲೇ ಶರಾವತಿ, ಭದ್ರಾ ಹಗೂ ತುಂಗಭದ್ರಾದಂತಹ ದೊಡ್ಡ ಯೋಜನೆಗಳಿವೆ ಯೆಂದೂ ಈಗ ಸಣ್ಣ ಸಣ್ಣ ಯೋಜನೆಗಳ ಆವಶ್ಯಕತೆಯಿದೆಯೆಂದೂ ಮಂಡಳಿಗೆ ತಿಳಿಸಿದರು. ಆಡಳಿತದ ಸಮಸ್ಯೆಗಳ ಬಗ್ಗೆ ಅರಿವಿದ್ದ ಸರ್ಕಾರವು ಸಚಿವರ ವೇತನ ಮತ್ತು ಭತ್ಯೆಗಳನ್ನು ನಿಗದಿಗೊಳಿಸಿತು. ಸರಳತೆ ಮತ್ತು ಮಿತವ್ಯಯಕ್ಕೆ ಬದ್ಧವಾಗಿದ್ದ ಮುಖ್ಯಮಂತ್ರಿ ನಿಜಲಿಂಗಪ್ಪನವರಿಂದ ನಿರೀಕ್ಷಿಸಬಹುದಾದಂತೆಯೇ, ಅದು ಮಾದರಿ ವೇತನಶ್ರೇಣಿಯಾಗಿತ್ತು. ಸಚಿವರ ಮಾಸಿಕ ವೇತನ ರೂ. ೬೦೦, ಕಾರ್ ಭತ್ಯೆ ರೂ, ೨೦೦ ಹಾಗೂ ಮನೆ ಬಾಡಿಗೆ ಭತ್ಯೆ ರೂ. ೨೫೦ ಎಂದು ನಿಗದಿಯಾಯಿತು. ಸಚಿವರ ವಿದ್ಯುತ್ ಬಳಕೆಯು ರೂ. ೩೫ ರ ವರೆಗೆ ಎಂದು ನಿಗದಿಯಾಯಿತು. ಸಚಿವರಾರೂ ವ್ಯವಹಾರ ಅಥವಾ ವಾಣಿಜ್ಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬಾರದೆಂದು ನಿಯಮ ಮಾಡಲಾಯಿತು. ಈಗ ನಡೆಯುತ್ತಿರುವುದಕ್ಕೆ ಹೋಲಿಸಿದರೆ ಇದೊಂದು ಗಗನಕುಸುಮ. ಸದನಕ್ಕೆ ಹಾಜರಾಗುವ ಶಾಸಕರಿಗೆ, ಅವರು ಶಾಸಕರ ಭವನದಲ್ಲಿ ವಾಸಿಸಿದರೆ ದಿನಕ್ಕೆ ರೂ. ೧೨-೫೦ ಹಾಗೂ ಬೇರೆಡೆ ವಾಸಿಸಿದರ ರೂ. ೧೬ ಎಂದಾಯಿತು.!

೧೯೫೭ರ ಆರಂಭದಲ್ಲಿ ನಡೆಯಲಿದ್ದ ಚುನಾವಣೆಗೆ ಪಕ್ಷವು ನಿಜಲಿಂಗಪ್ಪನವರ ನಾಯಕತ್ವದಲ್ಲಿ ಸಜ್ಜಾಯಿತು. ಈ ಸಂಬಂಧವಾಗಿ ಮೈಸೂರಿನ ಪುರಭವನದಲ್ಲಿ ಡಿಸೆಂಬರ್ ೧೬ ರಂದು ಎಂಪಿಸಿಸಿಯ ಸಭೆ ನಡೆದು ಕಾಂಗ್ರೆಸ್‌ನ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಲಾಯಿತು. ಆ ಸಭೆಗೆ ಕಾಮರಾಜ್ ಹಾಜರಾಗಿದ್ದರು. ಸಭೆಯನ್ನು ದ್ದೇಶಿಸಿ ಮಾತನಾಡುತ್ತ ನಿಜಲಿಂಗಪ್ಪನವರು, ಪಕ್ಷವು ತನ್ನ ಅಭ್ಯರ್ಥಿಗಳನ್ನು ಜಾತಿ ಮತ್ತು ವೈಯಕ್ತಿಕ ಪರಿಗಣನೆಗಳನ್ನು ಬದಿಗಿಟ್ಟು ಅರ್ಹತೆ, ಪ್ರಾಮಾಣಿಕತೆ, ಸತ್ಯಸಂಧತೆ,

ಸೇವಾ ಮನೋಭಾವ ಹಾಗೂ ದಕ್ಷತೆಗಳ ಆಧಾರದ ಮೇಲೆ ಆಯ್ಕೆಮಾಡಬೇಕೆಂದು ಒತ್ತಾಯಿಸಿದರು. ಕಳೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಹೀಗೆ ಮಾಡಿರಲಿಲ್ಲವೆಂಬುದನ್ನವರು ಒಪ್ಪಿಕೊಂಡರು. ಈ ಬಾರಿ ಅದಕ್ಕೆ ಬದ್ಧರಾಗಿ ನಡೆದುಕೊಳ್ಳದಿದ್ದರೆ ಸಾರ್ವಜನಿಕರ ದೃಷ್ಟಿಯಲ್ಲಿ ತಾವು ನಂಬಿಕೆಯನ್ನು ಕಳೆದುಕೊಳ್ಳುವುದಾಗಿ ಎಚ್ಚರಿಸಿದರು. ೧೯ ರಂದು ನಡೆದ ಶಾಸನ ಸಭೆಗಳ ಜಂಟಿ ಅಧಿವೇಶನದಲ್ಲಿ ಮಾತನಾಡುತ್ತ ರಾಜ್ಯಪಾಲರು, ನಿಜಲಿಂಗಪ್ಪನವರ ಸರ್ಕಾರದ ನೀತಿಧೋರಣೆಗಳನ್ನು ವಿವರಿಸಿದರು. ಮೊದಲನೆಯ ದಾಗಿ, ಸರ್ಕಾರದ ಧೋರಣೆಗನುಗುಣವಾಗಿ, ಭೂಕಾರ್ಮಿಕರು ತಮ್ಮ ದುಡಿಮೆಗನುಗುಣ ವಾದ ಪ್ರತಿಫಲವನ್ನು ಪಡೆಯುವಂತಾಗುವುದು, ಗೈರು ಜಮೀನ್ದಾರಿ ಪದ್ಧತಿ ಹಾಗೂ ರೈತರ ಶೋಷಣೆಗಳಿಗೆ ಕಡಿವಾಣ ಹಾಕುವ ಸುಧಾರಣಾ ಕ್ರಮಗಳು. ಎರಡನೆಯದಾಗಿ, ತಮ್ಮ ಹಿಂದಿನ ವ್ಯಾಪ್ತಿಯಿಂದ ಮೈಸೂರು ರಾಜ್ಯ ಸಾರ್ವಜನಿಕ ಸಾರಿಗೆ ಸೇವೆಯ ವರ್ಗಾವಣೆಯನ್ನು ಸರ್ಕಾರ ಪೂರ್ಣಗೊಳಿಸುವುದು. ಮೂರನೆಯದಾಗಿ, ಹೆಚ್ಚು ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಕಾಲೇಜುಗಳನ್ನು ತೆರೆಯುವ ಮೂಲಕ ತಾಂತ್ರಿಕ ಶಿಕ್ಷಣವನ್ನು ವಿಸ್ತರಿಸುವುದಕ್ಕೆ ಸರ್ಕಾರ ಬದ್ಧವಾಗಿದೆ. ನಾಲ್ಕನೆಯದಾಗಿ, ಪ್ರಸ್ತುತ ವಿವಿಧ ಆಡಳಿತ ವಲಯಗಳಲ್ಲಿರುವ ವಿಭಿನ್ನ ಕಾನೂನುಗಳನ್ನು ಏಕರೂಪದ ಕಾನೂನುಗಳಾಗಿ ಮಾರ್ಪಡಿಸುವುದು ಸರ್ಕಾರದ ನೀತಿಯಾಗಿದೆ. ಐದನೆಯದಾಗಿ, ಸರ್ಕಾರವು ನೀರಾವರಿ ಯೋಜನೆಗಳಿಗೆ ಆದ್ಯತೆಯನ್ನು ನೀಡುತ್ತದೆ. ಕೊನೆಯದಾಗಿ, ಕೈಗಾರಿಕೆಯ ಅಭಿವೃದ್ಧಿಗೆ ಅಗತ್ಯವಿರುವ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವುದೂ ಸರ್ಕಾರದ ಆದ್ಯತೆಯ ವಿಷಯವಾಗಿದೆ. ೨೦ ರಂದು ಶೂನ್ಯವೇಳೆಯಲ್ಲಿ ಒಬ್ಬ ಸದಸ್ಯ ರಾದ ಮುಲ್ಕಾ ಗೋವಿಂದ ರೆಡ್ಡಿಯವರು, ಶಾಸಕಾಂಗ ಪಕ್ಷದಿಂದ ಆಯ್ಕೆಗೊಂಡಿದ್ದರೂ ಸದಸ್ಯರಲ್ಲದ ನಿಜಲಿಂಗಪ್ಪನವರು ಸದನದ ಕಲಾಪಗಳಲ್ಲಿ ಭಾಗವಹಿಸಬಹುದೇ ಎಂಬ ಪ್ರಶ್ನೆಯೆತ್ತಿದರು. ಸಂವಿಧಾನದಲ್ಲಿರುವಂತೆ ಆರು ತಿಂಗಳೊಳಗೆ ಅವರು ಸದಸ್ಯರಾಗಿ ಆಯ್ಕೆಯಾಗಬಹುದಾದ ಅವಕಾಶವಿದ್ದರೂ, ಸನಿಹದಲ್ಲಿ ಯಾವುದೇ ಚುನಾವಣೆಗಳು ನಡೆಯದಿರುವುದರಿಂದ ಅದು ಸಾಧ್ಯವಿಲ್ಲವೆಂದೂ ವಾದಿಸಿದರು. ತಾಂತ್ರಿಕವಾಗಿ ಸಮ್ಮತ ಎನ್ನಿಸಿಕೊಂಡರೂ, ನಿಜಲಿಂಗಪ್ಪನವರು ಮುಖ್ಯಮಂತ್ರಿ ಸ್ಥಾನದಲ್ಲಿರುವುದು ನೈತಿಕವಾಗಿ ಅಸಮರ್ಥನೀಯ ಎಂದೂ ಅವರು ವಾದಿಸಿದರು. ನಿಜಲಿಂಗಪ್ಪನವರು ಮುಖ್ಯ ಮಂತ್ರಿಯ ಹುದ್ದೆಯಲ್ಲಿರುವುದು ಕಾನೂನುಬದ್ಧ ಎಂದು ಸಭಾಧ್ಯಕ್ಷರಾದ ಕಂಠಿ ಅವರು ತೀರ್ಮಾನವಿತ್ತರು. ಇಂಥದೇ ಸನ್ನಿವೇಶವೊಂದು ಮುಂದೆ ೧೯೬೭ ರಲ್ಲಿಯೂ ಉದ್ಭವಿಸಿತು; ಚುನಾವಣೆಯಲ್ಲಿ ಸೋಲನ್ನನುಭವಿಸಿದ್ದರೂ ಅವರು ಮುಖ್ಯಮಂತ್ರಿಯಾಗ ಬೇಕೆಂದು ಪಕ್ಷವು ಬಯಸಿತು. ಈ ಹಿಂದಿನ ಘಟನೆಯನ್ನು ನೆನಪಿಸಿಕೊಂಡೇ ಪ್ರಾಯಶಃ

ಆಗ ಅವರು ಮುಖ್ಯಮಂತ್ರಿಯಾಗಲು ಒಪ್ಪದೆ, ತಾವು ಸದಸ್ಯರಾಗಿ ಉಪಚುನಾವಣೆಯಲ್ಲಿ ಗೆದ್ದು ಬರುವವರೆಗೆ ತಮ್ಮ ಪ್ರತಿನಿಧಿಯನ್ನು ಅಲ್ಲಿ ಕೂರಿಸಲು ಬಯಸಿದರು! ಆದರೆ ಅವರು ಸದನ ಸದಸ್ಯರಲ್ಲದ ಕಾರಣ ಮತ ಚಲಾಯಿಸುವ ಹಕ್ಕನ್ನು ಪಡೆದಿಲ್ಲವೆಂದೂ ಸಭಾಧ್ಯಕ್ಷರು ತೀರ್ಪಿತ್ತರು.

ಎರಡನೆಯ ಮಹಾ ಚುನಾವಣೆಗಳು ಸನ್ನಿಹಿತವಾದದ್ದರಿಂದ ಅವರು ಆಡಳಿತಕ್ಕಿಂತ ಹೆಚ್ಚಿನ ಪ್ರಾಧಾನ್ಯವನ್ನು ಚುನಾವಣಾ ಪ್ರಚಾರಕ್ಕೆ ಬಹು ಬೇಗ ಪ್ರಾಮುಖ್ಯವೀಯುವಂತಾಯಿತು. ಪಕ್ಷದ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸುವ ಪ್ರಕ್ರಿಯೆಯು ತೀರ ಕ್ಲಿಷ್ಟಕರವಾದ ಹಾಗೂ ಸಂದಿಗ್ಧಮಯವಾದ ಸನ್ನಿವೇಶ. ರಾಜ್ಯದಲ್ಲಿದ್ದ ಮೂರು ಕಾಂಗ್ರೆಸ್ ಸಮಿತಿಗಳಾದ ಮುಂಬಯಿ ಕರ್ನಾಟಕದ ಕೆಪಿಸಿಸಿ, ಹೈದರಾಬಾದ್ ಕರ್ನಾಟಕದ ಕಾಂಗ್ರೆಸ್ ಸಮಿತಿ ಮತ್ತು ಮೈಸೂರು ಕಾಂಗ್ರೆಸ್ ಸಮಿತಿಗಳು ತಮ್ಮ ಪಟ್ಟಿಗಳನ್ನು ಅಂತಿಮಗೊಳಸಿರುವ ವರದಿ ೧೯೫೬ನೇ ಡಿಸೆಂಬರ್ ೨೫ ರಂದು ಬಂತು. ಈ ಮೂರು ವರದಿಗಳು ಪಕ್ಷದ ಕಾರ್ಯಕರ್ತರಲ್ಲಿ ವ್ಯಾಪಕ ಅಸಮಾಧಾವನ್ನು ಸೃಷ್ಟಿಸಿದವು. ಭಿನ್ನಮತೀಯರಾದ ಜನಾರ್ದನರಾವ್ ದೇಸಾಯಿ, ಕೊಲ್ಲೂರು ಮಲ್ಲಪ್ಪ, ಕೆ.ಎಚ್. ಪಾಟೀಲ್ ಮತ್ತು ಟಿ.ಆರ್. ನೆಸ್ವಿ ಅವರುಗಳು ಅಂತಿಮ ತೀರ್ಮಾನ ತೆಗೆದುಕೊಳ್ಳಲಿದ್ದ ಕೇಂದ್ರ ಸಂಸದೀಯ ಮಂಡಳಿಯ ಮುಂದೆ ಪರ್ಯಾಯ ಪಟ್ಟಿಯೊಂದನ್ನು ಮಂಡಿಸಿದರು. ಮಾಡಿದ್ದ ಟೀಕೆಗಳಲ್ಲಿ ಎರಡು ಪ್ರಮುಖವಾದವುಗಳೆಂದರೆ, ಅಲ್ಪಸಂಖ್ಯಾತರ ಕಡೆಗಣನೆ ಮತ್ತು ಗುಂಪುಗಾರಿಕೆಯ ಪರಿಣಾಮವಾಗಿ ಒಂದು ಗುಂಪಿನ ಮೇಲುಗೈಯಿಂದಾಗಿ ಮತ್ತೊಂದು ಗುಂಪು ಅವಗಣನೆಗೆ ಒಳಗಾಗಿದ್ದುದು. ಈ ದೂರುಗಳು ಶ್ರೀಮನ್ನಾರಾಯಣ್, ದೇಬೇಶ್ವರ ಶರ್ಮ ಮತ್ತು ಮರಗತಂ ಚಂದ್ರಶೇಖರ್ ಅವರುಗಳಿದ್ದ ಕೇಂದ್ರ ತಂಡದ ಮುಂದೆ ಬಂದವು. ಈ ಮಧ್ಯೆ, ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ೨ ರಂದು ಉತ್ತರಿಸುತ್ತ, ತಾವು ರಾಜ್ಯದ ಸರ್ವಾಂಗೀಣ ಪ್ರಗತಿಯ ಪರವಾಗಿರುವುದಾಗಿಯೂ ಈ ಅಮೋಘ ಕಾರ್ಯದಲ್ಲಿ ತಮಗೆ ಎಲ್ಲ ಪಕ್ಷಗಳೂ, ಮಾತ್ರವಲ್ಲ ರಾಜ್ಯದ ಪ್ರತಿಯೊಬ್ಬ ಪ್ರಜೆಯೂ ಸಹಕರಿಸಬೇಕೆಂದೂ ನಿಜಲಿಂಗಪ್ಪನವರು ಮನವಿ ಮಾಡಿಕೊಂಡರು. ಚುನಾವಣಾ ಪ್ರಚಾರದ ಕಾರಣ ಗಮನ ಬೇರೆಡೆ ಹೋದರೂ ಸರ್ಕಾರದ ಕಾರ್ಯನಿರ್ವಹಣೆ ಮುಂದುವರಿಯಬೇಕಾಗಿತ್ತು. ಆಡಳಿತ ನೌಕರರಿಗೆ ಸಮರೂಪದ ವೇತನ ಶ್ರೇಣಿಗಳು ಬಹುಬೇಗ ಜಾರಿಗೆ ಬರುವುದಾಗಿ ರಾಜ್ಯದ ಹಣಕಾಸು ಸಚಿವರಾದ ಟಿ. ಮರಿಯಪ್ಪನವರು ೨೭ ರಂದು ಪ್ರಕಟಿಸಿದರು.

ನವದೆಹಲಿಯಲ್ಲಿ ಕೇಂದ್ರ ಸಂಸದೀಯ ಮಂಡಳಿಯೊಂದಿಗೆ ಅಭ್ಯರ್ಥಿಗಳ ಮೊದಲ ಪಟ್ಟಿಯ ಬಗ್ಗೆ ಚರ್ಚೆ ನಡೆಸಿದ ಬಳಿಕ ನಿಜಲಿಂಗಪ್ಪ, ವಿ. ವೆಂಕಟಪ್ಪ (ಹೊಸ

ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು) ಮತ್ತು ಎಸ್. ಚೆನ್ನಯ್ಯನವರೊಂದಿಗೆ ಡಿಸೆಂಬರ್ ೩೧ ರಂದು ಬೆಂಗಳೂರಿಗೆ ವಾಪಸಾದರು. ಎಂಪಿಸಿಸಿಯ ಪಟ್ಟಿಯು ಅಪೂರ್ಣವಾದದ್ದರಿಂದ ಮಾರನೆಯ ವಾರದಲ್ಲಿ ಪೂರ್ಣಪಟ್ಟಿಯನ್ನು ಕೇಂದ್ರ ಸಂಸದೀಯ ಮಂಡಳಿಯು ಪರಿಶೀಲಿಸುವುದೆಂದು ಅವರು ವರದಿಯಿತ್ತರು. ನಿಜಲಿಂಗಪ್ಪ ನವರ ಸರ್ಕಾರದ ಮುಖ್ಯ ಕಾರ್ಯಗಳಲ್ಲಿ ಒಂದೆಂದರೆ ಸೇವೆಗಳ ಸಂಯೋಜನೆ ಮತ್ತು ಅವರ ವೇತನಸ್ವರೂಪದ ಪರಿಷ್ಕರಣ. ವೇತನಶ್ರೇಣಿಗಳ ಪರಿಷ್ಕರಣೆ ಕಾರ್ಯವನ್ನು ನಿಗದಿಪಡಿಸುವಲ್ಲಿ ಸರ್ಕಾರವು ಕೊನೆಗೂ ಯಶಸ್ವಿಯಾಯಿತು, ಆದರೆ ಹಳೆಯ ಶ್ರೇಣಿಯಲ್ಲಿ ಉಳಿಯುವ ಆಯ್ಕೆಯನ್ನು ನೌಕರರಿಗೆ ನೀಡಿತು. ಹೊಸ ವೇತನಶ್ರೇಣಿಗಳಿಂದ ಸರ್ಕಾರದ ಬೊಕ್ಕಸಕ್ಕೆ ನಾಲ್ಕು ಕೋಟಿ ರೂಪಾಯಿಗಳ ಭಾರಿ ಹೊರೆ ಬಿದ್ದಿತು. ಜನವರಿ ೩ ರಂದು ನಿಜಲಿಂಗಪ್ಪನವರು ಕಾಂಗ್ರೆಸ್ ಸಮಾವೇಶದಲ್ಲಿ ಭಾಗವಹಿಸಲು ನಾಗಪುರಕ್ಕೆ ವಿಮಾನ ಹಿಡಿಯುವವರಿದ್ದರು. ವಿಮಾನ ನಿಲ್ದಾಣಕ್ಕೆ ಹೋಗುವ ದಾರಿ ಯಲ್ಲಿ ಅವರ ಕಾರು ಟ್ರಕ್ಕೊಂದಕ್ಕೆ ಡಿಕ್ಕಿ ಹೊಡೆದು ಅಪಘಾತಕ್ಕೀಡಾದ್ದರಿಂದಾಗಿ ಅವರು ತಮ್ಮ ಪ್ರವಾಸವನ್ನು ರದ್ದುಪಡಿಸಬೇಕಾಯಿತು.

ಆದರೆ ತಮ್ಮ ಪ್ರವಾಸಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ಅವರು ಬಹುಬೇಗ ಸುಧಾರಿಸಿಕೊಂಡರು. ಜನವರಿ ೯ ರಂದು ತಮ್ಮನ್ನು ಗೌರವಿಸಲೆಂದು ಹಾಗೂ ಸರ್ಕಾರದ ಮೇಲೆ ಕೆಲವು ಒತ್ತಡಗಳನ್ನು ತರಲು ಹಾಸನದಲ್ಲಿ ಏರ್ಪಾಟಾಗಿದ್ದ ವಡ್ಡರ ಸಮುದಾಯದ ಸಭೆಗೆ ಅವರು ಹಾಜರಾದರು. ಗೌರವಕ್ಕೆ ಉತ್ತರಿಸುತ್ತ ನಿಜಲಿಂಗಪ್ಪನವರು ಜಾತಿವಾರು ವಿದ್ಯಾರ್ಥಿನಿಲಯಗಳ ಸ್ಥಾಪನೆಗೆ, ತಾವೇ ಅಂತಹ ವಿದ್ಯಾರ್ಥಿನಿಲಯಗಳಲ್ಲಿದ್ದುಕೊಂಡು ಓದಿದ್ದರೂ, ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ಹಿಂದೆ ಯಾವುದೇ ಅನಿವಾರ್ಯತೆ ಇದ್ದಿರಲಿ, ಪ್ರಸ್ತುತ ಸನ್ನಿವೇಶದಲ್ಲಿ ಅದಕ್ಕೆ ಆಸ್ಪದವಿರ ಬಾರದೆಂದು ಅವರು ಅಭಿಪ್ರಾಯಪಟ್ಟರು. ಆದರೆ ಹಾಲಿ ಇರುವವುಗಳು ಮುಂದು ವರಿಯಬಹುದು. ಇಂಜಿನಿಯರಿಂಗ್ ಮತ್ತು ವೈದ್ಯಕೀಯದಂತಹ ಕ್ಷೇತ್ರಗಲ್ಲಿ ಉನ್ನತ ಶಿಕ್ಷಣ ಪಡೆಯಲು ಅವರು ಸಮುದಾಯದವರಿಗೆ ಕರೆಯಿತ್ತರು. ತಮ್ಮ ಸರ್ಕಾರವು ವಿದ್ಯಾರ್ಥಿನಿಲಯಗಳಿಗೆ ಹಣಸಹಾಯ ಒದಗಿಸುವುದಾಗಿಯೂ ಆದರೆ ಉಚಿತ ಭೂಮಿ ಮಾತ್ರ ಅಲ್ಲವೆಂದು ಸ್ಪಷ್ಟಪಡಿಸಿದರು. ಜಾತಿಯಾಧಾರಿತ ಮೀಸಲಾತಿಯ ಬಗ್ಗೆ ತಮಗಿದ್ದ ವಿರೋಧವನ್ನೂ ಆ ಸಂದರ್ಭದಲ್ಲಿ ವ್ಯಕ್ತಪಡಿಸಿ, ಸಂವಿಧಾನದಲ್ಲಿ ನೀಡಿರುವ ಹತ್ತು ವರ್ಷಗಳ ಅವಧಿಯ ಬಳಿಕ ಅದು ಕೊನೆಗೊಳ್ಳುವುದೆಂದು ಆಶಿಸಿದರು. ಆದರೆ ಇದು ಅವರ ವೈಯಕ್ತಿಕ ಅಭಿಪ್ರಾಯ ಮಾತ್ರ, ಅವರ ಸರ್ಕಾರವೂ ಮೀಸಲಾತಿ ನೀತಿಯನ್ನು ಕೈಬಿಡಲು ಸಾಧ್ಯವಾಗಲಿಲ್ಲ.

ಬರಲಿರುವ ಚುನಾವಣೆಗಳ ಬಗ್ಗೆ ಹೇಳುವುದಾದರೆ, ಮೈಸೂರಿನಲ್ಲಿ ಆರು ಪಕ್ಷಗಳು ಕಣದಲ್ಲಿದ್ದುವು; ಅವುಗಳೆಂದರೆ, ಕಾಂಗ್ರೆಸ್, ಕಮ್ಯುನಿಸ್ಟ್, ಸಮಾಜವಾದಿ, ಜನಸಂಘ, ಲೋಕಸೇವಾಸಂಘ ಮತ್ತು ಪ್ರಜಾ ಸೋಷಲಿಸ್ಟ್ ಪಕ್ಷ ಅಥವಾ ಪಿಎಸ್‌ಪಿ. ಆದರೆ ವಾಸ್ತವ ಸ್ಪರ್ಧೆಯಿದ್ದುದು ಕಾಂಗ್ರೆಸ್ ಮತ್ತು ಪಿಎಸ್‌ಪಿಗಳ ನಡುವೆ. ಕಾಂಗ್ರೆಸ್ ಎದುರಿಸುತ್ತಿದ್ದ ಸಮಸ್ಯೆಯೆಂದರೆ ಆಂತರಿಕ ಅನೈಮತ್ಯ, ಅದರಲ್ಲೂ ಹಳೆಯ ಮೈಸೂರಿನ ನಾಯಕರುಗಳ ನಡುವೆ. ಈ ಬಗ್ಗೆ ಈಗಾಗಲೇ ಪ್ರಸ್ತಾಪಿಸಲಾಗಿದೆ. ಹಳೆಯ ಮೈಸೂರು ಕಾಂಗ್ರೆಸ್‌ನಲ್ಲಿನ ಒಳಜಗಳಗಳಿಗೆ ದೀರ್ಘ ಇತಿಹಾಸವಿದ್ದು ಅದು ಸ್ಪಷ್ಟವಾಗಿ ಎದ್ದು ತೋರಿದ್ದು ೧೯೫೨ರಲ್ಲಿ ಅಧಿಕಾರಕ್ಕೆ ಬಂದ ಹನುಮಂತಯ್ಯನವರ ಸಂಪುಟವಿದ್ದ ಕಾಲದಲ್ಲಿ. ಭಿನ್ನಮತೀಯರು ಸಂಪುಟದ ವಿರುದ್ಧ ಅವಿಶ್ವಾಸ ನಿರ್ಣಯ ತಂದರೂ ಅದು ವಿಫಲವಾಗಿತ್ತು. ೧೯೫೬ನೇ ಆಗಸ್ಟ್‌ನಲ್ಲಿ, ಸರ್ಕಾರವು ತೀವ್ರ ಬಿಕ್ಕಟ್ಟಿಗೆ ಸಿಲುಕಿ ಹನುಮಂತಯ್ಯನವರು ರಾಜೀನಾಮೆ ನೀಡುವಂತಾಯಿತು. ಆ ಬಳಿಕ ನಡೆದ ನಾಯಕತ್ವದ ಸ್ಪರ್ಧೆಯಲ್ಲಿ ಅವರು ಕಡಿದಾಳ್ ಮಂಜಪ್ಪನವರಿಗೆ ಮಣಿಯಬೇಕಾಗಿ ಬಂದು ಕಡಿದಾಳ್ ಅಲ್ಪ ಕಾಲ ಮುಖ್ಯಮಂತ್ರಿಯಾಗಿದ್ದರು. ಈ ಘಟನೆಗಳು ಪಕ್ಷದ ಮೇಲೆ ಅಚ್ಚಳಿಯದ ಪರಿಣಾಮವನ್ನು ಬೀರಿದ್ದವು, ಹಳೆಯ ಪೈಪೋಟಿ ವೈಷಮ್ಯಗಳು ಮುಂದುವರಿದಿದ್ದವು.

ಇನ್ನೂ ಮಾಯದಿದ್ದ ಮೂರು ಹಳೆಯ ಗಾಯಗಳು ಆ ಮುಂದೂ ನಿಡುಗಾಲ ಕಾಡತೊಡಗಿದವು. ಇದೇ ಕಾರಣದಿಂದ ಪಟ್ಟಿಯನ್ನು ಅಂತಿಮಗೊಳಿಸುವ ಕಾರ್ಯ ಕಷ್ಟಕರವಾಗಿತ್ತು. ಎಸ್. ಚೆನ್ನಯ್ಯನವರು ಜನವರಿ ೧೨ ರಂದು ಎಂಪಿಸಿಸಿ ಸಿದ್ಧಪಡಿಸಿದ್ದ ಪಟ್ಟಿಯೊಂದಿಗೆ ನವದೆಹಲಿಗೆ ಹೊರಟರು. ಆದರೆ ಈ ಪಟ್ಟಿಯಿಂದ ಅನೇಕರು ಅಸಂತುಷ್ಟಗೊಂಡಿದ್ದಂತೆ ತೋರಿತು, ಹಾಗಾಗಿ ಭಿನ್ನಮತೀಯರು ಒಂದು ಅತೃಪ್ತಿಯ ಪತ್ರವೊಂದನ್ನು ದೆಹಲಿಗೆ ರವಾನಿಸಿದರು. ಅದರ ಕರ್ತೃಗಳೆಂದರೆ ನಿಜಲಿಂಗಪ್ಪ ಮತ್ತಿತರ ನಾಲ್ವರು. ಆ ಪತ್ರದಲ್ಲಿ ಚೆನ್ನಯ್ಯನವರ ಪಟ್ಟಿಯಲ್ಲಿಲ್ಲದ ಹೆಸರುಗಳನ್ನು ಸೂಚಿಸಲಾದ ಮತ್ತೊಂದು ಪಟ್ಟಿಯನ್ನಿರಿಸಲಾಗಿತ್ತು. ಆ ಪರ್ಯಾಯ ಪಟ್ಟಿಯಲ್ಲಿ ಬದರಿನಾರಾಯಣ, ಗಾಂಜಿ ವೀರಪ್ಪ, ಕೊಂಡಜ್ಜಿ ಬಸಪ್ಪ ಮತ್ತಿತರರ ಹೆಸರುಗಳಿದ್ದವು. ಇದೇ ಹೊತ್ತಿಗೆ, ಹನುಮಂತಯ್ಯನವರ ಬಣವನ್ನು ಪ್ರತಿನಿಧಿಸುತ್ತಿದ್ದ ಇಬ್ಬರು ತಮ್ಮ ಅಭ್ಯರ್ಥಿಗಳ ಪರವಾಗಿ ದೆಹಲಿಗೆ ಹೊರಟರು. ೧೫ ರಂದು ದೆಹಲಿಯಿಂದ ವಾಪಸಾದ ಬಳಿಕ, ಚೆನ್ನಯ್ಯನವರು ಸಂಯುಕ್ತ ಕರ್ನಾಟಕದ ಪ್ರತಿನಿಧಿಯೊಂದಿಗೆ ಮಾತನಾಡುತ್ತ, ೧೮ ರೊಳಗೆ ಎಂಪಿಸಿಸಿಯ ಅಂತಿಮ ಪಟ್ಟಿ ಪ್ರಕಟಗೊಳ್ಳುವುದೆಂದು ತಿಳಿಸಿದರು. ಈ ಮಧ್ಯೆ, ರಾಜ್ಯದ ಮಹಾಚುನಾವಣೆಗಳು ೧೯೫೭ನೇ ಫೆಬ್ರವರಿ ೨೫ ರಂದು ನಡೆಯು

ವುದೆಂದೂ ಈ ಪ್ರಕ್ರಿಯೆ ಹದಿನಾರು ದಿನಗಳಲ್ಲಿ ಪೂರ್ಣಗೊಳ್ಳುವುದೆಂದೂ ಪ್ರಕಟಿಸಲಾಯಿತು. ರಾಜ್ಯದಲ್ಲಾಗ ಒಂದು ಕೋಟಿ ಎಂಬತ್ತರಡು ಲಕ್ಷ ಮತದಾರರಿದ್ದರು; ಇವರಲ್ಲಿ ೫೧೮೬೦೦೦ ಮಂದಿ ಗಂಡಸರೂ ೪೮೯೬೦೦೦ ಮಂದಿ ಹೆಂಗಸರೂ ಇದ್ದರು. ೧೮ ರೊಳಗಾಗಿ ಪ್ರಕಟಿಸಲಾಗುವುದೆಂದಿದ್ದ ಎಂಪಿಸಿಸಿಯ ಅಂತಿಮ ಪಟ್ಟಿಯ ಪ್ರಕಟಣೆಯ ಗಡುವು ೨೩ಕ್ಕೆ ಮುಂದೂಡಲ್ಪಟ್ಟಿತು. ಹಾಗೂ ೨೩ ರಂದು ಪಟ್ಟಿ ಪ್ರಕಟವಾಯಿತು, ನಿಜಲಿಂಗಪ್ಪನವರಿಗೆ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ಕ್ಷೇತ್ರವನ್ನು ನಿಗದಿಪಡಿಸಲಾಗಿತ್ತು. ಆದರೆ ಅಂತಿಮ ಪಟ್ಟಿಯ ಬಗ್ಗೆ ಅತೃಪ್ತಿ ಕೊನೆಗೊಂಡಿರಲಿಲ್ಲ. ೨೫ ರಂದು, ಮೈಸೂರು ಕಾಂಗ್ರೆಸ್‌ನ ಹಳೆಯ ಮೈಸೂರಿನ ಇನ್ನೂರು ಮಂದಿ ಆ ಪಟ್ಟಿಯ ಸಿಂಧುತ್ವವನ್ನು ಪ್ರಶ್ನಿಸಲು ಪಿ.ಆರ್. ರಾಮಯ್ಯನವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಸಭೆ ಸೇರಿತು. ಅದರಲ್ಲಿ ಹಾಜರಿದ್ದವರಲ್ಲಿ ಕೆ. ಹನುಮಂತಯ್ಯನವರೂ ಇದ್ದರು. ಸಭೆಯನ್ನುದ್ದೇಶಿಸಿ ಅವರು ಒಂದು ಗಂಟೆ ಮಾತನಾಡಿದರು. ಕೊನೆಗೆ, ಹನುಮಂತಯ್ಯ ಬಣದಿಂದ ಮೂವರು ಚುನಾವಣೆಯಲ್ಲಿ ಸ್ಪರ್ಧಿಸಲು ಒಪ್ಪಿಗೆ ನೀಡುವ ನಿರ್ಣಯವನ್ನು ಕೈಗೊಂಡಿತು. ಅವರಲ್ಲಿ ಹನುಮಂತಯ್ಯನವರಲ್ಲದೆ ಸಿದ್ದಲಿಂಗಯ್ಯ ಮತ್ತು ಕರಿಯಪ್ಪ ಸೇರಿದ್ದರು.

ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ೨೦೮ರ ಪೈಕಿ ೧೫೦ ಸ್ಥಾನಗಳು ಲಭ್ಯವಾದವು, ಇದು ಹತ್ತಿರ ಹತ್ತಿರ ಮುಕ್ಕಾಲು ಭಾಗದಷ್ಟು ಬಹುಮತ. ಅದರ ಸಮೀಪ ಸ್ಪರ್ಧಿಯಾದ ಪಿಎಸ್‌ಪಿ ೧೮ ಸ್ಥಾನಗಳನ್ನು ಗಳಿಸಿತು. ರೈತಕೂಲಿಕಾರ ಪಕ್ಷ ಹಾಗೂ ಪರಿಶಿಷ್ಟ ಜಾತಿಗಳ ಒಕ್ಕೂಟವು ಒಂದೊಂದು ಸ್ಥಾನಗಳನ್ನಷ್ಟೇ ಪಡೆಯಲು ಸಾಧ್ಯವಾಯಿತು. ಮೂವತ್ತೈದು ಮಂದಿ ಸ್ವತಂತ್ರ ಅಭ್ಯರ್ಥಿಗಳು, ಅವರಲ್ಲಿ ಅನೇಕರು ಭಿನ್ನಮತೀಯ ಕಾಂಗ್ರೆಸ್ಸಿಗರು. ಜನಸಂಘ ಹಾಗೂ ಸಮಾಜವಾದಿ ಪಕ್ಷಗಳು ಒಂದು ಸ್ಥಾನವನ್ನೂ ಪಡೆಯಲಾಗಲಿಲ್ಲ. ನಿಜಲಿಂಗಪ್ಪನವರು ಭಾರಿ ಬಹುಮತದಿಂದ ಚುನಾಯಿತರಾದರು. ಸೋತವರಲ್ಲಿ ಪ್ರಮುಖರಾಗಿದ್ದವರೆಂದರೆ ನಿಜಲಿಂಗಪ್ಪ ಸಂಪುಟದಲ್ಲಿ ಸಚಿವರಾಗಿದ್ದ ಹಾಗು ಅವರ ಗೆಳೆಯರಾದ ಎಂ.ವಿ. ರಾಮರಾವ್ ಅವರೊಬ್ಬರು. ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮಾಡಿದ್ದ ಸಾಧನೆ ಇನ್ನೂ ಹೆಚ್ಚಿನದು: ೨೬ರಲ್ಲಿ ೨೩ ಸ್ಥಾನಗಳು ಅದಕ್ಕೆ ಲಭಿಸಿದ್ದವು, ಪಿಎಸ್‌ಪಿ ಹಾಗೂ ಪರಿಶಿಷ್ಟ ಜಾತಿಗಳ ಒಕ್ಕೂಟಗಳು ಒಂದೊಂದು ಸ್ಥಾನ ಪಡೆದಿದ್ದುವು. ಈ ರೀತಿ ಕಾಂಗ್ರೆಸ್ ಪಕ್ಷವು ರಾಜ್ಯವನ್ನಾಳಲು ಅತ್ಯಧಿಕ ಬೆಂಬಲ ಪಡೆಯಿತು. ಈ ಸಾಧನೆಯ ಶ್ರೇಯಸ್ಸು ನಿರ್ದಿಷ್ಟವಾಗಿ ನಿಜಲಿಂಗಪ್ಪನವರಿಗೇ ಸಲ್ಲಬೇಕೆಂದು ಹೇಳುವುದು ಕಷ್ಟವಾದರೂ, ಆಗಿನ ಮುಖ್ಯಮಂತ್ರಿಯಾಗಿ

ಮತ್ತು ಕಾಂಗ್ರೆಸ್‌ನ ಒಬ್ಬ ನಾಯಕರಾಗಿ ಅವರು ಈ ಅಭೂತಪೂರ್ವ ಚುನಾವಣಾ ಗೆಲವಿನಲ್ಲಿ ಮಹತ್ವದ ಪಾತ್ರವನ್ನು ವಹಿಸದ್ದಿರಬೇಕು.

ಪಕ್ಷಕ್ಕೆ ದೊರೆತ ಇಂಥ ಅಪೂರ್ವ ಯಶಸ್ಸಿನಿಂದಾಗಿ ನಿಜಲಿಂಗಪ್ಪನವರ ಮುಖ್ಯ ಮಂತ್ರಿ ಹುದ್ದೆಯು ಸ್ಥಿರಗೊಳ್ಳಲು ಕಾರಣವಾಗುವುದೆಂದು ನಿರೀಕ್ಷಿಸಬಹುದು. ಆದರೆ ಸ್ವಲ್ಪ ಕಾಲದ ಬಳಿಕ ಕಾಣಿಸಿಕೊಂಡ ಬೆಳವಣಿಗೆಗಳು ಹಾಗಿರಲಿಲ್ಲ. ವಿಧಾನಸೌಧದ ಕಟ್ಟಡ ನಿರ್ಮಾಣದಲ್ಲಿ ಹನುಮಂತಯ್ಯನವರ ಪಾತ್ರದ ಬಗೆಗಿನ ಹಗರಣವನ್ನು ತನಿಖೆ ಮಾಡಿ ವರದಿ ಒಪ್ಪಿಸಲು ಒಂದು ವಿಚಾರಣಾ ಸಮಿತಿಯು ನೇಮಕವಾಯಿತು. ಈ ಸಂದರ್ಭದಿಂದಾಗಿ ನಿಜಲಿಂಗಪ್ಪ ಮತ್ತು ಹನುಮಂತಯ್ಯನವರ ಬಾಂಧವ್ಯವು ಹದಗೆಟ್ಟಿತು. ಆದರೆ ನಿಜಲಿಂಗಪ್ಪನವರು ತಮ್ಮ ಎಂದಿನ ಪಾರದರ್ಶಕತೆಯನ್ನು ಕಾಪಾಡಿ ಕೊಂಡರು. ಮಾರ್ಚ್ ೨೭ ರಂದು, ಇಮಾಂ ಅವರು ಈ ವಿಚಾರವು ವಿಧಾನಸಭೆಯಲ್ಲಿ ಚರ್ಚಿತವಾಗಬೇಕೆಂದು ಪಟ್ಟುಹಿಡಿದರು. ಸಭಾಧ್ಯಕ್ಷರಾದ ಕಂಠಿ ಅವರು ವರದಿಯನ್ನು ಸದನದ ಕಾರ್ಯಪಟ್ಟಿಯಲ್ಲಿ ನಮೂದಿಸಿಲ್ಲ ಎಂಬ ತಾಂತ್ರಿಕ ಕಾರಣದಿಂದ ಇದಕ್ಕೆ ಅವಕಾಶ ನೀಡಲಿಲ್ಲ. ತಮ್ಮ ಮೇಲೆ ಹನುಮಂತಯ್ಯನವರು ಮಾಡಿದ್ದ ಆರೋಪಗಳಿಗೆ ಉತ್ತರಿಸಿ ವಸ್ತುಸ್ಥಿತಿಯನ್ನು ಬಯಲುಮಾಡಲು ನಿಜಲಿರಗಪ್ಪನವರು ಅವಕಾಶವನ್ನು ಬಳಸಿಕೊಂಡರು. ಮೊದಲನೆಯದಾಗಿ, ಇದುವರೆಗೂ ತಮಗೆ ತಿಳಿಯದಿದ್ದುದನ್ನು ಪ್ರಕಟಿಸಿದ್ದಕ್ಕಾಗಿ ಅವರು ಹನುಮಂತಯ್ಯನವರಿಗೆ ಕೃತಜ್ಞತೆ ಸಲ್ಲಿಸಿದರು, ಅದೇಂದರೆ ಈ ಹಿಂದೆ ತಾವು ಪಕ್ಷದ ನಾಯಕರಾಗಿ ಅವಿರೋಧವಾಗಿ ಆಯ್ಕೆಗೊಳ್ಳಲು ಹನುಮಂತಯ್ಯನವರೇ ಕಾರಣರು ಎಂಬುದು. ವರದಿಯನ್ನು ತಾವು ಹನುಮಂತಯ್ಯ ನವರ ವಿರುದ್ಧ ಬಳಸಿಕೊಂಡ ಆರೋಪಕ್ಕೆ ಉತ್ತರವಾಗಿ, ನಿಜಲಿಂಗಪ್ಪನವರು ಪರಿಸ್ಥಿತಿ ಯನ್ನು ಸ್ಪಷ್ಟಪಡಿಸಿದರು. ವಿಧಾನಸೌಧ ನಿರ್ಮಾಣದ ವಿವಾದವನ್ನು ಕುರಿತು ಅವರು ನೀಡಿದ ವಿವರಣೆಯಂತೆ, ಚರ್ಚಿಸಲು ಹನುಮಂತಯ್ಯನವರು ತಮ್ಮನ್ನು ಮೂರು ಬಾರಿ ಭೇಟಿಮಾಡಿದ್ದರು–ಮೊದಲನೆಯದರಲ್ಲಿ, ಹನುಮಂತಯ್ಯನವರ ವಿರೋಧಿಯೊಬ್ಬ ರನ್ನು ಅಧ್ಯಕ್ಷರಾಗಿಸಿ ನ್ಯಾಯಾಂಗ ತನಿಖೆಯನ್ನು ಮಾಡಿಸಲು ನಿರ್ಧರಿಸಿರುವುದು ಸತ್ಯವೇ ಎಂದು ವಿಚಾರಿಸಲು. ಇದನ್ನು ತಳ್ಳಿಹಾಕಿ, ವಿಚಾರಣಾ ಆಯೋಗವನ್ನು ನೇಮಿಸುವ ನಿರ್ಧಾರ ಕೈಗೊಂಡರೂ ಹನುಮಂತಯ್ಯನವರಿಗೆ ವಿರೋಧಿ ಎಂದು ಗೊತ್ತಿರುವ ಯಾರನ್ನೂ ಅದರ ಅಧ್ಯಕ್ಷರನ್ನಾಗಿ ಮಾಡುವುದಿಲ್ಲವೆಂದು ನಿಜಲಿಂಗಪ್ಪನವರು ಆಶ್ವಾಸನೆ ನೀಡಿದರು. ಅವರು ನಿಜಲಿಂಗಪ್ಪನವರನ್ನು ಭೇಟಿಯಾದ ಎರಡನೆಯ ಸಂದರ್ಭವೆಂದರೆ, ವರದಿ ಪ್ರಕಟವಾದ ನಂತರ, ಆ ವರದಿಯ ಜೊತೆಗೇ ಕಟ್ಟಡ ನಿರ್ಮಾಣದಲ್ಲಿ ಭಾಗವಹಿಸಿದ್ದ ಇಂಜಿನಿಯರುಗಳ ವರದಿಯನ್ನೂ ಬಹಿರಂಗಗೊಳಿಸ

ಬೇಕೆಂಬುದನ್ನು ಒತ್ತಾಯಿಸಲು. ಇದು ಸಮಂಜಸವಾಗುವುದಿಲ್ಲವೆಂದು ನಿಜಲಿಂಗಪ್ಪ ನಿರಾಕರಿಸಿದರು. ಈ ವರದಿಯನ್ನು ಪ್ರಕಟಿಸಿದ್ದು ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗುವ ಕಾರಣದಿಂದ ಎಂದು ಒಬ್ಬ ಸದಸ್ಯರು ಆಪಾದಿಸಿದರು. ಎಂದೂ ಕೋಪಗೊಳ್ಳದ ನಿಜಲಿಂಗಪ್ಪನವರು ಈ ಆಪಾದನೆಯಿಂದ ಕ್ರುದ್ಧರಾದಂತೆ ಕಂಡಿತು, ಅದನ್ನು ಕ್ಷುಲ್ಲಕ ಆರೋಪವೆಂದು ತಳ್ಳಿಹಾಕಿದರು. ತಾವು ಸಮಿತಿಯ ಯಾವೊಬ್ಬ ಸದಸ್ಯರನ್ನೂ ಭೇಟಿಯಾಗಿಲ್ಲವೆಂದು ಸ್ಪಷ್ಟಪಡಿಸಿದರು. ವರದಿಯನ್ನು ಬಹಿರಂಗಗೊಳಿಸಿದ ಸಮಯದ ಬಗ್ಗೆ ಹೇಳುತ್ತ, ಅದರ ಪ್ರಕಟಣೆಯ ವಿಳಂಬಕ್ಕೆ ಕಾರಣ ವರದಿ ಕೈಗೆ ಸಿಕ್ಕಿದುದೇ ಜನವರಿ ೨ ರಂದು ಹಾಗಾಗಿ ಅದರ ಮುದ್ರಣ ಕಾರ್ಯ ಫೆಬ್ರವರಿ ೮ ವರೆಗೆ ಹಿಡಿಯಿತೆಂದೂ, ಅದರಿಂದಾಗಿ ಚುನಾವಣೆಯ ಬಳಿಕ ಅದನ್ನು ಬಹಿಂಗಗೊಳಿಸಿದ್ದಾಗಿ ವಿವರಿಸಿದರು. ಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸಲು ತಮಗೆ ಹನುಮಂತಯ್ಯನವರು ಸಹಕರಿಸಲು ಒಪ್ಪಿದ್ದಾರೆಂಬುದನ್ನೂ, ಆದರೆ ಕಳೆದ ಐದು ತಿಂಗಳಲ್ಲಿ ಅದನ್ನು ಬಯಸುವ ಪರಿಸ್ಥಿತಿ ಒದಗಲಿಲ್ಲವೆಂಬುದನ್ನೂ ನಿಜಲಿಂಗಪ್ಪ ಬಹಿರಂಗಪಡಿಸಿದರು.

ಕಾಂಗ್ರೆಸ್ ಸೋಲಿಗೆ ಕಾರಣ ಪಕ್ಷದ ಒಳಜಗಳ ಹಾಗೂ ಜಾತೀಯತೆಗಳೆಂದು ನಿಜಲಿಂಗಪ್ಪನವರು ಪತ್ರಕರ್ತರಿಗೆ ವಿವರಿಸಿದರು. ಹೀಗಾಗಿ ಬೆಳಗಾವಿಯಲ್ಲಿನ ಸೋಲಿಗೆ ಭಾಷೆಯ ವಿಷಯ ಕಾರಣ ಎಂದು ವ್ಯಾಖ್ಯಾನಿಸಬಾರದೆಂದರು. ಕಳೆದ ಐದು ತಿಂಗಳಲ್ಲಿ ತಮ್ಮ ಸರ್ಕಾರವು ಹೊಸ ರಾಜ್ಯಕ್ಕೆ ಬುನಾದಿ ಹಾಕಿರುವುದು ತಮಗೆ ಹೆಮ್ಮೆ ತಂದಿದೆ ಎಂದು ಅವರು ಹೇಳಿದರು. ಏಪ್ರಿಲ್ ೬ ರಂದು ಕೇಂದ್ರದ ವೀಕ್ಷಕರಾದ ಕೆ.ಪಿ. ಮಾಧವನ್ ನಾಯರ್ ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್‌ನ ಶಾಸಕಾಂಗ ಪಕ್ಷದ ಸಭೆ ಸೇರಿತು. ಅಣ್ಣಾರಾವ್ ಗಣಮುಖಿಯವರು ಸೂಚಿಸಿ ರತ್ನಮ್ಮ ಮಾಧವ್ ರಾವ್ ಅವರು ಅನುಮೋದಿಸಿ ನಿಜಲಿಂಗಪ್ಪನವರು ಅವಿರೋಧವಾಗಿ ಆಯ್ಕೆಗೊಂಡರು. ಈ ಅವಿರೋಧ ಆಯ್ಕೆಗೂ ಮುನ್ನ ಸಾಕಷ್ಟು ತೆರೆಮರೆಯ ಕಸರತ್ತುಗಳು ನಡೆದಿದ್ದುವು. ಒಮ್ಮತವನ್ನು ಮೂಡಿಸಲು ರಚಿತವಾಗಿದ್ದ ನಾಲ್ಕು ಮಂದಿ ಸಮಿತಿಯಲ್ಲಿ ತಾವೊಬ್ಬ ಸದಸ್ಯರೆಂದು ಎಸ್. ಚೆನ್ನಯ್ಯ ಹೇಳಿದರು. ಮೊದಲಿಗೆ ನಾಲ್ಕು ಹೆಸರುಗಳು ಆ ಹುದ್ದೆಗೆ ಸೂಚಿತವಾಗಿದ್ದವು: ನಿಜಲಿಂಗಪ್ಪ, ಮಂಜಪ್ಪ, ಟಿ. ಸುಬ್ರಹ್ಮಣ್ಯ ಮತ್ತು ಹನುಮಂತಯ್ಯ. ಮೊದಲನೆಯ ಸಭೆಯಲ್ಲಿ ಯಾವ ನಿರ್ಧಾರವನ್ನೂ ಕೈಗೊಳ್ಳಲಿಲ್ಲ. ಎರಡನೆಯ ಸಭೆಯಲ್ಲಿ, ನಿಜಲಿಂಗಪ್ಪನವರ ಹೆಸರು ಅಂತಿಮವಾಗಿ ಆಯ್ಕೆಗೊಳ್ಳಲು ಕೆ.ಸಿ. ರೆಡ್ಡಿಯವರು ಮಹತ್ವದ ಪಾತ್ರವನ್ನು ವಹಿಸಿದ್ದರು. ೧೫ ರಂದು ತಮ್ಮ ಸಂಪುಟವನ್ನು ಪ್ರಕಟಿಸುವುದಾಗಿ ನಿಜಲಿಂಗಪ್ಪನವರು ಭರವಸೆಯಿತ್ತಿದ್ದರೂ, ೧೬ ಕ್ಕೆ ಅದನ್ನು ಮುಂದೂಡಿದರು, ಆದರೆ ಅಂದು ಕೂಡ ಹಾಗೆ ಮಾಡಲಾಗಲಿಲ್ಲ. ಏನೋ ಅಡ್ಡಿ

ಯಿದ್ದುದು ಸ್ಪಷ್ಟವಾಗಿತ್ತು. ತಮ್ಮ ಸಂಪುಟವನ್ನು ಅಂತಿಮವಾಗಿ ೧೭ ರಂದು ಪ್ರಕಟಿಸಲು ನಿಜಲಿಂಗಪ್ಪನವರಿಗೆ ಸಾಧ್ಯವಾಯಿತು, ಅದೂ ಅಪೂರ್ಣವಾಗಿ. ಹನ್ನೊಂದು ಮಂದಿಯ ಬದಲು ಕೇವಲ ಎಂಟು ಮಂದಿಯ ಹೆಸರುಗಳನ್ನು ಮಾತ್ರ ಪ್ರಕಟಿಸಲಾಯಿತು. ಅವರುಗಳೆಂದರೆ, ಎಚ್.ಕೆ. ವೀರಣ್ಣಗೌಡ, ಟಿ. ಮರಿಯಪ್ಪ, ಎಚ್.ಎಸ್. ರುದ್ರಪ್ಪ, ಆರ್. ಚೆನ್ನಿಗರಾಮಯ್ಯ, ಸಿ.ಎಂ. ಪೂಣಚ್ಚ, ಎಂ.ಪಿ. ಪಾಟೀಲ್ ಮತ್ತು ಮಹಮದ್ ಅಲಿ. ಅವರಲ್ಲಿ ಮಹಮದ್ ಅಲಿ ಅವರ ಹೊರತಾಗಿ ಮಿಕ್ಕವರೆಲ್ಲ ಹಿಂದಿನ ಮಂತ್ರಿ ಮಂಡಲದಲ್ಲಿದ್ದವರೇ. ಈ ಪಟ್ಟಿಯು ಏಕೆ ಅಪೂರ್ಣ ಎಂಬುದರ ಬಗ್ಗೆ ವಿವರಿಸುತ್ತ, ತಾವು ಸಂಪುಟ ಸೇರುವಂತೆ ಆಹ್ವಾನಿಸಿದ್ದ ಕೆಲವು ಸ್ನೇಹಿತರು ಅದನ್ನು ಪರಿಶೀಲಿಸಲು ಸ್ವಲ್ಪ ಕಾಲಾವಕಾಶ ಬಯಸಿದ್ದರಿಂದ ಹೀಗಾಯಿತೆಂದರು. ಅವರೆಲ್ಲರ ಹೆಸರುಗಳನ್ನು ೧೮ ರಂದು ಪ್ರಕಟಿಸುವುದಾಗಿ ತಿಳಿಸಿದರು. ಈ ಹಿಂದೆ ಅವರು ಹತ್ತು ಮಂದಿಯ ಸಂಪುಟವನ್ನು ಹೊಂದಲು ಬಯಸಿದ್ದರು, ಆದರೆ ಎಲ್ಲ ಪ್ರದೇಶಗಳಿಗೆ ಪ್ರಾತಿನಿಧ್ಯ ನೀಡಬೇಕಾದ್ದರಿಂದ ಹನ್ನೊಂದು ಮಂದಿಯ ಆವಶ್ಯಕತೆಯುಂಟಾಯಿತು. ಹನ್ನೊಂದು ಒಂದು ಶುಭ ಸಂಖ್ಯೆಯಲ್ಲ ಎಂಬುದು ತಮಗೆ ಗೊತ್ತಿದೆ ಎಂದರು! ಉಪಮಂತ್ರಿಗಳಾಗಿ ಮೂವರನ್ನು ಮಾತ್ರ ನೇಮಿಸುವುದಾಗಿಯೂ ಅವರ ಹೆಸರುಗಳನ್ನೂ ೧೮ ರಂದು ಪ್ರಕಟಿಸುವುದಾಗಿ ತಿಳಿಸಿದರು. ಆದರೆ ೧೮ ರಂದು ಪಟ್ಟಿಯನ್ನು ೧೯ ರಂದು ಪ್ರಕಟಿಸು ವುದಾಗಿ ಪ್ರಕಟಿಸಿದರು! ೧೯ ರಂದು ಮಾತ್ರ ಸಂಪೂರ್ಣ ಪಟ್ಟಿ ಬಿಡುಗಡೆಯಾಯಿತು. ಮೂವರು ಹೊಸ ಮಂತ್ರಿಗಳೆಂದರೆ ಬಿ. ವೈಕುಂಠ ಬಾಳಿಗಾ, ವೆಂಕಟಪ್ಪ ಮತ್ತು ಆರ್.ಎಂ. ಪಾಟೀಲ್. ಮತ್ತೊಬ್ಬರನ್ನು ಸೇರಿಸಿ ಅದನ್ನು ಹನ್ನೆರಡು ಮಂದಿ ಸಂಪುಟ ವನ್ನಾಗಿಸುವ ಸಾಧ್ಯತೆಯಿತ್ತು. ಆದರೆ ಅಂದು ಹನ್ನೆರಡನೆಯ ಸಚಿವರ ಹಾಗೂ ಉಪಮಂತ್ರಿಗಳ ಹೆಸರುಗಳನ್ನು ಪ್ರಕಟಿಸಲಿಲ್ಲ. ೨೬ ರಂದು, ಮೂವರು ಉಪಮಂತ್ರಿಗಳ ಹೆಸರುಗಳನ್ನು ಪ್ರಕಟಿಸಲಾಯಿತೇ ಹೊರತು ಹನ್ನೆರಡನೆಯ ಸಚಿವರದ್ದಲ್ಲ. ಉಪಮಂತ್ರಿಗಳೆಂದರೆ ರಾಮಕೃಷ್ಣ ಹೆಗಡೆ, ವೀರೇಂದ್ರ ಪಾಟೀಲ್ ಮತ್ತು ಗ್ರೇಸ್ ಟಕ್ಕರ್. ಅಧಿಕಾರ ವಹಿಸಿಕೊಂಡ ತಕ್ಷಣವೇ, ನಿಜಲಿಂಗಪ್ಪನವರು ತಮ್ಮ ಸರ್ಕಾರದ ಧ್ಯೇಯಧೋರಣೆಗಳ ಬಗ್ಗೆ ಸಾರ್ವಜನಿಕ ಸಭೆಗಳಲ್ಲಿ ಘೋಷಿಸುತ್ತ ಬಂದರು. ಉದಾಹರಣೆಗೆ, ಅವರು ನೀರಾವರಿ ಯೋಜನೆಗಳಿಗೆ ಮೊದಲ ಆದ್ಯತೆಯನ್ನು ನೀಡಿ ದುದು ಸ್ಪಷ್ಟವಾಗಿತ್ತು. ೭-೫-೧೯೫೭ ರಂದು ಕುವೆಂಪು ಅವರ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳವನ್ನು ಉದ್ಘಾಟಿಸುತ್ತ ನಿಜಲಿಂಗಪ್ಪನವರು ಕನ್ನಡ ಭಾಷೆ ಮತ್ತು ಸಾಹಿತ್ಯಗಳಿಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಘೋಷಿಸಿ ದರು. ಬೆಳಗಾವಿಯಲ್ಲಿ ಎಂಟನೆಯ ಕರ್ನಾಟಕ ಹರಿಜನ ಪರಿಷತ್ ಅನ್ನು ಉದ್ಘಾಟಿಸುತ್ತ ಹರಿಜನರ ಉದ್ಧಾರಕ್ಕಾಗಿ ತಮ್ಮ ಬದ್ಧತೆಯನ್ನು ವ್ಯಕ್ತಪಡಿಸಿದರು.

ಸಂಸದೀಯ ಕಾರ್ಯಾಂಗದ ಸುಲಲಿತ ಕಾರ್ಯನಿರ್ವಹಣೆಗೆ ಅತ್ಯಂತ ಪ್ರಮುಖ ವಾದ ನೆಲೆಯೆಂದರೆ, ಶಾಸಕಾಂಗ ಪಕ್ಷ ಹಾಗೂ ಪಕ್ಷದ ಸಂಘಟನಾ ವಿಭಾಗಗಳ ನಡುವಣ ಸಾಮರಸ್ಯ. ಆದರೆ ಹೊಸ ಎಂಪಿಸಿಸಿಯಲ್ಲಿ ನಿಜಲಿಂಗಪ್ಪನವರ ರಾಜಕೀಯ ಪ್ರತಿಸ್ಪರ್ಧಿಯಾಗಿದ್ದ ಎಸ್. ಚೆನ್ನಯ್ಯನವರು ೧೯೫೭ ರ ಜೂನ್ ೧೦ ರಂದು ಅಧ್ಯಕ್ಷರಾಗಿ ಆಯ್ಕೆಯಾದರು. ನಿಜಲಿಂಗಪ್ಪನವರ ಅಭ್ಯರ್ಥಿಯಾಗಿದ್ದ ಎಂ.ವಿ. ರಾಮರಾವ್ ಅವರಿಗೆ ೮೧ ಮತಗಳು ಬಂದಿದ್ದರೆ, ಚೆನ್ನಯ್ಯನವರಿಗೆ ೮೭ ಮತಗಳು ಬಂದವು. ಒಮ್ಮತದ ನಿರ್ಧಾರಕ್ಕೆ ಬರಲು ಸಾಧ್ಯವಾಗಿರಲಿಲ್ಲ. ಸಂಘಟನಾತ್ಮಕ ಸಂಸ್ಕೃತಿಯು ಎಂತಹ ಹಂತ ವನ್ನು ತಲುಪಿದ್ದಿತೆಂದರೆ, ಒಮ್ಮತವಿಲ್ಲದೆ ಗುಂಪುಗಾರಿಕೆಯ ಕಾರಣದಿಂದ ಹೆಚ್ಚು ಅಪಾಯಗಳಾಗುವ ಸಾಧ್ಯತೆಯುಂಟಾಗಿತ್ತು. ಚುನಾವಣೆಗಳು ಅನಿವಾರ್ಯವಾದಾಗ, ಚುನಾವಣೆಗಳ ಬಳಿಕವೂ ಪೈಪೋಟಿಗಳು ಮುಂದುವರಿದುವು. ವಾಸ್ತವವಾಗಿ ಒಮ್ಮತಕ್ಕೆ ಬರಲು ಸಾಕಷ್ಟು ಪ್ರಯತ್ನಗಳು ನಡೆದಿದ್ದುವು. ಅದನ್ನು ಸುಗಮಗೊಳಿಸಲು, ಇತರ ಮೂವರು ಸ್ಪರ್ಧಿಗಳಾಗಿದ್ದ ಹಳ್ಳಿಕೇರಿ ಗುದ್ಲೆಪ್ಪ, ಕೆ.ವಿ. ಶಂಕರೇಗೌಡ ಹಾಗೂ ಡಿ.ಎಂ. ಸಿದ್ಧಯ್ಯ ಅವರುಗಳು ತಮ್ಮ ನಾಮಪತ್ರಗಳನ್ನು ಹಿಂದೆ ಪಡೆದಿದ್ದರು. ಹೀಗೆ ನಿಜಲಿಂಗಪ್ಪ ನವರ ಸರ್ಕಾರಕ್ಕೆ ಶುಭಸೂಚನೆಯೇನೂ ಸಿಕ್ಕಲಿಲ್ಲ. ಪಾನನಿಷೇಧದ ಬಗ್ಗೆ ಸರ್ಕಾರ ಒಂದು ಪ್ರಮುಖ ನೀತಿಘೋಷಣೆಯನ್ನು ಮಾಡಿತು. ಸರ್ಕಾರವು ಪಾನನಿಷೇಧಕ್ಕೆ ಬದ್ಧವಾಗಿದೆಯೆಂದು ೧೫-೬-೧೯೫೭ ರಂದು ಅರ್ಥಸಚಿವ ಟಿ. ಮರಿಯಪ್ಪನವರು ವಿಧಾನಸಭೆಯಲ್ಲಿ ಘೋಷಿಸಿದರು. ಅವರು ಮಾಡಿದ ಮತ್ತೊಂದು ನೀತಿಘೋಷಣೆ ಯೆಂದರೆ ಮಲೆನಾಡು ಪ್ರದೇಶ ಅಭಿವೃದ್ಧಿಗೆ ಸರ್ಕಾರ ಸಹಾಯ ಮಾಡುವುದೆಂಬುದು. ಹೊಸ ಸರ್ಕಾರವು ಎದುರಿಸುತ್ತಿದ್ದ ಮುಖ್ಯ ಸಮಸ್ಯೆಗಳಲ್ಲಿ ಒಂದೆಂದರೆ ಸರ್ಕಾರದ ವೆಚ್ಚಕ್ಕೆ ಸಂಬಂಧಿಸಿದಂತೆ ರಾಜ್ಯದ ಐದು ವಿಭಾಗಗಳಲ್ಲಿನ ಸಮಾನ ಹಂಚಿಕೆ. ಹಳೆಯ ಮೈಸೂರು ಸರ್ಕಾರದ ಹಣಕಾಸು ಸಹಾಯವನ್ನು ಮಿತಿಮೀರಿ ಪಡೆದುಕೊಂಡಿದೆ ಎಂಬ ಆರೋಪ. ಅರ್ಥಸಚಿವರು ಈ ಆರೋಪವನ್ನು ನಿರಾಕರಿಸಿ ಸರ್ಕಾರವು ಎಲ್ಲ ವಿಭಾಗಗಳನ್ನೂ ಯಾವುದೇ ಪಕ್ಷಪಾತವಿಲ್ಲದೆ ಅಭಿವೃದ್ಧಿಪಡಿಸಲು ಪ್ರಯತ್ನಿಸುತ್ತದೆ ಎಂದು ಆಶ್ವಾಸನೆಯಿತ್ತರು. ೧೯-೭-೧೯೫೭ ರಂದು ಮಾಡಿದ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯ ವೇಳೆ ತಮ್ಮ ಸರ್ಕಾರದ ವಿರುದ್ಧ ಮಾಡಲಾದ ಟೀಕೆ ಗಳಿಗೆ ನಿಜಲಿಂಗಪ್ಪನವರು ಉತ್ತರಿಸಿ, ಕಾರ್ಯನಿರ್ವಹಿಸಿದ ಅಲ್ಪಾವಧಿಯಲ್ಲಿ ತಮ್ಮ ಸರ್ಕಾರವು ಉತ್ತಮ ಕಾರ್ಯ ಮಾಡಿದೆ ಎಂದು ಸಮರ್ಥಿಸಿಕೊಂಡರು. ಇನ್ನು ಮುಂದೆ ಸರ್ಕಾರವು ಸಾರ್ವಜನಿಕ ಸಾಲದ ಮೂಲಕ ಹಣಸಂಗ್ರಹ ಮಾಡುವುದಿಲ್ಲ ವೆಂಬ ಸರ್ಕಾರದ ಮತ್ತೊಂದು ನೀತಿಧೋರಣೆಯನ್ನು ಟಿ. ಮರಿಯಪ್ಪನವರು ಮಾಡಿ

ದರು. ವಾಸ್ತವವಾಗಿ, ಮುಂದೆ ನೋಡುವಂತೆ ಆ ಬಳಿಕವೂ ಸರ್ಕಾರವು ಸಾರ್ವಜನಿಕ ಸಾಲದ ಮೂಲಕ ಹಣಸಂಗ್ರಹ ಮಾಡಿತು. ಕಾಲೇಜುಗಳಿಗೆ ವಿದ್ಯಾರ್ಥಿಗಳ ಪ್ರವೇಶ ಕುರಿತ ಹಳೆ ಮೈಸೂರಿನಲ್ಲಿ ಜಾರಿಯಲ್ಲಿದ್ದ ಜಾತಿ ಸಂಬಂಧದ ಸರ್ಕಾರದ ಆಜ್ಞೆಯನ್ನು ಇಡೀ ರಾಜ್ಯಕ್ಕೆ ಅನ್ವಯಿಸುವ ತನ್ನ ಧೋರಣೆಯನ್ನು ನಿಜಲಿಂಗಪ್ಪನವರ ಸರ್ಕಾರ ಈ ಮೊದಲು ಘೋಷಿಸಿತ್ತು. ವಿದ್ಯಾಸಚಿವರಾದ ವೆಂಕಟಪ್ಪನವರು ೨೩-೭-೧೯೫೭ ರಂದು ವಿಧಾನಸಭೆಯಲ್ಲಿ ಹೇಳಿಕೆ ನೀಡಿ ಇದನ್ನು ಪುನರುಚ್ಚರಿಸಿ ಸಮರ್ಥಿಸಿಕೊಂಡರು.

ಈ ಮೊದಲೇ ಗಮನಿಸಿದಂತೆ, ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಸರ್ಕಾರವನ್ನು ನಡೆಸುವುದರಲ್ಲಿನ ಒಂದು ಕಿರಿಕಿರಿಯೆಂದರೆ ಶಾಸಕಾಂಗ ಹಾಗೂ ಆಡಳಿತ ಪಕ್ಷದ ಆಡಳಿನ ವಿಭಾಗಗಳ ನಡುವಣ ಸಾಮರಸ್ಯವನ್ನು ಕಾಪಾಡಿಕೊಳ್ಳುವುದು. ಹಾಗೆ ನೋಡಿದರೆ, ನಿಜಲಿಂಗಪ್ಪನವರ ಸರ್ಕಾರದ ಎದುರಿಗಿದ್ದ ಪ್ರಮುಖ ಸಮಸ್ಯೆಯೆಂದರೆ ಇದೇ. ಎಂಪಿಸಿಸಿಯ ಕಾರ್ಯಕಾರಿ ಸಮಿತಿಯು ಸಭೆಯಲ್ಲಿ ಒಂದು ನಿರ್ಣಯವನ್ನು ಅಂಗೀಕರಿಸಿ ಈ ಎರಡೂ ವಿಭಾಗಗಳ ಸಹಕಾರಕ್ಕೆ ಕರೆ ಕೊಟ್ಟಿತು, ಅಂದರೆ ಅದು ಇರಲೇ ಇಲ್ಲ ಅಥವಾ ಇದ್ದರೂ ಅಸಮರ್ಪಕ ಎಂಬುದಾಗಿತ್ತು. ಸರ್ಕಾರವು ನಾಲ್ಕು ಕೋಟಿ ರೂಪಾಯಿಗಳ ಸಾರ್ವಜನಿಕ ಹಣಸಂಗ್ರಹವನ್ನು ಮಾಡಲಿದೆ ಎಂಬ ಸುದ್ದಿಯು ೩೦-೮-೧೯೫೭ ರಂದು ಪತ್ರಿಕೆಗಳಲ್ಲಿ ಪ್ರಕಟವಾಯಿತು. ಸರ್ಕಾರದ ಮುಂದಿದ್ದ ಮತ್ತೊಂದು ನೀತಿಘೋಷಣೆಯೆಂದರೆ ನೆರೆ ರಾಜ್ಯಗಳ ಜೊತೆಗಿನ ಪರಿಹಾರಗೊಳ್ಳದ ಗಡಿವಿವಾದ. ಈ ವಿವಾದಗಳನ್ನು ಬಗೆಹರಿಸಲು ಆಂಧ್ರ, ಕೇರಳ ಹಾಗೂ ಮುಂಬಯಿ ರಾಜ್ಯಗಳ ಜೊತೆಗೆ ಉನ್ನತ ಮಟ್ಟದ ಮಾತುಕತೆಗಳು ನಡೆಸುತ್ತಿರುವ ವಿಚಾರವನ್ನು ನಿಜಲಿಂಗಪ್ಪನವರು ಪತ್ರಿಕಾ ಗೋಷ್ಠಿಯಲ್ಲಿ ೪-೯-೧೯೫೭ ರಂದು ಪ್ರಕಟಿಸಿದರು. ಆ ತಿಂಗಳ ಅಂತಿಮ ಭಾಗದಲ್ಲಿ ನಡೆಯಲಿರುವ ಪಶ್ಚಿಮ ವಲಯ ಮಂಡಳಿಯು ಈ ವಿಚಾರವನ್ನು ಕೈಗೆತ್ತಿಕೊಳ್ಳಲಿದೆ ಎಂದೂ ಅವರು ಹೇಳಿದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಎಂಬ ಹೆಸರಿನ ಬದಲು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಎಂಬ ಹೆಸರನ್ನೇ ಮುಂದುವರಿಸಲು ಎಐಸಿಸಿಯು ನಿರ್ಧರಿಸಿದೆ ಎಂಬ ವದಂತಿಯನ್ನು ತಳ್ಳಿ ಹಾಕಿದ ನಿಜಲಿಂಗಪ್ಪನವರು ಹೊಸ ಸಮಿತಿಯ ಕೇಂದ್ರ ಕಚೇರಿಯು ಬೆಂಗಳೂರಿ ನಲ್ಲಿರುವುದೆಂದು ಅದೇ ಸುದ್ದಿಗೋಷ್ಠಿಯಲ್ಲಿ ಅವರು ಪ್ರಕಟಿಸಿದರು. ಹಾಗೆ ನೋಡಿದರೆ, ಹೆಸರಿನ ವಿಚಾರ ಎಐಸಿಸಿಯ ಮುಂದೆ ಬಂದೇ ಇಲ್ಲವೆಂದೂ, ಅಲ್ಲದೆ ಈ ವಿಷಯವು ಪ್ರದೇಶ ಕಾಂಗ್ರೆಸ್ ಸಮಿತಿಗೆ ಸೀಮಿತವಾದ ವಿಷಯವೆಂದೂ ಸ್ಪಷ್ಟಪಡಿಸಿದರು. ಎಲ್ಲ ವಿಭಾಗಗಳ ಅಭಿವೃದ್ಧಿಗೆ ಸಮಾನ ಪ್ರಾಮುಖ್ಯ ನೀಡುವ ತನ್ನ ಧೋರಣೆಯ ಅನುಷ್ಠಾನದ ಭಾಗವಾಗಿ ಸರ್ಕಾರವು ಮುಂಬಯಿ ಕರ್ನಾಟಕದ ಜನರ ಬಹುದಿನದ ಬೇಡಿಕೆಯಾಗಿದ್ದ

ವೈದ್ಯಕೀಯ ಕಾಲೇಜನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸಲು ತೀರ್ಮಾನ ಕೈಗೊಂಡಿತು. ಈ ಕಾಲೇಜನ್ನು ೬-೯-೧೯೫೭ ರಂದು ಟಿ. ಮರಿಯಪ್ಪನವರು ಉದ್ಘಾಟಿಸಿದರು, ಆ ಸಮಾರಂಭದ ಅಧ್ಯಕ್ಷತೆಯನ್ನು ಆರೋಗ್ಯ ಸಚಿವ ಆರ್.ಎಂ. ಪಾಟೀಲ್ ವಹಿಸಿದ್ದರು. ಮೈಸೂರು ರಾಜ್ಯ ವಡ್ಡರ ಸಮುದಾಯದ ಆರನೇ ಸಮ್ಮೇಳನವನ್ನುದ್ದೇಶಿಸಿ ಮಾತನಾಡಲು ಮುಖ್ಯಮಂತ್ರಿಗಳು ಮಾರನೆಯ ದಿನ ಧಾರವಾಡಕ್ಕೆ ಆಗಮಿಸಿದರು. ಆ ಸಮುದಾಯವನ್ನು ಹಿಂದುಳಿದ ಜಾತಿಯೆಂದು ಘೋಷಿಸುವ ಮೂಲಕ ಸರ್ಕಾರವು ಅವರ ಅಭಿವೃದ್ಧಿಗೆ ಸಹಾಯ ಮಾಡುವುದೆಂದು ಅವರು ಭರವಸೆಯಿತ್ತರು. ಆದರೆ ಸರ್ಕಾರದ ನೌಕರಿಯನ್ನೇ ಅತಿಯಾಗಿ ಅವಲಂಬಿಸಬಾರದೆಂದೂ ಎಚ್ಚರಿಸಿದರು. ಆಡಳಿತ ಸುಧಾರಣೆಯ ಆವಶ್ಯಕತೆಯನ್ನು ಮನಗಂಡ ಕೆಲವೇ ಸರ್ಕಾರಗಳಲ್ಲಿ ನಿಜಲಿಂಗಪ್ಪನವರದೂ ಒಂದು. ಹೀಗಾಗಿ ಆಡಳಿತಪದ್ಧತಿಯನ್ನು ಅಧ್ಯಯನ ಮಾಡಿ ಸೂಕ್ತವಾದ ಸುಧಾರಣೆಗಳ ಬಗ್ಗೆ ಸಲಹೆಗಳನ್ನು ನೀಡಲು ಏಕಸದಸ್ಯ ಸಮಿತಿಯೊಂದನ್ನು ಸರ್ಕಾರ ನೇಮಿಸಿತು. ತಮ್ಮ ಆಡಳಿತಾನುಭವಕ್ಕೆ ಹೆಸರಾಗಿದ್ದ ಎ.ಡಿ.. ಗೌಡ ಅವರನ್ನು ಏಕಸದಸ್ಯ ಸಮಿತಿಯನ್ನಾಗಿ ನೇಮಿಸಲಾಯಿತು.

ರಾಜ್ಯದ ಹೆಸರನ್ನು ಕರ್ನಾಟಕ ಎಂದು ಬದಲಾಯಿಸಲು ಅನೇಕ ಬಾರಿ ವಿಧಾನ ಸಭೆಯಲ್ಲಿ ವಿಫಲ ಪ್ರಯತ್ನಗಳು ನಡೆದವು. ಎ.ಜಿ. ದೊಡ್ಡಮೇಟಿ ಅವರು ಈ ವಿಷಯ ಕುರಿತ ಒಂದು ಖಾಸಗಿ ನಿರ್ಣಯವನ್ನು ೩೦ ನೇ ಸೆಪ್ಟೆಂಬರ್ ೧೯೫೭ ರಂದು ವಿಧಾನ ಸಭೆಯಲ್ಲಿ ಮಂಡಿಸಿದರು. ಆದರೆ ಅದರಿಂದ ಏನೂ ಆಗಲಿಲ್ಲ. ನಿಜಲಿಂಗಪ್ಪನವರು ಎದುರಿಸಿದ ಒಂದು ಪುಟ್ಟ ಆಘಾತವೆಂದರೆ, ಮಹಾರಾಜರು ದಸರೆಯ ಸಾಂಪ್ರದಾಯಿಕ ಜಂಬೂಸವಾರಿಯನ್ನು ರದ್ದುಪಡಿಸಿದುದು. ನಿಜಲಿಂಗಪ್ಪನವರು ಈ ಸಮಸ್ಯೆಗೆ ದಾರಿ ಹುಡುಕಲು ಮೈಸೂರಿಗೆ ಧಾವಿಸಿದರು. ಈಗಾಗಲೇ ನೋಡಿರುವಂತೆ, ರಾಜ್ಯದ ಯಾವುದೇ ಮುಖ್ಯಮಂತ್ರಿಯನ್ನು ಕಾಡುವ ಸಮಸ್ಯೆಯೆಂದರೆ ಪಕ್ಷದ ಭಿನ್ನಾಭಿಪ್ರಾಯಗಳು ಮತ್ತು ಗುಂಪುಗಾರಿಕೆ. ಐಹಿಕ ವಿಷಯಗಳ ಬಗ್ಗೆ ಸಂತನ ಮನೋಭಾವ ತಾಳಿದ್ದ ವಿನೋಬ ಭಾವೆಯವರು ಸರ್ಕಾರದ ಸುಲಲಿತ ಕಾರ್ಯನಿರ್ವಹಣೆಗಿದ್ದ ಒಳಜಗಳ ಮತ್ತು ಗುಂಪುಗಾರಿಕೆಗಳ ಬಗ್ಗೆ ಅಸಂತುಷ್ಟರಾದರು. ಬೀದರ್‌ನಲ್ಲಿ ಅಕ್ಟೋಬರ್ ೧೨, ೧೯೫೭ ರಂದು ಅವರು ಮಾಡಿದ ಸಾರ್ವಜನಿಕ ಭಾಷಣದಲ್ಲಿ ಮೈಸೂರು ಕಾಂಗ್ರೆಸ್‌ನ ನಾಯಕರುಗಳ ಈ ಗುಣವನ್ನು ಟೀಕೆ ಮಾಡಿದರು. ಆನಂತರ ೧೪ ರಂದು ಬೆಂಗಳೂರು ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಮಾಡಿದ ಭಾಷಣದಲ್ಲಿ, ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿರಿಸಿ ರಾಜ್ಯದ ಒಳಿತಿಗೆ ಒಗ್ಗಟ್ಟಿನಿಂದ ಕೆಲಸ ಮಾಡಲು ಅವರು ಕರೆ ನೀಡಿದರು. ಅವರು ಕೇವಲ

ಭಾಷಣಗಳಷ್ಟನ್ನೇ ಮಾಡದೆ, ಅಂತ ಒಗ್ಗಟ್ಟನ್ನು ಸಾಧಿಸಲು ಪ್ರಯತ್ನಗಳನ್ನೂ ಮಾಡಿದರು. ೧೯೫೭ ನೇ ಅಕ್ಟೋಬರ್ ೧೬ ರಂದು ಈ ವಿಚಾರವಾಗಿ ಹನುಮಂತಯ್ಯನವರನ್ನು ಬೆಳಿಗ್ಗೆ ಹಾಗೂ ಚೆನ್ನಯ್ಯನವರನ್ನು ಸಂಜೆ ಅವರು ಕಂಡರು. ಈ ಮೊದಲೇ ಅವರು ಮೂರನೆಯ ಬಣದ (ಹಾಗೆಂದು ಭಾವಿಸಲಾದ) ನಾಯಕರಾದ ನಿಜಲಿಂಗಪ್ಪನವರನ್ನು ಕಂಡಿದ್ದರು.

ಮತ್ತೊಂದು ಪ್ರಮುಖ ನೀತಿನಿರ್ಧಾರವೆಂದರೆ ಎಲ್ಲ ಜಿಲ್ಲಾ ಲೋಕಲ್ ಬೋರ್ಡ್‌ಗಳನ್ನು ರದ್ದುಪಡಿಸಿ ಕೇಂದ್ರ ಸರ್ಕಾರ ನೇಮಿಸಿದ್ದ ಬಲವಂತರಾಯ್ ಸಮಿತಿಯ ಶಿಫಾರಸುಗಳಿಗನುಗುಣವಾಗಿ ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ರಚನೆ. ಸ್ಥಳಿಯ ಸಂಸ್ಥೆಗಳಲ್ಲಿ ಅತ್ಯಂತ ಕೆಳಮಟ್ಟದಲ್ಲಿ ಗ್ರಾಮ ಪಂಚಾಯಿತಿಗಳು ಇರಲಿದ್ದುವು. ಹೀಗೆ ಅನೇಕ ವಿಷಯಗಳನ್ನು ತಕ್ಕಮಟ್ಟಿಗಿನ ತ್ವರಿತತೆ ಮತ್ತು ಆಸಕ್ತಿಗಳಿಂದ ಎದುರಿಸಿ ಸರ್ಕಾರವು ಬಗೆಹರಿಸುತ್ತಿತ್ತು. ಕೇಂದ್ರ ಗೃಹ ಸಚಿವ ಬಿ.ಎನ್. ದಾತಾರ್ ಅವರು ರಾಜ್ಯಕ್ಕೆ ನೀಡಿದ ಎರಡು ದಿನಗಳ ಭೇಟಿಯ ನಂತರ ಸರ್ಕಾರದ ಎರಡು ಮಹತ್ವದ ಸಾಧನೆಗಳ ಬಗ್ಗೆ, ಅಂದರೆ ವಿವಿಧ ವ್ಯವಸ್ಥೆಗಳಡಿಯಲ್ಲಿದ್ದ ಆಡಳಿತ ಹಾಗೂ ಕಾನೂನುಗಳನ್ನು ಸಮರೂಪಕ್ಕೆ ತಂದುದು, ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಆದರೆ ಕಾಂಗ್ರೆಸ್‌ನ ಒಳಜಗಳ ಮುಂದುವರಿದೇ ಇತ್ತು. ಗಾಂಧಿ ಜಯಂತಿಯಾದ ಅಕ್ಟೋಬರ್ ೨ ರಂದು ಹನುಮಂತಯ್ಯನವರು ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುತ್ತ, ರಾಜ್ಯ ಕಾಂಗ್ರೆಸ್‌ನ ಗುಂಪುಗಾರಿಕೆಯು ಅಪಾಯದ ಹಂತ ತಲುಪಿದೆಯೆಂದೂ ಒಮ್ಮತವನ್ನು ತರಲು ಮಧ್ಯಪ್ರವೇಶಿಸಬೇಕೆಂದು ತಾವು ವಿನೋಬ ಅವರನ್ನು ವಿಶೇಷವಾಗಿ ಕೇಳಿಕೊಂಡಿರುವುದಾಗಿಯೂ ತಿಳಿಸಿದರು. ಆದರೆ ಸರ್ಕಾರದ ಮಟ್ಟಿಗೆ, ಅದರ ಕಾರ್ಯನಿರ್ವಹಣೆ ಚೆನ್ನಾಗಿಯೇ ಇತ್ತು, ಕನಿಷ್ಠ ಪಕ್ಷ ರಾಜ್ಯಕ್ಕೆ ಭೇಟಿಯಿತ್ತಿದ್ದ ಕೇಂದ್ರ ಸಚಿವರುಗಳ ಪ್ರಕಾರ. ನಿದರ್ಶನಕ್ಕೆ, ಸಮಾಜ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ರಾಜ್ಯವು ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿದೆಯೆಂದು ಎಸ್.ಕೆ. ಡೇ ಅವರು ಬೆಂಗಳೂರಿನಲ್ಲಿ ಮಾತನಾಡುತ್ತ ತಿಳಿಸಿದರು. ೯-೧೧-೧೯೫೭ ರಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತ ನಿಜಲಿಂಗಪ್ಪನವರು ರಾಜ್ಯದಲ್ಲಿ ರಾಜಕೀಯ ಬಿಕ್ಕಟ್ಟು ಇದೆ ಎಂಬುದನ್ನು ನಿರಾಕರಿಸುವುದು ಆವಶ್ಯಕವೆಂದು ಭಾವಿಸಿದರು. ಸೂಕ್ಷ್ಮವಾಗಿ ಗಮನಿಸಿದರೆ, ಅದರ ವಾಸನೆ ಬರಹತ್ತಿದ್ದರಿಂದಲೇ ಅವರು ಹಾಗೆ ಹೇಳಿರುವುದು ಎಂಬ ಸಂಶಯ ಉಂಟಾಗುತ್ತದೆ. ದೆಹಲಿಯ ಒಂದು ಪತ್ರಿಕೆಯೊಂದಿಗೆ ಮಾತನಾಡುತ್ತ, ತಮ್ಮ ಹಾಗೂ ರಾಜ್ಯಪಾಲರ ನಡುವೆ ಗಂಭೀರ ಭಿನ್ನಾಭಿಪ್ರಾಯಗಳುಂಟಾಗಿವೆಯೆಂಬುದನ್ನು ಅವರು ನಿರಾಕರಿಸಿದರು. ಆದರೆ, ಜಂಬೂಸವಾರಿಯ ಬಗ್ಗೆ ಕೊಂಚಮಟ್ಟಿಗಿನ ಭಿನ್ನಾಭಿಪ್ರಾಯ

ವಿತ್ತೆಂಬುದನ್ನು ಒಪ್ಪಿಕೊಂಡರು, ಆದರೆ ಅದನ್ನಾಗಲೇ ಬಗೆಹರಿಸಲಾಗಿದೆಯೆಂದೂ ತಿಳಿಸಿದರು. ಸರ್ಕಾರದ ಅನುದಿನದ ಆಡಳಿತದಲಿ ಹಸ್ತಕ್ಷೇಪ ಮಾಡದ ರಾಜ್ಯಪಾಲರನ್ನು ಅವರು ಶ್ಲಾಘಿಸಿದರು. ವಾಸ್ತವವಾಗಿ, ಅವರ ಸರ್ಕಾರದ ಉಳಿವಿನ ಬಗ್ಗೆ ಬಿಕ್ಕಟ್ಟು ಉಂಟಾಗಿತ್ತು, ಅದು ಮುಂದೆ ಎದ್ದು ಕಾಣುವಂತಾಯಿತು. ಈ ನಡುವೆ, ಎಂಪಿಸಿಸಿಯು ತನ್ನ ಅರಸೀಕೆರೆ ಸಮಾವೇಶದಲ್ಲಿ ತನ್ನ ಹೆಸರನ್ನು ಕೆಪಿಸಿಸಿ ಎಂದು ಬದಲಾಯಿಸಲು ಎಐಸಿಸಿಯನ್ನು ಕೇಳಿಕೊಳ್ಳುವ ನಿರ್ಣಯವನ್ನು ತೆಗೆದುಕೊಂಡಿತು. ಈ ನಿರ್ಣಯವನ್ನು ವಿ.ಟಿ. ಮಾಗಡಿ ಸೂಚಿಸಿದರು; ಅದೊಂದು ಅನಧಿಕೃತ ನಿರ್ಣಯ.

ರಾಜ್ಯ ಸರ್ಕಾರಗಳು, ಮೈಸೂರು ಸರ್ಕಾರವೂ ಸೇರಿದಂತೆ, ಎದುರಿಸುತ್ತಿದ್ದ ಅತ್ಯಂತ ಪ್ರಮುಖವೂ ಕಠಿಣತಮವೂ ಆದ ಸಮಸ್ಯೆಯೆಂದರೆ ಪಂಚವಾರ್ಷಿಕ ಯೋಜನೆಗಳು ರೂಪಿಸಿದ್ದ ಗುರಿಗಳತ್ತ ನಡೆಸುವ ಅಭಿವೃದ್ಧಿಕಾರ್ಯ. ಎರಡನೆಯ ಪಂಚವಾರ್ಷಿಕ ಯೋಜನೆಯ ಅನುಷ್ಠಾನವು ತೃಪ್ತಿಕರವಾಗಿಲ್ಲವೆಂಬ ಟೀಕೆಗೆ ಉತ್ತರಿಸುತ್ತ ಅರ್ಥಸಚಿವ ಟಿ. ಮರಿಯಪ್ಪನವರು, ಅಭಿವೃದ್ಧಿ ಕಾರ್ಯಗಳನ್ನು ರಾಜ್ಯದಲ್ಲಿ ತೀವ್ರಗೊಳಿಸಲಾಗುವುದೆಂದು ಭರವಸೆಯಿತ್ತರು. ಈ ಮಧ್ಯೆ, ವಿದೇಶೀ ವಿನಿಮಯ ಸಂಗ್ರಹದ ತೀವ್ರ ಕೊರತೆಯಿಂದಾಗಿ ಶರಾವತಿ ಯೋಜನೆಯನ್ನು ಮೂರನೆಯ ಪಂಚವಾರ್ಷಿಕ ಯೋಜನೆಗೆ ಮುಂದೂಡುವಂತೆ ಕೇಂದ್ರವು ರಾಜ್ಯ ಸರ್ಕಾರಕ್ಕೆ ಸೂಚಿಸಿತು. ಆದರೆ ರಾಜ್ಯ ಸರ್ಕಾರವು ಆ ಯೋಜನೆಯನ್ನು ಪಂಚವಾರ್ಷಿಕ ಯೋಜನೆಯ ವ್ಯಾಪ್ತಿಯ ಹೊರಗೇ ಅನುಷ್ಠಾನಗೊಳಿಸಲು ನಿರ್ಧರಿಸಿತು. ಐವತ್ತು ಕೋಟಿ ರೂಪಾಯಿ ಅಂದಾಜಿನ ಶರಾವತಿ ಯೋಜನೆಯನ್ನು ಎರಡನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕೈಗೆತ್ತಿಕೊಳ್ಳುವುದರಿಂದ ಮಾತ್ರವೇ ರಾಜ್ಯದ ಪ್ರಸ್ತುತ ವಿದ್ಯುತ್ ಕೊರತೆಯನ್ನು ನೀಗಿಸಲು ಸಾಧ್ಯವೆಂದು ನಿಜಲಿಂಗಪ್ಪನವರು ೧೪-೧೨-೧೯೫೭ ರಂದು ಪತ್ರಿಕಾಗೋಷ್ಠಿಯಲ್ಲಿ ಅಭಿಪ್ರಾಯಪಟ್ಟರು. ಈ ಯೋಜನೆಗೆ ವಿದೇಶಿ ವಿನಮಯದ ಆವಶ್ಯಕತೆಯೇನೂ ಇಲ್ಲದ್ದರಿಂದಾಗಿ, ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿಯೇ ಅದನ್ನು ಸೇರಿಸಬಹುದೆಂದೂ ಹೇಳಿದರು. ಆ ಮುಂದೆ, ಕೇಂದ್ರವು ರಾಜ್ಯಕ್ಕೆ ನಿಗದಿಪಡಿಸಿದ್ದ ಯೋಜನಾ ಅನುದಾನವನ್ನು ೩೪ ಕೋಟಿ ೯೪ ಲಕ್ಷ ರೂಪಾಯಿಗಳಿಂದ ೨೩ ಕೋಟಿ ೨೦ ಲಕ್ಷ ರೂಪಾಯಿಗಳಿಗೆ, ಅಂದರೆ ಮೂರನೇ ಎರಡರಷ್ಟಕ್ಕೆ, ಇಳಿಸಿತು. ಕೇಂದ್ರದ ಹಣಕಾಸು ಪರಿಸ್ಥಿತಿ ಸುಧಾರಿಸಿದರೆ ರಾಜ್ಯದ ಬೇಡಿಕೆಯನ್ನು ತಾನು ಸಹಾನುಭೂತಿಯಿಂದ ಪುನರ್ ಪರಿಶೀಲಿಸುವುದಾಗಿ ಆಶ್ವಾಸನೆಯಿತ್ತಿತು. ಯೋಜನಾ ಆಯೋಗವು ಕಡಿತಗೊಳಿಸಿದ್ದ ವೆಚ್ಚ ಬಹುತೇಕ ಜಲವಿದ್ಯುತ್ ಯೋಜನೆಗಳು ಹಾಗೂ ಶಿಕ್ಷಣ ಕ್ಷೇತ್ರಗಳಿಗೆ ಸಂಬಂಧಿಸಿದ್ದವು. ಆಯೋಗವನ್ನು ಭೇಟಿ ಮಾಡಿದ್ದ ನಿಯೋಗದಲ್ಲಿ ಮುಖ್ಯಮಂತ್ರಿ ನಿಜಲಿಂಗಪ್ಪ

ನವರ ಜೊತೆಗೆ, ಪೂಣಚ್ಚ, ಮರಿಯಪ್ಪ, ವೀರಣ್ಣ ಗೌಡ, ಎಂ.ಪಿ. ಪಾಟೀಲ್ ಮತ್ತು ವೈಕುಂಠ ಬಾಳಿಗಾ ಇದ್ದರು. ಏಕೀಕರಣಾನಂತರದ ಸಮಸ್ಯೆಗಳನ್ನು ಬಗೆಹರಿಸಲು ರಾಜ್ಯವು ಮಾಡಿದ್ದ ಪ್ರಯತ್ನಗಳನ್ನೂ ಪರಿಣಾಮಕಾರಿ ಆಡಳಿತ ಯಂತ್ರವನ್ನು ಸ್ಥಾಪಿಸಿದ್ದ ಬಗೆಯನ್ನೂ ಆಯೋಗವು ಮುಕ್ತವಾಗಿ ಪ್ರಶಂಸಿಸಿತು. ೨-೧-೧೯೫೮ ರಂದು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನಿಜಲಿಂಗಪ್ಪನವರು, ಕೇಂದ್ರವು ಮಾಡಿದ್ದ ಕಡಿತಗಳ ಹೊರತಾಗಿಯೂ ರಾಜ್ಯವು ತನ್ನ ಯೋಜನೆಗಳನ್ನೆಲ್ಲ ಅನುಷ್ಠಾನಗೊಳಿಸುವುದಾಗಿ ಪ್ರಕಟಿಸಿದರು. ಅದರಲ್ಲಿಯೂ, ಶರಾವತಿ ಯೋಜನೆಯನ್ನು ಕೈಬಿಡುವ ಪ್ರಶ್ನೆಯೇ ಇಲ್ಲವೆಂದು ತಿಳಿಸಿದರು. ರಾಜ್ಯಕ್ಕೆ ಆದಷ್ಟೂ ಹೆಚ್ಚಿನದನ್ನು ಪಡೆಯುವ ಕಾತರದಲ್ಲಿದ್ದ ಮುಖ್ಯಮಂತ್ರಿಗಳು, ೫-೧-೧೯೫೮ ರಂದು ಬೆಂಗಳೂರಿನಲ್ಲಿ ನಡೆದ ಕೇಂದ್ರ ಆರೋಗ್ಯ ಮಂಡಳಿಯ ಉದ್ಘಾಟನೆಯ ಸಮಾರಂಭವನ್ನು ಬಳಸಿಕೊಂಡು ಬೆಂಗಳೂರಿನಲ್ಲಿ ಒಂದು ಕ್ಯಾನ್ಸರ್ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸುವಂತೆ ಕೇಂದ್ರವನ್ನು ಕೋರಿದರು. ವಿಶೇಷವಾಗಿ ಕನ್ನಡಿಗರೇ ಆದ ಕೇಂದ್ರ ಆರೋಗ್ಯ ಸಚಿವ ಡಿ.ಪಿ. ಕರಮರ್‌ಕರ್ ಅವರನ್ನು ಈ ಕುರಿತು ವಿಶೇಷವಾಗಿ ಪ್ರಾರ್ಥಿಸಿದರು. ಜೊತೆಗೆ, ಕೃಷಿಯಲ್ಲಿ ಹೆಚ್ಚು ಹಣ ವಿನಿಯೋಗಿಸಿ ಆಹಾರ ಧಾನ್ಯ ಉತ್ಪಾದನೆಯ ಹೆಚ್ಚಳವನ್ನು ಸಾಧಿಸಲು ಕೇಂದ್ರದ ಹೆಚ್ಚಿನ ಆರ್ಥಿಕ ನೆರವು, ಗ್ರಾಮೀಣ ಆರೋಗ್ಯ ಸೇವೆಯ ಸುಧಾರಣೆ ಮುಂತಾದವುಗಳ ಬಗ್ಗೆಯೂ ಬೇಡಿಕೆಯಿಟ್ಟರು. ಏಕೀಕರಣ ಚಳವಳಿಯಲ್ಲಿನ ಒಂದು ಪ್ರಮುಖ ಅಂಶವೆಂದರೆ ಕನ್ನಡ ಭಾಷೆಗೆ ಸೂಕ್ತ ಸ್ಥಾನವನ್ನು ನೀಡುವುದರ ಮೂಲಕ ಸಾಧಿಸಬೇಕಾದ ಅದರ ಬೆಳವಣಿಗೆಯ ಆವಶ್ಯಕತೆ. ಹೀಗಾಗಿ ಇದು ಸರ್ಕಾರದ ಆದ್ಯತೆಯೆಂಬುದನ್ನು ಮನವರಿಕೆ ಮಾಡಲು ನಿಜಲಿಂಗಪ್ಪನವರ ಸರ್ಕಾರ ಹೆಣಗಿತು. ೨೨-೧-೧೯೫೮ ರಂದು ಬೆಂಗಳೂರಿನಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತ, ಕನ್ನಡದ ಅಭಿವೃದ್ಧಿಯು ಸರ್ಕಾರದ ಬದ್ಧತೆಯಾಗಿದ್ದು ಸದ್ಯದಲ್ಲಿಯೇ ಕನ್ನಡವನ್ನು ರಾಜ್ಯದ ಅಧಿಕೃತ ಭಾಷೆಯಾಗಿ ಘೋಷಿಸಲಾಗುವುದೆಂದು ನುಡಿದರು.

ಕೇಂದ್ರ ನೀರಾವರಿ ಸಚಿವ ಎಸ್.ಕೆ. ಪಾಟೀಲರು ಶರಾವತಿ ಯೋಜನೆಯ ಉದ್ಘಾಟನೆಗಾಗಿ ಬಂದವರು ೪-೨-೧೯೫೮ ರಂದು ಮಾರ್ಗದಲ್ಲಿ ಶರಾವತಿಗೆ ಬಂದರು. ಅದನ್ನು ಅವರು ಉದ್ಘಾಟಿಸಿದ್ದು ಲಿಂಗನಮಕ್ಕಿಯಲ್ಲಿ, ೫-೨-೧೯೫೮ ರಂದು. ಅದು ದೇಶದಲ್ಲಿನ ಆಗಿನ ಅತಿ ದೊಡ್ಡ ಜಲವಿದ್ಯುತ್ ಯೋಜನೆ. ನೀರಾವರಿ ಹಾಗೂ ವಿದ್ಯುತ್ ಉತ್ಪಾದನೆಯಲ್ಲದೆ, ನಿಜಲಿಂಗಪ್ಪ ಸರ್ಕಾರದ ಪ್ರಮುಖ ನೀತಿಗಳೆಂದರೆ ಸಾಮಾಜಿಕ ನ್ಯಾಯ, ಅದೂ ಸಮಾಜದ ಹಿಂದುಳಿದ ಮತ್ತು ದುರ್ಬಲ ವರ್ಗಗಳಿಗೆ ನೀಡುವ ವಿಶೇಷ ಸವಲತ್ತುಗಳು. ೧೯೫೮ನೇ ಏಪ್ರಿಲ್ ೩೦ ರಂದು ಈ ಬಗೆಗಿನ

ಅಸಮರ್ಪಕ ಸಾಧನೆಯ ಬಗ್ಗೆ ವಿಧಾನಸಭೆಯಲ್ಲಿ ಕಾಂಗ್ರೆಸ್ ಮತ್ತು ವಿರೋಧ ಪಕ್ಷದ ಸದಸ್ಯರುಗಳು ಸರ್ಕಾರವನ್ನು ಟೀಕಿಸಿದರು. ಈ ವರ್ಗಗಳ ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಳಿಗಾಗಿ ಸರ್ಕಾರವು ಮಾಡಬೇಕಾದಷ್ಟನ್ನು ಮಾಡುತ್ತಿಲ್ಲವೆಂಬ ದೂರು ಕೇಳಿ ಬಂತು. ಹಳೆಯ ಮೈಸೂರಿನ ಸರ್ಕಾರದ ಜಾತಿ ಬಗೆಗಿನ ಆಜ್ಞೆಯು ಮೂಲತಃ ಸಾಮಾಜಿಕ ನ್ಯಾಯತದತ್ತ ಇಟ್ಟ ಹೆಜ್ಜೆಯಾದ್ದರಿಂದ, ಅದನ್ನು ಇತರ ಪ್ರದೇಶಗಳಗೂ ಅನ್ವಯಿಸಿದರೆ ಪ್ರಾಯಶಃ ಒಳಿತೆಂದು ಭಾವಿಸಿ ಸರ್ಕಾರವು ೧-೫-೧೯೫೮ ರಂದು ವಿಧಾನಸಭೆಯಲ್ಲಿ ಆ ಬಗ್ಗೆ ಪ್ರಕಟಿಸಲಾಯಿತು. ಇದರ ಪರಿಣಾಮವಾಗಿ, ಸರ್ಕಾರೀ ನೌಕರಿಯ ೫೭% ಭಾಗವು ಆ ಆಜ್ಞೆಯಲ್ಲಿ ನಮೂದಿಸಿದ್ದ ಕೋಮುಗಳವರಿಗೆ ಮೀಸಲಿಡುವಂತಾಯಿತು. ಕಾಲೇಜು ಪ್ರವೇಶಕ್ಕೆ ಸಂಬಂಧಿಸದಂತೆಯೂ ಮೀಸಲಾತಿಯನ್ನು ಜಾರಿಗೊಳಿಸಲು ಸರ್ಕಾರವು ಚಿಂತಿಸಿತು, ಆದರೆ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ. ಹಿಂದುಳಿದ ವರ್ಗಗಳವರ ಬವಣೆಯ ಬಗ್ಗೆ ಅಧ್ಯಯನ ನಡೆಸಿ ವರದಿಯನ್ನು ನೀಡಲು ಮತ್ತು ಸಂವಿಧಾನಾತ್ಮಕ ಸವಲತ್ತುಗಳ ಮೇಲುಸ್ತುವಾರಿ ನೋಡಿಕೊಳ್ಳಲು ಶೀಘ್ರವೇ ಒಂದು ಸಮಿತಿಯನ್ನು ರಚಿಸುವುದಾಗಿ ಎಸ್‌ಸಿಎಸ್‌ಟಿ ಕಲ್ಯಾಣ ಉಸ್ತುವಾರಿ ಸಚಿವ ಆರ್ ಚೆನ್ನಿಗರಾಮಯ್ಯನವರು ೨-೫-೧೯೫೮ ರಂದು ವಿಧಾನಸಭೆಯಲ್ಲಿ ಪ್ರಕಟಿಸಿದರು. ನಾಲ್ಕು ಮತ್ತು ಐದನೆಯ ತಾರೀಕುಗಳಂದು ನಡೆದ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ಪಾಲುಗೊಂಡ ಬಳಿಕ ನಿಜಲಿಂಗಪ್ಪನವರು ೬-೫-೧೯೫೮ ರಂದು ದೆಹಲಿಯಿಂದ ವಾಪಸಾದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತ ಎರಡನೆಯ ಯೋಜನೆಯಲ್ಲಿ ಸೇರ್ಪಡೆಯಾಗದಿದ್ದರೂ ಶರಾವತಿ ಯೋಜನೆಯು ಮುಂದುವರಿಯುತ್ತಿದೆ ಎಂದು ತಿಳಿಸಿದರು.

ಆಡಳಿತ ಪಕ್ಷವಾದ ಕಾಂಗ್ರೆಸ್‌ನಲ್ಲಿ ಒಂದು ಬಿರುಗಾಳಿ ರೂಪುಗೊಳ್ಳುತ್ತಿತ್ತು, ನಿಜಲಿಂಗಪ್ಪನವರನ್ನು ಮುಖ್ಯಮಂತ್ರಿ ಗಾದಿಯಿಂದ ಕೆಳಗಿಳಿಸುವ ಸಂಚು ಅದು. ಒಳಜಗಳಗಳು ಹದಗೆಟ್ಟ ಸ್ಥಿತಿಯನ್ನು ತಲುಪಿದ್ದವು, ಐಎನ್‌ಸಿ ಕಾರ್ಯದರ್ಶಿಯವರಾದ ಶ್ರೀಮನ್ ನಾರಾಯಣ್ ಅವರು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಮಸ್ಯೆಗಳನ್ನು ಬಗೆಹರಿಸಲು ೭-೫-೧೯೫೮ ರಂದು ಬೆಂಗಳೂರಿಗೆ ಬಂದಿಳಿದರು. ಅವರು ನಿಜಲಿಂಗಪ್ಪ ಹಾಗೂ ಚೆನ್ನಯ್ಯನವರೊಂದಿಗೆ ಸಮಾಲೋಚಿಸಿದರು. ಚೆನ್ನಯ್ಯಪರ ಗುಂಪು ಅಸಮರ್ಪಕ ಕಾರ್ಯವೈಖರಿಯಿಂದಾಗಿ ನಾಯಕತ್ವ ಬದಲಾವಣೆಗೆ ಒತ್ತಾಯಿಸಿತು. ನಿಜಲಿಂಗಪ್ಪನವರ ಗುಂಪು ಸರ್ಕಾರವು ಸಮರ್ಪಕವಾಗಿಯೇ ಕಾರ್ಯನಿರ್ವಹಿಸುತ್ತಿದೆ ಎಂದು ಪ್ರತಿಪಾದಿಸಿತು. ಜೊತೆಗೆ, ನೀರಾವರಿ ಹಾಗೂ ಏಕೀಕರಣ ವಿಷಯಗಳಲ್ಲಿ ಅದು ಒಳ್ಳೆಯ ಸಾಧನೆ ಮಾಡಿದೆ ಎಂದೂ ವಾದಿಸಿತು. ನಿಜಲಿಂಗಪ್ಪನವರನ್ನು ಪದಚ್ಯುತ

ಗೊಳಿಸಲು ಪಣತೊಟ್ಟಿದ್ದ ಚೆನ್ನಯ್ಯ ಪರ ಗುಂಪು ಕಾರ್ಯಸೂಚಿಯನ್ನು ಸಿದ್ಧಗೊಳಿಸಲು ಐದು ಮಂದಿಯ ಸಮಿತಿಯೊಂದನ್ನು ರಚಿಸಿತ್ತು. ಶ್ರೀಮನ್ ನಾರಾಯಣ್ ಅವರು ಮೊದಲು ಭೇಟಿಯಾದದ್ದು ಹನುಮಂತಯ್ಯನವರನ್ನು, ಆ ಬಳಿಕ ಭಿನ್ನಮತೀಯರಾದ ಬಿ.ಡಿ. ಜತ್ತಿ, ಎಚ್.ಎಂ. ಚೆನ್ನಬಸಪ್ಪ, ಟಿ. ಸುಬ್ರಹ್ಮಣ್ಯ, ಕೊಲ್ಲೂರು ಮಲ್ಲಪ್ಪ ಮುಂತಾದ ವರನ್ನು ಭೇಟಿಯಾದರು. ನಿಜಲಿಂಗಪ್ಪಪರ ಗುಂಪಿಗೆ ಸೇರಿದ್ದ ದೇವರಾಜ ಅರಸು ಮತ್ತು ಹುಚ್ಚಮಾಸ್ತಿಗೌಡ ಅವರನ್ನು ಆ ಬಳಿಕ ಭೇಟಿಯಾದರು. ಮಾರನೆಯ ದಿನ, ಅಂದರೆ ೮-೫-೧೯೫೮ ರಂದು, ನಾಯಕತ್ವ ಸಮಸ್ಯೆಯನ್ನು ಬಗೆಹರಿಸಲು ಶ್ರೀಮನ್ ನಾರಾಯಣ್ ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷವು ಸಭೆ ಸೇರಿತು. ಶ್ರೀಮನ್ ನಾರಾಯಣ್ ಅವರು ಬೆಂಗಳೂರಿನಲ್ಲಿ ತಂಗಿದ್ದರೂ, ನಿಜಲಿಂಗಪ್ಪನವರು ಅವರನ್ನು ಭೇಟಿಯಾಗಲಿಲ್ಲ. ಚರ್ಚೆಗಳ ನಡುವೆ, ಪಕ್ಷದ ಸಭೆಯಲ್ಲಿಯೇ, ಶ್ರೀಮನ್ ನಾರಾಯಣ್ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಿದರು. ಇದು ನಡೆಯುತ್ತಿರು ವಾಗಲೇ ನಿಜಲಿಂಗಪ್ಪನವರು ತಮ್ಮ ರಾಜೀನಾಮೆಯನ್ನು ಸಲ್ಲಿಸಿದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ತ್ಯಾಗ ಮಾಡಿದ್ದ ನಿಜಲಿಂಗಪ್ಪನವರಿಗೆ ಸರಿದೊರೆಯಾದ ನಾಯಕರನ್ನು ಆರಿಸಲು ಕೆಲವರು ಹಾತೊರೆದರು. ಟಿ. ಸುಬ್ರಹ್ಮಣ್ಯ ಅವರ ಹೆಸರನ್ನು ಪರಿಶೀಲಿಸ ಲಾಯಿತು, ಆದರೆ ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕಗಳ ಸದಸ್ಯರು ಸ್ಪರ್ಧಿಯಾಗಿರದಿದ್ದ ಬಿ.ಡಿ. ಜತ್ತಿಯವರ ಹೆಸರನ್ನು ಇದ್ದಕ್ಕಿದ್ದಂತೆ ಸೂಚಿಸಿತು. ಹೀಗೆ ಅವರು ಪಕ್ಷದ ನಾಯಕರಾಗಿ ಆಯ್ಕೆಯಾದರು. ೮-೫-೧೯೫೮ ರಂದು ಶ್ರೀಮನ್ ನಾರಾಯಣ್ ಅವರು ಐಎನ್‌ಸಿ ಅಧ್ಯಕ್ಷ ಯು.ಎನ್. ದೇಭರ್ ಅವರೊಡನೆ ದೂರವಾಣಿ ಯಲ್ಲಿ ಮಾತನಾಡಿದರು.

ಕಾಂಗ್ರೆಸ್‌ನ ಧೋರಣೆಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಸಹಕರಿಸ ಬೇಕೆಂದು ಹೊಸ ನಾಯಕರಾದ ಬಿ.ಡಿ. ಜತ್ತಿಯವರು ಸದಸ್ಯರನ್ನು ಪ್ರಾರ್ಥಿಸಿಕೊಂಡರು. ತಮ್ಮ ಬೆಂಬಲ ಹಾಗೂ ಸಹಕಾರಗಳನ್ನು ನೀಡುವುದಾಗಿ ನಿಜಲಿಂಗಪ್ಪನವರು ಭರವಸೆ ಯಿತ್ತರು. ತಮಗೆ ಮುಖ್ಯಮಂತ್ರಿ ಸ್ಥಾನದ ಜವಾಬ್ದಾರಿಯಿಂದ ಬಿಡುಗಡೆ ಸಿಕ್ಕಿರುವುದು ಉಪಶಮನ ಹಾಗೂ ವ್ಯಾಪಕವಾದ ರಾಷ್ಟ್ರಮಟ್ಟದಲ್ಲಿ ಅಭಿವೃದ್ಧಿ ಕೆಲಸ ಮಾಡುವ ಸ್ವಾತಂತ್ರ್ಯಗಳು ಸಿಕ್ಕಿವೆಯೆಂದು ಪತ್ರಿಕೆಯವರಿಗೆ ಹೇಳಿದರು. ಈ ಮಧ್ಯೆ ಜತ್ತಿಯವರು ಎಐಸಿಸಿಯಲ್ಲಿ ಭಾಗವಹಿಸಲು ದೆಹಲಿಗೆ ತೆರಳಿದರು; ಜೊತೆಗೆ ಮಂತ್ರಿಮಂಡಲ ರಚನೆಯ ಬಗ್ಗೆ ಕಾಂಗ್ರೆಸ್ ವರಿಷ್ಠರ ಜೊತೆ ಮಾತುಕತೆ ನಡೆಸಿದರು. ಅವರು ಮೇ ೧೨ ಅಥವಾ ೧೩ ರಂದು ಬೆಂಗಳೂರಿಗೆ ಮರಳುವ ಸಂಭವವಿತ್ತು. ಈ ರೀತಿ ರಾಜಕೀಯ ನಾಟಕ ಕೊನೆಗೊಂಡಿತು, ಜೊತೆಗೆ ನಿಜಲಿಂಗಪ್ಪನವರ ಮೊದಲ ಹದಿನೆಂಟು

ತಿಂಗಳ ಮುಖ್ಯಮಂತ್ರಿಗಿರಿ ಮುಕ್ತಾಯಗೊಂಡಿತು. ಏಕೀಕರಣಗೊಂಡ ಮೈಸೂರಿನ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯಗಳ ಹೊಣೆ ಹೊತ್ತಿದ್ದ ಹದಿನೆಂಟು ತಿಂಗಳ ಸಂದಿಗ್ಧ ಅವಧಿಯೆಡೆಗೆ ಹಿಂದಿರುಗಿ ನೋಡಿದಾಗ, ಟೀಕೆಗಳನ್ನು ಗಮನಿಸದೆ ಅವರ ಸಾಧನೆಯು ಪ್ರಭಾವಶಾಲಿಯಾಗಿತ್ತೆಂದು ಹೇಳಬಹುದು. ತಮ್ಮದೇ ಪಕ್ಷದ ಒಳಜಗಳಗಳ ಪೀಡೆಯಿಲ್ಲದಿದ್ದರೆ ಆ ಬಡಪಾಯಿ ಮುಖ್ಯಮಂತ್ರಿಯ ಸಾಧನೆ ಮತ್ತಷ್ಟು ಪರಿಣಾಮಕಾರಿಯಾಗಬಹುದಿತ್ತು. ಆಂತರಿಕವಾಗಿ ಹುಟ್ಟಿಕೊಂಡಿದ್ದ ಈ ಸಮಸ್ಯೆಯೊಡನೆ ಹೋಲಿಸಿದರೆ, ವಿರೋಧಪಕ್ಷಗಳು ಅವರಿಗೆ ಯಾವುದೇ ಸವಾಲುಗಳನ್ನು ಸೃಷ್ಟಿಸಲಿಲ್ಲ. ಅವರ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸಲು ವಿರೋಧ ಪಕ್ಷಗಳು ಪ್ರಯತ್ನಿಸಿದರೂ, ಅದು ವಿರೋಧಪಕ್ಷದ ಎಂದಿನ ನಡವಳಿಕೆಯೇ ವಿನಾ ಸರ್ಕಾರಕ್ಕೆ ಅದು ಎಂದಿಗೂ ಆತಂಕವನ್ನೊಡ್ಡಲಿಲ್ಲ. ನಿಜಲಿಗಪ್ಪನವರ ಸರ್ಕಾರದ ಅತ್ಯಂತ ಶ್ರೇಷ್ಠ ಸಾಧನೆಯೆಂದರೆ ವಿವಿಧ ಐತಿಹಾಸಿಕ ಹಿನ್ನೆಲೆ ಹಾಗೂ ವ್ಯವಸ್ಥೆಗಳನ್ನೊಳಗೊಂಡಿದ್ದ ಐದು ಪ್ರದೇಶಗಳ ನಡುವೆ ಏಕರೂಪತೆಯನ್ನು ತರುವ ಕ್ಲಿಷ್ಟಕರ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಎದುರಿಸಿದ್ದು. ಎರಡನೆಯ ಅತ್ಯಂತ ಹಿರಿಯ ಸಾಧನೆಯೆಂದರೆ, ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ತಕ್ಕ ಬುನಾದಿಯನ್ನು ಹಾಕಿದ್ದು. ನೀರಾವರಿ ಯೋಜನೆಗಳಿಗೆ ನಾಂದಿ ಹಾಡಿದ್ದರಿಂದಾಗಿ ರಾಜ್ಯದ ಕೃಷಿ ಅಭಿವೃದ್ಧಿಯು ಸರಿದಾರಿಯಲ್ಲಿ ಸಾಗತೊಡಗಿತು. ವಿದ್ಯುತ್ ಕೊರತೆಯನ್ನೆದುರಿಸುತ್ತದ್ದ ರಾಜ್ಯದಲ್ಲಿ ನೀರಾವರಿ ಯೋಜನೆಗಳಿಗೆ ಹೊಂದಿಕೊಂಡ ಜಲವಿದ್ಯುತ್ ಯೋಜನೆಗಳನ್ನು ಕೈಗೊಂಡಿದ್ದರಿಂದ ಕೈಗಾರಿಕೀಕರಣಕ್ಕೂ ಸಮರ್ಪಕ ಭೂಮಿಕೆಯನ್ನು ಸಿದ್ಧಪಡಿಸಿದಂತಾಯಿತು. ಮೂರನೆಯದಾಗಿ, ಕಗ್ಗಂಟಾಗಿದ್ದ ಆಡಳಿತ ಸೇವೆಗಳ ಸಂಯೋಜನೆಯನ್ನು ಸರ್ಕಾರ ಸಾಧಿಸಿತು. ನಾಲ್ಕನೆಯದಾಗಿ, ಭಿನ್ನತೆಯಿದ್ದ ಕಾನೂನು ವ್ಯವಸ್ಥೆಯಲ್ಲಿ ಏಕರೂಪತೆಯನ್ನು ಸಾಧಿಸಲು ಸರ್ಕಾರಕ್ಕೆ ಸಾಧ್ಯವಾಯಿತು. ಕೊನೆಯದಾಗಿ, ಇವುಗಳಷ್ಟು ಪರಿಣಾಮಕಾರಿಯಾಗಲ್ಲದಿದ್ದರೂ, ಹಿಂದುಳಿದ ವರ್ಗಗಳು ಹಾಗೂ ಎಸ್‌ಸಿಎಸ್‌ಟಿಗಳ ಕಲ್ಯಾಣದ ಕಡೆಗೆ ಗಮನವನ್ನು ಕೇಂದ್ರೀಕರಿಸಿ ಸಾಮಾಜಿಕ ನ್ಯಾಯದ ದಿಸೆಯಲ್ಲಿ ಒಂದಷ್ಟು ದೂರ ಸಾಗುವಂತಾಯಿತು.

ಹದಿನೆಂಟು ತಿಂಗಳ ಅಧಿಕಾರದ ಬಳಿಕ ಅವರನ್ನು ಕೆಳಗಿಳಿಸಿದ್ದರೂ, ನಿಜಲಿಂಗಪ್ಪನವರ ಮುಖ್ಯಮಂತ್ರಿ ಸ್ಥಾನವು ಮುಗಿತಾಯಗೊಳ್ಳಲಿಲ್ಲ. ನಾಲ್ಕು ಸುದೀರ್ಘ ವರ್ಷಗಳ ತರುವಾಯ ೧೯೬೨ ರಲ್ಲಿ ಅವರು ಮತ್ತೆ ಮುಖ್ಯಮಂತ್ರಿಯಾದರು. ನೇರ ರಾಜಕೀಯ ಅಧಿಕಾರದಿಂದ ದೂರವಿದ್ದ ಈ ಮೂರ್‍ನಾಲ್ಕು ವರ್ಷಗಳ ಅವಧಿಯನ್ನು ಸಮೀಕ್ಷೆ ಮಾಡುವವರೆಗೂ ಈ ಪುನರಾಯ್ಕೆಯ ಕತೆ ಕಾಯಬಹುದಂತಿತ್ತು. ಸ್ಥಾನ ಅಧಿಕಾರಗಳು ನಿಜಲಿಂಗಪ್ಪನವರಿಗೆ ಯಾವತ್ತೂ ಮುಖ್ಯವೆಂದು ಅನಿಸದ ವಿಷಯವು ಅವರ

ಬದುಕು ವ್ಯಕ್ತಿತ್ವಗಳ ಪರಿಚಯವಿದ್ದ ಯಾರಿಗಾದರೂ ಗೊತ್ತಿರುವ ವಿಷಯವೇ. ಸೇವೆಯ ಒಂದು ಮಾಧ್ಯಮವಾಗುವುದಾದರೆ ಯಾವುದೇ ಹುದ್ದೆಯನ್ನು ವಹಿಸಿಕೊಳ್ಳಲು ಅವರು ಸದಾ ಸಿದ್ಧವಿದ್ದರು. ಆದರೆ ಅವರು ಈ ಎರಡು ಮುಖ್ಯಮಂತ್ರಿ ಅವಧಿಗಳ ನಡುವಣ ಅವಧಿಯನ್ನು ಹೇಗೆ ಕಳೆದರು? ಮೊದಲನೆಯದಾಗಿ, ಅವರು ಪಕ್ಷದ ಕೆಲಸ ನಿರ್ವಹಿಸ ಬಹುದಾಗಿತ್ತು. ಆ ಬಳಿಕ ಜನರ ಹಿತಸಾಧನೆಯ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿ ಕೊಳ್ಳಬಹುದಾಗಿತ್ತು. ಅಧಿಕಾರೇತರ ಕಾರ್ಯಗಳನ್ನು ಕೈಗೆತ್ತಿಕೊಂಡು, ಅಂದರೆ ಸಮಿತಿಗಳ ಅಥವಾ ಆಯೋಗಗಳ ಅಧ್ಯಕ್ಷರಾಗಿ ರಾಜ್ಯ ಮತ್ತು ರಾಷ್ಟ್ರಗಳ ನೆಲೆಯಲ್ಲಿ ಕ್ರಿಯಾಶೀಲ ವಾಗಬಹುದಿತ್ತು. ಹೀಗೆ, ಆದರ್ಶ ಸಾರ್ವಜನಿಕ ಸೇವೆಗೆ ಬದ್ಧವಾಗಿದ್ದ ನಿಜಲಿಂಗಪ್ಪನವ ರಂತಹ ನಾಯಕರಿಗೆ ದೇಶ ಮತ್ತು ಸಮಾಜಗಳ ಸೇವೆ ಮಾಡಲು ಅನೇಕ ಮಾರ್ಗ ಗಳಿರುತ್ತವೆ. ತಾಂತ್ರಿಕವಾಗಿ, ತಮ್ಮ ರಾಜೀನಾಮೆಯನ್ನು ೯-೫-೧೯೫೮ ರಂದು ರಾಜ್ಯಪಾಲರು ಒಪ್ಪಿಕೊಂಡ ಬಳಿಕ ಅವರ ಮತ್ತವರ ಸಚಿವಸಂಪುಟದ ಅಧಿಕಾರ ಕೊನೆಗೊಂಡಿತ್ತು. ಆದರೆ ಜತ್ತಿ ತಮ್ಮ ಸಂಪುಟರಚನೆ ಮಾಡುವವರೆಗೆ ಅಧಿಕಾರದಲ್ಲಿರಲು ಅವರನ್ನು ಕೇಳಿಕೊಳ್ಳಲಾಯಿತು. ಜತ್ತಿಯವರು ೧೬-೫-೧೯೫೮ ರಂದು ಅಧಿಕಾರ ಸ್ವೀಕಾರ ಮಾಡುವವರೆಗೆ ನಿಜಲಿಂಗಪ್ಪನವರು ಕ್ರಮಬದ್ಧವಾಗಿವಾಗಿ ಮುಖ್ಯಮಂತ್ರಿಯಾಗಿ ರಲಿಲ್ಲ. ಪ್ರಾದೇಶಿಕ ಮನೋಭಾವದ ನಿಜಲಿಂಗಪ್ಪನವರದು ಸ್ವತಂತ್ರ ಮನೋವೃತ್ತಿ ಯವರು ಅವರು ಕೇಂದ್ರ ನಾಯಕತ್ವದ ವಿರೋಧವನ್ನು ಗಳಿಸಿಕೊಳ್ಳುವ ಸಂಭವವಿತ್ತು. ಮೇನಲ್ಲಿ ಈ ಲೇಖಕನಿಗೆ ನಿಜಲಿಂಗಪ್ಪನವರು ವಿವರಿಸಿದಂತೆ ಅವರಿಬ್ಬರ ನಡುವಣ ಸಂಬಂಧ ಹಾರ್ದಿಕವಾದುದೆಂದು ಹೇಳುವಂತಿರಲಿಲ್ಲ, ಆದರೂ ಅದನ್ನು ವಿದ್ವೇಷದ್ದು ಎಂದೂ ಹೇಳಬರುವುದಿಲ್ಲ. ಹೊಸ ನಾಯಕರಾಗಿ ಜತ್ತಿಯವರ ಆಯ್ಕೆಯ ಬಗ್ಗೆ ನೆಹರೂ ಅವರಿಗೆ ಸಂತೋಷವಾದಂತಿತ್ತು, ದೇಶ ಕಟ್ಟುವ ಕಠಿಣತಮ ಕಾರ್ಯದಲ್ಲಿ ಹೊಸ ರಕ್ತದ ನವಪೀಳಿಗೆಯು ಭಾಗವಹಿಸಬೇಕೆಂಬ ನೆಲೆಯಲ್ಲಿ ಅವರು ಜತ್ತಿಯವರ ಆಯ್ಕೆಯನ್ನು ಸ್ವಾಗತಿಸಿದರು. ಹಿಂದಿನ ಸಂಪುಟದ ಇಬ್ಬರನ್ನು ಜತ್ತಿಯವರು ತಮ್ಮ ಸಂಪುಟದಲ್ಲಿಯೂ ಮುಂದುವರಿಸಿದರು. ತಮ್ಮ ಸಂಪುಟ ಸೇರುವಂತೆ ಜತ್ತಿಯವರು ನಿಜಲಿಂಗಪ್ಪನವರನ್ನು ಕೇಳಲಿಲ್ಲ, ಹಾಗೆ ಕೇಳಿದ್ದರೂ ನಿಜಲಿಂಗಪ್ಪನವರು ಅದನ್ನು ಪ್ರಾಯಶಃ ಒಪ್ಪುತ್ತಿರಲಿಲ್ಲವೆಂದು ಊಹಿಸಬಹುದು. ಅಲ್ಲದೆ, ಅವರ ನಿರ್ಗಮನದಿಂದ ಯಾವುದೇ ನೀತಿಧೋರಣೆಗಳು ಬದಲಾಗುವಂತಿರಲಿಲ್ಲ, ಯಾಕೆಂದರೆ ಹಿಂದಿನ ಧ್ಯೇಯ ಹಾಗೂ ಕಾರ್ಯಕ್ರಮಗಳನ್ನೇ ಜತ್ತಿಯವರೂ ಮುಂದುವರಿಸಿದರು. ನಿಜಲಿಂಗಪ್ಪ ಅಥವಾ ಜತ್ತಿ ಅಥವಾ ಮತ್ತಾರೇ ಆಗಿರಲಿ, ಮುಖ್ಯಮಂತ್ರಿಯಾದವರು ಸಂವಿಧಾನಾತ್ಮಕ ಉದಾರತೆ, ಯೋಜನಾಬದ್ಧ ಅಭಿವೃದ್ಧಿ ಹಾಗೂ ಸಮಾಜವಾದಿ ಮಾದರಿಯ ಸಮಾಜ

ನಿರ್ಮಾಣ ಎಂಬ ದೊಡ್ಡ ಹೆಸರಿನ ಸಮ್ಮಿಶ್ರ ಆರ್ಥಿಕ ನೀತಿಗಳ ಸೈದ್ಧಾಂತಿಕ ನೆಲಗಟ್ಟಿನಲ್ಲಿಯೇ ಕಾರ್ಯನಿರ್ವಹಿಸಬೇಕಾಗಿತ್ತು.

ನಿಜಲಿಂಗಪ್ಪನವರು ೨-೧೨-೧೯೫೮ ರಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ಕಾರ್ಯಕಾರಿಣಿಗೆ ಆಯ್ಕೆಯಾದರು; ಸಮಿತಿಯಲ್ಲಿದ್ದ ಹನ್ನೆರಡು ಮಂದಿಯಲ್ಲಿ ಅವರೂ ಒಬ್ಬರು. ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ಚರ್ಚಿಸಲು ಮೈಸೂರು ಕಾಂಗ್ರೆಸ್‌ನ ಮುಖಂಡರು ನೆಹರೂ ಮತ್ತು ದೇಭರ್ ಅವರ ಆಹ್ವಾನದ ಮೇರೆಗೆ ಕೇಂದ್ರದ ನಾಯಕರನ್ನು ೧೩-೧೨-೧೯೫೮ ರಂದು ಭೇಟಿ ಮಾಡಲಿರುವುದಾಗಿ ಪತ್ರಿಕೆಯ ಸುದ್ದಿ ಪ್ರಕಟಿಸಿತು. ಎಂಪಿಸಿಸಿ ಅಧ್ಯಕ್ಷ ವೀರಣ್ಣಗೌಡ, ಮಾಜಿ ಅಧ್ಯಕ್ಷ ಚೆನ್ನಯ್ಯ, ಜತ್ತಿ ಮತ್ತು ನಿಜಲಿಂಗಪ್ಪನವರುಗಳು ನಾಯಕರನ್ನು ಭೇಟಿಯಾಗಲು ಆಹ್ವಾನಿತರಾಗಿದ್ದವರು. ೨-೨-೧೯೫೯ ರಂದು ಇಂದಿರಾ ಗಾಂಧಿಯವರು ಐಎನ್‌ಸಿಯ ಅಧ್ಯಕ್ಷರಾಗಿ ಚುನಾಯಿತರಾದರು; ಆ ಹುದ್ದೆಗೆ ಕೇಳಿಬರುತ್ತಿದ್ದ ಇತರ ಹೆಸರುಗಳೆಂದರೆ ನಿಜಲಿಂಗಪ್ಪ ಮತ್ತು ರಾಜಾಸ್ತಾನದ ಕುಂಭರಂ ಆರ್ಯ ಅವರುಗಳದ್ದು. ಅಧ್ಯಕ್ಷರು ೮-೨-೧೯೫೯ ರಂದು ಹುದ್ದೆ ವಹಿಸಿಕೊಳ್ಳುವ ಸಂಭವವಿತ್ತು. ಇಂದಿರಾ ಗಾಂಧಿಯವರು ಹದಿನೇಳು ಮಂದಿ ಸದಸ್ಯರ ಕಾರ್ಯಕಾರಿ ಸಮಿತಿಯನ್ನು ಪ್ರಕಟಿಸಿದರು. ಐದು ಮಂದಿ ಹೊಸಬರಲ್ಲಿ ನಿಜಲಿಂಗಪ್ಪನವರೂ ಒಬ್ಬರು. ನೆಹರೂ ಅವರ ಹೆಸರೇ ಅದರಲ್ಲಿರಲಿಲ್ಲ, ಆದರೆ ಅವರಿಗೆ ಶಾಶ್ವತ ಆಹ್ವಾನಿತ ಸ್ಥಾನವನ್ನು ನೀಡಲಾಗಿತ್ತು. ದೆಹಲಿಯಿಂದ ಮರಳಿದ ಬಳಿಕ, ನಿಜಲಿಂಗಪ್ಪ ಮತ್ತು ವೀರಣ್ಣಗೌಡರು ೭-೪-೧೯೫೯ ರಂದು ಒಂದು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತ, ರಾಜ್ಯದಲ್ಲಿ ಆರಂಭಗೊಂಡಿರುವ ವಿವಿಧ ಕೈಗಾರಿಕಾ ಯೋಜನೆಗಳು ಬೇಗನೇ ಅಭಿವೃದ್ಧಿಗೊಳ್ಳಬೇಕೆಂದು ಅಭಿಪ್ರಾಯಪಟ್ಟರು. ಆ ಯೋಜನೆಗಳಲ್ಲಿ ಉಕ್ಕು ಕಾರ್ಖಾನೆ, ತುಮಕೂರಿನಲ್ಲಿ ಸಿಮೆಂಟ್ ಕಾರ್ಖಾನೆ, ಮತ್ತು ಬೆಳಗಾವಿಯ ಅಲ್ಯೂಮಿನಿಯಂ ಕಾರ್ಖಾನೆಗಳು ಸೇರಿದ್ದುವು. ಸರ್ಕಾರಿ ನೌಕರಿಯಲ್ಲಿನ ಮೀಸಲಾತಿ ನೀತಿಯನ್ನು ಮೇ ೧೯೫೯ರಲ್ಲಿ ಜತ್ತಿ ಸರ್ಕಾರವು ಪ್ರಕಟಿಸಿತು. ಅದರ ಪ್ರಕಾರ, ೫೭% ಹಿಂದುಳಿದ ವರ್ಗಗಳಿಗೆ, ೧೫% ಎಸ್‌ಸಿಗಳಿಗೆ ಹಾಗೂ ೩% ಎಸ್‌ಟಿಗಳಗೆ ಮೀಸಲಾತಿಯಿತ್ತು. ಅಂದರೆ ೭೫% ಮೀಸಲು ಮತ್ತು ೨೫% ಮುಕ್ತ ನೌಕರಿಗಳು. ಹಿಂದುಳಿದ ವರ್ಗಗಳ ಹೊಸ ಪಟ್ಟಿಯಲ್ಲಿ ಲಿಂಗಾಯತರೂ ಒಕ್ಕಲಿಗರೂ ಸೇರಿದ್ದರು! ಭಾರತೀಯ ರಾಜಕೀಯ ಸಂಸ್ಕೃತಿ ಮತ್ತು ಸಂಪ್ರದಾಯದ ಪ್ರಕಾರ, ಆದರ್ಶ ಜೀವನವನ್ನು ನಡೆಸುವ ಬೋಧಕರಂತೆ ಮುಖಂಡರು ಉಪದೇಶಿಸಬೇಕು! ಕೆಲವು ಪ್ರಕರಣಗಳಲ್ಲಿ, ಅಂತಹ ಉಪದೇಶ ಮಾಡುವ ಮುಖಂಡನ ಬದುಕಿನಿಂದ ಅದಕ್ಕೆ ನೈತಿಕ ಮೌಲ್ಯ ಪ್ರಾಪ್ತವಾಗುತ್ತದೆ. ನಿಜಲಿಂಗಪ್ಪ ಅದಕ್ಕೆ ಅಪವಾದವಾಗಿರಲಿಲ್ಲ. ಒಂದು ನಿದರ್ಶನ

ಕೊಡಬಹುದು: ೨೯-೬-೧೯೫೯ ರಂದು ಅವರು ಬೆಂಗಳೂರಿನಲ್ಲಿ ಜರುಗಿದ ಮೈಸೂರು ಪತ್ರಕರ್ತರ ಮೊದಲ ಸಮಾವೇಶದ ಅಧ್ಯಕ್ಷತೆ ವಹಿಸಿ ಮಾತನಾಡುತ್ತ, ವೃತ್ತಿಯ ಘನತೆಯನ್ನು ಎತ್ತಿ ಹಿಡಿಯಬೇಕೆಂದೂ, ಉನ್ನತವಾದ ವೃತ್ತಿಪರ ಸಾಮರ್ಥ್ಯ ವನ್ನು ತೋರಿಸುವ ಮೂಲಕ ಹೊಸ ವಿಚಾರಗಳನ್ನೂ ಆಲೋಚನೆಗಳನ್ನೂ ಹುಟ್ಟುಹಾಕ ಬೇಕೆಂದೂ ಕರೆಕೊಟ್ಟರು. ಧಾರವಾಡ ಜಿಲ್ಲಾ ರಾಜಕೀಯ ಕಾಂಗ್ರೆಸ್ ಸಮಾವೇಶವನ್ನು ೩೧-೫-೧೯೫೯ ರಂದು ಉದ್ಘಾಟಿಸುತ್ತ ನಿಜಲಿಂಗಪ್ಪನವರು, ಸಹಕಾರ ಕೃಷಿಯನ್ನು ಬೆಂಬಲಿಸಿ ನಾಗಪುರ ಕಾಂಗ್ರೆಸ್ ಸಮವೇಶವು ಮಾಡಿದ್ದ ನಿರ್ಣಯವನ್ನು ಬೆಂಬಲಿಸಿ ದರು. ಕಾಂಗ್ರೆಸ್ ಒಂದು ಪರಿಶುದ್ಧ ಸೇವಾ ಸಂಸ್ಥೆಯೆಂದು ಅವರು ಬಣ್ಣಿಸಿದರು, ಅದರ ಮೇಲೆ ದೇಶ ಕಟ್ಟುವ ಗುರುತರ ಜವಾಬ್ದಾರಿಯಿದೆ ಎಂದರು. ಹೀಗಾಗಿ ಅದರಲ್ಲಿ ಯಾವುದೇ ಸ್ವಾರ್ಥ ವ್ಯಕ್ತಿಗಳಿಗೆ ಆಸ್ಪದವಿಲ್ಲ, ಅಂತಹ ವ್ಯಕ್ತಿಗಳು ಕಾಂಗ್ರೆಸ್ ಅನ್ನು ತೊರೆಯಲು ಅವರು ಕರೆಕೊಟ್ಟರು. ನಿಜಲಿಂಗಪ್ಪನವರ ಹೆಗಲಿಗೆ ೯-೬-೧೯೫೯ ರಂದು ಮತ್ತೊಂದು ಜವಾಬ್ದಾರಿ ಬಿತ್ತು, ಅದೆಂದರೆ ಸ್ವಂತವಾಗಿ ಸಹಕಾರೀ ಕೃಷಿ ಸಂಘಗಳನ್ನು ಸ್ಥಾಪಿಸುವವರಿಗೆ ಸರ್ಕಾರದಿಂದ ಹಣಕಾಸು ಮತ್ತಿತರ ಸಹಾಯವನ್ನು ಒದಗಿಸುವ ಹಾಗೂ ತಾಂತ್ರಿಕ ಸಲಹೆ ಮಾರ್ಗದರ್ಶನಗಳನ್ನು ನೀಡುವ ದಿಸೆಯಲ್ಲಿ ಯೋಜನೆಗಳನ್ನು ರೂಪಿಸುವ ಒಂದು ಕಾರ್ಯನಿರ್ವಹಣಾ ತಂಡದ ಅಧ್ಯಕ್ಷಗಿರಿ. ತಂಡದ ಇತರ ಸದಸ್ಯರುಗಳೆಂದರೆ ಡಾ. ರಾಂಸುಭಾಗ್ ಸಿಂಗ್, ಡಾ. ಎ.ಯು. ಶುಕ್ಲ, ಸರ್ದಾರ್ ಗುರುಭಕ್ಷ್ ಸಿಂಗ್, ವಿ.ಕೆ.ಆರ್.ವಿ. ರಾವ್, ಬಿ.ಡಿ. ಪಾಂಡೆ, ಡಾ. ಜೆ.ಎಸ್. ಪಾಟೀಲ್, ಎಂ. ಜಾಖೀಡೆ ಮತ್ತು ಎಂ.ಪಿ. ಭಾರ್ಗವ ಅವರು. ಮುಂದಿನ ಎಐಸಿಸಿ ಸಮಾವೇಶವು ಬೆಂಗಳೂರಿನಲ್ಲಿ ನಡೆಯಲಿತ್ತು. ಸಹಜವಾಗಿಯೇ ಅದರ ಸಂಘಟನೆಯ ಹೊಣೆ ಎಂಪಿಸಿಯದಾಗಿತ್ತು. ಆ ಸಮಾವೇಶಕ್ಕೆ ಬೇಕಾದ ದಾನ ಕೊಡುಗೆಗಳ ಮೂಲಕ ಹಣಸಂಗ್ರಹ ಮಾಡುವ ಕಷ್ಟಕರ ಜವಾಬ್ದಾರಿಯ ಹಣಕಾಸು ಸಮಿತಿಗೆ ನಿಜಲಿಂಗಪ್ಪನವರು ಅಧ್ಯಕ್ಷರಾಗಿರುತ್ತಾರೆ ಎಂದು ಎಂಪಿಸಿಸಿ ಅಧ್ಯಕ್ಷ ವೀರಣ್ಣ ಗೌಡರು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು. ತಮ್ಮ ಸಹಜ ಉತ್ಸಾಹದಿಂದ ಪಕ್ಷದ ಕರ್ತವ್ಯದಲ್ಲಿ ತೊಡಗಿಸಿಕೊಳ್ಳುತ್ತಿದ್ದ ನಿಜಲಿಂಗಪ್ಪನವರು, ೧೮-೭-೧೯೫೯ ರಂದು ಜಿಲ್ಲಾ ಮತ್ತು ಮಂಡಲ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರುಗಳು ಹಾಗೂ ಅವುಗಳ ಕಾರ್ಯದರ್ಶಿಗಳು ಮತ್ತು ಕಾಂಗ್ರೆಸ್ ಕಾರ್ಯಕರ್ತರ ಸಭೆಯನ್ನು ಬೆಳಗಾವಿಯಲ್ಲಿ ಕರೆದು ಅದನ್ನುದ್ದೇಶಿಸಿ ಮಾತನಾಡಿದರು. ಪಕ್ಷವು ಸೂಚಿಸಿದ್ದ ಸಹಕಾರೀ ಕೃಷಿ ಸಂಘ ಗಳ ಸ್ಥಾಪನೆಯ ಯೋಜನೆಯು ಖಾಸಗಿ ಭೂಮಿಯ ಒಡೆತನದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲವೆಂದು ಭರವಸೆಯಿತ್ತ ಅವರು, ಅದರ ಗುರಿಯು ಆಹಾರೋ

ತ್ಪಾನೆಯ ಹೆಚ್ಚಳವೆಂದೂ ವಿವರಿಸಿದರು. ಆನಂತರ ಎಂಪಿಸಿಸಿ ಕಾರ್ಯಕಾರಿ ಸಮಿತಿಯನ್ನುದ್ದೇಶಿಸಿ ಮಾತನಾಡಿ, ಸ್ವಾರ್ಥರಹಿತವಾಗಿ ಕೆಲಸ ಮಾಡುವಂತೆ ಕರೆ ನೀಡಿ, ಕಾಂಗ್ರೆಸ್ ಮಾತ್ರವೇ ಸಾಮಾನ್ಯರ ಬದುಕಿನ ಮಟ್ಟವನ್ನು ಉತ್ತಮಗೊಳಿಸಬಲ್ಲುದು ಎಂದರು.

ಈ ನಡುವೆ, ಪಕ್ಷದ ಒಳಜಗಳ ಹಾಗೂ ಗುಂಪುಗಾರಿಕೆಗಳ ಕಾರಣದಿಂದ ಜತ್ತಿ ಸಂಪುಟವೂ ನಿಜಲಿಂಗಪ್ಪ ಸಂಪುಟವು ಸಿಲುಕಿದ್ದ ಇಕ್ಕಟ್ಟಿಗೇ ಸಿಲುಕಿದಂತಿತ್ತು. ಜತ್ತಿ ಸಂಪುಟವನ್ನು ಕೆಳಗಿಳಿಸಲು ಭಾರಿ ಸಂಖ್ಯೆಯ ಎಂಎಲ್‌ಎಗಳು ಪ್ರಯತ್ನಿಸುತ್ತಿರುವರೆಂಬ ಸುದ್ದಿ ೮-೮-೧೯೫೯ ರಂದು ಪತ್ರಿಕೆಗಳಲ್ಲಿ ಕಾಣಿಸಿಕೊಂಡಿತು. ಸಂಪುಟವು ಆಗ ತಾನೇ ಹದಿನೈದು ತಿಂಗಳ ತನ್ನ ಅಸ್ತಿತ್ವವನ್ನು ಪೂರೈಸಿತ್ತು. ಆದರೆ ಕಾಂಗ್ರೆಸ್ ಶಾಸಕರ ಸಭೆಯ ಪರಿಣಾಮವಾಗಿ ಆ ಪ್ರಸ್ತಾವ ಕೊನೆಗೊಂಡಿತು. ಹನುಮಂತಯ್ಯನವರು ಜತ್ತಿ ಸಂಪುಟವನ್ನು ಶ್ಲಾಘಿಸಿದರು, ಆದರೆ ಎಂಪಿಸಿಸಿ ಅಧ್ಯಕ್ಷ ವೀರಣ್ಣಗೌಡರು ರಾಜ್ಯದ ಕಾಂಗ್ರೆಸ್ ಪಕ್ಷ ಮತ್ತು ಕಾಂಗ್ರೆಸ್ ಶಾಸಕಾಂಗ ಪಕ್ಷಗಳ ನಡುವಣ ಭಿನ್ನಾಭಿಪ್ರಾಯವನ್ನು ಕುರಿತು ಮಾತನಾಡಿದರು. ಸರ್ಕಾರದ ಕೆಲದ ಮೇಲೆ ಪರಿಣಾಮ ಬೀರುವ ಇಂತಹ ಭಿನ್ನಾಭಿಪ್ರಾಯಗಳು ಕೊನೆಗೊಳ್ಳಬೇಕೆಂದು ಅವರು ಕರೆಯಿತ್ತರು. ಎಂಟು ತಿಂಗಳು ಕಳೆದ ಬಳಿಕವೂ, ಬಿಕ್ಕಟ್ಟು ಮುಂದುವರಿಯಿತು. ಇದನ್ನು ಬಗೆಹರಿಸದ ಹೊರತು ರಾಜ್ಯದಲ್ಲಿ ಪಕ್ಷಕ್ಕೆ ಭವಿಷ್ಯವಿರುವುದಿಲ್ಲವೆಂದು ನಿಜಲಿಂಗಪ್ಪನವರು ಎಂಪಿಸಿಸಿಯನ್ನು ಎಚ್ಚರಿಸಿದರು. ಸೈದ್ಧಾಂತಿಕವಾಗಿ, ಎಲ್ಲ ನಾಯಕರೂ-ಜತ್ತಿ, ವೀರಣ್ಣಗೌಡ ಹನುಮಂತಯ್ಯ ಮತ್ತು ದೇವರಾಜ ಅರಸು-ಐಕಮತ್ಯದ ಆವಶ್ಯಕತೆಯನ್ನು ಒತ್ತಿ ಹೇಳಿದರು. ಒಗ್ಗೂಡಿಸುವಿಕೆಯ ಪ್ರಯತ್ನದ ಭಾಗವಾಗಿ, ನಾಯಕರು ೧೬-೪-೧೯೬೦ ರಂದು ಬೆಂಗಳೂರಿನಲ್ಲಿ ಸೇರಿ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳುವ ನಿರೀಕ್ಷೆಯಿತ್ತು. ಕಾಂಗ್ರೆಸ್‌ನ ಒಮ್ಮತದ ಸಂಸ್ಕೃತಿಗನುಗುಣವಾಗಿ ಎಂಪಿಸಿಸಿಯ ಅಧ್ಯಕ್ಷ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರ ಆಯ್ಕೆ ಸರ್ವಾನುಮತದಿಂದ ನಡೆಯುವಂತೆ ನೋಡಿಕೊಳ್ಳುವುದು ಸಭೆಯ ಉದ್ದೇಶ. ಸಭೆ ಮುಗಿದ ಬಳಿಕ, ನಿಜಲಿಂಗಪ್ಪನವರೂ ಪಾಲುಗೊಂಡಿದ್ದ ಒಗ್ಗಟ್ಟಿನ ಮಾತುಕತೆ ಹೆಚ್ಚು ಕಡಿಮೆ ಮುರಿದು ಬಿಂದಿದೆಯೆಂದು ಭಾವಿಸಲಾಗಿತ್ತು. ಅವರು ಚೆನ್ನಯ್ಯನವರೊಂದಿಗೆ ಸುಮಾರು ಒಂದು ಗಂಟೆ ಚರ್ಚಿಸಿದರು, ಆದರೆ ಯಾವುದೇ ಪ್ರಯೋಜನವಾಗಲಿಲ್ಲ. ನಿಜಲಿಂಗಪ್ಪ, ವೀರಣ್ಣಗೌಡ, ಚೆನ್ನಯ್ಯ ಮತ್ತು ಯು.ಎಸ್. ಮಲ್ಯ ಅವರು ಅವರುಗಳು ೧೭-೪-೧೯೬೦ ರಂದು ಸಭೆ ಸೇರಿ ಚರ್ಚಿಸಿದ ಬಳಿಕ, ಎಂಪಿಸಿಸಿಯ ಕಾರ್ಯಕಾರಿ ಸಮಿತಿಯ ಸದಸ್ಯರ ಆಯ್ಕೆಯನ್ನು ಮೇ ಮೊದಲ ವಾರಕ್ಕೆ, ಪ್ರಾಯಶಃ ೬ಕ್ಕೆ, ಮುಂದೂಡಲು ನಿರ್ಧರಿಸಲಾಯಿತು. ಬೆಂಗಳೂರಿನಿಂದ

೫-೫-೧೯೬೦ ರಂದು ಹೊರಟ ಪತ್ರಿಕಾ ಹೇಳಿಕೆಯೊಂದರಲ್ಲಿ ೬-೫-೧೯೬೦ ರಂದು ಎಂಪಿಸಿಸಿಯ ಅಧ್ಯಕ್ಷ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರ ಆಯ್ಕೆ ನಡೆಯುವುದೆಂದು ಪ್ರಕಟಿಸಲಾಯಿತು, ಅವರ ಅಧಿಕಾರಾವಧಿ ಎರಡು ವರ್ಷಗಳು ಎಂದೂ ಪ್ರಕಟಣೆ ತಿಳಿಸಿತು. ಆಯ್ಕೆಗೊಳ್ಳುವ ತಂಡವು ಮಹತ್ವದ್ದಾಗಿತ್ತು, ಯಾಕಂದರೆ ೧೯೬೨ರಲ್ಲಿ ನಡೆಯಲಿದ್ದ ಮಹಾ ಚುನಾವಣೆಳನ್ನೆದುರಿಸುವ ಹೊಣೆಗಾರಿಕೆ ಅದರ ಮೇಲಿರುತ್ತಿತ್ತು. ಇತರ ಸಣ್ಣ ಪುಟ್ಟ ಬಣಗಳಿದ್ದರೂ ಸ್ಪರ್ಧೆಯು ಎರಡು ಬಣಗಳ ನಡುವೆ ನಡೆಯುವ ನಿರೀಕ್ಷೆಯಿತ್ತು. ಇವುಗಳಲ್ಲಿ ಒಂದು ಬಣ ಎಂಪಿಸಿಯ ಕಾರ್ಯಕಾರಿ ಸಮಿತಿಯನ್ನು ನಿಯಂತ್ರಿಸುತ್ತಿತ್ತು. ಈ ಎರಡು ಬಣಗಳ ಸಾಮರ್ಥ್ಯವನ್ನು ಖಚಿತವಾಗಿ ಅಳೆಯುವುದು ಅಸಾಧ್ಯವಾಗಿತ್ತು. ಒಂದು ಬಣದವರು ಅಧ್ಯಕ್ಷಗಿರಿಗೆ ಹಳ್ಳಿಕೇರಿ ಗುದ್ಲೆಪ್ಪ, ಕೆ.ವಿ. ಶಂಕರಾಗೌಡ, ಕೊಲ್ಲೂರು ಮಲ್ಲಪ್ಪ, ಮತ್ತು ನಾಗಪ್ಪ ಆಳ್ವ ಅವರನ್ನು ಸೂಚಿಸಿದರು; ಪ್ರತಿಸ್ಪರ್ಧಿ ಬಣವು ಎನ್.ಸಿ. ನಾಗಯ್ಯ ರೆಡ್ಡಿ ಮತ್ತು ಚೆನ್ನಯ್ಯನವರ ಹೆಸರುಗಳನ್ನು ಸೂಚಿಸಿತು. ನಿಜಲಿಂಗಪ್ಪ ಮತ್ತು ಚೆನ್ನಯ್ಯನವರ ಹೆಸರುಗಳನ್ನೂ ಕೆಲವರು ತಳುಕು ಹಾಕಿದರು. ಚುನಾವಣೆಗಳಿಲ್ಲದೆ ಸರ್ವಾನುಮತದ ಆಯ್ಕೆ ನಡೆಸಲು ಸಂಧಾನಗಳು ನಡೆಯುತ್ತಿದ್ದವು. ೬-೫-೧೯೬೦ ರಂದು ನಡೆದ ಚುನಾವಣೆಗಳಲ್ಲಿ ನಿಜಲಿಂಗಪ್ಪನವರು ಎಂಪಿಸಿಸಿಯ ಅಧ್ಯಕ್ಷ ಸ್ಥಾನಕ್ಕೆ ಬಹುಮತದಿಂದ ಆಯ್ಕೆಯಾದರು. ಕಣದಲ್ಲಿದ್ದವರು ಇಬ್ಬರೇ, ನಿಜಲಿಂಗಪ್ಪ ಮತ್ತು ಎನ್.ಸಿ. ನಾಗಯ್ಯ ರೆಡ್ಡಿ. ನಿಜಲಿಂಗಪ್ಪನವರಿಗೆ ೧೨೧ ಮತಗಳು ಬಂದರೆ ಎನ್.ಸಿ. ನಾಗಯ್ಯ ರೆಡ್ಡಿ ಅವರಿಗೆ ೮೫ ಮತಗಳು ಬಂದವು. ನಿಜಲಿಂಗಪ್ಪ ವಿರೋಧಿ ಬಣದ ಮುಖಂಡರಾದ ಎಸ್. ಚೆನ್ನಯ್ಯನವರು, ಭಿನ್ನಾಭಿಪ್ರಾಯ ಗಳನ್ನು ಮರೆತು ಎಲ್ಲ ಸದಸ್ಯರನ್ನೂ ತಮ್ಮೊಡನೆ ಕರೆದೊಯ್ಯಲು ಹೊಸ ಅಧ್ಯಕ್ಷರಿಗೆ ಬುದ್ಧಿ ಕೊಡುವಂತೆ ದೇವರಲ್ಲಿ ಪ್ರಾರ್ಥಿಸಿದರು. ಅಭಿನಂದನೆಗಳಿಗೆ ಉತ್ತರಿಸುತ್ತ ನಿಜಲಿಂಗಪ್ಪನವರು, ಅನೇಕ ಸಮಸ್ಯೆಗಳನ್ನೆದುರಿಸುತ್ತಿರುವ ಹಾಗೂ ದಿನೇ ದಿನೇ ಹೆಚ್ಚುತ್ತಿರುವ ಒಡಕು ಮತ್ತು ಭಿನ್ನಾಭಿಪ್ರಾಯಗಳಿರುವ ಪಕ್ಷದ ಜವಾಬ್ದಾರಿ ತಮ್ಮ ಮೇಲಿದೆ ಎಂದು ತಿಳಿಸಿದರು. ತಮ್ಮ ಧ್ಯೇಯಧೋರಣೆಗಳ ಬಗ್ಗೆ ೧೦-೫-೧೯೬೦ ರಂದು ಪತ್ರಿಕೆಗಳವರಿಗೆ ವಿವರಿಸುತ್ತ, ಒಗ್ಗಟು ಮುಖ್ಯವಾದರೂ, ಅದು ತತ್ವಗಳಿಗೆ ತಿಲಾಂಜಲಿಯನ್ನಿತ್ತಲ್ಲ ಎಂದು ಸ್ಪಷ್ಟಪಡಿಸಿದರು. ಅಧಿಕಾರ ಮತ್ತು ಹುದ್ದೆಗಳ ಬೆನ್ನು ಹತ್ತಿರುವ ಕೆಲವು ಕಾಂಗ್ರೆಸ್ಸಿಗರು ಪಕ್ಷದ ಅನೇಕ ಕ್ರಿಯಾತ್ಮಕ ಕಾರ್ಯಕ್ರಮಗಳನ್ನು ಮರೆತಿರು ವರೆಂದು ವಿಷಾದಿಸಿದರು. ರಾಜಕೀಯ ಎಂಬುದು ಸ್ವಯಮಾಚಾರ್ಯ ರಾಜಕಾರಣಿಗಳ ನಡುವಣ ಕೇವಲ ಅಧಿಕಾರಕ್ಕಾಗಿ ನಡೆಯುವ ಪೈಪೋಟಿಯಾಗಿದೆ ಎಂದರು.

೨೪-೬-೧೯೬೦ ರಂದು ಪತ್ರಿಕಾ ಪ್ರತಿನಿಧಿಗಳ ಪ್ರಶ್ನೆಗಳಿಗೆ ಉತ್ತರಿಸುತ್ತ ನಿಜಲಿಂಗಪ್ಪನವರು, ಜತ್ತಿ ಸರ್ಕಾರವನ್ನು ಉರುಳಿಸುವ ಪ್ರಯತ್ನಗಳು ನಡೆಯುತ್ತಿವೆ ಎಂಬ ವದಂತಿಯನ್ನು ತಳ್ಳಿಹಾಕಿದರು. ಪಾಲಿಟೆಕ್ನಿಕ್ ಒಂದಕ್ಕೆ ಅಡಿಗಲ್ಲು ಹಾಕಿ ಮಾತನಾಡುತ್ತ, ಸಂಪುಟವನ್ನು ೧೯೬೨ ರ ಚುನಾವಣೆಗಳವರೆಗೂ ಮುಂದುವರೆಯಲು ಅವಕಾಶ ನೀಡಬೇಕೆಂದೂ ಇಲ್ಲದಿದ್ದರೆ ಪ್ರಚಾರಕಾರ್ಯ ಕುಂಠಿತಗೊಳ್ಳುವುದೆಂದೂ ಈಚೆಗೆ ನೀಡಿರುವ ಚೆನ್ನಯ್ಯನವರ ಹೇಳಿಕೆಯ ಬಗ್ಗೆ ಅವರು ಅಚ್ಚರಿ ವ್ಯಕ್ತಪಡಿಸಿದರು. ಜತ್ತಿ ಸಂಪುಟ ಮತ್ತು ಪಕ್ಷದ ಸಂಘಟನಾ ವಿಭಾಗಗಳ ನಡುವಣ ಸಂಬಂಧ ಹಾರ್ದಿಕ ವಾಗಿಲ್ಲವೆಂಬುದನ್ನು ಈ ಹಿಂದೆ ನಿಜಲಿಂಗಪ್ಪನವರೇ ಒಪ್ಪಿಕೊಂಡಿದ್ದರು. ಈ ಅಂಶದ ಕಡೆ ಪತ್ರಕರ್ತರು ಗಮನ ಸೆಳೆದಾಗ, ತಾವು ಹೇಳಿದುದು ಬಹಿರಂಗ ರಹಸ್ಯವೆಂದೂ, ಪಕ್ಷದಲ್ಲಿ ಒಳಗುಂಪುಗಳಿವೆ ಎಂಬುದನ್ನು ಎಲ್ಲರೂ ಬಲ್ಲರು ಎಂದೂ ಅವರು ಹೇಳಿದರು. ಆದರೆ ಮೈಸೂರಿನಲ್ಲಿ ನಡೆಯುತ್ತಿರುವುದು ಇಲ್ಲಿಗೆ ಮಾತ್ರ ಸೀಮಿತಗೊಳ್ಳದೆ ದೇಶದ ಎಲ್ಲ ಕಡೆಯೂ ನಡೆಯುತ್ತಿದೆ ಎಂದು ವಿವರಿಸಿದರು. ಇದರಿಂದ ಪಕ್ಷವು ಮತ್ತೆ ತನ್ನ ಹಳೆಯ ಕಾಯಿಲೆಗೆ ಬಲಿಯಾಗಿರುವುದು ಸ್ಪಷ್ಟವಾಯಿತು. ಪಕ್ಷದ ಸಂಘಟನಾ ವಿಭಾಗ ಮತ್ತು ಶಾಸಕಾಂಗ ಪಕ್ಷಗಳ ನಡುವಣ ಭಿನ್ನಾಭಿಪ್ರಾಯದಿಂದ ಉಂಟಾದ ಬಿಕ್ಕಟ್ಟನ್ನು ಅರಿಯಲು ಪಕ್ಷದ ಅಧ್ಯಕ್ಷರಾದ ಸಂಜೀವ ರೆಡ್ಡಿಯವರು ೨೩-೭-೧೯೬೦ ರಂದು ಬೆಂಗಳೂರಿಗೆ ಭೇಟಿ ನೀಡಬೇಕಾದ ಅನಿವಾರ್ಯತೆಯುಂಟಾಯಿತು. ಅವರು ಜತ್ತಿ ಸಂಪುಟವು ಬೀಳುವುದನ್ನು ತಡೆಯುವ ಆತಂಕದಲ್ಲಿದ್ದರು. ಮೂರು ವಿಭಿನ್ನ ಬಣಗಳವರು ರೆಡ್ಡಿಯವರನ್ನು ಭೇಟಿಯಾದರು. ಜತ್ತಿ ಸಂಪುಟವು ತೃಪ್ತಕರವಾಗಿ ಕಾರ್ಯನಿರ್ವಹಿಸುತ್ತಿಲ್ಲವೆಂದು ಹೇಳಿದ ಒಂದು ಗುಂಪು, ಕೆಟ್ಟ ಆಡಳಿತ ನಡೆಸುತ್ತಿರುವ ಕೆಲವು ಸಚಿವರನ್ನೂ ಹೆಸರಿಸಿದರು. ಸಂಪುಟ ಬದಲಾವಣೆ ಅಥವಾ ಕನಿಷ್ಠ ಪಕ್ಷ ಕೆಲವು ಹೊಂದಾಣಿಕೆಗಳನ್ನು ಮಾಡಬೇಕೆಂದು ಅವರು ಬಯಸಿದರು. ಎರಡನೆಯ ಗುಂಪು ಜತ್ತಿ ಸಂಪುಟವನ್ನು ಬೆಂಬಲಿಸಿತು, ಟೀಕಾಕಾರರನ್ನು ರಾಜಕೀಯಪ್ರೇರಿತ ರಾದವರೆಂದು ಆ ಬಣದವರು ದೂರಿದರು. ಸಂಪುಟದಲ್ಲಿ ಅವರು ಯಾವ ಬದಲಾವಣೆಯನ್ನೂ ಬಯಸಲಿಲ್ಲ. ಮೂರನೆಯ ಗುಂಪು ಮಾಡಿದ ಆರೋಪವೆಂದರೆ, ಒಂದು ಗುಂಪಿನವರು ಪಕ್ಷವನ್ನು ಹಿಡಿತದಲ್ಲಿಟ್ಟುಕೊಂಡಿದ್ದು, ಅದರಿಂದ ಜಿಲ್ಲಾ ಮಟ್ಟದ ಆಡಳಿತ ಹದಗೆಡುವಂತಾಗಿದೆ ಎಂಬುದು. ಪ್ರಾಯಶಃ ಹೆಚ್ಚೇನೂ ಮಾಡಲಾಗದೆ ರೆಡ್ಡಿಯವರು, ಈ ಸಮಸ್ಯೆಯನ್ನು ಸ್ಥಳೀಯ ಪಕ್ಷವೇ ಪರಿಹರಿಸಿಕೊಳ್ಳಬೇಕೆಂದೂ ಹೈ ಕಮಾಂಡ್ ಇದರಲ್ಲಿ ತಲೆಹಾಕುವುದಿಲ್ಲವೆಂದೂ ೨೪-೭-೧೯೬೦ ರಂದು ಹೇಳಿಕೆಯಿತ್ತರು. ೨೪-೭-೧೯೬೦ ರಂದು ನಡೆದ ಜತ್ತಿ ಮತ್ತು ನಿಜಲಿಂಗಪ್ಪನವರ ನಡುವಣ ಭೇಟಿಯ

ಬಳಿಕ, ಆಗಸ್ಟ್ ಎರಡನೆಯ ವಾರದಲ್ಲಿ ಶಾಸಕಾಂಗ ಪಕ್ಷದ ಸಭೆ ನಡೆಸಿ ಆಡಳಿತದ ಸಮಸ್ಯೆಗಳನ್ನು ಕುರಿತು ಚರ್ಚಿಸುವುದೆಂದು ನಿರ್ಧರಿಸಲಾಯಿತು. ಜತ್ತಿ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವ ಯಾವುದೇ ಪ್ರಯತ್ನವನ್ನು ಕನಿಷ್ಠ ಪಕ್ಷ ಮಹಾ ಚುನಾವಣೆಗಳವರೆಗಾದರೂ ಮಾಡಬಾರದೆಂದು ಸದಸ್ಯರನ್ನು ನಿಜಲಿಂಗಪ್ಪನವರು ಕೇಳಿಕೊಂಡರು. ಹನುಮಂತಯ್ಯನವರೂ ಜತ್ತಿ ಸಂಪುಟದ ವಿರುದ್ಧ ಕತ್ತಿ ಮಸೆಯುತ್ತಿದ್ದರು. ೩೧-೭-೧೯೬೦ ರಂದು ಅವರು ತಮ್ಮ ಮನೆಯಲ್ಲಿಯೇ ಪತ್ರಿಕಾ ಗೋಷ್ಠಿಯೊಂದನ್ನು ನಡೆಸಿ, ಒಂದು ಬಣದವರನ್ನು, ಅಂದರೆ ಜತ್ತಿ ಮಾತ್ರ ಪ್ರತಿನಿಧಿಸುತ್ತಿರುವ ಜತ್ತಿ ಸಂಪುಟವನ್ನು ತರಾಟೆಗೆ ತೆಗೆದುಕೊಂಡು ಸಂಪುಟದ ಕೆಲವು ಸದಸ್ಯರ ವಿರುದ್ಧ ಗಂಭೀರ ಆರೋಪಗಳಿವೆಯೆಂದು ಹೇಳಿದರು. ಹೊಸ ಸಂಪುಟವೊಂದೇ ಈ ಸಮಸ್ಯೆಗೆ ಪರಿಹಾರ ಎಂದವರು ಅಭಿಪ್ರಾಯಪಟ್ಟರು. ೯-೮-೧೯೬೦ ರಂದು ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡುತ್ತ ನಿಜಲಿಂಗಪ್ಪನವರ ಹೇಳಿಕೆಗಳ ಬಗ್ಗೆ ಪ್ರತಿಕ್ರಿಯೆ ನೀಡಿ ಗೊಂದಲದಲ್ಲಿ ಭಾಗಿಯಾಗಲು ತಮಗಿಷ್ಟವಿಲ್ಲವೆಂದು ಹೇಳಿದರು. ಪಕ್ಷದ ಬಿಕ್ಕಟ್ಟಿನ ಪರಿಹಾರಕ್ಕಾಗಿ ಎಂಪಿಸಿಸಿಯ ವಿಶೇಷ ಅಧಿವೇಶನವೊಂದು ೧೧-೮-೧೯೬೦ ರಂದು ನಡೆಯುವುದೆಂದು ಒಂದು ಪತ್ರಿಕಾ ಪ್ರಕಟಣೆ ಹೊರಬಿತ್ತು. ಒಂದು ಬಣದವರು ಜತ್ತಿಯೇ ಮುಖ್ಯಮಂತ್ರಿಯಾಗಿ ಮುಂದುವರಿಯಲಿ ಎಂಬ ಅಭಿಪ್ರಾಯದವರಾಗಿದ್ದರೆ, ನಿಜಲಿಂಗಪ್ಪ ಬಣದವರು ಅವರ ಉಚ್ಚಾಟನೆಯಾಗಬೇಕೆಂದು ಆಗ್ರಹಿಸಿದರು. ಅವರಲ್ಲಿ ಜತ್ತಿ ಸಂಪುಟದಲ್ಲಿ ಸ್ಥಾನ ಪಡೆಯಲಾಗದಿದ್ದ ನಿಜಲಿಂಗಪ್ಪ ಬಣದ ಕೆಲವರೂ ಸೇರಿದ್ದರು. ನಿಜಲಿಂಗಪ್ಪನವರ ಅಥವಾ ಜತ್ತಿವಿರೋಧಿ ಬಣವು ಹನುಮಂತಯ್ಯ ಹಾಗೂ ಕೊಲ್ಲೂರು ಮಲ್ಲಪ್ಪನವರ ಬೆಂಬಲವನ್ನು ಪಡೆದಿತ್ತು. ಎರಡು ದಿನಗಳ ಕಾಲ ನಡೆದ ಸಭೆಯ ಚರ್ಚೆಯಲ್ಲಿ ಮಂತ್ರಿಗಳ ವಿರುದ್ಧದ ಆರೋಪಗಳನ್ನು ಪರಿಶೀಲಿಸಿದ ಬಳಿಕ ಅವುಗಳಲ್ಲಿ ಹುರುಳಿಲ್ಲವೆಂದು ತೀರ್ಮಾನಿಸಿತು. ೧೩-೮-೧೯೬೦ರ ರಾತ್ರಿ ಬಹು ಹೊತ್ತಿನವರೆಗೂ ಸಭೆ ಮುಂದುವರೆಯಿತು. ೧೪ ರಂದು ಜತ್ತಿಯವರು ಪತ್ರಿಕಾಗೋಷ್ಠಿಯೊಂದರಲ್ಲಿ ಮಾತನಾಡುತ್ತ, ವಿರುದ್ಧ ಗುಂಪುಗಳ ನಡುವಣ ಸಂಬಂಧ ಹಾರ್ದಿಕವಾಗಿ ಕೊನೆಗೊಂಡಿದೆಯೆಂದು ತಿಳಿಸಿದರು. ಆರೋಪಿ ಮಂತ್ರಿಗಳು ನೀಡಿದ ಸಮಜಾಯಿಷಿಯು ತೃಪ್ತಿಕರವಾಗಿಲ್ಲವೆಂದು ಹನುಮಂತಯ್ಯನವರು ಕೊಟ್ಟಿರುವ ಹೇಳಿಕೆಯ ಬಗ್ಗೆ ಸುದ್ದಿಗಾರರು ಪ್ರಸ್ತಾಪಿಸಿದಾಗ, ಆ ಬಗ್ಗೆ ಪ್ರತಿಕ್ರಿಯೆ ನೀಡಲು ಜತ್ತಿ ನಿರಾಕರಿಸಿದರು. ಆದರೆ, ಬಿಕ್ಕಟ್ಟಿನ ಪರಿಹಾರದಲ್ಲಿ ನಿಜಲಿಂಗಪ್ಪನವರು ವಹಿಸಿದ ಪಾತ್ರದ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಕೇಂದ್ರ ನಾಯಕರನ್ನು ಭೇಟಿಯಾಗಿ ಜತ್ತಿ ಸಂಪುಟದ ವಿರುದ್ಧದ ತಮ್ಮ ನಿಲುವನ್ನು ವಿವರಿಸಲು ಜತ್ತಿವಿರೋಧಿ ಬಣವು

ದೆಹಲಿಗೆ ಹೋಗಲಿರುವುದೆಂದು ೧೭-೮-೧೯೬೦ ರಂದು ಬಂದ ಪತ್ರಿಕೆಯ ವರದಿಯಲ್ಲಿ ತಿಳಿಸಲಾಗಿತ್ತು. ೧೬-೯-೧೯೬೦ ರಂದು ಮೈಸೂರು ಶಾಸಕಾಂಗ ಪಕ್ಷದ ಸದಸ್ಯರನ್ನುದ್ದೇಶಿಸಿ ನೆಹರೂ ಅವರು ಮಾತನಾಡುವರೆಂಬ ಸುದ್ದಿ ೨೮-೮-೧೯೬೦ ರಂದು ಪ್ರಕಟವಾಯಿತು. ನೆಹರೂ ಅವರು ಜತ್ತಿಯವರಿಗೆ ಬರೆದ ಪತ್ರದಲ್ಲಿ ಈ ವಿಷಯ ತಿಳಿಸಿದ್ದರು. ಈ ಮಧ್ಯೆ, ೨೭-೮-೧೯೬೦ ರಂದು ಭಿನ್ನಮತೀಯರ ಗುಂಪೊಂದು ದೆಹಲಿಗೆ ಹೊರಟ ವಿಷಯವು ಪ್ರಕಟವಾಯಿತು. ೩೦-೮-೧೯೬೦ ರಂದು ನವದೆಹಲಿಯಿಂದ ಬಂದ ಸುದ್ದಿಯೊಂದು ಜತ್ತಿ ನಾಯಕತ್ವ ಬದಲಾವಣೆಗೆ ಕೇಂದ್ರ ನಾಯಕತ್ವವು ವಿರೋಧಿಯಾಗಿದೆ ಎಂದಿತು. ಜತ್ತಿಯ ಬದಲಾವಣೆ ಆವಶ್ಯಕವೆಂಬ ಬಗ್ಗೆ ವರಿಷ್ಠರಿಗೆ ಮನವರಿಕೆಯಾಗಿಲ್ಲವೆಂದೂ, ಆ ಪ್ರಯತ್ನಗಳನ್ನು ಅದು ಒಪ್ಪುವುದಿಲ್ಲವೆಂದೂ ಕಾಂಗ್ರೆಸ್ ಅಧ್ಯಕ್ಷ ಸಂಜೀವರೆಡ್ಡಿಯವರು ಬೆಂಗಳೂರಿನಲ್ಲಿ ಹೇಳಿಕೆ ಕೊಡುವ ಮೂಲಕ ಅದನ್ನು ಸಮರ್ಥಿಸಿದರು.

ನಿಗದಿಯಾಗಿದ್ದಂತೆ, ನೆಹರೂ ಅವರು ೧೬-೯-೧೯೬೦ ರಂದು ಕಾಂಗ್ರೆಸ್ಸಿಗರನ್ನುದ್ದೇಶಿಸಿ ಮಾತನಾಡಿ, ಜತ್ತಿಯವರನ್ನು ಮುಖ್ಯಮಂತ್ರಿಗಿರಿಯಿಂದ ಕೆಳಗಿಳಿಸುವ ಭಿನ್ನಮತೀಯರ ಪ್ರಯತ್ನವನ್ನು ತೀವ್ರವಾಗಿ ಖಂಡಿಸಿದರು. ಪದೇ ಪದೇ ನಾಯಕತ್ವ ಬದಲಾವಣೆಗಳಿಗೆ ತಾವು ಒಟ್ಟಾರೆಯಾಗಿ ವಿರೋಧಿಗಳಾಗಿರುವುದನ್ನು ಅವರು ಸ್ಪಷ್ಟಪಡಿಸಿದರು. ಬಹುತೇಕ ಆಡಳಿತಾತ್ಮಕ ವಿವರಗಳಿಗೆ ಸಂಬಂಧಿಸಿದ ಜತ್ತಿ ಸಂಪುಟದ ವಿರುದ್ಧದ ಆರೋಪಗಳು ಕ್ಷುಲ್ಲಕವಾದುವೆಂದು ಬಣ್ಣಿಸಿದರು. ಆದರೆ ಭಿನ್ನಮತೀಯರ ಚಟುವಟಿಕೆಗಳು ನಿಲ್ಲಲಿಲ್ಲ. ಕೇಂದ್ರ ನಾಯಕರು ಮಧ್ಯಪ್ರವೇಶಿಸಿ ಹೆಚ್ಚು ವಿಶಾಲವಾದ ಸಂಪುಟ ರಚನೆಗೆ ಸಹಾಯ ಮಾಡುವಂತೆ ಕೋರಲು ಹನುಮಂತಯ್ಯನವರ ನಾಯಕತ್ವದ ಭಿನ್ನಮತೀಯರು ದೆಹಲಿಗೆ ಪ್ರಯಾಣ ಮಾಡಿದರೆಂದು ೧೦-೧೦-೧೯೬೦ ರಂದು ಪ್ರಕಟವಾದ ಪತ್ರಿಕೆಯ ಸುದ್ದಿಯೊಂದು ತಿಳಿಸಿತು. ನಿಜಲಿಂಗಪ್ಪ ಮತ್ತು ಜತ್ತಿ ಅವರು ೧೧-೧೦-೧೯೬೦ ರಂದು ರಾತ್ರಿ ಜತ್ತಿಯವರ ಮನೆಯಲ್ಲಿ ಭೇಟಿಯಾಗಿ ಭಿನ್ನಾಭಿಪ್ರಾಯಗಳ ಕುರಿತು ಒಂದು ಗಂಟೆಯ ಚರ್ಚೆ ನಡೆಸಿದರು. ಇಬ್ಬರೂ ನಾಯಕರು ಮಾತುಕತೆಯ ತಮ್ಮ ವರದಿಗಳನ್ನು ಪ್ರತ್ಯೇಕವಾಗಿ ಕಾಂಗ್ರೆಸ್ ಅಧ್ಯಕ್ಷ ಸಂಜೀವರೆಡ್ಡಿಯವರಿಗೆ ಕಳಿಸಿದರು. ಭಿನ್ನಮತೀಯರ ಒತ್ತಾಯವೆಂದರೆ ಸಂಪುಟ ಬದಲಾವಣೆ ಮಾಡುವುದು ಅಥವಾ ಜತ್ತಿ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಗೆ ಅವಕಾಶ. ಜತ್ತಿಯವರೇ ಮುಖ್ಯಮಂತ್ರಿಯಾಗಿ ಮುಂದುವರಿಯುವುದರ ಪರವಾದ ನಿಲವುಳ್ಳ ಹೈಕಮಾಂಡ್ ಗಮನ ನೀಡದ್ದರಿಂದ ಭಿನ್ನಮತೀಯರ ಪ್ರಯತ್ನಗಳು ವಿಫಲವಾದವೆಂದು ೨೨-೧೦-೧೯೬೦ ರಂದು ಬೆಂಗಳೂರಿನಿಂದ

ಹೊರಟ ಪತ್ರಿಕಾ ವರದಿ ತಿಳಿಸಿತು. ಈ ಬಿಕ್ಕಟ್ಟಿಗೆ ಬರಿಯ ಸಂಪುಟ ವಿಸ್ತರಣೆ ಪರಿಹಾರವಲ್ಲವೆಂದು ಹನುಮಂತಯ್ಯನವರು ೨೪-೧೦-೧೯೬೦ ರಂದು ಘೋಷಿಸಿದರು. ಈ ವಿಷಯದ ಬಗ್ಗೆ ಹೈಕಮಾಂಡ್ ಮುಕ್ತ ಮನಸ್ಸಿನಿಂದ ಕೂಡಿದೆ ಎಂದೂ ಅವರು ತಿಳಿಸಿದರು. ಸಂಪುಟಗಳ ಬದಲಾವಣೆಗೆ ಒತ್ತಾಯವಿರುವ ಉತ್ತರ ಪ್ರದೇಶ, ಕೇರಳ ಮತ್ತು ಮೈಸೂರು ಇವುಗಳಲ್ಲಿ ಯಾವ ರಾಜ್ಯದಲ್ಲಿಯೂ ಹಾಗೆ ಮಾಡಲು ಎಐಸಿಸಿಯ ರಾಜಾಪುರ ಸಮಾವೇಶವು ತನ್ನ ವಿರೋಧವನ್ನು ವ್ಯಕ್ತಪಡಿಸಿತು. ಆದರೆ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯು ಪಕ್ಷದ ಆಂತರಿಕ ಬಿಕ್ಕಟ್ಟನ್ನು ಚರ್ಚಿಸಲಿಲ್ಲ, ಮತ್ತು ಎಐಸಿಸಿ ೨೮-೧೦-೧೯೬೦ ರಂದು ಮುಕ್ತಾಯವಾಯಿತು. ಬಹು ಪ್ರಬಲವಾದ ಸಂಸದೀಯ ಮಂಡಳಿಗೆ ಐದು ಮಂದಿಯನ್ನು ಚುನಾಯಿಸಲು ಪಕ್ಷವು ಎರಡು ಬಾರಿ ಚುನಾವಣೆಗಳನ್ನು ನಡೆಸಿತು, ಆದರೂ ನಾಲ್ಕು ಮಂದಿಯನ್ನು ಮಾತ್ರ ಚುನಾಯಿಸಲು ಸಾಧ್ಯವಾಯಿತು, ಐದನೆಯವರನ್ನು ಚುನಾಯಿಸಲು ಬೇಕಾಗಿದ್ದ ಮೂರನೇ ಎರಡರಷ್ಟು ಬಹುಮತ ಯಾರಿಗೂ ದೊರೆಯಲಿಲ್ಲ. ಆಯ್ಕೆಗೊಂಡ ನಾಲ್ವರೆಂದರೆ, ೨೮೦ ಮತಗಳನ್ನು ಪಡೆದ ಲಾಲ್ ಬಹದ್ದೂರ್ ಶಾಸ್ತ್ರಿ, ೨೪೦ ಮತಗಳನ್ನು ಪಡೆದ ನಿಜಲಿಂಗಪ್ಪ, ೨೩೭ ಮತಗಳನ್ನು ಪಡೆದ ವೈ.ಬಿ. ಚವಾನ್ ಮತ್ತು ೨೨೭ ಮತಗಳನ್ನು ಪಡೆದ ಎಸ್.ಕೆ. ಪಾಟೀಲ್. ಆದರೆ ಮೈಸೂರು ಕಾಂಗ್ರೆಸ್‌ನ ಬಿಕ್ಕಟ್ಟಿನ ಬಗ್ಗೆ ಸಂಸದೀಯ ಮಂಡಳಿಯಿಂದ ಯಾವುದೇ ಮಾಹಿತಿಯೂ ಬಂದಿಲ್ಲವೆಂದು ನಿಜಲಿಂಗಪ್ಪನವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಸಂಪುಟ ಬದಲಾವಣೆ ಆಗದು ಎಂಬುದನ್ನು ಒಪ್ಪಿಕೊಂಡರೂ ಸಂಪುಟವನ್ನು ನಿಯತಗೊಳಿಸಬಹುದೆಂದು ಅವರು ಅಭಿಪ್ರಾಯಪಟ್ಟರು. ೧೬-೧೦-೧೯೬೦ ರಂದು ಎಂಪಿಸಿಸಿ ಕಾರ್ಯಕಾರಿ ಸಮಿತಿಯು ಒಂದು ನಿರ್ಣಯವನ್ನು ಮಾಡಿ, ಜತ್ತಿಯವರು ರಾಜೀನಾಮೆ ನೀಡಬೇಕೆಂದೂ ಇಲ್ಲದಿದ್ದರೆ ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವುದಾಗಿಯೂ ಸೂಚಿಸಿತು. ಜತ್ತಿ ಸಂಪುಟವು ಮುಂದುವರಿದರೆ, ಅದು ಪಕ್ಷಕ್ಕೆ ಹಾನಿಕಾರಕವಾಗುವುದೆಂದೂ ನಿರ್ಣಯವು ಹೇಳಿತು. ಬಿಕ್ಕಟ್ಟಿನ ಬಗ್ಗೆ ತೀರ್ಮಾನವನ್ನು ಜತ್ತಿಯವರಿಗೇ ಬಿಡಬೇಕೆಂದು ಹಿಂದೆ ಸಂಸದೀಯ ಮಂಡಳಿಯು ನಿರ್ಣಯ ಮಾಡಿದ್ದರೂ, ಈ ನಿರ್ಣಯವನ್ನು ಎಂಪಿಸಿಸಿ ಮಾಡಿತು ಎಂಬುದು ಪಕ್ಷದಲ್ಲಿದ್ದ ಅಶಿಸ್ತಿನ ಮಟ್ಟವನ್ನು ಸೂಚಿಸುತ್ತದೆ. ಭಿನ್ನಮತೀಯರ ನಿಲುವನ್ನು ವಿವರಿಸಲು ನಿಜಲಿಂಗಪ್ಪನವರು ನೆಹರು ಮತ್ತು ರೆಡ್ಡಿಯವರನ್ನು ಭೇಟಿಯಾದುದಾಗಿ ವರದಿ ತಿಳಿಸಿತು. ೧೭-೧೧-೧೯೬೦ ರಂದು ನಡೆದ ಈ ಭೇಟಿಯಲ್ಲಿ ತಾವು ಜತ್ತಿ ಸಂಪುಟವನ್ನು ಬದಲಾಯಿಸುವುದರ ವಿರುದ್ಧವಿರುವುದಾಗಿ ನಿಜಲಿಂಗಪ್ಪನವರಿಗೆ ನೆಹರೂ ಸ್ಪಷ್ಟಪಡಿಸಿದರು. ಈ.ಎಸ್. ಪ್ರಕಾಶ್ ಎಂಬ ಕಾಂಗ್ರೆಸ್ಸಿಗರು ಎಂಪಿಸಿಸಿ ನಿರ್ಣಯವನ್ನು

ಅಕ್ರಮ ಹಾಗೂ ಅವಾಸ್ತವ ಎಂದು ಟೀಕಿಸಿದರು. ಭಾರತೀಯ ತೈಲ ಕಂಪೆನಿಯ ಅಧ್ಯಕ್ಷರಾದ ನಿಜಲಿಂಗಪ್ಪನವರು ದೆಹಲಿಗೆ ಹೋಗಲಿದ್ದರು. ಈ ಸಂದರ್ಭವನ್ನವರು ನೆಹರು ಮತ್ತು ರೆಡ್ಡಿಯವರನ್ನು ಭೇಟಿ ಮಾಡಲು ಉಪಯೋಗಿಸಿಕೊಂಡರು. ಮೈಸೂರಿನ ವಿಷಯವನ್ನು ಚರ್ಚಿಸಲು ಕಾಂಗ್ರೆಸ್ ಸಂಸದೀಯ ಮಂಡಳಿಯು ೨೨-೧೧-೧೯೬೦ ರಂದು ಸೇರುವುದೆಂದು ಪ್ರಕಟಿಸಲಾಯಿತು. ಬಿಕ್ಕಟ್ಟಿನ ಪರಿಹಾರಕ್ಕೆ ಆದಷ್ಟು ಬೇಗ ಮತ್ತೊಂದು ಸುತ್ತಿನ ಮಾತುಕತೆಗಾಗಿ ಕಾಂಗ್ರೆಸ್ ಅಧ್ಯಕ್ಷ ಸಂಜೀವರೆಡ್ಡಿಯವರು ನಿಜಲಿಂಗಪ್ಪ ಮತ್ತು ಜತ್ತಿಯವರನ್ನು ಆಹ್ವಾನಿಸಿರುವುದಾಗಿ ೩೦-೧೧-೧೯೬೦ರ ಪತ್ರಿಕಾ ವರದಿ ಪ್ರಕಟಿಸಿತು. ಜತ್ತಿ ಸಂಪುಟದ ವಿರುದ್ಧ ಎಂಪಿಸಿಸಿ ಮಾಡಿದ್ದ ನಿರ್ಣಯ ವನ್ನು ಕುರಿತು ಚರ್ಚಿಸಲು ನಿಜಲಿಂಗಪ್ಪನವರು ೩-೧೨-೧೯೬೦ ರಂದು ಸಂಜೀವ ರೆಡ್ಡಿಯವರನ್ನು ಭೇಟಿಯಾದರು; ಜತ್ತಿಯವರೂ ೪-೧೨-೧೯೬೦ ರಂದು ದೆಹಲಿಗೆ ಪಯಣ ಬೆಳೆಸುವುದಾಗಿ ವರದಿಯಾಯಿತು. ಆನಂತರ ಚೆನ್ನಯ್ಯನವರೂ ರೆಡ್ಡಿಯವರನ್ನು ಕಂಡರು. ಈ ಚರ್ಚೆಗಳ ಫಲವಾಗಿ, ರೆಡ್ಡಿಯವರು ಮೈಸೂರು ಸಮಸ್ಯೆಯ ಪರಿಹಾರಕ್ಕಾಗಿ ಒಂದು ರಾಜಿ ಸೂತ್ರವನ್ನು ಸಿದ್ಧಪಡಿಸಿರುವುದಾಗಿ ವರದಿಯಾಯಿತು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಜೊತೆಗೆ ಭೇಟಿಮಾಡಲಿದ್ದ ಸಂಸದೀಯ ಮಂಡಳಿಯು ೧೭-೧೨-೧೯೬೦ ರಂದು ಮೈಸೂರಿನ ಪ್ರಶ್ನೆಯನ್ನು ಕೈಗೆತ್ತಿಕೊಳ್ಳುವ ನಿರೀಕ್ಷೆಯಿತ್ತು. ಬೆಂಗಳೂರಿಗೆ ಭೇಟಿ ನೀಡಲಿದ್ದ ರೆಡ್ಡಿಯವರು, ಮೈಸೂರು ವಿಷಯವನ್ನು ಕುರಿತು ಈಗಾಗಲೇ ತೀರ್ಮಾನಿಸಿರುವುದರಿಂದ ಮತ್ತೆ ಆ ಬಗ್ಗೆ ಚರ್ಚಿಸುವ ಪ್ರಸ್ತಾಪ ಸಂಸದೀಯ ಮಂಡಳಿಯ ಮುಂದಿಲ್ಲವೆಂದು ೧೫-೧೨-೧೯೬೦ ರಂದು ತಿಳಿಸಿದರು. ಅಂದರೆ, ೧೭ ರಂದು ನಡೆಯಲಿದ್ದ ಸಭೆಯಲ್ಲಿ ಈ ಕುರಿತು ಸಂಸದೀಯ ಮಂಡಳಿ ಚರ್ಚಿಸು ವುದಿಲ್ಲವೆಂದಾಯಿತು. ೧೮-೧೨-೧೯೬೦ ರಂದು ಸಂಸದೀಯ ಮಂಡಳಿಯು ಜತ್ತಿಯ ವರಿಗೆ ಸಂಪುಟ ವಿಸ್ತರಣೆಯ ಅಧಿಕಾರವನ್ನು ನೀಡಿತು. ಆದರೆ ಸಂಪುಟ ವಿಸ್ತರಣೆ ಸಮಸ್ಯೆಗೆ ಪರಿಹಾರವಲ್ಲವೆಂದು ಪತ್ರಿಕಾ ಗೋಷ್ಠಿಯಲ್ಲಿ ೨೧-೧೨-೧೯೬೦ ರಂದು ನಿಜಲಿಂಗಪ್ಪನವರು ಹೇಳಿದರು. ಅವರ ಪ್ರಕಾರ, ಇರುವ ಏಕೈಕ ಪರಿಹಾರವೆಂದರೆ, ಸಂಪುಟ ಬದಲಾವಣೆ. ಅವರು ನೀಡಿದ್ದ ಪ್ರತಿಕ್ರಿಯೆ ಸಂಸದೀಯ ಮಂಡಳಿಯ ತೀರ್ಮಾನದ ಬಗ್ಗೆ. ಮಂಡಳಿಯ ತೀರ್ಮಾನಕ್ಕ ಎಲ್ಲರೂ ಬದ್ಧರಾಗಿರಬೇಕೆಂದು ನಿಜಲಿಂಗಪ್ಪ ವಿರೋಧೀ ಬಣದ ನಾಯಕ ಚೆನ್ನಯ್ಯನವರು ಅದೇ ದಿನ ಒತ್ತಾಯಿಸಿದರು; ಇಲ್ಲದಿದ್ದರೆ ಪಕ್ಷದ ನಿಯಮವನ್ನು ಉಲ್ಲಂಘಿಸಿದಂತಾಗುತ್ತದೆ ಎಂದರು.

ನಿರಂತರ ರಾಜಕೀಯ ಭಿನ್ನಮತ, ಬಿಕ್ಕಟ್ಟು ಶಮನ ಪಕ್ಷದ ಸಂಘಟನೆಯ ಕಾರ್ಯದ ಮಧ್ಯೆ ಆಗಾಗ್ಗೆ ಮನೆಯಲ್ಲಿ ಸಣ್ಣ ಪುಟ್ಟ ಅಪಘಾತಗಳು ನಿಜಲಿಂಗಪ್ಪನವರಿಗೆ

ಸಂಭವಿಸುವುದು ಸಹಜವಾಗಿದ್ದಂತೆ ತೋರುತ್ತದೆ. ೨೪-೧೨-೧೯೬೦ ರಂದು ಸಂಜೆ ಅವರ ಮನೆಯಲ್ಲಿ ಅಂತಹ ಒಂದು ಅಪಘಾತ ಸಂಭವಿಸಿ ಮಂಡಿ ಚಿಪ್ಪು ಮುರಿಯಿತು. ತಮ್ಮ ಮೊಮ್ಮಗನೊಡನೆ ಅವರು ಆಟವಾಡುತ್ತಿದ್ದರು. ಕಾಂಪೌಂಡ್ ಹೊರಗೆ ಮೊಮ್ಮಗ ಬೀಳುತ್ತಿದ್ದುದನ್ನು ಕಂಡ ಅವರು ಗೋಡೆಯನ್ನು ಹಾರಲು ಹೋಗಿ ಬಿದ್ದುಬಿಟ್ಟರು. ಅವರಿಗೆ ಒಂದು ತಿಂಗಳು ವಿಶ್ರಾಂತಿ ತೆಗೆದುಕೊಳ್ಳುವಂತೆ ಸೂಚಿಸಲಾಯಿತು. ಅವರು ದೈಹಿಕವಾಗಿ ಸದಾ ಚಟುವಟಿಕೆಯಿಂದಿದ್ದ ವ್ಯಕ್ತಿ, ಮುಖ್ಯಮಂತ್ರಿಯಾಗಿ ಬಿಡುವಿಲ್ಲದಿದ್ದರೂ ಅವರ ದೈಹಿಕ ಚಟುವಟಿಕೆಗಳು ನಿಂತಿರಲಿಲ್ಲ. ಈ ಮಧ್ಯೆ ರಾಜಕಾರಣವು ವಿಚಿತ್ರ ತಿರುವು ಪಡೆಯಿತು. ಭಾವನಗರದಲ್ಲಿ ನಡೆಯಲಿದ್ದ ೬೬ನೇ ಕಾಂಗ್ರೆಸ್ ಸಮಾವೇಶದಲ್ಲಿ ಹೈ ಕಮಾಂಡ್ ಜೊತೆ ಚರ್ಚಿಸಿದ ಬಳಿಕ ಜತ್ತಿಯವರು ತಮ್ಮ ಸಂಪುಟ ವಿಸ್ತರಿಸಲಿರುವ ರೆಂಬ ಸುದ್ದಿ ಬಂತು. ತಾವು ಮಾಡುತ್ತಿರುವುದು ಸಂಪುಟ ವಿಸ್ತರಣೆಯೇ ವಿನಾ ಪುನಾರಚನೆಯಲ್ಲ ಎಂದು ಜತ್ತಿ ಸ್ಪಷ್ಟಪಡಿಸಿದರು. ತಾವು ಹಾಗೆ ಮಾಡುತ್ತಿರುವುದು ಎಂಪಿಸಿಸಿ ಅಧ್ಯಕ್ಷ ನಿಜಲಿಂಗಪ್ಪನವರ ನಿಯಂತ್ರಣದಲ್ಲಿದ್ದ ಸಂಘಟನಾ ವಿಭಾಗ ಹಾಗೂ ತಾವು ನಾಯಕರಾಗಿರುವುದರಿಂದ ತಮ್ಮ ನಿಯಂತ್ರಣದಲ್ಲಿರುವ ಶಾಸಕಾಂಗ ಪಕ್ಷ ಇವುಗಳ ನಡುವಣ ಹಾರ್ದಿಕ ಸಂಬಂಧವನ್ನು ಪುನಃಸ್ಥಾಪಿಸಲು ಎಂದು ಹೇಳಿದರು. ಪಕ್ಷದ ಸಂಘಟನೆಯಲ್ಲಿ ನಿಜಲಿಂಗಪ್ಪನವರ ಸ್ಥಾನ ಬಲವಾದದ್ದು. ಸಂಜೀವ ರೆಡ್ಡಿಯವರು ಅವರನ್ನು ಪಕ್ಷದ ಅತ್ಯುನ್ನತ ನೀತಿರೂಪಣ ಘಟಕವಾದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ನಾಮಕರಣ ಮಾಡಿದ್ದ ಪಕ್ಷದ ಚುನಾವಣೆಗಳು ಸದ್ಯದಲ್ಲಿಯೇ ನಡೆಯ ಲಿದ್ದುವು; ಎಂಪಿಸಿಸಿ ಚುನಾವಣಾ ಸಮಿತಿ ಮತ್ತು ಮಂಡಳ ಸಮಿತಿಗಳ ನಡುವಣ ಭಿನ್ನಾಭಿಪ್ರಾಯಗನ್ನು ನಿಜಲಿಂಗಪ್ಪ ಹಾಗೂ ಜತ್ತಿ ಅವರುಗಳು ಪರಸ್ಪರ ಮಾತುಕತೆಯ ಮೂಲಕ ಬಗೆಹರಿಸಬೇಕೆಂದು ಎಂಪಿಸಿಸಿ ೧೯-೧-೧೯೬೧ ರಂದು ಒಂದು ಒಮ್ಮತದ ನಿರ್ಣಯವನ್ನು ತೆಗೆದುಕೊಂಡಿತು. ಪಕ್ಷದ ಬಿಕ್ಕಟ್ಟಿನ ಪರಿಹಾರ ಕುರಿತು ನಿಜಲಿಂಗಪ್ಪ ಮತ್ತು ಜತ್ತಿ ಅವರುಗಳು ೨೪-೧-೧೯೬೧ ರಂದು ಈ ಬಗ್ಗೆ ಒಂದು ಒಮ್ಮತಕ್ಕೆ ಬಂದರು; ಅದರ ಪ್ರಕಾರ ಜತ್ತಿ ಅವರು ತಮ್ಮ ಸಂಪುಟಕ್ಕೆ ಭಿನ್ನಮತೀಯರ ಪ್ರತಿನಿಧಿಗಳಾದ ನಾಲ್ವರನ್ನು ಸೇರಿಸಿಕೊಳ್ಳಬೇಕು. ಈ ಹೆಸರುಗಳನ್ನು ಜತ್ತಿಯವರು ೨೫-೧-೧೯೬೧ ರಂದು ಪ್ರಕಟಿಸುವ ನಿರೀಕ್ಷೆಯಿತ್ತು. ಅಲ್ಲದೆ ಎಂಪಿಸಿಸಿಯ ಚುನಾವಣಾ ಸಮಿತಿಯ ಅಂತಿಮ ಪಟ್ಟಿಯ ಬಗ್ಗೆ ಇಬ್ಬರು ನಾಯಕರು ಒಂದು ಒಮ್ಮತಕ್ಕೆ ಬಂದಿದ್ದರು. ನಿರೀಕ್ಷೆಯಂತೆ ಜತ್ತಿ ಅವರು ನಾಲ್ವರು ಹೊಸಬ ಸಚಿವರ ಹೆಸರುಗಳನ್ನು ೨೫-೧-೧೯೬೧ರಂದು ಪ್ರಕಟಿಸಿದರು. ಅವರುಗಳೆಂದರೆ ಎಚ್.ಕೆ. ವೀರಣ್ಣಗೌಡ, ಬಿ.ವಿ. ಬಾಳಿಗಾ, ಎಚ್.ಎಸ್. ರುದ್ರಪ್ಪ, ಮತ್ತು ವೀರೇಂದ್ರ ಪಾಟೀಲ್. ಚುನಾವಣಾ ಸಮಿತಿಯಲ್ಲಿ ಎಂ.ವಿ. ರಾಮರಾವ್, ವೆಂಕಟರೆಡ್ಡಿ ಹೂಲಿ, ಎಂ.ವಿ.

ಕೃಷ್ಣಪ್ಪ, ಹಳ್ಳಿಕೇರಿ ಗುದ್ಲೆಪ್ಪ, ಮಾಲಿ ಮರಿಯಪ್ಪ, ಎಸ್. ಶ್ರೀರಾಮ ರೆಡ್ಡಿ ಮತ್ತು ಶಂಕರ ಆಳ್ವ ಅವರುಗಳಿದ್ದರು. ಇದು ಪಕ್ಷದ ಆಂತರಿಕ ಕತೆಯಾದರೆ, ಹೊರಗೆ ವಿರೋಧ ಪಕ್ಷಗಳು ಸಕ್ರಿಯವಾಗಿ, ಸಂಪಟ ವಿಸ್ತರಣೆಯು ಜಾತಿಗಣನೆಯಿಂದ ಮಾತ್ರ ನಡೆದಿದೆ ಎಂದು ೨೭-೨-೧೯೬೧ ರಂದು ಸಭಾತ್ಯಾಗ ಮಾಡಿದರು. ಎಂಎಲ್‌ಸಿ ಆಂಜನಪ್ಪನವರು ಈ ವಿಸ್ತರಣೆಯನ್ನು ಮತ್ತೊಂದು ಕಾರಣದಿಂದ ವಿರೋಧಿಸಿದರು, ಅದು ಆಡಳಿತಾತ್ಮಕ ಮಿತವ್ಯಯ ನೀತಿಗೆ ವಿರುದ್ಧವಾಗಿದೆ ಎಂದರು. ವಿರೋಧಪಕ್ಷವು ಜತ್ತಿ ಸಂಪುಟದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸಿದಾಗ ಅದು ಅತ್ಯಧಿಕ ಬಹುಮತದಿಂದ ಬಿದ್ದುಹೋಯಿತು.

ಅಧಿಕಾರದಿಂದ ಹೊರಗಿದ್ದರೂ ನಿಜಲಿಂಗಪ್ಪನವರು, ಎಂಪಿಸಿಸಿ ಅಧ್ಯಕ್ಷರಾಗಿ ಮಾತ್ರವಲ್ಲದೆ ರಾಜ್ಯ ಮತ್ತು ಜನತೆಯ ಹಿತಕ್ಕೆ ಬದ್ಧವಾಗಿದ್ದ ಒಬ್ಬ ಸಹಜ ನಾಯಕರಾಗಿ, ನ್ಯಾಯಸಮರ್ಥನೆ ಮಾಡುತ್ತ ಸುತ್ತಾಡಿದರು. ಮಡಿಕೇರಿಯಲ್ಲಿ ೧೫-೫-೧೯೬೧ ರಂದು ನಡೆದ ನಾಲ್ಕನೆಯ ಮಲೆನಾಡ ಸಮಾವೇಶದ ಅಧ್ಯಕ್ಷತೆ ವಹಿಸಿ ಮಾತನಾಡುತ್ತ, ಸರ್ಕಾರವು ಕೊಡಗನ್ನು ಕಡಡೆಗಣಿಸಬಾರದೆಂದು ಕರೆಯಿತ್ತರು. ೧೫-೫-೧೯೬೧ ರಂದು ಅವರು ಬೆಳಗಾವಿಯ ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿ, ಗಾಂಧೀಜಿಯವರ ನಾಮಜಪ ಮಾಡುತ್ತಲೋ ನೆಹರೂ ಅವರು ಹೆಸರನ್ನುಚ್ಚರಿಸುತ್ತಲೋ ಮುಂದುವರಿಯುವುದು ಸಾಧ್ಯವಿಲ್ಲವೆಂದು ಎಚ್ಚರಿಸಿದರು. ಕೇವಲ ಭಾವನಾತ್ಮಕತೆ ಸಾಲದೆಂದರು. ಹೊಸಪೇಟೆಯಲ್ಲಿ ೨೯-೫-೧೯೬೧ ರಂದು ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡಿ, ಕಾಂಗ್ರೆಸ್ ತ್ಯಾಜ್ಯ ಪಕ್ಷವಲ್ಲ ಎಂದು ಹೇಳಿದರು! ಅನೇಕ ಕೆಟ್ಟ ಜಾಡ್ಯಗಳಿಗೆ ಪಕ್ಷವು ಪ್ರಸ್ತುತದಲ್ಲಿ ಬಲಿಯಾಗಿದ್ದರೂ, ಅದೃಷ್ಟಶಾತ್ ಅಂತಹವರು ಕಡಿಮೆ ಸಂಖ್ಯೆಯಲ್ಲಿದ್ದಾರೆ, ಹೀಗಾಗಿ ಒಳ್ಳೆಯವರು ಪಕ್ಷ ತೊರೆಯುವ ಯೋಚನೆ ಮಾಡಬಾರದೆಂದರು. ಪೂಜಾರಿ ಕೆಟ್ಟವನೆಂದು ದೇವಸ್ಥಾನಕ್ಕೆ ಹೋಗುವುದನ್ನು ಬಿಡಲಾದೀತೇ? ನಿಜಲಿಂಗಪ್ಪನವರ ನೇತೃತ್ವದಲ್ಲಿನ ಹಾಗೂ ಜತ್ತಿಯವರು ಶಾಶ್ವತ ಆಹ್ವಾನಿತರಾಗಿದ್ದ ರಾಷ್ಟ್ರೀಯ ಭಾವೈಕ್ಯ ಸಮಿತಿಯೊಂದನ್ನು ರಚಿಸಿರುವ ಸುದ್ದಿ ೧೫-೭-೧೯೬೧ ರಂದು ಪ್ರಕಟವಾಯಿತು. ರಾಜ್ಯದಲ್ಲಿ ಅತಿವೃಷ್ಟಿಯಿಂದಾಗಿ ನದಿಗಳೆಲ್ಲ ತುಂಬಿ ಹರಿದು ಜನರ ಪ್ರಾಣ ಹಾಗೂ ಆಸ್ತಿಪಾಸ್ತಿ ಹಾನಿ ಅಪಾರ ಪ್ರಮಾಣದಲ್ಲುಂಟಾಯಿತು. ಎಂಪಿಸಿಸಿ ಅಧ್ಯಕ್ಷರಾಗಿದ್ದ ನಿಜಲಿಂಗಪ್ಪನವರಿಗೆ ಅದು ಆತಂಕವನ್ನುಂಟುಮಾಡಿತು. ವರದಾ ನದಿಯ ಪ್ರವಾಹದಿಂದ ಸಂತ್ರಸ್ತವಾಗಿದ್ದ ಹಳ್ಳಿಗಳ ಜನರಿಗೆ ಸಾಂತ್ವನ ಹೇಳಿ ಆಗಿದ್ದ ನಷ್ಟದ ಅಂದಾಜು ಮಾಡಲು ೨೫-೭-೧೯೬೧ ರಂದು ನಿಜಲಿಂಗಪ್ಪನವರು ಹೋದರು.

ಬರಲಿರುವ ಚುನಾವಣೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ವಿಷಯದಲ್ಲಿ ಎಂದಿನ ವಿವಾದಗಳು ಕಾಣಿಸಿಕೊಂಡವು, ಮತ್ತು ಅವುಗಳನ್ನು ಬಗೆಹರಿಸುವಂತೆ ಪಕ್ಷದ ಅಧ್ಯಕ್ಷ ನಿಜಲಿಂಗಪ್ಪ ಅವರನ್ನು ಕೇಳಿಕೊಳ್ಳಲಾಯಿತು. ಕೆಲವು ಜಿಲ್ಲೆಗಳಲ್ಲಿ ಸಿದ್ಧ ಪಡಿಸಿದ್ದ ಅಭ್ಯರ್ಥಿಗಳ ಪಟ್ಟಿಗಳು ಅರ್ಹತೆಯನ್ನು ಪರಿಗಣಿಸದೆ ಕೇವಲ ಬಣಗಳ ಆಧಾರದ ಮೇಲೆ ಇವೆಯೆಂಬ ಬಗ್ಗೆ ೮-೧-೧೯೬೧ ರಂದು ಕೆಲವು ದೂರುಗಳನ್ನು ಸಲ್ಲಿಸಲಾಯಿತು. ಈ ದೂರುಗಳನ್ನು ಕಾಂಗ್ರೆಸ್ ಅಧ್ಯಕ್ಷ ಸಂಜೀವರೆಡ್ಡಿ ಮತ್ತು ಕಾರ್ಯ ದರ್ಶಿ ಸಾದಿಕ್ ಆಲಿ ಅವರುಗಳಿಗೆ ಸಲ್ಲಿಸಲಾಯಿತು. ೧೩-೧೦-೧೯೬೧ ರಂದು ಎಂಪಿಸಿಸಿ ಅಧ್ಯಕ್ಷರಾದ ನಿಜಲಿಂಗಪ್ಪನವರು ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಸಮಿತಿಯನ್ನು ವಿಸರ್ಜಿಸಿ ವೆಂಕಟಪ್ಪನವರ ನೇತೃತ್ವದ ಒಂದು ತಾತ್ಕಾಲಿಕ ಸಮಿತಿಯನ್ನು ರಚಿಸುವ ಅತಿರೇಕದ ಕ್ರಮ ಕೈಗೊಂಡರು. ಈ ಕ್ರಮಕ್ಕೆ ಕಾರಣ ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಸುತ್ತ ಹಬ್ಬಿಕೊಂಡಿದ್ದ ವಿವಾದ ಮತ್ತು ಅದರ ವಿರುದ್ಧ ಬಂದ ದೂರುಗಳು. ಆವಶ್ಯಕವಾದರೆ ನಿಜಲಿಂಗಪ್ಪನವರು ಎಂತಹ ಕಠಿಣ ನಿರ್ಧಾರ ಕೈಗೊಳ್ಳಬಲ್ಲರೆಂಬುದಕ್ಕೆ ಈ ಘಟನೆ ಒಂದು ಉದಾಹರಣೆ. ಅಂದರೆ ನಿಜಲಿಂಗಪ್ಪನವರ ಸೌಜನ್ಯವನ್ನು ದೌರ್ಬಲ್ಯ ಅಥವಾ ನಿಷ್ಕ್ರಿಯತೆಗಳೆಂದು ತಪ್ಪು ತಿಳಿಯಬಾರದೆಂಬುದನ್ನು ಇದು ಸೂಚಿಸುತ್ತದೆ. ಯಥಾಪ್ರಕಾರ, ಅವರ ಅತ್ಯಂತ ಕಠಿಣ ಕ್ರಮವೂ ಕಾರ್ಯವಿಧಾನದ ಸಮರ್ಪಕತೆಯಲ್ಲಿ ಪರ್ಯವಸಾನವಾಯಿತು; ಪಕ್ಷದ ವರಿಷ್ಠ ಮಂಡಳಿಯ ಪೂರ್ವಾನುಮತಿ ಪಡೆದೇ ಅವರು ಈ ಕ್ರಮ ಕೈಗೊಂಡಿದ್ದರು. ನಿರೀಕ್ಷಿಸಿದಂತೆಯೇ, ವಿಸರ್ಜಿತ ಜಿಲ್ಲಾ ಸಮಿತಿಯ ಅಧ್ಯಕ್ಷ ಎ.ವಿ. ನರಸಿಂಹರೆಡ್ಡಿ ಅವರು ಪತ್ರಿಕಾ ಹೇಳಿಕೆಯ ಮೂಲಕ ಈ ಕ್ರಮವನ್ನು ಅನ್ಯಾಯ, ಏಕಪಕ್ಷೀಯ ಹಾಗೂ ಪೂರ್ವಗ್ರಹಪೀಡಿತ ಎಂದು ಖಂಡಿಸಿದರು. ಜತ್ತಿ ಅವರು ಇದರ ಬಗ್ಗೆ ವಿಷಾದ ವ್ಯಕ್ತಪಡಿಸಿ, ಅದೂ ಚುನಾವಣಾಪೂರ್ವ ದಿನ ಗಳಲ್ಲಿ ಇಂತಹ ನಡವಳಿಕೆಯು ಪಕ್ಷದ ಅನೈಕಮತ್ಯಕ್ಕೆ ಕಾರಣವಾಗಬಹುದೆಂದರು. ಸಂಜೀವರೆಡ್ಡಿಯವರಿಗೆ ಪರಿಸ್ಥಿತಿಯನ್ನು ವಿವರಿಸಿ ಕೊಂಚ ಕಡಿಮೆ ಕಠಿಣ ಕ್ರಮವನ್ನು ಕೈಗೊಳ್ಳಬಹುದಾಗಿತ್ತು ಎಂದು ತಾವು ಸೂಚಿಸಿದುದಾಗಿ ತಿಳಿಸಿದರು. ಬೆಂಗಳೂರಿನಲ್ಲಿ ೧೭-೧೦-೧೯೬೧ ರಂದು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ನಿಜಲಿಂಗಪ್ಪನವರು ವಿವರಣೆ ನೀಡುತ್ತ, ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆಯಲ್ಲಿ ಯಾವುದೇ ಬಗೆಯ ಸ್ವಹಿತಾ ಸಕ್ತಿ ಮತ್ತು ಪಕ್ಷಪಾತಗಳು ನಡೆದಿರುವುದು ತಮಗೆ ತಿಳಿಯದೆಂದೂ ಅರ್ಹ ಅಭ್ಯರ್ಥಿಗಳು ಮಾತ್ರ ಪಕ್ಷದ ಟಿಕೆಟ್ ಪಡೆಯುವರೆಂದೂ ಆಶ್ವಾಸನೆ ನೀಡಿದರು. ಜತ್ತಿಪರ ಬಣದವರನ್ನು ಅಲಕ್ಷಿಸಲಾಗಿದೆಂಬ ಜತ್ತಿಯವರ ಹೇಳಿಕೆಗೆ ಅವರು ಪ್ರತಿಕ್ರಿಯಿಸುತ್ತಿದ್ದರು. ಆದರೆ ಅಭ್ಯರ್ಥಿ ಗಳ ಒಮ್ಮತದ ಆಯ್ಕೆಯಾಗುವ ಅನುಕೂಲಕರ ವಾತಾವರಣ ಈಗ ಸೃಷ್ಟಿಗೊಂಡಿದೆ

ಯೆಂದು ಜತ್ತಿಯವರು ೩೧-೧೦-೧೯೬೧ ರಂದು ಹೇಳಿಕೆ ನೀಡಿದರು; ಆದರೆ ಹೆಚ್ಚು ಎಚ್ಚರದಿಂದ ಪ್ರತಿಕ್ರಿಯೆ ನೀಡಿದ ನಿಜಲಿಂಗಪ್ಪನವರು ಅಂತಹ ಸಂಭವ ಶೇಕಡ ಕೇವಲ ೬೦ ರಿಂದ ಎಪ್ಪತ್ತು ಭಾಗಕ್ಕೆ ಸೀಮಿತ ಎಂದರು. ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿಯನ್ನು ಕುರಿತು ಚರ್ಚಿಸಲು ಎಂಪಿಸಿಸಿ ಸಭೆ ಸೇರಿತು. ಚುನಾವಣಾ ಸಮಿತಿಯಲ್ಲಿ ಒಗ್ಗಟ್ಟಿಲ್ಲವೆಂಬುದು ಆಗ ಬೆಳಕಿಗೆ ಬಂತು, ಅದರಲ್ಲಿಯೇ ಇದ್ದ ಬಿನ್ನಾಭಿಪ್ರಾಯದ ಕಾರಣದಿಂದ ಎರಡು ವಿಭಿನ್ನ ಬಣಗಳಿರುವುದು ಸ್ಪಷ್ಟವಾಯಿತು. ಮುಖ್ಯವಾಗಿ ಭಿನ್ನಾಭಿಪ್ರಾಯ ವ್ಯಕ್ತವಾದುದು ಹಾಸನ, ಚಿಕ್ಕಮಗಳೂರು, ಬೀದರ್, ರಾಯಚೂರು, ಕೊಡಗು ಮತ್ತು ಉತ್ತರ ಕನ್ನಡಗಳ ಅಭ್ಯರ್ಥಿಗಳ ಆಯ್ಕೆಯಲ್ಲಿ. ಒಂದು ಬಣದಲ್ಲಿ ನಿಜಲಿಂಗಪ್ಪ, ಎಂ.ವಿ. ರಾಮರಾವ್, ಎಂ.ವಿ. ಕೃಷ್ಣಪ್ಪ, ಹಳ್ಳಿಕೇರಿ ಗುದ್ಲೆಪ್ಪ ಮತ್ತು ಶಂಕರ ಆಳ್ವ ಅವರುಗಳಿದ್ದರೆ, ವಿರೋಧಿ ಬಣದಲ್ಲಿದ್ದವರೆಂದರೆ ಜತ್ತಿ, ಮಾಲಿ ಮರಿಯಪ್ಪ, ವೆಂಕಟರೆಡ್ಡಿ ಹೂಲಿ ಮತ್ತು ಶ್ರೀರಾಮರೆಡ್ಡಿ. ೧೯೬೧ರ ಅಕ್ಟೋಬರ್ ೨೦ ರಿಂದ ನವೆಂಬರ್ ೧೭ ರವರೆಗೂ ನಡೆದ ಸುದೀರ್ಘ ಕಾಲದ ಚರ್ಚೆ ಮತ್ತು ಸಂಧಾನಗಳ ಬಳಿಕ, ಅಭ್ಯರ್ಥಿಗಳ ಪಟ್ಟಿಯನ್ನು ಎಂಪಿಸಿಸಿ ಅಂತಿಮಗೊಳಿಸಿತು. ಸಮಿತಿಯು ವಿಧಾನಸಭೆಗೆ ೨೦೮ ಮಂದಿ ಮತ್ತು ಲೋಕಸಭೆಗೆ ೨೬ ಮದಿಯನ್ನು ಆಯ್ಕೆಮಾಡಬೇಕಿತ್ತು. ಆದರೂ ಕೇವಲ ೪೦% ಅಭ್ಯರ್ಥಿಗಳ ಆಯ್ಕೆಯು ಮಾತ್ರ ಅಂತಿಮ ಎನಿಸಿಕೊಂಡಿತು. ಕೊನೆಯ ಅಂತಿಮ ಪಟ್ಟಿ ೧೯-೧೧-೧೯೬೧ ರಂದು ೨೪ ದಿನಗಳ ದೀರ್ಘಕಾಲದ ಮಾತುಕತೆಯ ಬಳಿಕ ಸಿದ್ಧವಾಯಿತು. ೭೭ ವಿಧಾನಸಭಾ ಹಾಗೂ ೮ ಮಂದಿ ಲೋಕಸಭಾ ಅಭ್ಯರ್ಥಿಗಳ ಬಗ್ಗೆ ಮಾತ್ರ ಒಮ್ಮತ ಸಾಧ್ಯವಾಯಿತು; ಮಿಕ್ಕವೆಲ್ಲ ಚೌಕಾಶಿ ಮತ್ತು ಒಡಂಬಡಿಕೆಗಳ ಮೂಲಕ ನಡೆಯಿತು. ಕರಮರ್‌ಕರ್, ದಾತಾರ್ ಮತ್ತು ಗುರುಮುಖಿ ಅವರುಗಳ ನಿರ್ಧಾರವನ್ನು ಅನುಸರಿಸಿ ಎಂಪಿಸಿಸಿಯು ಸಂಸದೀಯ ಮಂಡಳಿಯೆಡೆಗೆ ಸಾಗಿತು. ದೆಹಲಿಯಿಂದ ೮-೧೨-೧೯೬೧ ರಂದು ವಾಪಸಾದ ಬಳಿಕ, ಕೇಂದ್ರ ಸಂಸದೀಯ ಮಂಡಳಿಯು ಒಪ್ಪಿದ್ದ ಅಂತಿಮ ಪಟ್ಟಿಯ ಬಗೆ ಜತ್ತಿ ತೃಪ್ತಿ ವ್ಯಕ್ತಪಡಿಸಿದರು. ಅದು ಒಗ್ಗಟ್ಟಿನ ಸಂಕೇತವಾಗಿದೆಯೆಂದೂ, ಪಕ್ಷಪಾತ ಭಾವನೆಯದಲ್ಲವೆಂದೂ, ಬೆಂಗಳೂರಿನಲ್ಲಿ ಸಾಧ್ಯವಾಗದಿದ್ದ ಒಗ್ಗಟ್ಟು ದೆಹಲಿಯಲ್ಲಿ ಸಾಧಿತವಾಗಿದೆಯೆಂದೂ ಹೇಳಿದರು! ತಾವು ಮತ್ತು ನಿಜಲಿಂಗಪ್ಪನವರು ತೆಗೆದುಕೊಂಡ ನಿಲವುಗಳನ್ನು ಅರ್ಥ ಮಾಡಿಕೊಂಡ ಮಂಡಳಿಯನ್ನು ಹೊಗಳಿದರು. ಟಿಕೆಟ್‌ಗಳ ಬಗೆಗಿನ ಗದ್ದಲ ಅಡಗಿದ ಬಳಿಕ, ಶಿಸ್ತು, ಒಗ್ಗಟ್ಟು ಮತ್ತು ಬದ್ಧತೆಗಳನ್ನು ಕಾಪಾಡಿಕೊಳ್ಳುವಂತೆ ಎಂಪಿಸಿಸಿಗೆ ಕರೆ ನೀಡಿದರು. ಅವುಗಳನ್ನು ಉಲ್ಲಂಘಿಸಿದವರಿಗೆ ಕಾಂಗ್ರೆಸ್ ಪಕ್ಷದಲ್ಲಿ ಸ್ಥಾನವಿಲ್ಲವೆಂದು ಎಚ್ಚರಿಸಿದರು. ಪಕ್ಷವು ಸಂಖ್ಯೆಗಿಂತ ಗುಣಮಟ್ಟಕ್ಕೆ ಹೆಚ್ಚು ಪ್ರಾಮುಖ್ಯ ನೀಡುವುದಾಗಿ

ಜನರಲ್ ತಿಮ್ಮಯ್ಯರೊಂದಿಗೆ ಎಸ್ಸೆನ್

ಹೇಲಿದರು. ತಮಗೆ ಟಿಕೆಟ್ ಸಿಗಲಿಲ್ಲವೆಂಬ ಕಾರಣಕ್ಕೆ ಕೆಲವರು ಪಕ್ಷ ತೊರೆದು ಹೋದುದು ಅವರಲ್ಲಿ ಖೇದವನ್ನುಂಟುಮಾಡಿತ್ತು. ನಿರೀಕ್ಷಿಸಬಹುದಾದಂತೆ, ಟಿಕೆಟ್ ಕತೆಯಿಂದ ಋಣಾತ್ಮಕ ಪರಿಣಮವಾಗಿ, ಪಕ್ಷದ ಅನೇಕ ಮಂದಿ ಸದಸ್ಯರು ಅತೃಪ್ತಿ ಹೊಂದಿದರು, ಕೆಲವರಂತೂ ಅಧಿಕೃತ ಪಟ್ಟಿಯನ್ನು ಬಹಿರಂಗವಾಗಿಯೇ ತಿರಸ್ಕರಿಸಿದರು. ಟಿಕೆಟ್ ನಿರಾಕರಣೆಗೊಳಗಾಗಿದ್ದ ನೂರು ಮಂದಿ ಕಾಂಗ್ರೆಸ್ಸಿಗರು ೬-೧-೧೯೬೨ ರಂದು ಬೆಂಗಳೂರಿನಲ್ಲಿ ಸಭೆ ಸೇರಿ ಅಧಿಕೃತ ಅಭ್ಯರ್ಥಿಗಳ ವಿರುದ್ಧ ಸ್ವತಂತ್ರರಾಗಿ ಸ್ಪರ್ಧಿಸಬೇಕೆಂದು ನಿರ್ಣಯಿಸಿದರು. ಸಭೆ ನಡೆದುದು ಮದ್ರಾಸ್ ವುಂಡ್‌ಲ್ಯಾಂಡ್ ಹೋಟಲಿನಲ್ಲಿ, ಅಧ್ಯಕ್ಷತೆ ವಹಿಸಿದ್ದವರು ಮೈಸೂರು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸದಸ್ಯ ಎಸ್. ಕರಿಯಪ್ಪನವರು. ಕಾಂಗ್ರೆಸ್ ಅಭ್ಯರ್ಥಿಗಳ ಅಧಿಕೃತ ಪಟ್ಟಿಯನ್ನು ಬದಲಾಯಿಸುವುದಿಲ್ಲವೆಂದು ನಿಜಲಿಂಗಪ್ಪನವರು ೧೧-೧-೧೯೬೧ ರಂದು ಘೋಷಿಸಿದರು. ನಿಜಲಿಂಗಪ್ಪನವರು ರಾಜ್ಯದ ಶಾಸಕಾಂಗ ಪಕ್ಷದ ಹೊಸ ನಾಯಕರಾಗಬೇಕೆಂದು ವರಿಷ್ಠ ಮಂಡಳಿಯು ಸೂಚಿಸಿಲ್ಲವೆಂದೂ, ಈ ವಿಷಯವನ್ನು ಚುನಾವಣೆಯ ಬಳಿಕ ನಿರ್ಧರಿಸಬೇಕೆಂದೂ ೧೭-೧-೧೯೬೨ ರಂದು ದೆಹಲಿಯಿಂದ ಬಂದ ಒಂದು ವರದಿಯು ಹೇಳಿತು. ಈ ಮಧ್ಯೆ, ಟಿಕೆಟ್ ವಂಚಿತರು ಅಧಿಕೃತ ಅಭ್ಯರ್ಥಿಗಳ ವಿರುದ್ಧ ತಮ್ಮ ಚಟುವಟಿಕೆಯನ್ನು ಮುಂದುವರಿಸಿದರು.

ಕೋಲಾರ ಜಿಲ್ಲೆಯ ಚಿಂತಾಮಣಿ ಕ್ಷೇತ್ರದಲ್ಲಿ, ವರಿಷ್ಠ ಮಂಡಳಿಯು ಒಪ್ಪಿಗೆ ನೀಡಿದ್ದ ಅಧಿಕೃತ ಅಭ್ಯರ್ಥಿ ಎಂ.ಸಿ. ಆಂಜನೇಯ ರೆಡ್ಡಿ; ಆದರೆ ಎಂಪಿಸಿಸಿಯು ಸೀನಪ್ಪನವರಿಗೆ ಟಿಕೆಟ್ ನೀಡಿತ್ತು. ಇದು ಪ್ರದೇಶ ಕಾಂಗ್ರೆಸ್‌ನ ಅಪರೂಪದ ಒಂದು ಅಶಿಸ್ತಿನ ನಿದರ್ಶನವೇ ಹೊರತು ಟಿಕೆಟ್‌ವಂಚಿತ ವ್ಯಕ್ತಿ ಕಾಂಗ್ರೆಸ್ಸಿಗನೊಬ್ಬ ಅಧಿಕೃತ ಅಭ್ಯರ್ಥಿಯ ವಿರುದ್ಧ ಸ್ಪರ್ಧಿಸುವ ಅಶಿಸ್ತಿನ ವರ್ತನೆಯಲ್ಲ. ಸೀನಪ್ಪ ತಮ್ಮ ನಾಮ ಪತ್ರವನ್ನು ವಾಪಸು ಪಡೆಯವಂತೆ ಮನವೊಲಿಸಲು ಎಐಸಿಸಿ ಕಾರ್ಯದರ್ಶಿ ರಾಜ ಗೋಪಾಲನ್ ನಿಜಲಿಂಗಪ್ಪನವರನ್ನು ಕೇಳಿಕೊಂಡರು; ಹಾಗೆ ಮಾಡದಿದ್ದರೆ ಎಐಸಿಸಿಯು ಎಂಪಿಸಿಸಿಯ ವಿರುದ್ಧ ಕ್ರಮಕೈಗೊಳ್ಳಬೇಕಾಗುತ್ತದೆಂದು ಎಚ್ಚರಿಸಿದರು. ಅಧಿಕೃತ ಅಭ್ಯರ್ಥಿಗಳ ವಿರುದ್ಧ ಸ್ಪರ್ಧಿಸಿದ್ದ ಅಭ್ಯರ್ಥಿಗಳ ವಿರುದ್ಧ ಎಂಪಿಸಿಯೇ ಶಿಸ್ತು ಕ್ರಮ ಕೈಗೊಂಡಿತು. ನಿಜಲಿಂಗಪ್ಪನವರು ೧೫-೨-೧೯೬೨ ರಂದು ಶಿವಮೊಗ್ಗದಲ್ಲಿ ಪ್ರಚಾರ ಕಾರ್ಯಕ್ಕೆ ಚಾಲನೆ ನೀಡಿದರು. ಮಹಾಚುನಾವಣೆಗಳ ಪ್ರಚಾರಕಾರ್ಯ ಮೈಸೂರಿನಲ್ಲಿ ೧೯-೨-೧೯೬೨ ರಂದು ಆರಂಭಗೊಳ್ಳುವುದೆಂದು ೧೭-೨-೧೯೬೨ ರಂದು ವರದಿಯಾಯಿತು. ರಾಜ್ಯದಲ್ಲಿ ೧, ೧೨, ೫೪, ೨೫೪ ಮಂದಿ ಮತದಾರರಿದ್ದರು. ಒಟ್ಟು ೨೦೮ ಕ್ಷೇತ್ರಗಳ ಪೈಕಿ ೧೩೮ ಕ್ಷೇತ್ರಗಳಲ್ಲಿ ಗೆಲ್ಲುವ ಮೂಲಕ ಕಾಂಗ್ರೆಸ್ ಸ್ಪಷ್ಟ ಬಹುಮತ

ವನ್ನೇನೋ ಗಳಿಸಿತು, ಆದರೆ ನಿಜಲಿಂಗಪ್ಪನವರೇ ಹೊಸದುರ್ಗ ಕ್ಷೇತ್ರದಿಂದ ಸೋಲನ್ನನು ಭವಿಸಿರು, ಇದಕ್ಕೆ ಕಾರಣ ವೈಷಮ್ಯಪೂರಿತ ಪಿತೂರಿ ಎಂಬ ಭಾವನೆಯಿತ್ತು. ಅಧಿಕ ಸ್ಥಾನಗಳನ್ನು ಗಳಿಸಿದ್ದ ಎರಡನೆಯ ಪಕ್ಷ ಪಿಎಸ್‌ಪಿ. ಅದಕ್ಕೆ ೨೦ ಸ್ಥಾನ ಲಭ್ಯವಾಯಿತು. ಹೊಸತಾಗಿ ಆರಂಭಗೊಂಡಿದ್ದ ಸ್ವತಂತ್ರ ಪಕ್ಷಕ್ಕೆ ೯ ಸ್ಥಾನಗಳೂ ಕಮ್ಯುನಿಸ್ಟ್ ಪಕ್ಷಕ್ಕೆ ೩ ಸ್ಥಾನಗಳೂ ಲಭಿಸಿದುವು. ಸಮಾಜವಾದಿ ಪಕ್ಷವು ನಾಮಮಾತ್ರಕ್ಕೆ ಒಂದು ಸ್ಥಾನ ಗಳಿಸಿತು. ಜನಸಂಘ ಯಾವ ಸ್ಥಾನವನ್ನೂ ಗೆಲ್ಲಲಿಲ್ಲ; ಆದರೆ ೩೭ ಮಂದಿ ಸ್ವತಂತ್ರ ಅಭ್ಯರ್ಥಿಗಳು ಗೆಲುವು ಸಾಧಿಸಿದರು.

ಹೊಸ ಸಂಪುಟರಚನೆಗೆ ಅನುವು ಮಾಡಿಕೊಡಲು ಜತ್ತಿ ಸಂಪುಟವು ೧-೩-೧೯೬೨ ರಂದು ರಾಜೀನಾಮೆ ನೀಡಿತು. ಶಾಸಕಾಂಗ ಪಕ್ಷದ ಹೊಸ ನಾಯಕನ ಆಯ್ಕೆಯು ೭-೩-೧೯೬೨ ರಂದು ನಡೆಯುವ ನಿರೀಕ್ಷೆಯಿತ್ತು. ಎಲ್ಲರಿಗೂ ಗೊತ್ತಿದ್ದ ಗುಂಪುಗಾರಿಕೆಯಿಂದಾಗಿ ವಿಧಾನಸಭೆಯಲ್ಲಿನ ಪಕ್ಷದ ನಾಯಕನ ಆಯ್ಕೆಯಲ್ಲಿ ತೊಂದರೆ ಯನ್ನು ನಿರೀಕ್ಷಿಸಿದ್ದ ಕಾಂಗ್ರೆಸ್ ಅಧ್ಯಕ್ಷ ಸಂಜೀವರೆಡ್ಡಿಯವರು ನಿಜಲಿಂಗಪ್ಪ ಹಾಗೂ ಜತ್ತಿಯವರನ್ನು ಮಾತುಕತೆಗಾಗಿ ದೆಹಲಿಗೆ ಆಹ್ವಾನಿಸಿದರು. ಈ ಮಧ್ಯೆ ನಿಜಲಿಂಗಪ್ಪನರ ಬೆಂಬಲಿಗರು ಅವರ ಆಯ್ಕೆಗಾಗಿ ಬಿರುಸಿನ ಚಟುವಟಿಕೆಗಳಲ್ಲಿ ತೊಡಗಿದ್ದಾರೆಂದೂ, ಆಯ್ಕೆಯಾದರೆ ನಿಜಲಿಂಗಪ್ಪನವರು ನಾಯಕರಾಗಲು ಒಪ್ಪಿದ್ದಾರೆಂದೂ ವರದಿ ಯಾಯಿತು. ಚುನಾವಣೆಯಲ್ಲಿ ಆಯ್ಕೆಯಾಗದ ತಾಂತ್ರಿಕ ತೊಂದರೆಯನ್ನು ಆರು ತಿಂಗಳೊಳಗೆ ಉಪಚುನಾವಣೆಯಲ್ಲಿ ಅವರು ಗೆಲವು ಸಾಧಿಸುವ ಮೂಲಕ ನಿವಾರಿಸಿ ಕೊಳ್ಳಬಹುದಾಗಿತ್ತು, ಆದರೆ ಅವರು ಸೋತವರು ಎಂಬ ಕಪ್ಪುಚುಕ್ಕೆ ಇದ್ದೇ ಇರುತ್ತಿತ್ತು. ಅವರ ಬೆಂಬಲಿಗರು ಮಾತ್ರ ನಾಯಕತ್ವಕ್ಕೆ ಸ್ಪರ್ಧಿಸಲು ಅವರಿಗೆ ಅವಕಾಶ ನೀಡಬೇಕೆಂದು ಒತ್ತಡ ತಂದರು. ಜೊತೆಗೆ ಅವರ ಸೋಲು ರಾಜಕೀಯ ಷಡ್ಯಂತ್ರದ ಫಲವೆಂದೂ, ಹೀಗಾಗಿ ನೈತಿಕ ನೆಲೆಯಲ್ಲಿ ಅದು ಸೋಲೇ ಅಲ್ಲವೆಂದೂ ವಾದಿಸಿದರು! ಈ ವಾದವನ್ನು ಜತ್ತಿ ಗುಂಪು ಸಹಜವಾಗಿಯೇ ಒಪ್ಪಲಿಲ್ಲ. ನಿಜಲಿಂಗಪ್ಪ ಹಾಗೂ ಜತ್ತಿ ಇಬ್ಬರೂ ನಾಯಕತ್ವಕ್ಕೆ ತಮ್ಮ ಅರ್ಹತೆಯನ್ನು ವಿವರಿಸಿದರು. ವರಿಷ್ಠ ಮಂಡಳಿಗೆ ನಿಜಲಿಂಗಪ್ಪನವರು ನಾಯಕರಾಗುವುದು ಇಷ್ಟವಿರಲಿಲ್ಲ ಎಂಬುದು ಸ್ಪಷ್ಟವಾಗಿತ್ತು ಹಾಗಾಗಿ ಜತ್ತಿಯವರ ಮುಂದುವರಿಕಗೇ ಅದರ ಒಲವಿತ್ತು. ದೆಹಲಿಯಿಂದ ವಾಪಸಾದ ಬಳಿಕ ನಿಜಲಿಂಗಪ್ಪ ನವರು ಮಾತನಾಡುತ್ತ, ನಾಯಕತ್ವಕ್ಕೆ ಸ್ಪರ್ಧಿಸಲು ತಮಗೆ ಅವಕಾಶ ನೀಡದಿದ್ದ ಪಕ್ಷ ದಲ್ಲಿ ತಮ್ಮ ಆಯ್ಕೆಯ ವ್ಯಕ್ತಿಯೊಬ್ಬರು ಸ್ಪರ್ಧಿಸಲು ಅವಕಾಶವೀಯಬೇಕೆಂದೂ, ಉಪ ಚುನಾವಣೆಯಲ್ಲಿ ತಾವು ಗೆದ್ದು ಬರುವವರೆಗೂ ಅವರು ತಮ್ಮ ಪರ ನಾಯಕತ್ವ ವಹಿಸುವರೆಂದೂ ಹೇಳಿದರು. ನಿಜಲಿಂಗಪ್ಪ ಮತ್ತು ಜತ್ತಿಯವರ ನಡುವಣ ನಾಯಕತ್ವ

ಸಮಸ್ಯೆಯ ಪರಿಹಾರಕ್ಕೆಂದು ಲಾಲ್ ಬಹದ್ದೂರ್ ಶಾಸ್ತ್ರಿಯವರು ೭-೩-೧೯೬೨ ರಂದು ಬೆಂಗಳೂರಿಗೆ ಬಂದರು. ಆನಂತರ ಮತನಾಡಿದ ಶಾಸ್ತ್ರಿಯವರು ತಮ್ಮ ಸಲಹೆಯ ಮೇರೆಗೆ ನಿಜಲಿಂಗಪ್ಪನವರು ಸ್ಪರ್ಧಿಸುವುದಿಲ್ಲವೆಂದು ತಿಳಿಸಿದರು. ಒಮ್ಮತದ ಆಯ್ಕೆ ಸಾಧ್ಯವಾಗಲಿಲ್ಲ. ಶಾಸ್ತ್ರಿಯವರು ಪ್ರತಿಯೊಬ್ಬ ಸದಸ್ಯನನ್ನೂ ಪ್ರತ್ಯೇಕವಾಗಿ ಭೇಟಿಯಾಗಿ ಅಭಿಪ್ರಾಯ ಸಂಗ್ರಹಿಸಿದ ಬಳಿಕ ನಿಜಲಿಂಗಪ್ಪನವರ ಪರ ಅಭ್ಯರ್ಥಿ ಎಸ್.ಆರ್. ಕಂಠಿ ನಾಯಕರಾಗಿ ಚುನಾಯಿತರಾದರು. ಎರಡೂ ಬಣಗಳವರನ್ನೊಳಗೊಂಡ ಸಂಪುಟವನ್ನು ರಚಿಸಲು ವರಿಷ್ಠ ಮಂಡಳಿಯು ಕಂಠಿಯವರಿಗೆ ಸೂಚಿಸಿತು. ಆದರೆ ಇದು ಸಾಧ್ಯವಾದುದಲ್ಲವೆಂಬುದು ಕಂಠಿಯವರ ಅಭಿಪ್ರಾಯ ಎಂಬ ಭಾವನೆಯಿತ್ತು. ಆಲೋಚಿಸಿದ್ದ ೧೪ ಮಂದಿ ಸಚಿವರು ಹಾಗೂ ೧೦ ಮಂದಿ ಉಪಸಚಿವರಲ್ಲಿ, ಕಂಠಿಯವರು ಒಂಬತ್ತು ಸಚಿವರು ಹಾಗೂ ನಾಲ್ವರು ಉಪಸಚಿವರ ಸಂಪುಟವನ್ನು ಮಾತ್ರ ರಚಿಸಲು ಸಾಧ್ಯವಾಯಿತು. ಸಂಪುಟದಲ್ಲಿ ಮುಖ್ಯಮಂತ್ರಿ ಕಂಠಿಯವರಲ್ಲದೆ, ಎಂ.ವಿ. ಕೃಷ್ಣಪ್ಪ, ಎಂ.ವಿ. ರಾಮರಾವ್, ಆರ್.ಎಂ. ಪಾಟೀಲ್, ಯಶೋಧರಾ ದಾಸಪ್ಪ, ಕೆ. ಮಲ್ಲಪ್ಪ, ಡಾ. ನಾಗಪ್ಪ ಆಳ್ವ, ವೀರೇಂದ್ರ ಪಾಟೀಲ್ ಮತ್ತು ಬಿ. ರಾಚಯ್ಯ ಅವರು ಸಚಿವರಾಗಿದ್ದರು. ಉಪಸಚಿವರಿಬ್ಬರೂ ಮುಸ್ಲಿಮರು, ಎಚ್. ಆರ್. ಅಬ್ದುಲ್ ಗಫಾರ್ ಮತ್ತು ಮಕ್ಸೂದ್ ಆಲಿ ಖಾನ್.

ಕಂಠಿಯವರಿಗೆ ಸಂಪುಟರಚನೆ ಸುಲಭದ್ದೇನಾಗಿರಲಿಲ್ಲ, ಇದಕ್ಕೆ ಕಾರಣ ಜತ್ತಿ ಗುಂಪಿನವರನ್ನು ಸಂಪುಟದಲ್ಲಿ ಸೇರಿಸಿಕೊಳ್ಳಲು ವರಿಷ್ಠ ಮಂಡಳಿ ಸೂಚಿಸಿದ್ದುದು. ಈ ಮಧ್ಯೆ, ನಿಜಲಿಂಗಪ್ಪನವರು ಉಪಚುನಾವಣೆಯಲ್ಲಿ ಬಾಗಲುಕೋಟೆ ಕ್ಷೇತ್ರದಿಂದ ಸ್ಪರ್ಧಿಸಲು ಅನುವಾಗುವಂತೆ ಆ ಕ್ಷೇತ್ರದ ಸದಸ್ಯ ಬಿ.ಟಿ. ಮುನ್ನಾಳ್ ಅವರು ತಮ್ಮ ರಾಜೀನಾಮೆಯನ್ನು ಸಭಾಧ್ಯಕ್ಷರಿಗೆ ಕಳಿಸಿರುವುದಾಗಿ ವರದಿಯಾಯಿತು. ಉಳಿದ ಐವರು ಅಭ್ಯರ್ಥಿಗಳು ನಾಮಪತ್ರ ಹಿಂಪಡೆದದ್ದರಿಂದ ನಿಜಲಿಂಗಪ್ಪನವರು ಬಾಗಲುಕೋಟೆಯಿಂದ ಸರ್ವಾನುಮತದಿಂದ ಚುನಾಯಿತರಾದರು. ಕಂಠಿ ಮುಖ್ಯಮಂತ್ರಿಯಾದಾಗಲೇ, ಅವರು ತಾತ್ಕಾಲಿಕ ಹಾಗೂ ನಿಜಲಿಂಗಪ್ಪನವರು ಉಪಚುನಾವಣೆಯಲ್ಲಿ ವಿಧಾನಸಭೆಗೆ ಗೆದ್ದು ಬಂದ ಮೇಲೆ ಅವರಿಗಾಗಿ ಸ್ಥಾನ ತೆರವು ಮಾಡುತ್ತಾರೆ ಎಂಬುದು ತಿಳಿದಿತ್ತು. ಸಾರ್ವಜನಿಕರು ಅವರನ್ನು ಭರತ ಎಂದು ಹೆಸರಿಸಿದರು! ತಮ್ಮ ಬಗೆಗಿನ ಈ ಭಾವನೆಯಿಂದ ಸ್ವತಃ ಕಂಠಿಯವರೇ ಮುಜುಗರಕ್ಕೊಳಗಾಗಿದ್ದರು. ತಮಗೆ ನೀಡಿದ ಭರತ ಎಂಬ ಬಿರುದು ಕೇವಲ ಹಾಸ್ಯದ್ದು, ಹಾಗಾಗಿ ಅದನ್ನು ಗಂಭೀರವಾಗಿ ಪರಿಗಣಿಸಬಾರದು ಮತ್ತು ತಾತ್ಕಾಲಿಕವಾದರೂ ತಾವು ಪೂರ್ಣಪ್ರಮಾಣದಲ್ಲಿ ಮುಖ್ಯಮಂತ್ರಿಯ ಅಧಿಕಾರವನ್ನು ಚಲಾಯಿಸುವುದಾಗಿ ೮-೫-೧೯೬೨ ರಂದು ಹೇಳಿಕೆಯಿತ್ತರು. ಅವರು

ಈ ಮಾತನ್ನು ವಿಧಾನಸಭೆಯಲ್ಲಿಯೇ ಹೇಳಿದರು. ಆದರೆ ಒಳ್ಳೆಯ ಆಡಳಿತ ಮತ್ತು ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯ ದೃಷ್ಟಿಯಿಂದ ನಾಯಕತ್ವ ಬದಲಾಗಬಹುದೆಂದೂ ಹೇಳಿದರು! ಕಂಠಿಯವರು ತಮ್ಮ ಹುದ್ದೆಯಿಂದ ಕೆಳಗಿಳಿಯುವುದಾಗಿ ಅಧ್ಯಕ್ಷ ರೆಡ್ಡಿಯವರಿಗೆ ಪತ್ರ ಬರೆದಿರುವುದಾಗಿ ೧-೫-೧೯೬೨ ರಂದು ಪತ್ರಿಕೆಗಳಲ್ಲಿ ವರದಿಯಾಯಿತು. ಅಂಥದೇ ಪತ್ರವನ್ನವರು ನೆಹರೂ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಅವರುಗಳಿಗೂ ಬರೆದರು. ತಾವು ಹಾಗೆ ಮಾಡುತ್ತಿರುವುದಕ್ಕೆ ಕಾರಣ ಈಗ ಚುನಾವಣೆಯಲ್ಲಿ ಗೆದ್ದು ಬಂದಿರುವ ನಿಜಲಿಂಗಪ್ಪನವರು ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಗೊಳ್ಳಲು ಅವಕಾಶ ಮಾಡಿಕೊಡವುದಕ್ಕಾಗಿ ಎಂದವರು ಸ್ಪಷ್ಟನೆ ನೀಡಿದರು. ನಿಜಲಿಂಗಪ್ಪನವರೇ ತಮ್ಮ ನಾಯಕರಾಗಲು ಬಹುತೇಕ ಕಾಂಗ್ರೆಸ್ ಶಾಸಕರು ಬಯಸುತ್ತಿರುವುದರಿಂದ ತಾವು ಆ ನಿರ್ಧಾರಕ್ಕೆ ಬಂದುದಾಗಿ ತಿಳಿಸಿದರು. ನಿಜಲಿಂಗಪ್ಪನವರು ಕಂಠಿಯವರಿಂದ ನಾಯಕತ್ವದ ಜವಾಬ್ದಾರಿಯನ್ನು ಜೂನ್ ಆರಂಭದಲ್ಲಿ ಸ್ವೀಕರಿಸುವುದಾಗಿ ನಿರೀಕ್ಷಿಸಲಾಗಿತ್ತು. ನಾಯಕತ್ವದ ಪ್ರಶ್ನೆಯನ್ನು ವರಿಷ್ಠ ಮಂಡಳಿಯ ಜೊತೆ ಚರ್ಚಿಸಿದ ಬಳಿಕ ನಿಜಲಿಂಗಪ್ಪನವರು ೧೬-೫-೧೯೬೨ ರಂದು ದೆಹಲಿಯಿಂದ ಮುಂಬಯಿಗೆ ಆಗಮಿಸಿದರು. ತಾವು ನಿಜಲಿಂಗಪ್ಪನವರ ಪರವಾಗಿ ರಾಜೀನಾಮೆ ನೀಡುವುದಾಗಿ ಬರೆದಿದ್ದ ಪತ್ರಕ್ಕೆ ನೆಹರೂ ಉತ್ತರಿಸಿದ್ದಾರೆಂದು ಕಂಠಿ ಅವರು ೧೬- ೫-೧೯೬೨ ರಂದು ಬಹಿರಂಗಪಡಿಸಿದರು, ಆದರೆ ಅವರು ಪತ್ರದ ವಿವರಗಳನ್ನು ಬಹಿರಂಗಗೊಳಿಸಲು ನಿರಾಕರಿಸಿದರು. ಹೊಸ ನಾಯಕನ ಆಯ್ಕೆಗಾಗಿ ಶಾಸಕಾಂಗ ಪಕ್ಷವು ತಿಂಗಳ ಕೊನೆಯಲ್ಲಿ ಸೇರುವುದಾಗಿ ದಿ॥ ೨೩-೫-೧೯೬೨ ರಂದು ನಿಜಲಿಂಗಪ್ಪನವರು ಪತ್ರಿಕೆಗಳಿಗೆ ತಿಳಿಸಿದರು. ಆದರೆ ಅದಕ್ಕೆ ಮುಂಚೆಯೇ ಕಂಠಿಯವರ ರಾಜೀನಾಮೆಯನ್ನು ಔಪಚಾರಿಕವಾಗಿ ಒಪ್ಪಿಕೊಳ್ಳಬೇಕಾಗಿತ್ತು. ಇದನ್ನು ಸಂಸದೀಯ ಮಂಡಳಿಯು ಸೇರುವ ೨೯-೫-೧೯೬೨ ರಂದು ಮಾತ್ರ ಮಾಡಬಹುದಾಗಿತ್ತು. ಪಕ್ಷದಲ್ಲಿನ ಗುಂಪುಗಾರಿಕೆಯ ಬಗ್ಗೆ ಪ್ರಶ್ನಿಸಿದಾಗ, ಗುಂಪುಗಳು ಸಿದ್ಧಾಂತ ಅಥವಾ ಧೋರಣೆಗಳ ಆಧಾರದ ಮೇಲಿದ್ದರೆ ಅರ್ಥಮಾಡಿಕೊಳ್ಳಬಹುದು. ಆದರೆ ಮೈಸೂರು ಕಾಂಗ್ರೆಸ್‌ನಲ್ಲಿನದು ವೈಯಕ್ತಿಕವೂ ಸ್ವಾರ್ಥಪರವಾದದ್ದೂ ಆದುದೆಂದು ನಿಜಲಿಂಗಪ್ಪನವರು ಉತ್ತರಿಸಿದರು. ಹೀಗಾಗಿ ಅಂತಹವರು ಖಂಡನಾರ್ಹರು ಎಂದರು. ಅಂತಹವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೇಂಬುದು ಅವರ ಅಪೇಕ್ಷೆಯಾಗಿತ್ತು. ಕರ್ನಾಟಕದ ಜನತೆಯ ಮನಸ್ಸಿನಲ್ಲಿ ಕೊರೆಯುತ್ತಿದ್ದ ಒಂದು ಬಹು ಮುಖ್ಯ ವಿಷಯದ ಬಗ್ಗೆ ನಿಜಲಿಂಗಪ್ಪನವರು ನೀತಿನಿರೂಪಣೆಯ ಹೇಳಿಕೆಯೊಂದನ್ನು ನೀಡಿದರು. ಅದು ಮಹಾರಾಷ್ಟ್ರದೊಂದಿಗೆ ಗೋವಾ ವಿಲೀನಗೊಳ್ಳುವ ವಿಚಾರ: ಗೋವಾ ತಮ್ಮ

ರಾಜ್ಯದ ಭಾಗವೆಂಬುದು ಮಹಾರಾಷ್ಟ್ರದವರ ವಾದ, ಅದಕ್ಕೆ ಕಾರಣ ಕೊಂಕಣಿಯು ಮರಾಠಿಯ ಒಂದು ಉಪಭಾಷೆ ಎಂಬುದು. ಆದರೆ ಈ ವಾದವನ್ನು ಪ್ರಸಿದ್ಧ ಕೊಂಕಣಿ ಭಾಷಾತಜ್ಞ ಡಾ, ಕತ್ರೆ ಪ್ರಶ್ನಿಸಿದರು. ಈ ವಿಲೀನವೇನಾದರೂ ಆದರೆ ಮಹಾರಾಷ್ಟ್ರವು ಕಾರವಾರ ಮತ್ತು ಬೆಳಗಾವಿಗಳನ್ನು ಕಬಳಿಸಬಹುದೆಂಬುದು ಕನ್ನಡಿಗರನ್ನು ಕಾಡುತ್ತಿದ್ದ ಕಳವಳ. ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುವುದಕ್ಕೆ ಮುಂಚೆಯೇ ನಿಜಲಿಂಗಪ್ಪ ನವರು ಈ ನೀತಿನಿರೂಪಣೆಯನ್ನು ಮಾಡಿ ಭೌಗೋಳಿಕ, ಐತಿಹಾಸಿಕ ಹಾಗೂ ಸಾಂಸ್ಕೃತಿಕ ಕಾರಣಗಳಿಂದ ಗೋವಾ ಕರ್ನಾಟಕದಲ್ಲಿ ಸೇರಬೇಕೆಂದು ವಾದಿಸಿದರು. ೨೮-೫-೧೯೬೨ ರಂದು ಸಂಸದೀಯ ಮಂಡಳಿಯು ನಿಜಲಿಂಗಪ್ಪನವರ ನಾಯಕತ್ವಕ್ಕೆ ಒಪ್ಪಿಗೆ ಕೊಟ್ಟಿತು. ನೂತನ ನಾಯಕನ ಆಯ್ಕೆಯು ೨೧-೬-೧೯೬೨ ರಂದು ಬೆಳಿಗ್ಗೆ ೮-೩೦ಕ್ಕೆ ರೆಸಿಡೆನ್ಸಿಯಲ್ಲಿ ನಡೆದು ನಿಜಲಿಂಗಪ್ಪನವರು ಆಯ್ಕೆಗೊಳ್ಳುವ ನಿರೀಕ್ಷೆಯಿತ್ತು. ಕಾಂಗ್ರೆಸ್‌ನ ನೂತನ ಅಧ್ಯಕ್ಷ ಸಂಜೀವಯ್ಯನವರು ನಿಜಲಿಂಗಪ್ಪನವರ ಹೆಸರನ್ನು ಕಾರ್ಯಕಾರಿ ಸಮಿತಿಯಿಂದ ಕೈಬಿಟ್ಟರು. ತಾವು ವಿಶಾಲ ನೆಲೆಯ ೧೪ ಅಥವಾ ೧೫ ಮಂದಿಯ ಸಂಪುಟವನ್ನು ರಚಿಸುವುದಾಗಿಯೂ, ಅದರಲ್ಲಿ ಕಂಠಿ ಸಂಪುಟದ ಎಲ್ಲರನ್ನೂ ಉಳಿಸಿಕೊಳ್ಳುವುದಾಗಿಯೂ ನಿಜಲಿಂಗಪ್ಪನವರು ೧೭-೬-೧೯೬೨ ರಂದು ಹೇಳಿದರು. ಇದನ್ನು ಸ್ವಾಗತಿಸಿ ಸರ್ವಾನುಮತದಿಂದ ನಾಯಕನ ಆಯ್ಕೆ ನಡೆಯಲು ತಮ್ಮ ಬಣವು ಸಂಪೂರ್ಣವಾಗಿ ಸಹಕರಿಸುವುದೆಂದು ಜತ್ತಿ ಹೇಳಿಕೆಯಿತ್ತರು. ಆಯ್ಕೆಗೆ ಪೂರ್ವಭಾವಿಯಾಗಿ ಕಂಠಿಯವರ ಸರ್ಕಾರವು ೧೧೨ ದಿನಗಳ ಅಧಿಕಾರಾವಧಿಯ ಬಳಿಕ ೨೦-೫-೧೯೬೨ ರಂದು ರಾಜೀನಾಮೆ ಸಲ್ಲಿಸಿತು. ನಾಯಕನ ಸರ್ವಾನುಮತದ ಆಯ್ಕೆಗೆ ಬೆಂಬಲಿಸುವ ಜತ್ತಿಯವರ ನಿಲವನ್ನು ಕಂಠಿ ಸ್ವಾಗತಿಸಿದರು. ೨೧-೬-೧೯೬೨ ರಂದು ನಿಜಲಿಂಗಪ್ಪನವರು ಆಡಳಿತ ಪಕ್ಷದ ನಾಯಕರಾಗಿ ಸರ್ವಾನುಮತದಿಂದ ಆಯ್ಕೆಗೊಂಡರು. ಅವತ್ತೇ ಬೆಳಿಗ್ಗೆ ೧೧-೨೨ಕ್ಕೆ ರಾಜ್ಯಪಾಲ ಮಂಗಳದಾಸ ಪಕ್ವಾಸ ಅವರಿಂದ ಸಂಪುಟವು ಪ್ರಮಾಣ ವಚನ ಸ್ವೀಕರಿಸಿತು. ಕಂಠಿಯ ಸಂಪುಟದಲ್ಲಿದ್ದ ಎಲ್ಲ ಮಂತ್ರಿಗಳೂ – ಎಂ.ವಿ. ಕೃಷ್ಣಪ್ಪ, ಎಂ.ವಿ. ರಾಮರಾವ್, ಆರ್.ಎಂ. ಪಾಟೀಲ್, ಯಶೋದರಾ ದಾಸಪ್ಪ, ಕೆ. ಮಲ್ಲಪ್ಪ, ಡಾ. ನಾಗಪ್ಪ ಆಳ್ವ, ವೀರೇಂದ್ರ ಪಾಟೀಲ್ ಮತ್ತು ಬಿ. ರಾಚಯ್ಯ– ನಿಜಲಿಂಗಪ್ಪನವರೊಡನೆ ಪ್ರಮಾಣ ವಚನ ಸ್ವೀಕರಿಸಿದರು. ಇನ್ನೊಂದು ವಾರದೊಳಗೆ ಸಂಪುಟ ರಚನೆಯನ್ನು ಪೂರ್ಣಗೊಳಿಸುವುದಾಗಿ ನಿಜಲಿಂಗಪ್ಪ ನವರು ಪ್ರಕಟಿಸಿದರು. ಮೊದಲಿನಂತೆಯೇ, ರಾಜ್ಯದ ಕೃಷಿ ಮತ್ತು ಕೈಗಾರಿಕಾಭಿವೃದ್ಧಿಗೂ ಇವೆರಡಕ್ಕೂ ಬೇಕಾದ ವಿದ್ಯುತ್ ಅಭಿವೃದ್ಧಿಗೂ ನಿಜಲಿಂಗಪ್ಪನವರು ಆದ್ಯತೆ ನೀಡಿದರು. ೨೩-೬-೧೯೬೨ ರಂದು ದಾವಣಗೆರೆಯಲ್ಲಿ ನಡೆದ ಅಖಿಲ ಮೈಸೂರು ವರ್ತಕರು

ಮತ್ತು ವ್ಯಾಪಾರಿಗಳ ಸಮ್ಮೇಳನದಲ್ಲಿ ಮಾತನಾಡುತ್ತ, ವರ್ತಕರು ಮತ್ತು ವ್ಯಾಪಾರಿಗಳು ಹೊಸ ಕೈಗಾರಿಕೆಗಳ ಸ್ಥಾಪನೆಗೆ ಮುಂದಾಗಬೇಕೆಂದೂ, ಹಾಗೆ ಬಂದರೆ ಅವರಿಗೆ ಸರ್ಕಾರದಿಂದ ಸಾಕಷ್ಟು ಪ್ರಮಾಣದ ನೆರವು ನೀಡುವುದಾಗಿಯೂ ಅವರು ಭರವಸೆ ಯಿತ್ತರು. ಭಾರತ ತೈಲ ಕಂಪೆನಿಯ ಅಧ್ಯಕ್ಷರಾಗಿ ಮುಂದುವರೆದಿದ್ದ ನಿಜಲಿಂಗಪ್ಪನವರು ೨೫-೬-೧೯೬೨ ರಂದು ಬೆಂಗಳೂರಿನಲ್ಲಿ ನಡೆದ ಅದರ ಆಡಳಿತ ಮಂಡಳಿಯ ಅಧ್ಯಕತೆ ವಹಿಸಿ ಮಾತನಾಡಿ, ಮಂಗಳೂರಿನಂತಹ ರಾಜ್ಯದ ಸ್ಥಳಗಳಲ್ಲಿ ತೈಲ ಶುದ್ಧಿಕರಣ ಘಟಕಗಳನ್ನು ಸ್ಥಾಪಿಸಲು ಕೇಳಿಕೊಂಡರು. ಆದರೆ ಮುಖ್ಯಮಂತ್ರಿಯಾಗಿ ಅವರು ಅಭಿವೃದ್ಧಿ ಕಾರ್ಯಗಳಿಗಿಂತ ಹೆಚ್ಚು ಮುಖ್ಯವಾದ ಸಮಸ್ಯೆಗಳನ್ನು ಬಗೆಹರಿಸಬೇಕಾಗಿತ್ತು, ಸಂಪುಟ ರಚನೆಯನ್ನಿನ್ನೂ ಪೂರ್ತಿಗೊಳಿಸಬೇಕಾಗಿತ್ತು. ಕೇಂದ್ರ ನಾಯಕರ ಜೊತೆ ಚರ್ಚಿಸಿದ ಬಳಿಕ, ತಾವು ಸಾಮರಸ್ಯದಿಂದ ಕೂಡಿದ ಪಟ್ಟಿಯನ್ನು ತಯಾರಿಸುವುದಾಗಿ ೨೭-೬-೧೯೬೨ ರಂದು ಪತ್ರಿಕೆಗಳಿಗೆ ತಿಳಿಸಿದರು. ಕಾಂಗ್ರೆಸ್‌ನಲ್ಲಿ ಭಿನ್ನಮತೀಯ ಗುಂಪುಗಳಿಲ್ಲವೆಂದೂ ಕೆಲವು ವ್ಯಕ್ತಿಗಳು ಮಾತ್ರ ಇರುವರೆಂದೂ ಅವರು ಸ್ಪಷ್ಟಪಡಿಸಿದರು. ಸಾಕಷ್ಟು ವಿರೋಧವಿದ್ದುದರಿಂದ ಕಡಿದಾಳ್ ಮಂಜಪ್ಪ ಮತ್ತು ಜತ್ತಿ ಅವರನ್ನು ಸಂಪುಟದಲ್ಲಿ ಸೇರಿಸಿಕೊಳ್ಳುವುದಿಲ್ಲವೆಂಬ ವದಂತಿಯಿತ್ತು. ಸಂಪುಟ ರಚನೆಯನ್ನು ಕುರಿತು ಚರ್ಚಿಸಲು ೨೮-೬-೧೯೬೨ ರಂದು ನೆಹರೂ ಅವರನ್ನು ಭೇಟಿಮಾಡಿದರು. ಅವರ ಮನಸ್ಸಿನಲ್ಲಿದ್ದುದು ಈಗಿರುವ ಹತ್ತು ಮಂದಿ ಸಚಿವರೊಂದಿಗೆ ಹಳೇ ಮೈಸೂರಿ ನಿಂದ ಇಬ್ಬರು ಹಾಗೂ ಉಳಿದ ಭಾಗಗಳಿಂದ ಇಬ್ಬರನ್ನು ಸೇರಿಸಿಕೊಳ್ಳುವ ಆಲೋಚನೆ ಎಂದು ಹೇಳಲಾಗುತ್ತಿತ್ತು. ಆಗಾಗ ಕೇಳಿ ಬರುತ್ತಿದ್ದ ಹೆಸರುಗಳೆಂದರೆ ದೇವರಾಜ ಅರಸು, ನಾರಾಯಣ ಗೌಡ, ರಾಮಕೃಷ್ಣ ಹೆಗಡೆ ಮತ್ತು ಎಂ.ಆರ್. ಪಾಟೀಲ್ ಅವರುಗಳದು. ಜತ್ತಿ ಅವರನ್ನು ಪರಿಗಣಿಸಿರಲಿಲ್ಲ, ಆದರೆ ಅವರನ್ನು ಸೇರಿಸಿಕೊಳ್ಳಬೇಕೆಂದು ವರಿಷ್ಠ ಮಂಡಳಿಯು ಒತ್ತಾಯ ಹಾಕುತ್ತಿತ್ತು. ನಿಜಲಿಂಗಪ್ಪನವರು ೩೦-೬-೧೯೬೨ ರಂದು ತಮ್ಮ ಸಂಪುಟದಲ್ಲಿ ಬಿ.ಡಿ. ಜತ್ತಿ, ದೇವರಾಜ ಅರಸು, ಜಿ. ನಾರಾಯಣ ಗೌಡ, ರಾಮಕೃಷ್ಣ ಹೆಗಡೆ ಮತ್ತು ಕೆ. ಪುಟ್ಟಸ್ವಾಮಿ ಅವರುಗಳನ್ನು ಸೇರಿಸಿಕೊಂಡರು. ನಾಲ್ವರ ಬದಲು ಐವರನ್ನು ಸಂಪುಟಕ್ಕೆ ಹೆಚ್ಚಾಗಿ ಸೇರಿಸಿಕೊಳ್ಳಲಾಯಿತು. ಎಂಟು ಮಂದಿ ಉಪಸಚಿವರನ್ನಾಗಿ ಗ್ರೇಸ್ ಟಕ್ಕರ್, ಜೆ.ಎಚ್. ಶಂಸುದ್ದೀನ್, ವೈ. ರಾಮಚಂದ್ರ, ಕೆ. ಪ್ರಭಾಕರ್, ಮಲ್ಲಿಕಾರ್ಜುನಸ್ವಾಮಿ, ಕೊಂಡಜ್ಜ ಬಸಪ್ಪ, ಆಲೂರು ಹನುಮಂತಪ್ಪ, ಮತ್ತು ದಯಾನಂದ ಸಾಗರ್ ಅವರುಗಳನ್ನು ಸೇರಿಸಿಕೊಳ್ಳುವುದರ ಮೂಲಕ ೨-೭-೧೯೬೨ ರಂದು ಸಂಪುಟವನ್ನು ಮತ್ತಷ್ಟು ವಿಸ್ತರಿಸಲಾಯಿತು. ಮಾಡಿದ ಹೊಸ ಆವಿಷ್ಕಾರವೆಂದರೆ ಜಿ.ಬಿ. ಶಂಕರರಾವ್ ಮತ್ತು ಎಚ್.ಎಸ್. ಬೋರಯ್ಯ ಅವರನ್ನು ಸಂಸದೀಯ ಕಾರ್ಯದರ್ಶಿಗಳನ್ನಾಗಿ ನೇಮಿಸಿಕೊಂಡಿದ್ದು. ಬಹು ಮುಖ್ಯ

ವಾದ ಹಣಕಾಸು ಖಾತೆಯನ್ನು ಜತ್ತಿ ಅವರಿಗೆ ನೀಡಲಾಯಿತು. ಈ ರೀತಿ ಎರಡು ಬಣಗಳ ನಡುವೆ ಶಾಂತಿಸ್ಥಾಪನೆ ನಡೆದಂತೆ ಕಾಣುತ್ತಿತ್ತು.

ಎಲ್ಲ ಕಡೆಯೂ ಅದರಲ್ಲೂ ಅಭಿವೃದ್ಧಿಶೀಲ ದೇಶಗಳಲ್ಲಿ ಸರ್ಕಾರಗಳು ಎದುರಿಸುವ ಪ್ರಮುಖ ಸಮಸ್ಯೆಯೆಂದರೆ ಹಣಕಾಸು ಮುಗ್ಗಟ್ಟು, ಭಾರತದಲ್ಲಾದರೋ ರಾಜ್ಯ ಸರ್ಕಾರಗಳು ತಮ್ಮ ಯೋಜನೆಗಳನ್ನು ಕಾರ್ಯಗತಗೊಳಿಸಲು ಬಹುವಾಗಿ ಕೇಂದ್ರ ಸರ್ಕಾರದ ಆರ್ಥಿಕ ನೆರವನ್ನೇ ಆಶ್ರಯಿಸಬೇಕು. ಅಭಿವೃದ್ಧಿ ಕಾರ್ಯಗಳನ್ನು ನಡೆಸಲು ಹಣಕಾಸು ಸಂಗ್ರಹಕ್ಕೆ ಸಾರ್ವಜನಿಕ ಎರವಲನ್ನೇ ಆಶ್ರಯಿಸಬೇಕು. ನಿಜಲಿಂಗಪ್ಪನವರು ೪-೭-೧೯೬೨ ರಂದು ವಿಧಾನಸಭೆಯಲ್ಲಿ ಹೇಳಿಕೆಯೊಂದನ್ನು ನೀಡಿ, ಸರ್ಕಾರವು ಏಳು ಕೋಟಿ ರೂಪಾಯಿಗಳನ್ನು ಸಾರ್ವಜನಿಕ ಎರವಲಿನ ಮೂಲಕವಾಗಿಯೂ ಹದಿಮೂರು ಕೋಟಿಗಳನ್ನು ಸರ್ಕಾರೀ ಉದ್ದಿಮೆಗಳಿಂದಲೂ ಸಂಗ್ರಹಿಸುವುದಾಗಿ ಹೇಳಿದರು. ಸಂಸದೀಯ ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷಗಳು ವಿರೋಧಿಸುವ ಮೂಲಕ ಆಡಳಿತ ಪಕ್ಷವನ್ನು ತುದಿಗಾಲ ಮೇಲೆ ನಿಲ್ಲಿಸುವುದು ವಾಡಿಕೆ, ಆದರೆ ಭಾರತದಲ್ಲಿ ಇದರ ಜೊತೆಗೆ ಆಡಳಿತ ಪಕ್ಷ ಆಂತರಿಕ ಭಿನ್ನಮತೀಯರ ದಾಳಿಯನ್ನೂ ಎದುರಿಸಬೇಕು! ಮತ್ತೊಂದು ಪ್ರಮುಖ ನೀತಿಧೋರಣೆ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ನೀಡಬೇಕಾದ ಉತ್ತೇಜನ. ಏಕೀಕರಣ ಚಳವಳಿಯೇ ಭಾಷಿಕ ಸಂಸ್ಕೃತಿಯ ನೆಲಗಟ್ಟಿನ ಮೇಲೆ ನಡೆದು ಭಾಷಾವಾರು ಪ್ರಾಂತರಚನೆಗೆ ಕಾರಣವಾದ್ದರಿಂದ ಇದು ಸರ್ಕಾರದ ಮೇಲಿದ್ದ ವಿಶಿಷ್ಟ ಬದ್ಧತೆ. ಅದನ್ನು ಯಾರಾದರೂ ನೆರವೇರಿಸಬೇಕಾಗಿದ್ದರೆ ನಿಜಲಿಂಗಪ್ಪನವರೇ ಆಗಬೇಕು! ತಮ್ಮ ಸರ್ಕಾರವು ಕನ್ನಡ ಭಾಷೆಯ ಉನ್ನತಿಗಾಗಿ ಹೆಣಗುವುದೆಂದೂ, ಕನ್ನಡ ಭಾಷೆಯ ಹೆಸರಿನಲ್ಲಿ ಜನರು ಹೋರಾಟ ನಡೆಸಬಾರದೆಂದೂ ಅವರು ೨೧-೭-೧೯೬೨ ರಂದು ಹೇಳಿಕೆಯಿತ್ತರು. ಈ ಸಮಯದಲ್ಲಿ ನಿಜಲಿಂಗಪ್ಪ ಸರ್ಕಾರವು ಎದುರಿಸಿದ ಒಂದು ಪ್ರಮುಖ ಸಮಸ್ಯೆಯೆಂದರೆ ಆಹಾರದ ಕೊರತೆ ಮತ್ತು ರಾಜ್ಯದ ಹಲವಾರು ಪ್ರದೇಶಗಳು ಎದುರಿಸುತ್ತಿದ್ದ ಬರಪರಿಸ್ಥಿತಿ. ರಾಜ್ಯದ ಬರಪರಿಸ್ಥಿತಿಯನ್ನು ಎದುರಿಸಲು ಸರ್ಕಾರವು ವ್ಯಾಪಕ ಯೋಜನೆಯೊಂದನ್ನು ಸಿದ್ಧಪಡಿಸುವುದಾಗಿ ೩೧-೮-೧೯೬೨ ರಂದು ನಿಜಲಿಂಗಪ್ಪನವರು ಪ್ರಕಟಿಸಿದರು. ಇದರಲ್ಲಿ ನೀರಾವರಿ ಮತ್ತು ಕೃಷಿ ಯೋಜನೆಗಳಿಗೆ ಆದ್ಯತೆ ನೀಡಿ ಆಹಾರೋತ್ಪಾದನೆಯನ್ನು ಹೆಚ್ಚಿಸುವುದೂ ಸೇರಿತ್ತು ಎಂದು ಬೇರೆ ಹೇಳಬೇಕಾಗಿಲ್ಲ. ಕೃಷಿ ಸಚಿವ ನಾರಾಯಣ ಗೌಡರು ೧-೯-೧೯೬೨ ರಂದು ಪತ್ರಿಕೆಗಳವರಿಗೆ ಹೇಳಿಕೆ ನೀಡುತ್ತಾ ಪ್ರತಿ ವರ್ಷ ಹತ್ತು ಸಾವಿರ ನೀರಾವರಿ ಬಾವಿಗಳನ್ನು ತೋಡುವ ಮೂಲಕ ಬರಪರಿಹಾರ ಕಾರ್ಯ ಕೈಗೊಳ್ಳುವುದಾಗಿ ಹೇಳಿದರು.

ಪಂಡಿತ್ ಜವಾಹರ್‌ಲಾಲ್ ನೆಹರು, ರಾಜ್ಯಪಾಲ ಶ್ರೀ ಪಕ್ವಾಸ್ ಮತ್ತು ಶ್ರೀ ಕೃಷ್ಣ ಅಯ್ಯರ್ ಮತ್ತಿತರರೊಡನೆ ಎಸ್ಸೆನ್

ಮುಖ್ಯಮಂತ್ರಿಯಾಗಿರುವುದರ ಜೊತೆಯಲ್ಲಿಯೇ ಎಂಪಿಸಿಸಿ ಅಧ್ಯಕ್ಷರಾಗಿಯೂ ಇದ್ದ ನಿಜಲಿಂಗಪ್ಪನವರು ಅಧ್ಯಕ್ಷ ಸ್ಥಾನಕ್ಕೆ ಚಿತ್ರದುರ್ಗದಲ್ಲಿ ನಡೆದ ಎಂಪಿಸಿ ಸಭೆಯಲ್ಲಿ ರಾಜೀನಾಮೆ ನೀಡಿದರು. ಕಾರ್ಯದರ್ಶಿಗಳಾಗಿದ್ದ ನಾಗಪ್ಪ ಆಳ್ವ ಮತ್ತು ರಾಮಕೃಷ್ಣ ಹೆಗಡೆಯವರುಗಳು ಸಚಿವರಾದುದರಿಂದ ತಮ್ಮ ಕಾರ್ಯದರ್ಶಿ ಸ್ಥಾನಗಳನ್ನು ಅವರೂ ತೆರವುಗೊಳಿಸಿದರು. ನಿಜಲಿಂಗಪ್ಪನವರ ಉತ್ತರಾಧಿಕಾರಿಯಾಗಿ ಮಹಮದ್ ಆಲಿ ಯವರು ಸರ್ವಾನುಮತದಿಂದ ಮುಂದಿನ ಡಿಸೆಂಬರ್‌ನಲ್ಲಿ ನಡೆಯಲಿರುವ ಪಕ್ಷದ ಚುನಾವಣೆಗಳವರೆಗೆ ತಾತ್ಕಾಲಿಕವಾಗಿ ಚುನಾಯಿತರಾದರು. ನಿಜಲಿಂಗಪ್ಪನವರು ಮುಖ್ಯ ಮಂತ್ರಿಯಾಗಿರುವವರೆಗೂ ತಮ್ಮ ಪ್ರಿಯ ಯೋಜನೆಯಾಗಿದ್ದ ಶರಾವತಿ ಜಲವಿದ್ಯುತ್ ಯೋಜನೆಯ ಬಗ್ಗೆ ಟೀಕೆಗಳನ್ನು ಎದುರಿಸಬೇಕಾಯಿತು. ಈ ಬಗ್ಗೆ ಸದನದಲ್ಲಿ ಪ್ರಸ್ತಾಪ ವಾದಾಗ, ಟೆಂಡರ್‌ಗೆ ಸಂಬಂಧಿಸಿದಂತೆ ಇಬ್ಬರು ಗುತ್ತಿಗೆದಾರರಿಗೆ ಐವತ್ತು ಲಕ್ಷ ರೂಪಾಯಿಗಳಷ್ಟು ಹೆಚ್ಚು ಹಣ ಸಂದಾಯವಾಗಿದೆ ಎಂಬುದನ್ನು ಒಪ್ಪಿಕೊಂಡರು. ಈ ಘಟನೆಯ ಬಗ್ಗೆ ಎಲ್ಲ ಬಗೆಯ ವದಂತಿಗಳು ಹಬ್ಬಿರುವುದರಿಂದಾಗಿ ಈ ಕುರಿತು ತನಿಖೆ ನಡೆಸಲು ಒಂದು ಮುಕ್ತ ಸಮಿತಿಯನ್ನು ರಚಿಸಬೇಕೆಂದೂ ವಿರೋಧಪಕ್ಷದ ನಾಯಕ ಶಿವಪ್ಪನವರು ಸರ್ಕಾರವನ್ನು ಒತ್ತಾಯಿಸಿದರು. ಈಗಲೂ ಸಮಿತಿಯ ಆವಶ್ಯಕತೆ ಯಿಲ್ಲವೆಂದೂ, ದೂರುಗಳಿದ್ದರೆ ತಮ್ಮ ಬಳಿ ಬಂದು ಬಗೆಹರಿಸಿಕೊಳ್ಳಬಹುದೆಂದೂ ನಿಜಲಿಂಗಪ್ಪನವರು ಹಿಂದೆ ಅನೇಕ ಬಾರಿ ಹೇಳಿದ್ದಂತೆಯೇ ಹೇಳಿಕೆಯಿತ್ತರು. ವಿವಾದ ವೇರ್ಪಟ್ಟ ಸಂದರ್ಭದಲ್ಲಿ ಮಧ್ಯಸ್ಥಿಕೆ ಸಮಿತಿಯೊಂದರ ರಚನೆಗೆ ಒಪ್ಪಂದಲ್ಲಿಯೇ ಅವಕಾಶವಿರುವುದಾಗಿ ವಿವರಿಸಿದರು. ಈ ಅವಕಾಶವೇ ಹೆಚ್ಚು ಹಣ ಸಂದಾಯವಾಗಿ ರಲು ಕಾರಣ ಎಂದೂ ಸ್ಪಷ್ಟಪಡಿಸಿದರು. ಮುಂದಿನ ಒಪ್ಪಂದಗಳಲ್ಲಿ ಈ ಅವಕಾಶವನ್ನು ರದ್ದುಪಡಿಸಲು ಸರ್ಕಾರ ಈಗ ತೀರ್ಮಾನಿಸಿರುವುದಾಗಿ ಪ್ರಕಟಿಸಿದರು. ಆದರೆ ಈ ವಿವರಣೆಯಿಂದ ವಿರೋಧಪಕ್ಷದವರು ತೃಪ್ತರಾಗಲಿಲ್ಲ.

ಸಾರ್ವಜನಿಕ ಅತೃಪ್ತಿಯು ಹರತಾಳ, ಬಂದ್, ಸತ್ಯಾಗ್ರಹ ಮತ್ತು ಮುಷ್ಕರಗಳಂತಹ ಸ್ವರೂಪದಲ್ಲಿ ಅಭಿವ್ಯಕ್ತಗೊಂಡಾಗ ಅವನ್ನೆಲ್ಲ ಎದುರಿಸುವುದು ಮುಖ್ಯಮಂತ್ರಿಯ ಕರ್ತವ್ಯದ ಒಂದು ಭಾಗವೇ ಆಗಿರುತ್ತದೆ. ಅದು ಪ್ರಜಾಸತ್ತಾತ್ಮಕ ಬದುಕಿಗೆ ವಿಶಿಷ್ಟ ಕಂಪನ್ನು ನೀಡುವ ಅವಿಭಾಜ್ಯ ಅಂಗ. ಇದಕ್ಕೆ ನಿಜಲಿಂಗಪ್ಪನವರ ಸರ್ಕಾರವೂ ಹೊರ ತಲ್ಲ, ಸಾರ್ವಜನಿಕ ಅತೃಪ್ತಿ ಈ ಬಗೆಯಲ್ಲಿ ಭುಗಿಲೇಳುವುದನ್ನು ಅವರ ಸರ್ಕಾರವೂ ನಿಭಾಯಿಸಬೇಕಾಯಿತು. ಹಾಗೆ ಮಾಡಲು ಅದಕ್ಕೆ ಸಾಧ್ಯವಾಯಿತು ಕೂಡ, ಹಾಗಾದುದು ಸಾರ್ವಜನಿಕ ಒತ್ತಡಗಳಿಗೆ ಅನುಗುಣವಾಗಿ ಸರ್ಕಾರದ ಧೋರಣೆಯನ್ನು ಹೊಂದಿಸಿ ಕೊಳ್ಳುವುದರ ಮೂಲಕ. ಹುಬ್ಬಳ್ಳಿಯಲ್ಲಿ ೧೭–೯–೧೯೬೨ ರಂದು ನಡೆದ ವರ್ತಕರ

ಹಾಗೂ ವ್ಯಾಪಾರಿಗಳ ಒಂದು ಸಭೆಯಲ್ಲಿ ಪದಾರ್ಥಗಳ, ಅದೂ ಆಹಾರ ಪದಾರ್ಥಗಳ ಮೇಲಿನ ತೆರಿಗೆಯನ್ನು ಹೆಚ್ಚು ಮಾಡದಿರಲು ಸರ್ಕಾರವನ್ನು ಒತ್ತಾಯಿಸಿದಾಗ ಇಂಥ ದೊಂದು ಪ್ರಸಂಗ ಉದ್ಭವಿಸಿತು. ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯು ೧೭-೯-೧೯೬೨ ರಂದು ಹುಬ್ಬಳ್ಳಿಯಲ್ಲಿ ಹರತಾಳವನ್ನು ಆಚರಿಸಿತು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷವು ಕೂಡ ಇಂಥ ಸನ್ನಿವೇಶಗಳಿಗಾಗಿ ಕಾಯುತ್ತಲೇ ಇರುತ್ತದೆ. ಇದರ ಆತ್ಯಂತಿಕ ಕ್ರಮವೆಂದರೆ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯದ ಮಂಡನೆ. ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಶಿವಪ್ಪನವರು ೨೦-೭-೧೯೬೨ ರಂದು ನಿಜಲಿಂಗಪ್ಪ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸಿದರು. ನಿರ್ಣಯಕ್ಕೆ ತಾಂತ್ರಿಕವಾಗಿ ಬೇಕಾಗಿದ್ದ ಮೂವತ್ತು ಮಂದಿ ಸದಸ್ಯರ ಬೆಂಬಲವಿದ್ದುದ ರಿಂದ ಸಭಾಧ್ಯಕ್ಷರು ನಿರ್ಣಯ ಮಂಡನೆಗೆ ಅವಕಾಶ ಮಾಡಿಕೊಟ್ಟರು. ಸರ್ಕಾರವು ಟೀಕೆಗೆ ಗುರಿಯಾಗಲು ಕಾರಣಗಳೆಂದರೆ: ೧) ಶರಾವತಿ ಯೋಜನೆಯಲ್ಲಿ ನಡೆದಿದೆಯೆನ್ನ ಲಾದ ಅವ್ಯವಹಾರ ಮತ್ತು ಭ್ರಷ್ಟಾಚಾರ; ೨) ಕಾಲೇಜು ಶುಲ್ಕವನ್ನು ಅತಿಯಾಗಿ ಹೆಚ್ಚಿ ಸಿದ್ದರಿಂದಾಗಿ ವಿದ್ಯಾರ್ಥಿಗಳು ಅನುಭವಿಸುವ ಕಷ್ಟ; ೩) ಅರ್ಹತೆಯಲ್ಲದ ಪಕ್ಷಪಾತದಿಂದ ಕೂಡಿದ ಮೂವರು ಮಂತ್ರಿಗಳ ಸಂವಿಧಾನಬಾಹಿರ ಸೇರ್ಪಡೆ; ೪) ಭೂಸುಧಾರಣೆ ಗಳನ್ನು ಜಾರಿಗೊಳಿಸುವಲ್ಲಿನ ವೈಫಲ್ಯ; ಮತ್ತು ೫) ದಿನಬಳಕೆ ವಸ್ತುಗಳ ಬೆಲೆ ಏರಿಕೆ. ಪಾನನಿಷೇಧ ಧೋರಣೆಯ ಪರಾಮರ್ಶೆ ನಡೆಯುವಾಗ ಮುಖ್ಯಮಂತ್ರಿಗಳು ೨೭-೯-೧೯೬೨ ರಂದು ಪಾನನಿಷೇಧದ ಬಗ್ಗೆ ಸರ್ಕಾರದ ವ್ಯತ್ಯಸ್ತ ಧೋರಣೆಯ ಬಗ್ಗೆ ಸುಳಿವು ನೀಡಿದರು. ಈಚೆಗೆ ತಾವು ಮುಂಬಯಿಯಲ್ಲಿ ಒಂದು ಸರಳ ವಿವರಣೆ ಯನ್ನು ನೀಡಿರುವುದಾಗಿಯೂ ಅವರು ತಿಳಿಸಿದರು. ಅವಿಶ್ವಾಸ ನಿರ್ಣಯದ ಬಗ್ಗೆ ಚರ್ಚೆ ನಡೆಯುವ ಸಂದರ್ಭದಲ್ಲಿ ನಿಜಲಿಂಗಪ್ಪನವರು ಭಾಗವಹಿಸಿ ಮಾತನಾಡುತ್ತ, ಶರಾವತಿ ಯೋಜನೆಯ ಅನುಷ್ಠಾನದಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ ಎಂದು ಒತ್ತಿ ಹೇಳಿದರು. ತಾವೇ ಖುದ್ದಾಗಿ ಈ ವಿಷಯದಲ್ಲಿ ನಿಗಾ ವಹಿಸಿರುವುದರಿಂದ ನ್ಯಾಯಾಂಗ ತನಿಖೆಯ ಆವಶ್ಯಕತೆಯಿಲ್ಲವೆಂದು ನುಡಿದರು. ರಚನಾತ್ಮಕ ಟೀಕೆಗಳಿಗೆ ಸ್ವಾಗತವಿದ್ದರೂ, ಬೇಜವಾಬ್ದಾರಿ ಆರೋಪಗಳಿಗೆ ಅವಕಾಶವಿಲ್ಲವೆಂದರು. ದೇಶದಲ್ಲಿಯೇ ಅತ್ಯಂತ ದೊಡ್ಡ ಜಲವಿದ್ಯುತ್ ಯೋಜನೆಯಾದ ಶರಾವತಿಯ ಕೆಲಸವನ್ನು ಪರಾಮರ್ಶಿ ಸಲು ಯೋಜನಾ ಆಯೋಗದ ಒಂದು ತಜ್ಞ ತಂಡವು ಬರಲಿದೆ ಎಂಬ ವಿಷಯವನ್ನು ಕೇಂದ್ರ ನೀರಾವರಿ ಸಚಿವರಾದ ನಂದಾ ಅವರು ತಮಗೆ ಪತ್ರ ಮುಖೇನ ತಿಳಿಸಿರುವು ರೆಂದು ನಿಜಲಿಂಗಪ್ಪನವರು ೫-೧೦-೧೯೬೨ ರಂದು ಬಹಿರಂಗಪಡಿಸಿದರು. ಈಚೆಗೆ ಅಲ್ಲಿನ ಕೆಲಸ ಕುಂಠಿತಗೊಂಡಿದೆಯೆಂಬ ಹಾಗೂ ಅದರ ವಿರುದ್ಧ ಬಂದ ಟೀಕೆಗಳ

ಹಿನ್ನೆಲೆಯಲ್ಲಿ ಈ ತಂಡವನ್ನು ರಚಿಸಲಾಗಿತ್ತು. ಸರ್ಕಾರವು ಇದನ್ನು ಸ್ವಾಗತಿಸಿದಂತೆ ಕಂಡಿತು. ಈ ಮಧ್ಯೆ ನಿಜಲಿಂಗಪ್ಪನವರು ಶಿವಮೊಗ್ಗ ಜಿಲ್ಲೆಯ ಪ್ರವಾಸ ಕೈಗೊಂಡು ಶರಾವತಿಯ ಕೆಲಸವನ್ನು ಪರಿವೀಕ್ಷಿಸುವ ನಿರ್ಧಾರ ಮಾಡಿದರು. ಯೋಜನಾ ಆಯೋಗದ ತಂಡವು ೧೦-೧೦-೧೯೬೨ ರಂದು ಬೆಂಗಳೂರಿನಿಂದ ಶರಾವತಿ ಯೋಜನೆಯ ಸ್ಥಳಕ್ಕೆ ಹೊರಟಿತು. ರಾಜ್ಯ ನೀರಾವರಿ ಉಪಸಚಿವ ಜೆ.ಎಚ್. ಶಂಸುದ್ದೀನ್ ಅವರು ಹೇಳಿಕೆನೀಡಿ ಯೋಜನೆಯಿಂದ ನಿರಾಶ್ರಿತರಾದವರ ಪುನರ್ವಸತಿಗೆ ಮೂರು ಕೋಟಿ ರೂಪಾಯಿಗಳ ಆವಶ್ಯಕತೆಯಿದೆ ಎಂದು ಹೇಳಿದರು.

ನಾವಿಲ್ಲಿ ಗಮನಿಸಬೇಕಾದುದೆಂದರೆ, ಇದೇ ಸಮಯದಲ್ಲಿಯೇ ಚೀನೀ ಆಕ್ರಮಣ ದಿಂದಾಗಿ ಭಾರತದ ರಾಷ್ಟ್ರೀಯ ಸಮಗ್ರತೆ ಮತ್ತು ಆತ್ಮಗೌರಗಳಿಗೆ ಧಕ್ಕೆಯೊದಗುವ ಸಂದರ್ಭ ಉಂಟಾದುದು. ಚೀನೀಯರು ತಾವಾಗಿಯೇ ಇದ್ದಕ್ಕಿದ್ದಂತೆಯೇ ವಿವರಣೆ ನೀಡದೆ ಯುದ್ಧವನ್ನು ನಿಲ್ಲಿಸಿದರು. ಹೀಗಾಗಿ, ರಕ್ಷಣಾ ನಿಧಿಗೆ ದೇಣಿಗೆಯನ್ನು ಸಂಗ್ರ ಹಿಸುವ ಕಾಳಜಿಯನ್ನು ರಾಜ್ಯ ಸರ್ಕಾರ ತೋರಿಸಿತು. ೧೦-೧೨-೧೯೬೨ ರಂದು ನಿಜಲಿಂಗಪ್ಪನವರಿಗೆ ೬೦ ವರ್ಷಗಳು ತುಂಬಿದ ಸಂದರ್ಭ, ಆದರೆ ಅದರ ಅದ್ದೂರಿ ಆಚರಣೆಗೆ ಅವರು ಅವಕಾಶ ನೀಡಲಿಲ್ಲ. ಇದಕ್ಕೆ ಮುಖ್ಯ ಕಾರಣ ಚೀನೀ ಆಕ್ರಮಣದಿಂದ ದೇಶದಲ್ಲಿ ಉಂಟಾಗಿದ್ದ ತುರ್ತು ಪರಿಸ್ಥಿತಿ. ೧೬-೧೨-೧೯೬೨ ರಂದು ಬೆಂಗಳೂರಿನಲ್ಲಿ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡುತ್ತ, ಈ ತುರ್ತು ಪರಿಸ್ಥಿತಿಯಲ್ಲಿ ಸರ್ಕಾರವನ್ನು ದುರ್ಬಲಗೊಳಿಸುವ ಯಾವುದೇ ಪ್ರಯತ್ನವನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕುವುದಾಗಿಯೂ, ನೆಹರೂ ಅವರ ನಾಯಕತ್ವದಲ್ಲಿ ಸಂಪೂರ್ಣ ಭರವಸೆ ಇಡಬೇಕೆಂದೂ ನಿಜಲಿಂಗಪ್ಪ ನವರು ಹೇಳಿದರು. ರಾಜ್ಯದ ಆಂತರಿಕ ಸಮಸ್ಯೆಗಳ ಬಗ್ಗೆ ಮಾತನಾಡುತ್ತ ನಿಜಲಿಂಗಪ್ಪ ನವರು ಆವಶ್ಯಕ ಪ್ರಮಾಣದ ವಿದ್ಯುತ್‌ನಂತಹ ಇಂಧನ ಉತ್ಪಾದನೆಯ ಬಗ್ಗೆ ಸರ್ಕಾರದ ಕಾಳಜಿಯನ್ನು ವಿವರಿಸಿದರು. ರಾಜ್ಯ ಅಭಿವೃದ್ಧಿ ಮಂಡಳಿಯಲ್ಲಿ ೧೨-೨-೧೯೬೩ ರಂದು ಮಾತನಾಡುತ್ತ, ವಿದ್ಯುತ್ ಕೊರತೆಯಿಂದಾಗಿ ರಾಜ್ಯವು ಕೈಗಾರಿಕಾ ಕ್ಷೇತ್ರದಲ್ಲಿ ಹಿಂದುಳಿದಿದೆಯೆಂದು ವಿವರಿಸಿದರು. ತಮ್ಮ ಸರ್ಕಾರದ ಗುರಿ ರಾಜ್ಯದ ಎಲ್ಲ ಹಳ್ಳಿಗಳಿಗೂ ವಿದ್ಯುತ್ತನ್ನು ಹರಿಸುವುದು ಎಂದರು. ೧೮-೨-೧೯೬೩ ರಂದು ಶಾಸಕಾಂಗದ ಆಯವ್ಯಯ ಅಧಿವೇಶನವನ್ನು ಉದ್ಘಾಟಿಸುತ್ತ ರಾಜ್ಯಪಾಲರು, ಕೃಷಿ ಮತ್ತು ವಿದ್ಯುತ್ ಕ್ಷೇತ್ರಗಳ ಬಗೆಗಿನ ಸರ್ಕಾರ ನೀಡುತ್ತಿರುವ ಪ್ರಾಮುಖ್ಯದ ಬಗ್ಗೆ ಉಲ್ಲೇಖಿಸಿದರು. ಈ ನೀತಿಧೋರಣೆಯ ದೃಷ್ಟಿಯಿಂದ, ಕಾಳಿ ಜಲವಿದ್ಯುತ್ ಯೋಜನೆಗೆ ಐದು ಕೋಟಿ ರೂಪಾಯಿಗಳ ನೆರವಿಗೆ ಯೋಜನಾ ಆಯೋಗಕ್ಕೆ ರಾಜ್ಯ ಸರ್ಕಾರವು ಬೇಡಿಕೆ ಸಲ್ಲಿಸಿದೆ ಎಂದು ಹೇಳಿದರು. ನೀರಾವರಿ ಹಾಗೂ ಜಲವಿದ್ಯುತ್ ಯೋಜನೆಗಳೆರಡಕ್ಕೂ ರಾಜ್ಯವು

ಫೀಲ್ಡ್‌ಮಾರ್ಷಲ್ ಕೆ.ಎಂ. ಕಾರ್ಯಪ್ಪರೊಡನೆ ಎಸ್ಸೆನ್

ನದಿ ನೀರಿನ ಬಳಕೆಯ ಪ್ರಾಮುಖ್ಯವಿದೆಯೆಂದೂ, ಅದರೆ ನದಿಗಳು ವಿವಿಧ ರಾಜ್ಯಗಳಲ್ಲಿ ಹರಿಯುವುದರಿಂದ ಉಂಟಾಗುವ ಅಂತಾರಾಜ್ಯ ನದಿ ನೀರಿನ ಹಂಚಿಕೆಯ ವಿವಾದ ಗಳಿಂದಾಗಿ ಪರಿಸ್ಥಿತಿ ಕಗ್ಗಂಟಾಗಿದೆಯೆಂದೂ ವಿವರಿಸಿದರು. ಈ ಸಮಸ್ಯೆಗಳು ಇಂದಿಗೂ ಬಹುತೇಕ ಹಾಗೆಯೇ ಮುಂದುವರಿದಿವೆ. ಕೃಷ್ಣಾ ಮತ್ತು ಗೋದಾವರಿ ನದಿಗಳ ನೀರಿನ ರಾಜ್ಯದ ಪಾಲಿನ ಹಿತಾಸಕ್ತಿಯನ್ನು ಕಾಪಾಡಲು ಸರ್ಕಾರವು ಬದ್ಧವಾಗಿದೆ ಎಂದು ನಿಜಲಿಂಗಪ್ಪನವರು ವಿಧಾನಸಭೆಯಲ್ಲಿ ಭರವಸೆ ನೀಡಿದರು. ಆಗ ಅರ್ಥಸಚಿವ ರಾಗಿದ್ದ ಜತ್ತಿಯವರು ರಾಜ್ಯದ ಎರಡನೆಯ ಆಯವ್ಯಯ ಪತ್ರವನ್ನು ೧-೩-೧೯೬೩ ರಂದು ಮಂಡಿಸಿದರು; ೪೦ ಲಕ್ಷ ರೂಪಾಯಿಗಳ ಕೊರತೆ ಬಜೆಟ್ ಅದಾಗಿತ್ತು.

ಶರಾವತಿಯು ನಿಜಲಿಂಗಪ್ಪನವರನ್ನು ಮಾರಕವಾಗಿ ನಿರಂತರ ಕಾಡಿದ ಪೀಡೆ. ಕಡಿದಾಳ್ ಮಂಜಪ್ಪನವರು ಆ ವಿಷಯವನ್ನು ೫-೩-೧೯೬೩ ರಂದು ವಿಧಾನಸಭೆ ಯಲ್ಲಿ ಮತ್ತೆ ಪ್ರಸ್ತಾಪಿಸಿದರು. ಪಕ್ಷದ ಹೊರಗೆ ಹಾಗೂ ಒಳಗಿನ ನಿಜಲಿಂಗಪ್ಪನವರ ರಾಜಕೀಯ ವಿರೋಧಿಗಳಿಗೆ ಈ ಪ್ರಶ್ನೆಯು ಒಂದು ಅಸ್ತ್ರವಾಗಿ ಪರಿಣಮಿಸಿತ್ತು. ಕೆಲವು ರಾಜಕಾರಣಿಗಳು ಶರಾವತಿ ಯೋಜನೆಯಲ್ಲಿ ಕಾನೂನುಬಾಹಿರವಾಗಿ ಹಣ ಮಾಡಿದ್ದಾ ರೆಂದು ಆರೋಪಿಸಿ ಆ ವಿಷಯದ ಬಗೆಗಿನ ಅಂಕಿಅಂಶಗಳನ್ನು ಸರ್ಕಾರವು ಬಹಿರಂಗ ಗೊಳಿಸಬೇಕೆಂದೂ ಕಡಿದಾಳ್ ಮಂಜಪ್ಪ ವಾದಿಸಿದರು. ಈ ಮಧ್ಯೆ, ವಿದ್ಯುತ್ ನಿಗಮದ ಅಧ್ಯಕ್ಷ ಚೆನ್ನಯ್ಯನವರು (ಕೋಲಾರ ಜಿಲ್ಲೆ) (ಇವರನ್ನು ನಿಜಲಿಂಗಪ್ಪವನರ ಪ್ರಮುಖ ರಾಜಕೀಯ ವಿರೋಧಿ ಎಸ್. ಚೆನ್ನಯ್ಯನವರೆಂದು ಭಾವಿಸಬಾರದು) ೬-೩-೧೯೬೩ ರಂದು ಪತ್ರಿಕಾಗೋಷ್ಠಿ ನಡೆಸಿ ಶರಾವತಿಯ ಮೊದಲ ಹಂತದ ಕಾಮಗಾರಿ ಮುಗಿ ಯಲಿದೆಯೆಂದೂ, ಆದರೆ ವಿದ್ಯುತ್ ಉತ್ಪಾದನೆಗೆ ಮುಂಚೆ ಪ್ರಸರಣ ತಂತುಗಳನ್ನೂ ಹಂಚಿಕೆಯ ತಾಣಗಳನ್ನೂ ನಿರ್ಮಿಸಬೇಕಾಗಿದೆಯೆಂದೂ ಅದಕ್ಕಾಗಿ ಹಣ ಒದಗಿಸ ಬೇಕೆಂದೂ ಸರ್ಕಾರವನ್ನು ಕೇಳಿಕೊಂಡರು.

ಕೇಂದ್ರದೊಡನೆ ಕೃಷ್ಣಾ ಹಾಗೂ ಗೋದಾವರಿ ವಿಷಯಗಳ ಬಗ್ಗೆ ಚರ್ಚಿಸಲು ನಿಜಲಿಂಗಪ್ಪನವರು ವೀರೇಂದ್ರ ಪಾಟೀಲರೊಡನೆ ೧೧-೩-೧೯೬೩ ರಂದು ದೆಹಲಿಗೆ ಪ್ರಯಾಣ ಬೆಳೆಸಿದರು. ಸರ್ಕಾರ ಆಯೋಜಿಸಿದ್ದ ಮತ್ತೊಂದು ಪ್ರಗತಿಪರ ಯೋಜನೆ ಯೆಂದರೆ ಬಡವರಿಗೆ ಒದಗಿಸಬೇಕೆಂದಿದ್ದ ಉಚಿತ ಕಾನೂನು ನೆರವು. ಈ ಕುರಿತು ತಾವು ಯೋಜನೆಯೊಂದನ್ನು ಈಗಾಗಲೇ ರೂಪಿಸಿರುವುದಾಗಿ ಕಾನೂನು ಸಚಿವ ರಾಮರಾವ್ ಅವರು ವಿಧಾನಸಭೆಯಲ್ಲಿ ತಿಳಿಸಿದರು. ಕೇಂದ್ರದೊಡನೆ ಚರ್ಚೆ ಮುಗಿಸಿದ ಬಳಿಕ, ಕೃಷ್ಣಾ ಮತ್ತು ಗೋದಾವರಿ ನದಿ ನೀರು ಹಂಚಿಕೆಯಿಂದ ರಾಜ್ಯಕ್ಕೆ ಅನ್ಯಾಯ

ವಾಗಿದೆಯೆಂದೂ, ಮತ್ತಷ್ಟು ನೀರು ದೊರಕಬೇಕಾಗಿತ್ತೆಂದೂ ನಿಜಲಿಂಗಪ್ಪ ದೂರಿದರು. ಸರ್ಕಾರದ ಮೇಲೆ ಎರಗುವುದಕ್ಕೆ ವಿರೋಧಪಕ್ಷಗಳವರಿಗೆ ಇದರಿಂದ ಮತ್ತೊಂದು ಅಸ್ತ್ರ ಸಿಕ್ಕಿದಂತಾಯಿತು. ಸಮಾಜವಾದಿ ನಾಯಕ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಶಿವಪ್ಪನವರು, ರಾಜ್ಯಕ್ಕೆ ನೀಡಿರುವ ನೀರಿನ ಪ್ರಮಾಣದಿಂದ ರಾಜ್ಯವು ಮುಂದಿನ ಹದಿನೈದು ವರ್ಷಗಳ ಕಾಲ ಆ ಎರಡೇ ಯೋಜನೆಗಳಿಂದ ತೃಪ್ತಿ ಹೊಂದ ಬೇಕಾಗಿದೆಯೆಂದು ಕೇಂದ್ರವನ್ನು ಖಂಡಿಸಿ. ಆ ಮೂಲಕ ರಾಜ್ಯವನ್ನೂ ಟೀಕಿಸಿದರು. ಆದರೆ, ಖಂಡನೆಯ ಪ್ರಮುಖ ಒತ್ತು ಕೇಂದ್ರವು ಆಂಧ್ರದ ಬಗ್ಗೆ ತೋರಿರುವ ಪಕ್ಷಪಾತದ ಮೇಲೆಯೇ ವಿನಾ ರಾಜ್ಯ ಸರ್ಕಾರ ಮತ್ತಷ್ಟು ನೀರು ಪಡೆಯಲು ಸಾಕಷ್ಟು ಪ್ರಯತ್ನ ನಡೆಸಲಿಲ್ಲ ಎಂಬುದರ ಮೇಲಾಗಿರಲಿಲ್ಲ. ರಾಜ್ಯದ ಕೈಗಾರಿಕೆ ಹಾಗೂ ವಾಣಿಜ್ಯ ಅಭಿವೃದ್ಧಿಯ ಬಗ್ಗೆ ಸರ್ಕಾರ ಯೋಚಿಸುತ್ತಿತ್ತು, ಇದಕ್ಕೆ ಸಾರಿಗೆ ವ್ಯವಸ್ಥೆ ಉತ್ತಮಗೊಳ್ಳ ಬೇಕಾಗಿತ್ತು. ಮ್ಯಾಂಗನೀಸ್ ಅದಿರನ್ನು ಜಪಾನ್‌ಗೆ ಮಾರುವ ಯೋಚನೆ ಸರ್ಕಾರಕ್ಕಿದೆ ಯೆಂದೂ, ಆ ಮೂಲಕ ಪಡೆಯುವ ಹಣವನ್ನು ಕಾರವಾರದಂತಹ ಬಂದರುಗಳನ್ನು ಅಭಿವೃದ್ಧಿಪಡಿಸುವ ಉದ್ದೇಶವಿದೆಯೆಂದೂ ಕೈಗಾರಿಕಾ ಸಚಿವ ಕೆ. ಮಲ್ಲಪ್ಪನವರು ೧-೫-೧೯೬೩ ರಂದು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು. ಈಗಿನಂತೆ ವಿದೇಶೀ ಬಹುರಾಷ್ಟ್ರೀಯರಿಗೆ ದೇಶದ ಆರ್ಥಿಕ ವ್ಯವಸ್ಥೆಯನ್ನು ತೆರೆದಿಡುವ ಹುಚ್ಚು ಶುರುವಾಗುವ ಬಹು ಮುಂಚೆಯೇ, ನಮ್ಮ ಆರ್ಥಿಕತೆಗೆ ಮುಕ್ಕಾಗದಂತೆ ಮಿತವಾದ ಪ್ರಮಾಣದಲ್ಲಿ ಆ ಬಗ್ಗೆ ಅವಕಾಶ ಒದಗಿಸುವ ಬಗ್ಗೆ ನಿಜಲಿಂಗಪ್ಪ ಸರ್ಕಾರ ಯೋಚಿಸುತ್ತಿತ್ತು. ನಿದರ್ಶನಕ್ಕೆ, ನಿಜಲಿಂಗಪ್ಪ ಸಂಪುಟದಲ್ಲಿ ವಿದ್ಯುತ್ ಖಾತೆಯ ಉಪಸಚಿವರಾಗಿದ್ದ ಶಂಸುದ್ದೀನ್ ಅವರು ೩-೫-೧೯೬೩ ರಂದು ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತ, ಜಪಾನಿನ ದೈತ್ಯ ಕಂಪೆನಿ ಮಿಟ್ಸುಬುಶಿಯು ಕಾಳಿ ಜಲವಿದ್ಯುತ್ ಯೋಜನೆಗೆ ತಾಂತ್ರಿಕ ಸಲಹೆಯೀಯಲು ಮುಂದಾಗಿರುವ ವಿಷಯವನ್ನು ಪ್ರಕಟಿಸಿದರು. ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವುದು ಅಭಿವೃದ್ಧಿ ಕಾರ್ಯಗಳ ಒಂದು ಭಾಗವೆಂಬುದು ಸರ್ಕಾರದ ನಿಲುವಾಗಿತ್ತು. ಮಾರನೆಯ ದಿನ, ನಿಜಲಿಂಗಪ್ಪನವರು ಹೇಳಿಕೆಯಿತ್ತು ಬೀದರ್, ಹಿರಿಯೂರು ಮತ್ತು ಎಂ.ಕೆ. ಹುಬ್ಬಳ್ಳಿಗಳಲ್ಲಿ ಮೂರು ಹೊಸ ಸಕ್ಕರೆ ಕಾರ್ಖಾನೆಗಳನ್ನು ಆರಂಭಿಸಿ ವಿವಿಧ ಪ್ರದೇಶಗಳ ನಡುವೆ ಸಮತೋಲವನ್ನು ಕಾಯ್ದುಕೊಳ್ಳುವ ಬಗ್ಗೆ ತಿಳಿಸಿದರು. ಜೊತೆಗೆ ಕಾರ್ಯನಿರತವಾದ ಮಂಡ್ಯ ಮತ್ತು ಸಂಕೇಶ್ವರ ಕಾರ್ಖಾನೆ ಗಳನ್ನು ವಿಸ್ತರಿಸುವುದಾಗಿ ತಿಳಿಸಿದರು. ಅಭಿವೃದ್ಧಿಗೆ ಆದ್ಯತೆ ನೀಡುವುದಲ್ಲದೆ, ಅಭಿವೃದ್ಧಿಯ ಅನುಕೂಲಗಳನ್ನು ಬಳಸಿಕೊಳ್ಳುವ ಸಮಸ್ಯೆಯ ಬಗ್ಗೆಯೂ ಮುಖ್ಯಮಂತ್ರಿಗಳಿಗೆ ಅರಿವಿತ್ತು. ತುಂಗಭದ್ರಾ ಯೋಜನೆಯ ಉಪಯೋಗವನ್ನು ಮೈಸೂರು ಸರ್ಕಾರವು ಉದ್ದಿಷ್ಟ

ಪ್ರಮಾಣದಲ್ಲಿ ಬಳಸಿಕೊಳ್ಳದಿರುವ ಬಗ್ಗೆ ಅವರು ಹೊಸಪೇಟೆಯಲ್ಲಿ ೧೩-೫-೧೯೬೩ ರಂದು ವ್ಯಕ್ತಪಡಿಸಿದ ವಿಷಾದ ಇದಕ್ಕೆ ನಿದರ್ಶನವಾಗಿದೆ. ಅದರ ನೀರಿನಿಂದ ನಿರೀಕ್ಷಿತ ಎಂಟು ಲಕ್ಷ ಎಕರೆ ಭೂಮಿ ಅನುಕೂಲ ಪಡೆಯುವ ಬದಲು ಮೂರು ಲಕ್ಷ ಎಕರೆಗಳನ್ನು ಮಾತ್ರ ಬಳಸಿಕೊಳ್ಳುತ್ತಿತ್ತು. ಕೃಷಿ ಉತ್ಪಾದನೆಯ ಕುರಿತು ಸರ್ಕಾರ ರಚಿಸಿದ್ದ ಉಪಸಮಿತಿಯ ಅಧ್ಯಕ್ಷರಾಗಿದ್ದ ಅವರು ಈ ಕಾರಣದಿಂದ ಯೋಜನೆ ಪ್ರದೇಶಕ್ಕೆ ಭೇಟಿ ನೀಡಿದ್ದರು. ಆ ಉಪಸಮಿತಿಯ ಇತರ ಸದಸ್ಯರುಗಳೆಂದರೆ, ಕಂದಾಯ ಸಚಿವ ಕೃಷ್ಣಪ್ಪ, ಕೃಷಿ ಸಚಿವ ನಾರಾಯಣ ಗೌಡ, ಸಹಕಾರ ಸಚಿವ ರಾಮಕೃಷ್ಣ ಹೆಗಡೆ ಮತ್ತು ಸಣ್ಣ ನೀರಾವರಿ ಖಾತೆಯ ಉಪಸಚಿವ ಆಲೂರು ಹನುಮಂತಪ್ಪ. ನದಿ ನೀರಿನ ಮೇಲಿನ ರಾಜ್ಯದ ಹಕ್ಕುಗಳ ಬಗ್ಗೆ ಮುಖ್ಯಮಂತ್ರಿಗಳು ಬಹು ಜಾಗ್ರತ ರಾಗಿದ್ದರು; ಕುಡಿಯುವ ನೀರಿನ ಬಳಕೆಗೆ ಸೀಮಿತವಾಗಿದ್ದ ಕೃಷ್ಣಾ ನದಿ ನೀರನ್ನು ನೀರಾವರಿಗೆ ಬಳಸಿಕೊಳ್ಳುವ ಮದ್ರಾಸ್ ಸರ್ಕಾರದ ಬಗ್ಗೆ ಅವರು ೧೭-೫-೧೯೬೩ ಅವರು ಟೀಕೆ ಮಾಡಿದರು.

ಪಕ್ಷದ ಸಮಸ್ಯೆಗಳು ಸರ್ಕಾರ ಹಾಗೂ ಮುಖ್ಯಮಂತ್ರಿಗಳನ್ನು ಕಾಡುತ್ತಲೇ ಇದ್ದವು. ಈಚೆಗೆ ನಡೆದ ಪಕ್ಷದ ಚುನಾವಣೆಗಳಲ್ಲಿ ಅಕ್ರಮ ಮತ್ತು ಭ್ರಷ್ಟಾಚಾರಗಳು ನಡೆದಿವೆ ಎಂದು ಆರೋಪಿಸಿ ಮೈಸೂರಿನ ಕೆಲವು ಕಾಂಗ್ರೆಸ್ ನಾಯಕರು ಕಾಂಗ್ರೆಸ್ ಅಧ್ಯಕ್ಷ ಸಂಜೀವಯ್ಯನವರಿಗೆ ದೂರು ನೀಡಿದರು. ಆಗಿರುವ ಚುನಾವಣೆಗಳನ್ನು ರದ್ದುಪಡಿಸಿ ಆ ಬಗ್ಗೆ ತನಿಖೆಯಾಗಬೇಕೆಂದು ಅವರು ಒತ್ತಾಯಿಸಿದರು. ಈ ಪತ್ರಕ್ಕೆ ಸಹಿ ಹಾಕಿದ್ದವ ರೆಂದರೆ ಎಸ್. ಚೆನ್ನಯ್ಯ, ಟಿ. ಸುಬ್ರಹ್ಮಣ್ಯ, ಕಡಿದಾಳ್ ಮಂಜಪ್ಪ, ಟಿ, ಮರಿಯಪ್ಪ, ಬಿ. ಬಸವಲಿಂಗಪ್ಪ, ಎಚ್.ಎಂ. ಚೆನ್ನಬಸಪ್ಪ, ಎ.ಜಿ. ರಾಮಚಂದ್ರ ರಾವ್, ಎಚ್. ಸಿದ್ಧವೀರಪ್ಪ ಮತ್ತು ವೆಂಕಟರಾಮಯ್ಯ ಮತ್ತಿತರರು. ಆ ಸಮಯದಲ್ಲಿ ಎಂಪಿಸಿಸಿ ಅಧ್ಯಕ್ಷರಾಗಿದ್ದವರು ಎಸ್. ಚೆನ್ನಯ್ಯನವರು. ಆದರೆ ಎಂಪಿಸಿಸಿಯ ಅಧಿಕೃತ ವಕ್ತಾರರು ಈ ಆರೋಪಗಳನ್ನು ಅಲ್ಲಗಳೆದು, ಒಟ್ಟು ೨೨೬ ಕ್ಷೇತ್ರಗಳ ಪೈಕಿ ಕೇವಲ ಆರರಲ್ಲಿ ಮಾತ್ರ ಮಂಡಲ ಸಮಿತಿಗಳನ್ನು ರಚಿಸಲು ಸಾಧ್ಯವಾಗಿಲ್ಲ ಅಷ್ಟೆ ಎಂದು ವಿವರಿಸಿದರು. ಗ್ರಾಮ ಮಟ್ಟದಲ್ಲಿ ಪಂಚಾಯಿತಿ ರಾಜ್ಯ ವ್ಯವಸ್ಥೆಯನ್ನು ವಿಕೇಂದ್ರೀಕರಿಸುವ ಬಗ್ಗೆ ನಿಜಲಿಂಗಪ್ಪ ಸರ್ಕಾರವು ಬದ್ಧವಾಗಿರುವುದಕ್ಕೆ ಆ ಬಗ್ಗೆ ಕೊಂಡಜ್ಜಿ ಬಸಪ್ಪ ಸಮಿತಿಯನ್ನು ನೇಮಿಸಿರುವುದೇ ಸಾಕ್ಷಿ ಎಂದರು. ೧೯೬೩ ರ ಜೂನ್ ಆರಂಭದಲ್ಲಿ ಆ ಸಮಿತಿಯ ವರದಿ ಬಂತು; ಹಳ್ಳಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟಗಳಲ್ಲಿ ಅಧಿಕಾರ ಹಂಚಿಕೆಗೆ ಅದರಲ್ಲಿ ಶಿಫಾರಸು ಮಾಡಲಾಗಿತ್ತು. ದೊಡ್ಡ ತಾಲ್ಲೂಕುಗಳನ್ನು ವಿಭಜಿಸಲೂ ಸಮಿತಿ ಶಿಫಾರಸು ಮಾಡಿತ್ತು. ರಾಜ್ಯದ ಕಾಂಗ್ರೆಸ್ ಚುನಾವಣೆಗಳಲ್ಲಿ ಯಾವುದೇ ಅಕ್ರಮವಾಗಲೀ

ಭ್ರಷ್ಟಾಚಾರವಾಗಲೀ ನಡೆದಿಲ್ಲ ಎಂದು ನಿಜಲಿಂಗಪ್ಪನವರೇ ಹೈದರಾಬಾದ್‌ನಲ್ಲಿ ೭-೬-೧೯೬೩ ರಂದು ಪತ್ರಿಕೆಗಳವರಿಗೆ ತಿಳಿಸಿದರು. ಆದರೆ, ಅವರ ರಾಜಕೀಯ ವೈರಿಗಳು ಅವರ ಮತ್ತು ಅವರ ಸರ್ಕಾರವನ್ನು ಟೀಕಿಸುತ್ತಲೇ ಹೋದವು. ತಮ್ಮನ್ನು ತಾವು ಸಜ್ಜನರೆಂದು ಬಣ್ಣಿಸಿಕೊಂಡ ಅವರು ಚುನಾವಣೆಗಳನ್ನು ನ್ಯಾಯಯುತವಾದು ವೆಂದು ಭಾವಿಸಲಿಲ್ಲ. ಎಸ್. ಚೆನ್ನಯ್ಯ ಮತ್ತು ಟಿ. ಸುಬ್ರಹ್ಮಣ್ಯ ಅವರು ಈ ಮಾತನ್ನು ೭-೬-೧೯೬೩ ರಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಒಂದು ಬಣವು ಪಕ್ಷದಲ್ಲಿ ಪ್ರಾಬಲ್ಯ ಸಾಧಿಸಿ ಮತದಾರರ ಅಕ್ರಮ ಪಟ್ಟಿಯನ್ನು ತಯಾರಿಸಿ ತಮಗೆ ಬೇಕಾದವರನ್ನು ಚುನಾವಣಾ ಅಧಿಕಾರಿಗಳನ್ನಾಗಿ ನೇಮಿಸಿದೆ ಎಂದವರು ಆಪಾದಿಸಿದರು. ಈ ನಡುವೆ, ೨೩-೬-೧೯೬೩ ರಂದು ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿತ್ತು. ಒಮ್ಮತದ ಅಭ್ಯರ್ಥಿಯ ಬಗ್ಗೆ ಎರಡು ಬಣಗಳ ನಡುವೆ ಹೊಂದಾಣಿಕೆ ಸಾಧ್ಯವಾಗದ್ದರಿಂದ ಚುನಾವಣೆ ಅನಿವಾರ್ಯವಾಗಿತ್ತು. ಚುನಾವಣೆಯು ಮಹಮದ್ ಆಲಿ, ಕೊಲ್ಲೂರು ಮಲ್ಲಪ್ಪ ಮತ್ತು ಎಚ್.ಎಂ. ಚೆನ್ನಬಸಪ್ಪನವರ ನಡುವೆ ಇರುವ ನಿರೀಕ್ಷೆಯಿತ್ತು; ಅವರಲ್ಲಿ ಮೊದಲ ಇಬ್ಬರು ನಿಜಲಿಂಗಪ್ಪ ಬಣದವರು. ಹೀಗಾಗಿ, ಮಹಮದ್ ಆಲಿ ಅಥವಾ ಕೊಲ್ಲೂರು ಮಲ್ಲಪ್ಪ ಅವರು ಆಯ್ಕೆಯಾಗಬೇಕೆಂದು ಬಯಸಿತು. ಪ್ರಸ್ತಾಪಿತವಾದ ಮತ್ತೊಂದು ಹೆಸರೆಂದರೆ ಹಳ್ಳಕೇರಿ ಗುದ್ಲೆಪ್ಪನವರದು, ಅವರೂ ನಿಜಲಿಂಗಪ್ಪ ಪರವಾಗಿ ದ್ದವರೇ. ಎಂಪಿಸಿಸಿಯಲ್ಲಿ ಬಹುಮತ ಹೊಂದಿದ್ದ ನಿಜಲಿಂಗಪ್ಪ ಬಣವು ಗೆಲ್ಲುವ ನಿರೀಕ್ಷೆಯಿತ್ತು. ವಾಸ್ತವದಲ್ಲಿ, ಮಹಮದ್ ಆಲಿ ಅವರು ೨೦೧ ಮತಗಳನ್ನು ಪಡದು ಆಯ್ಕೆಯಾದರು, ಅವರ ಪ್ರತಿಸ್ಪರ್ಧಿ ಎಚ್.ಎಂ. ಚೆನ್ನಬಸಪ್ಪನವರು ಕೇವಲ ೨೩ ಮತಗಳನ್ನು ಪಡೆದರು! ಚುನಾವವಣೆಗಳು ನ್ಯಾಯಯುತವಾಗಿರಲಿಲ್ಲ ಎಂಬುದು ಎಚ್.ಎಂ. ಚೆನ್ನಬಸಪ್ಪನರ ಸಹಜ ಪ್ರತಿಕ್ರಿಯೆಯಾಗಿತ್ತು.

ವೈಭವ ಬೆಡಗುಗಳಿಗೆ ಸಾಮಾನ್ಯವಾಗಿ ಮಾರುಹೋಗದ ನಿಜಲಿಂಗಪ್ಪನವರು ಅವನ್ನು ಒಳ್ಳೆಯ ಉದ್ದೇಶಗಳಿಗೆ ಬಳಸುವುದಕ್ಕೆ ವಿರುದ್ಧವಾಗಿರಲಿಲ್ಲ. ಚೀನೀ ಆಕ್ರಮಣ ದಿಂದ ಜಾಗೃತವಾಗಿದ್ದ ರಕ್ಷಣಾಪ್ರಜ್ಞೆಯ ಹಿನ್ನೆಲೆಯಲ್ಲಿ ರಕ್ಷಣಾ ನಿಧಿಗೆ ಚಿನ್ನ ಸಂಗ್ರಹಣೆಯ ಪ್ರಚಾರ ಭರಾಟೆಯಿಂದ ಸಾಗಿತ್ತು. ವೈಭವಾಡಂಬರದ ಸಮಾರಂಭವೊಂದು ೨-೭-೧೯೬೩ ರಂದು ಬಿಜಾಪುರದಲ್ಲಿ ನಡೆದು ನಿಜಲಿಂಗಪ್ಪ ಮತ್ತು ಇಂದಿರಾ ಗಾಂಧಿಯವರ ಚಿನ್ನದ ತುಲಾಭಾರ ಜರುಗಿ, ಆ ತೂಕದ ಚಿನ್ನವನ್ನು ರಕ್ಷಣಾ ನಿಧಿಗೆ ಸಮರ್ಪಿಸಲಾಯಿತು. ಇಂದಿರಾ ಗಾಂಧಿಯವರು ೧೦೮ ಪೌಂಡ್ ತೂಗಿದರೆ, ನಿಜಲಿಂಗಪ್ಪನವರು ೧೬೨ ಪೌಂಡ್ ತೂಗಿದರು. ಈ ಸಮಾರಂಭಕ್ಕಾಗಿ ಸಾರ್ವಜನಿಕರು ೧೫ ಲಕ್ಷ ರೂಪಾಯಿ ಮೌಲ್ಯದ ೧,೧೮,೫೨೬ ಗ್ರಾಂ ಚಿನ್ನವನ್ನು ಸಂಗ್ರಹಿಸಿದ್ದರು.

ಈ ಸಮಾರಂಭದ ಅಧ್ಯಕ್ಷತೆಯನ್ನು ಆಂಧ್ರದ ಮುಖ್ಯ ಮಂತ್ರಿ ಸಂಜೀವರೆಡ್ಡಿಯವರು ವಹಿಸಿದ್ದರು. ಈ ಸಮಾರಂಭ ನಡೆದ ಕೆಲವು ದಿನಗಳ ಬಳಿಕ, ಅವರ ವಿರುದ್ಧ ರಾಜಕೀಯ ವೈರಿಗಳು ಮತ್ತೊಂದು ಆಪಾದನೆಯ ಅಸ್ತ್ರವನ್ನು ಬಿಟ್ಟರು. ಎಂಪಿಸಿಸಿ ಅಧ್ಯಕ್ಷತೆಗೆ ನಡೆದ ಚುನಾವಣೆಯು ಅಕ್ರಮವಾಗಿದ್ದಿತೆಂದು ಬೆಂಗಳೂರಿನಲ್ಲಿ ೫-೭-೧೯೬೩ ರಂದು ನಡೆದ ಪತ್ರಿಕಾ ಗೋಷ್ಠಿಯಲ್ಲಿ ಟ. ಸುಬ್ರಹ್ಮಣ್ಯ ಆರೋಪಿಸಿದರು. ವಿಧಾನ ಪರಿಷತ್ತಿನ ಸಭಾಪತಿಗಳಾಗಿದ್ದರೂ ಸಂಸದೀಯ ನಡಾವಳಿಗೆ ವಿರುದ್ಧವಾಗಿ ಕಾಂಗ್ರೆಸ್ ಪಕ್ಷದ ರಾಜಕೀಯದಲ್ಲಿ ಸಕ್ರಿಯವಾಗಿ ತೊಡಗಿದ್ದಾರೆಂದು ಹಳ್ಳಿಕೇರಿ ಗುದ್ಲೆಪ್ಪ ನವರ ಮೇಲೆ ಹರಿಹಾಯ್ದರು. ಇದನ್ನು ಶರಾವತಿ ಯೋಜನೆಯಲ್ಲಿ ನಡೆಯಿತೆನ್ನಲಾದ ಅಕ್ರಮಗಳ ಜೊತೆ ತಳುಕು ಹಾಕಿ ಭ್ರಷ್ಟಾಚಾರದ ಆರೋಪ ಹೊರಿಸಿದರು. ಟಿ. ಸುಬ್ರಹ್ಮಣ್ಯ, ಎಸ್. ಚೆನ್ನಯ್ಯ ಮತ್ತು ಎಚ್.ಎಂ. ಚೆನ್ನಬಸಪ್ಪ ಅವರುಗಳು ೫-೭-೧೯೬೩ ರಂದು ಚೆನ್ನಯ್ಯನವರ ಮನೆಯಲ್ಲಿ ಪತ್ರಿಕಾಗೋಷ್ಠಿಯನ್ನು ನಡೆಸಿ ಯೋಜನೆಯಲ್ಲಿ ನಡೆದಿದೆ ಯೆನ್ನಲಾದ ಭ್ರಷ್ಟಾಚಾರ ಮತ್ತು ಅಕ್ರಮಗಳ ಬಗ್ಗೆ ಒಂದು ನ್ಯಾಯಾಂಗ ತನಿಖೆ ಅಥವಾ ನಿಷ್ಪಕ್ಷಪಾತ ವಿಚಾರಣೆ ನಡೆಯಬೇಕೆಂದು ಒತ್ತಾಯಿಸಿದರು. ಕಾಂಗ್ರೆಸ್ ಪಕ್ಷದ ಹೊರಗಿನಿಂದಲೂ ಈ ಬಗ್ಗೆ ಆಕ್ರಮಣಗಳು ನಡೆದುವು. ವಿರೋಧ ಪಕ್ಷದ ನಾಯಕ ಎಸ್. ಶಿವಪ್ಪನವರು ೧೧-೭-೧೯೬೩ ರಂದು ಪತ್ರಿಕೆಗಳವರ ಜೊತೆ ಮಾತನಾಡುತ್ತ ಶರಾವತಿ ಯೋಜನೆಯ ಬಗ್ಗೆ ನ್ಯಾಯಾಂಗ ತನಿಖೆ ನಡೆಯಬೇಕೆಂದು ಒತ್ತಾಯಿಸಿದರು. ಈ ಬಗ್ಗೆ ನಿಜಲಿಂಗಪ್ಪನವರು ವಿಧಾನಸಭೆಯಲ್ಲಿ ನೀಡಿದ್ದ ಭರವಸೆಗಳನ್ನು ನೆರವೇರಿಸಿಲ್ಲ ವೆಂಬ ಬಗ್ಗೆ ಅವರು ವಿಶೇಷ ವಿಷಾದ ವ್ಯಕ್ತಪಡಿಸಿದರು.

ರಾಷ್ಟ್ರಮಟ್ಟದಲ್ಲಿ, ಕಾಮರಾಜರು 'ಕಾಮರಾಜ ಬಾಂಬ್' ಎಂದು ಹೆಸರು ಪಡೆದ ರಾಜಕೀಯ ಯೋಜನೆಯನ್ನು ಸಿಡಿಸಿದರು; ಇದನ್ನು ೧೦-೮-೧೯೬೩ ರಂದು ದೆಹಲಿಯಲ್ಲಿ ನಡೆದ ಎಐಸಿಸಿ ಒಪ್ಪಿಕೊಂಡಿತು. ಆದರೆ ಇದು ನೆಹರೂ ಅವರ ಯೋಜನೆ, ಕಾಮರಾಜರ ಮೂಲಕ ಜಾರಿಗೊಳ್ಳುತ್ತಿದೆ ಎಂದು ವದಂತಿ ಹಬ್ಬಿತು! ಬೇಡದವರನ್ನು ಸರ್ಕಾರದಿಂದ ದೂರವುಳಿಸುವ ಯೋಜನೆಯಿದು, ಹಿರಿಯ ನಾಯಕರು ಸರ್ಕಾರವನ್ನು ತೊರೆದು ಪಕ್ಷದ ಸೇವೆಗೆ ನಿಲ್ಲಬೇಕೆಂಬುದು ಅದರ ಸಾರ. ಈ ಯೋಜನೆಯ ಪ್ರಕಾರ ರಾಜೀನಾಮೆ ನೀಡಲು ಅನೇಕ ಮುಖ್ಯಮಂತ್ರಿಗಳು ಸಿದ್ಧರಾದರು. ತಾವೂ ಕಾಮರಾಜ ಯೋಜನೆಯಂತೆ ರಾಜೀನಾಮೆ ನೀಡಲು ಸಿದ್ಧವಿರುವುದಾಗಿ ನಿಜಲಿಂಗಪ್ಪ ನವರು ೧೧-೮-೧೯೬೩ ರಂದು ಪತ್ರಿಕಾಗೋಷ್ಠಿಯಲ್ಲಿ ಘೋಷಿಸಿದರು. ಪಕ್ಷ ಹಾಗೂ ಸರ್ಕಾರದ ಕೆಲಸಗಳೆರಡಕ್ಕೂ ಸಮಾನ ಪ್ರಾಶಸ್ತ್ಯವನ್ನು ಮೊದಲಿನಿಂದ ಕೊಡುತ್ತ ಬಂದಿ ರುವ ತಮಗೆ ಇದು ಸುಲಭದ ಕೆಲಸವೆಂದೂ ಅವರು ನುಡಿದರು. ೧೫-೮-೧೯೬೩

ಸ್ವಾತಂತ್ರ್ಯೋತ್ಸವ ಭಾಷಣ ಮಾಡುತ್ತಿರುವ ಎಸ್ಸೆನ್

ರಂದು ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಆಕಾಶವಾಣಿಯಲ್ಲಿ ಮಾತನಾಡುತ್ತ, ಆಂತರಿಕ ಜಗಳವನ್ನು ತೊರೆದು ದೇಶದ ಹಿತಕ್ಕಾಗಿ ದುಡಿಯುವಂತೆ ಅವರು ಜನರಿಗೆ ಕರೆ ಕೊಟ್ಟರು. ಇದರಿಂದ ದೇಶವು ಬಲಿಷ್ಠಗೊಳ್ಳುವುದೆಂದೂ ಸುರಕ್ಷಿತವಾಗುವುದೆಂದೂ ವಿವರಿಸಿದರು. ಕಾಮರಾಜ ಯೋಜನೆಯ ಬಲಿಪಶುಗಳ ಹೆಸರುಗಳನ್ನು ೨೩-೮-೧೯೬೩ ರಂದು ಪ್ರಕಟಿಸಲಾಯಿತು. ಕೇಂದ್ರ ಸಚಿವರುಗಳಲ್ಲಿ ಮೊರಾರ್ಜಿ ದೇಸಾಯಿ, ಜಗಜೀವನ ರಾಂ, ಲಾಲ್ ಬಹಾದ್ದೂರ್ ಶಾಸ್ತ್ರಿ, ಎಸ್.ಕೆ. ಪಾಟೀಲ್, ಬಿ. ಗೋಪಾಲರೆಡ್ಡಿ, ಮತ್ತು ಡಾ.ಕೆ. ಎಲ್. ಶ್ರೀಮಾಲಿ ಇದ್ದರೆ, ಮುಖ್ಯಮಂತ್ರಿಗಳ ಪೈಕಿ ಬಕ್ಷಿ ಗುಲಾಂ ಮೊಹಮ್ಮದ್ (ಜಮ್ಮು-ಕಾಶ್ಮೀರ), ಸ್ವತಃ ಕಾಮರಾಜರು, ವಿಜಯಾನಂದ ಪಟ್ನಾಯಕ್ (ಒರಿಸ್ಸಾ), ಸಿ.ಬಿ. ಗುಪ್ತ (ಉತ್ತರ ಪ್ರದೇಶ), ವಿನೋದಾನಂದ ಝಾ (ಬಿಹಾರ) ಮತ್ತು ಬಿ.ಎ. ಮಾಂಡಲೋಯ್ (ಮಧ್ಯ ಪ್ರದೇಶ) ಅವರುಗಳಿದ್ದರು. ನಿಜಲಿಂಗಪ್ಪನವರ ರಾಜೀನಾಮೆ ಯನ್ನು ವರಿಷ್ಠ ಮಂಡಳಿ ಒಪ್ಪಿಕೊಳ್ಳಬಹುದೆಂದು ಪತ್ರಿಕೆಗಳು ಊಹಿಸಿದುವು.

ನಿಜಲಿಂಗಪ್ಪನವರು ಅತ್ಯಂತ ಪ್ರಮುಖವೆಂಬ ಕೃಷಿ ಉತ್ಪಾದನೆಯ ಬಗೆಗಿನ ತಮ್ಮ ಬದ್ಧತೆಯನ್ನು ಮುಂದುವರೆಸಿಕೊಂಡು ಬಂದರು. ಹಾವೇರಿಯಲ್ಲಿ ಸ್ಥಳಿಯ ರೈತರನ್ನುದ್ದೇಶಿಸಿ ಮಾತನಾಡುತ್ತ ಅವರು, ರೈತರು ಶ್ರಮದುಡಿಮೆ ಮಾಡಿದರೆ ಸರ್ಕಾರ ಅವರ ನೆರವಿಗೆ ನಿಲ್ಲುವುದಾಗಿ ಹೇಳಿದ್ದು ಇದಕ್ಕೊಂದು ನಿದರ್ಶನ. ರಾಜ್ಯದಲ್ಲಿ ಕ್ಷಾಮ ಪರಿಸ್ಥಿತಿ ತಲೆದೋರುವುದನ್ನು ತಡೆಗಟ್ಟಲು ಸರ್ಕಾರವು ಒಂದು ವ್ಯಾಪಕ ಯೋಜನೆ ಯನ್ನು ಸಿದ್ಧಪಡಿಸುತ್ತಿದೆಯೆಂಬುದನ್ನವರು ಪ್ರಕಟಿಸಿದರು. ಕನ್ನಡ ಭಾಷೆ ಮತ್ತು ಸಂಸ್ಕೃತಿ ಗಳ ಅಭಿವೃದ್ಧಿಯ ಧ್ಯೇಯವನ್ನೂ ಅವರು ಮುಂದುವರಿಸಿದರು, ೫-೯-೧೯೬೩ ರಂದು ಅಧಿಕೃತ ಭಾಷೆಗೆ ಸಂಬಂಧಿಸಿದ ಮಸೂದೆಯ ಬಗ್ಗೆ ಮಾತನಾಡುತ್ತಿದ್ದ ಅವರು ಹೀಗೆಂದು ವಿಧಾನಸಭೆಯಲ್ಲಿ ಹೇಳಿದರು. ದಾವಣಗೆರೆಯಲ್ಲಿ ಮಾತನಾಡುತ್ತ ರಾಜ್ಯದಲ್ಲಿ ಹೊಸ ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರ ನೆರವು ನಿಡುವುದೆಂದು ಘೋಷಿಸಿ ದಾಗ, ಕೈಗಾರಿಕೆ ಮತ್ತು ಕೃಷಿ ಅಭಿವೃದ್ಧಿಗಳು ಪರಸ್ಪರ ಪೂರಕವೆಂಬ ಅವರ ನಿಲವು ಮತ್ತೆ ದೃಢಗೊಂಡಿತು. ಈ ಮಧ್ಯೆ, ಅವರ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಗೆ ವಿರೋಧ ಪಕ್ಷಗಳು ಸಿದ್ಧತೆ ನಡೆಸಿದವು. ಈ ಬಗ್ಗೆ ಚರ್ಚಿಸಲು ೫-೧೦-೧೯೬೩ರಂದು ವಿಧಾನ ಸಭೆ ಒಪ್ಪಿಗೆ ನೀಡಿತು. ೭-೧೦-೧೯೬೩ ರಂದು ನಿರ್ಣಯವನ್ನು ಮಂಡಿಸುತ್ತ ವಿರೋಧ ಪಕ್ಷದ ನಾಯಕ ಎಸ್. ಶಿವಪ್ಪನವರು, ಭ್ರಷ್ಟಾಚಾರದ ಆರೋಪದ ಮೇಲೆ, ಶರಾವತಿ ಯೋಜನೆಯನ್ನು ಕೇಂದ್ರದಲ್ಲಿರಿಸಿಕೊಂಡು, ಸರ್ಕಾರದ ಮೇಲೆ ಗದಾಪ್ರಹಾರ ಮಾಡಿದರು. ಅವರು ಮಾಡಿದ ಇತರ ಆರೋಪಗಳಲ್ಲಿ ಪ್ರಮುಖವಾದುದು ಖಾದಿ ಮಂಡಳಿಯ ಲೆಕ್ಕಗಳ ಬಗ್ಗೆ. ನಿರೀಕ್ಷೆಯಂತೆಯೇ ಅವಿಶ್ವಾಸ

ನಿರ್ಣಯ ಬಿದ್ದು ಹೋಯಿತು. ಕೇವಲ ನಾಲ್ಕು ಮತಗಳು ನಿರ್ಣಯದ ಪರವಾಗಿದ್ದರೆ ೧೧೫ ವಿರೋಧವಾಗಿದ್ದುವು. ಹನುಮಂತಯ್ಯನವರು, ಬೆಳಗಾವಿಯಲ್ಲಿ ನಾಡಹಬ್ಬ ಸಮಾರಂಭದಲ್ಲಿ ಮಾತನಾಡುತ್ತ, ರಾಜ್ಯ ನಾಯಕತ್ವವು ಛಿದ್ರಗೊಂಡಿರುವುದರ ಬಗ್ಗೆ ಚಿಂತನೆ ನಡೆಸುವಂತೆ ಕರೆ ಕೊಟ್ಟರು, ಕನ್ನಡಿಗರು ಎಲ್ಲ ಕ್ಷೇತ್ರಗಳಲ್ಲಿಯೂ ಹಿಂದುಳಿದಿರುವುದಕ್ಕೆ ಕಾರಣ ಅವರ ಅನೈಕಮತ್ಯ ಮತ್ತು ಅಸೂಯೆಗಳು ಎಂದರು. ಈ ಪರಿಸ್ಥಿತಿಯಲ್ಲಿ ತಾವೂ ಭಾಗಿಗಳೆಂಬ ಭಾವನೆ ಅವರ ಮನಸ್ಸಿನಲ್ಲಿತ್ತೋ ತಿಳಿಯದು!

೧೯೬೫ರ ನವೆಂಬರ್ ಒಂದರಂದು ನಿಜಲಿಂಗಪ್ಪನವರು ರಾಜ್ಯೋತ್ಸವ ಸಂದೇಶ ನೀಡುತ್ತ, ದೇಶದ ರಕ್ಷಣೆಗೆ ಬದ್ಧವಾಗಿರುವ ಎಲ್ಲಾ ರಾಜ್ಯಗಳಲ್ಲಿ ಕರ್ನಾಟಕವನ್ನು ದೇಶದ ಮೊದಲ ದರ್ಜೆಯ ರಾಜ್ಯವನ್ನಾಗಿ ಮಾಡಲು ತಮಗೂ ತಮ್ಮ ಸರ್ಕಾರಕ್ಕೂ ಸಹಾಯ ಮಾಡಬೇಕೆಂದು ಜನತೆಯನ್ನು ಕೇಳಿಕೊಂಡರು. ಇಂಥ ಶುಭ ಸಂದರ್ಭದಲ್ಲಿಯೂ ಅವರು ಶರಾವತಿಯ ಆಪಾದನೆಯಿಂದ ದೂರವಾಗಿರಲಿಲ್ಲ. ಶರಾವತಿ ಯೋಜನೆಯ ಬಗ್ಗೆ ನ್ಯಾಯಾಂಗ ತನಿಖೆ ಸಾಧ್ಯವಿಲ್ಲವೆಂದು ಅವರು ಪತ್ರಿಕೆಗಳಿಗೆ ಮತ್ತೊಮ್ಮೆ ದೃಢಪಡಿಸಿ, ಸರ್ಕಾರ ಯೋಜನೆಯ ಬಗೆಗೆ ಒಂದು ಶ್ವೇತಪತ್ರವನ್ನು ಹೊರಡಿಸಲು ಸಿದ್ಧವಿದೆ ಎಂದರು. ಇದರಲ್ಲಿ ಎಲ್ಲ ವಿವರಗಳು ಇರುತ್ತವೆ. ಖುದ್ದಾಗಿ ವಿಷಯವನ್ನು ಅಧ್ಯಯನ ನಡೆಸಿದ್ದ ಅವರಿಗೆ ಈ ಬಗ್ಗೆ ತನಿಖೆ ಆವಶ್ಯಕವೆಂದು ಅನ್ನಿಸಲಿಲ್ಲ. ಈ ಕುರಿತು ಟೀಕಿಸುವವರು ರಾಜಕೀಯಪ್ರೇರಿತರೆಂದೂ ಅವರಿಗೆ ವಾಸ್ತವದ ಅರಿವಿಲ್ಲವೆಂದೂ ದೂರಿದರು. ಮುಂದಿನ ವರ್ಷದಲ್ಲಿ ಶರಾವತಿ ಯೋಜನೆಗೆ ಇಪ್ಪತ್ತೆರಡು ಕೋಟಿ ರೂಪಾಯಿಗಳ ನೆರವು ನೀಡುವಂತೆ ತಾವು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿರುವುದಾಗಿಯೂ ಈ ಸಂದರ್ಭದಲ್ಲಿ ಪತ್ರಿಕೆಗಳಿಗೆ ತಿಳಿಸಿದರು. ಸರ್ಕಾರದ ತೆರಿಗೆ ನೀತಿಯ ಬಗ್ಗೆ ಮಾತನಾಡುತ್ತ, ಈಗಾಗಲೇ ಜನರ ಮೇಲೆ ತೆರಿಗೆಯ ಭಾರ ಹೆಚ್ಚಿರುವುದರಿಂದ ಮುಂದಿನ ಎರಡು ವರ್ಷಗಳಲ್ಲಿ ಯಾವುದೇ ಹೊಸ ತೆರಿಗೆಯನ್ನು ವಿಧಿಸುವುದಿಲ್ಲವೆಂದು ನಿಜಲಿಂಗಪ್ಪನವರು ಪ್ರಕಟಿಸಿದರು. ಮತ್ತೊಮ್ಮೆ ೧೪-೧೧-೧೯೬೫ ರಂದು ವಿಧಾನಸಭೆಯಲ್ಲಿ ಮಾತನಾಡುತ್ತ ಅವರು, ಶರಾವತಿ ಯೋಜನೆಯ ಬಗ್ಗೆ ನ್ಯಾಯಾಂಗ ತನಿಖೆ ಸಾಧ್ಯವಿಲ್ಲವೆಂದೂ, ಆ ಬಗ್ಗೆ ಇನ್ನು ಮೂರು ವಾರಗಳಲ್ಲಿ ಒಂದು ಶ್ವೇತಪತ್ರವನ್ನು ಹೊರಡಿಸಲು ಸರ್ಕಾರ ಸಿದ್ಧವಿದೆ ಎಂದೂ ಪುನರ್ ಪ್ರತಿಪಾದಿಸಿದರು. ಸಾರ್ವಜನಿಕರು ಪ್ರಬಲವಾಗಿ ಒತ್ತಾಯಿಸುತ್ತಿರುವುದರಿಂದ ಶರಾವತಿ ಯೋಜನೆ ಕುರಿತು ನ್ಯಾಯಾಂಗ ತನಿಖೆ ಆಗಲೇ ಬೇಕೆಂದು ಜನಸಂಘದ ನಾಯಕ ಅಟಲ್ ಬಿಹಾರಿ ವಾಜಪೇಯಿ ಅವರು ಧಾರವಾಡದಲ್ಲಿ ೧೯-೧೨-೧೯೬೫ ರಂದು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು. ಕಾಕತಾಳೀಯವೆಂಬಂತೆ ಮಾರನೆಯ ದಿನವೇ ಧಾರವಾಡದಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುತ್ತ ನಿಜಲಿಂಗಪ್ಪನವರು ಶರಾವತಿಯ

ಬಗೆ ಟೀಕಿಸುವವರು ಅತೃಪ್ತ ರಾಜಕೀಯ ವಿರೋಧಿಗಳು ಎಂದು ಲೇವಡಿ ಮಾಡಿದರು. ಕಾಂಗ್ರೆಸ್ ಪಕ್ಷ ಮಾತ್ರವೇ ದೇಶವನ್ನು ಅಭಿವೃದ್ಧಿಪಥದಲ್ಲಿ ಮುನ್ನಡೆಲು ಸಾಧ್ಯ ಎಂಬ ಮಾತನ್ನವರು ಪುನರುಚ್ಚರಿಸಿದರು. ಮುಂದಿನ ಎರಡು ವರ್ಷಗಳಲ್ಲಿ ಹೊಸ ತೆರಿಗೆಗಳನ್ನು ಹಾಕುವುದಿಲ್ಲವೆಂದು ಮುಖ್ಯಮಂತ್ರಿಗಳು ಹೇಳಿದ್ದರೂ, ೩೧-೧೨-೧೯೬೩ ರಂದು ವಿಧಾನಸಭೆ ಅಂಗೀ ಕರಿಸಿದ ಮಸೂದೆಯೊಂದರಲ್ಲಿ ಅಭಿವೃದ್ಧಿ ತೆರಿಗೆ ಮತ್ತು ಕೆರೆ, ಕಾಲುವೆ ಹಾಗೂ ಜಲಾಶಯಗಳ ನೀರು ಬಳಸುವ ರೈತರ ಮೇಲೆ ನೀರಿನ ಕರ ಹೇರುವ ಪ್ರಸ್ತಾಪವಿತ್ತು!

೪-೧-೧೯೬೪ ರ ರಾತ್ರಿ ಸರ್ಕಾರವು ಒಂದು ಶಾಂತಿ ಸುವ್ಯವಸ್ಥೆಯ ಸಮಸ್ಯೆಯನ್ನು ಎದುರಿಸಬೇಕಾಯಿತು; ಇದು ಆಧುನಿಕ, ಮುಕ್ತ ಹಾಗೂ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಒಂದು ಸಾಮಾನ್ಯ ಪರಿಸ್ಥಿತಿ. ಬೆಂಗಳೂರು ಸಾರಿಗೆ ಸೇವಾಸಂಸ್ಥೆಯ ನೌಕರರು ಮುಷ್ಕರ ಹೂಡಿದ್ದರು; ಈ ಸಂಬಂಧ ಸಿಟಿ ಮಾರ್ಕೆಟ್ ಬಳಿ ದೊಡ್ಡ ಜನಸಂದಣಿ ಜಮಾಯಿಸಿತ್ತು. ಪೊಲೀಸರ ಪ್ರಕಾರ, ಸಂದಣಿಯ ವರ್ತನೆ ಮೇರೆ ಮೀರಿ, ಗುಂಡು ಹಾರಿಸಬೇಕಾದ ಪರಿಸ್ಥಿತಿ ಉದ್ಭವವಾಯಿತು. ಇದರ ಪರಿಣಾಮವಾಗಿ, ಒಬ್ಬ ಸತ್ತು ಮತ್ತೊಬ್ಬ ಗಂಭೀರವಾಗಿ ಗಾಯಗೊಂಡ. ಪದೇ ಪದೇ ನಡೆಯುವ ಶಾಂತಿ-ಸುವ್ಯವಸ್ಥೆಯ ಸಮಸ್ಯೆಯೊಡನೆ ಭ್ರಷ್ಟಾಚಾರವೂ ಮಾಮೂಲಿ ಎನಿಸಿತ್ತು. ಆದರೆ ಅದನ್ನೆದುರಿಸಲು ಮುಖ್ಯಮಂತ್ರಿಗಳು ದೃಢಸಂಕಲ್ಪ ಮಾಡಿದ್ದರು. ಭ್ರಷಾಚಾರದ ಬಗ್ಗೆ ನಿಗಾ ವಹಿಸಿ ನಿಯಂತ್ರಿಸಲು ಒಂದು ಆಯೋಗವನ್ನು ರಚಿಸಲು ಸರ್ಕಾರ ಆಲೋಚಿಸುತ್ತಿತ್ತು. ಅಧ್ಯಕ್ಷ ಕಾಮರಾಜ ನಾಡಾರರು ಮತ್ತೆ ನಿಜಲಿಂಗಪ್ಪನವರನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ನೇಮಿಸಿದ್ದು ಅವರು ರಾಷ್ಟ್ರದ ನೆಲೆಯಲ್ಲಿ ಮಾನ್ಯವಾಗಿದ್ದರು ಎಂಬುದರ ಪ್ರತೀಕವಾಗಿತ್ತು. ಕಾಲೇಜು ಶುಲ್ಕ ಏರಿಸಿದ್ದ ರಿಂದ ಹಳೆ ಮೈಸೂರು ಭಾಗದಲ್ಲಿ ೩೩ ದಿನಗಳ ದೀರ್ಘ ಕಾಲದ ವಿದ್ಯಾರ್ಥಿ ಮುಷ್ಕರ ನಡೆದು ಹಿರಿದಾದ ಮತ್ತು ದೀರ್ಘಕಾಲೀನ ಎನ್ನಬಹುದಾದ ಶಾಂತಿ-ಸುವ್ಯವಸ್ಥೆ ಹಾಳಾಗುವ ಪರಿಸ್ಥಿತಿ ಉಂಟಾಯಿತು. ಈ ಬಗ್ಗೆ ಅಧ್ಯಯನ ನಡೆಸಲು ಒಂದು ಸಮಿತಿ ಯನ್ನು ರಚಿಸುವುದಾಗಿ ನಿಜಲಿಂಗಪ್ಪನವರು ಹೇಳಿ ಅದನ್ನು ಯಶಸ್ವಿಯಾಗಿ ನಿಭಾಯಿಸಿದ್ದ ರಿಂದ, ಮುಷ್ಕರ ೧೫-೧-೧೯೬೪ ರಂದು ಕೊನೆಗೊಂಡಿತು. ಭ್ರಷಾಚಾರದ ವಿರುದ್ಧದ ತಮ್ಮ ಹೋರಾಟದ ಭಾಗವಾಗಿ ವಿಧಾನಸೌಧದ ನೌಕರರ ಸಮ್ಮೇಳನವೊಂದನ್ನು ಕರೆದು, ಲಂಚಗುಳಿತನ ಹಾಗೂ ಅಸಮರ್ಥತೆಗಾಗಿ ನೌಕರಶಾಹಿಯನ್ನು ಶಿಕ್ಷಿಸಲು ಅನುಕೂಲವಾಗುವಂತೆ ಕಾನೂನು ತಿದ್ದುಪಡಿ ಮಾಡಬೇಕೆಂದು ಸೂಚಿಸಿದರು. ಸಾರ್ವ ಜನಿಕ ಸ್ಥಳಗಳಲ್ಲಿನ ಭ್ರಷ್ಟಾಚಾರವನ್ನೆದುರಿಸಲು ಭ್ರಷ್ಟ ಅಧಿಕಾರಿಗಳ ಬಗ್ಗೆ ತನಿಖೆ ಮಾಡಲು

ಏಕಸದಸ್ಯ ಜಾಗ್ರತ ಆಯುಕ್ತವೊಂದನ್ನು ರಚಿಸುವ ಮೂಲಕ ರಾಷ್ಟ್ರ ಮಟ್ಟದಲ್ಲಿ ಒಂದು ಸಮರವನ್ನೇ ಸಾರಲಾಯಿತು. ಮೈಸೂರು ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶ ನಿಟ್ಟೂರು ಶ್ರೀನಿವಾಸರಾಯರು ಅದರ ಮೊದಲ ಆಯುಕ್ತರಾಗಿ ನೇಮಕ ಗೊಂಡರು.

ನಿಜಲಿಂಗಪ್ಪನವರ ರಾಜಕೀಯ ಕಡುವೈರಿ ವಿರೋಧಿ ಬಣದ ನಾಯಕ ಟಿ. ಸುಬ್ರಹ್ಮಣ್ಯ ಅವರು ಮೈಸೂರಿನಲ್ಲಿ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡುತ್ತ, ಆಡಳಿತ ಕಾಂಗ್ರೆಸ್‌ನ ವಿರುದ್ಧ ಪರ್ಯಾಯ ಕಾಂಗ್ರೆಸ್ ಒಂದನ್ನು ಹುಟ್ಟುಹಾಕುವುದಾಗಿ ಘೋಷಿಸಿ ದರು. ಈ ಆಲೋಚನೆಗೆ ಅನೇಕ ಹಿರಿಯ ಕಾಂಗ್ರೆಸ್ ಮುಖಂಡರ ಬೆಂಬಲವಿದೆ ಯೆಂದೂ ಹೇಳಿಕೊಂಡರು. ಈ ಸಭೆಯನ್ನುದ್ದೇಶಿಸಿ ಎಸ್. ಚೆನ್ನಯ್ಯ, ಎಚ್.ಎಂ. ಚೆನ್ನಬಸಪ್ಪ ಅವರುಗಳೂ ಮಾತನಾಡಿದರು. ಈಚೆಗೆ ಕಾಂಗ್ರೆಸ್ ಸಾಕಷ್ಟು ಹೊಲಸನ್ನು ಹೊತ್ತಿದೆ ಎಂದು ಆಪಾದಿಸಿದರು. ಮುಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್‌ನ ಹೊಲಸು ನಿವಾರಣೆಯಾಗುವುದೆಂದು ಹನುಮಂತಯ್ಯನವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಹೊಸತೂ-ಹೊಸ ರಕ್ತದ ಪೀಳಿಗೆಯದೂ-ಆದ ನಾಯಕತ್ವದ ಆವಶ್ಯಕತೆಯಿದೆ. ನೆಹರೂ ಅವರು ಅಧಿಕಾರ ತೊರೆದು ಸರ್ಕಾರದ ಸಲಹೆಗಾರರಾಗಿ ಕಾರ್ಯ ನಿರ್ವಹಿಸಿ ಮಾದರಿಯಾಗಬೇಕೆಂದೂ ಅವರು ಸೂಚಿಸಿದರು. ರಾಜ್ಯ ರಾಜಕಾರಣದಲ್ಲಿನ ತಮ್ಮ ಪಾತ್ರದ ಬಗ್ಗೆ ಮಾತನಾಡುತ್ತ, ತಾವಿನ್ನೂ ಆ ಬಗ್ಗೆ ಸಂಚಯನಗೊಂಡಿಲ್ಲವೆಂದೂ, ಆ ಕಾರಣದಿಂದಲೇ ಹೊಸ ಪಕ್ಷ ರಚನೆಯ ಉದ್ದೇಶದಿಂದ ಸೇರಿರುವ ಸುಬ್ರಹ್ಮಣ್ಯ ರಂತಹವರ ಸಭೆಗೆ ಹಾಜರಾಗಲಿಲ್ಲವೆಂದೂ ವಿವರಣೆ ನೀಡಿದರು. ನಿಜಲಿಂಗಪ್ಪನವರ ನಾಯಕತ್ವದ ಬಗ್ಗೆ ತಮಗೆ ಭ್ರನಿರಸನವಾಗಿದೆಯೆಂದೂ, ಆದರೆ ತಮ್ಮ ಅತೃಪ್ತಿಯ ಸ್ವರೂಪ ಎಂತಹುದೆಂಬುದು ಇನ್ನೂ ಸ್ಪಷ್ಟವಾಗಿಲ್ಲವೆಂದೂ ಹೇಳಿದರು. ಒಟ್ಟಾರೆ, ಮುಕ್ತ ಆಯ್ಕೆಗಳನ್ನು ಮುಚ್ಚಿಬಿಡುವ ಆತುರದ ತೀರ್ಮಾನ ತೆಗೆದುಕೊಳ್ಳದೆ ತಮ್ಮ ಚಾಣಾಕ್ಷತನ ಮೆರೆದರು. ಧಾರವಾಡದಲ್ಲಿ ೨-೧-೧೯೬೪ ರಂದು ರಾಜ್ಯ ಸಹಕಾರಿ ಸಂಘಗಳನ್ನುದ್ದೇಶಿಸಿ ಮಾತನಾಡುತ್ತ ನಿಜಲಿಂಗಪ್ಪನವರು, ಭಾರತದ ಸಮಸ್ಯೆಗಳೆಂದರೆ ಬಡತನ, ಅಜ್ಞಾನ, ನಿರುದ್ಯೋಗ ಮತ್ತು ಖಿನ್ನತೆ-ಹತಾಶಭಾವನೆಗಳು ಎಂದು ಬಣ್ಣಿಸಿ ದರು. ಸಕ್ರಿಯ ಶೋಷಣರಹಿತ ಭಾರತದ ನವಸಮಾಜದ ನಿರ್ಮಾಣಕ್ಕೆ ಸಹಕಾರ ಸಂಘಗಳ ಮಾರ್ಗ ಅತ್ಯಂತ ಸೂಕ್ತ ಎಂದರು. ಅವರ ಸಹೋದ್ಯೋಗಿ ಸಹಕಾರ ಸಚಿವ ರಾಮಕೃಷ್ಣ ಹೆಗಡೆ ಅವರು ಮಾತನಾಡಿ, ಸಹಕಾರಸಂಘಗಳ ಮೇಲೆ ಸರ್ಕಾರದ ಹತೋಟಿ ಕನಿಷ್ಠವಾಗಿರಬೇಕೆಂದೂ ಆದರೆ ನಿಯಂತ್ರಣರಾಹಿತ್ಯ ಅಪಾಯಕಾರಿಯೆಂದೂ ಎಚ್ಚರಿಸಿದರು. ನಿಜಲಿಂಗಪ್ಪನವರ ಬಿಡುವಿಲ್ಲದ ದೈನಂದಿನಗಳ ರಾಜಕೀಯ ಜಂಜಾಟದ

ನಡುವೆ ಬಿಡುವು ಎಂದರೆ ಎಂದಿನಂತೆ ಅವರು ಸಣ್ಣ ಅಪಘಾತಕ್ಕೆ ಒಳಗಾಗುವುದು! ೧೫-೨-೧೯೬೪ ರಂದು ಸ್ನಾನ ಮಾಡುವಾಗ ಜಾರಿ ಬಿದ್ದು ಎಡಗೈಗೆ ಸ್ವಲ್ಪ ಗಾಯವಾಯಿತು. ಹೀಗಾಗಿ ಮುಂದಿನ ಹತ್ತು ದಿನಗಳ ತಮ್ಮೆಲ್ಲ ಕಾರ್ಯಕ್ರಮಗಳನ್ನೂ ಅವರು ರದ್ದುಪಡಿಸಿದರು. ಆದರೆ ಅಂದುಕೊಂಡದ್ದಕ್ಕಿಂತ ಮುಂಚೆಯೇ ಚಟುವಟಿಕೆಗಳಿಗೆ ಮರಳಿ, ರಾಜ್ಯ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ಮಾತನಾಡಿ, ಮುಂದಿನ ೧೫-೨೦ ವರ್ಷಗಳ ಅವಧಿಗೆ ಒಂದು ಅಭಿವೃದ್ಧಿಯ ನೀಲನಕ್ಷೆಯನ್ನು ರಚಿಸಲು ಸಲಹೆಯಿತ್ತರು. ರಾಜ್ಯ ಕಾಂಗ್ರೆಸ್ ಒಳಜಗಳ ತನ್ನ ಬಲಿ ತೆಗೆದುಕೊಂಡಿತು: ತನ್ನ ಸ್ಥಾಪಕರಲ್ಲಿ ಒಬ್ಬರಾದ ಟಿ. ಸುಬ್ರಹ್ಮಣ್ಯ ಅವರನ್ನು ಪಕ್ಷದಿಂದ ಉಚ್ಚಾಟಿಸುವ ನಿರ್ಣಯವನ್ನು ತನ್ನ ೨೫-೨-೧೯೬೪ರ ಸಭೆಯಲ್ಲಿ ಎಂಪಿಸಿಸಿ ತೆಗೆದುಕೊಳ್ಳಬೇಕಾದ ಅನಿವಾರ್ಯತೆಯುಂಟಾಯಿತು. ಆ ಸಭೆಯ ಅಧ್ಯಕ್ಷತೆಯನ್ನು ಕಾಂಗ್ರೆಸ್ ಅಧ್ಯಕ್ಷ ಮೊಹಮ್ಮದ್ ಆಲಿ ವಹಿಸಿದ್ದರು, ನಿಜಲಿಂಗಪ್ಪನವರೂ ಭಾಗವಹಿಸಿದ್ದರು. ಎಚ್.ಎಂ. ಚೆನ್ನಬಸಪ್ಪನವರನ್ನು ಉಚ್ಚಾಟಿಸುವ ನಿರ್ಣಯವನ್ನು ಮುಂದಿನ ಸಭೆಯಲ್ಲಿ ಕೈಗೊಳ್ಳಲು ನಿರ್ಧರಿಸಿತು.

೨-೩-೧೯೬೪ ರಂದು ಜತ್ತಿ ೧೯೬೪-೬೫ನೇ ಸಾಲಿನ ಬಜೆಟ್ ಅನ್ನು ಮಂಡಿಸಿದರು. ಹೊಸ ತೆರಿಗೆಗಳಾವುವೂ ಇರಲಿಲ್ಲ, ಹಾಗೆಯೇ ಕೊರತೆಯನ್ನೂ ನಿರ್ಮೂಲನ ಮಾಡಲಾಗಿತ್ತು. ವಾಸ್ತವವಾಗಿ, ಅದರಲ್ಲಿ ಏಳು ಲಕ್ಷ ರೂಪಾಯಿಗಳ ಉಳಿತಾಯವನ್ನೇ ತೋರಿಸಲಾಗಿತ್ತು. ಈ ನಡುವೆ, ಒಡೆಯರ್ ಅವರನ್ನು ಮದ್ರಾಸ್‌ನ ರಾಜ್ಯಪಾಲರಾಗಿ ವರ್ಗಾವಣೆ ಮಾಡಲಾಯಿತು; ಅವರ ಬದಲಿಗೆ ಜನರಲ್ ಶ್ರೀನಾಗೇಶ್ ಬಂದರು. ಮಾತು ಕೊಟ್ಟಿದ್ದಂತೆ ಶರಾವತಿ ಯೋಜನೆಯ ಬಗೆಗಿನ ಶ್ವೇತಪತ್ರವೊಂದನ್ನು ೯-೩-೧೯೬೪ ರಂದು ಸರ್ಕಾರ ವಿಧಾನಸಭೆಯಲ್ಲಿ ಮಂಡಿಸಿತು. ಆದರೆ ಅದರಿಂದ ಟೀಕಾಕಾರರು ತೃಪ್ತರಾಗಲಿಲ್ಲ. ನಿದರ್ಶನಕ್ಕೆ, ಕಾಂಗ್ರೆಸ್‌ನಲ್ಲಿದ್ದ ನಿಜಲಿಂಗಪ್ಪನವರ ರಾಜಕೀಯ ವೈರಿಗಳಲ್ಲೊಬ್ಬರಾದ ಅಣ್ಣಾರಾವ್ ಗಣಮುಖಿ ಅವರು, ಯೋಜನೆಯಲ್ಲಿ ಸಾಕಷ್ಟು ಹಣ ಅಪವ್ಯಯಗೊಂಡಿರುವುದು ಶ್ವೇತಪತ್ರದಲ್ಲಿಯೇ ಸೂಚಿತವಾಗಿದೆಯೆಂದೂ. ಯೋಜನೆಯನ್ನು ಗುತ್ತಿಗೆದಾರರೇ ನಿರ್ವಹಿಸುತ್ತಿರುವಂತೆ ತೋರುತ್ತದೆ ಎಂದೂ ಕಿಡಿಕಾರಿದರು! ಸರ್ಕಾರ ಮತ್ತು ಗುತ್ತಿಗೆದಾರರು ಕೈಜೋಡಿಸಿ ಸಾರ್ವಜನಿಕ ಹಣವನ್ನು ಲೂಟಿ ಮಾಡಿರುವುದಾಗಿ ಹೇಳಿದರು. ಮತ್ತೊಬ್ಬ ಟೀಕಾಕಾರರಾದ ಜಿ. ದುಗ್ಗಪ್ಪ ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡು ಅದನ್ನು ಮುಖ್ಯಮಂತ್ರಿಗಳು ತಮ್ಮ ತವರು ಜಿಲ್ಲೆಯಲ್ಲಿ ಮಾಡಿರುವ 'ಹಾವಳಿ' ಎಂದು ವ್ಯಂಗ್ಯವಾಗಿ ಬಣ್ಣಿಸಿ ಅದು ಹೆಚ್ಚಾಗುತ್ತಿದೆಯೆಂದರು. ಗಣಮುಖಿಯವರು ಮತ್ತೊಂದು ಆಪಾದನೆಯೆಂದರೆ ಪಕ್ಷಪಾತ. ಸಮರ್ಥನೆಯಿಲ್ಲದೆ ಒಬ್ಬ ಗುತ್ತಿಗೆದಾರರಾದ ರಾಮಯ್ಯನವರಿಗೆ ೧೩ ಲಕ್ಷ ರೂಪಾಯಿಗಳನ್ನು ಕೊಟ್ಟು,

ಅದೇ ಪರಿಸ್ಥಿತಿಯಲ್ಲಿದ್ದ ಮಿಕ್ಕ ಗುತ್ತಿಗೆದಾರರಾದ ಬೋರಯ್ಯ ಮತ್ತು ಬಸವಯ್ಯನವರಿಗೆ ಅದನ್ನು ನಿರಾಕರಿಸುವುದರ ಮೂಲಕ ಸರ್ಕಾರ ಪಕ್ಷಪಾತ ತೋರಿದೆ ಎಂಬುದು. ಆದರೆ ಕೇಂದ್ರ ನೀರಾವರಿ ಸಚಿವ ಕೆ. ಎಲ್. ರಾವ್ ಅವರು ನಿಜಲಿಂಗಪ್ಪನವರ ಬೆಂಬಲಕ್ಕೆ ನಿಂತರು. ಈ ಬಗ್ಗೆ ತನಿಖೆ ಅನಗತ್ಯವೆಂದೂ, ಭ್ರಷ್ಟಾಚಾರದ ಬಗ್ಗೆ ರಾಜ್ಯ ಸರ್ಕಾರವೇ ತೃಪ್ತಿಕರವಾದ ಪರಿಶೀಲನೆ ನಡೆಸಿದೆಯೆಂದೂ ಅವರು ಅಭಿಪ್ರಾಯಪಟ್ಟರು.

ಶರಾವತಿ ಯೋಜನೆಯ ಬಗೆಗಿನ ಶ್ವೇತಪತ್ರವನ್ನಾಧರಿಸಿದ ವಿಮರ್ಶೆಯೊಂದನ್ನು ಕಾಂಗ್ರೆಸ್ ಸದಾಚಾರ ಸಮಿತಿ ಎಂದು ಕರೆದುಕೊಂಡ ವೇದಿಕೆಯೊಂದು ೧೨-೩-೧೯೬೪ ರಂದು ಪ್ರಕಟಿಸಿತು. ಯೋಜನೆಯಲ್ಲಿ ನಡೆದ ಹಣದ ಅವ್ಯವಹಾರ ಹಾಗೂ ಅಕ್ರಮಗಳ ಬಗ್ಗೆ ಶ್ವೇತಪತ್ರದಲ್ಲಿಯೇ ಸುಳಿವಿದೆಯೆಂದು ವೇದಿಕೆ ಪ್ರತಿಪಾದಿಸಿತು; ಹೀಗಾಗಿ ನ್ಯಾಯಾಂಗ ತನಿಖೆಯ ಆವಶ್ಯಕತೆಯಿದೆಯೆಂಬುದು ಅದರ ವಾದ. ವೇದಿಕೆಯ ವಕ್ತಾರನೆಂದು ಕರೆದುಕೊಂಡ ಎಚ್.ಎಂ. ಚೆನ್ನಬಸಪ್ಪನವರು ಈ ಪ್ರಕಟಣೆಯನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿದರು. ನಿಜಲಿಂಗಪ್ಪನವರನ್ನು ವಿರೋಧಿಸುತ್ತಿದ್ದವರೆಲ್ಲ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು; ಅವರಲ್ಲಿ ಎಸ್. ಚೆನ್ನಯ್ಯ, ಗಣಮುಖಿ, ಮಾಲಿ ಮರಿಯಪ್ಪ ಮತ್ತು ಎ.ಜಿ. ರಾಮಚಂದ್ರರಾವ್ ಸೇರಿದ್ದರು. ವಿಧಾನಸಭೆಯ ಪಕ್ಷೇತರ ಸದಸ್ಯರಾದ ಸಿ.ಜೆ. ಮುಕ್ಕಣ್ಣಪ್ಪನವರು ೧೩-೩-೧೯೬೪ ರಂದು ತಮ್ಮ ಹಳೆಯ ವಾದವನ್ನು ಮಂಡಿಸುತ್ತ, ಸರ್ಕಾರವು ಹಳೆಯ ಮೈಸೂರನ್ನು ಕಡೆಗಣಿಸಿರುವುದರಿಂದ ರಾಜ್ಯವನ್ನು ಎರಡು ಭಾಗಗಳಾಗಿ ವಿಭಜಿಸಬೇಕೆಂದು ಹೇಳಿದರು. ಕಾಕತಾಳೀಯವಾಗಿ, ಈಗ ಈ ರಾಗವನ್ನು ಹಾಡುತ್ತಿರುವವರು ಹಳೆ ಮೈಸೂರೇತರ ಭಾಗದವರು! ೧೭-೩-೧೯೬೪ ರಂದು ವಿರೋಧ ಪಕ್ಷದ ನಾಯಕರಾದ ಎಸ್. ಶಿವಪ್ಪನವರು ನಿಜಲಿಂಗಪ್ಪನವರ ಅನಾರೋಗ್ಯವನ್ನು ವಿಧಾನಸಭೆಯಲ್ಲಿ ಪ್ರಸ್ತಾಪಿಸಿದರು. ಮುಖ್ಯ ಮಂತ್ರಿಗಳ ಅನಾರೋಗ್ಯದ ಕಡೆ ಗಮನ ಸೆಳೆದು, ಅವರು ಆರೋಗ್ಯವಂತರಾಗುವವರೆಗೆ ಮುಖ್ಯಮಂತ್ರಿಯ ಜವಾಬ್ದಾರಿಯನ್ನು ಬೇರೊಬ್ಬರಿಗೆ ವಹಿಸಬೇಕೆಂದು ಆಗ್ರಹಿಸಿದರು. ಹಳೆಯ ಮೈಸೂರು ಭಾಗಕ್ಕೆ ಅನ್ಯಾಯವಾಗಿದೆಯೆಂಬ ವಾದವನ್ನು ೧೭-೩-೧೯೬೪ ರಂದು ವೀರೇಂದ್ರ ಪಾಟೀಲರು ಅಲ್ಲಗಳೆದರು. ಮುಂಬಯಿ ಕರ್ನಾಟಕದ ಏಕೀಕರಣ ಧುರೀಣ ಅನ್ನದಾನಪ್ಪ ದೊಡ್ಡಮೇಟಿಯವರು ರಾಜ್ಯವಿಭಜನೆಯ ಬಗ್ಗೆ ಮುಕ್ಕಣ್ಣಪ್ಪನವರು ಆಡಿದ ಮಾತನ್ನು ಟೀಕಿಸಿದರು. ನೀರಾವರಿ ಯೋಜನೆಗಳಿಗೆ ಕೋಟಿಗಟ್ಟಲೆ ಖರ್ಚಾಗಿದ್ದರೂ, ಜನರಿಗೆ ಮಾತ್ರ ಯಾವುದೇ ಉಪಯೋಗವಾಗಿಲ್ಲವೆಂಬ ಟೀಕೆಯ ಬಗ್ಗೆ ನಿಜಲಿಂಗಪ್ಪನವರು ಆಡಿದ್ದ ಮಾತುಗಳನ್ನು ಜತ್ತಿ ಅವರು ವಿಧಾನಪರಿಷತ್ತಿನಲ್ಲಿ ಪುನರುಚ್ಚರಿಸಿದರು. ಹೊಸ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು ಏಕೆ ಕಷ್ಟಕರವಾಗಿದೆ

ಎಂಬುದರ ಕಾರಣಗಳನ್ನು ವಿವರಿಸಿದರು. ಅನಾರೋಗ್ಯದಿಂದ ಚೇತರಿಸಿಕೊಂಡಂತೆ ಕಾಣಿಸಿದ ನಿಜಲಿಂಗಪ್ಪನವರು ೨೫-೩-೧೯೬೪ ರಂದು ವಿಧಾನಸಭೆಯಲ್ಲಿ ಹೇಳಿಕೆ ನೀಡಿ ಆಲಮಟ್ಟಿ ಅಣೆಕಟ್ಟೆಯನ್ನು ಕೈಬಿಡುವುದಿಲ್ಲವೆಂದೂ, ಅದಕ್ಕಾಗಿ ಒತ್ತಾಯಿಸುತ್ತಿರುವವರು ತಮ್ಮ ಸತ್ಯಾಗ್ರಹವನ್ನು ನಿಲ್ಲಿಸಬೇಕೆಂದೂ ಕೇಳಿಕೊಂಡರು. ಜನರು ಮತ್ತು ಶಾಸಕರು ಒಗ್ಗಟ್ಟಾಗಿ ಸಮೃದ್ಧ ಕರ್ನಾಟಕದ ನಿರ್ಮಾಣಕ್ಕೆ ಶ್ರಮಿಸಬೇಕೆಂದು ೨೫-೩-೧೯೬೪ ರಂದು ನಿಜಲಿಂಗಪ್ಪನವರು ಕರೆ ನೀಡಿದರು. ರಾಜ್ಯ ವಿಭಜನೆಯ ಸಲಹೆಯನ್ನವರು ಹುಚ್ಚುತನವೆಂದು ಕರೆದರು. ರಾಜ್ಯದ ನ್ಯಾಯಯುತ ಹಕ್ಕುಗಳಿಗಾಗಿ ಹೋರಾಟ ನಡೆಸಲು ಸಿದ್ಧವಾಗಿದ್ದರೂ ನಿಜಲಿಂಗಪ್ಪನವರು ನೆರೆಯ ರಾಜ್ಯಗಳೊಡನೆ ಸಹಕರಿಸುವ ಸಕಾರಾತ್ಮಕ ಧೋರಣೆಯನ್ನು ತಾಳಿದರು. ಮೈಸೂರು ಸರ್ಕಾರವು ಶರಾವತಿ ಯೋಜನೆಯಿಂದ ಗೋವಾಕ್ಕೆ ೫೦,೦೦೦ ಕಿಲೋವ್ಯಾಟ್ ವಿದ್ಯುತ್ ಸರಬರಾಜು ಮಾಡಿದ್ದು ಇದಕ್ಕೊಂದು ನಿದರ್ಶನ. ಗೋವಾದ ಲೆಫ್ಟಿನೆಂಟ್ ಗವರ್ನರ್ ಎಂ.ಆರ್. ಸಚದೇವ್ ಅವರು ಅದಕ್ಕಾಗಿ ನಿಜಲಿಂಗಪ್ಪನವರಿಗೆ ಕೃತಜ್ಞತೆ ಸಲ್ಲಿಸಿದರು. ಕೃಷಿ ಅಭಿವೃದ್ಧಿಯ ತನ್ನ ಪ್ರಯತ್ನಗಳನ್ನು ಹೆಚ್ಚಿಸುವ ಭಾಗವಾಗಿ ಬೆಂಗಳೂರು ಬಳಿಯ ಹೆಬ್ಬಾಳದಲ್ಲಿ ಕೃಷಿ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸಲು ಸರ್ಕಾರವು ನಿರ್ಧರಿಸಿತು.

ತಮ್ಮ ಪ್ರತಿಸ್ಪರ್ಧಿಗಳಿಂದ ಅಧಿಕಾರವನ್ನು ಕಿತ್ತುಕೊಳ್ಳುವ ಪ್ರಯತ್ನದಲ್ಲಿ ವಿಫಲರಾದ ಭಿನ್ನಮತೀಯ ಕಾಂಗ್ರೆಸ್ ನಾಯಕರು ತಾರ್ಕಿಕ ನಿಲುವನ್ನು ತೆಗೆದುಕೊಂಡರು, ಅಂದರೆ ಕಾಂಗ್ರೆಸ್ ತೊರೆದು ಹೊಸ ಪಕ್ಷವೊಂದನ್ನು ರಚಿಸಲು ತೀರ್ಮಾನಿಸಿದರು. ಹೊಸ ಪಕ್ಷವು ಚೆನ್ನಯ್ಯ, ಸುಬ್ರಹ್ಮಣ್ಯ ಮತ್ತವರ ಬೆಂಬಲಿಗರಿಂದ, ಪಂಚಾಯತಿ ಮತ್ತು ತಾಲ್ಲೂಕು ಬೋರ್ಡ್ ಚುನಾವಣೆಗಳಲ್ಲಿ ಸ್ಪರ್ಧಿಸಲು ಅನುಕೂಲವಾಗುವಂತೆ, ೧೯೬೫ರ ಜನವರಿ ಅಥವಾ ಫೆಬ್ರವರಿಯಲ್ಲಿ ಆರಂಭಗೊಳ್ಳುವುದೆಂದು ಪತ್ರಿಕಾ ಪ್ರಕಟಣೆಯಲ್ಲಿ ಘೋಷಿಸಲಾಯಿತು. ಈ ಕುರಿತು ಭಿನ್ನಮತೀಯ ಕಾಂಗ್ರೆಸ್ಸಿಗರು ಶೀಘ್ರವಾಗಿ ಬೆಂಗಳೂರಿನಲ್ಲಿ ಸಮಾವೇಶಗೊಳ್ಳುವುದಾಗಿ ತಿಳಿಸಿದರು. ಅವರ ಪ್ರಮುಖ ದೂರೆಂದರೆ ಮೈಸೂರು ಕಾಂಗ್ರೆಸ್ ಮತ್ತು ಮೈಸೂರು ಸರ್ಕಾರಗಳು ನಿಜಲಿಂಗಪ್ಪನವರ ಬೆಂಬಲಿಗರಿಗೆ ಮಾತ್ರ ಅವಕಾಶ ನೀಡುತ್ತಿವೆ ಎಂಬುದು. ಈ ವಿಷಯವನ್ನವರು ಪಕ್ಷದ ವರಿಷ್ಠರಿಗೆ, ವಿಶೇಷವಾಗಿ ಅಧ್ಯಕ್ಷ ಕಾಮರಾಜರ ಗಮನಕ್ಕೆ ತರಲು ನಿರ್ಧರಿಸಿದರು. ತ್ರಿವೇಂದ್ರಂನಲ್ಲಿ ೧೨-೫-೧೯೬೪ ರಂದು ನಡೆದ ದಕ್ಷಿಣ ವಲಯ ಮಂಡಳಿಯ ಸಭೆಯಲ್ಲಿ ದೇಶದ ಜಾಗ್ರತ ಆಯೋಗದ ಮಾದರಿಯಲ್ಲಿ ತಾವು ರಾಜ್ಯ ಜಾಗ್ರತ ಆಯೋಗವನ್ನು ಶೀಘ್ರವೇ ರಚಿಸುವುದಾಗಿ ತಮ್ಮ ಭ್ರಷ್ಟಾಚಾರವಿರೋಧಿ ನಿಲವಿಗೆ ಅನುಗುಣವಾಗಿ ನಿಜಲಿಂಗಪ್ಪನವರು ಪ್ರಕಟಿಸಿದರು. ೧೫ ಕೋಟಿ ೪೨ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿತ

ವಾಗಿದ್ದ ಮಂಗಳೂರಿನ ಸರ್ವಋತು ಬಂದರು ೧೮-೫-೧೯೬೪ ರಂದು ಕಾಮರಾಜ ರಿಂದ ಉದ್ಘಾಟನೆಗೊಂಡದ್ದು ನಿಜಲಿಂಗಪ್ಪ ಸರ್ಕಾರದ ಕಿರೀಟದಲ್ಲಿ ಸೇರಿಸಿದ ಹೊಸ ಗರಿಯಾಗಿತ್ತು. ಹದಿನೇಳು ವರ್ಷಗಳ ಕಾಲ ದೇಶದ ಪ್ರಧಾನಿಗಳಾಗಿದ್ದ ನೆಹರೂ ಅವರು ದೆಹಲಿಯಲ್ಲಿ ೨೭-೫-೧೯೬೪ ರಂದು ನಿಧನರಾಗಿ ಇತಿಹಾಸ ಸೇರಿದ್ದು ಒಂದು ರಾಷ್ಟ್ರೀಯ ದುರಂತವೆನಿಸಿತು. ಅಂದು ಬೆಳಿಗ್ಗೆ ಇದ್ದಕ್ಕಿದ್ದಂತೆ ಅಸ್ವಸ್ಥರಾದ ಅವರು ಮಧ್ಯಾಹ್ನ ೨-೦೦ ಗಂಟೆಗೆ ನಿಧನರಾದರು. ನೆಹರೂ ಅವರ ಸಾವು ದೇಶದ ಪ್ರಜಾಪ್ರಭುತ್ವ ಹಾಗೂ ರಾಷ್ಟ್ರೀಯತೆಗೆ ಒಡ್ಡಿದ ಅಗ್ನಿಪರೀಕ್ಷೆಯಂತಿತ್ತು. ಕೆಲವು ಸಂಶಯ ಗ್ರಸ್ತರು ನೆಹರೂ ಬಳಿಕ ಏನು? ಅಥವಾ ಯಾರು? ಎಂಬ ಪ್ರಶ್ನೆ ಕೇಳತೊಡಗಿದರು. ನೆಹರೂ ಅವರ ನಿರ್ಗಮನ ದೇಶದಲ್ಲಿ ರಾಜಕೀಯ ಅಸ್ಥಿರತೆಯನ್ನುಂಟುಮಾಡಬಹು ದೆಂದು ವಿದೇಶಗಳಲ್ಲಿ ಕೆಲವರು ಭಯಪಟ್ಟರೆ, ಮತ್ತೆ ಕೆಲವರು ಹಾಗಾಗಲೆಂದು ಆಶಿಸಿದರು. ಆದರೆ, ಭಾರತದ ಉದಾರವಾದೀ ಪ್ರಜಾಸತ್ತಾತ್ಮಕ ವ್ಯವಸ್ಥೆಯು, ಬಿಕ್ಕಟ್ಟುಗಳಿಗೆ ಒಳಗಾಗುತ್ತಿದ್ದರೂ, ಸಾಕಷ್ಟು ಪ್ರಬುದ್ಧವಾಗಿ ಬೆಳೆದಿತ್ತು, ಹೀಗಾಗಿ ನಾಯಕತ್ವದ ಪ್ರಶ್ನೆಯನ್ನು ಎದುರಿಸಲು ಬೇಕಾದ ಗಟ್ಟಿತನವನ್ನು ಪಡೆದಿತ್ತು. ನೆಹರೂ ಅವರ ಉತ್ತರಾಧಿಕಾರಿಯ ಆಯ್ಕೆಯಲ್ಲಿ ಕಾಮರಾಜರು ಮಹತ್ವದ ಪಾತ್ರ ವಹಿಸಿದರು, ಲಾಲ್ ಬಹಾದ್ದೂರ್ ಶಾಸ್ತ್ರಿಯವರು ದೇಶದ ಎರಡನೆಯ ಪ್ರಧಾನಿಗಳಾದರು. ಶಾಸ್ತ್ರಿಯವರು ೯-೬-೧೯೬೪ ರಂದು ಪ್ರಧಾನ ಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದರು. ಅವರ ಸಂಪುಟವು ಹಿಂದಿನ ಸಂಪುಟದ ಸದಸ್ಯರನ್ನುಳಿಸಿಕೊಂಡರೂ, ಎರಡು ಹೊಸ ಸೇರ್ಪಡೆಗಳನ್ನು ಹೊಂದಿತು: ಅವರುಗಳೆಂದರೆ, ಸಂಜೀವರೆಡ್ಡಿ ಮತ್ತು ಇಂದಿರಾ ಗಾಂಧಿ. ಕಾಮರಾಜ ಯೋಜನೆಯಡಿಯಲ್ಲಿ ಸಂಪುಟ ತೊರೆದಿದ್ದ ಎಸ್.ಕೆ. ಪಾಟೀಲ್‌ರನ್ನು ಪುನಃ ಸಂಪುಟಕ್ಕೆ ಸೇರಿಸಿಕೊಳ್ಳಲಾಯಿತು. ಕೇಂದ್ರದಲ್ಲಾದ ಬದಲಾವಣೆಗಳು ನಿಜಲಿಂಗಪ್ಪ ಮತ್ತು ಕೇಂದ್ರಗಳ ನಡುವಣ ಸಂಬಂಧವನ್ನು ವ್ಯತ್ಯಾಸಗೊಳಿಸಿದಂತೆ ಕಾಣಲಿಲ್ಲ. ಏನಾದರೂ ಆಗಿದ್ದರೆ, ಈಗ ನಿಜಲಿಂಗಪ್ಪನವರ ನೆಹರೂ ಜೊತೆಗಿನ ಸಮಸ್ಯೆಗಳು ಇಲ್ಲವಾಗಿ, ಬಾಂಧವ್ಯ ಇನ್ನಷ್ಟು ಉತ್ತಮವೇ ಆಯಿತು.

ರಾಜ್ಯದ ಅನೇಕ ಭಾಗಗಳಲ್ಲಿ ಬರದಂತಹ ಪರಿಸ್ಥಿತಿ ಉಂಟಾಯಿತು. ತೀವ್ರ ಆಹಾರದ ಕೊರತೆಯನ್ನು ನೀಗಲು ನೆರವು ನೀಡಬೇಕೆಂದು ರಾಜ್ಯವು ಕೇಂದ್ರನ್ನು ಕೇಳಿಕೊಂಡಿತು. ೫೦, ೦೦೦ ಟನ್ ಅಕ್ಕಿ ಹಾಗೂ ೫೦, ೦೦೦ ಟನ್ ಗೋಧಿಯ ನೆರವು ನೀಡಬೇಕೆಂದು ಕೇಂದ್ರವನ್ನು ಕೋರಿ ಮೈಸೂರು ಸಂಪುಟವು ೧೯-೬-೧೯೬೪ ರಂದು ಮನವಿ ಮಾಡಿಕೊಂಡಿತು. ಆ ಕಾಲದಲ್ಲಿ ನಿಜಲಿಂಗಪ್ಪ ಸರ್ಕಾರವು ಎದುರಿಸು ತ್ತಿದ್ದ ಅತ್ಯಂತ ತೀವ್ರ ಸಮಸ್ಯೆಗಳೆಂದರೆ ಆಹಾರದ ಕೊರತೆ ಮತ್ತು ಆರ್ಥಿಕ ಬಿಕ್ಕಟ್ಟುಗಳು.

ನೀರಾವರಿ ಯೋಜನೆಗಳ ಮೇಲೆ ಅಭಿವೃದ್ಧಿ ತೆರಿಗೆಯ ಮೇಲಿನ ಉಪಕರವನ್ನು ಶೀಘ್ರವಾಗಿ ಜಾರಿಗೆ ತರಲಾಗುವುದೆಂದು ನಿಜಲಿಂಗಪ್ಪನವರು ವಿಧಾನ ಪರಿಷತ್ತಿನಲ್ಲಿ ಪ್ರಕಟಿಸಿದರು. ವರ್ತಕರು ಬೆಲೆ ಹೆಚ್ಚಿಸುವ ಹಾಗೂ ಕಳ್ಳ ದಾಸ್ತಾನು ಮಾಡುವ ಮೂಲಕ ಆಹಾರ ಕೊರತೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದರು. ಸರಿಯಾದ ರೀತಿಯಲ್ಲಿ ವರ್ತಿಸದಿದ್ದವರ ಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳಲು ಹಿಂದುಮುಂದು ನೋಡುವುದಿಲ್ಲವೆಂದು ನಿಜಲಿಂಗಪ್ಪನವರು ವರ್ತಕರನ್ನು ಎಚ್ಚರಿಸಿದರು. ಬರಪರಿಸ್ಥಿತಿಯ ಹಿನ್ನೆಲೆಯಲ್ಲಿ ಕೃಷಿವಲಯಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ, ಕಂದಾಯ ಭೂಮಿಯ ಮೇಲೆ ಉಪಕರವನ್ನು ಹೇರುವುದಿಲ್ಲವೆಂದು ನಿಜಲಿಂಗಪ್ಪನವರು ವಿಧಾನಸಭೆಯಲ್ಲಿ ಪ್ರಕಟಿಸಿದರು. ವರ್ತಕರಿಗೆ ನೀಡಿದ್ದ ಎಚ್ಚರಿಕೆಯಂತೆ ಸರ್ಕಾರವು ಕಠಿಣ ಕ್ರಮಗಳನ್ನು ತೆಗೆದುಕೊಂಡಿತು. ನಿದರ್ಶನಕ್ಕೆ, ದುರ್ಬಳಕೆ ಮಾಡಿಕೊಂಡದ್ದು ಕಂಡುಬಂದರೆ ಸಕ್ಕರೆ ವಿತರಿಸುವ ಪರವಾನಗಿಯನ್ನು ರದ್ದುಪಡಿಸುವ ಮೂಲಕ ಎಚ್ಚರಿಕೆಯನ್ನು ಕಾರ್ಯರೂಪಕ್ಕಿಳಿಸಿದ್ದು. ಈ ಸಮಸ್ಯೆಗಳಲ್ಲದೆ, ಸರ್ಕಾರದ ವಿರುದ್ಧ ಪಕ್ಷದ ಭಿನ್ನಮತೀಯರು ಹಾಗೂ ಕಾಂಗ್ರೆಸ್ಸೇತರ ವಿರೋಧ ಪಕ್ಷಗಳವರೂ ಮಾಡುತ್ತಿದ್ದ ಟೀಕೆಗಳ ದಿನನಿತ್ಯದ ಸಮಸ್ಯೆಗಳೊಡನೆಯೂ ನಿಜಲಿಂಗಪ್ಪನವರು ಹೆಣಗಬೇಕಾಗಿತ್ತು. ಶರಾವತಿ ಯೋಜನೆಯು ತೀವ್ರಗತಿಯಲ್ಲಿ ಮುಂದುವರಿಯುತ್ತಿರುವುದರಿಂದ ಆ ಕುರಿತು ನ್ಯಾಯಾಂಗವಾಗಲೀ ಬೇರೆಯದಾಗಲೀ ತನಿಖೆ ಅನಗತ್ಯ ಎಂದು ಅವರು ೧೫-೭-೧೯೬೪ ರಂದು ವಿಧಾನಸಭೆಯಲ್ಲಿ ಪುನರುಚ್ಚರಿಸಿದರು. ಕಾಂಗ್ರೆಸ್ ಶಾಸಕಾಂಗ ಪಕ್ಷದ ಹತ್ತು ಮಂದಿ ಸದಸ್ಯರು ನಿಜಲಿಂಗಪ್ಪ ಮತ್ತವರ ಕೆಲವು ಸಹೋದ್ಯೋಗಿಗಳ ವಿರುದ್ಧ ಭ್ರಷ್ಟಾಚಾರ, ಲಂಚಗುಳಿತನ ಹಾಗೂ ಅಧಿಕಾರ ದುರುಪಯೋಗದ ಆರೋಪಗಳನ್ನು ಮಾಡಿದರು. ಅವರ ವಿರುದ್ಧದ ೨೪ ಪ್ರಸಂಗಗಳನ್ನು ಕಾಂಗ್ರೆಸ್ ಅಧ್ಯಕ್ಷ ಕಾಮರಾಜ್, ಪ್ರಧಾನಿ ಲಾಲ್ ಬಹಾದ್ದೂರ್ ಶಾಸ್ತ್ರಿ ಮತ್ತು ಗೃಹಸಚಿವ ಗುಲ್ಜಾರಿಲಾಲ್ ನಂದಾ ಅವರಿಗೆ ಸಲ್ಲಿಸಿದರು. ಈ ಆರೋಪಗಳ ಕುರಿತು ತನಿಖೆಯಾಗಬೇಕೆಂದು ಒತ್ತಾಯಿಸಿದರು. ಈ ಒತ್ತಾಯವನ್ನು ಸಂಯುಕ್ತ ಸಮಾಜವಾದಿ ಪಕ್ಷದ ನಾಯಕ ಎಚ್. ವಿ. ಕಾಮತ್ ಅವರು ಬೆಂಗಳೂರಿನಲ್ಲಿ ೨೩-೮-೧೯೬೪ ರಂದು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಬೆಂಬಲಿಸಿದರು. ರಾಜ್ಯ ಸರ್ಕಾರವು ಶರಾವತಿ ಯೋಜನೆಯ ಕುರಿತ ತನಿಖಾ ಆಯೋಗವನ್ನು ನೇಮಿಸದಿದ್ದರೆ ತಾವು ಆ ಬಗ್ಗೆ ಸಂಸತ್ತಿನಲ್ಲಿ ಪ್ರಸ್ತಾಪಿಸುವುದಾಗಿ ಘೋಷಿಸಿದರು. ಕೇವಲ ಎರಡು ಕೋಟಿ ರೂಪಾಯಿ ವೆಚ್ಚದ ವಿಧಾನಸೌಧ ನಿರ್ಮಾಣದ ಬಗ್ಗೆ ತನಿಖೆ ನಡೆಸಿದ ನಿಜಲಿಂಗಪ್ಪನವರು ೧೦೦ ಕೋಟಿ ರೂಪಾಯಿಗಳ ಯೋಜನೆಯ ಕುರಿತು ಹಾಗೆ ಮಾಡಲು ಹಿಂದೆ ಮುಂದೆ ನೋಡುತ್ತಿರುವ ಮನೋಭಾವದ ಬಗ್ಗೆ ಅಚ್ಚರಿ ವ್ಯಕ್ತಪಡಿಸಿ

ದರು. ಆದರೆ ನಿಜಲಿಂಗಪ್ಪನವರು ತಮ್ಮ ನಿಲವನ್ನು ಬದಲಿಸಲಿಲ್ಲ; ೨೬-೭-೧೯೬೪ಳ ರಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತ, ಹತ್ತು ಮಂದಿ ಶಾಸಕರು ತಮ್ಮ ಹಾಗೂ ತಮ್ಮ ಸಹೋದ್ಯೋಗಿಗಳ ಬಗ್ಗೆ ಮಾಡಿರುವ ಆರೋಪಗಳನ್ನು ತನಿಖೆ ನಡೆಸಿರುವುದಾಗಿ ಹೇಳಿದರು. ಎಲ್ಲ ಆರೋಪಗಳ ಬಗ್ಗೆ ಪರಿಶೀಲನೆ ನಡೆಸಲಾಗಿಲ್ಲವಾದರೂ, ಇದುವರೆಗೆ ಆದ ತನಿಖೆಯಿಂದ ಆರೋಪಗಳೆಲ್ಲ ಆಧಾರರಹಿತವೆಂದೂ ರಾಜಕೀಯಪ್ರೇರಿತವೆಂದೂ ತಮಗೆ ಮನವರಿಕೆಯಾಗಿರುವುದಾಗಿ ಹೇಳಿದರು. ಅವರ ಸಹೋದ್ಯೋಗಿ ಕೃಷ್ಣಪ್ಪನವರು ತಮ್ಮ ವಿರುದ್ಧ ಮಾಡಲಾದ ಆರೋಪಗಳನ್ನು ಖುದ್ದು ಅಲ್ಲಗಳೆದರು.

ನಿಜಲಿಂಗಪ್ಪನವರ ಸರ್ಕಾರವನ್ನು ಕಾಡುತ್ತಿದ್ದ ದೊಡ್ಡ ಉಪಟಳವೆಂದರೆ ಗಡಿ ವಿವಾದದ್ದು, ವಿಶೇಷವಾಗಿ ಮಹಾರಾಷ್ಟ್ರದೊಡನೆ. ಮಹಾರಾಷ್ಟ್ರದ ಉಮೇದಿನಿಂದಾಗಿ ೧೦-೮-೧೯೬೪ಳ ರಂದು ಗೃಹ ಸಚಿವ ನಂದಾ, ಗಡಿವಿವಾದದ ಬಗ್ಗೆ ಚರ್ಚಿಸಲು ನಿಜಲಿಂಗಪ್ಪ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿ ವಿ.ಪಿ. ನಾಯಕ್ ಅವರ ನಡುವೆ ಸಭೆಯೊಂದನ್ನು ಏರ್ಪಾಟು ಮಾಡಿದರು. ಚರ್ಚೆ ಸುಮಾರು ಎಂಟು ಗಂಟೆಗಳ ಕಾಲ ನಡೆಯಿತು. ಸಭೆಯ ಬಳಿಕ ಪತ್ರಿಕೆಗಳವರೊಡನೆ ಮಾತನಾಡುತ್ತ, ವಿವಿಧ ಪಕ್ಷ ಗಳವರು ಪರಸ್ಪರರನ್ನು ಅರ್ಥಮಾಡಿಕೊಳ್ಳಲು ಇದರಿಂದ ಸಹಾಯವಾಗಿದೆಯೆಂದು ನಿಜಲಿಂಗಪ್ಪನವರು ಹೇಳಿದರು. ತಾವು ಈ ಸಭೆಯ ಫಲಿತದ ಬಗ್ಗೆ ಪ್ರಧಾನ ಮಂತ್ರಿಗಳಿಗೆ ವರದಿ ನೀಡುವುದಾಗಿ ನಂದಾ ಹೇಳಿದರು. ಈ ಮಧ್ಯೆ, ಕಾಲೇಜು ಶುಲ್ಕ ಏರಿಕೆಯ ವಿರುದ್ಧದ ಚಳವಳಿಯಿಂದ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯ ಸಮಸ್ಯೆಯೊಂದು ಉದ್ಭವಿಸಿತು. ವಿದ್ಯಾರ್ಥಿ ಮುಷ್ಕರವನ್ನು ಹತ್ತಿಕ್ಕಲು ಹುಬ್ಬಳ್ಳಿ-ಧಾರವಾಡ ಸೇರಿದಂತೆ ರಾಜ್ಯದ ನಾನಾ ಕಡೆಗಳಲ್ಲಿ ೧೪೪ ನೇ ವಿಧಿಯನ್ನು ಜಾರಿಗೊಳಸಲಾಯಿತು, ಸರ್ಕಾರ ಈ ವಿಷಯದಲ್ಲಿ ಮಧ್ಯಪ್ರವೇಶಿಸಲು ಶಕ್ಯವಾಗಲಿಲ್ಲ. ಆದರೆ, ಏರಿಸಿದ ಶುಲ್ಕವನ್ನು ಸ್ವಲ್ಪ ಮಟ್ಟಿಗೆ ಇಳಿಸಲು ಅನುಕೂಲವಾಗುವಂತೆ ಕಾಲೇಜುಗಳಿಗೆ ಅನುದಾನವನ್ನು ಹೆಚ್ಚಿಸಲು ಸರ್ಕಾರವು ನಿರ್ಧರಿಸಿತು. ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯ ಕಾಲೇಜು ಗಳ ಪ್ರಿನ್ಸಿಪಾಲರ ಮತ್ತು ಆಡಳಿತ ಮಂಡಳಿ ಸದಸ್ಯರ ಸಭೆಯೊಂದರಲ್ಲಿ ನಿಜಲಿಂಗಪ್ಪ ನವರು ಈ ವಿಷಯವನ್ನು ತಿಳಿಸಿದರು. ಇದರ ಪರಿಣಾಮವಾಗಿ, ಆ ಪ್ರದೇಶದಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ಆರು ಮಂದಿ ವಿದ್ಯಾರ್ಥಿಗಳು ತಮ್ಮ ಚಳವಳಿಯನ್ನು ೨೮-೮-೧೯೬೪ಳ ರಂದು ರಾತ್ರಿ ೯-೦೦ ಗಂಟೆಗೆ ಮುಕ್ತಾಯಗೊಳಿಸಿದರು. ಆದರೆ ಕಾಲೇಜು ಆಡಳಿತ ಮಂಡಳಿಗಳು ಶುಲ್ಕವನ್ನಿಳಿಸಿವೆ ಎಂದು ೬-೯-೧೯೬೪ಳ ರಂದು ಪತ್ರಿಕೆಗಳು ವರದಿ ಮಾಡಿದುವು. ಉತ್ತರ ಕರ್ನಾಟಕದ ಕಾಲೇಜುಗಳಲ್ಲಿ ಕಲೆ ಮತ್ತು ವಿಜ್ಞಾನಗಳಿಗೆ ಇದ್ದ ವಾರ್ಷಿಕ ಶುಲ್ಕ ರೂ. ೧೪೪ ಮತ್ತು ವಾಣಿಜ್ಯಕ್ಕೆ ರೂ. ೧೬೦.

ತಮ್ಮ ಮುಷ್ಕರವನ್ನು ನಿಲ್ಲಿಸಿ ತರಗತಿಗಳಿಗೆ ಹಾಜರಾಗಬೇಕೆಂದು ನಿಜಲಿಂಗಪ್ಪನವರು ವಿದ್ಯಾರ್ಥಿಗಳಲ್ಲಿ ಮನವಿ ಮಾಡಿಕೊಂಡರು.

ತಮ್ಮ ಹಾಗೂ ತಮ್ಮ ಸಹಸಚಿವರ ಬಗ್ಗೆ ಮಾಡಿದ್ದ ಆರೋಪಗಳನ್ನು ಕುರಿತ ನಿಜಲಿಂಗಪ್ಪನವರ ನಿಲವು ಬದಲಾದಂತೆ ವರದಿಯಾಯಿತು. ತಮ್ಮ ವಿರುದ್ಧ ಕಾಂಗ್ರೆಸ್ ಶಾಸಕರು ಮಾಡಿದ್ದ ಬಗ್ಗೆ ತನಿಖೆಯನ್ನು ಎದುರಿಸಲು ತಾವು ಸಿದ್ಧವಿರುವುದಾಗಿ ಅವರು ವರಿಷ್ಠರಿಗೆ ಹೇಳಿದರು. ಸರ್ಕಾರವು ಹೆಚ್ಚು ಸುಸೂತ್ರವಾಗಿ ಕೆಲಸ ಮಾಡಲು ಇಂತಹ ತನಿಖೆಯು ಸಹಾಯಮಾಡುವುದೆಂದು ಸಂಸದೀಯ ಮಂಡಳಿಯು ಅಭಿಪ್ರಾಯ ಪಟ್ಟಿತು. ವರಿಷ್ಠ ಮಂಡಳಿಯು ಆಲೋಚಿಸಿದ ಪ್ರಕ್ರಿಯೆ ಎಂದರೆ, ಮೊದಲು ಪ್ರಧಾನಿಗಳು ಇದನ್ನು ಪರಿಶೀಲಿಸುವುದು, ಮೇಲು ನೋಟಕ್ಕೆ ಆರೋಪಗಳಲ್ಲಿ ಹುರುಳಿದೆ ಎಂದು ಕಂಡುಬಂದರೆ ಆನಂತರ ಸರ್ಕಾರವು ಒಂದು ತನಿಖಾ ಆಯೋಗನ್ನು ರಚಿಸುವುದು ಎಂಬುದು. ಪಂಜಾಬ್ ಮುಖ್ಯಮಂತ್ರಿ ಪ್ರತಾಪ್ ಸಿಂಗ್ ಕೈರಾನ್ ಅವರ ವಿರುದ್ಧ ಭ್ರಷ್ಟಾಚಾರದ ಆರೋಪ ಬಂದಾಗಲೂ ವರಿಷ್ಠ ಮಂಡಳಿ ಅನುಸರಿಸಿದ ಕ್ರಮ ಇದೇ ಆಗಿತ್ತು. ತನಿಖೆಯನ್ನು ಸ್ವಾಗತಿಸುವುದಾಗಿ ನಿಜಲಿಂಗಪ್ಪ ಹೇಳಿಕೆಯಿತ್ತರು, ಜೊತೆಗೆ ತಮ್ಮ ನಿರಪರಾಧಿತ್ವವನ್ನು ಸಾಬೀತುಪಡಿಸಲು ತಾವೇ ಈ ಕುರಿತು ಪರಿಶೀಲನೆ ನಡೆಸುವುದಾಗಿಯೂ ಹೇಳಿದರು. ಆದರೆ ಆರೋಪಗಳು ಕ್ಷುಲ್ಲಕವಾಗಿರುವುದರಿಂದ ತನಿಖೆಯ ಆವಶ್ಯಕತೆಯಿಲ್ಲವೆಂಬುದು ತಮ್ಮ ವೈಯಕ್ತಿಕ ಅಭಿಪ್ರಾಯ ಎಂದೂ ಸೇರಿಸಿದರು. ಆ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತ, ಭಿನ್ನಮತೀಯರು ತಮ್ಮ ವಿರುದ್ಧ ಮಾಡಿದ್ದ ಆರೋಪಗಳಿಗೆ ತಾವಿನ್ನೂ ವಿವರಣೆಯನ್ನು ನೀಡಿಲ್ಲವೆಂದೂ, ಬೇಗ ಗೃಹಸಚಿವರಿಗೆ ಅದನ್ನು ಕಳಿಸಿಕೊಡುವುದಾಗಿಯೂ ಹೇಳಿದರು. ಭಿನ್ನಮತೀಯರು ಹಾಗೂ ಮುಖ್ಯ ಮಂತ್ರಿಗಳ ನಡುವಣ ತಿಕ್ಕಾಟದ ಜೊತೆ ತಳುಕು ಹಾಕಿಕೊಂಡಿದ್ದುದೆಂದರೆ ಇನ್ನೂ ಪ್ರಮುಖವಾಗಿದ್ದ ಪಕ್ಷ ಸಂಘಟನೆ ಮತ್ತು ಪಕ್ಷದ ಸರ್ಕಾರಗಳ ನಡುವಣ ಸಂಘರ್ಷ. ಈ ವಿಷಯವನ್ನು ಪರಿಶೀಲಿಸಲು ಎಂಪಿಸಿಸಿ ಒಂದು ಸಮನ್ವಯ ಸಮಿತಿಯನ್ನು ರಚಿಸಿತ್ತು. ೧೧-೧೧-೧೯೬೪ ರಂದು ನಡೆದ ಈ ಸಮಿತಿಯ ಒಂದು ಸಭೆಯಲ್ಲಿ ಹಾಜರಿದ್ದ ನಿಜಲಿಂಗಪ್ಪ ಮತ್ತು ಸಂಸದೀಯ ಮಂಡಳಿಯ ಪ್ರತಿನಿಧಿ ಕೈಗೊಂಡ ತೀರ್ಮಾನವೆಂದರೆ, ಪ್ರಮುಖ ಆಡಳಿತನೀತಿಗಳು, ಅವುಗಳ ಬಗೆಗಿನ ಶಾಸನಗಳು ಮತ್ತವುಗಳ ಅನುಷ್ಠಾನ ಕುರಿತಂತೆ ಎಂಪಿಸಿಸಿಯು ಸರ್ಕಾರಕ್ಕೆ ಮಾರ್ಗದರ್ಶನ ನೀಡಲು ಅವಕಾಶವಿರಬೇಕೆಂಬ ಅಭಿಪ್ರಾಯ. ನಿಜಲಿಂಗಪ್ಪನವರು ತಮ್ಮ ಮೇಲಿನ ಆರೋಪಗಳಿಗೆ ವಿವರಣೆಯನ್ನು ಕಳಿಸಿದ್ದಾರೆಂದು ಜಿ.ಎಲ್. ನಂದಾ ೨೭-೧೧-೧೯೬೪ ರಂದು ರಾಜ್ಯಸಭೆಯಲ್ಲಿ ಹೇಳಿಕೆಯಿತ್ತರು. ನಿಜಲಿಂಗಪ್ಪನವರ ವಿರುದ್ಧ ಮಾಡಿದ ಆಪಾದನೆಗಳಲ್ಲಿ

ರಾಷ್ಟ್ರಪತಿ ಡಾ. ರಾಧಾಕೃಷ್ಣನ್ ಮತ್ತು ರಾಜ್ಯಪಾಲ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಜೊತೆಯಲ್ಲಿ ಎಸ್ಸೆನ್

ಹುರುಳಿದ್ದುದು ಕಂಡುಬಂದರೆ ತಾವು ಸಂಸತ್ ಸದಸ್ಯತ್ವಕ್ಕೆ ರಾಜೀನಾಮೆ ನಿಡುವುದಾಗಿ ಕರ್ನಾಟಕದ ಒಬ್ಬ ಕಾಂಗ್ರೆಸ್ ಸದಸ್ಯರಾದ ಸಿ.ಆರ್. ಬಸಪ್ಪನವರು ದೆಹಲಿಯಲ್ಲಿ ಹೇಳಿಕೆ ಕೊಟ್ಟರು. ಮೈಸೂರಿನ ವಿರೋಧ ಪಕ್ಷಗಳ ಶಾಸಕರ ಒಂದು ಆಯೋಗವು ಎಸ್. ಶಿವಪ್ಪನವರ ನೇತೃತ್ವದಲ್ಲಿ ರಾಷ್ಟ್ರಪತಿ ರಾಧಾಕೃಷ್ಣನ್ ಅವರನ್ನು ಭೇಟಿ ಮಾಡಿ, ಭ್ರಷ್ಟಾಚಾರ, ಪಕ್ಷಪಾತ ಮತ್ತು ಆರೋಪಗಳ ಕುರಿತಾದ ಆಡಳಿತಾತ್ಮಕ ತನಿಖೆಗಳ ವಿರುದ್ಧದ ಮನವಿಯೊಂದನ್ನು ಸಮರ್ಪಿಸಿದರು. ಮನವಿಗೆ ವಿವಿಧ ವಿರೋಧ ಪಕ್ಷಗಳ ೪೨ ಮಂದಿ ಶಾಸಕರು ಸಹಿ ಹಾಕಿದ್ದರು. ಬೆಂಗಳೂರಿನಲ್ಲಿ ಭಿನ್ನಮತೀಯ ನಾಯಕ ಎಸ್. ಚೆನ್ನಯ್ಯನವರು ೨೬-೧೨-೧೯೬೪ ರಂದು ಹೇಳಿಕೆ ನೀಡಿ, ನಿಜಲಿಂಗಪ್ಪ ಮತ್ತಿತರ ಸಹೋದ್ಯೋಗಿಗಳ ವಿರುದ್ಧದ ಆರೋಪಗಳ ಬಗ್ಗೆ ಕೇಂದ್ರ ಸಂಪುಟದ ಒಂದು ಉಪಸಮಿತಿಯು ಪರಿಶೀಲನೆ ನಡೆಸುವುದೆಂದೂ, ಆ ಉಪಸಮಿತಿಯ ಮುಂದೆ ಆರೋಪಗಳು ಮತ್ತವುಗಳಿಗೆ ನೀಡಿದ ಉತ್ತರ ಎರಡೂ ಇವೆ ಎಂದರು.

ರಾಜ್ಯದ ಆರ್ಥಿಕಾಭಿವೃದ್ಧಿಗೆ ನೆರವು ನೀಡಬೇಕೆಂದು ನಿಜಲಿಂಗಪ್ಪ ಮತ್ತು ಎಂಪಿಸಿಸಿ ಮನವಿ ಮಾಡಿದರು. ರಾಜ್ಯದಲ್ಲಿನ ರೈಲ್ವೆ ಸೌಲಭ್ಯಗಳನ್ನು ಹೆಚ್ಚಿಸುವಂತೆಯೂ ಮೈಸೂರಿನಲ್ಲಿ ಐದನೆಯ ಉಕ್ಕು ಕಾರ್ಖಾನೆ ಸ್ಥಾಪನೆಗೆ ಆಸ್ಪದ ನೀಡಬೇಕೆಂದೂ ನಿಜಲಿಂಗಪ್ಪನವರು ೧೯೬೫ರ ಜನವರಿಯಲ್ಲಿ ಕೇಂದ್ರವನ್ನು ಕೇಳಿಕೊಂಡರು. ದುರ್ಗಾಪುರದಲ್ಲಿ ನಡೆದ ೬೯ ನೇ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನದಲ್ಲಿ ತೆಗೆದುಕೊಂಡ ನಿರ್ಣಯದಲ್ಲಿ ಕೃಷಿ ಮತ್ತು ಗ್ರಾಮಾಣಾಭಿವೃದ್ಧಿಗಳ ಗುರಿಯನ್ನು ಪೃಥಕ್ಕರಿಸುವ ಬದಲುಗೊಂಡ ನಿಲುವನ್ನು ಪ್ರಕಟಿಸಲಾಯಿತು. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗಳ ಗುರಿಯು ನಿಜಲಿಂಗಪ್ಪನವರು ಸದಾ ಪ್ರತಿಪಾದಿಸುತ್ತ ಬಂದವುಗಳೇ ಆಗಿದ್ದವೆಂಬುದು ಗಮನಾರ್ಹ. ಭಿನ್ನಮತೀಯರು ಮತ್ತು ವಿರೋಧ ಪಕ್ಷದ ಸದಸ್ಯರು ಸೇರಿಕೊಂಡು ರಚಿಸಿದ ಅಖಿಲ ಭಾರತ ಭ್ರಷ್ಟಾಚಾರ ವಿರೋಧಿ ಸಂಘಟನೆ ಎಂಬ ದೇಶ ಮಟ್ಟದ ಸಂಸ್ಥೆಯು, ನಿಜಲಿಂಗಪ್ಪ ಮತ್ತವರ ಸಹೋದ್ಯೋಗಿಗಳ ವಿರುದ್ಧ ಮಾಡಲಾದ ಆರೋಪಗಳ ಕುರಿತು ನ್ಯಾಯಾಂಗ ತನಿಖೆ ನಡೆಬೇಕೆಂದು ಒತ್ತಾಯಿಸಿತು. ಈ ಹಂತದಲ್ಲಿ ಶರಾವತಿ ಯೋಜನೆಯ ಬಗೆ ತನಿಖೆ ಕೈಗೊಂಡರೆ ಅದಕ್ಕೆ ಸಿಕ್ಕಿರುವ ವಿದೇಶೀ ನೆರವಿಗೆ ಧಕ್ಕೆಯುಂಟಾಗುವುದೆಂಬ ವಾದವನ್ನು ತಾವು ಒಪ್ಪುವುದಿಲ್ಲವೆಂದು ಆ ಸಂಸ್ಥೆಯ ಕಾರ್ಯದರ್ಶಿ ಎ.ಡಿ. ಮಣಿ ಅವರು ಬೆಂಗಳೂರಿನಲ್ಲಿ ಹೇಳಿದರು. ವಿರೋಧ ಪಕ್ಷದ ನಾಯಕ ಎಸ್. ಶಿವಪ್ಪನವರು ೧೮-೧-೧೯೬೫ ರಂದು ನಿಜಲಿಂಗಪ್ಪನವರ ಸಂಪುಟದ ವಿರುದ್ಧ ವಿಧಾನಸಭೆಯಲ್ಲಿ ವಾಕ್ಸಮರ ನಡೆಸಿ, ಸಂಪುಟವು ಜನರ ವಿಶ್ವಾಸವನ್ನು ಕಳೆದುಕೊಂಡಿರುವುದರಿಂದ ತಕ್ಷಣವೇ ರಾಜೀನಾಮೆಯಿತ್ತು ಚುನಾವಣೆ

ಗಳನ್ನು ಎದುರಿಸಬೇಕೆಂದು ಆಗ್ರಹಪಡಿಸಿದರು. ಇದರ ವಿರುದ್ಧ ವಾಗ್ದಾಳಿ ನಡೆಸಿದ ಗೃಹಸಚಿವ ಆರ್.ಎಂ. ಪಾಟೀಲರು, ಎಸ್‌ಎಸ್‌ಪಿ ಸದಸ್ಯರು ತಮಗೆ ಸಂಪುಟದಲ್ಲಿ ಅವಕಾಶ ಸಿಕ್ಕದ್ದರಿಂದ ಅವಿಶ್ವಾಸ ನಿರ್ಣಯ ಮಂಡಿಸುವ ಪ್ರಯತ್ನ ನಡೆಸಿದ್ದಾರೆಂದು ವಿರೋಧಪಕ್ಷವನ್ನು ಚುಚ್ಚಿದರು. ತಾವು ತಮ್ಮ ಮೇಲಿನ ಆರೋಪಗಳ ಬಗ್ಗೆ, ಮುಖ್ಯಮಂತ್ರಿಯಾಗಿಯಲ್ಲ ವೈಯಕ್ತಿಕ ನೆಲೆಯಲ್ಲಿ ಉತ್ತರ ಕಳಿಸಿರುವುದಾಗಿ ನಿಜಲಿಂಗಪ್ಪನವರು ವಿಧಾನಸಭೆಗೆ ತಿಳಿಸಿದರು. ಆರೋಪಗಳು ಅಪ್ರಸ್ತುತವೂ ಬೇಜವಾಬ್ದಾರಿತನದಿಂದ ಕೂಡಿರುವುದೂ ಆಗಿರುವುದರಿಂದ ಯಾವುದೇ ತನಿಖೆ ಅನವಶ್ಯಕವೆಂದು ಅವರು ಪುನರುಚ್ಚರಿಸಿರು. ನಿರೀಕ್ಷಿಸಿದಂತೆಯೇ, ಅವಿಶ್ವಾಸ ನಿರ್ಣಯಕ್ಕೆ ಸೋಲುಂಟಾಯಿತು, ಸರ್ಕಾರದ ಪರವಾಗಿ ೧೭೧ ಮತಗಳೂ ನಿರ್ಣಯದ ಬೆಂಬಲವಾಗಿ ೨೯ ಮತಗಳು ಬಿದ್ದವು. ಎಸ್‌ಎಸ್‌ಪಿ ಸದಸ್ಯರು ತಮಗೆ ಸಂಪುಟದಲ್ಲಿ ಸ್ಥಾನ ಕೊಡಿ ಎಂದು ಎಂದೂ ಕೇಳಿಕೊಂಡು ಬಂದಿರಲಿಲ್ಲ ಎಂದು ಸದನದಲ್ಲಿ ಹೇಳಿ ನಿಜಲಿಂಗಪ್ಪನವರು ತಮ್ಮ ರಾಜಕೀಯ ಪ್ರಾಮಾಣಿಕತೆ ಮತ್ತು ನಿರ್ಮಲತೆಗಳನ್ನು ಮೆರೆದರು. ಈ ಮಧ್ಯೆ, ರಾಜ್ಯಕ್ಕೆ ಹೊಸಬ ರಾಜ್ಯಪಾಲರು ಬಂದರು, ಜನರಲ್ ಶ್ರೀನಾಗೇಶ್ ಅವರ ಬದಲಿಗೆ ಬಂದವರು ವಿ.ವಿ. ಗಿರಿ.

ಟೀಕೆಗಳಿಂದ ವಿಚಲಿತಗೊಳ್ಳದೆ ಶರಾವತಿ ಯೋಜನೆಯ ಕಾರ್ಯ ಮುಂದುವರೆದು, ವಿದ್ಯುತ್ ಉತ್ಪಾದನೆಯ ಮೊದಲ ಹಂತವು ಕೇಂದ್ರ ಸಚಿವ ಕೆ.ಎಲ್. ರಾವ್ ಅವರಿಂದ ಉದ್ಘಾಟನೆಗೊಂಡಿತು. ೨೭-೧-೧೯೬೫ ರಂದು ವಿಧಾನಸಭೆಯಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಮಾತನಾಡುತ್ತ ನಿಜಲಿಂಗಪ್ಪನವರು, ಮಂಗಳೂರು ಬಂದರು ನಿರ್ಮಾಣಕ್ಕೆ ಅನೇಕ ರಾಜಕೀಯ ಶಕ್ತಿಗಳ ವಿರೋಧವಿದೆಯೆಂದೂ, ಆದರೆ ತಮ್ಮ ಸರ್ಕಾರವು ಅದನ್ನು ಕಾರ್ಯಗತಗೊಳಿಸಿಯೇ ತೀರುವುದೆಂದು ಘೋಷಿಸಿದರು. ತಮ್ಮ ೬೨ ನೇ ಹುಟ್ಟುಹಬ್ಬವನ್ನು ಆಚರಿಸುವ ಸಮಾರಂಭವೊಂದರಲ್ಲಿ ಭಾಗವಹಿಸಿ ೩೧-೧-೧೯೭೫ ರಂದು ಮಾತನಾಡುತ್ತ ನಿಜಲಿಂಗಪ್ಪನವರು, ತಮ್ಮನ್ನು ಕಾಂಗ್ರೆಸ್‌ನ ಒಬ್ಬ ವಿನಮ್ರ ಸೇವಕ ಎಂದು ಬಣ್ಣಿಸಿಕೊಂಡು, ಸಾಮರ್ಥ್ಯವಿರುವವರೆಗೆ ದೇಶದ ಏಳಿಗೆ ಹಾಗೂ ಪಕ್ಷದ ಅಭ್ಯುದಯಕ್ಕಾಗಿ ಶ್ರಮಪಟ್ಟು ದುಡಿಯುವುದಾಗಿ ಹೇಳಿದರು. ಸಭೆಯ ಅಧ್ಯಕ್ಷತೆಯನ್ನು ಕಾಮರಾಜ್ ವಹಿಸಿದ್ದರು, ಆಹ್ವಾನಿತ ಗಣ್ಯರಲ್ಲಿ ನಿಜಲಿಂಗಪ್ಪನವರ ಗೆಳೆಯ ಸಂಜೀವರೆಡ್ಡಿ ಮತ್ತು ಅತುಲ್ಯ ಘೋಷ್ ಅವರುಗಳಿದ್ದರು. ಅವರೆಲ್ಲ ಕನ್ನಡೇತರ ಪ್ರದೇಶಗಳಿಂದ ಬಂದವರಾದ್ದರಿಂದ, ತಮ್ಮ ಪ್ರದೇಶಗಳಲ್ಲಿ ಹಿಂದಿಯನ್ನು ಬಲವಂತವಾಗಿ ಹೇರುವುದರಿಂದ ದೇಶದ ಐಕಮತ್ಯಕ್ಕೆ ಭಂಗವುಟಾಗುವುದೆಂದು ನಿಜಲಿಂಗಪ್ಪ, ರೆಡ್ಡಿ ಮತ್ತು ಅತುಲ್ಯ ಘೋಷ್ ಎಚ್ಚರಿಸಿದರು.

ಗಾಂಧೀಜಿ ಬಿಟ್ಟುಹೋಗಿದ್ದ ಇರುಸುಮುರುಸಿನ ಒಂದು ಬಳುವಳಿಯೆಂದರೆ ಪಾನನಿಷೇಧ, ಅದಕ್ಕೆ ಕಾಂಗ್ರೆಸ್ ಐತಿಹಾಸಿಕವಾಗಿಯೂ ಪಾರಂಪರಿಕವಾಗಿಯೂ ಬದ್ಧ ವಾಗಿತ್ತು. ಆದರೆ ಅದನ್ನು ಜಾರಿಗೊಳಸುವುದು ಆಡಳಿತಾತ್ಮಕವಾಗಿಯೂ ಆರ್ಥಿಕ ವಾಗಿಯೂ ತುಂಬ ಕಷ್ಟಕರವಾಗಿತ್ತು. ಆದರ್ಶವಾದಿಯಾಗುವುದರ ಜೊತೆಗೆ ಅಷ್ಟೇ ವಾಸ್ತವವಾದಿಯೂ ಆಗಿದ್ದ, ಆದರೆ ಗಾಂಧೀವಾದಕ್ಕೆ ಗಾಢ ಬದ್ಧತೆಯಿದ್ದ ನಿಜಲಿಂಗಪ್ಪ ನವರು, ಟೇಕ್‌ಚಂದ್ ಸಮಿತಿ ನೀಡಿದ್ದ ಶಿಫಾರಸುಗಳ ಹಿನ್ನೆಲೆಯಲ್ಲಿ ಪಾನನಿರೋಧದ ಬಗ್ಗೆ ಪುನರ್‌ಪರಿಶೀಲನೆ ಆಗಬೇಕೆಂದು ೧-೨-೧೯೬೪ ರಂದು ವಿಧಾನಸಭೆಯಲ್ಲಿ ಹೇಳಿಕೆ ನೀಡಿದರು. ಅದೇ ಧಾಟಿಯಲ್ಲಿ, ಹಿಂದಿ ಪ್ರಶ್ನೆಯ ಬಗ್ಗೆ ನಿಧಾನಗತಿ ತಾಳ ಬೇಕೆಂದೂ, ಹಿಂದಿಯಲ್ಲಿ ಯುಪಿಎಸ್‌ಸಿ ಪರೀಕ್ಷೆಗಳನ್ನು ಉತ್ತರಿಸಬೇಕೆಂಬ ಮತ್ತು ಕೇಂದ್ರದೊಡನೆ ಹಿಂದಿಯಲ್ಲಿಯೇ ವ್ಯವಹರಿಸಬೇಕೆಂಬ ಬಗ್ಗೆ ಕನಿಷ್ಠ ಹದಿನೈದು ವರ್ಷಗಳ ಯಥಾಸ್ಥಿತಿ ಕಾಪಾಡಿಕೊಳ್ಳಬೇಕೆಂದೂ ಅವರು ಕೇಂದ್ರಕ್ಕೆ ಸಲಹೆಯಿತ್ತರು.

ನಿಜಲಿಂಗಪ್ಪ ಮತ್ತವರ ಸಹೋದ್ಯೋಗಿಗಳ ವಿರುದ್ಧ ಮಾಡಲಾದ ಆರೋಪಗಳ ಕುರಿತು ಸಂಪುಟವು ಪರಿಶೀಲನೆ ನಡೆಸಿದೆಯೆಂದೂ ಆ ಬಗ್ಗೆ ಕೇಂದ್ರದ ತನಿಖೆಯ ಆವಶ್ಯಕತೆಯಿಲ್ಲವೆಂದು ಅಭಿಪ್ರಾಯಪಟ್ಟಿದೆಯೆಂದೂ ಪ್ರಧಾನಿ ಲಾಲ್ ಬಹಾದ್ದೂರ್ ಶಾಸ್ತ್ರಿಯವರು ೨೨-೨-೧೯೬೪ ರಂದು ಲೋಕಸಭೆಗೆ ತಿಳಿಸಿದರು. ಶರಾವತಿ ಯೋಜನೆ ಯಲ್ಲಿ ನಡೆದಿದೆಯೆನ್ನಲಾದ ಭ್ರಷ್ಟಾಚಾರ ಮತ್ತು ಲಂಚಗುಳಿತನದ ಬಗ್ಗೆ ತೆಗೆದುಕೊಳ್ಳಲಾದ ಈ ತೀರ್ಮಾನ ನಿಜಲಿಂಗಪ್ಪನವರಿಗೆ ತಾತ್ಕಾಲಿಕ ಉಪಶಮನವನ್ನು ನೀಡಿ ಯೋಜನೆಯ ಪ್ರಗತಿಯ ಬಗ್ಗೆ ಅವರು ಹೆಚ್ಚಿನ ಗಮನ ಹರಿಸಲು ಸಾಧ್ಯವಾಯಿತು. ಆ ಯೋಜನೆಯ ಇಡೀ ವೆಚ್ಚವನ್ನು ಭರಿಸಬೇಕೆಂದು ಮೈಸೂರು ಸರ್ಕಾರವು ಕೇಂದ್ರವನ್ನು ಕೇಳಿಕೊಂಡಿತು; ಆದರೆ ಸಂಬಂಧಪಟ್ಟ ಸಚಿವರಾದ ಕೆ.ಎಲ್. ರಾವ್ ಅವರು ಲೋಕಸಭೆಯಲ್ಲಿ ಮಾತ ನಾಡುತ್ತ ಇದಕ್ಕೆ ಕೇಂದ್ರದ ಸಮ್ಮತಿಯಿಲ್ಲವೆಂದು ನುಡಿದರು. ಮೈಸೂರಿನ ಸಂಸತ್ ಸದಸ್ಯರಾದ ಆರ್.ಜಿ. ದುಬೆ ಮತ್ತು ಸಿ.ಆರ್. ಬಸಪ್ಪ ಅವರು ವಾದಿಸುತ್ತ, ಯೋಜನೆ ಯನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ಕಾರ್ಯಗತಗೊಳಿಸಲಾಗಿದೆಯೆಂದೂ, ಇದರಿಂದ ಇತರ ರಾಜ್ಯಗಳಿಗೂ ಅನುಕೂಲವಾಗುವುದರಿಂದ ಯೋಜನೆಯ ಇಡೀ ವೆಚ್ಚವನ್ನು ಕೇಂದ್ರವೇ ವಹಿಸಿಕೊಳ್ಳಬೇಕೆಂದೂ ಪ್ರತಿಪಾದಿಸಿದರು. ಅದು ಮಿತವ್ಯಯಕಾರಿಯಾದ ಯೋಜನೆಯೆಂಬುದನ್ನು ಒಪ್ಪಿಕೊಂಡ ಕೆ.ಎಲ್. ರಾವ್ ಅವರು ಅದನ್ನು ವಹಿಸಿಕೊಳ್ಳುವ ಇರಾದೆ ಕೇಂದ್ರಕ್ಕಿಲ್ಲವೆಂದು ಸ್ಪಷ್ಟಪಡಿಸಿದರು. ಈಗಾಗಲೇ ಐವತ್ತು ಕೋಟಿ ರೂಪಾಯಿ ಗಳನ್ನು ವೆಚ್ಚ ಮಾಡಿರುವ ರಾಜ್ಯ ಸರ್ಕಾರವೇ ಉಳಿದ ಇಪ್ಪತ್ತೆರಡು ಕೋಟಿ ರೂಪಾಯಿ ಗಳ ವೆಚ್ಚವನ್ನು ವಹಿಸುವುದು ಅದರ ಜವಾಬ್ದಾರಿಯೆಂದು ಅವರು ನುಡಿದರು.

ಆದರೆ ನೀರಾವರಿ ಆವಶ್ಯಕತೆಗಳಿಗಾಗಿ ರಾಜ್ಯವು ಕೇಂದ್ರದ ಹೆಚ್ಚಿನ ನೆರವನ್ನು ಬಯಸಿತ್ತು. ನರಗುಂದದಲ್ಲಿ ನಡೆದ ರೈತ ಪರಿಷತ್ತಿನ ಸಭೆಯ ಅಧ್ಯಕ್ಷತೆ ವಹಿಸಿದ್ದ ನಿಜಲಿಂಗಪ್ಪನವರು ಮಾತನಾಡುತ್ತ, ಮೈಸೂರು ರಾಜ್ಯವು ಇಲ್ಲಿನ ನೀರಾವರಿ ಸಾಮರ್ಥ್ಯದ ಕೇವಲ ಶೇಕಡ ೬ ರಷ್ಟನ್ನು ಮಾತ್ರ ಉಪಯೋಗಿಸಿಕೊಳ್ಳಲು ಸಾಧ್ಯವಾಗಿದೆಯೆಂದೂ, ಅದಕ್ಕಾಗಿ ಕೇಂದ್ರವು ರಾಜ್ಯದ ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸಲು ಸಹಾಯ ನೀಡಬೇಕೆಂದೂ ಆಗ್ರಹಿಸಿದರು.

ಗಡಿ ವಿಷಯಕ್ಕೆ ಸಂಬಂಧಿಸಿದಂತೆ ನಿಜಲಿಂಗಪ್ಪ ಮತ್ತವರ ಸರ್ಕಾರವು ಎದುರಿಸಿದ ಮತ್ತೊಂದು ಸಮಸ್ಯೆ ಎಂದರೆ ಮಹಾರಾಷ್ಟ್ರದೊಡನೆ ಗೋವಾದ ವಿಲೀನವನ್ನು ಕುರಿತದ್ದು. ಸರ್ಕಾರ ಮಾತ್ರವಲ್ಲದೆ ಒಟ್ಟಾರೆ ಮೈಸೂರಿನ ಜನತೆಯೂ ಅದಕ್ಕೆ ವಿರುದ್ಧ ವಾಗಿದ್ದರು ೧೩-೩-೧೯೬೫ ರಂದು ಮೈಸೂರು ವಿಧಾನ ಪರಿಷತ್ತು ಒಂದು ನಿರ್ಣಯ ವನ್ನಂಗೀಕರಿಸಿ ಮಹಾರಾಷ್ಟ್ರದೊಡನೆ ಗೋವಾದ ವಿಲೀನದ ಚಿಂತನೆಯನ್ನು ಖಂಡಿಸಿತು. ವಿಲೀನಗೊಳಿಸಬೇಕೆಂಬ ಮಹಾರಾಷ್ಟ್ರದ ಬೇಡಿಕೆಯನ್ನು ಅದು ರಾಜಕೀಯ ಪಾತಕ ಎಂದು ಕರೆಯಿತು. ಈ ಹಿಂದೆ, ೧೨-೩-೧೯೬೫ ರಂದು ಗೋವಾ ವಿಧಾನಸಭೆಯ ವಿರೋಧ ಪಕ್ಷವು ವಿಲೀನವನ್ನು ವಿರೋಧಿಸಿದ ನಿಜಲಿಂಗಪ್ಪನವರಿಗೆ ಕೃತಜ್ಞತೆ ಸಲ್ಲಿಸಿತ್ತು. ಮೈಸೂರು ವಿಧಾನ ಸಭೆಯು ತನ್ನ ೧೫-೩-೧೯೬೫ ರ ನಿರ್ಣಯದಲ್ಲಿ ಗೋವಾದಲ್ಲಿ ಕನಿಷ್ಠ ಪಕ್ಷ ಹತ್ತು ವರ್ಷಗಳ ಕಾಲ ಯಥಾಸ್ಥಿತಿಯನ್ನು ಕಾಯ್ದುಕೊಂಡು ಬರಬೇಕು ಅಥವಾ, ವಿಲೀನವೇ ಆಗುವುದಾದರೆ, ಹೆಚ್ಚು ಹಕ್ಕುಳ್ಳ ಮೈಸೂರಿನೊಂದಿಗೆ ಅದನ್ನು ವಿಲೀನಗೊಳಿಸಬೇಕು ಎಂದಿತು. ರಾಜ್ಯ ಮತ್ತದರ ಸರ್ಕಾರವು ಅನೇಕ ಸಮಸ್ಯೆಗಳನ್ನೆದುರಿ ಸುತ್ತಿರಬೇಕಾದರೆ, ಭಿನ್ನಮತೀಯರು ಮಾತ್ರ ತಮ್ಮ ಮುಂದಿನ ಯೋಜನೆಗಳ ಬಗ್ಗೆ ತಲೆಕೆಡಿಸಿಕೊಳ್ಳುತ್ತಿದ್ದರು. ಭವಿಷ್ಯದ ಕಾರ್ಯಯೋಜನೆಯನ್ನು ರೂಪಿಸಲು ಭಿನ್ನಮತೀಯ ಕಾಂಗ್ರೆಸ್ಸಿಗರು ಒಂದು ಸಮಾವೇಶವನ್ನು ನಡೆಸುವ ಆಲೋಚನೆಯನ್ನು ೨೬-೪-೧೯೬೫ ರಂದು ಪ್ರಕಟಿಸಲಾಯಿತು. ನಿಜಲಿಂಗಪ್ಪ ಮತ್ತವರ ಸಹೋದ್ಯೋಗಿಗಳ ಮೇಲಿನ ಆರೋಪಗಳನ್ನು ಕುರಿತಂತೆ ನಿರಾಧಾರವೆಂದು ಸಂಪುಟ ಉಪಸಮಿತಿಯು ನೀಡಿದ ತೀರ್ಮಾನದ ಬಗ್ಗೆ ಅವರು ಅಸಂತುಷ್ಟರಾಗಿದ್ದರು. ವಿರೋಧ ಪಕ್ಷಗಳ ನಾಯಕರು, ಭೂಕಂದಾಯವನ್ನು ಹೆಚ್ಚಿಸಿದ್ದರ ಕುರಿತು ಚರ್ಚಿಸುತ್ತಿರುವಾಗಲೇ, ವಿಧಾನಸಭೆಯಲ್ಲಿ ೯-೪-೧೯೬೫ ರಂದು ತಮ್ಮ ಮೊತ್ತ ಮೊದಲ ಅನ್ನಸತ್ಯಾಗ್ರಹವನ್ನು ಹೂಡಿದರು. ಈ ಕುರಿತು ಆಡಳಿತ ಪಕ್ಷದಲ್ಲಿಯೇ ಭಿನ್ನಾಭಿಪ್ರಾಯಗಳಿವೆಯೆಂದು ವರದಿಗಳು ತಿಳಿಸಿದವು. ರಾಜ್ಯಕ್ಕೆ ಪ್ರಾಮಾಣಿಕ, ಪಾರದರ್ಶಕ ಹಾಗೂ ಸಮರ್ಥ ಆಡಳಿತವನ್ನು ನೀಡಲು ಒಂದು ಹೊಸ ಪಕ್ಷವನ್ನು ರಚಿಸಲು ಭಿನ್ನಮತೀಯ ಕಾಂಗ್ರೆಸ್ ನಾಯಕರು

೨೮-೪-೧೯೭೭ರ ಸಭೆಯಲ್ಲಿ ತೀರ್ಮಾನಿಸಿದರು. ಭಿನ್ನಮತೀಯ ಕಾಂಗ್ರೆಸ್ ನಾಯಕರುಗಳಲ್ಲದೆ ಆ ಸಭೆಯಲ್ಲಿ ವಿರೋಧ ಪಕ್ಷಗಳ ಕೆಲವರೂ ಸ್ವತಂತ್ರರಾದ ಕೆಲವರೂ ಪಾಲುಗೊಂಡಿದ್ದರು. ಈ ಸಮಾವೇಶದಲ್ಲಿ ಟಿ. ಸುಬ್ರಹ್ಮಣ್ಯ ಮಹತ್ವದ ಪಾತ್ರವನ್ನು ವಹಿಸಿದರು. ಅದರಲ್ಲಿ ವೀಕ್ಷಕರಾಗಿ ಕೇರಳ ಕಾಂಗ್ರೆಸ್ ನಾಯಕ ಕೆ.ಎಂ. ಜಾರ್ಜ್ ಐವರು ಸಹಚರರೊಡನೆ ಭಾಗವಹಿಸಿದ್ದರು. ಇದರ ಪರಿಣಾಮವಾಗಿ, ಮೈಸೂರು ರಾಜ್ಯ ನಾಗರಿಕರ ರಾಜಕೀಯ ಸಮಾವೇಶವು ಬೆಂಗಳೂರಿನಲ್ಲಿ ೨೯-೪-೧೯೭೭ ರಂದು ಸೇರಿ ಹೊಸಪಕ್ಷದ ಧ್ವಜ, ಹೆಸರು ಮತ್ತು ಧ್ಯೇಯಯಗಳನ್ನು ಕುರಿತು ನಿರ್ಧರಿಸಲು ಒಂದು ಉಪಸಮಿತಿಯನ್ನು ನೇಮಿಸಿತು. ಆ ಉಪಸಮತಿಯಲ್ಲಿ ಎಸ್. ಚೆನ್ನಯ್ಯ, ಟಿ. ಸುಬ್ರಹ್ಮಣ್ಯ ಮತ್ತು ಅಣ್ಣಾರಾವ್ ಗಣಮುಖಿ ಅವರುಗಳಿದ್ದರು. ವ್ಯಾಪಕ ಪ್ರಾತಿನಿಧ್ಯ ನೀಡಲು ಸಾಧ್ಯವಾಗುವಂತೆ ಮತ್ತೆ ನಾಲ್ವರನ್ನು ಸೇರಿಸಿಕೊಳ್ಳಲು ಉಪಸಮಿತಿಗೆ ಅಧಿಕಾರ ನೀಡಲಾಯಿತು.

ಘೋಷಿತವೋ ಅಘೋಷಿತವೋ ಈಚೆಗೆ ಪಾಕಿಸ್ತಾನ ಮತ್ತು ಚೀನಾಗಳ ಜೊತೆ ನಡೆದ ಯುದ್ಧಗಳ ಚರಿತ್ರೆಯು ದೇಶದಲ್ಲಿ ರಕ್ಷಣಾಪ್ರಜ್ಞೆ ಮೂಡುವಂತೆ ಮಾಡಿದೆ. ರಕ್ಷಣಾ ಸಮಸ್ಯೆಗಳನ್ನು ಎದುರಿಸಲು ಮುಖ್ಯಮಂತ್ರಿಗಳ ರಕ್ಷಣಾ ಸಮಿತಿಯನ್ನು ರಚಿಸಿರುವುದರಲ್ಲಿ ಅಚ್ಚರಿಯೇನಿಲ್ಲ. ನಿಜಲಿಂಗಪ್ಪನವರು ಈ ಸಮಿತಿಯ ಒಂದು ಸಭೆಯಲ್ಲಿ ಹಾಜರಾಗಿ ೮-೫-೧೯೭೫ ರಂದು ವಾಪಸಾದ ಮೇಲೆ, ರಕ್ಷಣಾ ಸಾಮಗ್ರಿ ಮತ್ತು ಕ್ರಮಗಳಿಗಾಗಿ ದೇಶವು ವಿದೇಶಗಳ ಮೇಲೆ ಅವಲಂಬಿಸಬಾರದು ಎಂದು ಬೆಂಗಳೂರಿನಲ್ಲಿ ಪತ್ರಿಕೆಗಳಿಗೆ ಹೇಳಿಕೆ ನೀಡಿದರು. ತಮ್ಮ ರಾಜಕೀಯ ವಿರೋಧಿಗಳಿಂದ ಹೊಸದಾಗಿ ಹುಟ್ಟಿದ ಜನತಾ ಪಕ್ಷದ ಬಗ್ಗೆ ಮಾತನಾಡಲು ಅವರು ನಿರಾಕರಿಸಿದರು, ಆದರೆ ಅದರ ಬಗ್ಗೆ ತಾವು ಪತ್ರಿಕೆಗಳಲ್ಲಿ ಮಾತ್ರ ಓದಿರುವುದಾಗಿ ತಿಳಿಸಿದರು. ಭಾರತದ ರಾಜ್ಯಗಳನ್ನೆದುರಿಸುತ್ತಿರುವ ಸಮಸ್ಯೆಗಳಲ್ಲಿ ಇತರ ರಾಜ್ಯಗಳ ಜನರ ವಲಸೆಯೂ ಒಂದು. ಭಾರತದಲ್ಲಿ ದ್ವಿಪೌರತ್ವ ಪದ್ಧತಿ ಇಲ್ಲದಿದ್ದರೂ, ಅದರ ರಾಜಕೀಯ ಪರ್ಯಾಯವಾದ 'ಮಣ್ಣಿನ ಮಕ್ಕಳು' ಎಂಬ ಪರಿಕಲ್ಪನೆ ಈಚೆಗೆ ಬೆಳೆದಿದೆ. ಭಾಷಾ ಅಲ್ಪಸಂಖ್ಯಾತರು ಹೆಚ್ಚಾಗಿರುವ ರಾಜ್ಯಗಳಲ್ಲಿ ಮೈಸೂರು ಒಂದು. ಮೈಸೂರಿನಲ್ಲಿ ಬೆಳೆದು ಬಂದಿರುವ ಉದಾರತೆಯ ಪರಂಪರೆಯನ್ನು ಪಾಲಿಸುವ ನಿಜಲಿಂಗಪ್ಪನವರು ರಾಜ್ಯಕ್ಕೆ ಹೊರ ರಾಜ್ಯಗಳವರು ಬರುವುದನ್ನು ಹಾಗೂ ತಮ್ಮ ಅನನ್ಯತೆಯನ್ನು ಉಳಿಸಿಕೊಳ್ಳುವುದನ್ನೂ ಸ್ವಾಗತಿಸಿದರು, ಆದರೆ ಅವರು ರಾಜ್ಯದ ಅಭ್ಯುದಯಕ್ಕೆ ಕೊಡುಗೆಯನ್ನು ನೀಡಬೇಕು ಎಂದು ಆಶಿಸಿದರು. ಈ ಮಾತುಗಳನ್ನವರು ಕಾರವಾರದಲ್ಲಿ ನಡೆದ ೪೫ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ೧೦-೫-೧೯೭೫ ರಂದು ಮಾತನಾಡುತ್ತ ಹೇಳಿದುದು

ಸಾಂಕೇತಿಕವಾಗಿತ್ತು. ಕೇಂದ್ರದ ಆರ್ಥಿಕ ಮಿತವ್ಯಯ ನೀತಿಯಿಂದ ರಾಜ್ಯವು ಸಮಸ್ಯೆಗಳನ್ನೆದುರಿಸಬೇಕಾಗಿದೆ ಎಂದರು. ರಾಜ್ಯ ಅಭಿವೃದ್ಧಿ ಮಂಡಳಿಯಲ್ಲಿ ಮಾತನಾಡುತ್ತ, ಮೂರನೆಯ ಯೋಜನೆಯ ಫಲವು ನಿರೀಕ್ಷಿತ ಮಟ್ಟಕ್ಕಿಂತ ಕಡಿಮೆಯಾಗಿದೆಯೆಂದೂ, ಅದಕ್ಕೆ ಕಾರಣ ತೀವ್ರ ಆರ್ಥಿಕ ಬಿಕ್ಕಟ್ಟು ಎಂದೂ ವರ್ಣಿಸಿದರು. ಇಷ್ಟಾದರೂ ತಾವು ಆರ್ಥಿಕ ಸಹಾಯಕ್ಕಾಗಿ ಕೇಂದ್ರದ ಮೊರೆ ಹೊಗಬೇಕಾಗಿದೆಯೆಂದರು. ಮೈಸೂರು, ಗೋವಾ, ಆಂಧ್ರ ಮತ್ತು ಮದರಾಸುಗಳಲ್ಲಿ ನಾಲ್ಕು ಉಕ್ಕು ಕಾರ್ಖಾನೆಗಳನ್ನು ಸ್ಥಾಪಿಸುವಂತೆಯೂ, ಇದರಿಂದ ಅಭಿವೃದ್ಧಿಯ ಆಕರಗಳ ಬಗೆಗಿನ ಅಂತರರಾಜ್ಯ ತಿಕ್ಕಾಟಗಳು ಕಡಿಮೆಯಾಗುವುದೆಂದೂ ತಾವು ಪ್ರಧಾನ ಮಂತ್ರಿಗಳಿಗೆ ಸಲಹೆ ನೀಡಿರುವುದಾಗಿ ಪ್ರಕಟಿಸಿದರು. ಮೈಸೂರಿನಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪನೆಗೆ ಹೊಸಪೇಟೆ ಅತ್ಯಂತ ಸೂಕ್ತ ಸ್ಥಳ ಎಂದರು. ಶರಾವತಿಯ ಎರಡನೆಯ ಹಂತವನ್ನು ೨೦-೬-೧೯೬೫ ರಂದು ನಿಜಲಿಂಗಪ್ಪನವರು ಉದ್ಘಾಟಿಸಿ ಮಾತನಾಡುತ್ತ, ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಾಳಿ ಯೋಜನೆಯನ್ನು ಸೇರಿಸುವುದಾಗಿ ಜನತೆಗೆ ಆಶ್ವಾಸನೆಯಿತ್ತರು. ರಾಜ್ಯದ ಐದನೆಯ ಪಂಚವಾರ್ಷಿಕ ಯೋಜನೆಯ ಬಗೆಗಿನ ವಿವರಗಳನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡುತ್ತ, ಅದನ್ನು ೫೦೦ ಕೋಟಿ ರೂಪಾಯಿಗಳ ವಿನಮ್ರ ಯೋಜನೆ ಎಂದು ಬಣ್ಣಿಸಿದರು. ಮೈಸೂರು ಸಂಪನ್ಮೂಲಗಳ ದೃಷ್ಟಿಯಿಂದ ಸಮೃದ್ಧವಾಗಿದ್ದರೂ ಇಲ್ಲಿನ ಕೈಗಾರಿಕಾ ಅಭಿವೃದ್ಧಿ ಮಂದಗತಿಯಲ್ಲಿ ಸಾಗಿದೆ ಎಂದರು. ನಿದರ್ಶನಕ್ಕೆ, ಅಪಾರ ನೀರಾವರಿ ಸಾಮರ್ಥ್ಯವಿದ್ದರೂ ನೀರಾವರಿಗಾಗಿ ರಾಜ್ಯವು ಬಳಸಿಕೊಂಡಿರುವ ಭೂಪ್ರಮಾಣ ಕಡಿಮೆ. ಆದರೆ ತಮ್ಮ ಸರ್ಕಾರವು ರಾಜ್ಯದ ಅಭಿವೃದ್ಧಿಗೆ ಸೂಕ್ತ ವಾತಾವರಣವನ್ನು ನಿರ್ಮಿಸುತ್ತಿದೆ ಎಂದು ಹೇಳಿಕೊಂಡರು. ಐದನೆಯ ಉಕ್ಕು ಕಾರ್ಖಾನೆಯ ಸ್ಥಾಪನೆಯ ಪ್ರಶ್ನೆಯು ಅಂತರರಾಜ್ಯ ವಿವಾದಕ್ಕೆ, ವಿಶೇಷವಾಗಿ ಮೈಸೂರು ಮತ್ತು ಆಂಧ್ರಗಳ ನಡುವೆ, ಕಾರಣವಾಗಿದೆ. ಆಂಗ್ಲೋ-ಅಮೆರಿಕನ್ ಪರಿಣತರ ತಂಡವು ತನ್ನ ವರದಿಯಲ್ಲಿ ಐದನೆಯ ಉಕ್ಕು ಕಾರ್ಖಾನೆಯ ನಿರ್ಮಾಣಕ್ಕೆ ವಿಶಾಖಪಟ್ಟಣವು ಸೂಕ್ತವೆಂದು ಶಿಫಾರಸುಮಾಡಿತ್ತು. ಮೂಲದಲ್ಲಿ ಹೊಸಪೇಟೆ ಎಂದಿದ್ದುದನ್ನು ವಿಶಾಖಪಟ್ಟಣವೆಂದು ಬದಲಾಯಿಸುವ ಹುನ್ನಾರ ನಡೆದಿದೆ ಎಂಬ ವದಂತಿ ಹಬ್ಬಿತ್ತು. ಇದರಿಂದ ಆಶ್ಚರ್ಯಗೊಂಡ ನಿಜಲಿಂಗಪ್ಪನವರು, ಹೊಸಪೇಟೆಯೇ ಅತ್ಯಂತ ಸೂಕ್ತ ಸ್ಥಳ ಎಂಬ ತಮ್ಮ ಅಭಿಪ್ರಾಯವನ್ನು ಮುಂದುವರೆಸಿಕೊಂಡು ಬಂದರು. ಕೇಂದ್ರವು ಅನುಮತಿಯಿತ್ತರೆ ಹೊಸಪೇಟೆಯಲ್ಲಿ ರಾಜ್ಯವೇ ಉಕ್ಕು ಕಾರ್ಖಾನೆಯನ್ನು ಸ್ಥಾಪಿಸುವುದಾಗಿ ಅವರು ಹೇಳಿದರು. ನಾಲ್ಕನೆಯ ಯೋಜನೆಯಲ್ಲಿ ಒಂದು ಕಾರ್ಖಾನೆಯ ಸ್ಥಾಪನೆಗೆ ಮಾತ್ರ ಅವಕಾಶವಿದ್ದರೂ, ಇತರರು ಕಾರ್ಖಾನೆಯನ್ನು ಸ್ಥಾಪಿಸಬಾರದೆಂದೇನೂ ಇಲ್ಲ ಎಂದು

ಕೇಂದ್ರದ ಉಕ್ಕು ಸಚಿವ ಸಂಜೀವರೆಡ್ಡಿಯವರು ಹೈದರಾಬಾದ್‌ನಲ್ಲಿ ಹೇಳಿದರು. ಹೀಗಾಗಿ ಆಂಧ್ರದಲ್ಲಿ ಕಾರ್ಖಾನೆ ಸ್ಥಾಪನೆಗೊಳ್ಳುವ ಬಗ್ಗೆ ಮೈಸೂರು ಮತ್ತು ಮದರಾಸ್‌ಗಳು ಚಿಂತೆಮಾಡಬೇಕಾಗಿರಲಿಲ್ಲ. ಐದನೆಯ ಉಕ್ಕು ಕಾರ್ಖಾನೆ ಸ್ಥಾಪಿತಗೊಳ್ಳದ ಬಗ್ಗೆ ಹೊಸಪೇಟೆಯಲ್ಲಿ ೬-೭-೧೯೬೫ ರಂದು ಹರತಾಳ ಆಚರಿಸಲಾಯಿತು.

ಮಹಾರಾಷ್ಟ್ರದ ಒತ್ತಡಕ್ಕೆ ಮಣಿದ ಸಂಸದೀಯ ಮಂಡಳಿಯು ಗೋವಾ ವಿಲೀನದ ಪ್ರಶ್ನೆಯನ್ನು ಹತ್ತು ವರ್ಷಗಳ ಕಾಲ ಬದಿಗಿಡಬೇಕೆಂಬ ತನ್ನ ಹಿಂದಿನ ನಿಲವನ್ನು ಬದಲಿಸಿ ಅದನ್ನು ಪುನರಾರಂಭಿಸಲು ಸಿದ್ಧವಾಗಿರುವುದು ಮೈಸೂರಿಗೆ ತಲೆನೋವಾಯಿತು. ಇದರಿಂದ ಗೋವಾದ ವಿರೋಧ ಪಕ್ಷದ ನಾಯಕರಾದ ಡಾ. ಸೆಕ್ವೀರಾ ಅವರನ್ನು ದಂಗುಬಡಿಸಿತು. ವಿಲೀನ ಪ್ರಶ್ನೆಯನ್ನು ಬಂದೋಡ್ಕರ್ ಅವರೊಡನೆ ಚರ್ಚಿಸುವ ಕೇಂದ್ರದ ನಿರ್ಧಾರವನ್ನು ಮೈಸೂರು ತೀವ್ರವಾಗಿ ಪ್ರತಿಭಟಿಸಿತು. ಈ ಕುರಿತು ನಿಜಲಿಂಗಪ್ಪ ಸರ್ಕಾರವು ರಾಜೀನಾಮೆ ನೀಡಲೂ ಹಿಂಜರಿಯುವುದಿಲ್ಲವೆಂಬ ವಿಷಯವನ್ನು ಪತ್ರಿಕೆಗಳು ವರದಿ ಮಾಡಿತು. ಸದ್ಯಕ್ಕೆ ಗೋವಾ ವಿಲೀನ ಪ್ರಶ್ನೆಯನ್ನು ಪುನರಾರಂಭಿಸುವುದಕ್ಕೆ ಮೈಸೂರು ವಿರೋಧವಾಗಿದೆಯೆಂಬುದನ್ನು ಸಚಿವ ರಾಮಕೃಷ್ಣ ಹೆಗಡೆಯವರು ಕೇಂದ್ರಕ್ಕೆ ಔಪಚಾರಿಕವಾಗಿ ತಿಳಿಸಿದಾಗ, ಈ ವಿಚಾರದ ಬಗ್ಗೆ ಸಂಸದೀಯ ಮಂಡಳಿಯು ಇನ್ನೂ ಅಂತಿಮ ತೀರ್ಮಾನಕ್ಕೆ ಬಂದಿಲ್ಲವೆಂದು ಪ್ರಧಾನ ಮಂತ್ರಿಗಳು ತಿಳಿಸಿದರು. ಈ ಬಗ್ಗೆ ತಾವು ಕೂಲಂಕಷ ಪರಿಶೀಲನೆ ನಡೆಸುವುದಾಗಿ ಪ್ರಧಾನಿಯವರು ಹೆಗಡೆಯವರಿಗೆ ಆಶ್ವಾಸನೆಯಿತ್ತರು. ತಮ್ಮನ್ನು ಮಾತ್ರವಲ್ಲ, ಮಹಾರಾಷ್ಟ್ರದ ಮುಖ್ಯಮಂತ್ರಿಯವರನ್ನೂ ಈ ಕುರಿತು ಸಲಹೆ ಕೇಳಿಲ್ಲವೆಂಬುದು ನಿಜಲಿಂಗಪ್ಪನವರನ್ನು ಚಿಂತೆಗೀಡು ಮಾಡಿತ್ತು ವಿಷಯ. ಅಲ್ಲದೆ, ಗೋವಾದ ಕಾಂಗ್ರೆಸ್ ಅಧ್ಯಕ್ಷರಾದ ಪುರುಷೋತ್ತಮ ಕಾಕೋಡ್ಕರ್ ಅವರನ್ನು ಕೂಡ ಕೇಳಿಲ್ಲದುದು ಮತ್ತಷ್ಟು ಅಚ್ಚರಿಯುಂಟುಮಾಡಿತ್ತು. ಹುಬ್ಬಳ್ಳಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡುತ್ತ ನಿಜಲಿಂಗಪ್ಪನವರು, ಈ ಬಗ್ಗೆ ವಿವರಗಳನ್ನು ಬಹಿರಂಗಪಡಿಸಿ, ಈ ವಿಷಯ ಕುರಿತು ಜನಮತಗಣನೆಗೆ ತಾವು ಒಪ್ಪಿರುವುದಾಗಿ ಮಾಡಿದ ಆಪಾದನೆಯನ್ನು ಅಲ್ಲಗಳೆದರು.

ನಿಜಲಿಂಗಪ್ಪ ವಿರೋಧಿ ವಲಯದಲ್ಲಿ, ೩೧-೭-೧೯೬೫ ರಂದು ಜನತಾ ಪಕ್ಷವು ಹುಬ್ಬಳ್ಳಿಯಲ್ಲಿ ಒಂದು ಸಮಾವೇಶವನ್ನು ನಡೆಸಿ, ಎಸ್. ಚೆನ್ನಯ್ಯನವರನ್ನು ಅದರ ಮೊದಲ ಅಧ್ಯಕ್ಷರನ್ನಾಗಿ ಆರಿಸಿತು. ಜೊತೆಗೆ ಹದಿನೇಳು ಮಂದಿಯ ಕಾರ್ಯಕಾರಿ ಸಮಿತಿಯನ್ನೂ ಚುನಾಯಿಸಿತು, ಅದರಲ್ಲಿ ಟಿ. ಸುಬ್ರಹ್ಮಣ್ಯ, ಎ.ಜಿ. ರಾಮಚಂದ್ರರಾವ್, ಎನ್. ರಾಚಯ್ಯ ಮತ್ತು ಬಂಡಿಗೌಡ ಮುಂತಾದ ಪ್ರಮುಖ ಭಿನ್ನಮತೀಯ ನಾಯಕ

ರೆಲ್ಲರೂ ಇದ್ದರು. ಇನ್ನೂ ಬೇಲಿಯಂಚಿಲ್ಲಿಯೇ ಕುಳಿತಿದ್ದ ಹನುಮಂತಯ್ಯನವರು ಮಾತ್ರ ಹೊರಗುಳಿದವರಲ್ಲಿ ಎದ್ದುಕಾಣುತ್ತಿದ್ದವರು. ೪-೮-೧೯೬೫ ರಂದು ನಿಜಲಿಂಗಪ್ಪ ನವರ ಸರ್ಕಾರವು ಪಾನನಿರೋಧದ ಕಾನೂನನ್ನು ಸಡಿಲಗೊಳಿಸಿ ಯಾರು ಬೇಕಾದರೂ ಪರವಾನಗಿ ಪಡೆದು ನಿಯತ ಪ್ರಮಾಣದ (ವಿದೇಶೀ) ಮದ್ಯವನ್ನು ಪಡೆಯಬಹುದೆಂಬ ತನ್ನ ನಿಲವಿನಲ್ಲಿನ ಭಾರಿ ಬದಲಾವಣೆಯನ್ನು ಪ್ರಕಟಿಸಿತು. ರಾಜ್ಯಾದ್ಯಂತ ಮದ್ಯದಂಗಡಿ ಗಳನ್ನು ತೆರೆಯಲು ಸರ್ಕಾರವು ಪರವಾನಗಿ ನೀಡಿತು. ನಿರೀಕ್ಷಿಸಿದಂತೆಯೇ, ಹಳೆಯ ತಲೆಮಾರಿನ ಹಳ್ಳಿಕೇರಿ ಗುದ್ಲೆಪ್ಪನಂತಹವರು ಈ ಧೋರಣೆಯನ್ನು ದುರದೃಷ್ಟ ಎಂದು ಬಣ್ಣಿಸಿದರು. ಪ್ರಾಯಶಃ ಇದು ಸರ್ಕಾರವು ಎದುರಿಸುತ್ತಿದ್ದ ಹಣಕಾಸು ಬಿಕ್ಕಟ್ಟಿ ನಿಂದಾಗಿ ಅನಿವಾರ್ಯವೆನಿಸಿತ್ತು. ನಾಲ್ಕನೆಯ ಯೋಜನೆಯ ಹಣವೆಲ್ಲ ಮುಗಿದು ೧೯೬೬-೬೭ ನೇ ಸಾಲಿಗೆ ಕೇವಲ ೪೭ ಕೋಟಿ ರೂಪಾಯಿಗಳು ಮಾತ್ರ ಸಿಕ್ಕುವು ದೆಂದೂ, ಕೇಂದ್ರದಿಂದ ಹೆಚ್ಚಿನ ಹಣವನ್ನು ನಿರೀಕ್ಷಿಸಲಾಗದೆಂದೂ ಹೆಗಡೆ ಹೇಳಿದರು. ಉದಾಹರಣೆಗೆ, ಆಹಾರ ಬಿಕ್ಕಟ್ಟನ್ನು ಎದುರಿಸಲು ರಾಜ್ಯವು ಹತ್ತು ಕೋಟಿ ರೂಪಾಯಿಗಳ ನೆರವನ್ನು ಕೇಳಿದರೆ ಕೇಂದ್ರವು ಜುಜುಬಿ ಒಂದು ಕೋಟಿಯನ್ನು ಮಾತ್ರ ಕರುಣಿಸಿತ್ತು. ಎದೆಗುಂದದ ರಾಜ್ಯ ಸರ್ಕಾರವು ಇನ್ನೆರಡು ವರ್ಷಗಳಲ್ಲಿ ಆಹಾರದ ವಿಷಯದಲ್ಲಿ ಸ್ವಯಂಪೂರ್ಣತೆಯನ್ನು ಸಾಧಿಸುವ ಯೋಜನೆಯೊಂದನ್ನು ಸಿದ್ಧಪಡಿಸಿರುವು ದಾಗಿ ಹೇಳಿಕೊಂಡಿತು! ಪಾನನಿರೋಧವನ್ನು ಸಡಿಲಗೊಳಿಸಿದುದರ ಮೊದಲ ಅನಾಹುತವೆಂದರೆ ಯಶೋದರ ದಾಸಪ್ಪನವರ ಸರ್ಕಾರದ ನಿಲವನ್ನು ಪ್ರತಿಭಟಿಸಿ ೨೭-೧೨ -೧೯೬೫ ರಂದು ರಾಜೀನಾಮೆಯಿತ್ತು ಸಂಪುಟದಿಂದ ಹೊರಬಂದರು. ಪಾನನಿರೋಧದ ವಿಷಯವು ಪಕ್ಷದಲ್ಲಿ ಬಿಕ್ಕಟ್ಟು ಉಂಟಾಗಲು ಕಾರಣವಾಯಿತು. ಎಂಪಿಸಿಸಿ ಅಧ್ಯಕ್ಷರಾದ ಮೊಹಮ್ಮದ್ ಆಲಿಯವರು ಪತ್ರಿಕೆಗಳಿಗೆ ಹೇಳಿಕೆ ನೀಡಿ, ಪಾನನಿರೋಧದ ಬಗೆಗಿನ ಸರ್ಕಾರದ ಈಚಿನ ನಿಲವಿನ ಬಗ್ಗೆ ಚರ್ಚಿಸಲು ಎಂಪಿಸಿಸಿಯು ಶೀಘ್ರವೇ ಸಭೆ ಸೇರುವುದಾಗಿ ಪ್ರಕಟಿಸಿದರು.

ರಾಷ್ಟ್ರದ ಮೇಲೆ ಬಿದ್ದ ಮತ್ತೊಂದು ಆಘಾತವೆಂದರೆ ಪ್ರಧಾನ ಮಂತ್ರಿಗಳಾದ ಲಾಲ್ ಬಹಾದ್ದೂರ್ ಶಾಸ್ತ್ರಿಯವರು ೧೧-೧-೧೯೬೬ ರಂದು ಬೆಳಗಿನ ಜಾವ ೧-೨೨ರ ಹೊತ್ತಿಗೆ ತಾಷ್ಕೆಂಟ್‌ನಲ್ಲಿ ನಿಧನ ಹೊಂದಿದರು. ಈ ರೀತಿ ಹೊಸ ವರ್ಷವು ಆಘಾತದಿಂದ ಮೊದಲಾಯಿತು. ಪ್ರಾಯಶಃ ದೇಶವು ಎರಡನೆಯ ಬಾರಿಗೆ ನಾಯಕತ್ವದ ಬಿಕ್ಕಟ್ಟನ್ನು ಪರಿಹರಿಸಿಕೊಂಡು, ಎರಡು ವರ್ಷಗಳಿಗಿಂತಲೂ ಕಡಿಮೆ ಅವಧಿಯಲ್ಲಿ ಎರಡನೆಯ ಬಾರಿಗೆ ಜಿ.ಎಲ್. ನಂದಾ ಅವರು ತಾತ್ಕಾಲಿಕ ಪ್ರಧಾನಿಗಳಾಗಿ ಆಯ್ಕೆ ಗೊಂಡರು. ರಾಜ್ಯಕ್ಕೆ ಮರಳಿದರೆ, ಪಾನನಿರೋಧದ ಬಗೆಗಿನ ಧೋರಣೆಯನ್ನು

ವಿರೋಧ ಪಕ್ಷಗಳೂ ಟೀಕಿಸಿದವು. ಅದರಲ್ಲಿಯೂ ಜನಸಂಘದ ನಾಯಕ ಜಗನ್ನಾಥ ರಾವ್ ಜೋಶಿಯವರು ಕಾಂಗ್ರೆಸ್‌ಗೆ ತತ್ವಗಳೆ ಇಲ್ಲ ಎಂದರು. ದೇಶದ ಮಟ್ಟದಲ್ಲಿ, ಪ್ರಧಾನ ಮಂತ್ರಿಯ ಹುದ್ದೆಗಾಗಿನ ಸ್ಪರ್ಧೆಯು ಮೊರಾರ್ಜಿ ದೇಸಾಯಿ ಮತ್ತು ಇಂದಿರಾ ಗಾಂಧಿಯವರ ನಡುವೆಗೆ ಸೀಮಿತೊಂಡಿತು. ನಿಜಲಿಂಗಪ್ಪನವರು, ಮುಂದೆ ತಮ್ಮ ತಪ್ಪಿಗಾಗಿ ತೀವ್ರವಾಗಿ ವಿಷಾದಿಸಿದವರು, ಇಂದಿರಾ ಗಾಂಧಿಯವರ ಬೆಂಬಲಕ್ಕೆ ನಿಂತರು. ತಾವು ಅವರನ್ನು ಬೆಂಬಲಿಸಿದ್ದೇಕೆ ಎಂಬುದನ್ನು ಅವರು ಪ್ರಧಾನಿ ಪಟ್ಟದ ಚುನಾವಣೆಯ ದಿನವಾದ ೧೮-೧-೧೯೬೬ ರಂದು ವಿವರಿಸಿದರು. ಅವರು ಮೈಸೂರಿನ ಎಂಪಿಗಳನ್ನು ದ್ದೇಶಿಸಿ ಮಾತನಾಡುತ್ತಿದ್ದರು. ಅವರು ನಂದಾ, ಚವಾನ್ ಮತ್ತು ಕಾಮರಾಜರ ಹೆಸರನ್ನೂ ಪರಿಶೀಲಿಸಿದರು, ಆದರೆ ಕೊನೆಗೆ ಮುಖ್ಯಮಂತ್ರಿಗಳೆಲ್ಲ ಇಂದಿರಾ ಗಾಂಧಿ ಯವರ ಬಗ್ಗೆ ಒಲವು ತೋರಿದರು. ಮೊರಾರ್ಜಿಯವರು ಬೇಡವೆಂದಾದರೆ ಮತ್ತು ಇಂದಿರಾ ಗಾಂಧಿಯವರು ಸೂಕ್ತವಲ್ಲವೆಂದಾದರೆ ಮೂರನೆಯ ವ್ಯಕ್ತಿಯೊಬ್ಬರನ್ನೇಕೆ ಪರಿಗಣಿಸಬಾರದೆಂದು ಮೈಸೂರಿನ ಒಬ್ಬ ಸಂಸತ್ ಸದಸ್ಯರಾದ ಹನುಮಂತಯ್ಯನವರು ಕೇಳಿದರು. ದೇಶದ ಬಿಕ್ಕಟ್ಟುಗಳನ್ನು ನಿಭಾಯಿಸಲು ಅನುಭವವಿಲ್ಲದ ಇಂದಿರಾ ಗಾಂಧಿ ಯವರಿಗಿಂತ ಅನುಭವಸ್ಥರಾದ ಮೊರಾರ್ಜಿ ದೇಸಾಯಿಯವರೇ ಉತ್ತಮ ಆಯ್ಕೆ ಎಂದು ಕೆಲವರು ಮೈಸೂರು ಸದಸ್ಯರು ಅಭಿಪ್ರಾಯಪಟ್ಟರು. ಆದರೆ ಅವರೂ ಇಂದಿರಾ ಗಾಂಧಿಯವರ ಆಯ್ಕೆಯನ್ನು ಒಪ್ಪಿದರೂ, ಅದಕ್ಕೆ ಕಾರಣವನ್ನು ನೀಡಲಿಲ್ಲ. ಒಳಗಿನ ಕತೆಯನ್ನು ಹನುಮಂತಯ್ಯ ಬಯಲು ಮಾಡಿದರು. ಸಭೆಗೆ ಹಾಜರಾದವರು ಮೈಸೂರು ಸದಸ್ಯರಲ್ಲಿ ಅರ್ಧದಷ್ಟು ಸಂಖ್ಯೆಯವರು ಮಾತ್ರ, ಮಿಕ್ಕವರೆಲ್ಲ ಊರಲ್ಲಿರಲಿಲ್ಲ. ೧೮-೧-೧೯೬೬ ರಂದು ಒಬ್ಬರನ್ನುಳಿದು ಮಿಕ್ಕವರೆಲ್ಲ ಇಂದಿರಾ ಗಾಂಧಿಯವರನ್ನು ಬೆಂಬಲಿಸಿದರು ಎಂದು ನಿಜಲಿಂಗಪ್ಪನವರು ಹೇಳಿದರು, ಆದರೆ ಆ ಒಬ್ಬರು ಯಾರು ಎಂದು ಮಾತ್ರ ಹೇಳಲಿಲ್ಲ. ಈ ವ್ಯಕ್ತಿ ಹನುಮಂತಯ್ಯನವರೇ ಎಂಬುದನ್ನು ಯಾರು ಬೇಕಾದರೂ ಊಹಿಸಬಹುದಾಗಿತ್ತು. ಇಂದಿರಾ ಗಾಂಧಿಯವರು ಭಾರತದ ಮೂರನೆಯ ಪ್ರಧಾನ ಮಂತ್ರಿಗಳಾಗಿ ೧೯-೧-೧೯೬೬ ರಂದು ಚುನಾಯಿತರಾದರು; ಅವರಿಗೆ ೩೩೫ ಮತಗಳೂ, ಮೊರಾರ್ಜಿಯವರಿಗೆ ೧೯೬ ಮತಗಳೂ ಬಂದುವು. ಕಾಂಗ್ರೆಸ್ ಸಂಸದೀಯ ಪಕ್ಷವು ೧೯-೧-೧೯೬೬ ರಂದು ಬೆಳಿಗ್ಗೆ ೧೧-೦೫ಕ್ಕೆ ಕಾಮರಾಜರ ಅಧ್ಯಕ್ಷತೆಯಲ್ಲಿ ಸಭೆ ಸೇರಿದರು. ಜಿ.ಎಲ್. ನಂದಾ ಇಂದಿರಾ ಗಾಂಧಿಯವರ ಹೆಸರನ್ನು ಸೂಚಿಸಿದರೆ, ಅದನ್ನು ಸಂಜೀವ ರೆಡ್ಡಿ ಬೆಂಬಲಿಸಿದರು. ಹನುಮಂತಯ್ಯನವರು ಮೊರಾರ್ಜಿಯವರ ಹೆಸರನ್ನು ಸೂಚಿಸಿ, ತುಕರಾಮ ಪಳಿವಾಲ್ ಅದನ್ನು ಬೆಂಬಲಿಸಿ ದರು. ಸ್ಪರ್ಧಿಗಳಿಬ್ಬರೂ ತಮ್ಮ ವೈಯಕ್ತಿಕ ಮತಗಳನ್ನು ಚಲಾಯಿಸಲಿಲ್ಲ. ಎರಡು

ಶ್ರೀ ರಾಮಕೃಷ್ಣ ಹೆಗಡೆ, ಶ್ರೀ ಬಿ.ಡಿ.ಜತ್ತಿ ಮತ್ತು ಶ್ರೀ ಆರ್. ಗುಂಡೂರಾವ್ ಜೊತೆಯಲ್ಲಿ ಎಸ್ಸೆನ್

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಶ್ರೀಮತಿ ಇಂದಿರಾಗಾಂಧಿಯವರೊಂದಿಗೆ ಎಸ್ಸೆನ್

ಮತಗಳು ಕುಲಗೆಟ್ಟಿದ್ದವು. ಒಟ್ಟು ೫೫೧ ಮಂದಿ ಸಂಸತ್ ಸದಸ್ಯರ ಪೈಕಿ ೫೨೬ ಮಂದಿ ಹಾಜರಿದ್ದರು. ರಾಜ್ಯಸಭೆಯ ಸದಸ್ಯರಾಗಿದ್ದ ಇಂದಿರಾ ಗಾಂಧಿಯವರು ತಾಂತ್ರಿಕವಾಗಿ ಅರ್ಹತೆ ಪಡೆದಿದ್ದರು, ಆದರೆ ರಾಜಕೀಯ ಪದ್ಧತಿಗನುಗುಣವಾಗಿ ಪ್ರಧಾನಿಯಾಗುವವರು ಲೋಕಸಭೆಯ ಸದಸ್ಯರಾಗಿರಬೇಕೆಂದು ಅವರು ಅಭಿಪ್ರಾಯಪಟ್ಟರು. ಅವರ ಆಯ್ಕೆಯ ಬಳಿಕ ಕಾಮರಾಜರು ಪತ್ರಿಕೆಗಳೊಂದಿಗೆ ಮಾತನಾಡುತ್ತ, ಅವರು ಅತ್ಯುತ್ತಮ ಆಡಳಿತಗಾರರಾಗಿ ಹೊರಹೊಮ್ಮುವರೆಂದು ಆಶಿಸಿ, ಅವರ ಧೋರಣೆಯೇ ಕಾಂಗ್ರೆಸ್ ಪಕ್ಷದ ಧೋರಣೆಯಾಗಿರುತ್ತದೆಂದರು. ಅಂದರೆ ಧೋರಣೆಯು ಮಧ್ಯಸ್ಥಿಕೆಯದು, ಎಡವೂ ಅಲ್ಲ ಬಲವೂ ಅಲ್ಲ. ಈ ಪರಿಸ್ಥಿತಿಯ ಬಗ್ಗೆ ತೃಪ್ತರಾಗದ ಹನುಮಂತಯ್ಯನವರು ೨೧-೧-೧೯೬೬ ರಂದು ಚಂದೀಗಡದಲ್ಲಿ ಮಾತನಾಡುತ್ತ, ಪ್ರಬಲ ಹಿತಾಸಕ್ತಿಗಳು ಪಕ್ಷದ ಪ್ರಜಾಸತ್ತಾತ್ಮಕ ಭಿನ್ನಾಭಿಪ್ರಾಯವನ್ನು ದಮನಗೊಳಿಸಿದೆ ಎಂದರು.

ಶಾಸ್ತ್ರಿ ಅವರ ಸಂಪುಟದಲ್ಲಿದ್ದ ಬಹುಮಂದಿ ಸದಸ್ಯರನ್ನು ಇಂದಿರಾ ಗಾಂಧಿ ಅವರು ಉಳಿಸಿಕೊಂಡರೂ, ಮೂರು ಹೊಸ ಮುಖಗಳ ಸೇರ್ಪಡೆ ಮಾಡಿದರು. ಅವರುಗಳೆಂದರೆ. ಅಶೋಕ ಮೆಹ್ತಾ, ಜಿ.ಎಸ್. ಪಾಠಕ್ ಮತ್ತು ಫಕ್ರುದ್ದೀನ್ ಆಲಿ ಅಹಮದ್. ಹಿಂದಿನ ಸಂಪುಟದ ಇಬ್ಬರನ್ನು ಮಾತ್ರ ಕೈಬಿಡಲಾಯಿತು, ಎ.ಕೆ. ಸೆನ್ ಮತ್ತು ಹುಮಾಯೂನ್ ಕಬೀರ್. ಮೊದಮೊದಲು ಜಗಜೀವನ ರಾಂ ಹಿಂದೇಟು ಹಾಕಿದರೂ, ಆ ಬಳಿಕ ಸಂಪುಟ ಸೇರಲು ಒಪ್ಪಿಗೆ ನೀಡಿದರು. ಆರಂಭದಲ್ಲಿ ಕೇಂದ್ರದ ಹೊಸ ಆಡಳಿತದೊಂದಿಗಿನ ನಿಜಲಿಂಗಪ್ಪನವರ ಬಾಂಧವ್ಯ ಸೌಹಾರ್ದಯುತವಾಗಿಯೂ ಸಮಸ್ಯೆಗಳಿಲ್ಲದೆಯೂ ಇತ್ತು. "ವಾಸ್ತವವಾಗಿ, ಹಿರಿಯ ಕಾಂಗ್ರೆಸ್ ನಾಯಕರಾಗಿ, ಇಂದಿರಾ ಗಾಂಧಿಯವರು ಪ್ರಧಾನಿ ಪಟ್ಟಕ್ಕೇರಲು ಹಿನ್ನೆಲೆ ಸಿದ್ಧಗೊಳಿಸಿದವರಲ್ಲಿ ಅವರೂ ಒಬ್ಬರು." ಸದ್ಯಕ್ಕೆ ಅವರ ಸಮಸ್ಯೆ ತಮ್ಮ ತವರಿನಲ್ಲಿನ – ಪಕ್ಷದೊಳಗಿನ ಹಾಗೂ ಹೊರಗಿನ ವಿರೋಧಿಗಳ – ರಾಜಕೀಯ ನಿರ್ವಹಣೆಗೆ ಸೀಮಿತವಾಗಿತ್ತು. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಪಾಲುಗೊಂಡು ವಿಧಾನಸಭೆಯಲ್ಲಿ ಮಾತನಾಡುತ್ತ ಸ್ವತಂತ್ರ ಸದಸ್ಯ ಸಿ.ಜೆ. ಮುಕ್ಕಣ್ಣಪ್ಪನವರು, ತಮ್ಮ ಸಚಿವರಿಂದಲೇ ಮುಖ್ಯ ಮಂತ್ರಿಗಳು ಎದುರಿಸುತ್ತಿರುವ ಇಕ್ಕಟ್ಟನ್ನು ಸಮರ್ಥವಾಗಿ ಬಣ್ಣಿಸಿದರು. ಸಂಪುಟದಲ್ಲಿ ಸಾಮರಸ್ಯವೇ ಇಲ್ಲವೆಂದು ಮುಕ್ಕಣ್ಣಪ್ಪ ಆಪಾದಿಸಿದರು. ಸಚಿವರು ಪರಸ್ಪರರ ಬಗ್ಗೆ ರಕ್ತದಾಹದಿಂದ ಕೂಡಿದ್ದಾರೆ, ಅವರುಗಳು ಒಣಮಾತುಗಳಲ್ಲಿಯೇ ಕಾಲ ಕಳೆಯುತ್ತಿದ್ದಾರೆ, ರಾಜ್ಯದ ಅಭಿವೃದ್ಧಿಗೆ ಅವರ ಕೊಡುಗೆ ಶೂನ್ಯ ಎಂದರು! ರಾಜ್ಯದ ಆಹಾರ ಮತ್ತು ಹಣಕಾಸು ಪರಿಸ್ಥಿತಿಗಳು ಹದಗೆಟ್ಟಿವೆ ಎಂದರು. ಪಾನನಿರೋಧದ ಬಗೆಗಿನ ವಿವಾದಾತ್ಮಕ ಧೋರಣೆಯ ಬಗ್ಗೆ ನಿಜಲಿಂಗಪ್ಪನವರು ಪತ್ರಿಕೆಗಳವರೊಡನೆ

ಮಾತನಾಡುತ್ತ, ಪಾನನಿರೋಧದ ಬಗ್ಗೆ ಸದ್ಯದ ಧೋರಣೆಯೇ ಮುಂದುವರೆಯುವುದೆಂದೂ ಅದನ್ನು ಬದಲಿಸಲಾಗುವುದಿಲ್ಲವೆಂದೂ ತಿಳಿಸಿದರು. ಅದನ್ನು ಎರಡನೆಯ ಬಾರಿ ಸಡಿಲಗೊಳಿಸುವುದಾದರೆ ಯಾವಾಗ ಎಂಬುದರ ಬಗ್ಗೆ ಉತ್ತರಿಸಲು ನಿರಾಕರಿಸಿದರು. ಎರಡನೆಯ ಬಾರಿ ಸಡಿಲಗೊಳಿಸುವಿಕೆಯೇ ಇಲ್ಲ ಎಂದು ಹಣಕಾಸು ಮತ್ತು ಅಬಕಾರಿ ಸಚಿವ ರಾಮಕೃಷ್ಣ ಹೆಗಡೆಯವರು ಉತ್ತರಿಸಿದರು. ನಿಜಲಿಂಗಪ್ಪ ಸರ್ಕಾರದ ಒಂದು ಗಮನಾರ್ಹ ಲಕ್ಷಣವೆಂದರೆ, ಆದರ್ಶವನ್ನು ವಾಸ್ತವದೆಡೆಗೆ ಬಾಗಿಸುವುದು, ಆದರ್ಶದ ಮಿತಿಗಳನ್ನು ವಾಸ್ತವದ ಹಿನ್ನೆಲೆಯಲ್ಲಿ ಪರಿಗಣಿಸುವುದು. ಇದಕ್ಕೊಂದು ನಿದರ್ಶನ ಕೊಡಬಹುದಾದರೆ, ಸಹಕಾರ ಸಂಸ್ಥೆಗಳ ಬಗ್ಗೆ ಅದಕ್ಕೆ ಬದ್ಧತೆಯಿದ್ದರೂ, ಕಠಿಣ ವಾಸ್ತವಗಳ ಕಾರಣದಿಂದ ಅನಿವಾರ್ಯವೆನಿಸಿದರೆ ಅದನ್ನು ಬಿಡಲೂ ಅದು ಸಿದ್ಧವಿತ್ತು. ಸಹಕಾರ ಸಂಸ್ಥೆಗಳು ಸಹಾಯಕವಾಗದ್ದರಿಂದ ಏತ ನೀರಾವರಿ ಯೋಜನೆಯನ್ನು ಸರ್ಕಾರದ ನೇರ ನಿಯಂತ್ರಣಕ್ಕೆ ವಹಿಸಲು ನಿಜಲಿಂಗಪ್ಪ ಸಿದ್ಧವಿದ್ದುದು ಇದಕ್ಕೊಂದು ಉದಾಹರಣೆ. ೨-೩-೧೯೬೬ ರಂದು ಹೆಗಡೆಯವರು ಮಂಡಿಸಿದ ೧೯೬೬-೬೭ನೇ ಸಾಲಿನ ರಾಜ್ಯದ ಆಯವ್ಯಯ ಅಂದಾಜಿನಲ್ಲಿ ಹೊಸ ತೆರಿಗೆಗಳ ಪ್ರಸ್ತಾಪ ಮಾಡಿರಲಿಲ್ಲ.

ನಿಜಲಿಂಗಪ್ಪನವರ ಕಡುನಿಷ್ಠೆ ನಿಸ್ಸಂದೇಹವಾಗಿ ನೀರಾವರಿ ಮತ್ತು ಕೃಷಿಗಳ ಬಗೆಗಿನದು. ಆದರೆ ಆರ್ಥಿಕ ಸಂಪನ್ಮೂಲಗಳ ಕೊರತೆ ಅವರ ಕೈ ಕಟ್ಟಿಹಾಕಿತ್ತು. ರಾಜ್ಯವು ತಾನೇ ನಿರ್ವಹಿಸಿ ಪೂರೈಸಲು ಹಣಕಾಸಿನ ಮುಗ್ಗಟ್ಟು ಇರುವುದರಿಂದ ಕೃಷ್ಣಾ ಯೋಜನೆಯನ್ನು ಕೇಂದ್ರ ಯೋಜನೆಯಾಗಿ ಕೈಗೆತ್ತಿಕೊಳ್ಳಬೇಕೆಂದು ಅವರು ಪ್ರಧಾನಿಗಳಿಗೂ ಕೆ.ಎಲ್. ರಾವ್ ಅವರಿಗೂ ಪತ್ರಗಳನ್ನು ಬರೆದರು. ಇತರ ನೀರಾವರಿ ಯೋಜನೆಗಳಿಗೆ ಮೂರು ಕೋಟಿ ರೂಪಾಯಿಗಳ ನೆರವನ್ನೂ ಬೇಡಿದರು. ರಾಜ್ಯಕ್ಕೆ ಬಂದ ಹೊರಗಿನ ಗಣ್ಯರು ಬೆಂಗಳೂರು ಮತ್ತು ಮೈಸೂರುಗಳಿಗೆ ಹಾಗು ಹತ್ತಿರದ ಪ್ರದೇಶಗಳಿಗೆ ಭೇಟಿಕೊಟ್ಟು ರಾಜ್ಯವು ಸಮೃದ್ಧವಾಗಿದೆಯೆಂಬ ತಪ್ಪು ಭಾವನೆ ತಳೆಯುತ್ತಾರೆ ಎಂಬುದು ಅವರ ನಿಲವು. ಆದರೆ ವಾಸ್ತವವಾಗಿ ಅದೊಂದು ಬಡರಾಜ್ಯ, ಕಳೆದ ಐವತ್ತು ವರ್ಷಗಳಲ್ಲಿಯೇ ೧೯೬೬ ಅದರ ಪಾಲಿಗೆ ಅತ್ಯಂತ ಕಠಿಣ ವರ್ಷ ಎಂದರು. ಕೈಯಲ್ಲಿ ಭವನಾಶಿ ಹಿಡಿದು ಅವರು ಆಗಾಗ್ಗೆ ಕೇಂದ್ರಕ್ಕೆ ಹೋಗಿ ಬೇಡುವುದು ಅನಿವಾರ್ಯವಾಗಿತ್ತು! ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ ಕೇಂದ್ರವು ಹೆಚ್ಚಿನ ಗಮನ ಹರಿಸಬೇಕೆಂದು ಮನವಿ ಮಾಡಿಕೊಳ್ಳುವ ಉದ್ದೇಶದಿಂದ ಅಶೋಕ ಮೆಹ್ತಾ ಅವರನ್ನು ಭೇಟಿಯಾಗಲು ನಿಜಲಿಂಗಪ್ಪನವರು ೧೦-೩-೧೯೬೬ ರಂದು ದೆಹಲಿಗೆ ಹೋದರು. ಅದರಲ್ಲೂ, ೧೦೦ ಕೋಟಿ ವೆಚ್ಚದ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಕೇಂದ್ರವು

ವಹಿಸಿಕೊಳ್ಳಬೇಕೆಂಬುದು ಅವರ ಒತ್ತಾಯವಾಗಿತ್ತು. ಯೋಜನಾ ಆಯೋಗದ ಉಪಾಧ್ಯಕ್ಷ ಅಶೋಕ ಮೆಹ್ತಾ ಅವರು ೬-೪-೧೯೬೬ ರಂದು ಬೆಂಗಳೂರಿಗೆ ಬಂದು ವಿಧಾನಸಭೆಯನ್ನುದ್ದೇಶಿಸಿ ಭಾಷಣ ಮಾಡುತ್ತ, ಮೂರನೇ ಯೋಜನೆಯಲ್ಲಿ ರಾಜ್ಯದ ಸ್ಥಿತಿ ಉತ್ಸಾಹದಾಯಕವಾಗಿಲ್ಲ ಎಂದು ಅಭಿಪ್ರಾಯಪಟ್ಟರು. ಮಾತುಕೊಟ್ಟದ್ದಕ್ಕಿಂತ ಕೇಂದ್ರದ ಆರ್ಥಿಕ ನೆರವು ಕಡಿಮೆಯಾಯಿತು ಎಂಬುದನ್ನವರು ಒಪ್ಪಿಕೊಂಡರು. ವಾಸ್ತವವಾಗಿ, ಮಾತುಕೊಟ್ಟಿದ್ದ ೯೦ ಕೋಟಿಗಳಲ್ಲಿ ಕೇವಲ ಮೂರನೇ ಒಂದು ಭಾಗ ಅಷ್ಟೆ!

ಮಹತ್ವದ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡು, ದೇಶದ ಶಕ್ತಿ ಮತ್ತು ಕಾಲ ಕೆಲಸಕ್ಕೆ ಬಾರದ ಅಂತಾರಾಜ್ಯ ಗಡಿವಿವಾದಗಳಲ್ಲಿ ವ್ಯರ್ಥವಾಗಿ ಕಳೆದು ಹೋಗುತ್ತಿತ್ತು! ತನ್ನ ರಾಜ್ಯದ ಗಡಿ ವಿಷಯಗಳ ಬಗ್ಗೆ ಹಕ್ಕು ಪ್ರತಿಪಾದಿಸಲು ಮಹಾರಾಷ್ಟ್ರ ಸರ್ಕಾರ ಪ್ರಯತ್ನಿಸಿತು. ಕೇಂದ್ರದ ಮೇಲೆ ಅದರ ಒತ್ತಡದ ಪರಿಣಾಮಕಾರಿಯಾಗಿ, ಕೇಂದ್ರ ಮಣಿಯಿತು. ಇಂದಿರಾ ಗಾಂಧಿಯವರು ೬-೫-೧೯೬೬ ರಂದು ಔರಂಗಾಬಾದ್‌ನಲ್ಲಿ ಮಾತನಾಡುತ್ತ, ಮೈಸೂರು ಮಹಾರಾಷ್ಟ್ರ ರಾಜ್ಯಗಳ ನಡುವಣ ಗಡವಿವಾದದ ಬಗ್ಗೆ ಪರಿಶೀಲಿಸಲು ಎಐಸಿಸಿಯು ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಿದೆ ಎಂದು ಪ್ರಕಟಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ನಿಜಲಿಂಗಪ್ಪನವರು, ಮೈಸೂರು ಮತ್ತು ಮಹಾರಾಷ್ಟ್ರಗಳಿಗೆ ಸಂಬಂಧಿಸಿದಂತೆ ಮಾತ್ರ ಇರುವುದಾದರೆ ತಾವು ಸಮಿತಿಯ ಅಥವಾ ಆಯೋಗದ ರಚನೆಗೆ ವಿರುದ್ಧವಾಗಿರುವುದಾಗಿ ಹೇಳಿದರು. ಎಲ್ಲ ಅಂತರರಾಜ್ಯ ಗಡಿವಿವಾದಗಳನ್ನು ಅದಕ್ಕೆ ಒಪ್ಪಿಸುವುದಾದರೆ ಅದರ ರಚನೆಗೆ ತಮ್ಮ ಅಭ್ಯಂತರವಿಲ್ಲವೆಂದು ನುಡಿದರು. ಅಲ್ಲದೆ, ಹೊಂದಾಣಿಕೆಗಳು ಅಲ್ಪಸ್ವಲ್ಪಕ್ಕೆ ಸೀಮಿತಗೊಂಡಿರಬೇಕೇ ವಿನಾ ಪ್ರಮುಖ ಬದಲಾವಣೆಗಳಾಗಕೂಡದೆಂದರು. ಉದಾಹರಣೆಗೆ, ಭಾಷಾಧಾರಿತವಾಗಿ ಕೆಲವು ಹಳ್ಳಿಗಳ ವಿನಿಮಯಕ್ಕೆ ಅವರ ಒಪ್ಪಿಗೆಯಿತ್ತು. ಗೋವಾದ ಭವಿಷ್ಯವನ್ನು ಗೋವಾ ಜನರೇ ತೀರ್ಮಾನಿಸುತ್ತಾರೆ ಎಂಬ ಇಂದಿರಾ ಗಾಂಧೀಯವರ ಹೇಳಿಕೆಯನ್ನವರು ಸ್ವಾಗತಿಸಿದರು. ಮೈಸೂರು-ಮಹಾರಾಷ್ಟ್ರ ಗಡಿವಿವಾದಗಳ ಬಗ್ಗೆ ಆಯೋಗ ನೇಮಕಗೊಳ್ಳುವುದರ ವಿರುದ್ಧ ಮೈಸೂರಿನವರ ಆಕ್ರೋಶ ಹೆಚ್ಚಾಯಿತು. ಈ ವಿಚಾರವನ್ನು ತಾವು ಸಂಪೂರ್ಣವಾಗಿ ವಿರೋಧಿಸುವುದಾಗಿ ಏಕೀಕರಣ ಸಮಿತಿಯ ಅಧ್ಯಕ್ಷರು ಹುಬ್ಬಳ್ಳಿಯಲ್ಲಿ ಹೇಳಿಕೆಯಿತ್ತರು. ಈ ವಿಷಯದಲ್ಲಿ ಮಹಾರಾಷ್ಟ್ರದವರ ಪಿರಿಪಿರಿ ಇಂದಿರಾ ಗಾಂಧಿಯವರಲ್ಲಿಯೂ ಅಸಮಾಧಾನವನ್ನುಂಟುಮಾಡಿತು. ೧೯೬೭ರಲ್ಲಿ ನಡೆಯುವ ಚುನಾವಣೆಗಳಿಗೆ ಮುನ್ನ ಯಾವುದೇ ಸಮಿತಿ ಅಥವಾ ಆಯೋಗವನ್ನೂ ರಚಿಸುವುದಿಲ್ಲವೆಂದು ಅವರು ತಮ್ಮನ್ನು ಭೇಟಿ ಮಾಡಿದ ಮೈಸೂರು ಸಂಸತ್ ಸದಸ್ಯರ ಒಂದು

ನಿಯೋಗಕ್ಕೆ ಆಶ್ವಾಸನೆಯಿತ್ತರು. ಈ ಮಧ್ಯೆ, ಚುನಾವಣಾ ಆಯೋಗವು ಮಹಾಚುನಾವಣೆಗಳನ್ನು ಫೆಬ್ರವರಿ ೧೯೬೭ರಲ್ಲಿ ಒಂದು ದಿನದಲ್ಲಿಯೇ ಮುಗಿಯುವಂತೆ ನಡೆಸಲು ತೀರ್ಮಾನಿಸಿತು.

ಪಕ್ಷದಲ್ಲಿ ನಿಜಲಿಂಗಪ್ಪನವರ ಸ್ಥಾನ ಮತ್ತು ಅನುಭವಗಳಿಗೆ ಎಂದಿನಂತೆಯೇ ಮಾನ್ಯತೆಯಿತ್ತು. ಸಂಸದೀಯ ಮಂಡಳಿಯಲ್ಲಿ ಖಾಲಿಯಿದ್ದ ಐದು ಸ್ಥಾನಗಳಲ್ಲಿ ಒಂದಕ್ಕೆ ನಿಜಲಿಂಗಪ್ಪನವರನ್ನು ಪರಿಗಣಿಸಬೇಕೆಂದು ಮುಂಬಯಿಯಲ್ಲಿ ನಡೆದ ಎಐಸಿಸಿ ಸಮಾವೇಶದಲ್ಲಿ ಹದಿನೆಂಟು ಮಂದಿ ಸಹಿಮಾಡಿದ ಪತ್ರವನ್ನು ಒಪ್ಪಿಸಲಾಯಿತು. ನಿಜಲಿಂಗಪ್ಪನವರ ತ್ಯಾಗ, ಸ್ವಾರ್ಥರಹಿತ ಸೇವೆ ಹಾಗೂ ವ್ಯಾಪಕ ಅನುಭವಗಳಿಂದಾಗಿ ಅವರು ಈ ಸ್ಥಾನಕ್ಕೆ ಅರ್ಹರು ಎಂದವರು ಹೇಳಿದರು. ಸಂಸದೀಯ ಮಂಡಳಿಯ ಚುನಾವಣೆಗಳಲ್ಲಿ ಸಂಜೀವರೆಡ್ಡಿ, ಸಂಜೀವಯ್ಯ, ಸಿ. ಬಿ. ಗುಪ್ತ, ಹನುಮಂತಯ್ಯ ಮತ್ತಿತರ ಹನ್ನೆರಡು ಮಂದಿ ಹುರಿಯಾಳುಗಳು ತರಾತುರಿಯ ಪ್ರಯತ್ನಗಳನ್ನು ನಡೆಸುತ್ತಿದ್ದರು. ಆದರೆ ಕಾಮರಾಜರ ಸಲಹೆಯಂತೆ ನಿಜಲಿಂಗಪ್ಪನವರು ಅದರಿಂದ ದೂರವುಳಿದರು. ದಕ್ಷಿಣಕ್ಕೆ ಕೇವಲ ಒಂದು ಸ್ಥಾನ ಸಿಗಬಹುದು, ರೆಡ್ಡಿ ಮತ್ತು ನಿಜಲಿಂಗಪ್ಪ ಇಬ್ಬರೂ ಸ್ಪರ್ಧಿಸಿದರೆ ಇಬ್ಬರೂ ಸೋಲಬಹುದೆಂಬುದು ಕಾಮರಾಜರ ವಾದ. ನಿಜಲಿಂಗಪ್ಪನವರು ಸ್ಪರ್ಧಿಸಬೇಕೆಂಬುದು ಕಾಮರಾಜರ ಆಸೆಯಾಗಿದ್ದರೂ, ಹಿಂದೆ ಸರಿಯಲು ರೆಡ್ಡಿ ನಿರಾಕರಿಸಿದರು. ಮುಂಬಯಿಯ ಮೂರು ದಿನಗಳ ಎಐಸಿಸಿ ಸಮಾವೇಶದಲ್ಲಿ ಇಂದಿರಾ ಗಾಂಧಿ, ನಿಜಲಿಂಗಪ್ಪ ಮತ್ತು ಕಾಮರಾಜರು ಗಡಿವಿಷಯವನ್ನು ಕುರಿತು ಚರ್ಚಿಸಿದರು. ಮೈಸೂರು-ಮಹಾರಾಷ್ಟ್ರ ಹಾಗೂ ಮೈಸೂರು-ಕೇರಳ ನಡುವಣ ಗಡಿವಿವಾದಗಳ ಪರಿಹಾರಕ್ಕಾಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ರಚಿಸಬೇಕೆಂದಿರುವ ಏಕಸದಸ್ಯ ಆಯೋಗವನ್ನು ತಕ್ಷಣವೇ ವಿರೋಧಿಸಬಾರದೆಂದು ಮೈಸೂರು ಸಚಿವ ಸಂಪುಟವು ತನ್ನ ೨೪-೫-೧೯೬೬ ರ ಸಭೆಯಲ್ಲಿ ನಿರ್ಣಯಿಸಿತು. ಆದರೆ ಎಂಪಿಸಿಸಿ ಆ ಪ್ರಸ್ತಾಪವನ್ನು ತಿರಸ್ಕರಿಸಿತು, ಹಿರಿಯ ಧುರೀಣ ಹಳ್ಳಿಕೇರಿ ಅದನ್ನು ವಿರೋಧಿಸಿದರು. ಆಯೋಗದ ಕಾರ್ಯವ್ಯಾಪ್ತಿಯ ಬಗ್ಗೆ ಇನ್ನೂ ಅಂತಿಮ ತೀರ್ಮಾನ ಕೈಗೊಂಡಿಲ್ಲವೆಂದು ನಿಜಲಿಂಗಪ್ಪನವರು ಬೆಳಗಾವಿಯಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯನ್ನುದ್ದೇಶಿಸಿ ಮಾತನಾಡುತ್ತ ಹೇಳಿದರು.

ಆಯೋಗ ರಚನೆಯ ವಿಷಯವನ್ನು ಮೈಸೂರು ರಾಜ್ಯಾದ್ಯಂತ ತೀವ್ರವಾಗಿ ಪ್ರತಿಭಟಿಸಲಾಯಿತು. ತಮಗೆ ತಿಳಿದಿರುವಂತೆ ಮಹಾ ಚುನಾವಣೆಗಳಿಗೆ ಮುಂಚೆ ಆಯೋಗ ರಚನೆಯಾಗುವುದಿಲ್ಲವೆಂದೂ ನಿಜಲಿಂಗಪ್ಪನವರು ಹೇಳಿದರು. ಆದರೆ ಇಂಥ ಹೇಳಿಕೆ

ಗಳಿಂದ ರಾಜ್ಯದಲ್ಲಿ ಉಂಟಾದ ಜನರ ಆಕ್ರೋಶವನ್ನು ಉಪಶಮನಗೊಳಿಸಲು ಸಾಧ್ಯವಾಗಲಿಲ್ಲ. ಬೆಂಗಳೂರಿನ ಮಲ್ಲೇಶ್ವರದಲ್ಲಿ ೨೯-೫-೧೯೬೬ ರಂದು ನಡೆದ ಒಂದು ಯುವ ಸಮಾವೇಶವು ಗಡಿವಿಷಯವನ್ನು ರಾಜ್ಯ ನಾಯಕತ್ವವು ಬಿಕರಿಗಿಟ್ಟಿದೆ ಎಂದು ಟೀಕಿಸಿತು. ಅದರ ಅಧ್ಯಕ್ಷತೆಯನ್ನು ಕೆ. ಎಲ್. ರಾಮಕೃಷ್ಣ ವಹಿಸಿದ್ದರು, ಅದರ ಸಂಘಟಕರು ಸಿ. ಪುಟ್ಟಸ್ವಾಮಿ. ೨-೬-೧೯೬೬ ರಂದು ನಡೆದ ಬೆಳಗಾವಿ ಡಿಸಿಸಿ ಸಭೆಯಲ್ಲಿ ಕ್ರಾಂತಿ ಕವಿ ವಾಲಿಯವರು ನಿಜಲಿಂಗಪ್ಪನವರು ಆಯೋಗದ ರಚನೆಯನ್ನು ಪ್ರತಿಭಟಿಸಿ ತಮ್ಮ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿ ಚಳವಳಿಯ ನಾಯಕರಾಗಬೇಕೆಂದು ಒತ್ತಾಯಿಸಿದರು. ಏಕೀಕರಣ ಚಳವಳಿಯ ನೇತಾರರಾಗಿದ್ದ ಅವರೇ ಈ ಚಳವಳಿಯ ನೇತೃತ್ವವನ್ನು ವಹಿಸಿಕೊಳ್ಳುವುದು ಸೂಕ್ತವೆಂದು ಅವರು ಹೇಳಿದರು. ಚಳವಳಿಯನ್ನು ಸಂಘಟಿಸಲು ಬೆಳಗಾವಿ ಡಿಸಿಸಿ ವಾಲಿ ಚನ್ನಪ್ಪನವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿತು. ಸತ್ಯಾಗ್ರಹವು ೧೦-೬-೧೯೬೬ ರಂದು ಆರಂಭಗೊಳ್ಳಲಿತ್ತು. ೭-೬-೧೯೬೬ ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಹಳ್ಳಿಕೇರಿಯವರ ೬೦ನೇ ಹುಟ್ಟುಹಬ್ಬದ ಸಮಾರಂಭದಲ್ಲಿ ಪಾಲುಗೊಂಡು ಮಾತನಾಡುತ್ತಿದ್ದ ನಿಜಲಿಂಗಪ್ಪನವರಾದರೋ ಮಹಾಚುನಾವಣೆಗೆ ಮುನ್ನ ಆಯೋಗದ ರಚನೆಯನ್ನು ತಾವು ವಿರೋಧಿಸುವುದಾಗಿ ಹೇಳಿದರು. ಇದನ್ನು ಮಾಡಿ, ವರದಿಯು ಮಹಾರಾಷ್ಟ್ರ ಪರವಾಗಿರುವುದಾದರೆ ತಾವು ಅದನ್ನು ಸಂಪೂರ್ಣವಾಗಿ ತಿರಸ್ಕರಿಸುವುದಾಗಿಯೂ, ಅದರ ವಿರುದ್ಧದ ಚಳವಳಿಯ ನೇತೃತ್ವವನ್ನು ತಾವೇ ವಹಿಸುವುದಾಗಿಯೂ ಘೋಷಿಸಿದರು. ಕೇವಲ ಅಲ್ಪಸ್ವಲ್ಪ ಹೊಂದಾಣಿಕೆಗೆ ಮಾತ್ರ ಅವಕಾಶವಿರಬೇಕು, ಬೆಳಗಾವಿ, ಕಾರವಾರ, ನಿಪ್ಪಾಣಿ ಮತ್ತಿತರ ದೊಡ್ಡ ಪಟ್ಟಣಗಳ ಬಗ್ಗೆ ಯಥಾಸ್ಥಿತಿ ಕಾಪಾಡಬೇಕೆಂದೂ ಇಲ್ಲದಿದ್ದರೆ ತಾವದನ್ನು ವಿರೋಧಿಸುವುದಾಗಿಯೂ ಹೇಳಿದರು. ಪದೇ ಪದೇ ಹೇಳುತ್ತಿದ್ದರೂ ಕೇಂದ್ರದ ಮೇಲೆ ಯಾವುದೇ ಪರಿಣಾಮ ಉಂಟುಮಾಡಿರದ ನಿಜಲಿಂಗಪ್ಪನವರ ನಿಲವಿನ ಬಗ್ಗೆ ತಮಗೆ ಸಮಾಧಾನವಾಗಿಲ್ಲವೆಂದು ಬೆಳಗಾವಿಯ ಕಾಂಗ್ರೆಸ್ ನಾಯಕರು ೮-೬-೧೯೬೬ ರಂದು ಹೇಳಿಕೆಯಿತ್ತರು. ಅವರ ಹೇಳಿಕೆಗಳ ಹೊರತಾಗಿಯೂ ಆಯೋಗರಚನೆಯ ಪ್ರಯತ್ನ ಸಾಗಿತ್ತು. ಆಯೋಗವು ದೊಡ್ಡ ನಗರಗಳನ್ನು ಮಹಾರಾಷ್ಟ್ರಕ್ಕೆ ನೀಡಬಹುದೆಂಬುದು ಅವರ ಭಯವಾಗಿತ್ತು. ಆಯೋಗ ರಚನೆಯ ವಿಚಾರವನ್ನು ಕೇಂದ್ರವು ಕೈಬಿಡುವವರೆಗೆ ತಮ್ಮ ಸತ್ಯಾಗ್ರಹ ನಿಲ್ಲುವುದಿಲ್ಲವೆಂದು ಅವರು ಹಟ ಹಿಡಿದರು. ಚಳವಳಿಯು ಸಳಧಾಳ ರೈಲ್ವೆ ನಿಲ್ದಾಣದಲ್ಲಿ ವಿಧ್ಯುಕ್ತವಾಗಿ ಆರಂಭಗೊಂಡಿತು. ಗಾಂಧಿ ಚಳವಳಿ ನಡೆದು ಪ್ರಖ್ಯಾತವಾಗಿದ್ದ ಈ ಸ್ಥಳದಲ್ಲಿಯೇ ಸತ್ಯಾಗ್ರಹ ಆರಂಭಗೊಂಡುದು ಸಾಂಕೇತಿಕವಾಗಿತ್ತು. ದಕ್ಷಿಣ ಬೆಳಗಾವಿ ಲೋಕಸಭಾ ಸದಸ್ಯ

ಎಚ್.ವಿ. ಕೌಜಲಗಿ ಆಯೋಗದ ವಿರುದ್ಧ ಪ್ರತಿಭಟಿಸಿ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆಯಿತ್ತರು. ಸುಮಾರು ೧೨೬ ಮಂದಿ ಸತ್ಯಾಗ್ರಹಿಗಳನ್ನು ೧೦-೬-೧೯೬೬ ರಂದು ಬಂಧಿಸಲಾಯಿತು, ಪೂನ-ಬೆಂಗಳೂರು ರೈಲನ್ನು ತಡೆಯಲಾಯಿತು. ಚಳವಳಿಯು ಹಬ್ಬಿ ಅದು ೧೧ ರಂದು ಗೋಕಾಕದಲ್ಲೂ ೧೨ ರಂದು ರಾಯಭಾಗದಲ್ಲೂ ಆರಂಭಗೊಂಡಿತು. ಬಹು ಬೇಗ ಉತ್ತರ ಕರ್ನಾಟಕದ ಬಹುಭಾಗ ಹೊತ್ತಿ ಉರಿಯತೊಡಗಿತು. ಈ ಚಳವಳಿಯು ಯಾವುದೇ ನಾಯಕನ ವಿರುದ್ಧವಲ್ಲವೆಂಬುದನ್ನು ಸ್ಪಷ್ಟಪಡಿಸಲು ವಾಲಿಯವರು, ನಿಜಲಿಂಗಪ್ಪನವರೇ ಈ ಸತ್ಯಾಗ್ರಹದ ನಾಯಕರೆಂದು ತಾವು ಪರಿಗಣಿಸುವುದರಿಂದ ಇದು ಅವರ ವಿರುದ್ಧ ಅಲ್ಲವೆಂದು ಸ್ಪಷ್ಟಪಡಿಸಿದರು. ರಾಜ್ಯದ ಅಧಿಕೃತ ಕಾಂಗ್ರೆಸ್ ಸತ್ಯಾಗ್ರಹದ ವಿಷಯದಲ್ಲಿ ಇಬ್ಬಂದಿಗೆ ಸಿಲುಕಿತು. ಪ್ರಸ್ತುತ ನಡೆಯುತ್ತಿರುವ ಚಳವಳಿಗೂ ಎಂಪಿಸಿಸಿಗೂ ಯಾವುದೇ ಸಂಬಂಧವಿಲ್ಲವೆಂದು ಎಂಪಿಸಿಸಿ ಅಧ್ಯಕ್ಷ ಮೊಹಮ್ಮದ್ ಆಲಿಯವರು ೨೨-೬-೧೯೬೬ ರಂದು ದೆಹಲಿಯಲ್ಲಿ ಹೇಳಿದರು. ಅದು ಕೆಲವು ಡಿಸಿಸಿಗಳ ಕೃತ್ಯವೆಂಬುದನ್ನು ಅವರು ಒಪ್ಪಿಕೊಂಡರು. ಬೆಳೆಯುತ್ತಿದ್ದ ಚಳವಳಿ ದೆಹಲಿ ಹಾಗೂ ಪ್ರಧಾನ ಮಂತ್ರಿಗಳ ಮೇಲೆ ಸ್ವಲ್ಪ ಪರಿಣಾಮ ಬೀರಿರಬೇಕು, ಹೀಗಾಗಿ, ಏಕಸದಸ್ಯ ಆಯೋಗ ರಚನೆಯ ವಿಷಯವನ್ನು ಪುನರ್‌ಪರಿಶೀಲಿಸಲು ಸಿದ್ಧವೆಂದು ಕಾಂಗ್ರೆಸ್ ಅಧ್ಯಕ್ಷ ಕಾಮರಾಜರು ಹೇಳಿಕೆಯಿತ್ತರು. ಎಂಪಿಸಿಸಿಯ ಜೊತೆ ನಡೆಸಿದ ಸಭೆಗೆ ಅವರು ಪ್ರತಿಕ್ರಿಯಿಸುತ್ತಿದ್ದರು. ಎಂಪಿಸಿಯು ಈ ವಿಷಯವನ್ನು ಕುರಿತು ಚರ್ಚಿಸಲು ೨೫-೬-೧೯೬೬ ರಂದು ಬೆಂಗಳೂರಿನಲ್ಲಿ ಒಂದು ಸಭೆಯನ್ನು ಕರೆಯಿತು. ಜೂನ್ ೧೯೬೬ ರ ಕೊನೆಯ ಹೊತ್ತಿಗೆ ಚಳವಳಿ ಉಗ್ರರೂಪವನ್ನು ತಾಳಿ, ೨೭- ೬-೧೯೬೬ ರಂದು ಹರಿಹರ ಮತ್ತು ದಾವಣಗೆರೆಗಳಲ್ಲಿ ಗುಂಪನ್ನು ನಿಯಂತ್ರಿಸಲು ಪೊಲೀಸರು ಗೋಲಿಬಾರ್ ನಡೆಸಬೇಕಾಯಿತು. ಹರಿಹರದ ಗೋಲಿಬಾರ್‌ಗೆ ಪ್ರಕಾಶ್ ಎಂಬ ವ್ಯಕ್ತಿ ಬಲಿಯಾದರು. ಕರ್ನಾಟಕದ ಜನತೆ ಏನನ್ನು ಬಯಸುತ್ತದೆ ಎಂಬುದನ್ನು ಕೇಂದ್ರವು ಅರ್ಥಮಾಡಿಕೊಂಡಿರುವುದರಿಂದ ಸತ್ಯಾಗ್ರಹಿಗಳು ಚಳವಳಿಯನ್ನು ನಿಲ್ಲಿಸಬೇಕೆಂದು ನಿಜಲಿಂಗಪ್ಪನವರು ವಿನಂತಿ ಮಾಡಿಕೊಂಡರು. ೫-೭-೧೯೬೬ ರಂದು ನಡೆಯಲಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಈ ವಿಷಯ ಕುರಿತ ಚರ್ಚೆಯಲ್ಲಿ ತಾವು ಕರ್ನಾಟಕದ ನಿಲವನ್ನು ವಿವರಿಸುವುದಾಗಿ ಅವರು ಹೇಳಿಕೆಯಿತ್ತರು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯ ಮುನ್ನಾ ದಿನ, ಅಂದರೆ ೪-೭-೧೯೬೬ ರಂದು, ಮೈಸೂರು ಕಾಂಗ್ರೆಸ್ಸಿಗರ ಒಂದು ವಿಶೇಷ ನಿಯೋಗ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಮೈಸೂರಿನ ನಿಲವನ್ನು ವಿವರಿಸಿದರು. ಆ ನಿಯೋಗದಲ್ಲಿ ಜತ್ತಿ, ಹಳ್ಳಿಕೇರಿ, ಅಪ್ಪಣ್ಣಗೌಡ (ಬೆಳಗಾವಿ ಡಿಸಿಸಿ ಅಧ್ಯಕ್ಷ), ಮತ್ತು ಕೊಲ್ಲೂರು ಮಲ್ಲಪ್ಪ ಇದ್ದರು.

ಇದಕ್ಕೂ ಒಂದು ದಿನ ಮುಂಚೆ ನಿಜಲಿಂಗಪ್ಪನವರು ಸತ್ಯಾಗ್ರಹಿಗಳಿಗೆ ಮನವಿ ಮಾಡಿಕೊಂಡು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಈ ವಿಷಯವನ್ನು ಪುನರ್ ಪರಿಶೀಲಿಸಲಿರುವುದರಿಂದ ಚಳವಳಿಯನ್ನು ನಿಲ್ಲಿಸಬೇಕೆಂದು ಪ್ರಾರ್ಥಿಸಿಕೊಂಡರು. ೫-೭-೧೯೬೬ ರ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ಸಮಸ್ಯೆಯನ್ನು ಮೈಸೂರು ಮತ್ತು ಮಹಾರಾಷ್ಟ್ರಗಳ ಮುಖ್ಯಮಂತ್ರಿಗಳಿಗೆ ಈ ವಿಷಯವನ್ನು ವರ್ಗಾಯಿಸಿತು. ಇನ್ನೆರಡು ತಿಂಗಳಿನಲ್ಲಿ ಆಯೋಗದ ವ್ಯಾಪ್ತಿಯನ್ನು ಕುರಿತು ಒಂದು ತೀರ್ಮಾನಕ್ಕೆ ಬರಲು ಅವರಿಗೆ ಸೂಚಿಸಿತು. ಮುಖ್ಯಮಂತ್ರಿಗಳು ಒಂದು ಒಪ್ಪಂದಕ್ಕೆ ಬರಲಾಗದಿದ್ದರೆ ಮುಂದಿನ ಕ್ರಮಕ್ಕಾಗಿ ವಿಷಯವು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಪರಿಶೀಲನೆಗೆ ಮರಳುವುದೆಂದು ಹೇಳಲಾಯಿತು. ಇದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ತನ್ನ ಹಿಂದಿನ ಮಾತನ್ನು ಉಲ್ಲಂಘಿಸುವುದರಿಂದಾಗಿ ಈ ನಿಲವಿಗೆ ಚವಾನ್ ಆಕ್ಷೇಪಣೆ ವ್ಯಕ್ತಪಡಿಸಿದರು. ೧೨-೭-೧೯೬೬ ರಂದು ಹುಬ್ಬಳ್ಳಿಯಲ್ಲಿ ನಡೆದ ಅಖಿಲ ಕನ್ನಡಿಗರ ಸಮ್ಮೇಳನವು ಆಯೋಗದ ಆಲೋಚನೆಯನ್ನೇ ತಿರಸ್ಕರಿಸಿತು. ಈ ಎಲ್ಲ ಗದ್ದಲದ ನಡುವೆ ಎಂಪಿಸಿಸಿಗೆ ಪ್ರತಿನಿಧಿಗಳ ಆಯ್ಕೆಗಾಗಿ ದಾವಣಗೆರೆಯಲ್ಲಿ ಚುನಾವಣೆಗಳು ನಡೆದವು. ಇದ್ದ ಏಳು ಸ್ಥಾನಗಳಿಗೆ ಯಥಾಪ್ರಕಾರ ನಿಜಲಿಂಗಪ್ಪರ ಪರ ಮತ್ತು ವಿರೋಧಿ ಬಣಗಳು ಸ್ಪರ್ಧೆ ನಡೆಸಲಿದ್ದವು. ಈ ಚುನಾವಣೆಯಲ್ಲಿ ಎಲ್ಲ ಏಳು ಸ್ಥಾನಗಳೂ ಮೊದಲನೆಯ ಸುತ್ತಿಗೇ ನಿಜಲಿಂಗಪ್ಪ ಗುಂಪಿನ ಪಾಲಾದುವು. ಚುನಾವಣೆಗಳು ನ್ಯಾಯ ಯುತವಾಗಿ ನಡೆಯಲಿಲ್ಲವೆಂದು ಭಿನ್ನಮತೀಯ ನಾಯಕ ಕೊಲ್ಲೂರ ಮಲ್ಲಪ್ಪ ಆರೋಪಿಸಿದರು. ಮುಂಬರುವ ಮಹಾ ಚುನಾವಣೆ ಎಂಪಿಸಿಸಿಯ ಗಮನವನ್ನು ಆಕ್ರಮಿಸಿಕೊಂಡಿತು. ಅಭ್ಯರ್ಥಿಗಳ ಆಯ್ಕೆ ನಿಷ್ಪಕ್ಷಪಾತವಾಗಿಯೂ ಅರ್ಹತೆಯ ಆಧಾರದ ಮೇಲೂ ನಡೆಯುವುದೆಂದೂ ಇದರಿಂದಾಗಿ ಗುಂಪುಗಾರಿಕೆ ಕೊನೆಗೊಳ್ಳುವುದೆಂದೂ ನಿಜಲಿಂಗಪ್ಪ ಹೇಳಿದರು. ದಾವಣಗೆರೆಯ ಪಕ್ಷ ಚುನಾವಣೆಯಲ್ಲಿ ಪ್ರಭಾವ ಮತ್ತು ಅಧಿಕಾರ ದುರುಪಯೋಗಗಳು ನಡೆದಿವೆಯೆಂದು ಎಚ್.ಕೆ. ವೀರಣ್ಣಗೌಡ ದೂರಿದರು. ಮೈಸೂರು ಮಹಾರಾಷ್ಟ್ರಗಳ ನಡುವಣ ಗಡಿ ವಿವಾದದ ಇತ್ಯರ್ಥಕ್ಕೆ ಆಯೋಗ ರಚಿಸು ವುದನ್ನು ಮೈಸೂರು ವಿಧಾನಸಭೆಯ ಕಾಂಗ್ರೆಸ್ಸೇತರ ಸದಸ್ಯರು ವಿರೋಧಿಸಿದರು. ಅಲ್ಪಸ್ವಲ್ಪ ಹೊಂದಾಣಿಕೆಗೆ ಮಾತ್ರ ಅವಕಾಶವಿರುತ್ತದೆಂದೂ, ಕಾರವಾರ, ನಿಪ್ಪಾಣಿ ಮತ್ತು ಬೆಳಗಾವಿಯಂತಹ ದೊಡ್ಡ ನಗರಗಳು ಯಥಾಸ್ಥಿತಿಯುಲ್ಲಿರುವುದೆಂದೂ ಆ ಬಗ್ಗೆ ಮಾತೇ ಇಲ್ಲವೆಂದೂ ನಿಜಲಿಂಗಪ್ಪನವರು ಸ್ಪಷ್ಟಪಡಿಸಿದರು. ನಿಜಲಿಂಗಪ್ಪನವರ ಪಾರಂಪರಿಕ ಬೆಂಬಲಿಗರಲ್ಲಿ ಹಳ್ಳಿಕೇರಿ ಮತ್ತು ದೊಡ್ಡಮೇಟಿಯವರು ಆಯೋಗದ ವಿಚಾರವನ್ನೇ ವಿರೋಧಿಸಿದರು.

ಉದ್ದೇಶಿತ ಆಯೋಗದ ಕಾರ್ಯವ್ಯಾಪ್ತಿಯನ್ನು ಕುರಿತು ಚರ್ಚಿಸಲು ಮೈಸೂರು ಮತ್ತು ಮಹಾರಾಷ್ಟ್ರಗಳ ಮುಖ್ಯಮಂತ್ರಿಗಳು ೭-೮-೧೯೬೬ ರಂದು ಬೆಂಗಳೂರಿನಲ್ಲಿ ಭೇಟಿಯಾದರು. ಪರಸ್ಪರರ ನಿಲವುಗಳು ಹಾಗೂ ಆಯಾ ರಾಜ್ಯಗಳಲ್ಲಿನ ಪರಿಸ್ಥಿತಿಯ ಬಗ್ಗೆ ಅರಿವು ಮೂಡಿಸಿಕೊಳ್ಳಲು ಈ ಭೇಟಿಯು ಸಹಕಾರಿಯಾಯಿತೆಂದು ಆ ಬಳಿಕ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಅವರು ಹೇಳಿದರು. ಈ ಸಮಯದಲ್ಲಿ ನಿಜಲಿಂಗಪ್ಪನವರ ಸಹಜ ಸೌಜನ್ಯವನ್ನು ಬಿಂಬಿಸುವ ಒಂದು ಪುಟ್ಟ ಘಟನೆ ನಡೆಯಿತು. ತಾವಿನ್ನೂ ಬದುಕಿರುವಾಗಲೇ ತಮ್ಮ ಕಂಚಿನ ಪ್ರತಿಮೆಯನ್ನು ಸ್ಥಾಪಿಸುವ ಆಲೋಚನೆಯನ್ನವರು ಮೂರ್ಖತನ ಮತ್ತು ಹುಚ್ಚು ಎಂದು ಖಂಡಿಸಿದರು. ಈ ವಿಷಯ ಆಲೋಚನೆ ಮಾಡಿದವರಿಗೆ ಅದನ್ನಲ್ಲಿಯೇ ಬಿಟ್ಟುಬಿಡಲು ಸೂಚಿಸಿದರು! ನಿಜಲಿಂಗಪ್ಪ ಮತ್ತು ವಿ.ಪಿ. ನಾಯಕ್‌ರ ನಡುವಣ ಎರಡನೆಯ ಭೇಟಿಯು ೫-೯-೧೯೬೬ ರಂದು ನಾಗಪುರ ದಲ್ಲಿ ನಡೆದು ಅದು ಕೂಡ ಕಗ್ಗಂಟಾಗಿಯೇ ಮುಂದುವರಿಯಿತು. ನಿಗದಿಯಾಗಿದ್ದ ೫-೯-೧೯೬೬ರ ಮೂರನೆಯ ಭೇಟಿಯು ನಿಜಲಿಂಗಪ್ಪನವರು ಇದ್ದಕ್ಕಿದ್ದಂತೆ ಅಸ್ವಸ್ಥ ರಾಗಿ, ನಾಲ್ಕೈದು ದಿನಗಳ ಕಾಲ ವಿಶ್ರಾಂತಿ ಪಡೆಯಬೇಕೆಂದು, ವೈದ್ಯರು ಹೇಳಿದ್ದರಿಂದ ರದ್ದಾಯಿತು. ಭೇಟಿಯಿಂದ ಯಾವುದೇ ಪ್ರಯೋಜನವಿಲ್ಲವೆಂದು ಅವರಿಬ್ಬರೂ ೨೮-೯-೧೯೬೬ರ ಹೊತ್ತಿಗೆ ತೀರ್ಮಾನಕ್ಕೆ ಬಂದಿದ್ದರು. ಈ ವಿಷಯ ಮತ್ತೆ ಕಾರ್ಯ ಕಾರಿ ಸಮಿತಿಯ ಅಂಗಳಕ್ಕೆ ಬಂತು. ಮೈಸೂರು-ಮಹಾರಾಷ್ಟ್ರ ಹಾಗೂ ಮೈಸೂರು-ಕೇರಳಗಳ ನಡುವಣ ಗಡಿವಿವಾದದ ಬಗ್ಗೆ ಪರಿಶೀಲನೆ ನಡೆಸಲು ಏಕವ್ಯಕ್ತಿ ಆಯೋಗ ವನ್ನು ರಚಿಸುವ ಸಲಹೆಯನ್ನು ಕಾರ್ಯಕಾರಿ ಸಮಿತಿ ಕೇಂದ್ರಕ್ಕೆ ಏಕಪಕ್ಷೀಯವಾಗಿ ಕೇಳಿಕೊಂಡಿತು. ಸಂಬಂಧಪಟ್ಟ ಪಕ್ಷಗಳ ಜೊತೆ ಸಮಾಲೋಚಿಸಿ ತನ್ನ ವ್ಯಾಪ್ತಿಯನ್ನು ನಿರ್ಧರಿಸಿಕೊಳ್ಳುವ ತೀರ್ಮಾನವನ್ನೂ ಆಯೋಗಕ್ಕೆ ಬಿಟ್ಟುಬಿಡಲು ನಿರ್ಧರಿಸಲಾಯಿತು. ಗಡಿ ವಿವಾದದ ಬಗ್ಗೆ ವರದಿ ನೀಡಲು ನ್ಯಾಯಮೂರ್ತಿ ಮೆಹೆರ್‌ಚಂದ್ ಮಹಾಜನ್ ಅವರನ್ನು ಏಕಸದಸ್ಯ ಆಯೋಗವನ್ನಾಗಿ ರಚಿಸಲಾಗಿದೆ ಎಂದು ಕೇಂದ್ರವು ೧೭-೧೦-೧೯೬೬ ರಂದು ಪ್ರಕಟಿಸಿತು. ಈ ನೇಮಕವನ್ನು ಇಬ್ಬರೂ ಮುಖ್ಯಮಂತ್ರಿಗಳು ಸ್ವಾಗತಿಸಿದರು. ತನ್ನ ನಿರ್ಧಾರವನ್ನು ಬದಲಿಸಲು ಕೇಂದ್ರವು ಮಹಾರಾಷ್ಟ್ರದ ಒತ್ತಡಕ್ಕೆ ಮಣಿದಿದೆ ಎಂದು ಹನುಮಂತಯ್ಯನವರು ಲೋಕಸಭೆಯಲ್ಲಿ ಆಪಾದಿಸಿದರು. ಗೋವಾ ವಿಲೀನ ಕುರಿತ ಚರ್ಚೆಯಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು. ನ್ಯಾಯ ಮತ್ತು ನಿಷ್ಪಕ್ಷಪಾತಗಳನ್ನು ಗಾಳಿಗೆ ತೂರಿ ಕೇಂದ್ರವು ಗೋವಾ ಜನರ ಅಪೇಕ್ಷೆಯಲ್ಲದ ಹಾಗೂ ಮಹಾರಾಷ್ಟ್ರದ ಆಲೋಚನೆಯಾದ ವಿಲೀನತೆಯ ವಿಷಯವನ್ನು ಕೈಗೆತ್ತಿಕೊಂಡು ತನ್ನ ಹಿಂದಿನ ನಿಲವನ್ನು ಗಾಳಿಗೆ ತೂರಿದೆ ಎಂದವರು ಆಪಾದಿಸಿದರು. ವಿಲೀನ

ಕುರಿತ ಜನಾಭಿಪ್ರಾಯ ಸಂಗ್ರಹ ಕಾರ್ಯ ನಡೆಯುವಾಗ ಮತದಾರಪಟ್ಟಿಯಲ್ಲಿ ಕೈವಾಡ ನಡೆಸಲು ಅವಕಾಶವಾಗದಂತೆ ಕೇಂದ್ರವು ಎಚ್ಚರ ವಹಿಸಬೇಕೆಂದು ಅವರು ಒತ್ತಾಯಿಸಿದರು. ಅದರಲ್ಲೂ, ಮತದಾರ ಪಟ್ಟಿಯ ತಯಾರಿಕೆಯಲ್ಲಿ ಬಂದೋಡ್ಕರ್ ಮೂಗು ತೂರಿಸದಂತೆ ನೋಡಿಕೊಳ್ಳಬೇಕೆಂದರು. ವಿಲೀನ ಪ್ರಶ್ನೆಯ ಬಗ್ಗೆ ಜನಾಭಿಪ್ರಾಯ ಸಂಗ್ರಹಕ್ಕೆ ಲೋಕಸಭೆಯು ೧-೧೨-೧೯೬೬ ರಂದು ತನ್ನ ಒಪ್ಪಿಗೆ ಸೂಚಿಸಿತು. ೩-೧೨-೧೯೬೬ ರಂದು ರಾಷ್ಟ್ರಪತಿಯವರು ಬಂದೋಡ್ಕರ್ ಅವರ ರಾಜೀನಾಮೆಯನ್ನು ಅಂಗೀಕರಿಸಿದರು ಹಾಗೂ ಗೋವಾ ವಿಧಾನಸಭೆಯನ್ನು ವಿಸರ್ಜಿಸಿದರು. ಈ ಸಂಗತಿಗಳು ಜನಾಭಿಪ್ರಾಯ ಸಂಗ್ರಹಕ್ಕೆ ಭೂಮಿಕೆಯನ್ನು ಸಿದ್ಧಗೊಳಿಸಲೆಂದು ನಡೆದವು. ೧೯೬೭ರ ಜನವರಿ ಮಧ್ಯಭಾಗದಲ್ಲಿ ಜನಾಭಿಪ್ರಾಯ ನಡೆಯುವುದೆಂದು ಮುಖ್ಯ ಚುನಾವಣಾಧಿಕಾರಿಗಳು ಪ್ರಕಟಿಸಿದರು.

ಮಹಾಚುನಾವಣೆಗಳು ೧೯೬೭ರ ಫೆಬ್ರವರಿ ೧೫ ಮತ್ತು ೨೧ರ ನಡುವೆ ನಡೆಯುವುದೆಂದು ಕೇಂದ್ರ ಕಾನೂನು ಸಚಿವ ಪಾಠಕ್ ಅವರು ಲೋಕಸಭೆಯಲ್ಲಿ ಪ್ರಕಟಿಸಿದರು. ೧೦-೧೨-೧೯೬೬ ಕ್ಕೆ ಅರವತ್ತೈದು ವರ್ಷ ಪೂರೈಸಿದ ನಿಜಲಿಂಗಪ್ಪನವರು ತಮ್ಮ ಹಳೆಯ ಕ್ಷೇತ್ರ ಬಾಗಲಕೋಟೆಯಿಂದ ಸ್ಪರ್ಧಿಸುವ ತಮ್ಮ ಬಯಕೆಯನ್ನು ಪ್ರಕಟಿಸಿದರು. ನಿಜಲಿಂಗಪ್ಪನವರ ಆಡಳಿತಾವಧಿಯಲ್ಲಿ ರಾಜ್ಯಕ್ಕೆ ಮತ್ತೊಂದು ವಿಶ್ವವಿದ್ಯಾನಿಲಯ ಲಭ್ಯವಾಯಿತು; ಅದೇ ಬೆಂಗಳೂರು ವಿಶ್ವವಿದ್ಯಾನಿಲಯ. ಅದನ್ನು ೧೦-೧೨-೧೯೬೬ ರಂದು ಉದ್ಘಾಟಿಸುತ್ತ ಅದೊಂದು ಕೇಂದ್ರ ವಿಶ್ವವಿದ್ಯಾನಿಲಯವಾಗಬೇಕೆಂದು ಅವರು ಅಪೇಕ್ಷೆಪಟ್ಟರು, ಆದರೆ ಇದು ಅನುಷ್ಠಾನಗೊಳ್ಳಲೇ ಇಲ್ಲ. ತಮ್ಮ ಅರವತ್ತೈದನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರು ರಾಜ್ಯದ ಜನತೆಗೆ ವಿಶಿಷ್ಟ ಸಂದೇಶವೊಂದನ್ನು ನೀಡಿದರು. ದೇಶವು ಕಟ್ಟುಪಟ್ಟು ಕೆಲಸಮಾಡಬೇಕು ಅದೇ ಯಶಸ್ಸಿನ ಗುಟ್ಟು ಎಂದವರು ಹೇಳಿದರು. ತಮ್ಮ ಬಗ್ಗೆಯೇ ಹೇಳಿಕೊಳ್ಳುತ್ತ, "ನಾನು ಸಾಮಾನ್ಯನಾಗಿ ಹುಟ್ಟಿದೆ, ಸಾಮಾನ್ಯನಾಗಿ ಬೆಳೆದೆ, ಸಾಮಾನ್ಯನಾಗಿಯೇ ಜೀವಿಸುತ್ತಿದ್ದೇನೆ" ಎಂದರು! ದೇಶ ಮತ್ತು ಸಮಾಜಗಳ ಸೇವೆ ಮಾಡಲು ತಾವು ದೀರ್ಘಕಾಲ ಬದುಕುವ ಬಯಕೆಯನ್ನು ಹೇಳಿಕೊಂಡರು. ತಮ್ಮ ಬದುಕಿನ ರಹಸ್ಯವೊಂದನ್ನವರು ಬಯಲಿಗಿಟ್ಟರು: ರಾತ್ರಿ ಮಲಗುವ ಮುಂಚೆ ಕಾವ್ಯವನ್ನೋದುವ ಹವ್ಯಾಸ ಅದು! ಚುನಾವಣೆಗಳು ಹತ್ತಿರ ಬಂದಂತೆ ರಾಜ್ಯ ಮತ್ತು ರಾಜಕೀಯ ಪಕ್ಷಗಳು ಚುನಾವಣಾಪೂರ್ವ ಚಟುವಟಿಕೆಗಳಲ್ಲಿ ತೊಡಗಿದವು. ಎಂಪಿಸಿಯು ವಿಧಾನಸಭೆ ಮತ್ತು ಲೋಕಸಭೆಗಳ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ೧೨-೧೨-೧೯೬೬ ರಂದು ಬಿಡುಗಡೆ ಮಾಡಿತು. ಅದರಲ್ಲಿ ಅನೇಕ ಹೊಸ ಮುಖಗಳಿದ್ದುವು. ಕೆಲವರು ಹಳಬರಿಗೆ

ಟಿಕೆಟ್ ನಿರಾಕರಿಸಲಾಗಿತ್ತು. ಎಸ್.ವಿ. ಶ್ರೀನಿವಾಸ ರಾವ್ ಮತ್ತು ಸರೋಜಿನಿ ಮಹಿಷಿಯವರಿಗೆ ಲೋಕಸಭಾ ಟಿಕೆಟ್ಟನ್ನೂ ಡಾ. ನಾಗಪ್ಪ ಆಳ್ವ ಅವರಿಗೆ ವಿಧಾನಸಭೆಯ ಟಿಕೆಟ್ಟನ್ನೂ ನಿರಾಕರಿಸಲಾಗಿತ್ತು. ಆದರೆ ಇನ್ನೂ ೫ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸದಿದ್ದುದರಿಂದ ಪಟ್ಟಿಯು ಅಪೂರ್ಣವಾಗಿತ್ತು. ಪಟ್ಟಿಯನ್ನು ಪ್ರಕಟಿಸಿ ಪತ್ರಿಕಾಗೋಷ್ಠಿಯಲ್ಲಿ ಎಂಪಿಸಿಯ ಅಧ್ಯಕ್ಷ ಮೊಹಮ್ಮದ್ ಆಲಿಯವರ ಪರವಾಗಿ ನಿಜಲಿಂಗಪ್ಪನವರು ಮಾತನಾಡಿದರು. ಅರ್ಧದಷ್ಟು ಅಭ್ಯರ್ಥಿಗಳು ಹೊಸಬರೆಂಬುದನ್ನವರು ಪ್ರಕಟಿಸಿದರು. ಆಯ್ಕೆಯ ಒಂದು ಮುಖ್ಯ ಅಂಶವೆಂದರೆ ಯುವಕರಿಗೆ ಕೊಟ್ಟಿರುವ ಆದ್ಯತೆ. ಚುನಾವಣೆಗಳೆಂದರೆ ಉತ್ಸಾಹ, ಆದರೆ ಅದು ರಾಜ್ಯದ ಅಭಿವೃದ್ಧಿಕಾರ್ಯಗಳನ್ನು ಕುಂಠಿತಗೊಳಿಸಬಾರದೆಂದರು. ಶರಾವತಿಯ ಮೂರನೆಯ ಹಂತದ ಕೆಲಸವು ೧೯೬೬ರ ಡಿಸೆಂಬರ್ ಅಥವಾ ೧೯೬೭ರ ಜನವರಿ ವೇಳೆಗೆ ಆರಂಭಗೊಂಡು, ನಾಲ್ಕನೆಯ ಹಂತವು ಒಂದೆರಡು ತಿಂಗಳ ಬಳಿಕ ಶುರುವಾಗುವುದೆಂದರು. ಚುನಾವಣೆಯ ಕ್ಷೇತ್ರದಲ್ಲಿ, ಕೇಂದ್ರ ಸಂಸದೀಯ ಮಂಡಳಿಯು ರಾಜ್ಯ ಕಾಂಗ್ರೆಸ್‌ನ ಶಿಫಾರಸ್ಸನ್ನು ಬದಿಗಿರಿಸಿ ಸರೋಜಿನಿ ಮಹಿಷಿಯವರಿಗೆ ಉತ್ತರ ಧಾರವಾಡ ಲೋಕಸಭಾ ಕ್ಷೇತ್ರದ ಸ್ಥಾನಕ್ಕೆ ಟಿಕೆಟ್ ನೀಡಿತು.

೧೯೬೬ ರ ಡಿಸೆಂಬರ್‌ನಲ್ಲಿ, ಅಂದರೆ ತಮ್ಮ ಮುಖ್ಯಮಂತ್ರಿತನದ ಮೂರನೆಯ ಅವಧಿಯ ಕೊನೆಯಲ್ಲಿ ನಿಜಲಿಂಗಪ್ಪನವರು ತಮ್ಮ ಅಭಿವೃದ್ಧಿ ಹಾಗೂ ಆರ್ಥಿಕ ಆದರ್ಶಗಳ ಚಿಂತನೆಗಳನ್ನು ಹಂಚಿಕೊಳ್ಳಲು ಸಾರ್ವಜನಿಕ ಸಭೆಗಳನ್ನು ಬಳಸಿಕೊಂಡರು. ಒಂದು ಉದಾಹರಣೆ: ನಿಪ್ಪಾಣಿ ಕಾಲೇಜಿನ ನಾಮಕರಣ ಸಮಾರಂಭದಲ್ಲಿ ಮಾತನಾಡುತ್ತ ಅವರು, ಅಭಿವೃದ್ಧಿ ಕಾಯದಲ್ಲಿ ವ್ಯಕ್ತಿಗೆ ಆದ್ಯತೆ ನೀಡಬೇಕೆಂದೂ ಸಾಮಾಜಿಕ ಏಳಗೆಯ ನೆಲೆ ಎಂದರೆ ವ್ಯಕ್ತಿಯ ಏಳಿಗೆಯೇ ಎಂದು ಅಭಿಪ್ರಾಯಪಟ್ಟರು. ಕೈಗಾರಿಕೆಗಳನ್ನು ಉದ್ದೇಶಿಸಿ ೨-೧-೧೯೬೭ ರಂದು ಮಾತನಾಡುತ್ತ ಹೊರಗಿನರು ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರವು ನೆರವು ನೀಡುವುದೆಂದು ಹೇಳಿದರು. ಅವರ ವೈಯಕ್ತಿಕ ನಿಲವು ಬಲಿಷ್ಠವಾದ ಉದಾರ ಆರ್ಥಿಕ ನೀತಿಯಾದರೂ, ಒಬ್ಬ ಕಾಂಗ್ರೆಸ್ಸಿಗರಾಗಿ ಅವರು ಪಕ್ಷದ ಆದರ್ಶವಾದ ಮಿಶ್ರ ಆರ್ಥಿಕ ನೀತಿ, ಅಂದರೆ ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಸರ್ಕಾರ ಮತ್ತು ಮಾರುಕಟ್ಟೆಗಳು ಪರಸ್ಪರ ಪೂರಕವಾಗಿರಬೇಕೆಂಬುದಕ್ಕೆ ಬದ್ಧವಾಗಿದ್ದರು. ಕೃಷಿ ಮತ್ತು ಕೈಗಾರಿಕಾ ಅಭಿವೃದ್ಧಿಗಳ ನಡುವೆ ಸಮತೋಲವಿರಬೇಕೆಂಬುದು ಅವರ ನಿಲವು. ಹೊರಗಿನವರು ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಸಿಲು ಅವಕಾಶವಿತ್ತರೆ ಭಾಷಾವಾರು ರಾಜ್ಯಗಳು ಸ್ವಯಂಕೇಂದ್ರಿತ ಆಲೋಚನೆಯ ಗಮನದ ಆಶಯಕ್ಕೆ ಭಂಗವುಂಟಾದೀತೆಂದು ನಿಜಲಿಂಗಪ್ಪನವರು, ಮುಂಬಯಿಯ ಕೈಗಾರಿಕೋ

ದ್ಯಮಿಗಳ ಮುಂದೆ ಮಾತನಾಡುತ್ತ, ತಾವು ಭಾಷಾವಾರು ರಾಜ್ಯ ರಚನೆಯ ತೀವ್ರ ಪ್ರತಿಪಾದಕರಾಗಿದ್ದರೂ, ಈಗ ಅದನ್ನು ಪುನರ್‌ಪರಿಶೀಲನೆ ಮಾಡಬೇಕಾದ ಕಾಲ ಬಂದಿದೆ ಎಂದು ಒಪ್ಪಿಕೊಂಡರು. ಕ್ಷುದ್ರ ಆಂತರಿಕ ವೈಷಮ್ಯಗಳು ಹಾಗೂ ಜಗಳಗಳೆಂಬ ಅನಪೇಕ್ಷಣೀಯ ಉಪ ಉತ್ಪನ್ನಗಳಿಗೆ ಕಾರಣವಾದ ಭಾಷಾವಾರು ಪ್ರಾಂತಗಳ ಬಗ್ಗೆ ಅವರು ಅಸಮಾಧಾನ ಹೊಂದಲು ಆರಂಭಿಸಿದ್ದರು. 'ಮಣ್ಣಿನ ಮಕ್ಕಳು' ಎಂಬ ನಿಲವಿಗೆ ಅಂಟಿಕೊಂಡಿರುವುದಕ್ಕೆ ಅವರ ವಿರೋಧವಿತ್ತು. ಭಾರತ ಮತ್ತದರ ಸಂಪನ್ಮೂಲಗಳು ರಾಜ್ಯ ಯಾವುದೇ ಆದರೂ ಎಲ್ಲ ಭಾರತೀಯರಿಗೆ ಸೇರಿದ್ದು ಎಂದವರು ಸಾರಿದರು.

ಗೋವಾ ವಿಲೀನ ಕುರಿತ ಜನಾಭಿಪ್ರಾಯವು ೧೬-೧-೧೯೬೭ ರಂದು ನಡೆಯಿತು, ಮತದಾನವು ಶೇಕಡ ೮೦ ರಷ್ಟು ಹೆಚ್ಚಿನ ಪ್ರಮಾಣದ್ದಾಗಿತ್ತು. ಅಂತಿಮ ಫಲಿತಾಂಶ ಪ್ರಕಟಗೊಳ್ಳುವ ಮೊದಲೇ, ಅಂದರೆ ೧೬-೧-೧೯೬೭ ಹೊತ್ತಿಗೇ ವಿಲೀನವಾದಿಗಳಿಗೆ ಸೋಲು ಖಚಿತವಾಗಿ, ಅದರ ಪ್ರತಿಪಾದಕರಾದ ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷವು ಸೋಲನ್ನೊಪ್ಪಿಕೊಂಡಿತು. ಅಂತಿಮ ತೀರ್ಪು ವಿಲೀನವಿರೋಧ ವಾಗಿ ೧, ೭೨, ೨೯೧ ಮತಗಳು, ಪರವಾಗಿ ೧, ೩೮, ೧೭೦ ಮತಗಳು ಬಂದಿದ್ದವು. ವಿಲೀನವಾದಿಗಳ ಸೋಲಿನಿಂದ ನಿಜಲಿಂಗಪ್ಪ ಹಾಗೂ ಕರ್ನಾಟಕ ಸಮಾಧಾನದ ನಿಟ್ಟುಸಿರು ಬಿಡುವಂತಾಯಿತು. ಫಲಿತಾಂಶವನ್ನು ನಿಜಲಿಂಗಪ್ಪ ಸ್ವಾಗತಿಸಿ, ವಿಲೀನ ವಿರೋಧಿಗಳಿಗೆ ಕರ್ನಾಟಕವು ನೈತಿಕ ಬೆಂಬಲವನ್ನು ಮಾತ್ರ ಸೂಚಿಸಿತ್ತು ಎಂದರು. ಈ ಮಧ್ಯೆ, ರಾಜ್ಯದ ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ ಬಹುಸಂಖ್ಯಾತ ಪಕ್ಷವಾಗಿ ಹೊರಹೊಮ್ಮಿದರೂ, ೧೯೬೨ರ ಚುನಾವಣೆಗಳಿಗಿಂತ ಕಡಿಮೆ ಸ್ಥಾನಗಳನ್ನು ಗಳಿಸಿತ್ತು. ಧಾರವಾಡ ಜಿಲ್ಲೆಯ ಶಿಗ್ಗಾಂವ್ ಕ್ಷೇತ್ರದಿಂದ ನಿಜಲಿಂಗಪ್ಪನವರು ಅವಿರೋಧವಾಗಿ ಆಯ್ಕೆಯಾದರು. ಇನ್ನೂ ಮೂರು – ಬಾಗಲಕೋಟೆ, ಹಡಗಲಿ ಮತ್ತು ರಾಯಭಾಗ– ಕ್ಷೇತ್ರಗಳಲ್ಲಿ ಅವರು ನಾಮಪತ್ರ ಸಲ್ಲಿಸಿದ್ದರು. ಒಟ್ಟು ೨೧೬ ಸ್ಥಾನಗಳ ಪೈಕಿ ಕಾಂಗ್ರೆಸ್ ೧೨೬ ಸ್ಥಾನಗಳನ್ನು ಪಡೆಯಿತು; ಅದರ ಸಮೀಪ ಪ್ರತಿಸ್ಪರ್ಧಿ ಪಿಎಸ್‌ಪಿಗೆ ಕೇವಲ ಇಪ್ಪತ್ತು ಸ್ಥಾನಗಳು ದೊರಕಿದವು, ಆನಂತರದ ಸ್ಥಾನ ೧೮ ಸ್ಥಾನಗಳನ್ನು ಪಡೆದ ಸ್ವತಂತ್ರ ಪಕ್ಷದ್ದು. ಭಿನ್ನಮತೀಯರ ಪಕ್ಷವಾದ ಜನತಾ ಪಕ್ಷವು ಕೇವಲ ೯ ಸ್ಥಾನಗಳಲ್ಲಿ ತೃಪ್ತಿಪಟ್ಟುಕೊಳ್ಳಬೇಕಾಯಿತು. ಜನಸಂಘ ತನ್ನ ಮಟ್ಟವನ್ನು ಸುಧಾರಿಸಿ ಕೊಂಡು ನಾಲ್ಕು ಸ್ಥಾನಗಳನ್ನು ಗಳಿಸಿದರೆ, ಎಸ್‌ಎಸ್‌ಪಿಗೆ ೬, ಎಂಇಎಸ್ ೫ ಸ್ಥಾನ ಗಳನ್ನು ಪಡೆದುವು. ಸಿಪಿಎಂ ಖಾತೆಯನ್ನೇ ಆರಂಭಿಸಲಿಲ್ಲ, ಆದರೆ ಸಿಪಿಐಗೆ ಒಂದು ಸ್ಥಾನ ಲಭ್ಯವಾಯಿತು. ಸ್ವತಂತ್ರ ಅಭ್ಯರ್ಥಿಗಳಲ್ಲಿ ಮೂವತ್ತು ಮಂದಿ ಗೆದ್ದು ಬಂದರು. ಕಾಂಗ್ರೆಸ್ ಪಕ್ಷವನ್ನು ಮುಂದಿನ ಐದು ವರ್ಷ ಆಡಳಿತ ನಡೆಸಲು ಆದೇಶಿಸಿ ಮತ

ನೀಡಿದ ಮತದಾರರಿಗೆ ಕೃತಜ್ಞತೆ ಸಲ್ಲಿಸಲು ೨೪-೨-೧೯೬೭ ರಂದು ಒಂದು ಪತ್ರಿಕಾ ಹೇಳಿಕೆ ನೀಡಿದರು. ಈ ಅವಧಿಯಲ್ಲಿ ರಾಜ್ಯದ ಸಮಸ್ಯೆಗಳು ಬಗೆಹರಿಯುತ್ತವೆಂದು ಅವರು ಆಶಿಸಿದರು. ಕಾಂಗ್ರೆಸ್ ಕಡಿಮೆ ಸ್ಥಾನ ಗಳಿಸಲು ಆಂತರಿಕ ಜಗಳವೇ ಕಾರಣವೆಂದ ಅವರು ಫಲಿತಾಂಶವು ಪಕ್ಷದ ಒಳಜಗಳ, ಅಸಾಮರಸ್ಯ, ಅಶಿಸ್ತು ಮತ್ತು ಬದ್ಧತಾರಾಹಿತ್ಯಗಳ ವಿರುದ್ಧದ ಎಚ್ಚರಿಕೆ ಎಂದು ಪರಿಗಣಿಸಬೇಕಾಗಿದೆಯೆಂದೂ ನುಡಿದರು. ಲೋಕಸಭೆಯಲ್ಲಿ ಕೂಡ ಪಕ್ಷವು ಕಳೆದ ಚುನಾವಣೆಗಿಂತ ಕಡಿಮೆ ಸ್ಥಾನಗಳನ್ನು ಗಳಿಸಿತು, ಆದರೆ ೨೭ರಲ್ಲಿ ೧೮ ಸ್ಥಾನಗಳನ್ನು ಗೆಲ್ಲುವುದರ ಮೂಲಕ ಸುಭದ್ರ ಸ್ಥಿತಿಯಲ್ಲಿತ್ತು. ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ಅಲ್ಪ ಬಹುಮತವನ್ನು ಪಡೆಯಿತು, ಹಿಂದಿನ ಚುನಾವಣೆಯ ಫಲಿತಾಂಶಕ್ಕೆ ಹೋಲಿಸಿದರೆ ತುಂಬ ಕಡಿಮೆ.

ನಿಜಲಿಂಗಪ್ಪನವರು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ೨-೩-೧೯೬೭ ರಂದು ಅವಿರೋಧವಾಗಿ ನಾಲ್ಕನೆಯ ಬಾರಿಗೆ ಆಯ್ಕೆಗೊಂಡು, ೧೨-೩-೧೯೬೭ ರಂದು ತಮ್ಮ ಸಂಪುಟವನ್ನು ಪ್ರಕಟಿಸಿದರು. ಅದರಲ್ಲಿ ೧೪ ಮಂದಿ ಸಚಿವರೂ ೮ ಮಂದಿ ಉಪಸಚಿವರೂ ಇದ್ದರು. ಸಚಿವರುಗಳಾಗಿ ಎಸ್.ಆರ್. ಕಂಠಿ, ಬಿ.ಡಿ. ಜತ್ತಿ, ಎಂ.ವಿ. ರಾಮರಾವ್, ಆರ್.ಎಂ ಪಾಟೀಲ್, ವೀರೇಂದ್ರ ಪಾಟೀಲ್, ಬಿ. ರಾಚಯ್ಯ, ರಾಮಕೃಷ್ಣ ಹೆಗಡೆ, ಕೆ. ಪುಟ್ಟಸ್ವಾಮಿ, ಡಿ. ದೇವರಾಜ ಅರಸು, ಸಿ. ನಾರಾಯಣ ಗೌಡ, ಮೊಹಮ್ಮದ್ ಆಲಿ, ಕೆ.ವಿ. ಶಂಕರಗೌಡ ಮತ್ತು ಪಿ.ಎಂ. ನಾಡಗೌಡರಿದ್ದರು. ಹಳೆಯ ತಂಡದಲ್ಲಿದ್ದವರಲ್ಲಿ ಎಂ.ವಿ. ಕೃಷ್ಣಪ್ಪ ಲೋಕಸಭೆಗೆ ಆಯ್ಕೆಯಾಗಿದ್ದರು, ನಾಗಪ್ಪ ಆಳ್ವ ಸೋಲು ಕಂಡಿದ್ದರು. ಕೆ. ಮಲ್ಲಪ್ಪ ಮರಣ ಹೊಂದಿದ್ದರು, ಯಶೋಧರ ದಾಸಪ್ಪ ರಾಜೀನಾಮೆ ನೀಡಿದ್ದರು. ಉಪಸಚಿವರೆಂದರೆ ವೈ. ರಾಮಕೃಷ್ಣ, ದಯಾನಂದ ಸಾಗರ್, ಅಬ್ದುಲ್ ಗಫಾರ್, ಎ.ಪಿ. ಅಪ್ಪಣ್ಣ, ಎಚ್.ಸಿ. ಬೋರಯ್ಯ, ಜಿ.ಬಿ. ಶಂಕರರಾವ್ ಮತ್ತು ಆಲೂರು ಹನುಮಂತಪ್ಪ. ಹನುಮಂತಯ್ಯನವರು ಮೊರಾರ್ಜಿ ದೇಸಾಯಿ ಅವರ ಸ್ಥಾನದಲ್ಲಿ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ರಾಷ್ಟ್ರ ಮಟ್ಟಕ್ಕೆ ಜಿಗಿದಿದ್ದರು. ೨೪-೩-೧೯೬೭ ರಂದು ಮಂಡಿಸಿದ ರಾಜ್ಯ ಆಯವ್ಯಯದಲ್ಲಿ ಪಾನ ನಿರೋಧವನ್ನು ಮತ್ತಷ್ಟು ಸಡಿಲಗೊಳಿಸಿದುದರ ಬಗ್ಗೆ ಪ್ರಕಟಿಸಿದರು, ಇದರಿಂದ ನಾಲ್ಕು ಕೋಟಿ ರೂಪಾಯಿಗಳ ಆದಾಯವನ್ನು ನಿರೀಕ್ಷಿಸಿದರು. ಚಾಲತಿಯಲ್ಲಿದ್ದ ಕಂದಾಯ ಪದ್ಧತಿಯನ್ನು ಕೈಬಿಟ್ಟದ್ದರಿಂದ ಆರೇಳು ಕೋಟಿ ರೂಪಾಯಿಗಳಷ್ಟು ಆದಾಯ ಕಡಿಮೆಯಾಯಿತು. ಒಟ್ಟಾರೆ ಕೊರತೆಯ ಎರಡು ಕೋಟಿ ರೂಪಾಯಿಗಳಷ್ಟಿತ್ತು. ಜಿ.ಎಸ್. ಪಾಠಕ್ ಅವರನ್ನು ರಾಜ್ಯಕ್ಕೆ ರಾಜ್ಯಪಾಲರನ್ನಾಗಿ ಹೊಸದಾಗಿ ನೇಮಿಸಲಾಯಿತು.

ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವಂತೆ ಮೈಸೂರು ನಾಯಕರು ಮಹಾಜನ್ ಆಯೋಗಕ್ಕೆ ಮನವಿ ಮಾಡಿಕೊಂಡರು. ೨-೫-೧೯೬೭ ರಂದು ವಿಧಾನಸಭೆಯನ್ನು ಮುಂದೂಡಿ ಮುಖ್ಯಮಂತ್ರಿಗಳು ಅದಕ್ಕೆ ಕಾರಣವನ್ನು ವಿವರಿಸಿದಾಗ ಒಂದು ಸಣ್ಣ ಬಿಕ್ಕಟ್ಟು ನಿರ್ಮಾಣವಾಯಿತು. ೨-೫-೧೯೬೭ ರಿಂದ ಮೂರು ದಿನಗಳ ಕಾಲ ಸದನದ ಕಲಾಪಗಳನ್ನು ಅಡ್ಡಿಪಡಿಸಲಾಗಿ ಅದು ಸ್ಥಗಿತಸ್ಥಿತಿ ತಲುಪಿತು. ಜನತಾ ಪಕ್ಷದ ಸದಸ್ಯ ಕೆ.ಎಚ್. ಪಾಟೀಲರು ೫-೫-೧೯೬೭ ರಂದು ನಿಜಲಿಂಗಪ್ಪನವರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿ, ಎರಡನೇ ತಾರೀಕಿನಂದು ಏನು ನಡೆಯಿತು ಎಂಬುದರ ಬಗ್ಗೆ ಅವರು ಸದನಕ್ಕೆ ಸತ್ಯವನ್ನು ಹೇಳದೆ ಮರೆಮಾಚಿದ್ದಾರೆಂದು ಆರೋಪಿಸಿದರು. ರಾಜ್ಯದ ಆರ್ಥಿಕ ಸ್ಥಿತಿಯ ಬಗ್ಗೆ ವಿವರಣೆ ನೀಡಬೇಕೆಂದು ಒತ್ತಾಯಿಸಿದರು. ನಿಜಲಿಂಗಪ್ಪ ನವರು ಹೇಳಿದಂತೆ ಸದನದ ಮುಂದೂಡಿಕೆಗೆ ಆರ್ಥಿಕ ಬಿಕ್ಕಟ್ಟು ಕಾರಣವಾಗಿರದೆ ಆಡಳಿತ ಪಕ್ಷದ ಆಂತರಿಕ ಬಿಕ್ಕಟ್ಟು ಕಾರಣ ಎಂದು ಮಾರನೆಯ ದಿನ ವಿರೋಧ ಪಕ್ಷಗಳು ಆರೋಪಿಸಿದವು. ರಾಜ್ಯವು ತೀವ್ರ ಆರ್ಥಿಕ ಬಿಕಟ್ಟನ್ನೆದುರಿಸುತ್ತಿದ್ದುದು ಸ್ವಲ್ಪಮಟ್ಟಿಗೆ ನಿಜವಾಗಿತ್ತು. ತಾವು ಹಿಂದೆ ಮೇನಲ್ಲಿ ಮಂಡಿಸಿದ ಆಯವ್ಯಯವು ತಾತ್ಕಾಲಿಕವಾದು ದಾಗಿದ್ದು, ಈಗ ಕೇಂದ್ರವು ರಾಜ್ಯಕ್ಕೆ ಹೆಚ್ಚಿನದಾಗಿ ಎರಡು ಕೋಟಿ ರೂಪಾಯಿಗಳನ್ನು ನೀಡಿರುವುದರಿಂದ, ಆಯವ್ಯಯದಲ್ಲಿ ಅಲ್ಪಸ್ವಲ್ಪ ಮಾರ್ಪಾಟು ಮಾಡಿರುವುದಾಗಿ ರಾಮಕೃಷ್ಣ ಹೆಗಡೆಯವರು ೨೬-೬-೧೯೬೭ ರಂದು ಸದನಕ್ಕೆ ತಿಳಿಸಿದರು. ನಿಜಲಿಂಗಪ್ಪ ನವರು ಆರ್ಥಿಕ ಬಿಕ್ಕಟ್ಟಿನ ಬಗ್ಗೆ ೨-೫-೧೯೬೭ ರಂದು ದೀರ್ಘ ಹೇಳಿಕೆಯೊಂದನ್ನು ನೀಡಿದ್ದರು. "ನಮಗೆಲ್ಲ ತಿಳಿದಿರುವಂತೆ, ಮೈಸೂರು ಅನೇಕ ಕಷ್ಟಗಳನ್ನೆದುರಿಸಬೇಕಾಗಿದೆ. ಮೈಸೂರಿನ ವಿಶಿಷ್ಟ ಪರಿಸ್ಥಿತಿಯ ಕಡೆ ಗಮನವಿರಿಸಿ ಹೆಚ್ಚಿನ ಹಣಕಾಸು ನೆರವು ನೀಡಲು ನಾನು ಕೇಂದ್ರ ಸರ್ಕಾರ ಹಾಗೂ ಯೋಜನಾ ಆಯೋಗದೊಡನೆ ಚರ್ಚಿಸು ತ್ತಿದ್ದೇನೆ.... ಆದರೆ ಹಣ ಒದಗಿಸುವುದು ಕಷ್ಟವೆಂದು ಅವರು ಹೇಳುತ್ತಾರೆ. ನನ್ನ ಹೆದರಿಕೆಯೆಂದರೆ ಮತ್ತಷ್ಟು ಕಡಿತವುಂಟಾಗುತ್ತದೇನೋ ಎಂಬುದು.... ಪರಿಸ್ಥಿತಿ ಎಲ್ಲಿಗೆ ತಲುಪುವುದೋ ಅರಿಯೆ. ಹಾಸಿಗೆಯಿದ್ದಷ್ಟು ಕಾಲು ಚಾಚುವ ಪರಿ ಹೇಗೆ ಎಂದು ನಾನು ಆಲೋಚಿಸುತ್ತಿದ್ದೇನೆ. ನಮ್ಮ ಹಾಸಿಗೆ ಹಾಗೂ ಕಾಲುಗಳ ಸ್ವರೂಪ ಎಂಥದು ಎಂಬುದು ತಿಳಿಯದು... ನಮಗೆ ಕಡಿಮೆ ಹಣ ಬಂದರೆ ನಮ್ಮ ಆದ್ಯತೆಗಳನ್ನು ಪುನಾರೂಪಿಸುವುದು ಹೇಗೆ? ಕೃಷಿ ಮತ್ತು ನೀರಾವರಿಗಳಿಗೆ ಮೊದಲ ಆದ್ಯತೆ, ಆನಂತರ ವಿದ್ಯುತ್ ಉತ್ಪಾದನೆಗೆ ನೀಡಬೇಕೆಂಬುದು ನನ್ನ ಪ್ರಬಲ ಅನಿಸಿಕೆ... ಕೇವಲ ನಾಲ್ಕು ತಿಂಗಳಿಗೆ ಮಾತ್ರ ಆಯವ್ಯಯವನ್ನು ಅಂಗೀಕರಿಸಲಾಗಿದೆ, ಹೀಗಾಗಿ ಆ ಮೊತ್ತವನ್ನು ಖರ್ಚುಮಾಡಬಹುದು.... ಉಳಿದೆಂಟು ತಿಂಗಳು ವೆಚ್ಚ ಮಾಡಲು

ನಮ್ಮ ಬಳಿ ಹೆಚ್ಚು ಹಣ ಉಳಿಯಲಾರದು.... ನಾಯಕನಾಗಿ ಮುಂದುವರಿಯಲು ನನಗೆ ಉತ್ಸಾಹವೇನೂ ಉಳಿದಿಲ್ಲ. ಅದೇನೂ ಬದುಕಿನ ದೊಡ್ಡ ಆಕರ್ಷಣೆ ಎಂದು ನನಗೇನೂ ಅನ್ನಿಸಿಲ್ಲ...." ಎಂದವರು ಹೇಳಿದ್ದರು. ಗಂಭೀರ ಸ್ವರೂಪದ ಆರ್ಥಿಕ ಮತ್ತು ಹಣಕಾಸು ಬಿಕ್ಕಟ್ಟನ್ನು ನಿಭಾಯಿಸಲು ಕೆಲವು ಹುದ್ದೆಗಳನ್ನು ರದ್ದುಪಡಿಸಿ ಮಿಕ್ಕ ಕೆಲವನ್ನು ತುಂಬಿಕೊಳ್ಳದಿರಲು ರಾಜ್ಯ ಸರ್ಕಾರ ನಿರ್ಧರಿಸಿತು. ಹಿರಿಯ ಸಹಾಯಕರು, ಕಿರಿಯ ಸಹಾಯಕರು ಮತ್ತು ನಾಲ್ಕನೇ ದರ್ಜೆ ನೌಕರರ ಸ್ಥಾನಗಳಲ್ಲಿ ಶೇಕಡ ೫ ರಷ್ಟು ಕಡಿತ ಮಾಡಲು ನಿರ್ಧರಿಸಲಾಯಿತು. ಎಸ್‌ಎಸ್‌ಪಿ ಸದಸ್ಯರಾಗಿದ್ದು ಕಾಂಗ್ರೆಸ್‌ಗೆ ಪಕ್ಷಾಂತರಗೊಂಡಿದ್ದ ಸದಸ್ಯರೊಬ್ಬರು ಸರ್ಕಾರದ ಧೋರಣೆಗಳನ್ನು ಹೊಗಳಿ ತಾವು ವಿರೋಧಪಕ್ಷದಲ್ಲಿದ್ದಾಗ ಮಾಡಿದ್ದ ಟೀಕೆಗಳಿಗೆ ವಿರುದ್ಧವಾಗಿ ಮಾತನಾಡಿದಾಗ ವಿಧಾನಸಭೆಯಲ್ಲಿ ಕೋಲಾಹಲವುಂಟಾಯಿತು! ಆ ಸದಸ್ಯರೆಂದರೆ ಬಸವಣ್ಣಪ್ಪ. ಸರ್ಕಾರವನ್ನು ಟೀಕಿಸಲು ವಿರೋಧ ಪಕ್ಷ ಪ್ರತಿ ಸಂದರ್ಭವನ್ನೂ ಬಳಸಿಕೊಳ್ಳುತ್ತಿತ್ತು. ೧-೮-೧೯೬೭ ರಂದು ಎಸ್. ಗೋಪಾಗೌಡರು ನಿಜಲಿಂಗಪ್ಪನವರ ವಿರುದ್ಧ ವಿಧಾನ ಸಭೆಯ ಹಕ್ಕುಚ್ಯುತಿಯ ಬಗ್ಗೆ ಪ್ರಸ್ತಾಪಿಸಿದರು. ಮತ್ತೆ ೮-೮-೧೯೬೭ ರಂದು ಕೂಡ, ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿರುವಾಗ ಶಾಸಕರ ಸಂಭಾವನೆಯನ್ನು ಹೆಚ್ಚಿಸುವ ಸರ್ಕಾರದ ಪ್ರಸ್ತಾವವನ್ನು ವಿರೋಧಪಕ್ಷಗಳು ಟೀಕಿಸಿದುವು. ಸರ್ಕಾರವನ್ನು ಜನವಿರೋಧಿ ಎಂದು ಕರೆದರು. ೧-೯-೧೯೬೭ ರಿಂದ ಪಾನನಿರೋಧವನ್ನು ಸಂಪೂರ್ಣ ತೆಗೆದು ಹಾಕುವ ನಿರ್ಧಾರವನ್ನು ಸರ್ಕಾರವು ೨೩-೮-೧೯೬೭ ರಂದು ಪ್ರಕಟಿಸಿದಾಗ, ಆರ್ಥಿಕ ಮುಗ್ಗಟ್ಟು ತಾರಕ್ಕೇರಿರುವುದು ಸ್ಪಷ್ಟವಾಯಿತು.

ಈ ನಡುವೆ, ಮಹಾಜನ್ ಆಯೋಗದ ವರದಿಯನ್ನು ಸಂಬಂಧಪಟ್ಟವರೆಲ್ಲ ಒಪ್ಪಿಕೊಂಡು ಮೈಸೂರು-ಮಹಾರಾಷ್ಟ್ರ ನಡುವಣ ಗಡಿವಿವಾದವನ್ನು ಶಾಶ್ವತವಾಗಿ ಪರಿಹರಿಸಿಕೊಳ್ಳಬೇಕೆಂದು ೩೦-೯-೧೯೬೭ ರಂದು ನಿಜಲಿಂಗಪ್ಪನವರು ಘೋಷಿಸಿದರು. ಬಯಸಿದಷ್ಟು ಮೈಸೂರಿಗೆ ದೊರಕಿಲ್ಲವೆಂದೂ, ಆದರೆ ಅಂತರರಾಜ್ಯ ಸ್ನೇಹ ಸಂಬಂಧದ ಕಾರಣ ತಾವು ವರದಿಯನ್ನು ಒಪ್ಪಿಕೊಳ್ಳುವುದಾಗಿ ಅವರು ಹೇಳಿದರು. ವರದಿಯಲ್ಲಿ ಮೈಸೂರಿನ ನಿಲವನ್ನು ಬಹುತೇಕ ಎತ್ತಿಹಿಡಿಯಲಾಗಿತ್ತೆಂಬುದೂ ನಿಜವೇ. ಹಳ್ಳಿಯನ್ನು ಘಟಕವೆಂದು ಹೇಳಿದ್ದ ಪಾಟಸ್ಕರ್ ಸೂತ್ರವನ್ನು ತಿರಸ್ಕರಿಸಿದ್ದ ಆಯೋಗವು ಕಾರವಾರ, ಬೆಳಗಾವಿ ಮತ್ತಿತರ ನಗರಗಳ ಮೇಲೆ ಹಕ್ಕು ಮಂಡಿಸಿದ್ದ ಮಹಾರಾಷ್ಟ್ರದ ವಾದವನ್ನು ತಿರಸ್ಕರಿಸಿತ್ತು. ಅಲ್ಲದೆ ಕೊಂಕಣಿ ಭಾಷೆಯ ಬಗೆಗಿನ ಮಹಾರಾಷ್ಟ್ರದ ನಿಲವನ್ನೂ ಅದು ತಿರಸ್ಕರಿಸಿತು. ಹಳ್ಳಿ ಘಟಕವಾಗದೆ ಹಳ್ಳಿಗಳ ಸಮುದಾಯ ಘಟಕವಾಗಬೇಕೆಂದು ಅದು ಪ್ರತಿಪಾದಿಸಿತು. ಆದರೆ ಮಹಾರಾಷ್ಟ್ರ ಮುಖ್ಯಮಂತ್ರಿ ವಿ.ಪಿ.

ನಾಯಕ್ ಅವರು ೧೮-೧೦-೧೯೬೭ ರಂದು ವರದಿಯನ್ನು ತಿರಸ್ಕರಿಸಿದರು. ಎರಡೂ ಪಕ್ಷಗಳವರು ಮಹಾಜನ್ ವರದಿಗೆ ಬದ್ಧರಾಗಬೇಕೆಂದು ಕಾಂಗ್ರೆಸ್ ಅಧ್ಯಕ್ಷ ಕಾಮರಾಜರು ೧೦-೧೧-೧೯೬೭ ರಂದು ಹೇಳಿಕೆಯಿತ್ತರು. ಮಹಾರಾಷ್ಟ್ರ ಮುಖ್ಯಮಂತ್ರಿಗಳು ವರದಿಗೆ ವಿರೋಧವನ್ನು ತೋರಿಸುವ ಕುರಿತು ಅಚ್ಚರಿ ವ್ಯಕ್ತಪಡಿಸಿದರು.

ಕಾಮರಾಜರ ಉತ್ತರಾಧಿಕಾರಿಯಾಗಿ ಕಾಂಗ್ರೆಸ್ ಅಧ್ಯಕ್ಷರನ್ನು ಆಯ್ಕೆಮಾಡಲು ೧೯೬೭ರ ನವೆಂಬರ್ ಅಂತ್ಯದ ವೇಳೆಗೆ ಚಟುವಟಿಕೆಗಳು ಬಿರುಸುಗೊಂಡವು. ಮುಂದಿನ ಅಧ್ಯಕ್ಷರ ಆಯ್ಕೆಯಲ್ಲಿ ಪಾತ್ರ ವಹಿಸಬೇಕೆಂದು ಪಕ್ಷದ ಹಿರಿಯ ನಾಯಕರಾಗಿದ್ದ ನಿಜಲಿಂಗಪ್ಪ ನವರನ್ನು ಕೇಳಿಕೊಳ್ಳುವುದು ಅನಿವಾರ್ಯವಾಗಿತ್ತು. ಇಂದಿರಾ ಗಾಂಧಿಯವರಿಗೆ ಆ ಸ್ಥಾನದ ಬಗ್ಗೆ ಆಸಕ್ತಿಯಿಲ್ಲವೆಂದು ೧೭-೧೧-೧೯೬೭ ರಂದು ನಿಜಲಿಂಗಪ್ಪನವರು ಬೆಂಗಳೂರಿನಲ್ಲಿ ಹೇಳಿದರು. ನಿಜಲಿಂಗಪ್ಪನವರನ್ನೇ ಆ ಸ್ಥಾನವನ್ನೊಪ್ಪಿಕೊಳ್ಳಲು ಒತ್ತಡ ಹೇರಲಾಗುತ್ತಿದೆ ಎಂಬ ವದಂತಿ ಇದ್ದಕ್ಕಿದ್ದಂತೆ ದೆಹಲಿಯಲ್ಲಿ ಹಬ್ಬಿತು. ಆ ಸಲಹೆಗೆ ಸಾರ್ವತ್ರಿಕ ಒಪ್ಪಿಗೆಯಿದೆ ಎಂಬ ಮಾಹಿತಿಯನ್ನು ನವದೆಹಲಿಯ ವರದಿಯೊಂದರಲ್ಲಿ ೨೬-೧೧-೧೯೬೭ ರಂದು ಪ್ರಕಟವಾಯಿತು. ಆದರೆ ತಮ್ಮ ರಾಜ್ಯದ ಏಳಿಗೆಯ ಬಗ್ಗೆ ಗಮನ ಹರಿಸಿರುವ ನಿಜಲಿಂಗಪ್ಪನವರಿಗೇ ಆ ಸ್ಥಾನದ ಬಗ್ಗೆ ಆಸಕ್ತಿಯಿಲ್ಲವೆಂಬುದೂ ಆ ವರದಿಯಲ್ಲೇ ಸೂಚಿತವಾಗಿತ್ತು. ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ೩೦-೧೧-೧೯೬೭ ರಂದು ಹನುಮಂತಯ್ಯನವರು ತಮ್ಮ ನಾಮಪತ್ರ ಸಲ್ಲಿಸಿದರು. ಅಭ್ಯರ್ಥಿಗಳೆಂದು ಬಿಂಬಿತರಾದ ಇತರರೆಂದರೆ ಎಸ್.ಕೆ. ಪಾಟೀಲ್ ಮತ್ತು ಮೋಹನ್ ಧಾರಿಯ. ತಮ್ಮ ಉತ್ತರಾಧಿಕಾರಿಯಾಗಿರಲು ಕಾಮರಾಜರು ನಿಜಲಿಂಗಪ್ಪನವರ ಮನವೊಲಿಸಿದ್ದಾರೆಂದೂ ಇದಕ್ಕೆ ಇಂದಿರಾ ಗಾಂಧಿಯವರ ಒಪ್ಪಿಗೆಯಿದೆಯೆಂದೂ ೧-೧೨-೧೯೬೭ರ ದೆಹಲಿಯ ವರದಿಯೊಂದು ಹೇಳಿತು. ಅಧ್ಯಕ್ಷಸ್ಥಾನವನ್ನು ನಿಜಲಿಂಗಪ್ಪನವರು ಒಪ್ಪಿಕೊಳ್ಳುವಂತೆ ಹೇಗೆ ಮಾಡಲಾಯಿತು ಎಂಬುದರ ಬಗೆಗಿನ ಆಂತರ್ಯವನ್ನು ಪತ್ರಿಕೆಗಳು ಪ್ರಕಟಿಸಿದುವು. ೩೦-೧೨-೧೯೬೭ ರಂದು ರಾತ್ರಿ ನಿಜಲಿಂಗಪ್ಪನವರ ಮೇಲೆ ಒತ್ತಾಯ ಹಾಕಿದಾಗ ಅವರು ಇಕ್ಕಟ್ಟಿನಲ್ಲಿ ಸಿಕ್ಕಿದ್ದರು. ಅದೇ ರಾತ್ರಿ ಪ್ರಧಾನಿಗಳ ನಿವಾಸದಲ್ಲಿ ನಡೆದ ಸಭೆಯಲ್ಲಿ ಇಂದಿರಾ ಗಾಂಧಿ ಮತ್ತು ನಿಜಲಿಂಗಪ್ಪನವರೇ ಅಲ್ಲದೆ ಪಕ್ಷದ ಹಿರಿಯರನೇಕರೂ ಇದ್ದರು. ಅವರುಗಳೆಂದರೆ, ಎಸ್.ಕೆ. ಪಾಟೀಲ್, ಬ್ರಹ್ಮಾನಂದ ರೆಡ್ಡಿ, ಜಗಜೀವನರಾಂ, ಸತ್ಯನಾರಾಯಣ ಸಿನ್ಹ, ಫಕ್ರುದ್ದೀನ್ ಆಲಿ ಅಹಮದ್, ದಿನೇಶ ಸಿಂಗ್ ಮತ್ತು ವಿ.ಬಿ. ರಾಜು. ಪ್ರಾಯಶಃ ಹೇಳಿಲ್ಲದ ಕಾರಣ ಕಾಮರಾಜರು ಆ ಸಭೆಯಲ್ಲಿ ಹಾಜರಿರಲಿಲ್ಲ. ಆದರೆ ಮಧ್ಯರಾತ್ರಿಯ ಹೊತ್ತಿಗೆ ಅವರಿಗೆ ಹೇಳಿಕಳಿಸಲಾಯಿತು. ನಿಜಲಿಂಗಪ್ಪನವರು ಅಧ್ಯಕ್ಷಸ್ಥಾನವನ್ನು ಒಪ್ಪಿಕೊಳುವಂತೆ ಮಾಡುವಲ್ಲಿ ಇಂದಿರಾ ಗಾಂಧಿ ಮತ್ತು ಎಸ್.ಕೆ.

ಪಾಟೀಲ್ ನಿರ್ಣಾಯಕ ಪಾತ್ರ ವಹಿಸಿದ್ದರು. ಆದರೆ, ಈ ಲೇಖಕನೊಂದಿಗೆ ಖಾಸಗಿಯಾಗಿ ಮಾತನಾಡುತ್ತ, ನಿರ್ಣಾಯಕ ಪ್ರಭಾವ ತಮ್ಮ ಗೆಳೆಯ ಕಾಮರಾಜರದೇ ಎಂದು ನಿಜಲಿಂಗಪ್ಪನವರೇ ಹೇಳಿದರು. ಆದರೆ ಪತ್ರಿಕಾ ವರದಿಗಳು ಹೇಳಿದುದೆಂದರೆ, ಮೈಸೂರು ರಾಜಕೀಯವನ್ನು ತೊರೆದರೆ ಅಲ್ಲಿ ಸಮಸ್ಯೆಗಳು ಉದ್ಭವಿಸಬಹುದೆಂಬ ಕಾರಣದಿಂದ ನಿರಾಕರಿಸುತ್ತಿದ್ದ ನಿಜಲಿಂಗಪ್ಪನವರನ್ನು ಕಾಮರಾಜರು ಒತ್ತಾಯಿಸಲಿಲ್ಲ ಎಂದು. ಒಂದು ಪರ್ಯಾಯವೆಂದರೆ, ಮುಖ್ಯಮಂತ್ರಿ ಹಾಗೂ ಅಧ್ಯಕ್ಷಸ್ಥಾನಗಳೆರಡನ್ನೂ ಜೊತೆಯಲ್ಲಿಯೇ ನಿಭಾಯಿಸುವುದು, ಆದರೆ ಇದನ್ನು ಕಾಮರಾಜರು ಒಪ್ಪಲಿಲ್ಲ. ಕಾಮರಾಜರು ವಿಫಲರಾದ ಬಳಿಕ ಸರದಿ ಇಂದಿರಾ ಗಾಂಧಿ ಮತ್ತು ಎಸ್.ಕೆ. ಪಾಟೀಲ್ ಅವರದಾಯಿತು, ಅವರು ಒಪ್ಪುವಂತೆ ಮಾಡಿದರು.

ಕಾಂಗ್ರೆಸ್ ಅಧ್ಯಕ್ಷರಾಗಿ ತಾವು ಸಾಮಾನ್ಯ ವ್ಯಕ್ತಿಯ ಕಷ್ಟವನ್ನು ನೀಗಿಸಲು ಕೆಲಸ ಮಾಡುವುದಾಗಿ ನಿಜಲಿಂಗಪ್ಪನವರು ೨-೧೨-೧೯೬೮ ರಂದು ಬೆಳಗಾವಿಯಲ್ಲಿ ಹೇಳಿದರು. ಸ್ಪರ್ಧೆ ಅನಿವಾರ್ಯವಾಗುತ್ತಿದ್ದುದನ್ನು ತಪ್ಪಿಸಲು ತಾವು ಅಧ್ಯಕ್ಷ ಸ್ಥಾನವನ್ನು ಒಪ್ಪಿಕೊಂಡುದಾಗಿ ಆ ಬಳಿಕ ಅವರೇ ವಿವರಿಸಿದರು. ಮೈಸೂರಿನಲ್ಲಿ ತಮ್ಮ ಉತ್ತರಾಧಿಕಾರಿಯು ಒಮ್ಮತದಿಂದ ಆಯ್ಕೆಗೊಳ್ಳುವರೆಂದು ಅವರು ಭರವಸೆಯಿತ್ತರು. ಕಾಂಗ್ರೆಸ್ ಅಧ್ಯಕ್ಷರಾಗಿ ನಿಜಲಿಂಗಪ್ಪನವರು ಆಯ್ಕೆಗೊಂಡುದನ್ನು ೭-೧೨-೧೯೬೮ ರಂದು ಎಐಸಿಸಿಯ ಚುನಾವಣಾಧಿಕಾರಿ ಸಾದಿಕ್ ಆಲಿಯವರು ಔಪಚಾರಿಕವಾಗಿ ಪ್ರಕಟಿಸಿದರು. ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ೭೧ನೇ ಅಧಿವೇಶನವು ಹೈದರಾಬಾದ್‌ನ ಲಾಲ್ ಬಹಾದ್ದೂರ್ ನಗರದಲ್ಲಿ ೧೦-೧-೧೯೬೮ ರಂದು ಆರಂಭಗೊಂಡಿತು. ಅದರ ಅಧ್ಯಕ್ಷತೆ ವಹಿಸಿ ಮಾತನಾಡುತ್ತ ನಿಜಲಿಂಗಪ್ಪನವರು, ಕಾಂಗ್ರೆಸ್ ಮಾತ್ರವೇ ದೇಶವನ್ನು ಮುನ್ನಡೆಸಬಲ್ಲುದು ಎಂದರು. ಆದರೆ ಕಾಂಗ್ರೆಸ್‌ಗೆ ನವಚೈತನ್ಯ ಬರಬೇಕಾಗಿದೆಯೆಂದೂ ಆ ಬಳಿಕ ನುಡಿದರು. ತಮ್ಮ ಕಾರ್ಯಕಾರಿ ಸಮಿತಿಯನ್ನು ನಿಜಲಿಂಗಪ್ಪನವರು ೧೮-೧-೧೯೬೮ ರಂದು ಪ್ರಕಟಿಸಿದರು. ಇಂದಿರಾ ಗಾಂಧಿ, ಜಗಜೀವನ ರಾಂ, ಮೊರಾರ್ಜಿ ದೇಸಾಯಿ, ಫಕ್ರುದ್ದೀನ್ ಆಲಿ ಅಹಮದ್, ಉಮಾಶಂಕರ ದೀಕ್ಷಿತ್, ಶಂಕರದಯಾಳ ಶರ್ಮ, ಚವಾನ್, ಕೆ.ಪಿ. ಏಬ್ರಹಾಂ, ಎಸ್.ಕೆ. ಪಾಟೀಲ್, ಅತುಲ್ಯ ಘೋಷ್ ಮತ್ತು ಎಂ.ವಿ. ರಾಮರಾವ್ ಅವರನ್ನು ನಾಮಕರಣ ಮಾಡಿದರು.

ತವರೂರು ಬೆಂಗಳೂರಿನಲ್ಲಿ ಹಿಂದಿ ಬಗ್ಗೆ ಒಂದು ಬಿರುಗಾಳಿ ರೂಪುಗೊಳ್ಳಲಿತ್ತು. ವಿದ್ಯಾರ್ಥಿಗಳ ಹಿಂದಿವಿರೋಧಿ ಚಳವಳಿ ೨೩-೧-೧೯೬೮ ರಂದು ಬೆಂಗಳೂರಿನಲ್ಲಿ ಉಗ್ರ ಸ್ವರೂಪನ್ನು ಪಡೆದು ಪೊಲೀಸರು ಗುಂಡು ಹಾರಿಸುವ ಪರಿಸ್ಥಿತಿ ಉಂಟಾಗಿ

ಈರ್ವರು ಸಾವನ್ನಪ್ಪಬೇಕಾಯಿತು. ನಿಜಲಿಂಗಪ್ಪ ಎರಡು ಕುದುರೆಗಳ ಸವಾರಿ ನಡೆಸುತ್ತಿದ್ದರು. ರಾಷ್ಟ್ರ ಮಟ್ಟದಲ್ಲಿ, ಪಕ್ಷಕ್ಕೆ ಹೊಸ ಚೈತನ್ಯ ತುಂಬುವಂತೆ ಮಾಡಲು ಏಳು ಮಂದಿಯ ಸಮಿತಿಯೊಂದನ್ನು ೩೦-೧-೧೯೬೮ ರಂದು ರಚಿಸಿದರು. ಅದರ ಸದಸ್ಯರುಗಳೆಂದರೆ ಎಸ್.ಕೆ. ಪಾಟೀಲ್, ಸಿ. ಸುಬ್ರಹ್ಮಣ್ಯಂ, ಕಮಲಾಪತಿ ತ್ರಿಪಾಠಿ, ಟಿ. ಒ. ಬಾವಾ, ಎಸ್.ಎನ್. ಮಿಶ್ರ, ಶರತ್‌ಚಂದ್ರ ಸಿನ್ಹ ಮತ್ತು ಟಿ. ಮಣ್ಯನ್. ಎಂ.ವಿ. ರಾಮರಾವ್ ಅವರು ಮೊದಲ ಪ್ರಧಾನ ಕಾರ್ಯದರ್ಶಿಗಳಾಗಿ ನೇಮಕಗೊಂಡರು. ತಾವು ಎರಡು ಹುದೆಗಳನ್ನು ಹೊತ್ತಿರುವ ಟೀಕೆಗಳಿಗೆ ನಿಜಲಿಂಗಪ್ಪನವರು ೨೧-೨-೧೯೬೮ ರಂದು ವಿಧಾನಸಭೆಯಲ್ಲಿ ಉತ್ತರಿಸುತ್ತ, ಅದಕ್ಕೆ ಸಂವಿಧಾನಾತ್ಮಕ ಅಡ್ಡಿಯೇನೂ ಇಲ್ಲ ಎಂದರು. ಆದರೆ ೧೫-೩-೧೯೬೮ ರಂದು ಪತ್ರಿಕೆಗಳೊಡನೆ ಮಾತನಾಡುತ್ತ, ರಾಜ್ಯದ ಪರಿಸ್ಥಿತಿ ತೃಪ್ತಿಕರವೆನಿಸಿದಾಗ ತಾವು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡುವುದಾಗಿ ಹೇಳಿದರು. ಈ ಮಧ್ಯೆ, ಮುಖ್ಯಮಂತ್ರಿ ಹುದ್ದೆಯನ್ನು ತ್ಯಜಿಸಲು ನಿಜಲಿಂಗಪ್ಪನವರ ಮೇಲೆ ಒತ್ತಡಗಳು ಬರಬಹುದೆಂದು ದೆಹಲಿಯ ಪತ್ರಿಕಾ ವರದಿಗಳು ತಿಳಿಸಿದುವು. ತಾವು ಬೇಕಾಗದಿದ್ದರೆ ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ಬಿಡುವುದಾಗಿ ನಿಜಲಿಂಗಪ್ಪನವರು ಪತ್ರಿಕೆಗಳಿಗೆ ಹೇಳಿದರು. ಅಂದರೆ ತಮ್ಮ ಮತ್ತೊಂದು ಹುದ್ದೆಯನ್ನು ತ್ಯಜಿಸಲು ಸಿದ್ಧರಿಲ್ಲವೆಂಬ ಭಾವನೆ ಅವರ ಮಾತಿನಲ್ಲಿತ್ತೇ ಎಂಬುದು ಅವರ ಮಾತಿನಿಂದ ಸ್ಪಷ್ಟವಾಗಲಿಲ್ಲ. ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿ ಮುಂದುವರಿಯಬೇಕೆಂಬುದು ಅವರ ಬೆಂಬಲಿಗರ ಬಯಕೆಯೆಂದೂ ಹಾಗಾಗಿ ಅವರು ಅದನ್ನು ತ್ಯಜಿಸುವುದು ಕ್ಷಷ್ಟಕರವೆಂದೂ ಮತ್ತೊಂದು ಪತ್ರಿಕಾ ವರದಿ ಹೇಳಿತು. ಆದರೆ, ೧೨-೪-೧೯೬೮ ರಂದು ನಿಜಲಿಂಗಪ್ಪನವರು ತಾವು ಮುಖ್ಯಮಂತ್ರಿ ಸ್ಥಾನವನ್ನು ತ್ಯಜಿಸುವ ಸೂಚನೆ ನೀಡಿದರು. ಬೆಂಗಳೂರಿನಲ್ಲಿ ಹವ್ಯಾಸಿ ನಾಟಕ ಸಂಸ್ಥೆಯ ಶಂಕುಸ್ಥಾಪನೆಯ ಸಮಾರಂಭದಲ್ಲಿ ಮಾತನಾಡುತ್ತ ಅವರು ಈ ಮಾತನ್ನು ಹೇಳಿದರು. ತಾವು ಮುಖ್ಯಮಂತ್ರಿ ಹುದ್ದೆಯನ್ನು ತ್ಯಜಿಸುವುದಾಗಿ ೧೭-೪-೧೯೬೮ ರಂದು ವಿಧಾನಸಭೆಗೆ ತಿಳಿಸಿದರು. ೨೫-೫-೧೯೬೮ ರೊಳಗೆ ತಮ್ಮ ಉತ್ತರಾಧಿಕಾರಿಯ ಆಯ್ಕೆ ನಡೆಯುವುದೆಂದು ಅವರು ೩೦-೪-೧೯೬೮ ರಂದು ಬೆಂಗಳೂರಿನಲ್ಲಿ ತಿಳಿಸಿದರು. ಕೊನೆಗೆ, ೧೫-೫-೧೯೬೮ ರಂದು ರಾಜ್ಯ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕತ್ವ ಹಾಗೂ ಮುಖ್ಯಮಂತ್ರಿ ಸ್ಥಾನಕ್ಕೆ ನಿಜಲಿಂಗಪ್ಪನವರು ರಾಜೀನಾಮೆ ಸಲ್ಲಿಸಿದರು. ೨೩-೫-೧೯೬೮ ರಂದು ವೀರೇಂದ್ರ ಪಾಟೀಲರು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಅವಿರೋಧವಾಗಿ ಆಯ್ಕೆಯಾಗಿ ಅವರ ಉತ್ತರಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದರು. ತಾವು ಮೊದಲು ಸಚಿವಸ್ಥಾನಕ್ಕೆ ಆಯ್ದು ಸಿದ್ಧಗೊಳಿಸಿರುವ ವ್ಯಕ್ತಿಯೊಬ್ಬರು ತಮ್ಮ ಉತ್ತರಾಧಿಕಾರಿಯಾಗಿ ಆಯ್ಕೆಗೊಂಡದ್ದು

ನಿಜಲಿಂಗಪ್ಪನವರಿಗೆ ತೃಪ್ತಿ ತಂದಿರಬೇಕು. ಅವರ ಹೆಸರನ್ನು ಜತ್ತಿ ಸೂಚಿಸಿದರೆ, ಗುದ್ಲೆಪ್ಪ ಅದನ್ನು ಅನುಮೋದಿಸಿದರು. ಹೊಸ ಸಂಪುಟ ಹಿಂದಿನದಕ್ಕಿಂತ ಭಾರಿ ದೊಡ್ಡದಾಗಿ ಮೂರು ಹಂತಗಳದ್ದಾಗಿತ್ತು: ಸಚಿವ, ರಾಜ್ಯ ಸಚಿವ ಮತ್ತು ಉಪಸಚಿವ. ಪಾಟೀಲರ ಸಂಪುಟದಲ್ಲಿ ೧೨ ಮಂದಿ ಸಚಿವರೂ, ಐದು ಮಂದಿ ರಾಜ್ಯ ಸಚಿವರೂ, ೧೧ ಮಂದಿ ಉಪಸಚಿವರೂ ಇದ್ದರು. ಇಬ್ಬರು ಉಪಸಚಿವರುಗಳಾದ ಎ.ಪಿ. ಅಪ್ಪಣ್ಣ ಮತ್ತು ಎಸ್.ಎಂ. ಸೋಗಿ ನಲವತ್ತರ ದಶಕದ ಕೊನೆಯಲ್ಲಿ ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಈ ಜೀವನಚರಿತ್ರಕಾರನ ವಿದ್ಯಾರ್ಥಿಗಳಾಗಿದ್ದವರು!

ಮೈಸೂರಿನ, ಆನಂತರ ಕರ್ನಾಟಕದ ಮುಖ್ಯಮಂತ್ರಿಗಳಾಗಿ ದೀರ್ಘಕಾಲ, ಅಂದರೆ ೧೯೫೬ ರ ನವೆಂಬರ್ ಒಂದರಿಂದ ೧೩-೫-೧೯೬೮ ರವರೆಗೆ, ಸೇವೆ ಸಲ್ಲಿಸಿದ ನಿಜಲಿಂಗಪ್ಪನವರ ಬದುಕಿನ ಅಧ್ಯಾಯ ಕೊನೆಗೊಂಡಿತ್ತು. ಕಾಂಗ್ರೆಸ್ ಅಧ್ಯಕ್ಷರಾಗಿ ಮತ್ತು ಕಾಂಗ್ರೆಸ್ ಪಕ್ಷದ ಐತಿಹಾಸಿಕ ಇಬ್ಭಾಗದಲ್ಲಿ ಅವರ ಪಾತ್ರ ಮತ್ತು ಅದರ ದುಷ್ಪರಿಣಾಮಗಳ ವಿವರಗಳನ್ನು ಮುಂದಿನ ಅಧ್ಯಾಯದಲ್ಲಿ ವಿವರವಾಗಿ ನಿರೂಪಿಸಲಾಗುವುದು. ಆದರೆ, ಅವರ ಮುಖ್ಯಮಂತ್ರಿ ಪದವಿಯ ಅವಧಿಯ ವಿಶ್ಲೇಷಣಾತ್ಮಕ ವ್ಯಾಖ್ಯಾನ ಹಾಗೂ ಮೌಲ್ಯಮಾಪನ ಮಾಡದೆ ಅವರ ಮುಖ್ಯಮಂತ್ರಿತ್ವದ ಬಗ್ಗೆ ದಿಢೀರನೆ ನಿರೂಪಣೆಯನ್ನು ಮುಗಿಸುವುದು ಸೂಕ್ತವಲ್ಲ. ಸೈದ್ಧಾಂತಿಕ ಹಿನ್ನೆಲೆಯಲ್ಲಿ ನಿರೂಪಣೆಯನ್ನು ಸಂಕ್ಷೇಪವಾಗಿಯಾದರೂ ವಿಶ್ಲೇಷಿಸುವ ಆವಶ್ಯಕತೆ ಇದೆ.

ನಿಜಲಿಂಗಪ್ಪನವರ ಮುಖ್ಯಮಂತ್ರಿತ್ವವನ್ನು ಬೆಲೆಗಟ್ಟುವುದಕ್ಕೆ ಬೇಕಾದ ಹಿನ್ನೆಲೆಯಾಗಿ ಆವಶ್ಯಕವಾದ ತಾತ್ವಿಕ ಚೌಕಟ್ಟನ್ನು ಸಿದ್ಧಗೊಳಿಸಿಕೊಳ್ಳುವುದಕ್ಕಾಗಿ ನಾವು ಈ ಅಧ್ಯಾಯದ ಆರಂಭಕ್ಕೆ ಮರಳಬೇಕು. ಆದರೆ ವಾಸ್ತವ ಪರಿಶೀಲನೆಗೆ ಮುಂಚೆ, ಒಬ್ಬ ಮುಖ್ಯಮಂತ್ರಿ, ಯಾವುದೇ ರಾಜ್ಯ ಯಾವುದೇ ಕಾಲದವರಾಗಲೀ, ಭಾರತದಲ್ಲಿ ಏನನ್ನು ಸಾಧಿಸಬಹುದು ಎಂಬುದನ್ನು ಅಳೆಯುವ ಮಾನದಂಡವನ್ನು ರೂಪಿಸಿಕೊಳ್ಳಬೇಕಾದುದು ಆವಶ್ಯಕ. ಮಾನದಂಡದ ಮೊದಲ ಹಂತವೆಂದರೆ, ಸಂವಿಧಾನದಲ್ಲಿ ದತ್ತವಾಗಿರುವ ಮುಖ್ಯಮಂತ್ರಿಯ ಅಧಿಕಾರ, ಕಾರ್ಯವ್ಯಾಪ್ತಿ ಮತ್ತು ಆ ವ್ಯಕ್ತಿ ಮುಖ್ಯಮಂತ್ರಿಯಾದ ಹಿನ್ನೆಲೆ ಇವುಗಳನ್ನು ಗಮನಿಸಬೇಕು. ಜೊತೆಗೆ, ಸಂವಿಧಾನವು ಒಂದು ರಾಜ್ಯವನ್ನು ಅಂತಹ ಅನೇಕ ಘಟಕಗಳ ಒಕ್ಕೂಟದ ಒಂದು ಭಾಗವೆನ್ನುತ್ತದೆ, ಹೀಗಾಗಿ ಅದು ಕೇಂದ್ರ ಮತ್ತು ಜೊತೆಗಿನ ಇತರ ರಾಜ್ಯಗಳ ಅಧಿಕಾರ ಮತ್ತು ಸಂಪನ್ಮೂಲಗಳನ್ನು ಹಂಚಿಕೊಂಡಿರುತ್ತದೆ. ಇದರಿಂದಾಗಿ ಮುಖ್ಯಮಂತ್ರಿಯು ತೀವ್ರ ಸಂಪನ್ಮೂಲ ಕೊರತೆಯ ಒತ್ತಡದಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಅವನು ಕೇಂದ್ರದ ಆರ್ಥಿಕ ನೆರವಿನ ಮೇಲೆ

ಆಧರಿಸಿರಬೇಕಾಗುತ್ತದೆ, ಜೊತೆಗೆ ಯೋಜನಾ ಧೋರಣೆಯು ಹೆಚ್ಚಿನ ಪ್ರಮಾಣದ ಸಂಪನ್ಮೂಲ ಮತ್ತು ಅಧಿಕಾರ ಕೇಂದ್ರೀಕರಣಕ್ಕೆ ಅಧೀನವಾಗಿರುತ್ತದೆ. ಈಚಿನ ವರ್ಷಗಳಲ್ಲಿ ರಾಜ್ಯಗಳು ಕೇಂದ್ರದಿಂದ ಸ್ವಲ್ಪಮಟ್ಟಿಗಿನ ಸ್ವಾಯತ್ತತೆಯನ್ನು ಗಳಿಸಿಕೊಂಡಿದ್ದರೂ, ಅಧಿಕಾರವು ಸಾಧಾರಣವಾಗಿ ಕೇಂದ್ರದ ಕಡೆಗೇ ಹೆಚ್ಚು ವಾಲಿರುವುದು ಸ್ಪಷ್ಟ. ನಾವಾಗಲೇ ಗಮನಿಸಿದಂತೆ, ನಿಜಲಿಂಗಪ್ಪನವರು ಪದೇ ಪದೇ ಕೇಂದ್ರದ ಆರ್ಥಿಕ ನೆರವಿಗೆ ಧಾವಿಸಬೇಕಾಗಿತ್ತು, ಅಥವಾ ಅವರ ಮಾತಿನಲ್ಲಿಯೇ ಹೇಳಬೇಕಾದರೆ ಭವನಾಶಿಯನ್ನು ಹಿಡಿದು ಕೇಂದ್ರದ ಮುಂದೆ ನಿಲ್ಲಬೇಕಾಗಿತ್ತು! ಎರಡನೆಯ ಮಿತಿಯೆಂದರೆ, ಸಂರಚನಾತ್ಮಕವಾದುದು, ಸಂಸದೀಯ ವ್ಯವಸ್ಥೆಯಲ್ಲಿನ ಸರ್ಕಾರದ ಉದಾರ ಪ್ರಜಾಸತ್ತಾತ್ಮಕ ಸ್ವರೂಪ. ಪಕ್ಷ ಸಂರಚನೆಯು ದುರ್ಬಲವಾದುದೂ ಆಂತರಿಕ ಗುಂಪುಗಾರಿಕೆಗೆ ಪಕ್ಕಾಗುವಂಥದೂ ಆದುದು, ಅಧಿಕಾರಕ್ಕೆ ಬಂದ ಪಕ್ಷದಲ್ಲಿ ಇದು ಹೆಚ್ಚುತ್ತಲೇ ಹೋಗುತ್ತದೆ. ಇದರಿಂದಾಗಿ, ಮುಖ್ಯಮಂತ್ರಿಯ ಶಕ್ತಿಸಾಮರ್ಥ್ಯಗಳಲ್ಲಿನ ಬಹು ಪಾಲು ಪಕ್ಷ ನಿರ್ವಹಣೆಯಲ್ಲಿಯೇ ವ್ಯರ್ಥವಾಗುತ್ತದೆ. ನಿಜಲಿಂಗಪ್ಪನವರ ಮುಖ್ಯ ರಾಜಕೀಯ ಸಮಸ್ಯೆಯೆಂದರೆ ಒಳಜಗಳವೇ ಹೊರತು ವಿರೋಧ ಪಕ್ಷಗಳನ್ನೆದುರಿಸುವುದಲ್ಲ ಎಂಬುದನ್ನಾಗಲೇ ನೋಡಿದ್ದೇವೆ. ಆದರೆ ಪರಿಸ್ಥಿತಿ ಈಗ ಸ್ವಲ್ಪ ಬದಲಾಗಿದೆ: ಯಾವುದೇ ಪಕ್ಷವು ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರುವ ಸಂಭವವಿರದೆ ಸಂಮಿಶ್ರ ಸರ್ಕಾರ ರಚನೆ ಅನಿವಾರ್ಯವಾಗಿದೆ. ಆದರೆ ನಿಜಲಿಂಗಪ್ಪನವರ ಕಾಲದಲ್ಲಿ ವಿರೋಧ ಪಕ್ಷವು ತೀರ ದುರ್ಬಲವಾಗಿ, ಯಾವುದೇ ಭಯವನ್ನೊಡ್ಡುವ ಸ್ಥಿತಿಯಲ್ಲಿರದಷ್ಟು ಛಿದ್ರಗೊಂಡಿತ್ತು. ಆಡಳಿತ ಪಕ್ಷದ ಒಳಜಗಳವು ಯಾವ ಕಾಲಕ್ಕೂ ಬಗೆಹರಿಯುವಂಥದಾಗಿರಲಿಲ್ಲ, ಯಾಕಂದರೆ ಅದು ಯಾವುದೇ ನೀತಿ, ಧೋರಣೆ ಅಥವಾ ಆದರ್ಶದ ಮೇಲೆ ನಿಂತಿರಲಿಲ್ಲ. ಜಗಳಗಳೆಲ್ಲ ತೀರ ವೈಯಕ್ತಿಕ ನೆಲೆಯವು, ಮತ್ತು ಗುಂಪುಗಳು ಜೊಳ್ಳುಗಳು, ಯಾವುದೇ ಅವಕಾಶ ಸಿಕ್ಕಿದರೂ ಅಧಿಕಾರ ಹಿಡಿಯುವ ಹುನ್ನಾರದಲ್ಲಿದ್ದ ನಾಯಕನ ಸುತ್ತ ಸುಳಿಯುವ ಜಂಗುಳಿ! ಕೆಲವು ವೇಳೆ ಭಿನ್ನಮತೀಯರ ಸಂಕಷ್ಟಗಳು ಅಸಲಿಯಾದವು, ಆದರೆ ಅವೆಲ್ಲ ಸದಾ ವೈಯಕ್ತಿಕ ಸ್ವರೂಪದವು. ಈ ಸಮಸ್ಯೆಗಳನ್ನು ನಿಜಲಿಂಗಪ್ಪನವರು ನಿಭಾಯಿಸಿದ ಬಗೆಯ ಮೇಲೆ ಕಣ್ಣಾಡಿಸಿದಾಗ, ಅದು ಯಶಸ್ವಿಯಾಗಿಯೇ ನಡೆಯಿತು ಎಂದು ಒಪ್ಪಿಕೊಳ್ಳಬೇಕು.

ರಾಜ್ಯದ ಮುಖ್ಯ ಆಡಳಿತಗಾರರಾಗಿ ನಿಜಲಿಂಗಪ್ಪನವರು ರಾಜಕೀಯ, ಆಡಳಿತಾತ್ಮಕ ಹಾಗೂ ಸಾರ್ವಜನಿಕ ನೆಲೆಗಳಲ್ಲಿ ಕಾರ್ಯನಿರ್ವಹಿಸಬೇಕಾಗಿತ್ತು. ಪ್ರಾಯಶಃ ರಾಜಕೀಯ ನಿರ್ವಹಣೆಯಲ್ಲಿ ಅವರು ಕನಿಷ್ಠ ಪರಿಣಾಮಕಾರಿಯಾಗಿದ್ದರು, ಇದಕ್ಕೆ

ಭಾಗಶಃ ಕಾರಣ ರಾಜಕೀಯ ಸನ್ನಿವೇಶಗಳ ನಿಗೂಢತೆ ಮತ್ತು ಭಾಗಶಃ ಅವರ ವ್ಯಕ್ತಿತ್ವದ ಸ್ವರೂಪ. ಅವರು ತೀರ ಸೌಜನ್ಯದ ವ್ಯಕ್ತಿಯಾಗಿದ್ದು ಕಠಿಣ ಸನ್ನಿವೇಶಗಳನ್ನೆದುರಿಸುವುದು ಕಷ್ಟಕರವಾಯಿತು. ಏಕೀಕರಣ ಮತ್ತು ಕಾಂಗ್ರೆಸ್‌ನ ಇಬ್ಭಾಗದಂತಹ ಬಿಕ್ಕಟ್ಟುಗಳನ್ನು ಅವರು ನಿಭಾಯಿಸಿದರೂ, ಅವರಿಗೆ ಅತಿರೇಕ ಸನ್ನಿವೇಶಗಳನ್ನೆದುರಿಸುವುದು ಕಷ್ಟಕರವೇ ಆಯಿತು. ಕಾಲೇಜು ಶುಲ್ಕ ಏರಿಕೆ ಮತ್ತು ಗೋವಾ ವಿಲೀನ ಮತ್ತು ಗಡಿವಿವಾದದಂತಹ ಸನ್ನಿವೇಶಗಳಲ್ಲಿನ ಕಾನೂನು ವ್ಯವಸ್ಥೆಯನ್ನು ಅವರು ತೃಪ್ತಿಕರವಾಗಿ ನಿಭಾಯಿಸಿದರು; ಇವುಗಳಲ್ಲಿ ತಾಳ್ಮೆ ಮತ್ತು ಆತ್ಮನಿಯಂತ್ರಣ ಸ್ವಭಾವಗಳು ಅವರ ನೆರವಿಗೆ ಬಂದವು. ಆಡಳಿತಾತ್ಮಕ ನೆಲೆಯ ಬಗ್ಗೆ ಹೇಳುವುದಾದರೆ, ಸಮಸ್ಯೆಗಳ ಕುರಿತು ನಮ್ಮ ವಿಶ್ಲೇಷಣೆ ನೇರವಾಗಿರಲಾರದು, ಅದೇನಿದ್ದರೂ ತಮ್ಮ ಆಡಳಿತಾಧಿಕಾರಿಗಳು ಹಾಗೂ ನೌಕರರ ಜೊತೆ ಅವರು ವ್ಯವಹರಿಸುವಾಗ ತೊಂದರೆಯಾಗಲಿಲ್ಲ ಎಂದು ನಿಷೇಧಾತ್ಮಕವಾಗಿಯೇ ಹೇಳಬೇಕಾಗುತ್ತದೆ. ಕನಿಷ್ಠ ಪಕ್ಷ, ಸರ್ಕಾರದ ಕಾರ್ಯನೀತಿಯ ಅನುಷ್ಠಾನದ ಹೊರೆ ಹೊತ್ತ ಅಧಿಕಾರಿಗಳೊಡನೆ ಅಂದರೆ ಸರ್ಕಾರದ ಕಾರ್ಯದರ್ಶಿಗಳ ಹಂತದಲ್ಲಿ ಅವರಿಗೆ ಯಾವುದೇ ತೊಂದರೆ ಉದ್ಭವವಾಗಲಿಲ್ಲ. ತಮ್ಮ ಸಹೋದ್ಯೋಗಿ ಸಚಿವರೊಂದಿಗೆ, ಅವರು ಸಮಾನರಲ್ಲಿ ಶ್ರೇಷ್ಠ ಎನಿಸಿಕೊಂಡಿದ್ದರು. ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿನ ಅವರ ಬಗೆಗಿನ ಸಾರ್ವಜನಿಕ ಅಭಿಪ್ರಾಯವೆಂದರೆ ಅವರು ಶುಚಿತ್ವದ ವ್ಯಕ್ತಿಯೆಂಬುದು. ಅವರದ್ದು ಖಂಡಿತ ಚುಂಬಕ ವ್ಯಕ್ತಿತ್ವವಾಗಿರಲಿಲ್ಲ, ಆದರೆ ಅವರಲ್ಲಿ ಅಧಿಕಾರದ ಪ್ರಜಾಸತ್ತಾತ್ಮಕ ಹಂಚಿಕೆ, ಪಾರದರ್ಶಕತೆ, ವಿನಯ, ಅಧಿಕಾರ ಮತ್ತು ಹಣಗಳಿಕೆಯ ಗುಂಗಿಲ್ಲದಿರುವುದು ಮತ್ತು ಸರಳತೆಗಳೆಂಬ ಮತ್ತಷ್ಟು ಗಟ್ಟಿಯಾದ ನಾಯಕತ್ವದ ಗುಣಗಳಿದ್ದುವು. ಈ ಗುಣಗಳು ಸಾರ್ವಜನಿಕರಲ್ಲಿ ಭಾವಾವೇಶವನ್ನುಂಟುಮಾಡಲಾರವಾದರೂ, ತಮ್ಮನ್ನು ನಾಯಕನನ್ನಾಗಿ ಒಪ್ಪಿಕೊಳ್ಳುವಂತೆ ಜನರ ಮನವೊಲಿಸಲು ಸಾಕಾಗಿದ್ದುವು. ಎರಡನೆಯದಾಗಿ, ಶಾಸನಸಭೆಯಲ್ಲಿ ಆಡಳಿತ ಪಕ್ಷದ ನಾಯಕರಾಗಿ, ಅವರು ಪ್ರಜಾಸತ್ತಾತ್ಮಕ ರೀತಿಯಲ್ಲಿ ಕಾರ್ಯನಿರ್ವಹಿಸಬೇಕಾಗಿತ್ತು. ಒಟ್ಟಾರೆ ಶಾಸಕರ ಜೊತೆಗಿನ ನಡವಳಿಕೆಯಲ್ಲಿ ಅವರು ದರ್ಪ ಅಥವಾ ಅಹಂಕಾರಗಳನ್ನು ಪ್ರದರ್ಶಿಸಿದ ದಾಖಲೆಗಳಿಲ್ಲ. ಶಾಸನಸಭೆಯ ಕಲಾಪಗಳ ಪ್ರಕಟಿತ ವರದಿಗಳನ್ನು ಓದಿದರೆ ಅವರು ಕೌಶಲಪೂರ್ಣ ಸಂಸದೀಯಪಟುವಾಗಿದ್ದರೆಂಬುದನ್ನು ಯಾರಾದರೂ ಗಮನಿಸಬಹುದು. ಇಲ್ಲಿ ಕೂಡ ಗಮನಾರ್ಹ ಅಂಶವೆಂದರೆ ಆಡಂಬರವಿಲ್ಲದ ಅವರ ಪ್ರಾಮಾಣಿಕತೆ. ಮಾತಿನ ಚಮತ್ಕಾರ ಅವರಿಗೆ ಸಾಧ್ಯವಿದ್ದರೂ, ಅವರು ಸಾಮಾನ್ಯವಾಗಿ ಇತರರೊಂದಿಗೆ, ಅವರು ಸಚಿವರಾಗಲೀ ಶಾಸಕರಾಗಲೀ ಅಧಿಕಾರಿಗಳಾಗಲೀ, ಸತ್ಯವನ್ನೇ ನುಡಿಯುವ ಪ್ರಕೃತಿಯವರು.

ಈ ಮೇಲಿನ ವಿಶ್ಲೇಷಣೆಯು ಸಾಧನೆಗಳನ್ನಾಧರಿಸಿದುದು. ಆದರೆ ಮುಖ್ಯಮಂತ್ರಿಯಾಗಿ ಅವರ ಸಾಧನೆಗಳು ಸರ್ಕಾರದ ಧೋರಣೆಗಳನ್ನು ಕಾರ್ಯರೂಪಕ್ಕೆ ತರುವುದರ ಮೇಲೆ ನಿಂತಿರುತ್ತದೆ. ಇಲ್ಲಿಯು ಕೂಡ ಅವರ ಸಾಧನೆ, ಅದರಲ್ಲೂ ಮುಂದೆ ಬಂದ ಮುಖ್ಯಮಂತ್ರಿಗಳ ಸಾಧನೆಯ ಜೊತೆ ಹೋಲಿಸಿದಾಗ, ಅಪ್ರತಿಮವಾದದ್ದು ಎನ್ನಬೇಕಾಗುತ್ತದೆ. ಧೋರಣೆಗಳ ಅನುಷ್ಠಾನದ ಪರಿಪ್ರೇಕ್ಷ್ಯದಲ್ಲಿ ವಿಶ್ಲೇಷಣೆಯ ಅನುಕೂಲಕ್ಕಾಗಿ, ಅವರ ಮುಖ್ಯಮಂತ್ರಿ ಹುದ್ದೆಯ ಎರಡು ಐತಿಹಾಸಿಕ ಅವಧಿಗಳನ್ನು- ಮೊದಲ ಅವಧಿ- ನವೆಂಬರ್ ಒಂದರಿಂದ ಮೇ ೮, ೧೯೫೮ ರವರೆಗಿನ ಅಲ್ಪಾವಧಿಯದು ಮತ್ತು ಎರಡನೆಯದು- ೧೯೬೨ ನೇ ಮೇನಿಂದ ೧೯೬೮ರ ಮೇ ೧೯೬೮ ರವರೆಗಿನದು- ಪರಿಶೀಲಿಸಬೇಕಾಗುತ್ತದೆ. ಹೊಸ ಮೈಸೂರು ರಾಜ್ಯ ನೆಲೆಯೂರುತ್ತಿದ್ದ ಮೊದಲ ಅವಧಿಯಲ್ಲಿ, ಅವರು ನಿರ್ವಹಿಸಿದ ಮೊದಲ ಕೆಲಸವೆಂದರೆ ಐದು ವಿವಿಧ ಆಡಳಿತ ಭಾಗಗಳಲ್ಲಿದ್ದ ಪ್ರದೇಶಗಳಲ್ಲಿನ ವ್ಯತ್ಯಾಸಗಳನ್ನು ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ಹೋಗಲಾಡಿಸಿ, ಇದ್ದುದರಲ್ಲಿ ಸಮರೂಪವನ್ನು ತರುವ ಏಕೀಕರಣೋತ್ತರ ಸವಾಲನ್ನು ಎದುರಿಸಿದ್ದು. ಪ್ರದೇಶಗಳ ಏಕೀಕರಣವನ್ನು ಕಾನೂನು, ಆಡಳಿತ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಮರೂಪವನ್ನು ತರುವ ಮೂಲಕ ಗಟ್ಟಿಗೊಳಿಸಬೇಕಾಗಿತ್ತು. ಮೇಲಾಗಿ, ಬಹು ಕಠಿಣವಾದ ಭಾವನಾತ್ಮಕ ಏಕೀಕರಣವನ್ನುಂಟುಮಾಡುವುದು. ಕಳೆದ ನಾಲ್ಕು ದಶಕಗಳ ಕಾಲ ರಾಜ್ಯವು ಭದ್ರಗೊಂಡಿದ್ದರೆ, ಅದರ ಬುನಾದಿಯ ಕೆಲಸವನ್ನು ಆಗು ಮಾಡಿದ ಮುಖ್ಯಮಂತ್ರಿಗೆ ಅದರ ಶ್ರೇಯಸ್ಸು ಹೋಗಬೇಕು. ಪಕ್ಕದ ಆಂಧ್ರ ಮತ್ತು ಮಹಾರಾಷ್ಟ್ರಗಳಲ್ಲಿ ನಡೆದಂತೆ ಪ್ರತ್ಯೇಕ ರಾಜ್ಯದ ಯಾವುದೇ ಚಳವಳಿ ಆ ಕಾಲದಲ್ಲಿ ಇಲ್ಲಿ ನಡೆಯಲಿಲ್ಲ. ಅವರ ಕೊಡುಗೆಯು ಶಾಶ್ವತವಾಗಿರುವ ಎರಡನೆಯ ಪ್ರಮುಖ ಧೋರಣಾತ್ಮಕ ಕಾರ್ಯವೆಂದರೆ, ಕೃಷಿ ಮತ್ತು ನೀರಾವರಿ ಕ್ಷೇತ್ರಗಳದು. ಕೃಷಿ, ನೀರಾವರಿ ಹಾಗೂ ವಿದ್ಯುತ್ ಉತ್ಪಾದನೆಗಳಿಗೆ ನೆರವಾಗುವ ಶರಾವತಿ ಯೋಜನೆಯು ಅವರ ಸಾಧನೆಯ ಉತ್ತುಂಗ. ಅದರಲ್ಲಿ ನಡೆದಿದೆಯೆನ್ನಲಾದ ಅಕ್ರಮಗಳು ಸಾಬೀತಾದರೂ, ಅವು ಕನಿಷ್ಠ ಪ್ರಮಾಣದ್ದಾಗಿರುತ್ತವೆ, ಅಲ್ಲದೆ, ಯಾರೂ ನಿಜಲಿಂಗಪ್ಪನವರ ಮೇಲೆ ವೈಯಕ್ತಿಕ ದೋಷಾರೋಪಣೆ ಮಾಡಿಲ್ಲ. ಉನ್ನತ ರಾಜಕೀಯ ಸ್ಥಾನಗಳಲ್ಲಿನ ಭ್ರಷ್ಟಾಚಾರ ನಿಜಲಿಂಗಪ್ಪೋತ್ತರ ಕಾಲದ್ದು. ಇನ್ನು ಎರಡನೆಯ ಅವಧಿಗೆ ಸಂಬಂಧಿಸಿದ್ದು. ಇಲ್ಲಿಯೂ ತಾವು ಮೊದಲ ಅವಧಿಯಲ್ಲಿ ಆರಂಭಗೊಳಿಸಿದ್ದ ಕಾರ್ಯಗಳನ್ನು ಮುಂದುವರಿಸಿದುದೇ ಅಲ್ಲದೆ, ಎದ್ದು ಕಾಣುವಂಥದು ನಿಜಲಿಂಗಪ್ಪನವರು ರಾಜ್ಯದ ಕೈಗಾರಿಕಾ ಹಾಗೂ ಶೈಕ್ಷಣಿಕ ಕ್ಷೇತ್ರಗಳಿಗೆ ನೀಡಿದ ಕೊಡುಗೆ. ರಾಜ್ಯದ ರಾಜಕೀಯವನ್ನು ಬಿಟ್ಟು ತಾವು ರಾಷ್ಟ್ರ ರಾಜಕಾರಣಕ್ಕೆ ಹೋದುದರ ಬಗ್ಗೆ ನಿಜಲಿಂಗಪ್ಪನವರೇ ಈ ಲೇಖಕರೊಡನೆ

ಮತ್ತು ಇತರರೊಡನೆ ನಡಸಿದ ಸಂವಾದದಲ್ಲಿ ವಿಷಾದ ವ್ಯಕ್ತಪಡಿಸಿದರು. ಇದಕ್ಕೆ ಕಾರಣ, ಅವರ ದೃಷ್ಟಿಯಲ್ಲಿ ಅನೇಕ ನೀರಾವರಿ ಹಾಗೂ ಜಲವಿದ್ಯುತ್ ಯೋಜನೆಗಳನ್ನು ಪೂರೈಸದಿದ್ದುದು. ಸಾಮಾಜಿಕ ನ್ಯಾಯ ಹಾಗೂ ಸಮಾಜ ಕಲ್ಯಾಣಗಳ ವಿಷಯದಲ್ಲಿ, ಅವರ ಕೊಡುಗೆ ಖಂಡಿತವಾಗಿಯೂ ಗಮನಾರ್ಹವಾದುದು. ಕಾನೂನು ತೊಡಕುಗಳಿದ್ದರೂ, ಅವರು ಹಿಂದುಳಿದ ವರ್ಗಗಳು ಮತ್ತು ಎಸ್‌ಸಿ ಮತ್ತು ಎಸ್‌ಟಿಗಳ ಸ್ಥಿತಿಯನ್ನು ಸುಧಾರಿಸಲು ಕ್ರಮ ಕೈಗೊಂಡರು. ಆದರೆ ತಮ್ಮ ಅಭಿವೃದ್ಧಿಯು ಆತ್ಯಂತಿಕವಾಗಿ ಅವರ ಕೈಲೇ ಇದೆ, ಸರ್ಕಾರದ ಮೇಲೆ ಪೂರ್ತಿ ಅವಲಂಬಿಸುವುದು ಅವರ ಒಳಿತಿಗೆ ಮಾರಕ ಎಂಬ ಎಚ್ಚರಿಕೆಯನ್ನೂ ಆ ವರ್ಗಗಳವರಿಗೆ ನೀಡಿದರು.

ಈ ಜೀವನಚರಿತ್ರಕಾರನೊಡನೆ ಖಾಸಗಿಯಾಗಿ ಮಾತನಾಡುತ್ತ, ತಮ್ಮ ಎಂದಿನ ವಿನಯದಿಂದ, ತಮ್ಮ ಸಾಧನೆಗಳಲ್ಲಿ ಎರಡು ಅತ್ಯಂತ ಮುಖ್ಯವಾದವು ಎಂಬುದನ್ನು ಹೇಳಿಕೊಂಡರು: ಅವುಗಳೆಂದರೆ, ಶರಾವತಿ ಯೋಜನೆ ಮತ್ತು ವೃದ್ಧ ಬಡವ ಅನಾಥರಿಗೆ ಪಿಂಚಣಿ ಯೋಜನೆ. ಅವರ ವಿನಯವನ್ನು ಒತ್ತಟ್ಟಿಗಿಟ್ಟು ನೋಡಿದರೆ, ರಾಜ್ಯದ ಅಭಿವೃದ್ಧಿ ಮತ್ತು ಸಮೃದ್ಧಿಗಳಿಗಾಗಿ ಅವರು ಮಾಡಿದ ಇತರ ಅನೇಕ ಸಾಧನೆಗಳ ಸರಮಾಲೆಯನ್ನು ನಾವು ಗುರುತಿಸಬಹುದು. ಈ ಪಟ್ಟಿಯ ಕಡೆ ಕಣ್ಣಾಡಿಸಿದರೆ ಸಾಕು, ಅವರು, ನಿಜಲಿಂಗಪ್ಪನವರ ಮೊದಲ ವ್ಯಾಪಕ ಜೀವನಚರಿತ್ರಕಾರರಾದ ಜವರೇಗೌಡರು ಬಣ್ಣಿಸುವಂತೆ, ಆಧುನಿಕ ಕರ್ನಾಟಕದ ರೂವಾರಿ ಎಂಬುದು ನಿರ್ವಿವಾದವಾಗಿ ಸಾಬೀತಾಗುತ್ತದೆ. ೧೯೫೬ ರಲ್ಲಿ ಹೊಸ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ತಕ್ಷಣವೇ, ಅಂದರೆ ಮಾರನೆ ವರ್ಷದ ಮೇ ವೇಳೆಗೆ ಅವರು ಶರಾವತಿ ಜಲವಿದ್ಯುತ್ ಯೋಜನೆಯ ಅಡಿಗಲ್ಲನ್ನು ಹಾಕಿದರು, ಮತ್ತು ಎಲ್ಲ ಅಡ್ಡಿ ಆತಂಕಗಳ ನಡುವೆ ಆರು ವರ್ಷಗಳ ತೀರ ಕಡಿಮೆ ಅವಧಿಯಲ್ಲಿ ಅದು ಪೂರ್ಣಗೊಳ್ಳುವಂತೆ ನೋಡಿಕೊಂಡರು. ಅದರಲ್ಲಿ ಅವರಿಗೆ ವೈಯಕ್ತಿಕ ಆಸಕ್ತಿ, ತಾವೇ ಖುದ್ದಾಗಿ ಅದರ ಉಸ್ತುವಾರಿ ನೋಡಿಕೊಂಡರು. ಗಣನೀಯ ಪ್ರಮಾಣದ ಜನಸಂಖ್ಯೆ ಕೃಷಿಕರಾಗಿರುವಾಗ ನೀರಾವರಿ ಯೋಜನೆಗಳು ಜನರ ಬಡತನ ಹಾಗೂ ನಿರುದ್ಯೋಗ ನಿವಾರಣೆಗೆ ಅತ್ಯಂತ ಮಹತ್ವದ್ದು ಎಂಬುದು ಅವರಿಗೆ ಮನವರಿಕೆಯಾಗಿತ್ತು. ಇಡೀ ದೇಶದಲ್ಲಿಯೇ ಅವರು ಹೆಚ್ಚು ದೂರದರ್ಶಿತ್ವವಿದ್ದ ಮುಖ್ಯಮಂತ್ರಿಯಾಗಿದ್ದರೆಂಬುದು ವಾಸ್ತವದ ಸಂಗತಿ. ನಾರಾಯಣಪುರದ ಕೃಷ್ಣಾ ಮೇಲ್ದಂಡೆ ಹಾಗೂ ಆಲಮಟ್ಟಿ ಅಣೆಕಟ್ಟು ಯೋಜನೆಗಳನ್ನೂ ಅವರು ಆರಂಭಿಸಿ, ಅವುಗಳಿಗೆ ಲಾಲ್ ಬಹದ್ದೂರ್ ಶಾಸ್ತ್ರಿಯವರಿಂದ ಅಡಿಗಲ್ಲನ್ನು ಹಾಕಿಸಿದರು. ಮಲಪ್ರಭಾ ಯೋಜನೆಗೆ ಇಂದಿರಾ ಗಾಂಧಿ ಅಡಿಗಲ್ಲು ಹಾಕುವಂತೆ ಮಾಡಿದವರೂ ಅವರೇ. ಇತರ ಯೋಜನೆಗಳಾದ ಘಟಪ್ರಭಾ, ಹೇಮಾವತಿ, ಹಾರಂಗಿ

ಮತ್ತು ಕಬಿನಿಗಳ ಹಿಂದಿದ್ದವರೂ ಅವರೇ. ಈ ಯೋಜನೆಗಳು ಕರ್ನಾಟಕದ ಜನತೆಗೆ ಅಪಾರ ಅನುಕೂಲವನ್ನೊದಗಿಸಿವೆ. ಅಲ್ಲದೆ, ಅವರು ಅರಣ್ಯಾಭಿವೃದ್ಧಿ ಯೋಜನೆಗೂ ಮಹತ್ವ ನೀಡಿದರು.

ಬೆಂಗಳೂರು ನಗರಕ್ಕೆ ಕುಡಿಯುವ ನೀರು ಪೂರೈಸುವ ಅವರ ಪ್ರಯತ್ನಗಳು ಕಾವೇರಿ ಯೋಜನೆಯಲ್ಲಿ ಪರ್ಯವಸಾನಗೊಂಡಿತು. ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸುವ ಅವರ ಧೋರಣೆಯ ಕಾರಣದಿಂದ ಮಂಗಳೂರು, ಮೈಸೂರು, ಬೆಳಗಾವಿ, ಬಳ್ಳಾರಿ ಮತ್ತು ಚಿತ್ರದುರ್ಗ ನಗರಗಳೂ ಉಪಯೋಗ ಪಡೆದುವು. ಕೃಷಿ ಅಭಿವೃದ್ಧಿಯ ಅವರ ಕನಸು ಎಂದೂ ಕೈಗಾರಿಕಾಭಿವೃದ್ಧಿಗೆ ಮಾರಕವಾದುದಾಗಿರಲಿಲ್ಲ. ಹುಬ್ಬಳ್ಳಿ, ಮೈಸೂರು ಹಾಗೂ ರಾಜ್ಯದ ಇತರ ನಗರಗಳಲ್ಲಿ ಸಣ್ಣ ಹಾಗೂ ಭಾರಿ ಕೈಗಾರಿಕೆಗಳ ಅಭಿವೃದ್ಧಿಗೆ ಬೇಕಾದ ಸೌಕರ್ಯಗಳನ್ನವರು ಒದಗಿಸಿದರು. ರಾಜ್ಯದಲ್ಲಿ ಅಲ್ಯೂಮಿನಿಯಂ, ವಿದ್ಯುನ್ಮಾನ ಮತ್ತು ರೇಯಾನ್ ಕೈಗಾರಿಕೆಗಳನ್ನು ಮೊದಲು ಆರಂಭಿಸಿದ್ದು ಅವರ ಸರ್ಕಾರವೇ. ಅವರು ಮುಖ್ಯಮಂತ್ರಿಯಾದಾಗಿನ ಅವಧಿಯಲ್ಲಿ ರಾಜ್ಯದ ವಿವಿಧೆಡೆ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲಾಯಿತು, ಕರ್ನಾಟಕ ಕಂಡ ಉತ್ಕೃಷ್ಟ ತಂತ್ರಜ್ಞಾನಿ–ಮುತ್ಸದ್ದಿಯ ಜನ್ಮ ಶತಾಬ್ಧಿಯ ಕಾಲದಲ್ಲಿ ಅವರ ಹೆಸರಿನಲ್ಲಿ ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಂತ್ರಜ್ಞಾನ ವಸ್ತುಸಂಗ್ರಹಾಲಯದ ಸ್ಥಾಪನೆಯಲ್ಲಿ ಅವರದ್ದು ತುಂಬ ಮುಖ್ಯವಾದ ಪಾತ್ರ. ಕೈಗಾರಿಕೆಗಳನ್ನು ಸ್ಥಾಪಿಸಿ ಅಭಿವೃದ್ಧಿ ಪಥದತ್ತ ಸಾಗಲು ಅವರು ರಾಜ್ಯದ ಹೊರಗಿನಿಂದ, ಅದರಲ್ಲಿಯೂ ಮುಂಬಯಿಯಿಂದ, ರಾಜ್ಯಕ್ಕೆ ಬಂಡವಾಳಗಾರರನ್ನು ಆಹ್ವಾನಿಸಿದರು. ಭೂಸುಧಾರಣೆಯ ಕಾರ್ಯದಲ್ಲಿ ಬಿ.ಡಿ. ಜತ್ತಿ ಅವರ ನೇತೃತ್ವದಲ್ಲಿ ರಚಿತವಾಗಿದ್ದ ಸಮಿತಿಯು ಸೂಚಿಸಿದ ಮಾರ್ಗದಲ್ಲಿ ಮುನ್ನಡೆದು ಆ ದಿಸೆಯಲ್ಲಿ ಗಮನಾರ್ಹ ಬದಲಾವಣೆಗಳನ್ನು ಅವರ ಸರ್ಕಾರ ತಂದಿತು. ಅನೇಕ ಭೂಹೀನ ಕುಟುಂಬಗಳು ಸೌಲಭ್ಯ ಪಡೆದುವು. ಶಾಲೆಗಳ ಸ್ಥಾಪನೆ, ಕುಡಿಯುವ ನೀರಿನ ಸೌಲಭ್ಯಗಳು, ಹಾಗೂ ರಸ್ತೆಗಳ ನಿರ್ಮಾಣ ಇವುಗಳನ್ನು ಬಹು ಸಂಖ್ಯೆಯ ಹಳ್ಳಿಗಳಲ್ಲಿ ಮಾಡುವ ಮೂಲಕ ಅವರು ಗ್ರಾಮೀಣ ಕರ್ನಾಟಕದ ಅಭಿವೃದ್ಧಿಯತ್ತಲೂ ಗಮನ ಹರಿಸಿದರು. ರಾಜಕೀಯ ಸಂತ್ರಸ್ತರು ಹಾಗೂ ಅನಾಥ ವೃದ್ಧರಿಗೆ ನಿವೃತ್ತಿ ವೇತನ ಮಂಜೂರು ಮಾಡುವ ಕಾರ್ಯದಲ್ಲಿಯೂ ಅವರದ್ದು ಮಹತ್ವದ ಪಾತ್ರ. ಆ ಕಾಲದಲ್ಲಿ ವಯೋವೃದ್ಧರಿಗೆ ನಿವೃತ್ತಿ ವೇತನವನ್ನು ನೀಡುವ ರೂಢಿ ಜಾರಿಗೆ ತಂದ ಏಕೈಕ ರಾಜ್ಯ ಪ್ರಾಯಶಃ ಇಡೀ ದೇಶದಲ್ಲಿನ ಕರ್ನಾಟಕವಾಗಿತ್ತು. ಇತರ ಜಾತಿಗಳವರ ಮನೆಗಳ ನಡುವೆ ಹರಿಜನರಿಗೆ ಮನೆಗಳನ್ನು ಕಟ್ಟಿಸಿಕೊಟ್ಟು ಊರ ಹೊರಗಿನ ಕೇರಿಗಳಿಂದ ಅವರನ್ನು ದೂರವಿಡುವ ಹಳೆಯ ಪದ್ಧತಿಯನ್ನು ಬದಲಿಸುವ ಮೂಲಕ

ಅವರು ಅಸ್ಪೃಶ್ಯತೆಯ ನಿವಾರಣೆಗೆ ಪ್ರಯತ್ನಿಸಿದರು. ರಾಜ್ಯದ ಶೈಕ್ಷಣಿಕ ಅಭಿವೃದ್ಧಿಗೆ ಅವರ ಕೊಡುಗೆಯೂ ಗಮನಾರ್ಹವಾದದ್ದು. ಅವರ ಅಧಿಕಾರಾವಧಿಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ಹೆಬ್ಬಾಳದ ಕೃಷಿ ವಿಶ್ವವಿದ್ಯಾನಿಲಯಗಳು ಸ್ಥಾಪನೆಗೊಂಡುವು. ಉನ್ನತ ಶಿಕ್ಷಣವಲ್ಲದೆ, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣಗಳಿಗೂ ಅವರು ಪ್ರಾಮುಖ್ಯ ನೀಡಿದರು. ವಿಶ್ವವಿದ್ಯಾನಿಲಯ ಶಿಕ್ಷಣದಿಂದ ಆದ್ಯತೆಯನ್ನು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣಗಳ ಕಡೆಗೆ ಬದಲಾಯಿಸಿದ ದೇಶದ ಕೆಲವೇ ಮುಖ್ಯಮಂತ್ರಿಗಳಲ್ಲಿ ಅವರೊಬ್ಬರು. ತಾಂತ್ರಿಕ ಹಾಗೂ ವೈದ್ಯಕೀಯ ಶಿಕ್ಷಣಗಳ ಅಭಿವೃದ್ಧಿಗೂ ಅವರು ಗಮನ ನೀಡಿದರು. ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಹುಬ್ಬಳ್ಳಿ, ದಾವಣಗೆರೆ, ಗುಲ್ಬರ್ಗ, ಬೆಳಗಾವಿ, ಬಳ್ಳಾರಿ, ಬೆಂಗಳೂರು (ಸೈಂಟ್ ಜಾನ್ಸ್) ಮತ್ತು ಮಣಿಪಾಲಗಳಲ್ಲಿ ವೈದ್ಯಕೀಯ ಕಾಲೇಜುಗಳು ಸ್ಥಾಪನೆಗೊಂಡುವು. ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಬೆಳವಣಿಗೆಗೆ ಅವರು ವಿಶೇಷ ಗಮನ ಹರಿಸಿದರು. ಬರಹಗಾರರಿಗೂ ಕಲಾವಿದರಿಗೂ ಮಾಸಿಕ ನಿವೃತ್ತಿವೇತನವನ್ನು ನೀಡುವ ಪದ್ಧತಿಗೆ ಅವರು ಚಾಲನೆ ನೀಡಿದರು.

ಎಲ್ಲಕ್ಕೂ ಮಿಗಿಲಾಗಿ, ಆಡಳಿತ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿ ವಿವಿಧ ಪ್ರದೇಶಗಳಲ್ಲಿದ್ದ ಭಿನ್ನತೆಯನ್ನು ನಿವಾರಿಸಿ ಕರ್ನಾಟಕದ ಭಾವೈಕ್ಯವನ್ನು ರೂಪಿಸಿ ಅದಕ್ಕೊಂದು ವಿಶಿಷ್ಟ ಅನನ್ಯತೆಯನ್ನು ನೀಡುವಲ್ಲಿ ಅವರ ಕೊಡುಗೆಗಳು ಅಮೂಲ್ಯವಾದವು. ಬಹು ಮುಖ್ಯವಾದುದೆಂದರೆ, ಅವುಗಳಲ್ಲಿನ ಕಾನೂನು, ಅದರಲ್ಲಿಯೂ ಭೂಗೇಣಿಯ ವಿಷಯ, ವ್ಯವಸ್ಥೆಯಲ್ಲಿ ಸಮರೂಪವನ್ನು ಸಾಧಿಸುವ ಮೂಲಕ ಕರ್ನಾಟಕವು ಒಂದಾಗುವಂತೆ ಮಾಡಿದ್ದು ಅವರೇ. ಮಹಾರಾಷ್ಟ್ರ ಮತ್ತಿತರ ನೆರೆಯ ರಾಜ್ಯಗಳೊಡನೆ ಇದ್ದ ಗಡಿವಿವಾದಗಳನ್ನು ಕುಶಲತೆಯಿಂದ ನಿರ್ವಹಿಸುವ ಮೂಲಕ ರಾಜ್ಯದ ಭೌಗೋಳಿಕ ಸಮಗ್ರತೆಯನ್ನು ಕಾಪಾಡುವಲ್ಲಿ ಅವರು ವಹಿಸಿದ ಪಾತ್ರ ತುಂಬ ಮಹತ್ವದ್ದು. ಸೌಜನ್ಯಪೂರ್ಣರಾಗಿದ್ದರೂ ಅವರು ದೃಢತೆಯಿಂದ ಕೂಡಿದ್ದವರು, ಹೀಗಾಗಿ ಕೊಡುಕೊಳುವ ಧೋರಣೆ ಅನುಸರಿಸಿದರೂ ಅವರು ಮೂಲಭೂತವಾದವುಗಳ ಬಗ್ಗೆ ರಾಜಿ ಮಾಡಿಕೊಳ್ಳುವಂತಹವರಾಗಿರಲಿಲ್ಲ. ಈ ವಿಷಯದಲ್ಲಿ ಅವರದ್ದು ಅಪ್ಪಟ ಗಾಂಧಿ ಮಾರ್ಗ. ಅವರ ಸಾಧನೆಗಳಲ್ಲಿ ವೆಂಕಟಪ್ಪ ಕಲಾ ಗ್ಯಾಲರಿ. ನಿಮ್ಹಾನ್ಸ್, ಕಿದ್ವಾಯಿ ಸ್ಮಾರಕ ಆಸ್ಪತ್ರೆ ಮತ್ತು ಕ್ರಿಕೆಟ್ ಸ್ಟೇಡಿಯಂಗಳ ಸಾಧನೆಗಳೂ ಸೇರುತ್ತವೆ. ಅನೇಕ ಅಡ್ಡಿಗಳ ನಡುವೆಯೇ ಪ್ರಾಯಶಃ ದೇಶದ ಅತ್ಯಂತ ಶ್ರೇಷ್ಠ ಸ್ಟೇಡಿಯಂ ನಿರ್ಮಾಣಗೊಂಡಿತು. ಭಾರತದ ಸಂಸ್ಕೃತಿ ಮತ್ತು ನಾಗರಿಕತೆಗಳ ಬಗೆಗಿನ ಅವರ

ಬದ್ಧತೆಯಿಂದಾಗಿ ಬೆಂಗಳೂರಿನಲ್ಲಿ ಭಾರತೀಯ ವಿದ್ಯಾ ಭವನದ ಶಾಖೆಯ ಸ್ಥಾಪನೆಗೆ ಅವರು ಉದಾರವಾಗಿ ಭೂಮಿಯನ್ನು ನೀಡಿದರು.

ಕರ್ನಾಟಕದ ಮೊದಲ ಮುಖ್ಯಮಂತ್ರಿಯಾಗಿ ಅವರು ಮಾಡಿದ ಇತರ ಸಾಧನೆಗಳಲ್ಲಿ ಆಯ್ದವನ್ನು ಹೀಗೆ ಪಟ್ಟಿಮಾಡಬಹುದು: ಭಾರಿ ಪ್ರಮಾಣದ ಕುದುರೆ ಮುಖ ಅದಿರು ಯೋಜನೆ, ಕೇಂದ್ರದ ನೆರವು ಸಿಕ್ಕದೆ ವಿಫಲಗೊಂಡ ಸಣ್ಣ ಕಾರು ನಿರ್ಮಾಣ ಯೋಜನೆ, ಟಿಬೆಟನ್ ನಿರಾಶ್ರಿತರಿಗೆ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ಹಾಗೂ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕುಗಳಲ್ಲಿ ಪುನರ್ವಸತಿಗಾಗಿ ನೀಡಿದ ಭೂಮಿ. ಪಟ್ಟಿಯನ್ನು ಇನ್ನೂ ಬೆಳೆಸಬಹುದಾದರೂ, ಮೊದಲ ಮುಖ್ಯಮಂತ್ರಿಯಾಗಿ ಹಾಗೂ ಆಧುನಿಕ ರಾಜ್ಯದ ರೂವಾರಿಯಾಗಿ ಅವರ ಅಮೋಘ ಸಾಧನೆಯ ಸಕೃದ್ದರ್ಶನಕ್ಕೆ ಇಷ್ಟು ಸಾಕು.

ಒಟ್ಟಾರೆ, ಮುಖ್ಯಮಂತ್ರಿಯಾಗಿ ಅವರು ಮಾಡಿದ ಸಾಧನೆಗಳ ಬಗೆಗಿನ ಯಾವುದೇ ವಸ್ತುನಿಷ್ಠ ಮೌಲ್ಯಮಾಪನವೂ ಕರ್ನಾಟಕವು ಕಂಡ ಅತ್ಯಂತ ಶ್ರೇಷ್ಠ ಮುಖ್ಯಮಂತ್ರಿ ಎಂಬುದನ್ನು ಮಾತ್ರವಲ್ಲದೆ, ಕರ್ನಾಟಕದ ಮೂಲಕ ಭಾರತ ಕಂಡ ಶ್ರೇಷ್ಠ ವ್ಯಕ್ತಿ ಎಂಬುದನ್ನೂ ಒಪ್ಪಿಕೊಳ್ಳುತ್ತದೆ.

*

೬

ಕಾಂಗ್ರೆಸ್ ವಿಭಜನೆ ಮತ್ತು ಆನಂತರ

ಆಧುನಿಕ ಭಾರತದ ರಾಜಕೀಯ ಇತಿಹಾಸದಲ್ಲಿನ, ಅದರಲ್ಲಿಯೂ ವಸಾಹತೋತ್ತರ ಕಾಲದ, ಕಾಂಗ್ರೆಸ್ ಇಬ್ಭಾಗದಲ್ಲಿನ ಕೇಂದ್ರ ಪಾತ್ರದ ಬಗ್ಗೆ ಯಾವುದೇ ವಿವಾದವಿರಲು ಸಾಧ್ಯವಿಲ್ಲ, ರಾಜಕೀಯ ಸಂರಚನೆಯಲ್ಲಿ ಮತ್ತು ಬ್ರಿಟಿಷ್ ನಿಯಂತ್ರಣದ ಆರಂಭದಿಂದಲೂ ಆಧುನಿಕ ಭಾರತದಲ್ಲಿ ಕ್ರಿಯಾಶೀಲವಾಗಿದ್ದ ಆಳವಾದ ಸಮಾಜೋ-ಆರ್ಥಿಕ ಹಾಗೂ ಸಾಂಸ್ಕೃತಿಕ ಪ್ರಕ್ರಿಯೆಗಳೊಡನೆ ಅದು ಹೊಂದಿದ್ದ ಸಂಬಂಧ ಇವುಗಳ ಸ್ವರೂಪವನ್ನು ಗುರುತಿಸುವುದು ಕಷ್ಟಕರವಾದ ಸಮಸ್ಯೆ. ಆದರೆ, ನಾಗರಿಕ ಸಮಾಜಗಳು ಆಳವೂ ಕೆಲವೇಳೆ ಪರಿಹರಿಸಲಾಗದ್ದೂ ಆದ ಬಿಕ್ಕಟ್ಟುಗಳಲ್ಲಿ ಸಿಲುಕಿಕೊಂಡ ಕಾರಣ ಯಾವುದೇ ಬಗೆಯ ಸ್ವಸಾಮರ್ಥ್ಯವನ್ನು ಗಳಿಸಲಾರದೆ ಹೋಗಿ, ರಾಜಕಾರಣವು ನಾಗರಿಕ ಸಮಾಜದ ಹತೋಟಿಗೊಳಪಡದ ಬಹುತೇಕ ಸ್ವಾಯತ್ತವೂ ಅಧಿಕಾರ ಕೇಂದ್ರಿತವೂ ಆಗಿಹೋಗಿರುವ ವಸಾಹತೋತ್ತರ ದೇಶಗಳಲ್ಲಿ, ಆಧುನಿಕ ಉದಾರ, ಕೈಗಾರಿಕೀಕೃತ, ಬಂಡವಾಳಶಾಹಿ ವ್ಯವಸ್ಥೆಯ ಪಶ್ಚಿಮದ ದೇಶಗಳಲ್ಲಿನಂತೆ, ಬದಲಾಗುವ ಸಂಭವವೇ ಹೆಚ್ಚು. ಅದರ ಕಾರಣವೇ ವಸಾಹತು ಕಾಲದ ಮತ್ತು ವಸಾಹತೋತ್ತರ ಕಾಲದ ಭಾರತದ ರಾಜಕೀಯ ಪ್ರಕ್ರಿಯೆಗಳು ಉದಾರ ಬಂಡವಾಳಶಾಹಿ ಪಶ್ಚಿಮದ ದೇಶಗಳಲ್ಲಿರುವಂತೆ ಪರಿಮಿತವಾದ ಸಂರಚನಾತ್ಮಕ ಹಂತಕ್ಕಿಂತ ಬಹು ಆಳವಾದ

ಪ್ರಾಮುಖ್ಯವನ್ನು ಗಳಿಸಿಕೊಳ್ಳುವುದು. ಹೀಗಾಗಿ, ಈ ಪರಿಪ್ರೇಕ್ಷ್ಯದಲ್ಲಿಟ್ಟು ನೋಡಿದಾಗ, ೧೯೬೯ರ ಕಾಂಗ್ರೆಸ್ ಇಬ್ಭಾಗವನ್ನು ರಾಜಕೀಯ ಘಟನೆಗಿಂತ ಮಿಗಿಲಾದುದೆಂದು ಸಮರ್ಥಿಸುವುದು ಸಾಧ್ಯವಾಗುತ್ತದೆ. ಆ ಸಂಕೀರ್ಣ ಐತಿಹಾಸಿಕ ನಾಟಕದಲ್ಲಿ ನಿಜಲಿಂಗಪ್ಪ ನವರು ನಾಯಕನಾಗಿ ರೂಪುಗೊಳ್ಳಲು ಅನಿರೀಕ್ಷಿತ ಐತಿಹಾಸಿಕ ಸಂದರ್ಭವೇ ಕಾರಣ. ಆದರೆ ಅದು ದಿಢೀರನೆ ಸಂಭವಿಸಿದುದೆಂದು ಭಾವಿಸದೆ, ಸಂಬಂಧಿಸಿದ ಐತಿಹಾಸಿಕ ಬೆಳವಣಿಗೆಳ ಫಲಿತವಾದ ಸ್ಫೋಟಕ್ರಿಯೆ ಎಂದು ತಿಳಿಯಬೇಕು. ಹೀಗಾಗಿ, ಇದಕ್ಕೆ ಸಂಬಂಧಪಟ್ಟ ಬೆಳವಣಿಗೆಗಳ ಸ್ಥೂಲ ನೋಟವನ್ನು ನೀಡುವುದು ಅನಿವಾರ್ಯ ವಾಗುತ್ತದೆ.

ಇಂದಿರಾ ಗಾಂಧಿ ಮತ್ತು ನಿಜಲಿಂಗಪ್ಪ ಎಂಬ ಇಬ್ಬರು ವ್ಯಕ್ತಿಗಳಿಗೆ ಸಂಬಂಧಿಸಿದ ಗಟ್ಟಿಯಾದ ವೈಯಕ್ತಿಕ ಸ್ವರೂಪವಿತ್ತು ಎಂಬುದು ನಿಜವಾದರೂ, ವೈಯಕ್ತಿಕ ನಡವಳಿಕೆ ಗಳನ್ನು ವಿಸ್ತಾರವೂ ಆಳವೂ ಆದ ವ್ಯಕ್ತ್ಯೇತರ ಶಕ್ತಿಗಳ ಐತಿಹಾಸಿಕ ಸನ್ನಿವೇಶದಲ್ಲಿಟ್ಟು ಪರಿಶೀಲಿಸಬೇಕು. ಮೇಲಾಗಿ, ಇದು ಪೀಳಿಗೆಗಳ ನಡುವಣ ಸಂಘರ್ಷದ ವ್ಯಕ್ತರೂಪ ವಾಗಿತ್ತು. ೧೯೬೦ರ ಹೊತ್ತಿಗೆ, ೧೯೪೭ರ ನಂತರ ವಸಾಹತು ಕೊನೆಗೊಂಡ ಬಳಿಕ ಹುಟ್ಟಿದವರು ರಾಷ್ಟ್ರೀಯತೆ ಮತ್ತು ಆದರ್ಶಗಳಿದ್ದ ಗಾಂಧೀ ಸಿದ್ಧಾಂತ ಮತ್ತು ಅನುಷ್ಠಾನ ಗಳಿಲ್ಲದ ಪರಿಸರದಲ್ಲಿ ಬೆಳೆದವರಾಗಿ ತಮ್ಮ ಸಾಮರ್ಥ್ಯ ಪ್ರದರ್ಶನ ಮಾಡುವ ಸನ್ನಿವೇಶ ನಿರ್ಮಾಣಗೊಂಡಿತ್ತು. ಏನೇ ಆಗಲಿ, ಬ್ರಿಟಿಷರ ವಿರುದ್ಧ ಗಾಂಧೀಜಿ ಜನರಲ್ಲಿ ತುಂಬಿದ್ದ ಉನ್ನತ ಆದರ್ಶಗಳಾದ ಸ್ವಾರ್ಥತ್ಯಾಗ ಮತ್ತು ರಾಷ್ಟ್ರೀಯ ಬದ್ಧತೆಗಳ ಪರಿಸರವು ಮಾಯವಾಗಿ, ಆ ಆದರ್ಶಗಳು ೧೯೪೭ರ ನಂತರ ಪೀಳಿಗೆಗಳವರಿಗೆ, ರಶ್ದಿ ಮಾತಿನಲ್ಲಿ ಹೇಳಬೇಕೆಂದರೆ ಮಧ್ಯರಾತ್ರಿಯ ಮಕ್ಕಳಿಗೆ, ಕಾಣಿಸುತ್ತಿರಲಿಲ್ಲ. ಇದಕ್ಕೂ ಮಿಗಿಲಾಗಿದ್ದುದು ಭ್ರಮನಿರಸನ ಮತ್ತು ಸಿನಿಕತನಗಳು. ಹಿಂದಿನ ಗಾಂಧೀ ಕಾಲದ ನೈತಿಕ ಆದರ್ಶದ ನಾಯಕರುಗಳು ಅಧಿಕಾರದ ಮತ್ತಿನಲ್ಲಿ ಅಧಿಕಾರದಾಹಿ ರಾಜಕಾರಣಿಗಳಾಗಿ ಪರಿವರ್ತಿತ ರಾಗಿದ್ದರು; ಕಾಂಗ್ರೆಸ್ ಪಕ್ಷವೇ ರಾಷ್ಟ್ರೀಯ ಮನೋಭಾವವನ್ನು ಉಕ್ಕಿಸುವ ಪಕ್ಷವಾಗಿ ಉಳಿಯದೆ ಸಂಪೂರ್ಣ ಬದಲಾಗಿ ಹೊಸ ಅವತಾರ ತಾಳಿತ್ತು. ಪಟೇಲ್, ನೆಹರೂ ಅವರಂತಹ ಮಹನೀಯರುಗಳೇ, ಸ್ವಾತಂತ್ರ್ಯ ಹೋರಾಟಗಾರರಾಗಿ ಎಷ್ಟೇ ದೊಡ್ಡವ ರಾಗಿದ್ದಿರಲಿ, ತಾರ್ಕಿಕವಾಗಿ ಹಾಗೂ ಕಾನೂನುಬದ್ಧವಾಗಿಯೇ ಅಧಿಕಾರ ರಾಜಕಾರಣ ದಲ್ಲಿ ಸಿಲುಕಿಕೊಂಡಿದ್ದರು. ಆದರೆ ಅವರ ವಿಷಯದಲ್ಲಾದರೆ, ತಾವು ಬೆಳೆದು ಬಂದಿದ್ದ ಗಾಂಧೀಜಿಯ ಪ್ರಭಾವ ಅವರ ಮೇಲೆ ತೀವ್ರವಾಗಿದ್ದು ಅಧಿಕಾರದಾಹಿ ಪಶುಗಳಾಗಲು ಅವಕಾಶ ಕೊಟ್ಟಿರಲಿಲ್ಲ. ಈ ಆದರ್ಶಪತನವನ್ನು ಟೀಕಿಸುವ ಮೊದಲು, ಅದೊಂದು ಸಹ ಐತಿಹಾಸಿಕ ಪ್ರಕ್ರಿಯೆಯೆಂಬುದನ್ನು ಗಮನಿಸಬೇಕು. ಹೀಗೆ ನೋಡಿದಾಗ,

ಗಾಂಧೀಜಿಯ ಮಾಂತ್ರಿಕ ಯುಗದಿಂದ ಉಳಿದು ಬಂದಿದ್ದ ನಿಜಲಿಂಗಪ್ಪನವರಂತಹವರು, ಉನ್ನತ ಮಾನವತಾವಾದಿಗಳಾಗಿ, ಉದಾರ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಕಾನೂನುಬದ್ಧ ಸಾಂಸ್ಥಿಕ ಪರಿಧಿಯಲ್ಲಿ ಆದರ್ಶ ಮತ್ತು ವಾಸ್ತವಗಳ ನಡುವಣ ಸಮತೋಲನಕ್ಕಾಗಿ ಹೆಣಗುವ ಮಾನವೀಯ ನಡವಳಿಕೆಯಲ್ಲಿ ನಿರತರಾಗಿದ್ದರು. ಆದರೆ ಕೆಲವರು, ಈ ಪೀಳಿಗೆಯ ಬಹುತೇಕ ಮಂದಿ ಎನ್ನೋಣ, ಈ ಸಮತೋಲನ ಪ್ರಕ್ರಿಯೆಯಲ್ಲಿ ತಾವೇ ಅಧಿಕಾರದ ಬಲೆಯಲ್ಲಿ ಸಿಲುಕಿಕೊಂಡು ಗಾಂಧೀಜಿಯ ಆದರ್ಶವಾದವನ್ನು ಸಂಪೂರ್ಣವಾಗಿ ಗಾಳಿಗೆ ತೂರಿದರು. ಒಟ್ಟಿನಲ್ಲಿ, ಕನಿಷ್ಠ ಪಕ್ಷ ಭಾಗಶಃ, ಸಿಂಡಿಕೇಟ್ ಮತ್ತದರ ವಿರೋಧಿ ಬಣದವರ ನಡುವಣ ಈ ಸಂಘರ್ಷವೂ ಪೀಳಿಗೆಗಳ ನಡುವಣ ಸಂಘರ್ಷವೇ ಆಗಿತ್ತು. ಇತಿಹಾಸದ ವ್ಯಂಗ್ಯವೆಂದರೆ, ಗಾಂಧೀಜಿ ಆದರ್ಶಗಳನ್ನು ಗಾಳಿಗೆ ತೂರಿದ್ದ ಗಾಂಧೀ ಕಾಲದ ಪೀಳಿಗೆಯ ವಿರುದ್ಧ ಗಾಂಧೀಜಿಯೋತ್ತರ ಪೀಳಿಗೆ ವಿರೋಧಿಸಿದ್ದು! ಹೀಗಾಗಿ, ವಸಾಹತೋತ್ತರ ದೇಶವೊಂದು ಆದರ್ಶ ಮತ್ತು ವಾಸ್ತವಗಳ ನಡುವೆ ಒಂದು ನ್ಯಾಯೋಚಿತ ಸಮತೋಲನಕ್ಕಾಗಿ ನಡೆಯುವ ಪ್ರಕ್ರಿಯೆಯ ಭಾಗವಾಗಿ ಈ ಇಬ್ಭಾಗವನ್ನು ವ್ಯಾಪಕ ಐತಿಹಾಸಿಕ ಪರಿಪ್ರೇಕ್ಷ್ಯದಿಂದ ನೋಡಬೇಕೆ ವಿನಾ ಬೇರೆ ಅಲ್ಲ. ಹೀಗಾಗಿ, ಈ ಪ್ರಕ್ರಿಯೆಯಲ್ಲಿ ಲೋಲಕವು ಒಂದು ತುದಿಯಿಂದ ಮತ್ತೊಂದು ತುದಿಗೆ ಹೋಗಿ, ಅಂದರೆ ಆದರ್ಶದಿಂದ ವಾಸ್ತವಕ್ಕೆ, ಮತ್ತೆ ಆದರ್ಶದೆಡೆಗೆ, ಮರಳಿದ ಪರಿಯನ್ನು ನೋಡಿ ಅಚ್ಚರಿಪಡಬೇಕಾಗಿಲ್ಲ! ಈ ಐತಿಹಾಸಿಕ ಒಳನೋಟವನ್ನು ಗ್ರಹಿಸಬೇಕೇ ವಿನಾ, ತನ್ನ ಇಷ್ಟಾನಿಷ್ಟಗಳಿಗೆ ಅನುಗುಣವಾಗಿ ಇಂದಿರಾ ಗಾಂಧಿಯವರನ್ನೊ ಸಿಂಡಿಕೇಟನ್ನೊ ಟೀಕಿಸುವ ಬಾಯಿಚಪಲದಿಂದಲ್ಲ. ಈ ಎರಡರ ಬಗ್ಗೆ ನಮಗೆ ಸ್ಪಷ್ಟ ನಿಲವಿರಬೇಕೆಂಬುದು ನಿಜವಾದರೂ, ಅದನ್ನು ವ್ಯಾಪಕ ಐತಿಹಾಸಿಕ ಪರಿಪ್ರೇಕ್ಷ್ಯದಲ್ಲಿಟ್ಟು ಹರಿತಗೊಳಿಸಿಕೊಳ್ಳಬೇಕು. ಹಾಗಾದಾಗ ಮಾತ್ರವೇ ಈ ಮಹಾನಾಟಕದಲ್ಲಿ ಭಾಗಿಗಳಾದ ಪಾತ್ರಗಳಿಗೆ ಕನಿಷ್ಠ ಐತಿಹಾಸಿಕ ನ್ಯಾಯವನ್ನೊದಗಿಸುವುದು ಸಾಧ್ಯವಾದೀತು.

ಈಗ ನಾವು ಗಟ್ಟಿ ಐತಿಹಾಸಿಕ ಬೆಳವಣಿಗೆಗಳ ಕಡೆ ಗಮನ ಹರಿಸಿ, ಮೇಲೆ ನಿರೂಪಿತವಾದ ತಾತ್ವಿಕ ಹಿನ್ನೆಲೆಯಲ್ಲಿ ಅದನ್ನು ವಿಶ್ಲೇಷಿಸುವ ಪ್ರಯತ್ನ ಮಾಡೋಣ. ನಿಜಲಿಂಗಪ್ಪನವರು ಯಾವಾಗಲೂ ಸ್ಥಳೀಯ ಜನತೆ ಮತ್ತದರ ಒಳಿತಿಗಾಗಿ ಬದ್ಧವಾಗಿದ್ದ ಒಬ್ಬ ದೃಢ ಪ್ರಾದೇಶಿಕ ನಾಯಕರಾಗಿದ್ದರೂ, ಅವರು ದೇಶದ ರಾಜಕೀಯ ಬದುಕು ಹಾಗೂ ನಾಯಕರುಗಳೊಡನೆ ಸದಾ ಕಾಲ ಸಾಕಷ್ಟು ಸಂಪರ್ಕವನ್ನು ಹೊಂದಿದ್ದವರು. ಅವರು ಸಂವಿಧಾನರಚನಾ ಸಭೆಯ ಸದಸ್ಯರಾಗಿದ್ದವರು, ಸಂಸತ್ ಸದಸ್ಯರಾಗಿದ್ದವರು, ಕೆಲವರು ಹಿರಿಯ ನಾಯಕರುಗಳೊಡನೆ, ಅದರಲ್ಲಿಯೂ ಸರ್ದಾರ್ ಪಟೇಲ್ ಜೊತೆ ಕ್ರಮದ್ಧವಾದ ಪತ್ರವ್ಯವಹಾರವಿಟ್ಟುಕೊಂಡು ನಿಕಟ ಸಂಪರ್ಕ ಹೊಂದಿ ಅವರ ಮಾರ್ಗ

ದರ್ಶನ ಪಡೆಯುತ್ತಿದ್ದವರು. ಆದರೆ ಅವರು ನೆಹರೂ ಜೊತೆ ಮಾತ್ರ ದೂರಸಂಪರ್ಕ ಹೊಂದಿದ್ದವರು, ನೆಹರೂ ಅವರಿಗೆ ಗ್ರಾಮೀಣ ಭಾರತದ ತಿಳಿವಳಿಕೆಯಾಗಲೀ ಅರಿವಾಗಲೀ ಇರಲಿಲ್ಲವೆಂಬ ಭಾವನೆಯುಳ್ಳವರಾಗಿ, ಪಟೇಲ್ ದೇಶದ ಮತ್ತಷ್ಟು ಉತ್ತಮ ಪ್ರಧಾನ ಮಂತ್ರಿಗಳಾಗುತ್ತಿದ್ದರು ಎಂದು ನಂಬಿದ್ದವರು. ಆದರೆ ನೆಹರೂ ಅವರ ವೈಯಕ್ತಿಕ ಗುಣಸ್ವಭಾವದ ಬಗ್ಗೆ– ಅವರ ಆಕರ್ಷಕತೆ, ಪ್ರಾಮಾಣಿಕತೆ, ಮತ್ತವರ ರಾಷ್ಟ್ರೀಯ ಮನೋಭಾವ– ಅವರಿಗೆ ಮೆಚ್ಚಿಕೆ ಗೌರವಗಳಿರಲಿಲ್ಲ ಎಂದರ್ಥವಲ್ಲ. ಈ ದೂರವನ್ನು ನೆಹರೂ ಅವರೂ ನಿಜಲಿಂಗಪ್ಪನವರೊಡನೆ ಇರಿಸಿಕೊಂಡಂತಿದ್ದದ್ದು, ದೂರವಿತ್ತೇ ಹೊರತು ಅದರಲ್ಲಿ ಕಹಿಯಿರಲಿಲ್ಲ. ಇದು ಮತ್ತು ಅವರ ಗಾಢ ಪ್ರಾದೇಶಿಕ ಬದ್ಧತೆ ನಿಜಲಿಂಗಪ್ಪನವರು ದೇಶ ರಾಜಕೀಯದಿಂದ ದೂರವಿರುವಂತೆ ಮಾಡಿದ್ದವು. ರಾಷ್ಟ್ರ ರಾಜಕಾರಣದ ಕಗ್ಗಾಡಿನಲ್ಲಿ ಅವರು ಕೈಗೊಂಡ ಮೊದಲ ಪಯಣವೆಂದರೆ, ಚೀನೀ ಆಕ್ರಮಣದಿಂದಾಗಿ ನೆಹರೂ ಅವರಲ್ಲಿ ಹತಾಶೆ ಮತ್ತು ಅನಾರೋಗ್ಯಗಳು ಕಾಣಿಸಿಕೊಂಡ ಸುಮಾರು ೧೯೬೩ ರಿಂದ ಅನೇಕ ಹಿರಿಯ ಕಾಂಗ್ರೆಸ್ಸಿಗರು ಒಂದು ಗುಂಪಾಗಿ, ಆನಂತರ ಅದು ಸಿಂಡಿಕೇಟ್ ಎಂದು ಹೆಸರು ಪಡೆಯಿತು, ನೆಹರೂ ನಂತರದ ಸಮಸ್ಯೆಗಳನ್ನು ಎದುರಿಸುವಂತಾದ ಕಾಲದಿಂದ. ಮೂಲದಲ್ಲಿ ಈ ಗುಂಪಿನಲ್ಲಿದ್ದವರೆಂದರೆ, ಅತುಲ್ಯ ಘೋಷ್, ನಿಜಲಿಂಗಪ್ಪ, ಸಂಜೀವರೆಡ್ಡಿ, ಶ್ರೀನಿವಾಸ ಮಲ್ಯ ಮತ್ತು ಕಾಮರಾಜ ನಾಡಾರ್. ಅವರೆಲ್ಲ ದಕ್ಷಿಣ ಭಾರತದ ಪುಣ್ಯಕ್ಷೇತ್ರ ತಿರುಪತಿಯಲ್ಲಿ, ಮೇಲುನೋಟಕ್ಕೆ ವೆಂಕಟೇಶ್ವರನ ದರ್ಶನಕ್ಕೆಂದಾದರೂ, ನೆಹರೂ ಅವರ ಹದಗೆಡುತ್ತಿರುವ ಆರೋಗ್ಯದ ಹಿನ್ನೆಲೆಯಲ್ಲಿ ಉದ್ಭವಿಸಬಹುದಾದ ಅನಿಶ್ಚಿತತೆಯ ಬಗ್ಗೆ ಮತ್ತು ದೇಶದ ಭವಿಷ್ಯದ ಬಗ್ಗೆ ಚರ್ಚಿಸಲು, ರಹಸ್ಯವಾಗಿ ಸೇರಿದ್ದರು. ಅಲ್ಲದೆ, ಇತ್ತೀಚೆಗೆ ಫರೂಕಾಬಾದ್, ಆಮ್ರೋಹ ಮತ್ತು ರಾಜಕೋಟೆಗಳಲ್ಲಿ ನಡೆದ ಸಂಸತ್ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಒಳ್ಳೆಯ ಸಾಧನೆ ಮಾಡಿರಲಿಲ್ಲ. ಮೊರಾರ್ಜಿ ರೂಪಿಸಿದ್ದ ಚಿನ್ನ ನಿಯಂತ್ರಣ ಮತ್ತು ಕಡ್ಡಾಯ ಠೇವಣಾತಿ ಯೋಜನೆಗಳು ಪಕ್ಷ ಮತ್ತು ಸರ್ಕಾರಗಳು ಜನಪ್ರಿಯತೆ ಕಳೆದುಕೊಳ್ಳುವಂತೆ ಮಾಡಿದ್ದುವು. ಅವರ ತಂತ್ರವೆಂದರೆ ತಕ್ಷಣವೇ ಪಕ್ಷವನ್ನು ವಶಕ್ಕೆ ತೆಗೆದುಕೊಂಡು ಅದನ್ನು ತಮಗೆ ತೋಚಿದ ಸರಿದಾರಿಯಲ್ಲಿ ಹರಿಯಬಿಡುವುದು. ಅವರ ಮುಂದಿದ್ದ ಜರೂರು ಸಮಸ್ಯೆಯೆಂದರೆ ಕಾಂಗ್ರೆಸ್ ಪಕ್ಷಕ್ಕೆ ಆದಷ್ಟು ಬೇಗ ಒಬ್ಬ ಹೊಸ ಸಮರ್ಥ ಅಧ್ಯಕ್ಷರನ್ನು ಹುಡುಕುವುದು: ನೆಹರೂ ಅವರ ಆರೋಗ್ಯ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಯಾರೇ ಪಕ್ಷದ ಅಧ್ಯಕ್ಷರಾಗಲೀ ಸನಿಹ ಭವಿಷ್ಯದಲ್ಲಿ ಉದ್ಭವಿಸಬಹುದಾದ ಉತ್ತರಾಧಿಕಾರಿಯ ಆಯ್ಕೆಯಲ್ಲಿ ಪ್ರಧಾನ ಪಾತ್ರ ವಹಿಸುವವನಾಗಿರಬೇಕು ಎಂಬ ಬಗ್ಗೆ ಅವರು ಆಲೋಚಿಸಿದರು. ನೆಹರೂ ಅವರಿಗೇ ಒಪ್ಪಿತವಾಗಿದ್ದ

ಲಾಲ್ ಬಹಾದ್ದೂರ್ ಶಾಸ್ತ್ರಿಯವರು ಇದಕ್ಕೆ ಸೂಕ್ತ ವ್ಯಕ್ತಿ ಎಂದವರು ತೀರ್ಮಾನಿಸಿದರು. ಮೊರಾರ್ಜಿ ಅವರು ಹಟವಾದಿ, ರಾಜಿಗೆ ಒಪ್ಪುವವರಲ್ಲ ಎಂಬ ಕಾರಣಕ್ಕೆ ಅವರು ಸೂಕ್ತರಾಗಿರಲಿಲ್ಲ. ಶಾಸ್ತ್ರಿಯವರು ಈ ಆಹ್ವಾನಕ್ಕೆ ಒಪ್ಪಿಗೆ ನೀಡದಿದ್ದರೆ ಮತ್ತೊಬ್ಬರನ್ನು ತರಲು ತಯಾರಾಗಿರಲು ನಿಜಲಿಂಗಪ್ಪನವರಿಗೆ ಸೂಚಿಸಲಾಯಿತು. ಶಾಸ್ತ್ರಿಯವರಿಗೆ ಪರ್ಯಾಯವಾಗಿರಲು ಅವರೆಲ್ಲ ಕಾಮರಾಜರ ಮನವೊಲಿಸಿದರು. ಪಕ್ಷವು ಸಿಂಡಿಕೇಟ್‌ನ ವಶದಲ್ಲಿರುವಂತೆ ಮಾಡಲು ಇದು ಅತ್ಯಂತ ಸೂಕ್ತ ವ್ಯವಸ್ಥೆ ಎಂದವರು ಭಾವಿಸಿದರು. ಇಂದಿರಾ ಗಾಂಧಿಯವರನ್ನು ದೂರವಿಡಲು ತಾವು ಮೊರಾರ್ಜಿಯವರನ್ನು ದೂರವಿರಿಸಿರುವುದಾಗಿ ವಾದಿಸಬೇಕಾಗಿತ್ತು. ಆದರೆ ಶಾಸ್ತ್ರಿಯವರ ವಿರುದ್ಧ ಸ್ಪರ್ಧಿಸುವುದಾಗಿ ಮೊರಾರ್ಜಿ ಹೇಳಿದರು. ಮೊರಾರ್ಜಿ ಅವರನ್ನು ಹಿಂದೆಗೆಯುವಂತೆ ಮಾಡಲು ಅವರು ನೆಹರೂ ಅವರಿಗೆ ಒಪ್ಪಿತವಾದವರಲ್ಲ ಎಂಬ ವದಂತಿಯನ್ನು ಹಬ್ಬಿಸಿದರು! ನೆಹರೂ ಶಾಸ್ತ್ರಿಯವರ ಹೆಸರಿಗೆ ವಿರುದ್ಧವಾಗಿರಲಿಲ್ಲ, ಆದರೆ ಕಾಮರಾಜರೇ ಅಧ್ಯಕ್ಷ ಹುದ್ದೆಯ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕೆಂದು ಸೂಚಿಸಿದರು. ತಮಗೆ ಇಷ್ಟವಾಗದಿದ್ದವರನ್ನು ಅಧಿಕಾರದಿಂದ ದೂರವಿರಿಸುವ ತಂತ್ರವಾಗಿ ಕಾಮರಾಜರನ್ನು ಬಳಸಿಕೊಂಡು ಕಾಮರಾಜ್ ಸೂತ್ರವನ್ನು ರೂಪಿಸಿದ್ದವರು ನೆಹರೂ ಅವರೇ. ತಿರುಪತಿಯಲ್ಲಿ ಸೇರಿದ್ದವರ ಹೊರತಾಗಿ ಸಿಂಡಿಕೇಟ್‌ನಲ್ಲಿದ್ದ ಇತರ ಸದಸ್ಯರೆಂದರೆ ಎಸ್.ಕೆ. ಪಾಟೀಲ್ ಮತ್ತು ಬಿಜು ಪಟ್ನಾಯಕ್. ಆದರೆ ಅದೊಂದು ಸುಸಂಬದ್ಧ ಘಟಕವಾಗಿರದೆ, ಪ್ರಮುಖ ಗುಂಪಿನಿಂದ ಹೊರತಾಗಿ ಅದರ ಎಲ್ಲೆಗಳು ನವ್ಯತೆಯಿಂದ ಕೂಡಿದ್ದವು.

ನೆಹರೂ ಹಠಾತ್ತಾಗಿ ತೀರಿಕೊಂಡು ಪಕ್ಷದ ಸಹೋದ್ಯೋಗಿಗಳಲ್ಲಿ ದಿಗ್ಭ್ರಮೆ ಮೂಡಿದಾಗ, ಮತ್ತೆ ಕಾರ್ಯಶೀಲವಾದುದು ಸಿಂಡಿಕೇಟ್, ಅದು ಉತ್ತರಾಧಿಕಾರಿ ನಾಟಕದಲ್ಲಿ ೧೯೬೪ ರಲ್ಲಿ ಎರಡನೆಯ ಬಾರಿ ಪ್ರಮುಖ ಪಾತ್ರ ವಹಿಸುವಂತಾಯಿತು. ತಾತ್ಕಾಲಿಕ ಪ್ರಧಾನಿಯಾಗಿ ತಕ್ಷಣವೇ ಜಿ.ಎಲ್. ನಂದಾ ಪ್ರಮಾಣ ವಚನ ಸ್ವೀಕರಿಸಿದರು. ಈಗಿನ ಪ್ರಶ್ನೆ ನೆಹರೂ ಬಳಿಕ ಯಾರು ಎಂಬುದು. ಶಾಸ್ತ್ರಿ ಮತ್ತು ಮೊರಾರ್ಜಿಯವರ ನಡುವೆ ಚೆಂಡು ಹೊಯ್ದಾಡಿತು! ಕೊನೆಗೆ, ಶಾಸ್ತ್ರಿ ಗೆದ್ದರು, ಅದಕ್ಕೆ ಕಾರಣ ವ್ಯವಹರಿಸಲು ಅವರು ಸಿಂಡಿಕೇಟ್‌ಗೆ ಹಟವಾದಿ ಮೊರಾರ್ಜಿಗಿಂತ ಸುಲಭರು ಎಂಬುದು. ಶಾಸ್ತ್ರಿಯವರ ಸಂಪುಟ ಸೇರಿದ ಮೊರಾರ್ಜಿಯವರಿಗೆ ಎರಡನೆಯ ಸ್ಥಾನವನ್ನೂ ನೀಡಲಿಲ್ಲ, ಅದು ನಂದಾ ಪಾಲಾಯಿತು. ಶಾಸ್ತ್ರಿ ಅವರು ಇಂದಿರಾ ಗಾಂಧಿಯವರನ್ನೂ ಸಂಪುಟದಲ್ಲಿ ಸೇರಿಸಿಕೊಂಡರು, ಆದರೆ ಅವರ ಅಪೇಕ್ಷೆಯ ಮೇರೆಗೇ ಅಷ್ಟೇನೂ ಪ್ರಮುಖವಲ್ಲದ ವಾರ್ತಾ ಮತ್ತು ಪ್ರಸಾರ ಖಾತೆಯನ್ನು ಅವರಿಗೆ ನೀಡಲಾಯಿತು. ಶಾಸ್ತ್ರಿಯವರು ದೂರದ ತಾಷ್ಕೆಂಟ್‌ನಲ್ಲಿ ಇದ್ದಕ್ಕಿದ್ದಂತೆ ನಿಧನರಾದ್ದರಿಂದ ಮೂರನೆಯ ಬಾರಿಗೆ ಉತ್ತರಾಧಿ

ಶ್ರೀ ಕಾಮರಾಜ್ ಮತ್ತು ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿ ಜೊತೆಯಲ್ಲಿ ಎಸ್ಸೆನ್

ಕಾರಿಯ ನಾಟಕ ನಡೆಯಬೇಕಾಯಿತು. ಮೊರಾರ್ಜಿಯವರ ಬದಲು ಇಂದಿರಾ ಗಾಂಧಿಯವರನ್ನು ಆಯ್ಕೆ ಮಾಡುವಲ್ಲಿ ಸಿಂಡಿಕೇಟ್ ಮತ್ತೆ ಮಹತ್ವದ ಪಾತ್ರ ವಹಿಸಿತು ಅದಕ್ಕೂ ಕಾರಣ ಆಕೆಯನ್ನು ನಿಭಾಯಿಸುವುದು ಸುಲಭ ಎಂಬುದೇ. ಸಿಂಡಿಕೇಟ್ ಸದಸ್ಯತ್ವದಿಂದಾಗಿ ನಿಜಲಿಂಗಪ್ಪನವರು ಆಗಾಗಲೇ ದೂರದ ದೆಹಲಿಗೆ ಸೆಳೆಯಲ್ಪಟ್ಟು ಬೆಂಗಳೂರಿನಿಂದ ದೂರಾಗಿದ್ದರು! ಈ ಹರಿವು ಅವರ ಅರಿವಿನಲ್ಲೇ ಬಂದಿರಲಿಲ್ಲ. ಮೊದ ಮೊದಲು ತುಂಬ ಹಿಂದೆ ಮುಂದೆ ನೋಡಿದರೂ, ರಾಜ್ಯದಿಂದ ಅವರ ಬೇರುಗಳು ಹೊರಚಾಚಿಕೊಂಡಿದ್ದು ದೆಹಲಿಯ ತಂತ್ರಗಾರಿಕೆಯ ಜಲದಲ್ಲಿ ತೇಲಾಡುತ್ತಿತ್ತು! ವೀರೇಂದ್ರ ಪಾಟೀಲ್, ರಾಮಕೃಷ್ಣ ಹೆಗಡೆ ಮತ್ತು ಗುರುಪಾದ ಸ್ವಾಮಿಯವರಂತಹ ಅವರ ಸ್ನೇಹಿತರು ಮೊದಲು ಸಾಂಗ್ಲಿಯಲ್ಲಿ ನಡೆಯಲು ತೀರ್ಮಾನವಾಗಿ ಆನಂತರ ಬದಲಾವಣೆಗೊಂಡು ಹೈದರಾಬಾದ್‌ನಲ್ಲಿ ನಡೆದ ಕಾಂಗ್ರೆಸ್‌ನ ೭೧ನೇ ಸಮಾವೇಶದ ಅಧ್ಯಕ್ಷತೆಯನ್ನು ಒಪ್ಪಬೇಡಿರೆಂದು ಸಲಹೆಯಿತ್ತರು. ಈ ಸ್ಥಳ ಬದಲಾವಣೆಗೆ ಕಾರಣ ವಿಧ್ವಂಸಕ ರೂಪದ ಕೊಯ್ನಾ ಭೂಕಂಪದಿಂದಾಗಿ ಆ ಸ್ಥಳ ಜನದೂರವಾದುದು. ಈಗ ನಾವು ನಿಜಲಿಂಗಪ್ಪನವರ ಅಧ್ಯಕ್ಷ ಭಾಷಣದ ಕಡೆಗೆ ಗಮನ ಕೊಡೋಣ. ಅದರಲ್ಲಿ ದೇಶದ ರಾಜಕೀಯ ಸಮಸ್ಯೆಗಳ ಕುರಿತು ಅವರು ನಡೆಸಿದ್ದ ಚಿಂತನೆ ಹಾಗೂ ಮುಂದೆ ಅವರು ದೇಶದ ರಾಜಕಾರಣದಲ್ಲಿ ವಹಿಸಲಿದ್ದ ಹೆಚ್ಚು ಮಹತ್ವದ ಪಾತ್ರದ ಬಗ್ಗೆ ಸುಳಿವು ದೊರೆಯುತ್ತದೆ. ನಿಜಲಿಂಗಪ್ಪನವರು ಅಧ್ಯಕ್ಷರಾಗುವ ಬಗ್ಗೆ ಇಂದಿರಾ ಗಾಂಧಿಯವರು ಆಸಕ್ತಿ ವಹಿಸಿದರೆಂಬುದಕ್ಕೆ ಆಧಾರಗಳಿವೆ. ಪ್ರಾಯಶಃ ಇದಕ್ಕೆ ಕಾರಣ ಸಿಂಡಿಕೇಟ್ ಯಾವ ಕಾರಣದಿಂದ ಇಂದಿರಾ ಗಾಂಧಿಯವರನ್ನು ಪ್ರಧಾನ ಮಂತ್ರಿ ಹುದ್ದೆ ಆಯ್ಕೆ ಮಾಡಿತೋ ಅದೇ, ಅಂದರೆ, ಸಾಧಿಸಬಹುದಾದ ಹತೋಟಿ ಮತ್ತು ಬೇಕಾದಂತೆ ಆಡಿಸಬಹುದು ಎಂಬುದು! ಇಂದಿರಾ ಗಾಂಧಿಯವರ ವಿಷಯದಲ್ಲಿ ಸಿಂಡಿಕೇಟ್ ಮತ್ತು ನಿಜಲಿಂಗಪ್ಪನವರು ಹೇಗೆ ಏಮಾರಿದ್ದರೋ ಅಷ್ಟೇ ಮಟ್ಟಿಗೆ ನಿಜಲಿಂಗಪ್ಪನವರ ವಿಷಯದಲ್ಲಿ ಇಂದಿರಾ ಗಾಂಧಿ ಕೂಡ ಏಮಾರಿದ್ದರು!

ನಿಜಲಿಂಗಪ್ಪನವರು ತಮ್ಮ ಭಾಷಣದ ಆರಂಭದಲ್ಲಿ, ಕಳೆದ ಇಪ್ಪತ್ತು ವರ್ಷಗಳಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಲಾಗಿದ್ದರೂ ಪಕ್ಷ ಹಾಗೂ ಸರ್ಕಾರಗಳಲ್ಲಿ ಬಹಳವಾದ ಅತೃಪ್ತಿ ಉಳಿದುಬಂದಿದೆಯೆಂದು ಹೇಳಿದರು. ಈಚಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಅನುಭವಿಸಿದ್ದ ಪರಾಜಯದ ಬಗ್ಗೆ ಅವರು ಗಮನ ಸೆಳೆದರು. ವಿಮರ್ಶಾತ್ಮಕ ಅಂತರ್ವೀಕ್ಷಣೆ ಮಾಡಿಕೊಂಡು ಆ ಮೂಲಕ ದೇಶದ ಮೂಲಭೂತ ಸಮಸ್ಯೆಗಳಾದ ಬಡತನ, ನಿರುದ್ಯೋಗ, ರೋಗರುಜಿನಗಳು ಮತ್ತು ಅನಕ್ಷರತೆಗಳನ್ನು ನಿವಾರಿಸುವ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಬೇಕೆಂದು ಕರೆ ನೀಡಿದರು. ಕಳೆದ ಎರಡು ದಶಕಗಳಿಂದಲೂ ಕಾಂಗ್ರೆಸ್

ಅಧಿಕಾರದಲ್ಲಿದ್ದುದರಿಂದ ಸಾಧನೆಗಳು ಹಾಗೂ ವೈಫಲ್ಯಗಳೆರಡೂ ಅದಕ್ಕೇ ಸೇರುತ್ತವೆ ಎಂದರು. ಸದ್ಯದಲ್ಲಿ ರಾಜಕೀಯ ಪರಿಸ್ಥಿತಿಯು ಬದಲಾವಣೆಯಾಗಿದೆ, ಅನೇಕ ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರ್ಕಾರಗಳು, ಬಹುತೇಕ ಸಂಯುಕ್ತ ರಂಗದಂತಹ ಸಂಮಿಶ್ರ ಸರ್ಕಾರಗಳ ರೂಪದಲ್ಲಿ, ಅಧಿಕಾರದ ಚುಕ್ಕಾಣಿ ಹಿಡಿದಿವೆ. ಈ ಸಮ್ಮಿಶ್ರ ಸರ್ಕಾರಗಳ ಅಲ್ಪಕಾಲೀನ ಅವಧಿಯು ಇವುಗಳು ಕಾಂಗ್ರೆಸ್‌ಗೆ ಸಮರ್ಥ ಪರ್ಯಾಯಗಳಾಗಲಾರವು ಎಂಬುದನ್ನು ತೋರಿಸಿಕೊಟ್ಟಿವೆ ಎಂದರು. ಈ ಬೆಳವಣಿಗೆಯ ಹಿಂದೆ, ಕಾರ್ಯಶೀಲವಾಗಿರುವುದು ಸ್ವಹಿತಾಸಕ್ತ ರಾಜಕಾರಣಿಗಳ ಕಾಂಗ್ರೆಸ್-ವಿರೋಧಿ ಧೋರಣೆ. ಕಾಂಗ್ರೆಸ್ಸೇತರ ಸರ್ಕಾರಗಳಿರುವ ರಾಜ್ಯಗಳಲ್ಲಿನ ಕಾನೂನು ಸುವ್ಯವಸ್ಥೆಯ ಪರಿಸ್ಥಿತಿ ಹದಗೆಟ್ಟಿದೆ. ಇದರಿಂದ ಕಾನೂನು ಮುರಿದುಬಿದ್ದು ಹಿಂಸಾಚಾರಕ್ಕೆ ಎಡಮಾಡಿಕೊಟ್ಟಿದೆ. ಇದರಿಂದ ಭಾರತದ ಸಮಗ್ರತೆಗೆ ಧಕ್ಕೆಯುಂಟಾಗುತ್ತದೆ ಎಂದರು. ಭಾಷಾ ಸಮಸ್ಯೆಯ ಬಗ್ಗೆ ಮಾತನಾಡುತ್ತ ಅವರು, ನೆಹರೂ ಕಾಲದಲ್ಲಿ ರೂಪಿತವಾದ ಧೋರಣೆಗಳಿಗನುಗುಣವಾದ ಒಂದು ಸಮತೋಲನದ ಕಾರ್ಯಕ್ರಮವನ್ನು ರೂಪಿಸುವಂತೆ ಅವರು ಹಿಂದಿ ಮತ್ತು ಹಿಂದಿಯೇತರ ವರ್ಗಗಳಿಗೆ ಕರೆ ನೀಡಿದರು. ಗಡಿವಿವಾದ, ನದಿ ನೀರಿನ ಹಂಚಿಕೆಗಳಂತಹ ಅಂತರರಾಜ್ಯ ಸಮಸ್ಯೆಗಳನ್ನು ಕೊಳುಕೊಡೆಯ ಆಧಾರದ ಮೇಲೆ ಬಗೆಹರಿಸಿಕೊಳ್ಳುವಂತೆ ಎಲ್ಲ ರಾಜ್ಯಗಳಲ್ಲಿ ಅವರು ಮನವಿ ಮಾಡಿಕೊಂಡರು. ಚೀನೀ ಆಕ್ರಮಣ, ಪಾಕಿಸ್ತಾನ ಯುದ್ಧ ಮತ್ತು ಬರಪರಿಸ್ಥಿತಿಗಳಿಂದಾಗಿ ಹಣದುಬ್ಬರ ಏರಿಕೆ ಮತ್ತು ಆಹಾರ ಕೊರತೆಗಳುಂಟಾಗಿ ದೇಶದ ಆರ್ಥಿಕ ದುಸ್ಥಿತಿಯ ಬಗ್ಗೆ ಗಮನ ಸೆಳೆದ ಅವರು ಕೃಷಿಯ ಕ್ಷೇತ್ರದಲ್ಲಿ ಸ್ವಲ್ಪ ಮಟ್ಟಿಗಿನ ಉತ್ತಮಿಕೆಯಾಗಿದೆ ಎಂದು ಅಭಿಪ್ರಾಯಪಟ್ಟರು. ಇದಕ್ಕೆ ಕಾರಣ ಹಸಿರು ಕ್ರಾಂತಿ. ಈ ಚಾಲನೆಯನ್ನು ಕೃಷಿ ಉತ್ಪಾದನೆಯನ್ನು ಮತ್ತಷ್ಟು ಹೆಚ್ಚಿಸಲು ಬಳಸಿಕೊಳ್ಳುವುದರಿಂದ ಹಳ್ಳಿಗಾಡಿನಲ್ಲಿರುವ ಸಾಮಾನ್ಯ ಜನತೆಯ ಬದುಕು ಉತ್ತಮಗೊಳ್ಳುತ್ತದೆ ಎಂದರು. ಗೊಬ್ಬರಗಳು, ನೀರು, ಉತ್ತಮ ಬಿತ್ತನೆ ಬೀಜ ಮುಂತಾದವುಗಳಿಗಾಗಿ ಕೃಷಿಕ್ಷೇತ್ರದಲ್ಲಿ ಹೆಚ್ಚಿನ ಹಣ ತೊಡಗಿಸುವಂತೆ ಕೇಳಿಕೊಂಡ ಅವರು, ಸಾಕಷ್ಟು ಹಣ ನೀಡದ ಮತ್ತೊಂದು ಕ್ಷೇತ್ರದ- ಅಂದರೆ ಬ್ಯಾಂಕುಗಳ ಸಾಲ ನೀಡಿಕೆಯ- ಕಡೆ ಗಮನ ಸೆಳೆದರು. ಆದರೆ ಬಹು ಮುಖ್ಯ ವಲಯವೆಂದರೆ ಕೃಷಿ ಅರ್ಥವ್ಯವಸ್ಥೆಯ ಜೀವದ್ರವ್ಯವಾದ ನೀರಾವರಿ. ನೀರಾವರಿ ಹಾಗೂ ಜಲನಿರ್ವಹಣೆಗೆ ಹೆಚ್ಚಿನ ಗಮನ ಕೊಡಬೇಕೆಂದರು. ಈ ಶುದ್ಧ ಆರ್ಥಿಕ ಪ್ರಯತ್ನಗಳನ್ನು ಭೂಸುಧಾರಣೆ ಮತ್ತು ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿನ ಕ್ರಾಂತಿಕಾರಕವಾದ ಸಮಾಜೋ-ರಾಜಕೀಯ ಬದಲಾವಣೆಗಳಿಂದ ಬಲಿಷ್ಠಗೊಳಿಸಬೇಕೆಂದರು. ಕೈಗಾರಿಕಾ ಕ್ಷೇತ್ರದ ಬಗ್ಗೆ ಹೇಳಬೇಕಾದರೆ, ಭಾರಿ ಕೈಗಾರಿಕೆಗಳ ಸ್ಥಾಪನೆಯ ಅಗತ್ಯವಿದೆ. ಆದರೆ ಈ 'ದೈತ್ಯತೆಯ ಹುಚ್ಚು', ಮಾರುಕಟ್ಟೆಗಿಂತ ಹೆಚ್ಚಾಗಿ ಮೂಲಭೂತ

ವಾಗಿ ಕಚ್ಚಾ ಸಾಮಗ್ರಿ ಮತ್ತು ನೀರು ಇವುಗಳ ಕೈಗಾರಿಕಾ ವಿತರಣೆ ಮತ್ತು ವಿಕೇಂದ್ರೀಕರಣ ಗಳಿಂದ, ನವ್ಯಗೊಳ್ಳಬೇಕಾಗಿದೆ ಎಂದರು. ಕಾರ್ಮಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಕಾರ್ಮಿಕರ ನ್ಯಾಯಯುತ ಬೇಡಿಕೆಗಳನ್ನು ಗೌರವಿಸಬೇಕಾಗಿದೆಯಾದರೂ, ಅದರ ಬೇಜವಾಬ್ದಾರಿತನ ಮತ್ತು ನಿಷೇಧಾತ್ಮಕ ಧೋರಣೆಗಳನ್ನು ಮಟ್ಟಹಾಕಬೇಕಾಗಿದೆ. ಸಣ್ಣ ಹಾಗೂ ಗೃಹಕೈಗಾರಿಕೆಗಳ ಕಡೆ ಹೆಚ್ಚಿನ ಆದ್ಯತೆ ನೀಡಬೇಕು, ಇದರಿಂದಾಗಿ ಎಲ್ಲ ಹಂತಗಳಲ್ಲಿಯೂ ಸಾಕಷ್ಟು ಪ್ರಮಾಣದ ಉದ್ಯೋಗಸೃಷ್ಟಿಯಾಗುತ್ತದೆ. ಸಾಮಾಜಿಕ ನ್ಯಾಯದ ಕುರಿತು, ಎಸ್‌ಸಿ ಮತ್ತು ಎಸ್‌ಟಿ ವರ್ಗಗಳ ಸ್ಥಿತಿಯ ಸುಧಾರಣೆಯ ಕಡೆಗೆ ಹೆಚ್ಚಿನ ಆಸಕ್ತಿ ತಾಳಬೇಕಾಗಿದೆ. ಇನ್ನು ವಿದೇಶಾಂಗ ನೀತಿ: ನೆಹರೂ ಅವರ ಧೋರಣೆ ಯನ್ನು ಅನುಸರಿಸಬೇಕು ಎಂದವರು ಅಭಿಪ್ರಾಯಪಟ್ಟರು. ನೆಹರೂ ಅವರಿಗೆ ಈ ಮಾತುಗಳ ಮೂಲಕ ತಮ್ಮ ಗೌರವ ಸಮರ್ಪಣೆ ಮಾಡಿದರು: "....ನಮ್ಮ ಸಂಸ್ಕೃತಿಯ ಅತ್ಯುತ್ತಮ ಮಾದರಿಯಾದ, ಜಗತ್ತಿನ ರಾಜಕಾರಣದ ಅತ್ಯಂತ ಸಮರ್ಥ ವಿದ್ವಾಂಸರಾದ ಮತ್ತು ಎಲ್ಲ ಕಾಲದ ಸರ್ವಶ್ರೇಷ್ಠ ಮುತ್ಸದ್ದಿಗಳಲ್ಲಿ ಒಬ್ಬರಾದ ಪಂಡಿತ್ ನೆಹರೂ ಅವರು ಈ ವಿಷಯದಲ್ಲಿ ನಾವು ಅನುಸರಿಬೇಕಾದ ಅಮೂಲ್ಯ ಪಾಠಗಳನ್ನು ತಿಳಿಸಿ ಹೋಗಿದ್ದಾರೆ...." ಚೀನದ ಬಗ್ಗೆ ಮಾತನಾಡುತ್ತ, ನಿಜಲಿಂಗಪ್ಪನವರು ಶಾಂತಿಪ್ರಿಯ ಚೀನೀಯರು ಹಾಗೂ ಸರ್ವಾಧಿಕಾರಿ ಚೀನೀಯರು ಇವರ ನಡುವೆ ವ್ಯತ್ಯಾಸ ಮಾಡಿ, "ಸರ್ವಾಧಿಕಾರಿ ಧೋರಣೆ ಹಾಗೂ ವಿಸ್ತರಣಾದಾಹಿಯಾದ ಕಮ್ಯುನಿಸ್ಟ್ ಪಕ್ಷದ ನಾಯಕತ್ವವು ತನ್ನ ಸ್ವಾರ್ಥಹಿತಕ್ಕಾಗಿ ಕಮ್ಯುನಿಸ್ಟ್ ಸಿದ್ಧಾಂತವನ್ನೇ ತಿರುಚುತ್ತಿದೆ" ಎಂದರು. ನ್ಯಾಯಬದ್ಧತೆ ಮತ್ತು ಸೌಹಾರ್ದತೆಗಳನ್ನಾಧರಿಸಿದ ಸಂಬಂದ ಬೆಳೆಯಬೇಕೆಂದು ಆಶಿಸಿದರು. ಪಾಕಿಸ್ತಾನಕ್ಕೆ ಸಂಬಂಧಿಸಿದಂತೆ ನಮ್ಮ ಧೋರಣೆಯೂ ಅದೇ ಮಾರ್ಗ ವನ್ನನುಸರಿಸಬೇಕೆಂದರು. ಭಾರತವು ತಟಸ್ಥ ದೇಶವಾಗಿದ್ದರೂ ಅದರೆಡೆ ಸಹಾಯ ಹಸ್ತ ಚಾಚಿರುವ ಅಮೆರಿಕ ಮತ್ತು ರಷ್ಯಾಗಳೆರಡಕ್ಕೂ ಕೃತಜ್ಞತೆಯನ್ನು ಸಲ್ಲಿಸಿದರು. ವಿದೇಶಿ ನೆರವು ಎಷ್ಟೆಂದರೂ ಅಲ್ಪವಾಗಿರುವಂಥದು, ಅಂತಿಮ ಗುರಿ ಸ್ವಸಹಾಯ ಹಾಗೂ ಸ್ವಾವಲಂಬನೆ ಎಂದರು. ಆ ಬಳಿಕ ಅವರು ಕುಟುಂಬ ಯೋಜನೆಯ ಪ್ರಾಮುಖ್ಯ ವನ್ನು ಒತ್ತಿ ಹೇಳಿದರು. ಬ್ರಿಟಿಷ್ ರಾಜ್ ಬಿಟ್ಟು ಹೋಗಿರುವ ಇಡೀ ಆಡಳಿತ ಯಂತ್ರದ ಗಂಭೀರ ಪರಾಮರ್ಶೆ ನಡೆಯಬೇಕೆಂದರು. ಅದು ನಮ್ಮ ಆದರ್ಶಗಳಾದ ಪ್ರಜಾಪ್ರಭುತ್ವ ಮತ್ತು ಕಲ್ಯಾಣ ರಾಜ್ಯ ಪರಿಕಲ್ಪನೆಗಳಿಗೆ ಅನುಗುಣವಾಗಿದೆಯೇ? ಅಲ್ಲದೆ, ಅಭಿವೃದ್ಧಿ ಯೋಜನೆಗಳಲ್ಲಿ ಜನರನ್ನು ತೊಡಗಿಸಿಕೊಳ್ಳುವ ಪ್ರಶ್ನೆಯೂ ಮುಖ್ಯವಾದುದು. ಕಾಂಗ್ರೆಸ್ ಅಂಗೀಕರಿಸಿರುವ ಮತ್ತು ಪ್ರಜಾಸತ್ತಾತ್ಮಕ ತತ್ವಗಳಾದ ವ್ಯಕ್ತಿಘನತೆ ಮತ್ತು ಸಾಮಾಜಿಕ ನ್ಯಾಯಗಳ ಮೇಲೆ ನಿಂತಿರುವ ಎಲ್ಲಕ್ಕಿಂತ ಮುಖ್ಯ ಗುರಿಯಾದ "ಪ್ರಜಾಸತ್ತಾತ್ಮಕ

ಸಮಾಜವಾದ' ಕುರಿತು ಸಮೀಕ್ಷಿಸಿದರೆ ತೀರ ನಿರಾಶೆಯುಂಟಾಗುತ್ತದೆ. ಈ ಪರಿಕಲ್ಪನೆಗಳ ಕುರಿತು ಹೆಚ್ಚಿನ ಸ್ಪಷ್ಟತೆ ಮತ್ತು ಅನುಷ್ಠಾನಗಳು ದೇಶದ ಎಲ್ಲ ಪಕ್ಷಗಳಿಂದಲೂ ನಡೆಯಬೇಕಾಗಿದೆ. ಈ ದಿಸೆಯಲ್ಲಿ ಕಾಂಗ್ರೆಸ್ ಪ್ರತಿಪಾದಿಸಿದ ಹತ್ತು ಅಂಶಗಳ ಕಾರ್ಯಕ್ರಮವು ಜನತೆಯ ಪ್ರಜ್ಞಾಪೂರ್ವಕ ಸಹಕಾರದಿಂದ ಮಾತ್ರ ಅನುಷ್ಠಾನಗೊಳ್ಳಬಹುದಾದವು. ಕಾಂಗ್ರೆಸ್‌ಗೆ ಹೆಚ್ಚಿನ ಜವಾಬ್ದಾರಿಯಿದೆ, ಏಕೆಂದರೆ ಎಲ್ಲೆಡೆಯೂ ಸಂಘಟನಾತ್ಮಕ ಬೇರುಗಳುಳ್ಳ ಮತ್ತು ಅಮೋಘ ಪರಂಪರೆಯುಳ್ಳ ಪಕ್ಷ ಅದೊಂದೇ. ಈ ಸಂದರ್ಭದಲ್ಲಿ ಅವರು ಗಾಂಧೀಜಿಯವರನ್ನು ನೆನಪಿಸಿಕೊಂಡು, ಹೀಗೆಂದರು: "ಗಾಂಧೀಜಿ ತೋರಿಸಿದ ಮಾರ್ಗಗಳಾದ ಸತ್ಯ, ಅಹಿಂಸೆಗಳನ್ನು ವೃತ್ತಿ ಮತ್ತು ನಡವಳಿಕೆಗಳಲ್ಲಿ ಅಳವಡಿಸಿಕೊಳ್ಳುವ ಮೂಲಕ ನಾವು ಕಿರಿಯ ಸಹೋದ್ಯೋಗಿಗಳು ಗಾಂಧೀಜಿಯವರನ್ನು ಪುನರ್ದರ್ಶನ ಮಾಡುವಂತೆ ಪ್ರಭಾವಿಸಬೇಕಾಗಿದೆ." ಕೇಂದ್ರ-ರಾಜ್ಯ ಸಂಬಂಧಗಳ ಕಡೆಗೆ ತಮ್ಮ ಮಾತನ್ನು ತಿರುಗಿಸಿದ ನಿಜಲಿಂಗಪ್ಪನವರು, ಈಗ ಬೇರೆ ಬೇರೆ ಪಕ್ಷಗಳು ಕೇಂದ್ರ ಹಾಗೂ ರಾಜ್ಯಗಳಲ್ಲಿ ಅಧಿಕಾರ ನಡೆಸುತ್ತಿರುವುದರಿಂದಾಗಿ ಈ ವಿಷಯಕ್ಕೆ ಹೊಸ ಅರ್ಥ ಪ್ರಾಪ್ತವಾಗಿದೆ ಎಂದು ಸರಿಯಾಗಿಯೇ ಗುರುತಿಸಿದರು. ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆ ಮತ್ತು ಸಂಪನ್ಮೂಲಗಳನ್ನು ನೀಡುವ ಮೂಲಕ ಅವುಗಳಿಗೆ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿಕೊಡಬೇಕಾದ ಕಾಲ ಸನ್ನಿಹಿತವಾಗಿದೆಯೆಂದರು. ಅಲ್ಲದೆ, ಕೇಂದ್ರವಿರೋಧಿ ಧೋರಣೆಯನ್ನು ಎಚ್ಚರಿಕೆಯಿಂದ ಗಮನಿಸಬೇಕು ಹಾಗೂ ಅದನ್ನು ರಾಜಕೀಯ ಅಸ್ತ್ರವನ್ನಾಗಿ ಮಾಡಿಕೊಳ್ಳುವುದನ್ನು ತಡೆಯಬೇಕು. ಕಾರ್ಯಯೋಗ್ಯವಾದ ಸಂಘಟನಾತ್ಮಕ ಪ್ರಜ್ಞೆಯುಳ್ಳ ವ್ಯಕ್ತಿಯಾಗಿದ್ದ ಅವರು ಕಾಂಗ್ರೆಸ್ ಅನ್ನು ಉತ್ತಮ ನಿರ್ವಹಣೆ ಮತ್ತು ಕಾರ್ಯಕಾರಿತ್ವವುಳ್ಳದಾಗಿ ಮಾಡುವ ಆಶಯ ಹೊಂದಿದ್ದರು. ಎಲ್ಲಕ್ಕಿಂತ ಮಿಗಿಲಾಗಿ, ಸಾಮಾನ್ಯ ಜನತೆಯು ವಿದ್ಯಾವಂತರಾಗಬೇಕು, ಅದರಲ್ಲೂ ಕರ್ಮ ಎಂದರೆ ವಿಧಿ ಎಂಬುದಲ್ಲ ಅದು ಸೃಜನಶೀಲ ಕಾರ್ಯತತ್ಪರತೆ ಎಂಬುದನ್ನು ಅವರಿಗೆ ತಿಳಿಸಿಕೊಡಬೇಕು. ಆನಂತರ ಯುವಜನತೆಯು ದೇಶದ ಅಭಿವೃದ್ಧಿಯಲ್ಲಿ ವಹಿಸಬೇಕಾದ ಪಾತ್ರ ಕುರಿತು ವಿಶ್ಲೇಷಿಸಿದರು. ವಿವಿಧ ಹಂತಗಳಲ್ಲಿನ ವಿಭಿನ್ನ ಸರ್ಕಾರಗಳ ನಡುವೆ ಉತ್ತಮ ಸಹಕಾರದ ಆವಶ್ಯಕತೆಯಿದೆ ಎಂದವರು ನುಡಿದರು. ಕಾಂಗ್ರೆಸ್‌ನಲ್ಲಿನ ನಂಬಿಕೆ ಮತ್ತು ಭಾರತದ ಜನತೆಯಲ್ಲಿನ ವಿಶ್ವಾಸ ಇವುಗಳ ಮೂಲಕ ಆಶಾವಾದವನ್ನು ತಮ್ಮ ಆಳವಾದ ಚಿಂತನೆಯಿಂದ ಸುಸಜ್ಜಿತವೂ ವ್ಯಾಪಕವೂ ಆದ ಭಾಷಣವನ್ನವರು ಅಭಿವ್ಯಕ್ತಿಸಿ ಕೊನೆಗೊಳಿಸಿದರು.

ಪ್ರಧಾನ ಮಂತ್ರಿಯಾಗಿ ಇಂದಿರಾ ಗಾಂಧಿ ಮತ್ತು ಕಾಂಗ್ರೆಸ್ ಅಧ್ಯಕ್ಷರಾಗಿ ನಿಜಲಿಂಗಪ್ಪ ಇವರ ನಡುವಣ ಬಾಂಧವ್ಯವು ಯಾವುದಾದರೂ ಸಮಯಕ್ಕೆ ಸಮಸ್ಯಾತ್ಮಕ

ವಾಗುವುದು ಅನಿವಾರ್ಯವಾಗಿತ್ತು. ಇದಕ್ಕೆ ಕಾರಣ ಅವರಲ್ಲಿನ ವ್ಯಕ್ತಿತ್ವಗಳ ಹಾಗೂ ಸೈದ್ಧಾಂತಿಕ ಭಿನ್ನತೆಯ ಜೊತೆಗೆ ಸಂಸದೀಯ ವ್ಯವಸ್ಥೆಯಲ್ಲಿಯೇ ಅಂತರ್ಗತವಾದ ಸಂಸತ್ತು ಮತ್ತು ಪಕ್ಷ ಈ ವಲಯಗಳ ನಡುವಣ ಬಾಂಧವ್ಯದಲ್ಲಿನ ಅಸ್ಪಷ್ಟತೆ ಮತ್ತು ಸಂಘರ್ಷಗಳು. ಈ ಸಮಸ್ಯೆಗೆ ಯಾವುದೇ ಸಂರಚನಾತ್ಮಕ ಪರಿಹಾರ ಸಾಧ್ಯವಿಲ್ಲ, ಕೇವಲ ವೈಯಕ್ತಿಕ ನೆಲೆಯ ಹೊಂದಾಣಿಕೆಗಳಿರಬಹುದು. ಅಷ್ಟೆ ಪಕ್ಷದ ಅಭ್ಯರ್ಥಿಯಾಗಿ ಆಯ್ಕೆಯಾದ ಪ್ರಧಾನ ಮಂತ್ರಿಯು ಪಕ್ಷಕ್ಕೆ ಹೊಣೆಗಾರರಾಗಿರಬೇಕೇ ಅಥವಾ ಪಕ್ಷಕ್ಕಿಂತ ದೇಶವೇ ಮುಖ್ಯ ಎಂಬ ಅವರ ಕಾಣ್ಕೆಗೆ ಇಡೀ ದೇಶವೇ ಜವಾಬುದಾರಿಕೆಯಿಂದ ಇರಬೇಕೇ ಎಂಬುದೇ ಸಮಸ್ಯೆ. ನೆಹರೂ ಅವರಿಗೂ ಪುರುಷೋತ್ತಮದಾಸ್ ಟಂಡನ್ ಅವರಿಂದಾಗಿ ಈ ಸಮಸ್ಯೆ ಎದುರಾಗಿಯೇ ಇತ್ತು. ನಿಜಲಿಂಗಪ್ಪ ಮತ್ತು ಇಂದಿರಾ ಗಾಂಧಿ ಇದಕ್ಕೆ ಹೊರತಾಗಿರಲಿಲ್ಲ. ಇದನ್ನು ವಾಸ್ತವದಲ್ಲಿಯೇ ಇರುವ ಸಹಜ ಸಮಸ್ಯೆ ಯಾಗಿ ಭಾಗಶಃವಾದರೂ ಪರಿಭಾವಿಸಬೇಕಾಗುತ್ತದೆ. ಈ ಇಬ್ಬರ ನಡುವಣ ಬಾಂಧವ್ಯವು ಯಾವ ಹಂತದಲ್ಲಿ ಕಹಿಗೊಂಡೀತು ಎಂಬುದನ್ನು ಬೊಟ್ಟು ಮಾಡಿ ತೋರುವುದು ಕಷ್ಟ. ಹೀಗಾಗಿ ಅದನ್ನು ಕಾಲಕಾಲದಲ್ಲಾದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಪರಿಶೀಲಿಸ ಬೇಕು. ೧೯೬೮ರ ಆಗಸ್ಟ್‌ನಲ್ಲಿ ರಷ್ಯಾವು ಜೆಕೊಸ್ಲೊವಾಕಿಯ ಮೇಲೆ ಆಕ್ರಮಣ ಮಾಡಿದಾಗ, ನಿಜಲಿಂಗಪ್ಪ ಹಾಗೂ ಅತುಲ್ಯ ಘೋಷ್. ಅಶೋಕ ಮೆಹ್ತಾ, ಸಿ.ಬಿ. ಗುಪ್ತ, ಮತ್ತು ಗುರುಪಾದಸ್ವಾಮಿಯವರಂತಹ ಅವರ ಇತರ ಉದಾರವಾದೀ ಪ್ರಜಾ ಸತ್ತಾತ್ಮಕ ಹಾಗೂ ಪ್ರಜಾಸತ್ತಾತ್ಮಕ ಸಮಾಜವಾದಿ ಗೆಳೆಯರು ಯುಎಸ್‌ಎಸ್‌ಆರ್ ಅನ್ನು, ಇಂದಿರಾ ಗಾಂಧಿಯವರ ರಷ್ಯಾಪರ ಧೋರಣೆಯನ್ನು ಕಡೆಗಣಿಸಿ, ಖಂಡಿಸಲು ಮುಂದಾದರು. ಆದರೆ ಇಂತಹ ಭಿನ್ನಾಭಿಪ್ರಾಯಗಳು ಬೇಗ ವೈಯಕ್ತಿಕ ನೆಲೆಯನ್ನು ತಲುಪಿಬಿಡುವ ಅಪಾಯವಿರುತ್ತದೆ. ಮೇಲಾಗಿ, ಈಗಾಗಲೇ ಗಮನಿಸಿರುವಂತೆ, ಅವರಿಬ್ಬರ ನಡುವೆ ತಲೆಮಾರುಗಳ ನಡುವಣ ಭಿನ್ನತೆಯೂ ಕಾರ್ಯಶೀಲವಾಗಿಯೇ ಇತ್ತು. ಪ್ರಧಾನ ಮಂತ್ರಿಗಳು ಈಗಾಗಲೇ ತಮ್ಮ ಸುತ್ತ ಕಿರಿಯರ ಗುಂಪು ಕಟ್ಟಿಕೊಳ್ಳಲು ತೊಡಗಿದ್ದರು. ಆದರೆ ಈ ಸನ್ನಿವೇಶದಲ್ಲಿ ಕಾಂಗ್ರೆಸ್ ವರಿಷ್ಠರ ಹಿಂದೆ ಸ್ವಾತಂತ್ರ್ಯ ಹೋರಾಟ ಕಾಲದಿಂದ ಜೊತೆಗಿದ್ದ ಹಿರಿಯರು ಸೇರಿಕೊಳ್ಳುವ ಸಂಭವವಿತ್ತು. ಜೊತೆಗೆ ಸರ್ಕಾರದಲ್ಲಿ ಭ್ರಷ್ಟಾಚಾರ ಹೆಚ್ಚುತ್ತಿರುವ ವಿಷಯವೂ ಸೇರಿ. ಅಧಿಕಾರ ಪಡೆಯಲು ಪಕ್ಷದ ಸದಸ್ಯರು ಒಳಗೊಳಗೇ ಸನ್ನಾಹ ನಡೆಸುತ್ತಿದ್ದು, ಈ ವಿಷಯದಲ್ಲಿ ಪ್ರಧಾನ ಮಂತ್ರಿಗಳು ಪಕ್ಷದ ಅಧ್ಯಕ್ಷರಂತೆ ಕಠಿಣ ನಿಲವು ತಾಳಲು ಸಾಧ್ಯವಿರಲಿಲ್ಲ.

ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ನಿಜಲಿಂಗಪ್ಪನವರು ತುಂಬ ಪ್ರಜ್ಞಾವಂತ ಕಾರ್ಯ ಕರ್ತರಾಗಿದ್ದರು, ತಮ್ಮ ಕರ್ತವ್ಯವನ್ನು ಪೂಜ್ಯಭಾವನೆಯಿಂದ ನಿರ್ವಹಿಸುವ ಮನೋ

ಭಾವದವರಾಗಿದ್ದರು. ತಮ್ಮೆದುರಿಗೆ ಬಂದ ಸಣ್ಣ ಪುಟ್ಟ ವಿಷಯವನ್ನೂ ಕೂಲಂಕಷವಾಗಿ ಪರಿಶೀಲಿಸುತ್ತಿದ್ದರು. ಪಕ್ಷ ಹಾಗೂ ಸಾರ್ವಜನಿಕ ವಲಯದಲ್ಲಿ ದಿನೇ ದಿನೇ ನೈತಿಕ ಮಟ್ಟ ಕುಸಿಯುತ್ತಿದ್ದು ಹಳೆಯ ಗಾಂಧೀಜಿ ಆದರ್ಶಗಳಿಂದ ದೂರ ಸರಿಯುತ್ತಿರುವ ವಿಷಯದಲ್ಲಿ ತೀವ್ರ ಆಘಾತಕ್ಕೊಳಗಾಗಿದ್ದರು. ದೆಹಲಿಯಲ್ಲಿನ ಅವರ ಮನೆ ಮುಕ್ತ ವಾಗಿತ್ತು. ಜನರು ಬಂದು ಹೋಗಿ ಅದೊಂದು ಸಾರ್ವಜನಿಕ ವೇದಿಕೆಯೇ ಆಗಿಬಿಟ್ಟಿತ್ತು. ತಮ್ಮ ಜತೆ ಸಂಬಂಧಪಿರಿಸಿಕೊಂಡ ಇತರರ ವಿಷಯದಲ್ಲಾಗಲೀ ತಮ್ಮ ವಿಷಯದಲ್ಲಿಯೇ ಆಗಲಿ ಅವರು ಶಿಸ್ತುಗಾರರಾಗಿದ್ದರು. ಬೆಳಿಗ್ಗೆ ಬೇಗ ಎದ್ದು ಬೆಳಿಗ್ಗೆ ಎಂಟಕ್ಕೆ ಸರಿಯಾಗಿ ಆರಂಭಿಸಿ ಸಾಮಾನ್ಯವಾಗಿ ರಾತ್ರಿ ಹತ್ತರವರೆಗೂ ತಮ್ಮ ಕಾರ್ಯನಿರ್ವಹಣೆಯಲ್ಲಿ ತೊಡಗಿರುತ್ತಿದ್ದರು. ಕೆಲವು ವೇಳೆ ಇದು ಮಧ್ಯರಾತ್ರಿಯವರೆಗೂ ಮುಂದುವರಿಯುತ್ತಿತ್ತು. ಅವರ ತಿಂಡಿ, ಊಟ ಮತ್ತು ರಾತ್ರಿ ಉಪಹಾರಗಳೆಲ್ಲ ಬಹುತೇಕ ಕೆಲಸದ ನಡುವೆಯೇ ಜರುಗುತ್ತಿದ್ದವು. ಹೀಗಾಗಿ ಅವರ ಖಾಸಗಿ ಹಾಗೂ ಸಾರ್ವಜನಿಕ ಜೀವನಗಳ ನಡುವಣ ವ್ಯತ್ಯಾಸವೇ ಬಹುಮಟ್ಟಿಗೆ ಅಳಿಸಿಹೋಗಿತ್ತು. ಕೇವಲ ಚುನಾವಣಾ ಕಾರ್ಯ ಮತ್ತು ಅಧಿಕಾರಗ್ರಹಣಗಳ ವೇದಿಕೆಯಾಗಿ ನಿಧಾನಗತಿಯಲ್ಲಿ ಪರಿಣಮಿಸುತ್ತಿದ್ದ ಪಕ್ಷದ ಸಂಘಟನಾತ್ಮಕ ಸಮಸ್ಯೆಗಳು ಅವರನ್ನು ಶಿಥಿಲಗೊಳಿಸಿದ್ದುವು. ಗಾಂಧಿವಾದಕ್ಕೆ ಬದ್ಧರಾದ ನಿಜಲಿಂಗಪ್ಪನವರಂತಹ ವ್ಯಕ್ತಿಗಳಿಗೆ ಅದೊಂದು ಹಿಂಸೆಯೇ ಆಗಿತ್ತು. ನಮ್ಮ ರಾಷ್ಟ್ರದ ಸಾರ್ವಜನಿಕ ಹಾಗೂ ರಾಜಕೀಯ ಜೀವನದ ನೈತಿಕತೆಯು ಕುಸಿಯುತ್ತಿರುವುದನ್ನು ಪ್ರಸಂಗಗಳ ಮೂಲಕ ವಿವರಿಸುವ ದಾಖಲೆಗಳು ಅವರ ದಿನಚರಿಯಲ್ಲಿ ತುಂಬಿಬಿಟ್ಟಿದೆ. ದೇಶದ ಭ್ರಷ್ಟಾಚಾರ ಮತ್ತು ನೈತಿಕ ಪತನದ ಇತಿಹಾಸವನ್ನು ಪುನಾರಚಿಸುವ ಸಂದರ್ಭ ಬಂದರೆ ಅವರ ದಿನಚರಿಗಳನ್ನು ಬಳಸಿಕೊಳ್ಳಬೇಕಾಗಬಹುದು! ಈ ಮಧ್ಯೆ, ಅವರ ಮತ್ತು ಇಂದಿರಾ ಗಾಂಧಿಯವರ ನಡುವಣ ಭಿನ್ನಾಭಿಪ್ರಾಯಗಳು ದಿನೇ ದಿನೇ ಹೆಚ್ಚುತ್ತಿದ್ದುವು. ಸಿಂಡಿಕೇಟ್ ಎನಿಸಿಕೊಂಡಿದ್ದ ಗುಂಪಿಗೆ ಸೇರಿದ್ದ ಹಿರಿಯ ನಾಯಕರು ಗಳಾದ ಅತುಲ್ಯ ಘೋಷ್, ಎಸ್. ಕೆ. ಪಾಟೀಲ್, ಕಾಮರಾಜ ನಾಡಾರ್ ಮತ್ತು ಸಂಜೀವರೆಡ್ಡಿಯವರ ಮಾತುಗಳಿಗೆ ಅವರು ಬೆಲೆಯನ್ನೇ ಕೊಡದೆ ದಿನೇಶ್ ಸಿಂಗ್ ಅಂತಹ ಸಂಶಯಾಸ್ಪದ ನಡವಳಿಕೆಯ ಕಿರಿಯರಲ್ಲಿ ಹೆಚ್ಚು ವಿಶ್ವಾಸ ತೋರುತ್ತಿದ್ದುದು ನಿಜಲಿಂಗಪ್ಪನವರ ನೋವಿಗೆ ಕಾರಣವಾಗಿತ್ತು. ಈ ಸಂದರ್ಭದಲ್ಲಿ, ನಿಜಲಿಂಗಪ್ಪನವರು ಇಂದಿರಾ ಗಾಂಧಿಯವರ ಬದಲಿಗೆ ಅವರ ಸುತ್ತ ನೆರೆದ ಪಟಾಲಂ ಅನ್ನು ಆಕ್ಷೇಪಿಸುವ ಆತುರದಲ್ಲಿದ್ದರು. ತಮ್ಮನ್ನು ತಿದ್ದಿಕೊಂಡು, ತಮ್ಮ ಸಹೋದ್ಯೋಗಿಗಳಲ್ಲಿ ನಂಬಿಕೆಯಿರಿಸಿ ವಸ್ತುನಿಷ್ಠತೆ ಮತ್ತು ನಿಷ್ಪಕ್ಷಪಾತವಾಗಿ ಆಡಳಿತ ನಡೆಸಿದರೆ ಅವರಿಗೆ ಎಲ್ಲ ಬಗೆಯ ಬೆಂಬಲ ನೀಡುವುದಾಗಿ ಇಂದಿರಾಗಾಂಧಿಯವರಿಗೆ ಆಶ್ವಾಸನೆ ನೀಡಿದರು.

ಕೆಲವು ರಾಜ್ಯಗಳಲ್ಲಿ ೧೯೬೯ರ ಆರಂಭದಲ್ಲಿ ಚುನಾವಣೆಗಳು ನಡೆಯಲಿದ್ದುವು. ಯಥಾಪ್ರಕಾರ, ಎಲ್ಲರನ್ನೂ ಚುನಾವಣೆಯ ಜ್ವರ ಅಮರಿಕೊಂಡಿತು, ಪಕ್ಷಗಳಲ್ಲಿ ಇದ್ದಕ್ಕಿದ್ದಂತೆ ಜೀವಸಂಚಾರ ಆರಂಭವಾಯಿತು. ರಾಜಕಾರಣಿಗಳ ಹಾಗೂ ಮತದಾರರ ಕರಾಳಮುಖ ದರ್ಶನವಾಗುವುದೂ ಇದೇ ಸಂದರ್ಭದಲ್ಲಿಯೇ. ಕಾಂಗ್ರೆಸ್‌ನಲ್ಲಿನ ಒಳಜಗಳ, ಇಂದಿರಾ ಗಾಂಧಿ ಮತ್ತು ಮೊರಾರ್ಜಿ ದೇಸಾಯಿ ಅವರ ಬೆಂಬಲಿಗರು ಗುಂಪುಗಳಾಗಿ ಒಡೆದದ್ದು, ತಮ್ಮ ಕರಾಳ ಮುಖವನ್ನೆತ್ತಿ ತೋರಿಸಲು ಆರಂಭವಾಯಿತು. ಆದರೆ ತಮ್ಮ ಸುತ್ತ ನಡೆಯುತ್ತಿದ್ದ ಈ ಎಲ್ಲ ವಿದ್ಯಮಾನಗಳಿಂದ ಅಧ್ಯಕ್ಷರು ದೂರವೇ ಉಳಿದು, ತಮ್ಮ ಮೂಲಭೂತ ಬದ್ಧತೆಯಾದ ದೇಶ ಮತ್ತದರ ರಕ್ಷಣೆ ಹಾಗೂ ಪ್ರಗತಿಯ ಕಡೆ ಮಾತ್ರವೇ ಆಲೋಚಿಸಲು ಬಯಸಿದರು. ಹಿಂದೆ ಗಾಂಧಿವಾದಿಗಳೆನಿಸಿ ಕೊಂಡಿದ್ದವರು ಈಗ ಅಗಾಂಧೀಯ ಚಟುವಟಿಕೆಗಳಲ್ಲಿ ತೊಡಗಿದ್ದುದು ನಿಜಲಿಂಗಪ್ಪ ನವರಲ್ಲಿ ಆಘಾತವನ್ನೇ ಉಂಟುಮಾಡಿರಬೇಕು! ವಿರುದ್ಧ ಬಣಗಳ ನಡುವೆ ಹಾಯ್ದು ಹೋಗಬೇಕಾದ ಕಠಿಣ ಕೆಲಸ ನಿಜಲಿಂಗಪ್ಪನವರದ್ದಾಗಿತ್ತು. ಸಿಂಡಿಕೇಟ್‌ನ ಸದಸ್ಯ ಗೆಳೆಯರು ಹಾಗೂ ಇಂದಿರಾ ಗಾಂಧಿಯವರ ಗುಂಪುಗಳ ನಡುವೆ ಅವರು ಇಬ್ಬರಿಗೂ ಅನ್ಯಾಯ ಬಗೆಯದ ರೀತಿಯಲ್ಲಿ ಅಸಿಧಾರಾವ್ರತ ನಡೆಸಬೇಕಿತ್ತು. ಈ ನವಿರು ಕೆಲಸದಲ್ಲಿ ತಮ್ಮ ಸಹಜ ನಿಷ್ಪಾಕ್ಷಿಕತೆ, ಮುಖದ ಮುಗುಳ್ನಗೆಯ ಮೂಲಕ ವ್ಯಕ್ತವಾಗುತ್ತಿದ್ದ ಸೌಜನ್ಯ ಪೂರ್ಣವೂ ಅನಾಕ್ರಮಣಕಾರಿಯೂ ಆದ ನಡವಳಿಕೆ ಮತ್ತು ಕೊನೆಯೇ ಇರದ ತಾಳ್ಮೆ ಇವುಗಳಿಂದಾಗಿ ನಿಜಲಿಂಗಪ್ಪನವರು ದೃಢರಾಗಿರಲು ಸಾಧ್ಯವಾಗಿತ್ತು. ಈ ರೀತಿ ಯಲ್ಲಿ ಅವರು ತಮಗಾಗಲೀ ಪಕ್ಷಕ್ಕಾಗಲೀ ಪೆಟ್ಟು ಬೀಳದ ರೀತಿಯಲ್ಲಿ ಅಧ್ಯಕ್ಷಗಿರಿಯ ತಮ್ಮ ಮೊದಲ ವರ್ಷವನ್ನು ಪೂರೈಸುವುದು ಸಾಧ್ಯವಾಗಿತ್ತು. ಶುದ್ಧ ವೈಯಕ್ತಿಕ ಹಾಗೂ ವ್ಯಕ್ತಿಗತ ನೆಲೆಯಲ್ಲಿ, ಆ ಅವಧಿಯಲ್ಲಿ ನಿಜಲಿಂಗಪ್ಪನವರು ಹೆಚ್ಚು ವಿಶಾಲವಾದ ಅಂತಾ ರಾಷ್ಟ್ರೀಯ ಪ್ರಭಾವಗಳಿಗೆ ಒಳಗಾದರು, ಇದರಿಂದ ಅವರ ವ್ಯಕ್ತಿತ್ವ ಮತ್ತಷ್ಟು ಪಕ್ವ ಗೊಂಡಿತು. ಜೊತೆಗೆ, ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ತಮ್ಮ ದೇಶ ಮತ್ತದರ ಜನತೆಯನ್ನವರು ಇನ್ನಷ್ಟು ಆಳವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು. ಈ ಕಾಲದಲ್ಲಿ ಅವರಿಗೆ ತೀವ್ರ ನೋವುಂಟುಮಾಡಿದ ವಿಷಯವೆಂದರೆ, ಹೆಚ್ಚುತ್ತಿದ್ದ ಚುನಾ ವಣಾ ವೆಚ್ಚ; ಇದರಿಂದ ಭ್ರಷ್ಟಾಚಾರಗಳಿಗೆ ಎಡೆಯಾಗುವುದಲ್ಲದೆ ರಾಜಕಾರಣವನ್ನು ಅಪರಾಧೀಕರಿಸಲೂ ಸಹಾಯಕವಾಗಬಹುದು ಎಂಬುದು. ಇದರಿಂದಾಗುವ ಅತ್ಯಂತ ಘೋರ ಪರಿಣಾಮವೆಂದರೆ ಬುದ್ಧಿಜೀವಿಗಳೂ ಸಜ್ಜನರೂ ಚುನಾವಣೆಗಳಲ್ಲಿ ಸ್ಪರ್ಧಿಸ ಲಾಗದ ಪರಿಸ್ಥಿತಿಯುಂಟಾಗುವುದು. ಹಣ ಮತ್ತು ರಾಜಕೀಯದ ನಡುವೆ ಅನೈತಿಕ ಸಂಬಂಧವುಂಟಾಗುತ್ತದೆಂದು ನಿಜಲಿಂಗಪ್ಪನವರು ಕಂಡುಕೊಂಡರು. ಕಾಂಗ್ರೆಸ್ ಈ

ಎಲ್ಲ ಬೆಳವಣಿಗೆಗಳ ಕೇಂದ್ರವಾಗಿತ್ತು, ಗಾಂಧೀಜಿಯ ಆದರ್ಶಗಳಾದ ಸತ್ಯ-ಅಹಿಂಸೆಗಳಿಂದ ಅದು ದಿನೇ ದಿನೇ ದೂರವಾಗುತ್ತಿತ್ತು. ಕಾಂಗ್ರೆಸ್ ಅಧ್ಯಕ್ಷರಾಗಿ ಅವರು ಸಾಕಷ್ಟು ಪ್ರವಾಸ ಕೈಗೊಳ್ಳಬೇಕಾಗಿತ್ತು, ಹೋದ ಹಿಂದಿ ಭಾಷಿಕ ವಲಯದಲ್ಲೆಲ್ಲ ಅವರು ಭಾಷಾ ಸಮಸ್ಯೆಯನ್ನೆದುರಿಸಬೇಕಾಗಿತ್ತು. ಅವರ ರೀತಿಯೆಂದರೆ ಚೂರುಪಾರು ಹಿಂದಿಯಲ್ಲಿ ಭಾಷಣ ಆರಂಭಿಸಿ ಇಂಗ್ಲಿಷ್‌ಗೆ ಬದಲಾಯಿಸುವುದು. ಆನಂತರ ಅವರ ಭಾಷಣವನ್ನು ಹಿಂದಿಗೆ ಅನುವಾದ ಮಾಡಲಾಗುತ್ತಿತ್ತು. ಈ ಮಧ್ಯೆ ರಾಜಕೀಯವಾಗಿ ಇಂದಿರಾ ಗಾಂಧಿಯವರು ತಮ್ಮದೇ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುತ್ತಿದ್ದರು, ತಮ್ಮ ಕಿರಿಯ ಸಹಚರರಿಗೆ ತರಬೇತಿ ನೀಡುತ್ತಿದ್ದರು, ಇದರಿಂದಾಗಿ ಅವರು ಕರೆ ಕೊಟ್ಟ ಕ್ಷಣದಲ್ಲಿ ಸಿಂಡಿಕೇಟ್ ವಿರುದ್ಧ ಬಲಪ್ರದರ್ಶನ ಮಾಡಲು ಸಾಧ್ಯವಾಗುವಂತಾಯಿತು. ಜನರೂ ಪತ್ರಿಕೆಗಳವರೂ ಅವರ ಕಿರಿಯ ಸಹಚರರನ್ನು ಯಂಗ್ ಟರ್ಕ್ಸ್ ಎಂದು ಕರೆಯಲು ತೊಡಗಿದರು. ಅವರಲ್ಲಿ ಪ್ರಮುಖರಾಗಿದ್ದವರೆಂದರೆ ಮೊರಾರ್ಜಿಯವರ ವಿರುದ್ಧ ರಾಜ್ಯಸಭೆಯಲ್ಲಿ ಒರಟು ಟೀಕೆ ಮಾಡುತ್ತಿದ್ದ ಚಂದ್ರಶೇಖರ್, ಇವರ ಟೀಕೆಗಳ ಹಿಂದೆ ಇಂದಿರಾ ಗಾಂಧಿಯವರೇ ಇರಬಹುದೇ ಎಂಬ ಅನುಮಾನ ಕೂಡ ಉಂಟಾಗುತ್ತಿತ್ತು. ಈ ವಿಷಯವನ್ನು ಕುರಿತು ಕಾಂಗ್ರೆಸ್ ಸಂಸತ್ ಸದಸ್ಯರ ಸಭೆ ನಡೆದಾಗ ಇಂದಿರಾ ಗಾಂಧಿ ಗೈರುಹಾಜರಾದುದು ಈ ಅನುಮಾನವನ್ನು ಸಮರ್ಥಿಸುವಂತಿತ್ತು. ವಿಷಾದ ವ್ಯಕ್ತಪಡಿಸಲು ಚಂದ್ರಶೇಖರ್ ಅವರನ್ನು ಕೇಳಲು ಸಭೆ ನಿರ್ಣಯಿಸಿದಾಗ ಇಂದಿರಾ ಗಾಂಧಿಯವರು ಚಂದ್ರಶೇಖರ್ ಅವರನ್ನು ಬಹಿರಂಗವಾಗಿಯೇ ಬೆಂಬಲಿಸಿದರು.

ಮೇಲುನೋಟಕ್ಕೆ ಸಣ್ಣವೆನಿಸುವ ಇಂಥ ಘಟನೆಗಳು ಹೆಚ್ಚಾದುವು, ಸಿಂಡಿಕೇಟ್ ಸಹಜವಾಗಿಯೇ ಗಾಬರಿಗೊಂಡಿತು. ೧೩-೩-೧೯೬೯ರ ರಾತ್ರಿ ಆಗ ಲೋಕಸಭೆಯ ಸಭಾಧ್ಯಕ್ಷರಾಗಿದ್ದ ಸಂಜೀವರೆಡ್ಡಿ, ನಿಜಲಿಂಗಪ್ಪ, ಡಿ.ಸಿ ಶರ್ಮ, ಕಾಮರಾಜರು, ಎಸ್.ಕೆ. ಪಾಟೀಲ್ ಮತ್ತು ಅತುಲ್ಯ ಘೋಷ್ ಅವರುಗಳು ರೆಡ್ಡಿಯವರ ಮನೆಯಲ್ಲಿ ಸೇರಿದರು, ರೆಡ್ಡಿಯವರು ಅವರಿಗೆಲ್ಲ ಔತಣ ಏರ್ಪಡಿಸಿದ್ದರು. ಅವರು ಒಟ್ಟಾಗಿ ದೇಶದ ಹಾಗೂ ಪಕ್ಷದ ವಿದ್ಯಮಾನಗಳನ್ನು ಕುರಿತು ಚರ್ಚಿಸಿದರು. ದೇಶದ ಸುಭದ್ರತೆಯ ದೃಷ್ಟಿಯಿಂದ ಆವಶ್ಯಕವಾದರೆ ಸರ್ಕಾರದ ಬದಲಿಗೆ ಪ್ರಯತ್ನಿಸಬೇಕೆಂದು, ಕನಿಷ್ಠ ಪಕ್ಷ, ಹಿರಿಯರ ನಾಯಕತ್ವವನ್ನು ಹಾಳುಮಾಡಲು ಯತ್ನಿಸುತ್ತಿರುವ ಇಂದಿರಾ ಗಾಂಧಿಯವರ ಬಗ್ಗೆ ವಿಶೇಷ ನಿಗಾ ವಹಿಸಬೇಕೆಂದು ಅವರು ನಿರ್ಧರಿಸಿದರು. ದೇಶದೆಲ್ಲಡೆ ನಡೆಯುತ್ತಿದ್ದ ಬೆಳವಣಿಗೆಗಳ ಬಗ್ಗೆ ಅವರು ಚಿಂತಿತರಾದರು. ಡಿ.ಪಿ. ಮಿಶ್ರಾ ಅವರು ಮಧ್ಯ ಪ್ರದೇಶದಲ್ಲಿ ನಡೆಸುತ್ತಿರುವ ಪುಡಾರಿತನ ಮತ್ತು ತಂತ್ರಗಾರಿಕೆಗಳ ಬಗ್ಗೆ ನಿಜಲಿಂಗಪ್ಪನವರು ಸಂಪೂರ್ಣ ವಿರೋಧವನ್ನು ವ್ಯಕ್ತಪಡಿಸಿದರು. ಶಾಸಕಾಂಗ ಪಕ್ಷದ ನಾಯಕತ್ವಕ್ಕೆ ಸ್ಪರ್ಧಿಸಿ ಆಯ್ಕೆ

ಯಾಗುವಲ್ಲಿ ಸಫಲರಾದ ವಿ.ಸಿ. ಶುಕ್ಲ ಅವರ ಬಗ್ಗೆ ಅವರು ಅಸಂತುಷ್ಟರಾಗಿದ್ದರು. ತೆಲಂಗಾಣ ಚಳವಳಿಯು ಹಿಂಸಾತ್ಮಕ ಸ್ವರೂಪ ಪಡೆಯುತ್ತಿದೆಯೆಂದು ಬ್ರಹ್ಮಾನಂದ ರೆಡ್ಡಿ ವರದಿ ಮಾಡಿದ್ದರು. ನಿಜಲಿಂಗಪ್ಪನವರನ್ನು ವಿಶೇಷವಾಗಿ ಕಾಡಿದುದೆಂದರೆ, ತೆಲಂಗಾಣ ಚಳವಳಿಯಿಂದ ಸ್ಫೂರ್ತಿಗೊಂಡು ಎರಡು ಕರ್ನಾಟಕಗಳ ನಿರ್ಮಾಣಕ್ಕೆ ಪ್ರಯತ್ನಗಳು ನಡೆಯತೊಡಗಿವೆ ಎಂಬುದು. ಮಧ್ಯ ಪ್ರದೇಶದ ನಾಯಕರಾಗಲು ಪ್ರಯತ್ನಿಸಿ ವಿಫಲರಾದ ಮಿಶ್ರ ಹತಾಶೆಗೊಂಡು, ತಮ್ಮ ವಿರೋಧಿಗಳ ಬರಡುತನವನ್ನು ಬಯಲು ಮಾಡಲು ಅವಿಶ್ವಾಸ ನಿರ್ಣಯ ಮಂಡನೆಯ ಪ್ರಯತ್ನಗಳನ್ನು ಬೆಂಬಲಿಸಿದ್ದ ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರ ವಿರುದ್ಧ ಸೇಡು ತೀರಿಸಿಕೊಳ್ಳಲು ಮುಂದಾಗಿದ್ದರು. ಕೇಂದ್ರದಲ್ಲಿನ ಸಡಿಲತೆಯು ರಾಜ್ಯ ನಾಯಕರುಗಳು ಒಳ ಕದನಗಳಲ್ಲಿ ತೊಡಗಲು ಪ್ರೇರಿಸಿತ್ತು. ದೇಶದಲ್ಲಿನ ಶಾಸಕಾಂಗ ಹಾಗೂ ರಾಜಕಾರಣಿಗಳ ಸಂಸ್ಕೃತಿ ಇಡಿಯಾಗಿ ಹದಗೆಡುವ ದಿಸೆಯಲ್ಲಿ ಬದಲಾಗಿತ್ತು. ರಾಜಕಾರಣ ಮತ್ತು ರಾಜಕೀಯ ಹುದ್ದೆಗಳನ್ನು ಲಾಭದಾಯಕವಾಗಿ ಬಳಸಿಕೊಳ್ಳುವ ಹುನ್ನಾರಗಳು ಹೊಸತಾಗಿ ತಲೆ ಎತ್ತಿದ್ದುವು. ಸ್ವವೈಭವೀಕರಣದ ಈ ಹೊಸ ಸಂಸ್ಕೃತಿಯ ಹರಿಕಾರರಿಗೆ ನಿಜಲಿಂಗಪ್ಪ ದೊಡ್ಡ ಅಡ್ಡಿಯಾಗಿದ್ದರು. ಅದರಿಂದ ಅವರೆಲ್ಲ ನಿಜಲಿಂಗಪ್ಪನವರ ಬಗ್ಗೆ ಇಲ್ಲಸಲ್ಲದ ಗುಲ್ಲೆಬ್ಬಿಸಲು ಸಿದ್ಧರಾದರು. ಸದಾ ವಾಸ್ತವವಾದಿಯಾಗಿದ್ದ ನಿಜಲಿಂಗಪ್ಪನವರು ದೇಶದ ಆಗುಹೋಗುಗಳ ಬಗ್ಗೆ ತಮ್ಮ ದಿನಚರಿಯಲ್ಲಿ ಈ ರೀತಿಯಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದರು: "ಇಂದಿರಾ ಗಾಂಧಿಯವರನ್ನು ಪ್ರಧಾನ ಮಂತ್ರಿ ಸ್ಥಾನದಿಂದ ಕೆಳಗಿಳಿಸುವುದೇನೋ ಸಾಧ್ಯವಾದುದೇ. ಹೀಗೆ ಮಾಡುವುದೇನೂ ಕಷ್ಟವಲ್ಲ. ಆದರೆ ಆಕೆಯ ಸ್ಥಾನಕ್ಕೆ ಯಾರು ಬರಬೇಕು? ಆಕೆಯನ್ನು ಕೆಳಗಿಳಿಸಿದರೆ ಅವರು ಕಾಂಗ್ರೆಸ್ ಪಕ್ಷವನ್ನು ಇಬ್ಭಾಗ ಮಾಡುವುದರಲ್ಲಿ ಸಂಶಯವಿಲ್ಲ. ಅದು ಅನಾಯಕತ್ವಕ್ಕೆ ಎಡೆಮಾಡಿಕೊಡಬಹುದಾದ ಸನ್ನಿವೇಶ. ಈ ಕಾರಣಕ್ಕಾಗಿಯೇ ಹಿರಿಯರು ತಾಳ್ಮೆಯಿಂದ ಇರಬೇಕಾಗಿದೆ...."

೧೯೬೯ರ ಮೇನಲ್ಲಿ ನಡೆದ ಫರೀದಾಬಾದ್ ಕಾಂಗ್ರೆಸ್ ಸಮಾವೇಶವು ಮಹತ್ವದ್ದೂ ನೆನಪಿಲ್ಲುಳಿಯುವಂಥದ್ದೂ ಆದ ಒಂದು ಘಟನೆ. ೧೯೬೯ರ ಏಪ್ರಿಲ್ ೨೪ರ ಹೊತ್ತಿಗೆ ಅಧ್ಯಕ್ಷರುಗಳು ಮತ್ತು ಕಾರ್ಯದರ್ಶಿಗಳೂ ದೆಹಲಿಯಲ್ಲಿ ಸೇರಿದರು. ಅವರು ಅಂದು ಸಭೆ ಸೇರಿದ್ದ ಕಾರಣ ಕಾಂಗ್ರೆಸ್ ಪಕ್ಷದ ಪುನಾರಚನೆಯ ಬಗೆಗಿನ ವರದಿಯನ್ನು ಚರ್ಚಿಸುವುದು. ಅರ್ಧ ಗಂಟೆ ಮಾತ್ರ ಮಾತನಾಡಲು ಮಧ್ಯ ಪ್ರವೇಶಿಸಿದ ಇಂದಿರಾ ಗಾಂಧಿಯವರು ಮಧ್ಯದಲ್ಲಿಯೇ ಸಭೆಯಿಂದ ಹೊರ ನಡೆದರು. ತಮ್ಮ ಮಾತುಗಳಿಗೆ ಅಧ್ಯಕ್ಷರು ಒಪ್ಪಿಗೆ ನೀಡಬೇಕೆಂಬುದು ಅವರ ನಿರೀಕ್ಷೆಯಾಗಿತ್ತು. ಆದರೆ ನಿಜಲಿಂಗಪ್ಪನವರು ಬೇರೆ ರೀತಿಯಲ್ಲಿಯೇ ಯೋಚಿಸಿದರು. ಅದನ್ನು ಪ್ರಧಾನ ಮಂತ್ರಿಗಳ ಜೊತೆ ಚರ್ಚಿಸು

ವುದು ಅಧ್ಯಕ್ಷರ ಮರ್ಜಿಗೆ ಬಿಟ್ಟದ್ದು ಎಂಬುದು ನಿಜಲಿಂಗಪ್ಪನವರ ತಿಳಿವಳಿಕೆ, ಆದರೆ ಅದನ್ನು ಪ್ರಧಾನ ಮಂತ್ರಿಗಳ ಅವಲೋಕನಕ್ಕೆ ತರುವ ಸಂದರ್ಭವೇ ಒದಗಲಿಲ್ಲ. ಸಂಜೆ ನಾಲ್ಕು ಗಂಟೆಗೆ ನಿಜಲಿಂಗಪ್ಪನವರು ತಮ್ಮ ಸಿಂಡಿಕೇಟ್ ಪರಿವಾರದೊಂದಿಗೆ ಫರೀದಾಬಾದ್‌ಗೆ ಪಯಣ ಬೆಳೆಸಿದರು. ಪಯಣದುದ್ದಕ್ಕೂ, ಚಪ್ಪಾಳೆ ಹಾಗೂ ನಡೆಯುತ್ತಿರುವುದು ೭೨ನೇ ಸಮಾವೇಶವೆಂದು ಸೂಚಿಸಲು ನಿರ್ಮಿಸಿದ್ದ ಸ್ವಾಗತ ಕಮಾನುಗಳ ಮೂಲಕ ಅವರನ್ನು ಸ್ವಾಗತಿಸಲಾಯಿತು. ತಮಗಾಗಿ ಕಾದಿರಿಸಿದ್ದ ಬಂಗಲೆಗೆ ಅಧ್ಯಕ್ಷರು ಬರುವ ವೇಳೆಗೆ ಸಂಜೆ ಆರು ಗಂಟೆಯಾಗಿತ್ತು. ಆನಂತರ ರಾತ್ರಿ ೭-೩೦ಕ್ಕೆ, ಸಮಾವೇಶದಲ್ಲಿಯೂ ವಿಷಯ ನಿಯಾಮಕ ಸಮಿತಿಯಲ್ಲಿಯೂ ಬಹಿರಂಗ ಅಧಿವೇಶನದಲ್ಲಿಯೂ ಚರ್ಚಿಸಬೇಕಾಗಿದ್ದ ವಿಷಯಗಳ ಕುರಿತು ಕಾರ್ಯಕಾರಿ ಸಮಿತಿಯು ಪರಿಶೀಲನೆ ನಡೆಸಿತು. ಮಾರನೆಯ ದಿನ, ಬೆಳಿಗ್ಗೆ ೮-೦೦ ಗಂಟೆಗೆ ಅಧ್ಯಕ್ಷರು ರಾಷ್ಟ್ರಧ್ವಜವನ್ನು ಹಾರಿಸಿದರು. ವಿಷಯ ನಿಯಾಮಕ ಸಮಿತಿಗಳ ರಚನೆ ನಡೆಯುತ್ತಿರುವಾಗ, ಬೆಳಿಗ್ಗೆ ಸುಮಾರು ೯-೩೦ಕ್ಕೆ ನಡೆಯಲಿದ್ದ ಸಮಾವೇಶಕ್ಕೆಂದು ನಿರ್ಮಿಸಿದ್ದ ಮುಖ್ಯ ಸಭಾಂಗಣದ ಮೂಲೆಯೊಂದರಿಂದ "ಬೆಂಕಿ! ಬೆಂಕಿ!" ಎಂಬ ಉದ್ಗಾರಗಳು ಕೇಳಿ ಬಂದುವು. ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರುಗಳು ಕುಳಿತಿದ್ದ ಪೀಠಗಳ ಹಿಂದೆ ಬೆಂಕಿ ಉರಿಯುತ್ತಿದ್ದುದು ಬಹು ಬೇಗ ಇಡೀ ಸಭಾಂಗಣವನ್ನು ನುಂಗಿ ನೊಣೆಯುವುದೇನೋ ಎಂಬಂತೆ ಆವರಿಸಿತು. ಪ್ರದೇಶವೆಲ್ಲ ಅಯೋಮಯವಾಯಿತು; ಅಧ್ಯಕ್ಷರ ಸಮೇತ ಎಲ್ಲರೂ ಜಾಗ ಬಿಟ್ಟು ಸುರಕ್ಷೆಗಾಗಿ ಸಿಕ್ಕಿದೆಡೆಗೆ ಓಡಿದರು. ಸಭಾಂಗಣದ ಸುಮಾರು ಮುಕ್ಕಾಲು ಭಾಗ ಬೆಂಕಿಯಲ್ಲಿ ಸುಟ್ಟು ಕರಿಕಲಾಗಿತ್ತು. ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳವು ಜನರು ಧೈರ್ಯಗುಂದದಿರುವಂತೆ ಮಾಡಲು ಸಹಾಯ ಮಾಡಿತು. ಈ ಘಟನೆಯಿಂದ ಸ್ತಂಭಿತರಾಗಿದ್ದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ಬನ್ಸಿಲಾಲ್ ಅವರು ಸುಟ್ಟ ಭಾಗವನ್ನು ಪುನಾರಚಿಸಲು ಹೆಣಗಾಡಿ, ಮಾರನೆಯ ಸಂಜೆಯ ವೇಳೆಗೆ ಬದಲಿ ಸಭಾಂಗಣ ನಿರ್ಮಾಣ ಮಾಡುವಲ್ಲಿ ಯಶಸ್ವಿಯಾದರು. ೨೭ ರಂದು, ವಿಷಯ ನಿಯಾಮಕ ಸಮಿತಿಗಳು, ವಿವಿಧ ಉಪಸಮಿತಿಗಳು ಸಿದ್ಧಪಡಿಸಿದ್ದ ವರದಿಗಳು ಮತ್ತು ಕಾಂಗ್ರೆಸ್‌ನ ಪುನಸ್ಸಂಘಟನೆ ಮತ್ತು ದೇಶದ ರಾಜಕೀಯ ಪರಿಸ್ಥಿತಿಯ ಕುರಿತಾದ ನಿರ್ಣಯಗಳು ಇವುಗಳ ಬಗ್ಗೆ ಕಾಂಗ್ರೆಸ್ ಚರ್ಚೆ ನಡೆಸಿತು. ಇಂದಿರಾ ಗಾಂಧಿ ಮತ್ತು ಮೊರಾರ್ಜಿ ದೇಸಾಯಿ ಅವರುಗಳು ತಾವು ಚರ್ಚಾಸ್ಪರ್ಧೆಯೊಂದರಲ್ಲಿ ಭಾಗವಹಿಸುತ್ತಿರುವವರಂತೆ ಭಾಷಣ ಮಾಡಿದರು. ಸಂಜೆ ಆರು ಗಂಟೆಗೆ ನಿಜಲಿಂಗಪ್ಪನವರು ತಮ್ಮ ಅಧ್ಯಕ್ಷ ಭಾಷಣವನ್ನು ಓದಿದರು. ಒಟ್ಟಿನಲ್ಲಿ, ಈ ಭಾಷಣವೂ ಅವರು ೭೧ ನೇ ಸಮಾವೇಶದಲ್ಲಿ ಮಾಡಿದ ಭಾಷಣದ ಸಾರವನ್ನೇ ಒಳಗೊಂಡಿತ್ತು. ಅಲ್ಲದೆ

ಕೆಲವು ಹೊಸ ಅಂಶಗಳೂ ಅದರಲ್ಲಿ ಸೇರ್ಪಡೆಗೊಂಡಿದ್ದುವು. ಮುಖ್ಯವಾಗಿ, ದೇಶದ ಸಮಗ್ರತೆಗೆ ಭಂಗ ತರುವಂತೆ ಕಾಣುವುದರಿಂದಾಗಿ ಅವರು ಭಾಷಾವಾರು ಪ್ರಾಂತ ರಚನೆಯ ಬಗ್ಗೆ ವಿಮರ್ಶಾತ್ಮಕವಾಗಿ ಮಾತನಾಡಿ, ಅವುಗಳನ್ನು ರದ್ದುಪಡಿಸಿ ಆರ್ಥಿಕ ಮಾನದಂಡದ ಮೇಲೆ ಪುನಾರಚಿಸಬೇಕೆಂದು ಸೂಚನೆಯಿತ್ತಿದ್ದರು. ನೌಕರರಲ್ಲಿ ಹೆಚ್ಚುತ್ತಿರುವ ಲಂಚಗುಳಿತನಕ್ಕೆ ಪರವಾನಗಿ ಪದ್ಧತಿ ಕಾರಣವೆಂದು ನುಡಿದರು. ನಿಯಂತ್ರಣಗಳನ್ನು ದೊಡ್ಡ ಪ್ರಮಾಣದಲ್ಲಿ ತೆಗೆದು ಹಾಕಬೇಕೆಂದು ಅಭಿಪ್ರಾಯಪಟ್ಟರು. ಸಂಮಿಶ್ರ ಸರ್ಕಾರಗಳ ಬಗ್ಗೆಯೂ ಟೀಕೆ ಮಾಡಿದ ಅವರು ಅವು ಸ್ಥಿರತೆ ಸಾಧಿಸಲಾರವೆಂದರು. ಅವು ಅನಿವಾರ್ಯವೇ ಆದರೆ? ದೇಶಕ್ಕೆ ಅಥವಾ ತಮಗೆ ಇದು ತತ್‌ಕ್ಷಣಕ್ಕೆ ಪ್ರಸ್ತುತವೆನಿಸದಿದ್ದರೂ, ಇದ್ದ ಸಮ್ಮಿಶ್ರ ಸರ್ಕಾರಗಳು ಹೇಗಾಗಬಹುದೆಂಬುದಕ್ಕೆ ನಿದರ್ಶನಗಳಂತಿವೆ ಎಂದರು. ಇಂದಿಗೆ ಅದು ಬಹು ಮಹತ್ವದ ಪ್ರಶ್ನೆಯಾಗಿದೆ ಎಂಬುದು ನಿಜ. ಹೀಗಾಗಿ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಅದಕ್ಕೆ ಅವಕಾಶ ಮಾಡಿಕೊಡಲು ಸಾಧ್ಯವಾಗುವಂತಹ ಮಾರ್ಪಾಟುಗಳು ನಡೆಯಬೇಕಾಗಿದೆ. ಸಾರ್ವಜನಿಕ ಜೀವನದಲ್ಲಿ ಯುವಕರು ವಹಿಸಬೇಕಾದ ಪಾತ್ರದ ಬಗ್ಗೆ ಅವರಿಗೆ ಸದಾ ಚಿಂತೆ, ಅದರಿಂದಾಗಿ ದೇಶದ ಜವಾಬ್ದಾರಿಯನ್ನು ಹೊರುವಂತೆ ಯುವಜನತೆಗೆ ಅವರು ಕರೆ ನೀಡಿದರು. ನಿಜಲಿಂಗಪ್ಪನವರ ಭಾಷಣದ ಮೇಲಿನ ಚರ್ಚೆಯಲ್ಲಿ, ಕೆ.ಡಿ. ಮಾಳವೀಯ, ಮೋಹನ್ ಧಾರಿಯ, ಚಂದ್ರಶೇಖರ್ ಮತ್ತವರ ಸಮಾನಮನಸ್ಕರು ಅವರ ಕೈಗಾರಿಕಾ ನೀತಿಯ ಬಗ್ಗೆ ಕಟುವಾದ ಟೀಕೆ ಮಾಡಿದರು. ಅದನ್ನವರು ಪ್ರತಿಗಾಮಿ ಎಂದರು. ಇಂದಿರಾ ಗಾಂಧಿಯವರ ಬೆಂಬಲ ಅವರಿಗಿದ್ದುದು ಸ್ಪಷ್ಟವಾಗಿತ್ತು, ಹೀಗಾಗಿಯೇ ಯಂಗ್ ಟರ್ಕ್‌ಗಳು ತಮ್ಮ ಸಮಾಜವಾದವನ್ನು ಎತ್ತಿ ಹಿಡಿದರು. ಅವರ ಆಮದುಗೊಂಡ ಸಮಾಜವಾದವನ್ನು ಅಧ್ಯಕ್ಷರು ವಿಡಂಬಿಸಿ ಸ್ವದೇಶಿ ಸಮಾಜವಾದದ ಸಮರ್ಥನೆ ಮಾಡಿಕೊಂಡರು! ಎಲ್ಲ ಚುನಾವಣೆಗಳನ್ನು ಒಂದು ವರ್ಷ ಕಾಲ ಮುಂದೂಡಬೇಕೆಂದು ಪಕ್ಷವು ನಿರ್ಣಯಿಸಿದ್ದರಿಂದ ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷರಾಗಿ ಇನ್ನೂ ಒಂದು ವರ್ಷ ಮುಂದುವರೆಯುವ ಅನಿವಾರ್ಯತೆಯುಂಟಾಯಿತು.

ತಮ್ಮ ಕಚೇರಿ ಕೆಲಸದಲ್ಲಿ ತೊಡಗಿದ್ದ ನಿಜಲಿಂಗಪ್ಪನವರು ೩-೫-೧೯೬೯ರಂದು ಒಂದು ಆಘಾತಕಾರಿ ಸುದ್ದಿಯನ್ನು ಕೇಳಬೇಕಾಯಿತು, ಅದೆಂದರೆ ಭಾರತದ ರಾಷ್ಟ್ರಪತಿಗಳ ನಿಧನ ವಾರ್ತೆ. ಕೆಲವು ಕಾಲದಿಂದ ಜ಼ಕೀರ್ ಹುಸೇನ್ ಅಸ್ವಸ್ಥತೆಯಿಂದ ಬಳಲುತ್ತಿದ್ದರು, ಆದರೆ ಅವರಿಗೆ ಹಿಂದಿದ್ದ ಹಾಗೂ ಮುಂದೆ ಬಂದ ರಾಷ್ಟ್ರಪತಿಗಳಂತೆ, ಅವರು ದೇಶದ ವೆಚ್ಚದಲ್ಲಿ ಚಿಕಿತ್ಸೆಯನ್ನು ಪಡೆಯಲಿಲ್ಲ. ಅವರ ಪಾರ್ಥಿವ ಶರೀರವನ್ನು ಹೂಳುವ ಮೊದಲು ರಾಜಧಾನಿಯಲ್ಲಿ ಅವರ ಉತ್ತರಾಧಿಕಾರಿಯ ಬಗ್ಗೆ ವದಂತಿಗಳು

ಹಬ್ಬಿದುವು. ಜಗಜೀವನ ರಾಂ, ಸಂಜೀವಯ್ಯ ಅಥವಾ ಜಯಪ್ರಕಾಶ ನಾರಾಯಣ ಅವರನ್ನು ಮುಂದಿನ ರಾಷ್ಟ್ರಪತಿಗಳಾಗಿ ಇಂದಿರಾ ಗಾಂಧಿಯವರು ಆಯ್ಕೆ ಮಾಡಬಹುದೆಂಬ ವದಂತಿ ಇದಕ್ಕೊಂದು ನಿದರ್ಶನ. ಈ ಸಂಬಂಧ ಕೆಲವರು ನಿಜಲಿಂಗಪ್ಪನವರ ಹೆಸರನ್ನೂ ಪ್ರಸ್ತಾಪಿಸಿದರು. ಕಾಮರಾಜರಿಗೂ ಆಸಕ್ತಿಯಿದ್ದಂತಿತ್ತು, ಆದರೆ ಬೇರಾರಾದರೂ ತಮ್ಮ ಹೆಸರನ್ನು ಸೂಚಿಸಬಹುದೆಂಬ ನಿರೀಕ್ಷೆಯಿಂದ ಆ ಬಗ್ಗೆ ಅವರು ಮೌನ ತಾಳಿದ್ದರು! ಸಂವಿಧಾನಾತ್ಮಕ ಕಾರಣದಿಂದ ತಾತ್ಕಾಲಿಕ ರಾಷ್ಟ್ರಪತಿಗಳಾಗಿದ್ದ ಗಿರಿಯವರು ಕೂಡ ಆಸಕ್ತಿ ತೋರಿದರು, ಅಷ್ಟು ಮಾತ್ರವಲ್ಲ ಈ ಕುರಿತು ನಿಜಲಿಂಗಪ್ಪನವರ ಜೊತೆ ಮಾತುಕತೆ ಕೂಡ ನಡೆಸಿದರು. ಹೀಗೆ ಹಲವಾರು ಹೆಸರುಗಳು ಚಲಾವಣೆಯಲ್ಲಿರಬೇಕಾದರೆ, ದೇಶದ ಅತ್ಯಂತ ಹಿರಿಯ ಹುದ್ದೆಯ ಆಯ್ಕೆಯು ಕೇವಲ ಅರ್ಹತೆಯ ಮೇಲಿರಬೇಕೆಂದು ನಿಜಲಿಂಗಪ್ಪನವರು ಭಾವಿಸಿದರು. ಹೀಗಾಗಿ ಆ ಕುರಿತು ಅವರು ಆತುರ ಮಾಡಲು ಸಿದ್ಧವಾಗಿರಲಿಲ್ಲ. ವಿದೇಶ ಪ್ರವಾಸ ಹೋಗಬೇಕಾಗಿದ್ದುದರಿಂದ ವಾಪಸು ಬರುವವರೆಗೂ ಆ ಬಗ್ಗೆ ನಿಧಾನಿಸಬಹುದೆಂದು ಅವರು ಭಾವಿಸಿದರು. ತಮ್ಮ ಅನಿಸಿಕೆಯನ್ನವರು ಇಂದಿರಾ ಗಾಂಧಿಯವರ ಬಳಿ ೧೫-೫-೧೯೬೯ ರಂದು ಪ್ರಸ್ತಾಪಿಸಿದಾಗ, ಅವರು ಮುಖ ಊದಿಸಿಕೊಂಡು ಮಾತನ್ನು ಬೇರೆಡೆಗೆ ತಿರುಗಿಸಿದರು! ಕಾಂಗ್ರೆಸ್ ಪಕ್ಷವು ಎತ್ತಿದ್ದ ಸಾಲದ ಬಗ್ಗೆ ನಿಜಲಿಂಗಪ್ಪನವರು ಪ್ರಸ್ತಾಪಿಸಿದಾಗ ಅವರು ತಮ್ಮ ತಾಳ್ಮೆಯನ್ನೂ ಕಳೆದುಕೊಂಡರು. ಅದು ಪಕ್ಷದ ಖಜಾಂಚಿಗಳಾದ ಎಸ್.ಕೆ. ಪಾಟೀಲ್ ಅವರಿಗೆ ಸಂಬಂಧಿಸಿದ ವಿಷಯವೆಂದರು. ಇಂದಿರಾ ಗಾಂಧಿ ಹಾಗೂ ನಿಜಲಿಂಗಪ್ಪನವರ ನಡುವೆ ಬಿರುಕು ಮೂಡಿದ್ದುದು ಸ್ಪಷ್ಟವಾಗಿತ್ತು. ಈ ವಿಷಯವನ್ನವರಿಗೆ ರಾಜ ಬಹಾದ್ದೂರ್ ಮತ್ತು ಬಲರಾಂ ಭಗತ್ ಅವರು ತಿಳಿಸಿದರು. ಸ್ನೇಹ ಸಂಬಂಧವನ್ನು ಬೆಳೆಸಿಕೊಳ್ಳುವ ಹಾಗೂ ವಿವಿಧ ಸಂಸ್ಕೃತಿಗಳಿಗೆ ಒಡ್ಡಿಕೊಳ್ಳುವ ಕಾರಣದಿಂದಾಗಿ ವಿದೇಶ ಪ್ರವಾಸವು ಕಾಂಗ್ರೆಸ್ ಅಧ್ಯಕ್ಷರಾದ ತಮ್ಮ ಕರ್ತವ್ಯವೆಂದು ನಿಜಲಿಂಗಪ್ಪ ಭಾವಿಸಿದ್ದರು. ೧೯೬೮ರಲ್ಲಿ ಅವರು ಒಂಬತ್ತು ದಿನಗಳ ಕಾಲ ಜಪಾನ್ ಪ್ರವಾಸವನ್ನು ಯಶಸ್ವಿಯಾಗಿ ಕೈಕೊಂಡಿದ್ದರು; ಈಗ ೧೮-೫-೧೯೬೯ ರಿಂದ ಯೂರೋಪ್ ಪ್ರವಾಸ ಕೈಗೊಳ್ಳಲು ಆಲೋಚಿಸಿದ್ದರು. ತಮ್ಮ ಪ್ರಯಾಣದ ನಡುವೆ ಅವರು ಬೈರೂತ್ ನಗರ, ಅಲ್ಲಿನ ಪಿರಮಿಡ್‌ಗಳ ಸ್ವರೂಪ, ನೈಲ್ ನದಿಯ ಕಣಿವೆಯ ಯೋಜನೆ, ಬೆಲ್‌ಗ್ರೇಡ್ ನಗರ ಮತ್ತು ರೋಮ್‌ನ ಕಲಾ ಸಂಪತ್ತು ಇವುಗಳ ಕಾಡುವ ಸೌಂದರ್ಯದಿಂದ ಪ್ರಭಾವಿತರಾದರು. ಈ ಅವಕಾಶವನ್ನವರು ನಾಸೆರ್ ಮತ್ತು ಟಿಟೋ ಅವರನ್ನು ಭೇಟಿಯಾಗಲು ಬಳಸಿಕೊಂಡರು. ಪರಸ್ಪರ ಆಸಕ್ತವಾದ ವಿಷಯಗಳ ಬಗ್ಗೆ ಅವರೊಡನೆ ಚರ್ಚೆ ನಡೆಸಿದರು. ಯೂರೋಪ್‌ನ ಪ್ರಮುಖ ನಗರಗಳಾದ ವಿಯೆನ್ನ, ಬಾನ್,

ಬರ್ಲಿನ್ ಮತ್ತು ಲಂಡನ್‌ಗಳಿಗೆ ಭೇಟಿಯಿತ್ತರು. ಈ ಭೇಟಿಯ ಕಾಲದಲ್ಲಿ ನೃತ್ಯನಾಟಕ ಹಾಗೂ ಬಿಥೋವನ್ ಸಂಗೀತಗಳ ಸಂತೋಷವನ್ನು ಸವಿದರು. ಅವರಿಗೆ ಅದ್ಭುತ ಸ್ವಾಗತ ನೀಡಲಾಯಿತು. ಇಂಗ್ಲೆಂಡ್‌ನಲ್ಲಿ ಅವರು ಕೇಂಬ್ರಿಜ್ ಮತ್ತು ಆಕ್ಸ್‌ಫರ್ಡ್‌ಗಳ ಪ್ರಶಾಂತತೆಯ ಸುಖ ಅನುಭವಿಸಿದರು. ಭಾರತೀಯರ ಮನೆಗಳಲ್ಲಿ ಇಡ್ಲಿ ಮತ್ತು ದೋಸೆಗಳಂತಹ ಭಾರತೀಯ ಸಸ್ಯಾಹಾರಿ ತಿನಿಸುಗಳನ್ನು ಸವಿಯುವ ಅವಕಾಶ ಸಿಕ್ಕಿತು. ಅವುಗಳು ದೊರೆಯದಿದ್ದಾಗ ಅವರು ಹಣ್ಣು ಹಾಲುಗಳನ್ನು ಸೇವಿಸಿದರು. ದಿನಕ್ಕೆ ಒಪ್ಪತ್ತು ಊಟ ಎಂಬ ಪದ್ಧತಿಯನ್ನವರು ಅನುಸರಿಸಿದರು. ಸಂಜೆ ಕೇವಲ ಹಣ್ಣು ಹಾಲುಗಳನ್ನು ಸೇವಿಸಿದರು. ಸಂತೋಷದಾಯಕವೂ ಶೈಕ್ಷಣಿಕವೂ ಆದ ಪ್ರವಾಸದ ಬಳಿಕ ೧೬-೯-೧೯೬೯ ರಂದು ಅವರು ಭಾರತಕ್ಕೆ ಮರಳಿದರು. ಅವರು ಬರುವ ಹೊತ್ತಿಗೆ ಇಲ್ಲಿ ಗೊಂದಲ ಸೃಷ್ಟಿಯಾಗಿತ್ತು!

ಕಾಂಗ್ರೆಸ್ ಇಬ್ಭಾಗದ ಬಗ್ಗೆ ವಿಶ್ಲೇಷಣೆ ಮತ್ತು ವ್ಯಾಖ್ಯಾನಗಳನ್ನು ಮಾಡುವ ಮೊದಲು, ದೊರೆಯುವ ಶುದ್ಧ ವಾಸ್ತವ ಸಂಗತಿಗಳ ಆಧಾರದ ಮೇಲೆ ಘಟನಾವಳಿಗಳ ಕಾಲಕ್ರಮ ನಿರೂಪಣೆ ಮಾಡಬೇಕಾಗಿದೆ. ಅದರಿಂದ ಉಂಟಾದ ದೀರ್ಘಕಾಲದ ಪರಿಣಾಮಗಳೇನೇ ಇರಲಿ, ಝಕೀರ್ ಹುಸೇನ್ ಅವರ ನಿಧನದಿಂದಾಗಿ ಅನಿವಾರ್ಯ ವಾದ ರಾಷ್ಟ್ರಪತಿಗಳ ಚುನಾವಣೆಯ ಮೇಲೆ ಅದರ ತತ್‌ಕ್ಷಣದ ಪರಿಣಾಮ ಉಂಟಾಯಿತು ಎಂಬುದರಲ್ಲಿ ಸಂಶಯವಿಲ್ಲ. ಆದರೆ ಈ ಸಮಸ್ಯೆ ಉದ್ಭವವಾದುದು ಫರೀದಾಬಾದ್ ಸಮಾವೇಶದ ಕಾಲದಲ್ಲಿ ಪ್ರಕಟವಾದ ಸಿಂಡಿಕೇಟ್ ಮತ್ತು ಇಂದಿರಾ ಗಾಂಧಿಯವರ ನಡುವಣ ಅಭಿಪ್ರಾಯ ಭೇದ ಕಂದಕ ಹೆಚ್ಚಾದುದರಿಂದಾಗಿ. ತಮ್ಮನ್ನು ಅಧಿಕಾರದಿಂದ ಸಿಂಡಿಕೇಟ್ ಕೆಳಗಿಳಿಸಬಹುದೆಂಬ ಭಯದಿಂದಲೂ, ಅವರು ತಮ್ಮ ವಿರುದ್ಧವಾಗಿರುವುದೆಂಬ ಭಾವನೆಯಿಂದಲೂ ಇಂದಿರಾ ಗಾಂಧಿಯವರು ಹೊಸ ಜೊತೆಗಾರರನ್ನು ಹುಡುಕುವಂತಾಯಿತು– ಅದೆಂದರೆ ಸಿಪಿಐ ಮತ್ತು ರಾಜ್ಯಗಳಲ್ಲಿನ ಪ್ರಾದೇಶಿಕ ಪಕ್ಷಗಳ ಜೊತೆಗಿನ ಮೈತ್ರಿ. ಕೇರಳದಲ್ಲಿ ಅವರು ಮುಸ್ಲಿಂ ಲೀಗ್ ಜೊತೆ, ತಮಿಳು ನಾಡಿನಲ್ಲಿ ಡಿಎಂಕೆ ಜೊತೆ, ಪಂಜಾಬ್‌ನಲ್ಲಿ ಅಕಾಲಿಗಳೊಡನೆ, ಒರಿಸ್ಸಾದಲ್ಲಿ ಜನ ಕಾಂಗ್ರೆಸ್ ಜೊತೆ ಮತ್ತು ಗುಜರಾತ್‌ನಲ್ಲಿ ಸ್ವತಂತ್ರ ಪಕ್ಷದ ಜೊತೆಗೆ ಸ್ನೇಹ ಬೆಳೆಸಿ ದರು. ಇವೆಲ್ಲ ಅವಕಾಶವಾದಿ ವ್ಯವಸ್ಥೆಗಳು, ಅಷ್ಟೆ, ಅದಕ್ಕೆ ಆಧಾರವಾದುದು ಅಧಿಕಾರದ ಪಾಲುಗಾರಿಕೆ. ಇದನ್ನು ಉಳಿಸುವ ತಂತ್ರವೆಂದು ಮಾತ್ರ ಭಾವಿಸಬೇಕಾಗುತ್ತದೆ. ವ್ಯಕ್ತಿ ರಾಜಕಾರಣದ ಹಿತಾಸಕ್ತಿಗಳೊಡನೆ ಅದನ್ನು ಗುರುತಿಸಬಹುದಾದರೂ, ಅದನ್ನು ಕೇವಲ ಅವಕಾಶವಾದಿಯಾದ ತತ್ವರಹಿತ ರಾಜಕಾರಣವೆಂದು ಟೀಕಿಸಬೇಕಾಗುತ್ತದೆ. ಹಾಗಾದರೆ ಅವರ ರಾಜಕೀಯ ವಿರೋಧಿಗಳಾಗಿದ್ದವರು ಹೆಚ್ಚು ತತ್ವನಿಷ್ಠರೂ ಉದಾರರೂ ಆದವ

ರೆಂದು ಭಾವಿಸಬೇಕೇ ಎಂಬ ಪ್ರಶ್ನೆಯೂ ಉದ್ಭವಿಸುತ್ತದೆ. ನಿಜಲಿಂಗಪ್ಪನವರನ್ನು ರಾಜಕೀಯ ಅವಕಾಶವಾದಿಯೆಂದೂ ತತ್ವರಹಿತ ರಾಜಕಾರಣಿಯೆಂದೂ ಖಂಡಿತ ಕರೆಯಲಾಗದಿದ್ದರೂ, ಸಿಂಡಿಕೇಟ್‌ನ ಸದಸ್ಯರೆಲ್ಲರ ಬಗ್ಗೆ ಈ ಮಾತನ್ನು ಹೇಳಲಾಗುವುದಿಲ್ಲ. ಕೇವಲ ಸರಳ ನೈತಿಕ ಮೌಲ್ಯಮಾಪನದ ಪ್ರಶ್ನೆ ಇದಲ್ಲ, ಅಧಿಕಾರದ ಆಟವಾಗಿ, ಹಾಬ್ಸಿಯನ್ ಅರಣ್ಯದಲ್ಲಿನ ಪಯಣವಾಗಿ, ರಾಜಕಾರಣವನ್ನು ವಾಸ್ತವ ದೃಷ್ಟಿಯಿಂದ ನೋಡುವ ಪ್ರಶ್ನೆ. ಈ ದೃಷ್ಟಿಕೋನದಿಂದ, ನಿಜಲಿಂಗಪ್ಪನವರನ್ನು ಬಡಪಾಯಿ ರಾಜಕಾರಣಿ ಎಂದು ಪರಿಗಣಿಸಬಹುದು! ಆದರೆ ಗಾಂಧೀಜಿ ಆದರ್ಶ ಹೊತ್ತ ಅವರಂತಹವರಿಗೆ ನೈತಿಕತೆಯಿಲ್ಲದ ರಾಜಕಾರಣವು ಆ ಹೆಸರಿಗೇ ಲಾಯಕ್ಕಲ್ಲ. ಕೇವಲ ಅಧಿಕಾರಕ್ಕಾಗಿ ಸ್ಪರ್ಧೆ ಎಂಬ ಇಂದಿರಾ ಗಾಂಧಿಯವರ ದೃಷ್ಟಿಕೋನದಿಂದ ನೋಡಿದರೆ, ಬೆಂಬಲ ಪಡೆಯಲು ವ್ಯವಸ್ಥಿತ ರಾಜಕೀಯ ಮೈತ್ರಿ ಮಾಡಿಕೊಳ್ಳುವ ಹಾಗೂ ತಮ್ಮ ಅಧಿಕಾರ ಮತ್ತು ಸ್ಥಾನಮಾನಗಳಿಗೆ ಮಾರಕವಾದವರನ್ನು ನಾಶಗೊಳಿಸುವ ಕಾರ್ಯದಲ್ಲಿ ನಿರತರಾದರು. ಹೀಗಾಗಿ, ತಮ್ಮ ಆಯ್ಕೆಯ ವ್ಯಕ್ತಿಯನ್ನು ಭಾರತದ ರಾಷ್ಟ್ರಪತಿಗಳಾಗಿ ಸ್ಥಾಪಿಸುವ ಬಗ್ಗೆ ಅವರು ಕಾತರರಾಗಿದ್ದರು ಎಂಬ ವಿಷಯವು ಅಚ್ಚರಿ ಮೂಡಿಸಬೇಕಾದ್ದಿಲ್ಲ.

ಇಂತಹ ರಾಜಕೀಯ ಸಂಘರ್ಷ ಮತ್ತು ತಂತ್ರಗಾರಿಕೆಗಳ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷದ ಬೆಂಗಳೂರು ಸಮಾವೇಶವು ಜುಲೈ ೧೯೬೯ರಲ್ಲಿ ಆರಂಭಗೊಂಡಿತು. ಯಂಗ್ ಟರ್ಕ್‌ಗಳು ಅದರ ಮುಂದೆ ತಮ್ಮ ದೃಷ್ಟಿಯಲ್ಲಿನ ಪ್ರಗತಿಪರ ಹಾಗೂ ಸಮಾಜವಾದಿ ಕಾರ್ಯಕ್ರಮಗಳನ್ನು ಮಂಡಿಸಿದರು. ಅವರು ಬ್ಯಾಂಕ್‌ಗಳ ರಾಷ್ಟ್ರೀಕರಣವನ್ನು ಒತ್ತಾಯಿಸಿದರು. ಇಂದಿರಾ ಗಾಂಧಿಯವರು ಕಾರ್ಯಕಾರಿ ಸಮಿತಿಯ ಮೊದಲ ದಿನದ ಸಭೆಗೆ ಹಾಜರಾಗಲಿಲ್ಲ. ಸಿ. ಸುಬ್ರಮ್ಮಣ್ಯಂ ಮತ್ತು ಸಾದಿಕ್ ಆಲಿ ಅವರುಗಳು ಸಿದ್ಧಪಡಿಸಿದ್ದ ಕರಡು ಆರ್ಥಿಕ ನಿರ್ಣಯದ ಬಗೆಗಿನ ಚರ್ಚೆಯಲ್ಲಿ ಫಕ್ರುದ್ದೀನ್ ಆಲಿ ಅಹ್ಮದ್ ಅವರು ಪೂರ್ವಭಾವಿ ಸೂಚನೆಯಿಲ್ಲದೆಯೇ ಇದ್ದಕ್ಕಿದ್ದಂತೆ ಮಧ್ಯ ಪ್ರವೇಶಿಸಿ ಇಂದಿರಾ ಗಾಂಧಿಯವರು ಸಿದ್ಧಪಡಿಸಿದ್ದ ನಾಲ್ಕು ಪುಟಗಳ ಟಿಪ್ಪಣಿಯನ್ನು ಮಂಡಿಸಿದರು. ಈ ನಡವಳಿಕೆ ಕ್ರಮವಿರುದ್ಧವಾಗಿತ್ತು, ಯಾಕೆಂದರೆ ಅದು ಫಕ್ರುದ್ದೀನ್ ಆಲಿ ಅಹ್ಮದ್ ಅವರಿಗೆ ಬರೆದ ನಾಲ್ಕು ಪುಟಗಳ ವೈಯಕ್ತಿಕ ಪತ್ರವಾಗಿತ್ತೇ ಹೊರತು ಪಕ್ಷದ ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳನ್ನುದ್ದೇಶಿಸಿ ಬರೆದುದಾಗಿರಲಿಲ್ಲ. ಅದರ ಮುಖ್ಯ ಉದ್ದೇಶ ಶೀಘ್ರವಾದ ಆರ್ಥಿಕ ಪ್ರಗತಿ, ಜೊತೆಗೆ ಬ್ಯಾಂಕ್‌ಗಳ ರಾಷ್ಟ್ರೀಕರಣ ಅನಿವಾರ್ಯವೆಂದು ಪ್ರತಿಪಾದಿಸುವುದು. ೧೦ ರಂದು ಕರಡು ಆರ್ಥಿಕ ನಿರ್ಣಯವು ಚರ್ಚೆಗೆ ಬಂದಾಗ ಇಂದಿರಾ ಗಾಂಧಿಯವರು ಹಾಜರಿದ್ದರು. ಅವರು ಮತ್ತು ಎಸ್. ಕೆ. ಪಾಟೀಲ್‌ರ ನಡುವೆ ನೇರ ಮುಖಾಮುಖಿ ನಡೆಯಿತು. ಸಮಿತಿಯು ಸ್ಪಷ್ಟವಾಗಿ ಇಬ್ಭಾಗಗೊಂಡಿತು

– ಚವಾನ್, ಜಗಜೀವನ ರಾಂ, ಕಾಮರಾಜ್, ಸುಬ್ರಹ್ಮಣ್ಯಂ ಮತ್ತು ರಾಮ ಸುಭಾಗ್ ಸಿಂಗ್ ಬೆಂಬಲದ ಇಂದಿರಾಗಾಂಧಿಯವರ ಗುಂಪು ಮತ್ತು ಮೊರಾರ್ಜಿ, ಸಿ.ಬಿ. ಗುಪ್ತ, ಎಸ್.ಕೆ. ಪಾಟೀಲ್ ಮತ್ತು ಅತುಲ್ಯ ಘೋಷ್ ಬೆಂಬಲದ ನಿಜಲಿಂಗಪ್ಪ ಬಣ. ಇಂದಿರಾ ಗಾಂಧಿಯವರ ವೈಯಕ್ತಿಕ ಉದ್ದೇಶ ಹಾಗೂ ಆಕಾಂಕ್ಷೆಗಳು ಏನೇ ಆಗಿರಲಿ ಇದನ್ನು ಒಂದು ನೆಲೆಯಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯ ಎಂದು ಪರಿಗಣಿಸಬೇಕು. ಹೀಗಾಗಿ ಕಾಂಗ್ರೆಸ್ ಇಬ್ಬಾಗದ ಬಗೆಗಿನ ಸೈದ್ಧಾಂತಿಕೇತರ ವಿಶ್ಲೇಷಣೆಯನ್ನು ಮಾಡಿರುವ ಅತುಲ್ಯ ಘೋಷ್‌ರ 'ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಇಬ್ಭಾಗ' (ಜಯಂತಿ ಪ್ರಕಾಶಕರು, ಕಲ್ಕತ್ತ, ೧೯೭೦, ಬೆಲೆ ರೂ. ೫/–) ಪುಸ್ತಕದಲ್ಲಿನ ಚರ್ಚೆ ಹಾಗೂ ನಿಜಲಿಂಗಪ್ಪನವರ ವಿವರಣಾತ್ಮಕ ಮುನ್ನುಡಿ ಇವುಗಳನ್ನು ಗಂಭೀರ ಅನುಮಾನಗಳಿಲ್ಲದೆ ಒಪ್ಪಲಾಗುವುದಿಲ್ಲ. ಇತಿಹಾಸದಲ್ಲಿನ ಎಲ್ಲ ಸೈದ್ಧಾಂತಿಕ ವಿವಾದಗಳು ವೈಯಕ್ತಿಕ ಉದ್ದೇಶ ಮತ್ತು ಮಹತ್ವಾ ಕಾಂಕ್ಷೆಗಳಿಂದ ಗೋಜಲಾದ ಬಗ್ಗೆ ವಿವರಿಸಬೇಕಾಗಿಲ್ಲ. ಇದು ಈ ಮಹಾ ಒಡಕಿಗೂ ಅನ್ವಯಿಸುತ್ತದೆ. ನಿಜಲಿಂಗಪ್ಪನವರ ಸಮೇತ ಸಿಂಡಿಕೇಟ್‌ನ ಮನಸ್ಸಿನಲ್ಲಿ ರಾಷ್ಟ್ರಪತಿ ಹುದ್ದೆಗೆ ಸಂಜೀವರೆಡ್ಡಿಯವರನ್ನು ಸೂಚಿಸುವ ಉದ್ದೇಶವಿತ್ತು. ಬಹಳ ಮೊದಲೇ ಅವರಿಗೆ ಈ ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಸಹಜವಾಗಿಯೇ ಇಂದಿರಾ ಗಾಂಧಿಯವರಿಗೂ ಆ ಬಗ್ಗೆ ಅರಿವಿತ್ತು. ೧೨ನೇ ಜುಲೈ ೧೯೬೯ ರಂದು ನಡೆದ ಸಂಸದೀಯ ವ್ಯವಹಾರಗಳ ಸಮಿತಿ ಸಭೆಯಲ್ಲಿ ನಾಲ್ಕು–ಎರಡು ಮತಗಳಿಂದ ಸಂಜೀವರೆಡ್ಡಿಯವರ ಹೆಸರು ರಾಷ್ಟ್ರಪತಿ ಹುದ್ದೆಗೆ ಅಧಿಕೃತ ಅಭ್ಯರ್ಥಿಯೆಂದು ಒಪ್ಪಲಾಯಿತು. ಇಂದಿರಾ ಗಾಂಧಿಯವರ ಅಭ್ಯರ್ಥಿ ಜಗಜೀವನ ರಾಂ ಈ ಸ್ಪರ್ಧೆಯಲ್ಲಿ ಗೆಲ್ಲದೆ ಹೋದರು. ಮೊರಾರ್ಜಿ, ಚವ್ಹಾನ್, ಕಾಮರಾಜ್ ಮತ್ತು ಎಸ್.ಕೆ. ಪಾಟೀಲ್ ರೆಡ್ಡಿಯವರ ಪರವಾಗಿ ಮತ ನೀಡಿದರೆ, ನಿಜಲಿಂಗಪ್ಪ ಮತ್ತು ಜಗಜೀವನ ರಾಂ ಮತ ನೀಡದೆ ದೂರ ಉಳಿದರು. ಒಳ್ಳೆಯ ವಿಚಾರವಾದಿಯಾದ ಇಂದಿರಾ ಗಾಂಧಿ ಯವರು ಗಾಂಧೀಜಿಯ ಜನ್ಮ ಶತಾಬ್ಧಿ ವರ್ಷದಲ್ಲಿ ಜಗಜೀವನ ರಾಂ ಅಂತಹ ಹರಿಜನ ರನ್ನು ಭಾರತದ ರಾಷ್ಟ್ರಪತಿಯನ್ನಾಗಿ ಮಾಡದ ಬಗ್ಗೆ ಹಾಗೂ ಇದರಿಂದ ದೇಶದ ರಾಜಕೀಯ ಜೀವನದ ಮೇಲೆ ಉಂಟಾಗಬಹುದಾದ ಪರಿಣಾಮಗಳ ಬಗ್ಗೆ ಸಿಂಡಿಕೇಟ್ ಅನ್ನು ಎಚ್ಚರಿಸಿದರು! ನಿಜಲಿಂಗಪ್ಪ, ಮೊರಾರ್ಜಿ ಮತ್ತು ಕಾಮರಾಜರು ಕೂಡ ಆ ಹುದ್ದೆಯ ಮೇಲೆ ಕಣ್ಣಿಟ್ಟಿದ್ದರೆಂದು ವದಂತಿಗಳು ಹಬ್ಬಿದ್ದರೂ, ಅದಕ್ಕೆಲ್ಲ ಆಧಾರಗಳಿರಲಿಲ್ಲ.

ಗಿರಿಯವರು ರಾಷ್ಟ್ರಪತಿ ಹುದ್ದೆಗೆ ತಾವೂ ಸ್ಪರ್ಧಿಸುವುದಾಗಿ ಮಾರನೆಯ ದಿನ ತಾವು ತಾತ್ಕಾಲಿಕ ನಿವಾಸವನ್ನಾಗಿ ಮಾಡಿಕೊಂಡಿದ್ದ ರಾಷ್ಟ್ರಪತಿ ಭವನದಿಂದ ಪ್ರಕಟಿಸಿ ದರು. ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರು ಸಂಜೀವ ರೆಡ್ಡಿಯವರು ಕಾಂಗ್ರೆಸ್‌ನ

ಅಭ್ಯರ್ಥಿಯೆಂದು ಅಧಿಕೃತವಾಗಿ ಘೋಷಿಸಿದರು. ಹೀಗಾಗಿ ಚುನಾವಣೆ ಅನಿವಾರ್ಯ ವಾಯಿತು. ಈ ಮಧ್ಯೆ, ತಾವೂ ತಮ್ಮ ಸ್ಪರ್ಧಿಯನ್ನು ಕಣಕ್ಕಿಳಿಸಬೇಕೇ ಎಂಬುದರ ಬಗ್ಗೆ ವಿರೋಧ ಪಕ್ಷಗಳು ಚಿಂತನೆ ನಡೆಸಲು ತೊಡಗಿದುವು. ತಮ್ಮ ಆಂತರಿಕ ಅಭಿಪ್ರಾಯ ಗಳೇನೇ ಇರಲಿ, ತಾವು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಿರ್ಣಯಕ್ಕೆ ಬದ್ಧವಾಗಿರುವುದಾಗಿ ಇಂದಿರಾ ಗಾಂಧಿಯವರು ಪತ್ರಿಕೆಗಳಿಗೆ ಹೇಳಿದರು. ಸಿಂಡಿಕೇಟ್ ಅನ್ನು ಮುಗಿಸುವ ಯೋಜನೆಯ ಮೊದಲ ಹಂತವಾಗಿ ಅವರು, ಬ್ಯಾಂಕ್ ರಾಷ್ಟ್ರೀಕರಣಕ್ಕೆ ವಿರುದ್ಧವಾಗಿರುವ ರೆಂಬ ಕಾರಣದ ಮೇಲೆ ಮೊರಾರ್ಜಿ ದೇಸಾಯಿಯವರನ್ನು ಹಣಕಾಸು ಖಾತೆಯಿಂದ ಬಿಡುಗಡೆಗೊಳಿಸಿ, ತಾವೇ ಆ ಖಾತೆಯ ಜವಾಬ್ದಾರಿ ಹೊತ್ತರು. ಮೊರಾರ್ಜಿ ಇದರಿಂದ ಕ್ರೋಧಗೊಂಡಿದ್ದುದು ಸಹಜವೇ ಆಗಿತ್ತು. ಇಬ್ಬರ ನಡುವೆ ಕೋಪತಾಪಗಳ ಪತ್ರಗಳ ವಿನಿಮಯ ನಡೆದುವು. ರಾಜೀನಾಮೆ ಕೊಡದೆ ಬೇರೆ ಯಾವುದಾದರೂ ಖಾತೆಯನ್ನು ವಹಿಸಿಕೊಳ್ಳುವಂತೆ ಇಂದಿರಾ ಗಾಂಧಿಯವರು ೧೬-೭-೧೯೬೯ ರಂದು ಮೊರಾರ್ಜಿ ಯವರನ್ನು ಕೇಳಿಕೊಂಡರು. ಬ್ಯಾಂಕ್ ರಾಷ್ಟ್ರೀಕರಣದ ಬಗ್ಗೆ ತಮ್ಮ ಅಭಿಪ್ರಾಯವೇನಿದ್ದಿ ತೆಂಬುದನ್ನು ತಿಳಿದುಕೊಳ್ಳದೆ ಏಕಪಕ್ಷೀಯವಾಗಿಯೂ ಉದ್ದೇಶಪೂರ್ವಕವಾಗಿಯೂ ಆಕೆ ಈ ನಿರ್ಧಾರ ತೆಗೆದುಕೊಂಡಿದ್ದುದಾಗಿ ಮೊರಾರ್ಜಿ ಆಪಾದಿಸಿದರು. ಮೊರಾರ್ಜಿ ರಾಜೀನಾಮೆಯಿತ್ತು, ಈ ಅವಮಾನದ ವಿರುದ್ಧ ತಾವು ಮಾಡಬಹುದಾದದ್ದು ಸಂಪುಟ ತೊರೆಯುವುದನ್ನು ಮಾತ್ರ ಎಂದು ಸಂಸತ್ತಿನಲ್ಲಿ ವಿವರಣೆ ನೀಡಿದರು.

ರೆಡ್ಡಿಯವರನ್ನು ರಾಷ್ಟ್ರಪತಿಗಳನ್ನಾಗಿ ಮಾಡಿದರೆ ತಮ್ಮ ಆಯ್ಕೆಯವರು ಆ ಸ್ಥಾನದಲ್ಲಿರುವುದರಿಂದ ತಾವು ಬಹು ಮಟ್ಟಿನ ರಾಜಕೀಯ ಪ್ರಭಾವವನ್ನು ಹೊಂದ ಬಹುದೆಂದು ಸಿಂಡಿಕೇಟ್ ಸದಸ್ಯರು ಭಾವಿಸಿದರು. ಈ ಗುರಿಯ ಸಾಧನೆಗಾಗಿ ತಮಗೆ ಸಾಧ್ಯವಾದ ಎಲ್ಲ ಕ್ರಮಗಳನ್ನೂ ತೆಗೆದುಕೊಳ್ಳಲು ಅವರು ಮುಂದಾದರು. ಮೊರಾರ್ಜಿ ಬಗೆಗಿನ ವಿವಾದವನ್ನು ಅವರು ದೊಡ್ಡದು ಮಾಡಲು ಬಯಸಲಿಲ್ಲ. ವಿರೋಧಕ್ಕಿಂತ ಅವರು ರಾಜೀಸೂತ್ರದ ಕಡೆ ಒಲವು ಹೊಂದಿದ್ದರು. ನಿಜಲಿಂಗಪ್ಪನವರು ಇಂದಿರಾ ಗಾಂಧಿಯವರನ್ನು ಭೇಟಿಯಾಗಿ ಪಕ್ಷದ ಹಿತದೃಷ್ಟಿಯಿಂದ ಮೊರಾರ್ಜಿಯವರಿಗೆ ಹಿಂದಿನ ಖಾತೆಯನ್ನು ನೀಡಬೇಕೆಂದು ಒಲಿಸಿಕೊಳ್ಳಲು ಪ್ರಯತ್ನಿಸಿದರು. ಈ ಮಾತಿನಲ್ಲಿ ಸಿಂಡಿಕೇಟ್‌ನ ದೌರ್ಬಲ್ಯ ಮತ್ತು ಅಸಹಾಯಕತೆಗಳು ಅಡಗಿದ್ದನ್ನು ಕಂಡುಕೊಂಡ ಇಂದಿರಾ ಗಾಂಧಿಯವರು ಅದಕ್ಕೆ ಮಣಿಯಲು ನಿರಾಕರಿಸಿದರು. ಅದಕ್ಕೆ ವ್ಯತಿರಿಕ್ತವಾಗಿ, ಈ ಸಂದರ್ಭವನ್ನು ತಮ್ಮ ರಾಜಕೀಯ ವಿರೋಧಿಗಳನ್ನು ಮಟ್ಟಹಾಕಲು ಬಳಸಿಕೊಳ್ಳ ಬಹುದಾದ ಸದವಕಾಶ ಎಂದವರು ಭಾವಿಸಿದರು. ತಮ್ಮ ತಂತ್ರಗಾರಿಕೆಯ ಭಾಗವಾಗಿ, ತಕ್ಷಣದಿಂದಲೇ ತಮ್ಮ ಆರ್ಥಿಕ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮುಂದಾದರು. ಈ

ತಂತ್ರದ ಒಂದು ಅಂಶವೆಂದರೆ ತಮ್ಮ ವಿರೋಧಿಗಳಲ್ಲಿ ಅಚ್ಚರಿಯುಂಟುಮಾಡುವುದು, ಅವುಗಳ ಬಗ್ಗೆ ಸಾರ್ವಜನಿಕರಲ್ಲಿ ಕುತೂಹಲ ಮತ್ತು ಉತ್ಸಾಹಗಳನ್ನು ಮೂಡಿಸುವುದು ಹಾಗೂ ಪಕ್ಷದಲ್ಲಿನ ಕಿರಿಯರಲ್ಲಿ ಸಡಗರವನ್ನು ತರುವುದು. ಇದನ್ನೊಂದು ಸಮಗ್ರ ಕಾರ್ಯಯೋಜನೆಯಾಗಿ ಅವರು ರೂಪಿಸಿದರು. ಅವರ ಆರ್ಥಿಕ ಕಾರ್ಯಕ್ರಮಗಳಿಗೆ ಸಂಸತ್ತಿನ ಒಪ್ಪಿಗೆ ದೊರೆಯಿತು. ತಮ್ಮ ಯೋಜನೆಗಳನ್ನು ವಿರೋಧಿಸಿದರೆ ಅವರ ನಿಯಂತ್ರಣದಲ್ಲಿದ್ದ ಕಾರ್ಯಕಾರಿ ಸಮಿತಿಯಿಂದ ತಾವು ದೂರವಿರುವುದಾಗಿ ಅವರು ಸಿಂಡಿಕೇಟ್ ಅನ್ನು ಬೆದರಿಸಿದರು. ಯಾವುದೇ ಅತಿರೇಕವು ಪಕ್ಷದ ಐಕಮತ್ಯವನ್ನು ಹಾಳುಗೆಡುವಬಹುದೆಂಬ ಅಳುಕಿನಿಂದ ಕಾರ್ಯಕಾರಿ ಸಮಿತಿಯು ಮುಖಾಮುಖಿಯನ್ನು ತಡೆಗಟ್ಟಿತು. ರಾಷ್ಟ್ರಪತಿ ಅಭ್ಯರ್ಥಿಯ ಬಗೆಗಿನ ವಿಚಾರದಲ್ಲಿ ಒಂದು ನಿರ್ಣಯವನ್ನಂಗೀಕರಿಸಿದ ಕಾರ್ಯಕಾರಿ ಸಮಿತಿಯು, ಕಾಂಗ್ರೆಸ್ ಸಂಸದೀಯ ಪಕ್ಷದ ಸಾಮಾನ್ಯ ಸಭೆಯಲ್ಲಿ ಪ್ರಧಾನ ಮಂತ್ರಿಗಳು ಹಾಗೂ ಕಾಂಗ್ರೆಸ್ ಅಧ್ಯಕ್ಷರು ಮಾತನಾಡಿ ಅಧಿಕೃತ ಅಭ್ಯರ್ಥಿಯಾದ ರೆಡ್ಡಿಯವರಿಗೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಬೇಕೆಂದು ಸೂಚಿಸಿತು. ಇಂದಿರಾ ಗಾಂಧಿಯವರು ರೆಡ್ಡಿಯವರ ನಾಮಪತ್ರಕ್ಕೆ ಅಧಿಕೃತವಾಗಿ ಸಹಿ ಹಾಕಿದ್ದರು. ಇಂತಹ ಮುಂದುವರಿದ ಗೊಂದಲ ಪರಿಸ್ಥಿತಿಯಲ್ಲಿ ಎರಡೂ ಪಕ್ಷಗಳು ತಣ್ಣಗಾಗಿ ಲೆಕ್ಕಾಚಾರದಲ್ಲಿಯೂ ಅವಕಾಶ ಬಳಕೆಗೂ ಕಾಯುತ್ತಿದ್ದವು. ಹೇಳಿ ಕೇಳಿ, ಅದು ನಗ್ನ ಅಧಿಕಾರಕ್ಕೆ ನಡೆಯುತ್ತಿದ್ದ ಯುದ್ಧ. ಅದರ ಇತರ ಆಯಾಮಗಳು ಕಣ್ಮರೆಯಾಗದಿದ್ದರೂ, ತಾತ್ಕಾಲಿಕವಾಗಿ ಹಿಂದೆ ಸರಿದುವು. ರಾಜಕೀಯ ವದಂತಿಗಳು ದಟ್ಟವಾಗತೊಡಗಿದುವು. ಒಂದು ನಿದರ್ಶನವೆಂದರೆ, ರಾಷ್ಟ್ರಪತಿ ಚುನಾವಣೆಯ ಬಳಿಕ ಸಿಂಡಿಕೇಟ್ ಪರ್ಯಾಯ ಸರ್ಕಾರವೊಂದನ್ನು ಅಧಿಕಾರಕ್ಕೆ ತರುತ್ತದೆ ಎಂಬುದು. ಇಂದಿರಾ ಗಾಂಧಿಯವರು ಕಮ್ಯುನಿಸ್ಟರ ಜೊತೆಗೆ ಕೈಜೋಡಿಸಿದ್ದಾರೆ ಎಂಬ ವದಂತಿ ಕೂಡ ಹಬ್ಬಿತು. ಈ ಸಮರದಲ್ಲಿ, ಮೊದಲ ಗೆಲುವಾಗಿ, ಉಪರಾಷ್ಟ್ರಪತಿ ಹಾಗೂ ಸಭಾಧ್ಯಕ್ಷ ಸ್ಥಾನಗಳಿಗೆ ತಮ್ಮ ಅಭ್ಯರ್ಥಿಗಳಾದ ಜಿ.ಎಸ್. ಪಾಟಕ್ ಮತ್ತು ಜಿ.ಎಸ್. ಧಿಲ್ಲೋನ್ ಅವರ ಬಗ್ಗೆ ಕಾಂಗ್ರೆಸ್ ಸಂಸದೀಯ ವ್ಯವಹಾರಗಳ ಸಮಿತಿಯು ಒಪ್ಪಿಗೆ ಸೂಚಿಸುವಂತೆ ಮಾಡಿದುದು.

ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿಯೇ ರಾಷ್ಟ್ರಪತಿಯಾಗಿ ಚುನಾಯಿತರಾಗಲು ದೃಢ ನಿರ್ಧಾರ ಮಾಡಿದ್ದ ನಿಜಲಿಂಗಪ್ಪನವರು, ಸೈದ್ಧಾಂತಿಕವಾಗಿ ಕಾಂಗ್ರೆಸ್ ಪಕ್ಷಕ್ಕೆ ವಿರುದ್ಧವಾಗಿದ್ದ ಜನಸಂಘ ಹಾಗೂ ಸ್ವತಂತ್ರ ಪಕ್ಷಗಳ ಬೆಂಬಲವನ್ನು ಪಡೆಯಲು ಹಿಂದೇಟು ಹಾಕಲಿಲ್ಲ. ಈ ಪಕ್ಷಗಳು ಸಾಮಾನ್ಯವಾಗಿ ಪ್ರತಿಗಾಮಿಗಳು ಸಂಪ್ರದಾಯಶರಣ ಪಕ್ಷಗಳು ಎಂಬ ಹಣೆಪಟ್ಟಿಯನ್ನು ಹೊತ್ತಿದ್ದ ಅಂಶವನ್ನು ಗಮನಿಸಬೇಕು. ಈ ಪಕ್ಷಗಳ ಜೊತೆಗೆ ನಿಜಲಿಂಗಪ್ಪನವರು ಸಮಾಲೋಚನೆ ಮಾಡಿ, ಅವರ ಬೆಂಬಲವನ್ನು ಪಡೆಯಲು

ಹರಸಾಹಸ ಮಾಡಿದರು. ಇದಕ್ಕೆ ಕಾರಣ, ಪಕ್ಷದೊಳಗೇ ಅಧಿಕೃತ ಅಭ್ಯರ್ಥಿಯ ವಿರುದ್ಧವಾದ ಅಭಿಪ್ರಾಯ ಸಾಕಷ್ಟು ಪ್ರಮಾಣದಲ್ಲಿದೆಯೆಂಬ ಅನುಮಾನ. ತಾವು ಸ್ವತಂತ್ರ ಅಭ್ಯರ್ಥಿ ಎಂದು ಗಿರಿ ಘೋಷಿಸಿಕೊಂಡರು, ಕಮ್ಯುನಿಸ್ಟ್ ಹಾಗೂ ಮುಸ್ಲಿಂ ಲೀಗ್‌ಗಳ ಸಹಾಯ ಯಾಚಿಸಿದರು. ಎಲ್ಲಕ್ಕೂ ಮಿಗಿಲಾಗಿ, 'ಆತ್ಮಪ್ರಜ್ಞೆ'ಯ ಮತದಾನ ಮಾಡಬೇಕೆಂದು ಅವರು ಮತದಾರನ್ನು ಬೇಡಿಕೊಂಡರು. ತಾವು ಗಾಂಧಿವಾದಿ ಯಾದುದರಿಂದ ಕಾಂಗ್ರೆಸ್‌ಗೆ ವಿರುದ್ಧವಾಗಿರುವುದಾಗಿ ಅವರು ಹೇಳಿಕೊಂಡರು. ನಗ್ನಾಧಿಕಾರದ ಆಸೆಯ ತಾರ್ಕಿಕತೆಯಿಂದ ಇಂದಿರಾ ಗಾಂಧಿಯವರು ಪ್ರೇರಿತರಾದರೆ, ಕಾಂಗ್ರೆಸ್ ಪಕ್ಷದಲ್ಲಿನ ಬಂಡಾಯಗಾರ ಎಡಪಂಥೀಯ ಬಣವು ಪಕ್ಷವನ್ನು ಪ್ರತಿಗಾಮಿ ಹಳಬರಿಂದ ಮುಕ್ತಗೊಳಿಸುವ ಇದೊಂದು ಸುಸಂದರ್ಭವೆಂದು ಭಾವಿಸಿದರು. ಗಿರಿಯವರ ಗೆಲವು ಇಂದಿರಾ ಗಾಂಧಿಯವರ ರಾಜಕೀಯಾಧಿಕಾರದ ಸ್ಥಾಪನೆಯಾಗಿದ್ದರೆ, ಅದು ಪ್ರಜಾಸತ್ತಾತ್ಮಕ ಸಮಾಜವಾದಿ ಧೋರಣೆಯ ಗೆಲವಾಗುತ್ತದೆಂದು ಯಂಗ್ ಟರ್ಕ್‌ಗಳು ಭಾವಿಸಿದರು. ನಿಜಲಿಂಗಪ್ಪನವರು ಪ್ರಗತಿವಿರೋಧಿ ಸಿದ್ಧಾಂತದವರೆಂದು ಮಸಿ ಬಳಿಯಲು ಅವರು ಹಿಂದೆ ಮುಂದೆ ನೋಡಲಿಲ್ಲ. ಈಗಾಗಲೇ ಗಮನಿಸಿದಂತೆ, ನಿಜಲಿಂಗಪ್ಪನವರಿಗೆ ಆ ವಿಶೇಷಣ ನೀಡುವುದು ಅತಿಸರಳೀಕರಣ. ಅವರೆಲ್ಲ 'ಆತ್ಮಪ್ರಜ್ಞೆ'ಯ ಪರಿಕಲ್ಪನೆಯನ್ನು ಧಾರಾಳವಾಗಿ ಬಳಸಿಕೊಂಡರು. ಅಂಥವರಲ್ಲಿ ಒಬ್ಬರಾದ ಅರೋರ ಅವರನ್ನು ಪಕ್ಷವಿರೋಧಿ ಚಟುವಟಿಕೆಗಳಿಗಾಗಿ ಸಮಜಾಯಿಷಿ ನೀಡಬೇಕೆಂದು ನಿಜಲಿಂಗಪ್ಪ ಕೇಳಿದರು. ಜಗಜೀವನ ರಾಂ ಮತ್ತು ಫಕ್ರುದ್ದೀನ್ ಆಲಿ ಅಹ್ಮದ್ ಅವರುಗಳು ನಿಜಲಿಂಗಪ್ಪನವರಿಗೆ ಪತ್ರವೊಂದನ್ನು ಬರೆದು, ಕಾಂಗ್ರೆಸ್ ಪಕ್ಷದ ಧೋರಣೆಗಳ ವಿರುದ್ಧ ನಿಂತದ್ದಲ್ಲದೆ, ಬ್ಯಾಂಕ್ ರಾಷ್ಟ್ರೀಕರಣವನ್ನು ಪ್ರಶ್ನಿಸಿ ನ್ಯಾಯಾಲಯಕ್ಕೆ ಕೂಡ ಹೋಗಿದ್ದ ಜನಸಂಘ ಮತ್ತು ಸ್ವತಂತ್ರ ಪಕ್ಷಗಳ ಬೆಂಬಲವನ್ನು ಅಧ್ಯಕ್ಷರು ಕೇಳಿದ್ದರ ಬಗ್ಗೆ ನಿಜಲಿಂಗಪ್ಪನವರು ವಿವರಣೆ ನೀಡಬೇಕೆಂದು ಒತ್ತಾಯಿಸಿದರು. ತಾವು ಕೇವಲ ಕಾಂಗ್ರೆಸ್ ಸಲಹಾ ಸಮಿತಿಯ ಸೂಚನೆಯ ಮೇರೆಗೆ ವರ್ತಿಸಿದ್ದಾಗಿಯೂ, ತಮಗೆ ಇಂದಿರಾ ಗಾಂಧಿಯವರನ್ನು ಅಧಿಕಾರದಿಂದ ಕೆಳಗಿಳಿಸುವ ಉದ್ದೇಶವಿಲ್ಲವೆಂದೂ, ಕಾಂಗ್ರೆಸ್ ತನ್ನ ಸೈದ್ಧಾಂತಿಕತೆಯನ್ನು ತೊರೆದಿಲ್ಲ, ದೇಶದ ಹಿತದೃಷ್ಟಿಯಿಂದ ಇತರ ಪಕ್ಷಗಳ ನೆರವು ಕೋರುವುದು ತಪ್ಪೇನೂ ಆಗದೆಂದೂ ನಿಜಲಿಂಗಪ್ಪನವರು ತಮ್ಮ ಉತ್ತರದಲ್ಲಿ ವಿವರಣೆ ನೀಡಿದರು. ಎಲ್ಲ ಕಾಂಗ್ರೆಸ್ ಸಂಸತ್ ಸದಸ್ಯರುಗಳಿಗೂ ಕಾಂಗ್ರೆಸ್ ಎಂಎಲ್‌ಎಗಳಿಗೂ ಡಿಸಿಸಿ ಅಧ್ಯಕ್ಷರುಗಳಿಗೂ ಕಾಂಗ್ರೆಸ್ ಅಧ್ಯಕ್ಷರಾಗಿ ಅವರು ಪತ್ರಗಳನ್ನು ಬರೆದು ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿಯಾದ ಸಂಜೀವ ರೆಡ್ಡಿಯವರನ್ನು ಬೆಂಬಲಿಸಬೇಕೆಂದು ಕೇಳಿಕೊಂಡರು. ಯಂಗ್ ಟರ್ಕ್‌ಗಳು ಪ್ರತಿಪಾದಿಸುತ್ತಿದ್ದ 'ಆತ್ಮ

ಪ್ರಜ್ಞೆ'ಯ ಮತವನ್ನು ಅವರು ಬಹಿರಂಗವಾಗಿ ಅಲ್ಲಗಳೆದು, ರೆಡ್ಡಿಯವರಿಗೆ ಬೆಂಬಲ ಸೂಚಿಸುವಂತೆ ಕೇಳಿಕೊಳ್ಳಲು ಸದಸ್ಯರುಗಳನ್ನು ಖಾಸಗಿಯಾಗಿ ಭೇಟಿಯಾದರು.

ಚುನಾವಣೆಯ ದಿನಕ್ಕೆ ಮೂರು ದಿನ ಮುಂಚೆ ಕೂಡ ಇಂದಿರಾ ಗಾಂಧಿಯವರು ಪಕ್ಷದ ಅಧಿಕೃತ ಅಭ್ಯರ್ಥಿಯ ಬಗ್ಗೆ ಚಕಾರವನ್ನೂ ಎತ್ತಲಿಲ್ಲ. ಅವರ ಅಡುಗೆ ಮನೆಯ ಸಂಪುಟವು ಯುದ್ಧದ ಕಚೇರಿಯಂತೆ ಕೆಲಸ ಮಾಡತೊಡಗಿತು. ಫಕ್ರುದ್ದೀನ್ ಆಲಿ ಅಹಮದ್ ಮತ್ತು ಜಗಜೀವನ ರಾಂ ಅವರು ನಿಜಲಿಂಗಪ್ಪನವರಿಗೆ ೧೩-೮-೧೯೬೯ ರಂದು ಮತ್ತೊಂದು ಪತ್ರ ಬರೆದು ಮೊದಲ ಪತ್ರದಲ್ಲಿನ ಆಪಾದನೆಯನ್ನೇ ಪುನರುಚ್ಚರಿಸಿದರು. ಝಕೀರ್ ಹುಸೇನ್ ಅವರು ರಾಷ್ಟ್ರಪತಿ ಸ್ಥಾನಕ್ಕೆ ಸ್ಪರ್ಧಿಸಿದ್ದಾಗಲೂ ಇಂದಿರಾ ಗಾಂಧಿಯವರು ವಿರೋಧ ಪಕ್ಷಗಳ ಬೆಂಬಲ ಕೇಳಿದ್ದರು ಎಂಬ ನಿಜಲಿಂಗಪ್ಪನವರ ವಾದಕ್ಕೆ ಪ್ರತಿಯಾಗಿ ಅವರು ಮುಂದಿಟ್ಟ ವಾದವೆಂದರೆ, ಆಗ ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿಯ ವಿರುದ್ಧ ವಿರೋಧ ಪಕ್ಷಗಳೂ ಪ್ರತಿಸ್ಪರ್ಧಿಯನ್ನು ಸೂಚಿಸುವ ಮುಂಚೆ ಎಲ್ಲ ಪಕ್ಷಗಳು ಸೇರಿ ಒಮ್ಮತದ ಅಭ್ಯರ್ಥಿಯನ್ನು ಆಯುವ ಸಾಧ್ಯತೆಯನ್ನು ಕುರಿತು ಪರಿಶೀಲಿಸಲು ಇಂದಿರಾ ಗಾಂಧಿ ಹಾಗೆ ಮಾಡಿದ್ದರು ಎಂಬುದು! ತಮ್ಮದೇ ಆದ ಅಭ್ಯರ್ಥಿಯ ಬಗ್ಗೆ ವಿರೋಧ ಪಕ್ಷಗಳು ತೀರ್ಮಾನ ಮಾಡಿದ ಮೇಲೆ ಇಂದಿರಾ ಗಾಂಧಿಯವರು ಅವರನ್ನು ಕಾಣಲಿಲ್ಲ. ಆಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಕಾಮರಾಜ ನಾಡಾರ್ ಅವರು ಕೂಡ ನಿಜಲಿಂಗಪ್ಪನವರು ಈಗ ಮಾಡುತ್ತಿರುವುದನ್ನು ಮಾಡಿರಲಿಲ್ಲ. ಪ್ರಧಾನ ಮಂತ್ರಿಗಳು ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿಯ ವಿರುದ್ಧ ಕೆಲಸ ಮಾಡುತ್ತಿರುವರೆಂಬ ನಿಜ ಪರಿಸ್ಥಿತಿಯು ನಿಜಲಿಂಗಪ್ಪನವರಿಗೆ ಅರ್ಥವಾಯಿತು. ಘಟನೆಗಳ ಪುನರಾವಲೋಕನ ಮಾಡಿದರೆ, ಇಂದಿರಾ ಗಾಂಧಿಯವರು ಪಕ್ಷದ ಶಿಸ್ತನ್ನು ಮೀರಿ ವರ್ತಿಸಿದರು ಎಂಬುದು ಮಾತ್ರವಲ್ಲದೆ, ರಾಜಕೀಯ ಚದುರಂಗದಾಟದಲ್ಲಿ ನಿಜಲಿಂಗಪ್ಪನವರು ಅವರಿಗೆ ಸಾಟಿಯಲ್ಲ ಎಂಬುದೂ ಸ್ಪಷ್ಟವಾಗುತ್ತದೆ. ಕಾಂಗ್ರೆಸ್ ಅಧ್ಯಕ್ಷರು ಹಾಗೂ ಪ್ರಧಾನ ಮಂತ್ರಿಗಳ ನಡುವೆ ನಡೆದ ಪತ್ರವ್ಯವಹಾರವನ್ನು ನಾವು ಆ ಬಳಿಕ ಕೂಲಂಕಷವಾಗಿ ಪರಿಶೀಲಿಸೋಣ. ಕೊನೆಯವರೆಗೂ ಸುಮ್ಮನಿದ್ದ ಇಂದಿರಾ ಗಾಂಧಿಯವರು, ಪಕ್ಷದ ಆಣತಿಯನ್ನು ಮೀರಿ ತಮ್ಮ ಆತ್ಮಪ್ರಜ್ಞೆಗೆ ಅನುಸಾರವಾಗಿ ಮತ ನೀಡಲು ಎಲ್ಲರಿಗೂ ಹಕ್ಕಿದೆ ಎಂದು ಅಂತಿಮ ಕ್ಷಣದಲ್ಲಿ ಘೋಷಿಸಿದರು! ಪರಿಸ್ಥಿತಿಯ ಬಗ್ಗೆ ವಿಶ್ಲೇಷಿಸುತ್ತ, ಮತ್ತೊಬ್ಬ ಹಿರಿಯ ವಿರೋಧಿ ನಾಯಕರಾದ ಅಟಲ್ ಬಿಹಾರಿ ವಾಜಪೇಯಿ ಅವರು ಇಂದಿರಾ ಗಾಂಧಿಯವರ ನಡವಳಿಕೆ ನಾಚಿಕೆಗೇಡಿನದು ಎಂದೂ ಜಗತ್ತಿನ ಪ್ರಜಾಸತ್ತಾತ್ಮಕ ದೇಶಗಳ ಇತಿಹಾಸದಲ್ಲಿ ಎಂದೂ ಕೇಳರಿಯದ್ದು ಎಂದೂ ಖಂಡಿಸಿದರು. ಅಧಿಕೃತ

ಅಭ್ಯರ್ಥಿಗೆ ಬೆಂಬಲ ನೀಡುವಂತೆ ನಿಜಲಿಂಗಪ್ಪನವರು ಇಂದಿರಾ ಗಾಂಧಿಯವರಿಗೆ ಮಾಡಿಕೊಂಡ ಮನವಿ ನಿಷ್ಫಲಗೊಂಡಿತು. ಕಾಂಗ್ರೆಸ್‌ನ ಸಂಸದೀಯ ಪಕ್ಷವು ೧೪ ನೇ ಆಗಸ್ಟ್ ೧೯೬೯ ರಂದು ನಿರ್ಣಯವೊಂದನ್ನು ಅಂಗೀಕರಿಸಿ ಎಲ್ಲ ಕಾಂಗ್ರೆಸ್ಸಿಗರೂ ರೆಡ್ಡಿಯವರಿಗೆ ಮಾತ್ರ ಮತ ನೀಡಬೇಕೆಂದು ಸೂಚಿಸಿತು. ಇದು ಸರ್ವಾನುಮತದ ನಿರ್ಣಯವಾಗಿರದೆ ಕೇವಲ ಬಹುಮತದ್ದಾಗಿರುವುದರಿಂದ ಎಲ್ಲರಿಗೂ ಅನ್ವಯವಾಗಲಾರದು ಎಂಬ ಎಂದಿನ ತಮ್ಮ ಮೊಂಡು ವಾದವನ್ನು ಇಂದಿರಾ ಗಾಂಧಿ ಹಿಡಿದರು. ಎರಡೂ ಕಡೆಯವರು ಅತಿರೇಕದ ನೆಲೆಗಳಲ್ಲಿದ್ದ ಬೆಳವಣಿಗೆಗಳು ಪಕ್ಷ ಅನಿವಾರ್ಯವಾಗಿ ಇಬ್ಭಾಗವಾಗುವ ಸೂಚನೆಗಳಾದವು. ಎರಡೂ ಬಣಗಳು ಪ್ರಜಾಪ್ರಭುತ್ವದ ಜಪವನ್ನೇ ಮಾಡುತ್ತಿದ್ದುವು. ಈ ಪರಿಸ್ಥಿತಿಯು ಪ್ರಜಾಪ್ರಭುತ್ವ ಕುಸಿಯುತ್ತಿರುವ ಸೂಚನೆ ಎಂದು ಕಾಂಗ್ರೆಸ್ ಅಧ್ಯಕ್ಷರು ಭಾವಿಸಿದರೆ, ಪ್ರಧಾನ ಮಂತ್ರಿಗಳು ಪ್ರಜಾಸತ್ತೆಗ ಸಂದ ವಿಜಯ ಎಂದು ಭಾವಿಸಿದರು!

ವಿ.ವಿ. ಗಿರಿ ಚುನಾವಣೆಯಲ್ಲಿ ಗೆಲವು ಸಾಧಿಸಿದರು; ಇದು ಪ್ರಧಾನ ಮಂತ್ರಿಗಳ ಗೆಲವು ಮತ್ತು ಕಾಂಗ್ರೆಸ್ ಅಧ್ಯಕ್ಷರ ಸೋಲು ಎಂಬುದಾಯಿತು. ಇಂದಿರಾ ಗಾಂಧೀಯವರ ರಾಜಕೀಯ ಭವಿಷ್ಯ ಉಜ್ವಲವಾಗಿರುವ ಲಕ್ಷಣಗಳು ಸ್ಪಷ್ಟವಾಗಿ ಕಂಡು ಬಂದವು. ನಿಜಲಿಂಗಪ್ಪ ಮತ್ತವರ ಹಿರಿಯ ಸಹೋದ್ಯೋಗಿಗಳ ಐತಿಹಾಸಿಕ ಸೋಲು ಸಂಭವಿಸಿತು. ಸಿಂಡಿಕೇಟ್ ಇಂದಿರಾ ಗಾಂಧಿಯವರ ರಾಜಕೀಯ ದಾಳಿಯನ್ನು ಎದುರಿಸುವ ಸ್ಥಿತಿಯಲ್ಲಿಲ್ಲ ಎಂಬುದನ್ನು ನಿಜಲಿಂಗಪ್ಪ ಅರಿತುಕೊಂಡರು. ಗಿರಿಯವರಿಗೆ ಅಭಿನಂದನೆ ಸಲ್ಲಿಸಿದ ಮೊದಲಿಗರಲ್ಲಿ ಅವರೂ ಸೇರಿದ್ದರು. ಇದೊಂದು ಸುಸಂಧಿಯಾಗಿತ್ತು; ತಮ್ಮ ಪತ್ರಿಕಾ ಹೇಳಿಕೆಯಲ್ಲಿ ಅವರು ಗಿರಿಯವರನ್ನು ಎಲ್ಲ ಭಾರತೀಯರ ಗೌರವಕ್ಕೆ ಅರ್ಹರಾದ ವ್ಯಕ್ತಿ ಎಂದು ಬಣ್ಣಿಸಿದರು, ಆದರೆ ಅಧಿಕೃತ ಅಭ್ಯರ್ಥಿಯ ವಿರುದ್ಧ ಮತ ನೀಡಿದ ಪಕ್ಷದ ಸದಸ್ಯರು ಕರ್ತವ್ಯಭ್ರಷ್ಟತೆಯ ಕಳಂಕದಿಂದ ದೂರವಾಗಲಾರರು ಎಂದರು. ಪಕ್ಷದ ಅಭ್ಯರ್ಥಿಯ ವಿರುದ್ಧ ಮತ ನೀಡಿದವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಸಿಂಡಿಕೇಟ್ ಪರವಾಗಿದ್ದವರು ಕೂಗಾಡಿದರೆ, ಇದನ್ನು ಪ್ರಜಾಪ್ರಭುತ್ವ, ಸಮಾಜವಾದ ಹಾಗೂ ಧರ್ಮನಿರಪೇಕ್ಷಕತೆಗಳಿಗೆ ಸಂದ ವಿಜಯ ಎಂದು ಇಂದಿರಾ ಗಾಂಧಿ ವರ್ಣಿಸಿದರು. ಪಕ್ಷದೊಳಗಿನ ವಿರೋಧಿ ಬಣಗಳು ತಮ್ಮ ನಾಯಕತ್ವದಲ್ಲಿ ಒಂದಾಗುವುದೆಂದು ಆಶಿಸಿದುವು. ಹುದ್ದೆಯನ್ನು ತ್ಯಜಿಸಿ ಚುನಾವಣೆಗೆ ನಿಲ್ಲುವಂತೆ ತಮಗೆ ಹೇಳಿ, ಆ ಬಳಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ತಮ್ಮ ವಿರುದ್ಧ ನಾಚಿಕೆಗೆಟ್ಟು ಕೆಲಸ ಮಾಡಿದ ಇಂದಿರಾ ಗಾಂಧಿಯವರ ವರ್ತನೆಯನ್ನು ರೆಡ್ಡಿಯವರು ಬಹಿರಂಗವಾಗಿಯೇ ಖಂಡಿಸಿದರು. ೨೪ನೇ ಜುಲೈ ೧೯೬೯ ರಂದು ಖಾಸಗಿಯಾಗಿ

ಭೇಟಿಯಾಗಿ ಇಂದಿರಾ ಗಾಂಧಿಯವರು ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದ ಬಳಿಕವೇ ವಾಸ್ತವವಾಗಿ, ಬಡಪಾಯಿ ರೆಡ್ಡಿ ತಮ್ಮ ನಾಮಪತ್ರವನ್ನು ಸಲ್ಲಿಸಿದ್ದು! ಮೊದಲು ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿ ಆ ಬಳಿಕ ಬೆನ್ನಲ್ಲಿ ಚೂರಿಯಿಂದ ಇರಿದ ಜಗಜೀವನರಾಂ ಅವರ ಬಗ್ಗೆಯೂ ರೆಡ್ಡಿ ಕಹಿಯಾದರು. ಪ್ರಜಾಸತ್ತಾತ್ಮಕ ನಡಾವಳಿ, ಉದ್ದೇಶಗಳು ಹಾಗೂ ಆದರ್ಶಗಳ ಬಗೆಗಿನ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದ ಕಾಂಗ್ರೆಸ್ ಅಧ್ಯಕ್ಷರು, ಪಕ್ಷದಲ್ಲಿನ ಅಶಿಸ್ತಿನ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳುವುದಾಗಿ ಹೇಳಿದರು. ಇತ್ತ ಕಡೆ, ಅವರ ವಿರೋಧಿ, ಇಂದಿರಾ ಗಾಂಧಿಯವರು ಕಾಂಗ್ರೆಸ್ ಎಂಪಿಗಳನ್ನು ಭೇಟಿಯಾಗಿ ಅಧ್ಯಕ್ಷ ಚುನಾವಣೆಗಳಲ್ಲಿ ತಾವು ತೆಗೆದುಕೊಂಡ ನಿಲವನ್ನು ವಿವರಿಸುತ್ತ ಸಮರ್ಥಿಸಿಕೊಳ್ಳುತ್ತ ಸಾಗಿದರು. ತಮ್ಮ ವರ್ತನೆಯ ಬಗ್ಗೆ ಜಗಜೀವನ ರಾಂ ಮತ್ತು ಫಕ್ರುದ್ದೀನ್ ಆಲಿ ಅಹಮದ್ ಅವರನ್ನು ವಿವರಣೆ ಕೇಳಿದಾಗ, ಅವರು ಪಕ್ಷದ ಅಧ್ಯಕ್ಷರ ಮೇಲೆ ಹೀಯಾಳಿಕೆ ಮತ್ತು ಬೈಗುಳಗಳ ಮಳೆಗರೆದರು. ಎರಡೂ ವಿರೋಧಿ ಬಣಗಳನ್ನು ಒಗ್ಗೂಡಿಸುವ ಪ್ರಯತ್ನಗಳೇನೋ ನಡೆದುವು, ಆ ಬಗ್ಗೆ ಮುಂದಾಳತ್ವ ವಹಿಸಿದವರು ಚವಾನ್. ಅದರಲ್ಲೂ ನಿಜಲಿಂಗಪ್ಪ ಮತ್ತು ಇಂದಿರಾ ಗಾಂಧಿಯವರ ನಡುವೆ ಭೇಟಿ ಏರ್ಪಡಿಸಲು ಅವರು ಕಾತರರಾಗಿದ್ದರು. ಬಿರುಕಿನಿಂದ ಕಾಂಗ್ರೆಸ್ ದುರ್ಬಲಗೊಳ್ಳಬೇಕೆಂಬುದನ್ನು ಬಯಸುತ್ತಿದ್ದ ಕಮ್ಯುನಿಸ್ಟರು ಇಂದಿರಾ ಗಾಂಧಿಯವರನ್ನು ಬಹಿರಂಗವಾಗಿ ಬೆಂಬಲಿಸಿದರು. ದೇಶದ ವ್ಯವಸ್ಥೆಯನ್ನು ಹಾಳು ಗೆಡವುವ ಹುನ್ನಾರ ಮಾಡುತ್ತಿದ್ದಾರೆ ಎಂದು ಕಮ್ಯುನಿಸ್ಟರ ಬಗ್ಗೆ ನಿಜಲಿಂಗಪ್ಪನವರು ಕೆಂಡಾಮಂಡಲವಾದರು. ಇಂದಿರಾ ಗಾಂಧಿಯವರು ದೇಶದೆಲ್ಲೆಡೆ ತಮ್ಮ ಪ್ರತಿನಿಧಿಗಳ ಮೂಲಕ, ಪಕ್ಷವು ಒಡೆದರೆ ಅದಕ್ಕೆ ತಾವು ಕಾರಣರಾಗದೆ ಪಕ್ಷವನ್ನು ಹಿಡಿತದಲ್ಲಿಟ್ಟು ಕೊಂಡವರೇ ಕಾರಣರಾಗುತ್ತಾರೆ ಎಂದು ನಿಜಲಿಂಗಪ್ಪನವರ ವಿರುದ್ಧ ಟೀಕೆಗಳ ಪ್ರವಾಹವನ್ನೇ ಹರಿಸಿದರು.

ಇಂದಿರಾ ಗಾಂಧಿ ಹಾಗೂ ಅವರ ಬೆಂಬಲಿಗರನ್ನು ಪಕ್ಷದ ಸದಸ್ಯತ್ವದಿಂದ ಹೊರ ಹಾಕಲು ಕೆಲ ಎಂಪಿಗಳು ಒತ್ತಾಯಿಸಿದರು. ಸಂಸದೀಯ ವ್ಯವಹಾರಗಳ ಇಲಾಖೆಗೆ ಪತ್ರವೊಂದನ್ನು ಬರೆದು, ಪಕ್ಷದ ಆಣತಿಯನ್ನು ಉಲ್ಲಂಘಿಸಿ ತಾವೂ ಸಂಸತ್ತಿನಲ್ಲಿ ಪಕ್ಷದ ವಿರುದ್ಧ ಮತ ಹಾಕುವುದಾಗಿ ಹೆದರಿಸಿದರು. ಅನಿವಾರ್ಯವಾದರೆ ತಾವು ಸದನವನ್ನು ವಿಸರ್ಜಿಸಲು ಶಿಫಾರಸು ಮಾಡುವುದಾಗಿ ಬೆದರಿಸಿದರು. ಇಂದಿರಾ ಗಾಂಧಿಯವರ ವಿರುದ್ಧ ಕಾಂಗ್ರೆಸ್ ಸಂಸದೀಯ ಪಕ್ಷದಲ್ಲಿ ಅವಿಶ್ವಾಸ ನಿರ್ಣಯವನ್ನು ಮಂಡಿಸುವ ದುಸ್ಸಾಹಸಕ್ಕೇನಾದರೂ ಕೈಹಾಕಿದರೆ ಪಕ್ಷದ ಕಚೇರಿಯ ಮುಂದೆ ಬೃಹತ್ ಪ್ರತಿಭಟನೆ ನಡೆಸಲಾಗುವುದೆಂದೂ, ರಾಜಧಾನಿಯು ರಣರಂಗವಾಗಿ ಪರಿಣಮಿಸುವು

ದೆಂದೂ, ಗೊಂದಲ ಹಿಂಸಾಚಾರಗಳು ಸಂಭವಿಸಿ ಕಾನೂನು ವ್ಯವಸ್ಥೆ ಹದಗೆಡುತ್ತ ದೆಂದೂ ಪಕ್ಷದೊಳಗಿನ ಎಡಪಂಥೀಯ ಹಾಗೂ ಬಂಡುಕೋರ ಗುಂಪುಗಳು ಬೆದರಿಕೆ ಹಾಕಿದುವು. ಒಬ್ಬ ಸೂಕ್ತ ಪ್ರಗತಿಪರ ಬದಲಿ ವ್ಯಕ್ತಿಯನ್ನು ಮೊದಲು ಹೆಸರಿಸದೆ ಇಂದಿರಾ ಗಾಂಧಿಯವರನ್ನು ಹೊರಹಾಕಲು ಸಾಧ್ಯವಿಲ್ಲವೆಂದು ಬೇಲಿಯಂಚಿನಲ್ಲಿ ಕುಳಿತಿದ್ದ ಚವಾನ್ ಅವರು ತಿಳಿಹೇಳಿದರು. ಇಲ್ಲದಿದ್ದರೆ ಪಕ್ಷಕ್ಕೆ ಜನರ ಸಹಾನುಭೂತಿ ಮತ್ತು ಬೆಂಬಲಗಳು ಸಿಗುವುದಿಲ್ಲವೆಂದರು. ಈ ಹೊತ್ತಿಗೆ, ಚವಾನ್ ಅವರನ್ನೇ ಇಂದಿರಾ ಗಾಂಧಿಯವರಿಗೆ ಪರ್ಯಾಯವಾಗಿ ಸಿಂಡಿಕೇಟ್ ಹೆಸರಿಸಬಹುದೆಂಬ ವದಂತಿಗಳು ಗರಿಗೆದರಿದವು! ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ೨೫ ನೇ ಆಗಸ್ಟ್ ೧೯೬೯ ರಂದು ಸಭೆ ಸೇರಿದಾಗ, ಅಧ್ಯಕ್ಷ ಚುನಾವಣೆಯ ಸಂದರ್ಭದಲ್ಲಿ ತಾವು ಪ್ರತಿಪಕ್ಷಗಳವರ ಬೆಂಬಲ ಕೇಳಲು ಅನಿವಾರ್ಯವಾದ ಹಿನ್ನೆಲೆಯನ್ನು ನಿಜಲಿಂಗಪ್ಪ ನವರು ವಿವರಿಸಿದರು. ಈಗಲೂ ಪರಿಸ್ಥಿತಿಯನ್ನು ತಿಳಿಗೊಳಿಸಿ ಹದಕ್ಕೆ ತರಬಹುದೆಂದು ಸಭೆಯಲ್ಲಿ ಹಾಜರಿದ್ದ ಜಗಜೀವನ ರಾಂ ಮತ್ತು ಫಕ್ರುದ್ದೀನ್ ಅಲಿ ಅಹಮದ್ ಅವರುಗಳು ಸೂಚಿಸಿದರು. ಈ ವಿಷಯವನ್ನು ಆವೇಶದ ಬದಲು ನಿರ್ಭಾವುಕವಾಗಿ ಪರಿಶೀಲಿಸಬೇಕೆಂದು ಕೇಳಿಕೊಂಡರು. ಈ ಮಾತು ಹೇಳಿದಾಗ, ಹಿರಿಯರು ತಮ್ಮ ತಪ್ಪು ನಡವಳಿಕೆಗೆ ಕ್ಷಮೆ ಯಾಚಿಸಬೇಕೆಂದು ಸೂಚಿಸಿದಾಗ ಅವರದಕ್ಕೆ ಸಿದ್ಧವಾಗಿರಲಿಲ್ಲ. ಇಂದಿರಾ ಗಾಂಧಿ ಮತ್ತವರ ಬೆಂಬಲಿಗರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಕಾಮರಾಜ ನಾಡಾರ್ ಮತ್ತು ಎಸ್.ಕೆ. ಪಾಟೀಲ್ ಒತ್ತಾಯಿಸಿದರು. ಆದರೆ, ಚವ್ಹಾಣ್‌ರ ಚಾಣಾಕ್ಷತನ, ನಿಜಲಿಂಗಪ್ಪನವರ ಸೌಜನ್ಯ ಮತ್ತು ಇಂದಿರಾ ಗಾಂಧಿಯವರ ಒಡಂಬಡಿಕೆಯ ಮನಸ್ಸು ಇವುಗಳ ಫಲವಾಗಿ, ಬಿರುಸಿನಿಂದ ಆರಂಭಗೊಂಡ ಸಭೆಯು ಕೊನೆಯಲ್ಲಿ ಮಿದುಗೊಂಡಿತು. ಪಕ್ಷದ ಐಕಮತ್ಯ ಮತ್ತು ಸುರಕ್ಷೆಯ ಬಗ್ಗೆ ನಿರ್ಣಯ ವೊಂದನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಹಳೆಯ ಅಧ್ಯಾಯ ಮುಗಿ ಯಿತಲ್ಲ ಎಂಬ ಸಮಾಧಾನದ ನಿಟ್ಟುಸಿರು ನಿಜಲಿಂಗಪ್ಪನವರಿಂದ ಹೊರಹೊಮ್ಮಿತು. ಫಲಿತಾಂಶದಿಂದ ಹಿಗ್ಗಿದ್ದ ಇಂದಿರಾ ಗಾಂಧಿಯವರು ಇದು ತಮ್ಮ ವಿಜಯವೇ ಎಂದು ಬೀಗಿದರು. ಪಕ್ಷದ ಅಧ್ಯಕ್ಷರು ಹಾಗೂ ಪ್ರಧಾನ ಮಂತ್ರಿಗಳು ಅಧಿಕಾರಕೇಂದ್ರದ ಪ್ರತಿಸ್ಪರ್ಧಿಗಳಾಗಿರದೆ, ವಿಶಾಲ ಧೋರಣಾ ನಿರೂಪಣೆಯ ಜವಾಬ್ದಾರಿಯು ಅಧ್ಯಕ್ಷರ ದಾಗಿದ್ದು, ಪ್ರಧಾನ ಮಂತ್ರಿಗಳು ಅದಕ್ಕೆ ಬದ್ಧವಾಗಿರಬೇಕು, ಅಲ್ಲದೆ ದೇಶದ ಆಂತರಿಕ ವಿದೇಶಾಂಗ ಧೋರಣೆಗ ಕುರಿತ ಪ್ರಧಾನ ಮಂತ್ರಿಗಳ ವಿಶೇಷ ಹೊಣೆಗಾರಿಕೆಯನ್ನು ಗುರುತಿಸಬೇಕು, ಎಲ್ಲಕ್ಕೂ ಮೇಲಾಗಿ, ತಮ್ಮ ಕರ್ತವ್ಯಕ್ಷೇತ್ರಗಳ ಮಿತಿಯನ್ನು ಅವರಿಬ್ಬರೂ ಗೌರವಿಸಬೇಕು ಎಂಬ ಬಗ್ಗೆ ಆದ ತೀರ್ಮಾನ. ಈ ಸಂತೋಷವನ್ನು ಆಚರಿಸಲು

ಇಂದಿರಾ ಗಾಂಧಿಯವರು ಔತಣಕೂಟವೊಂದನ್ನು ಏರ್ಪಡಿಸಲು ಯತ್ನಿಸಿದರು, ಆದರೆ ಅದು ಕೈಗೂಡಲಿಲ್ಲ. ನಿಜಲಿಂಗಪ್ಪನವರ ಮಟ್ಟಿಗೆ ಹೇಳುವುದಾದರೆ, ಕಳೆದ ಎರಡು ತಿಂಗಳುಗಳ ಬಿರುಸಿನ ಚಟುವಟಿಕೆಗಳು ಪರಿಣಾಮ ಬೀರಿ ಅವರಿಗೆ ರಕ್ತ ದೊತ್ತಡದ ಸಮಸ್ಯೆಗಳು ಕಾಣಿಸಿಕೊಂಡುವು. ಅವರ ಆರೋಗ್ಯ ವಿಚಾರಿಸಲು ಇಂದಿರಾ ಗಾಂಧಿಯವರು ಖುದ್ದಾಗಿ ಬಂದರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ತಾವು ಗಳಿಸಿದ ಗೆಲವಿನಿಂದ ಉತ್ತೇಜಿತ ರಾದ ಇಂದಿರಾ ಗಾಂಧಿಯವರ ಬೆಂಬಲಿಗರು ನೇರವಾಗಿಯೂ ತಂತ್ರಗಾರಿಕೆಯ ಮೂಲಕವೂ ಸಿಂಡಿಕೇಟ್ ಅನ್ನು ಸರ್ವನಾಶ ಮಾಡಲು ತೊಡಗಿದರು. ಕಾರ್ಯಕಾರಿ ಸಮಿತಿಯು ಇಂದಿರಾಗಾಂಧಿಯವರ ಬಣದ ಒತ್ತಡಕ್ಕೆ ಮಣಿದುದಕ್ಕೆ ಸಂಘಟನೆಯ ನಿಷ್ಠಾವಂತ ಬೆಂಬಲಿಗರು ಅಸಂತುಷ್ಟಗೊಂಡರು. ಸಿಂಡಿಕೇಟ್ ಎಂದರೆ ಕೆಲವೇ ಮಂದಿ ಅಸಹಾಯಕ ಹಿರಿಯ ನಾಯಕರ ಗುಂಪು ಎಂಬ ಮಟ್ಟಕ್ಕಿಳಿಯಿತು. ಈ ಹೊತ್ತಿಗೆ ನಿಜಲಿಂಗಪ್ಪನವರೇ ದೈಹಿಕವಾಗಿಯೂ ಮಾನಸಿಕವಾಗಿಯೂ ಬಳಲಿದ್ದರು, ಎಸ್.ಕೆ. ಪಾಟೀಲ್ ಹಾಗೂ ಅತುಲ್ಯ ಘೋಷ್‌ರು ಇದರಿಂದಾಗಿ ಎಲ್ಲ ಆಸಕ್ತಿ ಕಳೆದುಕೊಂಡಿದ್ದರು. ಕಾಮರಾಜರು ಕೂಡ ನಿಷ್ಕ್ರಿಯೆಯಿಂದ ಬೆಂಡಾದರು. ಮೊರಾರ್ಜಿಯವರಂತೂ ಒಂಟಿಯೂ, ಏಕಾಂಗಿಯೂ ನಿಸ್ಸಹಾಯಕರೂ ಆಗಿಬಿಟ್ಟರು. ಪರಿಸ್ಥಿತಿಯ ಲಾಭ ಪಡೆದು ಬೇಕಾದಂತೆ ಆಟವಾಡುತ್ತ ತಮ್ಮ ಬೇಳೆ ಬೇಯಿಸಿಕೊಳ್ಳುವ ಚಾಣಾಕ್ಷತನವನ್ನು ತೋರುತ್ತಿದ್ದವರೆಂದರೆ ಚವಾನ್ ಒಬ್ಬರೇ. ಉಪಾಧ್ಯಕ್ಷ ಸ್ಥಾನಕ್ಕೆ ನಿಜಲಿಂಗಪ್ಪನವರು ಜಿ.ಎಸ್. ಪಾಠಕ್ ಅವರ ಬೆಂಬಲಕ್ಕೆ ಕೆಲಸ ಮಾಡಿದರು ವಿಭೂತಿ ಪೂಜೆ ಹಾಗೂ ಪ್ರಜಾಪ್ರಭುತ್ವಗಳು ಒಟ್ಟಿಗೆ ಇರಲಾರವೆಂದು ಬೆಂಗಳೂರಿನಲ್ಲಿ ಹೇಳುವ ಮೂಲಕ ನಿಜಲಿಂಗಪ್ಪನವರು ಇಂದಿರಾ ಗಾಂಧಿ ಬೆಂಬಲಿಗರ ಕೆಂಗಣ್ಣಿಗೆ ಗುರಿಯಾದರು. ಇಂದಿರಾ ಗಾಂಧಿಯವರ ಬಗ್ಗೆ ಅವರು ಎಚ್ಚರಿಕೆಯಿಂದ ಹಾಗೂ ನಿಧಾನಗತಿಯಲ್ಲಿ ಮುಂದು ವರಿಯತೊಡಗಿದರು; ಅದಕ್ಕೆ ಕಾರಣ ಏನಾದರೂ ಮಾಡಿ ಪಕ್ಷ ಇಬ್ಭಾಗವಾಗುವುದನ್ನು ತಪ್ಪಿಸಬೇಕೆಂಬುದು. ವಾಸ್ತವದದಲ್ಲಿ ಅವರ ಮಟ್ಟಿಗೆ ಪಕ್ಷದ ಹಿತವೆಂದರೆ ದೇಶದ ಹಿತ ಎಂಬ ಭಾವನೆ, ಅದಕ್ಕೆ ಕಾರಣ ಕಾಂಗ್ರೆಸ್ ಪಕ್ಷ ಮಾತ್ರವೇ ಹಿತಾಸಕ್ತಿಗಳನ್ನು ಕಾಪಾಡಬಲ್ಲ ಏಕೈಕ ಪಕ್ಷ ಎಂಬ ಅಚಲ ನಂಬಿಕೆ. ಇದರಿಂದ ಇಂದಿರಾ ಗಾಂಧಿಯವ ರಿಗೇ ಅನುಕೂಲವಾಯಿತು, ಅವರಂತೂ ಪರಿಸ್ಥಿತಿಯನ್ನು ತಮ್ಮ ಉಪಯೋಗಕ್ಕೆ ಬಳಸಿಕೊಳ್ಳಲು ಏನೇನು ಮಾಡಬೇಕೋ ಎಲ್ಲವನ್ನೂ ಮಾಡಿದರು. ೨೯ ನೇ ಆಗಸ್ಟ್ ೧೯೬೯ ರಂದು ನಡೆದ ಕಾಂಗ್ರೆಸ್ ಸಂಸದೀಯ ಪಕ್ಷದ ಸಭೆಯಲ್ಲಿ ಇಂದಿರಾ ಗಾಂಧಿ ಯವರು ಮಾತನಾಡುತ್ತ, ಪ್ರತಿಯೊಬ್ಬ ವ್ಯಕ್ತಿಯೂ, ಪ್ರಜಾಸತ್ತಾತ್ಮಕ ಸಮಾಜವಾದದಲ್ಲಿ

ನಂಬಿಕೆಯುಳ್ಳವರು ಯಾವುದೇ ಪಕ್ಷಕ್ಕೇ ಸೇರಿರಲಿ, ಕಾಂಗ್ರೆಸ್ ಪಕ್ಷ ಸೇರಲು ಮುಕ್ತ ಅವಕಾಶವಿದೆ ಎಂದು ಘೋಷಿಸಿದರು. ಇಂದಿರಾ ಗಾಂಧಿಯವರ ಬಗ್ಗೆ ನಿಜಲಿಂಗಪ್ಪನವರಿಗಿದ್ದ ಪ್ರಮುಖ ದೂರೆಂದರೆ ಅವರು ಕಾಂಗ್ರೆಸ್ ಪಕ್ಷದೊಳಗೆ ಕಮ್ಯುನಿಸ್ಟರು ನುಸುಳುವುದಕ್ಕೆ ಅವಕಾಶವಿತ್ತಿದ್ದಾರೆ ಎಂಬುದು. ಅದನ್ನೇ ಅವರು ೪-೯-೧೯೬೯ ರಂದು ಬೆಂಗಳೂರಿನಲ್ಲಿ ಪತ್ರಿಕೆಗಳೊಂದಿಗೆ ಮಾತನಾಡುತ್ತ ಹೇಳಿದುದು. ಒಳಗಿನಿಂದಲೇ ಕಾಂಗ್ರೆಸ್ ಅನ್ನು ಸರ್ವನಾಶ ಮಾಡುವ ಉದ್ದೇಶದಿಂದ ಒಳನುಸುಳದೆ, ನಿಜವಾಗಿಯೂ ಪ್ರಜಾಸತ್ತಾತ್ಮಕ ಸಮಾಜವಾದದಲ್ಲಿ ನಂಬಿಕೆಯಿರುವುದಾದರೆ ಅವರು ಕಾಂಗ್ರೆಸ್ ಸೇರಲು ತಮ್ಮ ಅಭ್ಯಂತರವಿಲ್ಲವೆಂದೂ ಅವರು ಸೇರಿಸಿದರು. ದೀರ್ಘ ಹೇಳಿಕೆಯಲ್ಲಿ ಅವರು ತಮ್ಮ ಸೈದ್ಧಾಂತಿಕ ಆದರ್ಶಗಳ ಸಾರವನ್ನು ನೀಡಿದರು. ತಾವು ಅಮೆರಿಕದ ಬಂಡವಾಳ ಶಾಹಿಯ ಪರವಾಗಲೀ ರಷ್ಯಾದ ಕಮ್ಯುನಿಸಂನ ಪರವಾಗಿಯಾಗಲೀ ಇಲ್ಲ ಎಂದವರು ತಮ್ಮ ಹೇಳಿಕೆಯಲ್ಲಿ ನುಡಿದರು. ಭಾರತೀಯ ಇತಿಹಾಸ ಹಾಗೂ ಸಂಸ್ಕೃತಿಗಳಿಗೆ ಮತ್ತು ಜನರ ಆಶೋತ್ತರಗಳಿಗೆ ಹೊಂದಿಕೆಯಾಗಬಲ್ಲ ಭಾರತೀಯ ಸಮಾಜವಾದ ತಮ್ಮ ಆದರ್ಶ ಎಂದರು. ಬಡವರ ಬಗ್ಗೆ ಸಹಾನುಭೂತಿ ತೋರಿಸುವಲ್ಲಿ ತಾವು ಯಾರಿಗೇನೂ ಕಡಿಮೆಯಿಲ್ಲ ಎಂದರು. ತಮ್ಮ ಆದರ್ಶ ಸಾರ್ವತ್ರಿಕ ಮಾನವ ಕಲ್ಯಾಣ ಮತ್ತು ಸುಖಸಂತೋಷಗಳು; ಸಂಪತ್ತು ಕೆಲವೇ ಕೆಲವರ ಕೈಲಿ ಕೇಂದ್ರೀಕೃತವಾಗುವುದಕ್ಕೆ ಅವರ ವಿರೋಧವಿದೆ ಎಂದರು. ಪ್ರತಿಯೊಬ್ಬರೂ ಉತ್ಪಾದಕ ಕಾಯಕದಲ್ಲಿ ತೊಡಗಿದರೆ ದೇಶವು ತಾನಾಗಿ ಅಭಿವೃದ್ಧಿ ಹೊಂದುವುದೆಂಬುದು ಅವರ ನಂಬಿಕೆ. ಉದಾರ ಪ್ರಜಾಪ್ರಭುತ್ವದ ಪರವಾಗಿ ತಮ್ಮ ಅಚಲ ನಿಲವು, ಹೀಗಾಗಿ ಅದಕ್ಕೆ ವಿರುದ್ಧವಾದ ಎಲ್ಲ ಪಕ್ಷಗಳನ್ನೂ ತೊರೆಯಬೇಕು. ಒಣ ಘೋಷಣೆಗಳಿಂದ ಏನೂ ಸಾಧನೆಯಾಗುವುದಿಲ್ಲ, ಖಾಸಗಿ ಹಾಗೂ ಸಾರ್ವಜನಿಕ ರಂಗಗಳ ನಡುವಣ ಆರೋಗ್ಯಕರ ಪೈಪೋಟಿ ಮಾತ್ರವೇ ದಕ್ಷತೆಯನ್ನು ಬೆಳೆಸಬಲ್ಲುದು ಎಂದರು. ಕೊನೆಯಲ್ಲಿ, ಪ್ರಜಾಪ್ರಭುತ್ವ, ಸಮಾಜವಾದ ಹಾಗೂ ಧರ್ಮನಿರಪೇಕ್ಷಕತೆಗಳಿಗೆ ಬದ್ಧವಾದ ಹೊಸ ಪಕ್ಷವನ್ನು ತಾವು ಸ್ವಾಗತಿಸುವುದಾಗಿ ಹೇಳಿಕೆಯಿತ್ತರು. ಆದರೆ ವೈಯಕ್ತಿಕವಾಗಿ ತಾವು ಕೊನೆಯವರೆಗೆ ಕಾಂಗ್ರೆಸ್ಸಿಗರಾಗಿ ಉಳಿಯುವುದಾಗಿ ಘೋಷಿಸಿದರು! ಕಾರ್ಯಕಾರಿ ಸಮಿತಿಯ ಸೂಚನೆಯಂತೆ, ಮೊರಾರ್ಜಿಯವರ ರಾಜೀನಾಮೆಯಿಂದ ಉದ್ಭವಿಸಿರುವ ಪರಿಸ್ಥಿತಿಯನ್ನು ಕುರಿತು ಆಲೋಚಿಸಲು ಕಾಂಗ್ರೆಸ್ ಅಧ್ಯಕ್ಷರು ಹಾಗೂ ಪ್ರಧಾನ ಮಂತ್ರಿಗಳು ೮ನೇ ಸೆಪ್ಟೆಂಬರ್, ೧೯೬೯ ರಂದು ಭೇಟಿಯಾದರು. ದೀರ್ಘ ಕಾಲದ ಬಳಿಕ ಅದು ಅವರಿಬ್ಬರ ನಡುವಣ ಖಾಸಗಿ ಭೇಟಿಯಾಗಿದ್ದುದರಿಂದ, ನೇರವಾಗಿ ಗಂಭೀರ ವಿಷಯಗಳ ಚರ್ಚೆಗೆ ತೊಡಗಲಿಲ್ಲ, ಬದಲಿಗೆ ಉಭಯಕುಶಲೋಪರಿಯಲ್ಲಿ ಕಾಲ ಕಳೆದರು. ಪಕ್ಷದ ಹಿತದೃಷ್ಟಿಯಿಂದ

ಹೊಂದಾಣಿಕೆಯ ಸೂತ್ರವನ್ನು ಕಂಡುಕೊಳ್ಳುವಲ್ಲಿ ನಿಜಲಿಂಗಪ್ಪನವರು ಹೆಣಗುತ್ತಿದ್ದರೆ, ಇಂದಿರಾ ಗಾಂಧಿಯವರ ಹಿಂಬಾಲಕರು ಮಾತ್ರ ಅವರ ಬಗೆಗಿನ ಶೀತಲಸಮರವನ್ನು ಕೊನೆಗೊಳಿಸಲು ಸಿದ್ಧರಿರಲಿಲ್ಲ. ಮೊರಾರ್ಜಿಯವರು ಪ್ರತಿ ಹಂತದಲ್ಲಿಯೂ ಸರ್ಕಾರದ ನೀತಿಯನ್ನು ಟೀಕಿಸುವುದರಲ್ಲಿಯೇ ತೊಡಗುತ್ತಿದ್ದುದರಿಂದ ಪರಿಸ್ಥಿತಿ ಬಿಗಡಾಯಿಸಿತ್ತು. ಈ ಮಧ್ಯೆ, ಚವಾನ್ ಅವರು ಇಂದಿರಾ ಗಾಂಧಿಯವರನ್ನು ಬಹಿರಂಗವಾಗಿ ಬೆಂಬಲಿಸ ತೊಡಗಿದರು. ಮಹಾರಾಷ್ಟ್ರ ಪಿಸಿಸಿಯು ಸಂಘಟಿಸಿದ್ದ ವಿಚಾರ ಸಂಕಿರಣವೊಂದರಲ್ಲಿ ೧೮-೯-೧೯೬೯ ರಂದು ಅವರು ಇಂದಿರಾ ಗಾಂಧಿಯವರಿಗೆ ತಮ್ಮ ಬೆಂಬಲವನ್ನು ಘೋಷಿಸಿದರು. ಅಧ್ಯಕ್ಷ ಚುನಾವಣೆಯಲ್ಲಿನ ಅಧಿಕೃತ ಕಾಂಗ್ರೆಸ್ ಅಭ್ಯರ್ಥಿಯ ಬಗೆಗಿನ ನಿರ್ಣಯವನ್ನು ಆತುರದ್ದು ಎಂದು ಟೀಕಿಸಲು ಶುರು ಮಾಡಿಕೊಂಡರು. ಹೀಗಾಗಿ ಇಂದಿರಾ ಗಾಂಧಿ ಮತ್ತವರ ಬೆಂಬಲಿಗರು ದಿನೇ ದಿನೇ ಪ್ರಬಲರಾಗುತ್ತ ನಡೆದರು, ವಿಶೇಷ ಸಮಾವೇಶ ನಡೆಸಬೇಕೆಂದು ಒತ್ತಾಯಿಸಿ ಸಹಿ ಸಂಗ್ರಹ ಚಳವಳಿಗೆ ಕೈಹಾಕಿದರು. ಅವರ ಉದ್ದೇಶ ನಿಜಲಿಂಗಪ್ಪನವರನ್ನು ಪಕ್ಷದ ಅಧ್ಯಕ್ಷಸ್ಥಾನದಿಂದ ಕಿತ್ತೊಗೆದು ಇಂದಿರಾ ಗಾಂಧಿಯವರಿಗೆ ಅನುಕೂಲಕರವಾಗಿದ್ದ ವ್ಯಕ್ತಿಯೊಬ್ಬರನ್ನು ಆ ಜಾಗದಲ್ಲಿ ಕೂಡಿಸುವುದಾಗಿತ್ತು ಎಂಬುದರಲ್ಲಿ ಸಂಶಯವಿರಲಿಲ್ಲ. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವನ್ನು ಸಮಸ್ಯೆಗಳು ಕಿತ್ತು ತಿನ್ನುತ್ತಿರುವಂತೆ ತೋರಿತು. ತಮಿಳು ನಾಡು ಕಾಂಗ್ರೆಸ್‌ನ ಒಳಜಗಳದಿಂದಾಗಿ, ಸಿ. ಸುಬ್ರಹ್ಮಣ್ಯಂ ಅವರು ಪಿಸಿಸಿ ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆ ನೀಡಬೇಕಾಯಿತು. ಪಿಸಿಸಿ ಅಧ್ಯಕ್ಷರಾಗಿದ್ದ ಬಲದಿಂದಲೇ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದುದರಿಂದ ಅವರು ತಮ್ಮ ಸ್ಥಾನವನ್ನು ತಾನೇ ತಾನಾಗಿ ಕಳೆದುಕೊಂಡಿದ್ದಾರೆ ಎಂಬುದನ್ನು ನಿಜಲಿಂಗಪ್ಪನರಿಗೆ ತಿಳಿಸಲಾಯಿತು. ಉತ್ತರ ಪ್ರದೇಶ ಮತ್ತು ಆಂಧ್ರಗಳಲ್ಲಿನ ಪಿಸಿಸಿ ಅಧ್ಯಕ್ಷರುಗಳಾದ ಕಮಲಾಪತಿ ತ್ರಿಪಾಠಿ ಮತ್ತು ಕಾಕನಿ ವೆಂಕಟರತ್ನಂ ಅವರುಗಳು ಆಯಾ ರಾಜ್ಯ ಸಚಿವ ಸಂಪುಟಗಳನ್ನು ಸೇರಿದ್ದರಿಂದಾಗಿ ತಮ್ಮ ಸ್ಥಾನಗಳನ್ನು ತೆರವುಗೊಳಿಸಬೇಕಾಯಿತು. ಸದಸ್ಯರು ಸನ್ನಿವೇಶ ಬಲದಿಂದ ತಮ್ಮ ಸ್ಥಾನಗಳನ್ನು ಕಳೆದುಕೊಂಡದ್ದಕ್ಕೆ ಅಧಿಕೃತ ಮುದ್ರೆಯನ್ನೊತ್ತಬೇಕೆಂದು ಶಂಕರ ದಯಾಳ್ ಶರ್ಮ ಅವರು ಕಾಂಗ್ರೆಸ್ ಅಧ್ಯಕ್ಷರನ್ನು ಒತ್ತಾಯಿಸಲು ಪ್ರಯತ್ನಪಟ್ಟರು. ಈ ತಾಂತ್ರಿಕ ತೆರವುಗಳನ್ನು ಒಪ್ಪಿಕೊಳ್ಳುವಂತೆ ನಿಜಲಿಂಗಪ್ಪನವರನ್ನು ಒತ್ತಾಯಿಸುವುದರ ಮೂಲಕ ಶಂಕರ ದಯಾಳ ಶರ್ಮರು ಅವರ ವಿರುದ್ಧ ಆಟವಾಡುತ್ತಿದ್ದರೆಂಬುದು ಸ್ಪಷ್ಟವಾಯಿತು. ಹಾಗೆ ನೋಡಿದರೆ, ಜಗಜೀವನ ರಾಂ ಅವರೂ ಸೇರಿದಂತೆ, ಇಂದಿರಾ ಗಾಂಧಿಯವರ ಬೆಂಬಲಿಗರು ೮-೧೦-೧೯೬೯ ರಂದು ಪತ್ರವೊಂದನ್ನು ಬರೆದು ಇದನ್ನೇ ಒಂದು ದೊಡ್ಡ ವಿಷಯವನ್ನಾಗಿ ಮಾಡಿದ್ದರು. ಅವರ ತರ್ಕವೆಂದರೆ, ಎರಡು ದಶಕಗಳ ಹಿಂದೆ ಮಾಡಿದ್ದ

ಕಾರ್ಯಕಾರಿ ಸಮಿತಿಯ ನಿರ್ಣಯಕ್ಕೆ ಅನುಗುಣವಾಗಿ ಈಗ ಸುಬ್ರಹ್ಮಣ್ಯಂ ಅವರನ್ನು ಕಾರ್ಯಕಾರಿ ಸಮಿತಿಯ ಸದಸ್ಯತ್ವದಿಂದ ತೆಗೆದು ಹಾಕಿದರೆ ಪಕ್ಷದ ಪ್ರಸ್ತುತ ಬಿಕ್ಕಟ್ಟು ಪಕ್ಷದ ಐಕಮತ್ಯಕ್ಕೆ ಆಘಾತಕಾರಿಯಾಗುವುದೆಂಬುದು! ಕಾರ್ಯಕಾರಿ ಸಮಿತಿಯ ಹಾಗೂ ಎಐಸಿಸಿಯ ಸಭೆಗಳನ್ನು ಶೀಘ್ರವಾಗಿ ಕರೆದು ಈ ವಿಷಯವನ್ನು ಚರ್ಚಿಸ ಬೇಕೆಂಬುದು ಅವರ ಒತ್ತಾಯವಾಗಿತ್ತು. ಈ ಸಭೆಗಳು ನಡೆಯುವವರೆಗೂ, ಕಾರ್ಯಕಾರಿ ಸಮಿತಿಯ ಅವರ ಸದಸ್ಯತ್ವವನ್ನು ರದ್ದುಗೊಳಿಸುವ ಆಜ್ಞೆಯನ್ನು ಅಮಾನತಿನಲ್ಲಿಡ ಬೇಕೆಂಬುದು ಅವರ ಒತ್ತಾಯವಾಗಿತ್ತು.

ಅದರ ಮಾರನೆಯ ದಿನವೇ, ನಿಜಲಿಂಗಪ್ಪನವರು ಅದಕ್ಕೆ ಉತ್ತರ ಕಳಿಸಿ, ತಾವು ಮಾಡದೇ ಇದ್ದುದಕ್ಕೆ ತಮ್ಮನ್ನು ಹೊಣೆಗಾರರನ್ನಾಗಿ ಮಾಡಿದ್ದರ ಬಗ್ಗೆ ತಮ್ಮ ವೈಯಕ್ತಿಕ ಆಕ್ರೋಶವನ್ನು ವ್ಯಕ್ತಪಡಿಸಿದ್ದರು. ತಾವು ಸುಬ್ರಹ್ಮಣ್ಯಂ ಅವರಿಗೆ ಯಾವುದೇ ಪತ್ರ ಬರೆದಿಲ್ಲವೆಂದೂ, ಹಾಗಾಗಿ ಇಂದಿರಾ ಗಾಂಧಿಯವರೂ ಅವರ ಐದು ಮಂದಿ ಸಹಚರರೂ ವಾಸ್ತವಾಂಶಗಳನ್ನು ತಿಳಿಯದೆ ಆರೋಪಗಳನ್ನು ಹೊರಿಸಿದ್ದಾರೆ ಎಂದೂ ವಿವರಿಸಿದರು. ತಾವು ಕೇವಲ ನಿಯಮಾನುಸಾರ ನಡೆದಿರುವುದಾಗಿ ತಿಳಿಸಿದರು. ಎರಡು ದಶಕಗಳ ಹಿಂದೆ ಕಾರ್ಯಕಾರಿ ಸಮಿತಿ ನಿರ್ಣಯ ಮಾಡಿತ್ತು ಎಂಬುದೇ, ಅದನ್ನು ಹಿಂತೆಗೆದುಕೊಂಡಿಲ್ಲದುದರಿಂದಾಗಿ, ನಿಯಮವು ಅಸಿಂಧುವಾಗಲು ಕಾರಣವಾಗ ಲಾರದು. ಈ ರೀತಿ ತಾವು ನಿಯಮಬದ್ಧತೆಯನ್ನು ಪ್ರದರ್ಶಿಸಿದ್ದಾಗಿ ಹೇಳಿಕೊಂಡರು. ತಮ್ಮ ಮೇಲೆ ಆಪಾದನೆ ಮಾಡಿದವರಿಗೆ, ಕಾಲ ಸರಿದಂತೆ ನಿಯಮಗಳು ಕರಗಿ ಹೋಗುತ್ತವೆಂಬ ಸಿದ್ಧಾಂತದಲ್ಲೇನಾದರೂ ನಂಬಿಕೆಯಿದೆಯೇ ಎಂದು ಲೇವಡಿ ಮಾಡಿ ದರು! ವಕೀಲರಾಗಿ ನಿಜಲಿಂಗಪ್ಪನವರು ಪಡೆದಿದ್ದ ಅನುಭವ ಹಾಗೂ ಕಾನೂನಿಗೆ ಅನುಸಾರವಾದ ನಡವಳಿಕೆಯೆಂಬ ಪ್ರಜಾಪ್ರಭುತ್ವದಲ್ಲಿನ ಬದ್ಧತೆಗಳು ಈ ನಿಲವನ್ನು ಹೊಂದಲು ಕಾರಣವಾದವು. ವಿಷಯದ ಕಾನೂನಾತ್ಮಕ ಸ್ವರೂಪ ಹಾಗೂ ನೈತಿಕತೆಗಳು ಏನೇ ಆಗಿರಲಿ, ಅದೆಲ್ಲ ನಿಜಲಿಂಗಪ್ಪನವರ ವಿರುದ್ಧ ರಾಜಕೀಯ ದಾಳಗಳಾಗಿದ್ದುವು. ಸಿಂಡಿಕೇಟ್ ವಿರುದ್ಧದ ತಮ್ಮ ಸಮರದಲ್ಲಿ ಇಂದಿರಾ ಗಾಂಧಿಯವರು ತಮಗೆ ಸಾಧ್ಯವಿದ್ದ ಎಲ್ಲ ಅಸ್ತ್ರಗಳನ್ನು ಪ್ರಯೋಗಿಸಿದರು. ೧೯೬೯ರ ಅಕ್ಟೋಬರ್ ೧೫ ರಂದು ಅವರು ತಮ್ಮ ಸಂಪುಟದ ಇಬ್ಬರು ಸಚಿವರುಗಳಾದ ಹಾಗೂ ನಿಜಲಿಂಗಪ್ಪ ಬೆಂಬಲಿಗರೆನಿಸಿ ಕೊಂಡಿದ್ದ ಗುರುಪಾದಸ್ವಾಮಿ ಮತ್ತು ಜಗನ್ನಾಥ್ ಪಹಾಡಿಯ ಅವರಿಗೆ ಪತ್ರಗಳನ್ನು ಬರೆದು ರಾಜೀನಾಮೆ ನೀಡುವಂತೆ ಒತ್ತಡ ಹಾಕಿದರು. ಇದಕ್ಕೆ ನಿಜಲಿಂಗಪ್ಪನವರ ಪ್ರತಿಕ್ರಿಯೆ ಅಸಾಧಾರಣ ತಾಳ್ಮೆಯಿಂದ ಕೂಡಿತ್ತು; ಯಾರನ್ನಾದರೂ ಸಂಪುಟದಲ್ಲಿರಿಸಿ ಕೊಳ್ಳುವುದೂ ಬಿಡುವುದೂ ಪ್ರಧಾನ ಮಂತ್ರಿಗಳ ವಿವೇಚನೆಗೆ ಬಿಟ್ಟದ್ದೆಂದೂ, ಪಕ್ಷವು

ಅದರಲ್ಲಿ ತಲೆ ಹಾಕುವುದಿಲ್ಲವೆಂದೂ ಹೇಳಿದರು. ಇಂದಿರಾ ಗಾಂಧಿ ಮತ್ತವರ ಸಹಚರರು ಸದಾ ಕಾಲ ಸಿಂಡಿಕೇಟ್‌ನ ಬಗ್ಗೆ ಇಲ್ಲಸಲ್ಲದ ಆಪಾದನೆಗಳನ್ನು ಮಾಡಿ ಗೂಬೆ ಕೂರಿಸುತ್ತ ಬಿಡುವಿಲ್ಲದೆ ಓಡಾಡತೊಡಗಿದರು. ಅದೇ ವೇಳೆಗೆ ಇಂದಿರಾ ಗಾಂಧಿ ಮತ್ತು ನಿಜಲಿಂಗಪ್ಪನವರನ್ನು ಒಗ್ಗೂಡಿಸುವ ವ್ಯರ್ಥ ಪ್ರಯತ್ನಗಳು ಸಾಗಿದುವು. ನಿಜಲಿಂಗಪ್ಪನವರ ಆಪ್ತರಾದ ವೀರೇಂದ್ರ ಪಾಟೀಲ್ ಕೂಡ ಇದರಲ್ಲಿ ಮಧ್ಯಪ್ರವೇಶಿಸಲು ಬಯಸಿದರೂ, ಅವರು ನಿಜಲಿಂಗಪ್ಪನವರ ಆಪ್ತರಾದದ್ದರಿಂದ ಇಂದಿರಾ ಗಾಂಧಿಯವರ ದೃಷ್ಟಿಯಲ್ಲಿ ಅವರ ಬಗ್ಗೆ ಸಂಶಯಗಳು ಹುಟ್ಟಿಕೊಂಡವು. ಸಿಂಡಿಕೇಟ್‌ನ ಮಗ್ಗುಲು ಮುರಿಯುವ ಅತ್ಯಂತ ಪರಿಣಾಮಕಾರಿ ಮಾರ್ಗವೆಂದರೆ ನಿಜಲಿಂಗಪ್ಪನವರನ್ನು ಕಾಂಗ್ರೆಸ್ ಅಧ್ಯಕ್ಷ ಹುದ್ದೆಯಿಂದ ಕೆಳಗಿಳಿಸುವುದು ಎಂಬುದು ಅವರಿಗೆ ಮನವರಿಕೆಯಾಗಿತ್ತು. ಅದರಿಂದ ತನಗೂ ಹೆಚ್ಚಿನ ಭದ್ರತೆ ಒದಗುತ್ತದೆ. ತಮ್ಮ ತಂತ್ರವನ್ನು ಜಾರಿಗೊಳಿಸಲು ಅವರಿಗೆ ಸುಬ್ರಹ್ಮಣ್ಯಂ ಪ್ರಕರಣವು ಉಪಯುಕ್ತವೆನಿನಿಸಿತು. ಬೆಂಗಳೂರು ಕಾಂಗ್ರೆಸ್ ಸಮಾವೇಶದ ಬಳಿಕ ನಡೆದ ವಿದ್ಯಮಾನಗಳನ್ನು ಉಲ್ಲೇಖಿಸಿ ನಿಜಲಿಂಗಪ್ಪನವರು ೨೮-೧೦-೧೯೬೯ ರಂದು ಒಂದು ಪತ್ರ ಬರೆದು, ಕಾಂಗ್ರೆಸ್‌ನಲ್ಲಿ ಉಂಟಾಗಿರುವ ಒಡಕಿಗೆ ಆಕೆಯೇ ಸಂಪೂರ್ಣ ಹೊಣೆಗಾರರೆಂದು ಅದರಲ್ಲಿ ಪ್ರತಿಪಾದಿಸಿದ್ದರು. ಆ ಪತ್ರದ ಮುಖ್ಯಾಂಶಗಳನ್ನಿಲ್ಲಿ ಸಾರರೂಪವಾಗಿ ನೀಡಬಹುದು. ಕಾರ್ಯಕಾರಿ ಸಮಿತಿಯ ಸದಸ್ಯರು ವಿಶೇಷ ಸಮಾವೇಶವೊಂದನ್ನು ನಡೆಸಲು ಒತ್ತಾಯಿಸಲು ಅಧ್ಯಕ್ಷರ ವಿರುದ್ಧವೇ ವದಂತಿಗಳನ್ನು ಹಬ್ಬಿಸಿದಂತಹ ಪ್ರಸಂಗವು ಕಾಂಗ್ರೆಸ್‌ನ ಇತಿಹಾಸದಲ್ಲಿಯೇ ಇಲ್ಲ. ನೀತಿ ಅಥವಾ ಕಾರ್ಯಕ್ರಮಗಳ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿದ್ದಾಗಲೂ ಕಾರ್ಯ ಕಾರಿ ಸಮಿತಿಯು ಎಂದೂ ಸ್ನೇಹಪರತೆ ಹಾಗೂ ಸಹಕಾರ ಮನೋಭಾವಗಳನ್ನು ಬಿಟ್ಟಿರಲಿಲ್ಲ. ತಮ್ಮ ಸಜ್ಜನಿಕೆ ಹಾಗೂ ಸತ್ಯಪರವಾದ ಕನಿಷ್ಠ ಗೌರವವನ್ನೆಲ್ಲ ಮರೆತ ಇಂದಿರಾ ಗಾಂಧಿಯವರು ತಮ್ಮ ಹೆಸರಿಗೆ ಮಸಿ ಬಳಿಯಲು ತಮ್ಮ ಮೇಲೆ ಇಲ್ಲಸಲ್ಲದ ಆರೋಪಗಳ ರಾಶಿಯನ್ನೇ ಮಾಡಿದರು. ಅಧ್ಯಕ್ಷ ಚುನಾವಣೆಗೆ ಮೂರು ತಿಂಗಳ ಮುಂಚೆ ಕೂಡ ತಾವು ಪಕ್ಷದ ಅಭ್ಯರ್ಥಿಯ ಬಗ್ಗೆ ಸೂಚಿಸಿದ್ದರು, ಆದರೆ ಆಕೆಯೇ ಆ ಕುರಿತು ನಿರ್ಲಕ್ಷ್ಯದಿಂದ ಮೌನ ತಾಳಿದ್ದರು. ಅಧಿಕೃತ ಅಭ್ಯರ್ಥಿಯು ಸೋತಾಗ ಆಕೆಯು ಪ್ರಾಥಮಿಕ ವಿಷಾದವನ್ನು ವ್ಯಕ್ತಪಡಿಸುವ ಕನಿಷ್ಠ ಔಪಚಾರಿಕ ಸೌಜನ್ಯವನ್ನೂ ತೋರಿಸಲಿಲ್ಲ. ಮೇಲಾಗಿ, ಗಿರಿಯವರ ಗೆಲವು ತಮ್ಮ ಗೆಲವೇ ಎಂದು ಎಲ್ಲ ಕಡೆಯೂ ಸಾರಿಕೊಂಡು ಬಂದರು. ಇಂತಹ ಸಂಗತಿಗಳಂತೂ ಪ್ರಜಾಪ್ರಭುತ್ವದಲ್ಲಿ ಎಂದೂ ನಡೆದೇ ಇಲ್ಲ. ಅಧ್ಯಕ್ಷ ಚುನಾವಣೆಗಳ ಬಳಿಕ, ಖಾಸಗಿ ಹಾಗೂ ಸಾರ್ವಜನಿಕ ನೈತಿ ಕತೆಯ ದೃಷ್ಟಿಯಿಂದ ಅವರ ನಡವಳಿಕೆಯು ತೀರ ಅಸಹ್ಯಕರವಾಗಿದೆ. 'ಆತ್ಮಪ್ರಜ್ಞೆ'ಯ

ಮತವೆಂಬ ಅವರ ಅಸಿಂಧು ಪರಿಕಲ್ಪನೆಯಿಂದಾಗಿ ಕಮ್ಯುನಿಸ್ಟ್ ಮತ್ತು ಮುಸ್ಲಿಂ ಲೀಗ್‌ಗಳಿಂದ ಬೆಂಬಲಿತವಾದ ಅಭ್ಯರ್ಥಿ ಗೆಲವನ್ನು ಸಾಧಿಸುವಂತಾಯಿತು. ಅವರ ನಡವಳಿಕೆಯು ಕಾಂಗ್ರೆಸ್ ಪಕ್ಷದ ಸುರಕ್ಷೆ ಮತ್ತು ಅದರ ಬಗೆಗಿನ ಸದ್ಭಾವನೆಗಳನ್ನು ಹಾಳುಗೆಡವಿ, ತನ್ನ ಕರ್ತವ್ಯಗಳನ್ನು ನಿಭಾಯಿಸಲಾರದ ಸ್ಥಿತಿಗೆ ತಂದಿದೆ. ಅಧ್ಯಕ್ಷ ಚುನಾವಣೆಯ ಬಳಿಕ ಪಕ್ಷವು ಒಂದು ಐಕಮತ್ಯ ನಿರ್ಣಯವನ್ನಂಗೀಕರಿಸಿದೆ. ಆದರೆ ಐಕಮತ್ಯವನ್ನು ಮಾತ್ರ ಸಾಧಿಸಲಾಗದಿರಲು ಕಾರಣ ಶಿಸ್ತಿಗನುಗುಣವಾದ ರೀತಿಯಲ್ಲಿ ಅದರ ನಿರ್ಣಯಗಳಿಗೆ ಬದ್ಧವಾಗದಿರುವುದು. ತಾವು ಪಕ್ಷದ ಯಾವುದೇ ನಿಯಮವನ್ನೂ ಉಲ್ಲಂಘಿಸಿಲ್ಲ. ಆದರೆ ಆಕೆಯೇ ಈ ಉದ್ದಕ್ಕೂ ತಮ್ಮ ಸರ್ಕಾರದ ಅಧಿಕಾರವನ್ನು ದುರ್ಬಳಕೆ ಮಾಡಿಳ್ಳುತ್ತಿದ್ದಾರೆ. ಅವರ ವರ್ತನೆಯು ತನ್ನನ್ನು ಅಧಿಕಾರದಲ್ಲಿ ಕೂರಿಸಿರುವ ಪಕ್ಷದ ಎಲ್ಲ ಪ್ರಜಾಸತ್ತಾತ್ಮಕ ಉತ್ತರದಾಯಿತ್ವವನ್ನು ಗಾಳಿಗೆ ತೂರಿದ ಉದ್ದೇಶ ಪೂರ್ವಕವೂ ಸ್ವಯಮಾಧಿಕಾರದ್ದೂ ಆಗಿದೆ. ತಮ್ಮ ಅಧಿಕಾರ ಹಾಗೂ ಹುದ್ದೆಗಳಿಗೆ ಕಾರಣವಾದ ಪಕ್ಷವನ್ನು ಅವರು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾರೆ. ಸಾಂಸ್ಥಿಕ ಬದುಕಿನ ಮೇಲೆ ಅವರು ಬೇಕಾಬಿಟ್ಟಿ ಸವಾರಿ ಮಾಡುತ್ತಿದ್ದಾರೆ. ಸನ್ನಡತೆ ಮತ್ತು ಶಿಸ್ತುಗಳನ್ನು ಗಾಳಿಗೆ ತೂರುವ ರೀತಿಯಲ್ಲಿ ಸನ್ನಿವೇಶವನ್ನು ಸೃಷ್ಟಿಸಿದ್ದಾರೆ. ತಾವು ಗುಂಪುಗಾರಿಕೆ ಹಾಗೂ ಒಳಜಗಳಗಳಿಗೆ ವಿರುದ್ಧವೆಂದೇನೋ ಆಕೆ ಹೇಳುತ್ತಾರೆ. ಸಿಂಡಿಕೇಟ್ ಅನ್ನೇ ಅವರು ಗುಂಪು ಎಂದು ಕರೆಯುತ್ತಿರುವುದು. ಆದರೆ ವಾಸ್ತವದಲ್ಲಿ ಸಿಂಡಿಕೇಟ್ ಅಂದರೆ ಏನು? ೧೯೬೪ರಲ್ಲಿ ಶಾಸ್ತ್ರಿಯವರನ್ನೂ ೧೯೬೭ರಲ್ಲಿ ಇಂದಿರಾ ಗಾಂಧಿ ಯವರನ್ನೂ ಪ್ರಧಾನ ಮಂತ್ರಿ ಸ್ಥಾನಕ್ಕೆ ಆಯ್ಕೆ ಮಾಡಿದ ಪಕ್ಷದ ಹಿರಿಯ ನಾಯಕರನ್ನು ವರ್ಣಿಸಲು ಪತ್ರಿಕೆಗಳವರು ಸೃಷ್ಟಿಮಾಡಿರುವ ಶಬ್ದ ಅದು. ಆ ಸಂದರ್ಭದಲ್ಲಿ ಅವರಿಗೆ ಸಿಂಡಿಕೇಟ್ ಪ್ರತಿಗಾಮಿ ಗುಂಪು ಎಂದು ಅನ್ನಿಸಲಿಲ್ಲ. ಆ ಗುಂಪು ಬಂಡವಾಳಶಾಹಿಗಳ ಪರವಾದುದು ಎಂದು ಆಗೇನೂ ಭಾವಿಸಲಿಲ್ಲ. ಆದರೆ ಈಗ ಮಾತ್ರ ಹಿರಿಯ ನಾಯಕರು ಪ್ರಗತಿಪರ ಕಾನೂನುಗಳಿಗೆ, ವಿಶೇಷವಾಗಿ ಬ್ಯಾಂಕ್ ರಾಷ್ಟ್ರೀಕರಣಕ್ಕೆ ವಿರುದ್ಧವಾದವರು ಎಂಬ ಅಪಪ್ರಚಾರವನ್ನು ಮಾಡುತ್ತಿದ್ದಾರೆ. ತಾವೇ ಬಡವರ ಬಂಧು ಎಂದು ಎಲ್ಲೆಡೆ ಸಾರಿಕೊಂಡು ಬರುತ್ತಿದ್ದಾರೆ, ಆದರೆ ಇದು ಕಾಂಗ್ರೆಸ್‌ನ ನೀತಿ ಎಂದು ಅವರೆಂದೂ ಹೇಳಿಲ್ಲ. ಬ್ಯಾಂಕ್ ರಾಷ್ಟ್ರೀಕರಣಕ್ಕೆ ತಾವೇ ಏಕೈಕ ಕಾರಣ ಎಂಬಂತೆ ಬಿಂಬಿಸಿಕೊಳ್ಳು ತ್ತಿದ್ದಾರೆ. ಆದರೆ ಅವರಿಗಿಂತ ಬಹಳ ಮುಂಚೆಯೇ ಕಾಮರಾಜ್, ಚವಾನ್ ಮತ್ತು ಅತುಲ್ಯ ಘೋಷ್‌ರು ಬ್ಯಾಂಕ್‌ಗಳನ್ನು ರಾಷ್ಟ್ರೀಕರಿಸಲು ತುಂಬ ಕಷ್ಟಪಟ್ಟಿದ್ದರು ಎಂಬು ದನ್ನವರು ಮರೆತುಬಿಟ್ಟಿದ್ದಾರೆ. ತಾವೊಬ್ಬರೇ ಪ್ರಗತಿಪರ ಹಾಗೂ ಕ್ರಾಂತಿಕಾರಿ ನಾಯಕಿ ಯೆಂದು ಬಿಂಬಿಸಿಕೊಳ್ಳಲು ಅವರು ಪ್ರಯತ್ನ ನಡೆಸುತ್ತಿದ್ದಾರೆ. ಆದರೆ ವಾಸ್ತವದಲ್ಲಿ,

ಅವರ ಪ್ರಗತಿಪರ ಧೋರಣೆ ಎಂದರೆ ಸ್ವಯಂನಿಷ್ಠೆ, ಮತ್ತು ತಮ್ಮನ್ನು ವೈಭವೀಕರಿಸುವ ಸಾಮರ್ಥ್ಯ. ಪ್ರಜಾಸತ್ತಾತ್ಮಕ ಪದ್ಧತಿಗಳಿಗೆ ಅನುಗುಣವಾಗಿ ನಡೆದುಕೊಳ್ಳುವವರನ್ನು ಅವರ ಹಿಂಬಾಲಕರು ಪ್ರತಿಗಾಮಿಗಳು ಎಂದು ಪರಿಗಣಿಸಲು ನಿರ್ಧರಿಸಿಬಿಟ್ಟಿದ್ದಾರೆ! ತಮ್ಮ ವ್ಯಕ್ತಿಗತ ನಡವಳಿಕೆ ಹಾಗೂ ಸರ್ಕಾರಗಳನ್ನು ವಿರೋಧಿಸುವವರನ್ನೆಲ್ಲ ಅವರು ಕ್ರಮಬದ್ಧವಾಗಿ ತೆಗೆದುಹಾಕುತ್ತ ಬಂದಿದ್ದಾರೆ.

ಇಂದಿರಾ ಗಾಂಧಿಯವರು ತಾವು ಗುಂಪುಗಾರಿಕೆ ವಿರುದ್ಧವೆಂದು ಹೋದೆಡೆಯಲೆಲ್ಲ ಹೇಳಿಕೊಂಡು ತಿರುಗುತ್ತಿದ್ದಾರೆ. ತಮಗೆ ಬರೆದ ಪತ್ರದಲ್ಲಿ ಕಾರ್ಯಕಾರಿ ಸಮಿತಿಯ ಆರು ಸದಸ್ಯರ ಸಹಿಗಳಿವೆ; ಅಲ್ಲದೆ, ಮಹಾ ನಾಯಕಿಯು ಯಾವುದೇ ಸಂಸ್ಥೆಗಿಂತ ದೊಡ್ಡವರೆಂದು ಅವರ ಅನುಯಾಯಿಗಳು ಡಂಗೂರ ಸಾರುತ್ತಿದ್ದಾರೆ. ಅವರ ಸಂಪುಟದ ಸಚಿವರು ನ್ಯಾಯಯುತವಾಗಿಯೂ ಪ್ರಜಾಸತ್ತಾತ್ಮಕವಾಗಿಯೂ ಚುನಾಯಿತರಾದವರ ವಿರುದ್ಧ ಬಂಡೇಳುವ ಉದ್ಧಟತನವನ್ನು ತೋರುತ್ತಿದ್ದಾರೆ. ತಮ್ಮ ಮಾತನ್ನು ಕೇಳದ ರಾಜ್ಯ ಸರ್ಕಾರಗಳನ್ನು ಅಸ್ಥಿರಗೊಳಿಸುವ ಅವರು ಅನುಸರಿಸುತ್ತಿದ್ದಾರೆ. ಕಾಂಗ್ರೆಸ್ಸಿಗರು ಚುನಾವಣೆಗಳಲ್ಲಿ ಸೋಲುವಂತೆ ಕಮ್ಯುನಿಸ್ಟರು, ಮುಸ್ಲಿಂ ಲೀಗ್ ಮತ್ತು ಡಿಎಂಕೆಗಳ ಸಹಕಾರದಿಂದ ಅವರು ಸಂಚು ನಡೆಸುತ್ತಿದ್ದಾರೆ. ತಮ್ಮ ಆರಾಧಕರಾದವರ ಕ್ಷುಲ್ಲಕ ಪಾತಕಗಳನ್ನೂ ಅಪರಾಧಗಳನ್ನೂ ಕ್ಷಮಿಸಿಬಿಡಲು ಅವರು ಸಿದ್ಧರಾಗಿದ್ದಾರೆ. ಅಂತಹ ವ್ಯಕ್ತಿಗಳು ಆದಾಯ ತೆರಿಗೆ ಪಾವತಿಸುವುದರಿಂದ ಮುಕ್ತರಾಗುತ್ತಾರೆ, ಅವರಾರೂ ತಮ್ಮ ಸ್ವಂತ ಆಸ್ತಿಯನ್ನು ಘೋಷಿಸಿಕೊಳ್ಳಬೇಕಾಗಿಲ್ಲ. ಮೇಲಾಗಿ, ಪಕ್ಷಕ್ಕಾಗಿ ತಾವು ಸಂಗ್ರಹಿಸಿದ ನಿಧಿಯ ಬಗ್ಗೆ ಅವರಾರೂ ಲೆಕ್ಕ ಕೊಡಬೇಕಾಗಿಲ್ಲ. ಪ್ರಜಾಪ್ರಭುತ್ವವೆಂದರೆ ಸಾಮೂಹಿಕ ಆಡಳಿತ ಎಂದು ನಿಜಲಿಂಗಪ್ಪನವರು ವ್ಯಾಖ್ಯಾನಿಸಿದರು. ಆ ಪತ್ರವನ್ನು ಬರೆಯಲು ತಮಗೆ ತುಂಬ ನೋವಾಗಿದೆಯೆಂದೂ, ಅನೇಕ ದಿನಗಳ ಹಿಂಜರಿಕೆ ಮತ್ತು ಒಳಗುದಿತಗಳ ಬಳಿಕ ಅದನ್ನು ಬರೆಯುತ್ತಿರುವುದಾಗಿಯೂ ಅವರು ಹೇಳಿಕೊಂಡಿದ್ದಾರೆ. ಆದರೆ ಕರ್ತವ್ಯಪ್ರಜ್ಞೆಯಿಂದ ಆ ಕೆಲಸವನ್ನು ಮಾಡಿ ವಿಷಯವನ್ನು ಇಂದಿರಾ ಗಾಂಧಿಯವರ ಗಮನಕ್ಕೆ ತಂದುದಾಗಿ ಹೇಳಿಕೊಂಡಿದ್ದಾರೆ. ಕಾಂಗ್ರೆಸ್ ಪಕ್ಷದ ನಿಲವುಗಳಾದ ದೃಢತೆ ಮತ್ತು ಪ್ರಜಾಸತ್ತಾತ್ಮಕ ಉತ್ತರದಾಯಿತ್ವಗಳನ್ನು ಎತ್ತಿ ಹಿಡಿಯುವುದು ತಮ್ಮ ಕರ್ತವ್ಯವೆಂದು ಪರಿಗಣಿಸಿದ್ದಾಗಿಯೂ, ಪತ್ರ ಬರೆಯುವುದರ ಹಿಂದೆ ಬೇರಾವ ದುರುದ್ದೇಶವೂ ಕಹಿಯೂ ಇಲ್ಲವೆಂದಿದ್ದಾರೆ. ಬರವಣಿಗೆಯ ಹಿಂದಿನ ಮನೋಭಾವವನ್ನು ಅರ್ಥಮಾಡಿಕೊಳ್ಳಬೇಕೆಂದು ಅವರು ಪ್ರಾರ್ಥಿಸಿಕೊಂಡಿದ್ದಾರೆ. ತಮ್ಮ ತಪ್ಪುಗಳನ್ನು ತಿದ್ದಿಕೊಂಡು ಪಕ್ಷದ ಐಕಮತ್ಯ, ದೇಶದ ಹಿತ ಮತ್ತು ಸಾಂಸ್ಥಿಕ ಕಾರ್ಯಶೀಲತೆಗಳನ್ನು ಎತ್ತಿಹಿಡಿಯುವ ರೀತಿಯಲ್ಲಿ ಈಗಲೂ ಸಾಗಬಹುದೆಂದಿದ್ದಾರೆ. ತುಂಬ ಸೌಜನ್ಯಪೂರಿತ ಭಾಷೆಯಲ್ಲಿ

ಬರೆಯಲಾಗಿದ್ದರೂ, ತತ್ವಗಳನ್ನು ಎತ್ತಿಹಿಡಿಯುವಲ್ಲಿ ಯಾವ ರಾಜಿಯನ್ನೂ ಮಾಡಿಕೊಳ್ಳು ವಂತಹುದಲ್ಲ. ಸಾಮಾನ್ಯವಾಗಿ ಮೆಲುಮಾತಿನ, ಮುಗುಳ್ನಗೆಯ, ಸ್ನೇಹಪರ ಮುಗ್ಧ ವ್ಯಕ್ತಿಯಾದ ನಿಜಲಿಂಗಪ್ಪನವರಂತಹವರು ಸಮಯ ಬಂದಾಗ ತಮ್ಮ ಗಟ್ಟಿತನವನ್ನು ತೋರಿಸಬಲ್ಲರೆಂಬುದಕ್ಕೆ ಈ ಪತ್ರ ನಿದರ್ಶನವಾಗಿದೆ. ಆದರೆ ವಿರೋಧಿಗಳು ಅನುಸರಿಸು ತ್ತಿದ್ದ ಹೊಂದಾಣಿಕೆಯ ರಾಜಕಾರಣದಲ್ಲಿ ಅವರೆಂದೂ ಸಾಟಿಯಾದವರಾಗಿರಲಿಲ್ಲ. ನಿಜಲಿಂಗಪ್ಪನವರು ನಂಬಿದ್ದಂತಹ ತತ್ವ ಆದರ್ಶಗಳ ರಾಜಕಾರಣವು ಸಂಚು ತಂತ್ರಗಾರಿಕೆ ಗಳನ್ನವಲಂಬಿಸಿದ ರಾಜಕಾರಣದ ನಡುವೆ ಉಳಿಯಲು ಸಾಧ್ಯವಾದ ಸನ್ನಿವೇಶವು ಇತಿಹಾಸದಲ್ಲೆಲ್ಲೂ ಕಾಣಸಿಗುವುದಿಲ್ಲ ಎಂಬುದು ನಿಜ ತಾನೇ!

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ೧೯೬೯ರ ನವೆಂಬರ್ ೧ನೇ ತಾರೀಕು ಸಭೆ ಸೇರಲಿತ್ತು; ಅದಕ್ಕೆ ಮುಂಚೆ ನಿಜಲಿಂಗಪ್ಪನವರು ಸುಬ್ರಹ್ಮಣ್ಯಂ ಮತ್ತು ಫಕ್ರುದ್ದೀನ್ ಆಲಿ ಅಹಮದ್ ಅವರನ್ನು ಸದಸ್ಯತ್ವದಿಂದ ತೆಗೆದು ಹಾಕಿದರು. ತಮ್ಮ ಬೆಂಬಲಿಗರನ್ನು ಸಂಪುಟದಿಂದ ಹೊರಹಾಕಿದ್ದಕ್ಕೆ ಇದು ನಿಜಲಿಂಗಪ್ಪ ತೆಗೆದುಕೊಂಡ ಪ್ರತೀಕಾರವೆಂದು ಕೆಲವರು ವ್ಯಾಖ್ಯಾನಿಸಿದುದು ಸಹಜವೇ ಆಗಿತ್ತು. ಈ ಮಧ್ಯೆ, ನಿಯಮಿತ ಸಂಖ್ಯೆಯ ಸದಸ್ಯರು ಸಹಿ ಹಾಕಿ ಪತ್ರ ಕೊಟ್ಟಿದ್ದರೂ ಎಐಸಿಸಿ ಯನ್ನು ಕರೆಯದಿರುವುದರ ಬಗ್ಗೆ ಇಂದಿರಾ ಗಾಂಧಿ ಮತ್ತವರ ಅನುಯಾಯಿಗಳು ನಿಜಲಿಂಗಪ್ಪನವರ ಬಗ್ಗೆ ಕ್ರೋಧಗೊಂಡಿ ದ್ದರು. ೧೯೬೯ನೇ ಡಿಸೆಂಬರ್ ೨೨ ಮತ್ತು ೨೩ ರಂದು ದೆಹಲಿಯಲ್ಲಿ ಎಐಸಿಸಿ ಸಭೆಯನ್ನು ತಾವೇ ಏಕಪಕ್ಷೀಯವಾಗಿ ಕರೆಯಲು ನಿರ್ಧರಿಸಿದರು. ಆದರೆ ಅದಕ್ಕೂ ಮುನ್ನ, ಕಾರ್ಯಕಾರಿ ಸಮಿತಿಯೇ ಇಬ್ಭಾಗವಾಗಿ ಒಡೆಯಿತು: ಒಂದು ಗುಂಪು ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಪಕ್ಷದ ಕಚೇರಿಯಲ್ಲಿ ಸಭೆ ಸೇರಿದರೆ, ಮತ್ತೊಂದು ಪ್ರಧಾನಮಂತ್ರಿಗಳ ಮನೆಯಲ್ಲಿ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಗುಜರಾತ್ ಪಿಸಿಸಿ ಆಶ್ರಯದಲ್ಲಿ ನಡೆಯಲಿದ್ದ ಎಐಸಿಸಿ ಸಭೆಯಲ್ಲಿ ಕೂಡ ಇಂದಿರಾ ಗಾಂಧಿ ಬಣವು ನಿಜಲಿಂಗಪ್ಪನವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಬಹುದು ಎಂಬ ಕಾರಣಕ್ಕೆ ಆ ಬಣವು ಕರೆದಿದ್ದ ಎಐಸಿಸಿ ಸಭೆಯು ಅನವಶ್ಯಕವೆಂದು ನಿಜಲಿಂಗಪ್ಪ ಬಣವು ನಿರ್ಣಯ ಕೈಗೊಂಡಿತು. ಸುಬ್ರಹ್ಮಣ್ಯಂ ಮತ್ತು ಫಕ್ರುದ್ದೀನ್ ಆಲಿ ಅಹಮದ್ ಅವರನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯತ್ವದಿಂದ ಕಿತ್ತು ಹಾಕಿದ್ದ ಬಗ್ಗೆ ಇಂದಿರಾ ಗಾಂಧಿ ಬಣದ ಸಭೆಯು ನಿರ್ಣಯವನ್ನು ಕೈಗೊಂಡಿತು. ಇಂದಿರಾಪರ ವಾಗಿದ್ದ ಇಬ್ಬರು ಸದಸ್ಯರನ್ನು ಕಿತ್ತು ಹಾಕುವುದರ ಮೂಲಕ ಕಾರ್ಯಕಾರಿ ಸಮಿತಿಯಲ್ಲಿ ಬಹುಮತವನ್ನು ಸಾಧಿಸಿಕೊಳ್ಳಲು ಈ ರೀತಿ ಮಾಡಿದೆಯೆಂದು ಸಿಂಡಿಕೇಟ್ ವಿರುದ್ಧ ಆರೋಪ ಹೊರಿಸಿದರು. ಇಂದಿರಾ ಗಾಂಧಿ ಬಣದ ಸಭೆಯು ಯಾವುದೇ ಅಡ್ಡಿಗಳಿಲ್ಲದೆ

ನಡೆದರೆ, ಕಾಂಗ್ರೆಸ್ ಕಚೇರಿಯಲ್ಲಿ ಜಮಾಯಿಸಿದ್ದ ಇಂದಿರಾಪರ ಗುಂಪು ನಿಜಲಿಂಗಪ್ಪ ಗುಂಪಿನ ಸಭೆಯನ್ನು ಅಡ್ಡಿಪಡಿಸಲು ಪ್ರಯತ್ನಿಸಿದರು. ನಿಜಲಿಂಗಪ್ಪನವರ ಕಾರ್ ಮೇಲೆ ದಾಳಿ ಮಾಡಿ, ಕಾರಿನಿಂದ ಹೊರಗೆಳೆದು ಅವರ ಮೇಲೆ ಹಲ್ಲೆ ನಡೆಸಲು ಪ್ರಯತ್ನಿಸಿದರು. ಅವಾಚ್ಯ ಶಬ್ದಗಳಿಂದ ಅವರನ್ನು ನಿಂದಿಸಿದರು, ಹೀಗಾಗಿ ಪೊಲೀಸರು ಅವರನ್ನು ಸುರಕ್ಷಿತವಾಗಿ ಪಕ್ಷದ ಕಚೇರಿಯೊಳಕ್ಕೆ ಕರೆತಂದು ಬಿಡಬೇಕಾಯಿತು. ಈ ಎಲ್ಲ ದಾಂಧಲೆಗಳು ನಡೆದದ್ದು ಬಾಡಿಗೆಯ ಸರ್ದಾರ್ಜಿಯ ಗೂಂಡ ಗುಂಪಿನಿಂದ ಎಂದು ಕೆಲವು ಪತ್ರಿಕಾ ವರದಿಗಳು ಹೇಳಿದುವು. ಅತುಲ್ಯ ಘೋಷ್ ಮತ್ತಿತರ ಹಿರಿಯ ನಾಯಕರನ್ನು ಕೂಡ ಹೀಗೆಯೇ ಹಿಗ್ಗಾಮುಗ್ಗಾ ಎಳೆದಾಡಲಾಯಿತು. ಹೀಗಾಗಿ ಸಭೆಯು ಪೊಲೀಸ್ ರಕ್ಷಣೆಯಲ್ಲಿ ನಡೆಯಬೇಕಾಯಿತು. ಸರ್ಕಾರದ ಆಂತರಿಕ ರಾಜಕೀಯ ವ್ಯವಹಾರಗಳು, ಅರ್ಥವ್ಯವಸ್ಥೆ ಮತ್ತು ವಿದೇಶಾಂಗ ಧೋರಣೆಗಳನ್ನು ತಿರಸ್ಕರಿಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಇಂದಿರಾ ಗಾಂಧಿಯವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ಮತ್ತು ಅವರ ಬದಲಿಗೆ ಕಾಂಗ್ರೆಸ್ ಸಂಸದೀಯ ಪಕ್ಷವು ಹೊಸ ನಾಯಕರೊಬ್ಬರನ್ನು ಚುನಾಯಿಸಬೇಕೆಂದು ಕೂಡ ನಿರ್ಧರಿಸಲಾಯಿತು. ಒಬ್ಬ ಸದಸ್ಯರಾದ ಕೆ. ಸಿ. ಅಬ್ರಹಾಂ ಅವರು ಮೊದಲು ಇಂದಿರಾ ಬಣದ ಸಭೆಗೆ ಹಾಜರಾಗಿ ಕೆಲಕಾಲದ ಬಳಿಕ ನಿಜಲಿಂಗಪ್ಪ ಬಣದ ಸಭೆಗೆ ಹಾಜರಾದರು. ಇದರ ಪರಿಣಾಮವಾಗಿ, ಅವಿಭಜಿತ ಕಾರ್ಯಕಾರಿ ಸಮಿತಿಯ ೨೧ ಮಂದಿ ಸದಸ್ಯರಲ್ಲಿ ೧೧ ಮಂದಿ ನಿಜಲಿಂಗಪ್ಪನವರ ಬಣದಲ್ಲಿಯೂ, ೧೦ ಮಂದಿ ಇಂದಿರಾ ಗಾಂಧಿ ಬಣದಲ್ಲಿಯೂ ಇದ್ದಂತಾಯಿತು. ಎರಕ ಹುಯ್ದಾಗಿತ್ತು, ಎಂಬತ್ತನಾಲ್ಕು ವರ್ಷ ಹಳೆಯ ದಾದ ಮತ್ತು ಸ್ವಾತಂತ್ರ್ಯಾನಂತರವೂ ಯಥಾಸ್ಥಿತಿ ಕಾಪಾಡಿಕೊಂಡು ಬಂದು ರಾಷ್ಟ್ರೀಯತೆ ಮತ್ತು ಐಕಮತ್ಯಗಳ ಸಂಕೇತವೆನಿಸಿಕೊಂಡಿದ್ದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ೧೯೬೯ನೇ ನವೆಂಬರ್ ೧ ರಂದು ಇಬ್ಭಾಗವಾಯಿತು. ಅದರ ಇತಿಹಾಸದಲ್ಲಿಯೇ ಇದು ಕಗ್ಗತ್ತಲ ದಿನವಾಯಿತು. ಕಾಂಗ್ರೆಸ್ ಒಂದು ಸಂಪನ್ಮೂಲ ಕೇಂದ್ರವಾದ್ದರಿಂದ ಇಂದಿರಾ ಗಾಂಧಿ ಅದನ್ನು ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಿದರು. ಅವರು ಸಿಂಡಿಕೇಟ್ ಜೊತೆಗೆ ಯಾವುದೇ ರಾಜಿಗೆ ಸಿದ್ಧರಿರಲಿಲ್ಲವೆಂಬುದು ಅವರ ಮಾತು ಮತ್ತು ಕೃತಿಗಳಿಂದ ಸ್ಪಷ್ಟವಾಯಿತು. ತಮ್ಮನ್ನು ಪದಚ್ಯುತರನ್ನಾಗಿ ಮಾಡಲು ಸಿಂಡಿಕೇಟ್ ಹವಣಿಸುತ್ತಿದೆ ಎಂಬ ವದಂತಿಯನ್ನೇ ಅವರು ಬಂಡವಾಳ ಮಾಡಿಕೊಳ್ಳಲು ಪ್ರಯತ್ನಿಸಿದರು. ಪರಿಸ್ಥಿತಿ ಯನ್ನು ಗಮನಿಸಿದವರಲ್ಲಿ ಬಹು ಮಂದಿಯ ಪ್ರಕಾರ ಪ್ರಧಾನ ಮಂತ್ರಿಗಳನ್ನು ಪರಿಣಾಮ ಕಾರಿಯಾಗಿ ಎದುರಿಸುವ ಸಂಪನ್ಮೂಲಗಳು ಸಿಂಡಿಕೇಟ್ ಬಳಿ ಇರಲಿಲ್ಲ, ಅಲ್ಲದೆ, ರಾಷ್ಟ್ರೀಯ ಸಂಪ್ರದಾಯಶರಣ ಮೌಲ್ಯಗಳಿಗೇ ಅಂಟಿಕೊಂಡಿದ್ದ ಅದರ ನಾಯಕರುಗಳು ಇಂದಿರಾ ಗಾಂಧಿಯವರ ಮಟ್ಟಕ್ಕಿಳಿದು ಹೊಡೆದಾಡಲು ಸಿದ್ಧರಿರಲಿಲ್ಲ!

ತಮ್ಮ ಹಿಂದಿನ ಪತ್ರಕ್ಕೆ ಉತ್ತರ ಪಡೆಯದ್ದರಿಂದ ನಿಜಲಿಂಗಪ್ಪನವರು ಪ್ರಧಾನ ಮಂತ್ರಿಗಳಿಗೆ ೩-೧೧-೧೯೬೯ ರಂದು ಮತ್ತೊಂದು ಪತ್ರವನ್ನು ಬರೆದರು. ಆ ಪತ್ರದ ಸಾರಾಂಶವನ್ನಿಲ್ಲಿ ಕೊಟ್ಟಿದೆ: ಅದರಲ್ಲಿ, ತಮ್ಮ ಹಿಂದಿನ ಪತ್ರದಲ್ಲಿ ಆಕೆಯ ಕಾರ್ಯವೈಖರಿಯು ಕಾಂಗ್ರೆಸ್‌ನ ಐಕಮತ್ಯ ಮತ್ತು ಪ್ರಜಾಪ್ರಭುತ್ವಗಳಿಗೆ ಮಾರಕವೆಂದು ಟೀಕಿಸಿದ್ದ ಬಗ್ಗೆ ನೆನಪಿಸಿದ್ದರು. ಅದರಲ್ಲಿ, ವಕ್ರತೆ ಮತ್ತು ಸಂಚುಗಳ ದಾರಿಯನ್ನು ತೊರೆದು ಮುಕ್ತತೆ, ಪಾರದರ್ಶಕತೆ ಹಾಗೂ ಸದ್ಭಾವನೆಗಳನ್ನು ಅಳವಡಿಸಿಕೊಳ್ಳುವಂತೆಯೂ ಆಕೆಯನ್ನು ಕೇಳಿಕೊಂಡಿದ್ದರು. ತಮ್ಮ ಪತ್ರಕ್ಕೆ ಉತ್ತರಿಸುವ ಪ್ರಾಥಮಿಕ ಸೌಜನ್ಯವನ್ನೂ ತೋರದ್ದಕ್ಕಾಗಿ ವಿಷಾದಿಸಿದ್ದರು. ತಮ್ಮನ್ನು ಭೇಟಿಯಾಗಲು ಅವರಿಗೆ ಸಮಯವಿದ್ದಿರಲಾರದು. ನ್ಯಾಯಯುತವಾಗಿ ರಚಿತವಾಗಿದ್ದ ಕಾರ್ಯಕಾರಿ ಸಮಿತಿಯ ಸಭೆಯನ್ನವರು ಬಹಿಷ್ಕರಿಸಿ, ಅದರ ಕೆಲವು ಸದಸ್ಯರ ನಾಯಕತ್ವ ವಹಿಸಿದ್ದರು. ಇಷ್ಟು ಮಾತ್ರವೇ ಅಲ್ಲ, ನ್ಯಾಯಯುತ ಸಮಿತಿಯ ವಿರುದ್ಧವಾಗಿ ಅವರು ಸಮಾನಾಂತರ ಸಭೆಯೊಂದನ್ನು ನಡೆಸಿದ್ದರು. ತಮ್ಮ ಕೆಲವು ನಿರ್ಧಾರಗಳನ್ನು ಅಸಂವಿಧಾನಾತ್ಮಕವೆಂದೂ, ೧೯೬೯ ನೇ ಡಿಸೆಂಬರ್ ೨೨ ಮತ್ತು ೨೩ ರಂದು ಅವರನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲು ಎಐಸಿಸಿ ಸಭೆಯನ್ನು ಕರೆಯಬೇಕೆಂದೂ ಆ ಸಮಾನಾಂತರ ಸಭೆಯಲ್ಲಿ ನಿರ್ಣಯಿಸಲಾಗಿತ್ತು. ಈ ವಿಷಯಗಳೆಲ್ಲ ಅವರಿಗೆ ಪತ್ರಿಕೆಗಳ ಮೂಲಕ ತಿಳಿದುಬಂದಿತ್ತು. ಅವರ ನಡವಳಿಕೆಯನ್ನು ಅಕ್ಷಮ್ಯವೆಂದು ಖಂಡತುಂಡವಾಗಿ ಕರೆದರು. ಪಕ್ಷ ಸಂವಿಧಾನವನ್ನು ಉಲ್ಲಂಘನೆಯು ಅಪರಾಧವೆಂದೂ ಅದರ ಪರಿಣಾಮ ಅಪಾಯಕಾರಿಯಾದುದೆಂದೂ ಪಕ್ಷದ ಐಕಮತ್ಯವನ್ನದು ಹಾಳುಮಾಡುವುದೆಂದೂ ಹೇಳಿದರು. ಈ ಮಹಾ ಪಕ್ಷದ ಆದರ್ಶಗಳು, ತತ್ವಗಳು ಹಾಗೂ ಐಕಮತ್ಯಕ್ಕೆ ಯಾರು ಗಂಡಾಂತರಕಾರಿ ಎಂಬುದನ್ನು ಕಾಂಗ್ರೆಸ್ಸಿಗರೇ ನಿರ್ಧರಿಸಬೇಕು. ಅಲ್ಲದೆ ಅವರು ಸಾರ್ವಜನಿಕರಿಗೆ ಹೊಣೆಗಾರರಾಗಿರುತ್ತಾರೆ. ಸಾರ್ವಜನಿಕರು ಸಮದೃಷ್ಟಿಯಿಂದ ಪರಿಶೀಲಿಸಿ ಪರಿಸ್ಥಿತಿಯನ್ನು ಅರ್ಥವಿಸಲು ಸಹಕಾರಿಯಾಗುವಂತೆ ತಾವು ೨೮ನೇ ಅಕ್ಟೋಬರ್ ೧೯೬೯ ರಂದು ಬರೆದಿದ್ದ ಪತ್ರವನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡುತ್ತಿರುವುದಾಗಿಯೂ ಹೇಳಿಕೆಯಿತ್ತರು. ಈ ಪತ್ರಕ್ಕೆ ಇಂದಿರಾ ಗಾಂಧಿಯವರು ನೀಡಿದ ಉತ್ತರವನ್ನು ಈ ರೀತಿ ಸಂಕ್ಷೇಪಿಸಬಹುದು: ಹಿಂದಿನ ಅವರ ಪತ್ರದಲ್ಲಿ ಪ್ರಸ್ತಾಪಿತವಾದ ಅನೇಕ ವಿಷಯಗಳ ಬಗ್ಗೆ ಚಿಂತನೆ ನಡೆಸಲು ಕಾಲಾವಕಾಶ ಬೇಕಾಗಿದ್ದುದರಿಂದ ತಾವು ಉತ್ತರಿಸುವುದು ತಡವಾಯಿತೆಂದು ಅವರು ಸೂಚಿಸಿದ್ದರು. ಪ್ರಜಾಪ್ರಭುತ್ವ ಹಾಗೂ ಸಮಾಜವಾದಗಳನ್ನು ಪಕ್ಷದ ಗುರಿಗಳನ್ನಾಗಿ ಹೊಂದಿ ಅದನ್ನು ಬಲಗೊಳಿಸುವ ಉದ್ದೇಶದಿಂದ ನಿಜಲಿಂಗಪ್ಪನವರು ಪಕ್ಷ ಒಡೆಯುವುದನ್ನು ತಡೆಯಲು ಪ್ರಯತ್ನಿಸಿರುವುದಾದರೆ, ಸುಬ್ರಹ್ಮಣ್ಯಂ ಮತ್ತು

ಫಕ್ರುದ್ದೀನ್ ಆಲಿ ಅಹಮದ್ ಅವರನ್ನು ತೆಗೆದು ಹಾಕಿರುವುದು ಬೇರೆಯೇ ಕತೆಯನ್ನು ಹೇಳುತ್ತದೆ. ಪಕ್ಷದ ಸಂವಿಧಾನದಂತೆ ಇಂತಹ ನಿರ್ಧಾರವನ್ನು ತೆಗೆದುಕೊಳ್ಳಲು ಅವರಿಗೆ ಅಧಿಕಾರವಿಲ್ಲ. ಪಕ್ಷದ ಸಂವಿಧಾನವನ್ನು ತಾವು ಅರ್ಥಮಾಡಿಕೊಂಡಿರುವಂತೆ, ತಾವು ಒಪ್ಪದ ಪದಾಧಿಕಾರಿಗಳನ್ನು ತೆಗೆದು ಹಾಕಲು ಅಧ್ಯಕ್ಷರಿಗೆ ಅಧಿಕಾರವಿದ್ದರೂ, ತಮ್ಮ ಎರಡು ವರ್ಷಗಳ ಅವಧಿ ಮುಗಿಸುವವರೆಗೂ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಮುಟ್ಟಲೂ ಅವರಿಗೆ ಅಧಿಕಾರವಿಲ್ಲ. ಹೀಗಾಗಿ, ಅವರು ಪಕ್ಷದ ಸಂವಿಧಾನವನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ. ತಾವು ನೇಮಿಸಿಕೊಂಡಿದ್ದ ಸಚಿವ ಸಂಪುಟದ ಸದಸ್ಯರನ್ನು ಕೈಬಿಡಲು ಪ್ರಧಾನ ಮಂತ್ರಿಗಳು ಅಧಿಕಾರ ಹೊಂದಿರುವಂತೆ ತಮ್ಮಿಂದ ನಾಮಕರಣಗೊಂಡವರ ಸದಸ್ಯತ್ವವನ್ನು ರದ್ದುಪಡಿಸುವ ಅಧಿಕಾರವನ್ನು ಪಕ್ಷದ ಅಧ್ಯಕ್ಷರು ಹೊಂದಿದ್ದಾರೆಯೇ ಎಂಬ ಪ್ರಶ್ನೆಯನ್ನವರು ಮುಂದಿಟ್ಟಿದ್ದರು. ಆದರೆ ಇದು ಸಮಂಜಸವಾದ ಪ್ರಶ್ನೆಯಲ್ಲ, ಯಾಕಂದರೆ ಪ್ರಧಾನ ಮಂತ್ರಿಗಳ ಅಧಿಕಾರ ಮತ್ತು ಕಾರ್ಯವ್ಯಾಪ್ತಿಯನ್ನು ಭಾರತ ಸಂವಿಧಾನವು ಸ್ಪಷ್ಟವಾಗಿ ನಿರೂಪಿಸಿದೆ, ಹಾಗೆಯೇ ಪಕ್ಷದ ಅಧ್ಯಕ್ಷರ ಅಧಿಕಾರವ್ಯಾಪ್ತಿಯನ್ನು ಪಕ್ಷದ ಸಂವಿಧಾನ ನಿರೂಪಿಸುತ್ತದೆ ಎಂದು ಇಂದಿರಾ ಗಾಂಧಿ ಅಭಿಪ್ರಾಯಪಟ್ಟಿದ್ದರು. ಹೀಗಾಗಿ ಪಕ್ಷದ ಅಧ್ಯಕ್ಷರು ಮತ್ತು ಪ್ರಧಾನ ಮಂತ್ರಿಗಳು– ಈ ಇಬ್ಬರನ್ನೂ ಒಂದೇ ತಕ್ಕಡಿಯ ಬಟ್ಟುಗಳಲ್ಲಿಟ್ಟು ತೂಗುವುದು ಸರಿಯಲ್ಲ. ಎರಡರ ಸೂಕ್ಷ್ಮ ವ್ಯತ್ಯಾಸವನ್ನು ಎತ್ತಿ ತೋರಿಸಿದ ಅವರು, ಅಧ್ಯಕ್ಷರು ಶಂಕರದಯಾಳ್ ಶರ್ಮ ಅವರನ್ನು ಕಾರ್ಯದರ್ಶಿ ಸ್ಥಾನದಿಂದ ತೆಗೆದು ಹಾಕುವ ಅಧಿಕಾರ ಹೊಂದಿರುವಂತೆ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಕಿತ್ತೊಗೆಯುವ ಅಧಿಕಾರ ಹೊಂದಿಲ್ಲ ಎಂದು ವಾದಿಸಿದರು! ಹೀಗಾಗಿ ನಿಜಲಿಂಗಪ್ಪನವರು ವೈಯಕ್ತಿಕ ಇಚ್ಛೆಗನುಗುಣವಾಗಿ ಪಕ್ಷದ ಸಂವಿಧಾನವನ್ನು ಅತಿಕ್ರಮಿಸಿದ್ದಾರೆ. ಅವರೊಡನೆ ತರ್ಕ ಮಾಡುವುದು ಉಪಯೋಗಕ್ಕೆ ಬಾರದ್ದು ಎಂಬ ಕಾರಣಕ್ಕೇ ತಾವು ಮುಂಚೆಯೇ ಉತ್ತರ ಬರೆಯಲಿಲ್ಲವೆಂದೂ ಹೇಳಿದ್ದಾರೆ! ತಮ್ಮ ಪತ್ರವನ್ನವರು ಪತ್ರಿಕೆಗಳಿಗೆ ಬಿಡುಗಡೆ ಮಾಡಿರುವುದರಿಂದಾಗಿ ತಾವೀಗ ಉತ್ತರ ನೀಡುತ್ತಿದ್ದರಂತೆ.

ಇನ್ನು, ಅಧ್ಯಕ್ಷ ಚುನಾವಣೆಗೆ ಸಂಬಂಧಿಸಿದಂತೆ ಈಗಾಗಲೇ ಸಾಕಷ್ಟು ಚರ್ಚೆಗಳು ನಡೆದಿವೆಯೆಂದು ಅವರು ತಿಳಿಸಿದರು. ಏನಾದರಾಗಲಿ, ಈಗದು ಮುಗಿದ ಅಧ್ಯಾಯ. ಅಭ್ಯರ್ಥಿಯ ಬಗ್ಗೆ ಒಮ್ಮತಕ್ಕೆ ಬರಲು ಅಭ್ಯರ್ಥಿಗಳ ಪಟ್ಟಿಯನ್ನು ಕೊಡುವಂತೆ ತಾವು ಅಧ್ಯಕ್ಷರನ್ನು ಕೇಳಿದ್ದರು. ಆದರೆ ಪಟ್ಟಿಯ ಬದಲಾಗಿ, ಬೆಂಗಳೂರಿನ ಸಮಾವೇಶದಲ್ಲಿ ಹೆಚ್ಚಿನ ಚರ್ಚೆಯಿಲ್ಲದೆ ಅಭ್ಯರ್ಥಿಯ ಬಗ್ಗೆ ನಿರ್ಧಾರವನ್ನೇ ತೆಗೆದುಕೊಳ್ಳಲಾಯಿತು. ಅಲ್ಲದೆ ಹಾಗೆ ತೆಗೆದುಕೊಂಡ ನಿರ್ಧಾರ ಅವಸರದ್ದೂ ಆಗಿತ್ತು. ಇದೇ ಮುಂದೆ

ಉಂಟಾದ ಎಲ್ಲ ಸಮಸ್ಯೆಗಳಿಗೆ ನಾಂದಿಯಾಯಿತು. ಈ ಬಗೆಯಲ್ಲಿ ಅಧ್ಯಕ್ಷ ಅಭ್ಯರ್ಥಿಯ ಬಗ್ಗೆ ತೆಗೆದುಕೊಂಡ ನಿರ್ಧಾರವು ರಾಜಕೀಯ ಅಪ್ರಬುದ್ಧತೆಯಲ್ಲದೆ ಬೇರಲ್ಲ. ವಾಸ್ತವವಾಗಿ, ಗಿರಿ ಒಬ್ಬ ಸ್ವತಂತ್ರ ಅಭ್ಯರ್ಥಿ, ಅವರನ್ನು ಕಮ್ಯುನಿಸ್ಟ್ ಮತ್ತು ಮುಸ್ಲಿಂ ಲೀಗ್ ಬೆಂಬಲಿಸಿದುವು. ಅವರಿಗೆ ಇನ್ನಿತರ ಗುಂಪುಗಳ ಬೆಂಬಲವೂ ಸಿಕ್ಕಿತು. ಅವರ ಗೆಲವಿಗೂ ತಮಗೂ ಹಾಗೂ ತಮ್ಮ ಬೆಂಬಲಿಗರಿಗೂ ಯಾವುದೇ ಸಂಬಂಧವಿಲ್ಲ! ಇದರಿಂದ ತಮಗೆ ಯಾವುದೇ ವೈಯಕ್ತಿಕ ಲಾಭವಿಲ್ಲ ಎಂಬುದನ್ನು ಪಕ್ಷಕ್ಕೂ ಅವರಿಗೂ ಪ್ರಮಾಣ ಮಾಡಿ ಹೇಳುವರಂತೆ. ಕಾಂಗ್ರೆಸ್ ಪ್ರಬಲಗೊಳ್ಳುವುದರಲ್ಲಿ ಹಾಗೂ ಸಮಾಜವಾದ ಮತ್ತು ಧರ್ಮ ನಿರಪರ್ಕ್ಷಕತೆಗಳಿಗೆ ಬದ್ಧತೆ ಹೊಂದುವುದರಲ್ಲಿ ಮಾತ್ರ ಅವರಿಗೆ ಆಸಕ್ತಿ. ಈ ಆದರ್ಶಗಳಿಗೆ ವಿರುದ್ಧವಾದ ಶಕ್ತಿಗಳನ್ನು ಸದೆಬಡಿಯಲು ತಮಗೆ ಸಹಕಾರ ನೀಡಬೇಕೆದು ಅವರು ನಿಜಲಿಂಗಪ್ಪನವರನ್ನು ಕೋರಿದ್ದರು. ಈ ಉದ್ದೇಶ ದಿಂದಲೇ ಕೆಲವು ಕಾಂಗ್ರೆಸ್ಸಿಗರು ವಿಶೇಷ ಎಐಸಿಸಿ ಅಧಿವೇನ ನಡೆಸಬೇಕೆಂದು ಕೋರಿಕೆ ಸಲ್ಲಿಸಿರುವುದು. ಅಂಥ ಬೇಡಿಕೆಯನ್ನು ಮಾನ್ಯ ಮಾಡುವುದು ಪಕ್ಷದ ಹಿರಿಯರ ಕರ್ತವ್ಯ. ಪಕ್ಷದ ಆದರ್ಶಗಳನ್ನು ಎತ್ತಿಹಿಡಿಯಲಾರದವರು ಪ್ರಜಾಪ್ರಭುತ್ವವಾದಿ ಗಳೆನಿಸಿಕೊಳ್ಳಲು ಅನರ್ಹರು. ಅಂಥವರು ಪಕ್ಷದ ಐಕಮತ್ಯವನ್ನು ಕಾಪಾಡುವ ಸಾಮರ್ಥ್ಯ ಹೊಂದಿರುವರೆಂದು ಭಾವಿಸಲಾಗದು.

ಸದ್ಯದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ತಮ್ಮ ಮಾತುಗಳನ್ನು ಗಮನಿಸಬೇಕೆಂದು ಅವರು ನಿಜಲಿಂಗಪ್ಪನವರಿಗೆ ಮನವಿ ಮಾಡಿದ್ದರು. ಕಾಂಗ್ರೆಸ್ ಎದುರಿಸುತ್ತಿರುವ ಬಿಕ್ಕಟ್ಟು ದೇಶದ ಬಿಕ್ಕಟ್ಟು. ಜನತೆಯ ಮುಂದಿಟ್ಟ ಅಭಿವೃದ್ಧಿಯ ಗುರಿಗಳು ಹೊಸ ಸವಾಲುಗಳನ್ನೆಸೆದಿವೆ. ಫರೀದಾಬಾದ್ ಅಧಿವೇಶದಲ್ಲಿ ಒಪ್ಪಿತವಾದ ಕಾರ್ಯಕ್ರಮಗಳಿಗೂ ಅಧ್ಯಕ್ಷರ ಭಾಷಣದಲ್ಲಿ ಸೂಚಿತವಾದ ಆಲೋಚನೆ ಅಭಿಪ್ರಾಯಗಳಿಗೂ ದೊಡ್ಡ ಅಂತರವಿದೆ. ಈ ಕಂದರವನ್ನು ಬೆಂಗಳೂರು ಅಧಿವೇಶನವು ಮತ್ತಷ್ಟು ಹೆಚ್ಚಿಸಿತು. ಈ ಎಲ್ಲ ಸಮಸ್ಯೆಗಳು ಹಾಗೂ ವಿಷಯಗಳನ್ನು ಆ ಬಗ್ಗೆ ತಾವು ಗುರುತು ಹಾಕಿಕೊಂಡು ಬಂದಿದ್ದ ಆಧಾರದ ಮೇಲೆ ಸೂಕ್ತವಾಗಿ ಪ್ರಸ್ತಾಪಿಸಬಹುದಾಗಿತ್ತು. ಆದರೆ ದುರದೃಷ್ಟ ವಶಾತ್, ತಮ್ಮ ಟಿಪ್ಪಣಿಗಳ ಆಧಾರದ ಮೇಲೆ ನಿರ್ಣಯವೊಂದನ್ನು ಮಂಡಿಸುವೆನೆಂದು ಹೇಳಿಕೊಂಡ ಮೊರಾರ್ಜಿಯವರು ತಮ್ಮ ಭಾಷಣದಲ್ಲಿ ತಮ್ಮ ಸಲಹೆಗಳನ್ನು ಸಾರಾ ಸಗಟಾಗಿ ತಳ್ಳಿಹಾಕಿದರು. ಬ್ಯಾಂಕ್ ರಾಷ್ಟ್ರೀಕರಣಕ್ಕೆ ಸಂಬಂಧಿಸಿದಂತೆ ಪಕ್ಷವು ಅನುಮೋದಿಸಿದ್ದ ಧೋರಣೆಯನ್ನು ಅನುಷ್ಠಾನಗೊಳಿಸುವ ಪ್ರಯತ್ನಗಳು ಪರಿಸ್ಥಿತಿ ಯನ್ನಾಗಲೇ ಹದಗೆಡಿಸಿದ್ದುವು. ಅವುಗಳನ್ನು ಜಾರಿಗೊಳಿಸುವುದು ಸರ್ಕಾರದ ಕರ್ತವ್ಯ ವಷ್ಟೇ ಅಲ್ಲ. ಪಕ್ಷದ ನಾಯಕರು ಹಾಗೂ ಸರ್ಕಾರದ ನಡುವಣ ಸಹಕಾರ ಮಾತ್ರವೇ

ಅದನ್ನು ಜಾರಿಗೊಳಿಸುವುದು ಸಾಧ್ಯ. ಪ್ರಸ್ತುತ ಬಿಕ್ಕಟ್ಟನ್ನು ನಿವಾರಿಸದಿದ್ದರೆ, ದೇಶಕ್ಕೆ ದೊಡ್ಡ ಆಪತ್ತು ಎದುರಾಗುತ್ತದೆ. ಆದ್ದರಿಂದ, ಪ್ರಜಾಪ್ರಭುತ್ವದ ಹಿತದಷ್ಟಿಯಿಂದ, ಈ ಎಲ್ಲ ವಿಷಯಗಳನ್ನು ಸಮಸ್ಯೆಗಳನ್ನು ಎಐಸಿಸಿಯ ಮುಂದೆ ಮಂಡಿಸುವುದು ಸೂಕ್ತವೆಂದು ಅವರು ತಿಳಿಸಿದ್ದರು. ತಂತ್ರಗಾರಿಕೆಗಳನ್ನೆಲ್ಲ ಬದಿಗಿಟ್ಟು, ತಾವು ಕರೆಯಲುದ್ದೇಶಿಸಿರುವ ಎಐಸಿಸಿ ಸಭೆಯ ಅಧ್ಯಕ್ಷತೆ ವಹಿಸಿ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಬೇಕೆಂದು ಅವರು ಅಧ್ಯಕ್ಷರನ್ನು ಗೌರವಪೂರ್ವಕವಾಗಿ ವಿನಂತಿಸಿಕೊಂಡಿದ್ದರು. ಅಂತಿಮ ನಿರ್ಧಾರವು ಬಹುಮತವನ್ನ ವಲಂಬಿಸಿರುತ್ತದೆ. ಎಐಸಿಸಿಯನ್ನು ಕರೆಯುವ ಕ್ರಮವು ತಾಂತ್ರಿಕವಾಗಿ ಸರಿಯಲ್ಲವೆಂದು ಅವರು ಭಾವಿಸುವುದಾದರೆ, ತಾವೇ ಅಧಿವೇಶನವನ್ನು ಕರೆಯುವಂತೆ ಅವರನ್ನು ಪ್ರಾರ್ಥಿಸಿಕೊಂಡರು! ಅವರು ಈ ಪತ್ರವನ್ನು ಬರೆದ ಮೂರ್ನಾಲ್ಕು ದಿನಗಳ ಬಳಿಕ ಬೆಳವಣಿಗೆಗಳನ್ನು ವಿವರಿಸುವ ಬಹಿರಂಗ ಪತ್ರವೊಂದನ್ನವರು ಪ್ರಕಟಿಸಿದರು. ಪಕ್ಷದಂತೆಯೇ ದೇಶವೂ ಬಿಕ್ಕಟ್ಟನ್ನೆದುರಿಸುತ್ತಿದೆಯೆಂದು ಅದರಲ್ಲಾಕೆ ಹೇಳಿದ್ದರು. ಇದನ್ನು ಕೇವಲ ಸಂಸತ್ತು ಮತ್ತು ಪಕ್ಷಗಳ ನಡುವಣ ಭಿನ್ನಾಭಿಪ್ರಾಯ ಮಾತ್ರ ಎಂದು ಭಾವಿಸಲಾಗದು. ಇನ್ನೂ ಆಳವಾದ ಕಾರಣವೆಂದರೆ ಕಾಂಗ್ರೆಸ್‌ನ ಧೋರಣೆಗಳು ಹಾಗೂ ಗುರಿಗಳ ಬಗೆಗಿನ ಮೂಲಭೂತ ಭಿನ್ನಾಭಿಪ್ರಾಯ. ಕಾಂಗ್ರೆಸ್‌ನೊಳಗೇ ಒಂದೆಡೆ, ಒಂದು ಗುಂಪು ಸಮಾಜವಾದ, ಸಾಮಾಜಿಕ ಬದಲಾವಣೆ, ಆಂತರಿಕ ಪ್ರಜಾಪ್ರಭುತ್ವ ಮತ್ತು ಮುಕ್ತ ಚರ್ಚೆಗಳ ಪರವಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ, ಇನ್ನೊಂದು ಗುಂಪು ಯಥಾ ಸ್ಥಿತಿವಾದ, ಸಂಪ್ರದಾಯಶರಣತೆ, ಚರ್ಚೆಯಿಲ್ಲದ ನಿರ್ಣಯಗಳ ಪರವಾಗಿರುವವರ ಬೆಂಬಲ ಪಡದಿದೆ. ಎರಡನೆಯ ಗುಂಪು ಬದಲಾವಣೆಯ ಬಗ್ಗೆ ದೊಡ್ಡ ಮಾತುಗಳನ್ನಾಡುತ್ತದೆಯೇ ವಿನಾ, ಅನುಷ್ಠಾನದ ವಿಷಯಕ್ಕೆ ಬಂದಾಗ ಅದು ಹಿಂಜರಿದು ಕಾಂಗೆಸ್‌ನ ಕ್ರಾಂತಿಕಾರಿ ಕಾರ್ಯಕ್ರಮಗಳ ಮತ್ತು ಯೋಜನೆಗಳಿಗೆ ಅಡ್ಡಗಾಲು ಹಾಕುತ್ತದೆ. ಅಂಥ ಗುಂಪೊಂದು ಹುಟ್ಟಿಕೊಂಡದ್ದು ಈಗ ತಾನೇ ಏನೂ ಅಲ್ಲ. ವಾಸ್ತವವಾಗಿ, ಕಳೆದ ಇಪ್ಪತ್ತೆರಡು ವರ್ಷಗಳಿಂದ ಅಂಥದ್ದೊಂದು ಗುಂಪು ಇದ್ದೇ ಇದೆ. ಈ ಗುಂಪು ತಮ್ಮ ತಂದೆಯವರ ಪರಿಣಾಮಕಾರಿ ಸಾಮಾಜಿಕ ಬದಲಾವಣೆಯ ಪ್ರಯತ್ನಗಳಿಗೆ ವ್ಯವಸ್ಥಿತವಾಗಿ ತೊಡರುಗಾಲು ಹಾಕುತ್ತಲೇ ಬರುತ್ತಿದೆ. ತಮ್ಮ ತಂದೆ ಹಾಗೂ ಮಹಾತ್ಮ ಗಾಂಧಿಯವರು ರೂಪಿಸಿದ ಕಾಂಗ್ರೆಸ್ ಮಾತ್ರವೇ ಅಹಿಂಸಾತ್ಮಕ ಸಾಮಾಜಿಕ ಸ್ಥಿತ್ಯಂತರವನ್ನು ತರಬಲ್ಲುದು. ಇದನ್ನು ಆಗು ಮಾಡಲು ಸಾಧ್ಯವಿಲ್ಲವಾದರೆ, ಕಾಂಗ್ರೆಸ್ ಇದ್ದಾದರೂ ಉಪಯೋಗವೇನು? ಸ್ವಾತಂತ್ರ್ಯಾನಂತರ, ಹಿರಿಯ ನಾಯಕರೆಲ್ಲ ಆಡಳಿತಾತ್ಮಕ ಜವಾಬ್ದಾರಿಯನ್ನು ಹೊತ್ತರು, ಇತರರ ಹಿತಾಸಕ್ತಿಗಳಿಗೆ ಕಾವು ಕೊಟ್ಟರು. ತಾವು ಜನ ಸೇವಕರೆಂಬುದನ್ನು ಮರೆತ ಅವರು ತಾವೇ ಕಾಂಗ್ರೆಸ್ ಎಂಬಂತೆ ಓಡಾಡತೊಡಗಿದರು. ಪಕ್ಷದೊಳಗಿನ ತಮ್ಮ ಸ್ಥಾನವನ್ನು

ಭದ್ರಪಡಿಸಿಕೊಳ್ಳಲು ಪ್ರಾಮಾಣಿಕರೂ ಬದ್ಧತೆಯುಳ್ಳವರೂ ಆದ ಕಾರ್ಯಕರ್ತರನ್ನು ಪಕ್ಷದಿಂದ ಹೊರಹಾಕಿದರು. ಅವರ ಅಧಿಕಾರಲಾಲಸೆ ಮತ್ತು ಸ್ಥಾನಗಳ ದುರಾಸೆಗಳಿಂದಾಗಿ ಅನೇಕ ಒಳ್ಳೆಯ ಕಾಂಗ್ರೆಸ್ಸಿಗರು ಪಕ್ಷವನ್ನು ಬಿಟ್ಟು ಹೋದರು ಅಥವಾ ರಾಜಕಾರಣದಿಂದಲೇ ನಿವೃತ್ತಿ ಪಡೆದರು. ಇಷ್ಟು ಮಾತ್ರವೇ ಅಲ್ಲ, ಯುವಜನತೆಯ ಹೊಸ ರಕ್ತ ತುಂಬಿ ಮಾಡುವ ಪಕ್ಷದ ಪುನುರ್ಜೀವನವನ್ನು ಹಿತಾಸಕ್ತಿಗಳು ತಡೆದುವು. ಸುಳ್ಳು ಸದಸ್ಯರನ್ನು ಪಕ್ಷಕ್ಕೆ ಸೇರಿಸಿಕೊಂಡು, ಅವರ ನೆರವಿನಿಂದ ಪಕ್ಷದ ಅಧಿಕಾರವನ್ನು ಹಿಡಿದು ಸರ್ಕಾರದ ಧೋರಣೆಗಳನ್ನು ತಮಗೆ ಬೇಕಾದಂತೆ ತಿರುಗಿಸಿಕೊಳ್ಳುವ ಉದ್ದೇಶದಿಂದ ಕಾರ್ಯ ನಿರ್ವಹಿಸಿದರು. ತಾವು ಮತ್ತು ತಮ್ಮ ಗೆಳೆಯರು ಕರೆದಿರುವ ಎಐಸಿಸಿಯು ಈ ಸಮಸ್ಯೆಗಳನ್ನೆಲ್ಲ ಮುಕ್ತವಾಗಿ ಚರ್ಚಿಸಬಹುದಾದ ವೇದಿಕೆಯನ್ನು ನಿರ್ಮಿಸುವ ಉದ್ದೇಶದಿಂದ ಕೂಡಿದೆ. ದೇಶಕ್ಕೆ ಸ್ವಾತಂತ್ರ್ಯವನ್ನು ತಂದು ಕೊಟ್ಟು ಹೊಸ ಸಾಮಾಜಿಕ ವ್ಯವಸ್ಥೆಯ ರಚನೆಗೆ ಮಾತುಕೊಟ್ಟಿದ್ದ ಈ ಮಹಾನ್ ರಾಷ್ಟ್ರೀಯ ಸಂಸ್ಥೆಯು ಖಂಡಿತ ಒಡೆಯಬಾರದು. ಆ ಕಾರಣಕ್ಕಾಗಿಯೇ ತಾವು ಈ ಪತ್ರಕ್ಕೆ ಪರಿಶಿಷ್ಟಗಳಾಗಿ ನಿಜಲಿಂಗಪ್ಪ ಮತ್ತು ತಮ್ಮ ನಡುವಣ ಹಾಗೂ ಫಕ್ರುದ್ದೀನ್ ಆಲಿ ಅಹಮದ್ ಮತ್ತು ಸುಬ್ರಹ್ಮಣ್ಯಂ ಮತ್ತು ನಿಜಲಿಂಗಪ್ಪನವರ ನಡುವಣ ಪತ್ರವ್ಯವಹಾರವನ್ನು ಲಗತ್ತಿಸಿರುವುದು. ಯಾವುದೇ ಸಮರ್ಪಕ ಚರ್ಚೆಗಳಿಲ್ಲದೆ ಬಹು ಸಂಖ್ಯಾತ ಸದಸ್ಯರ ಮನೋಭಾವವನ್ನು ಕಾರ್ಯಕಾರಿ ಸಮಿತಿಯು ಕಡೆಗಣಿಸಿರುವುದು ಈ ಪತ್ರವ್ಯವಹಾರದಿಂದಲೇ ಸ್ಫುಟಗೊಳ್ಳುತ್ತದೆ.

ಆನಂತರ ಅವರು ಕೆಲವು ಮುಖ್ಯಮಂತ್ರಿಗಳ ನಡುವಣ ವಿಚಾರ ವಿನಿಮಯದ ಬಗ್ಗೆ ಪ್ರಸ್ತಾಪಿಸುತ್ತಾರೆ. ಅವರಿನ್ನೂ ಚರ್ಚಿಸುತ್ತಿರುವಾಗಲೇ ನಿಜಲಿಂಗಪ್ಪನವರು ಇಂದಿರಾ ಗಾಂಧಿಯವರ ನಡವಳಿಕೆಯ ಕುರಿತು ವಿವರಣೆ ಕೇಳುತ್ತಾರೆ. ಇದಾದ ಬಳಿಕವೂ, ಆಕೆ ಅವರನ್ನು ಭೇಟಿಯಾಗಿದ್ದರು. ಕೆ.ಸಿ. ಅಬ್ರಹಾಂ ಮತ್ತು ವೀರೇಂದ್ರ ಪಾಟೀಲ್ ಅವರುಗಳು ಮಾಡಿದ್ದ ಸಲಹೆಯ ಬಗ್ಗೆ ಅವರೊಡನೆ ಆಕೆ ಚರ್ಚಿಸಿದ್ದರು. ನಿಜಲಿಂಗಪ್ಪನವರ ವೈಯಕಿಕ ಗುಣಗಳ ಬಗ್ಗೆ ತಮಗೆ ಗೌರವವಿದೆಯೆಂದೂ ಅವರು ಹೇಳಿದರು. ಆವರು ಕರೆಯಬಯಸಿದ್ದ ಎಐಸಿಸಿಯು ಕೇವಲ ಒಂದು ವಿಷಯವನ್ನು ಕುರಿತು, ಅಂದರೆ ಅಧ್ಯಕ್ಷ ಚುನಾವಣೆಯ ಬಗ್ಗೆ, ಮಾತನಾಡಬೇಕೆಂದಿದ್ದುದರಿಂದ, ಇದು ತಮ್ಮ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವ ಪಿತೂರಿ ಎಂದು ನಿಜಲಿಂಗಪ್ಪ ವ್ಯಾಖ್ಯಾನಿಸಿದರು. ಪಿಸಿಸಿ ಹಂತದ ಮೇಲಿನ ಪದಾಧಿಕಾರಿಗಳನ್ನೆಲ್ಲ ಚುನಾವಣೆಯ ಮೂಲಕವೇ ಆರಿಸಬೇಕೆಂದು ಆಕೆ ಸೂಚಿಸಿದ್ದರು. ಅಲ್ಲದೆ ಅಂಥ ಚುನಾವಣೆಗಳಿಗೆ ಮುನ್ನ ಮತದಾರ ಪಟ್ಟಿಯನ್ನು ಪರಿಷ್ಕರಿಸಬೇಕೆಂಬ ಸಲಹೆ ಇತ್ತಿದ್ದರು. ಆದರೆ ಹಾಲಿ

ಇದ್ದ ಮತದಾರ ಪಟ್ಟಿಯ ಪ್ರಕಾರ ಚುನಾವಣೆ ನಡೆಯಬೇಕೆಂದು ನಿಜಲಿಂಗಪ್ಪ ಹೇಳಿದರು. ಇದರ ಬಗ್ಗೆಯೂ ಅವರೇನೂ ನಿರ್ದಿಷ್ಟವಾಗಿರಲಿಲ್ಲ. ಈ ಕುರಿತು ಒಂದು ಲಿಖಿತ ಮನವಿಯನ್ನು ನೀಡಿದರೆ ಅದನ್ನು ಕಾರ್ಯಕಾರಿ ಸಮಿತಿಯ ಮುಂದಿಡುವುದಾಗಿ ಮಾತ್ರ ಅವರು ಹೇಳಿದರು. ಈ ವಿಷಯವನ್ನು ಪೂರ್ಣ ಕಾರ್ಯಕಾರಿ ಸಮಿತಿ ಪರಿಶೀಲಿಸುವುದೋ ಕಡಿತಕ್ಕೊಳಗಾಗಿದ್ದುದೋ ಎಂಬುದನ್ನೂ ಅವರು ಸ್ಪಷ್ಟಪಡಿಸಲಿಲ್ಲ. ಆಕೆಯಾಗಲೀ ನಿಜಲಿಂಗಪ್ಪನವರಾಗಲೀ ಆಕೆಯ ನಡವಳಿಕೆಯ ಬಗೆಗಿನ ವಿವರಣೆಯನ್ನು ಕೇಳಿದ್ದ ಪತ್ರದ ಕುರಿತು ಪ್ರಸ್ತಾಪಿಸಲಿಲ್ಲ. ತಮ್ಮ ಹಾಗೂ ಇತರರ ಬಗ್ಗೆ ಶಿಸ್ತು ಕ್ರಮ ಕೈಗೊಳ್ಳುವ ಅವರ ಬಯಕೆಯ ಬಗ್ಗೆ ನಂಬಲರ್ಹ ವಲಯಗಳಿಂದ ತಿಳಿದುಬಂದಿತೆಂದು ಆಕೆ ಹೇಳಿದರು. ಇಂತಹ ಕ್ಷುಲ್ಲಕ ವಿಷಯಗಳನ್ನು ಮರೆತುಬಿಡಬೇಕೆಂದೂ ದೇಶವು ಎದುರಿಸುತ್ತಿರುವ ಗಂಭೀರ ಪರಿಸ್ಥಿತಿಯ ಕುರಿತು ಆಲೋಚಿಸಬೇಕೆಂದೂ ಆಕೆ ಅವರಿಗೆ ಸೂಚಿಸಿದರು. ಜನತೆಯ ಹತಾಶೆ ಹಾಗೂ ಅವರ ಹೊಸ ಆಕಾಂಕ್ಷೆಗಳ, ಕನಸುಗಳ ಮತ್ತು ಭರವಸೆಗಳ ಕಡೆಗೆ ಅವರು ಗಮನ ಹರಿಸಬೇಕಾಯಿತು. ಜನತೆಯ ರಾಜಕೀಯ ಪ್ರಜ್ಞೆಯು ಹರಿತವಾಗುತ್ತಿದೆಯೆಂಬುದು ಅವರ ಅಭಿಪ್ರಾಯವಾಗಿತ್ತು. ಆದರೆ ಈಗಿನ ಮತ್ತು ಮುಂದಿನ ಆವಶ್ಯಕತೆಗಳನ್ನು ಗಮನದಲ್ಲಿರಿಸಿಕೊಂಡು ಕಾರ್ಯಕ್ರಮಗಳನ್ನು ರೂಪಿಸಬೇಕಾದುದು ಅನಿವಾರ್ಯ. ಕಾಂಗ್ರೆಸ್ ಹೊಸ ಗಾಳಿಗೆ ಬಾಗಿಲು ತೆರೆಯಬೇಕು. ಹೊಸ ಗುಂಪುಗಳೊಂದಿಗೆ ಅವರು ಸಂಬಂಧಗಳನ್ನು ಬೆಸೆದುಕೊಳ್ಳಬೇಕು, ವಿಶೇಷವಾಗಿ ಯುವಶಕ್ತಿಯನ್ನು ಪೋಷಿಸಬೇಕು. ತಾಂತ್ರಿಕ ಹಾಗೂ ವೈಜ್ಞಾನಿಕ ಜ್ಞಾನ ಹಾಗೂ ಪರಿಣತಿಗಳನ್ನು ಪೂರ್ಣಪ್ರಮಾಣದಲ್ಲಿ ಬಳಸಿಕೊಳ್ಳಬೇಕು. ನೀತಿರೂಪಣೆ ಹಾಗೂ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಬುದ್ಧಿಜೀವಿಗಳ ನೆರವನ್ನು ಪಡೆಯಬೇಕು. ಎಲ್ಲ ವರ್ಗಗಳ ಜನರಲ್ಲಿ ಆತ್ಮವಿಶ್ವಾಸವನ್ನು ಬೆಳೆಸುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯಬೇಕು. ಈ ವಿಷಯಗಳ ಕುರಿತು ರಾಷ್ಟ್ರೀಯ ಚರ್ಚೆಗಳು ನಡೆಯಬೇಕು.

ಈಗಿನ ಗುಂಪು ತಿಕ್ಕಾಟದ ಮೂಲ ಕಾರಣಗಳು ಎರಡು: ಒಂದು ಕಾನೂನಿಗೆ ಸಂಬಂಧಿಸಿದಾದರೆ, ಮತ್ತೊಂದು ಸಂವಿಧಾನಕ್ಕೆ ಸಂಬಂಧಿಸಿದ್ದು. ನಿಜಲಿಂಗಪ್ಪ ಮತ್ತು ಅವರ ನಡುವೆ ನಡೆದ ಪತ್ರವ್ಯವಹಾರವು ಇವುಗಳನ್ನು ಸಂಪೂರ್ಣವಾಗಿ ಚರ್ಚಿಸಿದೆ. ಈ ವಿಷಯಗಳು ವಾಸ್ತವವಾದವು ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಈ ವಿಷಯ ಗಳಿಗಿಂತಲೂ ಬಹು ಮಹತ್ವದ ವಿಷಯವೊಂದಿದೆ. ಅದೆಂದರೆ, ದೊಡ್ಡ ತ್ಯಾಗ ಮಾಡಿ ಕಾಂಗ್ರೆಸ್ ಅನ್ನು ಕಟ್ಟಿದವರು ಅದರ ದಿಕ್ಕು-ಧೋರಣೆಗಳನ್ನು ನಿರ್ಧರಿಸಬೇಕೇ ಅಥವಾ ಪಕ್ಷದ ಮೇಲೆ ಹಿಡಿತವಿರುವ ಕೆಲವು ಪಾಳೇಗಾರಿಕೆಯ ನಾಯಕರುಗಳ ಇಚ್ಛಾನುಸಾರ ಅದು ನಡೆಯಬೇಕೇ? ದರ್ಪಿಷ್ಟ ನಿಯಂತ್ರಣ ಮತ್ತು ಸಹಜ ಪ್ರಜಾಪ್ರಭುತ್ವ ಇವುಗಳ

ನಡುವಣ ಸಂಘರ್ಷ ಎಂದಿಗೂ ಇದ್ದದ್ದೇ, ಆದರೆ ಈಗ ಅದು ಬಿಕ್ಕಟ್ಟಾಗಿ ಪರಿಣಮಿಸಿತ್ತು. ಕಾಂಗ್ರೆಸ್‌ನ ಗುರಿ ಸಮಾಜೋ-ಆರ್ಥಿಕ ಬದಲಾವಣೆಯ ಮೂಲಕ ಸಾಮಾಜಿಕ ಕ್ರಾಂತಿಯನ್ನು ಉಂಟುಮಾಡುವುದು. ಆದರೆ ತನ್ನ ಗುರಿಗಳನ್ನು ಸಾಕಾರಗೊಳಿಸುವ ಸಾಮರ್ಥ್ಯವನ್ನು ಪಕ್ಷವು ಕಳೆದುಕೊಂಡಿದೆ. ಅದರಲ್ಲೀಗ ಗೌರವದ ದನಿಯಿಲ್ಲ, ಕಾರ್ಯಶೀಲವಾಗುವ ಶಕ್ತಿಯಿಲ್ಲ, ಮೊದಲಿನ ಆತ್ಮವಿಶ್ವಾಸವಿಲ್ಲ. ಸಾಮಾನ್ಯ ಕಾಂಗ್ರೆಸ್ ಕಾರ್ಯಕರ್ತನಿಗೆ ಮಾತನಾಡುವ ಸ್ವಾತಂತ್ರ್ಯವಿಲ್ಲ, ಪಕ್ಷದ ಅನೇಕ ನೆಲೆಗಳು ನಿರ್ಜೀವವಾಗಿವೆ. ಇಂದಿನ ಸಂಘರ್ಷ ಎಂತಹುದೇ ಆಗಿರಲಿ, ತುಂಬ ಮಹತ್ವದ ಪ್ರಶ್ನೆಯೆಂದರೆ ಜನತೆಗೆ ಕಾಂಗ್ರೆಸ್ ಏನು ಮಾಡಬಲ್ಲುದು ಎಂಬುದು. ತಾನು ಸಾಧಿಸಬೇಕಾದುದನ್ನು ಪಕ್ಷವು ಪ್ರಜಾಪ್ರಭುತ್ವ ಮತ್ತು ಸಮಾಜವಾದಳ ಬಗೆಗಿನ ಬದ್ಧತೆಯಿಂದ ಮಾಡಬೇಕಾಗಿದೆ. ಇವೆರಡೂ ಪರಸ್ಪರ ಪೂರಕವಾದವು ಮತ್ತು ಸಮಾನ ಮಹತ್ವದವು. ಸೈದ್ಧಾಂತಿಕವಾಗಿ ವಿಶಾಲ ನೆಲೆಯ ಕಾಂಗ್ರೆಸ್ ಮಾತ್ರವೇ ಇವೆರಡನ್ನೂ ಒಳಗೊಳ್ಳಬಲ್ಲುದು. ಜನರನ್ನು ಸಮಾಜವಾದಕ್ಕೆ ಸಜ್ಜುಗೊಳಿಸಬೇಕಾಗಿದೆ, ಸಮಾಜವಾದ ಎಂಬುದು ಕೇವಲ ಕಾನೂನುಗಳನ್ನು ಮಾಡುವುದಲ್ಲ. ಚುನಾವಣೆಗಳ ಹೊತ್ತಲ್ಲಿ ಮಾತ್ರ ಕಾಂಗ್ರೆಸ್ ಜೀವಂತವಾದರೆ ಸಾಲದು, ಜನರ ಮನಸ್ಸಿನಲ್ಲಿ ಕಾಂಗ್ರೆಸ್‌ನ ಗುರಿಗಳು ಸದಾ ಹಸುರಾಗಿರುವಂತೆ ಮಾಡಲು ನಿರಂತರ ಹೆಣಗಾಟ ಆವಶ್ಯಕ. ಬೃಹತ್ ಪ್ರಮಾಣದ ರಾಜಕೀಯ ಶಿಕ್ಷಣ ಕಾರ್ಯಕ್ರಮ ಅನಿವಾರ್ಯ. ರಾಜಕೀಯ ಸಾಮರ್ಥ್ಯಗಳನ್ನು ಬೆಂಬಲಿಸಲು ಒಂದು ದೊಡ್ಡ ಸಾಮಾಜಿಕ ತಂಡವನ್ನು ನಿರ್ಮಿಸಬೇಕಾಗಿದೆ. ಅಂಥ ತಂಡಗಳ ಸಹಾಯದಿಂದಲೇ ಚುನಾವಣೆಗಳನ್ನು ಎದುರಿಸುವುದೂ ಸಾಧ್ಯ.

ಸರ್ಕಾರವು ಒಂದು ಸಂಘಟನೆಯಾದ ಕಾಂಗ್ರೆಸ್ ಪಕ್ಷದ ಒಂದು ಅಂಗವೆಂಬುದನ್ನು ಆಕೆ ಒಪ್ಪಿದ್ದರು. ಪಕ್ಷವು ಜೀವಂತವಾಗಿದ್ದು ಕಾರ್ಯಶೀಲವಾಗಿದ್ದರೆ ಸರ್ಕಾರವೂ ತನ್ನ ಜಬಾಬುದಾರಿಗಳ ಬಗ್ಗೆ ಎಚ್ಚರದಿಂದಿರುತ್ತದೆ. ಪಕ್ಷದ ಚೈತನ್ಯ ಮತ್ತು ಸಾಮರ್ಥ್ಯಗಳು ಸರ್ಕಾರ ಮಾಡುವ ಕಾನೂನು ಮತ್ತು ನಡೆಸುವ ಚಟುವಟಿಕೆಗಳಲ್ಲಿ ಪ್ರತಿಬಿಂಬಿತವಾಗುತ್ತವೆ. ಹೀಗಾಗಿ ಪಕ್ಷದ ಪ್ರಾಮುಖ್ಯವನ್ನು ಕ್ಷೀಣಗೊಳಿಸಲಾಗುವುದಿಲ್ಲ. ದೆಹಲಿಯಲ್ಲಿ ನಡೆಸಲು ಉದ್ದೇಶಿಸಿರುವ ಎಐಸಿಸಿಯ ಅಧಿವೇಶನದ ಉದ್ದೇಶ ಇದೇ, ಅದನ್ನು ಪ್ರಜಾಸತ್ತಾತ್ಮಕ ಕ್ರಿಯಾವಂತಿಕೆಯ ಒಂದು ಸಮರ್ಥ ಸಾಧನವನ್ನಾಗಿಸುವುದು. ಈ ಅಧಿವೇಶನವು ಪಕ್ಷದಲ್ಲಿ ಹೊಸ ಚೈತನ್ಯವನ್ನುಂಟುಮಾಡಿ ಅದು ಪ್ರಗತಿಪರ ಮಾರ್ಗದಲ್ಲಿ ಜನರನ್ನೊಳಗೊಂಡು ಸಾಗುವಂತಾಗುವುದೆಂಬ ನಿರೀಕ್ಷೆ ಆಕೆಯದು. ಎಲ್ಲರ ಎದುರಿಗಿರುವುದು ಇದೊಂದೇ, ಮಿಕ್ಕದ್ದೆಲ್ಲ ಲೆಕ್ಕಕ್ಕಿಲ್ಲದ್ದು.

ಈ ಪತ್ರದಲ್ಲಿ ಇಂದಿರಾ ಗಾಂಧಿಯವರ ಜಾಣ್ಮೆ ಮತ್ತು ರಾಜಕೀಯ ಕೌಶಲಗಳು ಎದ್ದು ಕಾಣುತ್ತವೆ. ಈ ಪತ್ರದಲ್ಲಿನ ಕೆಲವು ಹೇಳಿಕೆಗಳ ಕಾರಣದಿಂದಾಗಿ ಆಕೆಯನ್ನು ಆಕ್ಷೇಪಿಸಲು ಬರುವುದಿಲ್ಲ. ಅವುಗಳಲ್ಲಿ ಕೆಲವನ್ನು ಸತ್ಯವೆಂದೇ ಒಪ್ಪಿಕೊಳ್ಳಬೇಕಾಗುತ್ತದೆ. ನಿದರ್ಶನಕ್ಕೆ, ೧೯೬೭ರ ಚುನಾವಣೆಗಳ ಈಚೆಗಾದ ಕಾಂಗ್ರೆಸ್‌ನ ಪರಾಭವಗಳು ಪಕ್ಷಕ್ಕೆ ಹೊಸ ಚೈತನ್ಯ ಹಾಗೂ ಕಾಯಕಲ್ಪ ಆವಶ್ಯಕವೆಂಬುದನ್ನು ಸಾಬೀತುಪಡಿಸುತ್ತವೆ. ಅದಕ್ಕೆ ಸಂಘಟನಾತ್ಮಕ ಮೊನಚೂ ಆವಶ್ಯಕವಾಗಿತ್ತು; ಮತ್ತು ಎಲ್ಲಕ್ಕಿಂತ ಮಿಗಿಲಾಗಿ, ಅದಕ್ಕೆ ಉತ್ಸಾಹ ಮತ್ತು ಹೊಸ ರಕ್ತಗಳೂ ಬೇಕಾಗಿದ್ದುವು. ಇವೆಲ್ಲ ನಿಜವೇ, ನಿಜಲಿಂಗಪ್ಪ ನವರು ಕೂಡ, ಕೆಲವು ವಿಷಯಗಳ ಬಗ್ಗೆ ತಕರಾರೆತ್ತಿದರೂ, ಅವುಗಳಲ್ಲಿ ಕೆಲವನ್ನು ಒಪ್ಪಿಕೊಂಡಿರಬೇಕು. ಆದರೆ, ಅವರಿಬ್ಬರ ನಡುವೆ ಮೂಲಭೂತ ಭಿನ್ನತೆಗಳು ಇದ್ದೇ ಇದ್ದುವು. ಪರಂಪರಾಗತ ಕಾನೂನು ಸಂಸ್ಕೃತಿಯಲ್ಲಿ ಬೆಳೆದಿದ್ದ ನಿಜಲಿಂಗಪ್ಪನವರು ನಿಯಮಾವಳಿಗೆ ಕಟಿಬದ್ಧವಾಗಿದ್ದರು, ಅದರಲ್ಲೂ ಚಾಚೂ ತಪ್ಪದೆ, ಅಕ್ಷರಶಃ. ಆದರೆ ಇಂದಿರಾ ಗಾಂಧಿಯವರು, ತಾವು ನಿಯಮಗಳ ಹಿಂದಿನ ಮನೋಭಾವವೆಂದು ತಿಳಿದುದಕ್ಕೇ ಮಹತ್ವವಿತ್ತು, ನಿಯಮಗಳನ್ನು ಕೈಬಿಡಲು ಸಿದ್ಧರಾಗಿದ್ದರು. ಮೇಲಾಗಿ, ತಾತ್ವಿಕವಾಗಿಯಾದರೂ ಅವರು ಸೈದ್ಧಾಂತಿಕತೆಯ ಹಿತಕ್ಕಾಗಿ ನಿಯಮಗಳನ್ನು ಗಾಳಿಗೆ ತೂರಲು ಸಿದ್ಧವಿದ್ದರು. ಆದರೆ ಇದು ನಿಜಲಿಂಗಪ್ಪನವರ ಮೂಲ ನಿಲವಿಗೆ ವಿರುದ್ಧ ವಾದುದಾಗಿತ್ತು. ಎರಡನೆಯ ಅಂಶವೆಂದರೆ, ಅನುಮಾನಾತೀತವಾಗಿ ಬಗೆಹರಿಸಲು ಎಂದೂ ಸಾಧ್ಯವಾಗದಾದರೂ, ತಮ್ಮ ಹೇಳಿಕೆಗಳ ಮತ್ತು ನಡವಳಿಕೆಗಳ ಹಿಂದಿನ ಪ್ರಾಮಾಣಿಕತೆ, ಆಕೆಯ ಕ್ರಾಂತಿಕಾರಕತೆ, ಸಮಾಜವಾದ ಮತ್ತು ಪ್ರಗತಿಪರತೆಗಳು ತಮ್ಮ ಸ್ವಹಿತಸಾಧನೆಗಾಗಿ ಬಳಸಿಕೊಂಡ ಅಸ್ತ್ರಗಳಾಗಿದ್ದುವೇ ಎಂಬುದನ್ನು ಯಾರಾದರೂ ಪ್ರಶ್ನಿಸಬಹುದಿತ್ತು, ನಿಜಲಿಂಗಪ್ಪ ಹಾಗೆಯೇ ಮಾಡಿದರು. ಆಕೆಯು ಮೂಲಭೂತವಾಗಿ ಒಬ್ಬ ಅವಕಾಶವಾದಿ ಮತ್ತು ಆಕೆಯ ಮಾತು ಕೃತಿಗಳ ನಡುವೆ ಕಂದರವಿದೆ ಎಂದು ನಿಜಲಿಂಗಪ್ಪ ಮತ್ತು ಸಿಂಡಿಕೇಟ್ ಪ್ರಾಮಾಣಿಕವಾಗಿ ನಂಬಿದ್ದರು. ಸರಳವಾಗಿ ಹೇಳ ಬೇಕೆಂದರೆ, ಅವರು ಆಕೆಯನ್ನು ಮೋಸಗಾರ್ತಿ, ಕುತಂತ್ರಿ ಮತ್ತು ನಂಬಲನರ್ಹ ವ್ಯಕ್ತಿ ಎಂದೇ ಭಾವಿಸಿದರು. ಇದೊಂದು ಕಠಿಣ ಐತಿಹಾಸಿಕ ಪ್ರಶ್ನೆ; ಏಕೆಂದರೆ, ಇತಿಹಾಸದ ವಿಶ್ಲೇಷಣೆಯಲ್ಲಿ, ವೈಯಕ್ತಿಕ ಹಾಗೂ ಸಾರ್ವಜನಿಕ ಮತ್ತು ಅವಕಾಶವಾದಿ ಹಾಗೂ ಸೈದ್ಧಾಂತಿಕ ಆಕಾಂಕ್ಷೆಗಳು ಬಿಡಿಸಲಾಗದಂತೆ ಸೇರಿಕೊಂಡುಬಿಟ್ಟಿರುತ್ತವೆ. ಆದರೆ ಇದೊಂದು ಸಾಮಾನ್ಯ ಐತಿಹಾಸಿಕ ಸಂಗತಿಯೇ ವಿನಾ, ಅದನ್ನಿಲ್ಲಿ ಪ್ರಸ್ತಾಪಿಸಿ ರುವುದು ಇಂದಿರಾ ಗಾಂಧಿಯವರನ್ನು ಸಮರ್ಥಿಸಲಾಗಲೀ ಅವರ ರಾಜಕಾರಣವನ್ನು ಅಪರಾಧಮುಕ್ತವಾಗಿ ಮಾಡುವುದಾಗಲೀ ಅಲ್ಲ. ಆನಂತರದ ಬೆಳವಣಿಗೆಗಳು ಸಮರ್ಥಿಸಿ

ದಂತೆ ಸಿಂಡಿಕೇಟ್, ವಾಸ್ತವವಾಗಿಯೂ, ಕಾಲಕ್ಕೆ ವಿಹಿತವಾದ ಮನೋಭಾವದಿಂದ ದೂರವಾದುದಾಗಿತ್ತು, ಹಾಗೆಯೇ ಇಂದಿರಾ ಗಾಂಧಿಯವರು, ಅವರ ಅನ್ಯ ಉದ್ದೇಶಗಳೆ ಏನೇ ಇರಲಿ, ಅದನ್ನು ಹಿರಿಯರಿಗಿಂತ ಸಮರ್ಥವಾಗಿ ಅರ್ಥಮಾಡಿಕೊಂಡರು.

ಈಗ ಘಟನಾವಳಿಗಳ ನಿರೂಪಣೆಯನ್ನು ಮುಂದುವರೆಸೋಣ. ಅಧ್ಯಕ್ಷ ಚುನಾವಣೆಯಲ್ಲಿ ಅಧಿಕೃತ ಅಭ್ಯರ್ಥಿಯ ವಿರುದ್ಧ ಎರಡೂ ಬಣಗಳವರು ಹಳೆಯದನ್ನು ಮರೆಯಬೇಕೆಂದು ಮಾಡಿದ ಕಾರ್ಯಕಾರಿ ಸಮಿತಿಯ ಐಕಮತ್ಯ ನಿರ್ಣಯಕ್ಕೆ ಮೊದಲು ಕೆಲಸಮಾಡಿದ ಆಪಾದನೆಯ ಕಾರಣ ಕಾರ್ಯಕಾರಿ ಸಮಿತಿಯಿಂದ ಪದಚ್ಯುತಗೊಂಡಿದ್ದ ಫಕ್ರುದ್ದೀನ್ ಆಲಿ ಅಹಮದ್ ಅವರು, ನಿಜಲಿಂಗಪ್ಪನವರಿಗೆ ೧೯೬೯ನೇ ನವೆಂಬರ್ ೧ ರಂದು ಪತ್ರವೊಂದನ್ನು ಬರೆದು ತಮ್ಮ ಪದಚ್ಯುತಿಯು ಅನ್ಯಾಯವೆಂದೂ ತಮ್ಮನ್ನು ಸದಸ್ಯರನ್ನಾಗಿ ಮುಂದುವರೆಸಬೇಕೆಂದೂ ಕೇಳಿಕೊಂಡರು. ಪಕ್ಷದ ಅಧ್ಯಕ್ಷರಾಗಿ ನಿಜಲಿಂಗಪ್ಪನವರು ಪ್ರಧಾನಮಂತ್ರಿಗಳಿಗೆ ಪತ್ರ ಬರೆದು, ಕಾರ್ಯಕಾರಿ ಸಮಿತಿ ಸಭೆಯನ್ನು ನಿಯಮಬಾಹಿರವಾಗಿ ಕರೆಯಲಾಗಿದೆಯೆಂದೂ ತಮ್ಮ ನಡವಳಿಕೆಯ ಬಗ್ಗೆ ಅವರು ವಿವರಣೆ ನೀಡಬೇಕೆಂದೂ ಕೇಳಿದರು. ಅದಕ್ಕೆ ಉತ್ತರವಾಗಿ ಪ್ರಧಾನಿಗಳು ನಿಜಲಿಂಗಪ್ಪನವರಿಗೆ ಪತ್ರ ಬರೆದು, ತಕ್ಷಣವೇ ಎಐಸಿಸಿ ಸಭೆಯನ್ನು ಕರೆದು ತಮ್ಮ ಬಹುಮತವನ್ನು ಸಾಬೀತುಪಡಿಸುವಂತ ಆಗ್ರಹಿಸಿದರು. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ತಮ್ಮ ವಿರುದ್ಧದ ನಿರ್ಣಯವನ್ನು ಬೆಂಬಲಿಸಿದ್ದ ರಾಂ ಸುಭಾಗ್ ಸಿಂಗ್ ಅವರನ್ನು ತಮ್ಮ ಸಂಪುಟದಿಂದ ಕೈಬಿಟ್ಟರು. ವಾತಾವರಣವು ಗೊಂದಲಮಯ ವದಂತಿಗಳಿಂದ ತುಂಬಿಹೋಯಿತು. ಅದರಲ್ಲಿ ಒಂದು ಎಂದರೆ, ಸಂಸತ್ತನ್ನು ವಿಸರ್ಜಿಸಿ ಹೊಸ ಚುನಾವಣೆಗಳನ್ನು ನಡೆಸಲಾಗುವುದು ಎಂಬ ಇಂದಿರಾ ಗಾಂಧಿ ಬಣದವರು ಹಬ್ಬಿಸಿದ್ದ ವದಂತಿ ಸಹಜವಾಗಿಯೇ, ಈ ವದಂತಿಯು ಸಂಸತ್ ಸದಸ್ಯರನ್ನು ಚಿಂತೆಗೀಡುಮಾಡಿತು. ಅದರಿಂದ ಬಹು ಬೆಂಡಾದವರೆಂದರೆ ಬೇಲಿಯ ಮೇಲೆ ಕುಳಿತಿದ್ದ ಸಂಸತ್ ಸದಸ್ಯರು ಮತ್ತು ಶಾಸಕರುಗಳು! ಇವೆಲ್ಲದರ ನಡುವೆ, ಒಡಕನ್ನು ನಿವಾರಿಸುವ ಪ್ರಯತ್ನಗಳು ಮುಂದುವರಿದುವು, ಆದರೆ ಎಲ್ಲ ಒಳಗೊಳಗೇ. ಬಿರುಕನ್ನು ಮುಚ್ಚಲು ವೀರೇಂದ್ರ ಪಾಟೀಲರು ಸಂಧಾನ ಕಾರ್ಯದಲ್ಲಿ ತೊಡಗಿದುದು ಇಂಥ ಒಂದು ನಿದರ್ಶನ. ಸಂಜೀವರೆಡ್ಡಿಯವರನ್ನು ರಾಷ್ಟ್ರಪತಿ ಅಭ್ಯರ್ಥಿಯಾಗಿ ಸೂಚಿಸಿದ್ದ ಸಂಸದೀಯ ಸಭೆಯಲ್ಲಿಯೇ ಅವರು ಅಂತಿಮ ನಿರ್ಧಾರಕ್ಕೆ ಬರುವ ಮುಂಚೆ ಪ್ರಧಾನ ಮಂತ್ರಿಗಳೊಡನೆ ಚರ್ಚಿಸಬೇಕೆಂದು ಸೂಚಿಸಿದ್ದರು. ಪಾಟೀಲರು ಪ್ರಧಾನಿಯವರನ್ನು ದೆಹಲಿಯಲ್ಲಿ ಭೇಟಿಯಾದಾಗ ರಾಜಕೀಯ ಅಳಿವು ಉಳಿವನ್ನು ತಾವು ಎದುರಿಸುತ್ತಿರುವುದಾಗಿ ಹೇಳಿದ್ದರಂತೆ. ಸರ್ಕಾರವನ್ನು ನಡೆಬೇಕಾಗಿರುವ ಪ್ರಧಾನ

ಮಂತ್ರಿಗಳ ಇಚ್ಛೆಯೇ ರಾಷ್ಟ್ರಪತಿ ಅಭ್ಯರ್ಥಿ ಆಯ್ಕೆಯ ವಿಷಯದಲ್ಲಿ ಅಂತಿಮವಾಗಿರಬೇಕೆಂದು ಅವರು ವಾದಿಸಿದ್ದರು, ಯಾಕಂದರೆ ತಾವು ತಾನೇ ರಾಷ್ಟ್ರಪತಿ ಭವನದಲ್ಲಿನ ಈ ವ್ಯಕ್ತಿಯೊಂದಿಗೆ ಪದೇ ಪದೇ ಸಹಕಾರದಿಂದ ನಡೆದುಕೊಳ್ಳಬೇಕಾದುದು. ಅಲ್ಲದೆ, ರೆಡ್ಡಿಯವರ ಬದಲಿಗೆ ನಿಜಲಿಂಗಪ್ಪನವರೇ ರಾಷ್ಟ್ರಪತಿ ಹುದ್ದೆಗೆ ಸ್ಪರ್ಧಿಸಿದ್ದರೆ ತಾವು ಸಂತೋಷದಿಂದ ಅವರನ್ನು ಬೆಂಬಲಿಸುತ್ತಿದ್ದುದಾಗಿಯೂ ಹೇಳಿದ್ದರಂತೆ. ಇದರಿಂದ ಪಕ್ಷ ಒಡೆಯುವುದು ತಪ್ಪುತ್ತದೆ ಎಂದು ಪಾಟೀಲರು ಇದನ್ನು ಸ್ವಾಗತಿಸಿ, ಈ ವಿಷಯವನ್ನು ತಮ್ಮ ರಾಜಕೀಯ ಗುರು ನಿಜಲಿಂಗಪ್ಪನವರೊಂದಿಗೆ ಪ್ರಸ್ತಾಪಿಸಿದ್ದರಂತೆ. ಆದರೆ ನಿಜಲಿಂಗಪ್ಪನವರು ಹಳೆಯ ಗೊಡ್ಡು ನೈತಿಕ ನಿಲವನ್ನೇ ಹಿಡಿದು, ಆ ಹಂತದಲ್ಲಿ ರೆಡ್ಡಿಯವರನ್ನು ಕೈಬಿಡುವುದು ಅನೈತಿಕವೂ ಅಸೂಕ್ತವೂ ಆಗುತ್ತದೆಂದು ಹೇಳಿದ್ದರಂತೆ. ನೈತಿಕ ತತ್ವಗಳ ಕಾರಣದಿಂದಾಗಿ ಅವರು ಅಧಿಕಾರ ಮತ್ತು ಹುದ್ದೆಗಳನ್ನು ಬಿಟ್ಟುಕೊಡಲು ಸಿದ್ಧರಿದ್ದರು. ಏನಾದರಾಗಲಿ, ರಾಷ್ಟ್ರಪತಿ ಚುನಾವಣೆಗಳ ಬಳಿಕದ ಪರಿಸ್ಥಿತಿಯಲ್ಲಿ ಪಾಟೀಲರು ಶಾಂತಿದೂತರಾಗಿ ಕಾರ್ಯ ನಿರ್ವಹಿಸಲು ಮುಂದಾದರು. ಇಬ್ಬರೂ ನಾಯಕರನ್ನು ಅವರು ಭೇಟಿಯಾಗಿ ಪಕ್ಷದ ಹಿತದೃಷ್ಟಿಯಿಂದ ತಮ್ಮ ತಮ್ಮ ಭಿನ್ನಾಭಿಪ್ರಾಯಗಳನ್ನು ಮರೆಯಲು ಸೂಚಿಸಿದರು. ಇಂದಿರಾ ಗಾಂದಿಯವರು ಏರ್ಪಡಿಸಲಿದ್ದ ಭೋಜನ ಕೂಟದಲ್ಲಿ ನಿಜಲಿಂಗಪ್ಪನವರು ಆಕೆಯನ್ನು ಕಂಡು ಉಭಯತ್ರ ಒಪ್ಪಿತವಾಗುವ ಸಾಮಾನ್ಯಾಂಶಗಳ ಮೇಲೆ ಒಡಂಬಡಿಕೆ ಮಾಡಿಕೊಳ್ಳುವ ಏರ್ಪಾಡಾಯಿತು. ಔತಣ ಕೂಟವೇನೋ ಸಲೀಸಾಗಿ ನಡೆಯಿತು, ಆದರೆ ಒಡಂಬಡಿಕೆ ಮಾತ್ರ ಏರ್ಪಡಲಿಲ್ಲ. ವಿವಾದಿತ ವಿಷಯದ ಬಗ್ಗೆ ಸಂಧಾನಕ್ಕೆ ಇಬ್ಬರೂ ಕಿಂಚಿತ್ತೂ ಸಿದ್ಧರಿರಲಿಲ್ಲ. ನಿಜಲಿಂಗಪ್ಪನವರು ತಮ್ಮ ಮನೆಯ ಭೋಜನಕೂಟಕ್ಕೆ ಇಂದಿರಾ ಗಾಂಧಿಯವರನ್ನು ಆಹ್ವಾನಿಸಿದರು. ಅವರೇನೋ ಒಪ್ಪಿಕೊಂಡರು, ಆದರೆ ಕಡೆ ಗಳಿಗೆಯಲ್ಲಿ, ಬಿಡುವಿಲ್ಲದ ಕೆಲಸದ ಕಾರಣ ಬರಲಾಗುವುದಿಲ್ಲವೆಂದು ಜಾರಿಕೊಂಡರು. ಪ್ರಾಯಶಃ ಇದಕ್ಕೆ ಕಾರಣ ಸರ್ಕಾರದಲ್ಲಿನ ಅವರ ಸಹೋದ್ಯೋಗಿಗಳ ಹಾಗು ಆಪ್ತ ಸ್ನೇಹಿತರ ಸಲಹೆ ಎಂದು ವೀರೇಂದ್ರ ಪಾಟೀಲರು ಭಾವಿಸಿದರು. ಪಕ್ಷ ಒಡೆಯುವುದನ್ನು ತಪ್ಪಿಸಲು ಅನೇಕ ತೆರೆಮರೆಯ ಪ್ರಯತ್ನಗಳಾದುವು. ಇಂದಿರಾ ಗಾಂಧಿಯವರ ಆಪ್ತರಾಗಿದ್ದ ದಿನೇಶ್‌ಸಿಂಗ್‌ರ ಪ್ರಯತ್ನ ಅಂಥದ್ದೊಂದು. ಅವರು ಮೈಸೂರಿನ ಒಬ್ಬ ಲೋಕಸಭಾ ಸದಸ್ಯರಾದ ಎಂ. ರಾಜಶೇಖರನ್ ಅವರನ್ನು ಆಹ್ವಾನಿಸಿ ಸಂಧಾನಕಾರರನ್ನಾಗಿ ಬಳಸಿಕೊಳ್ಳಲು ಯೋಚಿಸಿದರು, ಯಾಕಂದರೆ ರಾಜಶೇಖರನ್ ನಿಜಲಿಂಗಪ್ಪನವರ ಅಳಿಯ. ಸದ್ಯ ದೇಶವು ಭಾರಿ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಎದುರಿಸುತ್ತಿದೆಯೆಂದೂ ಹಾಗಾಗಿ ಅವರಂತಹ ವ್ಯಕ್ತಿಯು ಪಾದರಸದಂತೆ ಚುರುಕಾಗಿರಬೇಕೆಂದೂ ಅವರಿಗೆ ಹೇಳಿದರಂತೆ. ಆಗಬೇಕಾಗಿದ್ದ ಮೊದಲ ಕೆಲಸವೆಂದರೆ ಪಕ್ಷ

ಒಡೆಯುವುದನ್ನು ತಪ್ಪಿಸುವುದು, ಬಯಸಿದರೆ ಅವರು ಅದನ್ನು ಮಾಡಬಹುದು. ಇಂದಿರಾ ಗಾಂಧಿಯವರಿಗೆ ಮೊರಾರ್ಜಿಯನ್ನು ಕಂಡರೆ ಆಗದು, ನಿಜಲಿಂಗಪ್ಪನವರೇನಾದರೂ ಅವರ ಜೊತೆಯನ್ನು ಬಿಟ್ಟರೆ, ಪ್ರಧಾನಿಗಳು ನಿಜಲಿಂಗಪ್ಪನವರನ್ನು ಹಣಕಾಸು ಸಚಿವರನ್ನಾಗಿ ಮಾಡುವುದಲ್ಲದೆ ಉಪಪ್ರಧಾನಿಯ ಹುದ್ದೆಯನ್ನು ನೀಡಲು ಸಿದ್ಧರಿರುವರೆಂದೂ ಸಂದೇಶವನ್ನು ಕಳಿಸಿದರು. ಆದರೆ ಅಳಿಯನಿಗೆ ತಮ್ಮ ಮಾವನವರ ಸ್ವಭಾವ ಚೆನ್ನಾಗಿ ಗೊತ್ತಿತ್ತು, ಹೀಗಾಗಿ ಆ ಬಗ್ಗೆ ಮೂಗು ತೂರಿಸಲು ರಾಜಶೇಖರನ್ ಇಷ್ಟಪಡಲಿಲ್ಲ, ನಿಜಲಿಂಗಪ್ಪನವರು ಎಂದಿಗೂ ಕೊಟ್ಟ ಮಾತಿಗೆ ತಪ್ಪುವವರಲ್ಲ, ಆದರೂ ತಾವು ಈ ಸಂದೇಶವನ್ನು ಅವರಿಗೆ ಮುಟ್ಟಿಸುವುದಾಗಿ ಹೇಳಿದರಂತೆ. ರಾಜಶೇಖರನ್ ಆ ವಿಷಯವನ್ನು ತೆಗೆಯುತ್ತಿದ್ದಂತೆಯೇ ನಿಜಲಿಂಗಪ್ಪನವರು ಕೆಂಡಾಮಂಡಲವಾದರು, ಆದರೆ ದಿನೇಶ್ ಸಿಂಗ್‌ರೊಡನೆ ಭೇಟಿಯಾದ ವಿವರವನ್ನು ಕೇಳಿದ ಬಳಿಕ ಸ್ವಲ್ಪ ಮೆತ್ತಗಾದರು. ರಾಷ್ಟ್ರಪತಿ ಚುನಾವಣೆಯ ಕಾಲದಲ್ಲಿಯೂ ದಿನೇಶ್ ಸಿಂಗ್ ಇಂತಹುದೇ ಒಂದು ಸಲಹೆಯನ್ನು ನೀಡಿದ್ದರು. ತಾವು ಪಕ್ಷದ ಅಧ್ಯಕ್ಷರಾಗಿರುವ ಕಾರಣ ರಾಷ್ಟ್ರಪತಿ ಹುದ್ದೆಗೆ ಆಸೆಪಡುವುದು ಸಮಂಜಸವಲ್ಲ ಎಂದು ಆಗಲೇ ನಿಜಲಿಂಗಪ್ಪ ಉತ್ತರವಿತ್ತಿದ್ದರು. ತಮ್ಮ ಕೆಲಸ ಆ ಹುದ್ದೆಗೆ ಅಭ್ಯರ್ಥಿಯೊಬ್ಬರನ್ನು ಆಯುವುದೇ ಹೊರತು ತಮ್ಮನ್ನೇ ಆಯ್ದುಕೊಳ್ಳುವುದಲ್ಲ! ಉಪಪ್ರಧಾನಿ ಹುದ್ದೆ ಕುರಿತು ದಿನೇಶ್ ಸಿಂಗ್ ವೀರೇಂದ್ರ ಪಾಟೀಲರೊಡನೆಯೂ ಚರ್ಚಿಸಿದ್ದಂತೆಯೂ, ಅವರು ಈ ವಿಷಯವನ್ನು ನಿಜಲಿಂಗಪ್ಪನವರ ಜತೆ ಮಾತಾಡಿದ್ದಂತೆಯೂ ಕಾಣುತ್ತದೆ. ತಮ್ಮ ಕೊಡುಗೆಗಳಿಂದ ನಿಜಲಿಂಗಪ್ಪವರಿಗೆ ಆಮಿಷವೊಡ್ಡುವುದರಿಂದೇನೂ ಪ್ರಯೋಜನವಿಲ್ಲವೆಂದು ಗೊತ್ತಾದ ಬಳಿಕವಷ್ಟೇ ಪ್ರಧಾನಿಗಳು ತಮ್ಮ ಬಹಿರಂಗ ಪತ್ರವನ್ನು ಪ್ರಕಟಿಸಿದರು. ೩-೧೧-೧೯೬೯ರ ಪ್ರಧಾನಿಗಳ ಪತ್ರಕ್ಕೆ ನಿಜಲಿಂಗಪ್ಪನವರು ೧೧-೧೧-೧೯೬೯ ರಂದು ಉತ್ತರ ಕಳಿಸಿದರು. ಈ ಪತ್ರದ ಮುಖ್ಯಾಂಶವನ್ನು ಸಂಕ್ಷಿಪ್ತವಾಗಿ ಇಲ್ಲಿ ಉಲ್ಲೇಖಿಸಬಹುದು. ಮೊದಲನೆಯದಾಗಿ, ಪಕ್ಷದ ದುಸ್ಥಿತಿಯ ಬಗ್ಗೆ ಪ್ರಧಾನಿಗಳು ಸಾಕಷ್ಟು ಕಾಳಜಿ ತೋರಿಸಲಿಲ್ಲವೆಂಬುದು. ತಮ್ಮ ತಪ್ಪು ದಾರಿಯನ್ನು ಬಿಡುವ ಯಾವುದೇ ಸೂಚನೆಯನ್ನವರು ನೀಡಲೂ ಇಲ್ಲ, ಆ ದಿಸೆಯಲ್ಲಿ ಪ್ರಯತ್ನಿಸಲೂ ಇಲ್ಲ. ತಾವು ಹಾಗೂ ತಮ್ಮ ಸಹಚರರು ಎತ್ತಿದ ಸಂಶಯಗಳು ಹಾಗೂ ಅನುಮಾನಗಳನ್ನು ಪರಿಹರಿಸುವುದರ ಬದಲು ಅವರು ಅರ್ಧಸತ್ಯಗಳ ಮತ್ತು ವಿವಾದಾತ್ಮಕ ತರ್ಕದ ಆಶ್ರಯವನ್ನು ಪಡೆದು ವಾಸ್ತವಗಳನ್ನು ಮರೆಮಾಡಿದರು. ಇಂದಿರಾ ಗಾಂಧಿಯವರು ಸತ್ಯ ಮತ್ತು ಊಹಾಪೋಹಗಳ ನಡುವಣ ವ್ಯತ್ಯಾಸವನ್ನು ಸುಳ್ಳುಗಳಿಂದ ಮುಚ್ಚಿಹಾಕಲು ಪ್ರಯತ್ನಿಸುತ್ತಿದ್ದಾರೆಂದು ಅವರು ಭಾವಿಸಿದರು. ತಾವು ಸುಬ್ರಹ್ಮಣ್ಯಂ ಅವರನ್ನು ಕಾರ್ಯಕಾರಿ ಸಮಿತಿಯಿಂದ ಹೊರ

ಹಾಕಲಿಲ್ಲವೆಂಬುದನ್ನೂ, ಪಿಸಿಸಿಯಿಂದ ಹೊರಬರುವ ಮೂಲಕ ಅವರೇ ತಮ್ಮ ಸದಸ್ಯತ್ವವನ್ನು ಕಳೆದುಕೊಂಡರೆಂಬುದನ್ನೂ ಅವರು ಸ್ಪಷ್ಟಪಡಿಸಿದರು. ಮತ್ತೊಬ್ಬರು ಸಭೆಗಳಿಗೆ ಹಾಜರಾಗದೆ ಮತ್ತು ಅದನ್ನು ತಿರಸ್ಕರಿಸಿ ಕಾರ್ಯಕಾರಿ ಸಮಿತಿಯ ತಮ್ಮ ಸದಸ್ಯತ್ವವನ್ನು ಕಳೆದುಕೊಂಡರು. ಪಕ್ಷದ ಇಡೀ ಇತಿಹಾಸದಲ್ಲಿ ಸಾದಿಕ್ ಆಲಿ ಅವರಂತೆ ಪಕ್ಷದ ಅಧ್ಯಕ್ಷರನ್ನು ಬೇರಾರೂ ಹೀಗಳೆದಿರಲಿಲ್ಲ. ಆ ಬಗೆಯ ಅಶಿಸ್ತು ಮತ್ತು ವಿದ್ರೋಹಗಳಿಗೆ ತಕ್ಕ ಶಿಕ್ಷೆ ವಿಧಿಸಲೇ ಬೇಕು. ಸಚಿವರಾದವರು ಪಿಸಿಸಿ ಅಧ್ಯಕ್ಷಸ್ಥಾನವನ್ನಾಗಲೀ ಕಾರ್ಯದರ್ಶಿಸ್ಥಾನವನ್ನಾಗಲೀ ಹೊಂದಿರಬಾರದೆಂಬುದು ಪಕ್ಷದ ನಿಯಮವಲ್ಲವೇ? ಈ ನಿಯಮದ ಪ್ರಕಾರವೇ ಕಮಲಾಪತಿ ತ್ರಿಪಾಠಿ, ವೆಂಕಟರತ್ನಂ ಮತ್ತು ಎ.ಪಿ. ಶರ್ಮ ತಮ್ಮ ಪಕ್ಷದ ಹುದ್ದೆಯನ್ನು ಕಳೆದುಕೊಳ್ಳಬೇಕಾಯಿತು. ಪಕ್ಷವು ಈ ಹಿಂದೆಯೂ ಈ ನಿಯಮವನ್ನು ಜಾರಿಗೊಳಿಸಿದೆ. ಐಕಮತ್ಯ ನಿರ್ಣಯದ ಬಳಿಕವೂ ಅವರ ಸಹಚರರು ನಡೆದುಕೊಂಡಂತೆ ತಾವೆಂದೂ ನಡೆದುಕೊಂಡಿಲ್ಲ. ಜಗಜೀವನ ರಾಂ ಪಟ್ನಾದಲ್ಲಿ ನೀಡಿದ ಹೇಳಿಕೆಯಾಗಲೀ, ಮುಂಬಯಿ ಕಾಂಗ್ರೆಸ್ ಬಗೆಗಿನ ಆಕೆಯ ಟೀಕೆಯಾಗಲೀ, ಫಕ್ರುದ್ದೀನ್ ಆಲಿ ಅಹಮದ್ ಅವರ ಪತ್ರಿಕಾ ಹೇಳಿಕೆಯಾಗಲೀ ಅವರೆಲ್ಲ ಐಕಮತ್ಯ ನಿರ್ಣಯದ ಸತ್ವದ ವಿರುದ್ಧ ನಡೆದುಕೊಂಡಿರುವ ಉದಾಹರಣೆಗಳು. ಪಕ್ಷದ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಹೊತ್ತಿಗೆ ತಾವು ತಮ್ಮ ನಿರ್ಧಾರ ಮಾಡಿರಲಿಲ್ಲವೆಂಬ ಆಕೆಯ ಹೇಳಿಕೆಯನ್ನು ನಿಜಲಿಂಗಪ್ಪನವರು ನಿರಾಕರಿಸಿದರು. ೧೯೬೯ರ ಮೇ ಜೂನ್ ತಿಂಗಳುಗಳಲ್ಲಿಯೇ ತಾವು ಇಂದಿರಾ ಗಾಂಧಿಯವರೊಡನೆ ಈ ಕುರಿತು ಪ್ರಸ್ತಾಪಿಸಿದ್ದ ವಿಷಯವನ್ನು ನೆನಪಿಸಿದರು. ಆದರೆ ಪ್ರತಿ ಸಂದರ್ಭದಲ್ಲಿಯೂ ಚರ್ಚೆಗೆ ಬಾರದಿದ್ದವರು ಆಕೆಯೇ. ಬೆಂಗಳೂರಿನ ಸಂಸದೀಯ ಪಕ್ಷದ ಸಭೆಯ ಆರಂಭಕ್ಕೆ ಎರಡು ಗಂಟೆಗಳ ಹಿಂದಿನವರೆಗೂ ಆಕೆ ತಮ್ಮ ಮನಸ್ಸನ್ನು ತೋರ್ಪಡಿಸಿಕೊಂಡಿರಲಿಲ್ಲ. ಆಕೆಗೆ ತಮ್ಮ ಪಕ್ಷದ ಬಗ್ಗೆಯೇ ನಂಬಿಕೆಯಿರಲಿಲ್ಲ, ಹಾಗಾಗಿ ಅವರು ಆ ಬಗ್ಗೆ ವಿರೋಧ ಪಕ್ಷಗಳವರೊಡನೆ ಚರ್ಚಿಸಿದರು. ತಾವು ಗಿರಿಯವರ ಗೆಲುವಿಗೆ ಕೆಲಸ ಮಾಡಲಿಲ್ಲವೆಂದು ಆಕೆ ಪ್ರಮಾಣ ಮಾಡಿ ಹೇಳಲು ಸಿದ್ಧರಿರುವರೇ? ಕೆಲವು ಸದಸ್ಯರು ಎಐಸಿಸಿ ಅಧಿವೇಶನ ಕರೆಯಲು ಮಾಡಿದ ಕೋರಿಕೆಯನ್ನು ನಿರಾಕರಿಸಿರುವುದು ಸಂವಿಧಾನಬಾಹಿರ ಎಂಬ ಆಕೆಯ ತರ್ಕಕ್ಕೆ ಉತ್ತರಿಸಿ, ಅವರು ಕಾಂಗ್ರೆಸ್ ಅಧ್ಯಕ್ಷರು ಪಕ್ಷದಿಂದ ಚುನಾಯಿತರಾದವರೇ ಹೊರತು ಎಐಸಿಸಿಯಿಂದಲ್ಲ ಎಂದು ಹೇಳಿದರು. ಈ ಬೇಡಿಕೆಗೆ ಅವರು ಸಹಿಗಳನ್ನು ಹೇಗೆ ಸಂಗ್ರಹಿಸಿದರು ಎಂದು ಪ್ರಶ್ನಿಸಿದರು. ಹಾಗಾಗಿರುವುದು ಅಧಿಕಾರದ ದುರುಪಯೋಗದಿಂದ, ಬೆದರಿಕೆಯಿಂದ ಮತ್ತು ವಂಚನೆಯಿಂದ. ಎಲ್ಲ ಸಹಿಗಳು ಪರಿಪೂರ್ಣವಾಗಿದ್ದರೂ, ಸಂಘಟನೆಯೊಂದರ ಒಂದು ವಿಭಾಗವು ಮತ್ತೊಂದು ವಿಭಾಗದ

ಅಧಿಕಾರದ ಮೇಲೆ ಹೀಗೆ ದುರಾಕ್ರಮಣ ಮಾಡಬಹುದೇ ಎಂಬ ಪ್ರಶ್ನೆಯೇಳುತ್ತದೆ. ಅಹಮದಾಬಾದ್ ಗಲಭೆಗಳು ಹಾಗೂ ಅಸ್ಸಾಂ, ತೆಲಂಗಾಣ ಮತ್ತು ಚಂದೀಗಡಗಳ ಪ್ರತಿಭಟನೆಗಳ ಕುರಿತು ಅವರೇನು ಮಾಡಿದ್ದಾರೆ ಎಂದು ಆಕೆ ಪ್ರಶ್ನಿಸಿದ್ದಾರೆ. ಆದರೆ ಇದೆಲ್ಲ ಆದದ್ದು ಆಕೆಯ ಆಡಳಿತವೈಫಲ್ಯದಿಂದಲೇ ಅಲ್ಲವೇ? ಅವರ ದೃಷ್ಟಿಯಲ್ಲಿ, ಇಂಥ ಪ್ರತಿಭಟನೆಗಳೆ ಆಕೆಯನ್ನು ಅಧಿಕಾರದಲ್ಲಿರಿಸುವುದು ಎಂಬ ತಿಳಿವಳಿಕೆಯಿರಬೇಕು! ಅಹಮದಾಬಾದ್‌ನ ಕೋಮುಗಲಭೆಗಳಲ್ಲಿ ಮೊರಾರ್ಜಿಯವರ ಪಾತ್ರದ ಬಗ್ಗೆ ಆಕೆಗೆ ಅರಿವಿರದೆ ಇರಲಾರದು. ತಮ್ಮ ವೈಯಕ್ತಿಕ ಅಶಿಸ್ತನ್ನು ಮುಚ್ಚಿಕೊಳ್ಳಲು ಆಕೆ ಆದರ್ಶ-ಸಿದ್ಧಾಂತಗಳ ತರ್ಕದಿಂದ ಕೂಡಿದ ಹೊದಿಕೆಯನ್ನು ಬಳಸಿಕೊಳ್ಳುತ್ತಿದ್ದಾರೆಂದು ಆರೋಪಿಸಿದರು. ತಮ್ಮ ಫರೀದಾಬಾದ್‌ನ ಭಾಷಣವು ಪಕ್ಷದ ಧ್ಯೇಯ ನೀತಿಗಳಿಗೆ ವಿರೋಧವಾದುದೇನೂ ಅಲ್ಲ. ಸಮಾಜವಾದಿ ಆದರ್ಶಗಳ ಸಾಕಾರಕ್ಕೆ ತಾವು ಬೇರಾರಿಗಿಂತ ಕಡಿಮೆ ಬದ್ಧವರಾದವರೇನಲ್ಲ. ಒಬ್ಬ ಕಾಂಗ್ರೆಸ್ಸಿಗರಾಗಿ ಹಾಗೂ ಮೈಸೂರಿನ ಮುಖ್ಯಮಂತ್ರಿಯಾಗಿ ತಾವಿದನ್ನು ತೋರಿಸಿರುವುದಾಗಿ ಅವರು ಹೇಳಿಕೊಂಡರು. ಸಾಮರ್ಥ್ಯ ಮತ್ತು ಉತ್ಪಾದಕತೆಗಳ ಕಡೆ ಗಮನವೀಯದೆ ಕೇವಲ ಸಾರ್ವಜನಿಕ ವಲಯದ ವಿಸ್ತರಣೆಯಷ್ಟೇ ಎಂಬ ಆಕೆಯ ನಂಬಿಕೆಯನ್ನವರು ಪ್ರಶ್ನಿಸಿದರು. ಬ್ಯಾಂಕ್ ರಾಷ್ಟ್ರೀಕರಣ ವಿಷಯದಲ್ಲಿಯೂ, ಆವಶ್ಯಕವಾದರೆ ತಾವದನ್ನು ಬೆಂಬಲಿಸುವುದಾಗಿ ಮೊರಾರ್ಜಿ ಹೇಳಿದ ಮಾತು ದಾಖಲೆಯಲ್ಲಿದೆ. ಹೀಗಾಗಿ, ಒಬ್ಬ ಸರ್ವಾಧಿಕಾರಿಯ ಸಂಪೂರ್ಣ ಹಿಡಿತವನ್ನು ಸಾಧಿಸುವುದೇ ಆಕೆಯ ಏಕೈಕ ಗುರಿ ಎಂದು ನಿಜಲಿಂಗಪ್ಪನವರು ತೀರ್ಮಾನಿಸಿದರು. ಹಾಗೆ ನೋಡಿದರೆ, ಇಪ್ಪತ್ತನೆಯ ಶತಮಾನದಲ್ಲಿ, ಎಲ್ಲ ಸರ್ವಾಧಿಕಾರಿಗಳೂ ಸಮಾಜವಾದದ ಮುಖವಾಡ ಹಾಕಿಕೊಂಡವರೇ! ಎಸ್.ಕೆ. ಪಾಟೀಲ್ ತಾವು ಸಂಗ್ರಹಿಸಿದ ನಿಧಿಗೆ ಸೂಕ್ತ ಲೆಕ್ಕಪತ್ರ ನೀಡಿಲ್ಲವೆಂಬ ಆಕೆಯ ಆಪಾದನೆಗೆ ಈಗಾಗಲೇ ಪಾಟೀಲ್‌ರೇ ಉತ್ತರಿಸಿದ್ದಾರೆ. ಪಕ್ಷಕ್ಕೂ ಮುಂಬಯಿ ಉಚ್ಚ ನ್ಯಾಯಾಲಯಕ್ಕೂ ತಾವು ಲೆಕ್ಕಪತ್ರಗಳನ್ನು ನೀಡಿರುವುದಾಗಿ ಅವರು ಹೇಳಿದ್ದಾರೆ. ಆಕೆಯ ಮಾತುಗಳನ್ನೇ ತಿರುಗುಬಾಣವಾಗಿ ಮಾಡಿಕೊಂಡು ನಿಜಲಿಂಗಪ್ಪನವರು ಆಕೆಯ ಬೆಂಬಲಿಗರು ತಾವು ಸಂಗ್ರಹಿಸಿದ ನಿಧಿಗೆ ಸರಿಯಾದ ಲೆಕ್ಕಪತ್ರಗಳನ್ನು ಕೊಟ್ಟಿದ್ದಾರೆಯೇ ಎಂದು ಪ್ರಶ್ನಿಸಿದರು. ತಾವು ಸಂಗ್ರಹಿಸಿದ ನಿಧಿಯ ಲೆಕ್ಕಪತ್ರಗಳನ್ನು ಸಚಿವರುಗಳು ನೀಡಬೇಕು ಎಂಬ ನಿರ್ಣಯವೇ ಇದೆ. ಸಚಿವರುಗಳು ಹಾಗೂ ಶಾಸಕರುಗಳು ತಮ್ಮ ಆಸ್ತಿಯ ವಿವರಗಳನ್ನು ಪಕ್ಷದ ಕಚೇರಿಗೆ ಬಹಿರಂಗವಾಗಿ ಸಲ್ಲಿಸಬೇಕೆಂಬ ನಿಯಮವಿರುವುದು ಆಕೆಗೆ ಗೊತ್ತಿರಬೇಕು. ಅವರೆಲ್ಲ ಈ ನಿಯಮಗಳ ಹಾಗೂ ಪಕ್ಷದ ನಿರ್ಣಯಗಳ ಪಾಲನೆ ಮಾಡಿದ್ದಾರೆಯೇ ಎಂದು ಆಕೆಗೆ ಸವಾಲೆಸೆದರು.

ವಿಭೂತಿಪೂಜೆ ಮತ್ತು ಸರ್ವಾಧಿಕಾರಗಳೆಂಬ ತಮ್ಮ ಮೇಲಿನ ಆರೋಪಗಳ ಬಗ್ಗೆ ಆಕೆ ಲಘು ಮನೋಭಾವ ತಾಳಿದ್ದಾರೆ ಎಂದವರು ಆಪಾದಿಸಿದರು. ಪ್ರಜಾಸತ್ತಾತ್ಮಕ ಸಂಸ್ಥೆಗಳು ಹಾಗೂ ಪ್ರಕ್ರಿಯೆಗಳನ್ನು ನಿರಂಕುಶಾಧಿಕಾರವನ್ನು ಪಡೆಯಲು ದುರ್ಬಳಕೆ ಮಾಡಿಕೊಳ್ಳಲಾಗುತ್ತಿರುವುದು ದೇಶದ ದುರಂತ ಎಂದವರು ವಿಷಾದಿಸಿದರು. ಲಂಚ ಮತ್ತು ಹಿಂಸೆಗಳ ಮೂಲಕ ವಿರೋಧವನ್ನು ಹತ್ತಿಕ್ಕಲಾಗಿದೆ. ಸರ್ವಾಧಿಕಾರಿ ಧೋರಣೆಯನ್ನು ನ್ಯಾಯಯುತ ಎನ್ನಿಸಲು ಭಟ್ಟಂಗಿಗಳ ಮೂಲಕ ಪ್ರಚಾರವನ್ನು ಭರಾಟೆಗೊಳಿಸಲಾಗಿದೆ. ಅಂಥ ನಡವಳಿಕೆಯನ್ನು ನಿಯಂತ್ರಿಸಿ ಅಸಲಿ ಸಮಾಜವಾದ ಮತ್ತು ಪ್ರಜಾಪ್ರಭುತ್ವವನ್ನು ಕಾಪಾಡುವುದು ಕಾಂಗ್ರೆಸ್‌ನ ಕರ್ತವ್ಯ ಎಂಬುದನ್ನವರು ಪುನರುಚ್ಚರಿಸಿದರು.

ಇಬ್ಬರ ನಡುವಣ ಈ ಪತ್ರವ್ಯವಹಾರ ನೋಡಿದರೆ, ಇವರಿಬ್ಬರ ನಡುವಣ ಭಿನ್ನತೆಗಳು ಮೂಲಭೂತವಾದವು ಮತ್ತವುಗಳನ್ನು ತೇಪೆ ಹಾಕುವುದು ಅಸಾಧ್ಯ ಎಂಬ ಭಾವನೆ ಯಾರಿಗಾದರೂ ಮೂಡೀತು. ಮೊರಾರ್ಜಿ, ಸಾದಿಕ್ ಆಲಿ ಮತ್ತು ಎಸ್.ಕೆ. ಪಾಟೀಲ್ ಅವರುಗಳು ಸಿದ್ಧಪಡಿಸಿದ್ದ ಮೂರು ನಿರ್ಣಯಗಳನ್ನೂ ಮುಖ್ಯಮಂತ್ರಿಗಳು ಸಿದ್ಧಪಡಿಸಿದ್ದ ನಾಲ್ಕು ರಾಜೀಸೂತ್ರಗಳನ್ನೂ ಪರಿಶೀಲಿಸಲೆಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ೧೯೬೯ನೇ ನವೆಂಬರ್ ೧೧ ಮತ್ತು ೧೨ ರಂದು ಸೇರಿತು. ಇಂದಿರಾ ಗಾಂಧಿ ಮತ್ತಿತರರ ವಿರುದ್ಧ ಮಾಡಿದ ಆರೋಪಗಳನ್ನು ಹಿಂದೆಗೆದುಕೊಳ್ಳಬೇಕೆಂಬ ರಾಜೀಸೂತ್ರಗಳನ್ನು ನಿಜಲಿಂಗಪ್ಪನವರು ಒಪ್ಪಿಕೊಳ್ಳಲಿಲ್ಲ. ಹಾಗಾದರೆ ಆಕೆಯ ಅಶಿಸ್ತು ಮತ್ತು ಬಹಿರಂಗ ಬಂಡಾಯಗಳಿಗೆ ಒಪ್ಪಿಗೆ ನೀಡಿದಂತಾಗುವುದೆಂಬುದು ಅವರ ವಾದ. ಪ್ರಧಾನ ಮಂತ್ರಿಗಳ ನಡತೆಯು ದೇಶ ಮತ್ತು ಪಕ್ಷಗಳಿಗೆ ಹಾನಿಯುಂಟು ಮಾಡಿರುವ ಕಾರಣದಿಂದಾಗಿಯೂ, ಅಧ್ಯಕ್ಷ ಚುನಾವಣೆಯ ನಂತರದ ಅಶಿಸ್ತು ಹೆಚ್ಚಾಗುತ್ತಿರುವುದರಿಂದಲೂ ಪ್ರಧಾನ ಮಂತ್ರಿಗಳು ಹಾಗೂ ಅವರ ಅನುಯಾಯಿಗಳು ಐಕಮತ್ಯ ನಿರ್ಣಯದ ಮಾತು ಮನೋಭಾವಗಳೆರಡನ್ನೂ ಉಲ್ಲಂಘಿಸಿದ್ದಾರೆ. ಪಕ್ಷದ ಅಧ್ಯಕ್ಷರ ವಿರುದ್ಧ ಮಾಡಿರುವ ಸಹಿಸಂಗ್ರಹಣೆಯು ರಾಜೀಸೂತ್ರಗಳನ್ನು ಹಾಳುಗೆಡವಿದೆ; ಎಲ್ಲ ಅಧಿಕಾರವನ್ನೂ ತಮ್ಮ ಕೈಯಲ್ಲಿಯೇ ಕೇಂದ್ರೀಕರಿಸಿಕೊಳ್ಳಬೇಕೆಂಬುದು ಅವರ ಪ್ರಯತ್ನವಾಗಿದೆ, ಹೀಗಾಗಿ ಆಕೆ ದೇಶವನ್ನು ವಿನಾಶದತ್ತ ದೂಡುತ್ತಿದ್ದಾರೆ. ಈ ಕಾರಣದಿಂದ, ಅತ್ಯಂತ ವಿಷಾದದಿಂದಲೇ, ಸಮಿತಿಯು ಪ್ರಧಾನ ಮಂತ್ರಿಗಳನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸುವುದು ಅನಿವಾರ್ಯವಾಗಿದೆಯೆಂದು ಭಾವಿಸುತ್ತದೆ. ಇದರ ಪರಿಣಾಮವಾಗಿ, ತಾಂತ್ರಿಕವಾಗಿ ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕಿಯ ಸ್ಥಾನವನ್ನೂ ಆಕೆ ಕಳೆದುಕೊಳ್ಳುತ್ತಾರೆ. ಸಾಧ್ಯವಾದಷ್ಟು ಬೇಗ ಹೊಸ ನಾಯಕರನ್ನು ಆರಿಸಬೇಕೆಂದು ಕಾರ್ಯಕಾರಿ ಸಮಿತಿಯು ಸಂಸದೀಯ ಪಕ್ಷಕ್ಕೆ ಸೂಚಿಸಿತು. ಇಂದಿರಾ

ಗಾಂಧಿ ಪರ ಜನಸಂದಣಿಯು ಕಾಂಗ್ರೆಸ್ ಕಚೇರಿಯ ಸುತ್ತ ಜಮಾಯಿಸಿ, ಆಕೆಯ ಉಚ್ಚಾಟನೆಯ ನಿರ್ಣಯವನ್ನು ಹಿಂದೆಗೆದುಕೊಳ್ಳುವಂತೆ ಆಗ್ರಹಿಸಿತು. ಅಲ್ಲಿದ್ದವರಲ್ಲಿ ಪ್ರಾಯಶಃ ಹೆಚ್ಚಿನ ಮಂದಿ ಬಾಡಿಗೆಗೆ ಬಂದವರು, ಅವರೆಲ್ಲ ತಮ್ಮ ಮಾತನ್ನು ಒತ್ತಾಯಿಸಲು ಅಧ್ಯಕ್ಷರನ್ನು ಸುತ್ತುವರಿದರು. ಇದನ್ನೆಲ್ಲ ನಿಜಲಿಂಗಪ್ಪನವರು ಸಹಿಸಿಕೊಳ್ಳ ಬೇಕಾಯಿತು. ಈ ಪರಿಸ್ಥಿಯನ್ನೇ ಬಂಡವಾಳ ಮಾಡಿಕೊಂಡ ಇಂದಿರಾ ಗಾಂಧಿಯವರು ೧೯೬೯ರ ಡಿಸೆಂಬರ್ ೧೨ ರಂದು ತಮ್ಮ ಹೊಸ ಪಕ್ಷದ ಕಾರ್ಯಕಾರಿ ಸಮಿತಿಯ ಸಭೆಯನ್ನು ಕರೆದರು. ಮತ್ತೊಂದು ಕಾರ್ಯಕಾರಿ ಸಮಿತಿಯ ನಿರ್ಣಯವನ್ನು ಈ ಸಭೆಯು ಪರಿಶೀಲಿಸಿ, ಪ್ರಧಾನ ಮಂತ್ರಿಗಳನ್ನು ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಿ ರುವುದು ಸಂವಿಧಾನಬಾಹಿರವೆಂದೂ ಬೇಜವಾಬ್ದಾರಿ ವರ್ತನೆಯೆಂದೂ ನಿರ್ಣಯಿಸಿತು. ಪ್ರಧಾನ ಮಂತ್ರಿಗಳು ಸಂಸದೀಯ ಪಕ್ಷದಿಂದ ನಿಯಮಕ್ಕನುಗುಣವಾಗಿ ಚುನಾಯಿತರಾದ ನಾಯಕರು, ಅವರು ಇಡೀ ದೇಶವನ್ನು ಸಂಕೇತಿಸುವವರು, ಆದ್ದರಿಂದ ಹಿಡಿಮಂದಿ ಅವರನ್ನು ಉಚ್ಚಾಟಿಸಲು ಅಧಿಕಾರವಿಲ್ಲ ಎಂದಿತು. ತಾವು ನಡೆಸಬೇಕೆಂದು ಕೇಳಿಕೊಂಡಿ ರುವ ಎಐಸಿಸಿ ಅಧಿವೇಶನದ ಬಳಿಕ ಈ ನಿರ್ಣಯವನ್ನು ತೆಗೆದುಕೊಳ್ಳಬಹುದಾಗಿತ್ತು. ನಿಜಲಿಂಗಪ್ಪ ಬಣವು ಪಕ್ಷದ ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಂಡಿದೆ. ಇಂದಿರಾ ಗಾಂಧಿಯವರು ದೇಶದ ನಿರೀಕ್ಷೆ ಆಕಾಂಕ್ಷೆಗಳ ಪ್ರತೀಕವಾಗಿರುವುದರಿಂದ ಅವರನ್ನು ಕೆಳಗಿಳಿಸಲು ಸಂಸದೀಯ ಪಕ್ಷಕ್ಕೆ ಮಾತ್ರವೇ ಅಧಿಕಾರವಿರುವುದು. ಪ್ರಜಾಸತ್ತಾತ್ಮಕವಾಗಿ ಜನತೆಯಿಂದ ಚುನಾಯಿತರಾದ ನಾಯಕರನ್ನು ಪದಚ್ಯುತಗೊಳಿಸುವ ಸಿಂಡಿಕೇಟ್‌ನ ಪ್ರಯತ್ನವು ದುರಹಂಕಾರದಿಂದ ಕೂಡಿರುವಂಥದು. ವಾಸ್ತವವಾಗಿ ಮುದುಕರ ಹಿಡಿ ಮಂದಿಯೇ ಸರ್ವಾಧಿಕಾರವನ್ನು ತೋರಿಸುತ್ತಿರುವುದು, ಅವರ ವರ್ತನೆಯು ಫ್ಯಾಸಿಸ್ಟ್ ಸ್ವರೂಪದ್ದು! ಹೀಗಾಗಿ ತಾವು ಕರೆದ ೧೯೬೯ರ ನವೆಂಬರ್ ೨೨ ಮತ್ತು ೨೩ರ ದೆಹಲಿಯ ಸಭೆಯು ಮಹತ್ವದ್ದು, ಮತ್ತು ಆ ಕಾರಣದಿಂದ ಎಲ್ಲ ಕಾಂಗ್ರೆಸ್ಸಿಗರೂ ಅದರಲ್ಲಿ ಭಾಗವಹಿಸಬೇಕು. ನಿರ್ಣಯವನ್ನು ಒಮ್ಮತದಿಂದ ಒಪ್ಪಲಾಯಿತು.

ಕಾಂಗ್ರೆಸ್ ಸಂಸದೀಯ ಪಕ್ಷವು ಸಂಸತ್ ಭವನದ ಕೇಂದ್ರ ಸಭಾಂಗಣದಲ್ಲಿ ೧೯೬೯ರ ನವೆಂಬರ್ ೧೩ ರಂದು ಸಮಾವೇಶಗೊಂಡಿತು. ಇಂದಿರಾ ಗಾಂಧಿ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಮಂತ್ರಿಗಳಲ್ಲಿನ ವಿಶ್ವಾಸವನ್ನು ಪುನರುಚ್ಚರಿಸಲೆಂದೇ ವಿಶೇಷವಾಗಿ ಸಭೆ ಸೇರಿತ್ತು. ಅದೇ ಹೊತ್ತಿಗೆ, ಇಂದಿರಾ ಗಾಂಧಿಯವರ ಉತ್ತರಾಧಿಕಾರಿ ಯನ್ನು ಆಯ್ಕೆ ಮಾಡಲು ನಿಜಲಿಂಗಪ್ಪ ಗುಂಪಿನ ಸುಮಾರು ಅರವತ್ತೆಪ್ಪತ್ತು ಮಂದಿ ಸದಸ್ಯರು ಮೊರಾರ್ಜಿಯವರ ನಿವಾಸದಲ್ಲಿ ಸೇರಿದರು! ಅವರುಗಳು ಸಂಸದೀಯ ಪಕ್ಷದ ನಾಯಕರನ್ನಾಗಿ ರಾಂ ಸುಭಾಗ್ ಸಿಂಗ್ ಅವರನ್ನು ಆರಿಸಿದರು. ನಿಜಲಿಂಗಪ್ಪ

ನವರು ಎಲ್ಲ ಕಾಂಗ್ರೆಸ್ ಸದಸ್ಯರಿಗೆ ಪತ್ರವೊಂದನ್ನು ಬರೆದು, ಇಂದಿರಾ ಗಾಂಧಿ ಗುಂಪು ಕರೆದಿದ್ದ ನವೆಂಬರ್ ೨೨ರ ದೆಹಲಿಯ ಸಭೆಗೆ ಹಾಜರಾಗಬಾರದೆಂದು ಸೂಚಿಸಿದ್ದರು. ಪಕ್ಷವನ್ನು ನಾಶಗೊಳಿಸಲು ಹೊರಟವರು ಈ ಸಭೆಯನ್ನು ಕರೆದಿದ್ದಾರೆಂದು ಅವರು ಹೇಳಿದರು. ನಿರಂಕುಶ ಧೋರಣೆಯ ಕಾರಣದಿಂದ ತಾವು ಇಂದಿರಾ ಗಾಂಧಿಯವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸುವ ಪರಿಸ್ಥಿತಿ ಬಂದುದನ್ನವರು ತಮ್ಮ ಪತ್ರದಲ್ಲಿ ನೆನಪಿಸಿದ್ದರು. ತಮ್ಮ ವಿಚಾರವೆಂದು ಅವರು ಬಿಂಬಿಸಿದ್ದ ಬ್ಯಾಂಕ್ ರಾಷ್ಟ್ರೀಕರಣವು ೧೯೪೭ ರಿಂದಲೇ ಕಾಂಗ್ರೆಸ್ಸಿನಲ್ಲಿತ್ತು ಎಂದವರು ಹೇಳಿಕೊಂಡರು. ರಾಷ್ಟ್ರೀಕರಣವನ್ನು ಕಾಂಗ್ರೆಸ್ ತನ್ನ ನೀತಿಯ ಭಾಗವನ್ನಾಗಿ ಮಾಡಿಕೊಂಡಿದೆ. ಮೇಲಾಗಿ, ಬ್ಯಾಂಕ್ ರಾಷ್ಟ್ರೀಕರಣದಿಂದ ಬಡತನವು ಕಮ್ಮಿಯಾಗಿದೆಯೇ ಎಂಬುದನ್ನು ಪರಿಶೀಲಿಸಬೇಕೆಂದು ಕೇಳಿಕೊಂಡರು. ತಾವು ಮಾತ್ರ ಸಮಾಜವಾದಿಗಳೆಂದು ಕರೆದುಕೊಳ್ಳುವ ಆಕೆಯ ವರ್ತನೆ ನಾಚಿಕೆಗೇಡಿನದು ಎಂದರು. ತಮ್ಮ ಪ್ರಜಾತಪ್ರಭುತ್ವವಿರೋಧಿ ನಡವಳಿಕೆಯಿಂದ ಹಾಗೂ ಎಲ್ಲ ಅಧಿಕಾರಗಳನ್ನು ತಮ್ಮ ಹಿಡಿತದಲ್ಲಿಯೇ ಇಟ್ಟುಕೊಳ್ಳುವ ಪ್ರಯತ್ನದಿಂದಾಗಿ ಕಾಂಗ್ರೆಸ್ ತನ್ನ ದೀರ್ಘ ಇತಿಹಾಸದಲ್ಲಿಯೇ ಅತ್ಯಂತ ಪ್ರಕ್ಷುಬ್ಧವಾದ ಬಿಕ್ಕಟ್ಟನ್ನು ಎದುರಿಸುವ ಪರಿಸ್ಥಿತಿ ಈಗ ಒದಗಿದೆ. ೧೯೬೯ರ ನವೆಂಬರ್ ೨೨ರ ಕಾನೂನುಬಾಹಿರ ಸಭೆಯನ್ನು ಬಹಿಷ್ಕರಿಸುವಂತೆ ಮತ್ತೊಮ್ಮೆ ಕೇಳಿಕೊಳ್ಳುವುದರ ಮೂಲಕ ಅವರು ತಮ್ಮ ಪತ್ರವನ್ನು ಕೊನೆಗೊಳಿಸಿದ್ದರು. ಈ ಹಿಂದೆ ಯಾವುದೇ ಕಾರಣದಿಂದ ಪಕ್ಷದಿಂದ ಹೊರಗೆ ಹೋಗಿದ್ದವರು ಕಾಂಗ್ರೆಸ್‌ಗೆ ಮರಳುವಂತೆ ಇಂದಿರಾ ಗಾಂಧಿ ಮನವಿ ಮಾಡಿಕೊಂಡರು. ಇತರ ಪಕ್ಷಗಳಲ್ಲಿದ್ದ ಅನೇಕರನ್ನು ಈ ಮನವಿಯು ಆಕರ್ಷಿಸಿತು. ಈ ಮಧ್ಯೆ, ಇಂದಿರಾ ಗಾಂಧಿಯವರು ತಮ್ಮ ಮನೆಯ ಮುಂದೆ ಜನಸಂದಣಿಯನ್ನು ಸೇರಿಸಿಕೊಂಡು, ಬಡತನ ನಿರ್ಮೂಲನ, ಸಮಾಜವಾದ, ವ್ಯಕ್ತಿಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತಿತರ ದೊಡ್ಡ ವಿಷಯಗಳ ಬಗ್ಗೆ ಭಾಷಣ ಮಾಡುವ ಜನಪ್ರಿಯ ವಿಧಾನವನ್ನು ಅನುಸರಿಸಿದರು. ೧೯೬೯ರ ನವೆಂಬರ್ ೧೬ ರಂದು ಅಸ್ತಿತ್ವಕ್ಕೆ ಬಂದ ಹೊಸ ಸಂಸದೀಯ ಕಾಂಗ್ರೆಸ್ ಪಕ್ಷವು ಇಂದಿರಾ ಗಾಂಧಿಯವರಿಗೆ ಬಹುಮತವನ್ನು ನೀಡಲು ಸಾಕಾಗುವಂತಿರಲಿಲ್ಲ. ಹೀಗಾಗಿ ಆಕೆಯು ವಿರೋಧೀ ಬಣಗಳ ಹಾಗೂ ಆಳ್ವಿಕೆದಾರರ ಹಾಗೂ ಸ್ವತಂತ್ರ ಸದಸ್ಯರ ನೆರವನ್ನು ಬೇಡಬೇಕಾಯಿತು. ಕಮ್ಯುನಿಸ್ಟ್ ಮತ್ತು ಡಿಎಂಕೆಗಳು ತಮ್ಮ ಬೆಂಬಲ ವ್ಯಕ್ತಪಡಿಸಿದುವು. ೫೨ ಮಂದಿ ಸಂಸತ್ ಸದಸ್ಯರ ನಿಜಲಿಂಗಪ್ಪ ಬಣವು ಸಂಸತ್ತಿನಲ್ಲಿ ವಿರೋಧ ಪಕ್ಷದ ಜಾಗದಲ್ಲಿ ಕುಳಿತುಕೊಂಡಿತು; ಅದರ ನಾಯಕ ರಾಂ ಸುಭಾಗ್ ಸಿಂಗ್. ದೆಹಲಿಯಲ್ಲಿ ಆರಂಭಗೊಂಡ ಒಡಕು ಕ್ರಮೇಣ ರಾಜ್ಯಗಳಿಗೂ ಹಬ್ಬಿತು. ಇದರ ಪರಿಣಾಮವಾಗಿ, ರಾಜಕೀಯ

ಧ್ರುವೀಕರಣ, ಅನಿಶ್ಚಿತತೆ ಮತ್ತು ಅಸ್ಥಿರತೆಗಳು ಮನೆಮಾಡಿದುವು. ಕಾಂಗ್ರೆಸ್‌ನ ಎರಡೂ ಬಣಗಳು ಪರಸ್ಪರ ಬಿಡುವಿಲ್ಲದ ಕಚ್ಚಾಟದಲ್ಲಿ ತೊಡಗಿದುವು.

೨೨ ನವೆಂಬರ್, ೧೯೬೯ರ ಕಾಂಗ್ರೆಸ್ ಅಧಿವೇಶನವು ಒಂದು ವೈಭವದ ಮಹಾ ಉತ್ಸವವಾಯಿತು. ಅದೊಂದು ಸಂಭ್ರಮ, ಅಧಿಕಾರ ಮತ್ತು ಜನಪ್ರಿಯತೆಗಳ ಸಂಗಮವೆನಿಸಿ, ಪ್ರಧಾನ ಮಂತ್ರಿಗಳ ಶತ್ರುಗಳ, ಅದರಲ್ಲಿಯೂ ಸಿಂಡಿಕೇಟ್‌ನ, ಎದೆಯಲ್ಲಿ ನಡುಕವನ್ನು ಹುಟ್ಟಿಸುವಂತಿತ್ತು. ಸಿ. ಸುಬ್ರಹ್ಮಣ್ಯಂ ತಾತ್ಕಾಲಿಕ ಅಧ್ಯಕ್ಷರಾದರು. ಟಿ.ಟಿ. ಕೃಷ್ಣಮಾಚಾರಿಯವರು ರಾಷ್ಟ್ರಧ್ವಜವನ್ನ ಹಾರಿಸಿ, ಪಕ್ಷದಿಂದ ಇಂದಿರಾ ಗಾಂಧಿಯವರ ಉಚ್ಚಾಟನೆಯು ಪ್ರಜಾಪ್ರಭುತ್ವಕ್ಕೆ ಕೊಟ್ಟ ದೊಡ್ಡ ಪೆಟ್ಟು ಎಂದು ಘೋಷಿಸಿದರು. ನೆಹರೂ ಮನೆತನದವರಿಲ್ಲದೆ ಕಾಂಗ್ರೆಸ್ ಬಡವಾಗುವುದೆಂದು ಹೇಳುವುದರ ಮೂಲಕ ವಂಶಾಡಳಿತವನ್ನವರು ಪುನರ್‌ಪ್ರತಿಪಾದಿಸಿದರು. ತಮ್ಮ ಪಕ್ಷದ ಬಾಗಿಲು ಅದರ ಆದರ್ಶ ಮತ್ತು ಸಿದ್ಧಾಂತಗಳಲ್ಲಿ ನಂಬಿಕೆಯಿರುವ ಸಕಲರಿಗೂ ತೆರೆದಿದೆಯೆಂದು ಇಂದಿರಾ ಗಾಂಧಿಯವರು ತಮ್ಮ ಭಾಷಣದಲ್ಲಿ ಘೋಷಿಸಿದರು. ತಮ್ಮ ಪಕ್ಷದ ಕೆಲವರು ಪಕ್ಷವನ್ನು ಒಡೆಯುವದರಲ್ಲಿ ನಿರತರಾಗಿದ್ದಾರೆಂದೂ ಅವರು ವಿಷಾದಿಸಿದರು. ಅಲ್ಲಿ ನೆರೆದಿದ್ದ ಅಸಾಧ್ಯ ಜನಸಂದಣಿಯು ಕಾಂಗ್ರೆಸ್ ಪಕ್ಷದ ತತ್ವ ಗುರಿಗಳ ಬಗೆಗಿನ ಬದ್ಧತೆಯ ಪ್ರತೀಕವಾಗಿದೆಯೆಂದರು. ದೇಶದ ಕಲ್ಯಾಣಕ್ಕೆ ಹಾಗೂ ಪಕ್ಷದ ಐಕಮತ್ಯಕ್ಕಾಗಿ ಎಲ್ಲ ತ್ಯಾಗಕ್ಕೂ ಸಿದ್ಧರಾಗುವ ನಿರ್ಧಾರದಿಂದ ಅವರು ಸಮಾವೇಶದಿಂದ ಹೊರಹೋಗ ಬೇಕೆಂದು ಕರೆ ನೀಡಿದರು. ಅವರೆಲ್ಲರ ಗುರಿಯು ಪಕ್ಷದ ಹಿತಾಸಕ್ತಿಗಳ ರಕ್ಷಣೆ ಮತ್ತು ಜನತೆಯ ಕಲ್ಯಾಣ. ಕೋಪತಾಪಗಳನ್ನು ಬಿಟ್ಟು ದೇಶದ ಸೇವೆಗೆ ತಮ್ಮ ಪ್ರತಿಜ್ಞೆಯನ್ನು ಪುನರುಚ್ಚರಿಸಬೇಕೆಂದು ಅವರು ತಮ್ಮ ಬೆಂಬಲಿಗರಿಗೆ ಕರೆಕೊಟ್ಟರು. ವ್ಯಕ್ತಿಗಿಂತ ಪಕ್ಷ ದೊಡ್ಡದು ಎಂದು ಭಾವಿಸಿ ಎಲ್ಲರೂ ಗುಂಪುಗಾರಿಕೆಯನ್ನು ತೊರೆಯಬೇಕು. ಕಾಂಗ್ರೆಸ್‌ನ ನೀತಿಗಳನ್ನೂ ಕಾರ್ಯಕ್ರಮಗಳನ್ನೂ ಸಂಪೂರ್ಣವಾಗಿ ಜಾರಿಗೊಳಿಸಲಾಗದ ಹೊಣೆ ಗಾರಿಕೆಯನ್ನು ಸರ್ಕಾರ ಹೊರಬೇಕು. ಆ ವೈಫಲ್ಯಕ್ಕೆ ಕಾರಣವಾದುದು ಸರ್ಕಾರದಲ್ಲಿಯೇ ಆ ನೀತಿಗಳನ್ನೂ ಕಾರ್ಯಕ್ರಮಗಳನ್ನೂ ವಿರೋಧಿಸುವ ಜನರಿರುವುದು. ಈ ಮಾತು ಮೊರಾರ್ಜಿಯವರನ್ನು ಕುರಿತು ಆಡಿದ ಚುಚ್ಚು ಮಾತು. ತನ್ನ ಸದಸ್ಯರಿಗೆ ಅಭಿಪ್ರಾಯ ಗಳನ್ನು ವ್ಯಕ್ತಪಡಿಸಲು ಪೂರ್ಣ ಅವಕಾಶ ನೀಡದ ಪಕ್ಷವು ಇದ್ದರೂ ಸತ್ತಂತೆಯೇ. ಆದರ್ಶಗಳಂತೆಯೇ ಅವುಗಳ ಸಾಕಾರವೂ ಮುಖ್ಯವೆಂದು ಸಾರಿದ ಗಾಂಧಿ ಮತ್ತು ನೆಹರೂ ಅವರುಗಳ ಮಾತನ್ನು ನೆನಪಿನಲ್ಲಿರಿಸಿಕೊಳ್ಳಬೇಕು. ಹೊಸ ಸವಾಲುಗಳನ್ನೆ ದುರಿಸುವ ಸಾಮರ್ಥ್ಯವಿಲ್ಲದವರು ಪಕ್ಷದ ಉನ್ನತ ಹುದ್ದೆಗಳನ್ನು ಕಳೆದುಕೊಳ್ಳುತ್ತಾರೆ. ಒಳ್ಳೆಯ ಭಾಷಣಕಾರ್ತಿಯಾದ ಅವರು, ನಿಜಲಿಂಗಪ್ಪ ಮತ್ತವರ ಸಹಚರರ ಹೆಸರು

ಗಳನ್ನು ಹೇಳುವ ವಾಕ್ಯವನ್ನು ಪೂರ್ಣಗೊಳಿಸುವ ಮೊದಲು ಉದ್ದೇಶಪೂರ್ವಕ ವಾಗಿಯೇ ಬಿಕ್ಕಲು ತೊಡಗಿದರು, ಪದಗಳಿಗಾಗಿ ತಡಕಾಡಿದರು, ಕಣ್ಣಿನಿಂದ ನೀರನ್ನು ಒರೆಸಿಕೊಂಡರು! ತಾವು ಕಾಂಗ್ರೆಸ್ಸಿನಿಂದ ಉಚ್ಚಾಟಿತಗೊಂಡ ವಿಷಯ ಪ್ರಸ್ತಾಪಿಸುವ ವಾಕ್ಯವನ್ನು ಕಂಪಿಸುತ್ತಿರುವ ದನಿಯಲ್ಲಿ ಹೇಳಿ ಮುಗಿಸಿದರು. ವಾಗ್ಮಿಯ ಮಹಾ ಕೌಶಲವಿದ್ದ ಅವರು, ತಮ್ಮನ್ನಾರೂ ಪಕ್ಷದಿಂದ ಹೊರಹಾಕಲು ಸಾಧ್ಯವಿಲ್ಲ ಎಂಬ ಮಾತನ್ನೀಗಾಗಲೇ ಕೃಷ್ಣಮಾಚಾರಿಯವರು ಹೇಳಿದ್ದಾರೆ. ತಾವು ತುಳಿಯುತ್ತಿರುವ ಹಾದಿಯಲ್ಲಿ ಅಡ್ಡ ಬರಲು ಯಾರಿಗೂ ಸಾಧ್ಯವಿಲ್ಲ. ಸರ್ಕಾರದ ಒಳಗಿರಲಿ ಹೊರಗಿರಲಿ, ಎಲ್ಲರ ಗುರಿ ಒಂದೇ, ಆದರ್ಶ ಸಾಧನೆ. ಅದರ ಸಾಕಾರಕ್ಕಾಗಿ ಶ್ರಮಿಸಬೇಕು. ದೃಢ ನಿರ್ಧಾರದೊಡನೆ ಧೈರ್ಯ ಮತ್ತು ನಂಬಿಕೆಗಳಿದ್ದವರು ಮಾತ್ರವೇ ಕಾಂಗ್ರೆಸ್‌ಗೆ ಹೊಸ ಚೈತನ್ಯವಿತ್ತು, ಹೊಸ ಬೆಳಕನ್ನು ತಂದು, ಅದು ಹೊಸ ಸವಾಲುಗಳನ್ನು ಯಶಸ್ವಿಯಾಗಿ ಜಾರಿಗೊಳಿಸಲು ಸಾಧ್ಯವಾಗುವಂತೆ ಮಾಡಲು ಶಕ್ಯರಾದವರು. ಆಗ ಪಕ್ಷಕ್ಕೆ ಒಂದು ಹುಟ್ಟು ಪ್ರಾಪ್ತವಾಗುತ್ತದೆ. ಐಕಮತ್ಯದ ಹೆಸರಿನಲ್ಲಿ ಕಾಂಗ್ರೆಸ್‌ನ ಬಾಗಿಲುಗಳನ್ನು ಮುಚ್ಚಬಾರದೆಂದು ಅವರು ಎಚ್ಚರಿಸಿದರು. ಸಣ್ಣ ಪುಟ್ಟ ಹೋರಾಟಗಳಲ್ಲಿಯೇ ತಮ್ಮ ಶಕ್ತಿಯನ್ನು ವ್ಯರ್ಥಗೊಳಿಸಬಾರದು. ಐಕಮತ್ಯ, ಸ್ನೇಹಪರತೆ, ಸಹಚರತ್ವ, ಆದರ್ಶಗಳು ಮತ್ತು ಗುರಿಗಳಿಗಾಗಿ ಬಾಗಿಲು ಸದಾ ತೆರೆದಿರಬೇಕು. ಇಷ್ಟಾದರೂ, ತಮ್ಮ ಗುರಿಗಳು ಮತ್ತು ಉದ್ದೇಶಗಳನ್ನು ವಿರೋಧಿಸುವವರಿಗೆ ಬಾಗಿಲನ್ನು ಮುಚ್ಚಿಬಿಡಬೇಕು. ಅವರು ಯಾರಾದರೂ ಆಗಿರಲಿ. ಹಾಗೆಯೇ, ತಮ್ಮ ಗುರಿಗಳು ಮತ್ತು ಉದ್ದೇಶಗಳನ್ನು ಬೆಂಬಲಿಸು ವವರಿಗೆ ಸ್ವಾಗತ ನೀಡಬೇಕು. ತಾವು ಕಮ್ಯುನಿಸ್ಟ್ ಆಗಲು ಪ್ರಯತ್ನಿಸುತ್ತಿರುವಳೆಂದು ಕೆಲವರು ಆರೋಪಿಸುತ್ತಾರೆ. ಈ ಹೆಣ್ಣುಮಗಳು ಕಮ್ಯುನಿಸ್ಟರಾಗಲೀ ಸಮಾಜವಾದಿ ಗಳಾಗಲೀ, ಅವರ ಬೆಂಬಲವನ್ನು ಹೇಗೆ ನಿರಾಕರಿಸಬೇಕು? ತಮ್ಮನ್ನು ಬೆಂಬಲಿಸುವುದು ಬಿಡುವುದು ಅವರ ಮರ್ಜಿ. ತಾವು ಕಮ್ಯುನಿಸ್ಟರ ಹಿಂಸಾಮಾರ್ಗದ ವಿರೋಧಿ ಎಂದವರು ಹೇಳಿಕೊಂಡರು. ಸಮಾವೇಶದ ಎರಡನೆಯ ದಿನ, ತಮ್ಮ ಆರ್ಥಿಕ ನೀತಿ ಗಳನ್ನು ವಿಸ್ತರಿಸಿದರು. ಅದು ಪ್ರಗತಿಪರವಾದದ್ದು ಮತ್ತು ಅದರ ಗುರಿ ಬಡತನ ನಿರ್ಮೂಲನ. ಹಣವಂತರು ಮತ್ತಷ್ಟು ಸಂಪತ್ತು ಗಳಿಸಲು ಅವಕಾಶವೀಯದಂತೆ ಎಲ್ಲರಿಗೂ ಸಮಾನಾವಕಾಶಗಳನ್ನು ಒದಗಿಸುವುದು ತಮ್ಮ ಬಯಕೆ. ಹಿಂದುಳಿದವರು ಮುಂದುವರಿಯಲು ಅವಕಾಶವೀಯುವುದೇ ಅದರ ಗುರಿ. ಬ್ಯಾಂಕ್ ರಾಷ್ಟ್ರೀಕರಣದ ಐಕ್ಯೈಕ ಉದ್ದೇಶ ಬಡವರನ್ನು ಲೇವಾದೇವಿದಾರರ ಹಿಡಿತದಿಂದ ಪಾರುಮಾಡುವುದು. ಸಾಲದ ಸೌಲಭ್ಯಗಳನ್ನು ವಿಸ್ತರಿಸುವುದರ ಮೂಲಕ ಬ್ಯಾಂಕ್‌ಗಳು ರೈತರ ಹಾಗೂ ಸಣ್ಣ ಉದ್ದಿಮೆದಾರರ ಉತ್ಪಾದಕತೆಯನ್ನು ಹೆಚ್ಚಿಸಬೇಕು. ಇದರಿಂದ ನಿರುದ್ಯೋಗವೂ

ನಿವಾರಣೆಗೊಳ್ಳುತ್ತದೆ. ಬೇಗನೇ ಭೂಸುಧಾರಣೆಗಳನ್ನು ಜಾರಿಗೊಳಿಸದಿದ್ದರೆ ವರ್ಗಕಲಹ ಆರಂಭಗೊಳ್ಳಬಹುದು. ತಮ್ಮ ನೀತಿಯು ಗಮನಹರಿಸ ಬಯಸುವ ಮತ್ತೊಂದು ಸಮಸ್ಯೆಯೆಂದರೆ ಮಕ್ಕಳ ಪೌಷ್ಟಿಕತೆ ಮತ್ತು ಆರೋಗ್ಯ. ತೆರಿಗೆಗಳ್ಳತನ ತಾವು ಎದುರಿಸ ಬೇಕಾದ ಮತ್ತೊಂದು ಸಮಸ್ಯೆ. ಒಟ್ಟಿನಲ್ಲಿ, ರಾಜಕೀಯ ಪ್ರಜಾಪ್ರಭುತ್ವದ ಚೌಕಟ್ಟಿನೊಳಗೇ ಸಮಾಜವಾದವನ್ನು ಅನುಷ್ಠಾನಗೊಳಿಸಬೇಕಾಗಿದೆ. ಇದರರ್ಥ ಸಾರ್ವಜನಿಕ ವಲಯದ ವಿಸ್ತರಣೆ. ಸಾರ್ವಜನಿಕ ವಲಯ, ಖಾಸಗಿ ವಲಯ ಮತ್ತು ಸರ್ಕಾರಗಳ ಸಹಕಾರದಿಂದ ಆರ್ಥಿಕ ಪ್ರಗತಿಯನ್ನು ಸಾಧಿಸಬೇಕಾಗಿದೆ. ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿಯಾಗ ಬೇಕು. ತ್ವರಿತ ಅಭಿವೃದ್ಧಿಗೆ ಎಡೆಯಾಗುವಂತೆ ಹರಿಜನರಿಗೆ ಅವಕಾಶಗಳನ್ನೊದಗಿಸಬೇಕು. ಈ ನಿಲವು ಮತ್ತು ಬದ್ಧತೆಗಳನ್ನೊಳಗೊಂಡ ಆರ್ಥಿಕ ನೀತಿಯೊಂದನ್ನು ಆ ಸಮಾವೇಶವು ಅಂಗೀಕರಿಸಿತು.

ಅದೇ ದಿನ, ಇಂದಿರಾ ಗಾಂಧಿ ಕಾರ್ಯಕಾರಿ ಸಮಿತಿಯು ನಿಜಲಿಂಗಪ್ಪ ಮತ್ತಿತರ ಹನ್ನೊಂದು ಮಂದಿ ಸಹಚರರನ್ನು ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟನೆ ಮಾಡಿ ಇಂದಿರಾ ಗಾಂಧಿಯವರ ಉಚ್ಚಾಟನೆಯನ್ನು ರದ್ದುಮಾಡಿಕೊಂಡಿತು. ಇದೆಲ್ಲವನ್ನು ನಿರಂಕುಶಾಧಿಕಾರದ ಕೈಗಳಿಂದ ಪ್ರಜಾಪ್ರಭುತ್ವವನ್ನು ಪಾರುಮಾಡುವ ಹೆಸರಿನಲ್ಲಿ ಮಾಡಲಾಯಿತು! ಆದರೆ ಎಲ್ಲವೂ ಸರಾಗವಾಗಿರಲಿಲ್ಲ, ಹೊಸ ಕಾರ್ಯಕಾರಿ ಸಮಿತಿಗೆ ಸದಸ್ಯರನ್ನು ಆಯ್ಕೆ ಮಾಡುವಾಗ ಕೆಲವು ತೊಂದರೆಗಳು ಎದುರಾದವು. ಪ್ರಧಾನಮಂತ್ರಿಗಳಿಗೆ ಆಪ್ತರಾಗಿದ್ದ ಸುಬ್ರಹ್ಮಣ್ಯಂ ಅವರಿಂದ ಅಯ್ಕೆಗೊಂಡವರನ್ನು ಸದಸ್ಯರುಗಳನ್ನಾಗಿ ಚುನಾಯಿಸಲಾಯಿತು. ಕೆಲವು ಯುವಕರ ಸೇರ್ಪಡೆ ಮತ್ತು ಕೆಲವು ಕಮ್ಯುನಿಸ್ಟರ ಆಯ್ಕೆಗಳು ಸಮಿತಿಯಲ್ಲಿ ಸ್ಥಳ ಕಾಣದಿದ್ದ ಹಿರಿಯ ನಾಯಕರಲ್ಲಿ ಅತೃಪ್ತಿಯನ್ನುಂಟು ಮಾಡಿತು. ಹೊಸ ಇಂದಿರಾ ಕಾಂಗ್ರೆಸ್‌ನಲ್ಲಿ ಕೂಡ ಹಳೆಯ ಕಾಂಗ್ರೆಸ್‌ನಲ್ಲಿ ಮೇಲುಗೈ ಪಡೆದಿದ್ದ ಮಾದರಿಯಲ್ಲಿನ ಕೋಮುವಾದ, ಪ್ರಾದೇಶಿಕತೆ ಮತ್ತು ಅವಕಾಶವಾದಗಳು ಜಾಗ ಪಡೆದುವು. ತಾವು ಮೂಲ ಕಾಂಗ್ರೆಸ್ ಅನ್ನು ಪ್ರತಿನಿಧಿಸುತ್ತಿರುವುದಾಗಿ ನಿಜಲಿಂಗಪ್ಪನವರು ಇದನ್ನು ಎದುರಿಸಿದರು, ಸಿಡಿದ ಗುಂಪೊಂದು ಮಾಡಿದ ತಮ್ಮ ಉಚ್ಚಾಟನೆ ಅಸಿಂಧುವೆಂದರು. ಎರಡೂ ಪ್ರತಿ ಬಣಗಳು ಪರಸ್ಪರ ಕಚ್ಚಾಡತೊಡಗಿದುವು. ಕಾಂಗ್ರೆಸ್ ಸಂಘಟನೆ ಮಾತ್ರವೇ ಇಬ್ಭಾಗಗೊಳ್ಳಲಿಲ್ಲ; ಅದು ಅನಾಯಕತ್ವದ ಮಟ್ಟವನ್ನು ತಲುಪಿತು. ರಾತ್ರೋ ರಾತ್ರಿ ದಾಖಲೆಗಳನ್ನು ಹಳೆಯ ಕಾಂಗ್ರೆಸ್ ಕಚೇರಿಯಿಂದ ಹೊಸ ಕಾಂಗ್ರೆಸ್ ಕಚೇರಿಗೆ ರವಾನೆ ಮಾಡಲಾಯಿತು. ಶಾಂತಿಭಂಗದ ಆಪಾದನೆಯ ಮೇಲೆ ಕೆಲವು ನೌಕರರನ್ನು ಬಂಧಿಸಲಾಯಿತು. ಹಿರಿಯ ನಾಯಕರು ಪೊಲೀಸ್ ರಕ್ಷಣೆ ಬಯಸಿದರು. ಇದೆಲ್ಲದಕ್ಕೂ ಕಾರಣ ಇಂದಿರಾ ಕಾಂಗ್ರೆಸ್‌ನ ಆಕ್ರಮಣಕಾರಿ ವರ್ತನೆ. ಹಳೆಯ

ಕಾಂಗ್ರೆಸ್ ಕಚೇರಿಯ ಹಿಡಿತ ಸಾಧಿಸಲು ಇಂದಿರಾ ಕಾಂಗ್ರೆಸ್ ಹಿಂಸಾತ್ಮಕ ಮಾರ್ಗವನ್ನನುಸರಿಸಲೂ ಹಿಂದುಮುಂದು ನೋಡಲಿಲ್ಲ. ಮುಂಚೆಯೇ ನಿರ್ಧರಿಸಿದ್ದಂತೆ, ಹಳೆಯ ಕಾಂಗ್ರೆಸ್ ಅಥವಾ ಸಂಘಟನಾ ಕಾಂಗ್ರೆಸ್ ೧೯೬೯ರ ನವೆಂಬರ್ ೧೯ರಿಂದ ೨೨ ರವರೆಗೆ ಅಹಮದಾಬಾದ್‌ನಲ್ಲಿ ತನ್ನ ಅಧಿವೇಶನವನ್ನು ನಡೆಸಿತು. ಅಲ್ಲಿ ಹಾಜರಾದವರ ಸಂಖ್ಯೆ ಸುಮಾರು ಇಪ್ಪತ್ತೈದು ಸಾವಿರ. ಸುಮಾರು ೪೦೦ ಮಂದಿ ಎಐಸಿಸಿ ಸದಸ್ಯರು ಹಾಜರಾಗಿದ್ದರೆಂದು ನಾಯಕರು ಸಮಾಧಾನದ ನಿಟ್ಟುಸಿರುಬಿಟ್ಟರು. ಇಂದಿರಾ ಗಾಂಧಿಯವರ ನಿರಂಕುಶ ಮನೋಭಾವ, ಕುತಂತ್ರಗಳು ಮತ್ತು ವಿಭೂತಿ ಪೂಜೆಯನ್ನು ಖಂಡಿಸಿ ನಿಜಲಿಂಗಪ್ಪನವರು ಮುಂದಿನವರ ಮಾತಿನ ಧಾಟಿಯನ್ನು ನಿರ್ಮಿಸಿದರು. ಆಕೆಯು ಕಮ್ಯುನಿಸ್ಟರು ಮತ್ತು ಕೋಮುವಾದಿಗಳ ಕೈಗೊಂಬೆಯಾಗಿದ್ದಾರೆಂದು ಇತರ ನಾಯಕರೂ ಟೀಕಿಸಿದರು. ೧೯೬೯ರ ಆಗಸ್ಟ್ ೨೫ರ ಐಕಮತ್ಯ ನಿರ್ಣಯದಲ್ಲಿನ ತೀರ್ಮಾನಕ್ಕನುಗುಣವಾಗಿ, ಪಕ್ಷದ ಹಿತರಕ್ಷಣೆಯ ದೃಷ್ಟಿಯಿಂದ ಇಂದಿರಾ ಗಾಂಧಿಯವರ ಮೇಲೆ ಶಿಸ್ತಿನ ಕ್ರಮ ಜರುಗಿಸಲಿಲ್ಲವೆಂದು ನಿಜಲಿಂಗಪ್ಪನವರು ವಿವರಿಸಿದರು. ಆದರೆ ೨೫ರ ರಾತ್ರಿಯಿಡೀ ತಮಗೆ ನಿದ್ದೆ ಹತ್ತಲಿಲ್ಲವೆಂದೂ, ಅದಕ್ಕೆ ಕಾರಣ ತಾವು ಪಕ್ಷದ ಐಕಮತ್ಯಕ್ಕಾಗಿ ಪಕ್ಷದ ಶಿಸ್ತನ್ನು ಬಲಿಕೊಟ್ಟ ಅಪರಾಧಪ್ರಜ್ಞೆ ಕಾಡಿದುವೆಂದೂ ಹೇಳಿದರು. ಪ್ರಧಾನ ಮಂತ್ರಿಗಳ ಪ್ರಚಾರ ಕೌಶಲವನ್ನವರು ವ್ಯಂಗ್ಯವಾಗಿ ಶ್ಲಾಘಿಸಿ, ಗೋಬೆಲ್ಲರು ಕೂಡ ಆಕೆಯಿಂದ ಕಲಿಯಬೇಕಾದುದು ಬೇಕಾದಷ್ಟಿದೆ ಎಂದು ಲೇವಡಿ ಮಾಡಿದರು. ಆಕೆಯು ರಷ್ಯಾಪರವಾಲುತ್ತಿರುವ ಶಂಕೆ ತಮ್ಮದೆಂದೂ, ಅದಕ್ಕೆ ಕಾರಣ ಕಮ್ಯುನಿಸ್ಟ್ ಬೆಂಬಲ ಪಡೆಯುವ ತಂತ್ರವೆಂದೂ ಆರೋಪಿಸಿದರು. ಗಾಂಧೀಜಿಯ ಜನ್ಮ ಶತಮನೋತ್ಸವ ವರ್ಷದಲ್ಲಿಯೇ ಕಾಂಗ್ರೆಸ್ ಇಬ್ಭಾಗವಾದುದು ತಮಗೆ ಹೆಚ್ಚಿನ ನೋವುಂಟುಮಾಡಿದೆ ಎಂದರು. ಈ ಒಡಕಿಗೆ ಇಂದಿರಾ ಗಾಂಧಿಯವರೇ ಸಂಪೂರ್ಣ ಹೊಣೆಗಾರರು ಎಂದರು. ಆಕೆ ಎಐಸಿಸಿ ಅಧಿವೇಶನ ಕರೆಯಬೇಕೆಂದು ಕೇಳಿದ್ದು ತಮ್ಮನ್ನು ಅಧ್ಯಕ್ಷಸ್ಥಾನದಿಂದ ಹೊರಹಾಕುವ ಏಕೈಕ ಉದ್ದೇಶದಿಂದ ಎಂದರು. ಆದರೆ ತಮಗೆ ಅಂತಹ ಹುದ್ದೆಯ ಮೇಲೆ ಯಾವತ್ತೂ ವ್ಯಾಮೋಹ ಇರಲಿಲ್ಲವೆಂದು ಸಭಿಕರಿಗೆ ಸ್ಪಷ್ಟಪಡಿಸಿದರು. ತಾವು ಅವರೆದುರು ನಿಂತಿರುವುದು ಅವರು ತಮ್ಮನ್ನು ಆಹ್ವಾನಿಸಿದ್ದರಿಂದಾಗಿ. ತಮ್ಮ ಗೆಳೆಯರ ಬೇಡಿಕೆಯ ಒತ್ತಾಯಕ್ಕೆ ಮಣಿಯಬೇಕಾಯಿತು. ಬಹಿರಂಗ ಅಶಿಸ್ತನ್ನೂ, ಇತರರ ಅಧಿಕಾರವನ್ನು ಕಬಳಿಸುವ ಹುನ್ನಾರವನ್ನೂ ತಾವೆಂದೂ ಸಹಿಸುವವರಲ್ಲವೆಂದು ನುಡಿದರು. ತಮ್ಮ ಅಧ್ಯಕ್ಷ ಭಾಷಣದಲ್ಲಿ, ಸಾರ್ವಜನಿಕ-ಖಾಸಗಿ ವಲಯಗಳ ನಡುವಣ ತಿಕ್ಕಾಟ, ವೈಜ್ಞಾನಿಕ ಸಂಶೋಧನೆ, ಸಹಕಾರ ಸಂಘಗಳು, ಕೃಷಿ ಕೈಗಾರಿಕೆಗಳು, ಭೂಸುಧಾರಣೆ, ಪರಿಶಿಷ್ಟ ಜಾತಿ ವರ್ಗಗಳ ಅಭಿವೃದ್ಧಿ,

ತಟಸ್ಥ ನೀತಿ, ಸಮಾಜೋ-ಆರ್ಥಿಕ ಸುಧಾರಣೆಗಳು, ನಿರಕ್ಷರತೆಯ ಮೇಲಿನ ಯುದ್ಧ, ಕುಟುಂಬ ಕಲ್ಯಾಣ ಯೋಜನೆ, ಪ್ರಜಾಪ್ರಭುತ್ವದ ರಕ್ಷಣೆ ಮತ್ತು ಸಮಾಜ ವಾದಗಳ ಬಗ್ಗೆ ನಿಜಲಿಂಗಪ್ಪನವರು ವ್ಯಾಪಕ ವಿಶ್ಲೇಷಣೆ ನಡೆಸಿದರು. ಕಾಂಗ್ರೆಸ್ ಕ್ರಾಂತಿಯನ್ನು ಹಳ್ಳಿಗಳಲ್ಲಿ ವಿಸ್ತರಿಸಬೇಕೆಂದು ಅವರು ಸಭಿಕರಲ್ಲಿ ಮನವಿ ಮಾಡಿ ಕೊಂಡರು.

ಸಂಘಟನಾ ಕಾಂಗ್ರೆಸ್‌ನ ಸಭೆ ಮುಗಿದ ತಕ್ಷಣವೇ ಹೊಸ ಕಾಂಗ್ರೆಸ್, ಅಥವಾ ಬಹುಬೇಗ ಹೆಸರು ಪಡೆದಂತೆ ಇಂದಿರಾ ಕಾಂಗ್ರೆಸ್, ತನ್ನ ಎಐಸಿಸಿ ಅಧಿವೇಶನವನ್ನು ಮುಂಬಯಿಯಲ್ಲಿ ಡಿಸೆಂಬರ್ ೧೬ ರಿಂದ ೨೯ ರವರೆಗೆ ನಡೆಸಿತು. ಅದರ ಅಧ್ಯಕ್ಷತೆ ವಹಿಸಿದ್ದವರು ಜಗಜೀವನರಾಂ, ತಮ್ಮ ಭಾಷಣದಲ್ಲಿ ಇಂದಿರಾ ಗಾಂಧಿಯವರು ಮುಖ್ಯ ಆಶಯಗಳ ಪ್ರಸ್ತಾಪ ಮಾಡಿದರು; ಅವುಗಳಲ್ಲಿ ಜನತೆಯ ಹೊಸ ಆಶೋತ್ತರಗಳು ಮತ್ತು ನಿರೀಕ್ಷೆಗಳನ್ನು ಬಿಂಬಿಸುವಂತೆ ಧ್ಯೇಯಗಳು ರೂಪಿತವಾಗಬೇಕೆಂದು ಹೇಳಿದರು. ಪ್ರಗತಿಯ ವಿರೋಧಿಗಳ ಬಗ್ಗೆ ಕಟ್ಟೆಚ್ಚರ ವಹಿಸುವಂತೆ ಕರೆ ನೀಡಿದರು. ಅವರನ್ನು ಅನುಸರಿಸಿ ಮಾತನಾಡಿದ ಇತರ ನಾಯಕರು ಸಾಮಾಜಿಕ ನ್ಯಾಯವನ್ನು ಒಳಗೊಳ್ಳ ಬೇಕೆಂದು ಮಿದು ಧಾಟಿಯಲ್ಲಿ ಮಾತನಾಡಿದರು. ತಮ್ಮ ಧೋರಣೆಯು ಸಮತೋಲನ ವುಳ್ಳುದೆಂದೂ, ಮೇಲಿದ್ದವರನ್ನು ಕೆಳಕ್ಕೆ ದಬ್ಬದಂತೆ ಕೆಳಗಿದ್ದವರನ್ನು ಮೇಲೆತ್ತುವ ಆಶಯ ವೆಂಬುದನ್ನು ಸ್ಪಷ್ಟಪಡಿಸಿದರು. ಕಾನೂನುಗಳನ್ನು ಸಾಮಾಜಿಕ ನ್ಯಾಯಕ್ಕೆ ಅನುಗುಣವಾಗಿ ರೂಪಿಸಲಾಗುವುದೆಂದು ಇಂದಿರಾ ಗಾಂಧಿಯವರು ಸಭಿಕರಿಗೆ ಆಶ್ವಾಸನೆಯಿತ್ತರು. ತಮ್ಮ ಧೋರಣೆಯು ಕಮ್ಯುನಿಸ್ಟ್ ಪರವೆಂಬ ಆರೋಪವನ್ನವರು ನಿರಾಕರಿಸಿ, ತಮ್ಮ ವಿದೇಶಾಂಗ ನೀತಿಯು ಚೈತನ್ಯವುಳ್ಳದಾಗಿರುತ್ತದೆಂದೂ ಬದಲಾಗುತ್ತಿರುವ ಅಂತರ ರಾಷ್ಟ್ರೀಯ ಪರಿಸ್ಥಿತಿಗೆ ಹೊಂದಿಕೆಯಾಗುವಂತಿರುವುದೆಂದೂ ನುಡಿದರು. ಕಮ್ಯುನಿಸ್ಟರು ಕೆಲವರು ತಮ್ಮ ಪಕ್ಷಕ್ಕೆ ನುಸುಳಿದ್ದಾರೆಂಬ ಆರೋಪವನ್ನು ಪ್ರಸ್ತಾಪಿಸಿ, ಸಮಾಜವಾದಿಗಳು ತಮ್ಮ ಪಕ್ಷ ಸೇರುವುದರಲ್ಲಿ ತಪ್ಪೇನೂ ಇಲ್ಲ ಎಂದು ಸಮರ್ಥಿಸಿಕೊಂಡರು. ಜಗಜೀವನ ರಾಂ, ತಮ್ಮ ಅಧ್ಯಕ್ಷ ಭಾಷಣದಲ್ಲಿ, ಮುಂಬಯಿ ಅಧಿವೇಶನವು ದೇಶದ ಇತಿಹಾಸದಲ್ಲಿ ಒಂದು ಹೊಸ ಯುಗದ ಆರಂಭಕ್ಕೆ ನಾಂದಿ ಹಾಡಿದೆ ಎಂದು ಘೋಷಿಸಿದರು. ಈ ಎಲ್ಲ ಹೊರ ನಡವಳಿಕೆಗಳ ಹಿಂದೆ ಯಂಗ್ ಟರ್ಕ್‌ಗಳೂ ಮತ್ತು ಹಿರಿಯರು ಅಥವಾ ಎಡಪಂಥೀಯರು ಮತ್ತು ಬಲಪಂಥೀಯ ಬಣಗಳ ತಿಕ್ಕಾಟವಿತ್ತು. ಇದನ್ನೆಲ್ಲ ಇಂದಿರಾ ಗಾಂಧಿಯವರು ಗತ್ತಿನಿಂದ ನಿಭಾಯಿಸಿದರು. ಹೊಸ ಕಾಂಗ್ರೆಸ್ ಸ್ಪಷ್ಟವಾಗಿ ಒಂದು ಹೊಸ ಸಂಸ್ಕೃತಿಯನ್ನು ಬಿತ್ತಿತ್ತು. ಆದರೆ, ಬಹು ಬೇಗ, ಈ ಘೋಷಣೆಗಳು

ಕೇವಲ ಘೋಷಣೆಗಳಾಗಿಯೇ ಉಳಿದವು ಹಾಗೂ ಅವುಗಳ ಗಂಭೀರ ಅನುಷ್ಠಾನ ನಡೆಯಲೇ ಇಲ್ಲ ಎಂಬುದು ಎಂಬುದು ಸ್ಪಷ್ಟವಾಯಿತು.

ಬಹುಮಟ್ಟಿಗೆ ವಾಸ್ತವವೂ ಐತಿಹಾಸಿಕವೂ ಆದ ಕಾಂಗ್ರೆಸ್ ಇಬ್ಭಾಗದ ಈ ನಿರೂಪಣೆಯು ಕೆಲವು ಸಾಮಾನ್ಯವೂ ವಿಶ್ಲೇಷಣಾತ್ಮಕವೂ ಆದ ವ್ಯಾಖ್ಯಾನವನ್ನು ಒಳಗೊಳ್ಳಬೇಕು. ಮೊದಲನೆಯದಾಗಿ, ಪಕ್ಷವು ಒಡಕನ್ನು ಎದುರಿಸಿದ್ದು ಇದೇ ಮೊದಲ ನೆಯ ಸಲವೇನಲ್ಲ. ಪಕ್ಷದ ದೀರ್ಘ ಇತಿಹಾಸದಲ್ಲಿ ಒಡಕುಗಳು ಅನೇಕ ಬಾರಿ ಕಾಣಿಸಿ ಕೊಂಡಿವೆ. ೧೯೦೭ ರಲ್ಲಿಯೇ, ತೀವ್ರಗಾಮಿಗಳು ಮತ್ತು ಮಂದಗಾಮಿಗಳ ನಡುವೆ ತಿಕ್ಕಾಟವಿತ್ತು; ಇದರ ಕೇಂದ್ರದಲ್ಲಿ ತಿಲಕ್ ಇದ್ದರು. ೧೯೨೨ರಲ್ಲಿ, ಹೊಸ ಸಂವಿಧಾನಾ ತ್ಮಕ ಸುಧಾರಣೆಗಳ ಹಿನ್ನೆಲೆಯಲ್ಲಿ ಚುನಾವಣೆಗಳಲ್ಲಿ ಭಾಗವಹಿಸುವ ವಿಷಯದ ಬಗ್ಗೆ ಕಾಂಗ್ರೆಸ್‌ನಿಂದ ಸ್ವರಾಜ್ ಪಕ್ಷವು ಹೊರಹೋಯಿತು. ಆದರೆ ಆನಂತರ, ಗಾಂಧೀಜಿ, ಚಿತ್ತರಂಜನ್ ದಾಸ್ ಮತ್ತು ಮೋತಿಲಾಲ್ ನೆಹರೂ ಅವರಲ್ಲಿನ ಒಡಂಬಡಿಕೆಯ ಕಾರಣದಿಂದ, ಸ್ವರಾಜ್ ಪಕ್ಷವು ಮತ್ತೆ ಮೂಲ ಸಂಸ್ಥೆಗೆ ಮರಳಿತು. ೧೯೩೯ ರಲ್ಲಿ, ಕಾಂಗ್ರೆಸ್ ಅಧ್ಯಕ್ಷರಾಗಿ ಸುಭಾಷ್ ಚಂದ್ರ ಬೋಸ್ ಆಯ್ಕೆಗೊಂಡಾಗ, ಪಕ್ಷವು ಒಡಕಿನ ಅಂಚಿಗೆ ಬಂದು ಮುಟ್ಟಿತ್ತು. ೧೯೫೧ರಲ್ಲಿ, ನೆಹರೂ ಮತ್ತು ಟಂಡನ್ ಅವರ ನಡುವಣ ಭಿನ್ನಾಭಿಪ್ರಾಯವು ಇಬ್ಭಾಗಗೊಳ್ಳುವ ಪರಿಸ್ಥಿತಿಯನ್ನು ಹೋಲುವ ತಾಣಕ್ಕೆ ಬಂದು ನಿಂತಿತ್ತು. ಸ್ವಾತಂತ್ರ್ಯ ಸಂಗ್ರಾಮವೆಂಬ ಏಕಚ್ಛತ್ರದಡಿ ಒಂದಾಗಿದ್ದ ಸೈದ್ಧಾಂತಿಕ ವಾಗಿ ಹೊಂದಾಣಿಕೆಯಾಗದ ಗುಂಪುಗಳು ಕಾಂಗ್ರೆಸ್‌ನಿಂದ ಹೊರಬಂದುವು: ಮೊದಲು ಕಮ್ಯುನಿಸ್ಟರು, ಆ ಬಳಿಕ ಸಮಾಜವಾದಿಗಳು. ಆದರೂ, ಈ ಇಬ್ಭಾಗವು ಮೊದಲಿನವು ಗಳಿಗಿಂತ ಗುಣಾತ್ಮಕವಾಗಿ ವಿಭಿನ್ನವಾದುದು; ಯಾಕಂದರೆ ಈ ಇಬ್ಭಾಗದಿಂದ ಪಕ್ಷವು ಎಲ್ಲ ಹಂತಗಳಲ್ಲಿ ಉದ್ದಕ್ಕೂ ಎರಡಾಗಿ ಪರಸ್ಪರ ಬೇರೆಯಾದ ಸೈದ್ಧಾಂತಿಕ ನಿಲವುಗಳ ಎರಡು ಪಕ್ಷಗಳಾಗಿ ಧ್ರುವೀಕರಣಗೊಂಡವು. ಈ ದೃಷ್ಟಿಯಿಂದ ನೋಡಿದಾಗ, ವಂಶಾಡಳಿತ, ದರ್ಪಿಷ್ಠಾಧಿಕಾರ, ಮತ್ತು ಸಾಂಸ್ಥಿಕ ಅಪಕಾರ್ಯಗಳಂತಹ ಪಕ್ಷದಲ್ಲಿನ ಮುಖ್ಯ ವಾಹಿನಿಗಳಿಗೆ ನಿಜಲಿಂಗಪ್ಪನವರು ಯಶಸ್ವಿಯಾದ ಪ್ರತಿರೋಧವನ್ನು ಒಡ್ಡಿದರು. ಈ ಪ್ರತಿರೋಧ ಉಂಟಾದದ್ದು ಮೃದು ಭಾಷಿ ಹಾಗೂ ಸೌಜನ್ಯಪೂರಿತರು, ಸಮತೂಕದ ಮನೋಭಾವ ಮತ್ತು ಶಾಂತಿಪ್ರಿಯರು ಎಂದು ಹೆಸರಾದವರಿಂದ ಬಂದುದು ಐತಿಹಾಸಿಕ ವ್ಯಂಗ್ಯವೇ ಸರಿ. ನಿಜಲಿಂಗಪ್ಪನವರು ಇದನ್ನು ಮಾಡಲು ಸಾಧ್ಯವಾದದ್ದು ಅವರು ಕೆಲವು ಆದರ್ಶಗಳಿಗೂ ತತ್ವಗಳಿಗೂ ತೋರಿಸುತ್ತಿದ್ದ ಬದ್ಧತೆ, ಇದನ್ನೆಲ್ಲ ಅವರು ತಮ್ಮ ಕೌಟುಂಬಿಕ ಹಿನ್ನೆಲೆ, ಪ್ರಾದೇಶಿಕ ಸಂಸ್ಕೃತಿ, ಮತ್ತು ಧಾರ್ಮಿಕ ನಂಬಿಕೆಗಳಿಂದಲೇ ಪಡೆದಿದ್ದವರು. ಎಲ್ಲಕ್ಕೂ ಮಿಗಿಲಾಗಿ, ಅಧಿಕಾರ ಮತ್ತು ಸ್ಥಾನಮಾನಗಳ ಬಗ್ಗೆ ಅವರಿಗಿದ್ದ

ಜಿಜ್ಞಾಸೆ ಮತ್ತು ಸಹಜ ಸಂಕೋಚ ಸ್ವಭಾವಗಳು ಇಂದಿರಾ ಗಾಂಧಿಯವರಿಗಿದ್ದಂತಹ ರಾಜಕೀಯ ಜಾಣ್ಮೆ ಮತ್ತು ತಂತ್ರಗಾರಿಕೆಗಳ ವಿರುದ್ಧದ ಅವರ ಪ್ರಬಲ ಅಸ್ತ್ರಗಳಾದವು. ಆದರೆ ಆಕೆಯ ವಿಷಯದಲ್ಲಿಯೂ, ವೈಯಕ್ತಿಕವಾಗಿ ಸದ್ಭಾವನೆಯಿಲ್ಲದಿದ್ದರೂ, ಒಳ್ಳೆಯ ಮಾತುಗಳನ್ನೇ ಆಡುತ್ತಿದ್ದರು. ಎರಡನೆಯದಾಗಿ, ವಸಾಹತೋತ್ತರ ಭಾರತದಲ್ಲಿನ ಈ ಘಟನೆಗೆ ಏನು ಅರ್ಥ ಆರೋಪಿಬಹುದು? ಒಂದು ನೆಲೆಯಲ್ಲಿ, ಅದನ್ನು ವ್ಯಕ್ತಿ ಆಕಾಂಕ್ಷೆ ಮತ್ತು ರಾಜಕೀಯ ನೈತಿಕತೆಗಳ ನಡುವಣ ತಿಕ್ಕಾಟ ಎಂದು ಸರಿಯಾಗಿ ಗುರುತಿಸಬಹುದು. ಇಂದಿರಾ ಗಾಂಧಿಯವರು ವೈಯಕ್ತಿಕ ಮಹತ್ವಾಕಾಂಕ್ಷೆಯ ಪ್ರತೀಕ ವಾಗಿದ್ದರು, ಅವರ ನಡಾವಳಿಯೆಲ್ಲ ಅಧಿಕಾರ ಮತ್ತು ಸ್ಥಾನಮಾನಗಳ ಕಾರಣದಿಂದಲೇ ತೇಜಿಗೊಂಡವು. ನಿಜಲಿಂಗಪ್ಪನವರು, ಗಾಂಧೀಜಿಯ ಸಂಸ್ಕೃತಿ ಮತ್ತು ಉದಾರತೆಗಳ ಸಂಕೀರ್ಣತೆಯ ನಡುವೆಯೂ ಹರಳುಗೊಂಡಿದ್ದ ಉದಾರ ಪ್ರಜಾಸತ್ತಾತ್ಮಕ ಮೌಲ್ಯ ಗಳನ್ನು ಪ್ರತಿನಿಧಿಸುತ್ತಿದ್ದವರು. ಈ ವ್ಯಾಖ್ಯಾನದ ಪ್ರಕಾರ, ನಿಜಲಿಂಗಪ್ಪನವರು ಗಾಂಧೀಜಿಯ ಸ್ವದೇಶೀ ಸಂಸ್ಕೃತಿ ಮತ್ತು ನೆಹರೂ ಅವರ ಪರಿಷ್ಕೃತ ಸಮಾಜವಾದಗಳ ಹದಗೊಂಡ ಮಿಶ್ರಣದಿಂದ ಹೊಮ್ಮಿದ ಸಿದ್ಧಾಂತಬದ್ಧತೆ ಮತ್ತು ರಾಜಕೀಯ ಸಂಸ್ಕೃತಿಗಳ ಹರಿಕಾರರಾಗಿ ಮೂಡಿಬರುತ್ತಾರೆ. ಸಮಾಜವಾದ ಮತ್ತು ಉದಾರ ಪ್ರಜಾಸತ್ತಾತ್ಮಕತೆಗಳ ಮಿಶ್ರಣವಾದ ಕಾಂಗ್ರೆಸ್ಸಿನ ಸೈದ್ಧಾಂತಿಕತೆಯಲ್ಲಿ, ಇಂದಿರಾಗಾಂಧಿಯವರು ಸೈದ್ಧಾಂತಿಕ ವಾಗಿ ಸಮಾಜವಾದದ ಭಾಗಕ್ಕೆ ಹೆಚ್ಚು ಒತ್ತು ನೀಡುವ ಮನೋಭಾವದವರಾಗಿದ್ದರು. ಒಂದು ಅರ್ಥದಲ್ಲಿ, ತಮ್ಮ ಸಮಾಜವಾದಕ್ಕೆ ಅಡ್ಡಿ ಎಂದು ಭಾವಿಸಿದ್ದ ಉದಾರವಾದದ ವಿರುದ್ಧ ನೆಹರೂ ಕೆಳದನಿಯಲ್ಲಿ ವ್ಯಕ್ತಪಡಿಸುತ್ತಿದ್ದ ಪ್ರತಿಭಟನೆಯನ್ನೇ ಇಂದಿರಾ ಗಾಂಧಿ ಮುಂದುವರೆಸುತ್ತಿದ್ದರು. ಇನ್ನೊಂದು ನೆಲೆಯಲ್ಲಿ, ಅದನ್ನು ನಿಜಲಿಂಗಪ್ಪನವರ ಸಮಾಜ ವಾದದ ವಿರುದ್ಧದ ಸಂಘರ್ಷ ಎಂದು ವ್ಯಾಖ್ಯಾನಿಸಬಹುದು. ಮತ್ತೊಂದು ನೆಲೆಯಲ್ಲಿ, ಅದನ್ನು ತಲೆಮಾರುಗಳ ನಡುವಣ ಭಿನ್ನತೆಯನ್ನು ಕೇಂದ್ರವಾಗಿ ಹೊಂದಿದ್ದ ಘರ್ಷಣೆ ಯಾಗಿ ಪರಿಭಾವಿಸಬಹುದು. ವಾಸ್ತವವಾಗಿ ಇಲ್ಲಿ ಮೂರು ತಲೆಮಾರುಗಳ ಸಂಗಮ ವಿತ್ತು: ನಿಜಲಿಂಗಪ್ಪನವರ ತಲೆಮಾರು, ಇಂದಿರಾ ಅವರ ತಲೆಮಾರು ಮತ್ತು ಸ್ವಾತಂತ್ರ್ಯಾ ನಂತರ ಹುಟ್ಟಿದ್ದವರ ತಲೆಮಾರು. ತಮ್ಮ ತಂದೆಯವರ ತಲೆಮಾರು ಮತ್ತು ರಶ್ದೀ ಕರೆದಂತೆ ಮಧ್ಯರಾತ್ರಿ ಮಕ್ಕಳ ತಲೆಮಾರುಗಳ ನಡುವೆ ಸೇತುವೆಯಾಗಲು ಇಂದಿರಾ ಗಾಂಧಿಯವರು ಪ್ರಾಯಶಃ ಅತ್ಯಂತ ಸೂಕ್ತ ವ್ಯಕ್ತಿಯಾಗಿದ್ದರು. ಇಲ್ಲಿ ಪ್ರಾಮುಖ್ಯ ಪಡೆದಿದ್ದುದು ನಿರ್ದಿಷ್ಟ ಸಂಗತಿಗಳಲ್ಲ, ಸ್ಪಷ್ಟಪಡಿಸಲಾಗದ ಕಾರ್ಯಶೈಲಿ, ಸಾಂಸ್ಕೃತಿಕ ಪರಿಸರ ಮತ್ತು ಮೌಲ್ಯ ಬದಲಾವಣೆ ಮುಂತಾದವುಗಳು. ೧೯೪೭ರ ನಂತರದ ಕಾಂಗ್ರೆಸ್ ಪಕ್ಷದಲ್ಲಿನ ಆತ್ಮನಿಷ್ಠೆಯ ಮೌಲ್ಯಪ್ರತಿಪಾದನೆ, ಆದರ್ಶವಾದದ ಬಗೆಗಿನ

ಒಂದು ಬಗೆಯ ಸಿನಿಕತನ ಮತ್ತು ಶುದ್ಧ ಅವಕಾಶವಾದಗಳನ್ನು ತುಂಬ ಪರಿಣಾಮಕಾರಿಯಾಗಿ ಆಕೆ ಪ್ರತಿನಿಧಿಸಬಲ್ಲವರಾಗಿದ್ದರು. ಆದರೆ, ಹಿಂದಿನ ಉದಾರ ಹಾಗೂ ಆದರ್ಶ ವ್ಯಕ್ತಿಗಳು ಅಧಿಕಾರ ಮತ್ತು ಹುದ್ದೆಗಳ ಹಾಗೂ ಐಹಿಕ ಸಮೃದ್ಧಿಯ ಬೆನ್ನು ಹಿಡಿದು ಹೋಗುವುದನ್ನು ನೋಡುವುದು ನಡುವಣ ತಲೆಮಾರಿಗೆ ತೀರ ಸಂಕಟಕರ ವಿಷಯವಾಗಿತ್ತು. ಕೊನೆಯದಾಗಿ, ದೂರ ನಿಂತು ಐತಿಹಾಸಿಕ ಪರಿಪ್ರೇಕ್ಷ್ಯದಿಂದ ನೋಡಿದಾಗ, ಈ ಸಂಘರ್ಷವನ್ನು ಕುರಿತು ವಸಾಹತು ರಾಷ್ಟ್ರೀಯ ಆಂದೋಲನಗಳು ಚುನಾವಣಾ ಪ್ರಧಾನ ರಾಜಕೀಯ ಪಕ್ಷಗಳಾಗಿ ಮಾರ್ಪಡುವ ಪ್ರಕ್ರಿಯೆಯ ಭಾಗವಾಗುವ ಸ್ವರೂಪವನ್ನಾಗಿ ಆಲೋಚಿಸಬಹುದು. ಆದರ್ಶಗಳು ಮಾಯವಾಗುತ್ತ ಅಧಿಕಾರಗ್ರಹಣದ ಗುರಿ ಢಾಳಾಗುತ್ತ ಸಾಗುವುದನ್ನು ಈ ಪ್ರಕ್ರಿಯೆಯಲ್ಲಿ ಕಾಣಬಹುದು. ಸ್ವಾತಂತ್ರ್ಯದ ಬಳಿಕ ಪಾಕಿಸ್ತಾನದಲ್ಲಿ ಮುಸ್ಲಿಂ ಲೀಗ್‌ನ ಗತಿ ಬಹು ಬೇಗ ಇದೇ ಆಯಿತು; ಆದರೆ ಭಾರತದಲ್ಲಿ ರಾಷ್ಟ್ರೀಯ ಕಾಂಗ್ರೆಸ್, ಪ್ರಾಯಶಃ ತನ್ನ ಕೊಳುಕೊಡುಗೆ ಹಾಗೂ ವೈವಿಧ್ಯವನ್ನು ಒಳಗೊಳ್ಳುವ ಚರಿತ್ರೆಯಿಂದಾಗಿ ಈ ಮಾರ್ಪಾಡಿಗೆ ಸುಮಾರು ಆನಂತರ ಒಳಗಾಯಿತು ಎನ್ನಬಹುದು. ನೆಹರೂ ಅವರ ವ್ಯಕ್ತಿತ್ವ ಮತ್ತು ರಾಜಕೀಯ ವರ್ಚಸ್ಸು ಅಭಿವೃದ್ಧಿಯನ್ನು ಕುಂಠಿತಗೊಳಿಸಿದುದೂ ಇದಕ್ಕೆ ಕರಣವಾಗಿರಬಹುದು. ಇದು ಅವರ ಮಗಳಾದ ಇಂದಿರಾ ಗಾಂಧಿಯವರಿಗೆ ಹರಿದು ಬಂದು ಆ ಪ್ರಕ್ರಿಯೆಯನ್ನು ಅವರೇ ಪ್ರತಿನಿಧಿಸುವಂತಾಯಿತು. ಮತ್ತೂ ಒಂದು ನೆಲೆಯಲ್ಲಿ, ಅದನ್ನು ಮರು–ಆದರ್ಶೀಕರಣ ಎಂಬ ಪ್ರಕ್ರಿಯೆಯಾಗಿಯೂ ನೋಡಬಹುದು. ನಿದರ್ಶನಕ್ಕೆ, ಯಂಗ್ ಟರ್ಕ್‌ಗಳು, ಅವರು ಸ್ಪಷ್ಟವಾಗಿ ಸೈದ್ಧಾಂತಿಕ ಜೀವಿಗಳು. ಒಟ್ಟಾರೆ, ಈ ಇಬ್ಭಾಗವು ವಸಾಹತೋತ್ತರ ಭಾರತ ಇತಿಹಾಸದ ಮಹತ್ವದ ಬೆಳವಣಿಗೆ ಎನಿಸಿಕೊಂಡು ಪರ್ವಕಾಲವಾಯಿತು. ಅನೇಕ ವಿಧಗಳಲ್ಲಿ, ೧೯೬೦ರಲ್ಲಿ ರಾಜಕಾರಣದ ಅಪರಾಧೀಕರಣ, ಉದಾರ ನಡವಳಿಕೆಯ ಕೊರತೆ, ಪ್ರಜಾಸತ್ತಾತ್ಮಕ ಮೌಲ್ಯಗಳ ಕುಸಿತ ಮುಂತಾದ ಸದ್ಯದ ರಾಜಕೀಯ ಬೇನೆಗಳು ಕಾಂಗ್ರೆಸ್ ಇಬ್ಭಾಗವೆಂಬ ಐತಿಹಾಸಿಕ ಪ್ರಕ್ರಿಯೆಯಿಂದಾಗಿ ಆರಂಭಗೊಂಡ ಫಲಗಳು. ಆದರೆ ಈ ವಿಶ್ಲೇಷಣೆಯು ಇಂದಿರಾ ಗಾಂಧಿಯವರ ವೈಯಕ್ತಿಕ ರಾಜಕೀಯ ಅಪರಾಧಗಳನ್ನು ಮರೆತುಬಿಡಲಾಗಲೀ, ನಿಜಲಿಂಗಪ್ಪನವರ ವೈಯಕ್ತಿಕ ಹಾಗೂ ರಾಜಕೀಯ ಆದರ್ಶಗಳನ್ನು ಕಡೆಗಣಿಸಲಾಗಲೀ ಬಳಸಿಕೊಳ್ಳತಕ್ಕದ್ದಲ್ಲ. ಒಂದು ಊಹಾತ್ಮಕ ಪ್ರಶ್ನೆಯಿಂದ ಈ ಚರ್ಚೆಯನ್ನು ಮುಗಿಸಬಹುದು: ಈ ಇಬ್ಭಾಗವನ್ನು ತಪ್ಪಿಸಬಹುದಾಗಿತ್ತೇ? ಇತಿಹಾಸದಲ್ಲಿನ ಎಲ್ಲ ಪ್ರಶ್ನೆಗಳಂತೆಯೇ ಅದಕ್ಕೆ ಒಂದಕ್ಕಿಂತ ಹೆಚ್ಚು ಉತ್ತರಗಳನ್ನು ಸಿದ್ಧಪಡಿಸಬಹುದು. ಅದರಲ್ಲಿ ಭಾಗಿಗಳಾಗಿದ್ದ ಪಾತ್ರಧಾರಿಗಳು ಬೇರೆಯವರಾಗಿದ್ದರೆ ಖಂಡಿತವಾಗಿಯೂ ಇದನ್ನು ತಪ್ಪಿಸಬಹುದಾಗಿತ್ತು. ಈ ದೃಷ್ಟಿ

ಯಿಂದ ನೋಡಿದರೆ, ನಿಜಲಿಂಗಪ್ಪನವರ ವೈಯಕ್ತಿಕ ಹಾಗೂ ರಾಜಕೀಯ ಗುಣಗಳು ಮತ್ತವರ ಮೌಲ್ಯ ಪ್ರತಿಪಾದನೆಗಳು ಎಂತಹವೆಂದರೆ ಇಬ್ಭಾಗ ಅನಿವಾರ್ಯವೇ ಆಗುತ್ತಿತ್ತು. ಸೈದ್ಧಾಂತಿಕವಾಗಿಯಾಗಲೀ ನೈತಿಕವಾಗಿಯಾಗಲೀ ಅವರದು ಹೆಚ್ಚು ಹೊಂದಾಣಿಕೆಯ ಸ್ವಭಾವವಾಗಿದ್ದರೆ ಅವರು ಇಂದಿರಾ ಗಾಂಧಿಯವರೊಡನೆ ಅವಕಾಶಾನುಸಾರ ಸಂಧಾನ ಮಾಡಿಕೊಳ್ಳಲು ಸಾಧ್ಯವಾಗುತ್ತಿತ್ತು, ಆಗಲೂ ಪಕ್ಷ ಒಡೆಯುವುದು ತಪ್ಪುತ್ತಿತ್ತು. ವಾಸ್ತವವಾಗಿ ಮತ್ತೊಂದು ವ್ಯಂಗ್ಯವೆಂದರೆ, ಹಿಂದಿರುಗಿ ನೋಡಿದರೆ, ನಿಜಲಿಂಗಪ್ಪನವರನ್ನು ಆಕೆ ಒಪ್ಪಿಕೊಳ್ಳಲು ಸಿದ್ಧವಾಗಿದ್ದರು, ಏಕೆಂದರೆ ಆಕೆಯ ನಿಜವಾದ ಶತ್ರುಗಳಾಗಿದ್ದವರೆಂದರೆ ಮೊರಾರ್ಜಿ ದೇಸಾಯಿ ಮತ್ತಿತರರು. ಆದರೆ ನಿಜಲಿಂಗಪ್ಪನವರೇ ಬೇರೊಂದು ಬಗೆಯ ರಾಜಕಾರಣದಲ್ಲಿ ನಿರತರಾಗಿದ್ದರು, ಅದೆಂದರೆ ಮೂಲಭೂತ ಮೌಲ್ಯಗಳಾದ ಉದಾರ ಪ್ರಜಾಪ್ರಭುತ್ವ, ಸಾಂಸ್ಥಿಕ ಶಿಸ್ತು ಮತ್ತು ನಿಯಮಬದ್ಧ ನಡವಳಿಕೆಗಳ ಕುರಿತು ರಾಜಿ ಮಾಡಿಕೊಳ್ಳಲು ಅವರು ಸಿದ್ಧರಿರದಿದ್ದುದು. ಇಂದಿರಾ ಗಾಂಧಿಯವರೇ ತಾವಿದ್ದುದಕ್ಕಿಂತ ಭಿನ್ನವಾಗಿದ್ದರೆ, ಅಂದರೆ ಸ್ವಹಿತಕ್ಕಿಂತ ದೇಶದ ಹಿತವೇ ಮುಖ್ಯವೆಂದು ಪರಿಗಣಿಸುವ ರಾಜಕಾರಣಿಯಾಗಿದ್ದಿದ್ದರೆ ಒಡಕು ಖಂಡಿತ ತಪ್ಪುತ್ತಿತ್ತು. ನಿಜಲಿಂಗಪ್ಪನವರೇ ಪಕ್ಷದ ಅಧ್ಯಕ್ಷರಾಗಿ ಹಾಗೂ ಇಂದಿರಾ ಗಾಂಧಿಯವರೇ ಪ್ರಧಾನ ಮಂತ್ರಿಗಳಾಗಿದ್ದು, ಗ್ರೀಕ್ ದುರಂತ ನಾಟಕದ ಅಂಶಗಳು ಸನ್ನಿವೇಶದಲ್ಲಿಯೇ ಅಂತರ್ನಿಹಿತವಾಗಿದ್ದಂತೆ, ಪರಿಸ್ಥಿತಿಯ ಪರಿಣಾಮಗಳು ನಿರಂತರವಾಗಿ ರಾಚನಿಕ ಒಡಕಿಗೆ ಕಾರಣವಾಗುತ್ತಿತ್ತು. ಕೊನೆಯಲ್ಲಿ ಕೇಳಬೇಕಾದ ಮತ್ತೊಂದು ಪ್ರಶ್ನೆಯೂ ಇದೆ. ನಿಜಲಿಂಗಪ್ಪನವರು ಪಕ್ಷದ ಯಶಸ್ವಿ ಅಧ್ಯಕ್ಷರಾಗಿದ್ದರೇ? ಆವಶ್ಯಕವಾದುದು ಪಕ್ಷದ ಉಳಿವು ಮಾತ್ರ ಎಂಬಷ್ಟು ಸರಳವಾಗಿದ್ದರೆ, ಆಗ ಅವರನ್ನು ಅಧ್ಯಕ್ಷರಾಗಿ ಸೋತರು ಎಂದು ಪರಿಗಣಿಸಬೇಕಾಗುತ್ತಿತ್ತು. ಏಕೆಂದರೆ, ಅದರ ಒಡಕಿಗೆ ಅವರೇ ಕಾರಣರಾದರಲ್ಲ. ಈ ಪರಿಸ್ಥಿತಿಯು ಎಂತಹುದೆಂದರೆ, ಪಕ್ಷದ ಐಕಮತ್ಯ ಮತ್ತು ಉಳಿವನ್ನು ಕಾಪಾಡಲು ತೆರಬೇಕಾಗಿದ್ದ ಯಾವುದೇ ಬೆಲೆಯೂ ದೊಡ್ಡದಾಗುತ್ತಿರಲಿಲ್ಲ ಎಂದು ಭಾವಿಸುವಂಥದು. ಆಗ ನಿಜಲಿಂಗಪ್ಪನವರನ್ನೇ ಆಕ್ಷೇಪ ಮಾಡಬೇಕಾಗುತ್ತಿತ್ತು, ಆದರೆ ನಾವು ನೋಡಿದ ಕತೆಯನ್ನು ಪರಿಶೀಲಿಸಿದರೆ ನಿಜಲಿಂಗಪ್ಪನವರು ಐಕಮತ್ಯಸಾಧನೆಗಾಗಿ ಸಾಕಷ್ಟು ಹಿರಿದಾದ ಬೆಲೆಯನ್ನು ನೀಡಲು ತಯಾರಾಗಿದ್ದರು. ಆದರೆ ಅಧ್ಯಕ್ಷರಾಗಿ ಅವರಿಗೆ ಅನ್ನಿಸಿದ್ದೆಂದರೆ, ತನ್ನ ದೀರ್ಘ ಇತಿಹಾಸದಲ್ಲಿ ಕಾಪಾಡಿಕೊಂಡು ಬಂದಿದ್ದ ಮೌಲ್ಯಗಳನ್ನೆಲ್ಲ ಗಾಳಿಗೆ ತೂರಿ ಬಿಡುವಂತಹ ಹಿರಿಯ ಬೆಲೆಯನ್ನೇ ಅವರು ಕೇಳುತ್ತಿದ್ದಾರೆ ಎಂಬುದು. ಇದೊಂದು ಪಕ್ಕಾ ಹಾಬ್‌ಸನ್ ಆಯ್ಕೆ. ಅವರು ಮಾಡಿದ್ದು ಸರಿಯಲ್ಲ ಎಂದು ಯಾರು ತಾನೇ ಹೇಳಬಲ್ಲರು? ಸಿಂಡಿಕೇಟ್‌ನ ಅವರ ಇತರ ಗೆಳೆಯರು, ಕಾಮರಾಜ

ರನ್ನು ಹೊರತುಪಡಿಸಿ, ಅವರು ತಿರಸ್ಕರಿಸಿದ ಮಾರ್ಗವನ್ನೇ ಅನುಸರಿಸಿ, ತನ್ನ ಇತಿಹಾಸ ಮತ್ತು ಸಂಪ್ರದಾಯಗಳನ್ನೆಲ್ಲ ಕೈಬಿಟ್ಟು ಪಕ್ಷದ ಐಕಮತ್ಯವನ್ನು ಸಾಧಿಸಲು ಪ್ರಧಾನ ಮಂತ್ರಿಗಳೊಡನೆ ಕೈಜೋಡಿಸುತ್ತಿದ್ದರು. ಸರಿಯಾಗಿ ವ್ಯಾಖ್ಯಾನಿಸಿದರೆ, ನಿಜಲಿಂಗಪ್ಪನವರು ಒಬ್ಬ ದುರಂತ ನಾಯಕರೆನಿಸುತ್ತಾರೆ. ಆದರೆ ತಾವು ಯಶಸ್ವೀ ಅಧ್ಯಕ್ಷರೇ ಅಲ್ಲವೇ ಎಂಬ ಪ್ರಶ್ನೆಯೇ ಅವರ ಬಗ್ಗೆ ಉದ್ಭವಿಸುವುದಿಲ್ಲ. ಪಕ್ಷದ ಇತಿಹಾಸದಲ್ಲಿ ಬೇರಾವ ಅಧ್ಯಕ್ಷರೂ ಅಂಥ ಭಯಂಕರ ಹಾಗೂ ಸಂಕೀರ್ಣ ಆಯಾಮದ ಸನ್ನಿವೇಶವನ್ನು ಎದುರಿಸುವ ಪರಿಸ್ಥಿತಿಯನ್ನು ಈ ಸಂದರ್ಭದಲ್ಲಿ ನಾವು ಕಾಣಲಿಲ್ಲ. ಅಂಥ ಅಸಾಧ್ಯ ಐತಿಹಾಸಿಕ ಸನ್ನಿವೇಶದಲ್ಲಿ ಅವರು ಒಳ್ಳೆಯ ವ್ಯಕ್ತಿಯಾಗಿಯೂ ಶ್ರೇಷ್ಠ ಮುತ್ಸದ್ದಿ ಯಾಗಿಯೂ ಹೊರಹೊಮ್ಮಿದರು ಎಂಬುದನ್ನು ಯಾರೂ ಪ್ರಶ್ನಿಸಲಾರರು.

ಆರಂಭದಿಂದಲೂ ನಿಜಲಿಂಗಪ್ಪನವರಿಗೆ ಪಕ್ಷದಲ್ಲಿಯೇ ಆಗಲೀ ಸರ್ಕಾರದಲ್ಲಿಯೇ ರಾಷ್ಟ್ರ ಮಟ್ಟದ ರಾಜಕಾರಣಕ್ಕೆ ಹೋಗುವ ಬಯಕೆಯಿರಲಿಲ್ಲ. ತಮ್ಮ ಇಷ್ಟಕ್ಕೆ ವಿರುದ್ಧ ವಾಗಿಯೇ ಅವರು ಪಕ್ಷದ ಅಧ್ಯಕ್ಷರಾದರು. ಅದು ಸೂಕ್ತವಾದುದೇ ಎಂದು ಕೆಲವರೇನೋ ಹೇಳಬಹುದು. ತಾವು ಮುನ್ನಡೆಸುತ್ತಿದ್ದ ಪಕ್ಷವು ಭಾರಿ ಬಿಕ್ಕಟ್ಟಿನಲ್ಲಿ ಸಿಲುಕಿಕೊಂಡಾಗ, ಮೊದಮೊದಲು ರಾಜೀನಾಮೆ ನೀಡಬೇಕೆಂದು ಅಂದುಕೊಂಡಿದ್ದರು, ಅಷ್ಟೇ ಅಲ್ಲ ರಾಜಕಾರಣದಿಂದಲೇ ನಿವೃತ್ತಿ ಪಡೆಯಲೂ ಆಶಿಸಿದ್ದರು. ಆದರೆ ಇದು ಪಲಾಯನವಾದ ವಾಗುತ್ತದೆಂಬುದನ್ನು ಗಮನಿಸಿ ಸುಮ್ಮನಾದರು. ಅವರು ಅತಿರೇಕದ ಆದರ್ಶವಾದಿ, ಭ್ರಷ್ಟಾಚಾರ, ಅಶಿಸ್ತು ಮತ್ತು ಅನ್ಯಾಯಗಳಂತಹ ದೊಡ್ಡ ಪಿಡುಗುಗಳನ್ನು ಹೋಗಲಾಡಿಸಿ ಪಕ್ಷವನ್ನು ಶುದ್ಧೀಕರಣಗೊಳಿಸಬಹುದೆಂದು ಭಾವಿಸಿದ್ದವರು. ಅವರಿಗೆ ಖಂಡಿತ ವಾಗಿಯೂ ಅಧಿಕಾರ ಅಥವಾ ಹುದ್ದೆಯ ವ್ಯಾಮೋಹವಿರಲಿಲ್ಲ. ಆದರೆ ಅವರು ಇಂದಿರಾ ಗಾಂಧಿಯವರ ಹೊಸ ಕಾರ್ಯಶೈಲಿಗೆ ಸರಿಸಾಟಿಯಾಗಿ ನಿಲ್ಲಲಾರದಾದರು. ತಮ್ಮದೇ ಖಾಸಗೀ ಪಕ್ಷವೆಂದುಕೊಂಡಿದ್ದ ಕಾಂಗ್ರೆಸ್‌ಗೆ ಜನರನ್ನು ಸೆಳೆಯುವುದರಲ್ಲಿ ಇಂದಿರಾ ಅವರು ಸಫಲರಾದರು. ಹೊಸ ಕಾಂಗ್ರೆಸ್ ಅನ್ನು ಮುನ್ನಡೆಸಿದ ಕೇಂದ್ರ ಮನೋಭಾವವೆಂದರೆ ಸಾರ್ವಭೌಮ ನಾಯಕಿಯೆನಿಸಿದ ವ್ಯಕಿಯ ಬಗೆಗಿನ ನಿಷ್ಠೆ. ಹೀಗಾಗಿ ವ್ಯಾಪ್ತಿಯು ಕಿರಿದಾದ ಹಾಗೂ ಸಂಪನ್ಮೂಲ ಕುಂಠಿತಗೊಂಡ ಸ್ಥಿತಿಯಲ್ಲಿ ನಿಜಲಿಂಗಪ್ಪನವರು ತಮ್ಮ ಪಕ್ಷವನ್ನು ಕಾಣಬೇಕಾಯಿತು. ಎಂದಿನಂತೆಯೇ ಅವರು ಧೈರ್ಯಗುಂದಲಿಲ್ಲ, ಬದಲಾಗಿ ಹಳೆಯ ಕಾಂಗ್ರೆಸ್ ಅನ್ನು ಪುನಾರೂಪಿಸುವ ಮತ್ತು ಬಲಪಡಿಸುವ ಪ್ರಯತ್ನದಲ್ಲಿ ತೊಡಗಿದರು. ಇಂದಿರಾ ಕಾಂಗ್ರೆಸ್‌ನ ಕೊರತೆಗಳನ್ನೂ ದೋಷಗಳನ್ನು ಪ್ರಚಾರ ಮಾಡಲು ಅವರು ಭಾರತವ್ಯಾಪೀ ಪ್ರವಾಸವನ್ನು ಕೈಗೊಂಡರು. ದೇಶದೆಲ್ಲಡೆ ಸುತ್ತಿದ ಊರುಗಳಲ್ಲಿ ಅವರೆಂದೂ ಎರಡು ಮೂರು ದಿನಗಳಿಗಿಂತ

ಹೆಚ್ಚು ಕಾಲ ಉಳಿದುಕೊಳ್ಳಲಿಲ್ಲ. ತಮಗೆ ಉತ್ಸಾಹಭರಿತ ಹಾಗೂ ಸಡಗರದ ಸ್ವಾಗತ ದೊರೆತಾಗ ಅವರು ಸಂತಸಗೊಂಡರು. ಎಷ್ಟೋ ಸಲ ವಿಮಾನ ನಿಲ್ದಾಣದಿಂದಲೇ ಅವರ ವೈಭವಯುತ ಮೆರವಣಿಗೆ ನಡೆಯುತ್ತಿತ್ತು. ಅವರ ವಾಹನದ ತುಂಬ ಹೂವಿನ ಹಾರಗಳು ತುಂಬಿರುತ್ತಿದ್ದುವು, ಜೊತೆಯಲ್ಲಿ ವಾದ್ಯವೃಂದವೂ ನಡೆದು ಬರುತ್ತಿತ್ತು. ಹೋದೆಡೆಯಲ್ಲೆಲ್ಲ ಅವರು ನೀಡುತ್ತಿದ್ದ ಸಂದೇಶ ಒಂದೇ: ದೇಶದ ಸದ್ಯದ ದುಃಸ್ಥಿತಿ ಯಿಂದ ಪಾರಾಗಲು ಗಾಂಧೀಜಿಯ ಮಾರ್ಗವನ್ನು ಅನುಸರಿಸುವುದು ಏಕೈಕ ಉಪಾಯ ಎಂಬುದು. ಅವರ ಭಾಷಣಗಳಲ್ಲಿ, ಸದ್ಯದ ಸರ್ಕಾರದ ಬಗೆಗಿನ ಟೀಕೆಗಳು, ಗಾಂಧೀಜಿಯ ಉಪದೇಶಗಳು ಮತ್ತು ಪಕ್ಷದ ಶಿಸ್ತಿಗಾಗಿ ಮನವಿ ಇವುಗಳು ಸೇರಿರುತ್ತಿದ್ದವು. ತಮ್ಮ ಸಂದರ್ಶಕರೊಂದಿಗೆ ಅವರು ಗಂಟೆಗಟ್ಟಲೆ ಕಾಲ ಕಳೆಯುತ್ತಿದ್ದರು; ಸಾಮಾನ್ಯವಾಗಿ ಮಧ್ಯರಾತ್ರಿಯವರೆಗೂ ಸಂದರ್ಶನಗಳು ನಡೆಯುತ್ತಿದ್ದವು. ಈ ಪ್ರವಾಸಗಳನ್ನು ಕೈಗೊಳ್ಳಲು ಅವರ ಮುಂದಿದ್ದುದು ಎರಡು ಉದ್ದೇಶಗಳು: ಸಾರ್ವಜನಿಕರಲ್ಲಿ ವಿಮರ್ಶಾತ್ಮಕ ದೃಷ್ಟಿ ಕೋನವನ್ನು ಬೆಳೆಸುವುದು ಮತ್ತು ಸಾಂಸ್ಥಿಕ ಸಂರಚನೆಯನ್ನು ಸರಿಪಡಿಸುವುದು. ಇದೊಂದು ಪ್ರಯಾಸದಾಯಕ ಕೆಲಸವಾಗಿತ್ತು, ಎಷ್ಟೋ ವೇಳೆ ಏನನ್ನಾದರೂ ತಿನ್ನಲು ಕೂಡ ಆಗುತ್ತಿರಲಿಲ್ಲ! ಉತ್ತರದ ಭಾಗದಲ್ಲಿ ಅವರು ಹಲವೆಡೆ ಇಂದಿರಾ ಗಾಂಧಿಯ ಬೆಂಬಲಿಗರು ಸೇರಿಕೊಂಡ ಕಾರಣದಿಂದಾಗಿ ಕಪ್ಪು ಬಾವುಟ ಪ್ರದರ್ಶನವನ್ನು ಎದುರಿಸ ಬೇಕಾಗಿ ಬರುತ್ತಿತ್ತು. ಗುಪ್ತಚರರು ಕೂಡ ಅವರನ್ನು ಹಿಂಬಾಲಿಸುತ್ತಿದ್ದರು, ಅವರ ಆಗುಹೋಗುಗಳನ್ನು ಗಮನಿಸುತ್ತಿದ್ದರು. ಈ ರೀತಿಯಲ್ಲಿ ಅವರು ಮಾಡುತ್ತಿದ್ದುದ ರೊಂದಿಗೆ ಇಂದಿರಾ ಗಾಂಧಿಯವರು ಸತತ ಸಂಪರ್ಕವನ್ನು ಪಡೆದಿದ್ದರು. ಅವರು ನೀಡುತ್ತಿದ್ದ ಸಂಗತಿಗಳು ಆಕೆಗೆ ಸಂತೋಷ ತರುವಂಥದು ಮಾತ್ರ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ತಮ್ಮ ರಾಜಕೀಯ ಪ್ರಾಬಲ್ಯಕ್ಕೆ ಸಂಘಟನಾತ್ಮಕ ಕಾಂಗ್ರೆಸ್ ಅಥವಾ ಕಾಂಗ್ರೆಸ್ (ಓ) ದೊಡ್ಡ ಅಡ್ಡಿಯೆಂಬುದನ್ನು ಕಂಡುಕೊಂಡ ಅವರು ಹಳೆಯ ಕಾಂಗ್ರೆಸ್ ಅನ್ನು ಧ್ವಂಸ ಮಾಡಲು ಸರ್ಕಾರದ ಅಧಿಕಾರವನ್ನೂ ವೆಚ್ಚ ಮಾಡಲು ಹಣವನ್ನೂ ಧಾರಾಳವಾಗಿ ಬಳಸಿಕೊಂಡರು. ತಮಗೆ ನಿಜವಾದ ವಿರೋಧಿಯಾಗಿದ್ದ ಸಂಸ್ಥೆಯನ್ನು ಬಗ್ಗುಬಡಿಯಲು ಆಕೆ ಸಾಧ್ಯವಾದ ಎಲ್ಲ ಕೌಟಿಲ್ಯಗಳನ್ನೂ ಬಳಸಿಕೊಂಡರು. ಲಂಚವಿತ್ತು ಆಕೆ ಪಕ್ಷಾಂತರವನ್ನು ಪ್ರೋತ್ಸಾಹಿಸಿದರು, ತಮ್ಮ ಗುರಿ ಸಾಧನೆಗಾಗಿ ಹಿಂಸೆಯನ್ನು ಬಳಸಿಕೊಳ್ಳುವುದಕ್ಕೂ ಆಕೆ ಹಿಂದು ಮುಂದು ನೋಡಲಿಲ್ಲ. ಕಾಂಗ್ರೆಸ್ (ಓ)ದ ಸದಸ್ಯರನ್ನು ತಮ್ಮೆಡೆಗೆ ಸೆಳೆಯಲು ಆಕೆ ವ್ಯವಸ್ಥಿತ ಯೋಜನೆಯನ್ನು ರೂಪಿಸಿದರು. ವಾಸ್ತವದಲ್ಲಿ ಆಕೆ ಹಳೆಯ ಕಾಂಗ್ರೆಸ್ ಬೆಂಬಲಿಗರ ಮೇಲೆ ದೌರ್ಜನ್ಯದ ಮಳೆಗರೆದರು. ಇಂಥ ನಕಾರಾತ್ಮಕ ಮಾರ್ಗಗಳಲ್ಲದೆ, ಭಾಷಣಗಳು ಮತ್ತು ತಮ್ಮ ಬಲೆಗೆ ಬೀಳಿಸುವ

ವಾಗ್ವೈಖರಿಯಿಂದ ಜನರನ್ನು ಆಕರ್ಷಿಸಲು ಪ್ರಯತ್ನಿಸಿದರು. ತಮ್ಮ ಸ್ತ್ರೀಸಹಜ ಆಕರ್ಷಣೆಯನ್ನು ಮಾತ್ರವಲ್ಲದೆ, ಮನವೊಲಿಸುವ ಭಂಗಿಗಳನ್ನು ತೋರಿಸುವ ಮೂಲಕ ಸಾಂಕೇತಿಕ ರಾಜಕಾರಣವನ್ನೂ ಅನುಸರಿಸಿದರು. ಎಸ್‌ಸಿ ಹಟ್ಟಿಗಳಿಗೆ ಭೇಟಿಯಿತ್ತು ಅವರಿಗೆ ಸ್ವರ್ಗ ತಂದು ಮುಂದಿಡುವ ಭರವಸೆ ನೀಡುತ್ತಿದ್ದರು. ಹಿಂದುಳಿದ ವರ್ಗಗಳವರ ಏಳಿಗೆಗಾಗಿ ತಮ್ಮ ಪ್ರಾಣವನ್ನೇ ತೆರಲು ಸಿದ್ಧವಿರುವುದಾಗಿ ಘೋಷಿಸುತ್ತಿದ್ದರು. ಅವರ ಪ್ರಬಲ ಘೋಷವಾಕ್ಯ 'ಗರೀಬಿ ಹಟಾವೋ' ಬಡತನದ ಉಚ್ಚಾಟನೆ! ಅವರು ಬುಡಕಟ್ಟು ಜನರ ವೇಷ ತೊಟ್ಟು ಅವರೊಡನೆ ಬೆರೆತು ತಾವೂ ಅವರಲ್ಲೊಬ್ಬರು ಎಂದು ತೋರಿಸಿಕೊಳ್ಳುತ್ತಿದ್ದರು. ಅವರ ಗುರಿಯಾದ ಮತ್ತೊಂದು ಗುಂಪೆಂದರೆ ಅಲ್ಪಸಂಖ್ಯಾತರದು. ತಾವು ಅವರ ಐಕೈಕ ಉದ್ಧಾರಕರು ಎಂಬಂತೆ ಮಾತುಗಳನ್ನಾಡುತ್ತಿದ್ದರು. ಆದರೆ ಕಣ್ಣಿದ್ದ ಯಾರೂ ಗುರುತಿಸಬಹುದಾದಂತೆ, ಅವರ ನಡವಳಿಕೆ ಮಾತ್ರ ತಮ್ಮ ಮಾತುಗಳಿಗೆ ವಿರುದ್ಧವಾಗಿದ್ದವು! ಪ್ರತಿ ಗುಂಪಿಗೆ ಕೊಟ್ಟ ಪ್ರತಿ ಮಾತೂ ಬರಿ ಮಾತಾಗಿಯೇ ಉಳಿಯುತ್ತಿತ್ತು, ಅದನ್ನು ಅನುಷ್ಠಾನಗೊಳಿಸಲು ಅವರೆಂದೂ ಪ್ರಯತ್ನಿಸಲಿಲ್ಲ. ರಾಜಕಾರಣದಲ್ಲಿ ಅಧಿಕಾರಿದಾಹಿಗಳು ಹಿಡಿಯುವ ಮಾರ್ಗವನ್ನೇ ಅವರೂ ಹಿಡಿದರು: ಒಡೆದು ಆಳುವುದು! ಮುಂದಾಳಿನ ಎದುರು ಮತ್ತೊಬ್ಬನನ್ನು ಸೃಷ್ಟಿಸುವುದು, ಗುಂಪಿನ ವಿರುದ್ಧ ಮತ್ತೊಂದನ್ನು ಎತ್ತಿ ಕಟ್ಟುವುದು, ಆ ಮೂಲಕ ಪರಸ್ಪರ ದ್ವೇಷವನ್ನು ಹೊತ್ತಿ ಉರಿಸಿ ತಾವು ಬೇಳೆ ಬೇಯಿಸಿಕೊಳ್ಳುವುದು. ಇದಕ್ಕೊಂದು ನಿದರ್ಶನ, ಅವರು ಗಡಿ ವಿವಾದವನ್ನು ಉಲ್ಬಣಗೊಳಿಸಿದ ಬಗೆ, ಅದರಲ್ಲೂ ಮಹಾರಾಷ್ಟ್ರ–ಕರ್ನಾಟಕಗಳ ನಡುವೆ. ಇದರಿಂದ ನಿಜಲಿಂಗಪ್ಪನವರು ಈ ಸಮಸ್ಯೆಯನ್ನು ಪದೇ ಪದೇ ಎದುರಿಸುವಂತಾದುದು. ಅದರಿಂದ ಅವರ ರಾಜಕೀಯ ವಿಶ್ವಾಸಾರ್ಹತೆ ಕುಂಠಿತಗೊಳ್ಳುವಂತಾಗುತ್ತಿತ್ತು! ಮುಖ್ಯಮಂತ್ರಿ ವೀರೇಂದ್ರ ಪಾಟೀಲರು ೧೯೭೦ ರ ಫೆಬ್ರವರಿ ೨೩ ರಂದು ಇಂದಿರಾ ಗಾಂಧಿಯವರನ್ನು ನಿಯೋಗವೊಂದರಲ್ಲಿ ಭೇಟಿಯಾಗಿ ಗಡಿವಿವಾದದ ಬಗೆಗಿನ ಅವರ ನಿಲವಿನ ಕುರಿತು ಅಸಮಾಧಾನ ವ್ಯಕ್ತಪಡಿಸಿದರು. ಅವರು ಕಾಂಗ್ರೆಸ್ (ಓ) ಆಳ್ವಿಕೆಯ ರಾಜ್ಯಗಳ ಸರ್ಕಾರಗಳನ್ನು ಕ್ರಮಬದ್ಧವಾಗಿ ಅಸ್ಥಿರಗೊಳಿಸುವ ಧೋರಣೆಯನ್ನನುಸರಿಸಿದರು. ಬೇಕಾಬಿಟ್ಟಿ ರಾಜ್ಯಪಾಲರುಗಳಿಂದ ತಮಗೆ ಬೇಕಾದಂತೆ ವರದಿಗಳನ್ನು ತರಿಸಿಕೊಂಡು, ಅವುಗಳ ಆಧಾರದ ಮೇಲೆ ಆ ಸರ್ಕಾರಗಳನ್ನು ವಜಾಗೊಳಿಸುತ್ತಿದ್ದರು. ರಾಜ್ಯದಲ್ಲಿ ತಮ್ಮ ಬೆಂಬಲಿಗರಿಂದ ಕಾನೂನು ಸಮಸ್ಯೆಯು ಸೃಷ್ಟಿಗೊಳ್ಳುವಂತೆ ಮಾಡುತ್ತಿದ್ದರು. ನ್ಯಾಯಯುತವಾದ ಕೇಂದ್ರ ನೆರವನ್ನು ನಿಲ್ಲಿಸುವ ಮೂಲಕ ಇತರ ಪಕ್ಷಗಳ ಸರ್ಕಾರಗಳ ಮೇಲೆ ತಮ್ಮ ಹಿಡಿತ ಸಾಧಿಸುತ್ತಿದ್ದರು. ಈ ಮೂಲಕ ಅವರು ರಾಜ್ಯ ಸರ್ಕಾರಗಳು ಆರ್ಥಿಕ ಬಿಕ್ಕಟ್ಟಿಗೆ ಒಳಗಾಗುವಂತೆ ಮಾಡು

ತ್ತಿದ್ದರು. ಪ್ರಧಾನ ಮಂತ್ರಿಗಳ ಪ್ರಜ್ಞಾ ಕೇಂದ್ರವೆಂದು ಖ್ಯಾತರಾದ ಡಿ.ಪಿ. ಮಿಶ್ರಾ ಅವರನ್ನು ಇಬ್ಬರಿಗೂ ಮಿತ್ತರರಾಗಿದ್ದವರೊಬ್ಬರ ಮನೆಯಲ್ಲಿ ಕಾಮರಾಜರು ೧೯೭೦ ನೇ ಮಾರ್ಚಿಯಲ್ಲಿ ಭೇಟಿಯಾದರು. ಆ ಭೇಟಿಯಲ್ಲಿ ಏನೂ ನಡೆಯಲಿಲ್ಲ ವೆಂದೂ ಅದರ ಉದ್ದೇಶ ಕೇವಲ ಗೊಂದಲ ಸೃಷ್ಟಿಸುವುದು ಎಂದೂ ಕಾಮರಾಜರು ಆನಂತರ ಹೇಳಿಕೆಯಿತ್ತರು.

ಕಾಂಗ್ರೆಸ್ (ಓ) ಅಧ್ಯಕ್ಷರಾಗಿ ನಿಜಲಿಂಗಪ್ಪನವರು ಎದುರಿಸುತ್ತಿದ್ದ ಅತ್ಯಂತ ದೊಡ್ಡ ಸಮಸ್ಯೆಯೆಂದರೆ ಹಣಕಾಸಿನದು. ಪಕ್ಷವು ಎಷ್ಟು ಬಡವಾಗಿದ್ದಿತೆಂದರೆ, ಅನುದಿನದ ಕಚೇರಿಯನ್ನು ನಡೆಸಲು ಬೇಕಾದಷ್ಟು ಹಣವೂ ಅದರಲ್ಲಿರಲಿಲ್ಲ. ಆದಾಯವು ಕಡಿಮೆಯಾಗುತ್ತ, ವೆಚ್ಚ ಹೆಚ್ಚಾಗುತ್ತ ಹೋಯಿತು. ಪಕ್ಷದ ನಿಧಿಯ ಪ್ರಮುಖ ಮೂಲವಾದ ಕೈಗಾರಿಕೋದ್ಯಮಿಗಳು ಮತ್ತೆ ಸಿರಿವಂತರು ಅಧಿಕಾರದಲ್ಲಿರುವ ಪಕ್ಷವನ್ನು ಬೆಂಬಲಿಸು ವುದರಲ್ಲೇ ಆಸಕ್ತಿ ತೋರುತ್ತಿದ್ದರು. ಈಗಂತೂ ನಿಜಲಿಂಗಪ್ಪನವರ ಕಾಂಗ್ರೆಸ್‌ನ ಹತೋಟಿ ಅಧಿಕಾರಸ್ಥರ ಮೇಲೆ ಇರಲೇ ಇಲ್ಲ, ಹೀಗಾಗಿ ಈ ಮೂಲಗಳಿಂದ ಹಣದ ನೆರವು ಬರುವ ಭರವಸೆ ಇರಲಿಲ್ಲ. ನೆರವಿಗಾಗಿ ನಿಜಲಿಂಗಪ್ಪನವರು ಫೋನ್ ಮಾಡಿದರೆ ಅವರು ನುಣುಚಿಕೊಳ್ಳುತ್ತಿದ್ದರು. ಜೊತೆಗೆ ಸಹೋದ್ಯೋಗಿಗಳಿಂದ ಅವರಿಗೆ ಹೇಳಿಕೊಳ್ಳುವ ಬೆಂಬಲ ದೊರೆಯಲಿಲ್ಲ, ಎಸ್.ಕೆ. ಪಾಟೀಲ್ ಹೊರತಾಗಿ. ಮೊರಾರ್ಜಿಯವರಂತೂ ಯಾವುದೇ ಬಗೆಯಲ್ಲಿ ನೆರವು ನೀಡಲಿಲ್ಲ. ಇದಲ್ಲದೆ, ಪಕ್ಷದ ಸೂಕ್ತ ಪಿಸಿಸಿಗಳ ರಚನೆ ಮಾಡುವ ಗೋಜಲು ಸಮಸ್ಯೆ ಬೇರೆ. ಮತ್ತೆ, ಇದು ರಾಜ್ಯಗಳಲ್ಲಿ ಆಡಳಿತದಲ್ಲಿಲ್ಲದ ಪಕ್ಷವಾದ್ದರಿಂದಾಗಿ, ಈ ಕೆಲಸ ಅಸಾಧ್ಯವೇ ಆಯಿತು. ಅವರು ನೂರಕ್ಕೆ ನೂರರಷ್ಟು ನಂಬಬಹುದಾದ ರಾಜ್ಯ ಎಂದರೆ ಮೈಸೂರು ಮತ್ತು ಮುಖ್ಯಮಂತ್ರಿ ವೀರೇಂದ್ರ ಪಾಟೀಲ್ ಮಾತ್ರವೇ. ಇಲ್ಲಿಯೂ ಪ್ರಧಾನ ಮಂತ್ರಿಗಳು ಮಧ್ಯಪ್ರವೇಶಿಸಿ ತೊಂದರೆಗಳನ್ನು ಸೃಷ್ಟಿಸಬಹುದೆಂಬುದು ನಿಜಲಿಂಗಪ್ಪನವರ ಅನುಮಾನವಾಗಿತ್ತು. ಆಕೆಯಾಗಲೇ ಈ ದಿಸೆಯಲ್ಲಿ ಸಾಗುತ್ತಿದ್ದಾರೆ ಎಂಬ ವಿಷಯ ಅವರಿಗೆ ತಿಳಿದಿತ್ತು. ಮೈಸೂರಿನಲ್ಲಿ ಕಾಂಗ್ರೆಸ್ (ಓ) ೧೯೭೦ನೇ ಮಾರ್ಚಿ ೨೮ ರಂದು ರಾಜ್ಯಸಭೆಯ ಅಭ್ಯರ್ಥಿಗಳಾಗಿ ನಾಲ್ವರನ್ನು ನಿಲ್ಲಿಸಿತ್ತು, ಆದರೆ ಮೂವರು ಮಾತ್ರವೇ ಗೆದ್ದುದು. ಇದಕ್ಕೆ ಕಾರಣ ಇಂದಿರಾ ಗಾಂಧಿ ಯವರು ಕೆಲವು ಒಕ್ಕಲಿಗ ಹಾಗೂ ಹರಿಜನ ಮತಗಳನ್ನು ಕೊಂಡುಕೊಂಡಿದ್ದು ಎಂದು ನಿಜಲಿಂಗಪ್ಪನವರು ಅನುಮಾನಪಟ್ಟರು. ಈ ಎಲ್ಲ ರಾಜಕೀಯ ಸುಳಿಗಳಲ್ಲಿಯೂ, ನಿಜಲಿಂಗಪ್ಪನವರು ತಮ್ಮ ಕಿರಿಯ ಮಗಳ ಮದುವೆಯನ್ನು ೧೯೭೦ರ ಮೇ ೧ ರಂದು ನಿರಾತಂಕವಾಗಿ ಮಾಡಿ ಮುಗಿಸಿದರು. ಇದಕ್ಕೆ ಕಾರಣ ಸ್ನೇಹಿತರು ಮತ್ತು ಬಂಧುಗಳು ನೀಡಿದ ನೆರವು; ಅವರಂತೂ ಖಾಸಗಿ ವಿಷಯಗಳ ಕಡೆ ಗಮನ

ಕೊಡಲಾಗದಷ್ಟು ರಾಜಕೀಯ ಸಮಸ್ಯೆಗಳ ನಡುವೆಯಿದ್ದರು! ತಮ್ಮ ಮಗಳು ಪೂರ್ಣಿಮ ಮತ್ತು ಮೃತ್ಯುಂಜಯರ ಮದುವೆಗೆ ಅವರು ಬೇರೆ ಬಂಧುವೊಬ್ಬರಂತೆ ಬಂದು ಮಾರನೇ ದಿನವೇ ರಾಜಕೀಯ ಪ್ರವಾಹದಲ್ಲಿ ದುಮುಕಿದರು. ಮದುವೆಯ ಖರ್ಚು ಹತ್ತು ಸಾವಿರ ರೂಪಾಯಿಗಳನ್ನು ದಾಟಿದಾಗ, ಅವರಿಗೆ ಅಸಮಾಧಾನವಾಯಿತು. ಆದರೆ ಸಂದರ್ಭ ಅನಿವಾರ್ಯವೆಂದು ಅದನ್ನು ಒಪ್ಪಿಕೊಂಡರು! ಮೈಸೂರಿನಲ್ಲಿ ಸುಭದ್ರವಾಗಿದೆ ಎನಿಸಿದ್ದ ಕಾಂಗ್ರೆಸ್ (ಓ) ಆಲಸ್ಯದಿಂದಿರಲು ಸಾಧ್ಯವಿರಲಿಲ್ಲ. ಮೂರು ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಅದು ಸೋಲನ್ನನುಭವಿಸಿತು, ಆದರೆ ಸ್ಥಳೀಯ ಸಂಸ್ಥೆಗಳಿಂದ ಅದರ ನಾಲ್ವರೂ ಅಭ್ಯರ್ಥಿಗಳು ವಿಧಾನ ಪರಿಷತ್ತಿಗೆ ಚುನಾಯಿತರಾದರು. ಈ ಸೋಲು ಮುಂದೆ ದೇಶಾದ್ಯಂತ ಬರಲಿರುವ ವಸ್ತುಸ್ಥಿತಿಯ ಮುನ್ಸೂಚನೆ ಎಂದು ಕಾಂಗ್ರೆಸ್ (ಓ) ಕಾರ್ಯಕರ್ತರು ಸಹಜವಾಗಿಯೇ ಭಾವಿಸು ವಂತಾಯಿತು. ಎಂದಿನಂತೆ ಮಾನಸಿಕ ಸಮತೂಕದ ನಿಜಲಿಂಗಪ್ಪನವರು ಇದು ಇಂದಿರಾ ಗಾಂಧಿಯವರ ಹಣಬಲದ ಪ್ರಭಾವದ ಕಾರಣದಿಂದಾದುದು; ಮಾತ್ರವಲ್ಲದೆ, ತಮ್ಮ ಪಕ್ಷದ ಕಾರ್ಯಕರ್ತರ ಆಲಸ್ಯ ಮತ್ತು ಅಸಡ್ಡೆಗಳಿಂದ ಎಂದು ಅರ್ಥವಿಸಿದರು. ಆ ಸಂದರ್ಭದಲ್ಲಿ ಪತ್ರಿಕೆಗಳ ಜೊತೆ ಮಾತನಾಡುತ್ತ, ಹಿರಿಯರು ಕಿರಿಯರಿಗೆ ಅವಕಾಶ ಮಾಡಿಕೊಟ್ಟರೆ ಮಾತ್ರ ಪಕ್ಷವನ್ನು ಮತ್ತೆ ಕಟ್ಟಬಹುದು, ಅದಕ್ಕೆ ಮತ್ತೆ ಜೀವ ಕೊಡಬಹುದು ಎಂದು ಹೇಳಿದರು. ಆದರೆ ಈ ನಿಲವನ್ನು ಅವರ ಸಹೋದ್ಯೋಗಿ ಮೊರಾರ್ಜಿ ಒಪ್ಪಲಿಲ್ಲ, ಅಂಥ ಹೇಳಿಕೆಗಳನ್ನು ಬಹಿರಂಗವಾಗಿ ನೀಡಬಾರದೆಂದೂ ನಿಜಲಿಂಗಪ್ಪ ನವರನ್ನು ಎಚ್ಚರಿಸಿದರು. ಅದಕ್ಕೆ ನಿಜಲಿಂಗಪ್ಪನವರ ಪ್ರತಿಕ್ರಿಯೆ ಎಂದರೆ ಎಂದಿನ ಮುಗುಳ್ನಗೆ. ಒಳಗೆ ಅವರೆಂದುಕೊಳ್ಳುತ್ತಿದ್ದರು: "ಮೊರಾರ್ಜಿಯವರಿಗೆ ಪ್ರಧಾನ ಮಂತ್ರಿಯಾಗುವ ಆಸೆ ಇನ್ನೂ ಬತ್ತಿಲ್ಲ!" ಪ್ರಜಾಸತ್ತಾತ್ಮಕ ತತ್ವಗಳಲ್ಲಿ ನಂಬಿಕೆಯಿರಿಸಿದ ಇತರ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳುವಂತೆ ಮೊರಾರ್ಜಿ ಸೂಚಿಸಿದರು. ಅದಕ್ಕೆ ನಿಜಲಿಂಗಪ್ಪನವರ ಉತ್ತರವೆಂದರೆ, ತಾವು ಇಂದಿರಾ ಗಾಂಧಿಯವರನ್ನು ಅಧಿಕಾರದಿಂದ ಕೆಳಗಿಳಿಸುವುದಕ್ಕೆ ಕಾತರರಾಗಿದ್ದರೂ, ಪ್ರಧಾನ ಮಂತ್ರಿಯಾಗುವ ತಮ್ಮ ಆಸೆಯನ್ನು ಈ ರೀತಿಯಲ್ಲಿ ತೀರ ನೇರವಾದ ಮಾತುಗಳಲ್ಲಿ ಹೇಳುವುದು ತರವಲ್ಲ ಎಂದರು. ನಾಯಕರು ಅಧಿಕಾರಗ್ರಹಣದ ಗುರಿಯನ್ನು ಹೊಂದದಿದ್ದರೆ ಪಕ್ಷದ ನೈತಿಕಮಟ್ಟ ತಂತಾನೆ ಮೇಲೇರುತ್ತದೆ ಎಂಬುದು ನಿಜಲಿಂಗಪ್ಪನವರ ನಂಬಿಕೆಯಾಗಿತ್ತು. ಗಾಂಧೀಜಿಯವ ರೊಡನೆ ನೇರ ಸಂಪರ್ಕವಿರಿಸಿಕೊಂಡಿದ್ದ ನಾಯಕರು ಇಂತಹ ಮಟ್ಟಕ್ಕಿಳಿಯಬಾರದೆಂದು ಅವರು ಮೊರಾರ್ಜಿಯವರಿಗೆ ತಿಳಿಹೇಳಿದರು. ಆದರೆ ನಿಜಲಿಂಗಪ್ಪನವರು ಮತ್ತವರ ಪಕ್ಷದ ದುರದೃಷ್ಟದಿಂದ, ೧೯೪೭ರ ನಂತರ ಅಧಿಕಾರ ಮತ್ತು ಸ್ಥಾನಗಳ ರುಚಿ

ಕೇಂದ್ರ ಗೃಹಸಚಿವ ವೈ.ಬಿ. ಚವ್ಹಾಣರೊಂದಿಗೆ ಎಸ್ಸೆನ್

ಕಂಡಿದ್ದ ನಾಯಕರುಗಳು ತಮ್ಮ ಅಧಿಕಾರಲಾಲಸೆಯನ್ನು ತೊರೆಯಲು ಸಿದ್ಧರಿರಲಿಲ್ಲ. ಪಕ್ಷದ ಪ್ರಧಾನ ಕಾರ್ಯದರ್ಶಿಗಳ್ಲೊಬ್ಬರಾದ ವೆಂಕಟಸುಬ್ಬಯ್ಯನವರು ತಮ್ಮ ನೈತಿಕಪತನವನ್ನು ಅನುಭವಿಸಲಾರದೆ ತಮ್ಮನ್ನು ಜವಾಬ್ದಾರಿಯಿಂದ ಬಿಡುಗಡೆಗೊಳಿಸುವಂತೆ ನಿಜಲಿಂಗಪ್ಪನವರನ್ನು ಕೇಳಿಕೊಂಡರು. ಕಷ್ಟಕಾಲದಲ್ಲಿ ಪಕ್ಷವನ್ನು ಬಿಡದಿರಲು ನಿಜಲಿಂಗಪ್ಪನವರು ಅವರಿಗೆ ಸಲಹೆಯಿತ್ತರು. ಆದರೆ ಇದರಿಂದ ವೆಂಕಟಸುಬ್ಬಯ್ಯನವರು ತೃಪ್ತರಾಗಲಿಲ್ಲ. ಮಂತ್ರಿಗಳಾಗಿ ಒಮ್ಮೆ ಅಧಿಕಾರದ ರುಚಿ ಕಂಡವರು ಅಧಿಕಾರ ಕಳೆದುಕೊಂಡ ಬಳಿಕ ಸಂಪೂರ್ಣ ಅಸಹಾಯಕತೆಯಿಂದ ಬಳಲುತ್ತಾರೆ ಎಂಬುದನ್ನು ನಿಜಲಿಂಗಪ್ಪ ಅರಿಯಬಲ್ಲವರಾಗಿದ್ದರು. ಕಾಂಗ್ರೆಸ್ (ಓ) ನಲ್ಲಿದ್ದ ಹಿರಿಯ ನಾಯಕರ ಪರಿಸ್ಥಿತಿಯೂ ಇದೇ ಆಗಿತ್ತು. ಆದಾಯ ತೆರಿಗೆ ವಿವರಗಳ ವಿಷಯದಲ್ಲಿ ಕೇಂದ್ರ ಸರ್ಕಾರವು ನಿಜಲಿಂಗಪ್ಪ ಮತ್ತು ಅವರ ಪಕ್ಷವನ್ನು ಹಿಂಸಿಸಲು ಪ್ರಯತ್ನಿಸಿತು. ಪಕ್ಷದ ಕಚೇರಿಯ ವೆಚ್ಚಗಳನ್ನು ಭರಿಸುತ್ತಿದ್ದ ವ್ಯಕ್ತಿಯ ಹೆಸರನ್ನು ಬಹಿರಂಗಗೊಳಿಸಿದರೆ ಇಂದಿರಾ ಗಾಂಧಿಯವರು ಅವರನ್ನು ಬಲಿಪಶುವಾಗಿಸಬಹುದೆಂದು ಹೆದರಿದ ನಿಜಲಿಂಗಪ್ಪನವರು ಅವರ ಹೆಸರನ್ನು ಬಿಟ್ಟುಕೊಡಲಿಲ್ಲ. ಈ ವಿಷಯದಲ್ಲಿ ಅವರು ಪತ್ರಿಕೆಗಳಿಗೆ ಹೇಳಿಕೆಯೊಂದನ್ನಿತ್ತರು, ಪಕ್ಷಕ್ಕೆ ಕಿರುಕುಳ ಕೊಡಲು ಸರ್ಕಾರಕ್ಕೆ ಇಷ್ಟೇ ಸಾಕಾಯಿತು. ಕಾಂಗ್ರೆಸ್ (ಓ) ಮತ್ತದರ ಅಧ್ಯಕ್ಷರನ್ನು ತೊಂದರೆಗೆ ಸಿಲುಕಿಸುವ ಪರಿಯನ್ನು ಇಂದಿರಾ ಗಾಂಧಿಯವರು ನಿಲ್ಲಿಸಲಿಲ್ಲ. ನಿಜಲಿಂಗಪ್ಪ ಮತ್ತವರ ಪಕ್ಷವು ಕೋಮುವಾದಿ ಪಕ್ಷಗಳೊಡನೆ ಮೈತ್ರಿ ಬೆಳೆಸುತ್ತಿದೆಯೆಂದು ಇಂದಿರಾ ಗಾಂಧಿಯವರು ಹೇಳಿಕೊಂಡು ಸುತ್ತಿದರು. ವಾಸ್ತವವಾಗಿ ಅವರೇ ಕೇರಳದಲ್ಲಿ ಮುಸ್ಲಿಂ ಲೀಗ್ ಜೊತೆ ಮೈತ್ರಿ ಬೆಳೆಸಿಕೊಂಡಿದ್ದವರು. ಆದರೆ, ಅಂಥ ಮೈತ್ರಿ ಬೆಳೆಸಲು ಮೊರಾರ್ಜಿಯವರು ನಿಜಲಿಂಗಪ್ಪನವರ ಮೇಲೆ ಒತ್ತಡ ತಂದದ್ದೂ ನಿಜವೇ. ನಿಜಲಿಂಗಪ್ಪನವರು ಮಾತ್ರ ಇದಕ್ಕೆ ಮಣಿಯಲಿಲ್ಲ. ಮೊರಾರ್ಜಿಯವರು ಎಷ್ಟು ದೂರ ಹೋದರೆಂದರೆ ಮಾಜಿ ರಾಜರ ರಾಯಧನ ನಿಷೇಧ ಮತ್ತು ಬ್ಯಾಂಕ್ ರಾಷ್ಟ್ರೀಕರಣಗಳನ್ನು ವಿರೋಧಿಸಬೇಕೆಂದರು. ಪ್ರಾಯಶಃ ನಿಜಲಿಂಗಪ್ಪ ಮತ್ತು ಕಾಮರಾಜರನ್ನು ಹೊರತುಪಡಿಸಿದರೆ, ಉಳಿದ ಕಾಂಗ್ರೆಸ್ (ಓ) ನಾಯಕರಲ್ಲಿ ಬಹುಮಂದಿ ಇಂದಿರಾ ಗಾಂಧಿಯವರು ಹೇಳಿದ ಪ್ರತಿಗಾಮಿ ಮನೋಭಾವದವರೇ ಆಗಿದ್ದರು.

ಸೆಪ್ಟೆಂಬರ್ ೧೯೭೦ ರಲ್ಲಿ ಕೇರಳದಲ್ಲಿ ನಡೆದ ಮಧ್ಯಂತರ ಚುನಾವಣೆಗಳು ಕಾಂಗ್ರೆಸ್(ಓ)ದ ಬಲವನ್ನು ಪರೀಕ್ಷಿಸುವ ಸುಸಂದರ್ಭವಾಯಿತು. ತಮ್ಮ ಪಕ್ಷದ ಪರವಾಗಿ ನಿಜಲಿಂಗಪ್ಪನವರು ಬಿರುಸಾದ ಪ್ರಚಾರಕಾರ್ಯ ಕೈಗೊಂಡರು. ಚುನಾವಣೆಗಳು ಹತ್ತಿರವಾಗುತ್ತಿದ್ದಂತೆಯೇ ಕೇರಳದಲ್ಲಿ ಮುಸ್ಲಿಂ ಲೀಗ್ ಮತ್ತು ಮಾರ್ಕ್ಸಿಸ್ಟ್

ಪಕ್ಷಗಳು ಪರಸ್ಪರ ಹಿಂಸಾಚಾರದಲ್ಲಿ ತೊಡಗಿದವು. ಇಂದಿರಾಗಾಂಧಿಯವರು ವಾಸ್ತವಾಂಶ ಗಳನ್ನು ತಿರುಚಿ ಇದಕ್ಕೆಲ್ಲ ಕಾಂಗ್ರೆಸ್ (ಓ) ಮತ್ತು ಮಾರ್ಕ್ಸಿಸ್ಟರು ಕಾರಣವೆಂದು ಆರೋಪಿಸಿದರು. ೧೮ ನೇ ಸೆಪ್ಟೆಂಬರ್ ೧೯೭೦ ರಂದು ಕೇರಳ ಚುನಾವಣೆಯ ಫಲಿತಾಂಶಗಳು ಪ್ರಕಟವಾಗ ತೊಡಗಿದಂತೆ, ಕಾಂಗ್ರೆಸ್ (ಓ) ನಾಯಕರು ಹತಾಶರಾದರು. ಪಕ್ಷ ಒಂದೇ ಒಂದು ಸ್ಥಾನವನ್ನೂ ಗೆಲ್ಲಲಿಲ್ಲ. ಕಾಂಗ್ರೆಸ್ (ಐ) ಗೆಲವಿನ ಹಿಂದೆ ಭಾರಿ ಹಣಬಲ ಕೆಲಸಮಾಡಿದೆ ಎಂಬುದು ಬಯಲು ರಹಸ್ಯವಾಗಿತ್ತು. ತಮ್ಮ ಪಕ್ಷದ ಸಂಪೂರ್ಣ ವೈಫಲ್ಯಕ್ಕೆ ಕಾರಣ ಹಣಬಲ ಮತ್ತು ಸಂಘಟನಾತ್ಮಕ ಸಾಮರ್ಥ್ಯಗಳ ಕೊರತೆ ಎಂಬುದನ್ನು ನಿಜಲಿಂಗಪ್ಪನವರು ಬಹಿರಂಗವಾಗಿ ಒಪ್ಪಿಕೊಂಡರು. ತಮ್ಮ ಪಕ್ಷದ ಕಗ್ಗತ್ತಲ ಕಾಲವನ್ನು ಅವರು ಎದುರಿಸುತ್ತಿರುವಾಗಲೂ ಅವರು ತಮಗೆ ವಿಶಿಷ್ಟ ವಾದ ರೀತಿಯಲ್ಲಿ ಆಶಾವಾದದಿಂದಲೇ ಕೂಡಿ, ತಾವು ಮುನ್ನಡೆಸುತ್ತಿರುವ ಪಕ್ಷವನ್ನು ಬಲಗೊಳಿಸಲು ಸರ್ವಪ್ರಯತ್ನಗಳನ್ನು ಮಾಡಹೊರಟರು. ಈಗಾಗಲೇ ನೋಡಿರುವಂತೆ, ಇಂದಿರಾ ಗಾಂಧಿಯವರು ಮೈಸೂರಿನ ಕಾಂಗ್ರೆಸ್(ಓ) ಸರ್ಕಾರವನ್ನು ಅಸ್ಥಿರಗೊಳಿಸಲು ಅವಕಾಶಕ್ಕಾಗಿ ಕಾಯುತ್ತಿದ್ದರು. ಅಲ್ಲಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲರ ನಾಯಕತ್ವ ದಲ್ಲಿ ಆ ಪಕ್ಷವು ಅತ್ಯಂತ ಸುಭದ್ರವಾಗಿದ್ದಂತಿತ್ತು. ಜಪಾನ್‌ನ ಎಕ್ಸ್‌ಪೊ ಹೆಸರಿನಲ್ಲಿ ಇದಕ್ಕೆ ಸುಸಂದರ್ಭ ಒದಗಿತು. ಅತ್ಯಂತ ಆಧುನಿಕ ತಂತ್ರಜ್ಞಾನವನ್ನು ಪ್ರದರ್ಶಿಸುವ ಸಂದರ್ಭ ಇದಾಗಿತ್ತು. ಈ ಪ್ರದರ್ಶನವನ್ನು ಸಂದರ್ಶಿಸಲು ಯುವಜನತೆಯ ಒಂದು ನಿಯೋಗವನ್ನು ಸರ್ಕಾರದ ವೆಚ್ಚದಲ್ಲಿ ಕಳಿಸಿಕೊಡುವುದು ಸೂಕ್ತವೆಂದು ಪಾಟೀಲ್ ಭಾವಿಸಿದರು. ಒಂದು ನೂರು ಮಂದಿ ವಿದ್ಯಾರ್ಥಿಗಳನ್ನು ಆಯುವ ಯೋಜನೆಯಿತ್ತು. ಯೋಜನೆಯು ತನ್ನಲ್ಲಿಯೇ ಒಳ್ಳೆಯದಾಗಿದ್ದರೂ, ವಿದ್ಯಾರ್ಥಿಗಳನ್ನು ಆಯುವುದು ಹೇಗೆ ಎಂಬುದೇ ಸಮಸ್ಯೆಯಾಗಿತ್ತು. ರಾಜ್ಯದ ಪ್ರತಿ ವಿಶ್ವವಿದ್ಯಾಲಯದಿಂದ ಶೈಕ್ಷಣಿಕವಾಗಿ ಮುಂದಿದ್ದ ವಿದ್ಯಾರ್ಥಿಗಳ ಅಂದರೆ ಮೊದಲ ರ್‍ಯಾಂಕ್ ಪಡೆದ ಮತ್ತು ಕ್ರೀಡೆ ಮತ್ತು ಆಟಪಾಟಗಳಲ್ಲಿ ಮುಂದಿದ್ದ ವಿದ್ಯಾರ್ಥಿಗಳ ಗುಂಪನ್ನು ಆಯುವ ಆಲೋಚನೆಯಿತ್ತು. ಮಾನದಂಡ ಯಾವುದೇ ಆಗಿರಲಿ, ಆಯ್ಕೆಯ ಬಗ್ಗೆ ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ದೊಡ್ಡ ಪ್ರಮಾಣದ ಅಸಮಾಧಾನವುಂಟಾಗಲು ಕಾರಣಗಳಿದ್ದೇ ಇರುತ್ತವೆ. ಅಕ್ಷರಶಃ ಪಂಡೋರಾ ಪೆಟ್ಟಿಗೆಯನ್ನು ತೆಗೆದಂತೆಯೇ ಅದು! ಅತೃಪ್ತ ಜನರನ್ನು ಸೇರಿಸಿಕೊಂಡು ಸರ್ಕಾರಕ್ಕೆ ತಲೆ ಬೇನೆ ತರಲು ಈ ಅವಕಾಶವನ್ನು ಬಳಸಿಕೊಳ್ಳುವುದಕ್ಕೆ ವಿರೋಧ ಪಕ್ಷಗಳು ಆಲೋಚಿಸಿದವು. ಸರ್ಕಾರದ ವಿರುದ್ಧದ ಪ್ರತಿಭಟನೆಯ ಹಿಂದಿದ್ದವರು ಈಗ ಅಧಿಕಾರದಲ್ಲಿಲ್ಲದ ಕಾಂಗ್ರೆಸ್(ಐ) ನ ನಾಯಕರೊಬ್ಬರು ಎಂಬ ನಂಬಿಕೆಯಿದೆ. ಪ್ರತಿಭಟನೆಯಲ್ಲಿ ಹಿಂಸಾಚಾರಗಳು ನಡೆದವು, ದೊಂಬಿಗಳಾದುವು. ರಾಜ್ಯದಲ್ಲಿ ಕಾನೂನು

ವ್ಯವಸ್ಥೆ ಸಮಸ್ಯೆಯನ್ನು ಸೃಷ್ಟಿಸಿ ಕೇಂದ್ರ ಸರ್ಕಾರವು ಮಧ್ಯ ಪ್ರವೇಶ ಮಾಡಿ ರಾಜ್ಯ ಸರ್ಕಾರವನ್ನು ಕಿತ್ತೊಗೆಯುವ ಉದ್ದೇಶ ಇದರ ಹಿಂದಿದ್ದುದು. ನಿರ್ಣಯಗಳನ್ನು ಕೈಗೊಂಡರೂ ಅವುಗಳನ್ನು ಅನುಷ್ಠಾನಗೊಳಿಸಲಾರದ ಸ್ಥಿತಿಗೆ ಕಾಂಗ್ರೆಸ್ (ಓ) ಸಂಘಟನೆ ಇಳಿದಿತ್ತು. ಅದರ ಅಧ್ಯಕ್ಷರು, ಎಂದಿನಂತೆಯೇ ಆಶಾವಾದಿಗಳಾಗಿ, ಪಕ್ಷದ ಹಿತವನ್ನು ರಕ್ಷಿಸಲು ದೇಶಾದ್ಯಂತ ಬಿರುಗಾಳಿಯ ಪ್ರವಾಸ ಕೈಗೊಂಡರು. ೧೯೭೦ ರ ಜೂನ್‌ನಲ್ಲಿ ಮುಂಬಯಿಯಲ್ಲಿ ನಡೆದ ಎಐಸಿಸಿ (ಸಂಘಟನೆ) ಸಭೆಯನ್ನುದ್ದೇಶಿಸಿ ಮಾತನಾಡುತ್ತ ನಿಜಲಿಂಗಪ್ಪನವರು ಕಾಂಗ್ರೆಸ್ (ಐ) ನಡೆಸುತ್ತಿರುವ ಅಕ್ರಮಗಳ ಒಂದು ದೊಡ್ಡ ಪಟ್ಟಿ ಯನ್ನೇ ಸಭಿಕರ ಮುಂದಿಟ್ಟರು. ವಿಶೇಷವಾಗಿ ಪ್ರಜಾಸತ್ತಾತ್ಮಕ ಮೌಲ್ಯಗಳು ಹಾಗೂ ಸಂಸ್ಥೆಗಳ ನಾಶ, ಅಭಿವ್ಯಕ್ತಿ ಸ್ವಾತಂತ್ರ್ಯದ ಕಡಿತ, ರಾಷ್ಟ್ರೀಯ ಶಿಸ್ತಿನ ಕಣ್ಮರೆ, ಜನರ ರಾಜಕೀಯ ಪ್ರಜ್ಞೆಯ ವಿಕಾರ– ಇವುಗಳ ಕಡೆ ಅವರು ವಿಶೇಷ ಗಮನ ಸೆಳೆದರು. ಪರಿಸ್ಥಿತಿಯ ಸವಾಲನ್ನು ತಮ್ಮ ಪಕ್ಷವಿನ್ನೂ ಸಮಂಜಸ ರೀತಿಯಲ್ಲಿ ಎದುರಿಸಲಾಗಿಲ್ಲ ವೆಂಬುದನ್ನು ಈಚಿನ ಚುನಾವಣೆಗಳ ಫಲಿತಾಂಶವು ಸಿದ್ಧಪಡಿಸಿದೆ ಎಂದರು. ಪ್ರಧಾನ ಮಂತ್ರಿಗಳು ಹಾಗೂ ಅವರ ಗೆಳೆಯರ ಮೇಲೆ ಕ್ಷಿಪ್ರ ಶಿಸ್ತು ಕ್ರಮ ಕೈಗೊಳ್ಳದಿದ್ದುದು ದೊಡ್ಡ ಪ್ರಮಾದವಾಯಿತೆಂಬುದನ್ನೂ, ಇದರಿಂದಾಗಿ ಆಕೆಯ ಕೈಗಳಿಗೇ ಉಸಾಬರಿ ಇತ್ತಂತಾಯಿತೆಂಬುದನ್ನೂ ಅವರು ಒಪ್ಪಿಕೊಂಡರು. ಆದರೆ ಕೊನೆಯಲ್ಲಿ, ಪಕ್ಷವನ್ನು ಉಳಿಸಲು ಮತ್ತು ಬಲಗೊಳಿಸಲು ಈಗಲೂ ಕಾಲ ಮಿಂಚಿಲ್ಲವೆಂದು ಎಂದಿನ ಭರವಸೆ ಯಿಂದಲೇ ನುಡಿದರು. ಅದೇ ತಿಂಗಳು ಪಿಸಿಸಿ ಮತ್ತು ಡಿಸಿಸಿ ಅಧ್ಯಕ್ಷರುಗಳ ಸಭೆಯಲ್ಲಿ ಮಾತನಾಡುತ್ತ ಮುಂದಿನ ಚುನಾವಣೆಗಳಿಗೆ ಸಿದ್ಧರಾಗುವಂತೆ ಕರೆ ನೀಡಿದರು. ಆ ಬಳಿಕ ೧೯೭೦ರ ಡಿಸೆಂಬರ್‌ನಲ್ಲಿ, ಲಕ್ನೋದಲ್ಲಿ ನಡೆದ ಎಐಸಿಸಿ ಸಭೆಯಲ್ಲಿ ಮಾತ ನಾಡುತ್ತ, ಮಹಾಚುನಾವಣೆಗಳನ್ನು ೧೯೭೧ರ ಫೆಬ್ರವರಿಯಲ್ಲಿಯೇ ನಡೆಸುವ ಸಂಭವವಿದೆಯೆಂದೂ, ಅದಕ್ಕೆ ಎಲ್ಲರೂ ಸಿದ್ಧರಾಗಬೇಕೆಂದೂ ನುಡಿದರು. ಅಲ್ಪಸಂಖ್ಯಾತ ಸರ್ಕಾರವನ್ನು ನಡಸುವ ಅಪಾಯವನ್ನು ಕುರಿತು ಅವರು ಎಚ್ಚರಿಸಿದರು. ಸೂಕ್ತವೂ ತತ್ವನಿರ್ದೇಶಿತವೂ ಅದ ರೀತಿಯಲ್ಲಿ ಇತರ ಪಕ್ಷಗಳೊಡನೆ ಮೈತ್ರಿ ಬೆಳೆಸುವ ಆವಶ್ಯಕತೆ ಯನ್ನು ಕುರಿತು ಹೇಳಿದರು. 'ಭಾರತ ಉಳಿಸಿ, ಪ್ರಜಾಪ್ರಭುತ್ವ ಉಳಿಸಿ' ಘೋಷಣೆಯನ್ನು ಹಳ್ಳಿಹಳ್ಳಿಗೆ ತಲುಪಿಸುತ್ತಿರುವ ಕಾಮರಾಜರ ಪ್ರಯತ್ನವನ್ನವರು ಶ್ಲಾಘಿಸಿದರು.

೧೯೭೧ ಆರಂಭಗೊಳ್ಳುತ್ತಿದ್ದಂತೆಯೇ, ಎಲ್ಲ ಪಕ್ಷಗಳ ನಾಯಕರುಗಳು ಚುನಾ ವಣೆಯ ಜ್ವರಕ್ಕೆ ಸಿಲುಕಿದರು. ನಿಜಲಿಂಗಪ್ಪನವರ ಮಟ್ಟಿಗೆ, ಈ ಚುನಾವಣೆಯನ್ನು ತಮ್ಮ ಬದುಕಿನ ಕೊನೆಯ ಕದನವೆಂದು ಬಗೆದು, ಸತ್ಯ ಧರ್ಮಗಳ ಹೆಸರಿನಲ್ಲಿ ಹಾಗೂ ತಮ್ಮ ಜೀವಮಾನದ ನೈತಿಕ ಸಾಮರ್ಥ್ಯ ಮತ್ತು ಹೆಸರನ್ನು ಬಳಸಿಕೊಂಡು

ಹೋರಾಡಲು ಸಿದ್ಧರಾದರು. ತಮ್ಮ ಸರ್ವಸ್ವವನ್ನೂ ತಾವು ಮುನ್ನಡೆಸುತ್ತಿದ್ದ ಕಾಂಗ್ರೆಸ್ ಪಕ್ಷದ ಚುನಾವಣಾ ಹೋರಾಟಕ್ಕೆ ಸಮರ್ಪಿಸಿದರು. ಉಭಯತ್ರರಿಗೂ ಕನಿಷ್ಠ ಒಪ್ಪಿತ ಕಾರ್ಯಕ್ರಮಗಳ ಆಧಾರದ ಮೇಲೆ ಸಮಾನಮನಸ್ಕ ಪಕ್ಷಗಳೊಡನೆ ಚುನಾವಣಾ ಮೈತ್ರಿ ಮಾಡಿಕೊಳ್ಳಲು ಅವರು ಪ್ರಯತ್ನಿಸಿದರು. ೧೯೭೧ ನೇ ಜನವರಿ ೬ ರಂದು ಎಸ್.ಕೆ. ಪಾಟೀಲ್ ಮುಂಬಯಿಯಲ್ಲಿ ವ್ಯವಸ್ಥೆ ಮಾಡಿದ್ದ ಬೃಹತ್ ಸಭೆಯಲ್ಲಿ ನಿಜಲಿಂಗಪ್ಪ ಹಾಗೂ ಮೊರಾರ್ಜಿಯವರು ತಮ್ಮ ಪಕ್ಷದ ಧ್ಯೇಯೋದ್ದೇಶಗಳ ಬಗ್ಗೆ ಸಭಿಕರಿಗೆ ವಿವರವಾಗಿ ಪರಿಚಯ ಮಾಡಿಕೊಟ್ಟರು. ತಮ್ಮ ಸಭೆಗೆ ಹಾಜರಾಗಿದ್ದ ಅಧಿಕ ಸಂಖ್ಯೆಯ ಜನರನ್ನು ಕಂಡು ಕಾಂಗ್ರೆಸ್ (ಒ) ನಾಯಕರು ಹರ್ಷಗೊಂಡರು. ರಾಜಕೀಯ ಅನಿವಾರ್ಯದಿಂದಲೋ ಅಥವಾ ತಮ್ಮ ಜ್ಯೋತಿಷಿಗಳ ಸಲಹೆಯ ಮೇರೆಗೋ ಅಂತೂ ಇಂದಿರಾ ಗಾಂಧಿಯವರು ಈ ಮಧ್ಯೆ ಚುನಾವಣೆಗಳನ್ನು ಮುಂದೂಡಿದರು. ಇದರಿಂದ ಪ್ರತಿಸ್ಪರ್ಧಿ ಕಾಂಗ್ರೆಸ್‌ನಲ್ಲಿ ಕೊಂಚ ಗಲಿಬಿಲಿ ಸೃಷ್ಟಿಯಾಯಿತು. ಪ್ರಾಯಶಃ ಚುನಾವಣೆಗಳ ಮುಂದೂಡಿಕೆಯ ಹಿಂದಿದ್ದ ಪ್ರಧಾನ ಮಂತ್ರಿಗಳ ಇರಾದೆಯೂ ಇದೇ ಆಗಿದ್ದೀತು. ಆದರೆ ನಿಜಲಿಂಗಪ್ಪನವರು ಮಾತ್ರ ಅಭ್ಯರ್ಥಿಗಳ ಆಯ್ಕೆ, ಪ್ರಚಾರ, ಚುನಾವಣಾ ತಂತ್ರಗಳು, ಮತ್ತು ನಿಧಿ ಸಂಗ್ರಹಣೆಗಳಂತಹ ಚುನಾವಣಾ ಸಿದ್ಧತೆಯ ಮೇಲಿನ ತಮ್ಮ ಹಿಡಿತವನ್ನು ಸಡಿಲಗೊಳಿಸಲಿಲ್ಲ. ನಿಧಿಗಾಗಿ ಕೇಳಿಕೊಂಡು ಹೋದಾಗ ಕೈಗಾರಿಕೋದ್ಯಮಿಗಳು ಕೈ ಅಲ್ಲಾಡಿಸಿಬಿಟ್ಟರು. ಎಷ್ಟೇ ಆಗಲಿ ಅವರೆಲ್ಲ ವ್ಯವಹಾರಸ್ಥರು, ಲಾಭದ ಮೇಲೆ ಕಣ್ಣಿಟ್ಟವರು, ಹೀಗಾಗಿ ಗೆಲ್ಲುವ ಕುದುರೆ ಯಾವುದೆಂದು ಬಲ್ಲ ಅವರು ಇಂದಿರಾ ಅವರನ್ನು ಬೆಂಬಲಿಸಿದರು. ಸಾಹುಕಾರರನ್ನು ನಿಯಂತ್ರಿಸಿ ಬಡವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದ ಅವರ ಬ್ಯಾಂಕ್ ರಾಷ್ಟ್ರೀಕರಣ ನೀತಿಯಿಂದಾಗಿ ಸಿರಿವಂತರು ಅವರನ್ನು ಬೆಂಬಲಿಸುಂತಿರಲಿಲ್ಲ, ಆದರೆ ಅವರಿಗೂ ಇಂದಿರಾ ಗಾಂಧಿಯವರಿಗೂ ತಿಳಿದಿದ್ದ ಸತ್ಯವೆಂದರೆ ಇಡೀ ಕ್ರಾಂತಿಕಾರಿ ವೇಷವು ಜನಸಾಮಾನ್ಯರ ಮೇಲೆ ಮಂಕುಬೂದಿ ಎರಚುವ ಗುರಿಯದಾಗಿತ್ತು. ಹೀಗಾಗಿ, ಅವರ ಪಕ್ಷದ ನಿಧಿಗೆ ಉದಾರ ದೇಣಿಗೆ ನೀಡಲು ಅವರಾರೂ ಹಿಂಜರಿಯಲಿಲ್ಲ. ನಿಜಲಿಂಗಪ್ಪನವರು ಬರೆದಿರುವ ದಿನಚರಿಯ ೧೯೭೧ನೇ ಮಾರ್ಚ್ ೮ರ ದಾಖಲೆಯಲ್ಲಿ, ಸಿರಿವಂತರು ಎಂದಿಗೂ ಹೇಡಿಗಳು ಅವರು ಬೆಂಬಲಿಸುವುದು ಸದಾ ಅಧಿಕಾರಸ್ಥ ಜನರನ್ನು ಎಂದಿದ್ದಾರೆ. ೧೯೭೧ರ ಮಾರ್ಚ್ ೯ ರಂದು ಮತ ಎಣಿಕೆ ಕಾರ್ಯ ಆರಂಭಗೊಂಡಿತು, ಮೊದಲ ಫಲಿತಾಂಶಗಳು ಕಾಂಗ್ರೆಸ್ (ಒ) ಮುಖದ ಮೇಲೆ ಮ್ಲಾನತೆಯನ್ನು ತಂದಿತು. ಇಂದಿರಾ ಗಾಂಧಿಯವರು ಉತ್ತಮ ಫಲಿತಾಂಶ ತೋರುತ್ತಾರೆ ಎಂಬುದು ನಿಜಲಿಂಗಪ್ಪನವರಿಗೆ ಗೊತ್ತಿತ್ತು, ಏಕೆಂದರೆ ಕೋಟ್ಯಂತರ ರೂಪಾಯಿ

ವೆಚ್ಚ ಮಾಡಿದ್ದರು, ಅವರ ಪಕ್ಷದ ಸಾವಿರಾರು ಜೀಪುಗಳು ಭರಾಟೆಯಿಂದ ಓಡಾಡಿದ್ದವು. ಸರ್ಕಾರೀ ನಿಯಂತ್ರಣದ ಆಕಾಶವಾಣಿಯಲ್ಲಿ ಅವರ ಪಕ್ಷದ ಪರವಾದ ಮಾತುಗಳು ನಿರಂತರವಾಗಿ ಝೇಂಕರಿಸಿದ್ದುವು, ಎಲ್ಲ ನಗರ ಪಟ್ಟಣಗಲ್ಲಿ ಆಕೆಯ ಮುಗುಳ್ನಗೆಯ ಚಿತ್ರಗಳು ರಾರಾಜಿಸಿದ್ದುವು. ಆದರೆ ತಾವು ಮಾಡಿಕೊಂಡಿದ್ದ ಚುನಾವಣಾ ಮೈತ್ರಿಯ ಕಾರಣದಿಂದಾಗಿ ತಮ್ಮ ಪಕ್ಷಕ್ಕೆ ಕನಿಷ್ಠ ಇನ್ನೂರು ಸ್ಥಾನಗಳು ಲಭಿಸುವುವೆಂದು ಅವರು ನಿರೀಕ್ಷಿಸಿದ್ದರು. ತಮ್ಮ ಪಕ್ಷವು ಮದರಾಸಿನಲ್ಲಿ ಬಹುಮತವನ್ನು ಪಡೆದು ಸರ್ಕಾರವನ್ನು ರಚಿಸುವ ಸ್ಥಿತಿಯಲ್ಲಿರುತ್ತದೆಂದೂ ಅವರು ನಿರೀಕ್ಷಿಸಿದ್ದರು! ಆದರೆ, ೧೯೭೧ ರ ಮಾರ್ಚ್ ಹತ್ತರ ಸಾಯಂಕಾಲದ ವೇಳೆಗೆ ಅಂತಿಮವಾಗಿ ಎಲ್ಲ ಸ್ಥಾನಗಳ ಫಲಿತಾಂಶ ಪ್ರಕಟ ಗೊಂಡ ಬಳಿಕ, ಕಾಂಗ್ರೆಸ್ (ಓ) ಮಾತ್ರವಲ್ಲ, ಇಡೀ ವಿರೋಧ ಪಕ್ಷವೇ ಪೂರ್ತಿ ನಾಶವಾಗಿತ್ತು. ಅಂದಿನ ತೇದಿಯಲ್ಲಿ ಬರೆದ ತಮ್ಮ ದಿನಚರಿಯಲ್ಲಿ, ಇಂದಿರಾ ಕಾಂಗ್ರೆಸ್ ಅಥವಾ ಕಾಂಗ್ರೆಸ್ (ಐ) ಹೊರತು ಉಳಿದ ಪಕ್ಷಗಳೆಲ್ಲ ಹುಡಿಗುಟ್ಟಿ ಹೋದುವು, ಇಂದಿರಾ ಗಾಂಧಿಯವರ ಪ್ರಭಾವವು ಕಾಳ್ಗಿಚ್ಚಿನಂತೆ ಎಲ್ಲೆಡೆಯೂ ಹರಡಿತ್ತು ಎಂಬುದನ್ನು ಒಪ್ಪಿಕೊಂಡಿದ್ದಾರೆ. ಎಸ್.ಕೆ. ಪಾಟೀಲ್, ಅಶೋಕ ಮಹ್ತಾ, ಸಂಜೀವ ರೆಡ್ಡಿ, ತಾರಕೇಶ್ವರಿ ಸಿನ್ಹಾ ಮತ್ತು ರಾಂ ಸುಭಾಗ್ ಸಿಂಗ್ ಅಂತಹ ಅತಿರಥರು ಸೋತಿರುವುದು ಆಶ್ಚರ್ಯ ತಂದರೂ ನಿಜವೆಂದು ಹೇಳಿದ್ದಾರೆ. ಈ ಆಶ್ಚರ್ಯಕರ ಸನ್ನಿವೇಶಕ್ಕೆ ಕಾರಣವೇನಿರಬಹು ದೆಂಬುದನ್ನು ಕರಿತು ಆಲೋಚನೆ ಮಾಡಿದ್ದಾರೆ. ಈ ಅದ್ಭುತ ವಿಜಯಕ್ಕೆ ಕಾರಣ ಹಣಬಲವೋ, ಕೌಶಲಪೂರ್ಣ ಪ್ರಚಾರವೋ, ಪರಿಣಾಮಕಾರಿ ಮಾತುಗಳೋ ಅಥವಾ ಶುದ್ಧ ಅದೃಷ್ಟವೋ ಎಂದು ಚಿಂತಿಸಿದ್ದಾರೆ. ಆದರೆ ಯಾವುದೆಂದು ನಿರ್ದಿಷ್ಟಪಡಿಸಲಾರದೆ, ಪ್ರಾಯಶಃ ಇವೆಲ್ಲದರ ಒಟ್ಟಂದ ಎಂಬ ತಿರ್ಮಾನಕ್ಕೆ ಬಂದಿದ್ದಾರೆ. ಇಂದಿರಾ ಗಾಂಧಿ ಯವರಿಗೆ ಲೋಕಸಭೆಯಲ್ಲಿ ಮೂರನೇ ಎರಡರಷ್ಟು ಬಹುಮತ ಲಭ್ಯವಾಯಿತು. ಅವರ ಜನಪ್ರಿಯ ಘೋಷಣೆಗಳಾದ ಬಡತನ ನಿರ್ಮೂಲನೆ ಮತ್ತು ಮುಸ್ಲಿಂ ಹಾಗೂ ಹರಿಜನರ ಮತಗಳು ಈ ಅದ್ಭುತ ವಿಜಯದ ಹಿಂದೆ ಕೆಲಸಮಾಡಿರಬಹುದಾದ ಕಾರಣ ಗಳು. ಇಂಥ ಪ್ರಚಂಡ ಬಹುಮತದೊಡನೆ ಅವರು ತಮಗೆ ಬೇಕಾದ್ದನ್ನೆಲ್ಲ ಮಾಡಬಹು ದಿತ್ತು. ಕಾಂಗ್ರೆಸ್ (ಓ) ನಾಯಕರು ತಮ್ಮ ವೈಫಲ್ಯದ ಕಾರಣಗಳನ್ನು ಹುಡುಕುತ್ತಿದ್ದರು. ಕಾಮರಾಜರು ಇತರರಿಗಿಂತ ಹೆಚ್ಚು ಮ್ಲಾನರಾಗಿದ್ದರು, ಅದಕ್ಕೆ ಕಾರಣ ತಮ್ಮ ರಾಜ್ಯದಲ್ಲಿ, ಡಿಎಂಕೆ ವಿಜಯ ಸಾಧಿಸಿತ್ತು. ಕಾಂಗ್ರೆಸ್ (ಓ) ಕಾರ್ಯಕಾರಿ ಸಮಿತಿಯು ೧೯೭೧ನೇ ಮಾರ್ಚ್ ೧೩ ಮತ್ತು ೧೪ ರಂದು ಸಭೆ ಸೇರಿ ಚುನಾವಣಾ ಪಂಚನಾಮೆ ಮಾಡಿತು. ಮೋಸದ ಮಾರ್ಗದಿಂದ ಚುನಾವಣಾ ಗೆಲುವನ್ನು ಸಾಧಿಸರಬಹುದೆಂದು ಅದು ಅಭಿಪ್ರಾಯಪಟ್ಟಿತು. ಆದರೆ ಪಕ್ಷವು ನೆಲಮಟ್ಟಕ್ಕೆ ಕುಸಿದಿತ್ತು, ಬಹುಮಂದಿ ಸದಸ್ಯರು

ಇಂದಿರಾ ಗಾಂಧಿಯವರ ಬಗ್ಗೆ ಭಯಭೀತರಾಗಿದ್ದರಲ್ಲದೆ ಹೇಡಿಗಳಂತೆಯೂ ಸ್ವಾರ್ಥಿಗಳಂತೆಯೂ ಪಕ್ಷ ತೊರೆಯುವ ಆಲೋಚನೆಯಲ್ಲಿದ್ದರು. ಹೀಗಾಗಿ, ಇತರ ಪಕ್ಷಗಳೊಡನೆ ವಿಲೀನಗೊಳ್ಳದೆ ತಮ್ಮದನ್ನು ಬಲಪಡಿಸಬೇಕೆಂಬ ಅದರ ನಿರ್ಣಯಕ್ಕೆ ಹೆಚ್ಚು ಅರ್ಥವೇನೂ ಉಳಿಯಲಿಲ್ಲ. ವೀರೇಂದ್ರ ಪಾಟೀಲರ ಸ್ಥಿತಿ ಅಲುಗಾಡುವಂತಹುದಾಯಿತು. ಎಲ್ಲೆಲ್ಲೂ ಪಕ್ಷದ ಸಂರಚನೆಯಲ್ಲಿ ಬಿರುಕು ಕಾಣಿಸಿಕೊಂಡು ಅಶಿಸ್ತು ತಾಂಡವವಾಡತೊಡಗಿತು. ಈ ಬೆಳವಣಿಗೆಗಳನ್ನು ಪ್ರೋತ್ಸಾಹಿಸಲು ಪ್ರಧಾನ ಮಂತ್ರಿಗಳು ಕೈಲಾದ ಪ್ರಯತ್ನಗಳನ್ನು ಮಾಡಿದರು. ತಮ್ಮ ಸಂಪುಟದ ರಾಜೀನಾಮೆಯನ್ನು ಪಾಟೀಲರು ೧೯೭೧ ನೇ ಮಾರ್ಚ್ ೧೮ ರಂದು ರಾಜ್ಯಪಾಲರಿಗೆ ಸಲ್ಲಿಸಿದರು. ಆನಂತರ ಇಡೀ ದೇಶಾದ್ಯಂತ ಕಾಂಗ್ರೆಗೆ ಪಕ್ಷಾಂತರ ವ್ಯಾಪಕವಾಯಿತು. ಕಾಂಗ್ರೆಸ್ (ಓ)ಗೆ ರಾಷ್ಟ್ರೀಯ ಪಕ್ಷವಾಗಿ ಯಾವುದೇ ಭವಿಷ್ಯವಿಲ್ಲವೆಂಬುದು ಬಹು ಬೇಗ ಮನವರಿಕೆಯಾಯಿತು. ಮೈಸೂರಿನ ನಾಯಕರುಗಳಾದ ಪಾಟೀಲ್ ಮತ್ತು ರಾಜಶೇಖರ ಮೂರ್ತಿ ಪ್ರಾದೇಶಿಕ ಪಕ್ಷವೊಂದನ್ನು ಸ್ಥಾಪಿಸುವ ಕುರಿತು ಆಲೋಚಿಸತೊಡಗಿದರು. ಆದರೆ ನಿಜಲಿಂಗಪ್ಪನವರು ಮಾತ್ರ ತಮ್ಮ ಪಕ್ಷದ ಬಗ್ಗೆ ಇರಿಸಿಕೊಂಡಿದ್ದ ಬದ್ಧತೆಯ ಬಗ್ಗೆ ದೃಢವಾಗಿದ್ದರು, ತಮ್ಮೆಲ್ಲ ಸಾಮರ್ಥ್ಯ ಸಂಪನ್ಮೂಲಗಳನ್ನೂ ಪಕ್ಷಕ್ಕೆ ಧಾರೆಯೆರೆದರು. ಆದರೆ ತಾವು ಮೈಸೂರಿನಲ್ಲಿ ಮೊದಲು ರಾಜಕೀಯಕ್ಕೆ ತಂದು ರೂಪಿಸಿದ್ದ ನಾಯಕರುಗಳು ಕೂಡ ತಮ್ಮ ಪಕ್ಷವನ್ನು ತೊರೆಯುವ ಹಾಗಿರುವುದನ್ನು ಕಂಡು ಹತಾಶೆಗೊಂಡರು. ಆದರೆ ರಾಮಕೃಷ್ಣ ಹೆಗಡೆ ಮತ್ತು ಗುರುಪಾದಸ್ವಾಮಿಯವರಂತಹ ಕಡುನಿಷ್ಠೆಯವರೂ ಇದ್ದರು, ಭರವಸೆಯನ್ನು ಕಳೆದುಕೊಳ್ಳದೆ ಪಕ್ಷವನ್ನು ಬಲಪಡಿಸಲು ಕೇಳಿಕೊಂಡರು. ನಿಜಲಿಂಗಪ್ಪನವರು ರಾಮಕೃಷ್ಣ ಹೆಗಡೆಯವರನ್ನೇ ಪಿಸಿಸಿ ಅಧ್ಯಕ್ಷರಾಗಿ ಆಯ್ಕೆಮಾಡಿದರು, ಆದರೆ ಆರೋಗ್ಯದ ಸಮಸ್ಯೆಗಳಿದ್ದ ಪ್ರಯುಕ್ತ ಹೆಗಡೆಯವರು ಆ ಹೊಣೆಗಾರಿಕೆಯನ್ನು ಹೊರಲಾಗಲಿಲ್ಲ. ಕೊನೆಗೆ ಆ ಜವಾಬ್ದಾರಿಯನ್ನು ಪಾಟೀಲ್ ಹೊತ್ತರು.

ದೊಡ್ಡ ಉದ್ದೇಶಕ್ಕೆ ತಮ್ಮ ಸ್ವಂತದ್ದನ್ನು ಬದಿಗಿರಿಸುವಲ್ಲಿ ತಮ್ಮ ಅಸಾಧಾರಣ ಸಾಮರ್ಥ್ಯದಿಂದಾಗಿ, ನಿಜಲಿಂಗಪ್ಪನವರು ಪಕ್ಷದ ಅಧ್ಯಕ್ಷ ಹುದ್ದೆಯನ್ನು ಕಿರಿಯ ಪೀಳಿಗೆಯವರಿಗೆ ವಹಿಸಿಕೊಡಲು ಆಲೋಚಿಸಿದರು. ಅವರು ಪಕ್ಷಕ್ಕೆ ನವಚೈತನ್ಯವನ್ನೂ ಯುವ ಶಕ್ತಿಯನ್ನೂ ತುಂಬಿ ಪಕ್ಷ ಕುಸಿಯುವುದನ್ನು ತಡೆಯಬಹುದೆಂಬುದು ಅವರ ಆಸೆಯಾಗಿತ್ತು. ೧೯೭೧ರ ಏಪ್ರಿಲ್ ೧೧ ರಂದು ಅವರು ಕಾಮರಾಜರನ್ನು ಭೇಟಿಯಾಗಿ ಈ ವಿಷಯ ಪ್ರಸ್ತಾಪಿಸಿದರು. ಕಾಮರಾಜರೇನೋ ಇದಕ್ಕೆ ಒಪ್ಪಿದರು, ಆದರೆ ಪಕ್ಷದ ಹಣಕಾಸಿನ ದುಸ್ಥಿತಿಯ ಕಾರಣ ಜವಾಬ್ದಾರಿಯನ್ನು ಹೊರಲು ಯುವಕರಾರೂ ಮುಂದೆ

ಬರಲಿಲ್ಲ. ಹಿರಿಯರು ನಿಧಿ ಸಂಗ್ರಹಣೆಯ ಜವಾಬ್ದಾರಿ ಹೊತ್ತರೆ ನಿಜಲಿಂಗಪ್ಪನವರಿಗೆ ಬದಲಿಯನ್ನು ಹುಡುಕುವುದು ಸುಲಭವಾಗುತ್ತಿತ್ತು. ಆದರೆ ಅತುಲ್ಯ ಘೋಷ್ ಮತ್ತು ಸಂಜೀವರೆಡ್ಡಿಯವರಂತಹ ಹಿರಿಯ ನಾಯಕರ ಹೆಚ್ಚುತ್ತಿದ್ದ ನಿರಾಸಕ್ತಿ, ಅವರಿಗೆ ಚುನಾವಣೆಯ ಸೋಲಿನಿಂದ ಭ್ರಮನಿರಸನವಾಗಿತ್ತು. ಮೇ ತಿಂಗಳ ಮಧ್ಯದಲ್ಲಿ ಮುಂಬಯಿಯಲ್ಲಿ ನಡೆದ ಪಕ್ಷದ ಎಐಸಿಸಿ ಸಭೆಯು ಕಾಂಗ್ರೆಸ್ (ಓ) ಪಕ್ಷದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಕೊನೆಯ ಅಧಿಕೃತ ಸಭೆಯಾಯಿತು. ನಿಜಲಿಂಗಪ್ಪನವರೇ ತಮ್ಮ ಉತ್ತರಾಧಿಕಾರಿಯನ್ನು ಹೆಸರಿಸಬೇಕೆಂದು ಎಐಸಿಸಿ ಒಮ್ಮತದಿಂದ ಅಭಿಪ್ರಾಯಪಟ್ಟಿತು. ಹುದ್ದೆ ಮತ್ತು ಸ್ಥಾನಮಾನಗಳಿಗಾಗಿ ಮನುಷ್ಯ ಹೆಣಗುವ ಪರಿ ಇಂಥದೇ: ಮುಳುಗುತ್ತಿದ್ದ ಪಕ್ಷದ ಅಧ್ಯಕ್ಷರೇ ಸ್ಪರ್ಧೆಯ ಗುರಿಯಾದರು! ಎಸ್.ಕೆ. ಪಾಟೀಲ್, ಸಿ.ಬಿ. ಗುಪ್ತ, ಮೊರಾರ್ಜಿ ಮತ್ತು ಕಾಮರಾಜರು ಕೂಡ ತಮ್ಮ ರಕ್ಷಣೆಗೆ ಪ್ರಚಾರ ಕೈಗೊಳ್ಳುವಂತಾಯಿತು! ಕಾಮರಾಜ್ ಮತ್ತು ಮೊರಾರ್ಜಿಯವರ ನಡುವೆ ಪಕ್ಷದಲ್ಲಿ ಪ್ರಾಬಲ್ಯ ಸ್ಥಾಪಿಸಿಕೊಳ್ಳಲು ಬಿರುಸಿನ ಪೈಪೋಟಿ ನಡೆಯಿತು. ಕಾಮರಾಜರು ರಾಂ ಸುಭಾಗ್ ಸಿಂಗ್‌ರ ಸ್ಪರ್ಧೆಯನ್ನು ಬೆಂಬಲಿಸಿದರು, ಮೊರಾರ್ಜಿ ಅದನ್ನು ತೀವ್ರವಾಗಿ ಪ್ರತಿರೋಧಿಸಿದರು. ಆದರೆ ಈ ತಿಕ್ಕಾಟದಲ್ಲಿ ನಿಜಲಿಂಗಪ್ಪನವರು ಸಿಲುಕಿಕೊಳ್ಳಲಿಲ್ಲ. ಸದಸ್ಯರ ಅಭಿಪ್ರಾಯವನ್ನು ಗಮನಿಸಿ, ರಾಮ ಸುಭಾಗ್ ಸಿಂಗ್ ಅವರು ಬಹುಜನರ ಬೆಂಬಲವನ್ನು ಪಡೆದಿಲ್ಲವೆಂದು ತಿಳಿದು, ಅವರು ಸಾದಿಕ್ ಆಲಿಯವರ ಹೆಸರನ್ನು ಸೂಚಿಸಿದರು. ಮೊದಮೊದಲು ಆಲಿಯವರು ಇದಕ್ಕೆ ವಿರೋಧ ವ್ಯಕ್ತಪಡಿಸಿದರು. ಆದರೆ ಅವರ ಮನವೊಲಿಸುವಲ್ಲಿ ಎಸ್.ಕೆ. ಪಾಟೀಲ್ ಮತ್ತು ನಿಜಲಿಂಗಪ್ಪ ಸಫಲರಾದರು. ಅವರು ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾದರು, ನಿಜಲಿಂಗಪ್ಪನವರ ಅಧಿಕಾರದ ಹೊರೆಯನ್ನು ಕೆಳಗಿಳಿಸಿದರು. ಸದಸ್ಯರು ಹೊಸ ಅಧ್ಯಕ್ಷರನ್ನು ಬಾಯಿತುಂಬ ಹೊಗಳಿದರು, ಹಾಗೆಯೇ ನಿರ್ಗಮಿಸುತ್ತಿರುವ ಅಧ್ಯಕ್ಷರ ಬಗ್ಗೆಯೂ ಒಳ್ಳೆಯ ಮಾತುಗಳನ್ನಾಡಿದರು. ಅದರಲ್ಲೂ ಪಾಟೀಲರು ನಿಜಲಿಂಗಪ್ಪನವರನ್ನು ಕಗ್ಗತ್ತಲ ಕಾಲದಲ್ಲಿ ಪಕ್ಷವನ್ನು ಕಾಪಾಡಿದರೆಂದು ಮನಸಾರೆ ಕೊಂಡಾಡಿದರು. ಸತ್ಯ ಮತ್ತು ನಿಷ್ಪಕ್ಷಪಾತ ಗುಣಗಳ ಪಾಲನೆಗಾಗಿ ನಿಜಲಿಂಗಪ್ಪನವರನ್ನು ಸಾದಿಕ್ ಆಲಿ ಶ್ಲಾಘಿಸಿದರು. ಅಧ್ಯಕ್ಷ ಸ್ಥಾನದಿಂದ ನಿರ್ಗಮಿಸಿದ ತಕ್ಷಣವೇ ನಿಜಲಿಂಗಪ್ಪನವರು ಧಾರವಾಡದಲ್ಲಿನ ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ಕೊಂಚ ಕಾಲ ವಿಶ್ರಾಂತಿ ತೆಗೆದುಕೊಳ್ಳಲು ಬಂದರು. ಅಲ್ಲಿ ಅವರ ಮಗ ಉಮಾಕಾಂತ್ ಭೌತಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. ತಮ್ಮ ಜೀವಮಾನದಲ್ಲಿ ಮೊದಲ ಬಾರಿಗೆ ಅವರು ಅಲ್ಲಿನ ಪ್ರಶಾಂತ ವಾತಾವರಣದ ಸವಿಯನ್ನು ಅನುಭವಿಸಿದರು! ತಮ್ಮ ಬದುಕನ್ನು ಕುಟುಂಬಕ್ಕೆ, ಹೆಂಡತಿ ಮಕ್ಕಳು ಮತ್ತು ಮೊಮ್ಮಕ್ಕಳು ಇವರೊಡನೆ, ಸೀಮಿತಗೊಳಿಸಿ

ಕೊಳ್ಳಲು ಮೊದಲ ಬಾರಿಗೆ ಅವರು ಪ್ರಯತ್ನಿಸಿದರು. ಆದರೆ ಅವರು ಸುಮ್ಮನಾಗಲು ಸಾಧ್ಯವಾಗಲಿಲ್ಲ, ಚುನಾವಣೆಯ ವೆಚ್ಚದಿಂದಾಗಿ ಋಣಭಾರ ಹೊತ್ತಿದ್ದ ಪಕ್ಷಕ್ಕಾಗಿ ನಿಧಿ ಸಂಗ್ರಹಣೆಯು ತಮ್ಮ ಕರ್ತವ್ಯವೆಂದವರು ಭಾವಿಸಿದರು. ಈ ವಿಷಯಕ್ಕಾಗಿ ಕಲ್ಕತ್ತ, ಲಕ್ನೋ ಮತ್ತು ಮುಂಬಯಿಗಳನ್ನು ಸಂದರ್ಶಿಸಲು ಆಲೋಚಿಸಿದರು. ಈ ಮಧ್ಯೆ, ಸಂಜೀವರೆಡ್ಡಿಯವರು ಕಾರ್ಯಕಾರಿ ಸಮಿತಿ ಸದಸ್ಯತ್ವಕ್ಕೆ ರಾಜೀನಾಮೆಯಿತ್ತಿದ್ದ ವಿಷಯ ಆಕಾಶವಾಣಿ ಸುದ್ದಿಯ ಮೂಲಕ ಅವರ ಕಿವಿಗೆ ಬಿದ್ದುದರಿಂದ ಅವರ ಮನಸ್ಸಿಗೆ ತುಂಬ ನೋವಾಯಿತು. ಒಂದು ರೀತಿಯಲ್ಲಿ ಅದರಿಂದ ಅವರಿಗೆ ಸಮಾಧಾನವೂ ಆಯಿತು, ಅದಕ್ಕೆ ಕಾರಣ ರೆಡ್ಡಿಯವರು ಹೊಂದಾಣಿಕೆಯ ವ್ಯಕ್ತಿಯಾಗಿರಲಿಲ್ಲ ಎಂಬುದು. ತಾವು ಸಮಾಜವಾದದ ಕಡೆ ಒಲವು ಪಡೆದಿರುವುದೇ ರಾಜೀನಾಮೆಗೆ ಕಾರಣವೆಂದು ರೆಡ್ಡಿ ವಿವರಿಸಿದರು. ರೆಡ್ಡಿಯವರನ್ನು ಲೋಕಸಭೆಯ ಅಧ್ಯಕ್ಷರಾಗಿ ಮಾಡಲು ತಾವು ಇಂದಿರಾ ಗಾಂಧಿಯವರ ಜೊತೆ ವಿರಸ ಕಟ್ಟಿಕೊಂಡ ಸಂದರ್ಭವು ಅವರ ನೆನಪಿಗೆ ಬಂತು. ಇದು ನಡೆದದ್ದು ೧೯೬೭ರಲ್ಲಿ. ಇಂದಿರಾ ಗಾಂಧಿಯವರು ರೆಡ್ಡಿಯವರನ್ನು ಅನಪೇಕ್ಷಣೀಯರೆಂದು ತಮ್ಮ ಸಂಪುಟದಿಂದ ಕೈಬಿಟ್ಟಿದ್ದರು. ಅವರಿಗೆ ಸಭಾಧ್ಯಕ್ಷ ಸ್ಥಾನವನ್ನು ನೀಡುವಂತೆ ಇಂದಿರಾ ಗಾಂಧಿಯವರ ಮನವೊಲಿಸಿದ್ದು ನಿಜಲಿಂಗಪ್ಪನವರೇ. ಆದರೆ ಎಂದಿನಂತೆ ಅವರು ಒಂದನ್ನು ಹೇಳಿ ಇನ್ನೊಂದನ್ನು ಮಾಡಿದ್ದರು! ರೆಡ್ಡಿಯವರು ತಮ್ಮ ನಾಮಪತ್ರವನ್ನು ಸಲ್ಲಿಸಿದಾಗ, ಇಂದಿರಾ ಗಾಂಧಿಯವರು ತಮ್ಮ ಇನ್ನೊಬ್ಬ ಸಹೋದ್ಯೋಗಿಯನ್ನು ನಾಮಪತ್ರ ಸಲ್ಲಿಸಲು ಪ್ರೋತ್ಸಾಹಿಸಿದ್ದರು. ಹೀಗಾಗಿ ಚುನಾವಣೆ ಅನಿವಾರ್ಯವಾಯಿತು. ನಿಜಲಿಂಗಪ್ಪನವರ ಅದೃಷ್ಟದಿಂದ, ಸ್ಪರ್ಧೆಯಲ್ಲಿ ರೆಡ್ಡಿ ಭಾರಿ ಬಹುಮತದಿಂದ ಗೆದ್ದರು. ತಮ್ಮನ್ನು ಪಕ್ಷದ ಕೋಶಾಧಿಕಾರಿಗಳಾಗಿರಲು ಸಾದಿಕ್ ಆಲಿಯವರು ಕೇಳಿಕೊಂಡದ್ದರಿಂದ ನಿಜಲಿಂಗಪ್ಪನವರ ಹೆಗಲಿಗೆ ಮತ್ತೊಂದು ಜವಾಬ್ದಾರಿ ಬೀಳುವಂತಾಯಿತು. ವೀರೇಂದ್ರ ಪಾಟೀಲ್ ಮತ್ತಿತರರು ನಿಜಲಿಂಗಪ್ಪನವರನ್ನು ಭೇಟಿಯಾಗಿ, ಹಿರಿಯ ನಾಯಕರು ಮಧ್ಯರಂಗದಿಂದ ಹಿಂದೆ ಸರಿದು ಪಕ್ಷದ ಪುನರುಜ್ಜೀವನಕ್ಕೆ ಸಹಕರಿಸಬೇಕೆಂದು ಕೇಳಿಕೊಂಡರು. ಅಂದರೆ ಹಿರಿಯ ನಾಯಕರು ಪಕ್ಷದ ಪ್ರಗತಿಗೆ ಅಡ್ಡಗಾಲು ಎಂದು ಕಿರಿಯ ಸದಸ್ಯರು ಭಾವಿಸುತ್ತಾರೆ ಎಂಬುದು ನಿಜಲಿಂಗಪ್ಪನವರಿಗೆ ಅರಿವಾಯಿತು. ಅವರ ಅನೇಕ ಗೆಳೆಯರು ಇಂದಿರಾ ಕಾಂಗ್ರೆಸ್‌ಗೆ ಹೋಗುವ ಆಸೆಯನ್ನು ವ್ಯಕ್ತಪಡಿಸಿದರು. ಒಟ್ಟಿನಲ್ಲಿ, ನಿಜಲಿಂಗಪ್ಪನವರಿಗೆ ತಮ್ಮ ಪಕ್ಷದ ಸದಸ್ಯರ ಬಗ್ಗೆ ಸಂಪೂರ್ಣ ಭ್ರಮನಿರಸನವುಂಟಾಯಿತು. ಅಧಿಕಾರ, ಸ್ಥಾನ ಮತ್ತು ಹಣಗಳಿಗಾಗಿ ಅವರೆಲ್ಲ ಸತ್ಯ, ನ್ಯಾಯ ಮತ್ತು ಪ್ರಾಮಾಣಿಕತೆಗಳನ್ನು ಬಲಿಗೊಡಲು ತಯಾರಾಗಿರುವರೆಂಬುದು ಅವರಿಗೆ ಅರಿವಾಯಿತು. ವೀರೇಂದ್ರ

ಪಾಟೀಲರಿಗೆ ಸ್ಥಾನ ಮತ್ತು ಅಧಿಕಾರಿಗಳ ಮೇಲೆ ಕಣ್ಣಿದೆಯೇ ವಿನಾ ಪಕ್ಷದ ಪುನರುಜ್ಜೀವನದಲ್ಲಲ್ಲ ಎಂದು ಪತ್ರಕರ್ತ ಗೆಳೆಯರೊಬ್ಬರು ಹೇಳಿದಾಗ ನಿಜಲಿಂಗಪ್ಪನವರು ನಿರಾಸೆಗೊಂಡರು. ವಾಸ್ತವವಾಗಿ, ಪಾಟೀಲರು ಮತ್ತು ನಿಜಲಿಂಗಪ್ಪನವರ ಹಿರಿಯ ಅಳಿಯ ಮಹಾಲಿಂಗ ಶೆಟ್ಟಿ ಈ ಹಿರಿಯರನ್ನು ಭೇಟಿಯಾಗಿ ಮುಂಬರುವ ವಿಧಾನಸಭಾ ಚುನಾವಣೆಗಳನ್ನೆದುರಿಸಲು ಜನರು ಕಾಂಗ್ರೆಸ್ (ಓ)ನಲ್ಲಿ ವಿಶ್ವಾಸ ಕಳೆದು ಕೊಂಡಿರುವ ಕಾರಣ ಒಂದು ಹೊಸ ಪಕ್ಷವನ್ನು ಸ್ಥಾಪಿಸಬೇಕೆಂದು ಕೇಳಿಕೊಂಡರು. ಅದನ್ನು ಕೇಳಿ ವೃದ್ಧರಿಗೆ ರೇಗಿತು, ತಮ್ಮ ಅಭಿಪ್ರಾಯವನ್ನು ಅವರಿಗೆ ಸ್ಪಷ್ಟಪಡಿಸಿದರು.

ಪಕ್ಷದ ಅಧ್ಯಕ್ಷ ಪದವಿಯ ತ್ಯಾಗವು ನಿಜಲಿಂಗಪ್ಪನವರ ರಾಜಕೀಯ ಜೀವನಕ್ಕೆ ವಿಶ್ರಾಂತಿಯನ್ನೇನೂ ನೀಡಲಿಲ್ಲ. ಪಕ್ಷದ ಬಲವರ್ಧನೆಗೊಳಿಸಲು ಅವರು ನಿರ್ಧರಿಸಿ ಅದನ್ನು ಇಂದಿರಾ ಗಾಂಧಿಯವರ ಅನೈತಿಕವೂ ನಿಶ್ರುಂಖಲವೂ ಆದ ರಾಜಕಾರಣವನ್ನು ಎದುರಿಸುವ ಸಾಧನವನ್ನಾಗಿ ಮಾಡಿಕೊಳ್ಳಲು ಬಯಸಿದರು. ಈ ಉದ್ದೇಶದಿಂದ ರಾಜ್ಯದ ವಿವಿಧ ಭಾಗಗಳಲ್ಲಿ ಸಂಚರಿಸಿದ ಅವರು ಇಂದಿರಾ ಗಾಂಧಿಯವರ ತತ್ವಹೀನ ರಾಜಕಾರಣದ ಬಗ್ಗೆ ಜನರನ್ನು ಎಚ್ಚರಿಸುವ ಕೆಲಸ ಮಾಡಿದರು. ಅವರಿಗೆ ಉಂಟಾದ ದೊಡ್ಡ ಆಘಾತವೆಂದರೆ ಹಿಂದೆ ತಮ್ಮ ಪಕ್ಷದ ಒಡನಾಡಿಗಳಾಗಿದ್ದವರೇ ನೀಡಿದ ಪೆಟ್ಟು. ಭಾರಿ ಹೊಡೆತವೆಂದರೆ ರಾಂ ಸುಭಾಗ್ ಸಿಂಗ್ ಮಾಡಿದ ವಿದ್ರೋಹ. ಹಿಂದೆ ಅವರು ನಿಜಲಿಂಗಪ್ಪನವರನ್ನು ಗುರುದೇವ ಎನ್ನುತ್ತಿದ್ದವರು. ತಮ್ಮ ಹಿಂದಿನ ಕಾಂಗ್ರೆಸ್(ಓ) ಸಹಚರರ ಬಗ್ಗೆ ಸಿಂಗ್ ಪತ್ರಿಕಾ ಹೇಳಿಕೆ ನೀಡಿದರು. ಹಳೆಯ ಕಾಂಗ್ರೆಸ್ ಅನ್ನು ಟೀಕಿಸಿ ತಾರಕೇಶ್ವರಿ ಸಿನ್ಹ ಕೂಡ ಪತ್ರಿಕಾ ಹೇಳಿಕೆಗಳನ್ನಿತ್ತರು. ಅವರು ತಿರುಗಿ ಬೀಳಲು ಕಾರಣ ಸಿಂಗ್ ಅಧ್ಯಕ್ಷ ಪದವಿಯನ್ನು ಪಡೆಯಲಾಗದಿದ್ದುದು ಮತ್ತು ತಾರಕೇಶ್ವರಿ ಸಿನ್ಹ ಪ್ರಧಾನ ಕಾರ್ಯದರ್ಶಿ ಆಗಲು ಸಾಧ್ಯವಾಗದುದು. ಅವರು ಪ್ರಧಾನ ಮಂತ್ರಿಗಳ ಗಮನ ಸೆಳೆಯುವ ಹುನ್ನಾರ ಮಾಡುತ್ತಿದ್ದ ಉದ್ದೇಶವನ್ನೂ ತಳ್ಳಿಹಾಕುವಂತಿರ ಲಿಲ್ಲ. ತಮ್ಮದೇ ಗುಪ್ತ ಮಾಹಿತಿಗಳ ಮೂಲಕ ಇಂದಿರಾ ಗಾಂಧಿಯವರು ಕಾಮರಾಜರು ಹಾಗೂ ಸಿಂಗ್‌ರನ್ನು ಒಲಿಸಿಕೊಳ್ಳಲು ರಹಸ್ಯ ದೂತರನ್ನು ಕಳಿಸಿದ್ದರ ಬಗ್ಗೆ ನಿಜಲಿಂಗಪ್ಪ ನವರು ತಿಳಿದರು. ಕಾಮರಾಜರ ಜೊತೆಗೆ ಅವರ ಒಡನಾಟ ನಿಕಟವಾಗಿದ್ದರೂ, ಅವರ ಮನಸ್ಸು ಎಂತಹುದು ಎಂಬುದರ ಬಗ್ಗೆ ನಿಜಲಿಂಗಪ್ಪನವರಿಗೆ ಖಚಿತ ಭರವಸೆ ಯಿರಲಿಲ್ಲ, ಯಾಕೆಂದರೆ ಕಾಮರಾಜರೆಂದೂ ತಮ್ಮ ಮನಸ್ಸನ್ನು ಬಿಚ್ಚಿ ತೋರಿಸಿದವರಲ್ಲ. ಖಾಸಗಿ ಹಾಗೂ ಸಾರ್ವಜನಿಕ ಬದುಕಿನ ಈ ಎಲ್ಲ ವಿದ್ಯಮಾನಗಳಿಂದಾಗಿ ತಾವೇಕೆ ರಾಜಕೀಯ ನಿವೃತ್ತಿ ಪಡೆದು ನಿರುಮ್ಮಳ ಜೀವನ ನಡೆಸಬಾರದು ಎಂಬ ಪ್ರಶ್ನೆಯನ್ನು ಹಾಕಿಕೊಳ್ಳುವಂತೆ ಮಾಡಿದ ವಿಷಯ ದಿನಚರಿಯಲ್ಲಿದೆ. ಆದರೆ ಸಂಘಟನೆಯನ್ನು

ತೊರೆದರೆ ಅದು ಪಲಾಯನವಾದ ಹಾಗೂ ಕರ್ತವ್ಯವಿಮುಖತೆಯಾಗುತ್ತದೆಂಬ ಅರಿವು ತಕ್ಷಣವೇ ಉಂಟಾಯಿತು. ಭವಿಷ್ಯ ಎಂತೇ ಇರಲಿ, ತಮ್ಮ ಪ್ರಸ್ತುತ ಕರ್ತವ್ಯವಾವುದೆಂಬುದರ ಅರಿವು ಅವರಿಗಿತ್ತು, ಹೀಗಾಗಿ ಅದನ್ನು ಅನಿಸರಿಸಲು ಅವರು ನಿರ್ಧರಿಸಿದರು. ನೈಜ ಲಿಂಗಾಯತ ಮನೋಭಾವದಿಂದ ತಮ್ಮ ಕಾಯಕವನ್ನು ನಿಷ್ಠೆಯಿಂದ ಮುಂದುವರೆಸಲು ಆಲೋಚಿಸಿದರು. ೧೯೭೧ನೇ ಸೆಪ್ಟೆಂಬರ್ ೧೨ ರಂದು ನಡೆದ ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಸಮಾವೇಶದಲ್ಲಿ ವೀರೇಂದ್ರ ಪಾಟೀಲ್ ಮತು ಕಾಮರಾಜರಿಬ್ಬರೂ ಇಂದಿರಾ ಗಾಂಧಿಯವರು ಸಂಪೂರ್ಣ ಬದಲಾಗಿದ್ದಾರೆಂಬ ಸೂಚನೆ ನೀಡಿದರು! ಆದರೆ ತಮ್ಮ ಬದ್ಧತೆಯಲ್ಲಿ ಎಂದಿನಂತೆ ದೃಢವಾಗಿದ್ದ ನಿಜಲಿಂಗಪ್ಪನವರು ತಮಗೆ ಆ ಭರವಸೆಯಿಲ್ಲವೆಂದು ಅವರಿಗೆ ಸ್ಪಷ್ಟಪಡಿಸಿದರು. ಚುನಾವಣಾ ಸೋಲನ್ನು ಬದಿಗಿರಿಸಿ ಮತ್ತೆ ಕಾಂಗ್ರೆಸ್ ಐಕಮತ್ಯಕ್ಕೆ ಪ್ರಯತ್ನಿಸಬಾರದೇಕೆ ಎಂದು ಅವರು ಕೇಳಿಕೊಂಡರು. ಅಧಿಕಾರ ಹೋದ ಬಳಿಕ ಅವರಿಬ್ಬರೂ ಚಿತ್ತಸ್ಥಿರತೆಯನ್ನು ಕಳೆದುಕೊಂಡಿದ್ದಾರೆಂದೂ ಅದೇ ಅವರ ಭಾಷಣಗಳಲ್ಲಿ ವ್ಯಕ್ತವಾಗಿರಬಹುದೆಂದೂ ನಿಜಲಿಂಗಪ್ಪನವರು ತಮ್ಮ ದಿನಚರಿಯಲ್ಲಿ ಬರೆದುಕೊಂಡಿದ್ದಾರೆ. ಅವರ ಅಭಿರುಚಿಯು ಕೀಳಾದುದೆಂದು ಅವರಿಗನ್ನಿಸಿತು, ಯಾಕಂದರೆ ಯಾವುದೇ ನೈತಿಕ ಮಾನದಂಡವಿಲ್ಲದೆ ಚುನಾವಣೆಯ ಮೂಲಕ ಅಧಿಕಾರಗ್ರಹಣವೇ ಅವರ ಗುರಿಯಾಗಿದೆ ಎಂಬ ಭಾವನೆ. ಅವರು ಕಾಮರಾಜರಿಗೆ ಒಂದು ಕಾಗದವನ್ನೂ ಬರೆದು, ಅವರ ನಿಲವಿನ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ತಾವು ಸಂಪೂರ್ಣ ಭರವಸೆಯಿಡಬಹುದಾದ ಏಕೈಕ ಗೆಳೆಯರೆಂದರೆ ಎಸ್.ಕೆ. ಪಾಟೀಲ್ ಎಂದೆನ್ನಿಸಿತು. ನಿಜಲಿಂಗಪ್ಪನವರು ದೆಹಲಿಗೆ ಹೋದಾಗಲೆಲ್ಲ ಮುಂಬಯಿ ಮೂಲಕವೇ ಹೋಗುತ್ತಿದ್ದುದು. ಅಲ್ಲಿ ಅವರೂ ಎಸ್.ಕೆ. ಪಾಟೀಲರೂ ಕಾಂಗ್ರೆಸ್ (ಓ) ಅಧ್ಯಕ್ಷ ಸಾದಿಕ್ ಆಲಿಯವರಿಗೆ ತಮ್ಮ ಸಂಪೂರ್ಣ ಬೆಂಬಲವನ್ನು ನೀಡುವ ಪುನರ್‌ನಿರ್ಧಾರವನ್ನು ತೋರಿಸುತ್ತಿದ್ದರು. ಸ್ವಲ್ಪವಾದರೂ ನಿಧಿಯಿಲ್ಲದೆ ಅವರೆಂದೂ ದೆಹಲಿಗೆ ಹೋದವರಲ್ಲ. ಯಾಕೆಂದರೆ ಹಣದ ಕೊರತೆಯಿಂದ ಪಕ್ಷದ ಕಚೇರಿಯನ್ನು ಮುಚ್ಚುವ ಪರಿಸ್ಥಿತಿ ಬಂದಿತ್ತು. ಆದರೆ ತಮಗೆ ಹಣಸಹಾಯ ಮಾಡಬಹುದಾದ ವ್ಯವಹಾರಸ್ಥರನ್ನು ಕಾಣುವುದೇ ಅವರಿಗೆ ಕಷ್ಟವಾಯಿತು. ಅಧಿಕಾರದಲ್ಲಿದ್ದಾಗ ಇದೇ ವ್ಯವಹಾರಸ್ಥರು ಹಣ ಸುರಿಯಲು ಕಾಂಗ್ರೆಸ್ ಕಚೇರಿಗೆ ಧಾವಿಸುತ್ತಿದ್ದರು! ಇಂಗ್ಲಿಷ್ ಕಾವ್ಯಪ್ರಿಯರಾದ ಅವರಿಗೆ ಟೆನಿಸನ್‌ನ ಕವನವೊಂದರ ಸಾಲುಗಳು ನೆನಪಿಗೆ ಬರುತ್ತಿದ್ದವು: ಅದು, ಸಾವಿನಂಚಿನಲ್ಲಿರುವ ದೊರೆಯೊಬ್ಬನ ಚಿತ್ರಣ ನೀಡುವಂಥದು. ಆದರೆ, ಕೆಟ್ಟ ಕಾಲದ ಬಳಿಕ ಒಳ್ಳೆಯ ಕಾಲ ಅನುಸರಿಸಿ ಬರುವುದು ಎಂಬ ಆಶಾಭಾವನೆಯನ್ನೇ ಅವರು ತಮ್ಮ ದಿನಚರಿಯಲ್ಲಿ ವ್ಯಕ್ತಪಡಿಸುತ್ತಾರೆ. ಈ ಮಧ್ಯೆ, ಪಕ್ಷದ ನಾಯಕರು

ಅನಿಶ್ಚಿತತೆ ತಾಳಿರುವುದೂ ಸಿಂಗ್ ಮತ್ತು ತಾರಕೇಶ್ವರಿ ಸಿನ್ಹ ಅಂತಹವರು ಪಕ್ಷದ ವಿರುದ್ಧ ಪತ್ರಿಕಾ ಹೇಳಿಕೆ ನೀಡಿರುವುದೂ ಬಡಪಾಯಿ ಸಾದಿಕ್ ಆಲಿಯವರಿಗೆ ನುಂಗಲಾರದ ತುತ್ತಾಯಿತು. ಪಕ್ಷದ ಸಂರಚನೆ ತೀರ ಸಡಿಲುಗೊಂಡಿರುವುದು ಸ್ಪಷ್ಟವಾಗಿತ್ತು. ನಿದರ್ಶನಕ್ಕೆ, ವಿವಿಧ ಸಮಿತಿಗಳಿಗೆ ಪಕ್ಷದ ಅಧ್ಯಕ್ಷರಾಗಿ ಸಾದಿಕ್ ಆಲಿಯವರು ಮಾಡಿದ್ದ ನೇಮಕಾತಿಗಳನ್ನು ಸಿಂಗ್ ಅವರು ಖಾರವಾಗಿ ಟೀಕಿಸಿದ ಪರಿ. ಅವರ ಹೆಸರನ್ನು ಹೇಳದೆ ಕೆಲವರು ಸದಸ್ಯರು ಟೀಕಿಸಿದ್ದರಿಂದ ಸಿಂಗ್ ಮುನಿಸಿಕೊಂಡು ಸಭೆಯಿಂದ ಎದ್ದು ಹೋಗಿದ್ದರು. ಸಂದರ್ಭದ ರೀತಿಯನ್ನು ಗಮನಿಸಿದ ಸಾದಿಕ್ ಆಲಿಯವರು ರಾಜೀನಾಮೆ ನೀಡಿದರು. ಆದರೆ ಅದನ್ನು ವಾಪಸು ಪಡೆಯುವಂತೆ ಅವರ ಮನವೊಲಿಸಲಾಯಿತು. ಸಲಹೆಗಾಗಿ ಅವರು ತಮ್ಮ ಮಾರ್ಗದರ್ಶಕರಾದ ನಿಜಲಿಂಗಪ್ಪನವರನ್ನು ಕಂಡಾಗ, ಗಟ್ಟಿಯಾಗಿರುವಂತೆಯೂ ಆವಶ್ಯಕವಾದ ಕಠಿಣ ನಿರ್ಧಾರಗಳನ್ನು ಕೈಗೊಳ್ಳುವಂತೆಯೂ, ಇಲ್ಲದಿದ್ದರೆ ಕಾರ್ಯಕರ್ತರು ಧೃತಿಗೆಡುವರೆಂದೂ ಸಲಹೆಯಿತ್ತರು. ಕಾರ್ಯಕಾರಿ ಸಮಿತಿಗೆ ಹಾಜರಾಗಿ ಬೆಂಗಳೂರಿಗೆ ಬಂದಾಗ ಅವರ ಕಿವಿಗೆ ಬಿದ್ದ ಮೊದಲ ವದಂತಿಯೆಂದರೆ, ಮೈಸೂರಿನ ಕೆಲವು ಕಾಂಗ್ರೆಸ್ಸಿಗರು ಹೊಸ ಪಕ್ಷವೊಂದನ್ನು ಆರಂಭಿಸುವ ಪ್ರಯತ್ನದ ಕುರಿತು. ತಮ್ಮ ಪಕ್ಷದ ಸಹಚರರ ಈ ತತ್ವರಹಿತ ಹಾಗೂ ಅವಕಾಶವಾದೀ ರಾಜಕಾರಣದ ಬಗ್ಗೆ ನಿಜಲಿಂಗಪ್ಪನವರು ತಮ್ಮ ದಿನಚರಿಯಲ್ಲಿ ಆಕ್ರೋಶವನ್ನು ವ್ಯಕ್ತಪಡಿಸುತ್ತಾರೆ. ಆದರೆ ಇದೇ ಅವರು ತಮ್ಮ ಪಕ್ಷಕ್ಕೆ ಮತ್ತಷ್ಟು ಬಿಗಿಯಾಗಿ ಅಂಟಿಕೊಳ್ಳುವಂತೆ ಮಾಡಿದುದು. ಇಂತಹವರು ಜನತೆಯ ನಾಯಕರಾಗಲು ಅನರ್ಹರು ಎಂಬುದು ಅವರ ನಿಲವಾಗಿತ್ತು. ಮಾರನೆಯ ದಿನ ನಡೆದ ಪಿಸಿಸಿ ಆಡಳಿತ ಮಂಡಳಿ ಸಭೆಯಲ್ಲಿ ಕೂಡ ಕೆಲವು ಸದಸ್ಯರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ತಮ್ಮ ರಾಜಕೀಯ ಪ್ರಭಾವವು ಮಂಕಾಗುತ್ತಿರುವುದೇ ಅವರೆಲ್ಲರ ಚಿಂತೆಯಾಗಿತ್ತು. ಪಕ್ಷದ ಚಿಹ್ನೆಗೆ ಸಂಬಂಧಿಸಿದ ಕಾನೂನು ಸಮರದಲ್ಲಿ ಸೋತಾಗ, ಹಳೆಯ ಕಾಂಗ್ರೆಸ್ ಅನ್ನು ಮುಂದುವರೆಸುವುದರ ವಿರುದ್ಧ ಅವರು ಮತ್ತೆ ಹೇಳಿದರು. ವೀರೇಂದ್ರ ಪಾಟೀಲರಂಥ ಕೆಲವರು ನಿಜವಾದ ಹೊಯ್ದಾಟದಲ್ಲಿದ್ದರು: ಅವರಿಗೆ ಕಾಂಗ್ರೆಸ್(ಓ)ನಲ್ಲಿ ನಂಬಿಕೆ ಹೋಗಿತ್ತು, ಆದರೆ ಬೇರೆಡೆಗೆ ಹೋಗಲು ಅವರು ಹಿಂಜರಿಯುತ್ತಿದ್ದರು. ಅಂಥ ರಾಜಕೀಯ ಹೊಯ್ದಾಟದ ಬಗ್ಗೆ ನಿಜಲಿಂಗಪ್ಪನವರು ಅವರನ್ನು ಛೇಡಿಸಿದರು, ಪಕ್ಷದ ಬಗೆಗಿನ ವೀರೇಂದ್ರ ಪಾಟೀಲರ ನಿಷ್ಠೆಯ ಬಗ್ಗೆ ಅವರಿಗೆ ಅನುಮಾನಗಳಿದ್ದವು. ಎಲ್ಲ ಅಡ್ಡಿ ಆತಂಕಗಳ ನಡುವೆಯೂ ನಿಜಲಿಂಗಪ್ಪನವರು ಹಳೆಯ ಕಾಂಗ್ರೆಸ್ ಪಕ್ಷದ ನಿಷ್ಠೆಯ ಬಗೆಗಿನ ತಮ್ಮ ನಿಲವನ್ನು ಬದಲಿಸಲು ಸಿದ್ಧವಿರಲಿಲ್ಲ. ತಮ್ಮ ಸ್ವಂತ ಹಣವನ್ನೇ ಪಕ್ಷದ ಕಚೇರಿಗೆಂದು ಸಾದಿಕ್ ಆಲಿಯವರಿಗೆ ಕಳಿಸಿ

ಬೆಂಬಲವಾಗಿ ನಿಂತರು. ಈ ನಡುವೆ, ಚಿಹ್ನೆಯ ಕುರಿತಾದ ತಮ್ಮ ಗೆಲುವಿನಿಂದ ಆನಂದತುಂದಿಲರಾದ ಕಾಂಗ್ರೆಸ್ ಕಾರ್ಯಕರ್ತರು ೧೯೭೧ರ ನವೆಂಬರ್ ೧೨ ರಂದು ಜಂತರ್ ಮಂತರ್‌ನ ಪಕ್ಷದ ಕಚೇರಿಯ ಮೇಲೆ ದಾಳಿ ನಡೆಸಿ ಸಾದಿಕ್ ಆಲಿಯವರ ಮೇಲೂ ಹಲ್ಲೆ ಮಾಡಿ ಅವರನ್ನು ಹೊರ ದಬ್ಬಿ, ಸಿಬ್ಬಂದಿಯನ್ನು ಹೆದರಿಸಿ ಅಧಿಕೃತ ಪತ್ರಗಳನ್ನೆಲ್ಲ ಎಸೆದಾಡಿದರು! ಸಕಾಲಕ್ಕೆ ಪೊಲೀಸರು ನೆರವಿಗೆ ಬರಲಿಲ್ಲ, ಪ್ರಾಯಶಃ ಆ ದಾಳಿಯು ಪೂರ್ವನಿರ್ಧಾರದ್ದು ಹಾಗೂ ಪೊಲೀಸರು ನೆರವಿಗೆ ಬಾರದ್ದು ಉದ್ದೇಶಪೂರ್ವಕವಾದದ್ದು ಎನ್ನಿಸಿತು. ಮೊರಾರ್ಜಿಯವರು ಈ ವಿಷಯದ ಕುರಿತು ಸಂಸತ್ತಿನಲ್ಲಿ ಪ್ರಸ್ತಾಪಿಸಿದಾಗ, ಪ್ರಧಾನ ಮಂತ್ರಿಗಳು ತಮ್ಮ ಮುಗ್ಧತೆಯನ್ನು ವ್ಯಕ್ತಪಡಿಸಿದರು. ಆಕಾಶವಾಣಿಯೂ ಈ ಘಟನೆಯ ಬಗೆ ವರದಿ ಮಾಡಲಿಲ್ಲ, ಪ್ರಾಯಶಃ ಮೇಲಿನವರ ತಾಕೀತು ಅದಕ್ಕೆ ಕಾರಣ ಎಂಬುದು ಸ್ಪಷ್ಟ. ಪ್ರತಿಭಟನೆಯಾಗಿ ಸಾದಿಕ್ ಆಲಿಯವರು ಉಪವಾಸ ಕೂತರು. ಪಕ್ಷದ ಕಾರ್ಯಕಾರಿ ಸಮಿತಿಯು ದೇಶದಲ್ಲಿನ ರಾಜಕೀಯ ಗೂಂಡಾಗಿರಿಯನ್ನು ಖಂಡಿಸಿ ಉಪವಾಸವನ್ನು ನಿಲ್ಲಿಸುವಂತೆ ಅಧ್ಯಕ್ಷರಲ್ಲಿ ಮನವಿ ಮಾಡಿಕೊಂಡಿತು. ಮುಂದೆ ದೇಶಾದ್ಯಂತ ನಡೆಯಲಿದ್ದುದಕ್ಕೆ ಜಂತರ್ ಮಂತರ್‌ನ ಈ ಘಟನೆ ಕೇವಲ ಸೂಚನೆಯಾಗಿತ್ತು. ಬೆಂಗಳೂರಿನ ಪಿಸಿಸಿ(ಓ) ಕಚೇರಿ ಮೇಲೂ ಕಾಂಗ್ರೆಸ್ ಕಾರ್ಯಕರ್ತರಿಂದ ಇಂಥದೇ ದಾಳಿ ಮತ್ತು ಹಲ್ಲೆಗಳು ಜರುಗಿದುವು. ನಿಜಲಿಂಗಪ್ಪನವರ ಭಾವಚಿತ್ರವನ್ನು ಹರಿದುಹಾಕಿದರು, ಪೀಠೋಪಕರಣಗಳನ್ನು ಮುರಿದು ಹಾಕಿದರು. ಇದ್ದುದನ್ನು ಇದ್ದಂತೆ ಹೇಳುವ ಸ್ವಭಾವದವರಾದ ನಿಜಲಿಂಗಪ್ಪ ಈ ಘಟನೆಯನ್ನು ಫ್ಯಾಸಿಸ್ಟ್ ಎಂದು ವರ್ಣಿಸಿದರು. ಈ ಬಗ್ಗೆ ಧಾರವಾಡದಲ್ಲಿ ಪತ್ರಿಕೆಗಳಿಗೆ ಹೇಳಿಕೆ ನೀಡಿದರು.

ಪಾಕಿಸ್ತಾನದ ಜೊತೆಗಿನ ಯುದ್ಧವು ೧೯೭೧ ನೇ ಡಿಸೆಂಬರ್ ೪ ರಂದು ಆರಂಭಗೊಂಡಾಗ, ಸರ್ಕಾರವು ಬಾಹ್ಯ ತುರ್ತುಪರಿಸ್ಥಿತಿಯನ್ನು ಘೋಷಿಸಿತು. ಪ್ರಧಾನ ಮಂತ್ರಿಗಳು ಅನೇಕ ವಿದೇಶಗಳಿಗೆ ಭೇಟಿಯಿತ್ತು ಭಾರತ ಹಾಗೂ ಪೂರ್ವ ಬಂಗಾಳಗಳ ಪರವಾದ ಪ್ರಚಾರ ಕೈಗೊಂಡರು. ಪಶ್ಚಿಮ ರಾಷ್ಟ್ರಗಳ ವಿರೋಧ ಕಟ್ಟಿಕೊಳ್ಳುವ ಅವರ ಧೋರಣೆಯು ವಿಶ್ವಸಂಸ್ಥೆಯಲ್ಲಿ ಅವು ಭಾರತದ ವಿರುದ್ಧ ನಿಲವನ್ನು ತಳೆಯುವಂತಾಯಿತು. ಇದು ತಪ್ಪು ವಿದೇಶ ನೀತಿ ಎಂದು ನಿಜಲಿಂಗಪ್ಪನವರು ತಮ್ಮ ಆಗಿನ ದಿನಚರಿಯಲ್ಲಿ ದಾಖಲಿಸಿದ್ದಾರೆ. ಜೊತೆಗೆ ಅವರು ವಿದೇಶಗಳಲ್ಲಿನ ಭಾರತದ ರಾಯಭಾರ ಕಚೇರಿಗಳ ಕಾರ್ಯವೈಖರಿಯನ್ನೂ ಟೀಕಿಸಿದ್ದಾರೆ. ಭಾರತದ ಧೋರಣೆಯನ್ನು ವಿದೇಶಗಳಿಗೆ ಸ್ಪಷ್ಟವಾಗಿಯೂ ಸುಸಂಬದ್ಧವಾಗಿಯೂ ವಿವರಿಸುವ ತಮ್ಮ ಕೆಲಸವನ್ನು ಅವು ಸರಿಯಾಗಿ ಮಾಡದೇ ಹೋಗಿವೆ. ಇದಂತೂ ಮತ್ತಷ್ಟು ಖೇದಕರ, ಏಕೆಂದರೆ ಭಾರತದ

ನಿಲವು ಗಟ್ಟಿಯಾದದ್ದು. ಬಂಗ್ಲಾದೇಶವನ್ನು ಮಾನ್ಯ ಮಾಡುವಲ್ಲಿ ವಿಳಂಬ ತೋರಿಸಿದ ಸರ್ಕಾರದ ನಿಲವನ್ನೂ ಅವರು ಟೀಕಿಸುತ್ತಾರೆ. ೧೯೭೧ ನೇ ಡಿಸೆಂಬರ್ ೬ ರಂದು ಸರ್ಕಾರವು ಹಾಗೆ ಮಾಡಿದ್ದರೂ, ಕನಿಷ್ಠ ಪಕ್ಷ ಎಂಟು ತಿಂಗಳ ಹಿಂದೆಯೇ ಈ ಕೆಲಸವನ್ನು ಮಾಡುವುದು ಹೆಚ್ಚು ವಿವೇಕಯುತವಾಗುತ್ತಿತ್ತು ಎಂಬುದು ನಿಜಲಿಂಗಪ್ಪನವರ ಅಭಿಪ್ರಾಯ. ಇದರಿಂದ ಭಾರತ-ಪಾಕ್ ಯುದ್ಧ ಉಂಟಾಗುತ್ತಿರಲಿಲ್ಲ. ಯುದ್ಧದ ಉದ್ದಕ್ಕೂ, ಅವರಿಗೆ ಕಾತರ ಮತ್ತು ಯೋಚನೆಗಳೇ ತುಂಬಿದ್ದುವು. ಆದರೆ ೧೯೭೧ ನೇ ಡಿಸೆಂಬರ್ ೧೬ ರಂದು ಬಂಗ್ಲಾದೇಶವು ಗೆಲವು ಸಾಧಿಸಿದಾಗ ನಿಜಲಿಂಗಪ್ಪನವರಿಗಿಂತ ಹೆಚ್ಚು ಸಂತಸಭರಿತರಾದವರು ಪ್ರಾಯಶಃ ಇರಲಿಲ್ಲ. ಧೈರ್ಯ ಮತ್ತು ಕೌಶಲಕ್ಕಾಗಿ ಇಂದಿರಾ ಗಾಂಧಿಯವರನ್ನು ಮನಸಾರೆ ಹೊಗಳುವುದಕ್ಕೂ ಅವರು ಹಿಂಜರಿಯ ಲಿಲ್ಲ. ಆದರೆ ಇದನ್ನೂ ಅವರು ತಮ್ಮ ವೈಯಕ್ತಿಕ ಹಾಗೂ ಪಕ್ಷದ ಹಿತಾಸಕ್ತಿಗೆ ಬಳಸಿ ಕೊಳ್ಳುವರೆಂಬ ಬಗ್ಗೆಯೂ ಅವರಿಗೆ ಖಚಿತವಾಗಿತ್ತು. ಆ ಕಾಲದಲ್ಲಿ ಇಂದಿರಾ ಗಾಂಧಿ ಯವರು ಅತ್ಯುನ್ನತ ಗೌರವಸ್ಥಾನದಲ್ಲಿದ್ದರು. ಆಗೇನಾದರೂ ಚುನಾವಣೆಗಳನ್ನು ಘೋಷಿಸಿದ್ದರೆ ಅವರು ಅತ್ಯಧಿಕ ಬಹುಮತದಿಂದ ಆರಿಸಿ ಬರುತ್ತಿದ್ದರು. ಸಾಮಾನ್ಯರ ದೃಷ್ಟಿಯಲ್ಲಿ ಆಕೆ ದೇವತೆಯಾಗಿಬಿಟ್ಟಿದ್ದಾರೆ ಎಂಬ ಅರಿವು ನಿಜಲಿಂಗಪ್ಪನವರಿಗಿತ್ತು. ಈ ಹೊತ್ತಿನಲ್ಲಿ ಆಕೆಯನ್ನು ಚುನಾವಣೆಯಲ್ಲಿ ಎದುರಿಸುವುದು ಯಾರಿಗಾದರೂ ಆಘಾತಕಾರಿ ಎಂಬುದು ಅವರಿಗೂ ಎಸ್.ಕೆ. ಪಾಟೀಲ್ ಅವರಿಗೂ ಚೆನ್ನಾಗಿ ಗೊತ್ತಿತ್ತು. ಕಾಂಗ್ರೆ ಕೈಗೊಂಡಿರುವ ಮಹತ್ತರವಾದ ಸಂವಿಧಾನ ಬದಲಾವಣೆಗಳಿಗೆ ಕಾಂಗ್ರೆಸ್(ಓ) ಸಹಕಾರ ನೀಡುತ್ತಿದೆ ಎಂಬುದು ಅವರೆಡರಲ್ಲಿ ವ್ಯತ್ಯಾಸವಿಲ್ಲವೆಂಬಂತೆ ಜನರ ಮನಸ್ಸಿನಲ್ಲಿ ಗೊಂದಲವನ್ನುಂಟುಮಾಡಿತ್ತು ಎಂಬುದನ್ನು ನಿಜಲಿಂಗಪ್ಪನವರು ತಮ್ಮ ದಿನಚರಿಯಲ್ಲಿ ಗುರುತಿಸುತ್ತಾರೆ. ಎಲ್ಲ ವಿದೇಶಗಳ ಜೊತೆಗಿನ ಮೈತ್ರಿಯನ್ನು ಬೆಸೆಯುವ ವಿದೇಶಾಂಗ ನೀತಿ, ಎಲ್ಲ ಮತಧರ್ಮಗಳಿಗೆ ಸಮಾನ ಗೌರವ ಮತ್ತು ಹಿರಿಯರಿಂದ ಬೆಂಬಲಿತವಾದ ಕಿರಿಯರಿಂದ ರೂಪಿತವಾದ ಉತ್ಪಾದಕತಾ ಸಿದ್ಧಾಂತಗಳ ಆಧಾರದ ಮೇಲೆ ಇಂದಿರಾ ಗಾಂಧಿಯವರಿಗೆ ಪರಿಣಾಮಕಾರಿಯಾದ ಪರ್ಯಾಯ ಪಕ್ಷವೊಂದನ್ನು ರೂಪಿಸಬಹುದು ಎಂಬುದು ಎಸ್.ಕೆ. ಪಾಟೀಲರ ಅಭಿಪ್ರಾಯವಾಗಿತ್ತು. ಹೀಗಾಗಿ ಹೊಸದೂ ಪ್ರತ್ಯೇಕವೂ ಆದ ಪಕ್ಷವೊಂದರ ಅನಿವಾರ್ಯತೆ ದಿನೇ ದಿನೇ ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ೧೯೭೧ ರ ಡಿಸೆಂಬರ್ ೨೬ ರ ತಮ್ಮ ದಿನಚರಿಯಲ್ಲಿ ನಿಜಲಿಂಗಪ್ಪನವರು, ಮೊರಾರ್ಜಿ ದೇಸಾಯಿ, ಪಾಟೀಲ್, ಗುಪ್ತ ಮತ್ತು ಘೋಷ್ ಅವರುಗಳು ತಮ್ಮ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತಿದ್ದಾರೆ ಹೀಗಾಗಿ ಅವರು ರಾಜಕೀಯದಿಂದ ನಿವೃತ್ತಿಗೊಳ್ಳಬೇಕೆಂದು ವೀರೇಂದ್ರ ಪಾಟೀಲರು ಮತ್ತು ರಾಮಕೃಷ್ಣ

ಹೆಗಡೆ ತಮಗೆ ಹೇಳಿದ್ದಾಗಿ ಬರೆದುಕೊಂಡಿದ್ದಾರೆ. ಆ ಕಾರ್ಗತ್ತಲ ದಿನಗಳಲ್ಲಿ ಕಾಂಗ್ರೆಸ್(ಓ)ಗೆ ತಮ್ಮ ಪಕ್ಷಕ್ಕೆ ರಾಟೆಯನ್ನು ನೂಲುತ್ತಿರುವ ಹೆಣ್ಣಿನ ಚಿಹ್ನೆಯನ್ನು ಅಧಿಕೃತವಾಗಿ ಇತ್ತಂತಹ ಯಾವುದೇ ಸಣ್ಣ ಪ್ರೋತ್ಸಾಹಕರ ಸೂಚನೆಯು ಅದರ ನಾಯಕರು ಮತ್ತು ನಿಜಲಿಂಗಪ್ಪನವರಿಗೆ ಸ್ವಲ್ಪ ಸಮಾಧಾನ ಉಂಟುಮಾಡುತ್ತಿತ್ತು. ಆದರೆ ಇಂಥ ಸಣ್ಣ ಗೆಲವಿಗೆ ಅಧಿಕೃತ ಮಾಧ್ಯಮಗಳಲ್ಲಿ ಹೆಚ್ಚು ಪ್ರಚಾರ ದೊರೆಯಲಿಲ್ಲ. ಆದರೆ ಇಂದಿರಾ ಮತ್ತವರ ಪಕ್ಷದ ಯಾವುದೇ ಯಃಕಶ್ಚಿತ್ ಸುದ್ದಿಯೂ ಬೃಹತ್ತಾಗಿ ಗೋಚರಿಸು ತ್ತಿತ್ತು. ಇದರಿಂದಾಗಿ, ಸರ್ಕಾರದ ನಿಯಂತ್ರಣವಿಲ್ಲದ ಮಾಧ್ಯಮಗಳ ಬಗೆಗಿನ ಅವರ ನಿಲವು ಮತ್ತಿಷ್ಟು ಪುಷ್ಟಿಯನ್ನು ಪಡೆಯುವಂತಾಯಿತು.

ಕಾಂಗ್ರೆಸ್ (ಓ) ಅನ್ನು ವಿಸರ್ಜಿಸಿ ಹೊಸ ಪಕ್ಷವೊಂದನ್ನು ಸ್ಥಾಪಿಸುವ ಬೇಡಿಕೆಯು ನಿಜಲಿಂಗಪ್ಪನವರನ್ನು ಕಾಡಿಸತೊಡಗಿತು. ನಿಜಲಿಂಗಪ್ಪ ಮತ್ತಿತರರು ಕಾಂಗ್ರೆಸ್‌ಗೆ ರಾಜೀನಾಮೆ ನೀಡಿ, ಮೈಸೂರು ಕಾಂಗ್ರೆಸ್ ಅನ್ನು ಹೊಸ ಪಕ್ಷವಾಗಿ ಪುನಾರಚಿಸಬೇಕೆಂದು ಹಾಸನ ಡಿಸಿಸಿಯು ಒಂದು ನಿರ್ಣಯವನ್ನು ಅಂಗೀಕರಿಸಿದ ಸುದ್ದಿಯು ೧೯೭೨ ನೇ ಜನವರಿ ೩ ರಂದು ಪತ್ರಿಕೆಗಳಲ್ಲಿ ಪ್ರಕಟಗೊಂಡದ್ದು ನೋಡಿದ ಮೇಲಂತೂ ಅವರು ಖಿನ್ನರಾದರು. ಈ ಹೊಸ ಪಕ್ಷವು ಮುಂದೊಂದು ದಿನ ಕಾಂಗ್ರೈ ಜೊತೆಗೆ ವಿಲೀನಗೊಳ್ಳುವ ಉದ್ದೇಶ ಹೊಂದಿರಬಹುದೆಂಬ ಬಲವಾದ ಅನುಮಾನ ಅವರನ್ನು ಕಾಡಿತು. ಕಾರ್ಯಕಾರಿ ಸಮಿತಿಯ ಸಭೆಯಲ್ಲಿಯೂ ೧೯೭೨ ನೇ ಜನವರಿ ೫ ರಂದು ನಡೆದ ಪಿಸಿಸಿ ಅಧ್ಯಕ್ಷರುಗಳ ಸಭೆಯಲ್ಲಿಯೂ ಹೊಸ ಪಕ್ಷದ ಬಗ್ಗೆ ಪ್ರಸ್ತಾಪಿತವಾಯಿತು. ಯಥಾಸ್ಥಿತಿಯನ್ನು ಕಾಯ್ದುಕೊಳ್ಳಬೇಕೆಂದು ಅಲ್ಲಿ ನಿರ್ಣಯಿಸಲಾಯಿತು. ಆದರೆ ಮೈಸೂರಿನ ನಾಯಕರುಗಳಿಗೆ ಈ ನಿರ್ಣಯ ರುಚಿಸಲಿಲ್ಲ. ಈ ಅತೃಪ್ತಿಯ ಹಿಂದೆ ತಾವೇ ರೂಪಿಸಿದ್ದ ಇಬ್ಬರು ನಾಯಕರುಗಳಿದ್ದುದು ನಿಜಲಿಂಗಪ್ಪನವರಿಗೆ ನೋವುಂಟು ಮಾಡಿತು. ತಮ್ಮ ಆಯ್ಕೆಯು ಸಮಂಜಸವಾಗಿರಲಿಲ್ಲವೋ ಅಥವಾ ತಮ್ಮಲ್ಲಿಯೇ ಏನಾದರೂ ದೋಷವಿದ್ದಿತೋ ಎಂದು ಅವರು ಬಹು ಬೇಸರದಿಂದ ತಮ್ಮ ದಿನಚರಿಯಲ್ಲಿ ಬರೆದುಕೊಂಡಿದ್ದಾರೆ. ಪಿಸಿಸಿಯು ಕಾರ್ಯಕಾರಿ ಸಮಿತಿಯ ನಿಲವನ್ನು ಒಪ್ಪಿಕೊಂಡಿತು. ಆದರೆ ನಿಜಲಿಂಗಪ್ಪನವರು ಪದೇ ಪದೇ ಇಂದಿರಾ ಗಾಂಧಿಯವರನ್ನು ನಿಷ್ಠುರವಾಗಿ ಟೀಕಿಸುವುದು ಸರಿಯಲ್ಲವೆಂದೂ ಅದರಿಂದ ತಮಗೆ ಸಾರ್ವಜನಿಕ ಸಹಾನುಭೂತಿ ಕಡಿಮೆಯಾಗುವುದೆಂದೂ ತುಮಕೂರಿನ ತಮ್ಮ ಪಕ್ಷದ ಸದಸ್ಯರು ಅಸಮಾಧಾನಗೊಂಡಿರುವ ವಿಷಯವನ್ನು ಅವರ ಅಳಿಯ ಮಹಾಲಿಂಗಶೆಟ್ಟಿ ಅವರಿಗೆ ತಿಳಿಸಿದರು. ಪ್ರಾಯಶಃ ಅವರ ಅಭಿಪ್ರಾಯ ಸರಿಯಾಗಿತ್ತು, ನಿಜಲಿಂಗಪ್ಪನವರು ಅತಿರೇಕದಿಂದ ಪ್ರತಿಕ್ರಿಯಿಸುತ್ತಿದ್ದರು. ಆದರೆ ಆಕೆಯೊಡನೆ ಅವರಿಗಿದ್ದ ಅನುಭವದ ಹಿನ್ನೆಲೆಯನ್ನು

ಗಮನಿಸಿದಾಗ, ಎಲ್ಲ ಸಂನ್ಮೂಲಗಳನ್ನೂ ತನ್ನ ವಶದಲ್ಲಿರಿಸಿಕೊಂಡಿದ್ದ ಆಕೆಯ ವಿರುದ್ಧ ಹಾಗೆ ನೇರವಾದ ಟೀಕೆ ಮಾಡುವುದರಲ್ಲಿ ತಪ್ಪೇನಿರಲಿಲ್ಲ. ಆದರೆ ಅವರು ತೀರ ಬಿಚ್ಚು ಮನಸ್ಸಿನವರು, ಕುಶಲಪೂರ್ಣ ನಯಗಾರಿಕೆಯನ್ನು ತೋರಿಸಲಾರದವರು. ಅಲ್ಲದೆ, ಮತ್ತಷ್ಟು ನಿಖರವಾಗಿ ಹೇಳಬೇಕೆಂದರೆ, ಅವರ ಟೀಕೆಗಳು ಆಕೆಯ ಧೋರಣೆಗಳ ವಿರುದ್ಧವಾಗಿರಬೇಕಾಗಿತ್ತೇ ಹೊರತು ವ್ಯಕ್ತಿಯ ವಿರುದ್ಧವಲ್ಲ. ಅವರ ಬಹುತೇಕ ಹಿರಿಯ ಗೆಳೆಯರು ಅವರಿಂದ ದೂರ ಸರಿಯುತ್ತಿದ್ದರು, ಅದರಿಂದ ಇವರು ಏಕಾಕಿಯಾಗುತ್ತ ಸಾಗಿದುದು ವಿಷಾದನೀಯ. ಅವರದ್ದು ಅತಿರೇಕದ ನೈತಿಕ ಪರಿಶುದ್ಧತೆ, ಹೀಗಾಗಿ ಇತರರ ನಡತೆಯಲ್ಲಿನ ಕೊರತೆಯನ್ನವರು ಸಹಿಸಲಾಗುತ್ತಿರಲಿಲ್ಲ. ಇಂದಿಗೂ, ಇಂದಿರಾ ಗಾಂಧಿಯವರ ವಿರುದ್ಧದ ಅವರ ಕಹಿ ಎಂದಿನಂತೆ ಹಸಿಯಾಗಿಯೇ ಇದೆ. ಆದರೆ ಅವರು ಆಕೆಯ ಸಾಮರ್ಥ್ಯವನ್ನು ಗುರುತಿಸಬಲ್ಲ ವಿಶಾಲ ಮನೋಭಾವದವರೂ ಆಗಿದ್ದಾರೆ. ಕಾಂಗ್ರೈ ವಿರುದ್ಧ ಅವರ ಮತ್ತೊಂದು ಟೀಕೆಯೆಂದರೆ, ಚುನಾವಣೆಗಳಲ್ಲಿ ಅದು ಒಳ್ಳೆಯ ಅಭ್ಯರ್ಥಿಗಳಿಗೆ ಟಿಕೆಟ್ ಕೊಡಲಿಲ್ಲ ಎಂಬುದು. ಆದರೆ ಇಂದಿರಾ ಅವರ ಬಗೆಗಿನ ಕಹಿ ಅವರಲ್ಲಿ ಎಷ್ಟು ತೀವ್ರವಾದುದೆಂದರೆ, ಸೂಕ್ತ ಅಭ್ಯರ್ಥಿಗಳ ಆಯ್ಕೆಯಲ್ಲಿ ಎಲ್ಲ ಪಕ್ಷಗಳೂ ಹೆಚ್ಚು ಕಡಿಮೆ ಎಡವುತ್ತವೆ ಎಂಬುದನ್ನು ಗುರುತಿಸಲಾರದಷ್ಟು. ೧೯೭೦ ರ ಮಧ್ಯ ಭಾಗದಿಂದಲೇ ಚುನಾವಣಾ ಸಿದ್ಧತೆಗಳು ನಡೆಯತೊಡಗಿದುವು. ಕಾಂಗ್ರೆಸ್ (ಓ) ಚುನಾವಣಾ ನಿಧಿ ಸಂಗ್ರಹಿಸಲಾಗಿರಲಿಲ್ಲ, ಹೀಗಾಗಿ ಅದನ್ನು ಆರ್ಥಿಕ ಮುಗ್ಗಟ್ಟು ಬಾಧಿಸಿತು. ಇಂದಿರಾ ಗಾಂಧಿಯವರು ಕೋಪಗೊಂಡಾರೆಂಬ ಕಾರಣದಿಂದ ಕೈಗಾರಿಕೋದ್ಯಮಿಗಳು ಈ ಪಕ್ಷಕ್ಕೆ ಸಹಾಯ ಮಾಡಲಿಲ್ಲ. ನಿಜಲಿಂಗಪ್ಪನವರಿಗಿದ್ದ ಏಕೈಕ ಆಶಾಕಿರಣವೆಂದರೆ, ಜಂತರ್ ಮಂತರ್‌ನ ಕಚೇರಿಯು ನ್ಯಾಯಾಲಯದ ಮೂಲಕ ಕಾಂಗ್ರೆಸ್ (ಓ) ವಶವಾಗಿದ್ದು. ಆದರೆ ಇದರಿಂದ ಸಮಾಧಾನವಾಗುವಂತಿರಲಿಲ್ಲ. ನಿಧಿ ಸಂಗ್ರಹಣೆಗೆ ಅವರು ಊರೂರು ಅಲೆದಾಡಿದರು, ಆದರೆ ಯಾವುದೇ ಪ್ರಯೋಜನವಾಗಲಿಲ್ಲ. ಬಿರುಗಾಳಿಯಂತೆ ಕರ್ನಾಟಕವನ್ನೆಲ್ಲ ಪ್ರಚಾರಕ್ಕಾಗಿ ಸುತ್ತಾಡಿದರು. ಚುನಾವಣೆಗಳಾದ ಬಳಿಕ ಅವರು ಧಾರವಾಡದ ತಮ್ಮ ಮನೆಗೆ ಬಂದು ಫಲಿತಾಂಶಕ್ಕಾಗಿ ಕಾದರು. ಎಲ್ಲ ನಿರೀಕ್ಷೆಗಳನ್ನು ಹುಸಿಗೊಳಿಸಿ, ಪಕ್ಷವನ್ನೂ ಒಳಗೊಂಡಂತೆ, ಕಾಂಗ್ರೈ ಸರ್ವವ್ಯಾಪಕ ಗೆಲವನ್ನು ಸಾಧಿಸಿತು. ಅಂಥ ಪರಮ ಸೋಲನ್ನು ತಡೆದುಕೊಳ್ಳಲಾರದೆ ಪಕ್ಷದ ಕೆಲವರು ಚುನಾವಣೆಗಳು ಭ್ರಷ್ಟಗೊಂಡಿದ್ದುವೆಂದೂ, ಮತ ಎಣಿಕೆಯಂತಹ ಸಂದರ್ಭಗಳಲ್ಲಿಯೂ ಮತಪತ್ರಗಳಲ್ಲಿ ರಾಸಾಯನಿಕ ಬಳಕೆಯಂತಹ ಮೋಸಗಳು ನಡೆದಿವೆಯೆಂದೂ ನಿಜಲಿಂಗಪ್ಪನವರಲ್ಲಿ ದೂರಿದರು. ನಿಜಲಿಂಗಪ್ಪನವರು ಅವರ ಮಾತನ್ನು ನಂಬಿ, ಕಾಂಗ್ರೈ ಚುನಾವಣಾ ಅಕ್ರಮಗಳನ್ನೆಸಗಿದೆಯೆಂದು ಪತ್ರಿಕಾ ಹೇಳಿಕೆ

ಯನ್ನು ನೀಡಿದರು. ಅದೇ ವೇಳೆಗೆ, ಸೋಲಿನಿಂದ ಹತಾಶೆಗೊಳ್ಳಬಾರದೆಂದೂ ಮತ್ತಷ್ಟು ದೃಢ ನಿಶ್ಚಯದಿಂದ ಪಕ್ಷವನ್ನು ಬಲಪಡಿಸಬೇಕೆಂದೂ ಅವರು ತಮ್ಮ ಬೆಂಬಲಿಗರಿಗೆ ಸಲಹೆಯಿತ್ತರು. ಚುನಾವಣೋತ್ತರ ಪ್ರಕ್ರಿಯೆಯಲ್ಲಿ, ಕೆಲವು ರಾಜ್ಯಗಳಲ್ಲಿ ನಾಯಕತ್ವದ ಬಗ್ಗೆ ಒಮ್ಮತ ಸಾಧ್ಯವಾಗಲಿಲ್ಲ, ಹೀಗಾಗಿ ಅವರೆಲ್ಲರೂ ತೀರ್ಮಾನವನ್ನು ಇಂದಿರಾ ಗಾಂಧಿಯವರಿಗೇ ಬಿಟ್ಟರು. 'ಇದು ಪ್ರಜಾಪ್ರಭುತ್ವದ ವಿಕೃತಿಯಲ್ಲವೇ ಎಂದು ನಿಜಲಿಂಗಪ್ಪನವರಿಗೆ ಅನ್ನಿಸಿತು. ಇಂದಿರಾ ಗಾಂಧಿಯವರು ಲಿಂಗಾಯತರನ್ನಾಗಲೀ ಒಕ್ಕಲಿಗರನ್ನಾಗಲೀ ಇಷ್ಟಪಡುವುದಿಲ್ಲವೆಂದೂ, ಶಾಸಕರ ಬಹುಮತದ ಬೆಂಬಲವಿರುವ ದೇವರಾಜ ಅರಸು ಅವರು ಮುಖ್ಯಮಂತ್ರಿಗಳಾಗುವರೆಂದೂ ನಿಜಲಿಂಗಪ್ಪನವರು ಮೈಸೂರಿನಲ್ಲಿ ಭವಿಷ್ಯ ನುಡಿದರು. ನಿಜಲಿಂಗಪ್ಪನವರ ಸ್ವಂತ ಲೆಕ್ಕಾಚಾರದ ಪ್ರಕಾರ, ಅರಸು ಅವರು ಸಿದ್ದವೀರಪ್ಪನವರಿಗಿಂತ ಉತ್ತಮ ಅಭ್ಯರ್ಥಿ, ಆದರೆ ಅರಸು ಅವರಿಗಿಂತಲೂ ಬದರಿ ನಾರಾಯಣ ಇನ್ನೂ ಉತ್ತಮ. ಆದರೆ ಬ್ರಾಹ್ಮಣರಾದದ್ದರಿಂದ ಬದರಿನಾರಾಯಣರಿಗೆ ಅವಕಾಶವಿಲ್ಲವೆಂಬ ಬಗ್ಗೆ ಅವರು ಖಚಿತವಾಗಿದ್ದರು.

ಕಾಂಗ್ರೆಸ್ (ಓ) ಕಾರ್ಯಕಾರಿ ಸಮಿತಿಯು ೧೯೭೨ ನೇ ಮಾರ್ಚ್ ೨೨ ರಂದು ಸಭೆ ಸೇರಿ ಚುನಾವಣೆಯ ಮಹಜರು ನಡೆಸಿತು. ನಿಡು ಚರ್ಚೆಯಲ್ಲಿ ಮೂಡಿ ಬಂದ ಒಮ್ಮತದ ಅಭಿಪ್ರಾಯವೆಂದರೆ, ಕಾಂಗ್ರೆಸ್ (ಓ) ಕಾರ್ಯಕರ್ತರು ಎದೆಗುಂದಿದ್ದಾರೆಂಬುದು. ಡಿಎಂಕೆ ವಿರುದ್ಧ ಕಾಂಗ್ರೆಸ್ (ಓ) ಮತ್ತು ಕಾಂಗ್ರೆಗಳು ಮತ್ತೆ ಒಗ್ಗೂಡಬೇಕೆಂಬುದು ತಮ್ಮ ಪಕ್ಷದಲ್ಲಿನ ಪ್ರಬಲವಾದ ಅನಿಸಿಕೆಯೆಂದೂ ಆದರೆ ವೈಯಕ್ತಿಕವಾಗಿ ಅದು ತಮಗೆ ಒಪ್ಪಿಗೆಯಿಲ್ಲವೆಂದೂ ಕಾಮರಾಜರು ಸಭೆಯಲ್ಲಿ ಹೇಳಿದರು. ಒಟ್ಟಾರೆ, ತಮ್ಮ ಪಕ್ಷವು ಪರಿಣಾಮಕಾರಿ ವಿರೋಧ ಪಕ್ಷವಾಗಿ ಕಾರ್ಯ ನಿರ್ವಹಿಸಲು ಶ್ರಮಿಸಬೇಕೆಂದು ಪಿಸಿಸಿ ಅಧ್ಯಕ್ಷರುಗಳು ಅಭಿಪ್ರಾಯಪಟ್ಟರು. ಪಕ್ಷದ ಪುನರುಜೀವನಕ್ಕೆ ವ್ಯಾಪಕ ಕಾರ್ಯಕ್ರಮವನ್ನು ರೂಪಿಸಬೇಕೆಂದು ನಿಜಲಿಂಗಪ್ಪನವರು ಸೂಚಿಸಿದರು. ಇದರಲ್ಲಿ ಪ್ರತಿ ಜಿಲ್ಲೆಯಲ್ಲಿ ಮುಖಂಡರಿಗೆ ತರಬೇತಿ ನೀಡಬೇಕು, ಒಟ್ಟು ಸುಮಾರು ಒಂದು ಸಾವಿರ ಮಂದಿ ಅದನ್ನು ಪಡೆಯಬೇಕೆಂದರು. ಆ ಬಳಿಕ ಈ ತರಬೇತಿ ಹೊಂದಿದ ಮುಖಂಡರು ಹಳ್ಳಿಗಳಲ್ಲಿ ಪ್ರವಾಸ ಕೈಗೊಂಡು ಸರ್ಕಾರದ ತಪ್ಪು ನೀತಿಗಳ ವಿರುದ್ಧ ಜನರಲ್ಲಿ ಅರಿವು ಮೂಡಿಸಬೇಕು. ರಾಜ್ಯ ವಿಧಾನ ಮಂಡಲಗಳಿಂದ ರಾಜ್ಯ ಸಭೆಯ ಚುನಾವಣೆಯ ಬಗೆಗೆ ಅಧಿಸೂಚನೆ ಹೊರಟಾಗ, ಇಬ್ಬರು ಒಬ್ಬರೊಬ್ಬರ ವಿರುದ್ಧ ತಮ್ಮ ಅಭ್ಯರ್ಥಿತನವನ್ನು ವ್ಯಕ್ತಪಡಿಸಿದರು: ಗುರುಪಾದಸ್ವಾಮಿ ಮತ್ತು ವೀರೇಂದ್ರ ಪಾಟೀಲ್. ನಿಜಲಿಂಗಪ್ಪನವರು ಹಿಂದೊಮ್ಮೆ ರಾಜ್ಯಸಭೆ ಸದಸ್ಯರಾಗಿ ಸಫಲರಾಗಿದ್ದ ಗುರುಪಾದಸ್ವಾಮಿಯವರ ಪರ ಒಲವು ತೋರಿದರು. ಆದರೆ, ಗೆಲ್ಲುವ ಹೆಚ್ಚು

ಅವಕಾಶಗಳನ್ನು ಹೊಂದಿದವರೆಂಬ ಕಾರಣಕ್ಕಾಗಿ ಇನ್ನುಳಿದವರು ವೀರೇಂದ್ರ ಪಾಟೀಲರ ಪರವಾಗಿದ್ದರು. ನಿಜಲಿಂಗಪ್ಪ ಒಪ್ಪಿದರು. ಪಾಟೀಲರು ಚುನಾವಣೆಗಳಲ್ಲಿ ಗೆದ್ದೇನೋ ಗೆದ್ದರು; ಆದರೆ ಪಕ್ಷಾಂತರ ಮತಗಳ ಬೆಂಬಲದಿಂದ! ಬಂಗ್ಲಾ ಗೆಲವು ಮತ್ತು ಚುನಾವಣಾ ಗೆಲವು ಎರಡೂ ಸೇರಿ ಇಂದಿರಾ ಗಾಂಧಿಯವರನ್ನು ಪೈಪೋಟಿಯೇ ಇಲ್ಲದಂತಹ ರಾಷ್ಟ್ರ ನಾಯಕರ ಮಟ್ಟಕ್ಕೇರಿಸಿತು, ಅವರು ಅಧಿಕಾರ ಮತ್ತು ವೈಭವಗಳ ಉತ್ತುಂಗದಲ್ಲಿದ್ದರು! ಅವರ ಎತ್ತರದ ಮಗ್ಗುಲಲ್ಲಿ ಮಿಕ್ಕವರೆಲ್ಲ ಕುಬ್ಜರಾದರು. ಮೇರಿಯ ಹಿಂದೆ ಹೋಗುವ ಕುರಿಮರಿಗಳಂತೆ ರಾಜ್ಯ ನಾಯಕರುಗಳೆಲ್ಲ ಆಕೆಯ ಹಿಂಬಾಲಕ ರಾದರು! ಅವರು ಅಪ್ರತಿಮ ಸಾರ್ವಭೌಮರಾದರು; ಅವರ ಪ್ರತಿ ಮಾತೂ ಕಾನೂನಾ ಯಿತು. ಅವರ ವಿರೋಧಿಗಳೆಲ್ಲ ಮಣ್ಣುಮುಕ್ಕುವಂತಾದರು. ಅಪಾರ ಜನಮನ್ನಣೆಯ ಅಲೆಯೇರಿದ್ದ ಅವರು ನಿರಂಕುಶಾಧಿಪತ್ಯವನ್ನು ನಡೆಸಲು ಹಿಂದುಮುಂದು ನೋಡಲಿಲ್ಲ. ಆದರೆ ಇವಾವುದೂ ನಿಜಲಿಂಗಪ್ಪನವರಲ್ಲಿ ಅಂತರ್ನಿಹಿತವಾಗಿದ್ದ ಆಶಾವಾದವನ್ನಾಗಲೀ ಸಮಚಿತ್ತತೆಯನ್ನಾಗಲೀ ಕದಡಲು ಸಾಧ್ಯವಾಗಲಿಲ್ಲ. ಭಯ ನಿಯಂತ್ರಣಗಳಿಲ್ಲದೆ ಅವರು ಪ್ರಧಾನ ಮಂತ್ರಿಗಳನ್ನು ಟೀಕಿಸಿದರು, ಇಂದಲ್ಲ ನಾಳೆ ಅವರೂ ಸೋಲು ಕಾಣುತ್ತಾರೆಂಬ ನಂಬಿಕೆ ಅವರದು! ಆದರೆ ಕೇವಲ ಬೈಗುಳ ನಿಷ್ಫಲವಾದುದು, ಗಾಂಧೀಯವೆಂದು ಹೇಳಿಕೊಳ್ಳುವ ಆಕೆಯ ತತ್ವರಹಿತ ರಾಜಕಾರಣ ಮತ್ತು ಆಡಳಿತಕ್ಕೆ ಸೂಕ್ತ ಉತ್ತರ ತಮ್ಮ ಪಕ್ಷದ ಬಲವರ್ಧನೆ ಎಂಬ ಅರಿವು ಅವರಿಗಾಗಿತ್ತು.

೧೯೭೨ ರ ಅಕ್ಟೋಬರ್ ಕೊನೆಯ ವೇಳೆಗೆ ಎಐಸಿಸಿ (ಓ) ಪುಣೆಯಲ್ಲಿ ಸಭೆ ಸೇರಿತು. ನಾಯಕರುಗಳು ನಿರೀಕ್ಷಿಸಿದ್ದಕ್ಕಿಂತ ಅದು ಹೆಚ್ಚು ಆಕರ್ಷಕವಾಗಿತ್ತು. ನಿಜಲಿಂಗಪ್ಪ ನವರನ್ನು ನಗರದ ಒಬ್ಬ ಪ್ರಮುಖ ಕೈಗಾರಿಕೋದ್ಯಮಿಯಾದ ಕೊಠಾರಿಯವರ ಮನೆ ಯಲ್ಲಿ ಉಳಿಸಲಾಗಿತ್ತು. ಕೊಠಾರಿ ಕುಟುಂಬವು ಅವರಿಗೆ ಹೃತ್ಪೂರ್ವಕವೂ ಆತ್ಮೀಯವೂ ಆದ ಆತಿಥ್ಯವನ್ನು ನೀಡಿತು. ತಮ್ಮ ಭಾಷಣದಲ್ಲಿ ನಿಜಲಿಂಗಪ್ಪನವರು ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದರು. ಆಳುವ ಪಕ್ಷಕ್ಕೆ ರಾಜಕೀಯ ಸಾಮರ್ಥ್ಯವನ್ನು ಬೆಳೆಸಿ ಕೊಳ್ಳುವುದು ದೇಶದ ಆರ್ಥಿಕ ಅಭಿವೃದ್ಧಿಗಿಂತ ಮುಖ್ಯವಾಗಿದೆ ಎಂದು ವಾದಿಸಿದರು. ಇದರಿಂದಾಗಿ ಆರ್ಥಿಕ ಬೆಳವಣಿಗೆ. ಸಮಾಜವಾದ ಸಾಮಾಜಿಕ ನ್ಯಾಯ ಮತ್ತು ಬಡತನ ನಿರ್ಮೂಲನೆಗಳು ಕುಂಠಿತಗೊಂಡಿದೆಯೆಂದೂ ಅವೆಲ್ಲ ಕೇವಲ ಘೋಷಣೆ ಗಳಾಗಿವೆಯೆಂದೂ, ಸತ್ವಹೀನ ಮಾತುಗಳಾಗಿವೆಯೆಂದೂ ತರ್ಕಿಸಿದರು. ಅವುಗಳನ್ನೆಲ್ಲ ನಿರ್ದಿಷ್ಟ ಮಾತುಗಳಲ್ಲಿ ಸೂತ್ರೀಕರಿಸುವುದು ಮುಖ್ಯ, ಇದರಿಂದ ಅವುಗಳ ಅನುಷ್ಠಾನಕ್ಕೆ ಅನುಕೂಲವಾಗುವುದೆಂದು ಅಭಿಪ್ರಾಯಪಟ್ಟರು. ಸಮಾಜವಾದ ಎಂದರೇನೆಂಬುದನ್ನು ನಿಷ್ಕೃಷ್ಟವಾಗಿ ವಿವರಿಸುವಂತೆ ತಾವು ಕಾಮರಾಜರನ್ನು ಕೇಳಿಕೊಂಡಿರುವುದಾಗಿ ಹೇಳಿ

ದರು. ಆದರೆ ಕಾಮರಾಜರ ಉತ್ತರ ಮತ್ತೊಂದು ಪ್ರಶ್ನೆಯೇ ಆಗಿತ್ತು: ನಿಜಲಿಂಗಪ್ಪನವರು ಹಿಂದೂ ಎಂಬುದರ ಅರ್ಥವನ್ನು ಸಮಂಜಸವಾಗಿ ನಿರೂಪಿಸಬಲ್ಲರೇ! ನಿಜಲಿಂಗಪ್ಪ ನವರು ಒತ್ತಿ ಹೇಳಿದ ಅಂಶವೆಂದರೆ, ಈ ಶಬ್ದಗಳಿಗೆ ಪ್ರತಿ ವ್ಯಕ್ತಿಗೂ ತನ್ನದೇ ಅರ್ಥ ಗಳಿರುತ್ತವೆ ಎಂಬುದು. ಆದರೆ ಭಾರತಕ್ಕೆ ಅತ್ಯಂತ ಸೂಕ್ತವಾದ ಸಮಾಜವಾದವು ದೇಶಕ್ಕೆ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ಕೊಟ್ಟ ಮಂತ್ರವೆಂದರು. ಅವರ ಸೂತ್ರದ ಸಾರವೆಂದರೆ ಸಂಪತ್ತು ಒಂದೆಡೆ ಕೇಂದ್ರೀಕರಣಗೊಳ್ಳಬಾರದು ಎಂಬುದು. ಹಾಗೆಯೇ ಅಧಿಕಾರ ಮತ್ತು ಬಲಗಳೂ ಒಂದೆಡೆ ಕೇಂದ್ರೀಕೃತವಾಗಬಾರದು. ಸರ್ವಾಂಗೀಣ ಪ್ರಗತಿ ಸಾಧಿಸಲು ಪ್ರತಿ ವ್ಯಕ್ತಿಗೂ ಸಂಪೂರ್ಣ ಅವಕಾಶವಿರಬೇಕು. ತಾನು ಪ್ರಚಾರ ಮಾಡುತ್ತಿರುವ ಹತ್ತಂಶಗಳ ಕಾರ್ಯಕ್ರಮವನ್ನು ಆಡಳಿತ ಪಕ್ಷವು ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿದೆಯೇ ಎಂದವರು ಪ್ರಶ್ನಿಸಿದರು. ನಿದರ್ಶನಕ್ಕೆ, ಹಳ್ಳಿಗಳಲ್ಲಿನ ಜಾನುವಾರುಗಳ ವಿಮೆ ಯಾಕೆ ಮಾಡಿಸಿಲ್ಲ ಎಂದರು. ಬ್ಯಾಂಕ್ ರಾಷ್ಟ್ರೀಕರಣವು ಬಡತನ ನಿರ್ಮೂಲನವನ್ನು ನಿಜವಾಗಿಯೂ ಮಾಡಿದೆಯೇ ಎಂದು ಕೇಳಿದರು. ಇಂದಿರಾ ಗಾಂಧಿಯವರು ಆಕಾಶವಾಣಿಯನ್ನು ತಮ್ಮ ವೈಯಕ್ತಿಕ ಪ್ರಚಾರದ ಮಾಧ್ಯಮವಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು. ಮಾಜಿ ರಾಜರು ಪೊಗದಿಯನ್ನು ರದ್ದುಪಡಿಸಿದ್ದರಿಂದ ಸಮಾಜವಾದಕ್ಕೆ ಅನುಕೂಲವಾಗಿದೆಯೇ ಎಂದು ಪ್ರಶ್ನಿಸಿದರು. ಔಷಧಗಳ ನಿಯಂತ್ರಣದಿಂದಾಗಿ ಅವುಗಳ ಬೆಲೆ ಏರಲು ಕಾರಣವಾಗಿ ಬಡವರಿಗೆ ದಕ್ಕುವ ರೀತಿಯಲ್ಲಿಲ್ಲ ಎಂದರು. ಉನ್ನತ ನ್ಯಾಯಾಲಯಗಳು ಸಿರಿವಂತರ ಸಾಧನಗಳಾಗಿವೆ, ಬಡವರು ಜಿಲ್ಲಾ ನ್ಯಾಯಾಲಯಗಳಿಗೆ ಹೋಗಲೂ ಸಾಧ್ಯವಿಲ್ಲದಂತಿದೆ. ಹೀಗಾಗಿ ಭೂಸುಧರಣೆಯು ನಿಜವಾಗಿಯೂ ಯಶಸ್ವಿಯಾಗಿದೆಯೇ? ಭೂಮಾಲೀಕರು ಕಾನೂನನ್ನು ಸ್ಥಗಿತಗೊಳಿಸಿದ್ದಾರೆ, ತಮ್ಮ ಜಮೀನನ್ನು ತಮ್ಮ ನಂಟರಿಷ್ಟರಿಗೇ ಹಂಚಿ ಕೊಂಡಿದ್ದಾರೆ. ಭೂಮಿಯ ಮೇಲಿನ ಒಡೆತನವನ್ನು ಉಳಿಸಿಕೊಳ್ಳುವ ಪ್ರಯತ್ನಗಳಿಂದಾಗಿ ಆಂಧ್ರ ಮತ್ತು ಪಂಜಾಬ್‌ಗಳಲ್ಲಿ ವ್ಯಾಪಕವಾಗಿ ವಿಚ್ಛೇದನಗಳು ನಡೆಯುತ್ತಿವೆಯೆಂಬ ವರದಿಗಳ ಕಡೆ ಸಭಿಕರ ಗಮನ ಸೆಳೆದರು. ಇಳುವರಿಯ ಅಸಮರ್ಪಕತೆಯಿಂದಾಗಿ ಹಣದುಬ್ಬರ ಹೆಚ್ಚಾಗಿದೆ. ಸಾಗುವಳಿ ಭೂಮಿಯು ಬೆಳೆ ತೆಗೆಯುವ ಆಕರವಾಗಿಲ್ಲ. ಅದರ ಬದಲು, ರಸ್ತೆಗಳು ಶಾಲೆಗಳು ಹಾಗೂ ಕೈಗಾರಿಕೆಗಳ ನಿರ್ಮಾಣದಿಂದಾಗಿ ಅದರ ಪ್ರಮಾಣ ಕುಂಠಿತಗೊಂಡಿದೆ. ಹೀಗಾಗಿ ಆಹಾರೋತ್ಪಾದನೆಯನ್ನು ಹೆಚ್ಚಿಸಬೇಕಾದ ತುರ್ತು ಒದಗಿದೆ. ಕೃಷಿಗೆ ಹೆಚ್ಚಿನ ಗಮನ ನೀಡಬೇಕಾಗಿದೆ, ನೀರಾವರಿ ಸೌಲಭ್ಯಗಳಿಂದ ನಿರುದ್ಯೋಗ ಕಡಿಮೆಯಾಗಬಲ್ಲುದು. ಪಕ್ಷದ ಕಾರ್ಯಕರ್ತರು ಈ ಎಲ್ಲ ವಿಷಯಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕಾಗಿದೆ. ಹಿಂದಿರುಗಿ ನೋಡಿದರೆ,

ಬ್ಯಾಂಕ್ ರಾಷ್ಟ್ರೀಕರಣವನ್ನು ಮತ್ತು ಮಾಜಿ ರಾಜರ ಮೊಗದಿಯ ರದ್ದತಿಯನ್ನು ಟೀಕಿಸಿದ್ದ ವಿವೇಕವನ್ನೀಗ ಪ್ರಶ್ನಿಸಬೇಕಾಗಿದೆ. ಜನಪ್ರಿಯ ನೀತಿಗಳ ಬಗೆಗಿನ ಟೀಕೆಗಳನ್ನು ಬಿಟ್ಟು ನಿಜಲಿಂಗಪ್ಪನವರು ತಮ್ಮ ಇತರ ಆಲೋಚನೆಗಳನ್ನು ಸಭಿಕರ ಮುಂದಿಡಬಹು ದಾಗಿತ್ತು. ಕಾರ್ಯಕಾರಿ ಸಮಿತಿಗೆ ನಡೆದ ಚುನಾವಣೆಯಲ್ಲಿ, ನಿಜಲಿಂಗಪ್ಪನವರಿಗೆ ಗುರುಪಾದಸ್ವಾಮಿಯವರನ್ನು ಬೆಂಬಲಿಸುವ ಇರಾದೆಯಿತ್ತು. ಆದರೆ ನಾಗಪ್ಪ ಆಳ್ವರ ಮಧ್ಯಸ್ಥಿಕೆಯನ್ನು ಮಾನ್ಯ ಮಾಡಿ ಅವರು ತಟಸ್ಥರಾಗಿರಲು ನಿರ್ಧರಿಸಿದರು, ಹೀಗಾಗಿ ವೀರೇಂದ್ರ ಪಾಟೀಲ್ ಗೆದ್ದರು.

ಆ ಮುಂದಿನ ಡಿಸೆಂಬರ್‌ನಲ್ಲಿ, ನಿಜಲಿಂಗಪ್ಪನವರ ಹುಟ್ಟು ಹಬ್ಬವನ್ನಾಚರಿಸಲು ಜನ ಕರ್ನಾಟಕಾದ್ಯಂತ ಸಿದ್ಧರಾದರು. ಅವರ ಬೆಂಬಲಿಗರಿಗೆ ಅದೊಂದು ಸಂಭ್ರಮದ ಸನ್ನಿವೇಶ. ಚಿತ್ರದುರ್ಗದ ಜನತೆ ಮತ್ತವರ ಅನುಯಾಯಿಗಳು ಅವರ ಎಪ್ಪತ್ತೊಂದನೇ ಹುಟ್ಟುಹಬ್ಬವನ್ನು ದೊಡ್ಡ ರೀತಿಯಲ್ಲಿ ಆಚರಿಸಿದರು; ಅದು ಡಿಸೆಂಬರ್ ೧೦. ನಡೆದ ಭಾರಿ ಮೆರವಣಿಗೆಯಲ್ಲಿ ಎಚ್.ಡಿ. ದೇವೇಗೌಡ, ವೀರೇಂದ್ರ ಪಾಟೀಲ್ ಮತ್ತಿತರರು ಪಾಲ್ಗೊಂಡಿದ್ದರು. ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿದ್ದವರು ದೇವೇಗೌಡರು. ನಿಜಲಿಂಗಪ್ಪನವರು ಹೂಹಾರಗಳಲ್ಲಿ ಮುಳುಗಿ ಹೋದರು, ಅವರ ಅಭಿಮಾನಿಗಳು ಅವರಿಗೆ ಭಾರಿ ಮೊತ್ತದ ನಿಧಿಯೊಂದನ್ನು ಅರ್ಪಿಸಿದರು. ಇದನ್ನವರು ಪಿಸಿಸಿ ಕಚೇರಿಗೆ ನೀಡಿಬಿಟ್ಟರು. ಅಧಿಕಾರದಲ್ಲಿಲ್ಲದಿದ್ದರೂ ಸಜ್ಜನರನ್ನು ಜನ ಗೌರವಿಸುತ್ತಾರೆ ಎಂಬುದಕ್ಕೆ ಈ ಸಮಾರಂಭವೊಂದು ನಿದರ್ಶನವಾಯಿತು. ಆದರೆ ನಿಜಲಿಂಗಪ್ಪನವರು ಲಿಂಗಾಯತರ ಒಂದು ಗುಂಪಿಗೆ ಮತ್ತದರ ಮಠಾಧೀಶರಿಗೆ ಬೇಕಾದವರಾಗಿರಲಿಲ್ಲ. ರಾಜಕಾರಣ ಮತ್ತು ಧರ್ಮಗಳನ್ನು ಸೇರಿಸುವುದು ನಿಜಲಿಂಗಪ್ಪನವರಿಗೆ ಸರಿ ಹೋಗದು, ಸ್ವಾಮಿಗಳು ಅಧಿಕಾರಸ್ಥ ರಾಜಕಾರಣಿಗಳ ಭಟ್ಟಂಗಿಗಳಾಗುವುದನ್ನು ಕಂಡರಾಗದು. ಅಂತಹ ರಾಜಕೀಯ ಗುರುಗಳ ಬಗ್ಗೆ ಅವರಿಗೆ ಗೌರವವಿರಲಿಲ್ಲ. ಆದರೆ ಅದೃಷ್ಟವಶಾತ್, ರಾಜಕೀಯದಿಂದ ದೂರವಿದ್ದ ಕೆಲವು ಸ್ವಾಮೀಜಿಗಳಿದ್ದರು. ಅಂಥ ಒಬ್ಬರಾದ ಮಲ್ಲಾಡಿ ಹಳ್ಳಿಯ ರಾಘವೇಂದ್ರ ಸ್ವಾಮೀಜಿಯ ಬಗ್ಗೆ ನಿಜಲಿಂಗಪ್ಪನವರಿಗೆ ಅಪಾರ ಗೌರವ. ದೊಡ್ಡ ರೀತಿಯಲ್ಲಿ ಸಾರ್ವಜನಿಕ ಸೇವೆ ಮಾಡುತ್ತಿರುವ ಅಲ್ಲಿನ ಆಶ್ರಮದ ಸ್ವಾಮೀಜಿ ಯವರಿಗೆ ಅವರು ಸಹಾಯವನ್ನೂ ಮಾಡಿದ್ದರು. ರಾಜ್ಯದಲ್ಲಿನ ಈಗಿನ ಸರ್ಕಾರವು ಆ ಆಶ್ರಮಕ್ಕೆ ನೆರವು ನೀಡಲು ನಿರಾಕರಿಸಿತ್ತು, ಅದಕ್ಕೆ ಕಾರಣ ಆಶ್ರಮವು ನಿಜಲಿಂಗಪ್ಪ ನವರ ಬೆಂಬಲಿಗರದೆಂದು ಗುರುತಿಸಿದ್ದುದು! ಈ ಸಜ್ಜನ ಸಾಧುಗಳನ್ನು ಕೊಲೆಮಾಡುವ ಪ್ರಯತ್ನಗಳೂ ನಡೆದಿದ್ದುವು. ಕರ್ನಾಟಕದ ರಾಜಕೀಯ ಪರಿಸ್ಥಿತಿಯು ಹೆಚ್ಚು ಹೆಚ್ಚಾಗಿ ನಿಜಲಿಂಗಪ್ಪನವರ ವಿರೋಧವಾಗಿ ಹಬ್ಬುತ್ತಿತ್ತು. ಹೊಸ ಮುಖ್ಯಮಂತ್ರಿಯಾಗಿದ್ದ ದೇವರಾಜ

ಅರಸು ಅವರು ೧೯೭೩ರಲ್ಲಿ ಬಿಜಾಪುರ ಜಿಲ್ಲೆಯಲ್ಲಿನ ಬರ ಪರಿಸ್ಥಿತಿಗೆ ಹಿಂದಿನ ಕಾಂಗ್ರೆಸ್ ಸರ್ಕಾರದ ಆಡಳಿತವೇ ಕಾರಣ ಎಂದು ಆರೋಪಿಸಿದರು. ಇದು ನಿಜಲಿಂಗಪ್ಪ ನವರ ಆಡಳಿತದ ವಿರುದ್ಧ ಮಾಡಿದ ಟೀಕೆಯಾಗಿತ್ತು. ಇದಕ್ಕೆ ಪತ್ರಿಕಾ ಗೋಷ್ಠಿಯೊಂದರಲ್ಲಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ನಿಜಲಿಂಗಪ್ಪನವರು, ಅಂದರೆ ದೇವರಾಜ ಅರಸು ತಮ್ಮ ಸಂಪುಟದಲ್ಲಿದ್ದಾಗ ಏನೂ ಮಾಡಲಿಲ್ಲ ಎಂದಂತಾಯಿತು ಎಂದರು. ಆದರೆ ಅರಸು ಮಹಾ ಕುಶಲ ರಾಜಕಾರಣಿ, ಹೀಗಾಗಿ ಮುಂದೆ ನಿಜಲಿಂಗಪ್ಪನವರೊಡನೆ ವಿವಾದದಲ್ಲಿ ಸಿಲುಕಿಕೊಳ್ಳಲಿಲ್ಲ. ತಾವು ಆರಂಭಿಸಿದ್ದ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಿ ದ್ದರೆ ಬಿಜಾಪುರದಲ್ಲಿನ ಈ ಬರವನ್ನು ನಿವಾರಿಸಬಹುದಿತ್ತು ಎಂಬುದು ನಿಜಲಿಂಗಪ್ಪನವರ ಅಭಿಪ್ರಾಯವಾಗಿತ್ತು. ಬರಪೀಡಿತ ಜನಗಳ ಸಂಕಷ್ಟಗಳ ಬಗ್ಗೆ ಅನಾದರ ತಾಳಿದ್ದ ಸರ್ಕಾರದ ವಿರುದ್ಧ ಪ್ರತಿಭಟಿಸಲು ಬಿಜಾಪುರದ ಜನ ನಿರ್ಧರಿಸಿದರು. ೧೯೭೩ನೇ ಮಾರ್ಚ್ ೫ ರಂದು ಬಿಜಾಪುರದಲ್ಲಿ ಸತ್ಯಾಗ್ರಹವನ್ನು ಉದ್ಘಾಟಿಸಬೇಕೆಂದು ಅವರು ನಿಜಲಿಂಗಪ್ಪನವರನ್ನೇ ಕೇಳಿಕೊಂಡರು. ತಾವೂ ೨೫ ಮಂದಿ ಸತ್ಯಾಗ್ರಹಿಗಳಲ್ಲಿ ಒಬ್ಬರಾಗಿ ಭಾಗವಹಿಒಸುವುದಾಗಿ ನಿಜಲಿಂಗಪ್ಪನವರು ಸಿದ್ಧರಾದರು. ನಗರವು ಸಂಪೂರ್ಣ ಹರತಾಳವನ್ನು ಆಚರಿಸಿತು, ನಗರದ ಯಾವ ಅಂಗಡಿಯೂ ಅಂದು ಬಾಗಿಲು ತೆರೆಯಲಿಲ್ಲ. ಸತ್ಯಾಗ್ರಹಿಗಳನ್ನು ಔಪಚಾರಿಕವಾಗಿ ಬಂಧಿಸಿ, ಆಹಾರವನ್ನಿತ್ತು ಬಿಟ್ಟುಬಿಡಲಾಯಿತು! ಮಾರನೆಯ ದಿನ, ನಿಜಲಿಂಗಪ್ಪನವರು ಜಿಲ್ಲಾ ಮುಖ್ಯಸ್ಥರನ್ನು ಕಂಡು ತೆಗೆದುಕೊಳ್ಳಬೇಕಾದ ಪರಿಹಾರ ಕಾರ್ಯಗಳ ಬಗ್ಗೆ ಸಲಹೆಯಿತ್ತರು. ೧೯೭೩ನೇ ಮಾರ್ಚ್ ೬ ರಂದು, ಅವರು ಬರದಿಂದ ಅತ್ಯಂತ ಕಂಗಾಲಾಗಿದ್ದ ಇಂಡೀ ತಾಲ್ಲೂಕಿನ ವ್ಯಾಪಕ ಪ್ರವಾಸ ಕೈಗೊಂಡರು, ಅಲ್ಲಿನ ದುಸ್ಥಿತಿಯನ್ನು ಕಂಡು ಮರಗಿ ಹೋದರು. ಹೊಲಗಳೆಲ್ಲ ಒಣಗಿ ಗಾರಾಗಿದ್ದವು, ಜನರಿಗೆ ತಿನ್ನಲು ಏನೂ ಇರಲಿಲ್ಲ. ಜಾನುವಾರುಗಳು ಸೊರಗಿದ್ದುವು. ಕೇಂದ್ರ ಸರ್ಕಾರವು ಮಹಾರಾಷ್ಟ್ರಕ್ಕೆ ಕೊಟ್ಟಷ್ಟು ಸಹಾಯವನ್ನು ಕರ್ನಾಟಕಕ್ಕೆ ನೀಡಲಿಲ್ಲ. ಈ ಹೊತ್ತಿನಲ್ಲಿ, ಪ್ರಧಾನ ಮಂತ್ರಿಗಳೂ ಕರ್ನಾಟಕಕ್ಕೆ ಭೇಟಿಯಿತ್ತರು. ಅವರನ್ನು ಭೇಟಿಯಾಗಲು ನಿಜಲಿಂಗಪ್ಪನವರು ಕೌತುಕರಾಗಿರಲಿಲ್ಲ, ಆದರೆ ವೀರೇಂದ್ರ ಪಾಟೀಲರು ಅವರನ್ನು ಭೇಟಿಯಾದರು. ಈ ಭೇಟಿಯ ಬಗ್ಗೆ ಕೇಳಿದಾಗ ನಿಜಲಿಂಗಪ್ಪನವರು ವಿಚಲಿತರಾದರು.

ಇದೇ ವೇಳೆಯಲ್ಲಿ, ಮೂಲಭೂತ ಹಕ್ಕುಗಳ ಕುರಿತ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಕೈಗೆತ್ತಿಕೊಂಡಿತ್ತು. ನ್ಯಾಯಾಲಯವು ಈ ಬಗ್ಗೆ ಸಂಸತ್ತಿನ ಪರವಾಗಿ ತೀರ್ಪು ನೀಡಿತು. ಮೂಲಭೂತ ಹಕ್ಕುಗಳನ್ನು ಕಡಿತಗೊಳಿಸಲು ಅಥವಾ ಹತ್ತಿಕ್ಕಲು ಸಂಸತ್ತಿಗೆ ಸಂವಿಧಾನಾತ್ಮಕ ಬದಲಾವಣೆಗಳನ್ನು ಮಾಡುವ ಅಧಿಕಾರವಿದೆ ಎಂಬುದು ಅದರ

ತೀರ್ಮಾನಾಗಿತ್ತು. ತೀರ್ಪು ತಮ್ಮ ಪರವಾದುದು ಎಂದು ಇಂದಿರಾ ಗಾಂಧಿ ಮತ್ತವರ ಅನುಯಾಯಿಗಳು ಸಂಭ್ರಮಪಟ್ಟರು. ಇಂದಿರಾ ಅವರ ಸರ್ಕಾರವು, ತಮ್ಮ ಅಭೀಪ್ಸೆಗಳಿಗೆ ಹೊಂದಾಣಿಕೆಯಾಗುತ್ತಿದ್ದ ನ್ಯಾಯಮೂರ್ತಿ ರಾಯ್ ಅವರನ್ನು ಅವರಿಗಿಂತ ಮೂವರ ಹಿರಿತನವನ್ನು ಕಡೆಗಣಿಸಿ, ಕರ್ನಾಟಕದ ಹೆಗಡೆಯವರೂ ಅವರಲ್ಲೊಬ್ಬರು, ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಧೀಶರನ್ನಾಗಿ ನೇಮಿಸಿ ನ್ಯಾಯಾಂಗವನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿತು. ಆತ್ಮಾಭಿಮಾನದಿಂದ ಕಡಗಣಿಸಲ್ಪಟ್ಟ ನ್ಯಾಯ ಮೂರ್ತಿಗಳು ರಾಜೀನಾಮೆಯಿತ್ತರು. ಇದರಿಂದ ನಿಜಲಿಂಗಪ್ಪನವರು ದುಃಖಿತರಾದರು. ದಿನೇ ದಿನೇ ಕಾಂಗ್ರೆಸ್ (ಓ) ನಾಯಕರುಗಳ ನೈತಿಕ ಸ್ಥೈರ್ಯವು ಕುಗ್ಗುವುದನ್ನು ನಿಜಲಿಂಗಪ್ಪನವರು ನೋಡುತ್ತಲೇ ಇರುವಂತಾಯಿತು. ಆದರೆ ತಾವು ಮಾತ್ರ ದೇಶದ ಸುಭದ್ರತೆ ಮತ್ತು ಕಲ್ಯಾಣಗಳ ಬಗೆಗಿನ ತಮ್ಮ ಬದ್ಧತೆಯಿಂದ ಹಿಂದೆ ಸರಿಯಲಿಲ್ಲ. ಈ ಮಧ್ಯೆ, ನಿಜಲಿಂಗಪ್ಪನವರ ನಿಲವನ್ನು ಸಂಪೂರ್ಣ ಒಪ್ಪದ ಅಶೋಕ ಮೆಹ್ತಾ ಅವರು ಸಾದಿಕ್ ಆಲಿ ಅವರ ಸ್ಥಾನಕ್ಕೆ ಬಂದರು. ಸಮಯ ಸಿಕ್ಕಿದಾಗಲೆಲ್ಲ, ನಿಜಲಿಂಗಪ್ಪ ನವರ ಕಾಲ ಆಗಿ ಹೋಯಿತೆಂದೂ ಅವರನ್ನು ಅನುಸರಿಸಿದರೆ ತಮ್ಮ ಭವಿಷ್ಯವು ಕಗ್ಗತ್ತಲಲ್ಲಿ ಮುಳುಗುವುದೆಂದೂ ಹೆಗಡೆ, ದೇವೇಗೌಡ ಹಾಗೂ ವೀರೇಂದ್ರ ಪಾಟೀಲರು ಮೆಹ್ತಾ ಅವರ ಕಿವಿ ಕಚ್ಚುತ್ತಿದ್ದರು! ಅಂಥ ವಿರೋಧಿ ಪರಿಸ್ಥಿತಿಯಿಂದಲೂ ವಿಚಲಿತರಾಗದ ನಿಜಲಿಂಗಪ್ಪನವರು ಪ್ರವಾಸ ಕೈಗೊಂಡು ಜನರನ್ನು ಭೇಟಿಯಾಗಿ ಅವರ ಸಮಸ್ಯೆಗಳ ಕುರಿತು ಚರ್ಚೆ ಮಾಡುತ್ತ ಅವರಿಗೆ ತಿಳಿವಳಿಕೆ ನೀಡುತ್ತ ನಡೆದರು. ಅದೊಂದು ಅಪೂರ್ವ ಸನ್ನಿವೇಶ, ಪರಿಶುದ್ಧ ನೈತಿಕಬಲವು ಎಂಥ ಸಾಮರ್ಥ್ಯ ಹೊಂದಬಲ್ಲುದು ಎಂಬುದರ ಪ್ರತೀಕವಾಗಿತ್ತು. ಅಧಿಕಾರ ಹುದ್ದೆ ಎರಡೂ ಇಲ್ಲದ ನಿಜಲಿಂಗಪ್ಪನವರನ್ನು ಜನರು ಭೇಟಿಯಾಗಿ ಅವರ ಸಲಹೆ ಆಶೀರ್ವಾದಗಳನ್ನು ಬೇಡುತ್ತಿದ್ದರು. ಈ ಬಗೆಯಲ್ಲಿ ಸಾಮಾನ್ಯ ಜನತೆ ನಿಜಲಿಂಗಪ್ಪನವರನ್ನು ಸ್ಫೂರ್ತಿಯ ಸೆಲೆಯಾಗಿ ಪರಿಭಾವಿಸಿದರು. ಆದರೆ ಪಕ್ಷ ಮಾತ್ರ ಕ್ರಮೇಣ ಕೃಶವಾಗುತ್ತಿತ್ತು, ಒಬ್ಬೊಬ್ಬರಾಗಿ ನಾಯಕರು ಅದನ್ನು ತೊರೆಯಲು ಹಾತೊರೆಯುತ್ತಿದ್ದರು. ಎರಡೂ ಕಾಂಗ್ರೆಸ್‌ಗಳನ್ನು ಇಂದಿರಾ ಗಾಂಧಿ ಯವರ ನೇತೃತ್ವದಲ್ಲಿ ವಿಲೀನಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ ಎಂಬ ಸುಳಿವು ಅವರ ಕಣ್ಣಿಗೆ ಬಿತ್ತು. ಕಾಮರಾಜ ಮತ್ತು ಇಂದಿರಾ ಗಾಂಧಿಯವರ ಭೇಟಿ, ವೀರೇಂದ್ರ ಪಾಟೀಲ್ ಮತ್ತು ಕಾಮರಾಜರ ಮತ್ತು ಕೃಷ್ಣಮಾಚಾರಿಯವರ ನಡುವಣ ಪುನಃ ಪುನಃ ಭೇಟಿ ಇವುಗಳ ಬಗೆಗಿನ ಪ್ರಚಾರವು ಅವರ ಮನಸ್ಸಿನಲ್ಲಿ ಈ ಅನಿಸಿಕೆಯನ್ನು ಮೂಡಿಸಿತು. ಕಾಮರಾಜರನ್ನು ನಿಜಲಿಂಗಪ್ಪನವರು ಭೇಟಿಯಾದಾಗ, ಅವರೆಲ್ಲ ಸೇರಿ ಕಾಂಗ್ರೆಸ್ (ಓ) ಅನ್ನು ವಿಸರ್ಜಿಸುವ ಯೋಜನೆಯ ಅನುಮಾನವು ಬಲಗೊಂಡಿತು.

ಕಾಂಗ್ರೆ ಜೊತೆ ವಿಲೀನಗೊಳ್ಳುವ ಅಪಾಯವನ್ನು ಕುರಿತು ದೆಹಲಿಯಲ್ಲಿ ಕೃಪಲಾನಿ ಮತ್ತವರ ಪತ್ನಿ ಎಚ್ಚರಿಸಿದರು. ಡಿಎಂಕೆ ಮತ್ತು ಎಐಎಡಿಎಂಕೆ ಪಕ್ಷಗಳನ್ನು ಸಮರ್ಥವಾಗಿ ಎದುರಿಸಲು ತಮಿಳುನಾಡಿನಲ್ಲಿ ಕಾಂಗ್ರೆಸ್ (ಓ) ಕಾಂಗ್ರೆ ಜೊತೆ ಮೈತ್ರಿ ಹೊಂದುವುದು ಅನಿವಾರ್ಯವೆಂದು ಕಾಮರಾಜರು ಬೆಂಗಳೂರಿನಲ್ಲಿ ನಡೆದ ಕಾಂಗ್ರೆಸ್ (ಓ) ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ವಾದಿಸಿದರು. ತಮಿಳು ನಾಡು ಹೊರಗಡೆಯ ಸಮಸ್ಯೆಗಳ ಕಡೆ ಕಾಮರಾಜರು ಗಮನ ಹರಿಸಲಿಲ್ಲವೆಂಬದು ಇದರಿಂದ ಸ್ಪಷ್ಟವಾಯಿತು, ಅವರಿಗೆ ರಾಷ್ಟ್ರೀಯ ದೃಷ್ಟಿಕೋನದ ಕೊರತೆಯಿತ್ತು. ತಮ್ಮ ಸಲಹೆಯನ್ನು ಒಪ್ಪಿಕೊಳ್ಳದಿದ್ದರೆ ತಾವು ಪಕ್ಷ ತೊರೆಯುವುದಾಗಿಯೂ ಕಾಮರಾಜರು ಹೆದರಿಸಿದರು. ಡಿಎಂಕೆ ಮತ್ತು ಎಐಎಡಿಎಂಕೆಗಳಂತಹ ಪ್ರಾದೇಶಿಕ ಪಕ್ಷಗಳಲ್ಲಿನ ಭ್ರಷ್ಟತೆಯನ್ನು ಕಂಡರೆ ಕಿಡಿಕಾರುತಿದ್ದ ಕಾಮರಾಜರು, ನಿಜಲಿಂಗಪ್ಪನವರ ಕಣ್ಣಿನಲ್ಲಿ, ಭ್ರಷ್ಟಾಚಾರವು ರಾಷ್ಟ್ರವ್ಯಾಪಿ ಸಮಸ್ಯೆಯೆಂಬುದನ್ನು ಗುರುತಿಸಿರಲಿಲ್ಲ. ಅನಾರೋಗ್ಯದ ನಿಮಿತ್ತ ನಿಜಲಿಂಗಪ್ಪನವರು ೧೯೭೩ನೇ ನವೆಂಬರ್ ೧೧ ರಂದು ದೆಹಲಿಯಲ್ಲಿ ನಡೆದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಭಾಗವಹಿಸಲಾಗಲಿಲ್ಲ. ಟಂಡನ್ ಅವರ ರಾಜೀನಾಮೆಯ ಬಳಿಕ ನೆಹರೂ ಅಧ್ಯಕ್ಷರಾಗಿದ್ದ ಎರಡು ವರ್ಷಗಳ ಹೊರತು ೧೯೪೮ ರಿಂದ ನಿರಂತರವಾಗಿ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದ ಅವರು ಸಭೆಗಳಿಗೆ ಧಾರ್ಮಿಕ ಶ್ರದ್ಧೆಯಿಂದ ಹಾಜರಾಗುತ್ತಿದ್ದರು. ಆ ಎರಡು ವರ್ಷಗಳ ಕಾಲ ಅವರನ್ನು ಕಾರ್ಯಕಾರಿ ಸಮಿತಿಯಿಂದ ಹೊರಗಿಡಲಾಗಿತ್ತು. ಅದಕ್ಕೆ ಕಾರಣ ಉತ್ತರ ಕರ್ನಾಟಕದ ಕೆಲವು ಬ್ರಾಹ್ಮಣರು ನಿಜಲಿಂಗಪ್ಪನವರ ಬಗ್ಗೆ ನೆಹರೂ ಅವರ ಮನಸ್ಸನ್ನು ಕೆಡಿಸಿದ್ದು. ಈ ಮಧ್ಯೆ, ಕಾಮರಾಜರು ಇಂದಿರಾ ಗಾಂಧಿಯವರನ್ನು ೧೯೭೩ರ ನವೆಂಬರ್‌ನಲ್ಲಿಯೇ ಎರಡನೆಯ ಬಾರಿ ಭೇಟಿಯಾಗಿ ಪಾಂಡಿಚೆರಿಯಲ್ಲಿ ನಡೆಯಲಿದ್ದ ಚುನಾವಣೆಗಳಲ್ಲಿ ಅವರೊಡನೆ ಚುನಾವಣಾ ಮೈತ್ರಿಯ ಬಗ್ಗೆ ಮಾತುಕತೆ ನಡೆಸಿದ್ದರು. ಕಾಮರಾಜರು ಪ್ರಾದೇಶಿಕ ನಾಯಕರೇ ಹೊರತು ತಮಿಳು ನಾಡಿನ ಹೊರಗೆ ತಮ್ಮ ದೃಷ್ಟಿ ಹಾಯಿಸಲಾರದವರು ಎಂಬ ಭಾವನೆಯನ್ನು ನಿಜಲಿಂಗಪ್ಪನವರು ತಮ್ಮ ದಿನಚರಿಯಲ್ಲಿ ನಮೂದಿಸಿದ್ದಾರೆ. ತಾವು ಕಾಮರಾಜರನ್ನು ಕಂಡು ಇಂದಿರಾ ಗಾಂಧಿಯವರ ನಾಯಕತ್ವವನ್ನು ಬಲಪಡಿಸುವಂತೆ ಮನವೊಲಿಸುವುದಾಗಿ ಸಂಜೀವರೆಡ್ಡಿಯವರ ೧೯೭೩ರ ನವೆಂಬರ್ ೧೯ರ ಪತ್ರಿಕಾ ಹೇಳಿಕೆಯನ್ನು ಓದಿ ನಿಜಲಿಂಗಪ್ಪನವರು ರೋಷಭರಿತರಾದರು. ಈ ಸುದ್ದಿಯು ನಿಜಲಿಂಗಪ್ಪನವರು ಸಂಜೀವರೆಡ್ಡಿಯವರ ಮತ್ತವರ ರಾಜಕಾರಣದ ಬಗ್ಗೆ ಇರಿಸಿಕೊಂಡಿದ್ದ ಭಾವನೆಗೆ ವ್ಯತಿರಿಕ್ತವಾಗಿತ್ತು. ಒಟ್ಟಾರೆ, ಕಾಂಗ್ರೆಸ್ (ಓ) ನಾಯಕತ್ವವು ಕುಸಿಯುತ್ತಿದ್ದ ಸುದ್ದಿಯನ್ನು ನಿಜಲಿಂಗಪ್ಪನವರು ಪ್ರತಿದಿನ ಓದುವಂತಾಯಿತು. ಇಂದಿರಾ ಗಾಂಧಿಯವರೊಡನೆ

ಕಾಮರಾಜರು ಕಾರ್ಯಕಾರಿ ಸಮಿತಿಯ ಹಿಂದೆ ಮಾಡಿಕೊಂಡ ಈ ಒಪ್ಪಂದವನ್ನು ಅನೇಕ ಕಾರ್ಯಕರ್ತರು ಖಂಡಿಸಿದರು. ಎಲ್ಲರೂ ಕಾಮರಾಜರನ್ನು ಹೊಗಳಿ ಅಟ್ಟಕ್ಕೇರಿಸಿ, ಅದು ಅವರ ತಲೆಗೆ ಹತ್ತಿ ಅವರ ವಿವೇಚನೆಯನ್ನು ಹಾಳುಮಾಡಿದೆಯೆಂದು ನಿಜಲಿಂಗಪ್ಪನವರು ಅಂದುಕೊಂಡರು. ತಾವು ಇಂದಿರಾ ಗಾಂಧಿಯವರ ಶತ್ರುವಲ್ಲ, ಆದರೆ ಎರಡೂ ಕಾಂಗ್ರೆಸ್‌ಗಳನ್ನು ಒಂದು ಮಾಡಲು ಆಸಕ್ತಿಯಿಲ್ಲ, ತಮ್ಮ ಖಂಡನೆಯು ಇಂದಿರಾ ಅವರ ಆಡಳಿತದ ವಿರುದ್ಧವಲ್ಲ, ಆದರೆ ತಪ್ಪು ನಿರ್ಧಾರಗಳನ್ನು ಕೈಗೊಳ್ಳುತ್ತಿರುವ ಕರ್ಣಾಟಕ ಸರ್ಕಾರದ ವಿರುದ್ಧ ಎಂಬ ತಮ್ಮ ಶಿಷ್ಯ ವೀರೇಂದ್ರ ಪಾಟೀಲರ ಹೇಳಿಕೆಯನ್ನೋದಿ ಅವರು ಕುಗ್ಗಿಹೋದರು. ಆ ಕಾಲದಲ್ಲಿ ಇಂಥ ಆಘಾತಗಳು ನಿಜಲಿಂಗಪ್ಪನವರಿಗೆ ಸಾಮಾನ್ಯವಾಗಿ ಹೋದುವು. ಆದರೆ ಅತ್ಯಂತ ಭಾರಿ ಹೊಡೆತವೆಂದರೆ, ಕಾಂಗ್ರೆಸ್ (ಓ) ಅಧ್ಯಕ್ಷ ಅಶೋಕ ಮೆಹ್ತಾ ಅವರು ೧೯೭೩ನೇ ನವೆಂಬರ್ ೨೧ರ ತಾರೀಕಿನಂದು ತಮಗೆ ಬರೆದ ಪತ್ರ, ಅದರಲ್ಲಿ ಮೆಹ್ತಾ ಅವರು, ಇಂದಿರಾ ಗಾಂಧಿಯವರದು ಧರ್ಮನಿರಪೇಕ್ಷಕ ಪ್ರಜಾಸತ್ತಾತ್ಮಕ ಪಕ್ಷವಾದ್ದರಿಂದ ಅವರೊಡನೆ ಪಾಂಡಿಚೆರಿ ಮತ್ತು ಕೊಯಮತ್ತೂರುಗಳ ಚುನಾವಣೆಗಳನ್ನೆದುರಿಸಲು ಕಾಮರಾಜರು ಮಾಡಿಕೊಂಡಿದ್ದ ಒಪ್ಪಂದವನ್ನು ಸಮರ್ಥಿಸಿಕೊಂಡದ್ದು. ತಮ್ಮ ಪಕ್ಷದವರ ಅಂತಹ ಕೃತ್ಯಗಳು, ಹೇಳಿಕೆಗಳು ಮತ್ತು ಪ್ರಯತ್ನಗಳು ನಿಜಲಿಂಗಪ್ಪನವರ ನಂಬಿಕೆಗೆ ವಿರುದ್ಧವಾಗಿದ್ದವು. ಅವರ ಪ್ರಕಾರ, ಇಂದಿರಾ ಗಾಂಧಿ ಅವರಿಗೆ ಮಣಿಯುವುದರ ಬದಲು, ಕಾಂಗ್ರೈನ ಭ್ರಷ್ಟತೆ ಮತ್ತು ಅನೈತಿಕತೆಯನ್ನು ಬಯಲು ಮಾಡಬೇಕು ಹಾಗೂ ತನ್ನ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿಕೊಳ್ಳಬೇಕು. ಕಾರ್ಯಕಾರಿ ಸಮಿತಿಯ ಸಭೆಗೆ ಹಾಜರಾಗಿ ಅಲ್ಲಿ ತಮ್ಮೆಲ್ಲ ಭಾವನೆಗಳನ್ನು ಹೊರಹಾಕಿ, ತಮ್ಮ ಜೀವನದ ಉಸಿರಾಗಿದ್ದ ಪಕ್ಷವನ್ನು ತೊರೆಯುವ ಅತ್ಯಂತ ನೋವಿನ ಕ್ಷಣ ಬಂದೊದಗಿದೆಯೆಂದು ಅವರು ತಮ್ಮ ದಿನಚರಿಯಲ್ಲಿ ಬರೆದುಕೊಂಡಿದ್ದಾರೆ. ಅವರ ಅಳಲಿನ ಕೊಡ ತುಂಬಿದ್ದು ಸಿ.ಬಿ. ಗುಪ್ತ ಮತ್ತು ಎಸ್.ಕೆ. ಪಾಟೀಲರು ಕಾಮರಾಜರ ತುತ್ತೂರಿ ಗುಂಪನ್ನು ಸೇರುವ ನಿರ್ಧಾರ ತೆಗೆದುಕೊಂಡಾಗ. ಕಾಂಗ್ರೆಸ್ (ಓ) ವರ್ತುಲಗಳಲ್ಲಿ ಬಲವಾಗಿ ಹಬ್ಬುತ್ತಿದ್ದ ವದಂತಿಯೆಂದರೆ, ಕಾಮರಾಜರು ಇಂದಿರಾ ಗಾಂಧಿಯವರೊಡನೆ ರಹಸ್ಯ ಒಪ್ಪಂದ ಮಾಡಿಕೊಂಡಿದ್ದಾರೆ ಎಂಬುದು. ಆದರೆ, ೧೯೭೪ರ ಏಪ್ರಿಲ್ ೬ ರಂದು ಸೇರಿದ್ದ ಕಾಂಗ್ರೆಸ್ (ಓ) ಕಾರ್ಯಕಾರಿ ಸಮಿತಿಯು ತನ್ನ ನಿರ್ಣಯದಲ್ಲಿ ತಮ್ಮ ಪಕ್ಷವು ಕಾಂಗ್ರೈ ಜೊತೆ ವಿಲೀನಗೊಳ್ಳಬಾರದೆಂದೂ ಅವರೆಡೆಗೆ ಸಹಕಾರ ಹಸ್ತ ಚಾಚಬಾರದೆಂದೂ ಹೇಳಿತು. ಇದರಿಂದ ಕಾಮರಾಜರು ಪಕ್ಷದಿಂದ ಹೊರಹೋಗುವಂತಾಗಬಹುದೆಂದು ನಿಜಲಿಂಗಪ್ಪನವರು ಭಾವಿಸಿದರು. ಅದೊಂದು ನಷ್ಟವೇ ಸರಿ, ಆದರೆ ಅಂಥವರು ಪಕ್ಷದಿಂದ ಹೊರ

ಹೋಗುವುದೇ ಲೇಸು. ಈ ನಡುವೆ, ಪಕ್ಷಾಂತರಗಳ ಮೂಲಕ ಇಂದಿರಾ ಗಾಂಧಿಯವರ ಪಕ್ಷವು ಬಲಿಷ್ಠವಾಗುತ್ತ ಸಾಗಿದ್ದು ಅವರ ಮ್ಲಾನತೆಗೆ ಕಾರಣವಾಯಿತು. ಈ ಪಕ್ಷಾಂತರ ವೆಂಬುದು ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ಸಂಸ್ಕೃತಿಯ ಸಹಜ ವಿದ್ಯಮಾನ ವಾಗಿಬಿಟ್ಟಿದೆ. ಪಕ್ಷವು ಗೊಂದಲದಲ್ಲಿ ಸಿಲುಕಿ ದಿಕ್ಕು ಕಳೆದುಕೊಂಡಿದ್ದಾಗ, ನಿಜಲಿಂಗಪ್ಪ ನವರಿಗೆ ಮತ್ತೊಂದು ಆಘಾತ ಕಾದಿತ್ತು: ತಮ್ಮ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆಯಿತ್ತ ಅಶೋಕ ಮೆಹ್ತಾ ಅವರ ರಹಸ್ಯ ಪತ್ರ ೧೯೭೪ರ ಮೇ ೧೧ ರಂದು ಅವರ ಕೈ ಸೇರಿತು. ರಾಜೀನಾಮೆ ನೀಡಲು ಅವರಿತ್ತಿದ್ದ ಕಾರಣವೆಂದರೆ, ತಾವು ಪರಿಣಾಮಕಾರಿ ಯಾಗಿ ಕಾರ್ಯ ನಿರ್ವಹಿಸಲಾಗದುದು. ಇದು ಶುದ್ಧ ಪಲಾಯನವಾದೀ ಕಾರ್ಯ ವೆಂದು ನಿಜಲಿಂಗಪ್ಪವರಿಗನ್ನಿಸಿತು. ಪಕ್ಷದ ವಿದ್ಯಮಾನಗಳು ಮಾತ್ರವಲ್ಲ, ದೇಶದಲ್ಲಿನ ಬೆಳವಣಿಗೆಗಳು ಹಾಗೂ ಅವುಗಳಿಂದ ಉದ್ಭವವಾಗಿದ್ದ ಸಮಸ್ಯೆಗಳು ಕೂಡ ದುರ್ಗಮ ವಾಗಿದ್ದು ನಿಜಲಿಂಗಪ್ಪನವರನ್ನು ಖಿನ್ನತೆಯ ಕೂಪಕ್ಕೆ ತಳ್ಳಿತು. ಇಂದಿರಾ ಗಾಂಧಿಯವರು ರಾಜ್ಯಗಳಲ್ಲಿನ ಈ ಸಮಸ್ಯೆಗಳ ಕಡೆ ಗಮನ ಸೆಳೆದರೇ ವಿನಾ ಅವರು ಘೋಷಣೆಗಳ ಹೊರತಾಗಿ ಯಾವುದೇ ಪರಿಹಾರವನ್ನೂ ಸೂಚಿಸಲಿಲ್ಲ. ನೇತ್ಯಾತ್ಮಕ ಮಾರ್ಗ ಹಿಡಿದು ಜವಾಬ್ದಾರಿಯನ್ನೆಲ್ಲ ವಿರೋಧ ಪಕ್ಷಗಳ ಮೇಲೆ ಹಾಕುವ ಕ್ರಮ ಅವರದು. ಇಂದಿರಾ ಗಾಂಧಿಯವರ ಧೋರಣೆ ಹಾಗೂ ನಿಲವುಗಳನ್ನು ನಿಜಲಿಂಗಪ್ಪ ಪ್ರತಿ ಸಂದರ್ಭ ದಲ್ಲಿಯೂ ಖಂಡಿಸುತ್ತಿದ್ದರು. ಅವರ ಸ್ನೇಹಿತ ಜೆ.ಎಂ. ಇಮಾಂ ಅವರ ಅಭಿಪ್ರಾಯವನ್ನು ಒಪ್ಪಿದವರು, ಅಲ್ಪಸಂಖ್ಯಾತರನ್ನೂ ಪರಿಶಿಷ್ಟ ಜಾತಿಯವರನ್ನೂ ಸ್ವಹಿತಕ್ಕಾಗಿ ಶೋಷಣೆ ಮಾಡುವ ಇಂದಿರಾ ಗಾಂಧಿಯವರ ದಾರಿಯನ್ನು ಅವರೂ ಟೀಕಿಸಿದರು. ಫಕ್ರುದ್ದೀನ್ ಆಲಿ ಅಹಮದ್ ಅವರನ್ನು ರಾಷ್ಟ್ರಪತಿಗಳನ್ನಾಗಿ ಮಾಡುವ ಯತ್ನದ ಹಿಂದೆ ಇದೇ ಹುನ್ನಾರವಿದೆ ಎಂದವರು ತಿಳಿದರು. ಇಂದಿರಾ ಗಾಂಧಿಯವರನ್ನು ಅಧಿಕಾರದಿಂದ ಕೆಳಗಿಳಿಸುವ ಬಗೆಗಿನ ತಮ್ಮ ಒತ್ತನ್ನು ಜೆಪಿ ಅವರು ಆಕೆಯ ಸವಾಲನ್ನೆದುರಿಸಬಲ್ಲ ಹೊಸ ಪಕ್ಷವೊಂದನ್ನು ಸಂಘಟಿಸುವ ಕಡೆ ಸಾಗಬೇಕೆಂದು ನಿಜಲಿಂಗಪ್ಪನವರು ತಮ್ಮ ದಿನಚರಿಯಲ್ಲಿ ಬರೆದಿದ್ದಾರೆ. ಆದರೆ ಅಂಥದೊಂದು ಪಕ್ಷ ಹುಟ್ಟುವ ಬಗ್ಗೆ ಅವರಿಗೆ ಖಾತ್ರಿ ಇರಲಿಲ್ಲ.

ಭಾರತ ಗಣರಾಜ್ಯದ ಇತಿಹಾಸದಲ್ಲಿ ಒಂದು ಬಿಕ್ಕಟ್ಟಿನ ಕಾಲವಾದ ೧೯೭೪ರಲ್ಲಿ, ತತ್ವನಿಷ್ಠ ಗಾಂಧಿವಾದಿಯಾಗಿದ್ದ ಜೆಪಿ ಅವರು ಇಂದಿರಾ ಗಾಂಧಿಯವರ ಭ್ರಷ್ಟ ಹಾಗೂ ಅನೈತಿಕ ಆಡಳಿತದ ವಿರುದ್ಧ ಒಂದು ಅಹಿಂಸಾತ್ಮಕ ಚಳವಳಿಯನ್ನು ರೂಪಿಸಲು ಮುಂದಾದರು. ಕ್ಷಾಮ ಪರಿಸ್ಥಿತಿ ಬಿಗಡಾಯಿಸಿದಾಗ ಮತ್ತು ರಾಜಕೀಯ ಭ್ರಷ್ಟಾಚಾರವು ತಾರಕಕ್ಕೇರಿದಾಗ ಅವರ ನೇತೃತ್ವದ ಬಿಹಾರದ ಯುವ ಚಳವಳಿಯು ಹಿಂಸಾ ರೂಪ

ತಾಳಿತು. ಸರ್ಕಾರದ ಹಿಂಸೆಯಿಂದ ಎದೆಗುಂದದೆ ಛಾತ್ರ ಪರಿಷತ್ ಜೆಪಿಯವರ ನೈತಿಕತೆಯ ನಾಯಕತ್ವದಲ್ಲಿ ಇಂದಿರಾ ಗಾಂಧಿಯವರ ಆಡಳಿತದ ವಿರುದ್ಧ ಪ್ರಬಲವಾದ ಒಂದು ಚಳವಳಿಯನ್ನು ಮುನ್ನಡೆಸಿತು. ಸಂಸತ್ತು ಮತ್ತು ಶಾಸನಸಭೆಗಳನ್ನು ವಿಸರ್ಜಿಸಬೇಕು ಎಂಬುದು ಅದರ ಒತ್ತಾಯವಾಗಿತ್ತು. ಆದರೆ ಇಂದಿರಾ ಗಾಂಧಿಯವರ ಸಹೋದ್ಯೋಗಿಗಳಾದ ಅವರ ಸಂಪುಟ ಸಚಿವ ಸುಬ್ರಮಣಿಯನ್ ಕಾಂಗ್ರೆ ಅಧ್ಯಕ್ಷ ಶಂಕರ ದಯಾಳ್ ಶರ್ಮ ಅವರ ಜೆಪಿ ಚಳವಳಿಯನ್ನು ಕ್ರಾಂತಿವಿರೋಧಿ ಮತ್ತು ಪ್ರತಿಗಾಮಿ ಚಳವಳಿಯೆಂದು ಕರೆದರು. ಆದರೆ ದೇಶವಿಡೀ ಸರ್ಕಾರದ ವಿರುದ್ಧ ಉರಿದೆದ್ದಿತು. ಗುಜರಾತ್‌ನಲ್ಲಿ ಸರ್ಕಾರಿ ಯಂತ್ರವು ಸ್ಥಗಿತಗೊಂಡಿತು. ಚಿತ್ರದುರ್ಗದಲ್ಲಿ ನಿಜಲಿಂಗಪ್ಪನವರ ನೇತೃತ್ವದ ಯುವ ಕಾಂಗ್ರೆಸ್ (ಓ) ಕಾರ್ಯಕರ್ತರು ೧೯೭೪ರ ಏಪ್ರಿಲ್ ೧೫ ರಂದು ಸಭೆ ಸೇರಿ ದೇಶದಲ್ಲಿ ಹೆಚ್ಚುತ್ತಿರುವ ಬಿಕ್ಕಟ್ಟುಗಳಿಗೆ ಏಕೈಕ ಪರಿಹಾರವಾದ ಜೆಪಿ ಚಳವಳಿಗೆ ತಮ್ಮ ಬೆಂಬಲವನ್ನು ಸೂಚಿಸಿದರು. ತಮ್ಮ ಹಳೆಯ ಗೆಳೆಯ ಕಾಮರಾಜರು ಇವರ ನೀತಿಗೆ ವಿರುದ್ಧವಾಗಿ, ದೇಶವು ಎದುರಿಸುತ್ತಿರುವ ಬಿಕ್ಕಟ್ಟುಗಳ ಶಮನಕ್ಕೆ ಏಕೈಕ ಮಾರ್ಗವಾಗಿ ಜನತೆಯು ಇಂದಿರಾ ಗಾಂಧಿಯವರ ಬೆಂಬಲಕ್ಕೆ ಒಟ್ಟಾಗಿ ನಿಲ್ಲಬೇಕೆಂದು ಪತ್ರಿಕಾ ಹೇಳಿಕೆಯಿತ್ತರು. ಅವರ ಮತ್ತೊಬ್ಬ ಗೆಳೆಯರಾದ ಎಸ್.ಕೆ. ಪಾಟೀಲ್ ನಿಜಲಿಂಗಪ್ಪನವರಿಗೆ ಪತ್ರವೊಂದನ್ನು ಬರೆದು, ಕಾಮರಾಜರ ಪ್ರಾಮಾಣಿಕತೆಯನ್ನು ಪ್ರಶ್ನಿಸಿದರು. ಕಾಮರಾಜರ ಕೃತ್ಯಗಳನ್ನು ಅಧಿಕಾರ ಮತ್ತು ಸ್ಥಾನಮಾನದ ಹಸಿವು ಎಂದು ನಿಜಲಿಂಗಪ್ಪನವರೇ ಬಣ್ಣಿಸಿದರು. ದೇಶದ ರಾಜಧಾನಿ ದೆಹಲಿಯು ರಾಜಕೀಯ ತಂತ್ರಗಾರಿಕೆ, ವ್ಯೂಹರಚನೆ ಮತ್ತು ಮುಸುಕಿನ ಗುದ್ದಾಟಗಳ ಆಡುಂಬೊಲವಾಯಿತು! ರಾಜಧಾನಿಗೆ ನಿಜಲಿಂಗಪ್ಪನವರು ಭೇಟಿಯಿತ್ತಾಗ, ವಿವಿಧ ರಾಜಕೀಯ ಪಕ್ಷಗಳ ನಾಯಕರುಗಳು ದೇಶದ ಸಮಸ್ಯೆಗಳ ಬಗ್ಗೆ ಅವರೊಡನೆ ಚರ್ಚಿಸಿದರು. ೧೯೭೪ರ ಸೆಪ್ಟೆಂಬರ್ ೩೦ ರಂದು ರಾಜ್ ನಾರಾಯಣ್ ಮತ್ತು ಪೀಲೂ ಮೋದಿ ಅವರುಗಳು ಭಾರತೀಯ ಲೋಕದಳ ಪಕ್ಷವನ್ನು ಸೇರುವಂತೆ ನಿಜಲಿಂಗಪ್ಪನವರನ್ನು ಒತ್ತಾಯಿಸಿದರು. ಅವರೂ, ಕರ್ನಾಟಕದ ಅವರ ಸಹಚರರರಾದ ವೀರೇಂದ್ರ ಪಾಟೀಲ್ ಮತ್ತು ಹೆಗಡೆ ಪಕ್ಷವನ್ನು ಸೇರಿದರೆ ಅದಕ್ಕೆ ಹೊಸ ಬಲ ಬರುತ್ತದೆ ಎಂದರು. ಕಾಂಗ್ರೆಸ್ (ಓ) ಪಕ್ಷವು ಬಿಎಲ್‌ಡಿ ಜೊತೆ ವಿಲೀನಗೊಳ್ಳಬೇಕೆಂದು ಸಿ.ಬಿ. ಗುಪ್ತ ಕೂಡ ವಾದಿಸಿದರು. ಎಲ್ಲಡೆಗೂ ಜೆಪಿ ಚಳವಳಿಯು ಕಾಳ್ಗಿಚ್ಚಿನಂತೆ ಹರಡುತ್ತಿತ್ತು. ಪಟ್ನಾ ಮತ್ತು ದೆಹಲಿಗಳಲ್ಲಿ ಚಳವಳಿಯಲ್ಲಿ ಪಾಲುಗೊಂಡವರು ಪೊಲೀಸ್ ದೌರ್ಜನ್ಯಕ್ಕೆ ಬಲಿಯಾದರು. ಪೊಲೀಸರು ಜೆಪಿಯವರನ್ನೇ ಹಿಂಸಾಚಾರ ಕ್ಕೊಳಪಡಿಸಿದರು. ಇದರ ಪರಿಣಾಮವಾಗಿ ಅವರು ತೀವ್ರವಾಗಿ ಗಾಯಗೊಂಡರು.

ಶ್ರೀ ಜಯಪ್ರಕಾಶ್ ನಾರಾಯಣ ಅವರೊಂದಿಗೆ ಅರಸ್

ಆದರೆ ಸರ್ಕಾರಿ ನಿಯಂತ್ರಣದ ಆಕಾಶವಾಣಿಯು ಇದನ್ನು ತನ್ನ ಸುದ್ದಿ ಪ್ರಸಾರದಲ್ಲಿ ಉಲ್ಲೇಖ ಮಾಡಲಿಲ್ಲ. ಜೆಪಿ ಮತ್ತು ಪ್ರಧಾನ ಮಂತ್ರಿಗಳ ನಡುವಣ ಮಾತುಕತೆ ಮುರಿದು ಬಿದ್ದ ಪರಿಣಾಮವಾಗಿ, ಚಳವಳಿಯು ತೀವ್ರ ರೂಪದಲ್ಲಿ ಮುಂದುವರಿಯಿತು. ರಾಕ್ಷಸೀ ಮೀಸಾವನ್ನು ಧಾರಾಳವಾಗಿ ಬಳಸಿಕೊಂಡು ಚಳವಳಿಯನ್ನು ಹತ್ತಿಕ್ಕಲು ಸರ್ಕಾರ ಹಿಂದೆ ಮುಂದೆ ನೋಡಲಿಲ್ಲ. ಈ ಕಾನೂನಿನಡಿ ಬಂಧಿತರಾದವರಿಗೆ ನ್ಯಾಯಾಲಯವನ್ನು ಮೊರಹೊಗುವ ಹಕ್ಕಿರಲಿಲ್ಲ. ಈ ಕಾನೂನಿನ ಪ್ರಕಾರ ಯಾವುದೇ ಕಾರಣ ನೀಡದೆ ಯಾರನ್ನು ಬೇಕಾದರೂ ಬಂಧಿಸಬಹುದಾಗಿತ್ತು. ಆದರೆ ಈ ಕ್ರಮಗಳು ಚಳವಳಿಯು ಮತ್ತಷ್ಟು ತೀವ್ರ ರೂಪ ತಾಳುವಲ್ಲಿ ಪರ್ಯವಸಾನಗೊಂಡುವು. ೧೯೭೫ನೇ ಮಾರ್ಚಿ ೫ ರಂದು ದೆಹಲಿ ಬಂದ್ ಆಚರಿಸಲಾಯಿತು. ಸಾಕ್ಷಾತ್ ಜೆಪಿ ನಾಯಕತ್ವದಲ್ಲಿ ಸರ್ಕಾರದ ವಿರುದ್ಧ ಒಂದು ಅಹಿಂಸಾತ್ಮಕ ಪ್ರದರ್ಶನವನ್ನು ನಡೆಸಲಾಯಿತು. ಇಂದಿರಾ ಗಾಂಧಿಯವರ ಬಲಗೈ ಬಂಟ ಚವಾನ್ ಅವರು ಜೆಪಿ ಚಳವಳಿಯನ್ನು ಬಹಿರಂಗವಾಗಿ ಖಂಡಿಸಿದರು. ಇದನ್ನು ರಾಜಕೀಯ ಅವಕಾಶವಾದಿಗಳ ಕೃತ್ಯ ಎಂದು ಬಣ್ಣಿಸಿದರು. ೧೯೭೫ನೇ ಮಾರ್ಚಿ ೬ ರಂದು ಸರ್ಕಾರದ ವಿರುದ್ಧ ಮೆರವಣಿಗೆ ಮತ್ತು ಸಾರ್ವಜನಿಕ ಸಭೆಗಳು ನಿರಾತಂಕವಾಗಿ ಸಾಗಿದವು. ಜೆಪಿ ದೇಶದೆಲ್ಲೆಡೆ ಪ್ರವಾಸ ಕೈಗೊಂಡು ಜನತೆಯಲ್ಲಿ ರಾಜಕೀಯ ಎಚ್ಚರ ಉಂಟುಮಾಡಲು ಹಾಗೂ ಚಳವಳಿಗೆ ನಿಧಿ ಸಂಗ್ರಹಿಸಲು ಶ್ರಮಿಸಿದರು. ನಿಜಲಿಂಗಪ್ಪನವರು ದೊಡ್ಡ ಮೊತ್ತದ ನಿಧಿಯನ್ನು ಸಂಗ್ರಹಿಸಿ, ಜೆಪಿ ಅವರು ೧೯೭೫ನೇ ಮೇ ೫ ರಂದು ದಾವಣಗೆರೆಗೆ ಬಂದಾಗ ಅವರಿಗೆ ಸಮರ್ಪಿಸಿದರು. ಇಂದಿರಾ ಗಾಂಧಿಯವರನ್ನು ಭಾರಿ ಆಘಾತವೊಂದು ೧೯೭೫ನೇ ಜೂನ್ ೧೨ ರಂದು ಅಪ್ಪಳಿಸಿತು. ಅದೇ ಅವರ ಚುನಾವಣೆಯ ಗೆಲವನ್ನು ರದ್ದುಗೊಳಿಸಿದ ಅಲಹಾಬಾದ್ ಉಚ್ಚ ನ್ಯಾಯಾಲಯದ ತೀರ್ಪು. ಜೆಪಿ ನೇತೃತ್ವದಲ್ಲಿ ವಿರೋಧ ಪಕ್ಷಗಳು, ಈ ತೀರ್ಪಿನ ಹಿನ್ನೆಯಲ್ಲಿ, ಅಧಿಕಾರದಿಂದ ಕೆಳಗಿಳಿಯಬೇಕೆಂದು ಇಂದಿರಾ ಅವರನ್ನು ಒತ್ತಾಯಿಸಿದವು. ಆದರೆ, ಅಸಲಿಯೋ ನಕಲಿಯೋ, ಅಂತೂ ಕಾರ್ಮಿಕರು, ರಿಕ್ಷಾವಾಲಾಗಳು, ಸಣ್ಣ ವ್ಯಾಪಾರಿಗಳು ಮತ್ತು ಅಕ್ಕಪಕ್ಕದ ಹಳ್ಳಿಯ ಜನಗಳ ಭಾರಿ ಗುಂಪೊಂದು ಸೇರಿ ಇಂದಿರಾ ಗಾಂಧಿಯ ಪರ ಘೋಷಣೆಗಳನ್ನು ಕೂಗಿತು. ಇಂದಿರಾ ಗಾಂಧಿಯವರು ಅರ್ಜಿ ಹಾಕಿ ಸರ್ವೋಚ್ಚ ನ್ಯಾಯಾಲಯದಿಂದ ತೀರ್ಪಿಗೆ ತಡೆಯಾಜ್ಞೆಯನ್ನು ಪಡೆದುಕೊಂಡರು. ಜೆಪಿ, ಮೊರಾರ್ಜಿ ಮತ್ತು ಕೃಪಲಾನಿಯವರಂತಹ ಹಿರಿಯ ನಾಯಕರುಗಳು ಇಂದಿರಾ ಅವರು ಅಧಿಕಾರದಲ್ಲಿ ಮುಂದುವರಿಯುವುದು ಅವರ ನೈತಿಕ ದಿವಾಳಿತನದ ದ್ಯೋತಕ ಎಂದು ಸಾರಿದರು. ಆಕೆಯ ನಡವಳಿಕೆಯು ಕೇವಲ ವೈಯಕ್ತಿಕ ಅಧಿಕಾರದ ದುರಾಸೆಯ ಅಭಿವ್ಯಕ್ತಿ ಎಂದು ನಿಜಲಿಂಗಪ್ಪನವರೂ

ಕಟುವಾಗಿ ಟೀಕಿಸಿದರು. ಆದರೆ ತಮಗಿದ್ದ ರಾಕ್ಷಸೀ ಬಹುಮತದ ಕಾರಣದಿಂದ ಇಂದಿರಾ ಗಾಂಧಿಯವರು ತಮ್ಮ ಅಧಿಕಾರದ ಮುಂದುವರಿಕೆಗೆ ಸಂಸತ್ತಿನಲ್ಲಿ ನಿರ್ಣಯ ವನ್ನು ಮಾಡಿಸಿ ನ್ಯಾಯಾಂಗದ ತೀರ್ಪಿಗೆ ಸೆಡ್ಡು ಹೊಡೆದರು. ಇಡೀ ಮಾನವೇತಿಹಾಸ ದಲ್ಲಿ ನಡೆದ ರಾಜಕೀಯ ಪಾತಕ ಎಂದು ಇದನ್ನು ನಿಜಲಿಂಗಪ್ಪ ವರ್ಣಿಸಿದರು.

ಅಲಹಾಬಾದ್ ತೀರ್ಪಿನ ಬಳಿಕ, ಇಂದಿರಾ ಗಾಂಧಿಯವರ ಸುತ್ತ ಬಲಿಷ್ಠ ಗುಂಪೊಂದು ನಿರ್ಮಾಣಗೊಂಡಿತು; ಅದರಲ್ಲಿ ಅವರ ಎರಡನೆಯ ಮಗ ಸಂಜಯ್ ಗಾಂಧಿ, ಸಿದ್ಧಾರ್ಥ ಶಂಕರ ರಾಯ್, ಬನ್ಸಿ ಲಾಲ್, ಆರ್.ಕೆ. ಧವನ್ ಮತ್ತಿತರರು ಸೇರಿದ್ದರು. ಅವರೆಲ್ಲ ಇಂದಿರಾ ಗಾಂಧಿಯವರ ರಾಜಕಾರಣ ಮತ್ತು ಆಡಳಿತಗಳ ಹೊಣೆ ಹೊತ್ತರು. ಅವರ ಮುಖ್ಯ ಉದ್ದೇಶ ಇಂದಿರಾ ಅವರನ್ನು ಕೇಂದ್ರವಾಗಿರಿಸಿ ಕೊಂಡ ಪ್ರಬಲವಾದ ವ್ಯಕ್ತಿಪಂಥವೊಂದರ ನಿರ್ಮಾಣ. ಇಂದಿರಾಪರವಾದ ಮೆರವಣಿಗೆ ಗಳು ಮತ್ತು ಪ್ರದರ್ಶನಗಳನ್ನವರು ಪ್ರತಿ ಪಟ್ಟಣದಲ್ಲಿಯೂ ಏರ್ಪಡಿಸಿದರು. ದೇಶದ ಮೇಲೆ ತುರ್ತು ಪರಿಸ್ಥಿತಿಯನ್ನು ಹೇರಲು ಅವರು ರಹಸ್ಯವಾಗಿ ಸಜ್ಜಾಗುತ್ತಿದ್ದರೆಂಬುದು ಈಗ ಸ್ಪಷ್ಟವಾಗುತ್ತಿದೆ. ಇಂದಿರಾ ಅವರ ಯಂಗ್ ಟರ್ಕ್ ಸಹಚರರಾದ ಚಂದ್ರಶೇಖರ್ ಮತ್ತು ಮೋಹನ್ ಧಾರಿಯ ಅವರನ್ನು ಕೂಡ ತುರ್ತು ಪರಿಸ್ಥಿತಿಯ ಸಿದ್ಧತೆಗಳಿಂದ ದೂರವಿಟ್ಟರು. ಈ ಮಧ್ಯೆ, ಅವರ ಪ್ರಮುಖ ರಾಜಕೀಯ ವಿರೋಧಿಯಾದ ಜೆಪಿ ಅವರು ಲೋಕ ಸಂಘರ್ಷ ಸಮಿತಿಯ ಹೆಸರಿನಲ್ಲಿ ವಿರೋಧ ಪಕ್ಷಗಳನ್ನೆಲ್ಲ ಒಗ್ಗೂಡಿಸು ವಲ್ಲಿ ಯಶಸ್ವಿಯಾದರು. ಇಂದಿರಾ ಗಾಂಧಿಯವರ ನಿರಂಕುಶ ಪ್ರಭುತ್ವದ ವಿರುದ್ಧ ೧೯೭೫ನೇ ಜೂನ್ ೨೯ ರಿಂದ ದೇಶಾದ್ಯಂತ ಅಹಿಂಸಾತ್ಮಕ ಚಳವಳಿಯನ್ನು ಆರಂಭಿಸಲು ಈ ಮೈತ್ರಿಕೂಟವು ಸಿದ್ಧವಾಗುತ್ತಿತ್ತು. ನೈತಿಕ ಮೌಲ್ಯಗಳ ಪುನಃಸ್ಥಾಪನೆ, ಅಸಲಿಯಾದ ಜನಪರ ಸರ್ಕಾರದ ಸ್ಥಾಪನೆ ಮತ್ತು ಜೆಪಿ ಅವರ ಸಂಪೂರ್ಣ ಕ್ರಾಂತಿಯ ಸಾಕಾರ ಇವುಗಳಿಗಾಗಿ ಜೈಲಿಗೆ ಹೋಗಲು ಜನತೆ ಸಿದ್ಧವಾಗಿರಬೇಕೆಂದು ಮನವಿಪತ್ರದಲ್ಲಿ ಕೇಳಿಕೊಳ್ಳಲಾಗಿತ್ತು. ಕಾನೂನು ಬಾಹಿರ ಹಾಗೂ ಸಂವಿಧಾನ ವಿರೋಧೀ ಆಜ್ಞೆಗಳನ್ನು ಧಿಕ್ಕರಿಸುವಂತೆ ಪೊಲೀಸ್ ಮತ್ತು ಸೈನ್ಯಗಳಿಗೆ ಕರೆ ನೀಡಲಾಯಿತು. ಒಟ್ಟಾರೆ, ಇಂದಿರಾ ಗಾಂಧಿಯವರ ಅಧಿಕಾರದ ವಿರುದ್ಧ ಸಮರವನ್ನೇ ಸಾರಲಾಯಿತು, ಆದರೆ ಅದು ಅಹಿಂಸಾತ್ಮಕವಾಗಿಯೂ ನೈತಿಕ ದೃಷ್ಟಿಯಿಂದ ಗಾಂಧಿ ಮಾರ್ಗದ್ದೂ ಆಗಿರುತ್ತದೆಂದು ಊಹಿಸಲಾಗಿತ್ತು. ಇಂತಹ ವ್ಯಾಪಕವೂ ಜನಬೆಂಬಲಿತವೂ ಆದ ಚಳವಳಿಯನ್ನು ತುರ್ತುಸ್ಥಿತಿಗಿಂತ ಕಡಿಮೆಯಾದ ಯಾವುದೂ ತಹಬಂದಿಗೆ ತರಲಾರದೆಂದು ಇಂದಿರಾ ಗಾಂಧಿಯವರಿಗೆ ಮನವರಿಕೆಯಾಯಿತು. ೧೯೭೫ನೇ ಜೂನ್ ೨೫ ರಂದು ರಾತ್ರಿ ೧೧-೪೫ರ ಹೊತ್ತಿಗೆ, ಪ್ರಾಯಶಃ ಇಡೀ ದೇಶದ ಇತಿಹಾದದಲ್ಲಿಯೇ ಅತ್ಯಂತ

ಕರಾಳ ರಾತ್ರಿ, ಅಧ್ಯಕ್ಷ ಫಕ್ರುದ್ದೀನ್ ಆಲಿ ಅಹಮದ್ ಅವರು, ಇಂದಿರಾ ಗಾಂಧಿ ಮತ್ತು ಸಿದ್ಧಾರ್ಥ ಶಂಕರ್ ರಾಯ್ ಅವರ ಸಮ್ಮುಖದಲ್ಲಿ ತುರ್ತು ಪರಿಸ್ಥಿತಿಯ ಘೋಷಣೆಗೆ ಸಹಿ ಹಾಕಿದರು. ತುರ್ತು ಪರಿಸ್ಥಿತಿ ಹೇರಿಕೆ ಬಗ್ಗೆ ಯಾವುದೇ ಸಂಪುಟ ಸಭೆಯಲ್ಲಿಯೂ ತೀರ್ಮಾನಿಸಿರಲಿಲ್ಲ, ಸ್ವತಃ ಗೃಹ ಸಚಿವರಿಗೇ ಆ ಬಗ್ಗೆ ಅರಿವಿರಲಿಲ್ಲ. ಮಾರನೆಯ ದಿನ, ಅಂದರೆ ೧೯೭೫ನೇ ಜೂನ್ ೨೬ ರಂದು ಬೆಳಿಗ್ಗೆ ೬ ಗಂಟೆಯ ಹೊತ್ತಿಗೆ ಮೊರಾರ್ಜಿ ದೇಸಾಯಿ ಮತ್ತಿತರರಂತಹ ವಿರೋಧ ಪಕ್ಷಗಳ ನಾಯಕರನ್ನು ವಶಕ್ಕೆ ತೆಗೆದುಕೊಳ್ಳಲಾಯಿತು. ಬೇಗ ಬೇಗ ಕರಾಳ ಕಾನೂನು ಮಾಲಿಕೆಯನ್ನೇ ಸೃಷ್ಟಿಸಲಾಯಿತು. ತಾತ್ಕಾಲಿಕವಾಗಿಯಾದರೂ ಎಲ್ಲ ಅಧಿಕಾರಗಳೂ ಪ್ರಧಾನ ಮಂತ್ರಿಗಳ ಕೈನಲ್ಲಿಯೇ ಕೇಂದ್ರೀಕೃತವಾಗಿರುವಂತಹ ರಾಜಕೀಯ ವ್ಯವಸ್ಥೆಯನ್ನು ನಿರಂಕುಶಾಧಿಕಾರವನ್ನಾಗಿ ಮಾರ್ಪಡಿಸಲಾಯಿತು. ಸಾರ್ವಜನಿಕ ಸಭೆ, ಹರತಾಳ, ಮುಷ್ಕರ, ಪತ್ರಿಕಾ ಸ್ವಾತಂತ್ರ್ಯ, ಸಕ್ರಿಯ ಪಕ್ಷಗಳು, ಭಾಗಶಃ ಮುಕ್ತ ಮಾಧ್ಯಮಗಳು– ಹೀಗೆ ಎಲ್ಲ ಪ್ರಜಾಸತ್ತಾತ್ಮಕ ಸಂಸ್ಥೆಗಳು ಹಾಗೂ ನಡಾವಳಿಗಳು ರಾತ್ರೋ ರಾತ್ರಿ ಕಣ್ಮರೆಯಾದವು. ಜನರು ಸರ್ಕಾರ ಮತ್ತು ಅಧಿಕಾರಶಾಹಿಯ ಕೃಪೆಯಲ್ಲಿದ್ದರು. ಅಧಿಕಾರಿಗಳ ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತಗಳು ಹೆಚ್ಚಾದವು. ಚವಾನ್ ಮತ್ತು ಜಗಜೀವನ ರಾಂರಂತಹ ಅಧಿಕಾರದಾಹೀ ರಾಜಕಾರಣಿಗಳು ಇಂದಿರಾ ಹೆಜ್ಜೆಯನ್ನು ತೊತ್ತುಗಳಂತೆ ಅನುಸರಿಸುತ್ತ ನಡೆದರು. ನಿರಂಕುಶಾಡಳಿತವನ್ನು ಪ್ರತಿಭಟಿಸಿ ಲೆಕ್ಕವಿಲ್ಲದಷ್ಟು ಮಂದಿ ಸಾಮಾನ್ಯ ಜನರು ಗುಂಪುಗುಂಪಾಗಿ ಜೈಲಿಗೆ ಹೋದರು. ಎಲ್ಲ ಸಚಿವರು ಮತ್ತವರ ಹಿಂಬಾಲಕ ಅಧಿಕಾರಿಗಳ ಮೇಲಿನ ನಿಯಂತ್ರಣವನ್ನು ವ್ಯವಸ್ಥಿತವಾಗಿ ತೆಗೆದು ಹಾಕಲಾಯಿತು, ಹೀಗಾಗಿ ಭಾರತದ ಸಂವಿಧಾನವು ಹರಿದು ಚಿಂದಿಯಾಗಿತ್ತು. ತುರ್ತುಪರಿಸ್ಥಿತಿಯನ್ನು ಬೆಂಬಲಿಸಿದ ಏಕೈಕ ವಿದೇಶವೆಂದರೆ ಸೋವಿಯತ್ ಒಕ್ಕೂಟ, ಅದರ ಕಾರಣ ಸುವಿದಿತವಾಗಿತ್ತು. ಆದರೆ ಪಶ್ಚಿಮ ರಾಷ್ಟ್ರಗಳೆಲ್ಲ, ಅವೂ ಸುವಿದಿತ ರಾಜಕೀಯ ಕಾರಣಗಳಿಗಾಗಿ, ತುರ್ತು ಪರಿಸ್ಥಿತಿಯನ್ನು ವಿರೋಧಿಸಿದುವು. ದೇಶವನ್ನು ವಾಸ್ತವವಾಗಿ ಆಳಿದವರೆಂದರೆ ಪಾದರಸದಂತೆ ಚುರುಕಾಗಿದ್ದ ಆದರೆ ಬೇಜಬ್ದಾರಿತನದಿಂದ ಕೂಡಿದ್ದ ಸಂಜಯ ಗಾಂಧಿ ಸುತ್ತಲಿನ ಪರಮಾಧಿಕಾರ ಹೊಂದಿದ್ದ ತಂಡದ ಸದಸ್ಯರು. ತುರ್ತು ಪರಿಸ್ಥಿತಿ ಘೋಷಣೆಗೂ ಕೆಲವು ತಿಂಗಳುಗಳ ಮುನ್ನವೇ ನಿಜಲಿಂಗಪ್ಪನವರಿಗೆ ಆರೋಗ್ಯ ಸರಿಯಿರಲಿಲ್ಲ. ಅವರ ಎರಡೂ ಕಣ್ಣುಗಳಿಗೆ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು, ಅವರ ದೇಹ ಕಣ್ಣಿಗೆ ಕಾಣುವಷ್ಟು ಬಡವಾಗಿತ್ತು. ಆದರೂ ಅವರು ಜೈಲಿಗೆ ಹೋಗುವ ಕರೆಗೆ ಸಿದ್ಧರಾಗುತ್ತಿದ್ದರು. ಯಾವ ಕ್ಷಣದಲ್ಲಾದರೂ ತಮ್ಮನ್ನು ಬಂಧಿಸಬಹುದೆಂದು ನಿರೀಕ್ಷಿಸುತ್ತಿದ್ದರು, ಅವರ ಜೈಲುವಾಸಕ್ಕೆ ಹೊಸಬರೇನಲ್ಲದ ಅವರ ಹೆಂಡತಿ ಆ ಸಿದ್ಧತೆಗೆ

ಸಹಕಾರಿಯಾಗಿದ್ದರು! ತುರ್ತು ಪರಿಸ್ಥಿತಿಯ ಬಗ್ಗೆ ಚರ್ಚಿಸಲು ಮದರಾಸಿನಲ್ಲಿ ನಡೆಯ ಬೇಕಾಗಿದ್ದ ಕಾಂಗ್ರೆಸ್ (ಓ) ಕಾರ್ಯಕಾರಿ ಸಮಿತಿಯ ಸಭೆಯು ವಾಸ್ತವವಾಗಿ ಸೇರಿದ್ದು ದೆಹಲಿಯಲ್ಲಿ, ೧೯೭೫ನೇ ಆಗಸ್ಟ್ ೩೦ ರಂದು. ಇಂದಿರಾ ಗಾಂಧಿಯವರ ಆಡಳಿತ ವನ್ನು ಎದುರಿಸುವಂತೆ ಆ ಸಭೆಯಲ್ಲಿ ಸಹೋದ್ಯೋಗಿಗಳಿಗೆ ನಿಜಲಿಂಗಪ್ಪ ಕರೆ ನೀಡಿದರು, ಆ ಆಡಳಿತವನ್ನವರು ಕೋಮುವಾದ, ಕಮ್ಯುನಿಸಂ, ಫ್ಯಾಸಿಸಂ ಮತ್ತು ನಕಲಿ ಪ್ರಜಾಪ್ರಭುತ್ವದ ಮಿಶ್ರಣ ಎಂದು ಬಣ್ಣಿಸಿದರು. ಅದರ ವಿರುದ್ಧ ಗಾಂಧೀಜಿಯ ಹೆಸರಿನಲ್ಲಿ ಹೋರಾಡಲು ಕೇಳಿಕೊಂಡರು. ಆದರೆ, ಅವರ ವೈದ್ಯರ ಸಲಹೆಯ ಪ್ರಕಾರ, ನಿಜಲಿಂಗಪ್ಪನವರಿಗೆ ನೇರವಾಗಿ ತುರ್ತು ಪರಿಸ್ಥಿತಿ ವಿರೋಧಿ ಹೋರಾಟದಲ್ಲಿ ಭಾಗಿಯಾಗಲು ಅವಕಾಶ ಕೊಡಲಿಲ್ಲ, ಇದರಿಂದ ಅವರಿಗೆ ಭಾರಿ ಕೆಡುಕೆನಿಸಿತು. ತಾವು ೧೭ನೇ ಮಾರ್ಚ್ ೧೯೭೬ ರಂದು ನೀಡಿದ ಪತ್ರಿಕಾ ಹೇಳಿಕೆಯಲ್ಲಿ ತಮ್ಮ ಕೃಷಿಪರವಾದ ಬದ್ಧತೆಯನ್ನು ಬಹಿರಂಗವಾಗಿ ಸ್ಪಷ್ಟಪಡಿಸಿದ್ದರು. ನಗರದ ಉತ್ಪನ್ನಗಳೂ ಹೆಚ್ಚು ಬೆಲೆ ಹೊಂದುವ ಮತ್ತು ಅದರಿಂದ ಹಣದುಬ್ಬರ ಹೆಚ್ಚುವ, ಮತ್ತು ಆಹಾರ ಧಾನ್ಯಗಳಂತಹ ಕೃಷಿ ಉತ್ಪನ್ನಗಳು ಕಡಿಮೆ ಬೆಲೆ ಪಡೆಯುವ ವ್ಯವಸ್ಥೆಯನ್ನವರು ಖಂಡಿಸಿದರು. ನಗರ–ಹಳ್ಳಿಗಳ ಹಾಗೂ ಕೈಗಾರಿಕೆ ಮತ್ತು ಕೃಷಿಗಳ ನಡುವಣ ಆರೋಗ್ಯ ಕರ ಸಮತೋಲನಕ್ಕೆ ಅವರು ಕರೆಕೊಟ್ಟರು. ಕುಂದುತ್ತಿರುವ ಆರೋಗ್ಯದ ನಡುವೆಯೂ ಅವರು ದೇಶದ ರಾಜಕಾರಣದಲ್ಲಿ ಆಸಕ್ತಿಯನ್ನು ಮುಂದುವರಿಸಿ, ಅದರಲ್ಲಿ ಪರೋಕ್ಷ ಭಾಗಿಗಳಾದರು. ಕೊಚ್ಚಿಯಲ್ಲಿ ೧೯೭೬ನೇ ಜೂನ್ ೧೩ ರಂದು ನಡೆದ ಕಾಂಗ್ರೆಸ್ (ಓ) ಕಾರ್ಯಕರ್ತರ ಸಭೆಯಲ್ಲಿ ಮಾತನಾಡುತ್ತ, ನಿರಂಕುಶಾಧಿಕಾರವನ್ನು ಪ್ರತಿರೋಧಿ ಸಲು ಹೊಸ ಪಕ್ಷದ ರಚನೆ ಅಥವಾ ಪ್ರಸ್ತುತ ಆಡಳಿತದ ವಿರುದ್ಧವಿರುವ ಪಕ್ಷಗಳ ಮೈತ್ರಿಯನ್ನು ಮಾಡಿಕೊಳ್ಳಬೇಕೆಂದು ಸಲಹೆಯಿತ್ತರು. ಇಂದಿರಾ ಗಾಂಧಿಯವರ ವ್ಯಕ್ತಿಗತವೂ ಕಡಿವಾಣವಿಲ್ಲದ್ದೂ ಆದ ಆಡಳಿತದ ವಿರುದ್ಧ ಜನತಾ ಆಂದೋಲನ ನಡೆಯಬೇಕೆಂದು ಅಭಿಪ್ರಾಯಪಟ್ಟರು. ತಮ್ಮ ಸ್ವಂತ ರಾಜ್ಯವಾದ ಕರ್ನಾಟಕದಲ್ಲಿಯೇ ಪಿಸಿಸಿ (ಓ) ಅಧ್ಯಕ್ಷ ವೀರೇಂದ್ರ ಪಾಟೀಲರು ಪರಿಸ್ಥಿಯ ಬಗ್ಗೆ ಏನನ್ನೂ ಮಾಡುತ್ತಿರಲಿಲ್ಲ. ಕೋಪಗೊಂಡ ನಿಜಲಿಂಗಪ್ಪನವರು ವೀರೇಂದ್ರ ಪಾಟೀಲರಿಗೆ ರಾಜೀನಾಮೆ ನೀಡಲು ಆಗ್ರಹಿಸಿದರು. ಶ್ರೀ ರಾಮರೆಡ್ಡಿ, ಕೆ.ಎಸ್. ಹೆಗ್ಗಡೆ, ಗುರುಪಾದಸ್ವಾಮಿ ಮತ್ತು ಲಕ್ಷ್ಮೀಸಾಗರ್ ಅಂತಹ ಸಹಚರರೊಂದಿಗೆ ರಾಜ್ಯದಲ್ಲೆಲ್ಲ ಪ್ರವಾಸ ಕೈಗೊಂಡು ತುರ್ತು ಪರಿಸ್ಥಿತಿಯ ಕಾನೂನುಗಳ ವಿರುದ್ಧ ಹೋರಾಡಲು ಜನರನ್ನು ಪ್ರೇರಿಸುತ್ತಿದ್ದರು. ೧೯೭೬ನೇ ಅಕ್ಟೋಬರ್, ಗಾಂಧಿ ಜಯಂತಿಯ ದಿನ ಕೃಪಲಾನಿಯವರಂತಹ ಹಿರಿಯ ನಾಯಕರು ರಾಜಘಾಟ್‌ಗೆ ಭೇಟಿ ನೀಡಿ ಗೌರವ ಸಲ್ಲಿಸಿ, ಪ್ರಸ್ತುತ ಭಾರತ ಜನತೆಯ ಸ್ವಾತಂತ್ರ್ಯವನ್ನು

ನಾಶಮಾಡಲಾಗಿದೆಯೆಂದು ಘೋಷಿಸಿದರು. ಅದೇ ದಿನ ಕಾಮರಾಜರು ನಿಧನರಾದರು. ಅಂತಿಮ ಕ್ರಿಯೆಗಳಿಗೆ ಹಾಜರಾಗಿದ್ದ ಇಂದಿರಾ ಗಾಂಧಿಯವರು, ಕಾಮರಾಜರ ಕೊನೆಯ ಆಸೆ ಎಂದರೆ ತಮ್ಮ ನಾಯಕತ್ವದಲ್ಲಿಯೇ ಇಬ್ಭಾಗವಾದ ಕಾಂಗ್ರೆಸ್ ಒಗ್ಗೂಡುವುದಾಗಿತ್ತು ಎಂದರು.

ಇಂದಿರಾ ಗಾಂಧಿಯವರು ಸಂಸತ್ತಿನ ಚುನಾವಣೆಗಳನ್ನು ಮುಂದೂಡಿದರು, ಇದಕ್ಕೆ ಕಾರಣ ತಮ್ಮ ಅನಿಯಂತ್ರಿತ ಮಗನ ರಾಜಕೀಯದೊಡನೆ ಸೇರಿ ತಮ್ಮ ಸ್ಥಾನವನ್ನು ಭದ್ರಗೊಳಿಸಿಕೊಳ್ಳುವುದು. ಈ ನಡುವೆ, ಜೆಪಿ ಅವರ ಆರೋಗ್ಯ ಬಹು ಬೇಗ ಕುಸಿಯಿತು, ಅವರು ಸಾವಿನ ಅಂಚಿನಲ್ಲಿದ್ದಾರೆಂಬ ಶಂಕೆಯುಂಟಾಯಿತು. ರೋಗಪೀಡಿತ ಲೋಕನಾಯಕರನ್ನು ಸರ್ಕಾರ ಬಂಧನದಿಂದ ಬಿಡಿಸಿತು, ಅದಕ್ಕೆ ಅವರ ಬಗೆಗಿನ ಕಾಳಜಿ ಕಾರಣವಾಗಿರದೆ, ಈ ಸರ್ಕಾರವು ಮಾನವೀಯತೆಯನ್ನು ಮೆರೆಯುವಂಥದು ಎಂದು ತೋರಿಸಿಕೊಳ್ಳಲು. ಜೆಪಿ ಹೆಚ್ಚು ಕಾಲ ಉಳಿಯಲಾರರೆಂಬುದು ಅದಕ್ಕೂ ತಿಳಿದಿತ್ತು, ಹೀಗಾಗಿ ಅವರೇನಾದರೂ ಜೈಲಲ್ಲಿಯೇ ಸತ್ತರೆ, ಅದರಿಂದ ಸರ್ಕಾರ ಅನವಶ್ಯಕವಾಗಿ ಪೇಚಿಗೆ ಸಿಲುಕುತ್ತದೆ ಎಂಬುದು ಅದರ ಚಿಂತೆಯಾಗಿತ್ತು. ಆದ್ದರಿಂದ ಆವರು ಜೈಲಿನ ಹೊರಗೇ ಸಾಯುವ ಹಾಗೆ ಮಾಡಿತು! ೧೨ನೇ ನವೆಂಬರ್ ೧೯೭೬ ರಂದು ಅವರನ್ನು ತಾತ್ಕಾಲಿಕವಾಗಿ ಬಂಧಮುಕ್ತಗೊಳಿಸಿದಾಗ, ಅವರನ್ನು ಸ್ವಾಗತಿಸಲು ಬಂದಿದ್ದವರ ಮುಖದಲ್ಲಿ ಭಯ ಮನೆಮಾಡಿರುವುದನ್ನು ಜೆಪಿ ಕಂಡರು. ಎರಡು ತಿಂಗಳ ಬಳಿಕ, ಮೊರಾರ್ಜಿ ಮುಂತಾದ ಇತರ ನಾಯಕರನ್ನೂ ಬಂಧಮುಕ್ತಗೊಳಿಸಿದರು. ಕಾನೂನು ಸಚಿವ ಗೋಖಲೆಯವರು ೩೦ನೇ ಅಕ್ಟೋಬರ್ ೧೯೭೬ ರಂದು ತುರ್ತುಪರಿಸ್ಥಿತಿಯನ್ನು ಒಂದು ವರ್ಷ ಕಾಲ ಮುಂದುವರಿಸಲಾಗಿದೆಯೆಂದು ಸಂಸತ್ತಿನಲ್ಲಿ ಘೋಷಿಸಿದರು. ಈ ಸಂದಿಗ್ಧ ಪರಿಸ್ಥಿತಿಯಲ್ಲಿಯೇ, ಸಮಾನ ಮನಸ್ಕ ಗುಂಪುಗಳೆಲ್ಲ ಸೇರಿ ಇಂದಿರಾ ಗಾಂಧಿಯವರ ದುರಾಡಳಿತವನ್ನು ಪ್ರತಿರೋಧಿಸಲು ವಿರೋಧ ಪಕ್ಷವೊಂದನ್ನು ರಚಿಸಲು ಇದು ಸಕಾಲ ಎಂದು ನಿಜಲಿಂಗಪ್ಪನವರಿಗೆ ಅನ್ನಿಸಿತು. ತಿಮ್ಮೇಗೌಡ ಮತ್ತು ದೇವೇಗೌಡರಂತಹ ಕರ್ನಾಟಕದ ಅವರ ಒಡನಾಡಿಗಳು ಕೂಡ ಅದೇ ರೀತಿಯಲ್ಲಿ ಆಲೋಚಿಸಿದರು. ಟಾಲ್‌ಸ್ಟಾಯ್ ಅವರ 'ವಾರ್ ಅಂಡ್ ಪೀಸ್' ಅನ್ನು ಮೂರನೆಯ ಬಾರಿಗೆ ಓದುವಾಗ, ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವವು ವಿಶಾಲ ಬಂದೀಖಾನೆಯಾಗಿದೆ, ಇಂದಿರಾ ಗಾಂಧಿಯವರ ರಾಜಕೀಯ ಆಕಾಂಕ್ಷೆಗಳು ಹಾಗೂ ಕುತಂತ್ರಗಳ ಕೈಗೊಂಬೆಯಾಗಿದೆ, ಅಲ್ಲದೆ ಇದೆಲ್ಲವೂ ತಮ್ಮ ಉತ್ತರಾಧಿಕಾರಿಯನ್ನಾಗಿ ಸಂಜಯ ಗಾಂಧಿಯವರನ್ನು ಪ್ರತಿಷ್ಠಾಪಿಸುವ ಹುನ್ನಾರದಿಂದ ಕೂಡಿದೆ ಅನ್ನಿಸಿ ಅದನ್ನು ತಮ್ಮ ದಿನಚರಿಯಲ್ಲಿ ದಾಖಲಿಸಿದರು. ರಾಜ್ಯದಾದ್ಯಂತ ಸುತ್ತಾಡಿದ

ಪ್ರಧಾನಿ ಶ್ರೀ ಮೊರಾರ್ಜಿ ದೇಸಾಯಿ ಜೊತೆಗೆ ಎಸ್ಸೆನ್

ಅವರು ಇಂದಿರಾ ಗಾಂಧಿಯವರ ಕಾನೂನುಬಾಹಿರವೂ ಅನೈತಿಕವೂ ಆದ ಆಳ್ವಿಕೆಯ ವಿರುದ್ಧ ಹೋರಾಡಲು ಜನರಿಗೆ ಪ್ರೇರಣೆ ನೀಡುತ್ತ ಹೋದರು.

೧೯೭೭ನೇ ಇಸವಿಯು ಆರಂಭವಾದುದು ಭಾರತದಲ್ಲಿ ಪ್ರಜಾಸತ್ತಾತ್ಮಕ ಆಡಳಿತ ಹಾಗೂ ಮುಕ್ತ ಸಮಾಜ ಮತ್ತೆ ಬಂದೀತೇ ಎಂದು ಕಾತರರಾಗಿದ್ದ ನಿಜಲಿಂಗಪ್ಪನವರಂತಹವರಿಗೆ ಆಶ್ಚರ್ಯವುಂಟುಮಾಡುವ ಮೂಲಕ. ಅವರ ಉದ್ದೇಶಗಳೇನೇ ಇರಲಿ, ಇಂದಿರಾ ಗಾಂಧಿಯವರು ತಮ್ಮ ಅನಿಯೋಜಿತ ಆಕಾಶವಾಣಿ ಭಾಷಣದಲ್ಲಿ ಲೋಕಸಭೆಗೆ ಚುನಾವಣೆಗಳನ್ನು ನಡೆಸುವುದಾಗಿ ಘೋಷಿಸಿದರು. ಇದು ಮತ್ತಷ್ಟು ಅಚ್ಚರಿಯುಂಟುಮಾಡಲು ಕಾರಣ, ಆಗಿನ ಸಂಸತ್ತು ಇನ್ನೂ ಸುಮಾರು ಒಂದು ವರ್ಷ ಕಾಲ ಕಾನೂನುಬದ್ಧವಾಗಿ ಮುಂದುವರೆಯುವ ಅವಕಾಶವಿದ್ದುದು. ತುರ್ತುಪರಿಸ್ಥಿತಿಯನ್ನು ರದ್ದು ಮಾಡಿದುದು ತಕ್ಷಣವೇ ಅಲ್ಲ, ಆದರೆ ಕ್ರಮಶಃ. ೧೯೭೭ನೇ ಇಸವಿ ಜನವರಿ ೧೮ ರಂದು ಐದನೆಯ ಲೋಕಸಭೆಯನ್ನು ರಾಷ್ಟ್ರಪತಿ ಫಕ್ರುದ್ದೀನ್ ಆಲಿ ಅಹಮದ್ ಅವರು ವಿಸರ್ಜಿಸಿದರು. ೧೯೭೭ನೇ ಜನವರಿ ೧೮ ರಂದು, ಪತ್ರಿಕಾ ಸೆನ್ಸಾರ್‌ಷಿಪ್ ಅಂತಹುದನ್ನು ತೆಗೆದು ಹಾಕುವುದು, ವಿರೋಧ ಪಕ್ಷಗಳಿಗೆ ಸೀಮಿತ ಸ್ವಾತಂತ್ರ್ಯವನ್ನು ನೀಡುವುದು ಮುಂತಾದವುಗಳ ಮೂಲಕ ತುರ್ತುಪರಿಸ್ಥಿತಿಯ ನಿಯಮಗಳನ್ನು ಸಡಿಲಗೊಳಿಸಲಾಯಿತು. ೧೯೭೭ರ ಜನವರಿ ಕೊನೆಯ ಹೊತ್ತಿಗೆ, ಮೀಸಾ (ಆಂತರಿಕ ಸುರಕ್ಷತಾ ನಿರ್ವಹಣಾ ವಿಧಿ) ಅಡಿ ಬಂಧಿತರಾಗಿದ್ದ ಬಹುತೇಕ ರಾಜಕೀಯ ಬಂದಿಗಳನ್ನು ಬಿಡುಗಡೆಗೊಳಿಸಲಾಯಿತು. ೧೯೭೭ನೇ ಜನವರಿ ೨೩ ರಂದು, ಒಂದು ಬಗೆಯ ರಾಜಕೀಯ ಪವಾಡವೇ ಸಂಭವಿಸಿತು: ಬಹು ಮುಖ್ಯ ವಿರೋಧ ಪಕ್ಷಗಳು – ಹಿಂದಿನ ಕಾಂಗ್ರೆಸ್ (ಒ), ಭಾರತೀಯ ಲೋಕ ದಳ (ಬಿಎಲ್‌ಡಿ), ಜನಸಂಘ ಮತ್ತು ಸಮಾಜವಾದಿ ಪಕ್ಷ– ಇವುಗಳು ಸೇರಿದ್ದ ಹೊಸ ಜನತಾ ಪಕ್ಷವನ್ನು ಜಯಪ್ರಕಾಶ ನಾರಾಯಣರು ನವದೆಹಲಿಯಲ್ಲಿ ಉದ್ಘಾಟಿಸಿದರು. ಅದರ ಅಧ್ಯಕ್ಷರಾಗಿ ಮೊರಾರ್ಜಿಯವರೂ, ಉಪಾಧ್ಯಕ್ಷರಾಗಿ ಚರಣ್ ಸಿಂಗ್ ಅವರೂ ನೇಮಕಗೊಂಡರು. ಅದಕ್ಕೆ ಮೂವರು ಪ್ರಧಾನ ಕಾರ್ಯದರ್ಶಿಗಳಿದ್ದರು: ಎಲ್.ಕೆ. ಆದ್ವಾನಿ (ಜನಸಂಘ), ಸುರೇಂದ್ರ ಮೋಹನ್ (ಸಮಾಜವಾದಿ ಪಕ್ಷ) ಮತ್ತು ರಾಂಧನ್ (ಹಳೆಯ ಕಾಂಗ್ರೆಸ್). ಪಕ್ಷವು ೨೭ ಮಂದಿ ರಾಷ್ಟ್ರೀಯ ಸಮಿತಿಯನ್ನು ರಚಿಸಿ ಅದು ಪಕ್ಷದ ಆಡಳಿತ ಮಂಡಳಿಯಂತೆ ಚುನಾವಣಾ ತಂತ್ರ ರೂಪಣೆ ಮತ್ತದರ ಕಾರ್ಯನಿರ್ವಹಣೆ ಮುಂತಾದ ಕಾರ್ಯ ನಿರ್ವಹಿಸುವಂತಾಯಿತು. ನಿಜಲಿಂಗಪ್ಪನವರು ಪಕ್ಷರಚನೆಯಲ್ಲಿ ವಿನಯದಿಂದ ಹಿಂದೆಯೇ ಉಳಿದರೂ, ಕಾಂಗ್ರೆಸ್ (ಒ) ದ ಮುಖ್ಯ ನಾಯಕರಾಗಿ ಅದು ಹೊಸ ಪಕ್ಷದಲ್ಲಿ ವಿಲೀನಗೊಳ್ಳಲು ಅವರು ಸಹಾಯಕರಾಗಿದ್ದಿರಬೇಕು ಎಂಬುದು ಸ್ಪಷ್ಟವೇ

ಆಗಿದೆ. ಆದರೆ ಈಗ ನೋಡಿದರೆ, ಪಕ್ಷದ ೨೭ ಮಂದಿ ರಾಷ್ಟ್ರೀಯ ಮಂಡಳಿಯಲ್ಲಿ ನಿಜಲಿಂಗಪ್ಪನವರ ಹೆಸರಿಲ್ಲದಿದ್ದುದು ಅನ್ಯಾಯವೇ ಸರಿ ಎಂದು ಅನ್ನಿಸುತ್ತದೆ. ಸ್ವಂತ ಇಚ್ಛೆಯಂತೆಯೇ ಅವರ ಹೆಸರನ್ನು ಕೈಬಿಟ್ಟಿರುವ ಸಾಧ್ಯತೆಯೂ ಇದೆ. ೧೯೭೭ರಲ್ಲಿ ಸಂಗತಿಗಳು ನಾಟಕೀಯ ವೇಗದಿಂದ ಜರುಗುತ್ತಿದ್ದವು. ಫೆಬ್ರವರಿ ೧೧ ರಂದು, ತಮ್ಮ ೭೨ ನೇ ವಯಸ್ಸಿನಲ್ಲಿ ರಾಷ್ಟ್ರಪತಿ ಅಹಮದ್ ನಿಧನರಾದರು. ಆಗ ಉಪರಾಷ್ಟ್ರಪತಿಗಳಾಗಿದ್ದ ಜತ್ತಿ ಹಂಗಾಮಿ ರಾಷ್ಟ್ರಪತಿಯಾಗಿ ಸಂವಿಧಾನಾತ್ಮಕ ಪದ್ಧತಿಯಂತೆ ಅಧಿಕಾರ ಸ್ವೀಕರಿಸಿದರು. ಕೆಲವೇ ದಿನಗಳ ಮುಂಚೆ, ಅಂದರೆ ಫಬ್ರವರಿ ೨ ರಂದು, ಜಗಜೀವನ ರಾಂ ಅವರು ಸಂಪುಟ ಮತ್ತು ಪಕ್ಷದಿಂದ ಹೊರಬಂದು ಪ್ರಜಾಪ್ರಭುತ್ವಕ್ಕಾಗಿ ಕಾಂಗ್ರೆಸ್ (ಸಿಎಫ್‌ಡಿ) ಎಂಬ ಹೊಸ ಪಕ್ಷ ಸ್ಥಾಪಿಸಿದ್ದು ಇಂದಿರಾ ಗಾಂಧಿಯವರಿಗೆ ದೊಡ್ಡ ಹೊಡೆತ ಬಿದ್ದಂತಾಯಿತು. ಆರನೆಯ ಲೋಕಸಭೆಗೆ ೧೯೭೭ರ ಮಾರ್ಚ್ ೧೬ ರಿಂದ ೨೦ರ ನಡುವಣ ಅವಧಿಯಲ್ಲಿ ಚುನಾವಣೆಗಳು ನಡೆದವು. ಫಲಿತಾಂಶವು ಇಂದಿರಾ ಗಾಂಧಿಯವರನ್ನು ಹಾಗೂ ತುರ್ತು ಪರಿಸ್ಥಿತಿಯ ಹೇರಿಕೆಯನ್ನು ಖಚಿತವಾಗಿ ತಿರಸ್ಕರಿಸುವಂತಿತ್ತು. ಅವರ ಕಾಂಗ್ರೈ, ಇದ್ದ ಒಂದೇ ಕಾಂಗ್ರೆಸ್, ಕೇವಲ ಶೇಕಡ ೩೪.೫೪ ರಷ್ಟು ಮತಗಳನ್ನು ಗಳಿಸಿತು; ಅದು ಕಾಂಗ್ರೆಸ್ ಇತಿಹಾಸದಲ್ಲಿಯೇ ಅತ್ಯಂತ ಕಡಿಮೆ. ಜನತಾ ಪಕ್ಷಕ್ಕೆ ಅಲ್ಪ ಬಹುಮತ ಪ್ರಾಪ್ತವಾಯಿತು. ೫೪೨ ಮಂದಿ ಸದಸ್ಯರ ಸದನದಲ್ಲಿ ಅದಕ್ಕೆ ೨೭೦ ಸ್ಥಾನಗಳು ಬಂದವು. ಆದರೆ ಅದಕ್ಕೆ ಎರಡೂ ಕಮ್ಯುನಿಸ್ಟ್ ಪಕ್ಷಗಳ (ಒಟ್ಟು ೨೯ ಸ್ಥಾನಗಳು) ಮತ್ತು ಸಿಎಫ್‌ಡಿ (೨೮ ಸ್ಥಾನಗಳು)ಗಳ ಬೆಂಬಲವಿತ್ತು. ಕಾಂಗ್ರೆಸ್ ಘಾಳಾದ ಸೋಲನ್ನೇನೋ ಅನುಭವಿಸಿತ್ತು, ಆದರೆ ನಿರೀಕ್ಷಿಸಿದ ಮಟ್ಟದಲ್ಲಲ್ಲ. ಅವರಿಗೆ ಲಭಿಸಿದ್ದ ೫೯ ಸ್ಥಾನಗಳು, ನಗಣ್ಯ ಸಂಖ್ಯೆಯೇನಲ್ಲ. ಆದರೆ ಅದರ ಸೋಲು ಗುಣಾತ್ಮಕವಾಗಿತ್ತು, ಏಕೆಂದರೆ ಇಂದಿರಾ ಗಾಂಧಿ ತಾವೇ ೭೭, ೩೭೫ ಮತಗಳ ಅಂತರದಿಂದ ಭಾರಿ ಸೋಲು ಕಂಡರು. ಅವರ ಮಗ ಸಂಜಯ್ ಗಾಂಧೀ ಮತ್ತು ಸಂಪುಟದಲ್ಲಿದ್ದ ೩೪ ಮಂದಿ ಸಚಿವರು ಸೋಲನ್ನನುಭವಿಸಿದರು! ಹೀಗಾಗಿ, ನಮ್ಮ ಹಳ್ಳಿಗಾಡಿನ ನಿರಕ್ಷರಸ್ಥ ಜನತೆಯು ಬಹುಮತದಿಂದ ನಿರಂಕುಶ ರಾಜಕೀಯ ಆಳ್ವಿಕೆಯನ್ನೂ ಆಳುವ ಗುಂಪನ್ನೂ ತಿರಸ್ಕರಿಸಿದ್ದುದರಲ್ಲಿ ಸಂಶಯವೇ ಇರಲಿಲ್ಲ. ಇಂದಿರಾ ಗಾಂಧಿಯವರ ಸರ್ಕಾರ ೧೯೭೭ನೇ ಮಾರ್ಚ್ ೨೨ ರಂದು ರಾಜೀನಾಮೆ ಸಲ್ಲಿಸಿತು. ಹೊಸ ಲೋಕಸಭೆ ಮಾರ್ಚ್ ೨೩ ರಂದು ಕಾನೂನುದ್ಧವಾಗಿ ಆರಂಭಗೊಂಡಿತು. ಮಾರ್ಚ್ ೨೧ ರಂದೇ ಹಂಗಾಮಿ ಅಧ್ಯಕ್ಷ ಜತ್ತಿ ಅವರು ತುರ್ತುಪರಿಸ್ಥಿತಿಯನ್ನು ಕಾನೂನಾತ್ಮಕವಾಗಿ ರದ್ದುಮಾಡಿದರು. ೧೯೭೭ ನೇ ಮಾರ್ಚ್ ೨೪ ರಂದು, ಮೊರಾರ್ಜಿ ಪ್ರಧಾನ ಮಂತ್ರಿಗಳಾದರು, ಚವ್ಹಾಣ್ ವಿರೋಧ ಪಕ್ಷದ ನಾಯಕರಾದರು. ಜತಾ

ಆಳ್ವಿಕೆಯನ್ನು ಇಲ್ಲಿ ವಿವರವಾಗಿ ನಿರೂಪಿಸುವ ಅಗತ್ಯವೇನೂ ಕಾಣಿಸದು; ಆದರೆ, ಆ ಪಕ್ಷವು ತನ್ನನ್ನು ಅಧಿಕಾರಕ್ಕೆ ತಂದ ಜನತೆಯ ಆಶೋತ್ತರಗಳನ್ನು ಸಾಕಾರಗೊಳಿಸುವಲ್ಲಿ ಸಫಲವಾಗಲಿಲ್ಲ ಎಂದಷ್ಟೇ ಹೇಳಬಹುದು. ವಿರೋಧ ಪಕ್ಷಗಳು ಆಡಳಿತ ನಡೆಸುತ್ತಿದ್ದ ೯ ರಾಜ್ಯಗಳಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಿದಂತಹ ವಿವಾದಾತ್ಮಕ ರಾಜಕೀಯ ನಡಾವಳಿ ಕಂಡುಬಂದವು. ೧೯೭೭ನೇ ಜುಲೈ ೨೫ ರಂದು, ಸಂಜೀವರೆಡ್ಡಿಯವರು ರಾಷ್ಟ್ರಪತಿಗಳಾಗಿ ಆಯ್ಕೆಗೊಂಡು ತಾವು ಹೊಂದಿದ್ದ ಲೋಕಸಭಾ ಅಧ್ಯಕ್ಷಸ್ಥಾನವನ್ನು ತೆರವುಗೊಳಿಸಿರು. ಆ ಸ್ಥಾನಕ್ಕೆ ಕರ್ನಾಟಕದ ಕೆ.ಎಸ್. ಹೆಗ್ಗಡೆ ಆಯ್ಕೆಯಾದರು.

ನಿಜಲಿಂಗಪ್ಪನವರು ಎಂದಿನ ರಾಜಕೀಯ ವಲಯದಲ್ಲಿ ಕಾಣಿಸಿಕೊಳ್ಳದಿದ್ದರೂ, ಅವರು ತಳಹಂತದ, ಅಂದರೆ ಜನರ ನಡುವೆ ಇದ್ದು ಅವರಿಗಾಗಿ ಕೆಲಸ ಮಾಡುವ, ರಾಜಕಾರಣದಿಂದ ಹೊರಗುಳಿದಿದ್ದರು ಎಂದರ್ಥವಲ್ಲ. ಜನತಾ ಪಕ್ಷದ ಹಿರಿಯ ನಾಯಕರಾಗಿ ಅವರು ಆಗಾಗ ಕೇಂದ್ರ ಸರ್ಕಾರಕ್ಕೆ ಸಲಹೆಗಳನ್ನು ನೀಡುತ್ತಿದ್ದರು. ಇದಕ್ಕೊಂದು ಉದಾಹರಣೆಯೆಂದರೆ, ಕೃಪಾಲಾನಿ ಮತ್ತು ಐ.ಕೆ. ಗುಜ್ರಾಲ್ ಅವರ ಸೂಚನೆಯ ಪ್ರಕಾರ, ಯುಎಸ್‌ಎಸ್‌ಆರ್ ಜೊತೆಗೆ ಸಹಕಾರೀ ಮತ್ತು ಸ್ನೇಹಪರ ಧೋರಣೆ ಹೊಂದಬೇಕೆಂದು ಅವರು ೧೯೭೭ನೇ ನವೆಂಬರ್ ೨೦ ರಂದು ಮೊರಾರ್ಜಿ ಅವರಿಗೆ ಸಲಹೆ ನೀಡಿದರು. ಪ್ರಧಾನ ಮಂತ್ರಿಗಳಾಗಿ ಮೊರಾರ್ಜಿಯವರ ಕಾರ್ಯ ನಿರ್ವಹಣೆ ತಮಗೆ ತೃಪ್ತಿ ತಂದಿದೆಯೇ ಎಂದು ಕೆಲವು ಗೆಳೆಯರು ಕೇಳಿದಾಗ, ನಿಜಲಿಂಗಪ್ಪನವರ ನೇರ ಉತ್ತರವೆಂದರೆ, ಎಲ್ಲದರಲ್ಲೂ ಪರವಾಯಿಲ್ಲ, ಆದರೆ ರಾಜಕೀಯ ದೃಷ್ಟಿಕೋನದಿಂದ ನೋಡಿದರೆ, ಜಗಜೀವನರಾಂ ಅವರು ಇವರಿಗಿಂತ ಉತ್ತಮ ಆಯ್ಕೆಯಾಗುತ್ತಿತ್ತು ಎಂದಿದ್ದರು. ತಾವು ರಾಂ ಅವರನ್ನು ವೈಯಕ್ತಿಕವಾಗಿ ಇಷ್ಟಪಡ ದಿದ್ದರೂ, ಅವರ ಸಾಮರ್ಥ್ಯ ಹೆಚ್ಚಿನದು. ಹೊಸ ಜನತಾ ಸರ್ಕಾರದ ಕೆಟ್ಟ ರೀತಿಯೆಂದರೆ ಅದು ನಿಜಲಿಂಗಪ್ಪನವರನ್ನು ನಡೆಸಿಕೊಂಡ ಪರಿ. ನಿದರ್ಶನಕ್ಕೆ, ೧೯೭೭ನೇ ಏಪ್ರಿಲ್ ೧೭ ರಂದು, ಚಿತ್ರದುರ್ಗದಲ್ಲಿದ್ದ ಈ ಹಿರಿಯ ನಾಯಕರಿಗೆ ಮೊರಾರ್ಜಿ ದೂರವಾಣಿ ಕರೆ ಮಾಡಿ ಅವರು ಯಾವುದಾದರೂ ರಾಜ್ಯಪಾಲ ಹುದ್ದೆಯನ್ನು ಸ್ವೀಕರಿಸಲು ಸಿದ್ಧರಿದ್ದರೇ ಎಂದು ಕೇಳಿದರು! ಈ ಕೇಳಿಕೆಯಯಲ್ಲಿದ್ದ ಏಕೈಕ ಸಮಾಧಾನಕರ ಅಂಶ ವೆಂದರೆ, ನಿಜಲಿಂಗಪ್ಪನವರಿಗೆ ಇದು ತೀರ ಸಣ್ಣ ಹುದ್ದೆಯಾಗುತ್ತದೆಂಬ ಮೊರಾರ್ಜಿ ಯವರ ಅಳುಕು, ಆದರೂ ತಾವಿದನ್ನು ಕೇಳುತ್ತಿರುವುದು ಕೆಲವು ಸ್ನೇಹಿತರ ಸೂಚನೆ ಯಿಂದ ಎಂದು ಹೇಳಿದುದು. ಒಂದು ಕ್ಷಣವೂ ಹಿಂದೆ ಮುಂದೆ ನೋಡದೆ ನಿಜಲಿಂಗಪ್ಪ ನವರು ಈ ಆಹ್ವಾನವನ್ನು ತಿರಸ್ಕರಿಸಿ, ಆ ಬಳಿಕ ಅವರು ಸಾದಿಕ್ ಆಲಿ ಮತ್ತು ನಾಗಪ್ಪ ಆಳ್ವ ಅವರನ್ನು ಕೇಳಬೇಕೆಂದು ಸಲಹೆಯಿತ್ತರು. ತಮಗೆ ಯಾವುದೇ ಅಧಿಕಾರದ

ಹುದ್ದೆಯ ಹಂಬಲ ಇಲ್ಲ ಎಂದವರು ಸ್ಪಷ್ಟಪಡಿಸಿದರು. ಅದೇ ಕಾರಣಕ್ಕಾಗಿ ಅವರು ಹೊಸದಾಗಿ ರಚಿತವಾದ ಜನತಾ ಪಕ್ಷದ ಅಧ್ಯಕ್ಷ ಪದವಿಯನ್ನೂ ನಿರಾಕರಿಸಿದರು. ಅವರು ಬೇಡವೆಂದ ಬಳಿಕವಷ್ಟೇ ಅದಕ್ಕೆ ಚಂದ್ರಶೇಖರ್ ಅವರು ಆಯ್ಕೆಯಾದುದು. ಅವರೀಗ ಹೊಸ ರಾಜಕೀಯ ಮಜಲನ್ನು ಸೇರುವ ಅಪೇಕ್ಷೆಯಲ್ಲಿದ್ದರು, ಅದೆಂದರೆ ಎಲ್ಲ ಅಧಿಕಾರ ಹಾಗೂ ಹುದ್ದೆಗಳನ್ನು ತೊರೆದು ನಿಜವಾದ ಗಾಂಧೀಯ ಶೈಲಿಯಲ್ಲಿ ಸಾಮಾನ್ಯ ಜನರ ನಾಯಕರಾಗಿ ಕೆಲಸ ಮಾಡುವುದು. ಅದರ ಧ್ಯೇಯ ಜನಸೇವೆ, ಆದರೆ ಅವರನ್ನು ಸಾಂಪ್ರದಾಯಿಕ ರಾಜಕೀಯ ಸಂಘಟನೆಗಳಲ್ಲಿ ಕೆಲಸ ಮಾಡುವಂತೆ ಪ್ರೇರಿಸಿದ್ದು ಕೂಡ ಇದೇ ಉದ್ದೇಶವೇ. ಹೀಗಾಗಿ ಕಾರ್ಯನಿರ್ವಹಣೆಯಲ್ಲಿ ಬಿಡುವಿರ ಲಿಲ್ಲ, ವ್ಯತ್ಯಾಸ ಕೇವಲ ಅದರ ರೂಪದಲ್ಲಿ, ಅಷ್ಟೆ. ಪಾಂಡಿಚೆರಿ ಹಾಗೂ ತಮಿಳು ನಾಡುಗಳಲ್ಲಿನ ಚುನಾವಣೆಗಳಲ್ಲಿ ಪಕ್ಷದ ನಿರೀಕ್ಷಕರಾಗಿ ಕಾರ್ಯ ನಿರ್ವಹಿಸಲು ಅವರನ್ನು ಕೇಳಿಕೊಂಡಾಗ ಅದನ್ನವರು ಒಪ್ಪಿಕೊಂಡದ್ದು ಪಕ್ಷದ ಒಬ್ಬ ವಿನಮ್ರ ಕಾರ್ಯಕರ್ತನಾಗಿ. ಆ ಬಳಿಕ ಅವರು ವರದಿಯೊಂದನ್ನು ನೀಡಿ ಚುನಾವಣೆಗಳಲ್ಲಿ ಪಕ್ಷವು ಯಾಕೆ ಸಫಲ ವಾಗಲಿಲ್ಲ ಎಂಬುದನ್ನು ವಿವರಿಸಿ ತನ್ನ ಫಲಿತಾಂಶವನ್ನು ಉತ್ತಮಪಡಿಸಿಕೊಳ್ಳಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಲಹೆಗಳನ್ನಿತ್ತರು.

ಕರ್ನಾಟಕದ ಸಾರ್ವಜನಿಕ ಹಾಗೂ ರಾಜಕೀಯ ವಲಯಗಲ್ಲಿ ನುಸುಳಿರುವ ಭ್ರಷ್ಟಾಚಾರದ ಪ್ರಮಾಣವನ್ನು ಕಂಡು ನಿಜಲಿಂಗಪ್ಪನವರು ಗಾಬರಿಗೊಂಡರು. ರಾಜ್ಯ ದಲ್ಲಿನ ಕಾಂಗ್ರೆಸ್ ಸರ್ಕಾರವು ರಾಜಕೀಯ ಹಾಗೂ ಆಡಳಿತ ಎರಡೂ ವಲಯಗಳಲ್ಲಿ ಲಂಚಗುಳಿತನದ ಪರಮಾವಧಿಯನ್ನು ತಲುಪಿತ್ತು. ಇದನ್ನು ಸಹಿಸಿಕೊಳ್ಳಲಾಗದೆ ಅವರು, ಅರಸು ಮತ್ತವರ ಸಹೋದ್ಯೋಗಿಗಳು ತೊಡಗಿರುವ ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಸಲು ಸಮಿತಿಯೊಂದನ್ನು ನೇಮಿಸಿಬೇಕೆಂದು ಕೇಳಿ ಕೇಂದ್ರಕ್ಕೆ ಪತ್ರವೊಂದನ್ನು ಬರೆದರು. ತಮ್ಮ ಸರ್ಕಾರದ ವಿರುದ್ಧ ಕೇಂದ್ರ ಸರ್ಕಾರದ ಒಂದು ತನಿಖಾ ಆಯೋಗ ರಚಿತವಾಗಬಹುದೆಂಬ ಸುಳಿವು ತಿಳಿದ ಕೂಡಲೇ ಅರಸು ಅವರು, ನ್ಯಾಯಮೂರ್ತಿ ಇಕ್ಬಾಲ್ ಹುಸೇನ್ ಅವರ ಏಕವ್ಯಕ್ತಿ ಆಯೋಗವನ್ನು ತಾವೇ ನೇಮಿಸುವ ಘೋಷಣೆ ಮಾಡಿದರು. ಆದರೆ ಈ ಆಯೋಗದ ವ್ಯಾಪ್ತಿಯಲ್ಲಿ ಹಿಂದಿನ ನಿಜಲಿಂಗಪ್ಪ ಹಾಗೂ ವೀರೇಂದ್ರ ಪಾಟೀಲರ ಅವಧಿಯನ್ನೂ ಒಳಗೊಳ್ಳುವಂತೆ ಮಾಡಿದರು! ಆದರೆ ಹುಸೇನ್ ಆಯೋಗದ ನೇಮಕವನ್ನು ಕರ್ನಾಟಕ ಉಚ್ಚ ನ್ಯಾಯಾಲಯವು ರದ್ದುಪಡಿಸಿತು; ಆದರೆ ಕೇಂದ್ರ ಸರ್ಕಾರವು ನೇಮಿಸಿದ್ದ ನ್ಯಾಯಮೂರ್ತಿ ಗ್ರೋವರ್ ಆಯೋಗವನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದ ಅರ್ಜಿಯನ್ನು ನ್ಯಾಯಾಲಯವು ವಜಾಗೊಳಿಸಿ ೧೯೭೭ನೇ ನವೆಂಬರ್ ೮ ರಂದು ನೇಮಕವನ್ನು ಎತ್ತಿ ಹಿಡಿಯಿತು. ಅವರು ೧೯೭೭ನೇ

ಮೇ ೨೧ ರಂದು ಕೇಂದ್ರ ಗೃಹಸಚಿವರಿಗೆ ಪತ್ರವೊಂದನ್ನು ಬರೆದು ಕರ್ನಾಟಕದ ರಾಜ್ಯಪಾಲರನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂದೂ ಅರಸು ಸರ್ಕಾರವನ್ನು ವಜಾಗೊಳಿಸ ಬೇಕೆಂದೂ ಕೇಳಿಕೊಂಡರು. ಗ್ರೋವರ್ ಆಯೋಗವನ್ನು ನೇಮಿಸುವ ಮೂಲಕ ಕೇಂದ್ರವು ಇದಕ್ಕೆ ಒಪ್ಪಿಕೊಂಡಿತ್ತು. ಹಿಂದಿನ ಆಡಳಿತ ಕಾಲದಲ್ಲಿ ನಡೆದ ಭ್ರಷ್ಟಾಚಾರಗಳ ವಿರುದ್ಧ ಆಯೋಗವನ್ನು ರಚಿಸಿ, ತಪ್ಪಿತಸ್ಥರನ್ನು ಶಿಕ್ಷೆಗೊಳಪಡಿಸುವ ಮೂಲಕ ಜನತಾ ಪಕ್ಷವು ಚುನಾವಣೆಯ ಕಾಲದಲ್ಲಿ ಜನತೆಗಿತ್ತಿದ್ದ ಮಾತನ್ನುಳಿಸಿಕೊಳ್ಳಬೇಕೆಂದು ತಮ್ಮ ಗೆಳೆಯ ಎಸ್.ಕೆ. ಪಾಟೀಲ್ ಅವರಿಗೆ ಪತ್ರವೊಂದನ್ನು ಬರೆದರು. ಅವರು ಬರೆದ ಉತ್ತರದಲ್ಲಿ ಜನತಾ ಸರ್ಕಾರವು ತಮ್ಮನ್ನು ಕಡೆಗಣಿಸಿದೆಯೆಂದು ವಿಷಾದಿಸಿದ್ದರು. ಆದರೆ ನಿಜಲಿಂಗಪ್ಪನವರು ತಮಗೆ ಸಹಜವಾದ ನಿರ್ಭಾವುಕತೆಯಿಂದ ಮತ್ತೊಂದು ಪತ್ರ ಬರೆದು, ತಾವು ಜನತಾ ಸರ್ಕಾರದ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲವೆಂತಲೂ, ತಮಗೆ ಬೇಕಾದದ್ದು ಓದು, ತೋಟಗಾರಿಕೆ, ಮೊಮ್ಮಕ್ಕಳ ಜೊತೆಯ ಆಟ ಇವುಗಳಲ್ಲಿ ತೊಡಗುವ ರಾಜಕೀಯರಹಿತ ಪ್ರಶಾಂತ ಜೀವನವೆಂದೂ ವಿವರಿಸಿದ್ದರು! ಆದರೂ ನಿಜಲಿಂಗಪ್ಪನವರು ಸಾರ್ವಜನಿಕ ಜೀವನದಿಂದ ದೂರವೇ ಉಳಿಯಲು ಅವರ ಬದ್ಧತೆಗಳು ಅವಕಾಶಕೊಟ್ಟಿರಲಿಲ್ಲ. ಅದರಲ್ಲಿ ಪಾಲುಗೊಳ್ಳುವ ಸ್ವರೂಪವನ್ನವರು ಬದಲಿಸಿರಬಹುದು, ಆದರೆ ಅದರಿಂದ ದೂರವೇ ಉಳಿಯುವ ರಾಜಕೀಯ ಹಾಗೂ ನೈತಿಕ ಮನೋಭಾವ ಅವರದಾಗಿರಲಿಲ್ಲ. ತಮ್ಮ ಪ್ರತ್ಯುತ್ತರದಲ್ಲಿ, ಜನತಾ ಆಡಳಿತವು ಜನರಲ್ಲಿ ಭ್ರಮನಿರಸವುಂಟುಮಾಡಿದೆಯೆಂದೂ, ತಾವು ಶುದ್ಧ ಖಾಸಗಿ ಜೀವನಕ್ಕೆ ಮರಳುವುದಾಗಿಯೂ ಹೇಳಿಕೊಂಡಿದ್ದರು. ತಾವು ಸಾರ್ವಜನಿಕ ಬದುಕಿಗೆ ವಿಮುಖ ವಾಗಿದ್ದರೂ, ನಿಜಲಿಂಗಪ್ಪನವರು ಮೊರಾರ್ಜಿಯವರಿಗೆ ಪತ್ರವೊಂದನ್ನು ಬರೆದು ಎಸ್.ಕೆ. ಪಾಟೀಲ್ ಮತ್ತು ಅಶೋಕ ಮೆಹ್ತಾ ಅವರನ್ನು, ದೇಶಕ್ಕೆ ಸಂದಿರುವ ಅವರ ಸೇವೆಯನ್ನು ಪರಿಗಣಿಸಿ, ಅಮೆರಿಕ ಮತ್ತು ರಷ್ಯಾಗಳಿಗೆ ರಾಯಭಾರಿಗಳಾಗಿ ಕಳಿಸ ಬೇಕೆಂದು ಸೂಚಿಸಿದರು.

ಈ ಮಧ್ಯೆ ಅಹಮದ್ ಅವರ ಸಾವಿನಿಂದ ತೆರವಾಗಿರುವ ರಾಷ್ಟ್ರಪತಿ ಸ್ಥಾನಕ್ಕೆ ಅವರೂ ಪ್ರವೇಶಿಸಬೇಕೆಂದು ಬಿರ್ಲಾ, ಗೋಯೆಂಕ ಮತ್ತಿತರರು ನಿಜಲಿಂಗಪ್ಪನವರನ್ನ ಕೇಳಿಕೊಂಡರು. ಇದರಿಂದ ಅವರೇನೋ ಒಂದು ಕ್ಷಣ, ಒಂದೇ ಕ್ಷಣ ಆ ಸ್ಥಾನದಿಂದ ಆಕರ್ಷಿತರಾದರೂ, ಬಹುಬೇಗ ಆ ಆಲೋಚನೆಯನ್ನು ಮನಸ್ಸಿನಿಂದ ಕಿತ್ತು ಹಾಕಿ, ತಾವೇನಾದರೂ ಇಂದಿರಾ ಗಾಂಧಿಯವರ ಜೊತೆ ರಾಜಿಯಾಗಿ ತಮ್ಮ ತತ್ವಗಳಿಗೆ ತಿಲಾಂಜಲಿ ನೀಡಿದ್ದರೆ ಬಹಳ ಹಿಂದೆಯೇ ರಾಷ್ಟ್ರಪತಿಗಳಾಗಬಹುದಾಗಿತ್ತಲ್ಲವೇ ಎಂದು ಆಲೋಚಿಸಿದರು. ಆರ್.ಪಿ. ಗೋಯೆಂಕ ಅವರ ಮೊಮ್ಮಗನ ಮದುವೆಗೆ ಹಾಜರಾದ

ಬಳಿಕ ಕಲ್ಕತ್ತದಿಂದ ಮರಳುವಾಗ ದೆಹಲಿಗೆ ಭೇಟಿ ನೀಡಿದ ಸಂದರ್ಭದಲ್ಲಿ, ಅವರ ಸ್ನೇಹಿತರಾದ ಎಸ್.ಎನ್. ಸಿನ್ಹಾ, ನಾಗಪ್ಪ ಆಳ್ವ ಮತ್ತು ಗುರುಪಾದಸ್ವಾಮಿ ಅವರುಗಳು ಅವಕಾಶವಿತ್ತರೆ ತಾವು ನಿಜಲಿಂಗಪ್ಪನವರು ರಾಷ್ಟ್ರಪತಿಗಳಾಗಲು ಶ್ರಮಿಸುತ್ತೇವೆಂದು ಹೇಳಿದರು. ಹಿಂದೆ ರಾಷ್ಟ್ರಪತಿಯಾಗಬೇಕಾಗಿದ್ದವರು ಅನ್ಯಾಯವಾಗಿ ಅದರಿಂದ ವಂಚಿತ ರಾದ ಸಂಜೀವರೆಡ್ಡಿಯವರಿಗೆ ತಾವು ಬೆಂಬಲ ನೀಡಲು ಸಿದ್ಧ ಎಂದರು! ಅಷ್ಟು ಹೊತ್ತಿಗಾಗಲೇ ಆ ಹುದ್ದೆಗೆ ಸಂಜೀವರೆಡ್ಡಿಯವರು ಬಹು ಲಗುಬಗೆಯಿಂದ ಕೆಲಸ ಮಾಡಲು ತೊಡಗಿದ್ದರು. ಆ ಬಗ್ಗೆ ತಿಳಿದು ಬಂದಾಗ, ನಿಜಲಿಂಗಪ್ಪನವರು ತಾವು ಅವರನ್ನೇ ಬೆಂಬಲಿಸುವುದಾಗಿ ಹೇಳಿದರು. ಆದರೆ ಮೊರಾರ್ಜಿಯವರಿಗೆ ರೆಡ್ಡಿಯವರ ಬಗ್ಗೆ ಸಮಾಧಾನವಿರಲಿಲ್ಲ, ಅವರು ತಮ್ಮ ಕಾರ್ಯದಲ್ಲಿ ತೊಡಕು ಎಂದೇ ಭಾವಿಸಿದ್ದರು. ನಿಜಲಿಂಗಪ್ಪನವರನ್ನೇಕೆ ಈ ಹುದ್ದೆಗೆ ಪರಿಗಣಿಸಬಾರದೆಂದು ಗುರುಪಾದಸ್ವಾಮಿ ಮೊದಲಾದವರು ಮೊರಾರ್ಜಿಗೆ ಹೇಳಿದಾಗ, ನಿಜಲಿಂಗಪ್ಪನವರೇ ರೆಡ್ಡಿಯವರ ಹೆಸರನ್ನು ಸೂಚಿಸಿದ್ದು ಎಂದು ತಿಳಿಸಿದರು, ಅಷ್ಟು ಮಾತ್ರವಲ್ಲ, ನಿಜಲಿಂಗಪ್ಪನವರ ನಿರ್ಧಾರಗಳು ಅಚಲ ಎಂದು ತಿಳಿಸಿದ್ದರು. ಆದರೆ ನಿಜಲಿಂಗಪ್ಪನವರ ಗೆಳೆಯರೊಬ್ಬರು ಹೇಳಿದ್ದೇ ಬೇರೆ: ಈಗಾಗಲೇ ಲಿಂಗಾಯತರೊಬ್ಬರು ನಂ. ೨ ಹುದ್ದೆಯಲ್ಲಿರಬೇಕಾದರೆ ನಂ. ೧ ಹುದ್ದೆಯನ್ನೂ ಲಿಂಗಾಯತರಿಗೇ ನೀಡುವುದು ಸಮಂಜಸವಾಗುವುದಿಲ್ಲವೆಂಬ ಕಾರಣಕ್ಕಾಗಿ ರಾಷ್ಟ್ರಪತಿ ಹುದ್ದೆಗೆ ನಿಜಲಿಂಗಪ್ಪನವರ ಹೆಸರನ್ನು ತಿರಸ್ಕರಿಸಿದ್ದಾಗಿ ಮೊರಾರ್ಜಿ ಸಮಜಾಯಿಷಿ ನೀಡಿದ್ದರಂತೆ. ಈ ಜಾತಿ ಪಂಥಗಳ ಉಲ್ಲೇಖಕ್ಕಾಗಿ ನಿಜಲಿಂಗಪ್ಪನವರಿಗೆ ನಗು ಬಂತು. ಇದರಿಂದಾಗಿ ತಾವು ರಾಷ್ಟ್ರಪತಿಯಾಗುವುದು ಮೊರಾರ್ಜಿಯವರಿಗೆ ಇಷ್ಟವಿಲ್ಲವೆಂಬದು ಅವರು ತಿಳಿದರು. ಎಲ್ಲ ಪಕ್ಷಗಳ ಒಮ್ಮತದ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದ ಸಂಜೀವರೆಡ್ಡಿಯವರು, ನಿಜಲಿಂಗಪ್ಪನವರಿರಬೇಕಾದ ಜಾಗಕ್ಕೆ ತಾವು ಹೋಗುತ್ತಿರುವುದು ತಮ್ಮ ಅದೃಷ್ಟ ಎಂದು ಪ್ರಾಮಾಣಿಕವಾಗಿ ಹೇಳಿ ಕೊಂಡರು. ನಿಜಲಿಂಗಪ್ಪನವರು ರಾಷ್ಟ್ರಪತಿಗಳಾಗದ್ದರಿಂದ ಅತ್ಯಂತ ಅಸಮಾಧಾನ ಗೊಂಡವರೆಂದರೆ ಅವರ ಸ್ನೇಹಿತ ಎಸ್.ಕೆ. ಪಾಟೀಲ್. ಅವರಿಗೆ ಜನತಾ ಪಕ್ಷದ ಬಗ್ಗೆಯೂ ಅಸಮಾಧಾನವಿತ್ತು, ಅದಕ್ಕೆ ಕಾರಣ ಒಂದು ನೀತಿಯನ್ನು ಹೊಂದಲು ಅವಕಾಶ ನೀಡದ ಅನೇಕ ಹತಾಶ ಗುಂಪುಗಳು ಅದರಲ್ಲಿ ಸೇರಿಕೊಂಡಿದ್ದುವು. ಅಲ್ಲದೆ, ಅದರಲ್ಲಿ ಕಾಂಗ್ರೆಸ್(ಓ)ನ ಪ್ರಭಾವವು ಕೂಡ ಕಡಿಮೆಯಾಗುತ್ತಿತ್ತು, ಜನಸಂಘದ ಪ್ರಭಾವ ಹೆಚ್ಚಾಗುತ್ತಿತ್ತು. ಪಿ.ಸಿ. ಸೆನ್, ಎಸ್.ಎನ್. ಸಿನ್ಹಾ, ಮತ್ತು ಸಿ.ಬಿ. ಗುಪ್ತ ಮತ್ತಿತರ ಗೆಳೆಯರೊಡನೆ ಸೇರಿ ಇದಕ್ಕೆ ಪರ್ಯಾಯವೊಂದರ ಕುರಿತು ಆಲೋಚನೆ ಮಾಡ ಬೇಕೆಂದು ಎಸ್.ಕೆ. ಪಾಟೀಲ್ ನಿಜಲಿಂಗಪ್ಪನವರಿಗೆ ಸಲಹೆಯಿತ್ತರು. ಆದರೆ ಜನತಾ

ಪಕ್ಷಕ್ಕೆ ವಿವಿಧ ಗುಂಪುಗಳ ನಡುವಣ ಸಾಮರಸ್ಯ ಸಾಧಿಸಲು ಒಂದಷ್ಟು ಕಾಲಾವಕಾಶ ಬೇಕಾದ್ದರಿಂದ ತಾಳ್ಮೆ ಕಳೆದುಕೊಳ್ಳದಂತೆ ಅವರಿಗೆ ನಿಜಲಿಂಗಪ್ಪನವರು ಹೇಳಿದರು. ತಮ್ಮಂತಹ ಹಿರಿಯ ನಾಯಕರ ಕರ್ತವ್ಯವೆಂದರೆ ಸರಿಯಾದ ದಾರಿ ಯಾವುದು ಎಂಬ ಬಗ್ಗೆ ಮಾರ್ಗದರ್ಶನ ಮಾಡುವುದು ಎಂದು ಎಸ್.ಕೆ. ಪಾಟೀಲರಿಗೆ ಸೂಚಿಸಿದರು. ನಿಜಲಿಂಗಪ್ಪನವರಿಗೆ ಬರೆದ ೧೯೭೭ ನೇ ಜುಲೈ ೧೨ ನೇ ತಾರೀಕಿನ ತಮ್ಮ ಪತ್ರದಲ್ಲಿ ಪಾಟೀಲರು ತಮ್ಮ ಭಿನ್ನಾಭಿಪ್ರಾಯವನ್ನು ಸೂಚಿಸಿ ಕೆಲವು ಕ್ಷಿಪ್ರ ಕ್ರಮಗಳನ್ನು ಕೈಗೊಳ್ಳಬೇಕೆಂದು ವಾದಿಸಿದರು. ಜನಸಂಘ ಮತ್ತು ಬಿಎಲ್‌ಡಿಯ ವಿಚಿತ್ರ ಹಿಡಿತದಿಂದ ಪಕ್ಷವು ಪಾರಾಗಬೇಕೆಂದು ಪಾಟೀಲರು ಸೂಚಿಸಿದರು. ತಮಗೆ ವಯಸ್ಸಾಗುತ್ತಿರುವುದರಿಂದ ಕಾಯಲಾರೆವು ಎಂದು ತಿಳಿಸಿದ್ದರು. ಆದರೆ ನಿಜಲಿಂಗಪ್ಪನವರಿಗೆ ಈ ದೈನಂದಿನ ರಾಜಕಾರಣದಲ್ಲಿ ಈಗಾಗಲೇ ಆಸಕ್ತಿ ಮಸುಕಾಗಿತ್ತು.

ಕರ್ನಾಟಕದಲ್ಲಿ ಜನತಾ ಪಕ್ಷವು ದುರವಸ್ಥೆಯಲ್ಲಿರುವುದನ್ನು ನಿಜಲಿಂಗಪ್ಪನವರು ಗಮನಿಸಿದರು, ಅದಕ್ಕೆ ಜನರೊಡನೆ ಸಂಪರ್ಕವೇ ಕಡಿದುಹೋಗಿತ್ತು. ಅವರಿಗೆ ರಾಜ್ಯ ಜನತಾ ಪಕ್ಷದ ಅಧ್ಯಕ್ಷ ವೀರೇಂದ್ರ ಪಾಟೀಲರ ಬಗ್ಗೆ ವಿಶೇಷ ಅಸಮಾಧಾನ. ಆದರೆ ಉತ್ತರ ಕರ್ನಾಟಕದ ಹಲವಾರು ಲಿಂಗಾಯತ ಗುಂಪುಗಳು ಅವರನ್ನು ಭೇಟಿಯಾಗಿ ವೀರೇಂದ್ರ ಪಾಟೀಲರನ್ನು ಜನತಾ ಪಕ್ಷದ ಅಧ್ಯಕ್ಷರನ್ನಾಗಿ ಮುಂದುವರೆಸುವಂತೆ ಕೇಳಿಕೊಂಡವು. ಪಾಟೀಲರಿಗೆ ಸಂಪುಟದಲ್ಲಿ ಸ್ಥಾನ ದೊರಕಿಸುವಂತೆ ಒಂದು ಪರ್ಯಾಯವನ್ನೂ ಅವು ಸೂಚಿಸಿದುವು. ರಾಮಕೃಷ್ಣ ಹೆಗಡೆಯವರು ವೀರೇಂದ್ರ ಪಾಟೀಲರೊಡನೆ ಹೆಗಲೆಣೆಯಾಗಿ ಕೆಲಸ ಮಾಡುತ್ತಿರುವುದು ನಿಜಲಿಂಗಪ್ಪನವರಿಗೆ ತಿಳಿದಿತ್ತು. ಅವರಿಗೆ ಅಚ್ಚರಿಯುಂಟುಮಾಡಿದ ವಿಷಯವೆಂದರೆ ವೀರೇಂದ್ರ ಪಾಟೀಲರು ಹಿಂದಿನ ವಿರೋಧಿಗಳನ್ನೂ ತಮ್ಮೊಡನೆ ಸಹಕರಿಸುವಂತೆ ಮಾಡಿಕೊಂಡಿರುವ ಕೌಶಲ! ಆದರೆ ವೀರೇಂದ್ರ ಪಾಟೀಲರನ್ನು ಜನತಾ ಪಕ್ಷದ ಅಧ್ಯಕ್ಷಸ್ಥಾನದಿಂದ ತೆಗೆಯಬೇಕೆಂಬ ತಮ್ಮ ನಿರ್ಧಾರದ ಬಗ್ಗೆ ನಿಜಲಿಂಗಪ್ಪನವರಿಗೆ ಸಂಶಯವೇ ಇರಲಿಲ್ಲ. ಪೀಲೂ ಮೋದಿಯವರಿಗೆ ಬರೆದ ಪತ್ರವೊಂದರಲ್ಲಿ ಅವರು, ರಾಜ್ಯದ ಜನತಾ ಪಕ್ಷವು ವೀರೇಂದ್ರ ಪಾಟೀಲ್, ರಾಮಕೃಷ್ಣ ಹೆಗಡೆ ಮತ್ತು ದೇವೇಗೌಡರಿಂದಾಗಿ ಹಾಳಾಗುತ್ತಿದೆಯೆಂದು ಸ್ಪಷ್ಟಪಡಿಸಿದರು. ಅಧ್ಯಕ್ಷಸ್ಥಾನವನ್ನು ತೆರವುಗೊಳಿಸುವುದಾಗಿ ಕಳೆದ ಮೂರು ವರ್ಷಗಳಿಂದಲೂ ಹೇಳಿಕೊಂಡು ಬಂದಿರುವ ವೀರೇಂದ್ರ ಪಾಟೀಲರು ಇನ್ನೂ ಹಾಗೆ ಮಾಡಿಲ್ಲ ಎಂಬುದನ್ನೂ ಪತ್ರದಲ್ಲಿ ನಮೂದಿಸಿದರು. ಪಕ್ಷಕ್ಕೆ ಎಸ್‌ಸಿಗಳು ಎಸ್‌ಟಿಗಳು ಮತ್ತು ಅಲ್ಪಸಂಖ್ಯಾತರ ಬೆಂಬಲವಿಲ್ಲವೆಂದು ಮೋದಿಯವರಿಗೆ ತಿಳಿಸಿ, ಎಸ್‌ಸಿ ಆಗಿದ್ದ ವೈ. ರಾಮಕೃಷ್ಣ ಅಂತಹವರು ವೀರೇಂದ್ರ ಪಾಟೀಲರ ಜಾಗಕ್ಕೆ ರಾಜ್ಯ ಜನತಾ

ಪಕ್ಷದ ಅಧ್ಯಕ್ಷರಾಗಿ ಬರಬೇಕೆಂದು ಸೂಚಿಸಿದರು. ೧೯೭೭ನೇ ಆಗಸ್ಟ್ ೩ ರಂದು ಅವರು ಮೊರಾರ್ಜಿಯವರಿಗೆ ದೂರವಾಣಿ ಕರೆಮಾಡಿ, ದಿನೇ ದಿನೇ ಜನಪ್ರಿಯತೆಯನ್ನು ಕಳೆದುಕೊಳ್ಳುತ್ತಿರುವ ವೀರೇಂದ್ರ ಪಾಟೀಲರ ಜಾಗಕ್ಕೆ ವೈ. ರಾಮಕೃಷ್ಣ ಅವರನ್ನು ಅಧ್ಯಕ್ಷರಾಗಿ ನೇಮಿಸುವಂತೆ ಹೇಳಿದರು. ವೀರೇಂದ್ರ ಪಾಟೀಲ್, ರಾಮಕೃಷ್ಣ ಹೆಗಡೆ ಮತ್ತು ದೇವೇಗೌಡರುಗಳ ಗುಂಪುಗಾರಿಕೆಯಿಂದಾಗಿ ರಾಜ್ಯ ಜನತಾ ಪಕ್ಷವು ಹಾಳಾಗುತ್ತಿದೆ ಯೆಂಬ ಅಸಮಾಧಾನ ಪಕ್ಷದ ಹಿತೈಷಿಗಳ ಮನಸ್ಸನ್ನು ಕಾಡುತ್ತಿತ್ತು. ಕೊನೆಗೆ, ವೀರೇಂದ್ರ ಪಾಟೀಲರ ಜಾಗದಲ್ಲಿ ವೈ. ರಾಮಕೃಷ್ಣ ನೇಮಿತರಾಗುವಂತೆ ಮಾಡುವಲ್ಲಿ ಅವರು ಸಫಲರಾಗದಿದ್ದರೂ, ಅವರ ಜಾಗಕ್ಕೆ ದೇವೇಗೌಡ ಬಂದರು. ಅವರ ಹೆಸರನ್ನು ನಿಜಲಿಂಗಪ್ಪನವರು ಸೂಚಿಸದಿದ್ದುದರಿಂದಲೇ ಮೊರಾರ್ಜಿ ದೇವೇಗೌಡರನ್ನು ನೇಮಿಸಿ ದ್ದರು! ನಿಜಲಿಂಗಪ್ಪ ಮತ್ತು ಮೊರಾರ್ಜಿಯವರ ನಡುವೆ ಯಾವುದೇ ಸಮರಸ ಭಾವನೆ ಉಳಿದಿರಲಿಲ್ಲ. ಅಧಿಕಾರದಲ್ಲಿರದ ಹಾಗೂ ಯಾವುದೇ ಹುದ್ದೆಯಿಲ್ಲದ ನಿಜಲಿಂಗಪ್ಪನವರು ಜನತೆಯ ಕಲ್ಯಾಣದ ಕಡೆಗೆ ಗಮನ ಹರಿಸಿದರು; ಅಧಿಕಾರಸ್ಥರುಗಳಿಗೆ ಪತ್ರ ಬರೆದು ವಿದ್ಯುತ್ ಮತ್ತು ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವಂತೆ ಸೂಚಿಸಿದರು. ಜೊತೆಗೆ, ಜನರಿಗೆ ತಮ್ಮ ಹಕ್ಕು ಮತ್ತು ಹೊಣೆಗಾರಿಕೆಗಳ ಬಗ್ಗೆ ಅರಿವು ಮೂಡಿಸಲು ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡುತ್ತಿದ್ದರು. ೧೯೭೭ರ ಸೆಪ್ಟೆಂಬರ್‌ನಲ್ಲಿ ದೆಹಲಿಗೆ ಹೋದಾಗ ನಿಜಲಿಂಗಪ್ಪನವರಿಗೆ ಹಠಾತ್ ಅನಾರೋಗ್ಯವುಂಟಾ ಯಿತು, ಅವರನ್ನು ವೆಲ್ಲಿಂಗ್ಟನ್ ಆಸ್ಪತ್ರೆಗೆ ಸೇರಿಸಲಾಯಿತು. ಅಲ್ಲಿ ಅವರನ್ನು ವಿವಿಐಪಿ ಯಂತೆ ಕಾಣಲಾಯಿತು. ಇಂದಿರಾ ಗಾಂಧಿಯವರು ಆಸ್ಪತ್ರೆಗೆ ಭೇಟಿ ನೀಡಿ ಅವರ ಆರೋಗ್ಯ ಮತ್ತು ಕುಟುಂಬದವರ ಯೋಗಕ್ಷೇಮ ವಿಚಾರಿಸಿದರು.

ರಾಜ್ಯ ಜನತಾ ಪಕ್ಷದ ಹೊಸ ಅಧ್ಯಕ್ಷ ದೇವೇಗೌಡರು ನಿಜಲಿಂಗಪ್ಪನವರನ್ನು ಭೇಟಿಯಾಗಿ ಅವರ ಆಶೀರ್ವಾದ ಪಡೆದರು. ಗುಂಪುಗಾರಿಕೆಯನ್ನು ಬಿಟ್ಟು ಜನರೊಡನೆ ನಿಕಟ ಸಂಪರ್ಕವನ್ನು ಕಲ್ಪಿಸಿಕೊಳ್ಳುವಂತೆ ನಿಜಲಿಂಗಪ್ಪನವರು ಅವರಿಗೆ ಸಲಹೆಯಿತ್ತರು. ತಾವೇ ಬಿಡುವಾದಾಗ ಹಳ್ಳಿ ಪ್ರದೇಶಗಳಲ್ಲಿ ಪ್ರವಾಸ ಕೈಗೊಂಡು ಜನತೆಯ ಮನಸ್ಸನ್ನರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಒಂದು ಉದಾಹರಣೆಯೆಂದರೆ, ೧೯೭೭ ನೇ ಸೆಪ್ಟೆಂಬರ್ ೨೫ ರಿಂದ ೨೭ ರವರೆಗೆ ಜನತಾ ಪಕ್ಷದ ಸಂದೇಶವನ್ನು ಉತ್ತರ ಕರ್ನಾಟಕದ ಶಿಗಾಂವ, ಸವಣೂರು, ಮುಂಡರ್ಗಿ, ಮುಳಗುಂದ, ನರೇಗಲ್, ರೋಣ, ಗಜೇಂದ್ರಗಡ ಮತ್ತು ಅಣ್ಣಿಗೇರಿಯಂತಹ ಪಟ್ಟಣಗಳಲ್ಲಿ ಜನಗಳೆದುರು ವಿವರಿಸಿದರು. ಸರ್ಕಾರದಲ್ಲಿ ಹೆಚ್ಚುತ್ತಿರುವ ಭ್ರಷ್ಟಾಚಾರವನ್ನು ಎಲ್ಲಡೆಯೂ ಅವರು ಖಂಡಿಸಿ, ಲಂಚಗುಳಿತನವನ್ನು ಸಮಾಂತರ ಸರ್ಕಾರವನ್ನಾಗಿಸುವಂತೆ ಸಾಂಸ್ಥಿಕಗೊಳಿಸಿರುವ ಅರಸು ಸರ್ಕಾರದ

ವಿರುದ್ಧ ಹೋರಾಡುವಂತೆ ಕರೆ ನೀಡುತ್ತಿದ್ದರು. ಅರಸು ಸರ್ಕಾರವನ್ನು ವಜಾಗೊಳಿಸುವಂತೆ ಅವರು ಮೊರಾರ್ಜಿಯವರಿಗೆ ಹೇಳುತ್ತಲೇ ಬಂದರು. ಕೊನೆಗೂ ಅವರ ಇರಾದೆಯಂತೆ ಸರ್ಕಾರ ವಜಾಗೊಂಡು ೧೯೭೭ರನೇ ಜನವರಿ ೧ ರಂದು ಹೊಸ ವರ್ಷದ ಉದಯಕಾಲದಲ್ಲಿ ಕರ್ನಾಟಕದಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿಗೆ ಬಂತು. ಮುಂಬರುವ ಚುನಾವಣೆಗಳಲ್ಲಿ ಜನತಾ ಪಕ್ಷಕ್ಕೆ ಮತ ನೀಡುವಂತೆ ನಿಜಲಿಂಗಪ್ಪ ಜನರಿಗೆ ಮನವಿ ಮಾಡಿಕೊಳ್ಳುತ್ತಿದ್ದರು. ಈ ಮಧ್ಯೆ, ಅವರ ಗೆಳೆಯ ಎಸ್.ಕೆ. ಪಾಟೀಲ್ ಜನತಾ ಪಕ್ಷದಿಂದ ತೀರ ದೂರವಾದರು, ತಮ್ಮನ್ನು ಉದ್ದೇಶಪೂರ್ವಕವಾಗಿ ಕಡೆಗಣಿಸಲಾಗುತ್ತಿದೆಯೆಂದು ಅವರು ನಿಜಲಿಂಗಪ್ಪನವರಲ್ಲಿ ದೂರಿದರು. ಈ ಈರ್ವರ ನಡುವಣ ಪತ್ರ ವ್ಯಹಾರವು ಮತ್ತೊಂದು ಕಾರಣಕ್ಕೂ ಸ್ವಾರಸ್ಯಪೂರ್ಣವಾಗಿದೆ; ಅದೆಂದರೆ, ಅವರು ಅಲಂಕರಿಸಿದ್ದ ಹುದ್ದೆ ಹಾಗಗೂ ಹೊಂದಿದ್ದ ಅಧಿಕಾರಗಳ ಬಗ್ಗೆ ಅವರಿಬ್ಬರಲ್ಲಿದ್ದ ಅಗಾಧ ವ್ಯತ್ಯಾಸ. ತಮ್ಮ ವ್ಯಕ್ತಿಗತ ರಾಜಕೀಯ ಲಾಭದ ಬಗ್ಗೆ ನಿಜಲಿಂಗಪ್ಪನವರದು ಗರಿಷ್ಠ ನಿರಾಸಕ್ತಿ, ಆದರೆ ಅದನ್ನು ಸಹಿಸದ ಪಾಟೀಲರು ಕಾಂಗ್ರೆಸ್ (ಓ) ಅನ್ನು ಪ್ರತ್ಯೇಕ ಪಕ್ಷವಾಗಿ ಪುನಾರಚಿಸಲು ಪ್ರಯತ್ನಿಸಿದರು. ಜನತಾ ಅಧ್ಯಕ್ಷರಾದ ಚಂದ್ರಶೇಖರ್ ಅವರಿಗೆ ನಿಜಲಿಂಗಪ್ಪನವರು ಪತ್ರ ಬರೆದು, ಎಸ್.ಕೆ. ಪಾಟೀಲರ ಅಭಿಪ್ರಾಯಗಳನ್ನು ಗಮನಿಸಲು ಸೂಚಿಸಿದರು. ಆದರೆ ಅದಕ್ಕೆ ಬಂದ ಪ್ರತಿಕ್ರಿಯೆ ನಿರಾಶಾದಾಯಕವಾಗಿತ್ತು. ಜನತಾ ಪಕ್ಷದ ಅಭ್ಯರ್ಥಿಗಳ ಪಟ್ಟಿಯಲ್ಲಿ ಲಂಗುಲಗಾಮಿಲ್ಲದವರೇ ಇದ್ದುದನ್ನು ಕಂಡು ನೋಡಿದಾಗ ನಿಜಲಿಂಗಪ್ಪನವರ ಕೋಪ ನೆತ್ತಿಗೇರಿತು. ಇದು ರಾಮಕೃಷ್ಣ ಹೆಗಡೆಯವರ ಕೃತ್ಯವೆಂಬುದು ಅವರು ಊಹಿಸಿದರು. ಆನಂತರ ಅವರು ಚಂದ್ರಶೇಖರ್ ಅವರಿಗೆ ಪತ್ರ ಬರೆದು, ಅಂಥ ಅನಪೇಕ್ಷಣೀಯ ಬೆಳವಣಿಗೆಗಳಿಂದ ತಮಗೆ ಪಕ್ಷ ರಾಜಕೀಯದಲ್ಲಿ ಮುಂದುವರಿಯಲು ಅಸಾಧ್ಯವಾಗಿದೆಯೆಂದು ತಿಳಿಸಿದರು. ಈ ಪತ್ರಕ್ಕಾಗಲೀ ಅವರ ನೈತಿಕ ಕ್ರೋಧಕ್ಕಾಗಲೀ ಯಾವುದೇ ಮಾನ್ಯತೆ ದೊರೆಯಲಿಲ್ಲ. ಒಬ್ಬ ತತ್ವಾಧಾರಿತ ವ್ಯಕ್ತಿಯಾಗಿ ಅವರಿಗೆ ಜನತಾ ಪಕ್ಷಕ್ಕೆ ರಾಜೀನಾಮೆ ನೀಡುವುದರ ಹೊರತು ಅನ್ಯಮಾರ್ಗವಿರಲಿಲ್ಲ. ಆತುರದ ನಿರ್ಧಾರ ಕೈಗೊಳ್ಳದಿರಲು ಮೊರಾರ್ಜಿ ಕೇಳಿಕೊಂಡರು. ಸ್ನೇಹಿತರೂ ಬಂಧುಗಳು ಹಾಗೆ ಮಾಡದಿರಲು ನಿಜಲಿಂಗಪ್ಪನವರನ್ನು ಒತ್ತಾಯಿಸಿದರು. ಎಸ್.ಕೆ. ಪಾಟೀಲರು ತಮ್ಮ ೧೯೭೭ರ ಫೆಬ್ರವರಿ ೧ನೇ ತಾರೀಕಿನ ಪತ್ರದಲ್ಲಿ ಪಕ್ಷದಿಂದ ಹೊರಬಂದುದಕ್ಕೆ ತಮ್ಮ ಸ್ನೇಹಿತರನ್ನು ಅಭಿನಂದಿಸಿ, ಪಕ್ಷ ಮಾಡಿದ್ದ ಪಾಪಕೃತ್ಯಗಳನ್ನು ಪಟ್ಟಿಗೈದರು. ಈ ವೇಳೆ ನಿಜಲಿಂಗಪ್ಪನವರಿಗೆ ಬರೆಯುತ್ತಿದ್ದ ತಮ್ಮ ಪತ್ರಗಳಲ್ಲಿ ಪಾಟೀಲರು ಜನತಾ ಪಕ್ಷದ ಅಪರಾಧಗಳನ್ನು ಮತ್ತೆ ಮತ್ತೆ ನೆನಪಿಸಿದರು.ಇದರ ಗರಿಷ್ಠ ಅನುಕೂಲ ಪಡೆದವರು ಇಂದಿರಾ ಗಾಂಧಿಯವರೆಂದೂ, ಅವರು

ಭಾರಿ ಸಭಿಕರನ್ನು ಸೆಳೆಯುತ್ತಿದ್ದಾರೆಂದೂ ಅಭಿಪ್ರಾಯಪಟ್ಟರು. ಅವರ ರಾಜೀನಾಮೆಯು ಜನತಾ ಪಕ್ಷಕ್ಕೆ ಕೊಟ್ಟ ದೊಡ್ಡ ಪೆಟ್ಟಾಗಿತ್ತು. ನಿಜಲಿಂಗಪ್ಪನವರಂಥವರು ಪಕ್ಷದಿಂದ ಹೊರಬರಬೇಕಾದರೆ ಪಕ್ಷವು ಸರಿಯಾದ ಹಾದಿಯಲ್ಲಿಲ್ಲವೆಂದೂ, ಪ್ರಾಯಶಃ ಅದು ಇನ್ನೊಂದು ಕಾಂಗ್ರೆ ಆಗುತ್ತಿದೆಯೆಂದೂ ಇದರಿಂದ ಜನರು ಭಾವಿಸುವಂತಾಯಿತು. ಅಶೋಕ ಮೆಹ್ತಾ ಅವರಿಗೆ ಬರೆದ ಪತ್ರಗಳಲ್ಲಿ ನಿಜಲಿಂಗಪ್ಪನವರು ತಮ್ಮ ಹತಾಶೆಯನ್ನು ವ್ಯಕ್ತಪಡಿಸಿ, ರಾಜಕೀಯದಿಂದಲೇ ನಿವೃತ್ತಿ ಹೊಂದುವ ತಮ್ಮ ಬಯಕೆಯನ್ನು ಹೇಳಿಕೊಂಡರು. ನಿಜಲಿಂಗಪ್ಪನವರಂಥವರು ರಾಜಕೀಯದಿಂದ ನಿವೃತ್ತಿ ಹೊಂದುವುದು ದೇಶದ ದೊಡ್ಡ ದುರಂತವೆಂದು ಅಶೋಕ ಮೆಹ್ತಾ ಕಳವಳ ವ್ಯಕ್ತಪಡಿಸಿದರು. ಅವರ ರಾಜೀನಾಮೆಯು ಅನೇಕರ ಪ್ರಜ್ಞೆಯನ್ನು ಪ್ರಚೋದಿಸುವ ಪರಿಣಾಮವನ್ನು ಬೀರಿ, ಅವರಿಗೆ ಪತ್ರಗಳನ್ನು ಬರೆದು ಜನತಾ ಪಕ್ಷವು ಹೋಗುತ್ತಿದ್ದ ಹಾದಿಯನ್ನು ಖಂಡಿಸಿದರು. ಪ್ರಾಯಶಃ ನಿಜಲಿಂಗಪ್ಪನವರನ್ನು ತಮ್ಮ ಬಣಕ್ಕೆ ಆಕರ್ಷಿಸುವ ಉದ್ದೇಶದಿಂದ ಅರಸು ಅವರು ಅವರ ಮನೆಯಲ್ಲಿ ಭೇಟಿಯಾದರು. ತಾವು ಇಂದಿರಾ ಅವರೊಡನೆ ಯಾವುದೇ ರಾಜೀಸೂತ್ರಕ್ಕೂ ಬಾಗುವುದಿಲ್ಲವೆಂದು ನಿಜಲಿಂಗಪ್ಪನವರು ಪಾಟೀಲರಿಗೆ ಆಶ್ವಾಸನೆಯಿತ್ತರು. ಕರ್ನಾಟಕದಲ್ಲಿ ಚುನಾವಣೆಗಳು ಸಮೀಪಿಸುತ್ತಿದ್ದಂತೆಯೇ, ನಿಜಲಿಂಗಪ್ಪನವರ ರಾಜೀನಾಮೆಯು ಚುನಾವಣೆಯಲ್ಲಿ ಜನತಾ ಪಕ್ಷದ ಮೇಲೆ ಕೆಟ್ಟ ಪರಿಣಾಮ ಬೀರುವುದೆಂದು ತಿಳಿದ ಜನತಾ ಅಧ್ಯಕ್ಷರಾದ ಚಂದ್ರಶೇಖರ್ ಅವರು ಅವರನ್ನು ೧೯೭೮ನೇ ಫೆಬ್ರವರಿ ೩೨ ರಂದು ಕಂಡು ರಾಜೀನಾಮೆಯನ್ನು ಹಿಂದಕ್ಕೆ ಪಡೆಯುವಂತೆ ಕೇಳಿಕೊಂಡರು. ಚಂದ್ರಶೇಖರ್ ಅವರ ಪ್ರಾಮಾಣಿಕತೆ ಮತ್ತು ವಿನಯಗಳಿಗೆ ಮಾರುವೋಗಿ ನಿಜಲಿಂಗಪ್ಪನವರು ರಾಜೀನಾಮೆ ವಾಪಸು ಪಡೆಯಲು ಒಲ್ಲದ ಮನಸ್ಸಿನಿಂದಲೇ ನಿರ್ಧರಿಸಿದರು. ಈ ಬೆಳವಣಿಗೆಯಲ್ಲಿ ಮೊರಾರ್ಜಿಯವರ ಕೈವಾಡವೂ ಇತ್ತು. ಆದರೆ ನಿಜಲಿಂಗಪ್ಪನವರು ಎಂದಿಗೂ ಈ ನಿರ್ಧಾರವನ್ನು ಮನಸಾರೆ ಒಪ್ಪಿಕೊಳ್ಳಲಿಲ್ಲ. ೧೯೭೮ನೇ ಫೆಬ್ರವರಿ ೨೮ರ ಚುನಾವಣಾ ಫಲಿತಾಂಶಗಳು ಹೊರಬಿದ್ದು ಜನತಾ ಪಕ್ಷವು ಪೂರ್ತಿ ಮಣ್ಣುಮುಕ್ಕಿತ್ತು. ಈ ಸೋಲಿಗೆ ಕಾರಣ ಜನತಾ ಅಧ್ಯಕ್ಷ ದೇವೇಗೌಡರೇ ಎಂದು ಜನರು ಆಪಾದಿಸಿದರು. ಆದರೆ ಈ ಸೋಲಿಗೆ ರಾಮಕೃಷ್ಣ ಹೆಗಡೆಯವರೂ ಸಹಭಾಗಿಗಳು ಎಂದೂ ಜನ ಭಾವಿಸಿದರು. ವಾಸ್ತವವಾಗಿ, ಜನತಾ ಪಕ್ಷವು ಕೇವಲ ೫೯ ಸ್ಥಾನಗಳನ್ನು ಗಳಿಸಿತು, ಇಂದಿರಾ ಕಾಂಗ್ರೆಸ್ ೧೪೮ ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. ನಿಜಕ್ಕೂ ಈ ಪರಾಭವಕ್ಕೆ ಕಾರಣವನ್ನು ಸರಳವಾಗಿ ಯಾವೊಬ್ಬ ವ್ಯಕ್ತಿಗೂ ಆರೋಪಿಸಲಾಗದು. ನೇರವಾಗಿ ಹೇಳಬೇಕೆಂದರೆ, ಅದಕ್ಕೆ ಕಾರಣ ಜನತಾ ಪಕ್ಷದಲ್ಲಿನ ಐಕಮತ್ಯ, ಶಿಸ್ತು ಮತ್ತು ಒಮ್ಮನಸ್ಸಿನ ಸಾಮರ್ಥ್ಯಗಳ ಕೊರತೆ.

ಜನತಾ ಶಾಸಕಾಂಗ ಪಕ್ಷದ ನಾಯಕರ ಚುನಾವಣೆಗಿಂತ ಮುಂಚೆ ೧೯೭೮ನೇ ಮಾರ್ಚ್ ೧೬ ರಂದು ಒಂದು ಸಭೆ ನಡೆಯಿತು. ಆಗ ರಾಮಕೃಷ್ಣ ಹೆಗಡೆ, ವೀರೇಂದ್ರ ಪಾಟೀಲ್, ಬೊಮ್ಮಾಯಿ ಮತ್ತು ದೇವೇಗೌಡರು ನಿಜಲಿಂಗಪ್ಪನವರನ್ನು ಭೇಟಿಯಾಗಿ ಅವರೊಡನೆ ನಾಯಕತ್ವದ ಬಗ್ಗೆ ಮಾತನಾಡಬಯಸಿದರು. ಅವರು ಬೊಮ್ಮಾಯಿಯವರ ಹೆಸರನ್ನು ಸೂಚಿಸಿದಾಗ, ಚುನಾವಣೆಗಳಲ್ಲಿ ಜನತಾ ಪಕ್ಷ ಸೋತದ್ದಕ್ಕೆ ಕಾರಣ ಪಕ್ಷಾಂತರಿಗಳನ್ನು ಅಭ್ಯರ್ಥಿಗಳನ್ನಾಗಿ ಆರಿಸಿದ್ದು ಎಂದು ನಿಜಲಿಂಗಪ್ಪನವರು ಹೇಳಿದರು. ಶಾಸನಸಭೆಯಲ್ಲಿ ಪಕ್ಷವನ್ನು ಮುನ್ನಡೆಸಲು ಪರಿಶಿಷ್ಟ ಜಾತಿ ಅಥವಾ ಹಿಂದುಳಿದ ಜಾತಿಯವರೊಬ್ಬರನ್ನು ನಾಯಕರನ್ನಾಗಿ ಆರಿಸಿಕೊಳ್ಳುವಂತೆ ಬುದ್ಧಿವಾದ ಹೇಳಿದರು. ಈ ವರ್ಗಗಳಿಗೆ ಸೇರಿದವರು ಲಕ್ಷ್ಮೀಸಾಗರ್ ಮತ್ತು ತಿಮ್ಮಯ್ಯ ಅವರುಗಳು, ಆದರೆ ಇವರಿಬ್ಬರೂ ನಿರನುಭವಿಗಳು ಮತ್ತು ರಾಜಕೀಯಕ್ಕೆ ಹೊಸಬರು ಎಂದು ದೇವೇಗೌಡರು ವಾದಿಸಿದರು. ಆದರೆ ಈ ವಾದದಿಂದ ನಿಜಲಿಂಗಪ್ಪನವರಿಗೆ ಸಮಾಧಾನವುಂಟಾಗಲಿಲ್ಲ, ತಮ್ಮದೇ ದಾರಿಯಲ್ಲಿ ನಡೆಯಲು ಅವರಿಗೆ ಇದೊಂದು ನೆವ ಎಂದು ಭಾವಿಸಿದರು. ನಿಜಲಿಂಗಪ್ಪನವರು ದೆಹಲಿಗೆ ಹೋದಾಗಲೆಲ್ಲ ಅವರು ರಾಷ್ಟ್ರಪತಿ ಸಂಜೀವರೆಡ್ಡಿಯವರನ್ನು ಭೇಟಿಯಾಗಿ ದೇಶದ ರಾಜಕೀಯ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡುತ್ತಿದ್ದರು. ರೆಡ್ಡಿಯವರೂ ಪರಿಸ್ಥಿತಿಯ ಬಗ್ಗೆ ಅಸಮಾಧಾನದಿಂದಿದ್ದರು, ಮೊರಾರ್ಜಿಯವರ ಅಸಾಮರ್ಥ್ಯ, ದರ್ಪ ಹಾಗೂ ತೋರಿಕೆಗಳ ಬಗ್ಗೆ ಹೇಳುತ್ತಿದ್ದರು. ನಿಜಲಿಂಗಪ್ಪನವರ ಹೆಸರನ್ನು ತಾವು ರಾಜ್ಯಸಭೆಗೆ ಪರಿಗಣಿಸಲು ಮೊರಾರ್ಜಿಯವರಿಗೆ ಸಲಹೆಯಿತ್ತುದಾಗಿಯೂ, ಆದರೆ ಮೊರಾರ್ಜಿಯವರು ಬೇರೊಬ್ಬರನ್ನು ಇಷ್ಟಪಡುವುದಾಗಿಯೂ ತಿಳಿಸಿದರು. ಗೃಹ ಸಚಿವ ಚರಣ ಸಿಂಗ್ ಅವರ ಅಸಾಮರ್ಥ್ಯದ ಬಗ್ಗೆಯೂ ರೆಡ್ಡಿ ಹೇಳಿದರು, ಅವರು ಸಮರ್ಪಕ ರೀತಿಯಲ್ಲಿ ವಿಷಯಗಳನ್ನು ನಿರ್ವಹಿಸದಿರುವುದರಿಂದ ಸರ್ಕಾರಕ್ಕೆ ಅನೇಕ ಸಮಸ್ಯೆಗಳನ್ನು ತಂದೊಡ್ಡಿರುವುದಾಗಿ ತಿಳಿಸಿದರು. ದಿನೇ ದಿನೇ, ಜನತಾ ಪಕ್ಷದ ಬಗೆಗಿನ ನಿಜಲಿಂಗಪ್ಪನವರ ಅತೃಪ್ತಿ ಹೆಚ್ಚಾಗುತ್ತಿತ್ತು. ಹದಗೆಡುತ್ತಿರುವ ರಾಜಕೀಯ ಪರಿಸ್ಥಿತಿಗಳನ್ನು ನಿಭಾಯಿಸಲು ಜನತಾ ಅಧ್ಯಕ್ಷ ಚಂದ್ರಶೇಖರ್ ಅವರಿಗೆ ಸೂಕ್ತ ಬೆಂಬಲ ಇಲ್ಲವೆಂದು ಭಾವಿಸಿದರು. ಪಕ್ಷದ ಸ್ಥಿತಿಯ ಬಗ್ಗೆ ಅವರು ಚಂದ್ರಶೇಖರ್ ಅವರಿಗೆ ಕಟುವಾದ ಪತ್ರವೊಂದನ್ನು ಬರೆದು, ಚರಣ ಸಿಂಗ್, ಅಟಲ್ ಬಿಹಾರಿ ವಾಜಪೇಯಿ, ಮತ್ತು ಜಗಜೀವನರಾಂ ಅಂತಹ ಇತರ ನಾಯಕರಿಗೂ ಅದರ ಪ್ರತಿಗಳನ್ನು ರವಾನಿಸಿದರು. ಅವರು ೧೯೭೮ನೇ ಏಪ್ರಿಲ್‌ನಲ್ಲಿ ದೆಹಲಿಗೆ ಭೇಟಿಯಿತ್ತಾಗ, ಗುಜರಾತ್‌ನ ರಾಜ್ಯಪಾಲ ಹುದ್ದೆಯನ್ನು ಒಪ್ಪಿಕೊಳ್ಳುವಂತೆ ಅವರ ಮನವೊಲಿಸಲು ರಾಷ್ಟ್ರಪತಿಗಳು ಹಾಗೂ ಪ್ರಧಾನಮಂತ್ರಿಗಳಿಬ್ಬರೂ ಪ್ರಯತ್ನಿಸಿದರು. ಆ ಸಲಹೆಯನ್ನು

ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರೊಂದಿಗೆ ಎಸ್ಸೆ

ಮಾನ್ಯ ಮಾಡಬೇಕೆಂದು ಕೆಲವು ಕೇಂದ್ರ ಸಚಿವರೂ ಕೇಳಿಕೊಂಡರು. ಆ ಬಗ್ಗೆ ಚರ್ಚಿಸುವ ಬದಲು ನಿಜಲಿಂಗಪ್ಪನವರು ಪಕ್ಷ ತಲುಪಿರುವ ಕೆಳಹಂತದ ಬಗ್ಗೆ ಚರ್ಚಿಸು ವುದರ ಮೂಲಕ ವಿಷಯ ಬದಲಿಸಿದರು. ಪರಸ್ಪರ ನಾಯಕರುಗಳು ನೀಡುತ್ತಿದ್ದ ಹಾಗೂ ಪಕ್ಷದೊಳಗೆ ಜನಸಂಘದ ಗುಂಪು ಮೇಲುಗೈಯಾದದ್ದರಿಂದ ಅದಕ್ಕೆ ಕೆಟ್ಟ ಹೆಸರು ಬರುತ್ತಿದೆಯೆಂಬ ದೂರುಗಳನ್ನವರು ಕೇಳಬೇಕಾಗುತ್ತಿತ್ತು. ದೆಹಲಿಯಿಂದ ಮರಳಿದ ಬಳಿಕ, ತಮ್ಮ ಹೆಂಡತಿ ಮುರಿಗೆಮ್ಮನವರಿಗೆ ತಮಗೆ ಬಂದಿದ್ದ ರಾಜ್ಯಪಾಲ ಹುದ್ದೆಯ ಬಗ್ಗೆ ತಿಳಿಸಿದರು. ನಿಜಲಿಂಗಪ್ಪನವರನ್ನು ಅರ್ಥಮಾಡಿಕೊಂಡಿದ್ದ ಹೆಂಡತಿ ಯಾಗಿ ಅವರು ಅದನ್ನು ಒಪ್ಪಿಕೊಳ್ಳದಿರಲು ಹೇಳಿದರು. ನಿಜಲಿಂಗಪ್ಪನವರು ಪ್ರಧಾನ ಮಂತ್ರಿಗಳು ಹಾಗೂ ಗೃಹಸಚಿವರಿಗೆ ತಂತಿಯ ಮೂಲಕ ಔಪಚಾರಿಕವಾಗಿ ತಮ್ಮ ನಿರ್ಧಾರವನ್ನು ಹೇಳಿದರು.

ದಿನ ಸಾಗಿದಂತೆ ಜನತಾ ಪಕ್ಷವು ಸ್ವನಾಶದ ಕಡೆ ಸಾಗುತ್ತಿರುವುದನ್ನು ನಿಜಲಿಂಗಪ್ಪ ನವರು ಗಮನಿಸಿದರು. ಪಕ್ಷದ ಭವಿಷ್ಯದ ಬಗ್ಗೆ ಅವರಿಗೆ ಯಾವುದೇ ಭ್ರಮೆಗಳು ಉಳಿಯಲಿಲ್ಲ. ೧೯೭೮ನೇ ಜೂನ್ ೨೨ ರಂದು ಅವರು ಜೆಪಿ ಅವರನ್ನು ಪಟ್ನಾದಲ್ಲಿ ಭೇಟಿಯಾಗಿ ದಿನೇ ದಿನೇ ಹದಗೆಡುತ್ತಿರುವ ರಾಜಕೀಯ ಪರಿಸ್ಥಿತಿಯ ಬಗ್ಗೆ ಚರ್ಚಿಸಿ ದರು. ಜನತಾ ಆಡಳಿತದ ಬಗೆಗಿನ ನಕಾರಾತ್ಮಕ ಅಂಶಗಳ ಬಗ್ಗೆ ಜೆಪಿ ನಿಜಲಿಂಗಪ್ಪನವ ರೊಡನೆ ಸಹಮತ ವ್ಯಕ್ತಪಡಿಸಿದರು, ಆದರೆ ಆ ಬಗ್ಗೆ ತಾವು ಏನೂ ಮಾಡಲಾರದ ಅಸಹಾಯಕ ಸ್ಥಿತಿಯಲ್ಲಿರುವುದಾಗಿ ಹೇಳಿಕೊಂಡರು. ಪಕ್ಷದ ಆಂತರಿಕ ಗುದ್ದಾಟಗಳು ಶಿಖರಸ್ಥಿತಿಯನ್ನು ತಲುಪಿದ್ದು ಚರಣ ಸಿಂಗ್ ಅವರು ಪ್ರಧಾನ ಮಂತ್ರಿಗಳ ಮಗ ಕಾಂತಿ ದೇಸಾಯಿ ಅವರ ಬಗ್ಗೆ ಬಹಿರಂಗವಾಗಿ ಆರೋಪಗಳನ್ನು ಮಾಡಿದಾಗ. ಪ್ರಧಾನ ಮಂತ್ರಿಗಳ ಮಗನೆಂಬ ಹೆಸರು ಹೇಳಿಕೊಂಡು ಕಾಂತಿ ದೇಸಾಯಿ ಅವರು ನಡೆದುಕೊಳ್ಳುತ್ತಿದ್ದ ಪರಿಯನ್ನು ನಿಜಲಿಂಗಪ್ಪ ಟೀಕಿಸಿದರು. ಚರಣ ಸಿಂಗ್ ಮತ್ತು ರಾಜನಾರಾಯಣ್‌ರು ೧೯೭೮ನೇ ಜೂನ್ ೩೯ ರಂದು ತಮ್ಮ ರಾಜೀನಾಮೆಗಳನ್ನು ಸಲ್ಲಿಸಿದಾಗ ಪಕ್ಷದಲ್ಲಿ ಬಿಕ್ಕಟ್ಟು ತಲೆದೋರಿತು. ಎಸ್.ಕೆ. ಪಾಟೀಲ್ ಮತ್ತೆ ನಿಜಲಿಂಗಪ್ಪ ನವರಿಗೆ ಪತ್ರವನ್ನು ಬರೆದು, ಎರಡೂ ಕಾಂಗ್ರೆಸ್‌ಗಳು ಒಂದಾಗಬೇಕೆಂದೂ, ಕಾಂಗ್ರೆಸ್ (ಒ) ಜನತಾ ಪರಿವಾರದಿಂದ ಹೊರಬರಬೇಕೆಂದೂ ಅಭಿಪ್ರಾಯಪಟ್ಟರು. ಎಂದಿನಂತೆ ನಿಜಲಿಂಗಪ್ಪನವರು ಇದಕ್ಕೆ ಒಪ್ಪದಿದ್ದರೂ ಅವರಿಬ್ಬರ ನಡುವಣ ಸ್ನೇಹಕ್ಕೆ ಕುಂದುಂಟಾಗ ಲಿಲ್ಲ. ನಿಜಲಿಂಗಪ್ಪನವರ ಗಮನ ಸೆಳೆದ ಮತ್ತೊಂದು ವಿಷಯವೆಂದರೆ, ರಾಷ್ಟ್ರ ರಾಜಕಾರಣದಲ್ಲಿ ದಕ್ಷಿಣವನ್ನು ಕಡೆಗಣಿಸುತ್ತಿದ್ದ ರೀತಿ. ವಾಸ್ತವವಾಗಿ ಅವರು ಮೊರಾರ್ಜಿ ಯವರಿಗೆ ಪತ್ರವೊಂದನ್ನು ಬರೆದು, ಸಿ.ಎಂ. ಪೂಣಚ್ಚ, ಮತ್ತು ಕೆ.ಸಿ. ಅಬ್ರಹಾಂ

ಅಂತಹ ದಕ್ಷಿಣದ ನಾಯಕರನ್ನು ಸಂಪುಟಕ್ಕೆ ಸೇರಿಸಿಕೊಂಡು ದಕ್ಷಿಣಕ್ಕೆ ನ್ಯಾಯಬದ್ಧವಾದ ಪ್ರಾತಿನಿಧ್ಯವನ್ನು ಕೊಡುವ ಮೂಲಕ ಸಮತೋಲನವನ್ನು ಕಾಯ್ದುಕೊಳ್ಳಬೇಕೆಂದು ಸಲಹೆ ಮಾಡಿದರು. ರಾಜಕೀಯ ಭ್ರಷ್ಟಾಚಾರ ಮತ್ತು ಅವಕಾಶವಾದಿತನದ ಬಗ್ಗೆ ನಿಜಲಿಂಗಪ್ಪನವರು ಏಕವ್ಯಕ್ತಿ ಸೈನ್ಯದಂತಾದರು. ವಾಸ್ತವವಾಗಿ, ೧೯೭೮ರ ಜುಲೈನಲ್ಲಿ, ಮಹಾರಾಷ್ಟ್ರದಲ್ಲಿ ಶರದ್ ಪವಾರ್ ಅವರ ಅಸ್ಥಿರ ಕಾಂಗ್ರೆ ಸರ್ಕಾರಕ್ಕೆ ಜನತಾ ಪಕ್ಷವು ಬೆಂಬಲ ನೀಡಿತು. ಈ ರಾಜಕೀಯ ಅವಕಾಶವಾದಿತನವನ್ನು ನಿಜಲಿಂಗಪ್ಪನವರು ಬಹಿರಂಗವಾಗಿ ಖಂಡಿಸಿದರು. ಎಸ್.ಕೆ. ಪಾಟೀಲರು ಜನತಾ ಪಕ್ಷಕ್ಕೆ ರಾಜೀನಾಮೆಯಿತ್ತರು; ೧೯೭೮ರ ಜುಲೈ ೨೧ರ ತಮ್ಮ ಪತ್ರದಲ್ಲಿ ಇದಕ್ಕೆ ಕಾರಣ ಮೊರಾರ್ಜಿಯವರ ವೈಯಕ್ತಿಕ ಮತ್ಸರ ಮತ್ತು ಚಂದ್ರಶೇಖರ್ ಅವರ ಕುತಂತ್ರಗಳು ಎಂದು ನಿಜಲಿಂಗಪ್ಪನವರಿಗೆ ತಿಳಿಸಿದರು. ಹಳೆಯ ಕಾಂಗ್ರೆಸ್ ಅನ್ನು ಪುನರುಜ್ಜೀವನಗೊಳಿಸುವಂತೆ ಸೂಚಿಸಿ ತಾವು ಇಂದಿರಾ ಗಾಂಧಿಯವರಿಗೆ ಪತ್ರ ಬರೆದಿರುವ ವಿಷಯವನ್ನೂ, ಆದರೆ ತಮ್ಮ ಮಗ ಸಂಜಯ್ ಅವರ ದುಷ್ಪ್ರಭಾವದಲ್ಲಿರುವ ಅವರಿಂದ ಇದನ್ನು ನಿರೀಕ್ಷಿಸಲಾಗುವುದಿಲ್ಲವೆಂದೂ ಅದರಲ್ಲಿ ತಿಳಿಸಿದ್ದರು. ರಾಜಕೀಯ ನಿರ್ಧಾರಗಳ ವಿಷಯದಲ್ಲಿ ನಿಜಲಿಂಗಪ್ಪನವರು ತಮ್ಮ ಸ್ನೇಹಿತರ ಅಭಿಪ್ರಾಯವನ್ನು ಒಪ್ಪುತ್ತಿರಲಿಲ್ಲ. ಜನತಾ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಚಂದ್ರಶೇಖರ್ ರಾಜೀನಾಮೆ ಸಲ್ಲಿಸುವ ವದಂತಿಯು ೧೯೭೭ರ ಆಗಸ್ಟ್‌ನಲ್ಲಿ ಹಬ್ಬಿದಾಗ, ಸಿ.ಆರ್. ಬಸಪ್ಪನವರಂತಹ ಸ್ನೇಹಿತರು ಪತ್ರ ಬರೆದು, ಈಚಿನ ತಿಂಗಳುಗಳಲ್ಲಿ ದಟ್ಟವಾಗಿರುವ ರಾಜಕೀಯ ಹೊಲಸಿನಿಂದ ಪಕ್ಷವನ್ನು ಮುಕ್ತಗೊಳಿಸುವ ಉದ್ದೇಶದಿಂದ ಅಧ್ಯಕ್ಷ ಸ್ಥಾನವನ್ನು ಒಪ್ಪಿಕೊಳ್ಳುವಂತೆ ಮನವಿ ಮಾಡಿಕೊಂಡಿದ್ದರು. ಪ್ರಾಯಶಃ ಅವರು ನಿರೀಕ್ಷಿಸಿದ್ದಂತೆಯೇ ನಿಜಲಿಂಗಪ್ಪನವರು ಖಚಿತವಾಗಿ "ಉಹ್ಞೂ" ಎಂದರು. ಇಂದಿರಾ ಗಾಂಧಿಯವರ ನಿರಂಕುಶಾಧಿಕಾರದ ವಿರೋಧ ಮತ್ತು ದೇಶದ ಒಳಿತಿನ ಸಾಧನೆಯ ಉದ್ದೇಶದಿಂದ ರೂಪಿತವಾಗಿದ್ದ ಪಕ್ಷವು ಕ್ರಮೇಣ ಬಿರುಕುಬಿಡುತ್ತಿರುವುದನ್ನು ಕಂಡ ಈ ಹಿರಿಯ ನಾಯಕರು ಅಸಹಾಯಕರಾಗಿ ನಿರೀಕ್ಷಿಸುತ್ತಿದ್ದುದು ನೋವಿನ ವಿಷಯವಾಗಿತ್ತು. ವಿವಿಧ ಜನತಾ ನಾಯಕರನ್ನು ಭೇಟಿಯಾಗಿ ಅವರ ನಡುವೆ ಸಾಮರಸ್ಯ ತರುವ ಪ್ರಯತ್ನದಲ್ಲಿ ೧೯೭೮ರ ಇಡೀ ಆಗಸ್ಟ್ ತಿಂಗಳನ್ನು ದೆಹಲಿಯಲ್ಲಿ ಕಳೆದರು. ದೇಶದಲ್ಲಿ ಏನೇ ಆದರೂ ನೇರವಾಗಿ ಭಾಗಿಗಳಾಗಿದ್ದ ನಾಯಕರಾರೂ ತೋರದಿದ್ದ ಎಚ್ಚರದಿಂದ ಪ್ರತಿಯೊಂದಕ್ಕೂ ನಿಜಲಿಂಗಪ್ಪನವರು ತಕ್ಷಣವೇ ಸ್ಪಂದಿಸುತ್ತಿದ್ದರು. ಪತ್ರಿಕಾ ಹೇಳಿಕೆಗಳ ಮೂಲಕ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದರಲ್ಲಿ ಅವರೆಂದೂ ಹಿಂದೆ ಬಿದ್ದವರಲ್ಲ. ನಿದರ್ಶನಕ್ಕೆ, ೧೯೭೮ರ ಜೂನ್‌ನಲ್ಲಿ ಬಿಹಾರಿನ ಪಂಚಾಯತ್ ಚುನಾವಣೆಗಳ ಕಾಲದಲ್ಲಿ ನಡೆದ ಕೊಲೆಗಳು. ಆ ಕುರಿತು ತಮಗನ್ನಿಸಿದ್ದನ್ನು ನಿಜಲಿಂಗಪ್ಪ

ನವರು ಪತ್ರಿಕೆಗಳಿಗೆ ಬರೆದದ್ದಲ್ಲದೆ, ಪ್ರಧಾನ ಮಂತ್ರಿಗಳಿಗೂ ಪತ್ರ ಬರೆದರು. ಬಿಹಾರದ ಆಗಿನ ಮುಖ್ಯಮಂತ್ರಿ ಕರ್ಪೂರಿ ಠಾಕೂರ್ ಅವರು ಹೇಳಿಕೆ ನೀಡಿ ಮೃತರಾದವರ ಸಂಖ್ಯೆಯು ನಿಜಲಿಂಗಪ್ಪನವರು ಹೇಳಿದಷ್ಟು ದೊಡ್ಡದಲ್ಲ, ಅದು ಕೇವಲ ಶಿಲ ಎಂದು ನುಡಿದರು. ಅಲ್ಲದೆ, ಮುಂದುವರೆದು ನಿಜಲಿಂಗಪ್ಪನವರಂತಹ ಹಿರಿಯ ಮತ್ತು ಹೊಣೆಗಾರ ನಾಯಕರು ವಾಸ್ತವಾಂಶವನ್ನು ಪರಿಶೀಲಿಸಿ ಹೇಳಿಕೆಯನ್ನು ನೀಡಬೇಕಾಗಿತ್ತು ಎಂದು ವಿಷಾದಿಸಿದರು. ೧೯೭೮ನೇ ಆಗಸ್ಟ್ ೧೫ ರಂದು ಠಾಕೂರ್ ಅವರಿಗೆ ಬರೆದ ಪತ್ರವೊಂದರಲ್ಲಿ ಈ ಹೇಳಿಕೆಗೆ ನಿಜಲಿಂಗಪ್ಪನವರು ಪ್ರತಿಕ್ರಿಯಿಸಿದರು. ಮೊದಲನೆಯದಾಗಿ, ಈ ರಾಜಕೀಯ ನಾಯಕರಿಗೆ 'ಬೇಜವಾಬ್ದಾರಿ' ಎಂಬ ಪದವನ್ನು ಎಲ್ಲಿ ಹೇಗೆ ಬಳಸಬೇಕೆಂಬುದೇ ತಿಳಿಯದು ಎಂದರು. ತಮಗೆ ಸಂಖ್ಯೆಯ ಬಗ್ಗೆ ತಿಳಿದದ್ದು ದಾರಿಹೋಕರ ಮಾತಿನಿಂದಲ್ಲ, ಜೆಪಿಯವರನ್ನು ಕಾಣಲು ಪಟ್ನಾಕ್ಕೆ ಹೋಗಿದ್ದಾಗ ಬಿಹಾರ ಜನತಾ ಪಕ್ಷದ ಕಾರ್ಯದರ್ಶಿಯವರೇ ಮತ್ತು ಇನ್ನೂ ಅನೇಕ ಮಂತ್ರಿಗಳೇ ಈ ವಿಚಾರವನ್ನು ತಮಗೆ ತಿಳಿಸಿದರು. ಅಂಥವರನ್ನು ಬೇಜಬ್ದಾರಿ ಎಂದು ಕರೆಯಬಹುದೇ! ಠಾಕೂರ್ ಅವರು ಇದಕ್ಕೆ ಪ್ರತಿಕ್ರಿಯಿಸಿ ಪತ್ರ ಬರೆದು, ಸಾವಿರಾರು ಮಂದಿ ಹತರಾದ ಬಗ್ಗೆ ಆಧಾರವಿಲ್ಲವೆಂದೂ, ಹಿಂದುಳಿದ ವರ್ಗಗಳವರು ಮತ ನೀಡಲು ಬಂದಾಗ ಅವರನ್ನು ಬಲವಂತವಾಗಿ ತಡೆದದ್ದರಿಂದ ಪೊಲೀಸರು ಗುಂಡು ಹಾರಿಸಿ ಅವರಿಗೆ ಮತ ನೀಡುವ ಅವಕಾಶ ಮಾಡಿಕೊಡಬೇಕಾಯಿತು ಎಂದರು. ಯಾವುದೇ ತನಿಖಾ ಆಯೋಗವನ್ನು ಎದುರಿಸಲೂ ತಾವು ಸಿದ್ಧವೆಂದು ಅವರು ನುಡಿದರು. ಪ್ರಧಾನ ಮಂತ್ರಿಗಳ ಮಗ ಕಾಂತಿ ದೇಸಾಯಿಯವರ ಕಾರಣದಿಂದ ಜನತಾ ಪಕ್ಷವು ದೊಡ್ಡ ವಿವಾದದ ಸುಳಿಯಲ್ಲಿ ಸಿಲುಕಿತ್ತು. ಈ ಆರೋಪಗಳಲ್ಲಿ ಸತ್ಯಾಂಶವಿದೆ ಎಂಬುದು ನಿಜಲಿಂಗಪ್ಪನವರಿಗೆ ತಿಳಿದಿತ್ತು, ಆದರೆ ವಿಷಯ ತೀರ ಹದಗೆಟ್ಟಿದ್ದರಿಂದಾಗಿ ಮಧ್ಯ ಪ್ರವೇಶಿಸಲು ಅವರು ನಿರಾಕರಿಸಿದರು. ಪಕ್ಷದ ಪ್ರತಿಯೊಬ್ಬರೂ ತಾನೇ ಕಾನೂನಿನಂತಾಗಿದ್ದ; ಬ್ರಾಹ್ಮಣಪರವಾಗಿದ್ದ ಜನಸಂಘವು ಇಡೀ ಪಕ್ಷದ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸುತ್ತಿತ್ತು. ಜನತಾ ಪಕ್ಷದ ಬೆನ್ನೆಲುಬಾಗಿದ್ದ ಕಾಂಗ್ರೆಸ್ (ಓ) ಅನ್ನು ದಿನೇ ದಿನೇ ಪಕ್ಕಕ್ಕೆ ಸರಿಸಲಾಗುತ್ತಿತ್ತು.

ಇಂದಿರಾ ಗಾಂಧಿಯವರು ಮರಳಿ ರಾಜಕೀಯಕ್ಕೆ ದುಮುಕಲು ಹೊಂಚು ಹಾಕುತ್ತಿದ್ದು. ಲೋಕಸಭೆಯನ್ನು ಪ್ರವೇಶಿಸಲು ಪ್ರಯತ್ನಿಸುತ್ತಿದ್ದರು. ಕರ್ನಾಟಕದಲ್ಲಿನ ಅರಸು ನೇತೃತ್ವದ ಕಾಂಗ್ರೆ ಸರ್ಕಾರವು, ಚಿಕ್ಕಮಗಳೂರು ಲೋಕಸಭಾ ಸ್ಥಾನದಲ್ಲಿ ಗೆದ್ದಿದ್ದ ಡಿ.ಬಿ. ಚಂದ್ರೇಗೌಡರ ಸ್ಥಾನವನ್ನು ತೆರವುಗೊಳಿಸಿ ಇಂದಿರಾ ಗಾಂಧಿಯವರಿಗೆ ಉಪಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಮಾಡಿಕೊಡಲು ಮುಂದಾಯಿತು.

ಮುಖ್ಯಮಂತ್ರಿ ಶ್ರೀ ಎಸ್.ಆರ್. ಬೊಮ್ಮಾಯಿ ಜೊತೆಯಲ್ಲಿ ಎಸ್ಸೆನ್

ಇಂದಿರಾ ಗಾಂಧಿಯವರ ವಿರುದ್ಧ ಪಾಟೀಲರು ಸ್ಪರ್ಧಿಸಬೇಕೆಂಬುದು ವೀರೇಂದ್ರ ಪಾಟೀಲರ ಗುಂಪಿನ ಅಪೇಕ್ಷೆಯಾಗಿತ್ತು. ಈ ಗುಂಪಿನಲ್ಲಿದ್ದ ಬೊಮ್ಮಾಯಿ ಮತ್ತಿತರರು ನಿಜಲಿಂಗಪ್ಪಪನವರನ್ನು ಭೇಟಿಯಾಗಿ ಅವರ ಅನುಮತಿ ಪಡೆಯಲು ಚಿತ್ರದುರ್ಗಕ್ಕೆ ಹೊರಟರು. ಕರ್ನಾಟಕದ ರಾಜಕೀಯದಲ್ಲಿ ನಿಜಲಿಂಗಪ್ಪನವರನ್ನು ಶೂನ್ಯ ಎಂದು ಮೆಹ್ತಾ ಅವರ ಮುಂದೆ ಬಣ್ಣಿಸಿದ್ದ ಬೊಮ್ಮಾಯಿ ಅವರೇ ಅವರನ್ನೀಗ ಅನುಮತಿ ಪಡೆಯುವಷ್ಟು ದೊಡ್ಡವರು ಎಂದು ಭಾವಿಸುವಂತಾದುದು ದೊಡ್ಡ ವ್ಯಂಗ್ಯವೇ ಸರಿ! ತಮ್ಮ ವೈಯಕ್ತಿಕ ಅನಿಸಿಕೆಗಳನ್ನು ಬದಿಗಿಟ್ಟು ನಿಜಲಿಂಗಪ್ಪನವರು ಪಾಟೀಲರ ಪರವಾಗಿ ಉಪಚುನಾವಣೆಯಲ್ಲಿ ಪ್ರಚಾರ ಮಾಡಿದರು. ಆದರೆ ಇಡೀ ಕಾಂಗ್ರೆ ಸರ್ಕಾರದ ಸಂಪನ್ಮೂಲಗಳು ಇಂದಿರಾ ಗಾಂಧಿಯವರ ಗೆಲವಿಗಾಗಿ ಉಪಚುನಾವಣೆಯಲ್ಲಿ ಬಳಕೆಗೊಂಡವು. ಇಂದಿರಾ ಅವರು ಗೆದ್ದು ಲೋಕಸಭೆಯಲ್ಲಿ ಪುನಃಪ್ರವೇಶ ಪಡೆದರು. ಉಪಚುನಾವಣೆಯಲ್ಲಿನ ಸೋಲಿನ ಬಗ್ಗೆ ವಿವರಿಸುತ್ತ ನಿಜಲಿಂಗಪ್ಪನವರು, ಅದಕ್ಕೆ ಕಾರಣ ಜನತಾ ಸರ್ಕಾರದ ಕಾರ್ಯವೈಫಲ್ಯ ಮತ್ತು ಚುನಾವಣೆಗಳ ಕಾಲದಲ್ಲಿ ಮತದಾರ ರಿಗೆ ನೀಡಿದ್ದ ಭರವಸೆಗಳನ್ನು ಪೂರೈಸದೆ ಹೋದುದು ಎಂದು ಮೊರಾರ್ಜಿಯವರಿಗೆ ತಿಳಿಸಿದರು. ಪಕ್ಷವನ್ನು ಉಳಿಸುವ ಒಂದೇ ವಿಧಾನವೆಂದರೆ, ಮೊರಾರ್ಜಿಯವರಂತಹ ಹಳೆಯ ಹುಲಿಗಳ ಬದಲು ಕಿರಿಯರನ್ನು ಪಕ್ಷದ ನಾಯಕತ್ವದಲ್ಲಿ ಸ್ಥಾಪಿಸುವುದು ಎಂದು ಅಭಿಪ್ರಾಯಪಟ್ಟರು. ಆದರೆ ಇದು ನಡೆಯುವುದರ ಬಗ್ಗೆ ಅವರಿಗೆ ಭರವಸೆ ಯೇನೂ ಇರಲಿಲ್ಲ. ಆದರೆ ಇಂದಿರಾ ಗಾಂಧಿಯವರ ಗೆಲವಿನ ಸಂತೋಷ ಹೆಚ್ಚು ದಿನ ಉಳಿಯಲಿಲ್ಲ, ಯಾಕಂದರೆ ಅವರು ಲೋಕಸಭಾ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದ ಸ್ವಲ್ಪವೇ ದಿನಗಳಲ್ಲಿ ಅವರನ್ನು ಸದಸ್ಯತ್ವದಿಂದ ಕಾನೂನುಬದ್ಧವಾಗಿ ಅನರ್ಹಗೊಳಿಸಲಾಯಿತು. ಈ ಬೆಳವಣಿಗೆಯು ನಿಜಲಿಂಗಪ್ಪನವರಿಗೆ ಹರ್ಷ ತಂದಿತಾ ದರೂ, ಅವರಲ್ಲಿ ಅಸಂತೋಷ ಉಂಟುಮಾಡಲು ಜನತಾ ಪಕ್ಷದ ಪತನಕ್ಕೆ ಕಾರಣವಾಗು ವಂತೆ ನಡೆದ ಘಟನೆಗಳು. ಇವುಗಳಲ್ಲಿ ಅತ್ಯಂತ ಮಹತ್ವದ್ದೆಂದರೆ, ಮೊರಾರ್ಜಿಯವರನ್ನು ಹದ್ದುಬಸ್ತಿನಲ್ಲಿಡಲು ಚರಣ ಸಿಂಗ್‌ರು ಪ್ರದರ್ಶಿಸಿದ ಕುಲಕ್ ಸಾಮರ್ಥ್ಯ. ಈ ಪ್ರದರ್ಶನ ವನ್ನು ನಡೆಸಿದ್ದು ಚರಣ ಸಿಂಗ್ ಅವರಿಗೆ ೭೭ ಲಕ್ಷ ರೂಪಾಯಿಗಳ ನಿಧಿ ಅರ್ಪಿಸಿದ ಶ್ರೀಮಂತ ರೈತರು ಎಂಬುದು ನಿಜಲಿಂಗಪ್ಪನವರ ಅಸಂತುಷ್ಟಿಗೆ ಕಾರಣವಾಯಿತು. ಪ್ರದರ್ಶನವು ನಡೆದದ್ದು ೧೯೭೮ನೇ ಡಿಸೆಂಬರ್ ೨೩ ರಂದು, ದೆಹಲಿಯಲ್ಲಿ. ಅದರಲ್ಲಿ ಐದು ಲಕ್ಷ ಮಂದಿ ಜಮಾಯಿಸಿದ್ದು ಚರಣ ಸಿಂಗ್ ಅವರ ಹುಟ್ಟುಹಬ್ಬದ ಆಚರಣೆಗಾಗಿ. ಈ ಜನಸಂದಣಿಯ ಅನಾಗರಿಕ ಪ್ರದರ್ಶನವು ಇಂದಿರಾ ಗಾಂಧಿಯವರ ಸಂದಣಿ ರಾಜಕೀಯದ ತದ್ರೂಪ ಎಂದು ನಿಜಲಿಂಗಪ್ಪನವರಿಗೆ ಅನ್ನಿಸಿತು. ಇಂದಿರಾ ಗಾಂಧಿ

ಯವರನ್ನು ಸಂಸತ್ತಿನಿಂದ ಹೊರಹಾಕಿದುದು ಅವರ ಬೆಂಬಲಿಗರಲ್ಲಿ ದೇಶಾದ್ಯಂತ ಸರ್ಕಾರದ ವಿರುದ್ಧ ಪ್ರದರ್ಶನಗಳನ್ನೇರ್ಪಡಿಸುವಂತೆ ಪ್ರಚೋದಿಸಿತು, ಕೆಲವು ವೇಳೆ ಅವು ಹಿಂಸಾತ್ಮಕವೂ ಆದವು. ನಿಜಲಿಂಗಪ್ಪನವರ ಸ್ವಂತ ಜಿಲ್ಲೆಯಾದ ಚಿತ್ರದುರ್ಗದಲ್ಲಿ ಇಂದಿರಾ ಗಾಂಧಿಯವರ ಬೆಂಬಲಿಗರು ಹಳ್ಳಿಗಳಲ್ಲಿನ ಬೆಳೆಯನ್ನೆಲ್ಲ ನಾಶಮಾಡಿದರು, ಬಡವರ ಗುಡಿಸಲುಗಳಿಗೆ ಬೆಂಕಿ ಹಚ್ಚಿದರು, ಮನೆಗಳ ಮೇಲೆ ಕಲ್ಲುಗಳನ್ನೆಸೆದರು. ಈ ಬಗೆಯ ಹಿಂಸಾಕೃತ್ಯಗಳು ದೇಶಾದ್ಯಂತ ನಡೆದುವು, ಪಾರ್ಲಿಮೆಂಟ್ ಕೂಡ ಇದಕ್ಕೆ ಹೊರತಾಗಲಿಲ್ಲ. ದಿವಾಕರ್ ಮತ್ತು ನ್ಯಾಯಮೂರ್ತಿ ತಾರ್ಕುಂಡೆ ಅವರಂತಹ ನಾಯಕರು ರಾಜಕಾರಣ ಮತ್ತು ಸಾರ್ವಜನಿಕ ಜೀವನಗಳಲ್ಲಿನ ಈ ಹಿಂಸಾಕೃತ್ಯಗಳ ವಿರುದ್ಧ ಸಂಘಟನೆ ನಡೆಸಲು ತೀರ್ಮಾನಿಸಿದರು. ಆ ಕಾರಣಕ್ಕಾಗಿ ವೇದಿಕೆಯೊಂದನ್ನು ನಿರ್ಮಿಸಿದರು. ೧೯೭೯ನೇ ಜನವರಿ ೨೧ ಮತ್ತು ೨೨ ರಂದು ದೆಹಲಿಯಲ್ಲಿ ನಡೆದ ಸಿದ್ಧತಾ ಸಭೆಗಳಿಗೆ ಅವರು ನಿಜಲಿಂಗಪ್ಪನವರನ್ನು ಆಹ್ವಾನಿಸಿದರು. ಔಪಚಾರಿಕ ಅಧಿಕಾರ ಮತ್ತು ಸ್ಥಾನಗಳಲ್ಲಿರುವುದಕ್ಕೆ ತಮ್ಮ ಎಂದಿನ ವಿರೋಧ ಮನೋಭಾವದಿಂದ ನಿಜಲಿಂಗಪ್ಪನವರು ಸಂಸ್ಥೆಗಳ ಮುಖಂಡರಾಗಬೇಕೆಂದು ಬಂದ ಆಹ್ವಾನಗಳನ್ನು ತಿರಸ್ಕರಿಸಿದರು. ಅಂತಹ ಒಂದು ಆಹ್ವಾನವೆಂದರೆ, ಜೋಧಪುರದಲ್ಲಿನ ಒಂದು ರೈತ ಪ್ರತಿಷ್ಠಾನದ್ದು. ಅದನ್ನೂ ನಿಜಲಿಂಗಪ್ಪನವರು ವಿನಯದಿಂದ ತಿರಸ್ಕರಿಸಿದರು.

ಜನತಾ ಪಕ್ಷ ಹಾಗೂ ಸರ್ಕಾರಗಳ ಕುಗ್ಗುತ್ತಿದ್ದ ವಿಶ್ವಾಸಾರ್ಹತೆಯ ಹಿನ್ನೆಲೆಯಲ್ಲಿ, ದೇಶದ ಹಿತದೃಷ್ಟಿಯಿಂದ ಎರಡೂ ಕಾಂಗ್ರೆಸ್‌ಗಳನ್ನು ಇಂದಿರಾ ಗಾಂಧಿಯವರ ನೇತೃತ್ವ ದಲ್ಲಿ ಒಗ್ಗೂಡಿಸುವ ಸಲಹೆಯನ್ನು ಮತ್ತೆ ಎಸ್.ಕೆ. ಪಾಟೀಲರು ನಿಜಲಿಂಗಪ್ಪನವರ ಮುಂದಿಟ್ಟರು. ೧೯೭೯ನೇ ಜನವರಿ ೧ ರಂದು ಬರೆದ ಪತ್ರದಲ್ಲಿ ನಿಜಲಿಂಗಪ್ಪನವರು ತಾಳ್ಮೆಯಿಂದಿರುವಂತೆ ತಮ್ಮ ಮಿತ್ರರನ್ನು ಕೇಳಿಕೊಂಡರು. ಯಾವುದೇ ಕಾರ್ಯಯೋಜನೆ ಗಳನ್ನು ಕಾರ್ಯಗತಗೊಳಿಸುವ ಮುಂಚೆ ತಾವು ಇನ್ನಷ್ಟು ದಿನ ಕಾಯಬೇಕೆಂದು ಸಲಹೆಯಿತ್ತರು. ಆದರೆ ಪಾಟೀಲರು ಕಾಂಗ್ರೆಸ್‌ಗಳ ಸೇರ್ಪಡೆಯನ್ನು ಮತ್ತೆ ಮತ್ತೆ ಪ್ರಸ್ತಾಪಿಸಿದರು; ೧೯೭೯ನೇ ಜನವರಿ ೫ ರಂದು ಒಂದು ಪತ್ರಿಕಾ ಹೇಳಿಕೆಯನ್ನಿತ್ತು ಅಂಥ ಸೇರ್ಪಡೆಯ ಅಗತ್ಯ ಮತ್ತು ಮಾರ್ಗೋಪಾಯವನ್ನು ಕುರಿತು ವಿವರಿಸಿದರು. ನಿಜಲಿಂಗಪ್ಪನವರು ಇದಕ್ಕೆ ಹೇಗೂ ಪ್ರತಿಕ್ರಿಯಿಸಲಿಲ್ಲ. ಇಂದಿರಾ ಗಾಂಧಿಯವರ ಬಗ್ಗೆ ತಮಗೆ ವೈಯಕ್ತಿಕ ಗೌರವವಿಲ್ಲವೆಂದೂ, ಆದರೆ ಅವರಿಗೆ ಜನಬೆಂಬಲ ಮತ್ತು ಜನಾಕರ್ಷಣೆಗಳಿವೆಯೆಂದೂ ಕಾರಣ ನೀಡಿ ಅವರು ನಿಜಲಿಂಗಪ್ಪನವರಿಗೆ ಕಾಗದ ಬರೆದರು. ಕುಸಿಯುತ್ತಿರುವ ಜನತಾ ಪಕ್ಷಕ್ಕಿಂತ ಅದು ಒಳ್ಳೆಯ ಆಯ್ಕೆ ಎಂದು ವಾದಿಸಿ ದರು. ಜನತಾ ಪಕ್ಷದಲ್ಲಿ ಆಂತರಿಕ ಗುದ್ದಾಟಗಳು ದಿನೇ ದಿನೇ ತೀವ್ರಗೊಂಡವು.

ಮೊರಾರ್ಜಿ ಮತ್ತು ಚರಣ ಸಿಂಗ್‌ರ ನಡುವಣ ಪೈಪೋಟಿಯು ಎರಡು ಉಪಪ್ರಧಾನಿಗಳ ಹುದ್ದೆಯನ್ನು ಸೃಷ್ಟಿಸಿ ಚರಣ ಸಿಂಗ್ ಮತ್ತು ಜಗಜೀವನ ರಾಂ ಇಬ್ಬರನ್ನೂ ಆ ಹುದ್ದೆಯಲ್ಲಿರಿಸಬೇಕೆಂಬ ನಿರ್ಧಾರದಿಂದಾಗಿ ತಾತ್ಕಾಲಿಕವಾಗಿ ಸ್ಥಗಿತಗೊಂಡಿತ್ತು. ಈ ನಿರ್ಧಾರಕ್ಕೆ ಬಂದದ್ದು ೧೯೭೯ನೇ ಜನವರಿ ೩ ರಂದು. ಆದರೆ ಸಮಸ್ಯೆಯನ್ನು ಈ ವ್ಯವಸ್ಥೆಯೇನೂ ಪೂರ್ತಿ ಶಮನಗೊಳಿಸಲಿಲ್ಲ. ತಾವು ಸರ್ಕಾರದ ಒಳಗಿನಿಂದಲೇ ಅದರ ವಿರುದ್ಧ ಹೋರಾಡುವುದಾಗಿ ಚರಣ ಸಿಂಗ್ ಹೇಳಿಕೆ ನೀಡಿದರೆ, ತಾವು ಹೊರಗಿನಿಂದ ಹೋರಾಡುವುದಾಗಿ ರಾಜ್‌ನಾರಾಯಣ್ ಹೇಳಿಕೆಯಿತ್ತರು. ಇದರಿಂದ ನಿಜಲಿಂಗಪ್ಪ ಖಿನ್ನರಾದರು. ಕರ್ನಾಟಕ ಜನತಾ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಮಾರ್ಚಿ ೧೯೭೯ರಲ್ಲಿ ಚುನಾವಣೆ ನಡೆಯಬೇಕಾಗಿತ್ತು. ಅಧ್ಯಕ್ಷಸ್ಥಾನದ ಅಪೇಕ್ಷಿಗಳೆಲ್ಲ ನಿಜಲಿಂಗಪ್ಪನವರ ಬೆಂಬಲ ಬಯಸಿದರು ಎಂಬುದು, ಯಾವುದೇ ಹುದ್ದೆ ಅಧಿಕಾರಗಳಿಲ್ಲದಿದ್ದರೂ ಅವರದು ಎಂತಹ ವ್ಯಕ್ತಿತ್ವ ಎಂಬುದರ ಸಂಕೇತವಾಗಿತ್ತು. ಆದರೆ ಹಿಂದುಳಿದ ವರ್ಗದ ವ್ಯಕ್ತಿಯೊಬ್ಬರನ್ನು ಅಧ್ಯಕ್ಷರಾಗಿ ಮಾಡಿರೆಂಬ ಅವರ ಸಲಹೆ ವ್ಯರ್ಥವಾಯಿತು. ಪಕ್ಷದ ರಾಷ್ಟ್ರೀಯ ಸಮಿತಿಗೆ ಆಯ್ಕೆಯಾದ ೨೮ ಮಂದಿಯಲ್ಲಿ, ಅವರಿಗೇ ಗೊತ್ತಿಲ್ಲದಂತೆ, ನಿಜಲಿಂಗಪ್ಪನವರೂ ಒಬ್ಬರಾಗಿದ್ದರು. ಆದರೆ ಆ ಪಟ್ಟಿಯಲ್ಲಿ ಒಬ್ಬರಾದರೂ ಎಸ್‌ಸಿ ಅಥವಾ ಎಸ್‌ಟಿ ಇಲ್ಲದ್ದನ್ನು ಗಮನಿಸಿದ ಅವರು ಸಮಿತಿಯ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು. ತಮ್ಮ ರಾಜೀನಾಮೆಯನ್ನು ಹಿಂಪಡೆಯಲು ಅವರು ಒಪ್ಪಲಿಲ್ಲ. ದೇಶವನ್ನೆಲ್ಲ ಹರಡುತ್ತಿದ್ದ ರಾಜಕೀಯ ಕಗ್ಗತ್ತಲೆಯಲ್ಲಿ ನಿಜಲಿಂಗಪ್ಪನವರಿಗೆ ಕಂಡದ್ದು ಒಂದೇ ಬೆಳಕಿನ ಕುಡಿ, ಅದೆಂದರೆ ಜಯಪ್ರಕಾಶ ನಾರಾಯಣ್. ನೈತಿಕ ನಿಲವಿನಲ್ಲಿ ಜೆಪಿ ಗಾಂಧಿಯವರಿಗೆ ಮಾತ್ರ ಎರಡನೆಯವರು ಎಂಬುದು ನಿಜಲಿಂಗಪ್ಪನವರ ಅನ್ನಿಸಿಕೆ. ಜೆಪಿಯವರ ಹದಗೆಡುತ್ತಿದ್ದ ಆರೋಗ್ಯ ನಿಜಲಿಂಗಪ್ಪನವರನ್ನು ಚಿಂತೆಗೀಡು ಮಾಡಿತ್ತು, ಆದರೂ ಅವರು ದೀರ್ಘಕಾಲ ಬಾಳಲಿ ಎಂದು ಹಾರೈಸುತ್ತಿದ್ದರು. ೧೯೭೯ರ ಮಾರ್ಚಿ ೨೨ ರಂದು ಇನ್ನೇನು ಮಧ್ಯಾಹ್ನ ಊಟ ಶುರುಮಾಡಬೇಕು, ಜೆಪಿ ಅವರ ಸಾವಿನ ಸುದ್ದಿ ನಿಜಲಿಂಗಪ್ಪನವರ ಕಿವಿಗೆ ಬಿತ್ತು. ಊಟವನ್ನು ಬಿಟ್ಟು ತಕ್ಷಣವೇ ಪತ್ರಿಕೆಗಳವರಿಗೆ ದೂರವಾಣಿ ಕರೆ ಮಾಡಿ ಆಕಾಶವಾಣಿ ಸುದ್ದಿಯ ಸತ್ಯಾಸತ್ಯತೆಯನ್ನು ಮನವರಿಕೆಮಾಡಿಕೊಂಡರು. ಸುದ್ದಿ ನಿಜವೆಂದು ತಿಳಿದ ಬಳಿಕ, ತಮ್ಮ ಅತೀವ ದುಃಖವನ್ನು ವ್ಯಕ್ತಪಡಿಸಿ ಪತ್ರಿಕೆಗಳಿಗೆ ಹೇಳಿಕೆ ನೀಡಿದರು. ದೇಶದ ಪ್ರಜ್ಞೆಯನ್ನು ಎಚ್ಚರವಾಗಿಡುವಲ್ಲಿ ಜೆಪಿ ಅವರು ಗಾಂಧಿಯವರಿಗೆ ಮಾತ್ರ ಎರಡನೆಯವರು ಎಂದು ಬಣ್ಣಿಸಿದರು. ಮೊರಾರ್ಜಿಯವರು ಲೋಕಸಭೆಯಲ್ಲಿ ವಿಷಾದ ವ್ಯಕ್ತಪಡಿಸಿದರು. ಆದರೆ ಜೆಪಿ ಇನ್ನೂ ಸತ್ತಿರಲಿಲ್ಲವೆಂಬುದು ದೃಢವಾದನಂತರ ಸರ್ಕಾರದ ಅಸಾಮರ್ಥ್ಯಕ್ಕೆ

ಕನ್ನಡಿ ಹಿಡಿದಂತಾಯಿತು! ಲೋಕನಾಯಕರ ಸಾವಿನ ಸುದ್ದಿ ಸುಳ್ಳು ಎಂಬುದು ತಿಳಿದ ಬಳಿಕ ನಿಜಲಿಂಗಪ್ಪನವರು ಆನಂದತುಂದಿಲರಾದರು.

ಕರ್ನಾಟಕದ ಜನತಾ ಪಕ್ಷವು ಅಸ್ತವ್ಯಸ್ತವಾಗಿತ್ತು, ಅಧಿಕಾರದಾಹಿಗಳೂ ಸ್ವಾರ್ಥಿಗಳೂ ಆದ ನಾಯಕರ ನಡುವಣ ತಿಕ್ಕಾಟದಿಂದಾಗಿ ಹರಿದು ಚಿಂದಿಯಾಗಿತ್ತು. ಈ ವಿಷಯದಲ್ಲಿ ಅದು ಕಾಂಗ್ರೆಸ್‌ಗಿಂತ ಮೇಲೂ ಅಲ್ಲ, ಕೀಳೂ ಅಲ್ಲ, ಅದರಷ್ಟೇ ಭ್ರಷ್ಟತನ, ಅಶಿಸ್ತು ಮತ್ತು ಕೋಮುವಾದ-ಜಾತಿವಾದಗಳಿಂದ ಕೂಡಿ ಕೊಳೆತುಹೋಗಿತ್ತು. ಒಂದು ದಿನ ಬೆಳಿಗ್ಗೆ ರಾಜ್ಯ ಜನತಾ ಪಕ್ಷದ ಅಧ್ಯಕ್ಷರು ತಿಮ್ಮೇಗೌಡರೊಂದಿಗೆ ನಿಜಲಿಂಗಪ್ಪನವರನ್ನು ಭೇಟಿಯಾಗಿ, ಪಕ್ಷದಲ್ಲಿ ವಿದ್ಯಮಾನಗಳ ಬಗ್ಗೆ ವರದಿ ನೀಡಿದರು. ರಾಜ್ಯ ಜನತಾ ಪಕ್ಷದ ಅಧ್ಯಕ್ಷ ದೇವೇಗೌಡರು ವೀರೇಂದ್ರ ಪಾಟೀಲರ ರಾಜಕೀಯದ ಆಟವನ್ನು ನಿರೂಪಿಸಿದರು. ತಮ್ಮ ಸ್ವಹಿತಕ್ಕಾಗಿ ಪಾಟೀಲರು ಪಕ್ಷವನ್ನು ಎರಡು ಹೋಳಾಗಿ ಮಾಡಿ, ಅಂತಿಮವಾಗಿ ಇಂದಿರಾ ಬಣವನ್ನು ಸೇರಲು ಸಿದ್ಧತೆ ನಡೆಸಿದ್ದಾರೆಂದರು, ಆದರೆ ವೀರೇಂದ್ರ ಪಾಟೀಲರ ಕಳೆದ ಐದಾರು ವರ್ಷಗಳ ರಾಜಕೀಯದಾಟದ ಪರಿಚಯ ನಿಜಲಿಂಗಪ್ಪನವರಿಗೆ ಈಗಾಗಲೇ ಆಗಿತ್ತು, ಹೀಗಾಗಿ ಅವರಿಗೆ ಇದೇನೂ ಹೊಸ ವಿಷಯವಾಗಿರಲಿಲ್ಲ. ಅರಸು ಅವರ ಮನಸ್ಸಿನಲ್ಲಿಯೂ ತಮ್ಮದೇ ಆದ ಯೋಜನೆಗಳಿವೆಯೆಂಬುದನ್ನು ಗೌಡರು ವಿವರಿಸಿದರು, ಅವರ ಯೋಜನೆಯೆಂದರೆ ನೂರು ಮಂದಿ ಶಾಸಕರೊಡನೆ ಪಕ್ಷಾಂತರಗೊಂಡು ಚರಣಸಿಂಗ್ ಅವರೊಡನೆ ಕೈಜೋಡಿಸಿ, ಅವರ ನೆರವಿನಿಂದ ರಾಜ್ಯದಲ್ಲಿ ಹೊಸ ಪಕ್ಷವನ್ನು ಸ್ಥಾಪಿಸುವುದು. ತಮ್ಮ ಮಾತು ಕೇಳದ ಮೊರಾರ್ಜಿಯವರಿಂದಲೇ ಇವೆಲ್ಲ ಆಗುತ್ತಿರುವುದು ಎಂದು ನಿಜಲಿಂಗಪ್ಪನವರು ಗೌಡರಿಗೆ ವಿವರಿಸಿದರು, ಆದರೆ ನಾವು ನಿಷ್ಪಕ್ಷಪಾತವಾಗಿ ನೋಡಿದರೆ, ವೀರೇಂದ್ರ ಪಾಟೀಲರು ನಡೆದುಕೊಂಡದ್ದು ಭಾರತದ ಯಾವುದೇ ರಾಜಕಾರಣಿ ನಡೆದುಕೊಳ್ಳುವ ರೀತಿ, ಅಷ್ಟೆ. ಆದರೆ ಪಕ್ಷದ ಹಿತವನ್ನು ಬದಿಗಿರಿಸಿ ತಮ್ಮ ಸ್ವಹಿತಕ್ಕೇ ಹೆಚ್ಚು ಬೆಲೆಯಿತ್ತ ವೀರೇಂದ್ರ ಪಾಟೀಲರನ್ನು ನಿಜಲಿಂಗಪ್ಪನವರು ಎಂದೂ ಕ್ಷಮಿಸುವಂತಿರಲಿಲ್ಲ. ತಮ್ಮ ಪಕ್ಷಪಾತರಹಿತ ದೃಷ್ಟಿಕೋನದಿಂದಾಗಿ, ನಿಜಲಿಂಗಪ್ಪನವರು ಆಡಳಿತಾನುಭವ, ನಿರ್ವಹಣ ಕೌಶಲ ಮತ್ತು ಜಾಣ್ಮೆಗಳಂತಹ ವೀರೇಂದ್ರ ಪಾಟೀಲರ ಗುಣಾತ್ಮಕ ಅಂಶಗಳನ್ನು ಗುರುತಿಸಬಲ್ಲವರಾಗಿದ್ದರು. ಆ ಕಾರಣದಿಂದಲೇ ತಮ್ಮ ಶಿಷ್ಯ ಬಿಹಾರದ ರಾಜ್ಯಪಾಲರಾಗಿ ಹೋಗುವ ಸುದ್ದಿ ಕೇಳಿ ಅದನ್ನು ಸ್ವಾಗತಿಸಿದರು. ಅಲ್ಲದೆ, ರಾಜ್ಯ ರಾಜಕಾರಣದಿಂದ ಒಬ್ಬ ಅನಪೇಕ್ಷಣೀಯ ವ್ಯಕ್ತಿಯು ದೂರವಾಗುತ್ತಾನೆ ಎಂಬುದೂ ಸಂತೋಷಕ್ಕೆ ಕಾರಣವಾಯಿತು! ಚರಣ್ ಸಿಂಗ್-ಮೊರಾರ್ಜಿ ಪೈಪೋಟಿಯು ಜನತಾ ಪಕ್ಷವನ್ನು ಛಿದ್ರಗೊಳಿಸಿತು. ಚರಣ್ ಸಿಂಗ್ ಪ್ರಧಾನ ಮಂತ್ರಿಯಾಗಲು ಹೊರಟರು, ಆದರೆ ಅವರ

ಆಕಾಂಕ್ಷೆ ಈಡೇರಲು ಮೊರಾರ್ಜಿಯೇ ಪ್ರಮುಖ ಆತಂಕ. ಚರಣ್ ಸಿಂಗ್‌ರ ತೆರೆಮರೆಯ ಸಂಚುಗಳಿಂದಾಗಿ ೧೯೭೯ನೇ ಜುಲೈ ೧೫ ರಂದು ಚವಾನ್ ಅವರು ಮೊರಾರ್ಜಿ ಸಂಪುಟದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸಿದರು. ಪಕ್ಷದ ಅನೇಕ ಹಿತೈಷಿಗಳು ಹಿರಿಯ ರಾಜಕಾರಣಿಯಾಗಿ ಮಧ್ಯಪ್ರವೇಶಿಸಿ ಪಕ್ಷವನ್ನುಳಿಸುವಂತೆ ನಿಜಲಿಂಗಪ್ಪನವರನ್ನು ಕೇಳಿಕೊಂಡರು. ನಿಜಲಿಂಗಪ್ಪನವರು ಮೊರಾರ್ಜಿಯವರ ಜೊತೆ ದೂರವಾಣಿಯಲ್ಲಿ ಸಂಪರ್ಕಿಸಿ ವಾಸ್ತವಾಂಶಗಳನ್ನರಿಯಲು ಪ್ರಯತ್ನಿಸಿದರು. ಆದರೆ ಮೊರಾರ್ಜಿಯವರು ಜ್ಯೋತಿಷ್ಯವನ್ನು ನಂಬಿ ಅದೇ ದಿನ ಪ್ರಧಾನ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು, ಆದರೆ ಜನತಾ ಸಂಸದೀಯ ಪಕ್ಷದ ನಾಯಕತ್ವದಿಂದ ನಿರ್ಗಮಿಸಲಿಲ್ಲ. ಆ ಹಿಂದೆ, ೧೯೭೯ನೇ ಜುಲೈ ೯ ರಂದು, ರಾಜ್ ನಾರಾಯಣ್ ಅವರು ೯ ಮಂದಿ ಲೋಕಸಭಾ ಸದಸ್ಯರ ಜೊತೆ ಜನತಾ ಪಕ್ಷದಿಂದ ಸಿಡಿದು ಹೋಗಿದ್ದರು. ಚರಣ್ ಸಿಂಗ್ ಅವರ ಆಶೀರ್ವಾದದಿಂದಲೇ ಜನತಾ (ಎಸ್) ಪಕ್ಷ ವನ್ನವರು ಸ್ಥಾಪಿಸಿದ್ದು ಸ್ಪಷ್ಟವಾಗಿತ್ತು. ಮೊರಾರ್ಜಿಯವರು ಲೋಕಸಭೆಯ ವಿಸರ್ಜನೆಗೆ ಶಿಫಾರಸು ಮಾಡಲಿಲ್ಲ. ಚರಣ್ ಸಿಂಗ್ ಅವರು ರಾಷ್ಟ್ರಪತಿ ಸಂಜೀವರೆಡ್ಡಿಯವರನ್ನು ಕಂಡು ಸಂಪುಟ ರಚಿಸಲು ತಮಗೆ ಅವಕಾಶ ನೀಡಬೇಕೆಂದು ಕೇಳಿಕೊಂಡರು. ಲೋಕ ಸಭೆಯಲ್ಲಿ ಬಹುಮತವನ್ನು ಸಾಬೀತುಪಡಿಸುವುದಾಗಿ ಸಿಂಗ್ ಅವರು ರೆಡ್ಡಿಯವರಿಗೆ ಆಶ್ವಾಸನೆ ನೀಡಿದರು. ೧೯೭೯ನೇ ಆಗಸ್ಟ್ ತಿಂಗಳ ಮೂರನೆಯ ವಾರದೊಳಗೆ ಬಹುಮತವನ್ನು ಸಾಬಿತುಗೊಳಿಸುವಂತೆ ರೆಡ್ಡಿ ಚರಣ್ ಸಿಂಗ್ ಅವರಿಗೆ ಆದೇಶಿಸಿದರು. ಅವಕಾಶವಾದಿ ಗೆಳೆತನದ ಇಂದಿರಾಗಾಂಧಿಯವರು ತಮ್ಮ ವಿರೋಧಿ ಚರಣ್ ಸಿಂಗ್ ಅವರಿಗೆ ಬೆಂಬಲ ನೀಡಿ ಆನಂತರ ಅದನ್ನು ಹಿಂಪಡೆಯುವರೆಂದು ನಿಜಲಿಂಗಪ್ಪನವರು ಊಹಿಸಿದರು! ಮೊರಾರ್ಜಿಯವರನ್ನು ಕಂಡರೆ ಆಗದ ರೆಡ್ಡಿಯವರು ಚರಣ್ ಸಿಂಗ್ ಪ್ರಧಾನ ಮಂತ್ರಿಗಳಾಗುವುದನ್ನು ಎದುರು ನೋಡುತ್ತಿದ್ದರು. ಸಂಜೀವರೆಡ್ಡಿಯವರ ವರ್ತನೆಯು ಜನತಾ ಪಕ್ಷವು ಛಿದ್ರಗೊಳ್ಳಲು ನೆಪವಾಗಿ ಅಂತಿಮವಾಗಿ ಇಂದಿರಾ ಗಾಂಧಿಯವರ ವಿಜಯಕ್ಕೆ ಕಾರಣವಾಗುವುದೆಂದು ನಿಜಲಿಂಗಪ್ಪನವರು ಭಾವಿಸಿದರು. ಆದರೆ, ರೆಡ್ಡಿಯವರೇನೂ ಚರಣ್ ಸಿಂಗ್ ಅವರನ್ನು ಮೊದಲು ಆಹ್ವಾನಿಸಿರಲಿಲ್ಲ, ಲೋಕಸಭೆಯ ವಿರೋಧ ಪಕ್ಷದ ನಾಯಕ ಚವಾನ್ ಅವರು ಸರ್ಕಾರ ರಚಿಸಲು ತಮ್ಮ ಅಸಮರ್ಥತೆಯನ್ನು ಘೋಷಿಸಿದ ಬಳಿಕವಷ್ಟೇ ಅವರು ಚರಣ್ ಸಿಂಗ್ ಅವರಿಗೆ ಸಂಪುಟರಚನೆಯ ಅವಕಾಶವಿತ್ತರು. ಚರಣ್ ಸಿಂಗ್ ಇದಕ್ಕೆ ಒಪ್ಪಿದರು, ಅದಕ್ಕೆ ಕಾರಣ ತಮಗೆ ಚವಾನ್ ಗುಂಪಿನ ೭೫ ಮಂದಿ ಸದಸ್ಯರ ಬೆಂಬಲವಿದೆಯೆಂದು ಭಾವಿಸಿದರು. ೧೯೭೯ನೇ ಜುಲೈ ೨೮ ರಂದು ಅವರು ವಿಧಿವತ್ತಾಗಿ ಪ್ರಧಾನ ಮಂತ್ರಿ

ಗಳಾಗಿ ಪ್ರಮಾಣ ವಚನ ಸ್ವೀಕರಿಸಿ, ಜನತಾ (ಎಸ್), ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್ (ಐ) ಪಕ್ಷಗಳ ಸಮ್ಮಿಶ್ರ ಸರ್ಕಾರವನ್ನು ರಚಿಸಿದರು. ಆದರೆ ಲೋಕ ಸಭೆಯಲ್ಲಿ ವಿಶ್ವಾಸ ಮತ ಕೋರುವ ಮೊದಲೇ ಅವರಿಗೆ ಅದು ದೊರೆಯುವುದು ಅಸಾಧ್ಯವೆಂದು ಗೊತ್ತಾಯಿತು. ಅದಕ್ಕೆ ಕಾರಣ ಕಾಂಗ್ರೆಸ್ (ಐ) ತನ್ನ ಬೆಂಬಲವನ್ನು ಹಿಂದಕ್ಕೆ ಪಡೆದದ್ದು. ೧೯೭೯ನೇ ಆಗಸ್ಟ್ ೨೦ ರಂದು ಸಿಂಗ್ ಪ್ರಧಾನ ಮಂತ್ರಿ ಪದವಿಗೆ ರಾಜೀನಾಮೆ ನೀಡಿದರು, ಜೊತೆಗೆ ಲೋಕಸಭೆಯ ವಿಸರ್ಜನೆಗೆ ಶಿಫಾರಸು ಮಾಡಿದರು. ಹೀಗೆ ೨೩ ದಿನಗಳ ಅಲ್ಪಕಾಲದ ಸರ್ಕಾರವು ಕೊನೆಯುಸಿರೆಳೆಯಿತು. ಈ ದಾಖಲೆಯನ್ನು ಮುರಿದವರು ಅಟಲ್ ಬಿಹಾರಿ ವಾಜಪೇಯಿ, ೧೯೯೬ರಲ್ಲಿ ಅವರ ಪ್ರಧಾನ ಮಂತ್ರಿತ್ವವು ಮತ್ತಷ್ಟು ಕ್ಷಿಪ್ರವಾಗಿ, ಅಂದರೆ ಒಂದೇ ವಾರ ಕಾಲದಲ್ಲಿ, ಕೊನೆಗೊಂಡಾಗ. ಚರಣ್ ಸಿಂಗ್‌ರ ಬದಲು ರೆಡ್ಡಿಯವರು ಜಗಜೀವನರಾಂ ಅವರನ್ನು ಸಂಪುಟರಚನೆಗೆ ಆಹ್ವಾನಿಸಿದ್ದರೆ, ಜನತಾ ಪಕ್ಷದ ದೃಷ್ಟಿಯಿಂದ ಪರಿಸ್ಥಿತಿಯು ನಿಯಂತ್ರಣದಲ್ಲಿರುತ್ತಿತ್ತು. ಪ್ರಧಾನ ಮಂತ್ರಿ ಸ್ಥಾನವನ್ನು ತೊರೆದರೂ ಸಂಸದೀಯ ಪಕ್ಷದ ನಾಯಕತ್ವಕ್ಕೆ ರಾಜೀನಾಮೆ ನೀಡದ ಮೊರಾರ್ಜಿಯವರ ವರ್ತನೆಯಿಂದ ಚಕಿತಗೊಂಡ ನಿಜಲಿಂಗಪ್ಪನವರು ೧೯ನೇ ಜುಲೈ ೧೯೭೯ ರಂದು ತಂತಿ ಕಳಿಸಿ ಸಂಸದೀಯ ಪಕ್ಷದ ನಾಯಕತ್ವಕ್ಕೆ ರಾಜೀನಾಮೆ ನೀಡುವಂತೆ ಸಲಹೆಯಿತ್ತಿದ್ದರು. ಜನತಾ ಪಕ್ಷವನ್ನು ಉಳಿಸುವ ಏಕೈಕ ಮಾರ್ಗವೆಂದರೆ ಜಗಜೀವನರಾಂ ಅವರನ್ನು ಪ್ರಧಾನ ಮಂತ್ರಿಗಳನ್ನಾಗಿ ಮಾಡುವುದು ಎಂದು ಅದರಲ್ಲವರು ಸ್ಪಷ್ಟಪಡಿಸಿದ್ದರು. ತಮಗೆ ವೈಯಕ್ತಿಕವಾಗಿ ಜಗಜೀವನರಾಂ ಅವರ ಬಗ್ಗೆ ಅಭಿಮಾನವಿಲ್ಲದಿದ್ದರೂ, ತಮ್ಮ ನಿಷ್ಪಕ್ಷಪಾತ ದೃಷ್ಟಿಯಲ್ಲಿ ಅವರು ಆ ಸ್ಥಾನಕ್ಕೆ ಯೋಗ್ಯರು ಎಂಬುದನ್ನು ಸ್ಪಷ್ಟಪಡಿಸಿದ್ದರು. ಬೆಂಬಲ ಗಳಿಸಿಕೊಳ್ಳಲು ಸಾಧ್ಯವಾಗುವುದಾದರೆ ಚಂದ್ರಶೇಖರ್ ಅವರೂ ತಮಗೆ ಒಪ್ಪಿಗೆ ಎಂದವರು ಭಾವಿಸಿದರು. ರೆಡ್ಡಿಯವರು ಚರಣ್ ಸಿಂಗ್ ಅವರನ್ನು ಸಂಪುಟರಚನೆಗೆ ಆಹ್ವಾನಿಸಿದಾಗ ಅದು ಒಳ್ಳೆಯ ಪದ್ಧತಿಯಲ್ಲವೆಂದು ನಿಜಲಿಂಗಪ್ಪನವರು ಅಂದುಕೊಂಡಿದ್ದರು. ದೇಶದ ರಾಜಕೀಯ ಪರಿಸ್ಥಿತಿಯು ಒಂದು ವೈನೋದಿಕವಾಗಿ ಮಾರ್ಪಡುತ್ತಿದ್ದಾಗ, ೧೯೭೯ರ ಜುಲೈ ೨೮ ರ ಪತ್ರದಲ್ಲಿ ಎಸ್.ಕೆ. ಪಾಟೀಲ್ ಅವರು, ತಮ್ಮ ರಾಜಕೀಯ ಹೊಂದಾಣಿಕೆಗಳನ್ನು ಬಿಟ್ಟು ಕಾಂಗ್ರೆಸ್ (ಓ) ಅನ್ನು ಮರುಸ್ಥಾಪನೆ ಮಾಡಬೇಕೆಂದು ನಿಜಲಿಂಗಪ್ಪನವರನ್ನು ಕೇಳಿಕೊಂಡರು. ತಮ್ಮ ಉತ್ತರದಲ್ಲಿ ನಿಜಲಿಂಗಪ್ಪನವರು ಐನಾತಿ ಪ್ರಶ್ನೆಯನ್ನೆತ್ತಿದ್ದರು: ನಿಜವಾಗಿ ಕಾಂಗ್ರೆಸ್(ಓ)ಗೆ ಸೇರಿದವರಾರು ಎಂದು ಗುರುತಿಸುವುದು ಈಗ ಸಾಧ್ಯವಿದೆಯೇ? ಕರ್ನಾಟಕದ ರಾಜಕೀಯ ವಾತಾವರಣವು ಇಷ್ಟೇ ದುರ್ಗಂಧಭರಿತವಾಗಿತ್ತು. ಕೆಲವು ಕಾಲದಿಂದ ನಿಜಲಿಂಗಪ್ಪನವರು ನಿರೀಕ್ಷಿಸಿದ್ದುದು ವೀರೇಂದ್ರ ಪಾಟೀಲರು

ಜನತಾ ಪಕ್ಷವನ್ನು ತೊರೆದು ಕಾಂಗ್ರೆಸ್ (ಐ) ಸೇರಿದಾಗ ವಾಸ್ತವವಾಯಿತು. ಇದೊಂದು ಪೀಡಾ ಪರಿಹಾರ ಎಂದೇ ನಿಜಲಿಂಗಪ್ಪನವರು ಸಂತೋಷಪಟ್ಟರು. ಚರಣ್ ಸಿಂಗ್ ರಾಜೀನಾಮೆ ನೀಡುವುದಕ್ಕೆ ಕೆಲವು ದಿನಗಳ ಹಿಂದೆ ಜಗಜೀವನರಾಂ ಅವರು ತಂತಿಯೊಂದನ್ನು ಕಳಿಸಿ ಒಂದು ಪ್ರಮುಖ ವಿಷಯದ ಚರ್ಚೆಗಾಗಿ ದೆಹಲಿಗೆ ಬರಲು ಕೇಳಿಕೊಂಡಿದ್ದರು. ಅದರಂತೆ ಅವರು ೧೯೭೯ನೇ ಆಗಸ್ಟ್ ೨೦ ರಂದು ಅವರು ದೆಹಲಿಗೆ ಹೋದರು. ಮಾರನೆಯ ದಿನ ಜಗಜೀವನರಾಂ ಅವರು ತಾವು ಪ್ರಧಾನ ಮಂತ್ರಿಗಳಾಗಬೇಕೆಂಬ ಬಯಕೆಯನ್ನು ನಿಜಲಿಂಗಪ್ಪನವರಲ್ಲಿ ಹೇಳಿಕೊಂಡರು. ಬಿಕ್ಕಟ್ಟಿನ ಸನ್ನಿವೇಶಗಳಲ್ಲಿ ನೀಡಿದ್ದ ಬೆಂಬಲಕ್ಕಾಗಿ ಸಂಜೀವರೆಡ್ಡಿಯವರು ನಿಜಲಿಂಗಪ್ಪನವರಿಗೆ ಋಣಿಯಾಗಿದ್ದುದರಿಂದ, ಅವರೇ ರಾಷ್ಟ್ರಪತಿಗಳ ಮೇಲೆ ಪ್ರಭಾವ ಬೀರಬಲ್ಲ ಸೂಕ್ತ ವ್ಯಕ್ತಿ ಎಂದು ಭಾವಿಸಿದ್ದರು. ಮೊದಲಿನಿಂದಲೂ ನಿಜಲಿಂಗಪ್ಪನವರಿಗೆ ಜಗಜೀವನರಾಂ ಪ್ರಧಾನ ಮಂತ್ರಿಯಾಗುವ ಬಗ್ಗೆ ಒಲವಿತ್ತು, ಅದಕ್ಕೆ ಕಾರಣ ಎಸ್‌ಸಿ ಬಣದ ಮೇಲೆ ಹಿಡಿತ ಸಾಧಿಸಿ ಇಂದಿರಾ ಗಾಂಧಿಯವರನ್ನು ಎದುರಿಸಬಲ್ಲ ಏಕೈಕ ಮಾರ್ಗವದು ಎಂಬುದು ಅವರ ನಿಲವಾಗಿತ್ತು. ಈ ಬಗ್ಗೆ ತಾವೇನಾದರೂ ಮಾಡಲು ಇದು ಸುಸಂಧಿ ಎಂದವರು ಭಾವಿಸಿ ರಾಂ ಅವರ ಬಗ್ಗೆ ಹೇಳಲು ರೆಡ್ಡಿಯವರನ್ನು ಭೇಟಿಯಾದರು. ಆದರೆ ಇರುವ ಒಂದೇ ಮಾರ್ಗವೆಂದರೆ ಮಧ್ಯಂತರ ಚುನಾವಣೆಗಳು ಮಾತ್ರವೇ ಎಂದು ರೆಡ್ಡಿ ವಾದಿಸಿದರು. ಇದು ಜನತಾ ಪಕ್ಷಕ್ಕೆ ಮಾರಕವಾಗಬಹುದೆಂಬ ಕಾರಣದಿಂದ ರೆಡ್ಡಿಯವರ ಮನವೊಲಿಸಲು ನಿಜಲಿಂಗಪ್ಪನವರು ಪ್ರಯತ್ನಿಸಿದರೂ ರೆಡ್ಡಿ ಇದಕ್ಕೆ ಒಪ್ಪದಿದ್ದಾಗ, ಅವರು ಇಂದಿರಾ ಗಾಂಧಿಯವರಿಗೆ ಹತ್ತಿರವಾಗುತ್ತಿರುವಂತೆ ಕಾಣಿಸಿತು. ತಮಗೆ ಆಕೆ ಹಿಂದೆ ಮಾಡಿದ್ದ ಹಾನಿಯನ್ನು ಪರಿಗಣಿಸಿದರೆ, ರೆಡ್ಡಿಯವರ ನಡತೆಯು ರಾಜಕೀಯ ಅವಕಾಶವಾದಿತನದ ತುತ್ತತುದಿ ಎನ್ನಿಸಿತು! ಆದರೆ ಈಚೀಚೆಗೆ ಅಧಿಕಾರ ಮತ್ತು ಹಣಗಳಿಕೆಗಳು ರಾಜಕಾರಣಗಳ ಇಮ್ಮುಖ ಗುರಿಗಳಾಗಿ ಭಾರತದ ರಾಜಕೀಯ ವಾತಾವರಣವು ಅವಕಾಶವಾದದೆಡೆಗೆ ವಾಲುತ್ತಿರುವ ಅರಿವೂ ಅವರಿಗಿತ್ತು! ೧೯೭೯ನೇ ಆಗಸ್ಟ್ ೨೮ ರಂದು ರಾಷ್ಟ್ರಪತಿಯವರು ಲೋಕಸಭೆಯನ್ನು ವಿಸರ್ಜಿಸಿ ಆಜ್ಞೆ ಹೊರಡಿಸಿದರು. ಜೊತೆಗೆ, ಅವರು ಚರಣ ಸಿಂಗ್ ಅವರನ್ನು ಉಸ್ತುವಾರಿ ಪ್ರಧಾನ ಮಂತ್ರಿಗಳಾಗಿ ಮುಂದುವರಿಯಲು ಆದೇಶಿಸಿದರು. ಈ ಚುನಾವಣೆಗಳಿಂದ ಇಂದಿರಾ ಗಾಂಧಿಯವರು ಮರಳಿ ಅಧಿಕಾರಕ್ಕೆ ಬರುವಂತಾಗುತ್ತದೆಂದು ನಿಜಲಿಂಗಪ್ಪನವರು ತಮ್ಮ ದೂರದೃಷ್ಟಿತ್ವದಿಂದಾಗಿ ಭವಿಷ್ಯ ನುಡಿದರು. ಜನತಾ ನಾಯಕರ ವರ್ತನೆಯಿಂದ ಬೇಸತ್ತ ಎಸ್.ಕೆ. ಪಾಟೀಲರು ಮೂರ್ಖ ಜನತಾ ಪಕ್ಷದ ನಾಯಕರುಗಳಿಗಿಂತ ಇಂದಿರಾ ಗಾಂಧಿಯವರು ಉತ್ತಮವೆಂದು ಅವರನ್ನು ಸ್ತುತಿಸಲು ತೊಡಗಿದರು. ಆದರೆ ನಿಜಲಿಂಗಪ್ಪನವರು

ಮಾತ್ರ ಇಂದಿರಾ ಗಾಂಧಿಯವರ ಹಾಗೂ ಅವರ ರಾಜಕೀಯ ತಂತ್ರಗಳ ಬಗೆಗಿನ ಟೀಕೆಯ ವಿಷಯದಲ್ಲಿ ತಮ್ಮ ನಿಲವನ್ನು ಬದಲಿಸಲಿಲ್ಲ. ಹಿಂದಿನಂತೆಯೇ, ಇದು ಈ ಇಬ್ಬರು ಹಿರಿಯ ನಾಯಕರ ನಡುವಣ ಸ್ನೇಹಕ್ಕೆ ಅಡ್ಡಿಯಾಗಲಿಲ್ಲ.

ಚುನಾವಣೆಗಳು ಖಚಿತವಾದ ಬಳಿಕ ರಾಜಕೀಯ ಪರಿಸ್ಥಿತಿಯು ನಮ್ಯವಾಯಿತು, ಅವಕಾಶವಾದಿ ಹೊಂದಾಣಿಕೆಗೆ ಎಡೆಮಾಡಿಕೊಟ್ಟಿತು. ಕರ್ನಾಟಕದಲ್ಲಿ, ಕಾಂಗ್ರೆಸ್ (ಯು) ಎಂಬ ಅರಸು ಅವರ ನೇತೃತ್ವದ ಹೊಸ ಪಕ್ಷವು ಹುಟ್ಟಿಕೊಂಡಿತು. ಎಸ್.ಕೆ. ಪಾಟೀಲ್ ಕಾಂಗ್ರೆಸ್ (ಐ) ಸೇರುವಂತೆ ರಾಂ ಅವರನ್ನು ಕೇಳಿದರು. ಕಾಂಗ್ರೆಸ್ (ಓ)ಗೆ ಭಾರಿ ದೊಡ್ಡ ಪೆಟ್ಟು ಬಿದ್ದಿತ್ತು, ಸಂಪೂರ್ಣವಾಗಿ ಛಿದ್ರಗೊಂಡಿತ್ತು. ಬಿಜೆಪಿ ಮತ್ತು ಸಮಾಜವಾದಿ ಗುಂಪುಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡವು. ಕರ್ನಾಟಕದಲ್ಲಿನ ಜನತಾ ಪಕ್ಷವು ನಿಜಲಿಂಗಪ್ಪನವರ ಕಡೆ ನೋಡಿ ಚುನಾವಣಾ ಪ್ರಚಾರಕ್ಕೆ ಮಾರ್ಗದರ್ಶನ ಮಾಡುವಂತೆ ಕೇಳಿಕೊಂಡಿತು. ತಮ್ಮ ವಯಸ್ಸು ಮತ್ತು ಕುಂಠಿತಗೊಳ್ಳುತ್ತಿದ್ದ ಆರೋಗ್ಯದ ನಡುವೆಯೂ ಅವರು ಪ್ರಚಾರಕ್ಕಾಗಿ ಶಕ್ತಿಮೀರಿ ದುಡಿದರು. ದೈಹಿಕವಾಗಿ ಸುಸ್ತಾದ ಅವರನ್ನು ಆಸ್ಪತ್ರೆಗೆ ಸೇರಿಸಬೇಕಾಯಿತು. ಪ್ರತಿಪಕ್ಷಗಳು ಚಿಂದಿಯಾಗಿರುವುದರಿಂದಾಗಿ ಇಂದಿರಾ ಗಾಂಧಿಯವರು ಚುನಾವಣೆಯಲ್ಲಿ ಸುಲಭ ಜಯ ಸಾಧಿಸುವರೆಂದು ನಿಜಲಿಂಗಪ್ಪನವರು ನವೆಂಬರ್ ೧೯೭೯ರಲ್ಲಿಯೇ ಭವಿಷ್ಯ ನುಡಿದರು. ೧೯೮೦ರ ಜನವರಿ ೩ ರಂದು ಲೋಕಬಾ ಚುನಾವಣೆಗಳು ನಡೆದು, ಇಂದಿರಾ ಗಾಂಧಿಯವರ ಕಾಂಗ್ರೆಸ್ (ಐ) ಮೂರನೇ ಎರಡರಷ್ಟು ಸ್ಥಾನಗಳನ್ನು ಬಹುತೇಕ ಬಾಚಿಕೊಂಡಿತು. ಒಟ್ಟು ೫೨೫ ಸ್ಥಾನಗಳ ಪೈಕಿ ಕಾಂಗ್ರೆಸ್ (ಐ) ಗೆ ೩೫೧ ಸ್ಥಾನಗಳು ಲಭ್ಯವಾದವು, ಜನತಾ ೩೧ ಪಡೆದು ಬಹು ಹಿಂದಿತ್ತು, ಲೋಕದಳವು ೪೧ ಸ್ಥಾನಗಳನ್ನು ಪಡೆದು ಸ್ವಲ್ಪ ಉತ್ತಮ ಸ್ಥಿತಿಯಲ್ಲಿತ್ತು, ಕಾಂಗ್ರೆಸ್ (ಉ) ೧೩, ಸಿಪಿಐ ಮತ್ತು ಸಿಪಿಎಂಗಳು ಕ್ರಮವಾಗಿ ೧೦ ಮತ್ತು ೩೫ ಸ್ಥಾನಗಳನ್ನು ಗೆದ್ದುವು. ಡಿಎಂಕೆಗೆ ೧೬, ಎಐಎಡಿಎಂಕೆಗೆ ೨ ಸ್ಥಾನಗಳು ದೊರೆತುವು. ಮುಸ್ಲಿಂ ಲೀಗ್, ಅಕಾಲಿ ದಳ ಮತ್ತು ನ್ಯಾಷನಲ್ ಕಾನ್‌ಫರೆನ್ಸ್‌ಗಳು ಕ್ರಮವಾಗಿ ೩, ೧ ಮತ್ತು ೩ ಸ್ಥಾನಗಳನ್ನು ಪಡೆದುವು. ಗೆದ್ದ ಸ್ವತಂತ್ರ ಅಭ್ಯರ್ಥಿಗಳ ಸಂಖ್ಯೆ ಕೇವಲ ೪, ಅಲ್ಲದೆ ಅಂತಹುದೇ ಪಕ್ಷಗಳೂ ಒಟ್ಟು ೧೪ ಸ್ಥಾನಗಳಲ್ಲಿ ತೃಪ್ತಿಪಟ್ಟುಕೊಂಡವು. ಇಂದಿರಾ ಗಾಂಧಿಯವರು ಎರಡು ಕ್ಷೇತ್ರಗಳಲ್ಲಿ ಅದ್ಭುತ ಜಯ ಸಾಧಿಸಿದರು: ಉತ್ತರ ಪ್ರದೇಶದ ರಾಯ್ ಬರೇಲಿ ಮತ್ತು ಆಂಧ್ರದ ಮೇಡಕ್. ೧೯೮೦ರ ಜನವರಿ ೧೪ ರಂದು ಇಂದಿರಾ ಗಾಂಧಿಯವರು ಪ್ರಧಾನ ಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದರು, ಹೀಗಾಗಿ ಅದೊಂದು ಹೊಸ ವರ್ಷದ ಕೊಡುಗೆಯಾಯಿತು. ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ (ಉ) ಪಕ್ಷದ ಹೀನಾಯ

ಸೋಲಿನ ಹೊಣೆ ಹೊತ್ತು, ೧೯೮೦ರ ಜನವರಿ ೭ ರಂದು ಕರ್ನಾಟಕದಲ್ಲಿ ಅರಸು ಅವರು ಕಾಂಗ್ರೆಸ್ (ಅ) ಮುಖ್ಯಮಂತ್ರಿಯಾಗಿ ರಾಜೀನಾಮೆ ನೀಡಿದರು. ಆದರೆ ಅವರು ವಿಧಾಸಭೆಯ ವಿಸರ್ಜನೆಗೆ ಶಿಫಾರಸು ಮಾಡಲಿಲ್ಲ. ಹೀಗಾಗಿ ಗುಂಡುರಾವ್ ಅವರು ಹೊಸ ಕಾಂಗ್ರೈ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ೧೯೮೦ರ ಜನವರಿ ೧೮ ರಂದು, ಹಿಂದೆ ಜನತಾ ಪಕ್ಷ ಅಧಿಕಾರಕ್ಕೆ ಬಂದಾಗ ಇತರ ಪಕ್ಷಗಳ ಸರ್ಕಾರಗಳನ್ನು ವಜಾ ಮಾಡಿದ್ದ ಮಾದರಿಯಲ್ಲಿಯೇ ಒಂಬತ್ತು ರಾಜ್ಯಗಳಲ್ಲಿನ ಕಾಂಗ್ರೆಸ್ (ಐ) ಅಲ್ಲದ ಪಕ್ಷಗಳ ಸರ್ಕಾರಗಳನ್ನು ವಜಾಗೊಳಿಸಿದರು. ತಮ್ಮ ರಾಜಕೀಯ ಗೆಲವಿನ ಸಂಭ್ರಮದಲ್ಲಿರುವಾಗಲೇ ಅವರಿಗೆ ಭಾರಿ ವೈಯಕ್ತಿಕ ದುರಂತವೊದಗಿತು, ಅದೆಂದರೆ ಅವರ ಪ್ರಿಯಪುತ್ರ ಸಂಜಯ ಗಾಂಧಿಯವರು ವಿಮಾನಾಪಘಾತದಲ್ಲಿ ಮರಣ ಹೊಂದಿದ್ದು. ಆದರೆ ವಂಶಾಡಳಿತವನ್ನು ಮುಂದುವರೆಸುವ ಉದ್ದೇಶದ ಅವರು ತಮ್ಮ ಹಿರಿಯ ಮಗ ರಾಜೀವ ಗಾಂಧಿಯವರನ್ನು ತಮ್ಮ ಉತ್ತರಾಧಿಕಾರಿಯಾಗಲು ತಯಾರು ಮಾಡಹೊರಟರು. ಹಿಂದಿನ ತಮ್ಮ ಶೈಲಿಯನ್ನೇ ಮುಂದುವರೆಸಿ ಪಕ್ಷ ಮತ್ತು ರಾಜ್ಯ ಸರ್ಕಾರಗಳನ್ನವರು ನಿಯಂತ್ರಿಸುತ್ತಿದ್ದರು. ಇದರಲ್ಲಿ ಅವರಿಗೆ ನೆರವಾದವರು ಹೊಗಳುಭಟ್ಟರಾಗಿದ್ದ ಮುಖ್ಯಮಂತ್ರಿಗಳಾದಿಯಾದ ಅವರ ಪಕ್ಷದವರು. ನಿರಂಕುಶಾಧಿಕಾರ ಮತ್ತೆ ತಲೆಎತ್ತಿದುದರಿಂದ ಗಾಢವಾಗಿ ನೊಂದ ನಿಜಲಿಂಗಪ್ಪನವರು ೧೯೮೦ರ ಆಗಸ್ಟ್ ೧೫ರ ಸ್ವಾತಂತ್ರ್ಯ ದಿನದಂದು ತಾವೂ ಏಕೆ ಸ್ವತಂತ್ರರಾಗಬಾರದೆಂದು ಕೇಳಿಕೊಂಡರು! ಅವರ ದಿನಚರಿಯ ಈ ದಾಖಲೆಯು ಮೂವತ್ತು ವರ್ಷಗಳ ಭಾರತದ ಸ್ವಾತಂತ್ರ್ಯದ ಬಗೆಗಿನ ವ್ಯಾಖ್ಯಾನವಾಗಿತ್ತು. ಜನಸಾಮಾನ್ಯರು, ವಿಶೇಷವಾಗಿ ಬಡ ರೈತರು ಮತ್ತು ಕೂಲಿಕಾರರು ಹಿಂದಿನಂತೆಯೇ, ಪ್ರಾಯಶಃ ಇನ್ನೂ ತೀವ್ರವಾಗಿ ಬವಣೆಗೊಳಗಾಗಿದ್ದರು. ಸ್ವಾತಂತ್ರ್ಯದ ಫಲವನ್ನು ಉಣ್ಣುತ್ತಿದ್ದವರು ಕೆಲವೇ ಮಂದಿ ಮೇಲುವರ್ಗದವರು– ಮಂತ್ರಿಗಳು, ಆಡಳಿತ ಪಕ್ಷದ ಸದಸ್ಯರು, ಮತ್ತು ಎಲ್ಲ ಹಂತದ ಅಧಿಕಾರಶಾಹಿ, ಅಷ್ಟೆ. ನಗರದ ಕಾರ್ಮಿಕರು ಹಳ್ಳಿ ಕೆಲಸಗಾರರಿಗಿಂತ ತುಸುವೇ ಉತ್ತಮ ಸ್ಥಿತಿಯಲ್ಲಿದ್ದರು. ಬಡತನ ರೇಖೆಯ ಕೆಳಗಿದ್ದವರು ಸುಮಾರು ಶೇಕಡ ೬೫ ರಷ್ಟು, ಇಂದಿರಾ ಗಾಂಧಿಯವರು ಅಧಿಕಾರಕ್ಕೆ ಬಂದ ಮೇಲೆ, ಬಡವರ ಮತ್ತು ಸಿರಿವಂತರ ನಡುವಣ ಅಂತರ ಹೆಚ್ಚಾಯಿತು, ಪ್ರಧಾನಮಂತ್ರಿಯಿಂದ ಕೆಳಗಿನವರೆಗೆ ಎಲ್ಲರೂ ಗಾಂಧಿ ತತ್ವಗಳನ್ನು ಉಚ್ಚರಿಸುತ್ತಿದ್ದರೂ, ಲಂಚಗುಳಿತನಲ್ಲಿ ಮುಳುಗಿದ್ದರು. ಕೋಮುವಾದ ಮತ್ತು ವಿದೇಶೀ ಪ್ರವೇಶದಂತಹ ಎಲ್ಲ ದುಷ್ಟಶಕ್ತಿಗಳೂ ದೇಶವನ್ನು ಹಾಳುಮಾಡುತ್ತಿದ್ದವು. ಕರ್ನಾಟಕದಲ್ಲಿಯೇ, ಈ ಶಕ್ತಿಗಳು ಅಳತೆ ಮೀರಿ ಬೆಳೆದಿದ್ದುವು. ಮಂತ್ರಿಯಾಗಿದ್ದ ಇಬ್ರಾಹಿಂ ಅವರ ವಿರುದ್ಧ ಶಾಸಕರೇ ಬಹಿರಂಗವಾಗಿ ಆರೋಪಗಳನ್ನು ಮಾಡಿದಾಗ ನಾಚಿಕೆಗೆಟ್ಟ ಮುಖ್ಯಮಂತ್ರಿಗಳು ತಮ್ಮ ಆರೋಪ ಹೊತ್ತ ಮಂತ್ರಿಯನ್ನು

ಸಮರ್ಥಿಸಿಕೊಂಡರು! ೧೯೮೧ರ ಜುಲೈ ೯ ರಂದು ನಿಜಲಿಂಗಪ್ಪವರ ಅಧ್ಯಕ್ಷತೆಯಲ್ಲಿ ಚಿತ್ರದುರ್ಗದಲ್ಲಿ ಒಂದು ಭಾರಿ ಸಭೆ ನಡೆದು, ಆರೋಪಿತ ಸಚಿವರ ವಿರುದ್ಧ ಕ್ರಮ ಜರುಗಿಸಬೇಕೆಂದು ಒತ್ತಾಯಪಡಿಸಿತು. ನಿಜಲಿಂಗಪ್ಪನವರು ತಮ್ಮ ಆಳವಾದ ದುಃಖ ವನ್ನು ಹೊರಗೆಡವಿ, ಗಂಭೀರ ಆರೋಪಗಳನ್ನು ಹೊತ್ತ ಇಬ್ರಾಹಿಂ ಅಂಥವರು ದೇಶವನ್ನು ಎಲ್ಲಡೆ ಆಳುತ್ತಿದ್ದಾರೆಂದು ನುಡಿದರು. ಸುಮಾರು ಇದೇ ಹೊತ್ತಿಗೆ, ಕೆಲವು ಜಿಲ್ಲೆಗಳಲ್ಲಿ ಬರಪರಿಸ್ಥಿತಿ ತಲೆದೋರಿದರೂ, ಸರ್ಕಾರವು ಮಾತ್ರ ಭಾರಿ ಖರ್ಚುಮಾಡಿ ಹೆಲಿಕಾಪ್ಟರ್‌ಗಳಲ್ಲಿ ಭೇಟಿ ನೀಡುವುದರ ಹೊರತಾದ ಯಾವುದೇ ಪರಿಹಾರ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ! ಈ ಸಮಸ್ಯೆಗೆ ಶಾಶ್ವತ ಪರಿಹಾರ ಕ್ರಮದ ಬಗ್ಗೆ ಚಿಂತನೆ ನಡೆಸಬೇಕೆಂದು ಮಾಡಿಕೊಂಡ ನಿಜಲಿಂಗಪ್ಪನವರ ಮಾತನ್ನು ಯಾರೂ ಕೇಳಿಸಿಕೊಳ್ಳಲೇ ಇಲ್ಲ. ಬೆಳೆಯುತ್ತಿದ್ದ ರಾಜಕೀಯ ಭ್ರಷ್ಟಾಚಾರ ಮತ್ತು ಹಣಸಂಪಾದನೆ ಮಾಡುತ್ತಿದ್ದ ಅಧಿಕಾರದಲ್ಲಿದ್ದ ರಾಜಕಾರಣಿಗಳನ್ನು ಕಂಡು ನಿಜಲಿಂಗಪ್ಪನವರ ರಕ್ತ ಕುದಿಯಿತು, ಆದರೆ ಅವರು ನಿಸ್ಸಹಾಯಕರಾಗಿದ್ದರು. ಇವೆಲ್ಲವೂ ಮೇಲಿನವರ ಆಶೀರ್ವಾದದಿಂದಲೇ ನಡೆಯುತ್ತಿದೆ ಎಂಬುದು ಅವರಿಗೆ ಮನವರಿಕೆಯಾಯಿತು.

ಕರ್ನಾಟಕದಲ್ಲಿ, ಅಧಿಕಾರ ಮತ್ತು ಸ್ಥಾನಗಳನ್ನು ಕಳೆದುಕೊಂಡಿದ್ದ ಅರಸು ಅವರು ರಾಜ್ಯದೆಲ್ಲೆಡೆ ಸುತ್ತಾಡುತ್ತ ರಾಜ್ಯ ಹಾಗೂ ದೇಶದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ವಿವರಿಸುತ್ತ ಸಾಗಿದರು. ಈಗವರು ಹೆಚ್ಚು ವಿವೇಕಿಗಳಾಗಿದ್ದರು, ರಾಜಕೀಯ ಅದೃಷ್ಟ ಕುಂಠಿತಗೊಂಡಿದ್ದರೂ ಹೆಚ್ಚು ಸೂಕ್ಷ್ಮಜ್ಞರಾಗಿಬಿಟ್ಟಿದ್ದರು. ಇಂದಿರಾ ಗಾಂಧಿ ಯವರನ್ನು ಖಂಡಿಸಿ ಅವರು ತಮ್ಮ ಪಕ್ಷಕ್ಕೆ ಬೆಂಬಲವನ್ನು ಕೋರಲು ಪ್ರಯತ್ನಿಸುತ್ತಿದ್ದರು. ಅವರೂ ಚಿತ್ರದುರ್ಗದಲ್ಲಿ ಭಾರಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ತಮ್ಮ ಮುಖ್ಯ ಮಂತ್ರಿಯ ಅವಧಿಯಲ್ಲಿ ಲಂಚವು ವ್ಯಾಪಕವಾಗಿದ್ದರೂ, ಅವರ ಮೇಲೂ ಲಂಚಗುಳಿ ತನದ ಆರೋಪವಿದ್ದರೂ, ಜನರು ಅವರ ಸುತ್ತ ನೆರೆಯಲು ಕಾರಣ ಅವರ ಅವಧಿಯಲ್ಲಿ ಹಿಂದುಳಿದ ವರ್ಗಗಳವರ ಪರಿಸ್ಥಿತಿಯನ್ನು ಸುಧಾರಿಸಲು ಗಟ್ಟಿಯಾದ ಕ್ರಮಗಳನ್ನು ಕೈಗೊಂಡಿದ್ದುದು. ೧೯೮೧ ಸೆಪ್ಟೆಂಬರ್ ೨೪ರ ದಿನಚರಿಯ ನಮೂದಿನಲ್ಲಿ ನಿಜಲಿಂಗಪ್ಪ ನವರು ೧೯೭೧ರಲ್ಲಿ ಅರಸು ಅವರು ಕಾಂಗ್ರೆಸ್ (ಓ) ಬಿಟ್ಟು ಕಾಂಗ್ರೆ ಸೇರಿದ ಪ್ರಸಂಗ ವನ್ನು ನೆನಪಿಸಿಕೊಂಡಿದ್ದಾರೆ. ಅವರ ಮಾರ್ಗದರ್ಶನದಲ್ಲಿಯೇ ರಾಜ್ಯದಲ್ಲಿ ಅವರು ಭ್ರಷ್ಟ ರಾಜಕೀಯ ಸಾಮ್ರಾಜ್ಯವನ್ನು ಸ್ಥಾಪಿಸಿದ್ದು. ಅವರೇ ಗುಂಡುರಾವ್ ಅವರಂತಹ ಪ್ರಶ್ನಾರ್ಹ ನಾಯಕರನ್ನು ಬೆಳೆಸಿದ್ದು. ಆದರೆ ಈಗ ಅರಸು ಅವರು ಇಂದಿರಾ ಗಾಂಧಿ ಮತ್ತು ಗುಂಡುರಾವ್ ಅವರನ್ನು ತಾವು ಯಾವ ಅಪರಾಧಗಳನ್ನು ಮಾಡಿದ್ದರೋ ಅವೇ ಆರೋಪಗಳನ್ನು ಹೊರಿಸಿ ಟೀಕಿಸುತ್ತಿದ್ದರು! ಮುಂಚೆಯೇ ನಿಗದಿಪಡಿಸಿದ್ದ

ರೀತಿಯಲ್ಲಿ ಅರಸು ಅವರು ತಮ್ಮ ಚಿತ್ರದುರ್ಗ ಭೇಟಿಯ ಕಾಲದಲ್ಲಿ ನಿಜಲಿಂಗಪ್ಪನವರನ್ನು ೧೯೮೧ನೇ ಸೆಪ್ಟೆಂಬರ್ ೨೫ರ ಬೆಳಿಗ್ಗೆ ೧೦-೩೦ಕ್ಕೆ ಕಂಡರು. ಇಂದಿರಾ ಗಾಂಧಿಯವರ ವಿರುದ್ಧ ಪ್ರಬಲ ವಿರೋಧ ಪಕ್ಷವನ್ನು ಸಂಘಟಿಸುವ ಬಗ್ಗೆ ಇಬ್ಬರೂ ಒಂದು ಗಂಟೆ ಕಾಲ ಚರ್ಚಿಸಿದರು. ಜನತಾ ಪ್ರಯೋಗವು ವಿಫಲವಾಗಲು ಕಾರಣ ಅದರ ಪ್ರತಿ ಘಟಕವೂ ತನ್ನದೇ ದಾರಿಯನ್ನು ಹಿಡಿದದ್ದು, ಅವುಗಳ ನಾಯಕರು ಒಳಗಿದ್ದುಕೊಂಡೇ ದೇಶದ ಹಿತದ ಬದಲು ತಮ್ಮ ಗುಂಪನ್ನು ಬಲಪಡಿಸಲು ಪ್ರಯತ್ನಿಸಿದ್ದು ಎಂದು ನಿಜಲಿಂಗಪ್ಪನವರು ಅರಸು ಅವರಿಗೆ ವಿವರಿಸಿದರು. ಇಂದಿರಾ ಗಾಂಧಿಯವರ ವಿರುದ್ಧದ ನೇತ್ಯಾತ್ಮಕ ಐಕಮತ್ಯವಿದ್ದರೂ ಚುನಾವಣೆಯ ಕಾಲದಲ್ಲಿ ಗುಂಪುಗಳು ಒಳ ಬಡಿದಾಟ ದಲ್ಲೇ ನಿರತವಾದವು. ತಾವು ಯಾವ ಪಕ್ಷವನ್ನಾದರೂ ಸೇರಲು ಸಿದ್ಧವೆಂದೂ, ಈಗಾಗಲೇ ಮೊರಾರ್ಜಿ, ಚಂದ್ರಶೇಖರ ಮತ್ತು ಚರಣ್ ಸಿಂಗ್ ಅವರೊಡನೆ ಮಾತುಕತೆ ನಡೆಸಿರು ವುದಾಗಿಯೂ ಅರಸು ತಿಳಿಸಿದರು. ತಮಗೆ ಈಗ ಪ್ರಧಾನ ಮಂತ್ರಿಯಾಗುವ ಆಸೆಯಿಲ್ಲ ವೆಂದು ಚರಣ ಸಿಂಗ್ ಸ್ಪಷ್ಟಪಡಿಸಿರುವುದಾಗಿಯೂ, ವಿರೋಧಿ ಗುಂಪುಗಳನ್ನು ಒಗ್ಗೂಡಿಸುವ ಯಾವುದೇ ಪ್ರಯತ್ನಕ್ಕೂ ತಮ್ಮ ಬೆಂಬಲವಿದೆಯೆಂದೂ ತಿಳಿಸಿದ್ದರಂತೆ. ಚರಣ ಸಿಂಗ್ ಅವರನ್ನು ನಂಬಲು ಸಾಧ್ಯವಿಲ್ಲವೆಂದೂ, ಅದಕ್ಕೆ ಕಾರಣ ಅವರು ಪರಮ ಸ್ವಾರ್ಥಿ ಎಂದೂ ನಿಜಲಿಂಗಪ್ಪನವರು ಉತ್ತರಿಸಿದರು. ಹಿಂದೆ ರಾಜ್ಯ ಜನತಾ ಪಕ್ಷದ ಅಧ್ಯಕ್ಷರಾಗಿದ್ದವರೊಬ್ಬರು ಈಗ ಇಡೀ ದಿನವನ್ನು ಗುಂಡುರಾವ್ ಅವರ ಮನೆಯಲ್ಲಿ ಕಳೆಯುತ್ತಾರೆಂದೂ ರಾವ್ ಅವರೊಡನೆ ರಾಜಕೀಯದಲ್ಲಿ ಬಹಳ ಹತ್ತಿರ ವಾಗಿರುವರೆಂದೂ ಅರಸು ತಿಳಿಸಿದರು. ಆ ಬಗ್ಗೆ ನಿಜಲಿಂಗಪ್ಪನವರಿಗೆ ಆಗಲೇ ಗೊತ್ತಿತ್ತು, ಆ ವ್ಯಕ್ತಿಗೆ ಯಾವುದೇ ವಿಶ್ವಾಸಾರ್ಹತೆಯಿಲ್ಲವೆಂದು ಅವರು ಹೇಳಿದರು. ಆಧುನಿಕ ವಸಾಹತೋತ್ತರ ಭಾರತದ ಚರಿತ್ರೆಯಲ್ಲಿನ ಜನತಾ ಪ್ರಸಂಗವು ಒಂದು ದುರಂತ ನೆನಪಾಗಿಯೇ ಉಳಿಯಿತು. ಅಂಥ ಎತ್ತರದ ನಿರೀಕ್ಷೆಗಳನ್ನಿಟ್ಟುಕೊಂಡ ಬೇರಾವುದೇ ಪಕ್ಷವೂ ರಚಿತವಾಗಿರಲಿಲ್ಲ, ಹಾಗೆಯೇ ಹಾಗೆ ಅದರಂತೆ ಎಲ್ಲ ಭರವಸೆಗಳನ್ನೂ ಹುಸಿ ಗೊಳಿಸಿದ್ದೂ ಇಲ್ಲ. ಇಂದಿರಾ ಗಾಂಧಿಯವರ ಮೇಲೇರಿಕೆ ಹಾಗೂ ೧೯೮೦ರ ಜನತಾ ಪಕ್ಷದ ವಿಘಟನೆಗಳು, ನಿರೂಪಣೆಯ ಸೌಕರ್ಯದಿಂದ, ನಿಜಲಿಂಗಪ್ಪನವರ ರಾಜಕೀಯ ಮತ್ತು ಸಾರ್ವಜನಿಕ ಬದುಕಿನ ಸಕ್ರಿಯ ಅವಧಿಯ ಕೊನೆ ಎಂದು ಪರಿಗಣಿಸಬಹುದು. ಆದರೆ, ಇದಾದ ಬಳಿಕ ನಿಜಲಿಂಗಪ್ಪನವರು ರಾಜಕೀಯದಲ್ಲಾಗಲೀ ಸಾರ್ವಜನಿಕ ಜೀವನದಲ್ಲಾಗಲೀ ಆಸಕ್ತಿ ಹೊಂದಿರಲಿಲ್ಲವೆಂದು ತಪ್ಪು ತಿಳಿಯಬಾರದು. ಮುಂದಿನ ಅಧ್ಯಾಯದಲ್ಲಿ ನಾವು ಗಮನಿಸುವಂತೆ, ಅವರ ರಾಜಕೀಯ ಮತ್ತು ಸಾರ್ವಜನಿಕ ಆಸಕ್ತಿಗಳು ಮುಂದುವರಿದುವು, ಆದರೆ ವಿಭಿನ್ನ ನೆಲೆಯಲ್ಲಿ ಮತ್ತು ಬೇರೆಯೇ ಕ್ರಿಯಾತ್ಮಕ ಸ್ವರೂಪದಲ್ಲಿ.

ಕಾಂಗ್ರೆಸ್ ಇಬ್ಭಾಗ ಮತ್ತು ಆನಂತರದ ಜನತಾ ಪ್ರಯೋಗವನ್ನು ನಿಜಲಿಂಗಪ್ಪನವರ ಪಾತ್ರದ ದೃಷ್ಟಿಯಿಂದ ಹಿಂದಿರುಗಿ ನೋಡಿದಾಗ, ನಿಜಲಿಂಗಪ್ಪನವರ ಭಿನ್ನ ಸ್ವರೂಪದ ರಾಜಕೀಯ ಹಾಗೂ ವ್ಯಕ್ತಿತ್ವಗಳ ಬಗ್ಗೆ ಬೇರೆಯಾದ ಆಕಾರವನ್ನು ರೂಪಿಸಿಕೊಳ್ಳ ಬಹುದು. ಹಾಗೆ ನೋಡಿದರೆ, ವೈಯಕ್ತಿಕ ಹಾಗೂ ಸಾರ್ವಜನಿಕ ಬದುಕಿನ ನಡುವಣ ಪಾರದರ್ಶಕತೆಯ ವ್ಯತ್ಯಾಸವು ಅಳಿಸಿಹೋದ ಆ ಕಾಲದ ಅಪರೂಪದ ನಾಯಕರಲ್ಲಿ ಅವರೊಬ್ಬರು. ಭಾರತ ರಾಜಕೀಯದ ರೋಗವೆಂದರೆ, ಪಕ್ಷಭೇದವಿಲ್ಲದೆ, ಈ ಎರಡೂ ಮುಖಗಳ ನಡುವಣ ವ್ಯತ್ಯಾಸ ಮತ್ತು ಕ್ರಮಶಃ ಸಾರ್ವಜನಿಕ ಹಿತಾಸಕ್ತಿ ಮಸುಕುಗೊಳ್ಳುತ್ತ ಹೋಗಿ ವೈಯಕ್ತಿಕ ಆಶೋತ್ತರಗಳು ಪ್ರಮುಖವಾಗುತ್ತ ಸಾಗುವುದು. ಪ್ರಾಯಶಃ ತಮ್ಮನ್ನು ಕೌಟುಂಬಿಕ ಜೀವನದಿಂದ ದೂರ ಮಾಡಿಕೊಂಡು ಕೂಡ, ದೇಶದ್ದೇ ಆಗಲೀ ರಾಜ್ಯದ್ದೇ ಆಗಲೀ, ಸಾರ್ವಜನಿಕ ಹಿತಾಸಕ್ತಿಗಳಿಗೆ ಬದ್ಧರಾದವರು ಅವರು. ರಾಜ್ಯ ಮತ್ತು ರಾಷ್ಟ್ರಗಳೆರಡೂ ಪರಸ್ಪರಾವಲಂಬಿಗಳು, ಒಂದರ ಹಿತಕ್ಕಾಗಿ ಮತ್ತೊಂದನ್ನು ಅವಗಣಿಸಲಾಗದು ಎಂಬುದನ್ನವರು ಅರಿತಿದ್ದರು. ಆದರೆ ಅಂತಿಮ ವಿಶ್ಲೇಷಣೆಯಲ್ಲಿ, ರಾಷ್ಟ್ರಹಿತವು ಮಿಕ್ಕೆಲ್ಲವನ್ನೂ ಹಿಂದಿರಿಸಬೇಕೆಂದು ಅವರು ಒಪ್ಪುವವರು. ಆದರೆ ಸಾಮಾನ್ಯ ವಾಗಿ, ಉದಾರ ಸಂಸದೀಯ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯ ಚೌಕಟ್ಟಿನಲ್ಲಿ, ಇವೆರಡರ ನಡುವಣ ಸಮತೋಲನವನ್ನವರು ಬಯಸಿದರು. ಎಲ್ಲಕ್ಕಿಂತ ಮಿಗಿಲಾಗಿ ಅವರು ನೈತಿಕ ನೆಲಗಟ್ಟಿನ ತಾತ್ವಿಕತೆಯ ರಾಜಕಾರಣಕ್ಕೆ ಬದ್ಧರಾಗಿರಬೇಕೆಂದು ನಿರೀಕ್ಷಿಸಿ ದವರು. ಈ ಅರ್ಥದಲ್ಲಿ, ಅವರು ಅಳವಡಿಸಿಕೊಂಡದ್ದು ನಿಜವಾದ ಗಾಂಧೀಯ ರಾಜಕೀಯ ಸಂಸ್ಕೃತಿಯನ್ನು. ಕಾಂಗ್ರೆಸ್ ಇಬ್ಭಾಗ ಎಂಬ ಸಂಕೀರ್ಣ ಪ್ರಕ್ರಿಯೆಯಲ್ಲಿ ಅವರು ವಹಿಸಿದ ಪಾತ್ರವನ್ನು, ತತ್ವಬದ್ಧ ರಾಜಕಾರಣವನ್ನು, ಅಂದರೆ ಉದಾರ ಪ್ರಜಾ ಸತ್ತಾತ್ಮಕ ಮೌಲ್ಯಗಳ ಬಗೆಗಿನ ಬದ್ಧತೆಯನ್ನು, ಹಾಗೂ ಸತ್ಯ ಮತ್ತು ಮಾನವೀಯತೆಗಳನ್ನು ನಾಶಪಡಿಸಲು ಹೊರಟ ಶಕ್ತಿಗಳ ವಿರುದ್ಧ ಹೋರಾಡಿ ಅವುಗಳನ್ನೊಳಗೊಂಡ ರಾಜಕಾರಣವನ್ನು ಎತ್ತಿಹಿಡಿಯುವ ಪ್ರಯತ್ನ ಎಂದು ಕರೆಯಬಹುದು. ಗಾಂಧಿಯ ಹೆಜ್ಜೆಯಲ್ಲಿ ನಡೆಯುವ ತಮಗೆ ಇಷ್ಟವಾದ ಬಗೆಯ ರಾಜಕಾರಣಕ್ಕೆ ಅವರು ಇಂದಿರಾ ಗಾಂಧಿಯವರನ್ನು ಪ್ರಮುಖ ವಿರೋಧಿ ಎಂದು ಭಾವಿಸಿದರು. ರಾಜಕೀಯವಾಗಿ ಆಕೆಯನ್ನು ವಿರೋಧಿಸಿದವರಲ್ಲೆಲ್ಲ ನಿರಂತರವಾಗಿ ಒಂದೇ ಸಮನೆ ಅತ್ಯಂತ ತತ್ವಬದ್ಧ ರಾಗಿದ್ದವರೆಂದರೆ ನಿಜಲಿಂಗಪ್ಪನವರೇ ಎಂದು ನಿಸ್ಸಂಶಯವಾಗಿ ಹೇಳಬಹುದು. ಇಂದಿರಾ ಗಾಂಧಿಯವರೊಡನೆ ರಾಜೀ ಮಾಡಿಕೊಂಡು ಅವರು ಕಾಂಗ್ರೆಸ್ ಐಕಮತ್ಯ ಅಥವಾ ಸ್ವಹಿತಸಾಧನೆಗೆ ಪ್ರಯತ್ನಿಸಬಹುದಾಗಿತ್ತು. ಅದರೆ ಅದು ಅವರ ಸ್ವಭಾವಕ್ಕೆ ವಿರುದ್ಧವಾದುದಾಗಿತ್ತು. ಜನತಾ ಪಕ್ಷದ ರಚನೆಗೆ ಮತ್ತು ಆ ಬಳಿಕ ಅದಕ್ಕೆ ನೀಡಿದ

ಬೆಂಬಲ ಇವುಗಳು ತಾವು ಗಾಂಧಿ ಮಠದಲ್ಲಿ ಕಲಿತ ಅದೇ ತತ್ವಬದ್ಧ ರಾಜಕೀಯ ಮೌಲ್ಯಗಳಿಂದ ಪ್ರೇರಿತವಾದವು. ಆ ನಂತರ ಅವರು ಜನತಾ ಪಕ್ಷದ ಸಾಂಸ್ಥಿಕ ರಾಜಕಾರಣ ದಿಂದ ದೂರವಾದದ್ದೂ ಇದೇ ಮೌಲ್ಯ ಹಾಗೂ ತತ್ವಗಳ ಕಾರಣದಿಂದಲೇ. ತತ್ವ ಹೀನತೆಯೇ ಮುಖ್ಯ ಗುಣವಾಗುಳ್ಳ ಪಾತ್ರಧಾರಿಗಳಿದ್ದ ರಾಜಕೀಯದಲ್ಲಿ ಅಂಥ ಮಾನಸಿಕ ಚೌಕಟ್ಟಿನ ವ್ಯಕ್ತಿಯು ಹೇಗೆ ಉಳಿದು ಬಂದರು ಎಂಬುದು, ನಿಜಲಿಂಗಪ್ಪ ನವರನ್ನೂ ಒಳಗೊಂಡಂತೆ, ಎಲ್ಲರೂ ಆಲೋಚಿಸುವಂತೆ ಮಾಡುವ ವಿಷಯ. ಸ್ವಾತಂತ್ರ್ಯಾ ನಂತರದ ಭಾರತದ ಗಾಂಧೀವಿರೋಧೀ ರಾಜಕೀಯ ಕಗ್ಗಾಡಿನಲ್ಲಿ ಅವರು ಉಳಿದು ಕೊಂಡು ಬಂದದ್ದು ವೈಯಕ್ತಿಕವಾಗಿ ಭಾರಿ ಬೆಲೆಯನ್ನು ತೆರುವ ಮೂಲಕ. ಆದರೆ ಅವರು ಸ್ವಸಂತೋಷದಿಂದ ಆ ಬೆಲೆಯನ್ನು ತೆತ್ತರು, ನೀತಿರಹಿತವೂ ಅನೀತಿಕರವೂ ಅವಕಾಶವಾದಿಯೂ ಆದ ಅಧಿಕಾರ ರಾಜಕೀಯದ ಜಗತ್ತಿನಲ್ಲಿ ಹೇಗೆ ನೈತಿಕತೆಯನ್ನು ಉಳಿಸಿಕೊಳ್ಳಬಹುದು ಎಂಬುದಕ್ಕೆ ಅವರೊಬ್ಬರು ನಿದರ್ಶನವೆನಿಸಿದರು. ಅಧಿಕಾರ ಮತ್ತು ಸ್ಥಾನಗಳ ಆಮಿಷಕ್ಕೆ ಒಳಗಾಗಲು ನಿರಾಕರಿಸುವವರಿಗೆ ಅವರೊಬ್ಬ ಭರವಸೆಯ ಕಿರಣ. ಅಂತಹವರ ಸಂಖ್ಯೆ ಕಡಿಮೆಯಿರಬಹುದು, ಬರಬರುತ್ತ ಆ ಸಂಖ್ಯೆಯೂ ಕ್ಷೀಣಿಸುತ್ತಿರಬಹುದು, ಆದರೆ ನಿಜಲಿಂಗಪ್ಪನವರ ಬದುಕು ಅಂತಹವರು ಸದಾ ಕಾಲವೂ ಇದ್ದೇ ಇರುತ್ತಾರೆ ಎಂಬುದಕ್ಕೆ ಸಾಕ್ಷಿಯಾಗುತ್ತದೆ. ಈ ಮಾತು ನಿಜಲಿಂಗಪ್ಪನವರನ್ನು ವೈಭವೀಕರಿಸಲು ಹೇಳಿದ್ದಲ್ಲ, ಈಗಲೂ ಆದರ್ಶವು ರಾಜಕಾರಣದಲ್ಲಿ ಒಂದು ಕ್ರಿಯಾ ಮಾರ್ಗವಾಗಿದೆ ಎಂಬುದನ್ನು ಸ್ಪಷ್ಟಪಡಿಸಲು. ಆದರೆ ಆದರ್ಶ ಮತ್ತು ಭ್ರಮಾತ್ಮಕ ವಾಸ್ತವತೆ ಇವುಗಳ ನಡುವೆ ಗೊಂದಲಗೊಳ್ಳುವುದು ಸರಿಯಲ್ಲ. ವಾಸ್ತವದಲ್ಲಿ, ತಮ್ಮ ಗುರು ಗಾಂಧಿಯವರಂತೆಯೇ ನಿಜಲಿಂಗಪ್ಪನವರೂ ಮಹಾ ವಾಸ್ತವವಾದಿಯೇ, ಸಂಘಟನೆಯ ಸೂಕ್ಷ್ಮ ವಿವರಗಳಿಗೂ ಗಮನವೀಯುವವರೇ. ರಾಜಕೀಯ ನೈತಿಕತೆಗೆ ರಾಜಕೀಯ ಕೌಶಲವನ್ನು ಅನುಷಂಗಿಕವಾಗಿಸುವ ಮೂಲಕ ಗಾಂಧೀಜಿ ನೈತಿಕತೆ ಮತ್ತು ಕೌಶಲಗಳ ಆವಶ್ಯಕತೆಯ ಚಿರಸಂಘರ್ಷವನ್ನು ಪರಿಹರಿಸಿದರು. ಇನ್ನೂ ಮುಖ್ಯ ವಾದುದೆಂದರೆ, ಅವರು ಇದನ್ನು ಸಾಧಿಸಿದ್ದು ಮೂಲತತ್ವಗಳು ಮತ್ತು ಉನ್ನತ ತತ್ವಗಳು ಇವುಗಳ ನಡುವೆ ಖಚಿತ ಗೆರೆಯೊಂದನ್ನು ಎಳೆಯುವ ಮೂಲಕ ಎಂಬುದು. ಇದರಿಂದಾಗಿ ಅವರು ಮೂಲ ತತ್ವಗಳಿಗೆ ಎಂದೆಂದೂ ಅವಿಚ್ಛಿನ್ನ ಬದ್ಧತೆಯನ್ನು ಮತ್ತು ಉನ್ನತ ತತ್ವಗಳ ಬಗ್ಗೆ ಕೊಡುಕೊಳುವಿಕೆಯ ಮಾರ್ಗವನ್ನು ಹೊಂದಲು ಸಾಧ್ಯವಾಯಿತು. ಸರಳವಾಗಿ ಅಲ್ಲದಿದ್ದರೂ, ನಿಜಲಿಂಗಪ್ಪನವರು ತಮ್ಮದೇ ಆದ ರೀತಿಯಲ್ಲಿ ಈ ಗಾಂಧೀಯ ಮಾದರಿಯನ್ನು ಅನುಸರಿಸಿಕೊಂಡು ಬಂದರು.

*

೭

ನವ ಮನ್ವಂತರ: ಆತ್ಮಸಾಕ್ಷಿ ಹಾಗೂ ಪ್ರಜ್ಞಾವಂತ ರಾಜಕಾರಣ

ತಾವು ಸುಮಾರು ಯಾವ ಕಾಲದಲ್ಲಿ ರಾಜಕೀಯದಿಂದ ನಿವೃತ್ತಿ ಹೊಂದಿದಿರೆಂದು ಇತ್ತೀಚೆಗೆ ಈ ಜೀವನಚರಿತ್ರಕಾರನು ನಿಜಲಿಂಗಪ್ಪನವರನ್ನು ಕೇಳಿದಾಗ, ಈ ಹಿರೀಕರು ಹೇಳಿದ್ದು, "ನಾನು ಸಕ್ರಿಯ ರಾಜಕಾರಣದಿಂದ ನಿವೃತ್ತನಾದೆನೆಂದು ಹೇಳಿದವರು ಯಾರು? ಅದು ನನ್ನ ಜೀವನದಿಂದ ಬೇರ್ಪಡಿಸಲಾಗದ ಒಂದು ಭಾಗವೇ ಆಗಿದೆ. ಅದರಿಂದ ನಾನು ನಿವೃತ್ತನಾಗುವುದು ಹೇಗೆ?" ಈ ಆವೇಶಪೂರಿತ ಉತ್ತರವು ಲೇಖಕನನ್ನು ಆಲೋಚನೆಗೆ ತೊಡಗಿಸಿ, ಈ ಮಾತುಗಳ ಹಿಂದಿನ ಅರ್ಥದ ಬಗ್ಗೆ ಚಿಂತಿಸುವಂತಾಯಿತು. ಅದರ ಫಲವೇ ಈ ಅಧ್ಯಾಯದ ಶೀರ್ಷಿಕೆ. ಸಾಮಾನ್ಯವಾಗಿ ನಾವು ಸಕ್ರಿಯ ರಾಜಕಾರಣ ಮತ್ತು ಕ್ರಿಯಾರಹಿತ ರಾಜಕಾರಣಗಳ ಮಧ್ಯೆ ವ್ಯತ್ಯಾಸವನ್ನು ಮಾಡುತ್ತೇವೆ. ಇದರ ಅರ್ಥವೆಂದರೆ ಪ್ರಸ್ತುತ ರಾಜಕಾರಣದಲ್ಲಿ ನೇರವಾಗಿ ತೊಡಗಿರುವುದು ಹಾಗೂ ಕೇವಲ ನೋಡುಗನಾಗಿ ರಾಜಕಾರಣದ ಆಗುಹೋಗುಗಳನ್ನು ಗಮನಿಸುವುದು ಎಂಬುದು. ಕುಗ್ಗುತ್ತಿರುವ ಆರೋಗ್ಯದ ನಡುವೆಯೂ ಈ ದೇಶದ ಉದ್ದಗಲಕ್ಕೂ ಓಡಾಡುತ್ತ ಭ್ರಷ್ಟಾಚಾರದಂತಹ ರಾಜಕೀಯ ರಾಕ್ಷಸನ ವಿರುದ್ಧ ಸಮಾನಮನಸ್ಕರನ್ನು ಒಗ್ಗೂಡಿಸುವ ಪ್ರಯತ್ನದಲ್ಲಿ ಮುಂದುವರಿಯುತ್ತಿರುವ ತೊಂಬತ್ತಾರರ ಈ ವಯಸ್ಸಿನಲ್ಲಿ ಅವರನ್ನು ನೋಡಿದವರಾರೂ, ಅವರು ಸಕ್ರಿಯ ರಾಜಕಾರಣದಿಂದ ದೂರ ಸರಿದಿದ್ದಾ

ರೆಂದು ಭಾವಿಸಲಾರರು. ಆಗಿರುವ ಬದಲಾವಣೆಯೆಂದರೆ ಅವರ ಸಕ್ರಿಯ ರಾಜಕಾರಣದಲ್ಲಿನ ಕೇಂದ್ರಸ್ಥಾನ ಮತ್ತು ಅದರ ಗುರಿಗಳು. ಸ್ಥೂಲವಾಗಿ ಹೇಳಬೇಕಾದರೆ, ೧೯೭೦ ರ ದಶಕದ ಕೊನೆಯಲ್ಲಿ ಆದ ಹಳೆಯ ಜನತಾ ಪರಿವಾರದ ವಿಘಟನೆ ಮತ್ತು ಅದರ ಮೃತ್ಯುವಿನ ಬಳಿಕ, ಅವರ ರಾಜಕಾರಣದ ಕೇಂದ್ರ ಬಿಂದುವು ಸರ್ಕಾರ ಮತ್ತು ರಾಜಕೀಯ ಪಕ್ಷಗಳಂತಹ ಸಂಸ್ಥೆಗಳ ಕಡೆಯಿಂದ ಅವುಗಳಿಗೆ ಬಲಿಯಾದ ದುರ್ದೈವಿಗಳ ಕಡೆಗೆ ತಿರುಗಿದೆ, ತಮ್ಮ ಅನುದಿನದ ಬದುಕಿಗಾಗಿ ಹೆಣಗುತ್ತಿರುವ ಜನಸಾಮಾನ್ಯರ ಕಡೆಗೆ ತಿರುಗಿದೆ. ಈಗಿನ ಗುರಿಗಳು ಸರ್ಕಾರದ ಸಾಂಸ್ಥಿಕ ಅಧಿಕಾರದ ಗಳಿಕೆ ಮತ್ತು ಬಳಕೆಗಳಾಗಿರದೆ, ನಮ್ಮ ರಾಜಕೀಯ ಜೀವನವನ್ನು ಮುತ್ತಿರುವ ಅನೈತಿಕತೆಯ ವಿರುದ್ಧ ಜನರನ್ನು ಎಚ್ಚರಿಸಿ ಅವರಲ್ಲಿ ರಾಜಕೀಯ ಪ್ರಜ್ಞೆಯನ್ನು ಮೂಡಿಸುವ ಮತ್ತು ಆ ಮೂಲಕ ಸರ್ಕಾರದ ಅಧಿಕಾರವನ್ನು ನಿಯಂತ್ರಿಸುತ್ತಿರುವ ಆಳುವವರನ್ನು ಪ್ರಶ್ನಿಸುವ ಪರಿಮಿತ ವಲಯದ ಕಡೆಗೆ ಕೇಂದ್ರೀಕೃತವಾಗಿದೆ. ರಾಜಕೀಯ ಸ್ಥಾನಗಳಲ್ಲಿ ಒಳಗಿನವರಾಗಿದ್ದ ನಿಜಲಿಂಗಪ್ಪನವರು ಈಗ ಅದರ ವಿರುದ್ಧ ಹೋರಾಡುವುದಕ್ಕೆ, ಅಂದರೆ ಜನರನ್ನು ಆ ದಿಸೆಯಲ್ಲಿ ಒಗ್ಗೂಡಿಸುವುದಕ್ಕೆ, ಅತ್ಯಂತ ಅರ್ಹರಾದವರಾಗಿದ್ದಾರೆ. ಒಟ್ಟಾರೆ, ೧೯೭೦ ರ ದಶಕದ ಕೊನೆಯ ಹೊತ್ತಿಗೆ, ನಿಜಲಿಂಗಪ್ಪನವರು ಆತ್ಮಸಾಕ್ಷಿ ಹಾಗೂ ಪ್ರಜ್ಞಾವಂತ ರಾಜಕಾರಣವನ್ನು ಅನುಸರಿಸಲು ತೊಡಗಿ ಈಗಲೂ ಅದರಲ್ಲಿ ಮುಂದುವರಿಯುತ್ತಿದ್ದಾರೆ. ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ಆಮಿಷಗಳನ್ನು ಮೀರಿದ ಮತ್ತು ಗಾಂಧೀಯ ತತ್ವಗಳಿಗೆ ಬದ್ಧವಾದ ಕೆಲವೇ ನಾಯಕರುಗಳಲ್ಲಿ ಒಬ್ಬರಾಗಿ ಉಳಿದಿರುವ ಇವರಿಗೆ ಈ ಬದಲಾವಣೆ ಸೂಕ್ತವಾದುದೇ ಆಗಿದೆ. ಆದರೆ ಈ ಕೇಂದ್ರಸ್ಥಾನ ಪಲ್ಲಟವು ಮೂಲಭೂತ ನೈತಿಕ ಹಾಗೂ ಸೈದ್ಧಾಂತಿಕ ಬದ್ಧತೆಯಿಂದ ದೂರಸರಿದ ಪಲ್ಲಟ ಎಂದು ತಪ್ಪಾಗಿ ಭಾವಿಸಬಾರದು. ನಿದರ್ಶನಕ್ಕೆ, ತಮ್ಮ ಮುಂಚಿನ ರಾಜಕೀಯ ಜೀವನದಲ್ಲಿಯೂ ಆತ್ಮಸಾಕ್ಷಿ ಹಾಗೂ ಪ್ರಜ್ಞಾವಂತ ರಾಜಕಾರಣಕ್ಕೆ ಹೊರತಾಗಿದ್ದರೆಂದು ಹೇಳಲಾಗುವುದಿಲ್ಲ. ಅದರ ಅರ್ಥವೆಂದರೆ, ಅವರ ಬದ್ಧತೆಯ ಸಾಂಸ್ಥಿಕ ಚೌಕಟ್ಟು, ಅದರ ಮಾರ್ಗವು ಭಿನ್ನವಾದುದಾಗಿತ್ತು, ಎಂದಷ್ಟೇ ಹೊರತು, ಅದರ ಸಾರಸತ್ವವಲ್ಲ. ಅಂದರೆ, ಈ ಎರಡೂ ರಾಜಕೀಯ ಚಟುವಟಿಕೆಯ ಮಾರ್ಗಗಳು ಸಂಘರ್ಷವನ್ನು ಸೂಚಿಸದೆ ಅದರ ಮುಂದುವರಿಕೆಯನ್ನೇ ಸೂಚಿಸುತ್ತವೆ.

ಈ ಚಟುವಟಿಕೆಯ ಒಂದು ಅಭಿವ್ಯಕ್ತಿರೂಪವೆಂದರೆ ದೇಶದ ಪುನಾರಚನೆ ಮತ್ತು ದೇಶದ ಅಭಿವೃದ್ಧಿಗಳ ಬಗ್ಗೆ ರಾಷ್ಟ್ರ ಹಂತದಲ್ಲಿ ನಿರತವಾಗಿರುವ ಸಂಸ್ಥೆಗಳ ಜೊತೆ ನಿಜಲಿಂಗಪ್ಪನವರ ಸಂಪರ್ಕ. ದೆಹಲಿಯ ಸರ್ದಾರ ವಲ್ಲಭಭಾಯ್ ಸ್ಮಾರಕ ಪ್ರತಿಷ್ಠಾನ, ಲಾಲ್ ಬಹಾದೂರ್ ಶಾಸ್ತ್ರಿಯವರ ರಾಷ್ಟ್ರೀಯ ಸ್ಮಾರಕ ಪ್ರತಿಷ್ಠಾನ, ಸ್ವಪ್ನ

ಹಾಗೂ ವಾಸ್ತವಗಳ ಸಂಸ್ಥೆ, ಹರಿದ್ವಾರದ ಸುಚೇತ ಸ್ಮಾರಕ ನಿಧಿ, ಕರ್ನಾಟಕ ಧರ್ಮ ಶಾಲಾ ಸಮಾಜ, ಶ್ರೀನಿವಾಸ ಮಲ್ಯ ಸ್ಮಾರಕ ಸಮಾಜ, ಭಾರತೀಯ ವಿದ್ಯಾ ಭವನ ಮತ್ತು ಇತರ ಅಸಂಖ್ಯವಾದವು. ಹಾಗೆ ನೋಡಿದರೆ, ಭಾರತೀಯ ವಿದ್ಯಾ ಭವನದ ಬೆಂಗಳೂರು ಕೇಂದ್ರದ ಸ್ಥಾಪನೆಗೆ ಅವರೇ ಕಾರಣರು. ೧೯೫೫ನೇ ಡಿಸೆಂಬರ್ ೧೦ ರಂದು ನಿಜಲಿಂಗಪ್ಪನವರ ೯೪ನೇ ಹುಟ್ಟುಹಬ್ಬದಂದು ಭವನವು ಹೃತ್ಪೂರ್ವಕ ಅಭಿನಂದನೆಗಳನ್ನು ಕೋರಿತು. ವಿದ್ಯಾಭವನದ ಬೆಂಗಳೂರು ಕೇಂದ್ರದ ೩೦ ನೇ ವಾರ್ಷಿಕೋತ್ಸವವೂ ಆಗಿದ್ದ ಈ ಸಂದರ್ಭದಲ್ಲಿ ನಿಜಲಿಂಗಪ್ಪನವರು ಜಾಗತಿಕ ಮಟ್ಟದಲ್ಲಿ ಭಾರತೀಯ ಸಂಸ್ಕೃತಿಯನ್ನು ಜನಪ್ರಿಯಗೊಳಿಸುತ್ತಿರುವ ಭವನಕ್ಕೆ ತಮ್ಮ ಗೌರವವನ್ನು ಸಮರ್ಪಿಸಿದರು. ನಿಜಲಿಂಗಪ್ಪನವರ ಸಕ್ರಿಯ ಬೆಂಬಲ ಹಾಗೂ ಪ್ರೋತ್ಸಾಹವನ್ನು ಪಡೆದ ಮತ್ತೊಂದು ಸಂಸ್ಥೆಯೆಂದರೆ, ಕರ್ನಾಟಕದ ಹೊಳಲ್ಕೆರೆ ತಾಲ್ಲೂಕು ಮಲ್ಲಾಡಿಹಳ್ಳಿಯಲ್ಲಿ ಅಪೂರ್ವ ಸಂತರಾದ ರಾಘವೇಂದ್ರಸ್ವಾಮಿಗಳು ಸ್ಥಾಪಿಸಿದ ಅನಾಥ ಸೇವಾಶ್ರಮ. ಸರ್ಕಾರೇತರ ಸಂಸ್ಥೆಯೊಂದು ಸಮುದಾಯದ ಸರ್ವಾಂಗೀಣ – ಭೌತಿಕ, ಮಾನಸಿಕ, ಆಧ್ಯಾತ್ಮಿಕ ಮತ್ತು ನೈತಿಕ–ಪ್ರಗತಿಯನ್ನು ಸಾಧಿಸಬಹುದೆಂಬುದಕ್ಕೆ ಇದೊಂದು ಉಜ್ವಲ ಉದಾಹರಣೆಯಾಗಿದೆ. ಎಂಬತ್ತರ ದಶಕದಲ್ಲಿ ನಿಜಲಿಂಗಪ್ಪನವರು ಸಾರ್ವಜನಿಕ ಜೀವನದ ಹಸನಿಗೆ ತಮ್ಮ ಕೊಡುಗೆಯ ಭಾಗವಾಗಿ ಆಸಕ್ತಿ ತಾಳಿ ಬೆಳವಣಿಗೆಗೆ ಪ್ರೋತ್ಸಾಹಿಸಿದ ಸಂಸ್ಥೆಗಳಲ್ಲಿ ಇವು ಕೆಲವು. ಈ ಸಾರ್ವಜನಿಕ ಸೇವಾ ಸಂಸ್ಥೆಗಳಲ್ಲದೆ, ತಮ್ಮ ಸಲಹೆ ಮಾರ್ಗದರ್ಶನಗಳಿಗಾಗಿ ಸುತ್ತುವರಿಯುತ್ತಿದ್ದ ಜನರ ಜೊತೆ ಅವರು ನಿರಂತರ ಸಂಪರ್ಕವನ್ನಿರಿಸಿಕೊಂಡಿದ್ದರು. ಆನರ ಸಮಸ್ಯೆಗಳ ನಿವಾರಣೆಗೆ ಅವರು ಅಧಿಕಾರಸ್ಥರ ಜೊತೆ ವ್ಯವಹರಿಸಿದರು, ಈ ರೀತಿಯಲ್ಲಿ ಜನಸಾಮಾನ್ಯರ ಹಿತಕ್ಕೆ ತಮ್ಮ ಬದ್ಧತೆಯನ್ನು ಪ್ರದರ್ಶಿಸಿದರು. ಭಾರತದ ಹಳ್ಳಿಗಳ ಬದುಕಿನ ಬಗ್ಗೆ ಅಪಾರ ಆಸಕ್ತಿ ತಾಳಿದ್ದ ಅವರು ಅದಕ್ಕನುಗುಣವಾಗಿ, ತನ್ನ ಹಿಂದುಳಿದ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಯ ಸಾಧನೆಗೆಂದು ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಲ್ಲಿ ೧೯೮೭ ರಲ್ಲಿ ಸ್ಥಾಪಿತವಾಗಿದ್ದ ಬನವಾಸಿ ವಲಯ ಅಭಿವೃದ್ಧಿ ಸಮಿತಿಗೆ ಸಾಕಷ್ಟು ಪ್ರಮಾಣದ ನೆರವು ನೀಡಿದರು. ವಿಶೇಷವಾಗಿ, ಗ್ರಾಮೀಣಾಭಿವೃದ್ಧಿ ತರಬೇತಿ ಸಂಸ್ಥೆ ಯೊಂದನ್ನು ಸ್ಥಾಪಿಸಲು ಈ ಸಂಸ್ಥೆಗೆ ನೆರವು ನೀಡಿದರು, ಅದನ್ನು ಪೋಷಿಸುತ್ತಿರುವುದು ಉತ್ತರ ಕರ್ನಾಟಕ ಭಾಗದ ಪ್ರಮುಖ ವಿದ್ಯಾ ಸಂಸ್ಥೆಯಾದ ಕೆಎಲ್ಇ ಸೊಸೈಟಿ, ಈ ಯೋಜನೆಯನ್ನವರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನೆರವಿನೊಡನೆ ಕೈಗೆತ್ತಿ ಕೊಂಡರು. ೧೯೮೦ ರ ದಶಕ ಪೂರ್ತಿ ವೈವಿಧ್ಯಮಯ ಜನಸಮುದಾಯಗಳೊಡನೆ ನೇರ ಸಂಪರ್ಕ ಹೊಂದುವ ಈ ಬಗೆಯ ಚಟುವಟಿಕೆಯನ್ನು ನಿಜಲಿಂಗಪ್ಪನವರು

ಮುಂದುವರಿಸಿದರು. ದೇಶದ ಪರಿಸ್ಥಿತಿಯ ಬಗ್ಗೆ ಅರಿವು ಮೂಡಿಸಿ, ತಮ್ಮ ಕಲ್ಪನೆಯ ನೈತಿಕ ಹಾಗೂ ತತ್ವಬದ್ಧ ರಾಜಕಾರಣವನ್ನು ವಿವರಿಸಿ, ಜನರಿಗೆ ಆದರ್ಶ ಮತ್ತು ಮೌಲ್ಯಗಳನ್ನು ಕುರಿತು ಹೇಳಿ ಅಂತಹ ರಾಜಕಾರಣಕ್ಕಾಗಿ ಕ್ರಿಯಾಶೀಲರಾಗಲು ಜನರನ್ನು ಉದ್ದೀಪಿಸಲು ಇಂಥ ಸಂದರ್ಭಗಳನ್ನು ಬಳಸಿಕೊಳ್ಳುತ್ತಿದ್ದರು. ಈ ಅಧ್ಯಾಯದಲ್ಲಿ, ಅಂಥ ಪ್ರತಿ ಸಂದರ್ಭವನ್ನೂ ಕುರಿತು ವಿವರಣೆ ನೀಡುವ ಉದ್ದೇಶವಿಲ್ಲ, ಅದರ ಬದಲು, ಈ ಹಿರಿಯ ಮುತ್ಸದ್ದಿಯು ತೊಡಗಿಕೊಂಡ ಆತ್ಮಸಾಕ್ಷಿ ಮತ್ತು ಪ್ರಜ್ಞಾವಂತ ನವರಾಜಕಾರಣದ ಸ್ವರೂಪವನ್ನು ವಿಶದಪಡಿಸಲು ಕೆಲವು ನಿದರ್ಶಕ ಸನ್ನಿವೇಶಗಳನ್ನಷ್ಟೇ ದಾಖಲಿಸುವುದು ನಮ್ಮ ಅಪೇಕ್ಷೆ. ೧೯೮೩ ನೇ ಮಾರ್ಚ್ ೮ ರಂದು ಗುಳೇದಗುಡ್ಡದಲ್ಲಿ ಜನತಾ ಪಕ್ಷದ ಕಚೇರಿಯ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡಲು ನಿಜಲಿಂಗಪ್ಪನವರನ್ನು ಕೇಳಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಮಾತ ನಾಡುತ್ತ ಅವರು, ಆರೋಗ್ಯಕರ ರಾಜಕಾರಣವನ್ನು ಬಯಸುವವರೆಲ್ಲ ಅನುಸರಿಸಬೇಕಾದ ಒಂದು ಸಲಹೆಯನ್ನು ನೀಡಿದರು. ರಾಜಕಾರಣಿಗಳು ವಿಧಿವತ್ತಾದ ನಿವೃತ್ತಿ ವಯಸ್ಸು ಇಲ್ಲದ ಕಾರಣ, ಅದು ಸರಿಯಾದುದೇ, ತಮ್ಮ ಉಪಯುಕ್ತತೆ ಕುಂಠಿತಗೊಂಡಿದ್ದರೂ ರಾಜಕಾರಣದಲ್ಲಿ ಮುಂದು ವರಿಯಲು ಅವರಿಗೆ ಬಯಕೆಯಿರುತ್ತದೆ, ಇದರಿಂದ ಯೋಗ್ಯ ಕಿರಿಯರು ಮುಂದೆ ಬರಲು ಅಡ್ಡಿಯಾಗುತ್ತದೆ. ಅದಕ್ಕೂ ಹೆಚ್ಚಿನ ಸ್ವಾರಸ್ಯವೆಂದರೆ, ಸಕ್ರಿಯ ರಾಜಕಾರಣವನ್ನು ಸ್ವಯಮೇಚ್ಛೆಯಿಂದ ಬಿಟ್ಟುಕೊಟ್ಟು, ಕಿರಿಯ ರಾಜಕಾರಣಿಗಳಿಗೆ ಮಾದರಿ ಹಾಕಿಕೊಡುವ ಹೊಸ ಪಾತ್ರವನ್ನು ವಹಿಸಬೇಕು ಎಂದು ನಿಜಲಿಂಗಪ್ಪನವರು ಬುದ್ಧಿವಾದ ಹೇಳಿದರು. ನಿಜಲಿಂಗಪ್ಪನವರ ಮನಸ್ಸಿನಲ್ಲಿ ಈ ವಿಷಯ ಇದೆಯೋ ಇಲ್ಲವೋ, ಆದರೆ ಕಾಕತಾಳಿಯ ವಾಗಿ ಈ ಸಲಹೆಯು ಪ್ರಾಚೀನ ಭಾರತೀಯ ಪರಿಕಲ್ಪನೆಯಾದ ಆಶ್ರಮಗಳಿಗೆ ಸಂವಾದಿಯಾಗಿದೆ. ಪ್ರತಿ ಆಶ್ರಮಕ್ಕೂ ತನ್ನದೇ ಆದ ಕರ್ತವ್ಯಗಳಿವೆ, ಅವೆಲ್ಲವುಗಳನ್ನೂ ವ್ಯಕ್ತಿಯು ಸಮಾನ ಬದ್ಧತೆಯಿಂದ ನೆರವೇರಿಸಬೇಕು. ಜಾತೀಯತೆಯನ್ನು ಖಂಡಿಸಲೂ ಈ ಅವಕಾಶವನ್ನವರು ಬಳಸಿಕೊಂಡರು, ರಾಜಕಾರಣದಲ್ಲಿ ಜಾತ್ಯತೀತತೆಯನ್ನು ಅನುಸರಿಸಲು ಕರೆ ಕೊಟ್ಟರು. ಮುಂದುವರಿದು, ತನ್ನ ಎಲ್ಲ ಪ್ರಮುಖ ನೀರಾವರಿ ಯೋಜನೆಗಳನ್ನು ಪೂರೈಸಲು ಅವರು ರಾಜ್ಯ ಸರ್ಕಾರಕ್ಕೆ ತಾಕೀತು ಮಾಡಿದರು. ಇಲ್ಲದಿದ್ದರೆ, ಜನರು ಸರ್ಕಾರವನ್ನು ಕಿತ್ತೆಸೆದಾರು ಎಂದು ಎಚ್ಚರಿಸಿದರು. ಒಂದು ವರ್ಷದ ಬಳಿಕ, ೧೯೮೮೪ರ ಮಾರ್ಚ್ ೮ ರಂದು ಅವರು ಪಟ್ನಾದ ಜಯಪ್ರಕಾಶ ನಗರದಲ್ಲಿ ನಡೆದ ಜನತಾ ಪಕ್ಷದ ಎರಡನೆಯ ವಾರ್ಷಿಕ ಅಧಿವೇಶನದಲ್ಲಿ ಪಾಲ್ಗೊಂಡಿ ದ್ದರು. ಆ ಸಂದರ್ಭದಲ್ಲಿ ಮಾತನಾಡುತ್ತ, ಅಗ ಅಧಿಕಾರದಲ್ಲಿದ್ದ ಕಾಂಗ್ರೆಸ್ (ಐ) ಸರ್ಕಾರದ ನಿರಂಕುಶತೆಯನ್ನು ಖಂಡಿಸಿದರು, ವಿರೋಧ ಪಕ್ಷಗಳೆಲ್ಲ ಸಮಾನ ಕಾರ್ಯ ಕ್ರಮಗಳಡಿಯಲ್ಲಿ ಒಂದಾಗಿ ಸರ್ಕಾರವನ್ನು ಕಿತ್ತೊಗೆಯಲು ಕರೆ ನೀಡಿದರು. ಪಕ್ಷದ

ಅಧ್ಯಕ್ಷ ಚಂದ್ರಶೇಖರ್ ಅವರು ಪ್ರಸ್ತಾಪಿಸಿದ ದೇಶದ ಹಿತಸಾಧನೆ ಮತ್ತು ಸಮಗ್ರತೆಯ ರಕ್ಷಣೆಗಾಗಿ ವಿರೋಧ ಪಕ್ಷಗಳ ಐಕಮತ್ಯವನ್ನು ಅವರು ಬೆಂಬಲಿಸಿದರು. ಕೇಂದ್ರದಲ್ಲಿ ಅಧಿಕಾರ ನಿರ್ವಹಿಸಲು ವಿಫಲವಾದ ಜನತಾ ಪಕ್ಷದ ಬಗ್ಗೆ ಪ್ರಸ್ತಾಪಿಸಿದ ಅವರು, ಅದಕ್ಕೆ ಕಾರಣ ನಾಯಕರ ಸ್ವಹಿತಾಸಕ್ತಿ ಎಂದು ವಿವರಿಸಿದರು. ೧೯೮೮ರ ಮಾರ್ಚ್ ೨೫ ರಂದು ನಿಜಲಿಂಗಪ್ಪನವರು ಇಳಕಲ್ಲಿನಲ್ಲಿ ಮಹಾಂತ ಸ್ವಾಮಿಗಳ ಹನ್ನೆರಡನೇ ವಾರ್ಷಿಕೋತ್ಸವದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭವು ಇನ್ನೇನು ಮುಗಿಯಬೇಕು ಎನ್ನುವ ಹೊತ್ತಿಗೆ, ತಮಗೆ ಹಾವಿನ ಸ್ವಾಮೀಜಿ ಎಂದು ಹೆಸರಾಗಿದ್ದ ಬಾಗೇವಾಡಿ ಸ್ವಾಮೀಜಿಯವರು ಜೀವಂತ ಹಾವೊಂದನ್ನು ಹಾರವಾಗಿ ಹಾಕಿದರು. ಹಾವುಗಳೇ ತುಂಬಿದ್ದ ಬುಟ್ಟಿಯೊಂದರಿಂದ ಸ್ವಾಮೀಜಿ ಒಂದು ಹಾವನ್ನು ಹೊರತೆಗೆದು ಅದನ್ನೇ ನಿಜಲಿಂಗಪ್ಪನವರಿಗೆ ಹಾರವಾಗಿ ತೊಡಿಸಿದ್ದರು! ಹಾವನ್ನು ಮುಟ್ಟಲು ಸ್ವಾಮೀಜಿ ನಿಜಲಿಂಗಪ್ಪನವರನ್ನು ಕೇಳಿಕೊಂಡರು, ಆದರೆ ಅವರು ಹಾಗೆ ಮಾಡಲು ಸಹಜವಾಗಿಯೇ ಹಿಂದೆ ಮುಂದೆ ನೋಡಿದರು. ಹಾವುಗಳು ಸುಮ್ಮನೆ ಬುಟ್ಟಿಯೊಳಕ್ಕೆ ಹೋದವು, ನಾಯಕರಿಗೆ ಈ ರೀತಿಯ ಹೊಸ ಹಾರ ಹಾಕುವ ಪರಿ ಯನ್ನು ಕ್ಲಿಕ್ಕಿಸಲು ಪತ್ರಿಕಾ ಛಾಯಾಗ್ರಾಹಕರಿಗೆ ಖುಷಿಯೋ ಖುಷಿ! ಕನ್ನಡ ದೈನಿಕ ಸಂಯುಕ್ತ ಕರ್ನಾಟಕವು ತನ್ನ ಮಾರನೆಯ ದಿನದ ಆವೃತ್ತಿಯಲ್ಲಿ ಇದರ ಚಿತ್ರವೊಂದನ್ನು ಪ್ರಕಟಿಸಿ, ಅದಕ್ಕೆ ಸರ್ಪಭೂಷಣ ಎಂದು ಶೀರ್ಷಿಕೆ ಕೊಟ್ಟಿತು. ಹಾವು ತೊಟ್ಟ ಶಿವನಿಗಿರುವ ಹೆಸರೇ ಸರ್ಪಭೂಷಣ!

ಒಂದು ವರ್ಷದ ಬಳಿಕ, ೧೯೮೫ನೇ ಮಾರ್ಚ್ ೬ ರಂದು, ನಿಜಲಿಂಗಪ್ಪನವರು ಜನತಾ ಪಕ್ಷದ ಸದಸ್ಯತ್ವಕ್ಕೆ ವಿಧ್ಯುಕ್ತವಾಗಿ ರಾಜೀನಾಮೆ ನೀಡಿ, ಕಳೆದ ಹಲವಾರು ವರ್ಷಗಳಿಂದ ತಮ್ಮ ಮನಸ್ಸಿನಲ್ಲಿದುದಕ್ಕೆ ಖಚಿತ ರೂಪವನ್ನು ನೀಡಿದರು. ಆ ಬಗ್ಗೆ ಅವರು ಚಿತ್ರದುರ್ಗದಿಂದ ದೂರವಾಣಿಯ ಮೂಲಕ ಪಿಟಿಐ ಜೊತೆ ಮಾತನಾಡಿದರು. ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಎಲ್ಲ ಪಕ್ಷಗಳನ್ನು ಟೀಕಿಸುವ ಸ್ವಾತಂತ್ರ್ಯವನ್ನು ಗಳಿಸಿಲೋಸುಗ ತಾವು ರಾಜೀನಾಮೆ ನೀಡುತ್ತಿರುವುದಾಗಿ ಹೇಳಿದರು. ರಾಜೀನಾಮೆಗೂ ಕರ್ನಾಟಕದಲ್ಲಿ ಅಧಿಕಾರದಲ್ಲಿದ್ದ ಜನತಾ ಪಕ್ಷದ ಸರ್ಕಾರಕ್ಕೂ ಇರಬಹುದಾದ ಅವರ ಅತೃಪ್ತಿಗೂ ಸಂಬಂಧವಿದೆಯೇ ಎಂದು ಪ್ರಶ್ನಿಸಿದಾಗ, ಇಂದಿರಾ ಗಾಂಧಿ ಅಥವಾ ರಾಜೀವ ಗಾಂಧಿಯವರ ಕೇಂದ್ರ ಸರ್ಕಾರಕ್ಕಿಂತಲೂ ಕರ್ನಾಟಕದ ಜನತಾ ಸರ್ಕಾರವು ಉತ್ತಮ ಕಾರ್ಯ ನಿರ್ವಹಿಸಿದೆ ಎಂದು ನಿಜಲಿಂಗಪ್ಪನವರು ಯಾವುದೇ ಹಿಂದೇಟು ಹಾಕದೆ ಹೇಳಿದರು. ತಾವು ಪಕ್ಷೇತರ ವ್ಯಕ್ತಿಯಾಗಿರಲು ಬಯಸುವುದಾಗಿ ಹೇಳಿದರು. ೧೯೭೮ ರಲ್ಲಿಯೇ ತಾವು ಪಕ್ಷಕ್ಕೆ ರಾಜೀನಾಮೆಯಿತ್ತುದಾಗಿಯೂ, ಆದರೆ ಆಗ

ತಮಗೆ ಕೇಂದ್ರದ ಜನತಾ ನಾಯಕರ ಬಗೆಗಿನ ಅತೃಪ್ತಿ ಅದಕ್ಕೆ ಕಾರಣವಾಗಿತ್ತು, ಆದರೆ ಆಗ ಅದನ್ನು ವಾಪಸು ಪಡೆಯಲು ತಮ್ಮ ಮನವೊಲಿಸಲಾಗಿತ್ತು ಎಂದರು.

೧೯೮೫-ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ನೂರನೇ ಹುಟ್ಟಿದ ವರ್ಷ, ಹೀಗಾಗಿ ಕಾಂಗ್ರೆಸ್ ಶತಮಾನೋತ್ಸವವನ್ನು ಆಚರಿಸಲು ಅದೊಂದು ಸುಸಂದರ್ಭ. ಆದರೆ ಅದನ್ನು ಆಚರಿಸಲು ಮೂಲ ಕಾಂಗ್ರೆಸ್ ಎಲ್ಲಿ ಉಳಿದಿತ್ತು? ಅದನ್ನಾಚರಿಸುವ ಹಕ್ಕು ಯಾರಿಗಿದೆ? ಛಿದ್ರವಾಗಿದ್ದ ಮೂಲ ಕಾಂಗ್ರೆಸ್‌ನ ಒಂದು ತುಣುಕಾದ ಕಾಂಗ್ರೆಸ್(ಐ) ಆ ಹಕ್ಕಿಗಾಗಿ ಪ್ರತಿಪಾದಿಸಬಹುದೇ? ಅಥವಾ ಅದೊಂದು ಪಕ್ಷೇತರ ಅಥವಾ ಸರ್ವಪಕ್ಷ ಆಚರಣೆಯಾಗಬೇಕೇ? ಈ ಸಂದರ್ಭದಲ್ಲಿ ಇಂಥ ಪ್ರಶ್ನೆಗಳು ಎದ್ದು ನಿಂತವು. ೧೯೮೫ ನೇ ಮೇ ೪ ರಂದು ಪತ್ರಿಕೆಗಳವರೊಡನೆ ಮಾತನಾಡುತ್ತ ಸಹಜವಾಗಿಯೇ ನಿಜಲಿಂಗಪ್ಪನವರು ಈ ವಿಷಯಗಳಿಂದ ಚಿಂತಿತರಾಗಿದ್ದರು. ತಮ್ಮನ್ನು ಕರೆದರೂ ಕಾಂಗ್ರೆಸ್ ಶತಮಾನೋತ್ಸವದಲ್ಲಿ ಭಾಗಿಯಾಗುವುದಿಲ್ಲವೆಂದು ಅವರು ಹೇಳಿದರು. ಆದರೆ ಇದುವರೆಗೂ ಅವರನ್ನಾರೂ ಆಚರಣೆಗೆ ಆಹ್ವಾನಿಸಿರಲಿಲ್ಲ, ಹೀಗಾಗಿ ಭಾಗ ವಹಿಸುವ ಪ್ರಶ್ನೆಯೇ ಉದ್ಭವಿಸಿರಲಿಲ್ಲ. ಅವರ ವಾದವೆಂದರೆ ಈಗ ನಿಜವಾದ ಕಾಂಗ್ರೆಸ್ ಅಸ್ತಿತ್ವದಲ್ಲಿಯೇ ಇಲ್ಲದಿರುವುದರಿಂದ ಅದರಲ್ಲಿ ಭಾಗಿಯಾಗುವುದಿಲ್ಲ ಎಂಬುದು. ಇದ್ದುದು ಇಂದಿರಾ ಕಾಂಗ್ರೆಸ್ ಮಾತ್ರ, ಕಾಂಗ್ರೆಸ್‌ನ ವರ್ಣರಂಜಿತ ಇತಿಹಾಸ ಮತ್ತು ಅದರಲ್ಲಿನ ನಾಯಕಮಣಿಗಳನ್ನು ಅವರು ಹೆಮ್ಮೆಯಿಂದ ನೆನಪಿಸಿಕೊಂಡರು. ಅದರ ಅಧ್ಯಕ್ಷನಾಗುವ ಸುಯೋಗ ಪ್ರಾಪ್ತವಾದುದಕ್ಕಾಗಿ ಹೆಮ್ಮೆಪಟ್ಟರು. ಇಂದಿರಾ ಗಾಂಧಿಯವರು ಕಾಂಗ್ರೆಸ್ ಅನ್ನು ನಾಶಮಾಡಿದರೆಂದು ದೂರಿದರು. ಇಂಗ್ಲಿಷ್ ವರ್ಣಮಾಲೆಯಲ್ಲಿ ಎಷ್ಟು ಅಕ್ಷರಗಳಿವೆಯೋ ಅಷ್ಟು ಸಂಖ್ಯೆಯ ಕಾಂಗ್ರೆಸ್‌ಗಳು ಈಗ ಇವೆ ಎಂದು ಗೇಲಿ ಮಾಡಿದರು. ರಾಜೀವ ಗಾಂಧಿಯವರು ಕಾಂಗ್ರೆಸ್ ಶತಮಾನೋತ್ಸವವನ್ನು ೧೯೮೫ ನೇ ಮೇ ೫ ರಂದು ಉದ್ಘಾಟಿಸಿದರು. ಕೆಲವು ಹಿರಿಯ ನಾಯಕರು ಸಮಾರಂಭದಲ್ಲಿ ಭಾಗವಹಿಸಲು ಒಪ್ಪದಿದ್ದುದಕ್ಕಾಗಿ ಅವರು ವಿಷಾದ ವ್ಯಕ್ತಪಡಿಸಿದರು. ಪ್ರಾಯಶಃ ಇವರಲ್ಲಿ ನಿಜಲಿಂಗಪ್ಪನವರೂ ಸೇರಿದ್ದಿರಬೇಕು. ಆನಂತರ, ಶೀಲಾ ಕೌಲ್ ಅವರು ಬೆಂಗಳೂರಿನಲ್ಲಿ ಸಮಾರಂಭವನ್ನು ಉದ್ಘಾಟಿಸಿದರು.

ವಿಶ್ವ ಕನ್ನಡ ಸಮ್ಮೇಳನವನ್ನು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ೧೯೮೫ ನೇ ಡಿಸೆಂಬರ್ ೧೫ ರಂದು ರಾಷ್ಟ್ರಕವಿ ಕುವೆಂಪು ಉದ್ಘಾಟಿಸಿದರು. ಅದು ೧೯೮೫ ನೇ ಡಿಸೆಂಬರ್ ೧೭ ರವರೆಗೂ ನಡೆಯಲಿತ್ತು. ಅದರಲ್ಲಿ ನಾನಾ ವಿಷಯಗಳ ಗೋಷ್ಠಿಗಳೂ ವಿಚಾರ ಸಂಕಿರಣಗಳೂ ಏರ್ಪಾಟಾಗಿದ್ದವು. ಅಂತಹ ಒಂದು

ಶ್ರೀ ರಾಮಕೃಷ್ಣ ಹೆಗಡೆಯವರೊಂದಿಗೆ ಎಸ್ಸೆನ್

ಕರ್ನಾಟಕದ ರಾಜಕೀಯ ಪರಂಪರೆಯನ್ನು ಕುರಿತಾಗಿತ್ತು. ಅದರ ಅಧ್ಯಕ್ಷತೆ ವಹಿಸಿದ್ದವರು ಸೂಕ್ತವಾಗಿಯೇ ನಿಜಲಿಂಗಪ್ಪನವರು. ಅದರಲ್ಲವರು ಮತಧರ್ಮಗಳ ನಡುವಣ ಹೊಂದಾಣಿಕೆ ಮತ್ತು ಧಾರ್ಮಿಕ ಸಾಹಿತ್ಯ ಪಂಪರೆಗೆ ಒತ್ತು ನೀಡಿದಂತಿತ್ತು. ೧೯೮೬ ನೇ ಮಾರ್ಚ್ ೨೦ ರಂದು ನಿಜಲಿಂಗಪ್ಪನವರು ಬೆಳಗಾವಿಯಿಂದ ಸುಮಾರು ೩೫ ಕಿಲೋ ಮೀಟರ್ ದೂರವಿದ್ದ ಸಣ್ಣ ಊರು ನಂದಗಡದಲ್ಲಿ ಖಾನಾಪುರ ತಾಲ್ಲೂಕು ಕೃಷಿ ಮಾರುಕಟ್ಟೆ ಸಂಘದಿಂದ ನಿರ್ಮಿತವಾಗಿದ್ದ ಕಲ್ಯಾಣ ಮಂಟಪದ ಉದ್ಘಾಟನೆಯ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲವರು ತಮ್ಮ ಹೃದಯಕ್ಕೆ ಸನಿಹವಾದ ವಿಷಯಕ್ಕೆ ಮರಳಿದ್ದರು, ಕೃಷಿ ಅಭಿವೃದ್ಧಿ ಮತ್ತು ನೀರಾವರಿ. ತಮ್ಮ ಸರ್ಕಾರವು ಆರಂಭಗೊಳಿಸಿದ್ದ ಭಾರಿ ನೀರಾವರಿ ಯೋಜನೆಗಳನ್ನು ಮುಂದಿನ ಸರ್ಕಾರಗಳು ಪೂರ್ಣಗೊಳಿಸದ ಬಗ್ಗೆ ಅವರಿಗೆ ವಿಷಾದವಿತ್ತು. ಅವರು ಮುಖ್ಯಮಂತ್ರಿಯಾಗಿ ಅವುಗಳನ್ನು ಆರಂಭಿಸಿದ್ದು ೧೯೬೪ರಲ್ಲಿ, ಹೀಗಾಗಿ ೧೯೭೪ ರೊಳಗಾಗಿ ಅವು ಪೂರ್ಣಗೊಳ್ಳಬೇಕಾಗಿತ್ತು, ಹಾಗಾಗದಿರಲು ಕಾರಣವೇನೋ! ಅವು ಪೂರ್ಣಗೊಂಡಿದ್ದರೆ ಸುಮಾರು ೫೦ ಲಕ್ಷ ಎಕರೆ ಜಮೀನು ನೀರಾವರಿಯಾಗುತ್ತಿತ್ತು, ಅದರಿಂದ ವಾರ್ಷಿಕವಾಗಿ ಎರಡು ಕೋಟಿ ರೂಪಾಯಿಗಳ ಆದಾಯ ಬರುತ್ತಿತ್ತು. ಈ ಸಂದರ್ಭದಲ್ಲಿ ಅವರು ತಮ್ಮ ಗೆಳೆಯರೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ ಆದ ದಿವಂಗತ ಬಸಪ್ಪಣ್ಣ ಅರಗಾವಿಯವರ ಜೀವನ ಚರಿತ್ರೆಯನ್ನೂ ಬಿಡುಗಡೆ ಮಾಡಿದರು. ಮತ್ತೆ ನೀರಾವರಿ ಯೋಜನೆಗಳ ಕಡೆ ಹೊರಳಿ, ಆಂಧ್ರ ಸರ್ಕಾರವು ಏಕಚಿತ್ತದಿಂದಲೂ ದೃಢನಿಶ್ಚಯದಿಂದಲೂ ನಾಗಾರ್ಜುನ ಸಾಗರ ಯೋಜನೆಯನ್ನು ಪೂರ್ಣಗೊಳಿಸಿದ್ದು, ಅದರಿಂದ ಆ ರಾಜ್ಯಕ್ಕೆ ಆಗಿ ಇತರರಿಗೂ ಕೊಡುವಷ್ಟು ಬತ್ತ ಬೆಳೆಯುವುದು ಇವುಗಳನ್ನು ಉದಾಹರಿಸಿದರು. ೧೯೮೬ನೇ ಜೂನ್ ೮ ರಂದು ಬೆಂಗಳೂರಿನಲ್ಲಿ ಪಿ.ಜಿ. ಹಳಕಟ್ಟಿ ವೇದಿಕಯಡಿ ವೀರಶೈವ ಮಠಾಧಿಪತಿಗಳು ಏರ್ಪಡಿಸಿದ್ದ ಜಗಜ್ಯೋತಿ ಬಸವೇಶ್ವರ ಜಯಂತಿಯ ಅಂಗವಾದ ಗುರುದರ್ಶನದ ಬಗೆಗಿನ ವಿಚಾರ ಸಂಕಿರಣವೊಂದನ್ನು ನಿಜಲಿಂಗಪ್ಪನವರು ಉದ್ಘಾಟಿಸಿದರು. ವಿಚಾರ ಸಂಕಿರಣ ನಡೆದದ್ದು ಲಾಲ್‌ಬಾಗ್‌ನಲ್ಲಿ. ಆ ಸಂದರ್ಭದಲ್ಲಿ ಮಾತನಾಡುತ್ತ ಅವರು ದಾಸೋಹವನ್ನು ಅನುಸರಿಸಿ ಬಡ ಹಾಗೂ ನಿರ್ಗತಿಕ ಜನರಲ್ಲಿನ ಅಜ್ಞಾನವನ್ನು ಹೋಗಲಾಡಿಸಲು ವೀರಶೈವ ಸ್ವಾಮೀಜಿಗಳಿಗೆ ಕರೆ ನೀಡಿದರು. ಮಠಾಧೀಶರು ಬಸವಣ್ಣನ ನಿಜವಾದ ಹಿಂಬಾಲಕರೇ ಆಗಿದ್ದ ಪಕ್ಷದಲ್ಲಿ ಅವರು ತಮ್ಮ ಭಕ್ತರಿದ್ದೆಡೆ ಹೋಗಿ ಅವರ ಸಮಸ್ಯೆಗಳನ್ನು ಅರಿತುಕೊಳ್ಳಬೇಕೆಂದರು. ಸಿರಿವಂತರಿಂದ ದೂರವಾದರೆ ಮಾತ್ರವೇ ಅವರು ಸಂಘರಕ್ಷಣದ ವ್ರತವನ್ನು ಪೂರೈಸಿದಂತಾಗುವುದು ಎಂದರು. ತಮ್ಮ ಶಿಷ್ಯರನ್ನು ಕಾಣಲು ಮೈಲಿಗಟ್ಟಲೆ ನಡೆಯುವ ಕಂಚಿ ಕಾಮಕೋಟಿ ಸ್ವಾಮೀಜಿಗಳ ನಿದರ್ಶನ

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರೊಡನೆ ಎಸ್ಸೆನ್

ವನ್ನಿತ್ತರು. ಕೆಲವು ಮಠಾಧೀಶರ ಭ್ರಷ್ಟತನ ಕುರಿತು ನಿಜಲಿಂಗಪ್ಪನವರು ಕಟುವಾಗಿ ಮಾತನಾಡಿದರು. ಕೆಲವು ಮಠಾಧೀಶರಿಗೆ ವಿದೇಶಿ ಕಾರುಗಳೇ ಬೇಕಂತೆ! ಮತ್ತೊಂದು ಮಠದಲ್ಲಿ, ಸುಮಾರು ಮೂರು ಕೋಟಿ ರೂಪಾಯಿಗಳ ಆದಾಯ ತರುವ ಸಂಪನ್ಮೂಲದ ಮೇಲೆ ಹಿಡಿತ ಸಾಧಿಸಲು ಒಳ ಪೈಪೋಟಿಗಳು ನಡೆಯುವುದಂತೆ! ತಮ್ಮ ಮನಸ್ಸಿನಲ್ಲಿರು ವುದನ್ನು ಮನಬಿಚ್ಚಿ ಹೇಳಲು ತಮಗೆ ಯಾವುದೇ ಅಳುಕಿಲ್ಲವೆಂದರು. ಕೆಲವು ಜನರಿಗೆ ತಮ್ಮ ಮಾತಿನಿಂದ ಕೋಪಬಂದರೂ ಪರವಾಯಿಲ್ಲ ಎಂದರು. ವೀರಶೈವ ಧಾರ್ಮಿಕ ಸಂಸ್ಥೆಗಳಲ್ಲಿನ ಅವ್ಯವಸ್ಥೆಗಳ ಬಗ್ಗೆ ಸಾಮಾನ್ಯ ಧೋರಣೆಯಲ್ಲಿ ಮಾತನಾಡುತ್ತ ಕೆಲ ಮಂದಿ ಸ್ವಾಮೀಜಿಗಳು ಕಾಲೇಜುಗಳನ್ನು ಆರಂಭಿಸಿ ದೇಣಿಗೆ ಎತ್ತುವುದರ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು. ಹಾಗೆ ಸಂಗ್ರಹಿಸಿದ ಹಣವನ್ನವರು ಸ್ವಂತ ಇಚ್ಛಾನುಸಾರ ಬಳಸುತ್ತಿದ್ದಾರೆಂದರು. "ಇದು ನಿಮ್ಮ ಸ್ವಂತ ಹಣವೇ?" ಎಂದವರು ಪ್ರಶ್ನಿಸಿದರು. ಅವರು ಪರಮ ಆಕ್ರೋಶದಿಂದ ಮಾತನಾಡುತ್ತಿದ್ದುದಕ್ಕೆ ಕಾರಣ ಪ್ರತಿನಿತ್ಯ ತಾವು ಜನರ ಬವಣೆಯನ್ನು ಕಣ್ಣಾರೆ ಕಾಣುತ್ತಿದ್ದುದು. ದಾಸೋಹದ ಅನುಸರಣೆ, ಅಂದರೆ ಸಮುದಾಯದ ಸೇವೆ, ಲಿಂಗಾಯತ ಧರ್ಮದ ತತ್ವ, ಬಸವಣ್ಣ ಉಪದೇಶಿಸಿದ್ದು. ತಮ್ಮ ಶಿಷ್ಯರಿಗೆ ಸೌಜನ್ಯದಿಂದಲೂ ಸಮಾಜಕ್ಕೆ ಉಪಕಾರಿಯಾಗಿಯೂ ಬಾಳುವಂತೆ ಹೇಳಲು ಸ್ವಾಮೀಜಿಗಳಿಗೆ ಕರೆ ನೀಡಿದರು. ಶ್ರೀ ಜಯದೇವ ಸ್ವಾಮೀಜಿಯವರ ಉದಾರತೆ ಯನ್ನವರು ಕೊಂಡಾಡಿದರು. ದಾಸೋಹಕ್ಕೆಂದು ಮೀಸಲಿದ್ದ ಹಣವನ್ನು ಕಷ್ಟದಲ್ಲಿದ್ದ ತಮ್ಮ ತಾಯಿಗೆ ನೀಡಲೂ ನಿರಾಕರಿಸಿದ ಅವರ ದೊಡ್ಡತನವನ್ನು ಪ್ರಶಂಸಿಸಿದರು. ತಮ್ಮ ತಾಯಿಯವರಿಗೆ ಸೀರೆ ತೆಗೆದುಕೊಳ್ಳಲು ಮಠದ ನೌಕರನೊಬ್ಬ ಮುಂದಾದುದನ್ನು ಕಂಡು ಕೋಪಗೊಂಡು ಆ ಹಣವನ್ನು ಮರಳಿ ನೀಡಲು ಅವನಿಗೆ ಆಜ್ಞೆ ಮಾಡಿದರಂತೆ! "ಇಂತಹವರು ಈಗ ಎಷ್ಟು ಮಂದಿ ಇದ್ದಾರೆ?" ಎಂದು ನಿಜಲಿಂಗಪ್ಪನವರು ಪ್ರಶ್ನಿಸಿದರು. ಸರ್ಕಾರ ಮತ್ತು ಮಠಾಧಿಪತಿಗಳಿಬ್ಬರೂ ದೇಶದ ೪೦ ಕೋಟಿ ಜನರಿಗೆ ಉದ್ಯೋಗ ನೀಡುವಲ್ಲಿ ವಿಫಲವಾಗಿದ್ದಾರೆ ಎಂದವರು ವಿಷಾದಿಸಿದರು. ನಿರುದ್ಯೋಗ ಸಮಸ್ಯೆಯನ್ನು ನೀಗಬಹುದಾದ ಪರಿಯ ಬಗ್ಗೆ ಚಿಂತನೆ ನಡೆಸಲು ಅವರು ಕರೆ ನೀಡಿದರು. ಬಸವೇಶ್ವರ ಪ್ರತಿಮೆಗಳ ಸ್ಥಾಪನೆಗೆ ಮಾಡುವ ವೆಚ್ಚ ಹಣ ಮತ್ತು ಸಮಯಗಳ ವ್ಯರ್ಥ ಬಳಕೆ ಎಂದರು. ಅದರ ಬದಲು, ಅಣ್ಣನ ಉಪದೇಶಗಳನ್ನು ಗಂಭೀರವಾಗಿ ತಿಳಿಸಿ ಹೇಳಬೇಕು, ಅದೇ ಬಸವಣ್ಣನ ನಿಜವಾದ ವಿಗ್ರಹ ಎಂದರು. ಬಸವಣ್ಣನ ಉಪದೇಶಗಳನ್ನು ವಿಶ್ವವ್ಯಾಪಿ ಯಾಗಿ ಹರಡಬೇಕೇ ಹೊರತು ವೀರಶೈವರಿಗೆ ಮಾತ್ರ ಸೀಮಿತಗೊಳಿಸಬಾರದು. ಬಸವಣ್ಣನ ಉಪದೇಶಗಳನ್ನು ಸಂಕುಚಿತ ಕೋಮು ದೃಷ್ಟಿಯಿಂದ ಅರ್ಥವಿಸುವ ಲಿಂಗಾಯಿ ತರ ದೃಷ್ಟಿಕೋನವನ್ನು ಟೀಕಿಸಿದ್ದ ಅಂಬೇಡ್ಕರ್ ಅವರನ್ನು ಉಲ್ಲೇಖಿಸಿದರು.

೧೯೮೬ ಉತ್ತರಾರ್ಧದಲ್ಲಿ ಕರ್ನಾಟಕದ ಜನರ ಮನಸ್ಸನ್ನು ಕಾಡುತ್ತಿದ್ದ ಸಮಸ್ಯೆಯೆಂದರೆ ಮೀಸಲಾತಿ ಕುರಿತ ವೆಂಕಟಸ್ವಾಮಿ ಆಯೋಗದ ವರದಿ. ಕರ್ನಾಟಕದ ಎರಡು ಪ್ರಬಲ ಕೋಮುಗಳಾದ ಒಕ್ಕಲಿಗ ಮತ್ತು ಲಿಂಗಾಯತರಿಬ್ಬರೂ ಅದರ ಬಗ್ಗೆ ಅಸಮಾಧಾನಗೊಂಡಿದ್ದರು, ಅದಕ್ಕೆ ಕಾರಣ ತಮಗೆ ಮೀಸಲಾತಿಯನ್ನು ನಿರಾಕರಿಸಿದ್ದು, ಹೀಗಾಗಿ ವರದಿಯ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದರು. ಈ ಸಂದರ್ಭದಲ್ಲಿ, ಮಾಜಿ ಎಂ.ಎಲ್.ಎ. ಆದ ಪಿ. ರಾಮದೇವ್ ಅವರು ಮೀಸಲಾತಿಗಳ ಬಗ್ಗೆ ಬೆಂಗಳೂರಿನಲ್ಲಿ ೧೯೮೬ ನೇ ಸೆಪ್ಟೆಂಬರ್ ೨೮ ರಂದು ಒಂದು ವಿಚಾರ ಸಂಕಿರಣವನ್ನು ಆಯೋಜಿಸಿದ್ದರು. ಅದರ ಅಧ್ಯಕ್ಷತೆಯನ್ನು ಕಡಿದಾಳು ಮಂಜಪ್ಪನವರು ವಹಿಸಿದ್ದರೆ, ಅದನ್ನು ನಿಜಲಿಂಗಪ್ಪನವರು ಉದ್ಘಾಟಿಸಿದರು. ಕಡಿದಾಳು ಮಂಜಪ್ಪ ಹಾಗೂ ನಿಜಲಿಂಗಪ್ಪನವರಿಬ್ಬರೂ ವರದಿಯ ವಿರುದ್ಧ ತಮ್ಮ ತಮ್ಮ ಕೋಮುಗಳವರು ನಡೆಸುತ್ತಿದ್ದ ಪ್ರತಿಭಟನೆಯನ್ನು ನಿಲ್ಲಿಸುವಂತೆ ಕೋರಿಕೊಂಡರು. ಇದಕ್ಕೆ ಕಾರಣ, ಈಗಾಗಲೇ ಹಾವನೂರು ಹಾಗೂ ವೆಂಕಟಸ್ವಾಮಿ ಇಬ್ಬರ ವರದಿಗಳ ವಿರುದ್ಧವೂ ಅವರು ತಮ್ಮ ಅಸಮಾಧಾನವನ್ನು ಸಾಕಷ್ಟು ತೋರಿಸಿರುವುದು. ಮೀಸಲಾತಿಯ ವ್ಯಾಮೋಹಕ್ಕೆ ಮೂಲ ಕಾರಣ ಸರ್ಕಾರಿ ನೌಕರಿಯ ಬಗೆಗಿನ ಆಕರ್ಷಣೆಯಷ್ಟೆ ಎಂದು ಇಬ್ಬರೂ ವಾದಿಸಿದರು. ವಾರ್ಷಿಕ ವರಮಾನ ರೂ. ೬೦೦೦/– ಕ್ಕಿಂತ ಹೆಚ್ಚಾಗಿರುವವರಿಗೆ ಮೀಸಲಾತಿಯ ಅನುಕೂಲವನ್ನು ನೀಡಬಾರದೆಂದು ನಿಜಲಿಂಗಪ್ಪನವರು ವಾದಿಸಿದರು. ಅವರ ಪ್ರಕಾರ ಆರ್ಥಿಕ ಹಿಂದುಳಿದಿರುವಿಕೆಯೇ ಮೀಸಲಾತಿಯ ಮಾನದಂಡವಾಗಬೇಕು. ಆದರೆ ಎಷ್ಟೇ ಬುಡಮೇಲು ಮಾಡಲು ಎಷ್ಟೇ ಪ್ರಯತ್ನಪಟ್ಟರೂ ಭಾರತದಲ್ಲಿ ಜಾತಿಗಳು ಶಾಶ್ವತವಾಗಿ ಬೇರು ಬಿಟ್ಟಿವೆ, ಹೀಗಾಗಿ ಹಿಂದುಳಿದಿರುವಿಕೆಯ ಪರಿಗಣನೆಗೆ ಜಾತಿಗಳನ್ನು ಸಂಪೂರ್ಣವಾಗಿ ಕಡೆಗಣಿಸುವುದು ಸಾಧ್ಯವಿಲ್ಲ ಎಂಬುದನ್ನವರು ಒಪ್ಪಿಕೊಂಡರು. ತಕ್ಷಣದಿಂದಲೇ ಪ್ರತಿಭಟನೆಯನ್ನು ನಿಲ್ಲಿಸಬೇಕೆಂದವರು ಮನವಿ ಮಾಡಿಕೊಂಡರು. ಅದರ ಬದಲು ಅವರು ಹಳ್ಳಿ ಮತ್ತು ತಾಲ್ಲೂಕು ಮಟ್ಟಗಳಿಗೆ ತಕ್ಷಣವೇ ಹೋಗಿ ಜನರ ಜೀವನ ಮಟ್ಟವನ್ನು ಕುರಿತ ಮಾಹಿತಿ ಸಂಗ್ರಹಣೆ ಮಾಡಬೇಕೆಂದು ಸಲಹೆ ಮಾಡಿದರು. ಸುಮಾರು ಎಂಟು ಹತ್ತು ವರ್ಷಗಳ ಹಿಂದೆಯೇ ಇಂತಹ ಮಾಹಿತಿಯನ್ನು ಸಂಗ್ರಹಿಸುವಂತೆ ತಾವು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಸೂಚಿಸಿದ್ದನ್ನು ನೆನಪಿಸಿಕೊಂಡರು. ಆದರೆ ಅದರಿಂದ ಫಲವೇನೂ ದೊರೆಯಲಿಲ್ಲ. ಮೀಸಲಾತಿಯು ರಾಷ್ಟ್ರಮಟ್ಟದ ವಿಷಯವೆಂದೂ ಹೀಗಾಗಿ ಅದಕ್ಕೆ ರಾಷ್ಟ್ರಮಟ್ಟದ ಪರಿಹಾರವನ್ನು ಕಂಡುಕೊಳ್ಳಬೇಕೆಂಬುದನ್ನೂ ಅವರು ಒತ್ತಿ ಹೇಳಿದರು. ಸರ್ಕಾರದ ನೌಕರಿಗಳನ್ನು ಹೆಚ್ಚಿಸುವ ನೀತಿಯನ್ನು ವಿರೋಧಿಸಿದ ಕಡಿದಾಳು ಮಂಜಪ್ಪನವರು ಹಳ್ಳಿಗಳ ಬಡತನವನ್ನು ಕಡೆಗಣಿಸಿರುವ ಬಗ್ಗೆ

ಖಂಡಿಸಿದರು. ಸರ್ಕಾರಿ ನೌಕರಿಯ ಆಕರ್ಷಣೆಗಳೆಂದರೆ ಒಳ್ಳೆಯ ಸಂಬಳ, ಲಂಚ ಮತ್ತು ಕಡಿಮೆ ಕೆಲಸಗಳು! ಸರ್ಕಾರ ಹೆಚ್ಚಿನ ಸಂಬಳ ನೌಕರರಿಗೆ ನೀಡುವುದರ ವಿರುದ್ಧ ಅವರು ಹರಿಹಾಯ್ದರು.

ಲಿಂಗಾಯತ ಶಿಕ್ಷಣ ಸಂಸ್ಥೆಯ ಶತಮಾನೋತ್ಸವ ಮತ್ತು ಹುರುಕಡ್ಲಿ ಅಜ್ಜನವರ ೮೮ ನೇ ಹುಟ್ಟುಹಬ್ಬ ಆಚರಣೆಯಲ್ಲಿ ಪಾಲುಗೊಳ್ಳಲು ನಿಜಲಿಂಗಪ್ಪನವರು ೧೯೮೭ ನೇ ಮೇ ೧೬ ರಂದು ಹುಬ್ಬಳ್ಳಿಗೆ ಹೋದರು. ಈ ಸಂದರ್ಭದಲ್ಲಿ ಅವರು ಶಿಕ್ಷಣ ಕ್ಷೇತ್ರ ದಲ್ಲಿ ಒಳ್ಳೆಯ ಕೆಲಸ ಮಾಡುತ್ತಿರುವ ಸಮಿತಿಯ ಕಾರ್ಯಗಳನ್ನು ಶ್ಲಾಘಿಸಿದರು. ಸಮಿತಿಯನ್ನವರು ನಿರಂತರವಾಗಿ ಪಾವನವಾಗಿ ಹರಿಯುವ ಗಂಗಾನದಿಗೆ ಹೋಲಿಸಿ ದರು. ೧೯೮೭ ನೇ ಮೇ ೧೬ ರಂದು ಅವರು ಧಾರವಾಡಕ್ಕೆ ಹೋಗಿ, ಕರ್ನಾಟಕ ಖಾದಿ ಸಂಘಟನೆಗಳ ಪ್ರತಿನಿಧಿಗಳ ಸಮಾವೇಶದ ಮುಖ್ಯ ಅತಿಥಿಗಳಾಗಿದ್ದರು. ಅಲ್ಲಿ ಮಾಡಿದ ಭಾಷಣವು ಗಾಂಧೀಯ ಅರ್ಥವ್ಯವಸ್ಥೆಗೆ ಅವರು ನೀಡಿದ್ದ ಮಹತ್ವದ ಬಗ್ಗೆ ಬೆಳಕು ಚೆಲ್ಲುವಂಥದು. ತಮ್ಮ ಕೇಳುಗರನ್ನು ಸಕ್ರಿಯ ಮನೋಭಾವ ತಾಳುವಂತೆ ಬದಲಿಸಿಕೊಳ್ಳುವ ಅವರ ಸಂವಹನ ಕೌಶಲಕ್ಕೂ ಇದೊಂದು ನಿದರ್ಶನವಾಗಿತ್ತು. "ಇಲ್ಲಿ ಹರಿಜನರಾರಾದರೂ ಇದ್ದಾರೆಯೇ? ಇದ್ದರೆ, ದಯವಿಟ್ಟು ನಿಂತುಕೊಳ್ಳಿ" ಎಂದರು. ಸಭಿಕರಲ್ಲಿ ಗುಜುಗುಜು ಶುರುವಾಯಿತು, ಆದರೆ ಯಾರೂ ಎದ್ದು ನಿಲ್ಲಲಿಲ್ಲ. ಮುಂದು ವರಿದು ಅವರು, "ಪ್ರಾಯಶಃ ಯಾರೂ ಇರಲಾರರು. ನಾನೇ ಹರಿಜನ ಅಂದುಕೊಂಡು ಮಾತನಾಡುತ್ತೇನೆ. ನೀವೂ ಹರಿಜನರಾಗಿ ನಾನು ಹೇಳುವುದನ್ನು ಕೇಳಿ!" ಎಂದರು. ದೇಶದಲ್ಲಿ ಹನ್ನೆರಡು ಕೋಟಿ ಮಂದಿ ಹರಿಜನರಿದ್ದಾರೆ. ಹಿಂದಾದರೆ ಅವರು ಚರ್ಮ ಹದಮಾಡಿ, ಮೆಟ್ಟು ಹೊಲಿದು ಜೀವಿಸುತ್ತಿದ್ದರು. ಹಳ್ಳಿಗಳಲ್ಲಿ ಸತ್ತ ಹಸುವಿನ ಚರ್ಮ ಸುಲಿದುದನ್ನು ಕಚ್ಚಾ ಪದಾರ್ಥವಾಗಿ ಬಳಸಿಕೊಳ್ಳುತ್ತಿದ್ದರು. ಆದರೀಗ ಆ ಚರ್ಮವು ದೂರದ ಊರುಗಳಲ್ಲಿರುವ ಬಾಟಾ ಮತ್ತು ಫ್ಲೆಕ್ಸ್ ಕಂಪನಿ ಕಾರ್ಖಾನೆಗಳಿಗೆ ಹೋಗುತ್ತಿದೆ, ಗಬ್ಬು ವಾಸನೆಯಿಲ್ಲದೆ! ಅಲ್ಲಿಂದ, ಚಪ್ಪಲಿ ಮತ್ತು ಶೂಗಳಾಗಿ ಸಿದ್ಧಗೊಂಡು ಮಾರುಕಟ್ಟೆಗೆ ಬರುತ್ತದೆ. ಈ ಪ್ರಕ್ರಿಯೆಯಲ್ಲಿ, ಕೆಲವೇ ಮಂದಿ ಕೆಲಸಗಾರರು ತೊಡಗುತ್ತಾರೆ. ಇದರಿಂದಾಗಿ ಹಳ್ಳಿಗಳ ಹರಿಜನರ ಪಾರಂಪರಿಕ ಬದುಕಿನ ಮೂಲ ಬತ್ತಿದಂತಾಗಿದೆ. ಇವತ್ತು ಪ್ರತಿಯೊಬ್ಬರಿಗೂ ಸರ್ಕಾರಿ ನೌಕರಿಯೇ ಬೇಕು. ಆದರೆ ಸರ್ಕಾರಿ ನೌಕರಿಗಳು ಸಾವಿರ ಮಂದಿಯಲ್ಲಿ ೧೫ ಜನಕ್ಕೆ ಮಾತ್ರ ದೊರಕಬಲ್ಲುದು, ಅದರಲ್ಲಿ ಎರಡೋ ಮೂರೋ ಹರಿಜನರಿಗೆ ದೊರಕುತ್ತವೆ. ಆದರೆ ಸರ್ಕಾರವು ಈ ವಸ್ತುಸ್ಥಿತಿಯನ್ನು ಮುಚ್ಚಿಡಲು ಕಾರಣ ಮೀಸಲಾತಿಯ ಮೂಲಕ ಹರಿಜನರ ಮತಗಳನ್ನು ಆಕರ್ಷಿಸುವುದು. ಸರ್ಕಾರಿ

ಕೆಲಸ ಸಿಕ್ಕದ ಕೋಟ್ಯಂತರ ಹರಿಜನರಿಗೆ ಮೀಸಲಾತಿಯಿಂದೇನು ಪ್ರಯೋಜನ? ಹೀಗಾಗಿ ಹೊಸ ಮೀಸಲಾತಿ ನೀತಿ, ಕೆಲವು ಕ್ಷೇತ್ರಗಳ ಕೆಲಸಗಳಿಗೆ ಮಾತ್ರ ಜಾರಿಯಾಗಿ, ಉಳಿದವರಿಗೆ ಸ್ವಯಂ ಉದ್ಯೋಗದ ಅವಕಾಶ ಒದಗಿಸಬೇಕಾಗಿದೆ ಎಂದವರು ವಾದಿಸಿದರು. ಚರ್ಮದ ಹದಗಾರಿಕೆ ಮತ್ತು ಶೂ ತಯಾರಿಯಂಥ ಕೆಲಸಗಳ ಮೀಸಲಾತಿಯು, ಹರಿಜನರಿಗೆ ಮಾತ್ರವಲ್ಲ, ಇತರರಿಗೂ ದೊರೆತರೆ, ಇದರಿಂದ ಹರಿಜನರಿಗೆ ಮಾತ್ರವಲ್ಲದೆ ಉಳಿದವರಿಗೂ ಕೆಲಸ ದೊರೆಯುವಂತಾಗುತ್ತದೆ, ಜೀವನೋಪಾಯ ಲಭಿಸುವಂತಾಗುತ್ತದೆ. ಲಿಂಗಾಯತರು, ಬ್ರಾಹ್ಮಣರು ಮತ್ತಿತರರು ಕೂಡ ಇಂತಹ ಕೆಲಸಗಳನ್ನು ಮಾಡುವಂತಾಗಬೇಕು. ದೇಶದ ರಾಜಕೀಯ ವ್ಯವಸ್ಥೆಯ ಬಗ್ಗೆ ಮಾತನಾಡುತ್ತ, ಶಾಸಕನಾಗಲು ಯಶಸ್ವಿಯಗಿ ಆ ಬಳಿಕ ಮಂತ್ರಿಯಾಗುವ ಬಡವನೊಬ್ಬನನ್ನು ವ್ಯವಸ್ಥೆಯು ತನ್ನ ತೆಕ್ಕೆಗೆ ತೆಗೆದುಕೊಂಡು ಇತರ ಬಡವರಿಂದ ದೂರಮಾಡುತ್ತದೆ. ಒಮ್ಮೆ ಮಂತ್ರಿಯಾಗಿ ಐದು ವರ್ಷಗಳ ಕಾಲ ಸಮೃದ್ಧಿಯನ್ನು ಅನುಭವಿಸಿದಾಗ ಅವನ ಸಮಸ್ಯೆ ಮುಂದಿನ ಐದು ವರ್ಷಗಳದು. ಅದಕ್ಕಾಗಿಯೇ ಅವನು, ಮುಂದೆಯೂ. ಅಧಿಕಾರ ಹೋದ ಬಳಿಕವೂ, ಅದೇ ಮಟ್ಟದ ಸಮೃದ್ಧಿಯನ್ನು ಅನುಭವಿಸಲು ಸಾಧ್ಯವಾಗುವಂತೆ ಭ್ರಷ್ಟನಾಗಿರುತ್ತಾನೆ, ಅನ್ಯಾಯದ ಹಣವನ್ನು ಕೂಡಿಟ್ಟುಕೊಂಡಿರುತ್ತಾನೆ. ಖಾದಿ ಒರಟಾದುದು ಅದು 'ಕಳಪೆ' ಎಂಬ ಕೆಲವರ ಆಕ್ಷೇಪಣೆಯನ್ನು ಪ್ರಸ್ತಾಪಿಸಿ, ತಾವದನ್ನು ೧೯೨೦ರ ದಶಕದಿಂದಲೂ ತೊಟ್ಟುಕೊಳ್ಳುತ್ತಿರುವುದಾಗಿ ಹೇಳಿದರು. ಅದು ಗಿರಣಿ ಬಟ್ಟೆಗಿಂತ ಹೆಚ್ಚು ಬಾಳಿಕೆ ಬರುವಂಥದು ಎಂಬುದನ್ನು ತಾವು ಸಾಬೀತುಮಾಡಲು ಸಿದ್ಧ. ಸುಮಾರು ೧೮ ವರ್ಷಗಳ ಹಿಂದೆ ಹೊಲಿಸಿಕೊಂಡ ಬಟ್ಟೆಗಳು ಈಗಲೂ ತೊಡುವಂತಹ ಸ್ಥಿತಿಯಲ್ಲಿಯೇ ಇವೆ. "ನನ್ನ ಕಡೆ ನೋಡಿ, ನಾನು ಈಗ ಚೊಕ್ಕಟವಾದ ಖಾದಿ ತೊಟ್ಟಿದ್ದೇನೆ" ಎಂದವರು ಮುಗುಳ್ನಕ್ಕರು. ಇಡೀ ಸಭೆ ಗೊಳ್ಳೆಂದಿತು. ೧೯೮೭ರ ನವೆಂಬರ್ ೧ ರಂದು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪಾಲುಗೊಳ್ಳಲು ಅವರು ಗುಲ್ಬರ್ಗಕ್ಕೆ ಹೋಗಿದ್ದರು. ಸರ್ಕಾರದಲ್ಲಿದ್ದುಕೊಂಡು ಕನ್ನಡ ಭಾಷೆಯ ಏಳಿಗೆಗಾಗಿ ದುಡಿದರೆಂಬ ಕಾರಣದಿಂದ ಅವರನ್ನು ಅಲ್ಲಿ ಸನ್ಮಾನಿಸಲಾಯಿತು. ಅಸಲಿ ಸಾಹಿತ್ಯ ಎಂದರೇನು ಎಂಬ ತಮ್ಮ ಪರಿಕಲ್ಪನೆಯನ್ನು ಬಿಚ್ಚಿಡಲು ಅವರು ಈ ಸಂದರ್ಭವನ್ನು ಬಳಸಿಕೊಂಡರು. ಮಲಗಿದ್ದವರನ್ನು ಎಚ್ಚರಿಸಬಲ್ಲ, ಕಣ್ಣು ಬಿಟ್ಟವನನ್ನು ಕುಳಿತುಕೊಳ್ಳುವಂತೆ ಮಾಡಬಲ್ಲ, ಕೂತವನನ್ನು ನಿಂತುಕೊಳ್ಳುವಂತೆ ಮಾಡಬಲ್ಲ, ಮತ್ತು ನಿಂತವನನ್ನು ಆನಂದದಿಂದ ಕುಣಿದಾಡುವಂತೆ ಮಾಡಬಲ್ಲುದೇ ನಿಜವಾದ ಸಾಹಿತ್ಯ ಎಂದವರು ವ್ಯಾಖ್ಯಾನಿಸಿದರು! ಮಾತಿನ ಸರಳತೆಯ ಹಿಂದೆ ಸಾಹಿತ್ಯದ ರೂಪಾಂತರಶಕ್ತಿಯ ಧ್ವನಿಯು ಅಡಕವಾಗಿದೆ.

೧೯೮೭ರಲ್ಲಿ ನಿಜಲಿಂಗಪ್ಪನವರು ಮಾಡಿದ ಅತ್ಯಂತ ಮುಖ್ಯ ಕಾರ್ಯವೆಂದರೆ, ತಮ್ಮ ಸಹೋದ್ಯೋಗಿ ಹಾಗೂ ಗೆಳೆಯರಾಗಿದ್ದ ಅತುಲ್ಯ ಘೋಷ್ ಅವರ ಸ್ಮಾರಕವಾಗಿ ಕಲ್ಕತ್ತದಲ್ಲಿ ಏರ್ಪಾಟಾಗಿದ್ದ ಅತುಲ್ಯ ಘೋಷ್ ಸ್ಮಾರಕ ಉಪನ್ಯಾಸವನ್ನು ನೀಡಿದುದು. ಅದು ಮೊದಲ ಸ್ಮಾರಕ ಉಪನ್ಯಾಸವಾಗಿತ್ತು. ಅತುಲ್ಯ ಘೋಷ್ ಅವರ ಹೃದಯ ಬುದ್ಧಿಗಳ ಗುಣಗಳನ್ನು ಬಣ್ಣಿಸಿದ ಬಳಿಕ ಭಾರತದ ಅರ್ಥವ್ಯವಸ್ಥೆಯ ಅಸಮತೋಲಗಳ ಬಗ್ಗೆ ಗಂಭೀರವೂ, ಆಳವೂ ಮತ್ತು ವ್ಯಾಪಕವೂ ಆದ ವಿಶ್ಲೇಷಣೆ ಮತ್ತವುಗಳ ನಿವಾರಣೆಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ನೀಡಿದ ವಿವರಣೆಯಾಗಿತ್ತು. ಘೋಷ್ ಅವರಿಗೆ ಮಕ್ಕಳು ಮತ್ತು ಹೂಗಳ ಬಗೆಗಿದ್ದ ಅಕ್ಕರೆಯನ್ನು ಸ್ವಲ್ಪ ಪ್ರಸ್ತಾಪಿಸಿ, ತಮ್ಮ ಅರ್ಥವಿಶ್ಲೇಷಣೆಗೆ ಅವರು ತೊಡಗಿದರು, ಒಬ್ಬ ವೃತ್ತಿಪರ ಅರ್ಥಶಾಸ್ತ್ರಜ್ಞನಂತೆ ಅಲ್ಲ, ತಮ್ಮ ಐವತ್ತು ವರ್ಷಗಳ ರಾಜಕೀಯ ಜೀವನದಲ್ಲಿ ಈ ಸಮಸ್ಯೆಯ ಬಗ್ಗೆ ಗಳಿಸಿಕೊಂಡಿದ್ದ ವ್ಯಾವಹಾರಿಕ ವಿಶ್ಲೇಷಣೆಗೆ. ಕಳೆದ ನಲವತ್ತು ವರ್ಷಗಳ ಆರ್ಥಿಕ ಪ್ರಗತಿಯು ನಗರ ಭಾರತ ಮತ್ತು ಗ್ರಾಮ ಭಾರತಗಳ ನಡುವಣ ಅಂತರವನ್ನು ಹೆಚ್ಚಿಸಿದೆ ಎಂದರು. ತಮ್ಮ ಪ್ರಮುಖ ಆಶಯಗಳೆಡೆ ಹೋಗುವ ಮುನ್ನ ಅವರು ಗಾಂಧೀಜಿಯವರು ಹೇಳಿದ, ಸಿರಿವಂತರು ಸ್ವಯಮೇಚ್ಛೆಯಿಂದ ತಮ್ಮ ಹಣವನ್ನು ಬಡವರೊಂದಿಗೆ ಹಂಚಿಕೊಳ್ಳುವಂತಾಗದಿದ್ದರೆ 'ರಕ್ತಪಾತ ಮತ್ತು ಹಿಂಸಾತ್ಮಕ ಕ್ರಾಂತಿಯ ಮೂಲಕ' ಹಾಗೆ ಮಾಡಬೇಕಾಗುತ್ತದೆ, ಎಂಬ ಮಾತನ್ನು ನೆನಪಿಸಿದರು. ಹೀಗಾಗಿ ತಾವು ಹೇಳಿದ ಅಂತರವು ಕೇವಲ ನಗರ ಭಾರತ ಮತ್ತು ಗ್ರಾಮ ಭಾರತಗಳ ನಡುವಣ ಅಂತರಕ್ಕೆ ಮಾತ್ರ ಅನ್ವಯಿಸದೆ ವರ್ಗಗಳ ನಡುವಣ ಅಂತರಕ್ಕೂ ಅನ್ವಯಿಸುತ್ತದೆ ಎಂದರು. ಈ ಸಂದರ್ಭದಲ್ಲವರು ಗಾಂಧೀಯ ಅಹಿಂಸೆ ಮತ್ತು ಅಧಿಕಾರ ಹಾಗೂ ಸಂಪನ್ಮೂಲ ವಿಕೇಂದ್ರೀಕರಣದ ತತ್ವಕ್ಕೆ ಮೊರೆ ಹೋದರು. ಆ ಬಳಿಕ ಸರ್ದಾರ್ ಪಟೇಲರ ಹೆಸರನ್ನು ಹೇಳಿ, ಗ್ರಾಮ ಭಾರತದ ಸಮಸ್ಯೆಗಳ ಅರಿವಿದ್ದವರೆಂದು ಗಾಂಧೀಜಿಯವರೊಡನೆ ಅವರನ್ನೂ ಸೇರಿಸಿದರು. ನೆಹರೂ ಅವರ ಹೆಸರನ್ನು ನೇರವಾಗಿ ಪ್ರಸ್ತಾಪಿಸದೆ, ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅಳವಡಿಸಿಕೊಂಡ ಆರ್ಥಿಕಾಭಿವೃದ್ಧಿ ಮಾದರಿಯು ಆರ್ಥಿಕ ಹಾಗೂ ಸಾಮಾಜಿಕ ಪತನಕ್ಕೆ ಕಾರಣವಾಗಿದೆ ಎಂದು ದೂರಿದರು. ಆನಂತರ ಭಾರತ ಸಂವಿಧಾನದತ್ತ ಗಮನ ಹರಿಸಿ, ತನ್ನ ಮೂಲ ನೆಲಗಟ್ಟಿನ ತತ್ವಗಳಾದ ಮೂಲಭೂತ ಹಕ್ಕುಗಳು ಮತ್ತು ಸರ್ಕಾರದ ನೀತಿ ನಿರ್ದೇಶಕ ತತ್ವಗಳ ಕಡೆ ಗಮನವನ್ನು ಕೇಂದ್ರೀಕರಿಸಿದರು. ಮೊದಲಿನದು ಜನಸಾಮಾನ್ಯರಿಗೆ ನಿಷೇಧಾತ್ಮಕ ಸ್ವಾತಂತ್ರ್ಯವನ್ನು ದಯಪಾಲಿಸಿದರೆ, ಎರಡನೆಯದು ಅವರಿಗೆ ಸಕಾರಾತ್ಮಕ ಸ್ವಾತಂತ್ರ್ಯವನ್ನು ನೀಡುವಂಥದು ಎಂದರು. ಸ್ವತಂತ್ರ ಭಾರತದ ದುರಂತವೆಂದರೆ ಈ ಎರಡನೆಯ

ಅಂಶವನ್ನು ಸಂಪೂರ್ಣವಾಗಿ ಕಡೆಗಣಿಸಿರುವುದು. ತಾವು ಹೆಸರಿಸದ ನೆಹರೂ ಅವರ ಅಭಿವೃದ್ಧಿ ಮಾದರಿಯು 'ಕೈಗಾರಿಕೀಕೃತ ಪಶ್ಚಿಮದ ಒಯ್ಯಾರ'ವನ್ನು ಆಧರಿಸಿದ್ದು ಎಂದರು. ಅದು ಪ್ರೋತ್ಸಾಹಿಸಿದ್ದು ಬಂಡವಾಳಾಧಾರಿತ ಭಾರಿ ಕೈಗಾರಿಕೆಗಳನ್ನು, ಜೊತೆಗೆ ಬಂಡವಾಳ, ಯಂತ್ರೋಪಕರಣಗಳು ಹಾಗೂ ತಾಂತ್ರಿಕತೆಯನ್ನೂ ವಿದೇಶದಿಂದ ಆಮದು ಮಾಡಿಕೊಂಡಿತು. ಇದರಿಂದಾಗಿ ದೇಶ ದೊಡ್ಡ ಋಣದಲ್ಲಿ ಬೀಳುವಂತಾಯಿತು. ಆನಂತರ ಬಂದುದು ಖೋಟ ಸಮಾಜವಾದ, ಇದರಲ್ಲಿ ಲೈಸನ್ಸ್‌ರಾಜ್ ಮತ್ತು ಅಧಿಕಾರಿಶಾಹಿಗಳು ಪ್ರಮುಖವಾಗಿದ್ದವು. ಇದಂತೂ ಭ್ರಷ್ಟಾಚಾರದ ನೆಲೆ, ಲಂಚದಿಂದಲೇ ಮಜಾ ಮಾಡುವಂಥದು. ನಗರಗಳಲ್ಲಿನ ಶೇಕಡ ಹತ್ತು ಭಾಗದ ಜನರು ಈ ಅಭಿವೃದ್ಧಿ ಮಾದರಿಯ ಫಲಗಳನ್ನು ಉಣ್ಣುವಂತಾಯಿತು. ಹಳ್ಳಿಗಾಡಿನ ಶೆಕಡ ೭೫ ಮಂದಿ ಮೂಲಭೂತ ಸೌಕರ್ಯಗಳಿಂದಲೂ ವಂಚಿತರಾದರು. ನಿದರ್ಶನಕ್ಕೆ, ನಿರ್ದೇಶಕ ತತ್ವಗಳು ಪ್ರತಿಪಾದಿಸಿದ ಸಾಕ್ಷರತೆಯಿಂದಲೂ ಅವರು ವಂಚಿತರಾದರು, ಭಾರತದ ಆರ್ಥಿಕ ಬದುಕಿನ ಬುನಾದಿಯು ಕೃಷಿ ಎಂಬುದನ್ನು ಪ್ರತಿಪಾದಿಸಿ, ಕೈಗಾರಿಕೆಗಳಂತೆಯೇ ವೈಜ್ಞಾನಿಕವಾಗಿ ಅದನ್ನು ವ್ಯವಸ್ಥಿತವಾಗಿ ಸುಧಾರಿಸಬೇಕಾದ ಆವಶ್ಯಕತೆಯಿದೆಯೆಂದು ಹೇಳಿದರು. "ನನ್ನ ದೃಢವಾದ ಅಭಿಪ್ರಾಯವೆಂದರೆ, ಕೃಷಿಯೂ ಒಂದು ಕೈಗಾರಿಕೆಯೇ, ಹೀಗಾಗಿ ಅದನ್ನೂ ಸೂಕ್ತವಾಗಿಯೂ ವೈಜ್ಞಾನಿಕವಾಗಿಯೂ ಬೆಳೆಸಬೇಕಾಗಿದೆ" ಎಂದರು. ನೀರಾವರಿ ಯೋಜನೆಗಳನ್ನು ಕಡೆಗಣಿಸಿರುವುದರ ಬಗ್ಗೆಯೂ ಅವರು ಗಮನ ಸೆಳೆದರು. ತಮ್ಮದೇ ಲೆಕ್ಕಾಚಾರಗಳ ಪ್ರಕಾರ, ಕೃಷಿಯ ಮೇಲಿ ಹೂಡಿಕೆಯಿಂದ ೨೫% ವರಮಾನ ಬರುತ್ತಿದೆ ಎಂದರು. "ಸಾರ್ವಜನಿಕ ವಲಯದಲ್ಲಾಗಲೀ ಖಾಸಗೀ ವಲಯದಲ್ಲಾಗಲೀ ಈ ಬಂಡವಾಳಕ್ಕೆ ಇಷ್ಟರಮಟ್ಟಿಗಿನ ಆದಾಯ ತರುವ ಬೇರಾವುದಾದರೂ ಕೈಗಾರಿಕೋದ್ಯಮವಿದೆಯೇ?" ಎಂದವರು ಪ್ರಶ್ನಿಸಿದರು. ಆಮೇಲೆ ಅವರು ಪ್ರಸ್ತಾಪಿಸಿದ್ದು ಗ್ರಾಮೀಣ ಪ್ರದೇಶಗಳಲ್ಲಿನ ಶುಚಿತ್ವ ಮತ್ತು ಆರೋಗ್ಯಗಳ ಬಗ್ಗೆ. ಅದನ್ನೂ ಹೀನಾಯವಾಗಿ ಕಡೆಗಣಿಸಲಾಗಿದೆ ಎಂದರು. ಗೊಬ್ಬರ ಅನಿಲ ಸ್ಥಾವರಗಳ ಪ್ರಾಮುಖ್ಯದ ಬಗ್ಗೆ ವಿವರಿಸಿ, ಈ ವಿಷಯದಲ್ಲಿಯೂ ಭಾರತವು ಚೀನಕ್ಕಿಂತ ಕೆಳಮಟ್ಟದಲ್ಲಿದೆ ಎಂದರು. ನಮ್ಮ ವಿದ್ಯುತ್ ಸಮಸ್ಯೆಯ ಕುರಿತು ಹೊಚ್ಚ ಹೊಸ ಬಗೆಯ ಆಲೋಚನೆಯು ಅಗತ್ಯವಾಗಿದೆ ಎಂದು ಮತ್ತೆ ಜೈವಿಕ ತಂತ್ರಜ್ಞಾನದತ್ತ ಹೊರಳಿದರು. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಬಂಡವಾಳ ಹೂಡಿಕೆಯಲ್ಲಿ ಪಾಲುದಾರರಾಗಿರುವ ಭಾರಿ ಜೈವಿಕ ಅನಿಲ ಯೋಜನೆಯು ಮಾತ್ರ ಇಂಧನ ಸಮಸ್ಯೆಗೆ ವ್ಯಾವಹಾರಿಕ ಪರಿಹಾರ ಒದಗಿಸಬಲ್ಲುದು. ಜೈವಿಕ ಅನಿಲ ತಂತ್ರಜ್ಞಾನ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆಯ ಅಗತ್ಯವಿದೆ ಎಂದರು. ಗೃಹ ಕೈಗಾರಿಕೆಗಳ ಸುತ್ತ ಬೆಳೆಸುವ

ಗಾಂಧೀಯ ಮಾರ್ಗಗಳಿಂದ ಮಾತ್ರವೇ ಹಳ್ಳಿಗಳ ನಿರುದ್ಯೋಗ ಸಮಸ್ಯೆಗಳನ್ನು ಪರಿಹರಿಸಬಹುದು. ನೆಹರೂ ಮಾದರಿಯ ಅಭಿವೃದ್ಧಿಯು "ಆಲೋಚನಾರಹಿತ ಸರ್ಕಾರ ಮತ್ತು ಹಣವಂತ ಬಂಡವಾಳದಾರರು ಸೇರಿ ಇಂಥ ಕೈಗಾರಿಕೆಗಳನ್ನು ಹೆಚ್ಚಾಗಿ ಸ್ಥಾಪಿಸಲು ಸಂಚು ಮಾಡುತ್ತಿದ್ದಾರೆ" ಎಂದು ಆಪಾದಿಸಿದರು. ಈ ನೀತಿಯನ್ನವರು ವಸಾಹತು ಆರ್ಥಿಕ ಧೋರಣೆಯ ಮುಂದುವರಿಕೆ ಎಂದು ಖಾರವಾಗಿ ಕರೆದರು. ೧೯೪೭ರ ಬಳಿಕ ಅಳವಡಿಸಿಕೊಳ್ಳಲಾದ ಅಭಿವೃದ್ಧಿ ಮಾದರಿಯು ಭಾರತದ ವಾಸ್ತವಗಳ ಅರಿವಿನ ಮೇಲೆ ಮಾಡಿದ್ದಲ್ಲ, ಅದರಲ್ಲೂ "ಇದು ಕಡಿಮೆ ಜನಸಂಖ್ಯೆ, ಕಾರ್ಮಿಕ ಕೊರತೆಯ ದೇಶವಲ್ಲ" ಎಂಬ ನಿಜಸ್ಥಿತಿಯರಿಯದುದರ ಫಲ ಎಂದರು. ಒಟ್ಟಾರೆ, ಬಂಡವಾಳಾಧಾರಿತ ಆರ್ಥಿಕ ವ್ಯವಸ್ಥೆಯ ಬದಲು ಉದ್ಯೋಗಾಧಾರಿತ ಆರ್ಥಿಕತೆಯ ಕಡೆ ನಮ್ಮ ಆಯ್ಕೆಗಳು ಬದಲಾವಣೆಗೊಳ್ಳಬೇಕು. ಬಡತನದ ಸಮಸ್ಯೆಗೂ ನಿರುದ್ಯೋಗಕ್ಕೂ ನೇರವಾದ ಸಂಬಂಧವಿದೆ ಎಂದರು. ಹಳ್ಳಿ ಪ್ರದೇಶಗಳಲ್ಲಿನ ಭೂಹಂಚಿಕೆಯ ಕಡೆ ಗಮನ ಹರಿಸಿದ ನಿಜಲಿಂಗಪ್ಪನವರು, ಇಡೀ ಭೂಮಿಯನ್ನು "ಆರ್ಥಿಕಸಾಧ್ಯವೂ ನಿರ್ವಹಣಾಸಾಧ್ಯವೂ ಆದ ರೀತಿಯಲ್ಲಿ ವಿಭಾಗಿಸಬೇಕು." ನೀರಾವರಿ ಪ್ರದೇಶಗಳಿಗೆ ಇದು ಆರು ಎಕರೆಯೂ ಖುಷ್ಕಿ ಜಮೀನಿಗೆ ೨೦ ರಿಂದ ೩೦ ಎಕರೆಯೂ ಆಗುತ್ತದೆ. ಬೇರಾವ ಆದಾಯವೂ ಇಲ್ಲದ ವ್ಯಕ್ತಿಯು ಈ ವಿಭಾಗಗೊಂಡ ಭೂಮಿಯ ತುಣುಕನ್ನು ನಿಯಂತ್ರಿಸಬೇಕು. ಇದನ್ನವರು ಭೂಮಿಯ ಸಾಮಾಜಿಕೀಕರಣ ಎಂದು ಕರೆದರು. ಗ್ರಾಮ ಭಾರತವಾದ ಬಳಿಕ, ಅವರ ಗಮನ ಸ್ವಲ್ಪ ಮಟ್ಟಿಗೆ ಹರಿದದ್ದು ನಗರ ಭಾರತದ ಕಡೆಗೆ, ಬದುಕು ಅಸಾಧ್ಯವಾಗಿರುವ ಅಲ್ಲಿನ ವಿಕೃತವೂ ಊದಿಕೊಂಡಿರುವುದೂ ಆದ ನಗರಗಳ ಕಡೆಗೆ. ಇಂಥ ನಿರ್ವಹಣಾತೀತ ನಗರಗಳ ಜನಸಂಖ್ಯೆಯನ್ನು ಅಲ್ಲಿನ ಕಾರ್ಖಾನೆಗಳನ್ನು ಬೇರೆಡೆಗೆ ವರ್ಗಾಯಿಸುವುದರ ಮೂಲಕ ಹಂಚಬೇಕು. ಬಟ್ಟೆ ಹಾಗೂ ಖಾದ್ಯ ತೈಲಗಳ ಉತ್ಪಾದನೆಗೆ ಕಡಿವಾಣ ಹಾಕಿ, ಅವುಗಳನ್ನು ಭಾರಿ ಯಂತ್ರಗಳಿಲ್ಲದ ವಿಕೇಂದ್ರೀಕೃತ ಸ್ಥಳಿಯ ಘಟಕಗಳಿಗೆ ವರ್ಗಾಯಿಸಬೇಕು. ಭಾರತದ ಹಳ್ಳಿಗಳು ಆವಶ್ಯಕ ವಸ್ತುಗಳಿಗೆ ಸಂಬಂಧಿಸಿದಂತೆ ಸ್ವಯಂಪೂರ್ಣವಾಗುವಂತೆ ಮಾಡಬೇಕು. ಆನಂತರ ಲಂಚಗುಳಿತನ ಮತ್ತು ಕಪ್ಪು ಹಣದ ನಿಯಂತ್ರಣಕ್ಕೆ ಏನು ಮಾಡಬೇಕೆಂಬುದರ ಕಡೆಗೆ ಗಮನಹರಿಸಿದರು. ಆದಾಯದ ಬಗೆಗೆ, ಪ್ರಧಾನ ಮಂತ್ರಿಗಳಿಂದ ಹಿಡಿದು ಹಿರಿಯ ಅಧಿಕಾರಿಗಳವರೆಗೆ ಎಲ್ಲರ ವಾಸ್ತವ ಗಳಿಕೆಗಳ ಕಟ್ಟುನಿಟ್ಟಾದ ಲೆಕ್ಕಪರಿಶೋಧನೆ ನಡೆಯಬೇಕು. ಅಧಿಕಾರಿಶಾಹಿಯ ಸೇವಾಮನೋಭಾವ ರಾಹಿತ್ಯವನ್ನು ಖಂಡಿಸಿದರು. ಸಾಧ್ಯವಾದ ಎಲ್ಲ ಕಠಿಣ ಕ್ರಮಗಳ ಮೂಲಕ ಇದನ್ನು ಸರಿಪಡಿಸಬೇಕು. ಸಾರ್ವಜನಿಕ ಕ್ಷೇತ್ರದ ಅನೇಕ ಘಟಕಗಳ ಆರ್ಥಿಕಾಸಾಧ್ಯ ಸ್ವರೂಪದ

ಬಗ್ಗೆ ವಿಷಾದ ವ್ಯಕ್ತಪಡಿಸಿ, ವ್ಯರ್ಥತೆಯನ್ನು ಕನಿಷ್ಠಗೊಳಿಸಲು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದರು. ಯೋಜನಾ ಆಯೋಗವೆಂಬ ಬಿಳಿ ಆನೆಯ ಬಗೆಗೂ ಅವರಿಗೆ ಅಸಮಾಧಾನ. ಅದು ಸಂವಿಧಾನೇತರ ಮತ್ತು ಪ್ರಾಯಶಃ ಕ್ರಿಯಾರಹಿತ ಎಂದು ಬಣ್ಣಿಸಿದರು! ಕೊನೆಯ ಮಾತಾಗಿ, ಅವರು ಹತ್ತು ಪರಿಹಾರೋಪಾಯಗಳನ್ನು ಸೂಚಿಸಿದರು. ಅವುಗಳೆಂದರೆ:

- ಬಂಡವಾಳಾಧಾರಿತ ಆರ್ಥಿಕ ಕೈಗಾರಿಕೆಯ ಸ್ಥಾಪನೆಯನ್ನು ಪ್ರೋತ್ಸಾಹಿಸದೆ, ಉದ್ಯೋಗಾಧಾರಿತ ಕೈಗಾರಿಕೆಗಳನ್ನು ಸ್ಥಾಪಿಸಿ.
- ಹತ್ತು ವರ್ಷಗಳೊಳಗಾಗಿ ೧೦ ರಿಂದ ೧೨ ಕೋಟಿ ಎಕರೆ ಹೆಚ್ಚು ಜಮೀನನ್ನು ನೀರಾವರಿಗೆ ಒಳಪಡಿಸಿ. ವ್ಯರ್ಥ ವೆಚ್ಚ ಮತ್ತು ಸಮಯವನ್ನುಳಿಸಿದರೆ ಇದು ಸಾಧ್ಯವಾಗುತ್ತದೆ.
- ಕೇಂದ್ರೀಕೃತ ಹಾಗೂ ವಿಕೇಂದ್ರೀಕೃತ ಉತ್ಪಾದನೆಗಳ ನಡುವೆ ಸಂಘರ್ಷವಿದ್ದೆಡೆ, ಎಲ್ಲ ಪ್ರಯತ್ನಗಳಿಂದ ವಿಕೇಂದ್ರೀಕೃತ ಉತ್ಪಾದನೆಯನ್ನು ಪ್ರೋತ್ಸಾಹಿಸಿ.
- ಗಾಂಧೀಜಿಯವರು ಹೇಳಿದ ಸೃಜನಾತ್ಮಕ ಕಾರ್ಯಕ್ರಮಗಳಿಗೆ ಅತ್ಯಧಿಕ ಪ್ರೋತ್ಸಾಹವನ್ನು ನೀಡಿ, ಇದರಿಂದ ಹಳ್ಳಿಗಳು ಸ್ವಸಂಪೂರ್ಣವಾಗುವುದಲ್ಲದೆ ತಮ್ಮ ಕಾಲ ಮೇಲೆ ತಾವು ನಿಲ್ಲಬಲ್ಲವು.
- ಮೇಲೆ ಉಕ್ತವಾದಂತೆ, ಸಾಧ್ಯವಿದ್ದೆಡೆಗಳಲ್ಲೆಲ್ಲ ಅವಕಾಶಗಳನ್ನು ಗೃಹ ಕೈಗಾರಿಕೆಗಳಿಗೆ ಮೀಸಲಿರಿಸಿ.
- ಜೈವಿಕ ಅನಿಲ ಮತ್ತು ನಿರುದ್ಯೋಗದ ಕಾರಣ ಮಾನವ ಇಂಧನವನ್ನು ಬಳಸಿ, ಜಾನುವಾರು ಸಾಮರ್ಥ್ಯವನ್ನು ಪೂರ್ತಿ ಬಳಸಿಕೊಳ್ಳಿ. ಹಳ್ಳಿಗಳಿಂದ ಹತ್ತಿರದ ಮಾರುಕಟ್ಟೆಗಳಿಗೆ ಕೃಷಿ ಉತ್ಪಾದನೆಯಂತಹವುಗಳನ್ನು ಸಾಗಿಸಲು ಎತ್ತಿನ ಗಾಡಿಗಳನ್ನು ಮಾತ್ರ ಬಳಸಿ, ಟ್ರಕ್‌ಗಳನ್ನಲ್ಲ. ಇದರಿಂದ ಪೆಟ್ರೋಲ್ ಉಳಿತಾಯವಾಗುತ್ತದೆ.
- ಸರ್ಕಾರಿ ಉದ್ಯೋಗಿಗಳ ಅನ್ಯಾಯದ ಗಳಿಕೆಯನ್ನು ಕಂಡುಹಿಡಿಯಿರಿ, ಮತ್ತು ಅದನ್ನು ಮುಟ್ಟುಗೋಲು ಹಾಕಿಕೊಳ್ಳಲು ಅನುವಾಗುವಂತಹ ಕಾನೂನುಗಳನ್ನು ರಚಿಸಿ.
- ತಪ್ಪು ಮಾಡುವ ಸರ್ಕಾರಿ ಉದ್ಯೋಗಿಗಳಿಗೆ ವಿಭಿನ್ನ ಶಿಕ್ಷೆಗಳನ್ನು ನೀಡುವಂತಿರಲಿ. ಸಾಧ್ಯವಾದೆಡೆಯಲ್ಲೆಲ್ಲ "ದುಡಿಸಿಕೊಳ್ಳಿ, ಬಿಡಿಸಿಕೊಳ್ಳಿ" ಎಂಬ ಧ್ಯೇಯವನ್ನು ಪಾಲಿಸಿ. ಉತ್ತರದಾಯಿತ್ವ ಮತ್ತು ಶಿಕ್ಷೆಗಳನ್ನು ಜಾರಿಗೊಳಿಸಿ.

- ಸಂಪತ್ತು ಹಾಗೂ ಅಧಿಕಾರಗಳ ಕೇಂದ್ರೀಕರಣವನ್ನು ತಪ್ಪಿಸಿ.
- ಗಾಂಧೀಜಿಯವರನ್ನು ನೆನಪಿಸಿಕೊಳ್ಳಿ, ಅವರನ್ನು ಅನುಸರಿಸಿ.
- "ಸತ್ಯಂ ಶಿವಂ ಸುಂದರಂ."

ಈ ಉಪನ್ಯಾಸದ ಮಹತ್ವವನ್ನು ಎಷ್ಟು ಹೇಳಿದರೂ ಕಡಿಮೆಯೇ. ಅಷ್ಟರ ಮಟ್ಟಿಗೆ ಅದು ಭಾರತದ ಬಹುಮುಖೀ ಕಾರ್ಪಣ್ಯಗಳನ್ನು ವಿಶ್ಲೇಷಿಸುವುದಲ್ಲದೆ, ಅವುಗಳಿಗೆ ಸೂಚಿಸಿರುವ ಪರಿಹಾರೋಪಾಯಗಳಾಗಿವೆ. ಅದನ್ನು ಒಪ್ಪದೆ ಇರಬಹುದು, ಆದರೆ ಅದನ್ನು ಗಂಭೀರವಾಗಿ ಪರಿಗಣಿಸಲೇಬೇಕಾಗುತ್ತದೆ ಹಾಗೂ ನಮ್ಮ ಸಂದಿಗ್ಧ ಸನ್ನಿವೇಶದಲ್ಲಿ ಅದು ಎಷ್ಟರ ಮಟ್ಟಿಗೆ ಕಾರ್ಯಸಾಧ್ಯ ಎಂಬ ಬಗ್ಗೆ ಆಲೋಚಿನೆ ಮಾಡು ವಂತಿದೆ. ಅಧಿಕಾರಶಾಹಿಯ ಸುಧಾರಣೆ ಮುಂತಾದ ಕೆಲವು ಸಲಹೆಗಳು ಸೂಕ್ಷ್ಮತೆಯಿಂದ ಕೂಡಿದ್ದರೂ, ಅಪೇಕ್ಷಣೀಯವೆನಿಸಿದರೂ, ವ್ಯವಹಾರಸಾಧ್ಯ ಎನ್ನಿಸದು. ಆದರೆ ಈ ಉಪನ್ಯಾಸದ ಪ್ರಾಮುಖ್ಯವಿರುವುದು ಅದರ ವಿವರಗಳಲ್ಲಲ್ಲ, ಒಟ್ಟಾರೆಯಾದ ಅದರ ಗಮನದಲ್ಲಿ, ನೆಹರೂ ಮಾದರಿಯ ಅಭಿವೃದ್ಧಿಯ ಅದರ ಕೇಂದ್ರ ವಿಮರ್ಶೆಯಲ್ಲಿ. ಗಾಂಧೀಯ ಆದರ್ಶಗಳಿಗೆ ಅದರ ಬದ್ಧತೆ ಸಂಪೂರ್ಣವಾದುದು, ಪ್ರಾಯಶಃ ಮಹಾತ್ಮರನ್ನು ನೈತಿಕಪತನದ ತುದಿಯಲ್ಲಿರುವ ನಮ್ಮ ದೇಶದ ಬಾಳಿನ ತೆಕ್ಕೆಗೆ ಮತ್ತೆ ತಂದುಕೊಳ್ಳಬೇಕಾದ ಕಾಲ ಸಮೀಪಿಸಿದೆ.

೧೯೮೮ ನೇ ಮೇ ೨೨ ರಂದು ನಿಜಲಿಂಗಪ್ಪನವರು ಬೆಂಗಳೂರಿನಲ್ಲಿ ನಡೆದ ಸ್ವಾತಂತ್ರ್ಯ ಯೋಧರ ಸಮಾವೇಶವೊಂದರ ಅಧ್ಯಕ್ಷತೆ ವಹಿಸಿದ್ದರು. ಆ ಸಂದರ್ಭದಲ್ಲಿ, ನಲವತ್ತು ವರ್ಷಗಳ ಹಿಂದೆ ಸ್ವಾತಂತ್ರ್ಯ ಗಳಿಸಿದರೂ, ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆಗಳು ಹಾಗೆಯೇ ಇವೆಯೆಂದು ವಿಷಾದ ವ್ಯಕ್ತಪಡಿಸಿದರು. ಇದರ ಜವಾಬ್ದಾರಿ ಯನ್ನು ಆಳುವ ವರ್ಗ ಹೊರಬೇಕಾಗಿದೆ, ಅದರಲ್ಲಿಯೂ ಅಧಿಕಾರ ಮತ್ತು ಉನ್ನತ ಸ್ಥಾನಗಳಲ್ಲಿರುವವರು. ಅಧಿಕಾರಸ್ಥ ರಾಜಕಾರಣಿಗಳು ಹಣ ಸಂಪಾದನೆಯ ದೃಷ್ಟಿ ಯಿಂದಾಗಿ ಭ್ರಷ್ಟರಾಗಿದ್ದಾರೆ. ಇದರಿಂದ ಸಂಪತ್ತು ಕೆಲವರಲ್ಲಿಯೇ ಕೇಂದ್ರೀಕರಣ ಗೊಳ್ಳುವಂತಾಗಿದೆ. ಹಳ್ಳಿಗರ ಬಡತನಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಕಾರಣ. ಯೋಜನಾ ಆಯೋಗಕ್ಕೆ ಹಳ್ಳಿಗರ ಮತ್ತು ರೈತರ ದುಸ್ಥಿತಿಯ ಬಗ್ಗೆ ನಿಜವಾದ ಅರಿವಿಲ್ಲ. ಬಡವರ ಕನಿಷ್ಠ ಆವಶ್ಯಕತೆಗಳನ್ನು ಪೂರೈಸಿ ಕ್ರಮೇಣ ಬಡತನವನ್ನು ನಿವಾರಿಸುವ ಯೋಜನೆಗಳಿಗೆ ಒತ್ತು ಕೊಡಲು ಅವರು ಪ್ರಧಾನ ಮಂತ್ರಿ ರಾಜೀವ ಗಾಂಧಿಯವರಿಗೆ ಮನವಿ ಮಾಡಿಕೊಂಡರು. ಆನಂತರ, ೧೯೮೮ ನೇ ಮೇ ೨೯ ರಂದು ಕನ್ನಡಪರ ಸಂಘಟನೆಗಳ ಸಮಾವೇಶವನ್ನು ಉದ್ಘಾಟಿಸಿದರು. ಕನ್ನಡಿಗರ

ಹಿತಾಸಕ್ತಿಗಳನ್ನು ರಕ್ಷಿಸುವುದರಿಂದಾಗಿ ಮಹಾಜನ್ ಮತ್ತು ಮಹಿಷಿ ವರದಿಗಳನ್ನು ಜಾರಿಗೊಳಿಸಲು ಸರ್ಕಾರವನ್ನವರು ಕೇಳಿಕೊಂಡರು. ಸಾಹಿತಿಗಳ ಮತ್ತು ಕಲಾವಿದರ ಬಳಗವು ಆಯೋಜಿಸಿದ್ದ ಈ ಸಮಾವೇಶದಲ್ಲಿ ಮಾತನಾಡುತ್ತ ಅವರು, ಕರ್ನಾಟಕವು ಪ್ರಗತಿಯ ದೃಷ್ಟಿಯಿಂದ ಬೇರಾವ ರಾಜ್ಯಕ್ಕೂ ಕಡಿಮೆಯಿಲ್ಲವೆಂದರು. ಆದರೆ ನಮ್ಮ ಸಂಸ್ಕೃತಿಯನ್ನು ರಾಷ್ಟ್ರೀಯ ಭಾರತೀಯ ಸಂಸ್ಕೃತಿಯ ಭಾಗವಾಗಿ ಅಭಿವ್ಯಕ್ತಿಗೊಳಿಸ ಬೇಕೆಂದು ಕರೆ ನೀಡಿದರು. ಮಹಾಜನ ವರದಿಯಲ್ಲಿ ಕನ್ನಡಿಗರಿಗೆ ಅನ್ಯಾಯವೆಸಗುವ ಅನೇಕ ಅಂಶಗಳಿವೆಯೆಂಬುದನ್ನವರು ಒಪ್ಪಿಕೊಂಡರು, ಆದರೆ ಬೆಳಗಾವಿಯನ್ನುಳಿಸಿ ಕೊಳ್ಳುವ ದೃಷ್ಟಿಯಿಂದ ಅದೆಲ್ಲವನ್ನೂ ಸಹಿಸಿಕೊಳ್ಳಬೇಕಾಗಿದೆಯೆಂದರು. ಕೈಗಾರಿಕೆಗಳ ಸ್ಥಾಪನೆಗೆ ಕನ್ನಡಿಗರು ಮುಂದೆ ಬಾರದಿರುವುದಕ್ಕಾಗಿ ಅವರು ವಿಷಾದ ವ್ಯಕ್ತಪಡಿಸಿ, ಇದರಿಂದಾಗಿ ಹೊರಗಿನವರು ರಾಜ್ಯಕ್ಕೆ ಬರುವಂತಾಗಿದೆಯೆಂದರು. ೧೯೮೮ ರ ಜುಲೈ ೨೮ ರಂದು, ಶಿವಪುರ ಸತ್ಯಾಗ್ರಹದ ೫೦ನೇ ವಾರ್ಷಿಕೋತ್ಸವ ಆಚರಣೆಯ ಸನ್ನಿವೇಶ ದಲ್ಲಿ ಅವರು ಪ್ರಸಿದ್ಧವಾದ ಶಿವಪುರದಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿದರು. ಅದು ೪೧ನೇ ಸ್ವಾತಂತ್ರ್ಯ ದಿನಾಚರಣೆಯೂ ಆಗಿತ್ತು. ೧೯೩೮ರ ಸತ್ಯಾಗ್ರಹದಲ್ಲಿ ಪಾಲು ಗೊಂಡಿದ್ದ ತಗಡೂರು ರಾಮಚಂದ್ರರಾವ್, ಎಂ.ಎಸ್. ಜೋಯಿಸ್ ಮತ್ತು ಡಾ. ಪಾರ್ಥನಾರಾಯಣ ಪಂಡಿತ್ ಅಂತಹ ಕೆಲವರೂ ಸಮಾರಂಭದಲ್ಲಿ ಹಾಜರಿದ್ದರು. ಆಗಾಗ್ಗೆ ಜರುಗುತ್ತಿದ್ದ ಈ ಬಗೆಯ ಸಮಾರಂಭಗಳು ಜನರನ್ನು ಎಚ್ಚರಿಸಲು ಅವಕಾಶ ವಾಗುತ್ತಿದ್ದುವಲ್ಲದೆ, ಬದಲಾಗುತ್ತಿದ್ದ ತಮ್ಮ ಆಲೋಚನೆಗಳಿಗೆ ಮಾತಿನ ರೂಪ ಕೊಡಲೂ ಸಹಾಯಕವಾಗುತ್ತಿದ್ದವು.

ಈ ವೃದ್ಧ ನಾಯಕರಿಗೆ ೧೯೮೮ ಸಂಶಯವಿಲ್ಲದೆ ಅತ್ಯಂತ ದುರ್ಭರ ವರ್ಷ ವಾಗಿತ್ತು. ಅವರ ೬೨ ವರ್ಷ ವಯಸ್ಸಿನ ಬಾಳ ಸಂಗಾತಿ ಮತ್ತು ಜೀವನದ ಬೆನ್ನೆಲು ಬಾಗಿದ್ದ ಮುರಿಗೆಮ್ಮನವರು ೧೯೮೮ ನೇ ಅಕ್ಟೋಬರ್ ೧೦ ರಂದು ಬೆಂಗಳೂರಿನ ಖಾಸಗಿ ನರ್ಸಿಂಗ್ ಹೋಂ ಒಂದರಲ್ಲಿ ನಿಧನರಾದರು. ಅವರ ಮಕ್ಕಳಲ್ಲೊಬ್ಬರ ಪ್ರಕಾರ, ಅವರು ಮರಣಕ್ಕಾಗಿ ಎದುರು ನೋಡುತ್ತಿದ್ದರು, ಅದಕ್ಕೆ ಕಾರಣ ಅವರು ಕುರುಡು ಮತ್ತು ಸಂಧಿವಾತದಂತಹ ದೈಹಿಕ ಬೇನೆಗಳಿಂದ ನರಳುತ್ತಿದ್ದು ಇತರರಿಗೆ ಕಷ್ಟ ಕೊಡಲು ಇಷ್ಟಪಡದಿದ್ದುದು ಮತ್ತು ಹಿಂದೂ ಹೆಂಗಸರಂತೆ ಅವರೂ ಮುತ್ತೈದೆ ಸಾವನ್ನು ಬಯಸಿದುದು. ಭಾರಿ ಹೃದಯಾಘಾತದ ಮೂಲಕ ಅವರನ್ನು ಸಾವು ಅಪ್ಪಳಿಸಿತು. ಸಾಮಾನ್ಯವಾಗಿ ಭಾವುಕತೆಗೆ ಒಳಗಾಗದಿರುತ್ತಿದ್ದ ನಿಜಲಿಂಗಪ್ಪನವರು ಮಗುವಿನಂತೆ ಬಿಕ್ಕಿ ಬಿಕ್ಕಿ ಅತ್ತ ಎರಡನೆಯ ಪ್ರಸಂಗ ಇದು. ಮೊದಲನೆಯದು ಅವರು ತಮ್ಮ ತಾಯಿಯನ್ನು ಕಳೆದುಕೊಂಡಾಗ. ಮುರಿಗೆಮ್ಮನವರು ಅಸಾಧಾರಣ

ಹೆಂಗಸಾದರೂ ಭಾರತೀಯ ಸಂಸ್ಕೃತಿ ಸಂಪ್ರದಾಯಗಳಗೆ ಹೊರತಾಗಿದ್ದವರಲ್ಲ. ಅವರು ಓದಿದ್ದು ಕನ್ನಡ ೫ ನೇ ತರಗತಿಯವರೆಗೆ ಮಾತ್ರ. ಅವರು ಕನ್ನಡವನ್ನು ಓದುತ್ತಿದ್ದರೂ ಬರವಣಿಗೆ ಕಷ್ಟವೇ ಆಗುತ್ತಿತ್ತು. ಅವರು ತಾಳ್ಮೆಯ ಸಾಕಾರ, ಸರಳತೆಯ ಮೂರ್ತರೂಪ. ಗಂಡ ಮತ್ತು ಸಂಸಾರಗಳ ಕಡೆಗೇ ಅವರ ಮುಖ್ಯ ಗಮನ. ಅವರಿಗೆ ರಾಜಕೀಯದಲ್ಲಿ ಎಂದೂ ಆಸಕ್ತಿಯಿರಲಿಲ್ಲ, ತಾವು ಮುಖ್ಯಮಂತ್ರಿಯೊಬ್ಬರ ಹೆಂಡತಿ ಯೆಂದು ಎಂದೂ ತೋರಿಸಿಕೊಂಡವರಲ್ಲ. ಆದರೆ ಅವರ ದೃಢ ಬೆಂಬಲವಿಲ್ಲದಿದ್ದರೆ ನಿಜಲಿಂಗಪ್ಪನವರ ರಾಜಕೀಯ ಜೀವನ ಸಮಸ್ಯಾತ್ಮಕವಾಗಿಬಿಡುತ್ತಿತ್ತು. ಕುಟುಂಬದ ಎಲ್ಲ ಹೊಣೆ ಹೊತ್ತು ಅವರು ಸಾಂಸಾರಿಕ ಅಡ್ಡಿಗಳಿಲ್ಲದೆ ರಾಜಕಾರಣದಲ್ಲಿ ಭಾಗಿ ಯಾಗಲು ಯಜಮಾನರಿಗೆ ಅನುವುಮಾಡಿಕೊಟ್ಟರು. ಅವರು ದೇವರು ಧರ್ಮಗಳಲ್ಲಿ ನಂಬಿಕೆಯಿಟ್ಟಿದ್ದ ಸಂಪ್ರದಾಯಶರಣ ಮಹಿಳೆ. ಅವರ ಪ್ರಮುಖ ಶಕ್ತಿಯೆಂದರೆ ಆಳವಾದ ಮತ್ತು ಸ್ಥಿರವಾದ ವ್ಯಕ್ತಿತ್ವ, ಇದರಿಂದ ಬದುಕಿನ ಕಷ್ಟಗಳನ್ನೆದುರಿಸಲು ಅವರಿಗೆ ಸಾಮರ್ಥ್ಯ ವುಂಟಾಯಿತು. ೧೯೮೮ ರ ಅಕ್ಟೋಬರ್ ೧೧ ರಂದು ಚಿತ್ರದುರ್ಗದ ಬಳಿ ಅವರ ದೇಹವನ್ನು ಮಣ್ಣುಮಾಡಲಾಯಿತು. ಇದರಿಂದ ನಿಜಲಿಂಗಪ್ಪನವರಿಗಾದ ವೈಯಕ್ತಿಕ ನಷ್ಟದ ಆಳ ಅಗಲಗಳನ್ನು ವಿವರಿಸುವುದು ಅಸಾಧ್ಯ. ಜೀವನಚರಿತ್ರಕಾರನು ಇಂತಹ ಖಾಸಗೀ ಕ್ಷಣಗಳಿಂದ ದೂರವಿರುವುದೇ ಪ್ರಾಯಶಃ ಲೇಸು.

ಸ್ಥಿತಪ್ರಜ್ಞ ಮನೋಭಾವದಿಂದ ಕೂಡಿದ ವ್ಯಕ್ತಿಯಾದ ನಿಜಲಿಂಗಪ್ಪನವರು ತಮಗಾಗಿದ್ದ ಈ ವೈಯಕ್ತಿಕ ನಷ್ಟದಿಂದ ಆತ್ಮಸಾಕ್ಷಿ ಮತ್ತು ಪ್ರಜ್ಞಾವಂತ ರಾಜಕಾರಣದ ಪ್ರಚಾರದ ಮೇಲೆ ಪರಿಣಾಮವುಂಟಾಗಲು ಬಿಡಲಿಲ್ಲ. ಸಾರ್ವಜನಿಕ ಸಂಪರ್ಕದ ಮೂಲಕ ಕ್ರಿಯಾಶೀಲರಾಗಿಯೇ ಮುಂದುವರಿದರು. ಅಕ್ಟೋಬರ್ ೨, ೧೯೮೯ರ ಗಾಂಧಿ ಜಯಂತಿಯಂದು ಅವರು ಹುಬ್ಬಳ್ಳಿಯ ಲಯನ್ಸ್ ಕ್ಲಬ್ ಏರ್ಪಡಿಸಿದ್ದ ಸಮಾರಂಭ ದಲ್ಲಿ ಮಾತನಾಡಿದರು. ಸತ್ಯ ಅಹಿಂಸೆಗಳ ಮೂಲಕ ಶಸ್ತ್ರಾಸ್ತ್ರಗಳಿಲ್ಲದೆಯೇ ಶತ್ರುವನ್ನು ಗೆದ್ದು ದೇಶಕ್ಕೆ ಸ್ವಾತಂತ್ರ್ಯ ತಂದಿದ್ದ ಗಾಂಧೀಜಿಯವರನ್ನು ನಾವು ಮರೆತೇಬಿಟ್ಟಿರುವ ಬಗ್ಗೆ ಅವರು ವಿಷಾದ ವ್ಯಕ್ತಪಡಿಸಿದರು. ಸ್ವಾರ್ಥರಹಿತವೂ ಜನಸೇವೆಗಾಗಿ ಬದುಕನ್ನು ಮುಡಿಪಾಗಿಟ್ಟವರೂ ಆಗಿದ್ದ ನಾಯಕರುಗಳಲ್ಲಿ ಗಾಂಧೀಜಿ ಪ್ರಮುಖರೆಂದು ನಿಜಲಿಂಗಪ್ಪ ನವರು ಬಣ್ಣಿಸಿದರು. ಸ್ವಲ್ಪ ಮಟ್ಟಿಗಾದರೂ ಗಾಂಧೀಯ ಮಾರ್ಗವನ್ನನುಸರಿಸಲು ಸಭಿಕರಿಗೆ ಕರೆ ನೀಡಿದರು. ಧರ್ಮಗ್ಲಾನಿಯಾದಾಗ ತಾನು ಅವತರಿಸಿ ಬರುವೆನೆಂಬ ಕೃಷ್ಣನ ಮಾತನ್ನವರು ನೆನಪಿಸಿಕೊಂಡರು. ಇದನ್ನು ದೇವರ ಅವತಾರ ಎಂದು ನಿಜಲಿಂಗಪ್ಪ ನವರು ಕರೆಯದೆ, ಧರ್ಮರಕ್ಷಣೆಗಾಗಿ ಆಗುವ ಮಾನವನ ಅವತಾರ ಎಂದು ವ್ಯಾಖ್ಯಾ ನಿಸಿದರು. ಅಂತಹ ಮಾನವರೇ ರಾಮ, ಬುದ್ಧ, ಏಸು ಮತ್ತು ಬಸವ ಮುಂತಾದವರು.

ಅವರಿಗಿದ್ದುದು ವಿಶ್ವ ಮಾನವ ಕಲ್ಯಾಣದ ಗುರಿ. ಇವರ ಸಂದೇಶಗಳ ಬಗ್ಗೆ ಸ್ವಲ್ಪ ಹೊತ್ತು ವಿವರಿಸಿದ ಬಳಿಕ ಅವರು ಗಾಂಧೀಜಿಯವರನ್ನು ಇವರೆಲ್ಲರಲ್ಲಿ ಅತ್ಯಂತ ಶ್ರೇಷ್ಠ ಎಂದು ಕರೆದರು. ೧೯೯೮ ರ ಅಕ್ಟೋಬರ್ ೨೨ ರಂದು, ಬೆಂಗಳೂರಿನಲ್ಲಿ ಪತ್ರಿಕೆಗಳವರ ಜೊತೆ ಮಾತನಾಡುತ್ತ, ತಮಗೆ ಯಾವುದೇ ರಾಜಕೀಯ ಪಕ್ಷದ ಬಗ್ಗೆ ಗೌರವ ಉಳಿದಿಲ್ಲ ಎಂದು ನುಡಿದರು. ಜ್ಯೋತಿ ಬಸು ಅವರೊಬ್ಬರು ಮತ್ತು ಬಿಜೆಪಿ ನಾಯಕರನ್ನುಳಿದ ರಾಜಕೀಯ ನಾಯಕರನ್ನೆಲ್ಲ ಅವರು ಟೀಕಿಸಿದರು. ಆದರೆ ಇದು ವ್ಯಕ್ತಿಗತ ಮೆಚ್ಚುಗೆಯೇ ವಿನಾ ಈ ನಾಯಕರ ಸಿದ್ಧಾಂತಗಳಿಗೆ ಸಂಬಂಧಿಸಿದ್ದಲ್ಲ ಎಂದೂ ಸೇರಿಸಿದರು. ಬಿಜೆಪಿಯ ಕೋಮುವಾದಕ್ಕೆ ಮತ್ತು ಮಾರ್ಕ್ಸಿಸಂನ ಭಾರತೀಯ ರೂಪಕ್ಕೆ ಅವರು ವಿರೋಧವಾಗಿದ್ದರು ಎಂಬುದು ಸರ್ವವಿದಿತವಾದುದು. ಒಂದು ಗುಂಪಾಗಿ ಇಡೀ ರಾಜಕೀಯ ನಾಯಕರೆಲ್ಲ ಭ್ರಷ್ಟರು ಎಂದು ಕರೆದರು. ಎಲ್ಲ ಮುಖ್ಯ ಮಂತ್ರಿಗಳೂ ಪ್ರಧಾನ ಮಂತ್ರಿಗಳೂ ಭ್ರಷ್ಟಾಚಾರದ ಆರೋಪ ಹೊತ್ತಿರುವುದರತ್ತ ಗಮನ ಸೆಳೆದರು. "ಯಾರು ಶುದ್ಧರು?" ಎಂದು ಕೇಳಿದ ಅವರು, ಬಿಜೆಪಿ ನಾಯಕರು ಕಳಂಕರಹಿತರಾದರೂ ಆ ಪಕ್ಷಕ್ಕೆ ಭವಿಷ್ಯವಿಲ್ಲ ಎಂದರು. ಇದಕ್ಕೆ ಕಾರಣ ಅದನ್ನು ಆರ್‌ಎಸ್‌ಎಸ್ ನಿಯಂತ್ರಿಸುತ್ತಿರುವುದು. ಮುಂಬರುವ ಚುನಾವಣೆಗಳ ಬಗ್ಗೆ ಮಾತನಾಡುತ್ತ, ಮತದಾನ ಮಾಡಲು ಜನರಿಗೆ ಮನವಿ ಮಾಡಿಕೊಂಡರು. ಪಕ್ಷಗಣನೆಯಿಲ್ಲದೆ ಅತ್ಯಂತ ಸೂಕ್ತ ವ್ಯಕ್ತಿಗೆ ಮತ ನೀಡುವಂತೆ ಜನರನ್ನು ಕೇಳಿಕೊಂಡರು. ಬಾಬ್ರಿ ಮಸೀದಿ ಮತ್ತು ರಾಮಜನ್ಮಭೂಮಿ ವಿವಾದಕ್ಕೆ ಸಂಬಂಧಿಸಿದಂತೆ, ಅದೊಂದು ವಿಷಾದಕರ ಘಟನೆ ಎಂದರು. ದೇಶದ ಐಕಮತ್ಯವನ್ನು ಹಾಳುಮಾಡುವ ಯಾವುದೇ ಪ್ರಯತ್ನಕ್ಕೆ ಬೆಂಬಲ ನೀಡಬಾರದೆಂದರು. ಧಾರ್ಮಿಕ ಸಾಮರಸ್ಯಕ್ಕೆ ಬೇಕಾದುದು ಜನರು ತಮ್ಮ ತಮ್ಮ ನಂಬಿಕೆಯಂತೆ ಪೂಜೆ ಪ್ರಾರ್ಥನೆಗಳಲ್ಲಿ ತೊಡಗಲು ಅವಕಾಶ ನೀಡುವುದೇ ಆಗಿದೆ ಎಂದರು. ಹಿಂದೂ-ಮುಸ್ಲಿಮರಿಬ್ಬರೂ ಒಟ್ಟಿಗೇ ಪೂಜಿಸುವ ಕರ್ನಾಟಕದ ಬಾಬಾಬುಡನ್ ಗಿರಿಯ ನಿದರ್ಶನವನ್ನು ಅವರು ನೀಡಿದರು. ಈ ಪರಿಪಾಟವನ್ನು ವಿಸ್ತರಿಸಬೇಕೆಂದರು. ಜವಾಹರ್ ರೋಜಗಾರ್ ಯೋಜನೆಯನ್ನವರು ಗ್ರಾಮೀಣ ಉದ್ಯೋಗ ನೀಡುವ ಯೋಜನೆಗಳಲ್ಲಿ ಅತ್ಯಂತ ಅಸೂಕ್ತವಾದುದು ಎಂದರು. ಏಕೆಂದರೆ ನೆಹರೂ ಅವರಿಗೆ ಗ್ರಾಮೀಣ ಉದ್ಯೋಗದ ಬಗ್ಗೆ ನಂಬಿಕೆಯೇ ಇರಲಿಲ್ಲ, ಅದಕ್ಕಾಗಿ ತಾವು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದು ನೆಹರೂ ಹೆಸರಿನ ಬದಲು ಗಾಂಧೀಜಿಯವರ ಹೆಸರಿಡುವಂತೆ ಸೂಚಿಸಿರುವುದಾಗಿ ಹೇಳಿದರು. ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದ ರಾಮಕೃಷ್ಣ ಹೆಗಡೆಯವರೂ ಈ ಯೋಜನೆಯ ಹೆಸರನ್ನು ಬದಲಿಸುವ ಆಲೋಚನೆಯ ಬಗ್ಗೆ ಸೂಚನೆ ನೀಡಿದ್ದರು. ರಾಜಕೀಯ ಪಕ್ಷಗಳ ಬಗ್ಗೆ ನಿಜಲಿಂಗಪ್ಪ

ನವರಿಗಿದ್ದ ತಿರಸ್ಕಾರಕ್ಕೆ ಕಾರಣ ಅವು ರಾಜಕೀಯ ಛಿದ್ರೀಕರಣ, ರಾಜಕೀಯ ಅನಿಶ್ಚಿತತೆ ಮತ್ತು ಅಸ್ಥಿರತೆಗಳಿಗೆ ಎಡೆಮಾಡಿಕೊಡುತ್ತವೆ ಎಂಬುದು. ೧೯೮೯ ರಲ್ಲಿ ಲೋಕಸಭೆಗೆ ನಡೆದ ಚುನಾವಣೆಗಳು ಇದನ್ನು ನಿಸ್ಸಂದಿಗ್ಧವಾಗಿ ಸಾಬೀತುಪಡಿಸಿದ್ದವು. ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತ ಬಂದಿರಲಿಲ್ಲ, ಕಾಂಗ್ರೆಸ್ (ಐ) (೫೨೫ ರಲ್ಲಿ ೧೯೨) ಅತ್ಯಂತ ಹೆಚ್ಚು ಸ್ಥಾನಗಳನ್ನು ಗಳಿಸಿತ್ತು. ೮೮ ಸ್ಥಾನಗಳನ್ನು ಪಡೆದ ಬಿಜೆಪಿ ಮೂರನೆಯ ಸ್ಥಾನದಲ್ಲಿತ್ತು.

ಯುವಕರಾಗಿದ್ದಾಗ ನಿಜಲಿಂಗಪ್ಪನವರಿಗೆ ಸ್ಫೂರ್ತಿಯ ಸೆಲೆಯಾಗಿದ್ದವರಲ್ಲಿ ಹರ್ಡೇಕರ್ ಮಂಜಪ್ಪನವರೂ ಒಬ್ಬರು. ಕರ್ನಾಟಕದಲ್ಲಿ ಲಿಂಗಾಯತರ ರಾಜಕಾರಣದ ಮೇಲೆ ಆಳವಾಗಿ ಪ್ರಭಾವ ಬೀರಿದ ಈ ಧೀಮಂತ ನಾಯಕರು ಆ ಸಮುದಾಯದಲ್ಲಿ ಗಾಂಧೀವಾದ ಮತ್ತು ಕಾಂಗ್ರೆಸ್‌ನ್ನು ಆಳವಾಗಿ ಬಿತ್ತಿದವರು. ಮಂಜಪ್ಪನವರದು ಶ್ರೇಷ್ಠ ಬೌದ್ಧಿಕತೆ, ಕನ್ನಡದಲ್ಲಿ ಬರೆದ ಅತ್ಯಂತ ಶ್ರೇಷ್ಠ ರಾಜಕೀಯ ಚಿಂತಕರು ಅವರು. ಅವರನ್ನು ಜನರು ಕರ್ನಾಟಕದ ಗಾಂಧಿ ಎಂದೇ ಕರೆಯುತ್ತಿದ್ದರು. ಆದರೆ ಭಾರತಕ್ಕೆ ಸ್ವಾತಂತ್ರ್ಯ ಬರುವ ಮೊದಲೇ ಅವರು ತೀರಿಕೊಂಡರು. ಗಾಂಧೀಯ ಮಾರ್ಗಕ್ಕೆ ಬದ್ಧರಾಗಿದ್ದರೂ ಅವರು ಗಾಂಧೀಜಿಯ ಮೂಕ ಅನುಚರರಾಗಿರಲಿಲ್ಲ, ೧೯೯೦ರಲ್ಲಿ ಮಂಜಪ್ಪನವರ ಶತಮಾನೋತ್ಸವವನ್ನು ಆಚರಿಸಲಾಯಿತು. ಆ ಆಚರಣೆಯ ಭಾಗವಾಗಿ, ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 'ಕರ್ನಾಟಕದ ಗಾಂಧಿ: ಹರ್ಡೇಕರ್ ಮಂಜಪ್ಪ' ಎಂಬ ಹೆಸರಿನ ಸ್ಮರಣ ಸಂಪುಟವೊಂದನ್ನು ಹೊರತಂದಿತು, ಅದರಲ್ಲಿ ಮಂಜಪ್ಪನವರ ರಾಜಕೀಯ ಚಿಂತನೆಗಳನ್ನು ಕುರಿತು ಬರೆದ ಈ ಲೇಖಕನ ಒಂದು ಲೇಖನವಿತ್ತು. ಆ ಸಂಪುಟವನ್ನು ಧಾರವಾಡದಲ್ಲಿ, ೧೯೯೦ನೇ ಏಪ್ರಿಲ್ ೨೧ ರಂದು ಬಿಡುಗಡೆಗೊಳಿಸಿದವರು ನಿಜಲಿಂಗಪ್ಪನವರೇ. ಮಂಜಪ್ಪನವರ ಮೇಲೆ ಬಸವೇಶ್ವರ ಮತ್ತು ಗಾಂಧೀಜಿ ಇಬ್ಬರ ಪ್ರಭವವೂ ಆಗಿತ್ತೆಂದು ನಿಜಲಿಂಗಪ್ಪನವರು ಹೇಳಿದರು, ಆ ಬಣ್ಣನೆ ಸ್ವತಃ ನಿಜಲಿಂಗಪ್ಪನವರಿಗೂ ಅನ್ವಯಿಸುವಂಥದೇ. ಅವರ ಪ್ರಭಾವವಿದ್ದರೂ ಮಂಜಪ್ಪನವರೆಂದೂ ಸ್ವಂತ ಹಾಗೂ ಸ್ವತಂತ್ರ ಆಲೋಚನಾಕ್ರಮವನ್ನು ಬಿಟ್ಟುಕೊಟ್ಟವರಲ್ಲ. ನಿದರ್ಶನಕ್ಕೆ, ವರ್ಣಾಶ್ರಮ ಪದ್ಧತಿಯಲ್ಲಿನ ಗಾಂಧೀಜಿಯವರ ನಂಬಿಕೆಯನ್ನವರು ಅಲ್ಲಗಳೆದದ್ದು. ಇವತ್ತು ಕೂಡ ಜಾತಿಗಳು ನಮ್ಮ ಬದುಕಿನಲ್ಲಿ ದೊಡ್ಡ ಪಾತ್ರ ವಹಿಸುತ್ತಿವೆ ಎಂದು ನಿಜಲಿಂಗಪ್ಪನವರು ವಿಷಾದ ವ್ಯಕ್ತಪಡಿಸಿದರು. ಈ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಬರಲು ಅಸಂಖ್ಯ ಅನ್ಯಾಯಗಳು ನಡೆಯುತ್ತಿವೆ ಎಂದರು. ಕರ್ನಾಟಕ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರದ ನಿವೃತ್ತ ಪ್ರಾಧ್ಯಾಪಕ ದಿವಂಗತ ಜಿ.ಎಸ್. ಹಾಲಪ್ಪನವರು ಮಂಜಪ್ಪನವರ ಪ್ರಬುದ್ಧ ಕನ್ನಡ ಬರಹಗಳನ್ನೆಲ್ಲ

ಸಂಪಾದಿಸಿ ಪ್ರಕಟಿಸಿದ್ದರು. ಆ ಯೋಜನೆಯಲ್ಲಿ ಪಾಲುಗೊಳ್ಳುವ ಸುಯೋಗ ವಿಶ್ವವಿದ್ಯಾಲಯದಲ್ಲಿ ಹಾಲಪ್ಪನವರ ಕಿರಿಯ ಸಹೋದ್ಯೋಗಿಯಾಗಿದ್ದ ಈ ಜೀವನಚರಿತ್ರೆಕಾರನಿಗೂ ದೊರೆತಿತ್ತು. ಸಂಸ್ಕೃತ ಭಾಷೆಯ ಬಗ್ಗೆ ಪ್ರಸ್ತಾಪಿಸಿ, ಅದೊಂದು ಶ್ರೇಷ್ಠ ಭಾಷೆಯಾದರೂ, ಅದರಲ್ಲಿನ ತಿಳಿವಳಿಕೆಯಿಂದ ಜನಸಾಮಾನ್ಯರನ್ನು ದೂರವಿಟ್ಟ ಬಗೆಯ ಬಗ್ಗೆ ಅವರು ವಿಷಾದಿಸಿದರು. ಜನಸಾಮಾನ್ಯರಿಗೂ ಸಂಸ್ಕೃತ ಹತ್ತಿರವಾಗಿದ್ದರೆ, ದೇಶದ ಚರಿತ್ರೆ ಸಂಪೂರ್ಣವಾಗಿ ಭಿನ್ನವಾಗಿರುತ್ತಿತ್ತೆಂದರು.

ಬದುಕಿನ ಈ ಹೊಸ ಘಟ್ಟದಲ್ಲಿ ಅವರು ತೊಡಗಿಕೊಂಡಿದ್ದ ಒಂದು ಚಟುವಟಿಕೆಯೆಂದರೆ, ಸಮಾಜಸೇವಾ ಸಂಸ್ಥೆಗಳನ್ನು ಪ್ರೋತ್ಸಾಹಿಸಿ, ಅವುಗಳಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ನೆರವು ಸಿಕ್ಕುವಂತೆ ಮಾಡುತ್ತಿದ್ದ ಸಹಾಯ. ೧೯೯೦ರ ಮೊದಲಲ್ಲಿ, ಅವರು ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಲ್ಲಿ ಬನವಾಸಿ ವಲಯ ಅಭ್ಯುದಯ ಸಮಿತಿಯು ಯೋಜಿಸಿದ್ದ ಗ್ರಾಮೀಣ ಪುನಾರಚನೆ ಮತ್ತು ನಿರ್ವಹಣಾ ತರಬೇತಿ ಕೇಂದ್ರವೊಂದರ ಸ್ಥಾಪನೆಗೆ ನೀಡಿದ ಪ್ರೋತ್ಸಾಹ ಇದಕ್ಕೊಂದು ನಿದರ್ಶನ. ೧೯೯೦ರ ಫೆಬ್ರವರಿ ೨೭ ರಂದು ಪ್ರಧಾನ ಮಂತ್ರಿ ವಿ.ಪಿ. ಸಿಂಗ್ ಅವರಿಗೆ ಈ ಕುರಿತು ಪತ್ರವೊಂದನ್ನು ಬರೆದು, ಈ ಯೋಜನೆಗೆ ಸರ್ಕಾರದ ಸಕ್ರಿಯ ಬೆಂಬಲ ಕೋರಿದರು. ಜುಲೈ ೧೯೯೨ರಲ್ಲಿ, ಕರ್ನಾಟಕ ವೇದಿಕೆ ಸಂಘಟಿಸಿದ್ದ ಭಾರಿ ರೈತ ಸಮಾವೇಶವೊಂದರಲ್ಲಿ ಮಾತನಾಡುತ್ತ, ಅವರು ಕಾವೇರಿ ವಿವಾದದಲ್ಲಿ ಕರ್ನಾಟಕದ ಪರ ವಾದಿಸಿದರು. ಕಾವೇರಿ ನೀರು ವಿವಾದದ ಬಗ್ಗೆ ಟ್ರಿಬ್ಯೂನಲ್ ಸ್ಥಾಪಿಸಿದ್ದನ್ನು ವಿರೋಧಿಸಿ ಪ್ರಧಾನ ಮಂತ್ರಿ ಪಿ.ವಿ. ನರಸಿಂಹ ರಾವ್ ಅವರಿಗೆ ಕಾಗದ ಬರೆದರು. ಈ ತ್ರಿಮೂರ್ತಿ ಸಮಿತಿಯು ನೀರು ಹಂಚಿಕೆಯ ಬಗೆಗಿನ ಯಾವುದೇ ನಿರ್ದೇಶಕ ಸೂತ್ರಗಳಿಲ್ಲದೆಯೇ ರಚಿತವಾಗಿದೆಯೆಂದು ಟೀಕಿಸಿದರು. ಸಂಬಂಧಪಟ್ಟ ತಜ್ಞರನ್ನು ಸೇರಿಸಿ, ಸಮಂಜಸ ವಿವರಗಳನ್ನು ಕಲೆಹಾಕಿ, ಮೊದಲು ಸೂಕ್ತ ಮಾರ್ಗದರ್ಶನಗಳನ್ನು ರಚಿಸಲು ಪ್ರಧಾನ ಮಂತ್ರಿಗಳಿಗೆ ಮನವಿ ಮಾಡಿದರು. ಕರ್ನಾಟಕದ ಮೇಲೆ ಅನ್ಯಾಯಗಳ ಸುರಿಮಳೆ ಸುರಿಸುತ್ತಿದೆಯೆಂದು ಅವರು ಕೇಂದ್ರದ ಮೇಲೆ ಆರೋಪ ಹೊರಿಸಿದರು. ಇದನ್ನು ಜನ ಸುಮ್ಮನೆ ನೋಡಿಕೊಂಡು ಕೂತಿರುವುದಿಲ್ಲ ಎಂದವರು ಎಚ್ಚರಿಸಿದರು. ತಾವು ಮುಖ್ಯಮಂತ್ರಿಯಾಗಿದ್ದಾಗ ಆರಂಭಿಸಿದ್ದ ಹತ್ತು ಯೋಜನೆಗಳು ಈಗಲೂ ಪೂರ್ಣಗೊಳ್ಳದ ಬಗ್ಗೆ ಅವರು ವಿಷಾದ ವ್ಯಕ್ತಪಡಿಸಿದರು. ರಾಜ್ಯದಲ್ಲಿ ಈಗಿರುವ ಏಕೈಕ ಭಾರಿ ನೀರಾವರಿ ಯೋಜನೆಯೆಂದರೆ ಕೃಷ್ಣರಾಜ ಸಾಗರ. ಕೇಂದ್ರವು ರೈತರ ಹಿತವನ್ನು ಕಡೆಗಣಿಸಿದೆ, ಅನೇಕ ನಿರ್ದೇಶಕ ತತ್ವಗಳ ಅನುಷ್ಠಾನದಲ್ಲಿ ಸೋತಿದೆ ಎಂದರು. ಸಾಕ್ಷರತೆ ಮತ್ತು ಶಿಕ್ಷಣಗಳು ರೈತರನ್ನು ತಲುಪಿಯೇ ಇಲ್ಲ ಎಂದರು. ಭ್ರಷ್ಟಾಚಾರವು ವ್ಯಾಪಕವಾಗಿದೆ,

ಅನೇಕರು ಅನ್ಯಾಯದ ಹಣವನ್ನು ಗುಡ್ಡೆಹಾಕಿಕೊಂಡಿದ್ದಾರೆ ಎಂದರು. ನ್ಯಾಯಾಂಗವು ಕೂಡ ಕೆಳಮಟ್ಟಕ್ಕಿಳಿದಿದೆ ಎಂದವರು ದುಃಖಗೊಂಡರು. ಟ್ರಿಬ್ಯೂನಲ್ ಸದಸ್ಯರುಗಳೂ ಭ್ರಷ್ಟಾಚಾರದಲ್ಲಿ ತೊಡಗುವ ಬಗ್ಗೆ ತಮ್ಮಲ್ಲಿ ಗಟ್ಟಿ ಆಧಾರಗಳಿವೆ ಎಂದೂ ಹೇಳಿದರು. ದೇವೇಗೌಡರಿಂದ ಅದಕ್ಕೆ ಸಂಬಂಧಿಸಿದ ವಿಡಿಯೋ ಕ್ಯಾಸೆಟ್ ಪಡೆಯಬೇಕೆಂದು ಅವರು ನರಸಿಂಹರಾವ್ ಅವರಿಗೆ ಸೂಚಿಸಿದರು. ತಮಿಳುನಾಡು ಸರ್ಕಾರವು ಕಾವೇರಿ ನೀರನ್ನು ಕಾನೂನುಬಾಹಿರವಾಗಿ ಬಳಕೆಮಾಡುತ್ತಿರುವುದೆಂದು ಅವರು ಆಪಾದಿಸಿದರು. ಈ ವಿಷಯದಲ್ಲಿ ತನಿಖೆ ನಡೆಸುವಂತೆ ಪ್ರಧಾನ ಮಂತ್ರಿಗಳಲ್ಲಿ ಮನವಿಮಾಡಿಕೊಂಡರು. "ನಾವು ನಿಮಗೆ ಬಾಳೇಕುಂದ್ರಿಯವರನ್ನು ನೀಡುತ್ತೇವೆ. ನೀವೂ ನಿಮ್ಮ ಪರಿಣತರನ್ನು ಕಳಿಸಿಕೊಡಿ. ಏನು ನಡೆಯುತ್ತಿದೆ ಎಂಬುದನ್ನು ನಾವು ನಿಮಗೆ ತೋರಿಸುತ್ತೇವೆ. ಸಂಕುಚಿವೂ ಕ್ಷುಲ್ಲಕವೂ ಆದ ಹಿತಾಸಕ್ತಿಗಳನ್ನು ತೊರೆದು ಸತ್ಯದ ಬೆಳಕಿನಲ್ಲಿ ಸಮಸ್ಯೆಗೆ ಪರಿಹಾರ ಹುಡುಕೋಣ. ತಮ್ಮ ಹೆಂಡತಿಯರಿಗಾಗಿ ಒಳ್ಳೆಯ ಸೀರೆಗಳು ಹಾಗೂ ಬೆಲೆ ಬಾಳುವ ಬೆಳ್ಳಿಬಂಗಾರಗಳಿಗೆ ಮಾರುವೋಗುವ ನ್ಯಾಯಾಧಿಪತಿಗಳ ಮೇಲೇಕೆ ಅವಲಂಬಿಸಿ ಸಮಯ ವ್ಯರ್ಥ ಮಾಡುತ್ತೀರಿ?" ಎಂದವರು ಪ್ರಶ್ನಿಸಿದರು. ಕರ್ನಾಟಕ ವಿಕಾಸ ವೇದಿಕೆಯು ೧೯೯೨ನೇ ಜುಲೈ ೨೭ ರಂದು ಟ್ರಿಬ್ಯೂನಲ್ ವಿರುದ್ಧ ಕಾವೇರಿ ಜಲಾನಯನ ಪ್ರದೇಶದ ಜಿಲ್ಲೆಗಳ ಸುಮಾರು ೫೦,೦೦೦ ಮಂದಿ ರೈತರ ಬೃಹತ್ ರ್‍ಯಾಲಿಯೊಂದನ್ನು ನಡೆಸಿತು. ವೇದಿಕೆಯ ಸಂಚಾಲಕರು ಎಚ್.ಡಿ ದೇವೇಗೌಡರು, ಆಗ ಸಮಾಜವಾದಿ ಎಂಪಿ ಆಗಿದ್ದವರು. ಅದರಲ್ಲಿ ಭಾಗವಹಿಸಿದ್ದ ನಿಜಲಿಂಗಪ್ಪನವರು ರ್‍ಯಾಲಿಗೆ, ಕರ್ನಾಟಕದ ಹಿತಾಸಕ್ತಿಗಳನ್ನು ಕಾಪಾಡಲು ಜನತೆಯು ಒಂದು ಶಾಂತಿಯುತ ಹೋರಾಟವನ್ನು ನಡೆಸುವುದೆಂದು ಒಂದು ಪ್ರಮಾಣ ವಚನವನ್ನು ಬೋಧಿಸಿದರು. ಕಾವೇರಿ ಮತ್ತು ಕೃಷ್ಣಾ ನದಿ ನೀರಿನ ವಿಷಯದಲ್ಲಿ ಕರ್ನಾಟಕದ ವಿಷಯದಲ್ಲಿ ತೋರಿಸುತ್ತಿರುವ ಮಲತಾಯಿ ಧೋರಣೆಯನ್ನು ಖಂಡಿಸಿ, ನಿಜಲಿಂಗಪ್ಪನವರು ಅದರ ವಿರುದ್ಧ ಹೋರಾಟ ನಡೆಸಲು ಜನತೆಗೆ ಕರೆ ಕೊಟ್ಟರು. ನದಿ ನೀರು ಹಂಚಿಕೆಯ ಬಗ್ಗೆ ಮೂರು ತಿಂಗಳೊಳಗಾಗಿ ಒಂದು ನೀತಿಯನ್ನು ರೂಪಿಸಬೇಕೆಂದು ಅವರು ಪ್ರಧಾನಮಂತ್ರಿಗಳನ್ನು ಕೇಳಿಕೊಂಡರು.

ಬೆಂಗಳೂರಿನಲ್ಲಿ ೧೯೯೧ ರ ಮಾರ್ಚ್ ೩೦ ರಂದು ಪತ್ರಕರ್ತರನ್ನುದ್ದೇಶಿಸಿ ಮಾತನಾಡುತ್ತ ನಿಜಲಿಂಗಪ್ಪನವರು ದೇಶವನ್ನು ಸಂರಕ್ಷಿಸಲು ಮೂರನೆಯ ಶಕ್ತಿಯೊಂದು ಆವಶ್ಯಕವಾಗಿದೆ ಎಂದರು. "ಒಂದೆಡೆ ನೆಹರೂ ಅವರ ಓಬೀರಾಯನ ಕಾಲದ ತತ್ವಗಳ ನ್ನಾಧರಿಸಿದ ಕಾಂಗ್ರೆಸ್ (ಐ), ಇನ್ನೊಂದೆಡೆ ಹಿಂದುತ್ವವನ್ನೇ ಅವಲಂಬಿಸಿರುವ ಬಿಜೆಪಿ ಇವುಗಳಿವೆ" ಎಂದು ಹೇಳಿ, ಬಿಜೆಪಿಯು ಅಧಿಕಾರಕ್ಕೆ ಬರಲು ಅವಕಾಶ ಕೊಡುವುದು

ಮಹಾ ಅಪಾಯವನ್ನು ತಂದುಕೊಂಡಂತೆ ಎಂದರು. "ಮೂಲಭೂತವಾದಿಗಳು, ಜಾತಿವಾದಿಗಳು ಮತ್ತು ಕೋಮುವಾದಿಗಳು ದೇಶವನ್ನು ಆಳುವುದಕ್ಕೆ ಅವಕಾಶ ಕೊಡಬೇಕೇ? ಹಿಂದುತ್ವ ಅಂದರೆ ಏನು ಎಂಬುದು ನನಗೆ ಅರ್ಥವಾಗಿಲ್ಲ, ಆದರೆ ಬಿಜೆಪಿ ಅವರ ದೃಷ್ಟಿಯಲ್ಲಿ ಹಿಂದುತ್ವ ಎಂದರೆ ಮುಸ್ಲಿಂ ವಿರೋಧ" ಎಂದರು. ಕಾಂಗ್ರೆಸ್ ಅವಕಾಶವಾದಿಗಳ ಮತ್ತು ಹತೋಟಿಯಿಲ್ಲದ ಅಧಿಕಾರದಾಹಿಗಳ ಕೈವಶ ವಾಗಿದೆ. ನರಸಿಂಹರಾಯರ ಸರ್ಕಾರವು ದೇಶದ ಅಭಿವೃದ್ಧಿಯಲ್ಲಿ ಆಸಕ್ತಿ ತಾಳದೆ, ಕೇವಲ ಉಸಿರಾಡಲು ಹೆಣಗುತ್ತಿದೆ ಎಂದರು. ನಿಜಲಿಂಗಪ್ಪನವರು ತಮ್ಮ ದೀರ್ಘ ಮೌನವನ್ನು ಮುರಿದು ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ್ದರು. ದೇಶದ ಎಲ್ಲ ಪಿಡುಗು ಗಳಿಗೂ ನೆಹರೂ ಅವರೇ ಕಾರಣ ಎಂದರು. ಯೋಜನಾ ಆಯೋಗವು ಅಜ್ಞಾನದ ಸಮಿತಿ ಎಂದವರು ಲೇವಡಿ ಮಾಡಿ ಮನಮೋಹನ ಸಿಂಗ್ ಅವರನ್ನು ಬ್ಯಾಂಕ್‌ಗಳ ಗುಲಾಮ ಎಂದು ಕರೆದರು. "ಗಾಂಧೀಜಿಯವರೊಬ್ಬ ಭಯಂಕರ ಮುದಿ ಆಷಾಢ ಭೂತಿ" ಎಂದು ನೆಹರೂ ಕರೆದಿದ್ದ ಬಗ್ಗೆ ಬಂದಿದ್ದ ಪತ್ರಿಕಾ ವರದಿಯೊಂದರ ಕಡೆಗೆ ಗಮನ ಸೆಳೆದಾಗ, ಇದರಿಂದ ನೆಹರೂ ತಮ್ಮನ್ನು ತಾವೇ ಖಂಡಿಸಿಕೊಂಡಿದ್ದಾರೆ ಎಂದು ನಿಜಲಿಂಗಪ್ಪ ಉತ್ತರಿಸಿದರು. "ಗಾಂಧೀಜಿಯಂಥವರು ಸಾವಿರ ವರ್ಷದ ಲ್ಲೊಬ್ಬರೂ ಹುಟ್ಟಲಾರರು.... ಮನಮೋಹನ ಸಿಂಗ್ – ಎಂತಹ ಒಳ್ಳೆಯ ಹೆಸರು! – ಒಳ್ಳೆಯ ವ್ಯಕ್ತಿ, ಆದರೆ ಅವರು ಬ್ಯಾಂಕ್‌ಗಳ ಗುಲಾಮ. ಅವರಿಗೆ ಭಾರತ ಎಂದರೇ ನೆಂಬುದು ಗೊತ್ತಿದೆಯೇ? ಅವರ ನೀತಿಗಳು ದೇಶಕ್ಕೆ ಎಂತಹ ವಿಪತ್ತನ್ನು ತಂದಿದೆ ಎಂಬುದು ಗೊತ್ತಿದೆಯೇ?" ಎಂದು ಕೋಪದಿಂದ ಪ್ರಶ್ನಿಸಿದರು. ಯೋಜನಾ ಆಯೋಗ ವನ್ನವರು ಒಂದು ಅನಿಷ್ಟ, ಸಂವಿಧಾನಬಾಹಿರ ಸಂಸ್ಥೆ, 'ಕಮ್ಯುನಿಸ್ಟ ರಷ್ಯಾದ ನಕಲು' ಎಂದು ಕರೆದರು. ಅದರ ಸದಸ್ಯರು ವಿದೇಶೀಯರು ಬರೆದ ಪುಸ್ತಕಗಳಿಗೆ ಬದ್ಧರಾದವರು ಎಂದು ಜರೆದರು. ನಮ್ಮ ಆರ್ಥಿಕ ವ್ಯವಸ್ಥೆ, ಉತ್ಪಾದಕತೆ ಮತ್ತು ರಫ್ತುಗಳ ಬಗ್ಗೆ ತಿಳಿಯದೆ ಯಂತ್ರಗಳು, ಬಂಡವಾಳ ಮತ್ತು ತಾಂತ್ರಿಕತೆಯ ಆಮದಿಗೆ ಶಿಫಾರಸು ಮಾಡುವ ಯೋಜನಾ ಆಯೋಗವನ್ನು ಅವರು ಖಂಡಿಸಿದರು. ಮೊಯಿಲಿ ಸರ್ಕಾರದ ಬಗ್ಗೆ ಅವರು ಮೆಚ್ಚಿಕೆ ವ್ಯಕ್ತಪಡಿಸಿದರು. "....ನನಗೆ ಮೊಯಿಲಿಯವರ ಪರಿಚಯ ಅಷ್ಟಾಗಿಲ್ಲ. ಅವರನ್ನು ಒಂದೆರಡು ಬಾರಿ ಕಂಡಿದ್ದೇನೆ, ಆದರೆ ಇದುವರೆಗೆ ಅವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ...." ಎಂದರು. ಹಿಂದಿನ ಮುಖ್ಯಮಂತ್ರಿ ಮತ್ತು ಮುಖ್ಯ ಕಾರ್ಯದರ್ಶಿಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. "ಮಧ್ಯರಾತ್ರಿ ನ್ಯಾಯ ಮೂರ್ತಿಗಳನ್ನು ನಿದ್ದೆಯಿಂದ ಎಬ್ಬಿಸಿ ಕ್ಲಾಸಿಕಲ್ ಕಂಪ್ಯೂಟರ್ ಕೇಸಿನಲ್ಲಿ ನಿರೀಕ್ಷಣಾ ಜಾಮೀನು ಪಡೆದರು. ಇದು ಏನೇನನ್ನೋ ಹೇಳುತ್ತದೆ" ಎಂದರು. ಭ್ರಷ್ಟರು ಮತ್ತು

ಲಂಚಗುಳಿಗಳನ್ನು ಸಿಬಿಐಗೆ ಒಪ್ಪಿಸಬೇಕು, ಅಧಿಕಾರದಲ್ಲಿರುವವರೆಲ್ಲರ ಆಸ್ತಿ ತನಿಖೆ ಆಗಬೇಕು ಎಂದರು. 'ಬಿ' ವರದಿಗಳ ಬಗ್ಗೆ ಪ್ರಸ್ತಾಪಿಸಿ, ಕೋಪಗೊಂಡ ಅವರು, "ಈ ದರಿದ್ರ ಸಂಗತಿ ಇಲ್ಲಿ ನಡೆದಿದೆ" ಎಂದು ಆಕ್ರೋಶ ವ್ಯಕ್ತಪಡಿಸಿದರು. "ಅಹಿಂಸಾ ವಾದದ ಹೊರತಾಗಿಯೂ ನನಗೆ ಇವರೆಲ್ಲರನ್ನು ಹಿಡಿದು ತದುಕಬೇಕು ಎನಿಸುತ್ತದೆ" ಎಂದರು. ಬದನವಾಳು ಗ್ರಾಮದಲ್ಲಿನ ದೇವಸ್ಥಾನದ ವಿವಾದದ ಸಂದರ್ಭದಲ್ಲಿ ಲಿಂಗಾಯತರು ಹರಿಜನರನ್ನು ಕೊಂದುಹಾಕಿದ ಬಗ್ಗೆ ಉಲ್ಲೇಖಿಸಿ, ತಾವೇ ಲಿಂಗಾಯತ ರಾದ ನಿಜಲಿಂಗಪ್ಪನವರು, ಅದನ್ನು 'ಕ್ಷಮಿಸಲಾಗದ ಅಪರಾಧ' ಎಂದು ಬಣ್ಣಿಸಿದರು. ದೇವಸ್ಥಾನಗಳ ಅರ್ಚಕರ ಹುದ್ದೆಗಳನ್ನು ರದ್ದುಮಾಡಿ, ಎಲ್ಲ ಜಾತಿಗಳವರಿಗೂ ಅವುಗಳಿಗೆ ಪ್ರವೇಶ ದೊರೆಯುವಂತೆ ಮಾಡಬೇಕೆಂದರು. ಪ್ರತಿಭಟನೆಯ ದನಿಯಲ್ಲಿ, "ಒಬ್ಬ ಪೂಜಾರಿ ಅಥವಾ ಧಾರ್ಮಿಕ ಮಠವು ದೇವರು ಮತ್ತು ಭಕ್ತನ ನಡುವೆ ಏಕೆ ಬರಬೇಕು?" ಎಂದು ಕೇಳಿದರು. ಈ ವಿಷಯದಲ್ಲಿ ಅವರು ಕ್ರಾಂತಿಕಾರಿ ಬಸವಣ್ಣನ ಮನೋಭಾವವನ್ನು ಪ್ರತಿಧ್ವನಿಸುತ್ತಿದ್ದರು. ಹೆಚ್ಚುತ್ತಿರುವ ದೇಶದಲ್ಲಿನ ಭ್ರಷ್ಟಾಚಾರವನ್ನು ಬೇರುಸಹಿತ ಕಿತ್ತೆಸೆಯಲು ಅವರು ಜನಸಾಮಾನ್ಯರಿಗೆ ಕರೆಯಿತ್ತರು. ನಿಜಲಿಂಗಪ್ಪನವರ ಮಿತ್ರರು ಹಾಗೂ ಅಭಿಮಾನಿಗಳು ಸೇರಿ ೧೯೯೩ರ ಜೂನ್ ೬ ರಂದು ನಿಜಲಿಂಗಪ್ಪ ರಾಷ್ಟ್ರೀಯ ಪ್ರತಿಷ್ಠಾನವನ್ನು ಸ್ಥಾಪಿಸಲು ನಿರ್ಧರಿಸಿದರು. ದೇಶ ನಿರ್ಮಾಣಕ್ಕಾಗಿ ಕಾರ್ಯನಿರ್ವಹಿಸುವ ಗುರಿಯ ಒಂದು ಸರ್ಕಾರೇತರ ಸಂಸ್ಥೆಯಾಗಿ ೧೯೯೩ನೇ ಜೂನ್ ೧೭ ರಂದು ಅದು ನೋಂದಣಿಗೊಂಡಿತು. ಕರ್ನಾಟಕದ ಮಾಜಿ ಮಂತ್ರಿಗಳಲ್ಲೊಬ್ಬರಾದ ಹಾಗೂ ನಿಜಲಿಂಗಪ್ಪನವರ ಆಪ್ತ ಸಹಚರರರಾದ ಎ.ಆರ್. ಬದರೀನಾರಾಯಣ್ ಅವರು ಅದರ ಅಧ್ಯಕ್ಷರಾದುದು ಸೂಕ್ತವಾಗಿಯೇ ಇತ್ತು. ಆ ಹಿಂದೆಯೇ, ೧೯೯೩ರ ಮೇನಲ್ಲಿ ನಿಜಲಿಂಗಪ್ಪನವರು ಜಿ.ಬಿ. ಮಹಾಲಿಂಗ ಶೆಟ್ಟಿ ಅವರ ಮೂಲಕ ಸಂಸ್ಥೆಗೊಂದು ಸಂದೇಶ ಕಳಿಸಿದರು. ಅದರಲ್ಲವರು ದೇಶ ಎದುರಿಸುತ್ತಿರುವ ನಾನಾ ಸಮಸ್ಯೆಗಳ ನಿವಾರಣೆಗೆ ಗಾಂಧೀ ಮಾರ್ಗವೊಂದೇ ಸೂಕ್ತ ಪರಿಹಾರ ಎಂಬ ತಮ್ಮ ನಂಬಿಕೆಯನ್ನು ಪುನರುಚ್ಚರಿಸಿದ್ದರು. ಅಧಿಕಾರ ಮತ್ತು ಸಂಪನ್ಮೂಲಗಳ ವಿಕೇಂದ್ರೀಕರಣವಾಗಬೇಕಾದುದನ್ನು ಒತ್ತಿ ಹೇಳಿ, ಸ್ಥಳೀಯ ಸಂಸ್ಥೆಗಳ ಸ್ವಾವಲಂಬನೆ, ಮತ್ತು ಸಮಾನತೆಯ ಆದರ್ಶಗಳ ಬಗ್ಗೆ ಪುನರ್‌ಪ್ರತಿಪಾದನೆ ಮಾಡಿದ್ದರು. ರಾಷ್ಟ್ರಕವಿ ಕುವೆಂಪು ಅವರ ಪರಿಕಲ್ಪನೆಯಾದ 'ವಿಶ್ವಮಾನವ' ತತ್ವವನ್ನು ಉಲ್ಲೇಖಿಸಿ, ಇಡೀ ಮಾನವಸಂಕುಲದ ಕಲ್ಯಾಣವನ್ನೇ ಅವರು ಬಯಸಿದ್ದರು. ಪತ್ರಕರ್ತ ಗೌತಮ್ ಮಾಚಯ್ಯ ಅವರು 'ಪೂಜ್ಯ ಪಿತಾಮಹ' ಎಂಬ ಶೀರ್ಷಿಕೆಯಡಿ ವಿಶೇಷ ಸುದ್ದಿ ರೂಪಕನ್ನು ಬರೆದರು. ನಿಜಲಿಂಗಪ್ಪನವರ ಇಳಿಗಾಲದಲ್ಲಿ 'ತಾವು ನಿರ್ಮಿಸಿದ್ದ ಆದರ್ಶ

ಗಳ ಅವನತಿಯು ಕಾಡುತ್ತಿದೆ' ಎಂಬುದನ್ನು ಆ ಸಂದೇಶದಲ್ಲಿ ಲೇಖಕರು ಒತ್ತಿ ಹೇಳಿದರು. ಈ ವರ್ಣನೆ ಸೂಕ್ತವಾಗಿಯೇ ಇತ್ತು, ಯಾಕಂದರೆ ದೇಶದ ಎಲ್ಲ ಕ್ಷೇತ್ರಗಳಲ್ಲಿಯೂ ಪತನವುಂಟಾಗಿರುವುದು, ಅದರಲ್ಲಿಯೂ ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರ ಉಲ್ಬಣಿಸಿ ಸಾಂಸ್ಥಿಕ ನೈತಿಕತೆಯ ಇಳಿಮುಖವಾದುದು ನಿಜಲಿಂಗಪ್ಪನವರನ್ನು ಚಿಂತಿತರನ್ನಾಗಿಸಿತ್ತು. ಎಂದಿನಂತೆಯೇ, ಈ ಬೆಳವಣಿಗೆಗಳಿಗೆ ಕಾರಣ ಸ್ವಾತಂತ್ರ್ಯ ಗಳಿಸಿದ ಕೂಡಲೇ ಗಾಂಧೀಯ ಆದರ್ಶಗಳನ್ನು ಮರೆತಿರುವುದು ಎಂದರು.

ಆಗಿನ ಮುಖ್ಯ ಮಂತ್ರಿಗಳಾದ ವೀರಪ್ಪ ಮೊಯಿಲಿಯವರಿಗೆ ೧೯೯೩ರ ಮೇ ೧೬ ರಂದು ಕನ್ನಡದಲ್ಲಿ ಪತ್ರವೊಂದನ್ನು ಬರೆದು, ಬನವಾಸಿಯ ಹರ್ಡೇಕರ್ ಮಂಜಪ್ಪನವರ ನಿವಾಸವನ್ನು ಅವರ ಸ್ಮಾರಕವನ್ನಾಗಿ ಮಾಡಲು ಕೇಳಿಕೊಂಡರು. ಹತ್ತು ಹನ್ನೆರಡನೆಯ ವಯಸ್ಸಿಗೇ ತಾವು ದಾವಣಗೆರೆಯಿಂದ ಹೊರಬರುತ್ತಿದ್ದ 'ಧನುರ್ಧಾರಿ' ಪತ್ರಿಕೆಯ ಮೂಲಕ ಮಂಜಪ್ಪನವರ ಪ್ರಭಾವಕ್ಕೆ ಬಂದುದನ್ನು ನಿಜಲಿಂಗಪ್ಪನವರು ಆ ಪತ್ರದಲ್ಲಿ ಸ್ಮರಿಸಿಕೊಂಡಿದ್ದರು. ಆ ಮಹಾನಾಯಕರೊಡನೆ ತಮ್ಮ ವೈಯಕ್ತಿಕ ಸಂಪರ್ಕವನ್ನು ತಿಳಿಸಿ, ಇದರಿಂದ ತಾವು ಅನೇಕ ವಿಷಯಗಳನ್ನು ಕಲಿತುದಾಗಿ ಹೇಳಿದ್ದರು. ಆ ಹಿಂದೆಯೇ ಮುಖ್ಯ ಮಂತ್ರಿಯಾಗಿದ್ದ ವೀರಪ್ಪ ಮೊಯಿಲಿಯವರಿಗೆ ೧೯೯೩ರ ಫೆಬ್ರವರಿ ೧೦ ರಂದು ಪತ್ರ ಬರೆದು, ಬನವಾಸಿಯಲ್ಲಿ ಬನವಾಸಿ ವಲಯ ಅಭ್ಯುದಯ ಸಮಿತಿಯು ಯೋಜಿಸಿದ್ದ ಗ್ರಾಮೀಣ ತರಬೇತಿ ಸಂಸ್ಥೆಯ ಸ್ಥಾಪನೆಯಲ್ಲಿ ವೈಯಕ್ತಿಕ ಆಸಕ್ತಿಯನ್ನು ತಾಳಿ ಆ ಕೆಲಸವು ಮತ್ತಷ್ಟು ತಡವಾಗದಂತೆ ನೋಡಿಕೊಳ್ಳುವಂತೆ ಕೇಳಿಕೊಂಡಿದ್ದರು. ರಾಜಕೀಯ ಪಕ್ಷಗಳ ಬಗ್ಗೆ ಎಲ್ಲ ಭರವಸೆಗಳನ್ನು ಕಳೆದುಕೊಂಡಿದ್ದ ನಿಜಲಿಂಗಪ್ಪನವರು ಪರ್ಯಾಯವಾಗಿ ಏನು ಆಲೋಚಿಸಿದ್ದರು ಎಂದು ಕೇಳುವುದು ಸೂಕ್ತವಾಗಿಯೇ ಇದೆ. ನಿಜಲಿಂಗಪ್ಪನವರ ಆಪ್ತ ವಲಯದ ಪ್ರಕಾರ, ಅವರ ಮನಸ್ಸಿನಲ್ಲಿದ್ದುದು ಸಂಘರ್ಷರಹಿತ ಒಮ್ಮತದ ರಾಜಕಾರಣ. ಸಾರ್ವಜನಿಕ ಜೀವನದಲ್ಲಿನ ಗಣ್ಯರಿಂದ ಕೂಡಿದ ಒಂದು ಒಮ್ಮತದ ಸಂಸ್ಥೆಯ ಬಗ್ಗೆ ಅವರಲ್ಲಿ ಒಂದು ಆಲೋಚನೆಯಿತ್ತೆಂದು ಕಾಣುತ್ತದೆ. ಈ ಪರಿಕಲ್ಪನೆಯು, ಹಿಂದೆ ಟಿ.ಎನ್. ಶೇಷನ್ ಮತ್ತು ಮನ್ನೋಹನ ಸಿಂಗ್ ಅವರುಗಳು ಸೂಚಿಸಿದ್ದ ರಾಷ್ಟ್ರೀಯ ಒಮ್ಮತ ಸಮಿತಿಯ ಪರಿಕಲ್ಪನೆಗೆ ಹತ್ತಿರವಾದುದು. ಆದರೆ ಇದುವರೆಗೆ, ಈ ಕುರಿತು ನಿಜಲಿಂಗಪ್ಪನವರು ವಿಸ್ತರಿಸಿ ಹೇಳಿಲ್ಲ. ಇದಕ್ಕೆ ಸಂವಾದಿಯಾದುದೆಂದರೆ ರಾಷ್ಟ್ರೀಯ ಸರ್ಕಾರ, ಒಂದರ್ಥದಲ್ಲಿ ಹಿಂದೆಯೇ ಜೆಪಿ ಸೂಚಿಸಿದ್ದ ಪಕ್ಷರಹಿತ ಪ್ರಜಾಪ್ರಭುತ್ವ. ಆದರೆ ಈ ಪರಿಕಲ್ಪನೆಯು ರಾಜಕೀಯ ವಲಯದಲ್ಲಿ ಇನ್ನೂ ಗಂಭೀರ ಪರಿಗಣನೆಗೆ ಒಳಗಾಗಿಲ್ಲ, ರಾಜಕೀಯ ಚರ್ಚೆಗೆ ಕಾರಣವಾಗಿಲ್ಲ. ಆಲೋಚನೆಗೆ ಇದು ಸೂಕ್ತ ವಿಚಾರವಾಗಿದೆ.

ನಿಜಲಿಂಗಪ್ಪನವರ ಸಾರ್ವಜನಕ ಹಾಗೂ ರಾಜಕೀಯ ಬದುಕಿನಲ್ಲಿನ ಒಂದು ಪ್ರಮುಖ ಆಶಯವೆಂದರೆ ನೀರಾವರಿ ಯೋಜನೆಗಳ ಮೂಲಕ ಕೃಷಿ ಅಭಿವೃದ್ಧಿ. ೧೯೯೬ರ ಮೇ ಅಂತ್ಯದ ವೇಳೆಗೆ, ಕರ್ನಾಟಕದ ಆಗಿನ ಮುಖ್ಯಮಂತ್ರಿಗಳಾದ ಎಚ್.ಡಿ. ದೇವೇಗೌಡರಿಗೆ ಸಲಹೆಯೊಂದನ್ನು ಮುಂದಿಟ್ಟು ನೀರಾವರಿ ಯೋಜನೆಗಳನ್ನು ಪೂರೈಸಲು ಹಾಗೂ ರೈತರಿಗೆ ನಿರಂತರ ವಿದ್ಯುತ್ ಒದಗಿಸಲು ಹೇಳಿದ್ದರು. ರೈತರು ತಾವು ಪಡೆದ ಸೇವೆಗೆ ಬೆಲೆ ನೀಡುವಂತೆ ಮಾಡಲೂ ಕೇಳಿಕೊಂಡಿದ್ದರು. ದೇವೇಗೌಡರು ನಿಜಲಿಂಗಪ್ಪನವರನ್ನು ಭೇಟಿಯಾಗಿ ಮಾತನಾಡುತ್ತಿದ್ದಾಗ, ಕೈಗೊಂಡಿರುವ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಅವರು ಗೌಡರಿಗೆ ಸೂಚಿಸಿದರು. "ಎಲ್ಲ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವ ಹಾಗೂ ವಿದ್ಯುತ್ ಉತ್ಪಾದನೆಗೆ ಆದ್ಯತೆ ನೀಡುವ ಪ್ರತಿಜ್ಞೆಯನ್ನು ನಾನು ನಿಮ್ಮ ಸಮ್ಮುಖದಲ್ಲಿಯೇ ತೆಗೆದುಕೊಳ್ಳುತ್ತೇನೆ" ಎಂದು ಗೌಡರು ಉತ್ತರಿಸಿದರು.

ಇಷ್ಟರಲ್ಲಿಯೇ ನಮ್ಮ ಕಥನವು ಕೊನೆಗೊಳ್ಳಲಿರುವುದರಿಂದ, ಐತಿಹಾಸಿಕ ಹಾಗೂ ಸಾರ್ವಜನಿಕ ವ್ಯಕ್ತಿ ನಿಜಲಿಂಗಪ್ಪನವರ ಹಿಂದೆ ಒಬ್ಬ ಖಾಸಗಿ ನಿಜಲಿಂಗಪ್ಪವರೂ ಇದ್ದರೆಂಬುದನ್ನು ನೆನಪಿಸಿಕೊಳ್ಳಲು ಇದು ಸಕಾಲ. ಇದುವರೆಗೆ ನಮ್ಮ ಕಥನವು ಅವರ ಖಾಸಗೀ ಮುಖವನ್ನು ಮರೆತು ಕೇವಲ ಸಾರ್ವಜನಿಕ ಮುಖವನ್ನಷ್ಟೆ ಗಮನಿಸಿತ್ತು. ಆದರೆ ಐತಿಹಾಸಿಕ ಹಾಗೂ ಸಾರ್ವಜನಿಕ ವ್ಯಕ್ತಿಯೊಬ್ಬರ ಜೀವನಕಥನದಲ್ಲಿ ಇದು ಅನಿವಾರ್ಯ. ನಿಜಲಿಂಗಪ್ಪನವರ ಈ ಖಾಸಗಿ ವ್ಯಕ್ತಿತ್ವದ ಒಂದು ಸ್ಥೂಲ ಪರಿಚಯ ವನ್ನಷ್ಟೇ ನೀಡುವುದು ನಮಗೆ ಸಾಧ್ಯವಾಗುತ್ತದೆ. ಅದೃಷ್ಟವಶಾತ್, ನಿಜಲಿಂಗಪ್ಪನವರೇ ಕನ್ನಡ ವಾರಪತ್ರಿಕೆ 'ಕರ್ಮವೀರ'ದ ೧೯೯೬ರ ಮಾರ್ಚಿ ೧೯ ನೇ ತಾರೀಕಿನ ಸಂಚಿಕೆ ಯಲ್ಲಿ ತಾವು ದಿನವನ್ನು ಹೇಗೆ ಕಳೆಯುವರೆಂಬ ಬಗ್ಗೆ ಒಂದು ಚಿತ್ರಣವನ್ನು ನೀಡುತ್ತಾರೆ. ಈ ಸ್ವಕಥನದಿಂದ ಮೂಡುವ ಚಿತ್ರವೆಂದರೆ, ಒಂದು ವಿನಯಶೀಲ, ಸಾಧಾರಣ ಹಾಗೂ ಪಾರದರ್ಶಕ ವ್ಯಕ್ತಿತ್ವದ್ದು. ತಮ್ಮ ದೀರ್ಘಾಯುಷ್ಯದ ಗುಟ್ಟು ತಮ್ಮ ಮಿತಾಹಾರ, ಮದ್ಯಪಾನವಾಗಲೀ ಧೂಮಪಾನವಾಗಲೀ ಇಲ್ಲದ್ದು, ಆಗಾಗ್ಗೆ ವ್ಯಾಯಾಮ ಮಾಡು ವುದು, ಹಾಗೂ ಕಣ್ಣು ತುಂಬ ನಿದ್ದೆಮಾಡುವುದು ಎಂದು ಅವರು ವಿವರಿಸುತ್ತಾರೆ. ಅವರದ್ದು ಶಿಸ್ತುಬದ್ಧ ಬದುಕು, ಮಾಡುವ ಪ್ರತಿ ಕೆಲಸವೂ ಕ್ರಮಬದ್ಧವಾದುದು ಹಾಗೂ ಇತರರೊಡನೆ ಕೂಡಿ ಮಾಡುವಂತಹುದು. ಏಳುವುದು ಬೆಳಿಗ್ಗೆ ೭-೦೦ ಗಂಟೆಗೆ, ಪ್ರಾತಃರ್ವಿಧಿಗಳನ್ನು ಪೂರೈಸಿದ ಬಳಿಕ ಪತ್ರಿಕೆಗಳನ್ನೋದುವುದು. ಪತ್ರವ್ಯಹಾರಗಳ ಕಡೆಗೆ ಗಮನ ಹರಿಸುವುದು, ಅವುಗಳಲ್ಲಿ ಕೆಲವು ಶ್ರಮಪೂರಿತವಾದವು. ಮಧ್ಯಾಹ್ನ ಆಕಾಶವಾಣಿಯಲ್ಲಿ ಪ್ರಸಾರವಾಗುವ ಸಂಗೀತವನ್ನು ಕೇಳುವುದು. ತಮ್ಮ ಸಲಹೆಗಾಗಿ

ಬರುವ ಹಳ್ಳಿಗರೊಡನೆ ಉಭಯಕುಶಲೋಪರಿ ಮತ್ತು ಅವರಿಗೆ ಸಲಹೆ ನೀಡಲು ಅವರ ಸಾಕಷ್ಟು ವೇಳೆ ವ್ಯಯವಾಗುತ್ತದೆ. ಆನಂತರ ಒಂದೂವರೆ ಗಂಟೆಯಷ್ಟು ಹೊತ್ತು ಮಧ್ಯಾಹ್ನದ ವಿಶ್ರಾಂತಿ. ಆದರೆ ಇತ್ತೀಚಿನ ದಿನಗಳಲ್ಲಿ, ಸಾರ್ವಜನಿಕ ಹಾಗೂ ರಾಜಕೀಯ ಬದುಕನ್ನು ಕಾಡುತ್ತಿರುವ ನೈಸರ್ಗಿಕ ವಿಕೋಪ ಹಾಗೂ ದುರಂತಗಳಿಂದಾಗಿ ಅವರು ಮಧ್ಯರಾತ್ರಿ ನಿದ್ದೆಯಿಂದ ಇದ್ದಕ್ಕಿದ್ದಂತೆ ಎಚ್ಚರಗೊಳ್ಳುವಂತಾಗುತ್ತದೆ. ಅವರ ಒಂದು ಕಣ್ಣು ಮಾತ್ರ ಕಾಣುತ್ತದೆ, ಮತ್ತೊಂದು ನಿಮಿತ್ತ ಮಾತ್ರ, ಆದರೆ ಅವರಿಗೆ ಸಮೀಪದೃಷ್ಟಿಯಿದೆ, ದೂರದ ವಸ್ತುಗಳು ಸ್ಪಷ್ಟವಾಗಿ ಕಾಣಿಸುವುದಿಲ್ಲ. ಆದರೆ ಕಿವಿ ಚೆನ್ನಾಗಿದೆ. ಇದೆಲ್ಲ ಗರ್ಗಶಿರ ಚಿತ್ರಣ. ಆದರೆ ಇಂದು, ನಮ್ಮ ಮಾತುಗಳನ್ನು ಕೇಳಿಸಿ ಕೊಳ್ಳಲು ಅವರು ಹೆಣಗಬೇಕಾಗುತ್ತದೆ. ಗಾಂಧೀಜಿಯ ಆದರ್ಶಗಳನ್ನು ನನಸುಮಾಡ ಬೇಕೆಂಬುದು ಅವರ ಆಸೆ. ಅವರಿಗೆ ಸಾವಿನ ಬಗ್ಗೆ ಹೆದರಿಕೆಯಿಲ್ಲ, ಯಾಕಂದರೆ ಅದು ಹುಟ್ಟಿನೊಡನೆಯೇ ಬಂದದ್ದು, ಹೀಗಾಗಿ ಅನಿವಾರ್ಯವಾದುದು. ಅವರಿಗೆ ಹುಟ್ಟಿನ ಹಿಂದಿನ ಅಥವಾ ಸಾವಿನ ನಂತರದ ಜೀವನದಲ್ಲಿಯಾಗಲೀ ಮರುಜನ್ಮದಲ್ಲಿ ಯಾಗಲೀ ನಂಬಿಕೆಯಿಲ್ಲ. ಬದುಕಿರುವಾಗ ಜನಸೇವೆ ಮಾಡಿ ಆನಂತರ ಸಾಯಬಹುದು ಎಂಬುದೇ ಅವರ ಸಂತಸಕ್ಕೆ ಕಾರಣ. ದೇವರ ಅಸ್ತಿತ್ವ ಅಥವಾ ಅನಸ್ತಿತ್ವದ ಬಗ್ಗೆ ಅವರಿಗೆ ಖಚಿತವಾಗದಿರುವುದರಿಂದಾಗಿ ಅವರೊಬ್ಬ ಅಜ್ಞೇಯತಾವಾದಿ. ಬದುಕನ್ನು ಆನಂದದಿಂದ ಕಳೆದು, ಕಾಲ ಬಂದಾಗ ಪ್ರಶಾಂತವಾಗಿ ಸಾಯುವುದು ಸಮಂಜಸ ಎಂದವರ ನಂಬಿಕೆ. ಸತ್ತ ಬಳಿಕ, ದೇಹವು ಪಂಚಭೂತಗಳೊಡನೆ ಸೇರಿಬಿಡುತ್ತದೆ, ಅಷ್ಟೇ. ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಕುವೆಂಪು ಹಾಗೂ ಗಂಗೂಬಾಯಿ ಹಾನಗಲ್ ಅವರೊಡನೆ ನೀಡಿದ 'ನಾಡೋಜ' ಗೌರವ ಪದವಿಯನ್ನು ಅವರು ವಿನಮ್ರತೆಯಿಂದ ಸ್ವೀಕರಿಸಿದರು.

ಅವರ ಆಪ್ತ ಕುಟುಂಬವರ್ಗದ ಬಗ್ಗೆ. ಅವರ ಗಂಡುಮಕ್ಕಳಲ್ಲೊಬ್ಬರು ಈ ವಿವರ ಗಳನ್ನು ಜೀವನಚರಿತ್ರಕಾರನಿಗೆ ನೀಡಿದರು: ಅವರ ಹಿರಿಯ ಸಂತಾನ ಪಾರ್ವತಮ್ಮ ನವರು, ಅವರಿಗೀಗ ೬೮ ವರ್ಷಗಳು. ಅವರು ಮೆಟ್ರಿಕ್ಯುಲೇಷನ್‌ವರೆಗೂ ಓದಿದವರು, ಹುಬ್ಬಳ್ಳಿಯ ಚಹಾ ವ್ಯಾಪಾರಿ ಹಾಗೂ ಗುತ್ತಿಗೆದಾರ ಜಿ.ಬಿ. ಮಹಾಲಿಂಗಶೆಟ್ಟಿ ಅವರೊಡನೆ ಅವರ ಮದುವೆಯಾಯಿತು. ಕಳೆದ ವರ್ಷವಷ್ಟೇ ಅವರು ತಮ್ಮ ಪತಿಯನ್ನು ಕಳೆದು ಕೊಂಡರು. ಅವರಿಗೆ ನಾಲ್ಕು ಜನ ಗಂಡುಮಕ್ಕಳು ಹಾಗೂ ಇಬ್ಬರು ಹೆಣ್ಣುಮಕ್ಕಳು. ತಮ್ಮ ತಮ್ಮಂದಿರಾದ ರಾಜಶೇಖರ್ ಹಾಗೂ ಉಮಾಕಾಂತ್ ಅವರೊಡನೆ ಸೇರಿ 'ಕನ್ನಡ ವರ್ಗೀಕೃತ ಪದಕೋಶ'ವನ್ನವರು ರಚಿಸಿದ್ದಾರೆ. ಎರಡನೆಯ ಸಂತಾನ, ಮಗ ಉಮಾಕಾಂತ್, ಈಗ ೬೬ ವರ್ಷದವರು; ಭೌತಶಾಸ್ತ್ರದಲ್ಲಿ ಎಂಎಸ್‌ಸಿ ಪದವಿ

ಯನ್ನು ಪಡೆದು, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕರಾಗಿದ್ದು ನಿವೃತ್ತರಾದವರು. ಅವರು ಅವಿವಾಹಿತರು. ಮೂರನೆಯವರು, ಎನ್. ರಾಜಶೇಖರ್, ಈಗ ೬೫ ವರ್ಷದವರು, ಪಿಯುವರೆಗೆ ಓದಿ ಬೇಸಾಯವನ್ನು ಕೈಗೊಂಡವರು. ಅವರೀಗ ನಿವೃತ್ತಿ ಜೀವನ ಸಾಗಿಸುತ್ತಿದ್ದಾರೆ, ಅವರೂ ಅವಿವಾಹಿತರು. ಅವರು ನಿಜಲಿಂಗಪ್ಪನವರೊಡನೆ ಚಿತ್ರದುರ್ಗದಲ್ಲಿಯೇ ಇದ್ದು ತಂದೆಯವರನ್ನು ನೋಡಿಕೊಳ್ಳುತ್ತಿದ್ದಾರೆ. ಅವರು ಕುವೆಂಪು ಅವರ 'ಶ್ರೀ ರಾಮಾಯಣದರ್ಶನಂ' ಮಹಾ ಕಾವ್ಯವನ್ನು ಗದ್ಯದಲ್ಲಿ ನಿರೂಪಿಸಿದ್ದಾರೆ, ಅಲ್ಲದೆ ಅವರು ಹಿಂದಿಯಲ್ಲಿ ವರ್ಗೀಕೃತ ಪದಕೋಶವನ್ನು ರಚಿಸಿದ್ದಾರೆ. ಅವರು ಉಮಾಕಾಂತರ ಜೊತೆ ಸೇರಿ ಮೆಟರ್‌ಲಿಂಕ್‌ನ ನಾಟಕ 'ನೀಲಿ ಹಕ್ಕಿಗಳ'ನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ನಾಲ್ಕನೆಯವರು ಅನಸೂಯ ಅವರಿಗೀಗ ೬೩ ವರ್ಷಗಳು. ಅವರೂ ಮೆಟ್ರಿಕ್ಯುಲೇಷನ್‌ವರೆಗೆ ಓದಿದವರು, ಬೆಂಗಳೂರಿನ ಡಾ. ಜಿ. ಚಂದ್ರಶೇಖರಪ್ಪ ಅವರನ್ನು ಮದುವೆಯಾಗಿದ್ದಾರೆ. ಕೆಲವೇ ತಿಂಗಳ ಹಿಂದೆ ಅವರಿಗೆ ಪತಿವಿಯೋಗವಾಯಿತು. ಅವರಿಗೆ ಇಬ್ಬರು ಗಂಡುಮಕ್ಕಳು ಹಾಗೂ ಹಾಗೂ ಒಬ್ಬ ಮಗಳಿದ್ದಾರೆ. ಐದನೆಯವರು, ಗೌರಮ್ಮ, ಈಗ ೬೨ ವರ್ಷದವರು. ಅವರು ಬಿಎಸ್.ಸಿ.ವರೆಗೆ ಓದಿದವರು, ವಿದ್ಯಾರ್ಥಿದೆಸೆಯಲ್ಲಿ ನಿಜಲಿಂಗಪ್ಪನವರಿಗೆ ಸಹಾಯ ಮಾಡಿದ್ದ ಸಾಹುಕಾರ ವೀರಭದ್ರಪ್ಪನವರ ಮಗ ಎಸ್.ವಿ. ಪರಮೇಶ್ವರ್ ಅವರನ್ನು ಮದುವೆಯಾಗಿದ್ದಾರೆ. ಪರಮೇಶ್ವರ್ ಅವರು ಜೀವವಿಮಾ ಕಂಪೆನಿಯಲ್ಲಿ ಅಧಿಕಾರಿಗಳಾಗಿದ್ದರು, ಹದಿನೈದು ವರ್ಷಗಳ ಹಿಂದೆಯೇ ತೀರಿಕೊಂಡರು. ಅವರಿಗೆ ಇಬ್ಬರು ಗಂಡುಮಕ್ಕಳು ಹಾಗೂ ಒಬ್ಬ ಮಗಳು ಇದ್ದಾರೆ. ಆರನೆಯವರು ಗಿರಿಜಮ್ಮ, ಮೆಟ್ರಿಕ್ಯುಲೇಷನ್‌ವರೆಗೆ ಓದಿದವರು. ಬೆಂಗಳೂರಿನಲ್ಲಿರುವ ಮರಳವಾಡಿಯ ಎಂವಿ. ರಾಜಶೇಖರನ್ ಅವರನ್ನು ಮದುವೆಯಾಗಿದ್ದಾರೆ. ರಾಜಶೇಖರನ್ ಅವರು ಮನಿಲಾ ಮೂಲದ ಅಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ. ಅವರಿಗೆ ಇಬ್ಬರು ಹೆಣ್ಣು ಮಕ್ಕಳೂ ಇಬ್ಬರು ಗಂಡುಮಕ್ಕಳೂ ಇದ್ದಾರೆ. ಏಳನೆಯವರು, ಪ್ರತಿಭಾ, ಅವರಿಗೀಗ ೫೪ ವರ್ಷ. ಅವರು ಎಂ.ಎಸ್‌ಸಿ.ಯವರೆಗೂ ಓದಿದವರು, ಐಎಎಸ್ ಅಧಿಕಾರಿಗಳಾದ ಎಸ್.ಬಿ. ಮುದ್ದಪ್ಪನವರನ್ನು ಮದುವೆಯಾಗಿದ್ದಾರೆ. [ಶ್ರೀ ಮುದ್ದಪ್ಪನವರು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾಗಿದ್ದು ಈಚೆಗೆ ನಿವೃತ್ತಿಗೊಂಡಿದ್ದಾರೆ]. ಪ್ರತಿಭಾ ಅವರು ಬೆಂಗಳೂರಿನ ಕಾಲೇಜೊಂದರಲ್ಲಿ ಉಪನ್ಯಾಸಕಿ. ಅವರಿಗೆ ಒಬ್ಬ ಮಗ ಮತ್ತು ಒಬ್ಬ ಮಗಳಿದ್ದಾರೆ. ಪ್ರತಿಭಾ ಅವರು ಸಸ್ಯಶಾಸ್ತ್ರದ ಪಠ್ಯಪುಸ್ತಕವೊಂದರ ಲೇಖಕಿ ಕೂಡ. ಎಂಟನೆಯವರು, ಕಿರಣ್‌ಶಂಕರ್, ಅವರು ಯೇಲ್ ವಿಶ್ವವಿದ್ಯಾಲಯದಿಂದ ಆರ್ಕಿಟೆಕ್ಚರ್‌ನಲ್ಲಿ ಪದವಿ ಪಡೆದಿದ್ದಾರೆ. ಅವರಿಗೀಗ ೫೨ ವರ್ಷಗಳು; ಕರ್ನಾಟಕ

ಪತ್ನಿ ಶ್ರೀಮತಿ ಮುರಿಗೆವ್ವ ಮತ್ತು ಆರು ಹೆಣ್ಣುಮಕ್ಕಳು ಹಾಗೂ ಮೂವರು ಗಂಡುಮಕ್ಕಳೊಡನೆ ಎಸ್ಸೆನ್

ಸರ್ಕಾರದ ಮುಖ್ಯ ಆರ್ಕಿಟೆಕ್ಟ್ ಆಗಿ ಕೆಲಸ ಮಾಡುತ್ತಿದ್ದಾರೆ. ಗಂಡುಮಕ್ಕಳಲ್ಲಿ ಮದುವೆಯಾದವರು ಅವರೊಬ್ಬರೇ, ಅವರಿಗೆ ಒಬ್ಬ ಮಗ ಹಾಗೂ ಒಬ್ಬ ಮಗಳಿದ್ದಾರೆ. ಅತ್ಯಂತ ಕಿರಿಯರೆಂದರೆ ಪುಟ್ಟಮ್ಮ, ೫೦ ವರ್ಷದವರು. ಅವರು ಬಿ.ಎಸ್‌ಸಿವರೆಗೆ ಓದಿದವರು. ಅವರು ಡಾ. ಜಯಾ ಇಸ್ಲೂರ್ ಅವರನ್ನು ಮದುವೆಯಾಗಿ ಕೆನಡಾದಲ್ಲಿ ನೆಲೆಸಿದ್ದಾರೆ. ಅವರಿಗೆ ಇಬ್ಬರು ಗಂಡುಮಕ್ಕಳಿದ್ದಾರೆ. ಹೀಗೆ, ಅದೊಂದು ತುಂಬಿದ ಕುಟುಂಬ, ನಿಜಲಿಂಗಪ್ಪನವರಿಗೆ ಸಮೃದ್ಧವಾಗಿ ಮೊಮ್ಮಕ್ಕಳನ್ನು ನೀಡಿರುವಂಥದು. ನಿಜಲಿಂಗಪ್ಪನವರಿಗೆ ಮೊಮ್ಮಕ್ಕಳೊಡನೆ ಇರುವುದು ಆಟವಾಡುವುದು ಎಂದರೆ ಎಲ್ಲಿಲ್ಲದ ಆಸೆ; ಅವರಿಗೆ ದೊಡ್ಡ ಸಂಖ್ಯೆಯ ಮೊಮ್ಮಕ್ಕಳ ಹಾಗೂ ಮರಿಮಕ್ಕಳ ಪಡೆಯೇ ಇದೆ. ನಿಜಲಿಂಗಪ್ಪನವರು ಪ್ರವಾಸ ಕೈಗೊಂಡಾಗಲೆಲ್ಲ, ನಿಜಲಿಂಗಪ್ಪನವರ ಸೋದರ ಸಂಬಂಧಿ ದಿವಂಗತ ಶ್ರೀ ಎಸ್. ಗುರುನಾಥ್ ಅವರ ಮಗ ಶ್ರೀ ಎಸ್.ಜಿ. ಮಂಜುನಾಥ್ ಅವರೊಡನಿದ್ದು ಅವರ ಯೋಗಕ್ಷೇಮ ನೋಡಿಕೊಳ್ಳುತ್ತಾರೆ.

ಕರ್ಣಾಟಕದ ಮುಖ್ಯಮಂತ್ರಿ ದೇವೇಗೌಡರು ೧೯೯೫ ನೇ ನವೆಂಬರ್ ೩ ರಂದು ಕೈಗಾರಿಕೋದ್ಯಮಿಗಳಲ್ಲಿಯೂ ರೈತರಲ್ಲಿಯೂ ಮನವಿಮಾಡಿಕೊಂಡು, ಸರ್ಕಾರ ಆಲೋಚಿಸುತ್ತಿರುವ ವಿದ್ಯುತ್ ದರ ಏರಿಕೆಯ ಬಗ್ಗೆ ಸರ್ಕಾರದೊಡನೆ ಸಹಕರಿಸಿ ತಮ್ಮ ಕೈಲಾದಷ್ಟನ್ನು ಪಾವತಿಸಬೇಕೆಂದು ಮನವಿ ಮಾಡಿಕೊಂಡರು. ಬೆಂಗಳೂರಿನ ವಿಧಾನ ಸೌಧದ ಎದುರು ಏರ್ಪಾಟಾಗಿದ್ದ ರೈತ ಸಮಾವೇಶವೊಂದರಲ್ಲಿ ಅವರು ಮಾತನಾಡುತ್ತಿದ್ದರು. ಆ ಸಮಾರಂಭ ಏರ್ಪಾಟಾಗಿದ್ದುದು, ೧೯೯೪–೯೫ನೇ ಸಾಲಿನಲ್ಲಿ ಅತ್ಯಂತ ಹೆಚ್ಚು ಆಹಾರ ಧಾನ್ಯ ಹಾಗೂ ವಾಣಿಜ್ಯ ಬೆಳೆಗಳನ್ನು ಬೆಳೆದ ರೈತರಿಗೆ ಕೃಷಿ ಪ್ರಶಸ್ತಿಗಳನ್ನು ನೀಡಲು. ಕೆಇಬಿಗೆ ಈವರೆಗೆ ಆಗಿರುವ ಒಟ್ಟು ನಷ್ಟವು ಸುಮಾರು ೭೩೦ ಕೋಟಿ ರೂಪಾಯಿಗಳಷ್ಟು ಎಂದವರು ಹೇಳಿದರು. ವಿದ್ಯುತ್ ದರವನ್ನು ಎಷ್ಟು ಏರಿಸಬೇಕೆಂಬ ಬಗ್ಗೆ ಇನ್ನೂ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲವೆಂದೂ ಅವರು ನುಡಿದರು. ರೈತರು ಕನಿಷ್ಠ ದರ ನೀಡುವಂತೆಯೂ, ಕೈಗಾರಿಕೋದ್ಯಮಿಗಳು ಹೆಚ್ಚಿನ ಹೊರೆ ಹೊರುವಂತೆಯೂ ಕೇಳಿಕೊಳ್ಳಲಾಗುವುದೆಂದೂ ಅವರು ಆಶ್ವಾಸನೆಯಿತ್ತರು. ಆ ಸಮಾರಂಭದಲ್ಲಿ ನಿಜಲಿಂಗಪ್ಪನವರೂ ಭಾಗವಹಿಸಿದ್ದರು. ತಮ್ಮ ಭಾಷಣದಲ್ಲವರು, ನೀರಾವರಿ ಯೋಜನೆಗಳನ್ನು ಕಡೆಗಣಿಸಿರುವುದಕ್ಕಾಗಿ ಕೇಂದ್ರ ಸರ್ಕಾರವನ್ನು ತರಾಟೆಗೆ ತಗೆದುಕೊಂಡರು. ಸ್ವಾತಂತ್ರ್ಯಪೂರ್ವದಲ್ಲಿ ಆರಂಭಗೊಂಡ ಕೆಲವು ಯೋಜನೆಗಳು ಇನ್ನೂ ಪೂರ್ಣಗೊಂಡಿಲ್ಲದ ಬಗೆ ಬೇಸರ ವ್ಯಕ್ತಪಡಿಸಿದರು. ಇದಕ್ಕೆ ಕಾರಣ, ಕೇಂದ್ರ ಸರ್ಕಾರವು ನಿರ್ದೇಶಕ ತತ್ವಗಳ ಅನುಷ್ಠಾನದಲ್ಲಿ ಆಸಕ್ತಿ ತಾಳದಿರುವುದು. ತಾವೇನಾದರೂ ಮಧ್ಯದಲ್ಲಿಯೇ ಮುಖ್ಯಮಂತ್ರಿ ಪದವಿ ತ್ಯಜಿಸದಿದ್ದರೆ, ಹದಿನೈದು

ವರ್ಷಗಳ ಹಿಂದೆಯೇ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪೂರ್ಣಗೊಳಿಸುತ್ತಿದ್ದುದಾಗಿ ಹೇಳಿದರು. ಆ ಕಾಲಕ್ಕೆ ಏಷ್ಯಾದಲ್ಲಿಯೇ ಅತಿ ದೊಡ್ಡದಾದ ಶರಾವತಿ ಯೋಜನೆಯನ್ನು ಮುಖ್ಯಮಂತ್ರಿಯಾಗಿ ತಾವು ಆರೇ ವರ್ಷಗಳಲ್ಲಿ ಪೂರ್ಣಗೊಳಿಸಿದುದಕ್ಕಾಗಿ ಅವರು ಹೆಮ್ಮೆಪಟ್ಟುಕೊಂಡರು. ೧೯೭೫ ಕೊನೆಯಲ್ಲಿ ಕರ್ನಾಟಕದ ಜನತಾ ಪಕ್ಷದ ಸರ್ಕಾರವು ನಿಜಲಿಂಗಪ್ಪನವರಿಗೆ ಒಂದು ಅಪರೂಪದ ಗೌರವವನ್ನು ತೋರಿಸಿತು; ಅದೆಂದರೆ ಚಂದೀಗಡದ ಮಾದರಿಯಲ್ಲಿ ನಿಜಲಿಂಗ ನಗರ ನಿಜಲಿಂಗ ಪುರ ಎಂಬ ಮಧ್ಯಮಗಾತ್ರದ ಮಾದರಿ ನಗರವನ್ನು ನಿರ್ಮಿಸಲು ಯೋಜಿಸಿದ್ದು. ೧೯೭೫ರ ಡಿಸೆಂಬರ್ ೩೦ ರಂದು, ಸರ್ವೋಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶ ಇ..ಎಸ್. ವೆಂಕಟ ರಾಮಯ್ಯನವರು ಬಳ್ಳಾರಿ ಜಿಲ್ಲೆಯ ಹಡಗಲಿಗೆ ಭೇಟಿ ನೀಡಿ, ಆ ಉದ್ದೇಶಕ್ಕಾಗಿ ಹಡಗಲಿ ಪಟ್ಟಣದಿಂದ ಸುಮಾರು ಆರು ಕಿಲೋಮೀಟರ್ ದೂರದಲ್ಲಿ ಕೋಳಿರಗಟ್ಟೆಯ ಬಳಿ ೧೬೦೦ ಎಕರೆ ಪ್ರದೇಶವನ್ನು ಆಯ್ಕೆ ಮಾಡಿದರು. ಕರ್ನಾಟಕದ ಗ್ರಾಮೀಣಾಭಿವೃದ್ಧಿ ಸಚಿವ ಎ.ಪಿ. ಪ್ರಕಾಶ್ ಅವರು ನಿವೇಶನದ ಪರಿಶೀಲನೆಗೆಂದು ವೆಂಕಟರಾಮಯ್ಯನವರ ಜೊತೆ ಹೋಗಿದ್ದರು. ಆನಂತರ ಪತ್ರಕರ್ತರೊಡನೆ ಮಾತನಾಡುತ್ತ, ವೆಂಕಟರಾಮಯ್ಯ ನವರು ಈ ನಗರವು ರಾಜ್ಯದ ಎರಡನೆಯ ರಾಜಧಾನಿಯಾಗಿ ಬೆಳೆದು ಬೆಂಗಳೂರಿನ ದಟ್ಟಣೆಯನ್ನು ಕಡಿಮೆಮಾಡಬಹುದೆಂದು ಆಶಿಸಿದರು. ಬಳ್ಳಾರಿಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಒಂದು ಅಭಿವೃದ್ಧಿ ಪ್ರಾಧಿಕಾರಕ್ಕೆ ನಗರ ನಿರ್ಮಾಣದ ಜವಾಬ್ದಾರಿಯನ್ನು ವಹಿಸಲಾಗುವುದು. ಈ ಸ್ಥಳದಲ್ಲಿ ಒಂದು ವಸತಿಶಾಲೆ ಹಾಗೂ ಕೃಷಿ ಸಂಶೋಧನಾ ಸಂಸ್ಥೆಗಳನ್ನೂ ಸ್ಥಾಪಿಸಲಾಗುವುದೆಂದು ಎಂ.ಪಿ. ಪ್ರಕಾಶ್ ಹೇಳಿದರು. ಸುತ್ತಮುತ್ತಲ ಹಳ್ಳಿಗಳ ಕುಡಿಯುವ ನೀರಿನ ಯೋಜನೆಗೆ ಸರ್ಕಾರ ಈಗಾಗಲೇ ಒಂದು ಕೋಟಿ ರೂಪಾಯಿಗಳ ಯೋಜನೆಯೊಂದಕ್ಕೆ ಅನುಮತಿ ನೀಡಿದೆಯೆಂದೂ ಸಚಿವರು ತಿಳಿಸಿದರು. ಈ ಯೋಜನೆಗೆ ಬಳ್ಳಾರಿ ಜಿಲ್ಲೆಯನ್ನು ಆಯ್ಕೆಮಾಡಲು ಪ್ರಾಯಶಃ ಕಾರಣ ಪೂರ್ವದಲ್ಲಿ ನಿಜಲಿಂಗಪ್ಪನವರು ಈ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿಗೆ ಸೇರಿದವರು ಎಂಬುದು, ಅಲ್ಲದೆ ಭೌಗೋಳಿಕವಾಗಿ ಅದು ರಾಜ್ಯದ ಕೇಂದ್ರಸ್ಥಳದಲ್ಲಿರವುದು.

೧೯೭೬ ರ ಆರಂಭದಲ್ಲಿ ನಡೆಯಲಿದ್ದ ಚುನಾವಣೆಗಳು ನಿಜಲಿಂಗಪ್ಪನವರಲ್ಲಿನ ರಾಜಕಾರಣಿಗೆ ಕೌತುಕ ತರುವ ವಿಷಯವಾಗಿತ್ತು. ಆದರೆ ಅದು ಯಾವುದೇ ರಾಜಕೀಯ ಪಕ್ಷದ ದೃಷ್ಟಿಕೋನದಿಂದಲ್ಲ; ಈಗಾಗಲೇ ಅವರು ಎಲ್ಲ ಪಕ್ಷಗಳೊಡನೆ ಸಂಬಂಧವನ್ನು ಕಳೆದುಕೊಂಡಿದ್ದರು. ಒಬ್ಬ ಆಸಕ್ತ ಪಕ್ಷಾತೀತ ಹಾಗೂ ಆತ್ಮಸಾಕ್ಷಿ ಮತ್ತು ಪ್ರಜ್ಞಾವಂತ ರಾಜಕಾರಣದಲ್ಲಿ ತೊಡಗಿದ ನಾಗರಿಕನಾಗಿ ಅವರಿಗೆ ಅದರಲ್ಲಿ ಕುತೂಹಲವಿತ್ತು. ಹೀಗಾಗಿ, ಅವರು ಎಲ್ಲ ನಾಗರಿಕರಿಗೆ ಮತ್ತು ಪಕ್ಷಗಳ ನಾಯಕರುಗಳಿಗೆ ಮನವಿಯೊಂದ

ನ್ನಿತ್ತು, ಈ ಕುರಿತು ಸಂದರ್ಭದ ಪ್ರಾಮುಖ್ಯವನ್ನು ವಿವರಿಸಿ ಆ ಬಗ್ಗೆ ಅವರು ಮಾಡಬೇಕಾದುದೇನು ಎಂಬುದನ್ನು ವಿವರಿಸಿದ್ದರು. ಪಕ್ಷಗಳ ಒಳಗಿನ ಮತ್ತು ಪಕ್ಷಗಳ ನಡುವಣ ತೀವ್ರ ಭೇದವನ್ನು ಕುರಿತು ಅವರು ಬೊಟ್ಟು ಮಾಡಿ ತೋರಿಸಿದರು. ಆ ಬಳಿಕ, ಎಲ್ಲ ಬಗೆಯ ಅಪರಾಧಿಗಳು ರಾಜಕೀಯ ಕ್ಷೇತ್ರದಲ್ಲಿ ದಾಳಿ ನಡೆಸಿರುವುದನ್ನವರು ವಿವರಿಸಿದರು. ಅನಪೇಕ್ಷಣೀಯ ಮುಷ್ಕರಗಳಲ್ಲಿ ತೊಡಗುವ ಕಾರ್ಮಿಕ ವರ್ಗವನ್ನವರು ಎಚ್ಚರಿಸಿದರು. ಸಾರ್ವಜನಿಕ ಜೀವನದ ಎಲ್ಲ ರಂಗಗಳಲ್ಲಿಯೂ ವ್ಯಾಪಕವಾಗಿರುವ ಭ್ರಷ್ಟಾಚಾರದ ಕಡೆ ಗಮನ ಸೆಳೆದರು. ಒಟ್ಟಾರೆ, ಜನಸಾಮಾನ್ಯರ, ಅದರಲ್ಲಿಯೂ ಹಳ್ಳಿಗರ, ಹಿತವನ್ನು ಕಡೆಗಣಿಸಿರುವುದರ ಬಗ್ಗೆ ವಿಷಾದಿಸಿದರು. ಹಳ್ಳಿಗಾಡಿನಲ್ಲಿ ಬಡತನ ಹಾಗೂ ನಿರುದ್ಯೋಗಗಳು ತಾಂಡವವಾಡುತ್ತಿದೆ. ಇದಕ್ಕೆ ಕಾರಣ ನಮ್ಮ ಆರ್ಥಿಕತೆಯ ಬೆನ್ನೆಲುಬಾದ ಕೃಷಿಯನ್ನು ಕಡೆಗಣಿಸಿರುವುದೇ ಎಂದವರು ತಿಳಿಸಿದರು. ಆ ಬಳಿಕ, ಕಾನೂನುಬದ್ಧವಾಗಿ ಸಮರ್ಥನೀಯವಲ್ಲದಿದ್ದರೂ ಅದನ್ನು ನೈತಿಕ ಹೊಣೆಗಾರಿಕೆ ಎಂದು ಸರ್ವೋಚ್ಚ ನ್ಯಾಯಾಲಯವು ಕರೆದಿರುವ ನಿರ್ದೇಶಕ ತತ್ವಗಳನ್ನು ಅನುಷ್ಠಾನಗೊಳಿಸದ ಬಗ್ಗೆ ವಿಷಾದಿಸಿದರು. ಈ ಸಂವಿಧಾನಾತ್ಮಕ ಮಾರ್ಗದರ್ಶನಗಳನ್ನು ಕಡೆಗಣಿಸಿದ್ದರ ನೇರ ಫಲವೇ ಗ್ರಾಮೀಣ ಪ್ರದೇಶದ ದುಸ್ಥಿತಿಗೆ ಕಾರಣವೆಂದರು. ಆನಂತರ, ನಾನಾ ಬಗೆಯ ದುರ್ವ್ಯವಹಾರಗಳ ಕಡೆ ಗಮನ ಹರಿಸಿ, ಅಧಿಕಾರಶಾಹಿಯ ದುಷ್ಕೃತ್ಯಗಳನ್ನು ಪಟ್ಟಿಮಾಡಿದರು. ಎಲ್ಲ ಸರ್ಕಾರಗಳು ಮಾತ್ರವಲ್ಲದೆ ರಾಜಕೀಯ ಪಕ್ಷಗಳೂ ಮತ್ತವುಗಳ ನಾಯಕರೂ ಜನಸಮುದಾಯದಿಂದ ದೂರವಾದವರೇ ಎಂದು ಆರೋಪಿಸಿದರು. ರಾಜಕೀಯ ಬದುಕಿನ ಈ ಛಿದ್ರತೆ ಮತ್ತು ಅಧಃಪತನಗಳ ಕಾರಣದಿಂದಾಗಿ ಮುಂದಿನ ಚುನಾವಣೆಯಲ್ಲಿ ಯಾವುದೇ ಒಂದು ಪಕ್ಷವು ಬಹುಮತ ಗಳಿಸುವುದಿಲ್ಲ ಎಂದವರು ಭವಿಷ್ಯ ನುಡಿದರು, ಇದು ನಿಜವೇ ಆಯಿತು. ಉಳಿದಿರುವ ದಾರಿ ಯಾವುದು? ಕಮ್ಯುನಿಸ್ಟ್ ಹಾಗೂ ಮೂಲಭೂತವಾದಿ ಬಿಜೆಪಿಗಳ ಪರಿಹಾರವನ್ನವರು ತಳ್ಳಿಹಾಕಿದರು. ಧರ್ಮನಿರಪೇಕ್ಷಕತೆ ಮತ್ತು ಪ್ರಜಾಪ್ರಭುತ್ವಗಳ ಪರವಾದ ಪಕ್ಷವನ್ನು ಮಾತ್ರವೇ ಬೆಂಬಲಿಸಬೇಕೆಂದು ಕರೆ ನೀಡಿದರು. ಆದರೆ ಅಂತಹ ಪಕ್ಷವೆಲ್ಲಿದೆ? ಈ ಪಾತ್ರ ವಹಿಸಲು ಸದ್ಯದ ಯಾವುದೇ ರಾಜಕೀಯ ಪಕ್ಷವೂ ಯೋಗ್ಯವಲ್ಲ. ಈ ಸಂದರ್ಭದಲ್ಲಿ, ೧೯೯೦ರ ದಶಕದಲ್ಲಿಯೂ ರಿಂಗಣಗುಟ್ಟುತ್ತಿದ್ದ ಆಶಯವೊಂದಕ್ಕೆ ಅವರು ದನಿಯಿತ್ತರು. "ಇಂತಹ ಪರಿಸ್ಥಿತಿಯಲ್ಲಿ, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಹಾಗೂ ೨೦ ವರ್ಷಗಳ ಕಾಲ ಆಳ್ವಿಕೆ ನಡೆಸಿದ ಹಳೆಯ ಕಾಂಗ್ರೆಸ್ ಅನ್ನು ಪುನರುಜ್ಜೀವನಗೊಳಿಸುವುದೊಂದೇ ಉಳಿದಿರುವ ದಾರಿಯಾಗಿದೆ" ಎಂದರು. ಹೀಗೆ ಪುನರುಜ್ಜೀನವಗೊಂಡ ಕಾಂಗ್ರೆಸ್ ಗಾಂಧಿ ಮಾರ್ಗದಲ್ಲಿ ಸಾಗುವಂಥದು, ನೇರವಾಗಿ ಹೇಳದಿದ್ದರೂ, ನೆಹರೂ ಮಾದರಿ

ಯನ್ನು ತಿರಸ್ಕರಿಸಬೇಕೆಂಬುದು ನಿಜಲಿಂಗಪ್ಪನವರ ನಿಲವಾಗಿತ್ತು. ಈ ಪಕ್ಷವು ಸರ್ವಗ್ರಾಹಿ ಪಕ್ಷವಾಗಬೇಕು, ಎಲ್ಲ ಧರ್ಮನಿರಪೇಕ್ಷಕ ಹಾಗೂ ಪ್ರಜಾಸತ್ತಾತ್ಮಕ ಗುಂಪುಗಳನ್ನೂ ಬಣಗಳನ್ನೂ ತನ್ನೆದೆಗೆ ಅಪ್ಪಿಕೊಳ್ಳಬೇಕು. ಈ ನವೀನ ಹಳೆಯ ಕಾಂಗ್ರೆಸ್ ಚುನಾವಣೆ ಗಳಲ್ಲಿ ಸ್ಪರ್ಧಿಸಿ, ಹಳೆಯ ಕಾಂಗ್ರೆಸ್ ಹೇಳಿದ ದಾರಿಯಲ್ಲಿ ದೇಶವನ್ನು ಕರೆದೊಯ್ಯಬೇಕು. ಪ್ರತಿ ಮತಕ್ಷೇತ್ರದಲ್ಲಿಯೂ ಮತದಾರರು ಯೋಗ್ಯನಾದ ಪಕ್ಷೇತರ ಅಭ್ಯರ್ಥಿಯನ್ನು ನಿಲ್ಲಿಸಬೇಕು. ಆದರೆ ಈ ವಿಚಾರವಿನ್ನೂ ಅನುಷ್ಠಾನಯೋಗ್ಯ ಎಂದವರು ಭಾವಿಸಲಿಲ್ಲ. ಹೀಗಾಗಿ ಅವರು ಹಳೆಯ ಕಾಂಗ್ರೆಸ್ಸಿನ ಪುನರುಜ್ಜೀವನದ ಕಡೆಗೇ ಮಹತ್ವವಿತ್ತರು. ಹೊರನೋಟಕ್ಕೆ ಈ ವಿಚಾರವು ಎಷ್ಟೇ ಆಕರ್ಷಕವಾಗಿರಲಿ, ಸಾಧ್ಯಮಾಡಲು ಹೋದರೆ ಅಸಂಖ್ಯ ಸಮಸ್ಯೆಗಳಿಗೆ ಎಡೆಮಾಡಿಕೊಡುತ್ತದೆ. ಇದರಲ್ಲಿ ಅನೇಕ ತಾರ್ಕಿಕ, ಸೈದ್ಧಾಂತಿಕ ಹಾಗೂ ಸಂಘಟನಾತ್ಮಕ ತೊಡಕುಗಳಿವೆ. ಈಚೆಗೆ ನಡೆದ ಸಂವಾದವೊಂದರಲ್ಲಿ ಈ ಬಗ್ಗೆ ಪ್ರಸ್ತುತ ಲೇಖಕನು ನಿಜಲಿಂಗಪ್ಪನವರನ್ನು ಕೇಳಿದಾಗ, ಅವರೂ ತೊಡಕುಗಳಿರು ವುದನ್ನು ಒಪ್ಪಿಕೊಂಡರು. ಬೇರಾವುದೂ ಉಪಯೋಗಕ್ಕೆ ಬಾರದ ಸ್ಥಿತಿಯಿರುವಾಗ ಅದನ್ನು ಪ್ರಯೋಗ ಮಾಡಬಹುದಲ್ಲ ಎಂದರು. ಅವರಿಗೆ ವೈಯಕ್ತಿಕವಾಗಿ ಭರವಸೆಯಿದೆ, ಆದರೆ ಇದಕ್ಕೆ ಕಾಲ ಬೇಕಾಗುತ್ತದೆ ಎಂಬುದನ್ನವರು ಒಪ್ಪುತ್ತಾರೆ. ವಾಸ್ತವವಾಗಿ, ಜನತಾ ಪಕ್ಷದ ಅಧಿಕಾರಾವಧಿಯಲ್ಲಿಯೇ ಈ ವಿಚಾರದ ಬಗ್ಗೆ ಅವರ ಗೆಳೆಯ ಎಸ್.ಕೆ. ಪಾಟೀಲ್ ಪ್ರಸ್ತಾಪಿಸಿದ್ದರು. ಬೆಂಗಳೂರಿನಲ್ಲಿ ೧೯೯೬ನೇ ಜನವರಿ ೨೬ ರಂದು ಪತ್ರಕರ್ತರೊಡನೆ ಮಾತನಾಡುತ್ತ, ಅವರು ಈ ವಿಷಯವನ್ನು ವಿವರಿಸಿದ್ದರು. ೧೯೬೯ ಕ್ಕಿಂತ ಹಿಂದಿನ ಕಾಂಗ್ರೆಸ್ ನಾಯಕರುಗಳು ಒಂದು ವೇದಿಕೆಯಲ್ಲಿ ಒಗ್ಗೂಡಿ ಚುನಾವಣೆಗಳನ್ನೆದುರಿಸಬೇಕು ಎಂದವರು ಪ್ರತಿಪಾದಿಸಿದರು. ಪಿ.ವಿ. ನರಸಿಂಹರಾವ್, ರಾಮಕೃಷ್ಣ ಹೆಗಡೆ ಮತ್ತು ಬೊಮ್ಮಾಯಿ ಅವರುಗಳು ಈ ದಿಸೆಯಲ್ಲಿ ಕಾರ್ಯಪ್ರವೃತ್ತ ರಾಗಬೇಕು ಎಂದರು. ಈ ಕಾರಣಕ್ಕಾಗಿ ತಾವು ಸಂಪೂರ್ಣ ಸಹಕಾರ ನೀಡುವುದಾಗಿ ಘೋಷಿಸಿದರು. ಆದರೆ ತಾವೇ ಈ ಬಗ್ಗೆ ಆರಂಭದ ಹೆಜ್ಜೆ ಇಡಲಾರೆನೆಂದೂ ಸ್ಪಷ್ಟಪಡಿಸಿ ದರು. ಮುಖ್ಯ ಮಂತ್ರಿ ದೇವೇಗೌಡರೂ ನಿಜಲಿಂಗಪ್ಪನವರನ್ನು ಭೇಟಿಯಾದಾಗ ಈ ಸಲಹೆಗೆ ತಮ್ಮ ಒಪ್ಪಿಗೆಯನ್ನು ಸೂಚಿಸಿದ್ದರಂತೆ. ಬಿಜೆಪಿಯೊಂದಿಗೆ ವ್ಯವಹರಿಸುವುದಕ್ಕೆ ನಿಜಲಿಂಗಪ್ಪನವರಿಗೆ ಹಿಂದೇಟು. ಇದಕ್ಕೆ ಕಾರಣ, ತಾವು ಅದರ ಸಿದ್ಧಾಂತದ ವಿರುದ್ಧ ವಾಗಿದ್ದರೂ, ಅಲ್ಲಿನ ಕೆಲವು ನಾಯಕರುಗಳು ಪೂರ್ಣ ಪ್ರಾಮಾಣಿಕರು ಎಂಬುದು. ಹವಾಲಾ ಹಗರಣದ ಸಂದರ್ಭದಲ್ಲಿ ಸಿಬಿಐ ತಮ್ಮ ವಿರುದ್ಧ ಚಾರ್ಜ್‌ಷೀಟ್ ಸಲ್ಲಿಸಿದಾಗ ತಮ್ಮ ಲೋಕಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಲು ನಿರ್ಧರಿಸಿದ್ದ ಎಲ್.ಕೆ. ಆದ್ವಾನಿ ಯವರ ಬಗ್ಗೆ ಅವರಿಗೆ ಮೆಚ್ಚಿಕೆ. ಅದೇ ರೀತಿಯಲ್ಲಿ ನರಸಿಂಹ ರಾವ್ ಅವರೂ

ರಾಜೀನಾಮೆ ಸಲ್ಲಿಸಬೇಕೆಂಬುದು ಅವರ ಒತ್ತಾಯ. ಸೋನಿಯ ಗಾಂಧಿಯವರ ನಾಯಕತ್ವಕ್ಕೆ ಕಾಂಗ್ರೆಸ್ ಅನ್ನು ಒಪ್ಪಿಸುವ ಆಲೋಚನೆಯನ್ನವರು ಒಪ್ಪಿರಲಿಲ್ಲ. ಆಕೆಯೊಬ್ಬ ಸಾಮಾನ್ಯ ಮಹಿಳೆ, ಅವರಲ್ಲಿ ವಿಶೇಷವಾದುದೇನೂ ಇಲ್ಲ ಎಂಬುದವರ ತರ್ಕ. ಅನೇಕ ಹಳೆಯ ಕಾಂಗ್ರೆಸ್ಸಿಗರೂ ತೊಡಗಿಕೊಂಡಿರುವ ಹವಾಲ ಹಗರಣದ ಹಿನ್ನೆಲೆಯಲ್ಲಿ ಕೆಲವು ಪತ್ರಕರ್ತರಿಗೆ ಅವರ ಸಲಹೆಯು ಸಮಸ್ಯಾತ್ಮಕವಾಯಿತು. ಆದರೆ ಅದರಲ್ಲಿ ಭಾಗಿಗಳಾಗದ ಅನೇಕ ಹಳೆಯ ಕಾಂಗ್ರೆಸ್ಸಿರೂ ಇದ್ದಾರಲ್ಲ ಎಂಬುದು ನಿಜಲಿಂಗಪ್ಪನವರ ವಾದ, ಒಂದು ಅಸಾಧಾರಣ, ಪ್ರಾಯಶಃ ಕಲ್ಪನಾತ್ಮಕ, ಸಲಹೆಯೊಂದನ್ನು ಮುಂದಿಟ್ಟರು: "ಬಿಜೆಪಿ ನಾಯಕರು ಹಳೆಯ ಕಾಂಗ್ರೆಸ್ ಹೆಸರಿನಲ್ಲಿ ಒಂದಾಗಲಿ....!" ಹೆಚ್ಚುತ್ತಿರುವ ಭ್ರಷ್ಟಾಚಾರ, ರಾಜಕೀಯದ ಅಪರಾಧೀಕರಣ, ಕೋಮುವಾದ, ಅಸಮಾನತೆಯ ಕಂದರ ಮತ್ತಿತರ ಅನಿಷ್ಟಗಳ ಬಗ್ಗೆ ಅವರಿಗೆ ಚಿಂತೆ. ವಿವೇಚನಾರಹಿತ ಮೀಸಲಾತಿಯು ದೇಶದ ಸಮಗ್ರತೆಗೆ ಮಾರಕವೆಂಬುದು ಅವರ ಅಭಿಪ್ರಾಯ.

೧೯೯೬ ನೇ ಜೂನ್ ೨೦ ರಂದು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ವರದಿಗಾರನಿಗೆ ನಿಜಲಿಂಗಪ್ಪನವರು ಸಂದರ್ಶನವಿತ್ತರು. ಅದರಲ್ಲಿ ದೇಶದ ಸದ್ಯದ ರಾಜಕೀಯ ಬೆಳವಣಿಗೆಗಳ ಬಗ್ಗೆ ತೋರಿರುವ ಅರಿವು ಮತ್ತು ಆಸಕ್ತಿಗಳು ಅಚ್ಚರಿ ತರುವಂತಹವು. ದೇವೇಗೌಡ ಮತ್ತು ರಾಮಕೃಷ್ಣ ಹೆಗಡೆ ನಡುವಣ 'ರಾಜಕೀಯ ಹಾಗೂ ವೈಯಕ್ತಿಕ ವಿದ್ವೇಷವು' ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮೇಲೆ ಗಂಭಿರ ಪರಿಣಾಮವುಂಟು ಮಾಡಬಹುದೆಂದು ಅವರು ಹೆದರಿದರು. ತಮಗೆ ವಿಶಿಷ್ಟವಾದ ಮೊನಚಿನಿಂದ ರಾಮಕೃಷ್ಣ ಹೆಗಡೆಯವರನ್ನು ಪಕ್ಷದಿಂದ ಹೊರಹಾಕಿರುವುದರಲ್ಲಿ 'ಯಾವುದೇ ತಾತ್ವಿಕತೆಯಾಗಲೀ ಸೈದ್ಧಾಂತಿಕತೆ'ಯಾಗಲೀ ಇಲ್ಲ ಎಂದವರು ನುಡಿದರು. ಇರುವುದು ಕರ್ನಾಟಕದ ಈ ಇಬ್ಬರು ನಾಯಕರ ನಡುವಣ ಕೇವಲ ವೈಯಕ್ತಿಕ ದ್ವೇಷ, ಅಷ್ಟೆ. ಹೆಗಡೆಯವರನ್ನು ಪಕ್ಷದಿಂದ ಉಚ್ಚಾಟಿಸುವುದರಲ್ಲಿನ ಕ್ರಮದ್ಧತೆಯ ಉಲ್ಲಂಘನೆಯನ್ನವರು ವಿಶೇಷವಾಗಿ ಖಂಡಿಸಿದರು. ಉಚ್ಚಾಟನೆಗೆ ಮುನ್ನ ಹೆಗಡೆಯವರಿಗೆ ಕಾರಣ ಕೇಳಿ ನೋಟೀಸನ್ನೇ ನೀಡಿರಲಿಲ್ಲ. ಪಕ್ಷದ ವಿಷಯದಲ್ಲಿ ಸಾರ್ವಜನಿಕ ಹೇಳಿಕೆಗಳನ್ನು ನೀಡುತ್ತಿದ್ದ ಹೆಗಡೆಯವರ ಬಗ್ಗೆಯೂ ಅವರು ಅಷ್ಟೇ ತೀವ್ರವಾದ ಅಸಮಾಧಾನ ವ್ಯಕ್ತಪಡಿಸಿದರು. ಜನತಾ ದಳದ ಒಳಗುದ್ದಾಟದಿಂದ ಕಾಂಗ್ರೆಸ್ (ಐ) ಮತ್ತು ಬಿಜೆಪಿಗಳು ಲಾಭ ಪಡೆಯುತ್ತವೆಂದು ಹೇಳಿದರು. ಇದರ ಅಂತಿಮ ಪರಿಣಾಮವಾಗಿ ಕೇಂದ್ರದಲ್ಲಿನ ಸಂಯುಕ್ತ ರಂಗದ ಸರ್ಕಾರ ಬೀಳಬಹುದು ಎಂದರು. ತಮ್ಮ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಳ್ಳುವಂತೆ ಅವರು ದೇವೇಗೌಡ ಹಾಗೂ ಹೆಗಡೆಯವರಿಗೆ ಸೂಚಿಸಿದರು. ದೆಹಲಿಗೆ ಹೊರಡುವ ಮುಂಚೆ ಕರ್ನಾಟಕದ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ದೂರವಾಣಿಯಲ್ಲಿ

ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ಹಾಗೂ ಮುಖ್ಯಮಂತ್ರಿ ಶ್ರೀ ಜೆ.ಹೆಚ್. ಪಟೇಲರ ಜೊತೆಯಲ್ಲಿ ಎಸ್ಸೆನ್

ತಮ್ಮೊಡನೆ ಈ ವಿಚಾರವನ್ನು ಚರ್ಚಿಸಿದ್ದಾರೆಂದು ತಿಳಿಸಿದರು. ಈ ವಿಷಯದ ಬಗ್ಗೆ ನಿಜಲಿಂಗಪ್ಪನವರ ಅಭಿಪ್ರಾಯವನ್ನು ತಾವು ದೇವೇಗೌಡರಿಗೆ ತಿಳಿಸುವುದಾಗಿ ಪಟೇಲ್ ಹೇಳಿದರಂತೆ. ಅಲ್ಲದೆ, ಹೆಗಡೆಯವರೂ ತಮ್ಮನ್ನು ಭೇಟಿಯಾಗಿ ಒಂದು ಗಂಟೆ ಚರ್ಚೆ ನಡೆಸಿದುದಾಗಿಯೂ ಅವರು ತಿಳಿಸಿದರು. ತಮ್ಮ ಹಾಗೂ ದೇವೇಗೌಡರ ನಡುವೆ ನಡೆದುದೆಲ್ಲವನ್ನೂ ವಿವರವಾಗಿ ಹೆಗಡೆ ತಮ್ಮ ಹಿಂದಿನ ಮಾರ್ಗದರ್ಶಕರಿಗೆ ವಿವರಿಸಿದ ರಂತೆ. ಹೆಗಡೆಯವರು ಪರಿಸ್ಥಿತಿಯ ಪುನರ್‌ಪರಿಶೀಲನೆಗೆ ಒಪ್ಪಿದ್ದಾರೆಂದೂ ನಿಜಲಿಂಗಪ್ಪ ನವರು ಹೇಳಿದರು. ತಮ್ಮ ಮಾತನ್ನು ದೇವೇಗೌಡರೂ ಕೇಳುವರೆಂಬ ಭರವಸೆ ನಿಜಲಿಂಗಪ್ಪ ನವರದು. ತಮ್ಮ ಬೆಂಬಲಿಗರ ಸಭೆಯನ್ನು ಕೈಬಿಡುವಂತೆಯೂ ನಿಜಲಿಂಗಪ್ಪನವರು ಹೆಗಡೆಯವರಿಗೆ ಸೂಚಿಸಿದರಂತೆ. ಆದರೆ ಬೆಂಬಲಿಗರೇ ಒತ್ತಾಯಿಸಿರುವುದರಿಂದ ಈ ವಿಷಯ ತಮ್ಮ ಕೈಮೀರಿದುದೆಂದು ಹೆಗಡೆಯವರು ತಿಳಿಸಿದರಂತೆ. ಹೆಗಡೆಯವರಲ್ಲದೆ ನಿಜಲಿಂಗಪ್ಪನವರನ್ನು ಭೇಟಿಯಾದ ಗಣ್ಯರಲ್ಲಿ ಸಚಿವ ಎಂ.ಪಿ. ಪ್ರಕಾಶ್, ಆರ್.ವಿ. ದೇಶಪಾಂಡೆ, ಮತ್ತು ಪಿ.ಜಿ.ಆರ್. ಸಿಂಧ್ಯಾ ಮತ್ತು ಜನತಾ ದಳದ ಕಾರ್ಯಾಧ್ಯಕ್ಷ ಆರ್. ಲಕ್ಷ್ಮೀಸಾಗರ್ ಅವರೂ ಸೇರಿದ್ದರು. ಈ ಸಂದರ್ಶನದಿಂದ, ನಿಜಲಿಂಗಪ್ಪನವರು ಪ್ರಸಕ್ತ ರಾಜಕೀಯದಲ್ಲಿ ತೋರಿಸುವ ಆಸಕ್ತಿ ಮತ್ತು ಸಕ್ರಿಯ ರಾಜಕಾರಣಿಗಳ ಮೇಲೆ ಬೀರುವ ವೈಯಕ್ತಿಕವಾದ ನೈತಿಕ ಪ್ರಭಾವ ಇವುಗಳ ಸ್ಪಷ್ಟವಾಗುತ್ತವೆ. 'ಇಂಡಿಯನ್ ಎಕ್ಸ್‌ಪ್ರೆಸ್'ನ ೧೯೯೬ನೇ ಜೂನ್ ೯ರ ಸಂಚಿಕೆಯ 'ಅತಿಥಿ ಪೀಠ' ಅಂಕಣದಲ್ಲಿ ನಿಜಲಿಂಗಪ್ಪನವರು ವಿಶದವಾಗಿ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ. ಕರ್ನಾಟಕದವರು ಮತ್ತು ಕೃಷಿಯಲ್ಲಿ ಆಸಕ್ತರಾಗಿರುವವರು ಎಂಬ ಕಾರಣದಿಂದ ತಾವು ದೇವೇಗೌಡರು ಪ್ರಧಾನ ಮಂತ್ರಿಗಳಾದುದನ್ನು ಸ್ವಾಗತಿಸುವುದಾಗಿ ನಿಜಲಿಂಗಪ್ಪನವರು ಹೇಳಿದ್ದಾರೆ. ಆದರೆ ಕಾಂಗ್ರೆಸ್ ಗೌಡರು ಅವಧಿ ಪೂರೈಸಲು ಅವಕಾಶ ನೀಡಲಾರದೆಂಬುದು ಅವರ ಅಂಜಿಕೆ. ೧೯೬೯ರ ಇಬ್ಭಾಗಕ್ಕೆ ಸಂಬಂಧಿಸಿದಂತೆ ಇಂದಿರಾ ಗಾಂಧಿಯವರನ್ನು ನಿಯಮರಹಿತರು ಎಂದು ಮತ್ತೆ ಕರೆದರು. ತಾವು ಸತ್ಯದ ಪರವಾಗಿದ್ದರೆ, ಆಕೆ ಅಸತ್ಯದ ಪರವಾಗಿದ್ದರು. ತಮ್ಮ ರಾಜಕೀಯ ಇತಿಹಾಸವನ್ನು ಸಂಕ್ಷಿಪ್ತವಾಗಿ ನೆನಪು ಮಾಡಿಕೊಳ್ಳುತ್ತ, ಇಬ್ಭಾಗದ ನಂತರ ಜನತಾ ಪಕ್ಷದೊಡನೆ ಲೀನಗೊಳ್ಳುವವರೆಗೂ ತಾವು ಹಳೆಯ ಕಾಂಗ್ರೆಸ್‌ನಲ್ಲಿದ್ದುದಾಗಿ ಹೇಳಿದರು. ಈಗ ಯಾವುದೇ ಪಕ್ಷವು ತಮ್ಮ ಗಮನ ಸೆಳೆಯುವಷ್ಟು ಒಳ್ಳೆಯದಾಗಿಲ್ಲವೆಂದು ನುಡಿದರು. ದೇವೇಗೌಡರು ರಾಷ್ಟ್ರ ರಾಜಕಾರಣದಲ್ಲಿ ಕಾಲಿರಿಸಿರುವುದು ಕರ್ನಾಟಕವು ರಾಷ್ಟ್ರ ರಾಜಕಾರಣದಲ್ಲಿ ವಹಿಸುವ ಪಾತ್ರಕ್ಕೆ ಸಂಬಂಧಿಸಿದಂತೆ ಮಹತ್ವದ್ದು ಎಂದು ವರ್ಣಿಸಿದರು. ಕರ್ನಾಟಕವು ವ್ಯವಸ್ಥೆಯ ವಿರುದ್ಧದ ರಾಜ್ಯ ಎಂದು ಬಣ್ಣಿಸಿದರು, ಗಾಂಧೀಜಿ ಇದನ್ನು 'ನನ್ನ ಪ್ರಾಂತ' ಎಂದು

ಕರೆದಿದ್ದರು. ಸ್ವಾತಂತ್ರ್ಯಪೂರ್ವದಲ್ಲಿ ಕರ್ನಾಟಕವು ಗಾಂಧಿ ಹೋರಾಟವನ್ನು ಯಶಸ್ವಿಯಾಗಿ ನಡೆಸಿದೆ. ಆದರೆ ೧೯೪೭ ರ ಬಳಿಕ, ಕರ್ನಾಟಕವು ನಮ್ಮದೇ ಆದ 'ಸಣ್ಣ ಆಟ'ಗಳಲ್ಲಿ ತೊಡಗಿದುದಾಗಿ ವರ್ಣಿಸಿದರು. ಹೆಚ್ಚು ಮಂದಿ ಪ್ರಧಾನಮಂತ್ರಿಗಳನ್ನು ತಮ್ಮ ರಾಜ್ಯದಿಂದ ಹೊಂದುವ ಮೂಲಕ ಉತ್ತರ ಪ್ರದೇಶ ಪ್ರಬಲಸ್ಥಾನ ಗಳಿಸಿಕೊಂಡಿದೆ. ಅರ್ಥವಿಲ್ಲದ ಸಮಾಜವಾದಿ ಮಾದರಿಯ ಸಮಾಜವನ್ನು ಸ್ಥಾಪಿಸುವ ಆಶಯದ ಆವಡಿ ನಿರ್ಣಯವನ್ನು ತಾವು ವಿರೋಧಿಸುವುದಾಗಿ ಅವರು ಹೇಳಿದರು. ಯಾವ ಪಕ್ಷಕ್ಕೂ ನಿರ್ದಿಷ್ಟವಾದ ಆರ್ಥಿಕ ನೀತಿ ಹಾಗೂ ಕಾರ್ಯಕ್ರಮಗಳಿಲ್ಲ ಎಂದವರು ಟೀಕಿಸಿದರು. ಮತ್ತೆ ಅವರು ನಗರ ಮತ್ತು ಹಳ್ಳಿಗಳ ನಡುವಣ ಅಸಮಾನತೆಯನ್ನು ಪ್ರಸ್ತಾಪಿಸಿ, ನಗರ ಮೇಲುಗೈ ಪಡೆದಿದೆ ಎಂದರು. ವಸ್ತುಸ್ಥಿತಿ ಬದಲಾಗಬಹುದು ಎಂಬ ಭರವಸೆಯನ್ನವರು ಪ್ರಕಟಿಸಿದರು. ಉತ್ತಮಗೊಳ್ಳಲೇಬೇಕು ಎಂದೂ ಒತ್ತಿ ಹೇಳಿದರು. ನಾವು ಪಶ್ಚಿಮ ರಾಷ್ಟ್ರಗಳನ್ನು ಅನುಕರಿಸಿ ಗಾಂಧೀ ಆದರ್ಶಗಳನ್ನು ಮರೆತೆವು. ಒಳ್ಳೆಯ ವ್ಯಕ್ತಿ ಎಂದು ನೆಹರೂ ಅವರ ಬಗ್ಗೆ ಗೌರವವಿದ್ದರೂ ಗಾಂಧೀ ಆದರ್ಶಗಳನ್ನು ಮೂಲೆಗುಂಪು ಮಾಡಿ ರಷ್ಯಾವನ್ನು ಅನುಕರಿಸಿದರು ಎಂದರು. ಪಶ್ಚಿಮ ದಲ್ಲಿ ಕೂಡ ಕಮ್ಯುನಿಸಂಗೆ ಯಾವುದೇ ಕಿಮ್ಮತ್ತಿಲ್ಲ, ಸ್ಪಷ್ಟ ಕಾರ್ಯಕ್ರಮಗಳ ಕೊರತೆಗಾಗಿ ಅವರು ಎಡಪಕ್ಷಗಳನ್ನು ಟೀಕಿಸಿದರು. ಕೋಮುವಾದಕ್ಕಾಗಿ ಬಿಜೆಪಿಯನ್ನು ಖಂಡಿಸಿದರು. ಇಂದು ಸಾಮಾನ್ಯ ಮನುಷ್ಯ ತನ್ನ ಹಕ್ಕಿನ ಬಗ್ಗೆ ಅರಿವುಳ್ಳವನಾಗಿದ್ದಾನೆ, ಆದರೆ ಅವು ಗಳನ್ನು ಬಳಕೆಮಾಡಿಕೊಳ್ಳುವ ಬಗ್ಗೆ ಸಾಕಷ್ಟು ತಿಳಿವಳಿಕೆಯಿಲ್ಲ ಎಂದರು. ಎಂದಿನಂತೆಯೇ, ರಾಷ್ಟ್ರದ ಬದುಕಿಗೆ ಭದ್ರ ಬುನಾದಿ ಹಾಕುವುದರಿಂದಾಗಿ ನಿರ್ದೇಶಕ ತತ್ವಗಳ ಪೂರ್ಣ ಅನುಷ್ಠಾನವನ್ನು ಮಾಡಬೇಕೆಂದು ಒತ್ತಾಯಿಸಿದರು. ನಿಜಲಿಂಗಪ್ಪನವರನ್ನು ಮಾತನಾಡಿಸಿದ ಸರಿತಾ ರಾಯ್ ನಿಜಲಿಂಗಪ್ಪನವರ ಮಾತುಗಳ ಟಿಪ್ಪಣಿ ಮಾಡಿಕೊಂಡು, ಪ್ರಾಯಶಃ ಅವರ ಅನುಮತಿಯೊಂದಿಗೆ ಅದನ್ನು ಪತ್ರಿಕೆಯಲ್ಲಿ ಪ್ರಕಟಿಸಿದರು. ಹಳೆಯ ಕಾಂಗ್ರೆಸ್‌ನ ಪುನರುಜ್ಜೀವನಕ್ಕೆ ಬದ್ಧವಾಗಿದ್ದ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆ ನೀಡಿ, ೧೯೬೯ ಕ್ಕಿಂತ ಮುಂಚೆ ಕಾಂಗ್ರೆಸ್ ಅನ್ನು ತೊರೆದವರೆಲ್ಲ ಮತ್ತೆ ಬಂದು ಅದನ್ನು ಮರುಕೊಳಿಸಲು ಪ್ರಯತ್ನಿಸಬೇಕು ಎಂದು ಮನವಿ ಮಾಡಿಕೊಂಡರು. ಕಾಂಗ್ರೆಸ್‌ನ ನಾನಾ ಗುಂಪುಗಳ ನಡುವೆ ಐಕಮತ್ಯ ಸ್ಥಾಪನೆಗಾಗಿ ಅವರು ಆಸಕ್ತಿ ತಾಳಿದ್ದರು. ಕೇವಲ ಮನವಿ ಮಾಡಿಕೊಳ್ಳುವುದರಲ್ಲಿ ತೃಪ್ತರಾಗದೆ, ತಮ್ಮ ವಿಚಾರಕ್ಕೊಂದು ಸ್ಪಷ್ಟ ಆಕಾರ ನೀಡುವ ಉದ್ದೇಶದಿಂದ, ಬಿಜೆಪಿಯನ್ನು ಪರಿಣಾಮ ಕಾರಿಯಾಗಿ ಎದುರಿಸಲು ಧರ್ಮನಿರಪೇಕ್ಷಕ ಹಾಗೂ ಪ್ರಜಾಸತ್ತಾತ್ಮಕ ಕಾಂಗ್ರೆಸ್ ಪಕ್ಷದ ಧ್ವಜದಡಿ ಒಂದೆಡೆ ಸೇರಲು ಅನುವಾಗುವಂತೆ ಚರ್ಚೆ ನಡೆಸಲು ಅವರು ಬೆಂಗಳೂರಿನಲ್ಲಿ

೧೯೯೬ರ ಆಗಸ್ಟ್‌ನಲ್ಲಿ ಒಂದು ಸಮಾವೇಶವನ್ನು ಕರೆದರು. ಜುಲೈ ೧೯೯೬ರಲ್ಲಿ ನರಸಿಂಹ ರಾವ್ ಅವರ ಮನವಿಯನ್ನು ಉಚ್ಚ ನ್ಯಾಯಾಲಯವು ತಿರಸ್ಕರಿಸಿದ್ದ ಹಿನ್ನೆಲೆಯಲ್ಲಿ ಅವರ ರಾಜಕೀಯ ನಮ್ಯತೆಯ ಕಾರಣದ ಉಪಯೋಗವನ್ನು ಪಡೆಯಲು ನಿಜಲಿಂಗಪ್ಪ ಪ್ರಯತ್ನಿಸಿದರು. ಹಳೆಯ ಪಕ್ಷಕ್ಕೆ ಮರಳಲು ಕೆಳಗಿಳಿಯಬೇಕೆಂದು ಕಾಂಗ್ರೆಸ್ಸಿಗರು ಒತ್ತಾಯಿಸಿರುವುದರಿಂದ ರಾವ್ ರಾಜೀನಾಮೆ ನೀಡಲು ನೈತಿಕವಾಗಿ ಬದ್ಧರಾಗಬೇಕೆಂದು ಅವರು ಬಯಸಿದರು. ಈ ಸಂಬಂಧದಲ್ಲಿ ಅವರು ದೆಹಲಿಗೆ ಭೇಟಿ ನೀಡಿದಾಗ, ಪ್ರಧಾನ ಮಂತ್ರಿ ದೇವೇಗೌಡರನ್ನೂ ಕಂಡರು. ನಿಜಲಿಂಗಪ್ಪ ಸರ್ಕಾರವು ಸಮರ್ಪಪಕವಾಗಿಲ್ಲವೆಂದು ನೆಹರೂ ತಮ್ಮ ಒಬ್ಬ ದೂತನ ಮೂಲಕ ಕಳಿಸಿದ್ದ ಪರೋಕ್ಷ ದೂರಿನ ಮೇಲೆ ೧೯೫೭ರಲ್ಲಿ ತಾವು ಹೇಗೆ ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿದಿದ್ದರೆಂಬುದನ್ನು ನೆನಪಿಸಿಕೊಂಡರು. "ತಕ್ಷಣವೇ ನಾನು ಕಾಗದದ ಹಾಳೆಯನ್ನು ತರಿಸಿಕೊಂಡೆ, ನನ್ನ ರಾಜೀನಾಮೆ ಬರೆದೆ, ನನ್ನ ಸ್ವಂತ ಕಾರನ್ನು ಬರಮಾಡಿಕೊಂಡು ಮನೆಗೆ ಹೋದೆ" ಎಂದು ನಿಜಲಿಂಗಪ್ಪನವರು ಪತ್ರಕರ್ತರಿಗೆ ವಿವರಿಸಿದರು. ಹೊಸ ಪುನರುಜ್ಜೀವಿತ ಕಾಂಗ್ರೆಸ್‌ನ ಮುಂದಾಳು ಯಾರಾಗಬೇಕೆಂಬ ಪ್ರಶ್ನೆಯ ಬಗ್ಗೆ ಅವರು ಹೇಳಿದ್ದೆಂದರೆ, ಬೆಂಗಳೂರು ಸಮಾವೇಶವು ಆ ಕುರಿತು ನಿರ್ಧರಿಸಲಿದೆ ಎಂದು. ಅವರು ಅಧಿಕಾರ ಕೇಂದ್ರೀಕರಣದ ವಿರೋಧಿಗಳು, ಹೀಗಾಗಿ ಒಬ್ಬನೇ ವ್ಯಕ್ತಿ ಕಾಂಗ್ರೆಸ್ ಅಧ್ಯಕ್ಷಸ್ಥಾನ ಮತ್ತು ಪ್ರಧಾನ ಮಂತ್ರಿ ಹುದ್ದೆಗಳನ್ನು ಹೊಂದಿರುವುದರ ಬಗ್ಗೆ ಅವರ ಆಕ್ಷೇಪವಿತ್ತು. ಬೆಂಗಳೂರು ಸಮಾವೇಶವನ್ನು ಆಯೋಜಿಸಿರುವುದು ಈಚೆಗೆ ರಚಿತವಾದ 'ಸಂಯುಕ್ತ ಕಾಂಗ್ರೆಸ್ ವೇದಿಕೆ', ಅದರ ಅಧ್ಯಕ್ಷರು ನಿಜಲಿಂಗಪ್ಪ. ಉಪಾಧ್ಯಕ್ಷರಾದ ಚೌಧರಿ ರಣವೀರ್ ಅವರೂ ನಿಜಲಿಂಗಪ್ಪನವರಂತೆಯೇ ಸಂವಿಧಾನ ರಚನಾ ಸಭೆಯ ಬದುಕುಳಿದಿರುವ ಸದಸ್ಯರು, ಹರಿಯಾಣದವರು. ವಿ.ಪಿ. ಸಿಂಗ್ ಅವರ ಮಾಜಿ ಸಹಾಯಕರಾದ ಹಾಗೂ ಕಾಂಗ್ರೆಸ್ (ಐ) ಪದಾಧಿಕಾರಿಗಳಲ್ಲೊಬ್ಬರಾದ ಸೈಯದ್ ಆಶ್ರಫ್ ಅವರು ಅಧಿಕೃತ ಸಂಚಾಲಕರು. ಈ ವೇದಿಕೆಯ ದೊಡ್ಡ ಸಂಖ್ಯೆಯಲ್ಲಿ ಕಾಂಗ್ರೆಸ್ಸಿಗರನ್ನೂ ಮಾಜಿ ಕಾಂಗ್ರೆಸ್ಸಿಗರನ್ನೂ ಸಮಾವೇಶಕ್ಕೆ ಆಹ್ವಾನಿಸಿದೆ; ಅವರಲ್ಲಿ ದೇವೇಗೌಡ, ನರಸಿಂಹರಾವ್, ಆರ್. ವೆಂಕಟರಾಮನ್, ಸಿ. ಸುಬ್ರಹ್ಮಣ್ಯಂ, ಡಾ. ಕರಣ್ ಸಿಂಗ್, ಶರದ್ ಪವಾರ್, ಅರ್ಜುನ ಸಿಂಗ್, ಚಂದ್ರಶೇಖರ್, ಕರುಣಾಕರನ್, ಮತ್ತು ಸೋನಿಯಾ ಗಾಂಧಿ ಅವರೂ ಸೇರಿದ್ದರು! ಆಹ್ವಾನಿತರಲ್ಲಿ ಕಾಂಗ್ರೆಸ್ ಒಳಗೆ ರಾವ್ ಅವರಿಗೆ ವಿರೋಧಿಗಳಾದವರಲ್ಲಿ ಹಲವರಿದ್ದುದು ಕುತೂಹಲಕರ ವಿಷಯ. ಆದರೆ, ಇವತ್ತಿನವರೆಗೂ, ಅದರಿಂದ ಯಾವುದೇ ಸ್ಪಷ್ಟ ಪರಿಣಾಮ ಉಂಟಾದಂತಿಲ್ಲ, ಹುಟ್ಟು ಆಶಾವಾದಿಗಳಾದ ನಿಜಲಿಂಗಪ್ಪನವರು ತಾವು ಬದ್ಧವಾದ ಕಾರ್ಯವನ್ನೆಂದೂ

ಶ್ರೀಮತಿ ಸೋನಿಯಾ ಗಾಂಧಿ ಜೊತೆಯಲ್ಲಿ ಎಸ್ಸೆನ್

ಕೈಬಿಟ್ಟವರಲ್ಲ. ಬಳಿಕ ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತ, ನರಸಿಂಹರಾವ್ ಅವರನ್ನು ಕಾಂಗ್ರೆಸ್ (ಐ) ಅಧ್ಯಕ್ಷಸ್ಥಾನದಿಂದ ಕೆಳಗಿಳಿಸಬೇಕೇಂದೂ, ಭಾರತ ರಾಷ್ಟ್ರೀಯ ಕಾಂಗ್ರೆಸ್ ಅನ್ನು ಹಳೆಯ ಕಾಂಗ್ರೆಸ್ಸಿಗರೆಲ್ಲ ಸೇರಿ ಪುನರುಜ್ಜೀವನಗೊಳಿಸಬೇಕೆಂದೂ ನಿಜಲಿಂಗಪ್ಪ ಹೇಳಿದರು. ಈಗಿನ ಕಾಂಗ್ರೆಸ್ (ಐ) ಹಳೆಯ ಕಾಂಗ್ರೆಸ್‌ನ ತತ್ವಗಳನ್ನು ಗಾಳಿಗೆ ತೂರಿರುವ ಬಗ್ಗೆ ಅನೇಕ ಕಾಂಗ್ರೆಸ್ಸಿಗರು ಬೇಸರಗೊಂಡಿದ್ದಾರೆಂದರು. ಇಂದಿರಾ ಗಾಂಧಿಯವರು ೧೯೬೯ ರಲ್ಲಿಯೇ ಕಾಂಗ್ರೆಸ್ ಅನ್ನು ಕೊಂದರು, ಈಗ ಕಾಂಗ್ರೆಸ್‌ನಲ್ಲಿನ (ಐ) ಭಾಗವನ್ನು ಕೈಬಿಡಲು ಸುಸಮಯ ಬಂದಿದೆ ಎಂದರು. ಗೌಡರ ಸರ್ಕಾರದ ಬಗ್ಗೆ ಕೇಳಿದಾಗ, ಆ ಬಗ್ಗೆ ಯಾವುದೇ ತೀರ್ಮಾನ ಕೊಡಲು ಇನ್ನೂ ಸಾಕಷ್ಟು ಕಾಲವಾಗಿಲ್ಲ ಎಂದರು.

ಸರ್ದಾರ್ ಪಟೇಲ್ ಅವರ ಬಗ್ಗೆ ನಿಜಲಿಂಗಪ್ಪನವರಿಗಿದ್ದ ಪ್ರೀತಿ ಮತ್ತು ಅಭಿಮಾನಗಳು ಕೇವಲ ಬಾಯಿ ಮಾತಿಗೇ ಸೀಮಿತವಾಗಿರಲಿಲ್ಲ ಎಂಬುದು ಸರ್ವ ವಿದಿತವಾದ ವಿಷಯ. ಭಾರತದ ಹಳ್ಳಿಯ ಬದುಕು ಮತ್ತು ಬೇಸಾಯದ ಬಗ್ಗೆ ಆಳವಾದ ಅರಿವು ಪಡೆದಿದ್ದ ಸರ್ದಾರ್ ಪಟೇಲ್ ಅವರು ಭಾರತದ ಮೊದಲ ಪ್ರಧಾನ ಮಂತ್ರಿಗಳಾಗದುದರ ಬಗ್ಗೆ ನಿಜಲಿಂಗಪ್ಪನವರು ವಿಷಾದ ವ್ಯಕ್ತಪಡಿಸುತ್ತಿದ್ದರು. ಸರ್ದಾರ್ ಪಟೇಲ್ ಸೊಸೈಟಿ ಸ್ಥಾಪನೆಯಲ್ಲಿ ನಿಜಲಿಂಗಪ್ಪನವರು ಮುಂದಾದವರು, ಅದರ ಅಧ್ಯಕ್ಷರು. ಇತರ ವಿಷಯಗಳಲ್ಲದೆ, ನೆಹರೂ ಸ್ಮಾರಕ ವಸ್ತುಸಂಗ್ರಹಾಲಯ ಮತ್ತು ಗ್ರಂಥಾಲಯ ಮಾದರಿಯಲ್ಲಿ ಸರ್ದಾರ್ ಪಟೇಲ್ ಸ್ಮಾರಕ ವಸ್ತುಸಂಗ್ರಹಾಲಯ ಮತ್ತು ಗ್ರಂಥಾಲಯ ಸ್ಥಾಪನೆ, ಪಟೇಲ್ ಅವರ ಭಾಷಣಗಳ ಮತ್ತು ಬರಹಗಳ ಪ್ರಕಟಣೆ ಹಾಗೂ ಅವರ ಹೆಸರಿನಲ್ಲಿ ವಿಶೇಷೋಪನ್ಯಾಸದ ಏರ್ಪಾಡು ಸೊಸೈಟಿಯ ಉದ್ದೇಶಗಳಾಗಿದ್ದುವು. ಸಮಗ್ರ ಕೃತಿಗಳ ಸಂಪಾದಕರಾಗಿ ಡಾ. ಪಿ.ಎನ್. ಛೋಪ್ರಾ ಅವರನ್ನು ನಿಯೋಜಿಸಲಾಯಿತು. ಅವರಿಗೆ ಸಲಹೆ ನೀಡಲು ನಿಜಲಿಂಗಪ್ಪನವರ ನೇತೃತ್ವದಲ್ಲಿ ವೃತ್ತಿನಿರತ ವಿದ್ವಾಂಸರು ಹಾಗೂ ಇತಿಹಾಸಕಾರರ ಒಂದು ಸಲಹಾ ಸಮಿತಿ ನೇಮಕಗೊಂಡಿತು. ಮೊದಲ ಸರ್ದಾರ್ ಪಟೇಲ್ ಸ್ಮಾರಕ ವಿಶೇಷೋಪನ್ಯಾಸವನ್ನು ನೀಡಿದವರು ಅಬಿರ್ಡೀನ್ ವಿಶ್ವವಿದ್ಯಾಲಯದ ಪ್ರೊ. ಮೈಕೇಲ್ ಲ್ಯಾನ್ ಅವರು. ಇದುವರೆಗೆ ಎಂಟು ಸಂಪುಟಗಳನ್ನು ಮುದ್ರಿಸಲಾಗಿದೆ. ಇನ್ನೂ ಮೂರು ಸಂಪುಟಗಳು ಮುದ್ರಣಗೊಳ್ಳುತ್ತಿವೆ. ಈ ಪ್ರಯತ್ನದಲ್ಲಿ ನಿಜಲಿಂಗಪ್ಪನವರ ಸಹಭಾಗಿತ್ವವು, ನಿಜಲಿಂಗಪ್ಪನವರು ತಾವು ಕೈಕೊಂಡ ಕಾರ್ಯಗಳಲ್ಲಿ ಎಂಥ ತತ್ಪರತೆಯಿಂದ ತೊಡಗಿಕೊಳ್ಳುತ್ತಾರೆಂಬುದಕ್ಕೆ ದ್ಯೋತಕವಾಗಿದೆ. ಯಾವುದಾದರೂ ಕಾರ್ಯಕ್ಕೆ ಕೈಹಾಕಿದರೆ, ಅವರು ಅದಲ್ಲಿಯೇ ಮಗ್ನರಾಗಿ ಕಾರ್ಯನಿರ್ವಹಿಸುವವರು.

ನಿಜಲಿಂಪಗಪ್ಪನವರ ೯೫ ನೇ ಹುಟ್ಟುಹಬ್ಬವನ್ನು ಸಂಯುಕ್ತ ಕಾಂಗ್ರೆಸ್ ವೇದಿಕೆಯು ೧೯೯೬ ನೇ ಡಿಸೆಂಬರ್ ೧೦ ರಂದು ದೆಹಲಿಯಲ್ಲಿ ಆಚರಿಸಿತು. ಕಾಂಗ್ರೆಸ್‌ನೊಳಗಣ ವಿವಿಧ ಬಣಗಳ ನಾಯಕರು ಹಾಗೂ ಅವರ ಬೆಂಬಲಿಗರು ಬಂದು ಈ ಹಿರಿಯ ಮುತ್ಸದ್ದಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ಕರ್ನಾಟಕ ಭವನದಲ್ಲಿ ಈ ಸರಳ ಸಮಾರಂಭ ಏರ್ಪಟ್ಟಿತ್ತು. ಅಂದು ಬಂದಿದ್ದವರಲ್ಲಿ ಚಂದ್ರಶೇಖರ್ ಮತ್ತು ನರಸಿಂಹ ರಾವ್ ಅವರುಗಳು ಸೇರಿದ್ದರು, ಕೃಷಿಯಲ್ಲಿ ತೀವ್ರ ಆಸಕ್ತಿ ಹೊಂದಿದವರಾಗಿ ನಿಜಲಿಂಗಪ್ಪ ನವರು ದೆಹಲಿಯ ಹೊರವಲಯದಲ್ಲಿದ್ದ ಚಂದ್ರಶೇಖರ್ ಅವರ ತೋಟದ ಬಗ್ಗೆ ಹಾಗೂ ಅಲ್ಲಿನ ಹಣ್ಣುಗಳ ಬಗ್ಗೆ ಅವರನ್ನು ವಿಚಾರಿಸಿದರು. ಆನಂತರ ರಾವ್ ಅವರತ್ತ ತಿರುಗಿ, "ನೀವು ಎದುರಿಸಿದ ಸನ್ನಿವೇಶಗಳಲ್ಲಿ ನಿರ್ಭಾವುಕರಾಗಿದ್ದುದಕ್ಕಾಗಿ ಅಭಿನಂದನೆ ಗಳು. ನಿಮ್ಮ ಸ್ವಭಾವ ಅಪರೂಪವಾದುದು" ಎಂದರು. "ಏಳುಬೀಳುಗಳಲ್ಲಿ ನಾವು ಸಮಾಧಾನಚಿತ್ತರಾಗಿರಬೇಕು" ಎಂದು ರಾವ್ ಉತ್ತರಿಸಿದರು. ರಾವ್ ಅವರೊಡನೆ ನಿಜಲಿಂಗಪ್ಪನವರು ಹಳೆಯ ದಿನಗಳನ್ನು ನೆನಪಿಸಿಕೊಂಡು ಆಗಿನ ಆಶಾಭಾವನೆಯ ಬಗ್ಗೆ ಮಾತನಾಡಿದರು. "ಆಗಿನ ದಿನಗಳಲ್ಲಿ ವಕೀಲರಾಗಲಿ, ವೈದ್ಯರಾಗಲೀ, ಅಥವಾ ವ್ಯವಹಾರಸ್ಥರೇ ಆಗಲಿ, ತಮ್ಮೊಡನೆ ಅತ್ಯಂತ ಶ್ರೇಷ್ಠರಾದವರಿರುತ್ತಿದ್ದರು. ಕಾಲ ಹೇಗೆ ಬದಲಾಗಿದೆ ನೋಡಿ!" ಎಂದು ಹೇಳಿದರು. ಅವರಿಬ್ಬರ ಮಾತುಕತೆಯ ನಡುವೆ ಹೊಸದಾಗಿ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ನಿಯುಕ್ತರಾಗಿದ್ದ ಸಲೀಂ ಅಹಮದ್ ಪ್ರವೇಶಿಸಿದರು. ಅಹಮದ್ ನಿಜಲಿಂಗಪ್ಪನರ ಆಶೀರ್ವಾದ ಬೇಡಿದರು. ಆಗ ನಿಜಲಿಂಗಪ್ಪ ನವರು, "ನೀವು ನಮಗೆ ಬೆಲೆಬಾಳುವವರು. ಯುವಕರಲ್ಲಿಯೇ ನಮ್ಮ ಭರವಸೆ ಇರುವುದು" ಎಂದರು. ಆಗ ರಾವ್ ಅವರು, "ನಾವೀಗ ದೂರ ಸರಿಯಬೇಕು. ನಾವೇನೇ ಮಾಡಿರಲಿ, ಒಳ್ಳೆಯದೋ ಕೆಟ್ಟದ್ದೋ ಬೇಜವಾಬ್ದಾರಿಯದೋ ನಾವು ಗೌರವ ಉಳಿಸಿ ಕೊಂಡು ದೂರ ಸರಿಯಬೇಕಲ್ಲ" ಎಂದರು. ನಿಜಲಿಂಗಪ್ಪನವರು ಈಗಾಗಲೇ ಮಾಡಿ ದ್ದುದು ಅದನ್ನೇ, ಆದರೆ ರಾವ್ ಅವರ ಬಗ್ಗೆ ಈ ಮಾತನಾಡಲಾದೀತೇ? ಸಮಾರಂಭಕ್ಕೆ ಮೊದಲು ಬಂದವರೆಂದರೆ ರಾಮಕೃಷ್ಣ ಹೆಗಡೆ ಅವರು, ವೀರೇಂದ್ರ ಪಾಟೀಲರೊಡನೆ. ಇಬ್ಬರೂ ಕರ್ನಾಟಕದ ಮಾಜಿ ಮುಖ್ಯ ಮಂತ್ರಿಗಳು, ನಿಜಲಿಂಗಪ್ಪನವರು ಅವರನ್ನು ರಾಜಕೀಯಕ್ಕೆ ಬರಮಾಡಿಕೊಂಡು ತಿದ್ದಿತೀಡಿದ್ದರು. ಆ ಇಬ್ಬರನ್ನೂ ಕರ್ನಾಟಕ ರಾಜಕೀಯದ 'ಲವ-ಕುಶ' ಎಂದೇ ಜನ ಕರೆಯುತ್ತಿದ್ದರು.

ಬದುಕಿನ ಎಲ್ಲ ರಂಗಗಳಲ್ಲಿ, ಅದರಲ್ಲಿಯೂ ರಾಜಕಾರಣದಲ್ಲಿ, ಆಗಿರುವ 'ಅವನತಿ' ಯನ್ನು ಕಂಡು ಗಾಬರಿಗೊಂಡ ನಿಜಲಿಂಗಪ್ಪನವರು, ೧೯೯೭ನೇ ಫೆಬ್ರವರಿ ೬ ರಂದು ನವದೆಹಲಿಯಲ್ಲಿ ಆರೇಳು ಮಂದಿ ನಾಯಕರ ಒಂದು ಸಭೆಯನ್ನು ನಡೆಸಿದರು.

ಅದರ ಉದ್ದೇಶ ಹಳೆಯ ಕಾಂಗ್ರೆಸ್ ಅನ್ನು ಪುನರುಜ್ಜೀವನಗೊಳಿಸುವುದು. ಎರಡು ಗಂಟೆಗಳ ಸುದೀರ್ಘ ಚರ್ಚೆ ನಡೆಯಿತು; ಅದರಲ್ಲಿ ಪಾಲುದಾರರಾಗಿದ್ದವರು ಮಾಜಿ ಪ್ರಧಾನ ಮಂತ್ರಿಗಳಾದ ಚಂದ್ರಶೇಖರ್, ಕರ್ನಾಟಕದ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯ ರಾಜೇಶ್ ಪೈಲಟ್, ಲೋಕಸಭೆಯ ಮಾಜಿ ಸಭಾಧ್ಯಕ್ಷ ಶಿವರಾಜ ಪಾಟೀಲ್, ದೇವೀಲಾಲ್, ಸಿ. ಸುಬ್ರಹ್ಮಣ್ಯಂ, ಕರಣ ಸಿಂಗ್, ಮೀರ್ ಖಾಸಿಂ, ಮತ್ತು ಎಸ್.ಎನ್. ಮಿಶ್ರ ಅವರುಗಳು. ಆನಂತರ, ಪತ್ರಕರ್ತ ರಿಗೆ ವಿವರಣೆ ನೀಡುತ್ತ ಚಂದ್ರಶೇಖರ್ ಅವರು, ಚರ್ಚೆ ನಡೆದುದು ದೇಶವು ಎದುರಿಸುತ್ತಿರುವ ಸಮಸ್ಯೆಗಳನ್ನು ಕುರಿತೇ ಹೊರತು ಕಾಂಗ್ರೆಸ್ ಐಕಮತ್ಯದ ಬಗ್ಗೆ ಅಲ್ಲ ಎಂದರು. ಪತ್ರಕರ್ತರೊಡನೆ ಬೇರೆಯಾಗಿ ಮಾತನಾಡಿದ ಪೈಲಟ್ ಅವರು, ಈ ಗುಂಪಿನ ಒಟ್ಟಭಿಪ್ರಾಯವೆಂದರೆ ಕಾಂಗ್ರೆಸ್ ಅನ್ನು ಬಲಪಡಿಸುವುದು ಎಂದರು. ಇದು ಸಾಧ್ಯವಾಗುವುದು ಹಳೆಯ ಕಾಂಗ್ರೆಸ್ ಮುಂದಿರಿಸಿಕೊಂಡಿದ್ದ ಆದರ್ಶಗಳನ್ನು ಮತ್ತೆ ಪ್ರಮುಖವಾಗಿಸುವುದರ ಮೂಲಕ. ಹಳೆಯ ಕಾಂಗ್ರೆಸ್ಸಿಗರ ಅಭಿಪ್ರಾಯಗಳನ್ನು ಕಾಂಗ್ರೆಸ್ ಕಾರ್ಯಕರಿ ಸಮಿತಿಗೆ ತಿಳಿಸುವುದಾಗಿ ಪೈಲಟ್ ಭರವಸೆಯಿತ್ತರು. ಚಂದ್ರ ಶೇಖರ್ ಮತ್ತು ಹೆಗಡೆಯವರನ್ನು ಪಕ್ಷವು ಮತ್ತೆ ಬರಮಾಡಿಕೊಳ್ಳಲು ಸಿದ್ಧವಾಗಿದೆಯೇ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತ ಪೈಲಟ್ ಅವರು ಈಗಾಗಲೇ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಹಳೆಯ ಕಾಂಗ್ರೆಸ್ಸಿಗರಿಗೆ ಪತ್ರ ಬರೆದು ತನ್ನ ತೆಕ್ಕೆಗೆ ಬರ ಬೇಕೆಂದು ಆಹ್ವಾನವಿತ್ತಿದೆ ಎಂದು ಹೇಳಿದರು. ಹಳೆಯ ಕಾಂಗ್ರೆಸ್ ಅನ್ನು ಪುನರುಜ್ಜೀವನ ಗೊಳಿಸುವ ವಿಚಾರದಲ್ಲಿ ಮತ್ತಷ್ಟು ಚರ್ಚೆಗಳು ನಡೆಯಬೇಕೆಂಬುದು ಹಲವರ ಅಭಿಪ್ರಾಯ ವೆಂದು ನಿಜಲಿಂಗಪ್ಪನವರು ನುಡಿದರು. ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಮತ್ತು ನರಸಿಂಹ ರಾವ್ ಅವರುಗಳನ್ನೂ ಆಹ್ವಾನಿಸಲಾಗಿತ್ತು, ಆದರೆ ಅವರು ಸಭೆಗೆ ಬಂದಿರ ಲಿಲ್ಲ. ವಿವಿಧ ಪಕ್ಷಗಳಲ್ಲಿ ಈಗ ಚೆದುರಿ ಹೋಗಿರುವ ಹಳೆಯ ಕಾಂಗ್ರೆಸ್ ನಾಯಕರನ್ನು ಒಂದೇ ಸೂರಿನಡಿ ತರುವ ಪ್ರಯತ್ನವು ವಿಫಲಗೊಂಡಿದ್ದುದು ಸ್ಪಷ್ಟವಾಗಿತ್ತು. ಮಾರನೆಯ ದಿನ, ಅದರ ಬದಲಾಗಿ, ಭ್ರಷ್ಟಾಚಾರ ನಿರ್ಮೂಲನೆಗೆ ದೇಶವ್ಯಾಪಿ ಚಳವಳಿಯೊಂದನ್ನು ರೂಪಿಸಲು ನಿರ್ಧರಿಸಲಾಯಿತು. ಸಭೆಗೆ ಬಂದಿದ್ದ ನಾಯಕರ ಸಾಮಾನ್ಯ ಅಭಿಪ್ರಾಯ ವೆಂದರೆ ಹಳೆಯ ಕಾಂಗ್ರೆಸ್‌ನಡಿ ಒಗ್ಗೂಡುವುದರಿಂದ ಉದ್ದೇಶ ನೆರವೇರದೆಂದೂ, ಅದರಿಂದ ಮತ್ತಷ್ಟು ಗೊಂದಲ ಸೃಷ್ಟಿತವಾಗುವುದೆಂದೂ ನಿಜಲಿಂಗಪ್ಪ ಹೇಳಿದರು. ನಾವಿಲ್ಲಿ ಗಮನಿಸಬೇಕಾದುದೆಂದರೆ, ನಿಜಲಿಂಗಪ್ಪನವರು ತಮ್ಮ ಪ್ರಯತ್ನದಲ್ಲಿ ಸೋತರು ಎಂಬುದನ್ನಲ್ಲ, ಹೆಚ್ಚುತ್ತಿರುವ ದೇಶದ ಸಮಸ್ಯೆಗಳ ಬಗ್ಗೆ ಚರ್ಚಿಸಿ ಪರಿಹಾರಗಳನ್ನು ಕಂಡುಹಿಡಿಯಲು ಅವರು ತಮ್ಮ ಸಮಯ ಮತ್ತು ಸಾಮರ್ಥ್ಯಗಳನ್ನು ವೆಚ್ಚ ಮಾಡುವ

ಮನೋಭಾವವುಳ್ಳವರಾಗಿದ್ದರು ಎಂಬುದು. ಅದು ಒಂದಷ್ಟು ಕಾರ್ಯಗತವಾಗಲೂ ಬಹುದಿತ್ತು, ಆದರೆ ಸಾಧ್ಯವಾಗಲಿಲ್ಲ. ಈ ಸಂದರ್ಭವು ಕೆಲವರು ಈ ಹಿರಿಯರಲ್ಲಿನ ದೌರ್ಬಲ್ಯವೆಂದು ಕರೆಯುವ ಅವರ ಸಾಂದರ್ಭಿಕ ಸಾಧ್ಯತೆಗಳನ್ನು ಮೀರಿದ ಆಶಾವಾದ ವನ್ನೂ ಸಂಕೇತಿಸುತ್ತದೆ. ಆದರೆ ಇದೇ ಅವರ ಸಾಮರ್ಥ್ಯವೂ ಹೌದು, ಯಾಕಂದರೆ, ನಿಜವಾದ ಗಾಂಧೀವಾದಿಯಾಗಿ, ಯಾವುದನ್ನಾದರೂ ಮಾಡಲು ಭರವಸೆಯಿಂದ ಪ್ರಯತ್ನಿಸದಿದ್ದರೆ ಅಂಥವರು ಕ್ರಿಯಾರಹಿತನಾಗಿಬಿಡುತ್ತಾರೆ. ಒಟ್ಟಾರೆ, ಪ್ರಯತ್ನಿಸಿ ಸೋಲು ಕಾಣುವುದು ಪ್ರಯತ್ನಿಸದೇ ನಿರಾಶೆಯಿಂದಲೋ ಸಿನಿಕತನದಿಂದಲೋ ಹಾಗೇ ಉಳಿದುಬಿಡುವುದಕ್ಕಿಂತ ಮೇಲು. ದೇಶವನ್ನು ಎದುರಿಸುತ್ತಿರುವ ಅತ್ಯಂತ ದೊಡ್ಡ ಸಮಸ್ಯೆಯಾದ ಭ್ರಷ್ಟಾಚಾರ ಅವರ ಮನಸ್ಸನ್ನು ಕೊರೆಯುತ್ತಿದ್ದ ವಿಷಯ. ಬೆಂಗಳೂರಿನಲ್ಲಿ ೧೯೭೭ನೇ ಮಾರ್ಚ್ ೧೯ ರಂದು ಕಿಕ್ಕಿರಿದು ನೆರದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತ ಅವರು, ೧೯೪೭ ರಿಂದ ಅಧಿಕಾರದಲ್ಲಿದ್ದ ಮತ್ತು ಈಗಲೂ ಇರುವ ಶಾಸಕರು, ಎಂಪಿಗಳು, ಮಂತ್ರಿಗಳು, ಮುಖ್ಯಮಂತ್ರಿಗಳು, ಪ್ರಧಾನ ಮಂತ್ರಿಗಳು ಮತ್ತು ಅಧಿಕಾರಿಗಳ ಆಸ್ತಿವಿವರವನ್ನು ಸಿಬಿಐನಿಂದ ತನಿಖೆ ಮಾಡಿಸ ಬೇಕೆಂದರು. ಆ ವರ್ಷ ಮುಖ್ಯವಾದದ್ದು, ಏಕೆಂದರೆ ಆಗಲೇ ಕಾಂಗ್ರೆಸ್ ಇಬ್ಭಾಗ ವಾದುದು ಮತ್ತು ಹಿಂದೆಂದೂ ಕಾಣದಿದ್ದ ಪ್ರಮಾಣದಲ್ಲಿ ಭ್ರಷ್ಟಾಚಾರದಲ್ಲಿ ತೊಡಗಿದ್ದ ಇಂದಿರಾ ಗಾಂಧಿಯವರು ತಮ್ಮ ನಿರಂಕುಶಾಧಿಕಾರವನ್ನು ತೋರಿಸಲು ಪ್ರಾರಂಭಿಸಿದ್ದು. ಪ್ರಾಮಾಣಿಕ ಅಧಿಕಾರಿಗಳು ಈ ತನಿಖೆಯನ್ನು ನಡೆಸಬೇಕು, ತಪ್ಪಿತಸ್ಥರು ಶಿಕ್ಷೆಗೊಳಗಾಗ ಬೇಕು ಮತ್ತವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಅಪ್ರಾಮಾಣಿಕ ರಾಜಕಾರಣಿಗಳ ಮತ್ತು ಅಧಿಕಾರಿಗಳ ಕಪ್ಪು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವ ಮೂಲಕ ವಿದೇಶೀ ಋಣದಿಂದ ತಪ್ಪಿಸಿಕೊಳ್ಳಬಹುದು ಎಂದವರು ಹೇಳಿದರು. ಇಷ್ಟ ರಲ್ಲಿಯೇ ತಾವು ಭ್ರಷ್ಟಾಚಾರದ ವಿರುದ್ಧ ಒಂದು ಕಾರ್ಯಕ್ರಮವನ್ನು ರೂಪಿಸುವುದಾಗಿ ಘೋಷಿಸಿದರು. ಸಲಹೆಗಳನ್ನು ಕೇಳಿ ತಾವು ದೇಶದ ವಿವಿಧ ರಂಗಗಳ ೫೫ ಮಂದಿ ಗಣ್ಯರಿಗೆ ಈಗಾಗಲೇ ಪತ್ರ ಬರೆದಿರುವುದಾಗಿ ತಿಳಿಸಿದರು. ಅವರ ಸಲಹೆಗಳನನ್ನು ಪಡೆದು ತಮ್ಮ ಮುಂದಿನ ಕಾರ್ಯಯೋಜನೆಯನ್ನು ರೂಪಿಸುವುದಾಗಿ ಹೇಳಿದರು. "....ನನ್ನ ಗುರಿಯು ಭ್ರಷ್ಟಾಚಾರವು ತಾಂಡವವಾಡುತ್ತಿರುವ ಪ್ರಸ್ತುತ ಸನ್ನಿವೇಶವನ್ನೆ ದುರಿಸುವ ವಿಭಿನ್ನ ಮಾರ್ಗವನ್ನು ಸೂಚಿಸುವುದು ಮತ್ತು ಆರ್ಥಿಕಾಭಿವೃದ್ಧಿಗೆ ತೊಡಗು ವುದು" ಎಂದರು. ತಾವು ಸಲಹೆ ಪಡೆಯುತ್ತಿರುವ ಗಣ್ಯರು ರಾಜಕಾರಣಿಗಳೇ ಆಗಿರ ಬೇಕೆಂದೇನೂ ಇಲ್ಲ, ಆದರೆ ಅವರ ಹೆಸರನ್ನು ತಾವು ಈಗ ಬಹಿರಂಗಪಡಿಸುವುದಿಲ್ಲ ಎಂದರು. ಆದರೂ, ತಾವು ಈಗಾಗಲೇ ಮಾಜಿ ಮುಖ್ಯ ಚುನಾವಣಾ ಆಯುಕ್ತ

ಟಿ.ಎನ್. ಶೇಷನ್ ಮತ್ತು ಮಹಾರಾಷ್ಟ್ರದ ನೀತಿಯೋಧ ಅಣ್ಣಾ ಹಝಾರೆ ಅವರನ್ನು ಸಂಪರ್ಕಿಸಿರುವುದಾಗಿ ಹೇಳಿದರು. ತಮ್ಮ ಉದ್ದೇಶ ದೇಶದ ರಾಜಕೀಯ ವಲಯವನ್ನು ಸ್ವಚ್ಛಗೊಳಿಸಿ ರಾಷ್ಟ್ರದ ಅಭಿವೃದ್ಧಿಗೆ ಹಾದಿಮಾಡಿಕೊಡುವುದು ಎಂದರು. ಆದರೆ ಭ್ರಷ್ಟಾಚಾರವನ್ನು ತೊಡೆದು ಹಾಕಲು ಹೊಸ ರಾಜಕೀಯ ಪಕ್ಷವನ್ನು ಹುಟ್ಟುಹಾಕುತ್ತಿಲ್ಲ ವೆಂಬುದನ್ನು ಖಚಿತಪಡಿಸಿದರು. ತಮ್ಮ ಮನಸ್ಸಿನಲ್ಲಿರುವುದು ಒಂದು "ಆಂದೋಲನ, ಜನರ ವಿನಮ್ರ ಸೇವಕನಾಗಿ, ೯೫ ನೇ ವಯಸ್ಸಿನಲ್ಲಿಯೂ, ಸಾರ್ವಜನಿಕ ಜೀವನದಲ್ಲಿನ ಭ್ರಷ್ಟಾಚಾರ, ಅಪ್ರಾಮಾಣಿಕತೆ ಮತ್ತು ಅದಕ್ಷತೆಗಳ ನಿರ್ಮೂಲನೆಗಾಗಿ ನಾನು ಹೋರಾಡು ತ್ತಿದ್ದೇನೆ" ಎಂದರು. ನರಸಿಂಹ ರಾವ್ ಅವರ ಬಗ್ಗೆ ಅಭಿಪ್ರಾಯವೇನು ಎಂದು ಕೇಳಿದಾಗ, ತಾವು ರಾವ್ ಅವರನ್ನು ಕಳೆದ ಐವತ್ತು ವರ್ಷಗಳಿಂದ ಬಲ್ಲರೆಂದೂ, "ಕಾನೂನು ಪ್ರಕಾರ ಶಿಕ್ಷೆಗಳಗಾಗುವವರೆಗೂ ಯಾವುದೇ ವ್ಯಕ್ತಿಯು ಪ್ರಾಮಾಣಿಕನೇ" ಎಂದರು. ಹಳೆಯ ಕಾಂಗ್ರೆಸ್‌ನ ಪುನರುಜ್ಜೀವನದ ಯೋಜನೆಯನ್ನು ತಾವು ಕಾರ್ಯ ಸಾಧ್ಯವಲ್ಲದ್ದು ಎಂದು ಕೈಬಿಟ್ಟಿರುವುದಾಗಿ ಹೇಳಿದರು. ಈಗ ಹಳೆಯವರು, ಇಂದಿರಾ ಬಣದವರು ಮುಂತಾಗಿ ಅನೇಕ ಬಗೆಯ ಕಾಂಗ್ರೆಸ್ಸಿಗರಿದ್ದು, ಗೊಂದಲಕ್ಕೆ ಕಾರಣರಾಗಿ ದ್ದಾರೆ ಎಂದರು. ಕಾಂಗ್ರೆಸ್‌ಗೆ ಪುನರ್‌ಜೀವ ಕೊಡುವುದು ಅರ್ಥವಿಲ್ಲದ ಕೆಲಸ ಎಂಬುದು ತಮಗೀಗ ಮನವರಿಕೆಯಾಗಿದೆ ಎಂದರು. ದೇವೇಗೌಡರ ಸರ್ಕಾರದ ಕಾರ್ಯವೈಖರಿಯ ಬಗೆಗಿನ ಪ್ರಶ್ನೆಗೆ ಉತ್ತರಿಸುತ್ತ, "ಅದನ್ನು ತೀರ್ಮಾನಿಸಲು ಒಂಬತ್ತು ತಿಂಗಳು ಕಿರಿಯ ಅವಧಿ, ಆದರೆ ಕೇಂದ್ರವು ಈಗ ನಾನು ಕಳೆದ ನಾಲ್ಕು ದಶಕಗಳಿಂದ ಹೇಳುತ್ತ ಬಂದಿರುವ ಕೃಷಿ, ಗ್ರಾಮೀಣಾಭಿವೃದ್ಧಿ ಮತ್ತು ಸಣ್ಣ ಕೈಗಾರಿಕೆಗಳ ಕಡೆಗೆ ಹೆಚ್ಚು ಗಮನ ಹರಿಸುತ್ತಿದೆ" ಎಂದರು. ಹೆಗಡೆಯವರ ಲೋಕಶಕ್ತಿಯ ಬಗ್ಗೆ ಮಾತನಾಡುತ್ತ "ಕಾದು ನೋಡಿ" ಎಂಬುದಕ್ಕಿಂತ ಹೆಚ್ಚು ಹೇಳಲು ನಿರಾಕರಿಸಿದರು. ಜನಸಂಖ್ಯೆಯ ಸಮಸ್ಯೆಯಿಂದ ಚಿಂತಿತರಾದ ಅವರು, ದಂಪತಿಗಳು ಒಂದಕ್ಕಿಂತ ಹೆಚ್ಚು ಮಕ್ಕಳನ್ನು ಪಡೆಯದಂತೆ ಕಾನೂನು ರಚಿಸಬೇಕೆಂದು ಸಕಹೆಯಿತ್ತರು. ಇದನ್ನು ಎಲ್ಲ ಕೋಮುಗಳ ವರಿಗೂ ಅನ್ವಯಿಸಬೇಕು ಎಂದರು. ಡಾ. ಪಿ.ವಿ. ನಾರಾಯಣ ಅವರ ಕಾದಂಬರಿ 'ಧರ್ಮಕಾರಣ'ದ ಬಗ್ಗೆ ರಾಜ್ಯಾದ್ಯಂತ ನಡೆಯುತ್ತಿರುವ ಕೋಲಾಹಲದ ಬಗ್ಗೆ ಮಾತ ನಾಡುತ್ತ, ಆ ಕಾದಂಬರಿಯು "ಸಂಪೂರ್ಣವಾಗಿ ತಪ್ಪಿದೆ", ಅಕ್ಕನಾಗಮ್ಮ ಮತ್ತು ಚೆನ್ನಬಸವಣ್ಣವರ ಬಗೆಗೆ ಐತಿಹಾಸಿಕ ಅಂಶಗಳನ್ನು ತಿರುಚುವ ಮೂಲಕ ಲೇಖಕರು 'ಪಾತಕ'ವೆಸಗಿದ್ದಾರೆ ಎಂದು ಅಭಿಪ್ರಾಯಪಟ್ಟರು. ಆದರೆ ಸೃಜನಶೀಲ ಬರವಣಿಗೆಯ ಮೇಲೆ ನಿಯಂತ್ರಣ ಹೇರುವ ವಿಶಾಲ ಪ್ರಶ್ನೆಯ ಕಡೆಗೆ ಅವರು ಗಮನ ಹರಿಸಲಿಲ್ಲ. ತಮ್ಮನ್ನು ತಾವು ಐತಿಹಾಸಿಕತೆಗೆ ಸೀಮಿತಗೊಳಿಸಿಕೊಂಡರು, 'ಸಿಂಗಿರಾಜಪುರಾಣ'

ಮತ್ತಿತರ ಹದಿನೈದನೆಯ ಶತಮಾನದ ಕೃತಿಗಳಲ್ಲಿ ಉಕ್ತವಾಗಿರುವಂತೆ ಅಕ್ಕನಾಗಮ್ಮನ ಗಂಡ ಶಿವಸ್ವಾಮಿ ಎಂದರು. ಕಾದಂಬರಿಕಾರರು ಆಕೆ, ಆಕೆಯ ಮದುವೆ ಮತ್ತು ಮಗ ಚೆನ್ನಬಸವಣ್ಣನ ಜನ್ಮದ ಬಗ್ಗೆ ಅಪಪ್ರಚಾರವೆಸಗಿದ್ದಾರೆ ಎಂಬುದನ್ನು ಪುನರುಚ್ಚರಿಸಿದರು. ಪತ್ರಿಕೆಗಳವರ ಜೊತೆಗಿನ ಈ ಹಿರಿಯರ ಮುಖಾಮುಖಿಯು ಪ್ರಸಕ್ತ ಆಗುಹೋಗುಗಳ ಬಗ್ಗೆ, ರಾಜಕೀಯದ್ದಾಗಲೀ ಸಾಹಿತ್ಯ-ಸಂಸ್ಕೃತಿಗಳದ್ದಾಗಲೀ, ತಮ್ಮ ೯೭ನೇ ವಯಸ್ಸಿನಲ್ಲಿ ಅವರು ಇರಿಸಿಕೊಂಡಿದ್ದ ತೀವ್ರವಾದ ಆಸಕ್ತಿಯನ್ನು ಎತ್ತಿ ತೋರಿಸುತ್ತದೆ. ಬರಿ ಆಸಕ್ತಿಯಲ್ಲ, ಚೆನ್ನಾಗಿ ತಿಳಿದು ತಾಳಿದ ಆಸಕ್ತಿ! ಅಲ್ಲದೆ ಕೇವಲ ರಾಜಕಾರಣಕ್ಕೆ ತಮ್ಮನ್ನು ಸೀಮಿತಗೊಳಿಸಿಕೊಂಡ ವ್ಯಕ್ತಿಯಾಗದೆ ಎಲ್ಲ ಮಾನವ ಚಟುವಟಿಕೆಗಳ ಬಗ್ಗೆ ಆಸಕ್ತಿ ತಾಳಿದವರು ಅವರು ಎಂಬ ಅಂಶ.

ಆ ಬಳಿಕ, ೧೯೯೭ ನೇ ಆಗಸ್ಟ್ ೨೪ ರಂದು ಸ್ವಾತಂತ್ರ್ಯ ಹೋರಾಟಗಾರರಾಗಿ ಪಡೆದ ಪ್ರಶಸ್ತಿಗಾಗಿ ಸಿ. ಸುಬ್ರಹ್ಮಣ್ಯಂ ಅವರನ್ನು ಅಭಿನಂದಿಸಲು ಚೆನ್ನೈನಲ್ಲಿ ಏರ್ಪಡಿಸಿದ್ದ ಸಮಾರಂಭವೊಂದರಲ್ಲಿ ನಿಜಲಿಂಗಪ್ಪನವರು ಭಾಗವಹಿಸಿದ್ದರು. ಈ ಅವಕಾಶವನ್ನು ಬಳಸಿಕೊಂಡು ಅವರು, ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವನ್ನು ಪ್ರಾಮಾಣಿಕವಾಗಿ ಜಾರಿಗೊಳಿಸುತ್ತಿಲ್ಲವೆಂದೂ, ಸರ್ಕಾರದ ನೀತಿ ನಿರ್ದೇಶಕ ತತ್ವಗಳನ್ನು ಸಮರ್ಪಕವಾಗಿ ಅಳವಡಿಸಿಕೊಳ್ಳದ್ದರಿಂದ ದೇಶಕ್ಕೆ ಈಗಿನ ದುಸ್ಥಿತಿ ಒದಗಿದೆಯೆಂದೂ ವಿಷಾದಿಸಿದರು. ಸಂವಿಧಾನದ ನಿರ್ದೇಶಕ ತತ್ವಗಳ ಬಗೆಗಿನ ಅಧ್ಯಾಯದಲ್ಲಿ ಅನುಷ್ಠಾನಗೊಂಡಿರುವ ಏಕೈಕ ಸೂತ್ರವೆಂದರೆ ಕಾರ್ಯಾಂಗದಿಂದ ನ್ಯಾಯಾಂಗವನ್ನು ಸ್ವತಂತ್ರಗೊಳಿಸಿರುವುದು, ಆದರೆ ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಯಾವುದೇ ಸೂತ್ರವನ್ನು ಅನುಷ್ಠಾನಗೊಳಿಸಿಲ್ಲ ಎಂದರು. ಈಗ ಹಣ ಮತ್ತು ಅಧಿಕಾರಗಳು ಕೆಲವೇ ಕೈಗಳಲ್ಲಿ ಕೇಂದ್ರೀಕರಿಸಿವೆ. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಕಂಡರಿಸಿದ್ದ ಹಾಗೂ ಸಂವಿಧಾನದಲ್ಲಿ ಅಳವಡಿಸಿಕೊಂಡಿದ್ದ ಗುರಿಗಳನ್ನು ಸಾಧಿಸಲು ಇನ್ನೂ ಬಹಳ ದೂರ ಕ್ರಮಿಸಬೇಕಾಗಿದೆಯೆಂದು ಹೇಳಿದರು. ದೇಶದಲ್ಲಿ ಕೋಮುವಾದ ಹೆಚ್ಚುತ್ತಿರುವುದ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು, ಇದರಿಂದ ನಮ್ಮ ಸಾಮಾಜಿಕ ಪದ್ಧತಿಯ ಬಗ್ಗೆ ಮರುಚಿಂತನೆ ನಡೆಸಬೇಕಾದ ಕಾಲ ಬಂದಿದೆ ಎಂದರು. ಲಂಚಗುಳಿತನ ಹೆಚ್ಚಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು. ಇದಕ್ಕೆ ಒಂದೇ ಮಾರ್ಗೋಪಾಯವೆಂದರೆ ಜನತೆ ಎಚ್ಚೆತ್ತುಕೊಂಡು ಕ್ರಾಂತಿಕಾರಕ ಬದಲಾವಣೆಗಳನ್ನು ತರಲು ಕ್ರಮಕೈಗೊಳ್ಳುವುದು ಎಂದರು.

ದೇಶದ ಅನೇಕ ಕೆಡುಕುಗಳನ್ನು ನಿವಾರಿಸಿ ಗಾಂಧೀ ತತ್ವಗಳನ್ನಾಧರಿಸಿದ ದೇಶವನ್ನು ಕಟ್ಟಲು ಸಹಕರಿಸಬೇಕೆಂದು ನಿಜಲಿಂಗಪ್ಪನವರು ೧೯೯೭ ನೇ ಅಕ್ಟೋಬರ್ ೩ ರಂದು

ಜನರಿಗೆ ಮನವಿ ಮಾಡಿಕೊಂಡರು. ಗಾಂಧಿ ಜಯಂತಿಯ ಸಂದರ್ಭದಲ್ಲಿ 'ಗಾಂಧಿ ವೇದಿಕೆ' ಎಂಬ ಹೆಸರಿ ರಾಜಕೀಯೇತರ ಸಂಸ್ಥೆಯ ಆರಂಭಕ್ಕೆಂದು ಏರ್ಪಾಟಾಗಿದ್ದ ಸಮಾರಂಭದಲ್ಲಿ ಭಾಗಿಯಾಗಿ ಅವರು ಮಾತನಾಡುತ್ತಿದ್ದರು. ಕಳೆದ ಐವತ್ತು ವರ್ಷಗಳಲ್ಲಿ ದೇಶವು ರಕ್ಷಣೆ ಮತ್ತು ವಿಜ್ಞಾನ ಕ್ಷೇತ್ರಗಳಲ್ಲಿ ಒಳ್ಳೆ ಕೆಲಸ ಮಾಡಿದೆಯೆಂದೂ, ಆದರೆ ಗಾಂಧೀಜಿ ಬೋಧಿಸಿದ ನೈತಿಕ ಮೌಲ್ಯಗಳು ಕಣ್ಮರೆಯಾಗಿಯೇ ಹೋಗಿದೆಯೆಂದು ನುಡಿದರು. ಅವರು ದೆಹಲಿಯ ಗಾಂಧಿ ಸಮಾಧಿಯ ಬಳಿ ಮಾತನಾಡುತ್ತಿದ್ದರು. ವೇದಿಕೆಯು ಪಂಚವಾರ್ಷಿಕ ಕಾರ್ಯಸೂಚಿಯೊಂದನ್ನು ರೂಪಿಸಿತ್ತು. ವೇದಿಕೆಯ ಕಾರ್ಯಾಧ್ಯಕ್ಷ ರಾಜೇಶ್ ಪೈಲಟ್ ಅವರು ಮಾತನಾಡಿ ಗಾಂಧೀಜಿ ಗುರಿಗಳ ಸಾಧನೆಗೆ ತಾವು ಗಾಂಧೀಮಾರ್ಗಗಳನ್ನೇ ಅನುಸರಿಸುವುದಾಗಿ ಘೋಷಿಸಿದರು. ಭ್ರಷ್ಟಾಚಾರ ನಿರ್ಮೂಲನೆಗೆ ವೇದಿಕೆಯು ಸರ್ಕಾರಕ್ಕೆ ಗಟ್ಟಿ ಸಲಹೆಗಳನ್ನು ನೀಡುವುದಾಗಿಯೂ ಅವುಗಳನ್ನು ಸರ್ಕಾರವು ಒಪ್ಪಿಕೊಳ್ಳುವ ಭರವಸೆಯಿದೆಯೆಂದೂ ಅವರು ನುಡಿದರು. ಒಪ್ಪದಿದ್ದಲ್ಲಿ, ಗಾಂಧೀ ಮಾದರಿಯ ಅಹಿಂಸಾತ್ಮಕ ಮಾರ್ಗಗಳನ್ನು ಅನುಸರಿಸಿ ಜನರನ್ನು ಒಗ್ಗೂಡಿಸಲು ವೇದಿಕೆಯು ಪ್ರಯತ್ನಿಸುವುದೆಂದರು. ವೇದಿಕೆಯ ಕಾರ್ಯಸೂಚಿಯಲ್ಲಿ ಪ್ರಧಾನ ಮಂತ್ರಿಗಳು, ಮುಖ್ಯಮಂತ್ರಿಗಳು ಮತ್ತು ಶಾಸಕರು ೬೦ ದಿನಗಳೊಳಗಾಗಿ ತಮ್ಮ ತಮ್ಮ ಆಸ್ತಿಯ ಬಗ್ಗೆ ವಿವರಗಳನ್ನು ಬಹಿರಂಗಪಡಿಸಿ, ಸಂಬಂಧಪಟ್ಟ ಸದನದ ಮುಂದೆ ಅವುಗಳ ಪ್ರತಿಯನ್ನು ಮಂಡಿಸಬೇಕೆಂಬ ಅಂಶವಿರುವುದಾಗಿ ಅವರು ಹೇಳಿದರು. ವೇದಿಕೆಯ ಗುರಿ ಆಡಳಿತದಲ್ಲಿ ಪ್ರಾಮಾಣಿಕತೆ, ನಿಷ್ಪಕ್ಷಪಾತ ಮತ್ತು ಪಾರದರ್ಶಕತೆಗಳ ಪುನಃಸ್ಥಾಪನೆ. ತನ್ನ ಕರ್ತವ್ಯಗಳನ್ನು ನಿರ್ವಹಿಸುವ ನೇರ ಅಧಿಕಾರಿಗಳಿಗೆ ವೇದಿಕೆಯು "ನೈತಿಕ, ಕಾನೂನಾತ್ಮಕ ಮತ್ತಿತರ ಸಾಧ್ಯವಾದ ಬೆಂಬಲ" ನೀಡುತ್ತದೆ ಎಂದು ಹೇಳಿದರು.

ಅಕ್ಟೋಬರ್ ೧೯೯೭ ರಂದು ನವದೆಹಲಿಯ ಕನ್ನಡ ಭವನದಲ್ಲಿ ಏರ್ಪಾಟಾಗಿದ್ದ ಸಭೆಯೊಂದರಲ್ಲಿ, ನಿಜಲಿಂಗಪ್ಪನವರನ್ನು ಸಂವಿಧಾನ ರಚನಾ ಸಭೆಯ ಸದಸ್ಯರ ಸಂಘದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಈ ಸಂಘದ ಸದಸ್ಯರು ಭ್ರಷ್ಟಾಚಾರ ಮತ್ತು ರಾಜಕೀಯ ಅಪರಾಧೀಕರಣಗಳ ವಿರುದ್ಧ ಹೋರಾಡಲೆಂದು ಈ ಮುಂಚೆ ರಚನೆಗೊಂಡಿದ್ದ ಗಾಂಧಿ ವೇದಿಕೆಗೆ ತಮ್ಮ ಬೆಂಬಲ ವ್ಯಕ್ತಪಡಿಸಿದರು. ಇದರಲ್ಲಿ ಪಾಲುಗೊಂಡವರ ಪೈಕಿ ಕುಸುಮಕಾಂತ್ ಜೈನ್, ಕಾಲೂರಾಂ ವಿರೂಲ್ಕರ್, ಮೋತಿರಾಂ ಬೈಗ್ರಾ, ಬೇಗಂ ಅಜ಼ೀಜ಼ಾ ರಸೂಲ್, ಬಲವಂತ ಸಿಂಗ್ ಮೆಹತಾ, ಚೌಧರಿ ರಣಬೀರ್ ಸಿಂಗ್, ಭಗವಾನ್ ದೀನ್ ಮತ್ತು ನಿಹಾಲ್ ಸಿಂಗ್ ತಕ್ಷಕ್ ಮುಂತಾದವರಿದ್ದರು. ಸಂವಿಧಾನ ರಚನಾ ಸಭೆಯ ಸದಸ್ಯರಾಗಿದ್ದವರಲ್ಲಿ ಬದುಕಿರುವ ಹದಿನೈದು ಮಂದಿ ಹತ್ತಿರದಲ್ಲಿಯೇ ಇದ್ದರು; ಮತ್ತು ಅಚ್ಚರಿಯೆಂದರೆ, ಇಂದಿಗೂ ಆ ಸಭೆ ಅಸ್ತಿತ್ವದಲ್ಲಿದೆ, ಏಕೆಂದರೆ



ನೂರಕ್ಕೆ ಮೂರು ಹೆಜ್ಜೆ

ಅದರ ಅಧ್ಯಕ್ಷರೂ ಭಾರತದ ರಾಷ್ಟ್ರಪತಿಗಳೂ ಆದ ಡಾ. ರಾಜೇಂದ್ರ ಪ್ರಸಾದರು ಅದನ್ನು ಅನಿರ್ದಿಷ್ಟಾವಧಿ ಮುಂದೂಡಿದ್ದರು. ವೇದಿಕೆಗೆ ಬರೆದ ಪತ್ರದಲ್ಲಿ ಪ್ರಧಾನ ಮಂತ್ರಿ ಐ.ಕೆ. ಗುಜ್ರಾಲ್ ಅವರು ಅದರ ಚಟುವಟಿಕೆಗಳಿಗೆ ತಮ್ಮ ಬೆಂಬಲವನ್ನು ಸೂಚಿಸಿ, ತಮ್ಮ ಪ್ರಥಮ ಆದ್ಯತೆಯೂ ಭ್ರಷ್ಟಾಚಾರ ನಿರ್ಮೂಲನೆಯೇ ಆಗಿದೆ ಎಂದರು. ಬೆಂಬಲಕ್ಕಾಗಿ ನಿಜಲಿಂಗಪ್ಪನವರು ಪ್ರಧಾನ ಮಂತ್ರಿಗಳಿಗೆ ಕೃತಜ್ಞತೆ ಸಲ್ಲಿಸಿದರು.

೧೯೯೭ ರ ಡಿಸೆಂಬರ್‌ನಲ್ಲಿ ನಿಜಲಿಂಗಪ್ಪನವರು ೯೬ ವರ್ಷವನ್ನು ಪೂರೈಸಿದರು, ಆದರೆ ವಯಸ್ಸು ಅವರ ಅಸೀಮ ಜೀವನಪ್ರೀತಿಯನ್ನಾಗಲೀ ಪ್ರಸ್ತುತ ಆಗುಹೋಗು ಗಳಲ್ಲಿನ ತಮ್ಮ ಸಕ್ರಿಯ ಪಾಲುದಾರಿಕೆಯನ್ನಾಗಲೀ ಕುಗ್ಗಿಸಿರಲಿಲ್ಲ. ಅವರ ೯೬ನೇ ಹುಟ್ಟುಹಬ್ಬದ ಪ್ರಯುಕ್ತ ಚಿತ್ರದುರ್ಗದಲ್ಲಿ ಸರಳ ಸಮಾರಂಭವೊಂದು ಏರ್ಪಾಟಾಯಿತು. ಅದರಲ್ಲಿ ಚಿತ್ರದುರ್ಗ ನಗರದ ಕೃತಜ್ಞ ನಾಗರಿಕರು ತಮ್ಮ ನಚ್ಚಿನ ಗಣ್ಯ ರಾಜಕಾರಣಿ, ಮುತ್ಸದ್ದಿ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಜನತಾಸೇವಕನಿಗೆ ಗೌರವಾದರಗಳನ್ನು ವ್ಯಕ್ತಪಡಿಸಿ ದರು. ನಿರೀಕ್ಷಿಸಿದಂತೆಯೇ, ನಿಜಲಿಂಗಪ್ಪನವರು, ಈ ಅವಕಾಶವನ್ನು ದೇಶದ, ಅಷ್ಟೇಕೆ ಇಡೀ ಜಗತ್ತಿನ ಪ್ರಸ್ತುತ ವಿದ್ಯಮಾನಗಳ ಬಗ್ಗೆ ತಮ್ಮ ಗಾಢ ಚಿಂತನೆಗಳನ್ನು ಹರಿಸಲು ಬಳಸಿಕೊಂಡರು. ಔಪಚಾರಿಕವಾಗಿ ಶಿಕ್ಷಣವಿಲ್ಲದಿದ್ದರೂ, ಭಾರತದ ಜನಸಾಮಾನ್ಯರು ವಸ್ತುಸ್ಥಿತಿಯನ್ನು ಗ್ರಹಿಸಿಕೊಳ್ಳುವ ಜಾಣ್ಮೆಯನ್ನು ಪ್ರದರ್ಶಿಸುತ್ತಾರೆಂದು ಶ್ಲಾಘಿಸಿದರು. ತಮ್ಮ ಗುರು ಮಹಾತ್ಮಾ ಗಾಂಧೀಜಿಯಂತೆಯೇ ನಿಜಲಿಂಗಪ್ಪನವರೂ ಈ ಸಂದರ್ಭದಲ್ಲಿ ಔಪಚಾರಿಕ ಶಿಕ್ಷಣ ಹಾಗೂ ಬದುಕಿನ ಅನುಭವದಿಂದ ಗಳಿಸಿದ ಶಿಕ್ಷಣ ಇವುಗಳ ನಡುವೆ ವ್ಯತ್ಯಾಸ ಮಾಡುತ್ತಿದ್ದರು. ಮುಂಬರುವ ಚುನಾವಣೆಗಳ ಬಗ್ಗೆ ಪ್ರಸ್ತಾಪಿಸಿ, ಜನರು ಈಗಿಂದೀಗ ಯೋಚನೆ ಮಾಡಬೇಕಾದುದೆಂದರೆ ಯಾರಿಗೆ ತಮ್ಮ ಮತವನ್ನು ನೀಡಬೇಕು ಎಂಬುದರ ಬಗ್ಗೆ. ರಾಜಕೀಯ ಛಿದ್ರೀಕರಣ ಮತ್ತು ರಾಜಕೀಯ ಭ್ರಷ್ಟಾಚಾರ ಗಳಿಂದ ತುಂಬಿದ ಪ್ರಸ್ತುತ ಸನ್ನಿವೇಶದಲ್ಲಿ ಹಾಗೆ ನಿರ್ಧರಿಸುವುದು ತುಂಬ ಕಷ್ಟಕರ ವೆಂದೂ ಅವರು ಅಭಿಪ್ರಾಯಪಟ್ಟರು. ತಮಗೇ ಅಂತಹ ನಿರ್ಧಾರ ಸಾಧ್ಯವಾಗಿಲ್ಲ ಎಂದರು. ಭಾರತಕ್ಕೆ ಸ್ವಾತಂತ್ರ್ಯ ತಂದಿತ್ತ ಕಾಂಗ್ರೆಸ್ ಕ್ಷೀಣಿಸಿದೆ. ಹೀಗಾಗಿ ಜನರು ಪಕ್ಷವನ್ನು ಗಮನಿಸದೆ ಯಾರು ಪ್ರಾಮಾಣಿಕರೂ, ಶ್ರದ್ಧಾವಂತರೂ ನಂಬಿಕಸ್ಥರೂ ಆಗಿದ್ದಾರೋ ಅಂತಹ ಅಭ್ಯರ್ಥಿಗಳಿಗೆ ಮತ ಹಾಕಬೇಕೆಂದು ಸೂಚಿಸಿದರು. ಕೋಮು ನಿಷ್ಠೆಯನ್ನು ತೊರೆದು ಸೂಕ್ತ ಅಭ್ಯರ್ಥಿಗೆ ಮತ ನೀಡುವಂತೆ ಕರೆ ನೀಡಿದರು. ಸ್ವಾತಂತ್ರ್ಯ ಬಂದು ೫೦ ವರ್ಷಗಳಾದರೂ, ದೇಶದ ೭೦% ಭಾಗದ ಜನರು ದುರವಸ್ಥೆಯಲ್ಲಿದ್ದಾರೆ ಎಂದರು. ಇದಕ್ಕೆ ಕಾರಣ ಹಿಂದಿನ ರಾಷ್ಟ್ರೀಯ ಸರ್ಕಾರಗಳು ಜನಸಾಮಾನ್ಯರ ಹಿತ ಸಾಧನೆಗೆ ಗಮನಹರಿಸದಿದ್ದುದು ಎಂದರು. ಮುಂಬರುವ ಸರ್ಕಾರಗಳು ದೊಡ್ಡ

ದೊಡ್ಡ ಕಾರ್ಖಾನೆಗಳ ಸ್ಥಾಪನೆಗಾಗಿ ವಿದೇಶೀ ಬಂಡವಾಳವನ್ನು ಆಹ್ವಾನಿಸುವ ಆತುರದಲ್ಲಿವೆ ಎಂದರು. ಇಂತಹ ಕೆಟ್ಟ ದಾರಿಯನ್ನು ತೊರೆದು, ನಿಜವಾದ ಭಾರತವಿರುವ ಹಳ್ಳಿಯ ಜನರ ಅಭಿವೃದ್ಧಿ ಹಾಗೂ ಕಲ್ಯಾಣಗಳ ಕಡೆಗೆ ತಮ್ಮ ಗಮನ ಹರಿಸುವಂತೆ ಅವರು ಕರೆ ಕೊಟ್ಟರು. ತಮ್ಮ ಬದುಕಿನಲ್ಲಿ ತಾವು "ಕಂಡೂ ಕಂಡೂ" ಯಾವುದೇ ತಪ್ಪು ಮಾಡಿಲ್ಲವೆಂಬ ಬಗ್ಗೆ ಅವರು ಹೆಮ್ಮೆಪಟ್ಟುಕೊಂಡರು. ಆದರೆ ತಾವೇನಾದರೂ ತಪ್ಪು ಮಾಡಿದ್ದರೆ ಅದು ಗೊತ್ತಿಲ್ಲದೆ ಆಗಿರಬಹುದಾದುದು ಎಂದರು. ಈಚೆಗೆ ಈ ಜೀವನಚರಿತ್ರಕಾರನು ಚಿತ್ರದುರ್ಗದಲ್ಲಿ ಭೇಟಿಯಾದಾಗಲೂ ಅವರು ಹೇಳಿದುದು ಇದನ್ನೇ. ತಾವು ಇನ್ನೆಷ್ಟು ವರ್ಷ ಬದುಕುತ್ತೇವೋ ಗೊತ್ತಿಲ್ಲ ಎಂದ ಅವರು, ಈ ಸಂದರ್ಭದಲ್ಲಿ ತಮ್ಮಲ್ಲಿದೆಯೆಂದು ಪ್ರೀತಿಯಿಂದ ಹೇಳಿದ ಗುಣಗಳನ್ನೂ ಸೌಜನ್ಯವನ್ನೂ ತಾವೂ ಅಳವಡಿಸಿಕೊಳ್ಳುವಂತೆ ಸಭಿಕರಿಗೆ ಸಲಹೆಯಿತ್ತರು. ತಾವು ಮುಖ್ಯಮಂತ್ರಿಯಾಗಿದ್ದಾಗಿನ ದಿನಗಳನ್ನು ನೆನಪಿಸಿಕೊಂಡು, ತಮ್ಮ ಕೆಲವು ಸಾಧನೆಗಳನ್ನು ಹೇಳಿಕೊಂಡರು; ಅವುಗಳಲ್ಲಿ ಮುಖ್ಯವಾದವೆಂದರೆ, ವೃದ್ಧರಿಗೆ ಪರಿಹಾರಧನ, ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಸಿಕ ಪಿಂಚಣಿ, ಲೇಖಕರಿಗೂ ಕಲೆಗಾರರಿಗೂ ಆರ್ಥಿಕ ಸಹಾಯ, ಆರು ವರ್ಷಗಳಲ್ಲಿ ಶರಾವತಿ ಜಲವಿದ್ಯುತ್ ಯೋಜನೆಯ ಪೂರ್ಣಗೊಳಿಸುವಿಕೆ ಮತ್ತು ನೀರಾವರಿ ಸೌಲಭ್ಯಗಳ ಅಭಿವೃದ್ಧಿ. ರಾಜ್ಯದ ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲಿ ಚಿತ್ರದುರ್ಗವೂ ಒಂದಾಗಿರುವುದಕ್ಕೆ ತಮ್ಮ ವಿಷಾದ ವ್ಯಕ್ತಪಡಿಸಿದರು. ಈ ಜಿಲ್ಲೆಯಲ್ಲಿ ತುಂಬ ಕಡಿಮೆ ನೀರಾವರಿ ಸೌಲಭ್ಯಗಳಿವೆ. ಭದ್ರಾ ಮೇಲ್ದಂಡೆ ಯೋಜನೆಯನ್ನು ಕೈಗೆತ್ತಿಕೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ಅವರು ಈ ಸಂದರ್ಭದಲ್ಲಿ ಮನವಿಮಾಡಿಕೊಂಡರು.

೯೬ ವರ್ಷ ತುಂಬಿರುವ, ಆದರೆ ಈಗಲೂ ಗಟ್ಟಿಮುಟ್ಟಾಗಿರುವ ಮತ್ತು ಜನಸಾಮಾನ್ಯರ ಬಗ್ಗೆ ಚಿಂತಿಸುತ್ತ ಅವರ ಯೋಗಕ್ಷೇಮದ ಬಗ್ಗೆ ದಣಿವಿಲ್ಲದೆ ಹೆಣಗುತ್ತಿರುವ, ನಿಜಲಿಂಗಪ್ಪನವರ ಬದುಕಿನ ಈ ಹಂತದಲ್ಲಿ ನಮ್ಮ ಕಥನವನ್ನು ಮುಗಿಸಬೇಕೆಂದಿದ್ದೇವೆ. ಅವರ ಜೀವನಕಥನಕ್ಕೆ ಕೊನೆಯೊಂದಿರಬಹುದಾದರೂ, ನಿಜಲಿಂಗಪ್ಪನವರು ಮುಂದುವರಿಯುತ್ತಾರೆ, ತಮ್ಮ ಕಥನವನ್ನು ಮುಂದುವರೆಸಿಕೊಂಡು ಹೋಗುತ್ತಾರೆ. ಈ ಜೀವನಕಥನದ ಕೊನೆಯಲ್ಲಿ, ಓದುಗನು ನಿಜಲಿಂಗಪ್ಪನವರ ಬಗ್ಗೆ ತಾಳುವ ಅವರ ವ್ಯಕ್ತಿಚಿತ್ರವೆಂದರೆ, ಅಸಲಿಯಾದ ಆದರೆ ಸೌಜನ್ಯ ಮತ್ತು ಸರಳತೆಗಳ ಹಿಂದೆ ಮರೆಯಾಗಿಬಿಡಬಹುದಾದ ಒಬ್ಬ ದೊಡ್ಡ ಮನುಷ್ಯನದು. ಅವರದು ಮಹಾ ಬದುಕು, ನಮ್ಮೆಲ್ಲರಿಗೂ ಸ್ಫೂರ್ತಿದಾಯಕವಾಗಬಲ್ಲಂಥದು, ನಮ್ಮ ವಿವೇಚನೆಯನ್ನು ಮೊನಚುಗೊಳಿಸಬಲ್ಲಂಥದು. ಚಿತ್ರವತ್ತಾದ ದುರ್ಗದ ಊರು ಚಿತ್ರದುರ್ಗದ ತಮ್ಮ ಸಾಧಾರಣ ಮನೆ 'ವಿನಯ'ದ ವರಾಂಡದಲ್ಲಿ ಬೆತ್ತದ ಕುರ್ಚಿಯ ಮೇಲೆ ಕುಳಿತ ತೊಂಬತ್ತಾರರ ಈ ವೃದ್ಧರ ಗಗನ

ಕ್ಕೇರಿದ ಓಜಸ್ಸು ನಮ್ಮನ್ನು ಚಕಿತಗೊಳಿಸುವಂಥದು. ನಿಜಲಿಂಗಪ್ಪನವರ ಭೌತಿಕ ಆಕಾರ ಶಾಶ್ವತವಲ್ಲದಿರಬಹುದು, ಆದರೆ ಕರ್ನಾಟಕದ ಮತ್ತು ಭಾರತದ ಚರಿತ್ರೆಯ ಮೇಲೆ ಅವರು ಬೀರಿರುವ ಪ್ರಭಾವಗಳು ಅಳಿವಿಲ್ಲದಂಥವು, ಅವರ ಭೌತಿಕ ದೇಹದಾಚೆಗೂ ಜೀವಿಸಬಲ್ಲಂಥವು. ನಿಜಲಿಂಗಪ್ಪನವರಿಗೇ ಸಾವಿನ ಭಯವಿಲ್ಲ, ಅದನ್ನು ಒಪ್ಪಿಕೊಳ್ಳಲು ಸಿದ್ಧರಾಗಿದ್ದಾರೆ. ತಮ್ಮ ಖಾಸಗಿ ಮತ್ತು ಸಾರ್ವಜನಿಕ ಜೀವನದುದ್ದಕ್ಕೂ ಬದುಕಿನ ಕೊಡುಗೆಗಳನ್ನು ಅವರು ಸ್ವೀಕರಿಸುತ್ತಲೇ ಬಂದಿದ್ದಾರೆ. ಬದುಕಿನ ಬಗೆಗಿನ ಅವರ ಒಲವು, ಅದರಲ್ಲಿಯೇ ಸುಖ ಕಾಣುವ ಮನೋಭಾವ, ಪ್ರಕೃತಿಯೊಡನೆ ತಮ್ಮನ್ನು ತಾವು ಗುರುತಿಸಿಕೊಂಡಿರುವ ರೀತಿ ಅನನ್ಯವಾದವು. ಅಂತಹ ವ್ಯಕ್ತಿಗಳ ಮಟ್ಟಿಗೆ, ಬದುಕು ಸಾವುಗಳ ನಡುವಣ ಅಂತರಕ್ಕೆ ಅರ್ಥವೇ ಇಲ್ಲ, ಎರಡೂ ಒಂದೇ ಅಸ್ತಿತ್ವದ ಮುಂದುವರಿಕೆಗಳು. ಸಾವಿನ ನಂತರ? ನಿಜಲಿಂಗಪ್ಪನವರನ್ನು ಈ ಪ್ರಶ್ನೆ ಎಂದಿಗೂ ಕಾಡಿಸಲಾರದು!

*

೮

ನಿಜಲಿಂಗಪ್ಪನವರ ಕಾಣ್ಕೆ

ನಿಜಲಿಂಗಪ್ಪನವರ ಬದುಕು ಮತ್ತು ಆಲೋಚನೆಗಳ ವಿವರವಾದ ನಿರೂಪಣೆಯ ಬಳಿಕ, ಅವರ ಬದುಕು-ಆಲೋಚನೆಗಳ ಸಾಮಂಜಸ್ಯದ ಬಗ್ಗೆ ನಮ್ಮಲ್ಲಿ ಆಲೋಚನೆ ಮೂಡುವುದು ಸಹಜ. ತಾವು ಬದುಕಿದ ಜಗತ್ತಿನ ಮೇಲೆ ಪ್ರಭಾವ ಬೀರಿದ ಎಲ್ಲ ಐತಿಹಾಸಿಕ ವ್ಯಕ್ತಿಗಳೂ, ನಿಜಲಿಂಗಪ್ಪನವರೂ ಒಳಗೊಂಡಂತೆ, ಪ್ರಜ್ಞಾಪೂರ್ವಕ ವಾಗಿಯೋ ಅಪ್ರಜ್ಞಾಪೂರ್ವಕವೋ ಆದ ಯಾವುದೋ ಒಂದು ಕಾಣ್ಕೆಯಿಂದ ಸ್ಫೂರ್ತಿ ಗೊಂಡಿರುವುದರಲ್ಲಿ ಸಂದೇಹವಿಲ್ಲ. ಪ್ರಾಯಶಃ ಅದು ಸ್ವಲ್ಪಮಟ್ಟಿಗೆ ಪ್ರಜ್ಞಾಪೂರ್ವಕವೂ ಇನ್ನೊಂದು ಸ್ವಲ್ಪ ಮಟ್ಟಿಗೆ ಅಪ್ರಜ್ಞಾಪೂರ್ವಕವೂ ಆಗಿರುವಂಥದು, ಆದರೆ ಅಂಥ ದೊಂದು ಇರಲಿಕ್ಕೇ ಬೇಕು. ಅವರ ಬದುಕಿನ ಕಡೆ ಹೊರಳಿ ನೋಡಿದಾಗ, ಈ ಕಾಣ್ಕೆ ಎಂಥದು ಎಂಬುದನ್ನು ಪುನಾರಚಿಸಬಹುದು. ಕಾಣ್ಕೆ ಎಂಬುದು ಒಬ್ಬ ವ್ಯಕ್ತಿ ಬದುಕಿನ ಗುರಿಗಳ ಬಗ್ಗೆ ಬಯಸುವ ಎಲ್ಲದರ ಒಟ್ಟಂದವಾಗಿರುತ್ತದಲ್ಲದೆ, ಅದರಲ್ಲಿ ಕೆಲವು ತತ್ವಗಳೂ ಮೌಲ್ಯಗಳೂ ಅಂತರ್ಗತವಾಗಿರುತ್ತವೆ. ತೀರ ವ್ಯಾಪಕ ನೆಲೆಯಲ್ಲಿ ಅದನ್ನು, ಸಹಜ ಜೀವಿಯಾಗಿಯೂ ವೈಚಾರಿಕ ನೈತಿಕ ಜೀವಿಯಾಗಿಯೂ ಆಗಿರುವ ವ್ಯಕ್ತಿಯಲ್ಲಿ ಆಳವಾಗಿ ಬೇರೂರಿರುವ, ಮಾನವೀಯ ಕಾಣ್ಕೆ ಎಂದು ಬಣ್ಣಿಸಬಹುದು. ಈ ಕಾಣ್ಕೆಯಲ್ಲಿ ದೇವರು ಒಂದು ಅನಿವಾರ್ಯ ಪರಿಕರವೇನಲ್ಲ, ಆದರೆ ಅವನನ್ನು ಅನುಕೂಲದ

ಕಾರಣದಿಂದ ಸೇರಿಸಬಹುದು. ದೇವರ ವಿಷಯಕ್ಕೆ ಬಂದರೆ, ನಿಜಲಿಂಗಪ್ಪನವರೊಬ್ಬ ಅಜ್ಞೇಯತಾವಾದಿಗಳು, ಅವನ ಅಸ್ತಿತ್ವದಲ್ಲಿ ನಂಬಿಕೆಯನ್ನಾಗಲೀ ಅಪನಂಬಿಕೆಯನ್ನಾಗಲೀ ಹೊಂದದವರು. ಈ ಕಾಣ್ಕೆಯಲ್ಲಿ, ಮಾನವನನ್ನು ಒಬ್ಬ ಸ್ವಯಂನಿರ್ಧಾರಕ, ಅಂದರೆ ತನ್ನ ಗತಿಯನ್ನು ತಾನೇ ನಿರ್ಧರಿಸಬಲ್ಲ ಮತ್ತು ತನ್ನ ಇತಿಹಾಸವನ್ನು ತಾನೇ ರಚಿಸಬಲ್ಲ, ಜೀವಿ ಎಂಬ ಕಲ್ಪನೆಯಿರುತ್ತದೆ. ಆದರೆ ಈ ಮಾನವ ಸಾಮರ್ಥ್ಯವು, ಮಾನವನ ವೈಚಾರಿಕ ಪ್ರಜ್ಞೆ ಮತ್ತು ತಾನೊಬ್ಬ ಏಕಾಂಗಿಯಾದ ಅಲ್ಪ ಜೀವಿ ಮಾತ್ರವಾಗಿರದೆ ಇತರ ಮಾನವರ ಮತ್ತು ಸಹಜ ಜೀವಿಗಳ ನಡುವಣ ಒಂದು ಜೀವಿ ಎಂಬ ವೈಚಾರಿಕ ಪರಿಕಲ್ಪನೆಯ ವ್ಯಾಪ್ತಿಯಲ್ಲಿನ ಸ್ವನಿಬದ್ಧ ನೈತಿಕ ಕರ್ತವ್ಯಗಳಿಗೆ ಒಳಗಾಗಿರುತ್ತದೆ. ಆದ್ದರಿಂದಲೇ ನಿಜಲಿಂಗಪ್ಪನವರು ಕರ್ಮ ಮತ್ತು ಪುನರ್ಜನ್ಮಗಳ ಪರಿಭಾವನೆಗಳನ್ನು ತಿರಸ್ಕರಿಸುವುದು. ತಮ್ಮ ಮಾನವೀಯ ಕಾಣ್ಕೆಯಿಂದಲೇ ಅವರು ವ್ಯಕ್ತಿಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳ ಬಗೆಗಿನ ಬದ್ಧತೆಯಿಂದ ಕೂಡಿರುವ ಮೌಲ್ಯಗಳನ್ನೂ ತತ್ವಗಳನ್ನೂ ರೂಪಿಸಿಕೊಂಡವರು.

ತನ್ನ ರಾಜಕೀಯ ಆಯಾಮದಲ್ಲಿ, ಈ ಕಾಣ್ಕೆಯು ಧರ್ಮನಿರಪೇಕ್ಷತೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಒಳಗೊಂಡಿರುತ್ತದೆ. ಈ ಉದಾರ ಬದ್ಧತೆಯ ಕಾರಣದಿಂದಲೇ ನಿಜಲಿಂಗಪ್ಪನವರು ಕಮ್ಯೂನಿಸಂ ಮತ್ತು ಕೋಮುವಾದಗಳಿಗೆ ವಿರೋಧಿಗಳಾಗಿರುವುದು. ಪ್ರಜಾಪ್ರಭುತ್ವ ತತ್ವವನ್ನು ಉಲ್ಲಂಘಿಸುವುದರಿಂದ ಕಮ್ಯೂನಿಸಂ ಅನ್ನೂ, ಧರ್ಮನಿರಪೇಕ್ಷತೆಯನ್ನು ಉಲ್ಲಂಘಿಸುವುದರಿಂದ ಕೋಮುವಾದವನ್ನೂ ಅವರು ದ್ವೇಷಿಸುತ್ತಾರೆ. ಆದರೆ ಯೂರೋಪಿಯನ್ ಜ್ಞಾನೋದಯ (ಎನ್‌ಲೈಟನ್‌ಮೆಂಟ್)ನಷ್ಟು ಹಿಂದೆ ಹೋಗುವ ಈ ಪಶ್ಚಿಮನಿಷ್ಠ ಕಾಣ್ಕೆಯು, ತನ್ನ ನೆಲದ ಮಾನವೀಯ ಪರಂಪರೆಯಿಂದ ತೀವ್ರವಾಗಿ ಪ್ರಭಾವಿತವಾಗಿರುವಂಥದು. ಒಂದೆಡೆ, ನಿಜಲಿಂಗಪ್ಪನವರು ಬಸವೇಶ್ವರನ ಶ್ರೀಮಂತ ಪ್ರಜಾಸತ್ತಾತ್ಮಕ ಹಾಗೂ ಮಾನವೀಯ ಪರಂಪರೆಯತ್ತ ಹೊರಳಿದವರು, ಮತ್ತೊಂದೆಡೆ, ಅಷ್ಟೇ ಶ್ರೀಮಂತವಾದ ನೈತಿಕ ಪ್ರಜ್ಞೆಯ ಗಾಂಧೀಯ ರಾಜಕಾರಣ ಪರಂಪರೆಯಿಂದ ಪ್ರಭಾವಿತರಾದವರು. ರಾಜಕಾರಣದಲ್ಲಿ ನೀತಿಯ ಆವಶ್ಯಕತೆ ಹಾಗೂ ಆರ್ಥಿಕ ಮತ್ತು ರಾಜಕೀಯ ಅಧಿಕಾರಗಳ ವಿಕೇಂದ್ರೀಕರಣಗಳಂತಹ ಕೆಲವು ವಿಷಯಗಳ ಮಟ್ಟಿಗೆ ಗಾಂಧೀಯ ರಾಜಕಾರಣದೊಂದಿಗಿನ ಅವರ ಸಂಬಂಧ ಸ್ಪಷ್ಟವಾದುದು, ಆದರೆ ಅದು ಸಾಕಷ್ಟು ಸಂಕೀರ್ಣತೆಯಿಂದ ಕೂಡಿರುವಂಥದೆಂಬುದನ್ನೂ ಮರೆಯುವಂತಿಲ್ಲ. ಗಾಂಧೀಜಿಯವರು, ತಮ್ಮ ಅತ್ಯಂತ ಮೂಲಭೂತವಾದ ರಾಜಕಾರಣ ಚಿಂತನೆಯ ಪಠ್ಯವಾದ 'ಹಿಂದ್ ಸ್ವರಾಜ್'ನಲ್ಲಿ ಸಂಸದೀಯ ಪ್ರಜಾಪ್ರಭುತ್ವದಲ್ಲಿ

ಪೂಜ್ಯ ದಲಾಯಿ ಲಾಮ ಅವರ ಜೊತೆಯಲ್ಲಿ ಎಸ್ಸೆನ್

ಸಂಸ್ಥೀಕರಣಗೊಂಡ ಆಧುನಿಕ ರಾಜಕೀಯ ಸಂಸ್ಕೃತಿಯನ್ನು ಸ್ಪಷ್ಟವಾಗಿ ತಿರಸ್ಕರಿಸಿದವರು. ಆದರೆ ನಿಜಲಿಂಗಪ್ಪನವರಿಗೆ ಈ ಸಂಕೀರ್ಣತೆಯ ಅರಿವಿದ್ದಂತಿಲ್ಲ. ಅವರು ಈಗಾಗಲೇ ಅಸ್ತಿತ್ವದಲ್ಲಿರುವ ರಾಜಕೀಯ ವ್ಯವಸ್ಥೆಗೆ ಗಾಂಧೀಯತೆಯನ್ನು ಅನ್ವಯಿಸಲು ಪ್ರಯತ್ನಿಸುತ್ತಾರೆಂಬುದು ನಿಜವಾದರೂ, ಅದರ ಮೂಲ ಸ್ವರೂಪದ ಬಗ್ಗೆ ಗಾಂಧೀಜಿ ಮಾಡುವ ಟೀಕೆಗಳನ್ನವರು ಪರಿಗಣಿಸುವುದಿಲ್ಲ. ಈ ವಿಷಯದಲ್ಲಿ ಅವರೇನೂ ಏಕಾಂಗಿಯಲ್ಲ ಎಂಬುದು ನಿಜ, ಯಾಕಂದರೆ ಆಧುನಿಕ ಭಾರತೀಯ ರಾಜಕೀಯ ಸಂಸ್ಕೃತಿಯು ಮೂಲಭೂತ ವಿಷಯಗಳಲ್ಲಿ ಗಾಂಧೀವಾದವನ್ನು ತಿರಸ್ಕರಿಸಿ, ಅದನ್ನು ಆನುಷಂಗಿಕವಾದ ನೈತಿಕ ಪೂರಕಾಂಶವೆಂದು ಒಳಗೊಳ್ಳುವ ಪರಿಯದು. ಉದಾಹರಣೆಗೆ, ನಮ್ಮ ಪಂಚಾಯತ್‌ರಾಜ್ ಅಥವಾ ಅಷ್ಟೇಕೆ ಸರ್ಕಾರದ ನೀತಿಯ ನಿರ್ದೇಶಕ ತತ್ವಗಳನ್ನು, ಅವುಗಳಲ್ಲಿ ಗಾಂಧೀವಾದದಿಂದ ಹಿಂಡಿ ತಂದ ಒಂದಷ್ಟು ಅಂಶಗಳಿದ್ದರೂ, ನಿಜವಾಗಿಯೂ ಗಾಂಧೀಯವೆಂದು ಕರೆಯಲಾಗುವುದಿಲ್ಲ. ಇದು ಜೆಪಿಯವರಲ್ಲಿಯೂ ಕಂಡುಬರುವ ಸಮಸ್ಯೆ, ತನ್ನೆಲ್ಲ ಸದಿಂಗಿತಗಳ ನಡುವೆಯೂ, ಗಾಂಧೀತರ ಉದಾರ ಧೋರಣೆಯನ್ನು ಪೋಷಿಸುವಂಥದು. ಪ್ರಾಯಶಃ ಗಾಂಧೀಜಿಯೇ ರೂಪಿಸಿದ ಗಾಂಧೀವಾದವು ನಮ್ಮಿಂದ ಅನುಷ್ಠಾನ ಸಾಧ್ಯವಲ್ಲ ಎಂದು ಒಪ್ಪಿಕೊಳ್ಳಬೇಕೇನೋ. ಹಾಗಾದಲ್ಲಿ, ಸದ್ಯದ ರಾಜಕೀಯ ಸಂಸ್ಥೆಗಳನ್ನು ಗಾಂಧಿಮಾರ್ಗದತ್ತ ತಿರುಗಿಸುವುದು ಸೂಕ್ತ ಎಂದು ವಾದಿಸುವುದು ಸಮಂಜಸವಾದೀತು. ಈ ಅರ್ಥದಲ್ಲಿ ನಾವು ನಿಜಲಿಂಗಪ್ಪನವರನ್ನು ಒಬ್ಬ ಗಾಂಧೀವಾದಿ ಎಂದು ಕರೆಯಬಹುದು; ಆದರೆ ಈ ಅರ್ಥದಲ್ಲಿ, ನೆಹರೂ ಮತ್ತು ಗಾಂಧೀಜಿಯವರ ನಡುವಣ ವ್ಯತ್ಯಾಸವು ನಿಜಲಿಂಗಪ್ಪನವರು ಹೇಳುವಂತೆ ಮೂಲಭೂತವಾದುದೇನೂ ಅಲ್ಲ. ನೆಹರೂ ಅವರ ಮೇಲೆ ತಪ್ಪು ಹೊರಿಸಬಹುದಾದರೂ, ಅದು ಗಾಂಧೀವಿರೋಧಿ ಎಂಬ ಕಾರಣದಿಂದಾಗಲಾರದು, ಅವರು ಅಸಮರ್ಥ ಗಾಂಧೀವಾದಿ ಎಂಬ ಕಾರಣದಿಂದಾಗಬಹುದು. ಏನಾದರಾಗಲೀ, ನಮ್ಮ ಮುಂದೆ ಏಳುವ ಪ್ರಶ್ನೆಯೆಂದರೆ ಗಾಂಧೀಜಿಯವರು ನೆಹರೂವನ್ನೇಕೆ ತಮ್ಮ ಉತ್ತರಾಧಿಕಾರಿಯೆಂದು ಪರಿಗಣಿಸಿದರು ಎಂಬುದು. ಇದು ಬಗೆಹರಿಸಲಾಗದ ಸ್ವವಿರೋಧ. ಅಲ್ಲದೆ, ನಿಜಲಿಂಗಪ್ಪನವರು ಯಾವುದೇ ಪ್ರಾಮಾಣ್ಯವನ್ನು, ಗಾಂಧೀಜಿಯದನ್ನು ಕೂಡ, ಕುರುಡಾಗಿಯೂ ಪರಿಶೀಲನೆಯಿಲ್ಲದೆಯೂ ಒಪ್ಪುವವರಲ್ಲ ಎಂಬುದು ಸ್ಪಷ್ಟವಾದ ಅಂಶ. ಹೀಗಾಗಿ, ಅವರನ್ನು ಗಾಂಧೀವಾದಿ ಎಂದು ಕರೆದಾಗ ಅಥವಾ ಅವರೇ ತಮ್ಮನ್ನು ಹಾಗೆ ಕರೆದುಕೊಂಡಾಗ, ಅದಕ್ಕೆ ನೀಡಬಹುದಾದ ಅರ್ಥವೆಂದರೆ ಅದು ಗಾಂಧೀವಾದವನ್ನು ಸೂಕ್ತವಾಗಿ ಅಳವಡಿಸಿಕೊಂಡ ಮಾರ್ಗ ಎಂಬುದು. ಗಾಂಧೀಜಿಯವರಿಂದ ನಿಜಲಿಂಗಪ್ಪನವರು ಅಳವಡಿಸಿಕೊಂಡ ಮಹತ್ವದ ಅಂಶಗಳೆಂದರೆ: ರಾಜಕೀಯ ಜೀವನವೆಂದರೆ ಕಟ್ಟುನಿಟ್ಟುಗಳಿಗೊಳಗಾದ ಜೀವನರೀತಿ

ಎಂಬುದು ಹಾಗೂ ಅಧಿಕಾರವು ಏಕವ್ಯಕ್ತಿ ಅಥವಾ ಏಕಸ್ಥಳದಲ್ಲಿ ಕೇಂದ್ರೀಕರಣಗೊಳ್ಳ ಬಾರದು ಎಂಬುದು.

ಕೊನೆಯದಾಗಿ, ಅವರದು ರಾಷ್ಟ್ರೀಯವಾದಿಯ ಕಾಣ್ಕೆ, ಭಾರತವನ್ನು ಮೂಲ ಭೂತವಾಗಿ ಒಂದು ಏಕಘಟಕವೆಂದು ಪರಿಭಾವಿಸಿಕೊಂಡು ಅದನ್ನು ನಂಬುವಂಥದು. ಅವರು ಈ ಕಾಣ್ಕೆಗೆ ಬದ್ಧವಾಗಿದ್ದರು, ಆದರೆ ಅವರ ಪರಿಕಲ್ಪನೆಯ ರಾಷ್ಟ್ರವೆಂದರೆ ತಮ್ಮದೇ ವಿಶಿಷ್ಟ ಸಂಸ್ಕೃತಿ ಮತ್ತು ಇತಿಹಾಸಗಳನ್ನುಳ್ಳ ವಿಭಿನ್ನ ಪ್ರಾದೇಶಿಕ ವ್ಯವಸ್ಥೆಗಳ ಒಂದು ಒಕ್ಕೂಟ ಎಂಬುದು. ಇಷ್ಟಾದರೂ, ಅಮೂರ್ತ ರಾಷ್ಟ್ರ ಮತ್ತದರ ನಿಷ್ಕೃಷ್ಟ ಘಟಕಗಳ ನಡುವೆ ಸಂಘರ್ಷವಿರಬಹುದೆಂಬುದನ್ನು ಅವರು ಕಾಣಲಾರದಾದರು, ಅದರ ಬದಲು ಅವರೆಡೂ ಪರಸ್ಪರ ಒಳಗೊಂಡಿರುವಂಥವೂ ಅಭೇದ್ಯವಾದುವೂ ಎಂದವರು ನಂಬಿಕೊಂಡರು. ಈ ಸೈದ್ಧಾಂತಿಕ ನೆಲೆಗಟ್ಟಿನ ಮೇಲೆಯೇ ಅವರು ಕರ್ನಾಟಕ ಏಕೀಕರಣ ಚಳವಳಿಯನ್ನು ಮುನ್ನಡೆಸಿದ್ದು. ಈ ಪೂರಕತೆಯು ಒಡೆದರೆ, ರಾಷ್ಟ್ರ ಮತ್ತದರ ಭಾಷಿಕ ಘಟಕಗಳ ನಡುವೆ ಸಂಘರ್ಷವುಂಟಾದರೆ ತಾವು ಹಿಂದುಮುಂದು ನೋಡದೆ ಅಂಥ ಪ್ರಾದೇಶಿಕತೆಯನ್ನು ತಿರಸ್ಕರಿಸಿ ರಾಷ್ಟ್ರದ ಪರವಾಗಿ ನಿಲ್ಲುವುದಾಗಿ ಅನೇಕ ಬಾರಿ ಹೇಳಿದ್ದಾರೆ. ಈ ಕಾರಣದಿಂದಲೇ, ತಮ್ಮ ಯೌವನ ಮತ್ತು ಮಧ್ಯ ವಯಸ್ಸುಗಳನ್ನು ಭಾಷಾವಾರು ಪ್ರಾಂತಗಳ ರಚನೆಗಾಗಿ ಮೀಸಲಿಟ್ಟಿದ್ದ ಅವರು ಈಗ ಅದು ರಾಷ್ಟ್ರದ ನ್ಯಾಯಯುತ ಹಿತಾಸಕ್ತಿಗಳ ವಿರುದ್ಧವಾಗಿದೆ ಎಂದು ಅದರ ಬಗ್ಗೆ ಟೀಕಾತ್ಮಕವಾಗಿದ್ದಾರೆಂಬುದೇ ಅವರಲ್ಲಿನ ವಿರೋಧಾಭಾಸ.

ಅಂತಿಮ ವಿಶ್ಲೇಷಣೆಯಲ್ಲಿ, ಈ ಕಾಣ್ಕೆ ಕೆನೆಗಟ್ಟಿರುವುದು ಭಾರತೀಯ ವಾತಾವರಣ ದಲ್ಲಿ, ಅದರಲ್ಲಿ ಪರಸ್ಪರ ವಿರುದ್ಧವೆನಿಸುವ ಪಾಶ್ಚಾತ್ಯ ಆಧುನಿಕತೆ ಮತ್ತು ಭಾರತೀಯ ಧಾರ್ಮಿಕ ನೈತಿಕತೆಗಳು ಬೆಸೆದುಕೊಂಡಿವೆ. ಮತ್ತಷ್ಟು ವಿಶಾಲ ಐತಿಹಾಸಿಕ ಪರಿಪ್ರೇಕ್ಷ್ಯದಲ್ಲಿ ನೋಡಿದಾಗ, ನಿಜಲಿಂಗಪ್ಪ ಮತ್ತವರ ಪೀಳಿಗೆಯವರು, ಗಾಂಧೀಜಿಯವರನ್ನೂ ಹೊರತು ಪಡಿಸದೆಯೇ, ವಸಾಹತು ಪರಂಪರೆ ಮತ್ತು ಸ್ವಂತ ಸಾಪ್ರದಾಯಿಕತೆಗಳ ನಡುವೆ ಸೇತುವೆಯಾಗಿ ನಿಂತವರಂತೆ ಕಾಣಿಸುತ್ತಾರೆ. ಈ ಪೀಳಿಗೆಯ ನಂತರ ಬಂದ ಪೀಳಿಗೆ ಯವರು ಮಾತ್ರ, ಏನೇ ಹೇಳಲಿ ಎಷ್ಟೇ ಸಬೂಬುಗಳನ್ನು ನೀಡಲಿ, ಹೊಸ ಬಗೆಯ ವಸಾಹತು ಮತ್ತು ಹೊಸ ರೀತಿಯ ಗುಲಾಮಗಿರಿಯಾದ, ಜಾಗತೀಕರಣದ ಭ್ರಮೆಯಲ್ಲಿ ಕಳೆದುಹೋಗುವ ಅಪಾಯದಲ್ಲಿ ಸಿಲುಕಿದಂತೆ ಕಾಣುತ್ತಾರೆ. ಆದರೆ ನಿಜಲಿಂಗಪ್ಪನವರು ಮಾತ್ರ ಆಶಾವಾದಿಗಳಾಗಿದ್ದಾರೆ, ಅದಕ್ಕೆ ಕಾರಣ, ಮತ್ತೆ ಮೇಲ್ವರ್ಗವು ಮೇಲೇಳುತ್ತಿರುವ ಹಿನ್ನೆಲೆಯಲ್ಲಿ ಯುವಜನತೆ ಮತ್ತು ಸಾಮಾನ್ಯ ಜನತೆಯು ಅದನ್ನು ವಿರೋಧಿಸಿ

ಇದು ಹಿಂದೆ ಸರಿಸುತ್ತದೆ ಎಂಬ ನಂಬಿಕೆ. ನಿಜಲಿಂಗಪ್ಪನವರ ಕಾಣ್ಕೆಯು ಅಗಾಧ ಆಶಾವಾದದ್ದು. ಆದರೆ ಅದೇನೂ ಭ್ರಮಾತ್ಮಕವಾದದ್ದಲ್ಲ, ಯಾಕಂದರೆ ಅದರ ಹಿನ್ನೆಲೆಯಲ್ಲಿ ಗಾಂಧೀಯ ನೈತಿಕ ವಾಸ್ತವತೆಯ ವಿವೇಕವಿದೆ.

* * *

ಗಾಂಧೀಜಿಯ ಅಂತಿಮ ದರ್ಶನ

ತುಂಬ ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದರೂ, ೧೯೪೮ಕ್ಕೆ ಮುಂಚೆ ಹಳೆಯ ಮೈಸೂರಿನಲ್ಲಿ ಹರಿಜನರನ್ನು ಚೆನ್ನಾಗಿ ಕಾಣುತ್ತಿರಲಿಲ್ಲವೆಂದು ಗಾಂಧೀಜಿಯವರಿಗೆ ಯಾರೋ ತಪ್ಪು ಮಾಹಿತಿಯನ್ನು ನೀಡಿದ್ದರು.

ಈ ಬಗ್ಗೆ ಮಾತನಾಡಲು, ೧೯೪೮ನೇ ಇಸವಿಯ ಜನವರಿ ೩೦ ರಂದು ನವದೆಹಲಿಯ ಬಿರ್ಲಾ ಭವನದಲ್ಲಿ ಗಾಂಧೀಜಿಯವರು ಸಂಜೆ ೫-೦೦ ರಿಂದ ೫-೩೦ ರವರೆಗೆ ಶ್ರೀ ಎಸ್. ನಿಜಲಿಂಗಪ್ಪ, ಶ್ರೀ ಎಚ್.ಸಿ. ದಾಸಪ್ಪ ಮತ್ತು ಮತ್ತಿತರರೊಂದಿಗೆ ಭೇಟಿಗಾಗಿ ಸಮ್ಮತಿಸಿದ್ದರು. ಗಾಂಧೀಜಿಯವರಿಗೆ ವಸ್ತುಸ್ಥಿತಿಯನ್ನು ವಿವರಿಸಲು ಹಳೆಯ ಮೈಸೂರಿನ ಈ ನಾಯಕರು ಸರಿಯಾದ ಸಮಯಕ್ಕೆ ಅಲ್ಲಿಗೆ ಹೋಗಿದ್ದರು. ದುರದೃಷ್ಟವಶಾತ್, ಆ ಜಾಗಕ್ಕೆ ಹೋಗುವ ಹೊತ್ತಿಗೆ ನಾಥೂರಾಂ ಗೋಡ್ಸೆ ಗಾಂಧೀಜಿಯವರಿಗೆ ಗುಂಡಿಟ್ಟು ಕೊಂದಿದ್ದ. ಶ್ರೀ ನಿಜಲಿಂಗಪ್ಪ ಮತ್ತಿತರರು ಬಿರ್ಲಾ ಭವನದೊಳಕ್ಕೆ ಧಾವಿಸಿದರು. ಬಿರ್ಲಾ ಭವನದಲ್ಲಿ ಗಾಬರಿ ಕೋಲಾಹಲಗಳು ಮನೆಮಾಡಿದ್ದುವು. ಆ ಹೊತ್ತಿಗಾಗಲೇ ಗಾಂಧೀಜಿ ಸತ್ತಿದ್ದರು. ಗಾಂಧೀಜಿಯವರ ಸಾವಿನ ಸುದ್ದಿಯನ್ನು ರಾಷ್ಟ್ರಪತಿ, ಪ್ರಧಾನ ಮಂತ್ರಿ ಜವಹರಲಾಲ್ ನೆಹರೂ ಮತ್ತು ಸರ್ದಾರ್ ಪಟೇಲ್ ಮತ್ತಿತರರಿಗೆ ಮೊದಲಿಗೆ ತಿಳಿಸಿದವರು ನಿಜಲಿಂಗಪ್ಪನವರೇ. ಬಾಯಿಗೆ ಸುರಿದರೆ ಗಾಂಧೀಜಿಯವರು ಮತ್ತೆ ಜೀವಂತರಾಗಬಹುದೆಂಬ ನಂಬಿಕೆಯಿಂದ ಒಂದಷ್ಟು ಹಾಲಿಗಾಗಿ ಎಚ್.ಸಿ. ದಾಸಪ್ಪನವರು ತಡಕಾಡಿದರು.

*

೬

ನಿಜಲಿಂಗಪ್ಪನವರು ಆಗಿನ ಮುಖ್ಯಮಂತ್ರಿ ಎಸ್. ಆರ್. ಬೊಮ್ಮಾಯಿಯವರಿಗೆ ಬರೆದ ಪತ್ರ

ಎಸ್. ನಿಜಲಿಂಗಪ್ಪ

‘ವಿನಯ’ ವಿ.ಪಿ. ಬಡಾವಣೆ
ಚಿತ್ರದುರ್ಗ - ೫೭೭ ೫೭೧
(ಕರ್ನಾಟಕ ರಾಜ್ಯ)
ದೂರವಾಣಿ - ೨೫೫೦

ಮಾನ್ಯ ಶ್ರೀ ಬೊಮ್ಮಾಯಿ ಅವರಿಗೆ ನಮಸ್ಕಾರಗಳು,

ತಮ್ಮ ಪತ್ರದ ನಕಲು ನಿನ್ನೆ ದಿನ ನನ್ನ ಕೈಸೇರಿತು. ನನ್ನ ಪತ್ನಿ ಶ್ರೀಮತಿ ಮುರಿಗಮ್ಮ ಅವರ ನಿಧನದಿಂದಾದ ದುಃಖದಲ್ಲಿ ತಾವು ಭಾಗಿಗಳಾಗಿ ಕಳಿಸಿರುವ ಸಹಾನುಭೂತಿ, ಅನುಕಂಪಗಳಿಗಾಗಿ ಧನ್ಯವಾದಗಳು. ನಾನು ತಮ್ಮಗಳಿಗೆಲ್ಲಾ ಋಣಿ.

ಅದೇ ರೀತಿಯಲ್ಲಿ ನನ್ನ ಆರೋಗ್ಯದ ಬಗ್ಯೂ ನನ್ನ ಇಳಿವರಿ ವಯಸ್ಸಿನ ಸಮಸ್ಯೆಗಳು ತಾಳಿರುವ ಸಹಾನುಭೂತಿಗಾಗಿಯೂ ನನ್ನ ಧನ್ಯವಾದಗಳು. ನನ್ನ ಆರೋಗ್ಯದ ಬಗ್ಗೆ ಬೆಂಗಳೂರಿಗೆ ಬರಬೇಕೇಂದು ಕೆಲವು ವರ್ಷಗಳಿಂದ ಸಂಬಂಧಿಸಿದ ವೈದ್ಯರು ಒತ್ತಾಯಪಡಿಸುತ್ತಿದ್ದಾರೆ. ನನ್ನ ಪತ್ನಿಯ ಅಭಿಪ್ರಾಯದಿಂದಾಗಿ ಬೆಂಗಳೂರಿಗೆ ಬರಲಾಗಲಿಲ್ಲ. ಈಗ ಬೆಂಗಳೂರಿಗೆ ಬರಲು ಅಡಿ ಇಲ್ಲ. ಆದರೆ ನನಗೆ ಬೆಂಗಳೂರಿಗೆ ಬಂದರೆ

ವಸತಿಗಳು ಇತರ ಸೌಲಭ್ಯಗಳನ್ನು ಒದಗಿಸುವುದಾಗಿಯೂ ಆಹ್ವಾನಿಸಿದ್ದೀರಿ. ಧನ್ಯವಾದಗಳು. ತಾವು ನನ್ನ ಜೊತೆ ಚಿತ್ರದುರ್ಗಕ್ಕೆ ದೂರವಾಣಿಯಲ್ಲಿ ನನ್ನ ಕಷ್ಟದಲ್ಲಿ ಭಾಗವಹಿಸಿ ಹೇಳುವ ಕೃಪೆ ಮಾಡಿದಿರಿ. ಸಾಕಷ್ಟು ಆಲೋಚನೆ ಮಾಡಿದ್ದೇನೆ. ತಮ್ಮ ಸಲಹೆಗೆ ನನ್ನ ಧನ್ಯವಾದಗಳು ಅರ್ಪಿಸುತ್ತಾ ನನ್ನ ಖರ್ಚಿನ ಮೇಲೆಯೇ ನಾನು ಬೆಂಗಳೂರಿನಲ್ಲಿದ್ದು ತಮ್ಮ ಮತ್ತು ಜನತೆಯ ಹಾಗೂ ರಾಷ್ಟ್ರದ ಸೇವೆಯನ್ನು ಇನ್ನು ಮುಂದೆಯೂ ಸಲ್ಲಿಸಬೇಕೆಂದು ನಿರ್ಧರಿಸಿದ್ದೇನೆ. ಅದಕ್ಕಾಗಿ ಸಂಪನ್ಮೂಲಗಳನ್ನು ಆಲೋಚಿಸುತ್ತೇನೆ.

ನನ್ನ ಸೇವೆ ಯಾವಾಗಲೂ, ಸದಾ ಸಿದ್ಧವೆಂದು ತಿಳಿಸಬಯಸುತ್ತೇನೆ.

ತಮ್ಮ ಸಹಾನುಭೂತಿಗಳಿಗಾಗಿ ಮತ್ತೊಮ್ಮೆ ಧನ್ಯವಾದಗಳು.

ತಮ್ಮ ವಿಶ್ವಾಸಿ
ನಿಜಲಿಂಗಪ್ಪ

ಶ್ರೀ ಎಸ್.ಆರ್. ಬೊಮ್ಮಾಯಿ ಅವರು
ಮುಖ್ಯಮಂತ್ರಿಗಳು, ಕರ್ನಾಟಕ
ಬೆಂಗಳೂರು

೧೦

ಗ್ರಂಥಸೂಚಿ

ಅಪ್ರಕಟಿತ ಸಾಮಗ್ರಿ

೧. ನಿಜಲಿಂಗಪ್ಪನವರೊಂದಿಗೆ ಮಾಡಿದ ಸಂದರ್ಶನದ ಎಂಟು ಗಂಟೆಗಳಿಗೂ ಹೆಚ್ಚಿನ ಕಾಲಾವಧಿಯ ಟೇಪುಗಳು.

೨. ಅವರ ಖಾಸಗಿ ಪತ್ರಗಳು ಮತ್ತವರ ದಿನಚರಿ.

೩. ದಿವಂಗತ ಎಸ್.ಎಸ್. ಒಡೆಯರ್ ಅವರ ಟೈಪಿಸಿದ ಟಿಪ್ಪಣಿಗಳು.

ಅಧಿಕೃತ ದಾಖಲೆಗಳು

೧. ೧೯೫೬ ರಿಂದ ೧೯೬೮ ರವರೆಗಿನ ಮೈಸೂರು ರಾಜ್ಯ ವಿಧಾನಸಭೆಯ ಕಲಾಪಗಳ ವರದಿ.

೨. ಕಾಂಗ್ರೆಸ್ ಬುಲೆಟಿನ್.

ವೃತ್ತ ಪತ್ರಿಕೆಗಳು

೧. ಇಂಡಿಯನ್ ಎಕ್ಸ್‌ಪ್ರೆಸ್.

೨. ಡೆಕ್ಕನ್ ಹಾರಾಲ್ಡ್.

೩. ಸಂಯುಕ್ತ ಕರ್ನಾಟಕ (ಕನ್ನಡ).

ಪ್ರಕಟಣೆಗಳು

೧. ಕರ್ನಾಟಕದ ಭಾಗ್ಯವಿಧಾತ – ಎಲ್.ಎಸ್. ಚಂದ್ರಶೇಖರ್ ಮತ್ತು ಸುಶೀಲಮ್ಮ ಚಂದ್ರಶೇಖರ್, ಬೆಂಗಳೂರು, ೧೯೬೨ (ಕನ್ನಡ).

೨. ಥಾಟ್ಸ್ ಆಫ್ ಶ್ರೀ ಎಸ್. ನಿಜಲಿಂಗಪ್ಪ, ಅರವತ್ತನೇ ವರ್ಷದ ಗೌರವ ಸಂಪುಟ, ಎಂಪಿಸಿಸಿ ಪ್ರಕಟಣೆ, ೧೦ ನೇ ಡಿಸೆಂಬರ್, ೧೯೬೭, ಬೆಂಗಳೂರು.

೩. ಕಾಮರಾಜ್ – ಎ ಸ್ಟಡಿ – ವಿ.ಕೆ. ನರಸಿಂಹನ್, ಮನಕ್ತಲಾಸ್, ಮುಂಬಯಿ, ೧೯೬೭.

೪. ಬಯಾಗ್ರಫೀ ಆಫ್ ಶ್ರೀ ಎಸ್. ನಿಜಲಿಂಗಪ್ಪ – ಎಸ್.ಎನ್. ಶಾಂತವೀರಪ್ಪ, ಶ್ರೀಶೈಲ ಪ್ರಕಾಶನ, ಮೈಸೂರು, ೧೯೬೯.

೫. ಬಿಟ್ವೀನ್ ಲೈನ್ಸ್ – ಕುಲದೀಪ್ ನಯ್ಯರ್, ಆಲೈಡ್ ಪಬ್ಲಿಕೇಷನ್ಸ್, ಮುಂಬಯಿ, ೧೯೬೯.

೬. ದ ಸ್ಪ್ಲಿಟ್ ಆಫ್ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ – ಅತುಲ್ಯ ಘೋಷ್, ಕಲ್ಕತ್ತ, ೧೯೭೦.

೭. ಕರ್ನಾಟಕದ ರೂವಾರಿ – ಡಿ. ಜವರೇ ಗೌಡ (ದೇಜಗೌ), ಕಲಾ ಕಂಠೀರವ ಟಿ.ಎಸ್. ಕರಿಬಸಯ್ಯ ಟ್ರಸ್ಟ್, ಬೆಂಗಳೂರು, ೧೯೮೫ (ಕನ್ನಡ).

೮. ಇಂಬ್ಯಾಲೆನ್ಸಸ್ ಇನ್ ಇಂಡಿಯನ್ ಎಕಾನಮಿ ಅಂಡ್ ರೆಮಿಡೀಸ್ – ಅತುಲ್ಯ ಘೋಷ್ ಸ್ಮಾರಕೋಪನ್ಯಾಸ, ಎಸ್. ನಿಜಲಿಂಗಪ್ಪ, ಕಲ್ಕತ್ತ, ೧೯೮೭.

೯. ಬದುಕು ಮೆಲುಕು – ಎಚ್.ಕೆ. ವೀರಣ್ಣಗೌಡ, (ಕನ್ನಡ) (ವಿವರಗಳು ಲಭ್ಯವಿಲ್ಲ).

೧೦. ಗ್ಲಿಂಪ್ಸಸ್ ಆಫ್ ಎ ವಿಷನರಿ – ಸಿ.ಕೆ. ಜಾಫರ್ ಷರೀಫ್ (ಒಂದು ಜೀವನ ಚರಿತ್ರೆ), ವಡ್ಡರ್ಸೆ ರಘುರಾಮ ಶೆಟ್ಟಿ ಅವರ ಮೂಲ ಕನ್ನಡ, ಎಲ್.ಎಸ್. ಶೇಷಗಿರಿ ರಾವ್ ಅವರ ಇಂಗ್ಲಿಷ್ ಅವತರಣಿಕೆ, ಐಬಿಎಚ್ ಪ್ರಕಾಶನ, ಬೆಂಗಳೂರು, ೧೯೯೩.

೧೧

ಅನುಬಂಧಗಳು

೧. ಮುಖ್ಯಮಂತ್ರಿಗಳಾಗಿ ಎಸ್. ನಿಜಲಿಂಗಪ್ಪನವರ ಸಾಧನೆಗಳು (ಪಠ್ಯದಲ್ಲಿ ಇಲ್ಲದವು)

೧. ಬೆಂಗಳೂರು ಡೈರಿ.

೨. ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ರಚನೆಯಿಂದ ಖಾದಿ ಮತ್ತು ಗ್ರಾಮ ಕೈಗಾರಿಕೆಗಳಿಗೆ ನೀಡಿದ ಪ್ರೋತ್ಸಾಹ.

೩. ತುಂಗಭದ್ರ ಕಾಲುವೆಯ ನಿರ್ಮಾಣ-ರೈತರು ಕಾಲುವೆಯ ನಿರ್ಮಾಣಕ್ಕೆ ತಗಲುವ ವೆಚ್ಚವನ್ನು ಭರಿಸುವ ಸ್ಥಿತಿಯಲ್ಲಿಲ್ಲದ್ದರಿಂದ ಮುಖ್ಯಮಂತ್ರಿಗಳು ಕಾಲುವೆ ನಿರ್ಮಾಣಕ್ಕೆ ಆಜ್ಞೆ ಮಾಡಿ ವೆಚ್ಚವನ್ನು ಹತ್ತು ವರ್ಷಗಳಲ್ಲಿ ವಸೂಲಿ ಮಾಡಲು ಹೇಳಿದರು.

೪. ಮಂಗಳೂರು ಬಂದರು.

೫. ಬಸವ ಭವನಕ್ಕೆ ಭೂಮಿ.

೬. ಪೊಲೀಸರಿಗೆ ಮನೆಗಳು ಹಾಗೂ ಗೃಹನಿರ್ಮಾಣ ಸಂಸ್ಥೆಯ ರಚನೆ.

೭. ಕಾಗದ ಕಾರ್ಖಾನೆ – ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ಸ್ಥಾಪನೆ.

೮. ಸಹಕಾರ ವಲಯದಲ್ಲಿ ಸಕ್ಕರೆ ಕಾರ್ಖಾನೆಗಳ ಸ್ಥಾಪನೆ.

೯. ಕೃಷಿ–ಕೈಗಾರಿಕಾ ಸಂಸ್ಥೆಯ ಸ್ಥಾಪನೆ.

೧೦. ಉಣ್ಣೆ ಕೈಗಾರಿಕೆಯ ಅಭಿವೃದ್ಧಿ.

೧೧. ಕಡೆಗಣಿಸಲಾಗಿದ್ದ ಹೈದರಾಬಾದ್ ಕರ್ನಾಟಕ ಮತ್ತು ಮುಂಬಯಿ ಕರ್ನಾಟಕ ಪ್ರದೇಶಗಳಲ್ಲಿನ ರಸ್ತೆ ನಿರ್ಮಾಣ.

೧೨. ಬಿಜಾಪುರದಲ್ಲಿ ಸೈನಿಕ ಶಾಲೆಯ ಆರಂಭ.

೧೩. ಕಿತ್ತೂರಿನಲ್ಲಿ ರಾಣಿ ಕಿತ್ತೂರು ಚೆನ್ನಮ್ಮ ಹೆಣ್ಣು ಮಕ್ಕಳ ವಸತಿ ಶಾಲೆಯ ಸ್ಥಾಪನೆ.

೧೪. ಕಾರವಾರ ಬಂದರು.

೧೫. ನೀರಾವರಿ – ಭದ್ರಾ ಕಾಲುವೆ.

೧೬. ಸಹಕಾರ ವಲಯಕ್ಕೆ ಪ್ರೋತ್ಸಾಹ.

೧೭. ಕಂಠೀರವ ಸ್ಟುಡಿಯೋಗೆ ಪ್ರೋತ್ಸಾಹ.

೧೮. ಇಂಗಳದಾಳ್‌ನಲ್ಲಿ ಗಣಿ ಸ್ಥಾಪನೆ (ಇಂಗಳದಾಳ್‌ನಲ್ಲಿ ತಾಮ್ರ, ಮತ್ತು ಹಟ್ಟಿಯ ಚಿನ್ನದ ಗಣಿಗಳು).

೧೯. ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ನಾನ್–ಗೆಜ಼ೆಟೆಡ್ ನೌಕರರ ಸಂಘಕ್ಕೆ ಭೂಮಿ.

* * *

೨. ಕಾಂಗ್ರೆಸ್ ಇಬ್ಭಾಗದ ಸಮಯದಲ್ಲಿ ಇಂದಿರಾ ಗಾಂಧಿ – ನಿಜಲಿಂಗಪ್ಪ ಇವರ ನಡುವೆ ನಡೆದ ಪತ್ರವ್ಯವಹಾರ

(ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಮತ್ತು ಇತರ ಐವರು, ೯ ನೇ ಅಕ್ಟೋಬರ್, ೧೯೬೯ ರಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರಿಗೆ ಬರೆದ ಪತ್ರ)

ಆಗಸ್ಟ್ ೨೫ ರಂದು ಸಭೆ ಸೇರಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ರಾಜಕೀಯ ಪರಿಸ್ಥಿತಿಯ ಸಮೀಕ್ಷೆ ನಡೆಸಿದ ಬಳಿಕ, ಸಂಸ್ಥೆಯಲ್ಲಿ ಐಕಮತ್ಯದ ವಾತಾವರಣವನ್ನು ಸೃಷ್ಟಿಸಲು ಎಲ್ಲ ಕಾಂಗ್ರೆಸ್ಸಿಗರಿಗೆ ಕರೆ ಕೊಡುವ ನಿರ್ಣಯವೊಂದನ್ನು ಅಂಗೀಕರಿಸಿತು. ಅನೇಕ ಮಂದಿ ಕಾಂಗ್ರೆಸ್ ನಾಯಕರು ಆ ಪತ್ರದಲ್ಲಿನ ಭಾವನೆಗೆ ಸ್ಪಂದಿಸಿಲ್ಲವೆಂಬ ಬಗ್ಗೆ ಅನೇಕ ದೂರುಗಳು ಬಂದಿದ್ದುವು.

ಶ್ರೀ ಸಿ. ಸುಬ್ರಹ್ಮಣ್ಯಂ ಅವರನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಿಂದ ಮತ್ತು ಶ್ರೀ ಕಮಲಾಪತಿ ತ್ರಿಪಾಠಿ ಮತ್ತು ಶ್ರೀ ಕಾಕನಿ ವೆಂಕಟರಾಮನ್ ಮತ್ತು ಇತರ

ಅನೇಕರನ್ನು, ಸುಮಾರು ಎರಡು ದಶಕಗಳ ಹಿಂದೆ ಮಾಡಿದ್ದ ನಿರ್ಣಯದ ಆಧಾರದ ಮೇಲೆ, ಸಂಸ್ಥೆಯ ವಿವಿಧ ಹುದ್ದೆಗಳಿಂದ ತೆಗೆದು ಹಾಕುವ ಅಧ್ಯಕ್ಷರ ಮನಸ್ವೀ ಆಜ್ಞೆಗಳು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುತ್ತವೆ ಮತ್ತು ಇದರಿಂದ ಐಕಮತ್ಯ ನಿರ್ಣಯದ ಜಾರಿಯು ಮತ್ತಷ್ಟು ಕಠಿಣವಾಗುತ್ತದೆ.

ಸಂಸದೀಯ ಮಂಡಳಿಯು ಅಕ್ಟೋಬರ್ ೭ ರಂದು ಸಭೆ ಸೇರಿದ್ದಾಗ ಈ ವಿಷಯಗಳ ಬಗ್ಗೆ ಅಲ್ಲಿ ಪ್ರಸ್ತಾಪಿಸಿ, ಈ ತಿಂಗಳಲ್ಲಿಯೇ ಆ ಬಳಿಕ ಕರೆಯಲಾಗಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಪರಿಶೀಲನೆಯವರೆಗೆ ತಡೆಹಿಡಿಯಲು ಸೂಚಿಸಬಹುದಾಗಿತ್ತು.

ಅಧ್ಯಕ್ಷರ ಈ ನಡವಳಿಕೆಯು ಗಂಭೀರ ರಾಜಕೀಯ ಪರಿಣಾಮವನ್ನುಂಟು ಮಾಡುವುದರಲ್ಲಿ ಸಂಶಯವಿಲ್ಲ, ಹೀಗಾಗಿ, ಆದಷ್ಟು ಬೇಗನೆ ಈ ಕುರಿತು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಪರಿಶೀಲನೆ ನಡೆಸಬೇಕು.

ಆದ್ದರಿಂದ ನಾವು, ಅಕ್ಟೋಬರ್ ೩೦ ರಂದು ಕರೆಯಲಾಗಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯನ್ನು ಈ ತಿಂಗಳ ಸುಮಾರು ೧೫ ರ ವೇಳೆಗೆ ಸೇರುವಂತೆ ಏರ್ಪಡಿಸಬಹುದು.

ಈ ಮಧ್ಯೆ, ಅಧ್ಯಕ್ಷರು ನೀಡಿರುವ ಆಜ್ಞೆಗಳನ್ನು ತಡೆಹಿಡಿಯಬೇಕು. ಇಡೀ ರಾಜಕೀಯ ಪರಿಸ್ಥಿತಿಯ ಪರಿಶೀಲನೆಗಾಗಿ ಆದಷ್ಟು ಬೇಗ ಎಐಸಿಸಿ ಸಭೆಯನ್ನು ಕರೆಯುವುದು ಆವಶ್ಯಕವೆಂದು ನಾವು ಭಾವಿಸುತ್ತೇವೆ.

ನವೆಂಬರ್ ೧೭ ರೊಳಗಾಗಿ ಎಐಸಿಸಿ ಸಭೆಯನ್ನು ಕರೆಯಲು ಅಧ್ಯಕ್ಷರು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ನಾವು ಮನವಿ ಮಾಡಿಕೊಳ್ಳುತ್ತೇವೆ.

* * *

(ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಅಕ್ಟೋಬರ್ ೯, ೧೯೬೯ ರಂದು ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರಿಗೆ ಬರೆದ ಪತ್ರ)

ನನ್ನ ಪ್ರಿಯ ಇಂದಿರಾಜಿ,

ನೀವು ಮತ್ತು ನಮ್ಮ ಕಾರ್ಯಕಾರಿ ಸಮಿತಿಯ ಸಹಚರರು ಇವತ್ತು ಕಳಿಸಿದ ಪತ್ರವನ್ನೋದಿ ನನ್ನ ಮನಸ್ಸಿಗೆ ನೋವಾಯಿತು.

ಶ್ರೀ ಸುಬ್ರಹ್ಮಣ್ಯಂ ಅವರನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಿಂದ ನಾನು ಸ್ವಯಮೇಚ್ಛೆಯಿಂದ ತೆಗೆದು ಹಾಕಿದ್ದೇನೆಂದು ನೀವು ಅಪಾದಿಸಿದ್ದೀರಿ. ಈ ತೀರ್ಮಾನಕ್ಕೆ

ಬರುವ ಮತ್ತು ಅದರ ಪ್ರಸಾರಕ್ಕೆ ಅವಕಾಶವೀಯುವ ಮುಂಚೆ ನನ್ನೊಡನೆ ಚರ್ಚಿಸಿ ಈ ವಿಷಯವನ್ನು ಖಚಿತಪಡಿಸಿಕೊಳ್ಳಬೇಕಾಗಿತ್ತು.

ನಾನು ಶ್ರೀ ಸುಬ್ರಹ್ಮಣ್ಯಂ ಅವರಿಗೆ ಯಾವುದೇ ಪತ್ರವನ್ನೂ ಕಳಿಸಿಲ್ಲ. ಸ್ವಯಮೇಚ್ಛೆಯಿಂದ ನಾನೆಂದೂ ವರ್ತಿಸುವ ಸ್ವಭಾವದವನಲ್ಲ. ಹೊಣೆಗಾರ ಸಹೋದ್ಯೋಗಿಯೊಬ್ಬರು ಈ ರೀತಿಯ ಹಗುರ ಆಪಾದನೆ ಮಾಡುವುದು ತರವಲ್ಲ.

ಕಾಂಗ್ರೆಸ್ ಸಂವಿಧಾನದ ಪ್ರಕಾರ, ಕಾರ್ಯಕಾರಿ ಸಮಿತಿಯ ಸದಸ್ಯರು ಎಐಸಿಸಿಯ ಸದಸ್ಯರಾಗಿರಬೇಕಾಗುತ್ತದೆ. ಆ ಬಗ್ಗೆ ನಿಮಗೆ ಅರಿವಿಲ್ಲ.

ಶ್ರೀ ಸುಬ್ರಹ್ಮಣ್ಯಂ ಅವರ ವಿಷಯವೆಂದರೆ, ಟಿಎನ್‌ಸಿಸಿ ಅಧ್ಯಕ್ಷರಾಗಿದ್ದ ಕಾರಣದಿಂದ ಅವರು ಎಐಸಿಸಿಯ ಪದನಿಮಿತ್ತ ಸದಸ್ಯರಾಗಿದ್ದರು.

ಈಗವರು ಟಿಎನ್‌ಸಿಸಿಯ ಅಧ್ಯಕ್ಷರಾಗಿಲ್ಲದ ಕಾರಣ, ಅವರ ಸ್ಥಾನ ತಾನಾಗಿಯೇ ತೆರವಾಗುತ್ತದೆ. ಈ ವಿಷಯದಲ್ಲಿ ನಾನು ಶ್ರೀ ಸುಬ್ರಹ್ಮಣ್ಯಂ ಅವರಿಗೆ ಬರೆಯುವವನಿದ್ದೆ. ಆ ಬಗ್ಗೆ ಅವರಿಗೆ ಬರೆದು ಅವರೊಡನೆ ಚರ್ಚಿಸದಿರುವುದು, ಕಾಂಗ್ರೆಸ್ ಸಂವಿಧಾನವನ್ನು ಪರಿಗಣಿಸದಿದ್ದರೂ ಸ್ವಯಮೇಚ್ಛೆ ಎನಿಸಿಕೊಳ್ಳುತ್ತಿತ್ತು.

ಐಕಮತ್ಯಕ್ಕೆ ಬದ್ಧವಾಗಿರುವುದು ಎಂದರೆ ಕಾಂಗ್ರೆಸ್ ಸಂವಿಧಾನದ ಉಲ್ಲಂಘನೆ ಎಂದರ್ಥವೇ?

ಆಂಧ್ರ ಪ್ರದೇಶದಿಂದ ನನಗೆ ಪತ್ರಗಳು ಬಂದಿದ್ದು, ಪಿಸಿಸಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಸರ್ಕಾರವನ್ನು ಸೇರಿರುವರೆಂದು ಅವುಗಳಲ್ಲಿ ತಿಳಿಸಲಾಗಿದೆ. ಆದರೆ ಅವರ ಉತ್ತರಾಧಿಕಾರಿಗಳ ಆಯ್ಕೆಗೆ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಣಯದ ಪ್ರಕಾರ, ಕಮಲಾಪತಿ ತ್ರಿಪಾಠಿಯವರು ಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಬಹಳ ಹಿಂದೆಯೇ ರಾಜೀನಾಮೆ ನೀಡಿ, ಹೊಸಬರನ್ನು ಆಯ್ಕೆ ಮಾಡಲು ಪಿಸಿಸಿಯ ಸಭೆಯನ್ನು ಕರೆದಿದ್ದು ಅದನ್ನು ಮುಂದೂಡಲಾಗಿದೆ. ಹೀಗಾಗಿ, ಈ ಯಥಾಕ್ರಮದ ಬಗ್ಗೆ ಪಿಸಿಸಿಗಳಿಗೆ ನೆನಪು ಮಾಡುವುದು ಆವಶ್ಯಕವಾಗಿತ್ತು.

ಅಂತಹ ಸೂಚನೆಯನ್ನು ಪಿಸಿಸಿಗಳಿಗೆ ಕಳಿಸುವುದು, ನಿಮ್ಮ ಮಾತುಗಳಲ್ಲಿಯೇ ಹೇಳುವುದಾದರೆ, "ಸುಮಾರು ಎರಡು ದಶಕಗಳ ಹಿಂದೆ ಮಾಡಿದ್ದ ನಿರ್ಣಯದ ಆಧಾರದ ಮೇಲೆ, ಸಂಸ್ಥೆಯ ವಿವಿಧ ಹುದ್ದೆಗಳಿಂದ ತೆಗೆದು ಹಾಕುವ ಅಧ್ಯಕ್ಷರ ಮನಸ್ವೀ ಆಜ್ಞೆಗಳು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುತ್ತವೆ ಮತ್ತು ಇದರಿಂದ

ಐಕಮತ್ಯ ನಿರ್ಣಯದ ಜಾರಿಯು ಮತ್ತಷ್ಟು ಕಠಿಣವಾಗುತ್ತವೆ" ಎಂಬುದನ್ನೋದಿ ನನಗೆ ಅಚ್ಚರಿ ಮತ್ತು ನೋವುಂಟಾದುವು.

ಪರಿಷ್ಕರಣ ಅಥವಾ ರದ್ದುಗಳಿಗೆ ಒಳಗಾಗದ ಕಾಂಗ್ರೆಸ್‌ನ ನಿರ್ಣಯಗಳಿಗೆ, ಅದರಲ್ಲಿಯೂ ಪಕ್ಷದ ನಿರ್ವಹಣಾ ಕ್ರಮಗಳು ಮತ್ತು ಕಾರ್ಯನಿರ್ವಹಣೆಗೆ ನಾವು ಬದ್ಧರಾಗಿರಬೇಕೆಂದು ನಾನು ತಿಳಿದಿದ್ದೆ.

ಕೆಲವು ಕಾಲ ಕಳೆದರೆ ತೆಗೆದುಕೊಂಡು ನಿರ್ಣಯಗಳು ತಮಗೆ ತಾವೇ ರದ್ದಾಗುತ್ತವೆಂಬುದು ನಿಮ್ಮ ಸಿದ್ಧಾಂತವೆ?

ಯಾವುದೆ ಗುಂಪಿನ ಇಚ್ಛೆಗಳಿಗನುಗುಣವಾಗಿ ನಾನು ಮನಸ್ವೀ ಕಾರ್ಯ ನಿರ್ವಹಣೆ ಮಾಡುವುದು ಐಕಮತ್ಯವನ್ನು ಆಗುಮಾಡಲು ಸಹಾಯಕವಾಗುವುದೆ?

ನಿಮ್ಮ ಪತ್ರದಲ್ಲಿ ವ್ಯಕ್ತಗೊಳಿಸಿರುವ ಕಾಳಜಿಗೆ ಕಾರಣವಾಗಬಹುದಾದ ಯಾವುದೆ ಕಾರ್ಯವನ್ನು ನಾನು ಕೈಗೊಳ್ಳದಿರುವುದರಿಂದಾಗಿ, ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಹಾಗೂ ಅದು ಎಐಸಿಸಿ ಸಭೆಯ ದಿನಾಂಕದ ಬಗ್ಗೆ ತೀರ್ಮಾನಿಸಬೇಕೆಂಬ ಬಗ್ಗೆ ಈಗಾಗಲೇ ನಿರ್ಧಾರವಾಗಿರುವ ವಿಷಯಗಳ ಬಗ್ಗೆ ಬದಲಾವಣೆಗಳನ್ನು ಕೈಗೊಳ್ಳುವ ಆವಶ್ಯಕತೆಯಿಲ್ಲವೆಂದು ನಾನು ಭಾವಿಸುತ್ತೇನೆ.

'ಇಡೀ ರಾಜಕೀಯ ಪರಿಸ್ಥಿತಿ'ಯನ್ನು ತುರ್ತಾಗಿ ಪರಿಶೀಲಿಸುವುದು ಅನಿವಾರ್ಯವಾಗಿರುವ ಯಾವ ಬೆಳವಣಿಗೆಗಳು ನಿಮ್ಮ ಮನಸ್ಸಿನಲ್ಲಿದೆಯೋ ನನಗೆ ತಿಳಿಯದಾಗಿದೆ.

* * *

(ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರಿಗೆ ಬರೆದ ಪತ್ರ)

ಮೊಕ್ಕಾಂ ಕಚೇರಿ, ಬೆಂಗಳೂರು
೨ಲನೇ ಅಕ್ಟೋಬರ್, ೧೯೬೯

ನನ್ನ ಪ್ರಿಯ ಇಂದಿರಾಜಿ,

ನನ್ನ 'ಮನಸ್ವೀ ಆಜ್ಞೆಗಳು' ಮತ್ತು 'ಇಡೀ ರಾಜಕೀಯ ಸನ್ನಿವೇಶ'ದ ಬಗ್ಗೆ ಪರಿಶೀಲನೆ ನಡೆಸಲು ಕಾರ್ಯಕಾರಿ ಸಮಿತಿ ಮತ್ತು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆ ಕರೆಯಲು ಒತ್ತಾಯಿಸಿ ನೀವು ಮತ್ತು ಇತರ ಐವರು ಬರೆದ ಪತ್ರಕ್ಕೆ ನಾನು ಅಕ್ಟೋಬರ್ ೯ ರಂದು ಒಂದು ಉತ್ತರವನ್ನು ಬರೆದಿದ್ದೆ. ಆ ಕಾಗದದಲ್ಲಿನ ನನ್ನ ತಕ್ಷಣದ ಕಾಳಜಿಯೆಂದರೆ, ಸಿ. ಸುಬ್ರಹ್ಮಣ್ಯಂ ಅವರನ್ನಾಗಲೀ ಇತರ ಯಾರನ್ನೇ

ಆಗಲಿ ತೆಗೆದು ಹಾಕಲು ನಾನು ಮನಸ್ವೀ ಆಜ್ಞೆಯನ್ನು ಮಾಡಿರಲಿಲ್ಲವೆಂಬುದನ್ನು ನಿಮಗೆ ಸ್ಪಷ್ಟಡಿಸುವುದು ಮತ್ತು ನನ್ನ ಮನಸ್ವೀ ಕಾರ್ಯವೈಖರಿಯು 'ಐಕಮತ್ಯ ನಿರ್ಣಯದ ಅನುಷ್ಠಾನವನ್ನು ಹೆಚ್ಚು ಕಷ್ಟಕರಗೊಳಿಸಿದೆ' ಎಂಬ ನಿಮ್ಮ ಆರೋಪವನ್ನು ಅಲ್ಲಗಳೆಯುವುದು.

ನಿಮ್ಮ ೮ನೇ ತಾರೀಕಿನ ಪತ್ರವು ನನಗೆ ದೊಡ್ಡ ಆಘಾತದಂತೆ ಬಂದೆರಗಿತು ಎಂಬುದನ್ನು ಮಾತ್ರ ಒಪ್ಪಿಕೊಳ್ಳಬೇಕು. ನೀವು ಮತ್ತು ನಿಮ್ಮ ಆಪ್ತ ಸಹಚರರು ನನಗೆ ಬರೆಯುವ ಪತ್ರಗಳಂತೆಯೇ ಎಂದಿನಂತೆ ಈ ಪತ್ರದ ವಿಷಯವೂ ನಿಮ್ಮ ಕಾಗದ ನನ್ನನ್ನು ತಲುಪುವ ಮೊದಲೇ ಪತ್ರಿಕೆಗಳಲ್ಲಿ ಕಾಣಿಸಿಕೊಂಡಿತ್ತು. ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಸುದೀರ್ಘ ಇತಿಹಾಸದಲ್ಲಿ ಕಾರ್ಯಕಾರಿ ಸಮಿತಿಯ ಸದಸ್ಯರು ಈ ಬಗೆಯ ಪತ್ರವನ್ನು ಅಧ್ಯಕ್ಷರಿಗೆ ಬರೆದು ಅವರ ಮೇಲೆ ಸಂಸ್ಥೆಯ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡುವರೆಂದು ಆರೋಪ ಹೊರಿಸಿದ ನಿದರ್ಶನವಿರುವುದು ತಕ್ಷಣ ನನ್ನ ನೆನಪಿಗೆ ಬರುತ್ತಿಲ್ಲ. ಅಥವಾ ಕಾರ್ಯಕಾರಿ ಸಮಿತಿಯ ಸದಸ್ಯರು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಮುಂದುವರಿಯುತ್ತಲೇ ಅಧ್ಯಕ್ಷರ ವಿರುದ್ಧ ದುರುದ್ದೇಶದ ಆರೋಪ ಹೊರಿಸಿ ಪ್ರಚಾರ ಮಾಡುವ ಮತ್ತು ಅಧ್ಯಕ್ಷರ ಕಾರ್ಯದ ಬಗ್ಗೆ ಪರಿಶೀಲಿಸಲು ಎಐಸಿಸಿ ಸಮಾವೇಶ ವನ್ನು ನಡೆಸಲು ಒತ್ತಾಯಿಸಿದ ನಿದರ್ಶನವೂ ನೆನಪಿಗೆ ಬರುತ್ತಿಲ್ಲ. ಈ ಹಿಂದೆ, ಧೋರಣೆಯ ಬಗ್ಗೆ ಗಂಭೀರ ಭಿನ್ನಾಭಿಪ್ರಾಯಗಳು ತಲೆದೋರಿದಾಗ ಕೂಡ ಕಾರ್ಯಕಾರಿ ಸಮಿತಿಯ ಸದಸ್ಯರು ಸ್ನೇಹಪರ ಧೋರಣೆಯನ್ನೇ ತಾಳುತ್ತಿದ್ದರು, ಹೀಗಾಗಿಯೇ ಕಾರ್ಯಕಾರಿ ಸಮಿತಿಯು ವರಿಷ್ಠ ಮಂಡಳಿಯೆಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು, ಒಗ್ಗಟ್ಟು, ನಿಷ್ಠೆ ಮತ್ತು ಪರಸ್ಪರ ಗೌರವಗಳನ್ನು ಹೊಂದಿ ಸಂಸ್ಥೆಯ ಕಾರ್ಯಕರ್ತರಿಗೆ ಮಾದರಿ ಯೆನಿಸಿಕೊಂಡಿತ್ತು.

ಆದ್ದರಿಂದ ನೀವು ಮತ್ತು ನಿಮ್ಮ ಸಹಚರರು ತೆಗೆದುಕೊಂಡಿರುವ ಕ್ರಮವು ಕಾಂಗ್ರೆಸ್‌ನ ಒಗ್ಗಟ್ಟನ್ನು ಉಳಿಸಿಕೊಳ್ಳಲು ಸಹಾಯಕವಾದ ಪ್ರಜಾಸತ್ತಾತ್ಮಕ ಸಜ್ಜನಿಕೆ ಮತ್ತು ಸ್ನೇಹಪರತೆಗಳನ್ನು ತೊರೆದು ಹಿಂದೆಂದೂ ಕಾಣದ ದಾರಿಯನ್ನು ಹಾಕಿಕೊಟ್ಟಂತಾ ಗಿದೆ. ಮೂಲಭೂತವಾದ ನ್ಯಾಯ ಮತ್ತು ಸೌಜನ್ಯಗಳನ್ನು ಕಡೆಗಣಿಸಿ, ನೀವು ನನ್ನನ್ನು ಒಂದು ಮಾತು ಕೇಳದೆಯೇ, ನನ್ನ ವಿರುದ್ಧ ಕೇವಲ ಗುಸುಗುಸು ಮಾತು ಮತ್ತು ಸಂಶಯಗಳನ್ನಾಧರಿಸಿ ಗಂಭಿರ ಆರೋಪಗಳನ್ನು ಮಾಡಿದ್ದೀರಿ. ಕಾಂಗ್ರೆಸ್ ಅಧ್ಯಕ್ಷರ ಬಗ್ಗೆ ಈ ಮೂಲ ಸೌಜನ್ಯವನ್ನು ತೋರಿಸದ ನಿಮ್ಮ ನಡವಳಿಕೆಯು ಇದೇ ಮೊದಲ ಸಲದ್ದೇನೂ ಅಲ್ಲ.

ರಾಷ್ಟ್ರಪತಿ ಸ್ಥಾನದ ಕಾಂಗ್ರೆಸ್ ಅಭ್ಯರ್ಥಿಯಾಗಿ ನಾವು ನಿರ್ಧಾರ ತೆಗೆದುಕೊಳ್ಳಬೇಕಾಗಿದೆಯೆಂದು ನಾನು ನಿಮಗೆ ಮೇ, ಜೂನ್ ಮತ್ತು ಜುಲೈ ಆರಂಭದಲ್ಲಿ ಪದೇ ಪದೇ ಪ್ರಸ್ತಾಪಿಸಿದುದೂ, ಈಗೇನೂ ತರಾತುರಿಯಿಲ್ಲದ್ದರಿಂದ ಈ ನಿರ್ಧಾರವನ್ನು ಮುಂದೂಡಬಹುದೆಂದು ಆಗ ನೀವು ಹೇಳಿದುದೂ, ಅದೂ ಅಲ್ಲದೆ, ಜುಲೈ ೧೨ ರಂದು ಸಂಸದೀಯ ಮಂಡಳಿಯು ಸೇರುವ ಎರಡು ಗಂಟೆಗಳ ಮುಂಚಿನವರೆಗೂ ನೀವು ಯಾವುದೇ ಹೆಸರುಗಳನ್ನು ಪ್ರಸ್ತಾಪಿಸಲಿಲ್ಲವೆಂಬುದೂ ನಿಮಗೆ ನೆನಪಿರಬಹುದು.

ಈಚಿನ ರಾಷ್ಟ್ರಪತಿ ಚುನಾವಣೆಯಂಥ ಮಹತ್ವದ ಸಂದರ್ಭದಲ್ಲಿ, ನೀವು, ಜಗಜೀವನರಾಂ ಮತ್ತು ಫಕ್ರುದ್ದೀನ್ ಆಲಿ ಅಹಮದ್ ಅವರುಗಳು ಸೇರಿ 'ಜನಸಂಘ' ಮತ್ತು 'ಸ್ವತಂತ್ರ ಪಕ್ಷಗಳ' ಜೊತೆ ನಾನು ರಹಸ್ಯ ಒಪ್ಪಂದವನ್ನು ಮಾಡಿಕೊಂಡಿದ್ದೇನೆಂದು ಬಹಿರಂಗ ಆರೋಪ ಮಾಡಿದಿರಿ. ಆ ಹೊತ್ತಿಗೆ ಕೂಡ, ನೀವು ನನ್ನನ್ನು ಸಂಪರ್ಕಿಸುವ ಅಥವಾ ನನ್ನೊಡನೆ ಮಾತನಾಡಿ ವಸ್ತುಸ್ಥಿತಿಯನ್ನು ಕಂಡುಕೊಳ್ಳುವ ಮಾರ್ಗ ಹಿಡಿಯದೆ ನನ್ನ ಬಗ್ಗೆ ಅಪಪ್ರಚಾರ ಮಾಡಿ ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿಯನ್ನು ಸೋಲಿಸಲು ಈ ಕತೆಯನ್ನೇ ಒಂದು ಅಸ್ತ್ರವಾಗಿಸಿಕೊಂಡಿರಿ. ಶ್ರೀ ಜಗಜೀವನರಾಂ ಮತ್ತು ಶ್ರೀ ಫಕ್ರುದ್ದೀನ್ ಆಲಿ ಅಹಮದ್ ಅವರುಗಳು ನನಗೆ ಈ ಪತ್ರ ಬರೆದ ದಿನವೇ ಆ ಮುಂಚೆ ನನ್ನನ್ನು ಕಂಡಿದ್ದರು, ಆದರೂ ಕಾಂಗ್ರೆಸ್ ಅಭ್ಯರ್ಥಿಯ ಪರವಾಗಿ ಕೆಲಸಮಾಡಿರೆಂದು ಕೇಳಿಕೊಂಡಾಗಲೂ ಈ ವಿಷಯ ಅವರು ಪ್ರಸ್ತಾಪವನ್ನೇ ಮಾಡಲಿಲ್ಲ. ಆ ಬಳಿಕ, ನೀವು ಬಿತ್ತರಿಸಿದ ಕತೆಯು ಕಾಂಗ್ರೆಸ್ ಮತ್ತದರ ಅಭ್ಯರ್ಥಿಯ ಮೇಲೆ ಸಾಕಷ್ಟು ಹಾನಿಯನ್ನು ಮಾಡಿದಾಗ, ನನ್ನ ಮೇಲಿನ ಆರೋಪವನ್ನು ಕಾರ್ಯಕಾರಿ ಸಮಿತಿಯಲ್ಲಿ ಸಾಬೀತು ಮಾಡುವಂತೆ ಕೇಳಿದಾಗ, ನಿಮ್ಮ ಬಳಿ ಆ ಬಗ್ಗೆ ಯಾವುದೇ ಪುರಾವೆಯಿಲ್ಲವೆಂಬುದನ್ನೂ ಕತೆಗೆ ಕೈಕಾಲಿಲ್ಲವೆಂಬುದನ್ನೂ ನೀವು ಒಪ್ಪಿಕೊಂಡಿದ್ದಿರಿ. ಇಷ್ಟಾದರೂ, ಕಾಂಗ್ರೆಸ್ ಅಭ್ಯರ್ಥಿಯ ಸೋಲಿನ ಬಗ್ಗೆಯಾಗಲೀ 'ಕೈಕಾಲಿಲ್ಲ'ದ ಕತೆಯ ಆಧಾರದ ಮೇಲೆ ಅಶಿಸ್ತನ್ನು ವಿಧ್ಯುಕ್ತಗೊಳಿಸಿ ಪ್ರೋತ್ಸಾಹಿಸಿದ ಬಗ್ಗೆಯಾಗಲೀ ನೀವು ವಿಷಾದವನ್ನೂ ವ್ಯಕ್ತಪಡಿಸಲಿಲ್ಲ. ಹಾಗೆ ನೋಡಿದರೆ, ಶ್ರೀ ಗಿರಿಯವರ ಗೆಲವಿನ ಬಗ್ಗೆ ನೀವು ಅಭಿನಂದನೆಗಳನ್ನು ಸ್ವೀಕರಿಸಿದ ಬಗ್ಗೆ ಶ್ರೀ ಗಿರಿಯವರ ಗೆಲವು ನೀವು ತಾಳಿದ ಧೋರಣೆಯ ಗೆಲವು ಎಂದು ಹೇಳಿದ ಬಗ್ಗೆ ಪತ್ರಿಕೆಗಳಲ್ಲಿ ಅನೇಕ ವರದಿಗಳು ಬಂದವು.

ಒಪ್ಪಿತವಾದ ಪ್ರಜಾಸತ್ತಾತ್ಮಕ ಅಥವಾ ಸಂಸದೀಯ ಪ್ರಜಾಪ್ರಭುತ್ವದ ಮಾರ್ಗದಲ್ಲಿ ಇದೆಲ್ಲವನ್ನೂ ಅರ್ಥಮಾಡಿಕೊಳ್ಳುವಲ್ಲಿ ವಿಫಲನಾಗಿದ್ದೇನೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸಂಸದೀಯ ಮಂಡಳಿಯ ತೀರ್ಮಾನವನ್ನು ಒಪ್ಪಿಕೊಳ್ಳುವಲ್ಲಿನ ನಿಮ್ಮ

ಹಿಂಜರಿಕೆಯನ್ನೂ, ಬಹುಮತ ಗಳಿಸದ ಬಗೆಗಿನ ನಿಮ್ಮ ಕೋಪವನ್ನೂ, ಮತ್ತು 'ಆಗಲಿರುವ ಗಂಭೀರ ಪರಿಣಾಮಗಳ' ನಿಮ್ಮ ಸೂಚನೆಯನ್ನೂ, ನೀವು ಹೇಳಿದ ಗಂಭೀರ ಪರಿಣಾಮದ ಸ್ವರೂಪವಾಗಿ ಮೊರಾರ್ಜಿ ದೇಸಾಯಿಯವರನ್ನು ವಜಾಗೊಳಿಸಿದ ಬಗೆಯನ್ನೂ, ಕಾಂಗ್ರೆಸ್ ಸಂಸದೀಯ ಮಂಡಳಿಗೆ 'ವಿಪ್' ಜಾರಿಗೊಳಿಸುವ ಬಗೆಗೆ ನಾನು ಹಾಗೂ ಸಂಸದೀಯ ಮಂಡಳಿಯ ಕಾರ್ಯಕಾರಿ ಸಮಿತಿಯು ನಿಮಗೆ ಪದೇ ಪದೇ ಮಾಡಿಕೊಂಡ ಮನವಿಯನ್ನು ನೀವು ನಿರಾಕರಿಸಿದ ರೀತಿಯನ್ನೂ, ಜಗಜೀವನರಾಂ ಮತ್ತು ಫಕ್ರುದ್ದೀನ್ ಆಲಿ ಅಹಮದ್ ಅವರು ಮಾಡಿದ ಆರೋಪಗಳಿಗೆ ನೀವಿತ್ತ ಬೆಂಬಲವನ್ನೂ, 'ಸತ್ಯದೂರ'ವಾದ ಕತೆಯು ಕಾಂಗ್ರೆಸ್ ಅಭ್ಯರ್ಥಿಯ 'ಬುಡವನ್ನೇ ಕಿತ್ತುಹಾಕಿದೆ' ಎಂಬ ನಿಮ್ಮ ವಾದವನ್ನೂ, ಹಾಗೆ ಮಾಡಿದರೆ ಮತವು 'ಕಮ್ಯುನಿಸ್ಟ್' ಹಾಗೂ 'ಮುಸ್ಲಿಂ ಲೀಗ್' ಬೆಂಬಲಿತ ಅಭ್ಯರ್ಥಿಯ ಪರವಾಗಿರುತ್ತದೆಂದು ಮತ್ತು ಅಂಥ ಆಶಿಸ್ತು ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿಯ ಸೋಲಿಗೆ ಕಾರಣವಾಗುವುದಲ್ಲದೆ ಪಕ್ಷದ ಛಿದ್ರತೆಗೆ ಕಾರಣವಾಗುವುದೆಂಬುದನ್ನು ತಿಳಿದಿದ್ದರೂ 'ಮುಕ್ತ ಮತದಾನ' ಅಥವಾ 'ಆತ್ಮಪ್ರಜ್ಞೆಯ ಮತದಾನ'ದ ಬೇಡಿಕೆಗೆ ನೀವಿತ್ತ ಬೆಂಬಲವನ್ನೂ ಕಂಡು ಕಾಂಗ್ರೆಸ್ಸಿಗರಲ್ಲಿ ಬಹುಪಾಲು ಜನರು ಮತ್ತು ನಮ್ಮ ದೇಶದಲ್ಲಿನ ಪ್ರಜಾಪ್ರಭುತ್ವಪ್ರಿಯರು ಕಂಗಾಲಾಗಿದ್ದಾರೆ; ಖಿನ್ನರಾಗಿದ್ದಾರೆ.

ಐಕಮತ್ಯವನ್ನು ಹಾಳುಮಾಡುವ ನಡೆಗಳಿಗೆ ಅವಕಾಶವಿತ್ತರೆ ಅಥವಾ ಪ್ರೋತ್ಸಾಹಿಸಿದರೆ ಯಾವ ರಾಜಕೀಯ ಸಂಘಟನೆಯೂ ಉಳಿಯಲಾರದೆಂಬುದು ನಿಮಗೆ ಚೆನ್ನಾಗಿ ತಿಳಿದಿದೆ. ಪ್ರಜಾಸತ್ತಾತ್ಮಕ ಪಕ್ಷವೊಂದರ ಧೋರಣೆಗಳೂ ಕಾರ್ಯಕ್ರಮಗಳೂ ರೂಪುಗೊಳ್ಳುವುದು ಮುಕ್ತವೂ ಪ್ರಾಮಾಣಿಕವೂ ಆದ ಚರ್ಚೆಯ ಮೂಲಕ ಮತ್ತು ಬಹುಮತದ ತೀರ್ಮಾನದ ಮೂಲಕ. ಪಕ್ಷದ ಸಂವಿಧಾನದ ಪ್ರಕಾರ ಧೋರಣೆಯನ್ನು ರೂಪಿಸಲು ಮತ್ತು ಅಭ್ಯರ್ಥಿಗಳನ್ನು ಆಯ್ಕೆಮಾಡಲು ತನ್ನ ಅಂಗಸಂಸ್ಥೆಗಳಿಗೆ ಅವಕಾಶವಿರುತ್ತದೆ. ಪಕ್ಷದ ಸದಸ್ಯರು ಅದರ ಧ್ಯೇಯಧೋರಣೆಗಳಿಗೆ ನಿಷ್ಠರಾಗಿರುತ್ತಾರೆ ಮತ್ತು ಪಕ್ಷದ ಸೂಕ್ತ ಅಂಗಸಂಸ್ಥೆಗಳು ಆಯ್ಕೆ ಮಾಡುವ ಅಭ್ಯರ್ಥಿಗಳ ಪರವಾಗಿ ಮತ ಚಲಾಯಿಸುತ್ತಾರೆ ಮತ್ತು ಅಂಥವರ ಪರವಾಗಿ ಕೆಲಸ ಮಾಡುತ್ತಾರೆ. ತೀರ್ಮಾನಗೊಂಡಿರುವ ಧ್ಯೇಯಧೋರಣೆಗಳನ್ನು ಉಲ್ಲಂಘಿಸುವ ಅಥವಾ ಅದರ ಅಭ್ಯರ್ಥಿಯ ಪರವಾಗಿ, ಅಂಥ ಧ್ಯೇಯಧೋರಣೆ ಮತ್ತು ಆ ಅಭ್ಯರ್ಥಿಯು ತನಗೆ ಒಪ್ಪಿಗೆಯಿಲ್ಲವೆಂಬ ಕಾರಣದಿಂದ, ಮತಹಾಕಲು ನಿರಾಕರಿಸುವ ಸದಸ್ಯ ಅಥವಾ ಸದಸ್ಯರ ಗುಂಪು ಪಕ್ಷದ ಅನನ್ಯತೆ ಮತ್ತು ಸಮಗ್ರತೆಗೆ ಹಾಗೂ ಸಂಸದೀಯ ಪ್ರಜಾಸತ್ತೆಯಲ್ಲಿನ ರಾಜಕೀಯ ನಡವಳಿಕೆಯ ಸಾಧನವಾದ ಅದರ ಪರಿಣಾಮಕಾರಿಕತೆಗೆ ಭಂಗವುಂಟುಮಾಡುತ್ತದೆ.

ಅದು ಭಿನ್ನಗೊಂಡ ಅಸ್ತಿತ್ವವನ್ನು ಪಡೆಯುತ್ತದೆ, ಆ ಕಾರಣದಿಂದ ಜನತೆಯ ಬೆಂಬಲ ವನ್ನು ಕಳೆದುಕೊಳ್ಳುತ್ತದೆ. ಅಂಥ ಸಂಘಟನೆಯ ಧ್ಯೇಯಧೋರಣೆಗಳ ಬಗ್ಗೆ ಮತದಾರರಿಗೆ ನಿಖರತೆಯಿರುವುದಿಲ್ಲ. ತನ್ನ ಧ್ಯೇಯಧೋರಣೆಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಸಂಘಟನೆಗೇ ಖಾತರಿಯಿರುವುದಿಲ್ಲ. ತನ್ನ ಅಭ್ಯರ್ಥಿಯು ಗೆಲ್ಲುವ ಭರವಸೆ ಉಳಿಯು ವುದಿಲ್ಲ. ಪಕ್ಷವು ಅಧಿಕಾರದಲ್ಲಿದ್ದರೆ, ಪಕ್ಷಕ್ಕೆ ತನ್ನ ಸದಸ್ಯರ ಬೆಂಬಲದ ಖಾತರಿಯಿರು ವುದಿಲ್ಲ. ಅಂಥ ಸರ್ಕಾರವು ತನ್ನ ಅಸ್ತಿತ್ವದ ಬಗ್ಗೆಯೇ ಸದಾ ಅನಿಶ್ಚಿತತೆಯಿಂದ ಕೂಡಿ ಕೆಲಸ ನಿರ್ವಹಿಸಬೇಕಾಗುತ್ತದೆ. ಪಕ್ಷಗಳಿಗೆ ಅಂಥ ವೈರಾಣುಗಳು ತಗುಲಿಕೊಂಡರೆ ಅವು ಸಂಸದೀಯ ಪ್ರಜಾಸತ್ತೆಯಲ್ಲಿ ಕಾರ್ಯ ನಿರ್ವಹಿಸಲಾರವು. ಸಂಸದೀಯ ಪ್ರಜಾ ಸತ್ತೆಯು ಕಾರ್ಯಸಾಧ್ಯವಾಗುವಂತೆಯೂ ವಿಶ್ವಾಸಾರ್ಹವೂ ಪರಿಣಾಮಕಾರಿಯೂ ಆಗುವಂತೆ ಮಾಡುವುದೂ ಎಂದರೆ ಪಕ್ಷದ ಸದಸ್ಯರ ಶಿಸ್ತು ಮತ್ತು ಪಕ್ಷಕ್ಕೆ ವಿಶಿಷ್ಟ ಅನನ್ಯತೆ ಮತ್ತು ನಿರ್ದುಷ್ಟತೆಯನ್ನು ನೀಡುವ ಬದ್ಧತೆಗಳು. ಇಂಥ ಶಿಸ್ತು ಕಣ್ಮರೆಯಾದರೆ, ಪಕ್ಷ ಮತ್ತು ಸಂಸದೀಯ ಪ್ರಜಾಸತ್ತೆ ಕೂಡ ಛಿದ್ರಗೊಳ್ಳುತ್ತವೆ.

ರಾಷ್ಟ್ರಪತಿ ಚುನಾವಣೆಯಲ್ಲಿ ಕಾಂಗ್ರೆಸ್ ಸೋತ ಬಳಿಕ ಈ ಪಾಠವನ್ನು ಕಲಿಯ ಲಾಗಿದೆಯೆಂದು ನಾನು ಭಾವಿಸಿದ್ದೆ. ಸೂಕ್ತ ಅಂಗಸಂಸ್ಥೆಗಳು ಧೋರಣೆಗಳು ಮತ್ತು ಅಭ್ಯರ್ಥಿಗಳ ಆಯ್ಕೆಯ ಬಗ್ಗೆ ತೆಗೆದುಕೊಳ್ಳುವ ನಿರ್ಧಾರಗಳನ್ನು ಒಪ್ಪಿಕೊಂಡರೆ ಮಾತ್ರವೇ ಐಕಮತ್ಯವನ್ನು ಕಾಪಾಡಬಹುದು ಎಂಬುದು ಸ್ಪಷ್ಟವಾಗಿದೆ. ಇದೇ ಧ್ಯೇಯವನ್ನು ಐಕಮತ್ಯ ನಿರ್ಣಯವೂ ಅಳವಡಿಸಿಕೊಂಡಿತ್ತು, ಸಂಸದೀಯ ವಿಭಾಗ ಮತ್ತು ಸಾಂಸ್ಥಿಕ ವಿಭಾಗಗಳೆರಡಕ್ಕೂ ತಮ್ಮದೇ ಆದ ಹೊಣೆಗಾರಿಕೆಯ ವಲಯಗಳಿವೆ ಮತ್ತು ಅವುಗಳ ಪರಿಧಿಯಲ್ಲಿ ಆಯಾ ವಿಭಾಗವು ಸಂಸ್ಥೆಯ ಸಾಮಾನ್ಯ ಹಿತಗಳಿಗಾಗಿ ಕೆಲಸ ಮಾಡ ಬೇಕೆಂದು ಅದು ಸೂಚಿಸಿತ್ತು. ಈ ನಿರ್ಣಯದ ಮಾತು ಮತ್ತು ಆಶಯಗಳೆರಡಕ್ಕೂ ನಾನು ಕಟ್ಟುನಿಟ್ಟಾಗಿ ಒಳಗಾಗಿದ್ದೇನೆಂಬುದರ ಬಗ್ಗೆ ನನಗೆ ಅನುಮಾನವೇ ಇಲ್ಲ, ಗತಿಸಿದ್ದು ಒಂದು ಪೂರ್ವ ಮಾದರಿಯಾಗಬಾರದು ಎಂದು ಎಚ್ಚರಿಸಿದ್ದೆ, ಹೀಗಾಗಿ ಶಿಸ್ತು ಮತ್ತು ಐಕಮತ್ಯಗಳಿಗೆ ಒತ್ತು ನೀಡಿದ್ದೆ, ಸಾಂಸ್ಥಿಕ ಹಾಗೂ ಶಾಸಕಾಂಗ ವಿಭಾಗಗಳೆರಡೂ ಧ್ಯೇಯ ಧೋರಣೆಗಳು, ಕಾರ್ಯಮಾರ್ಗ ಮತ್ತು ಶಿಸ್ತಿಗೆ ಕಟ್ಟುನಿಟ್ಟಾಗಿ ಒಳಗಾಗಿರಬೇಕೆಂದಿದ್ದೆ.

ಹೀಗಾಗಿ, ಐಕಮತ್ಯ ನಿರ್ಣಯದ ಆಶಯಕ್ಕೆ ವಿರುದ್ಧವಾಗಿ ನಾನು ನಡೆದುಕೊಂಡಿ ದ್ದೇನೆಂದು ನೀವು ಮಾಡಿರುವ ಆಕ್ಷೇಪಣೆಯ ಪತ್ರ ಬಂದಾಗ ನನಗೆ ಅಚ್ಚರಿಯಾಯಿತು. ಈ ಐಕಮತ್ಯ ನಿರ್ಣಯ ಏಕೆ ಅನಿವಾರ್ಯವಾಯಿತು ಎಂಬುದನ್ನು, ಎಐಸಿಸಿಯ ಬೆಂಗಳೂರು ಅಧಿವೇಶನದ ನಂತರ, ಐಕಮತ್ಯ ನಿರ್ಣಯದ ಅಂಗೀಕಾರದ ಮೊದಲು,

ನೀವು ಮತ್ತು ಪತ್ರಕ್ಕೆ ಸಹಿ ಮಾಡಿರುವ ಐದು ಮಂದಿ ಹೇಗೆ ಮಾತನಾಡುತ್ತಿದ್ದಿರಿ ಮತ್ತು ನಡೆದುಕೊಳ್ಳುತ್ತಿದ್ದಿರಿ ಎಂಬುದನ್ನು ಪ್ರಾಯಶಃ ನೀವು ಮರೆತಂತಿದೆ.

ಎಐಸಿಸಿಯ ಬೆಂಗಳೂರು ಅಧಿವೇಶನದ ಆನಂತರದ ನಿಮ್ಮ ಭಾಷಣಗಳು ಮತ್ತು ಕ್ರಿಯೆಗಳನ್ನು ಕಂಡರೆ ಸಂಸ್ಥೆ ಅಥವಾ ಪಕ್ಷದ ಬಗ್ಗೆ ನಿಮ್ಮ ಮನೋಭಾವ ಯಾವುದು ಎಂಬುದರ ಬಗ್ಗೆ ನನಗೆ ಗೊಂದಲವುಂಟಾಗಿದೆ. ನಿಮ್ಮ ಭಾಷಣಗಳಲ್ಲಿ ನೀವು ಪ್ರಧಾನ ಮಂತ್ರಿಗಳ ವಿಶೇಷ ಹೊಣೆಗಾರಿಕೆಯ ಬಗ್ಗೆ ಪದೇ ಪದೇ ಉಲ್ಲೇಖಿಸುತ್ತೀರಿ. ಇದನ್ನಾರೂ ಅಲ್ಲಗಳೆಯಲಾರರು. ಆದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಧಾನ ಮಂತ್ರಿಗಳು 'ಸ್ವಯಂಭು'ವೇನಲ್ಲವಲ್ಲ. ಪ್ರಧಾನ ಮಂತ್ರಿಗಳು ಎಂದರೆ ಪಕ್ಷದ ಅಭ್ಯರ್ಥಿಗಳಾಗಿ ಆರಿಸಿ ಬಂದ ಸದಸ್ಯರುಗಳಿರುವ ಸಂಸದೀಯ ಮಂಡಳಿಯಿಂದ ಚುನಾಯಿತರಾದ, ಅದರ ನಾಯಕರು. ಜನರ ಮುಂದೆ ಇಡುವುದು ಪಕ್ಷದ ಪ್ರಣಾಳಿಕೆಯನ್ನು. ಪ್ರಚಾರ ಮಾಡಿ, ಮತಗಳು ಬೀಳುವ ಹಾಗೆ ಮಾಡಿ ಗೆಲ್ಲಿಸುವವರು ಪಕ್ಷದ ಕಾರ್ಯಕರ್ತರು. ಪಕ್ಷಕ್ಕೆ ಬಹುಮತ ಬಾರದೇ ಹೋದರೂ ಅದು ಉಳಿದಿರುತ್ತದೆ, ಉಳಿಯಲೇಬೇಕು. ಹೀಗಾಗಿ ನಮ್ಮ ಪಕ್ಷವೇ ಸದಾ ಕಾಲ ಅಧಿಕಾರದಲ್ಲಿರುತ್ತದೆ ಎಂಬ ಭ್ರಮೆಯಲ್ಲಿರದೆ ಶಾಸಕಾಂಗ ಮತ್ತು ಸಾಂಸ್ಥಿಕ ವಿಭಾಗಗಳ ಸಂಬಂಧವನ್ನು ನಾವು ಮರೆಯುವಂತಿಲ್ಲ.

ಸದನದಲ್ಲಿ ಬಹುಮತ ಬಂದು ಪ್ರಧಾನ ಮಂತ್ರಿಗಳ ಆಯ್ಕೆ ನಡೆದಾಕ್ಷಣ ಸಾಂಸ್ಥಿಕ ವಿಭಾಗದ ಆವಶ್ಯಕತೆಯು ಇಲ್ಲವಾಗುವುದಿಲ್ಲ, ಧ್ಯೇಯಧೋರಣೆಗಳ ರೂಪಣೆ ಮತ್ತು ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆಮಾಡುವ ಪಕ್ಷದ ಅಂಗಸಂಸ್ಥೆಗಳ ಪ್ರಜಾಸತ್ತಾತ್ಮಕ ಕಾರ್ಯಗಳು ಕೊನೆಗೊಳ್ಳುವುದಿಲ್ಲ. ಆ ಬಳಿಕ ಮಾಡಬೇಕಾದುದೆಂದರೆ ಪ್ರಧಾನ ಮಂತ್ರಿಗಳು ಹೇಳುವುದಕ್ಕೆ ಪಕ್ಷವು ಅಂಗೀಕಾರಮುದ್ರೆಯನ್ನೊತ್ತುವುದು ಮತ್ತು ನಾಯಕನನ್ನು ವೈಭವೀಕರಿಸುವುದು, ಅಷ್ಟೇ ಎಂಬಂಥ ಧೋರಣೆಯು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ನಿಲುವು. ಪ್ರಜಾಪ್ರಭುತ್ವದಲ್ಲಿ, ಧ್ಯೇಯಧೋರಣೆಗಳ ರೂಪಣೆ ಮತ್ತು ನಾಯಕನ ಬದಲಾವಣೆ ಮಾಡಬಹುದಾದ ಹಕ್ಕನ್ನು ಪಕ್ಷದಿಂದ ಯಾರೂ ಕಿತ್ತುಕೊಳ್ಳಲು ಸಾಧ್ಯವಿಲ್ಲ.

ಸಂಸ್ಥೆಯ ಪಾತ್ರದ ಬಗ್ಗೆ ನೀವು ತಾಳಿರುವ ಭಾವನೆಯು ಅಸಾಧಾರಣವಾದುದೆಂಬುದು ನಿಮ್ಮ ಭಾಷಣಗಳು ಮತ್ತು ಕೃತಿಗಳಿಂದ ವ್ಯಕ್ತವಾಗುತ್ತದೆ. ಪಕ್ಷವು ಒಬ್ಬ ಅಭ್ಯರ್ಥಿಯನ್ನು ಒಪ್ಪಿಕೊಂಡಾಗಲೂ, ಆ ಆಯ್ಕೆಯನ್ನು ಇಷ್ಟಪಡದಿದ್ದರೆ, ಪಕ್ಷದ ಅಭ್ಯರ್ಥಿಯ ವಿರುದ್ಧ ಕೆಲಸ ಮಾಡಲು ಸ್ವಾತಂತ್ರ್ಯವಿದೆಯೆಂದು ನೀವು ಭಾವಿಸುವಂತಿದೆ. ಪಕ್ಷವು ನಿರ್ಣಯಗಳನ್ನು ಹಾಗೂ ಕಾರ್ಯಕ್ರಮಗಳನ್ನು ಕೈಗೊಂಡಾಗಲೂ, ನಿಮಗೆ ಸರಿಯೆನಿಸಿದುದನ್ನು ಮಾತ್ರ ಒಪ್ಪಿಕೊಳ್ಳುವ ಮತ್ತು ಅದರಂತೆ ಮಾತ್ರ ನಡೆಯಲು

ಬದ್ಧರೆಂದು ನೀವು ತಿಳಿದಂತಿದೆ. ಪಕ್ಷದ ಕಾರ್ಯಕ್ರಮಗಳನ್ನು ಒಪ್ಪಿಕೊಂಡಾಗಲೂ (ಹತ್ತು ಅಂಶಗಳ ಕಾರ್ಯಕ್ರಮ ಅಥವಾ ೧೯೭೫ ರೊಳಗಾಗಿ ಕನಿಷ್ಠವಾದುದನ್ನು ನೀಡುವ ನಿರ್ಣಯದಂತಹವು), ನೀವು ಮಾಡುತ್ತಿರುವುದು ಪಕ್ಷದ ಆಲೋಚನೆಯ ಫಲವಾದ ತೀರ್ಮಾನಗಳು ಎಂದು ನಿಮಗೆ ಮನವರಿಕೆಯಾದಂತೆ ಕಾಣಿಸದೆ, ಅವೂ ನಿಮ್ಮ ಪ್ರತಿಭೆ ಅಥವಾ ಕಲ್ಪನೆಯ ಕುಸುಮಗಳು ಎಂಬಂತೆ ತೋಚುತ್ತವೆ. ನಿಮ್ಮ ಆಪ್ತ ಬೆಂಬಲಿಗರು, ಪಕ್ಷದ ಪಾತ್ರವನ್ನು ಕಡೆಗಣಿಸಿ, ಈ ಕಾರ್ಯಕ್ರಮಗಳ ಕರ್ತೃವು ನೀವೇ ಎಂದು ಪ್ರಚಾರ ಮಾಡುತ್ತ ಅನುಷ್ಠಾನಗೊಳಿಸುವ ಕಲ್ಪನೆಯು ನಿಮಗೆ ರೋಚಕ ವಾಗಿರುವಂತಿದೆ. ನೀವು ಮಾಡುತ್ತಿರುವುದನ್ನು ಪಕ್ಷವು ಹಿಂದಿನಿಂದಲೂ ಹೇಳಿಕೊಂಡು ಬರುತ್ತಿದೆ ಎಂದರೆ ಅದು ನಿಮ್ಮನ್ನು ಕೀಳುಮಾಡಲು ಅಥವಾ ಕಡೆಗಣಿಸಲು ಮಾಡುವ ಪ್ರಯತ್ನ ಎಂದು ನೀವು ಭಾವಿಸುವಂತಿದೆ. ಪಕ್ಷದ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಿ ಆಶ್ವಾಸನೆಗಳನ್ನು ಪೂರೈಸಲು ಅಧಿಕಾರದ ಕವಚತೊಟ್ಟ ಆಡಳಿತಯಂತ್ರದ ಮುಖ್ಯಸ್ಥರು ನೀವಾದರೂ, ಅನುಷ್ಠಾನದ ಕಳಪೆತನಕ್ಕೆ ಮಾತ್ರ ಪಕ್ಷವೇ ಕಾರಣವೆಂದು ತೆಗಳಬೇಕೆಂದು ನೀವು ಭಾವಿಸುವಂತಿದೆ. ಆಡಳಿತದ ಧೋರಣೆಗಳನ್ನೋ ಕಾರ್ಯ ಗಳನ್ನೋ ಪಕ್ಷವೋ ಪಕ್ಷದ ಅಂಗಸಂಸ್ಥೆಗಳೋ ಪರಿಶೀಲಿಸಲು ಬಯಸಿದರೆ ನಿಮಗೆ ಮುಜುಗರವಾಗುವಂತೆ ಕಾಣುತ್ತದೆ. ಧ್ಯೇಯಧೋರಣೆಗಳ ರೂಪಣೆ, ಆಡಳಿತದ ಕಾರ್ಯ ವೈಖರಿಯ ಪರಿಶೀಲನೆ ಮತ್ತು ಚುನಾವಣೆಗಳಿಗೆ ಅಭ್ಯರ್ಥಿಗಳ ಆಯ್ಕೆ ಇವುಗಳಲ್ಲಿ ಸಂಸ್ಥೆಯ ಪಾತ್ರವನ್ನು ಮೊಟಕುಗೊಳಿಸಿದರೆ ನಿಮಗೆ ಸಂತೋಷವಾಗುವಂತೆ ತೋರು ತ್ತದೆ. ಧ್ಯೇಯಧೋರಣೆಗಳನ್ನು ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ವಿವರವಾಗಿ ಚರ್ಚಿಸುವುದೂ ನಿಮಗೆ ಇಷ್ಟವಿದ್ದಂತಿಲ್ಲ, ಅದಕ್ಕೆ ಮುಂಚೆಯೇ, ಆ ವಿಷಯಗಳನ್ನು ಚರ್ಚಿಸುವ ಅಧಿಕಾರ ಮತ್ತು ಹೊಣೆಗಾರಿಕೆಗಳು ಸಂಸದೀಯ ಮಂಡಳಿಯ ಆಡಳಿತ ಸಮಿತಿಯ ವ್ಯಾಪ್ತಿಗೇ ಬರುತ್ತವೆಯೆಂಬಂತೆ ಚರ್ಚಿಸುತ್ತೀರಿ.

ನೀವು ಆಸಕ್ತರಾಗಿರುವ ವಿಷಯಗಳ ಮೇಲೆ ಪಕ್ಷದ ನಿಯಮಗಳೂ ನಿರ್ಣಯ ಗಳೂ ಪರಿಣಾಮ ಬೀರಬಹುದೇ ಎಂಬುದನ್ನಾಧರಿಸಿ ಪಕ್ಷದ ಸಂವಿಧಾನಾತ್ಮಕ ವಿಧಿಗಳನ್ನು ಜಾರಿಗೊಳಿಸುವ ಅಧಿಕಾರವನ್ನು ಪಕ್ಷದ ಅಧ್ಯಕ್ಷರಿಗೆ ನೀವೇ ದತ್ತಮಾಡುವಂತೆ ನಿಮ್ಮ ಈಚಿನ ಪತ್ರದ ಧೋರಣೆಯಿದೆ. ಚುನಾವಣೆಗಳಿಗಾಗಿ ಪಕ್ಷವು ಆಯುವ ಅಭ್ಯರ್ಥಿಗಳು ನಿಮಗೆ ಬೇಕಾದವರಾಗಿರಬೇಕು, ನಿಮಗೆ ಬೆಂಬಲ ನೀಡುವ ವ್ಯಕ್ತಿಗಳು ಮತ್ತು ಗುಂಪು ಗಳಿಗೆ ಅನುಕೂಲಕರವಾಗುವಂತಿದ್ದರೆ ಮಾತ್ರ ಪಕ್ಷದ ನಿಯಮಗಳು ಜಾರಿಗೊಳ್ಳಬೇಕು ಎಂಬುದೇ ನಿಮ್ಮ ಮನೋಭಾವವಿದ್ದಂತಿದೆ.

ಗುಂಪುಗಾರಿಕೆಗೆ ನೀವು ವಿರೋಧಿಗಳೆಂದು ಅನೇಕ ಬಾರಿ ಹೇಳಿಕೊಂಡಿದ್ದೀರಿ, ಒಂದು ಗುಂಪಿನಂತೆ ವರ್ತಿಸುವ ಸಿಂಡಿಕೇಟ್ ನಿಮ್ಮ ಹಾಗೂ ನಿಮ್ಮ 'ಪ್ರಗತಿಪರ' ಧೋರಣೆಗಳ ವಿರುದ್ಧ ಕಾರ್ಯ ನಡೆಸುತ್ತಿದೆ ಎಂದೂ ಹೇಳುತ್ತೀರಿ. ನಿಮ್ಮ ಅಭಿಪ್ರಾಯ ದಲ್ಲಿ, ಸಿಂಡಿಕೇಟಿನಲ್ಲಿರುವವರು ಯಾರು ಎಂಬುದು ನನಗೆ ಗೊತ್ತಿಲ್ಲ. ಆದರೆ ನನಗೆ ತಿಳಿದಿರುವುದಿಷ್ಟು: ಲಾಲ್ ಬಹಾದ್ದೂರ್ ಶಾಸ್ತ್ರಿಯವರ, ಆನಂತರ ೧೯೬೪ ಮತ್ತು ೧೯೬೬ರಲ್ಲಿ ನಿಮ್ಮ ಆಯ್ಕೆಗಾಗಿ, ಕೆಲಸ ಮಾಡಿದವರನ್ನು ಪತ್ರಿಕೆಗಳವರು ಸಿಂಡಿಕೇಟ್ ಎಂದು ಕರೆದರು, ಮೊರಾರ್ಜಿ ದೇಸಾಯಿಯವರಂತೂ ಖಂಡಿತ ಆ ಗುಂಪಿನಲ್ಲಿರಲಿಲ್ಲ, ಯಾಕಂದರೆ ಈ ಮೂರೂ ಸಂದರ್ಭಗಳಲ್ಲಿ ಶಾಸ್ತ್ರಿಯವರು ಮತ್ತು ನೀವು ಗೆಲ್ಲಲು ಅನುಕೂಲವಾಗುವಂತೆ, ಹಿಂದೆ ಸರಿಯಿರೆಂದು, ಇಲ್ಲದಿದ್ದರೆ ಸೋಲುತ್ತೀರೆಂದು, ಹೇಳಬೇಕಾಗಿ ಬಂದದ್ದು ಅವರಿಗೇ. ಆ ಸಮಯದಲ್ಲಿ ಆ ಗುಂಪು ಅಥವಾ ಸಿಂಡಿಕೇಟ್ ನಿಮಗೆ ಪ್ರತಿಗಾಮಿಯಾಗಿ ಕಂಡಿರಲಿಲ್ಲ. ಪಕ್ಷದಲ್ಲಿನ ಅವರ ಸ್ಥಾನವು ತಾವು ನಿಯಂತ್ರಿಸುವ ಪಕ್ಷದ 'ಬೋಗಸ್' ಪ್ರಾಥಮಿಕ ಸದಸ್ಯತ್ವದ ಮೇಲೆ ನಿಂತಿದೆ ಎಂದು ನಿಮಗೆ ಅನ್ನಿಸಲಿಲ್ಲ. ಉನ್ನತ ಹುದ್ದೆಗೆ ಆಯ್ಕೆ ಮಾಡುವ ಹಕ್ಕು ತಮ್ಮದೇ ಎಂದು ಗತ್ತಿನಿಂದ ಕೂಡಿರುವ ಹಿಡಿಯಷ್ಟು ಮಂದಿ ಅವರು ಎಂದು ನಿಮಗೆ ಅನ್ನಿಸಲಿಲ್ಲ, ಸಂಸದೀಯ ಪಕ್ಷದ ನಾಯಕರಾಗಿ ನೀವು ಆಯ್ಕೆಗೊಳ್ಳಲು ಅವರ ಪ್ರಯತ್ನಗಳೇ ಕಾರಣ ಎಂಬುದು ನಿಮಗೆ ಆಗ ಅರಿವಿತ್ತು.

ಪಕ್ಷದ ಅಧಿಕಾರದಲ್ಲಿ ಹಸ್ತಕ್ಷೇಪ ಮಾಡುತ್ತಿರುವ ಪ್ರತಿಗಾಮಿ ಗುಂಪು ಅದು ಎಂದು ಈಗ ಆರೋಪ ಮಾಡುತ್ತಿದ್ದೀರಿ. 'ಸಿಂಡಿಕೇಟ್'ನಲ್ಲಿರುವವರು ನಿಮ್ಮ 'ಪ್ರಗತಿಪರ' ಧೋರಣೆಗಳ ವಿರುದ್ಧವಾಗಿರುವವರೆಂದು, ನಿಮ್ಮನ್ನು ಕೀಳುಮಾಡುತ್ತಿರುವರೆಂದು, ಹಾಗೂ ಪ್ರಧಾನ ಮಂತ್ರಿ ಹುದ್ದೆಯನ್ನು ಕಡೆಗಣಿಸುತ್ತಿರುವರೆಂದು ಆಪಾದಿಸುತ್ತಿದ್ದೀರಿ.

ಬ್ಯಾಂಕ್ ರಾಷ್ಟ್ರೀಕರಣದ ಬಳಿಕ ನೀವು ಮಾಡಿದ ಅನೇಕ ಭಾಷಣಗಳಲ್ಲಿ, ನಿಮ್ಮ ಪ್ರಗತಿಪರ ನೀತಿಗಳಿಗೆ, ಅದರಲ್ಲೂ ಬ್ಯಾಂಕ್ ರಾಷ್ಟ್ರೀಕರಣಕ್ಕೆ, ಕೆಲವು ಮಂದಿ ಹಿರಿಯ ನಾಯಕರು ವಿರುದ್ಧವಾಗಿದ್ದರೆಂದೂ, ಅದಕ್ಕೆ ಕಾರಣ ಅವರು ಬಂಡವಾಳಶಾಹಿಗಳ ಪರವಾಗಿರುವುದು ಎಂದೂ ಹೇಳಿದಂತೆ ವರದಿಯಾಗಿದೆ. ನಿಮಗೆ ಬಡವರ ಪರಿಚಯ ವಿದೆಯೆಂದೂ ಸದಾ ಬಡವರ ಪರವಾಗಿರುವಿರೆಂದೂ ನೀವು ಹೇಳಿದಂತೆ ಪತ್ರಿಕೆಗಳು ನಿಮ್ಮ ಮಾತುಗಳನ್ನು ಉಲ್ಲೇಖಿಸಿವೆ. ಆದರೆ ಕಾಂಗ್ರೆಸ್‌ಗೆ ಬಡವರ ಪರಿಚಯವಿದೆ ಯೆಂದೂ ಸದಾ ಅದು ಬಡವರ ಪರವಾಗಿರುವುದೆಂದೂ ನೀವು ಹೇಳಿಲ್ಲ. ಕಾಂಗ್ರೆಸ್ ಬ್ಯಾಂಕ್ ರಾಷ್ಟ್ರೀಕರಣದ ಪರವಾಗಿರಲಿಲ್ಲವೆಂದೇನೂ ನೀವು ಹೇಳಲಾರಿರಿ: ಬೆಂಗಳೂರಿ

ನಲ್ಲಿ ನಡೆದ ಎಐಸಿಸಿಗೆ ನೀವು ಬ್ಯಾಂಕ್ ರಾಷ್ಟ್ರೀಕರಣವನ್ನು ಒತ್ತಾಯಿಸಿ ಕಳಿಸಿದ ಟಿಪ್ಪಣಿಗಿಂತ ಮುಂಚೆಯೇ ಹಲವು ಮಂದಿ ಕಾಂಗ್ರೆಸ್ ನಾಯಕರು, ಸಿಂಡಿಕೇಟ್‌ನ ಸದಸ್ಯರೆಂದು ವರ್ಣಿಸುವ ನಾಯಕರೂ ಸೇರಿದಂತೆ, ಅದರ ಪರವಾಗಿದ್ದರೆಂಬುದನ್ನು ನೀವು ಅಲ್ಲಗಳೆಯಲಾರಿರಿ. ವಾಸ್ತವದಲ್ಲಿ, ನಿಮ್ಮ ಟಿಪ್ಪಣಿ ಬರುವುದಕ್ಕೆ ಬಹು ಮುಂಚೆಯೇ ಬ್ಯಾಂಕ್ ರಾಷ್ಟ್ರೀಕರಣವನ್ನು ಒತ್ತಾಯಿಸಿದವರೆಂದರೆ ಕಾಮರಾಜ್, ಚವಾನ್, ಅತುಲ್ಯ ಘೋಷ್, ಮತ್ತಿತರರು. ಈ ಟಿಪ್ಪಣಿಯಲ್ಲಿಯೂ, ಸಾಮಾಜಿಕ ನಿಯಂತ್ರಣವು ಪರಿಣಾಮಕಾರಿಯಾಗದಿದ್ದರೆ ಮಾತ್ರ ಇನ್ನೊಂದು ಪರ್ಯಾಯವಾಗಿ ಬ್ಯಾಂಕ್ ರಾಷ್ಟ್ರೀಕರಣವನ್ನು ನೀವು ಸೂಚಿಸಿದ್ದಿರಿ. ಈ ವಿಷಯದ ಬಗ್ಗೆ ಸಚಿವ ಸಂಪುಟ ಮತ್ತು ಕಾರ್ಯಕಾರಿ ಸಮಿತಿ ಸಭೆಗಳಲ್ಲಿ ನೀವು ತೆಗೆದುಕೊಂಡ ನಿಲವಿನ ಬಗ್ಗೆ ಅಶೋಕ ಮೆಹ್ತಾ ಅವರು ಈಚೆಗೆ ಒಂದು ಹೇಳಿಕೆಯನ್ನು ನೀಡಿದ್ದರು. ಆದರೆ, ಈಗ ನೀವು ಬ್ಯಾಂಕ್ ರಾಷ್ಟ್ರೀಕರಣದ ಕಲ್ಪನೆಯು ನಿಮ್ಮ ಪ್ರತಿಭೆಯ ಹೊಳಹೆಂದು, ಇತರರು ಪ್ರತಿಗಾಮಿಗಳಾದ್ದರಿಂದ ಅದಕ್ಕೆ ವಿರುದ್ಧವಾಗಿರುವವರೆಂದು ಮತ್ತು ಅವರ ವಿರೋಧದ ಸಂಚುಗಳ ನಡುವೆಯೂ ಅದನ್ನು ಜಾರಿಗೊಳಿಸಿರುವಿರೆಂದು ನೀವು ಬಿಂಬಿಸುತ್ತಿದ್ದೀರಿ. ಆದರೆ ವಾಸ್ತವಾಂಶಗಳು ಇದಕ್ಕೆ ವಿರುದ್ಧವಾದವು. ನೀವು ಈ ಕ್ರಮ ತೆಗೆದುಕೊಂಡಾಗಿನ ಪರಿಸ್ಥಿತಿಗಳು ಎಂತಹವು ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ, ಅದನ್ನೇನೂ ಮತ್ತೆ ವಿವರಿಸಬೇಕಾಗಿಲ್ಲ ಅಥವಾ ಆ ಬಗ್ಗೆ ವ್ಯಾಖ್ಯಾನಿಸಬೇಕಾಗಿಲ್ಲ. ಆದರೆ ನೀವು ಕೊಡುತ್ತಿರುವ ಚಿತ್ರ ಮಾತ್ರ ನೀವೊಬ್ಬ 'ಪ್ರಗತಿಪರ ಶಕ್ತಿಗಳ ನಾಯಕಿ' ಎಂಬಂತೆಯೂ, ನಿಮ್ಮ ದಾರಿಯಲ್ಲಿ ಬರುವ ಎಲ್ಲರ ವಿರುದ್ಧ ಪ್ರಚಾರ ಹೆಚ್ಚಿಸುವ ತಂತ್ರದ್ದೂ ಆಗಿದೆ.

ನಿಮಗೆ ವೈಯಕ್ತಿಕ ನಿಷ್ಠೆಯನ್ನು ತೋರಿಸುವುದೇ ಕಾಂಗ್ರೆಸ್ ಹಾಗೂ ದೇಶದ ಬಗ್ಗೆ ತೋರುವ ನಿಷ್ಠೆ ಎಂಬುದು ನಿಮ್ಮ ಆಶಯವಿದ್ದಂತಿದೆ. ನಿಮ್ಮನ್ನು ವೈಭವೀಕರಿಸುವವರೆಲ್ಲರೂ ಪ್ರಗತಿಪರರು. ಪಕ್ಷ ಹಾಗೂ ಅದರ ಧ್ಯೇಯಗಳಿಗೆ ನಿಷ್ಠರಾಗಿರುವವರು ಹಾಗೂ ಧೋರಣೆ ಮತ್ತು ಅಭ್ಯರ್ಥಿಗಳ ಆಯ್ಕೆಯ ವಿಷಯದಲ್ಲಿ ನೀವು ಮಾತ್ರ ಏಕಮೇವ ನಿರ್ಧಾರಕಿಯಾಗಿರಬೇಕೇಂಬ ನಿಲವನ್ನು ಒಪ್ಪದಿರುವವರೂ, ಪ್ರಜಾಪ್ರಭುತ್ವದಲ್ಲಿ ಮುಕ್ತವೂ ಬಿಚ್ಚು ಮನಸ್ಸಿನದೂ ಆದ ಚರ್ಚೆಗಳ ಬಳಿಕ ಪಕ್ಷದ ಅಂಗಸಂಸ್ಥೆಗಳು ಈ ಕುರಿತ ನಿರ್ಧಾರಗಳನ್ನು ತೆಗೆದುಕೊಳ್ಳಬೇಕೇ ಹೊರತು ಅದಕ್ಕೆ ಒಬ್ಬರೇ ಕಾರಣರೆಂದು ಹೇಳಬಾರದೆಂದು ಭಾವಿಸುವವರೂ ಪ್ರತಿಗಾಮಿಗಳು ಮತ್ತು ನಿಷ್ಠಾರಹಿತರು ಎಂದು ಭಾವಿಸುವಂತಿದೆ. ಅಂಥವರನ್ನು ಪ್ರತಿಗಾಮಿಗಳೆಂದು ಬಿಂಬಿಸಲು ಆಕಾಶವಾಣಿಯಂಥ ಪ್ರಬಲ ಪ್ರಚಾರ ಮಾಧ್ಯಮ ಮತ್ತು ಸರ್ಕಾರಿ ನಿಯಂತ್ರಣದಡಿಯ ಪತ್ರಿಕೆಗಳನ್ನು ಬಳಸಿಕೊಳ್ಳಲಾಗುತ್ತಿದೆ. ಸರ್ಕಾರವು ನೇಮಿಸುವ ಅಧಿಕೃತ ಸ್ಥಾನಗಳಿಂದ (ನಿದರ್ಶನಕ್ಕೆ,

ನಿಯೋಗ) ಅಂಥವರನ್ನು ದೂರವಿರಿಸಲಾಗುತ್ತಿದೆ, ಮತ್ತು ಈಗಿರುವ ಸ್ಥಾನಗಳಿಂದ 'ಹೊಂದಿಕೆ' ಮತ್ತು 'ಉದ್ದೇಶ'ಗಳ ಕಾರಣದಿಂದ ತೆಗೆಯಲಾಗುತ್ತಿದೆ. ಸರ್ಕಾರವು ತೋರಿಸಬಹುದಾದ ಆಮಿಷ ಮತ್ತು ಅಪಾಯಗಳನ್ನು ಗುಂಪುರಚನೆ ಮತ್ತು ವೈಯಕ್ತಿಕ ನಿಷ್ಠೆಗಳನ್ನು ಭದ್ರಪಡಿಸಲು ಬಳಸಿಕೊಳ್ಳಲಾಗುತ್ತಿದೆ. ಇವೆಲ್ಲದರಿಂದ ಉಂಟಾಗುವ ಭಾವನೆಯೆಂದರೆ, ನಿಮ್ಮ ಮನಸ್ಸಿನಲ್ಲಿರುವ ಯೋಚನೆಯೆಂದರೆ, ನಿಮ್ಮ ವೈಯಕ್ತಿಕ ದೃಷ್ಟಿಕೋನಗಳನ್ನೂ ಬೇಕುಬೇಡಗಳನ್ನೂ ಸ್ವಲ್ಪಮಟ್ಟಿಗೆ ಕೂಡ ವಿರೋಧಿಸುವವರಿಗೆ ಪಕ್ಷ ಅಥವಾ ಸರ್ಕಾರದಲ್ಲಿ ಜಾಗವಿಲ್ಲ ಎಂಬುದು.

ಗುಂಪುಗಾರಿಕೆಗೆ ನಿಮ್ಮ ವಿರೋಧವಿದೆಯೆಂದು ಹೇಳಿಕೊಳ್ಳುತೀರಿ. ಆದರೆ ನೀವು ಈಚೆಗೆ ನನಗೆ ಬರೆದ ಪತ್ರದಲ್ಲಿ ಕೂಡ ಇರುವುದು ಕಾರ್ಯಕಾರಿ ಸಮಿತಿಯ ಆರೇ ಮಂದಿಯ ಸಹಿಗಳು ಮತ್ತು ಇವರೆಲ್ಲ, ಒಬ್ಬರನ್ನು ಹೊರತುಪಡಿಸಿದರೆ 'ಮುಕ್ತ ಮತದಾನ'ದ ಪರ ನಿಂತವರು. ನಿಮ್ಮ ಸಂಪುಟದ ಸಹೋದ್ಯೋಗಿಗಳು ದೇಶದೆಲ್ಲೆಡೆ ಸುತ್ತಾಡುತ್ತ ಹೇಳಿಕೆಗಳು ಮತ್ತು ಬೇಡಿಕೆಗಳಿಗೆ ಎಐಸಿಸಿ ಸದಸ್ಯರು ಹಾಗೂ ಸಂಸತ್ ಸದಸ್ಯರುಗಳ ಸಹಿಗಳನ್ನು ಸಂಗ್ರಹಿಸಲು ನಿರತರಾದವರು; ಪಕ್ಷದ ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಗಿಂತ ಹೆಚ್ಚಿನ ನಿಷ್ಠೆಯನ್ನು ನಿಮಗೆ ವೈಯಕ್ತಿಕವಾಗಿ ತೋರುವ, ನೀವು ಮತ್ತು ನಿಮ್ಮ ಬೆಂಬಲಿಗರು ಇಷ್ಟಪಡದ ಚನಾಯಿತ ಪದಾಧಿಕಾರಿಗಳನ್ನು ಬೀಳುಗಳೆಯುತ್ತ ಹಾಗೂ ನೀವು ಇಷ್ಟಪಡದ ರಾಜ್ಯಗಳ ಕಾಂಗ್ರೆಸ್ ಮುಖ್ಯಮಂತ್ರಿಗಳ ಸಂಪುಟಗಳ ಸ್ಥಿರತೆಯ ಬಗ್ಗೆ ಬೆದರಿಸುತ್ತ ಪ್ರಚಾರ ನಡೆಸುವ, ಅರ್ಹರಾದವರ ಗುಂಪನ್ನು 'ನಿಷ್ಠಾವಂತರ' ಗುಂಪು ಎಂದು ಪರಿಗಣಿಸಲು ಮತ್ತು ಇಂಥ ಬಿರುಗಾಳಿ ಎಬ್ಬಿಸುವ ಗುಂಪುಗಳಿಗೆ ನಿಮ್ಮ ಅಧಿಕಾರದ ಪೋಷಣೆಯ ಭರವಸೆಯನ್ನು ನೀಡುವ ಭಾವನೆ ಮೂಡುವಂತೆ ಪ್ರೋತ್ಸಾಹಿಸುತ್ತಿರುವವರು. ವಿಧ್ಯುಕ್ತವಾಗಿ ಚುನಾಯಿತವಾದ ರಾಜ್ಯವೊಂದರ ಪಿಸಿಸಿಯನ್ನೂ ಅದರ ಕಾರ್ಯಗಳನ್ನೂ ನಿಮಗೆ ಬೇಕಾದ ಗುಂಪಿನ ಸದಸ್ಯರ ಬೆಂಬಲದಿಂದ ನೀವು ಕಡೆಗಣಿಸಬಲ್ಲಿರಿ, ಸರ್ಕಾರವನ್ನು ನಡೆಸುತ್ತಿರುವ ವಿರೋಧ ಪಕ್ಷಗಳ ಕೆಲವು ಮಂದಿ ಸದಸ್ಯರ ಬೆಂಬಲವನ್ನು ಪಡೆದು, ಇದರಿಂದ ಆಯಾ ರಾಜ್ಯಗಳಲ್ಲಿನ ನಮ್ಮ ಪಕ್ಷದ ಐಕಮತ್ಯ ಮತ್ತು ನೈತಿಕತೆಗಳು ಹಾಳಾದರೂ ಅದನ್ನು ಪರಿಗಣಿಸದೆ, ನಿಮ್ಮ ವೈಯಕ್ತಿಕ ಸ್ಥಾನವನ್ನು ಭದ್ರಗೊಳಿಸಿಕೊಳ್ಳುವ ರೀತಿ ಕಾಣಬರುತ್ತಿದೆ. ರಾಷ್ಟ್ರಪತಿ ಚುನಾವಣೆಯಲ್ಲಿ ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿಯನ್ನು ಸೋಲಿಸಲು ಕಮ್ಯುನಿಸ್ಟ್ ಪಕ್ಷ, ಮುಸ್ಲಿಂ ಲೀಗ್ ಮತ್ತು ಡಿಎಂಕೆಗಳ ಬೆಂಬಲವನ್ನು ಸುಲಭವಾಗಿ ಪಡೆದ ರೀತಿಯು ಈ ಭಾವನೆಯನ್ನು ಬಲಪಡಿಸುತ್ತದೆ.

ಪಕ್ಷದ ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಗೆ ಮಾರಕವಾಗುವಂತೆ ವಿಭೂತಿ ಪೂಜೆಯ ಸ್ಪಷ್ಟ ಬೆಂಬಲಿಗರು ಏನು ಮಾಡಲೂ ಅವಕಾಶವಿದೆ, ಏನು ಮಾಡಿದರೂ ಕ್ಷಮೆಯಿದೆ ಎಂಬಂತೆ ತೋರುತ್ತಿದೆ. ಅವರು ಆದಾಯ ತೆರಿಗೆ ಕಾನೂನಿನಂತಹವುಗಳನ್ನು ಗಂಭೀರವಾದ ರೀತಿಯಲ್ಲಿ ಉಲ್ಲಂಘಿಸಿರಬಹುದು. ಪಕ್ಷದ ನಿಯಮಾವಳಿಗಳಿಗೆ ಅನುಗುಣ ವಾಗಿ ಅವರು ತಮ್ಮ ಆಸ್ತಿ ವಿವರಗಳನ್ನು ಎಐಸಿಸಿಗೆ ನೀಡದಿರಬಹುದು. ನಾನಾ ಆಕರ ಗಳಿಂದ ಅವರು ಪಕ್ಷದ ಹೆಸರಿನಲ್ಲಿ ದೊಡ್ಡ ಮೊತ್ತದ ಹಣವನ್ನು ಸಂಗ್ರಹಿಸಿದ್ದು, ಅದನ್ನು ಪಕ್ಷಕ್ಕೆ ತಿಳಿಸದೆಯೇ ಇರಬಹುದು ಅಥವಾ ಪಕ್ಷಕ್ಕೆ ಆ ಕುರಿತ ಲೆಕ್ಕ ಒಪ್ಪಿಸದೆಯೇ ಇರಬಹುದು.

ನನಗೆ ಅತ್ಯಂತ ಹೆಚ್ಚಿನ ನೋವುಂಟುಮಾಡುವ ಹಾಗೂ ಕಾಂಗ್ರೆಸ್ ಹಾಗೂ ದೇಶಗಳಿಗೆ ಆತಂಕವುಂಟುಮಾಡುವ ಅಂಶವೆಂದರೆ ಈ ಮನೋಭಾವ ಮತ್ತು ಕಾರ್ಯಗಳಿಂದ ಮೂಡುತ್ತಿರುವ ಮನೋವಿನ್ಯಾಸ. ಈ ಮನೋವಿನ್ಯಾಸವು ಪ್ರಜಾ ಸತ್ತಾತ್ಮಕ ಸಮಾಜವಾದದ ಬಲಿಷ್ಠತೆಯನ್ನು ಹೆಚ್ಚಿಸುವ ಬದಲು ಪಕ್ಷ ಹಾಗೂ ಸರ್ಕಾರಗಳೆರಡಕ್ಕೂ ಸಮಾನವಾದ ಏಕವ್ಯಕ್ತಿ ಪ್ರಭುತ್ವಕ್ಕೆ ನಾಂದಿಯಾದೀತೆಂಬುದು.

ಇದೆಲ್ಲವನ್ನೂ ನಿಮಗೆ ಬರೆಯುವುದೇನೂ ನನಗೆ ಸುಲಭದ ಕೆಲಸವಾಗಿರಲಿಲ್ಲ. ನಿಮ್ಮ ಮುಂದೆ ನನ್ನ ಮನಸ್ಸಿನಲ್ಲಿನ ಆಲೋಚನೆಗಳು ಹಾಗೂ ತಲ್ಲಣಗಳನ್ನು ಇರಿಸ ಬೇಕೆಂದು ತೀರ್ಮಾನಿಸಲು ನನಗೆ ಹಲವಾರು ಗಂಟೆಗಳ ಹಾಗೂ ದಿನಗಳ ಕಾತರಭರಿತ ಆಲೋಚನೆ ಆವಶ್ಯಕವಾಯಿತು. ಆದರೆ ಕಾಂಗ್ರೆಸ್‌ನ ಉನ್ನತ ಹುದ್ದೆಯಲ್ಲಿ ಕುಳಿತಿರುವ ನಾನು ಹೀಗೆ ಇದೆಲ್ಲವನ್ನೂ ಮಾಡುವುದು ನನ್ನ ಕರ್ತವ್ಯನ್ನಾಗಿಸಿದೆ. ಈ ಕರ್ತವ್ಯದಿಂದ ನಾನು ವಿಮುಖನಾಗಲಾರೆ. ಕಾಂಗ್ರೆಸ್‌ನ ಅಧ್ಯಕ್ಷನಾಗಿ ಕಾಂಗ್ರೆಸ್‌ನ ಐಕಮತ್ಯಕ್ಕೆ ಕುಂದು ತರುವ ಹಾಗೂ ಸಂಸ್ಥೆಯ ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಗೆ ಭಂಗವುಂಟುಮಾಡುವ ಮನೋಭಾವ ಹಾಗೂ ಕಾರ್ಯಗಳ ಬಗ್ಗೆ ನಿಗಾ ವಹಿಸುವುದು ನನ್ನ ಕರ್ತವ್ಯವಾಗಿದೆ. ಈ ಅಪಾಯಗಳ ಕಡೆಗೆ ಗಮನ ಸೆಳೆದು ಪಕ್ಷದ ಐಕಮತ್ಯ ಮತ್ತು ಅದು ಪ್ರಜಾಪ್ರಭುತ್ವದ ರಕ್ಷಣೆ ಮತ್ತು ಸಮಾಜವಾದದ ನಿರ್ಮಾಣದಲ್ಲಿ ಪರಿಣಾಮಕಾರಿ ಸಾಧನವಾಗುವುದಕ್ಕೆ ಅಪಾಯವೊಡ್ಡುವ ಇಂಥ ಮನೋಭಾವವನ್ನು ತೊರೆಯಿರೆಂದು ಪ್ರತಿಯೊಬ್ಬ ಕಾಂಗ್ರೆಸ್ಸಿ ಗನಿಗೂ ಮನವಿಮಾಡಿಕೊಳ್ಳುವುದು ನನ್ನ ಕರ್ತವ್ಯವಾಗಿದೆ. ಆ ಭಾವನೆಯಿಂದಷ್ಟೇ ನಾನು ಈ ಪತ್ರವನ್ನು ಬರೆದಿರುವುದು, ಅದೇ ಭಾವನೆಯಿಂದಲೇ ನೀವಿದನ್ನು ಓದುವಿರೆಂಬ ಭರವಸೆ ನನಗಿದೆ.

ಈಗ ಕೂಡ, ಈಗಾಗಲೇ ಮಾಡಿರುವ ಕುಚೇಷ್ಟೆಗಳನ್ನು ಸರಿಪಡಿಸಿ, ಐಕಮತ್ಯವನ್ನು ಸಾಧಿಸಿ ದೇಶದ ಹಿತದೃಷ್ಟಿಯಿಂದ ಕಾಂಗ್ರೆಸ್ ಅನ್ನು ಬಲಪಡಿಸಲು ಸಾಧ್ಯವಿದೆ ಎಂಬುದು ನನ್ನ ನಂಬಿಕೆ. ನಿಮ್ಮ ಉತ್ತರಕ್ಕಾಗಿ ಕಾಯುತ್ತಿದ್ದೇನೆ.

ಈ ಪತ್ರವನ್ನು ನಾನು ಪತ್ರಿಕೆಗಳಿಗೆ ಬಿಡುಗಡೆ ಮಾಡುತ್ತಿಲ್ಲ.

ವಿಶ್ವಾಸಗಳೊಂದಿಗೆ,

ನಿಮ್ಮ ನಂಬುಗೆಯ
(ಎಸ್. ನಿಜಲಿಂಗಪ್ಪ)

* * *

ಶ್ರೀಮತಿ ಇಂದಿರಾ ಗಾಂಧಿ,
ನಂ. ೧. ಸಫ್ದಾರ್‌ಜಂಗ್ ರಸ್ತೆ
ನವದೆಹಲಿ

(ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರಿಗೆ ನವೆಂಬರ್ ೨, ೧೯೬೯ ರಂದು ಬರೆದ ಪತ್ರ)

ನಿನ್ನೆಯ ದಿನ ನಡೆದ ಕಾರ್ಯಕಾರಿ ಸಮಿತಿಯ ಕೆಲವು ಸದಸ್ಯರ ಸಭೆಯೊಂದರ ಅಧ್ಯಕ್ಷತೆಯನ್ನು ನೀವು ವಹಿಸಿದ್ದಿರೆಂದು ಈ ದಿನದ ಪತ್ರಿಕೆಗಳಲ್ಲಿ ವರದಿಯಾಗಿದೆ. ಅಲ್ಲದೆ, ಈ ಸಭೆಯು ನಿಮ್ಮ ಮನೆಯಲ್ಲಿಯೇ ನಡೆದಿರುವುದಾಗಿಯೂ ವರದಿಗಳು ಹೇಳುತ್ತವೆ. ಅದೂ ಅಲ್ಲದೆ, ನೀವು ಅಧ್ಯಕ್ಷತೆ ವಹಿಸಿದ್ದ ಸಭೆಯು, ಮಿಕ್ಕ ವಿಷಯ ಗಳೊಡನೆ, "ಕಾರ್ಯಕಾರಿ ಸಮಿತಿಯ ಯಾವುದೇ ನಿರ್ಣಯವು ಅಸಿಂಧುವೆಂದೂ ಅದಕ್ಕೆ ಕಾಂಗ್ರೆಸ್ ಪಕ್ಷವು ಬದ್ಧವಾಗಿರಬೇಕಾಗಿಲ್ಲವೆಂದೂ ನಿರ್ಣಯಿಸಲಾಯಿತು" ಎಂದೂ ವರದಿಗಳು ಹೇಳುತ್ತವೆ. ಇವುಗಳ ಜೊತೆಗೆ, ಹೊಸ ಕಾಂಗ್ರೆಸ್ ಅಧ್ಯಕ್ಷರನ್ನು ಚುನಾಯಿಸಲು ನವದೆಹಲಿಯಲ್ಲಿ ನವೆಂಬರ್ ೨೨ ಮತ್ತು ೨೩ ರುಗಳಂದು ವಿಶೇಷ ಎಐಸಿಸಿ ಸಭೆಯೊಂದನ್ನು ನಡೆಸಲು ತೀರ್ಮಾನಿಸಲಾಯಿತೆಂದೂ ಆ ವರದಿಗಳಲ್ಲಿ ಉಲ್ಲೇಖವಾಗಿದೆ.

"ವರದಿಯಾಗಿರುವ ಈ ನಿರ್ಧಾರದ ಬಗ್ಗೆ ಕಾರ್ಯಕಾರಿ ಸಮಿತಿಯು ಕೈಗೊಂಡ ನಿರ್ಣಯದ ಪ್ರತಿಯೊಂದನ್ನು ಇದರೊಡನೆ ಇರಿಸಿದ್ದೇನೆ. ಕಾಂಗ್ರೆಸ್ ಸಂವಿಧಾನವು ಹೀಗೆ ಮಾಡಲು ಅಧಿಕಾರ ನೀಡಿರುವವರು ಮಾತ್ರವೇ ಎಐಸಿಸಿ ಸಭೆಗಳನ್ನು ಕರೆಯುವ ಅಧಿಕಾರ ಹೊಂದಿರುತ್ತಾರೆಯೇ ವಿನಾ ಈ ವಿಷಯದಲ್ಲಿ ಯಾವುದೇ ಅಧಿಕಾರ ಹೊಂದದ ವ್ಯಕ್ತಿಗಳಿಂದಲ್ಲ ಎಂಬ ವಿಷಯ ನಿಮಗೆ ಚೆನ್ನಾಗಿ ತಿಳಿದಿದೆ."

"ನೀವು ಅಧ್ಯಕ್ಷತೆ ವಹಿಸಿ, ಎಐಸಿಸಿ ಸಮಾವೇಶವನ್ನು ನಡೆಸಬೇಕೆಂದೂ, ಅಂಥ ಸಮಾವೇಶವನ್ನು ನಡೆಸಲು ಶ್ರೀ ಫಕ್ರುದ್ದೀನ್ ಅಲಿ ಅಹಮದ್, ಶ್ರೀ ಸಿ. ಸುಬ್ರಹ್ಮಣ್ಯಂ ಮತ್ತು ಶ್ರೀ ಎಸ್.ಡಿ. ಶರ್ಮ ಅವರಿಗೆ ಅಧಿಕಾರ ನೀಡಲು ತೀರ್ಮಾನಿಸಲಾಯಿತೆಂಬ ಬಗ್ಗೆ ಪತ್ರಿಕೆಗಳಲ್ಲಿ ಈಗ ಪ್ರಕಟವಾಗಿರುವ ವರದಿಗಳು ಸರಿಯೇ ಆಗಿದ್ದರೆ, ನೀವು ಪಕ್ಷದ ಶಿಸ್ತನ್ನು ಹಾಗೂ ಪಕ್ಷದ ಸಂವಿಧಾನವನ್ನು ಗಂಭೀರ ರೀತಿಯಲ್ಲಿ ಉಲ್ಲಂಘಿಸಿರುವಿರೆಂದು ಪರಿಗಣಿಸಬೇಕಾಗುತ್ತದೆ."

"ಆದ್ದರಿಂದ, ಕಾಂಗ್ರೆಸ್ ಪಕ್ಷದ ಸಂವಿಧಾನ ಹಾಗೂ ಕಾರ್ಯಕಾರಿ ಸಮಿತಿಯ ನಿರ್ಣಯಗಳನ್ನು ಮೀರಿ ಕಾನೂನುಬಾಹಿರವೂ ಸಂವಿಧಾನಬಾಹಿರವೂ ಆದ ಎಐಸಿಸಿ ಸಭೆಯನ್ನು ನಡೆಸುವ ಈ ಚಟುವಟಿಕೆಯೊಡನೆ ನೀವು ಹೊಂದಿರುವ ಸಂಬಂಧದ ಬಗ್ಗೆ ವಿವರಣೆ ನೀಡುವಂತೆ ಕೋರಲು ನಾನು ಈ ಪತ್ರವನ್ನು ಬರೆದಿದ್ದೇನೆ."

* * *

(ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರಿಗೆ ನವೆಂಬರ್ ೩, ೧೯೬೯ ರಂದು ಬರೆದ ಪತ್ರ)

ನನ್ನ ಪ್ರಿಯ ಇಂದಿರಾಜಿ,

೨೮ ನೇ ಅಕ್ಟೋಬರ್ ೧೯೬೯ ರಂದು ನಾನು ನಿಮಗೆ ಪತ್ರ ಬರೆದು, ಬೆಂಗಳೂರು ಎಐಸಿಸಿ ಅಧಿವೇಶನದ ಬಳಿಕ ನಿಮ್ಮ ಮನೋಭಾವ ಮತ್ತು ಕೃತಿಗಳ ಬಗ್ಗೆ ನನ್ನ ಭಯ ಹಾಗೂ ಆತಂಕಗಳನ್ನು ಕುರಿತು ವಿವರಿಸಿದ್ದೆ. ನಿಮ್ಮ ಕೃತಿಗಳು ಕಾಂಗ್ರೆಸ್ ಪಕ್ಷದ ಐಕಮತ್ಯಕ್ಕೆ ಹಾಗೂ ದೇಶದಲ್ಲಿ ನಾವು ನಿರ್ಮಿಸ ಬಯಸಿರುವ ಪ್ರಜಾಪ್ರಭುತ್ವದ ಪರಂಪರೆಯ ಮೇಲೆ ಮಾಡಬಹುದಾದ ಸರಿಪಡಿಸಲಾರದ ಧಕ್ಕೆಯ ಬಗ್ಗೆ ನಿಮ್ಮ ಗಮನ ಸೆಳೆಯಲು ನಾನು ಅದರಲ್ಲಿ ಪ್ರಯತ್ನಿಸಿದ್ದೆ. ನೀವು ಬಂದು ತಲುಪಿರುವ ಅಂಚಿನಿಂದ ಹಿಂದೆ ಸರಿದು ನಿಮ್ಮ ತಂತ್ರಗಾರಿಕೆ ಹಾಗೂ ಹಾನಿಕಾರಕ ಕೃತಿಗಳನ್ನು ತೊರೆಯಬೇಕೆಂದು ನಿಮ್ಮಲ್ಲಿ ವಿನಂತಿಸಿಕೊಂಡಿದ್ದೆ. ನಿಮ್ಮ ಆತ್ಮಸಾಕ್ಷಿಯ ದನಿಗೆ ನೀವು ಕಿವುಡಾಗಲಾರಿರೆಂಬ ಭರವಸೆ ನನ್ನಲ್ಲಿತ್ತು. ಕೋಟ್ಯಂತರ ಜನರು ತಮ್ಮ ಕಷ್ಟ ಮತ್ತು ತ್ಯಾಗಗಳ ಮೂಲಕ ನಿರ್ಮಿಸಿರುವ ಮತ್ತು ಎಲ್ಲ ಅಸಲಿ ಕಾಂಗ್ರೆಸ್ಸಿಗರಲ್ಲಿ ರೋಮಾಂಚನ ವುಂಟುಮಾಡುವ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಮಹಾ ಪರಂಪರೆಯನ್ನು ಬಲಿಗೊಡುವ ಕಾರ್ಯಗಳನ್ನು ನೀವು ಕೈಗೊಳ್ಳುವುದಿಲ್ಲ ಎಂದು ನಿರೀಕ್ಷಿಸಿದ್ದೆ.

ಆದರೆ ನೀವು ನನ್ನ ಮನವಿಯನ್ನು ಮಾನ್ಯಮಾಡುವ ಗೋಜಿಗೆ ಹೋಗದಿರುವುದು ವಿಷಾದಕರ. ಆ ಬಗ್ಗೆ ಉತ್ತರಿಸಲಾಗಲೀ ನನ್ನೊಡನೆ ಚರ್ಚಿಸಲಾಗಲೀ ನಿಮಗೆ ವೇಳೆ

ದೊರೆಯಲಿಲ್ಲ; ಆದರೆ ನೀವು ವಿಧ್ಯುಕ್ತವಾಗಿ ರಚಿತವಾದ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯ ಸಭೆಯನ್ನು ಬಹಿಷ್ಕರಿಸುವ ಹಾಗೂ ಕಾರ್ಯಕಾರಿ ಸಮಿತಿ ಸಭೆ ನಡೆಯಬೇಕಾದ ಅದೇ ದಿನ ಅದೇ ವೇಳೆಗೆ ನೀವು ನಿಮ್ಮ ಮನೆಯಲ್ಲಿ ಕೆಲವು ಮಂದು ಕಾರ್ಯಕಾರಿ ಸಮಿತಿ ಸದಸ್ಯರ ಸಭೆಯನ್ನು ಕರೆಯುವ ಅಪೂರ್ವ ತೀರ್ಮಾನವನ್ನು ತೆಗೆದುಕೊಂಡಿದ್ದೀರಿ. ನಿಮ್ಮ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿನ ಸದಸ್ಯರು ನನ್ನ ಕೆಲವು ಕಾರ್ಯಗಳು ಸಂವಿಧಾನಬಾಹಿರವೆಂದೂ, ನನ್ನನ್ನು ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಪದವಿಯಿಂದ ತೆಗೆದುಹಾಕಲು ದೆಹಲಿಯಲ್ಲಿ ೧೯೬೯ರ ನವೆಂಬರ್ ೨೨ ಮತ್ತು ೨೩ ರಂದು ಒಂದು ವಿಶೇಷ ಎಐಸಿಸಿ ಅಧಿವೇಶನವನ್ನು ಕರೆಯಬೇಕೆಂದೂ ನಿರ್ಣಯ ಮಾಡಿದಂತೆ ಪತ್ರಿಕೆಗಳ ವರದಿಗಳು ತಿಳಿಸುತ್ತವೆ. ಇದೊಂದು ಅಕ್ಷಮ್ಯವಾದ ಶಿಸ್ತು ಉಲ್ಲಂಘನೆಯಾಗಿದೆ, ಕಾಂಗ್ರೆಸ್ ಸಂವಿಧಾನಕ್ಕೆ ತೀವ್ರ ವಿರುದ್ಧವಾಗಿದೆ ಹಾಗೂ ಪಕ್ಷದ ಐಕಮತ್ಯವನ್ನು ಹಾಳುಮಾಡುವ ಹುನ್ನಾರವಾಗಿದೆ. ವಿವೇಕ, ಶಿಸ್ತು ಮತ್ತು ಪ್ರಜಾಸತ್ತಾತ್ಮಕ ಹಾದಿಗೆ ಮರಳಿರೆಂದು ಮಾಡಿಕೊಂಡ ನನ್ನ ಮನವಿಗೆ ಇದು ನೀವು ನೀಡಿದ ಉತ್ತರವೆಂದು ಭಾವಿಸಬೇಕೇ? ನೀವು ತೆಗೆದುಕೊಂಡ ಕಾರ್ಯವು ಅತಿದೂರದ ಪರಿಣಾಮಗಳಿಗೆ ಕಾರಣವಾಗಬಹುದೆಂಬ ಭಯ ನನ್ನದು. ಹೀಗಾಗಿ, ಇದರಿಂದಾಗುವ ಅಪಾಯ, ನಮ್ಮ ಮಹಾ ಪಕ್ಷದ ಐಕಮತ್ಯ, ಆದರ್ಶಗಳು ಮತ್ತು ಧೋರಣೆಗಳಿಗೆ ಅಪಾಯ ತಂದೊಡ್ಡುತ್ತಿರುವವರು ಯಾರು ಎಂಬ ವಿಷಯವನ್ನು ಕಾಂಗ್ರೆಸ್ಸಿಗರಿಗೆ ತಿಳಿಸ ಬೇಕಾದುದು ನನ್ನ ಕರ್ತವ್ಯವಾಗಿದೆ. ನಾವು ಸೇವೆ ಮಾಡಬಯಸುವ ಸಾರ್ವಜನಿಕರಿಗೆ ನಾವೆಲ್ಲ ಉತ್ತರದಾಯಿಗಳು, ಹೀಗಾಗಿ ನಮ್ಮ ಅಭಿಪ್ರಾಯಗಳನ್ನು ಸಾರ್ವಜನಿಕರ ಮುಂದಿಡುವ ಸಮಯ ಈಗ ಬಂದಿದೆಯೆಂದು ಭಾವಿಸುತ್ತೇನೆ. ಹೀಗಾಗಿ ಅಕ್ಟೋಬರ್ ೨೮, ೧೯೬೯ರ ನನ್ನ ಪತ್ರವನ್ನು ನಾನು ಪತ್ರಿಕೆಗಳಿಗೆ ಬಿಡುಗಡೆ ಮಾಡುತ್ತಿದ್ದೇನೆ.

ನಿಮ್ಮ ವಿಶ್ವಾಸದ,
(ಸಹಿ) ಎಸ್. ನಿಜಲಿಂಗಪ್ಪ

* * *

(ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರಿಗೆ ನವೆಂಬರ್ ೩, ೧೯೬೯ ರಂದು ಬರೆದ ಪತ್ರ)

ಪ್ರಿಯ ಶ್ರೀ ನಿಜಲಿಂಗಪ್ಪ,

ನೀವು ನವೆಂಬರ್ ೩, ೧೯೬೯ ರಂದು ಬರೆದ ಪತ್ರ ಈಗ ತಾನೇ ನನ್ನ ಕೈಸೇರಿತು. ನನಗೆ ಬರೆದ ಅಕ್ಟೋಬರ್ ೨೮, ೧೯೬೯ರ ಪತ್ರವನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡುವ ವಿಷಯ ಅದರಲ್ಲಿ ನೀವು ತಿಳಿಸಿದ್ದೀರಿ.

ನಿಮ್ಮ ಅಕ್ಟೋಬರ್ ೨೮, ೧೯೬೯ರ ನನ್ನ ಪತ್ರವು ನನಗೆ ಅಕ್ಟೋಬರ್ ೨೯, ೧೯೬೯ ರಂದೇ ತಲುಪಿತು. ಆದರೆ ನೀವು ಆಪತ್ರದಲ್ಲಿ ಎತ್ತಿರುವ ನಾನಾ ಅಂಶಗಳ ಕಾರಣದಿಂದಾಗಿ, ಆ ಎಲ್ಲವುಗಳಿಗೂ ನಾನು ವಿವರವಾದ ಉತ್ತರವನ್ನು ನೀಡಬೇಕಾದುದು ಆವಶ್ಯಕವೆಂದು ನನಗೆ ಅನ್ನಿಸಿತು. ಇದನ್ನು ಸಿದ್ಧಪಡಿಸುತ್ತಿರುವಾಗಲೇ, ನೀವು ಶ್ರೀ ಫಕ್ರುದ್ದೀನ್ ಆಲಿ ಅಹಮದ್ ಅವರನ್ನು ಕಾರ್ಯಕಾರಿ ಸಮಿತಿಯ ಸದಸ್ಯತ್ವದಿಂದ ವಜಾಮಾಡಿರುವಿರೆಂದು ತಿಳಿಸುವ ಪತ್ರವನ್ನು ಅವರಿಗೆ ಬರೆದಿರುವ ವಿಷಯ ಇದ್ದಕ್ಕಿದ್ದಂತೆ ಅಕ್ಟೋಬರ್ ೩೧ ರಂದು ನನಗೆ ತಿಳಿದು ಬಂತು. ಅದೇ ವೇಳೆಗೆ ನೀವು ಶ್ರೀ ಸಿ. ಸುಬ್ರಹ್ಮಣ್ಯಂ ಅವರಿಗೂ ಪತ್ರ ಬರೆದು ಕಾರ್ಯಕಾರಿ ಸಮಿತಿಯ ಅವರ ಸದಸ್ಯತ್ವವು ಕೊನೆಗೊಂಡಿದೆಯೆಂದು ತಿಳಿಸಿರುವುದಾಗಿಯೂ ಗೊತ್ತಾಯಿತು.

ಈ ಹಂತದಲ್ಲಿ, ನಾನು ಹೇಳಬಹುದಾದುದೆಂದರೆ, ನಿಮ್ಮ ಅಕ್ಟೋಬರ್ ೨೮, ೧೯೬೯ರ ಪತ್ರದಲ್ಲಿ "ಪಕ್ಷದ ಐಕಮತ್ಯ ಮತ್ತು ಅದು ಪ್ರಜಾಪ್ರಭುತ್ವದ ರಕ್ಷಣೆ ಮತ್ತು ಸಮಾಜವಾದದ ನಿರ್ಮಾಣದಲ್ಲಿ ಪರಿಣಾಮಕಾರಿ ಸಾಧನವಾಗುವುದಕ್ಕೆ ಅಪಾಯವೊಡ್ಡುವ ಇಂಥ ಮನೋಭಾವವನ್ನು ತೊರೆಯಿರೆಂದು" ಕಾಂಗ್ರೆಸ್ಸಿಗರಿಗೆ ಮಾಡಿಕೊಂಡಿರುವ ಮನವಿಯನ್ನು ಜಾರಿಗೊಳಿಸುವ ವಿಚಿತ್ರ ರೀತಿಯಾಗಿದೆ ಎಂಬುದಷ್ಟನ್ನು ಮಾತ್ರ.

ಶ್ರೀ ಫಕ್ರುದ್ದೀನ್ ಆಲಿ ಅಹಮದ್ ಮತ್ತು ಶ್ರೀ ಸಿ. ಸುಬ್ರಹ್ಮಣ್ಯಂ ಅವರ ವಿರುದ್ಧ ನೀವು ಕೈಗೊಂಡಿರುವ ಕ್ರಮದ ನ್ಯಾಯಬಾಹಿರತೆಯ ಬಗ್ಗೆ ಮೊದಲು ಹೇಳುವುದು ನನ್ನ ಕರ್ತವ್ಯವಾಗಿದೆ. ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯು ೨೦ ಸದಸ್ಯರುಗಳಿಂದ ಕೂಡಿದ್ದು, ಅವರಲ್ಲಿ ಏಳು ಮಂದಿ ಎಐಸಿಸಿಯಿಂದ ಚುನಾಯಿತರಾದವರು ಮತ್ತು ಉಳಿದವರು ಅಧ್ಯಕ್ಷರಿಂದ ನೇಮಕಗೊಂಡವರು ಎಂಬುದು ನಿಮಗೆ ತಿಳಿದೇ ಇದೆ. ಸಂವಿಧಾನ ೫ ನೇ ವಿಧಿಯ ಪ್ರಕಾರ, ಕಾಂಗ್ರೆಸ್ ಸಮಿತಿಯ ಪ್ರತಿ ಸದಸ್ಯರ ಅವಧಿಯು ಸಾಮಾನ್ಯವಾಗಿ ಎರಡು ವರ್ಷಗಳಾಗಿರತಕ್ಕದ್ದು. ಈ ಎರಡೂ ವಿಧಿಗಳಿಗೆ ಅನುಗುಣವಾಗಿ, ಒಬ್ಬರು ಕಾರ್ಯಕಾರಿ ಸಮಿತಿಯ ಸದಸ್ಯರಾದ ಮೇಲೆ, ಅದು ಅಧ್ಯಕ್ಷರಿಂದ ನೇಮಕಗೊಂಡುದಾಗಿರಲಿ ಅಥವಾ ಎಐಸಿಸಿ ಮೂಲಕ ನಡೆದ ಆಯ್ಕೆ ಯಾಗಿರಲಿ, ಅವರ ಅವಧಿಯು ಸಾಮಾನ್ಯವಾಗಿ ಎರಡು ವರ್ಷಗಳಾಗಿರುತ್ತವೆ.

ಆದರೆ, ಕಾರ್ಯಕಾರಿ ಸಮಿತಿಯ ಸದಸ್ಯರೊಬ್ಬರನ್ನು ತೆಗೆದುಹಾಕುವ ಯಾವುದೇ ಅಧಿಕಾರವನ್ನು ಸಾಮಾನ್ಯವಾಗಿ ಸಂವಿಧಾನವು ನೀಡಿರುವುದಿಲ್ಲ.

ಕಾರ್ಯಕಾರಿ ಸಮಿತಿಯ ಸದಸ್ಯರೊಬ್ಬರನ್ನು ಅಧ್ಯಕ್ಷರು ನೇಮಕ ಮಾಡಿರುವುದರಿಂದಾಗಿ, ಆ ವ್ಯಕ್ತಿಯಲ್ಲಿ ವಿಶ್ವಾಸವಿಲ್ಲವಾದರೆ ಅಂಥವರನ್ನು ಅಧ್ಯಕ್ಷರು ತೆಗೆದು

ಹಾಕುವ ಅಧಿಕಾರ ಹೊಂದಿರುತ್ತಾರೆ ಎಂಬ ನಿಮ್ಮ ಪತ್ರದಲ್ಲಿನ ವಾದವು ಸಂವಿಧಾನ ಅಥವಾ ನಿಯಲಗಳಿಗೆ ಅನುಗುಣವಾದುದಲ್ಲ. ಅಲ್ಲದೆ, ನಿಯಮಗಳಲ್ಲಿ ನಿಖರಪಡಿಸಿರುವಂತೆ ಅಧ್ಯಕ್ಷರು ಪದಾಧಿಕಾರಿಗಳನ್ನು ತೆಗೆದುಹಾಕುವ ಅಧಿಕಾರ ಹೊಂದಿರುತ್ತಾರೆ ಎಂಬುದರ ಕಡೆಗೆ ಗಮನ ಸೆಳೆಯುವುದು ಸೂಕ್ತವಾಗುತ್ತದೆ.

ಸೂಕ್ತವಾದ ವಿಧಿಯಡಿ, ಕಾಂಗ್ರೆಸ್‌ನ ಯಾವುದೇ ಸಮಿತಿಯ ಅಧ್ಯಕ್ಷರು ತಾವು ನೇಮಿಸಿದ ಯಾವುದೇ ಪದಾಧಿಕಾರಿಯನ್ನು, ಅಧ್ಯಕ್ಷರಿಗೆ ತೃಪ್ತಿಯುಂಟುಮಾಡುವ ರೀತಿಯಲ್ಲಿ ಕಾರ್ಯವನ್ನು ಅವರು ನಿರ್ವಹಿಸುತ್ತಿಲ್ಲವೆಂಬ ಕಾರಣದ ಮೇಲೆ, ತೆಗೆದುಹಾಕಬಹುದು. ಈ ಅಧಿಕಾರವು, ಸಮಿತಿಗೆ ನೇಮಕಗೊಂಡ ಅಥವಾ ನಾಮಕರಣಗೊಂಡ ಯಾವುದೇ ಸದಸ್ಯರನ್ನು ತೆಗೆದುಹಾಕುವ ಮಟ್ಟಿಗೆ ವ್ಯಾಪಕವಾಗಿರದೆ, ತಮ್ಮಿಂದ ನೇಮಕಗೊಂಡವರಿಗೆ ಮಾತ್ರ ಅನ್ವಯಿಸುತ್ತದೆ.

ಅಂಥ ಪದಾಧಿಕಾರಿಯನ್ನು ತೆಗೆದು ಹಾಕಲೇಬೇಕಾದ ಸಂದರ್ಭ ಬಂದರೂ, ಅಂತಹವರ ವಿರುದ್ಧ ಯಾವುದೇ ಕ್ರಮವನ್ನು ಜರುಗಿಸುವ ಮುಂಚೆ, ತಮ್ಮ ನಿಲವನ್ನು ವಿವರಿಸುವ ಸೂಕ್ತ ಅವಕಾಶವನ್ನು ಅವರಿಗೆ ನೀಡಬೇಕಾದುದು ಆವಶ್ಯಕ ಎಂಬ ಅಂಶವನ್ನೂ ಗಮನಿಸಬೇಕಾಗುತ್ತದೆ.

ಕಾಂಗ್ರೆಸ್ ಸಂವಿಧಾನದ ಈ ಎಲ್ಲ ವಿವರಗಳನ್ನೂ ನೀವು ಉಲ್ಲಂಘಿಸಿದ್ದೀರಿ. ನಿಮ್ಮ ಕಾನೂನುಬಾಹಿರ ಕಾರ್ಯದ ಬಗೆಗಿನ ಈ ಅಭ್ಯಂತರಗಳಲ್ಲದೆ, ಐಕಮತ್ಯದ ಬಗ್ಗೆ ಮಾತನಾಡುತ್ತಲೇ ನೀವು ಪಕ್ಷದ ಐಕಮತ್ಯವನ್ನು ಅವಗಣಿಸುವ ಕಾರ್ಯವನ್ನು ಕೈಗೊಳ್ಳುವುದು ಅಚ್ಚರಿಯನ್ನುಂಟುಮಾಡುತ್ತದೆ.

ಇವತ್ತು ಬಹಳ ಪ್ರಚಾರದಲ್ಲಿರುವ ಮತ್ತೊಂದು ತರ್ಕದ ಬಗ್ಗೆಯೂ ನಾನಿಲ್ಲಿ ಪ್ರಸ್ತಾಪಿಸಬೇಕಾಗಿದೆ. ಪ್ರಧಾನ ಮಂತ್ರಿಯು ತನ್ನ ಸಂಪುಟದಲ್ಲಿ ತನಗೆ ಸರಿ ಕಾಣದ ಯಾವ ಸದಸ್ಯರನ್ನಾಗಲೀ ತೆಗೆದುಹಾಕುವ ನಿಸ್ಸಂದಿಗ್ಧ ಅಧಿಕಾರವಿರುವಂತೆಯೇ, ಕಾಂಗ್ರೆಸ್ ಅಧ್ಯಕ್ಷರಿಗೂ ಕಾರ್ಯಕಾರಿ ಸಮಿತಿಗೆ ತಾನು ನಾಮಕರಣ ಮಾಡಿದ ಯಾವುದೇ ಸದಸ್ಯರನ್ನು ವಜಾಗೊಳಿಸುವ ಅಧಿಕಾರವಿದೆ ಎಂದು ಹೇಳಲಾಗುತ್ತಿದೆ.

ಪ್ರಧಾನ ಮಂತ್ರಿಯ ಅಧಿಕಾರವು ಭಾರತದ ಸಂವಿಧಾನದತ್ತವಾದುದು, ಆದರೆ ಕಾಂಗ್ರೆಸ್ ಅಧ್ಯಕ್ಷರ ಅಧಿಕಾರವು ಕಾಂಗ್ರೆಸ್‌ನ ಸಂವಿಧಾನದತ್ತವಾದುದು, ಆದರೆ ಈ ಎರಡೂ ಸಂವಿಧಾನಗಳು ರಚಿತವಾಗಿರುವುದು ಸ್ಪಷ್ಟವಾಗಿ ಭಿನ್ನ ಉದ್ದೇಶಗಳಿಂದ – ಒಂದು ಕಾರ್ಯಾಂಗದ ಸುಮುಖ ಕಾರ್ಯನಿರ್ವಹಣೆಗಾಗಿ, ಮತ್ತು ಮತ್ತೊಂದು

ರಾಜಕೀಯ ಪಕ್ಷದ ನಾಯಕತ್ವದ ಸುಬದ್ಧ ಕಾರ್ಯನಿರ್ವಹಣೆಗಾಗಿ. ಇವೆರಡನ್ನೂ ಹೋಲಿಸುವುದೇ ಅಸಂಬದ್ಧವಾದುದು.

ಶ್ರೀ ಫಕ್ರುದ್ದೀನ್ ಆಲಿ ಅಹಮದ್ ಮತ್ತು ಶ್ರೀ ಸಿ. ಸುಬ್ರಹ್ಮಣ್ಯಂ ಅವರ ವಿರುದ್ಧ ಕ್ರಮ ಕೈಗೊಂಡ ಮೇಲೆ, ಮತ್ತೊಮ್ಮೆ ನೀವು, ನಿಯಮಬಾಹಿರವಾಗಿ ಮತ್ತು ಕಾಂಗ್ರೆಸ್ ಸಂವಿಧಾನವನ್ನು ಉಲ್ಲಂಘಿಸಿ, ಡಾ. ಶಂಕರ ದಯಾಳ್ ಶರ್ಮ ಅವರನ್ನು ಕಾರ್ಯಕಾರಿ ಸಮಿತಿಯ ಸದಸ್ಯತ್ವದಿಂದ ತೆಗೆದುಹಾಕಿದ್ದೀರಿ. ನೀವು ಹಾಗೆ ಮಾಡುವಂತೆ ಅವರನ್ನು ಕೇಳಿಕೊಂಡದ್ದರಿಂದಾಗಿ, ತಮ್ಮ ಕಾರ್ಯದರ್ಶಿ ಸ್ಥಾನಕ್ಕೆ ಅವರು ತಾವಾಗಿಯೇ ರಾಜೀನಾಮೆ ನೀಡಿದ್ದರು.

ಆದರೆ ಅವರನ್ನು ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಿದುದು ಕಾರ್ಯದರ್ಶಿ ಸ್ಥಾನವನ್ನು ಒಪ್ಪಿಕೊಳ್ಳುವುದಕ್ಕಿಂತಲೂ ಹಲವಾರು ತಿಂಗಳುಗಳ ಹಿಂದೆ, ಹೀಗಾಗಿ ಅವರು ಸಮಿತಿಯ ಸದಸ್ಯರಾಗಿರುವುದಕ್ಕೂ ಪದಾಧಿಕಾರಿಯಾಗುವುದಕ್ಕೂ ಯಾವುದೇ ಸಂಬಂಧವಿಲ್ಲ. ನಿಮ್ಮ ಕೋರಿಕೆಯ ಮೇರೆಗೆ ಪದಾಧಿಕಾರಿಯಾಗಿ ತಮ್ಮ ಸ್ಥಾನವನ್ನು ತೆರವುಗೊಳಿಸಿದಾಗ, ಸಮಿತಿಯ ಸದಸ್ಯತ್ವದಿಂದಲೂ ಅವರನ್ನು ತೆಗದುಹಾಕುವ ನಿಮ್ಮ ಕ್ರಮವು ಅಸಾಧಾರಣವಾದುದೇ ಸರಿ.

ಈ ಎಲ್ಲ ಕ್ರಮಗಳೂ, ನಿಮ್ಮ ಉದ್ದೇಶದ ಪೂರೈಕೆಗಾಗಿ ನೀವು ಕಾಂಗ್ರೆಸ್ ಸಂವಿಧಾನದ ಎಲ್ಲ ವಿವರಗಳನ್ನೂ ಉಲ್ಲಂಘಿಸಲು ಹಾಗೂ ಪಕ್ಷದ ಅತ್ಯುನ್ನತ ಧೋರಣೆ ರೂಪಣೆಯ ಅಂಗಸಂಸ್ಥೆಯ ಸದಸ್ಯತ್ವದಿಂದ ಬೇಕಾಬಿಟ್ಟಿ ತೆಗೆದುಹಾಕಲು ಸಿದ್ಧರಾಗಿದ್ದೀರಿ ಎಂಬುದನ್ನು ತೋರಿಸುತ್ತವೆ.

ಈ ನಿಮ್ಮ ಕ್ರಮಗಳಿಂದಾಗಿಯೇ, ನಿಮ್ಮ ಪತ್ರಕ್ಕೆ ಉತ್ತರ ಬರೆಯುವುದರಿಂದ ಯಾವ ಪ್ರಯೋಜನವೂ ಆಗದು ಎಂಬ ಭಾವನೆ ನನಗೆ ಬಂದಿತು. ಆದರೆ, ನೀವು ನಿಮ್ಮ ಪತ್ರವನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿರುವುದರಿಂದ, ನೀವು ಅದರಲ್ಲಿ ಪ್ರಸ್ತಾಪಿಸಿರುವ ಹೆಚ್ಚು ಮುಖ್ಯವೆನಿಸುವ ಅಂಶಗಳಿಗೆ ಉತ್ತರಿಸುವುದು ಆವಶ್ಯಕ ಎಂದು ನನಗನ್ನಿಸಿತು.

ರಾಷ್ಟ್ರಪತಿ ಚುನಾವಣೆಯ ಸಂದರ್ಭದಿಂದಾಗಿ ಉದ್ಭವಿಸಿದ ಎಲ್ಲ ವಿಷಯಗಳನ್ನೂ ಹಾಗೂ ಆಗಸ್ಟ್ ೨೫ ರಂದು ತೆಗೆದುಕೊಂಡ ಐಕಮತ್ಯ ನಿರ್ಣಯ ಎಂದು ಈಗ ಕರೆಯಲಾಗುವ ಬಗ್ಗೆಯೂ ಕಾರ್ಯಕಾರಿ ಸಮಿತಿಯು ಸವಿವರವಾಗಿಯೂ ಎಲ್ಲ ಮಗ್ಗುಲುಗಳಿಂದಲೂ ಈಗಾಗಲೇ ಚರ್ಚಿಸಿಯಾಗಿದೆ; ಹೀಗಾಗಿ ಅವೆಲ್ಲವನ್ನೂ ಮತ್ತೆ

ಬಡಿದೆಬ್ಬಿಸುವುದು ಸಮಂಜಸವಾಗಲಾರದು. ಇಷ್ಟಾದರೂ, ನೀವು ಮಾಡಿರುವ ಅನೇಕ ಅಸಮಂಜಸ ಹೇಳಿಕೆಗಳ ಬಗ್ಗೆ ಸಂಕ್ಷೇಪವಾಗಿ ಪ್ರಸ್ತಾಪಿಸುತ್ತೇನೆ.

ನಿಮ್ಮ ಪತ್ರದ ನಾಲ್ಕನೆಯ ಪ್ಯಾರಾದಲ್ಲಿನ ಹೇಳಿಕೆಯು ಸತ್ಯವಲ್ಲ. ರಾಷ್ಟ್ರಪತಿ ಅಭ್ಯರ್ಥಿಯ ಆಯ್ಕೆಯ ಬಗೆಗಿನ ನಿರ್ಧಾರವನ್ನು ಮುಂದೂಡಲು ನಾನು ಬಯಸಲಿಲ್ಲ, ಅಲ್ಲದೆ ನನಗೆ ನನ್ನದೇ ಆದ ಅಭ್ಯರ್ಥಿಯೂ ಇರಲಿಲ್ಲ. ನಾನು ಮತ್ತೆ ಮತ್ತೆ ಸಲಹೆಗಳನ್ನು ಪಡೆಯುತ್ತಲೂ ಅನೇಕರ ಹೆಸರುಗಳನ್ನು ಪ್ರಸ್ತಾಪಿಸುತ್ತಲೂ ಇದ್ದುದು ಒಂದು ಒಮ್ಮತದ ನಿರ್ಧಾರವನ್ನು ತೆಗೆದುಕೊಳ್ಳಲು ಅನುಕೂಲವಾಗಲೆಂದು ಮಾತ್ರ. ಆ ಬಗ್ಗೆ ಯಾವುದೇ ಚರ್ಚೆಯಿಲ್ಲದೆ ಸಂಸದೀಯ ಮಂಡಳಿಯು ಕ್ಷಿಪ್ರ ನಿರ್ಧಾರ ತೆಗೆದುಳ್ಳುವಂತೆ ಒತ್ತಾಯಿಸಿ ದುದು ದುರದೃಷ್ಟಕರವೇ ಸರಿ. ಹೊಣೆಗಾರಿಕೆಯುಳ್ಳ ಪಕ್ಷವೊಂದರಲ್ಲಿ ಪ್ರಬುದ್ಧ ಕಾರ್ಯ ನಿರ್ವಹಣೆಯಿರಬೇಕು; ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವ ಕ್ರಮ ಇದಲ್ಲ.

ನಿಮ್ಮ ಪತ್ರದ ಆರನೆಯ ಪ್ಯಾರಾದಲ್ಲಿ, ಮುಕ್ತ ಮತದಾನಕ್ಕಾಗಿ ಮನವಿ ಮಾಡಿ ಕೊಂಡವರೆಲ್ಲರೂ ಕಮ್ಯುನಿಸ್ಟ್ ಪಕ್ಷ ಮತ್ತು ಮುಸ್ಲಿಂ ಲೀಗ್‌ಗಳ ಜೊತೆ ಸಹಕರಿಸಿದ ರೆಂದೂ ಶ್ರೀ ಗಿರಿಯವರನ್ನು ಅಭ್ಯರ್ಥಿಯಾಗಿ ಆರಿಸಿದವರು ಅವರೇ ಎಂದೂ ಆರೋ ಪಿಸಿದ್ದೀರಿ. ಶ್ರೀ ಗಿರಿಯವರು ಒಬ್ಬ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು, ಅಲ್ಲದೆ ಅವರು ಅನೇಕ ಪಕ್ಷಗಳ ಬೆಂಬಲವನ್ನು ಪಡೆಯಲು ಸಾಧ್ಯವಾದರೆ, ಅದಕ್ಕೆ ನಾನು ಮತ್ತು ನನ್ನ ಸಹೋದ್ಯೋಗಿಗಳೂ ಕಾರಣರೆಂದು ಆರೋಪಿಸಲಾಗದು.

ಐಕಮತ್ಯ ನಿರ್ಣಯದ ಕಡೆ ಗಮನ ಸೆಳೆದು ನೀವು ಅದಕ್ಕೆ ಅಕ್ಷರಶಃ ಹಾಗೂ ಆಶಯದಲ್ಲಿ ಅದಕ್ಕೆ ಅನುಗುಣವಾಗಿ ನಡೆದುಕೊಂಡಿದ್ದೀರಿ ಎಂದು ಹೇಳಿಕೊಂಡಿದ್ದೀರಿ. ಆದರೆ ಇದು ನಿಮ್ಮ ಮನೋಭಾವದ ಬಗೆಗಿನ ಇಡೀ ದೇಶದ ಅಭಿಪ್ರಾಯವೇನಲ್ಲ.

ಐಕಮತ್ಯ ನಿರ್ಣಯವನ್ನು ಕಡೆಗಣಿಸಿ ಕಾರ್ಯಕಾರಿ ಸಮಿತಿಯ ಹಿರಿಯ ಸದಸ್ಯರು ನನ್ನ ಹಾಗೂ ನನಗೆ ಬೆಂಬಲವಿತ್ತವರ ವಿರುದ್ಧದ ಅಪಪ್ರಚಾರದಲ್ಲಿ ತೊಡಗಿದ್ದರು. ಇದನ್ನು ತಡೆಯಲು ನೀವು ಯಾವುದೇ ಕ್ರಮಗಳನ್ನು ಕೈಗೊಳ್ಳಲಿಲ್ಲ. ಅದರ ಬದಲು, ಅವರೊಡನೆ ನೀವೂ ಭಾಗಿಗಳಾಗಿದ್ದೀರಿ ಎಂಬಂತೆ ನಡೆದುಕೊಂಡಿರಿ. ಐಕಮತ್ಯ ನಿರ್ಣಯಕ್ಕೆ ವಿರುದ್ಧವಾಗಿ ನಡೆದುಕೊಂಡವರಾರು ಎಂಬುದನ್ನು ಪತ್ರಿಕಾ ವರದಿಗಳ ಮೂಲಕ ಸುಲಭವಾಗಿ ಗುರುತಿಸಬಹುದು. ನಾನಾಗಲೀ ಜವಾಬ್ದಾರಿಯಿರುವ ಬೇರೆ ಯಾರೇ ಆಗಲಿ ಯಾವುದೇ ವ್ಯಕ್ತಿಯ ವಿರುದ್ಧ ಒಂದು ಮಾತನ್ನೂ ಆಡಿಲ್ಲ.

ಯುಪಿಸಿಸಿ ಮತ್ತು ಮಧ್ಯಪ್ರದೇಶ ಸಮಿತಿಗಳಿಗೆ ನೀವು ಬರೆದ ಪತ್ರದಲ್ಲಿ, ಪುನಃ ಸ್ಪಷ್ಟವಾಗಿ ಕಾನೂನುಬಾಹಿರವಾದ ರೀತಿಯಲ್ಲಿ, ನನ್ನ ಬೆಂಬಲಿಗರೆಂದು ನೀವು ಭಾವಿಸುವ

ಶ್ರೀ ಕಮಲಾಪತಿ ತ್ರಿಪಾಠಿ, ಶ್ರೀ ಆರ್. ವೆಂಕಟರತ್ನಂ ಮತ್ತು ಶ್ರೀ ಎ.ಪಿ. ಶರ್ಮ ಅವರ ವಿರುದ್ಧ ಕ್ರಮ ಕೈಗೊಂಡಿರುವುದು ನಿಮ್ಮ ಮನೋಭಾವದ ವಿಷಯದಲ್ಲಿನ ನಮ್ಮ ಅನುಮಾನಗಳನ್ನು ದೃಢಪಡಿಸುತ್ತವೆ. ಅದರ ಹಿಂದಿನ ಸಂಜೆಯಷ್ಟೇ ನಾವು ಸಂಸದೀಯ ಮಂಡಳಿಯ ಸಭೆಯಲ್ಲಿ ಸೇರಿದ್ದೆವು. ನೀವು ಈ ವಿಷಯಗಳನ್ನು ಉಲ್ಲೇಖಿಸಿಯೇ ಇಲ್ಲ.

ನೀವು ತೆಗೆದುಕೊಂಡ ಕ್ರಮಗಳ ಬಗ್ಗೆ ನಮಗೆ ತಿಳಿದದ್ದು ರಾತ್ರಿ ತಡವಾಗಿ, ನೀವು ಮತ್ತು ಇತರ ಪದಾಧಿಕಾರಿಗಳು ಮಲಗಿದ್ದಾಗ. ನಾನು ಮಾರನೇ ಬೆಳಿಗ್ಗೆ ಬೇಗನೆ ಲಕ್ಷದ್ವೀಪಕ್ಕೆ ಹೋಗುವವನಿದ್ದೆ. ಈ ಕ್ರಮಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ನಂತರವಷ್ಟೇ ನಾನು ಮತ್ತು ಕಾರ್ಯಕಾರಿ ಸಮಿತಿಯಲ್ಲಿನ ನನ್ನ ಸಹೋದ್ಯೋಗಿಗಳು ೮ ನೇ ಆಗಸ್ಟ್ ರಂದು ನಿಮಗೆ ಪತ್ರ ಬರೆಯಲು ನಿರ್ಧರಿಸಿದ್ದು.

ಇಷ್ಟಾದರೂ, ವಾಸ್ತವವಾಗಿಯೂ ನಿಮ್ಮ ಪತ್ರದಿಂದ ಖೇದಗೊಂಡವರು ಬೇರೆಯವರಾದರೂ, ಇದರ ಬಗ್ಗೆ ನೀವು ವಿಷಾದ ವ್ಯಕ್ತಪಡಿಸಿದ್ದೀರಿ, ನಿಮ್ಮ ಕೈಸೇರುವ ಮೊದಲೇ ಪತ್ರವು ಪತ್ರಿಕೆಗಳಲ್ಲಿ ಕಾಣಿಸಿಕೊಂಡಿತು ಎಂಬುದು ಸರಿಯಲ್ಲ.

ಕಾಂಗ್ರೆಸ್ ಅಧ್ಯಕ್ಷರ ವಿರುದ್ಧ ಕಾರ್ಯಕಾರಿ ಸಮಿತಿಯ ಸದಸ್ಯರು ಅಪಪ್ರಚಾರ ಮಾಡುತ್ತಿರುವರೆಂದೂ, ಎಐಸಿಸಿ ಅಧಿವೇಶನಕ್ಕಾಗಿ ಒತ್ತಾಯಿಸಿರುವರೆಂದೂ ನಿಮ್ಮ ಪತ್ರದಲ್ಲಿ ದೂರಿದ್ದೀರಿ. ಇದು ವಾಸ್ತವಾಂಶಗಳ ಮಹಾ ವಿಕೃತರೂಪ. ಕಾರ್ಯಕಾರಿ ಸಮಿತಿಯ ಯಾವ ಸದಸ್ಯರೇ ಆಗಲಿ ನಿಮ್ಮ ವಿರುದ್ಧ, ಅಪಪ್ರಚಾರದ ಮಾತಂತಿರಲಿ, ಯಾವುದೇ ಬಗೆಯ ಪ್ರಚಾರದಲ್ಲಿ ತೊಡಗಿರುವುದು ನನ್ನ ಗಮನಕ್ಕೆ ಬಂದಿಲ್ಲ.

ನಿರ್ದಿಷ್ಟ ಉದ್ದೇಶಕ್ಕಾಗಿ ವಿಶೇಷ ಎಐಸಿಸಿ ಅಧಿವೇಶನ ನಡೆಸಬೇಕೆಂದು ಕೇಳಿ ಕೊಳ್ಳುವುದಕ್ಕೆ ಕಾಂಗ್ರೆಸ್‌ನ ಸಂವಿಧಾನದಲ್ಲಿ ಅವಕಾಶವಿದೆ, ಸಾಮಾನ್ಯವಾಗಿ ಡಿಸೆಂಬರ್‌ನಲ್ಲಿ ನಿವೃತ್ತರಾಗುತ್ತಿರುವ ಅಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆಸಬೇಕೆಂಬುದು ಈ ಬೇಡಿಕೆಯ ಉದ್ದೇಶವಾಗಿತ್ತು. ಇದರಲ್ಲಿ ನನಗೆ ಅಂತಹ ತಪ್ಪೇನೂ ಕಾಣಿಸುತ್ತಿಲ್ಲ, ಅದರಲ್ಲಿಯೂ ಸಾಧಾರಣ ಅವಧಿಯ ಬಳಿಕ ಚುನಾವಣೆ ಮಾಡಲು ಎಐಸಿಸಿಯ ಬಹುಮಂದಿ ಸದಸ್ಯರು ಒತ್ತಾಯಿಸುತ್ತಿರುವಾಗ. ಅಪೇಕ್ಷಿಸಿದರೆ, ಮತ್ತೆ ಸ್ಪರ್ಧಿಸಿ ವಿಧ್ಯುಕ್ತವಾಗಿ ನೀವು ಆಯ್ಕೆಗೊಳ್ಳುವುದು ನಿಮಗೆ ಬಿಟ್ಟದ್ದು.

ಆದರೆ, ನೀವು ನಾಯಕರಾಗಿರುವ ಒಂದು ಸಂಸ್ಥೆಯ ಬಹುಮಂದಿ ಸದಸ್ಯರ ಮೇಲೆ ಬೈಗುಳವನ್ನು ಸುರಿಸುವುದು ಮತ್ತು ಪಕ್ಷದ ಐಕಮತ್ಯ, ನಿಷ್ಠೆ ಮತ್ತು ಗೌರವಗಳು

ಹಾಳಾಗುತ್ತಿವೆಯೆಂದು ನೀವೇ ಆರೋಪಿಸುವುದು ದುರದೃಷ್ಟಕರ ವಿಷಯ. ಎಐಸಿಸಿ ಸಭೆ ಕರೆಯಬೇಕೆಂದು ಒತ್ತಾಯಿಸಲು ನಿಸ್ಸಂಶಯವಾದ ಪ್ರಜಾಸತ್ತಾತ್ಮಕ ಹಕ್ಕನ್ನು ಹೊಂದಿರುವ ಸದಸ್ಯರು ಎತ್ತಿರುವ ಅನೇಕ ಪ್ರಶ್ನೆಗಳ ಮೇಲೆ ತೆರೆ ಎಳೆಯಲೆಂದೇ ನಿಮ್ಮ ಪತ್ರದಲ್ಲಿ ಅವುಗಳ ಬಗ್ಗೆ ಪ್ರಸ್ತಾಪಿಸಿದ್ದೀರಿ ಎಂಬಂತೆ ತೋರುತ್ತದೆ.

ಐಕಮತ್ಯ ನಿರ್ಣಯದಲ್ಲಿ ಪಕ್ಷದ ಸಂಘಟನೆ ಮತ್ತು ಸರ್ಕಾರದ ವಿಭಾಗಗಳ ಪಾತ್ರದ ಬಗ್ಗೆ ಖಚಿತವಾಗಿ ನಿರೂಪಿಸಲಾಗಿತ್ತು. ಪ್ರಧಾನ ಮಂತ್ರಿಯಾಗಿ ನಾನು, ಪಕ್ಷವನ್ನು ಸಂಪೂರ್ಣವಾಗಿ ಕಡೆಗಣಿಸಿ, ಸರ್ಕಾರಕ್ಕಾಗಲೀ ನನಗಾಗಲೀ ಪರಮಾಧಿಕಾರವನ್ನೆಂದೂ ಬಯಸಿದವಳಲ್ಲ. ಅದರ ಬದಲು, ಸರ್ಕಾರ ಮತ್ತು ಸಂಘಟನಾ ವಿಭಾಗಗಳು ಪಕ್ಷದ ಹಾಗೂ ದೇಶದ ಹಿತದೃಷ್ಟಿಯಿಂದ ಪರಸ್ಪರ ಪೂರಕವಾಗಿ ಕಾರ್ಯ ನಿರ್ವಹಿಸಬೇಕೆಂದು ಬಯಸುವವಳು. ಭಾರತಕ್ಕೆ ತುರ್ತಾಗಿ ಬೇಕಾಗಿರುವ ಮುಖ್ಯವಾದ ಸಾಮಾಜಿಕ ಆರ್ಥಿಕ ಬದಲಾವಣೆಗಳ ಶ್ರೇಣಿಯನ್ನು ವಾಸ್ತವವಾಗಿಸಲು ಸರ್ಕಾರದ ಪ್ರಯತ್ನವಷ್ಟೇ ಸಾಕಾಗದು.

ಸ್ಥೂಲ ಧೋರಣೆಗಳನ್ನು ನಿರೂಪಿಸುವುದಕ್ಕಷ್ಟೇ ಸಂಘಟನಾ ವಿಭಾಗದ ಕರ್ತವ್ಯವು ಕೊನೆಗೊಳ್ಳುವುದಿಲ್ಲ. ಒಪ್ಪಿದ ಧೋರಣೆಗಳಿಗೆ ಕೋಟ್ಯಂತರ ಜನಗಳ ಬೆಂಬಲವನ್ನು ಸಂಪಾದಿಸುವುದು ಅದರ ಮತ್ತಷ್ಟು ಮುಖ್ಯವಾದ ಕರ್ತವ್ಯ. ಇರುವ ಸರ್ಕಾರವು ಕಾಂಗ್ರೆಸ್ ಸರ್ಕಾರವಾದ್ದರಿಂದ ಅದು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುವುದು ಪಕ್ಷವು ಜನತೆಯ ನಡುವೆ ಸಕ್ರಿಯವಾಗಿದ್ದಾಗ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಆವಶ್ಯಕವಾದಷ್ಟು ಬೆಂಬಲವು ಸಂಘಟನಾ ವಿಭಾಗದಿಂದ ದೊರಕುತ್ತಿಲ್ಲವೆಂಬುದೇ ನಮ್ಮನ್ನು ಚಿಂತೆಗೀಡುಮಾಡಿರುವ ಅಂಶ.

ದೇಶದಲ್ಲಿ ಅನೇಕ ಸಂದರ್ಭಗಳು ಉದ್ಭವಿಸಿವೆ, ಅಪರಾಧಗಳು ನಡೆದಿವೆ. ಪಕ್ಷದ ಸಂಘಟನೆಯು ಸರ್ಕಾರದ ಧೋರಣೆಗಳು ಮತ್ತು ಅದರ ಕಾರ್ಯಗಳ ಬಗ್ಗೆ ಇನ್ನೊಂದಷ್ಟು ಸಕ್ರಿಯವಾಗಿದ್ದಿದ್ದರೆ ಮತ್ತು ಜನತೆಯ ನಡುವೆ ಕ್ರಿಯಾಶೀಲವಾಗಿದ್ದಿದ್ದರೆ ಇವುಗಳನ್ನು ಸುಲಭವಾಗಿ ಎದುರಿಸಬಹುದಾಗಿತ್ತು. ಯಾರಾದರೂ ಈ ಪ್ರಶ್ನೆಯನ್ನು ಕೇಳುವುದು ಸಮಂಜಸವೇ ಸರಿ: ಅಲಹಾಬಾದ್‌ನಲ್ಲಿ ಕೋಮುಗಲಭೆಗಳು ಹಾಗೂ ಆಂಧ್ರದಲ್ಲಿ ತೆಲಂಗಾಣದ ಬಗ್ಗೆ ಹಿಂಸಾಚಾರ ನಡೆದಾಗ, ಚಂದೀಗಡದ ಭವಿಷ್ಯದ ಬಗ್ಗೆ ಪಂಜಾಬ್ ಮತ್ತು ಹರಿಯಾಣಗಳಲ್ಲಿ ಸ್ಫೋಟಕ ಪರಿಸ್ಥಿತಿ ಉಂಟಾದಾಗ, ಹಾಗೂ ಎರಡನೆಯ ತೈಲಶುದ್ಧೀಕರಣ ಕೇಂದ್ರಕ್ಕೆ ಒತ್ತಾಯಿಸಿ ಅಸ್ಸಾಂನಲ್ಲಿ ಪ್ರತಿಭಟನೆ ಆರಂಭವಾದಾಗ, ಪಕ್ಷದ ಸಂಘಟನೆಯು, ಅದರಲ್ಲಿಯೂ ಕೇಂದ್ರ ನಾಯಕತ್ವವು, ಏನು ಮಾಡಿತು?

ಸರಿಯಾದ ದಿಸೆಯಲ್ಲಿ ಜನಾಭಿಪ್ರಾಯವನ್ನು ರೂಪಿಸಲು ಪಕ್ಷವು ಪರಿಣಾಮಕಾರಿ ಪಾತ್ರವನ್ನು ವಹಿಸಬಹುದಾಗಿದ್ದ ಅನೇಕ ಸಂದರ್ಭಗಳಿವೆ.

'ಸಿಂಡಿಕೇಟ್' ಅನ್ನು ಪಕ್ಷದ ಪ್ರತಿಗಾಮಿ ಗುಂಪು ಎಂದು ನಾನು ಕರೆದಿರುವೆನೆಂಬ ಮತ್ತೊಂದು ದೂರನ್ನು ನೀವು ಮಾಡಿದ್ದೀರಿ. ಎಂದಾದರೂ ನನ್ನ ಭಾಷಣಗಳಲ್ಲಾಗಲೀ ಹೇಳಿಕೆಗಳಲ್ಲಾಗಲೀ 'ಸಿಂಡಿಕೇಟ್' ಎಂಬ ಶಬ್ದವನ್ನು ನಾನು ಬಳಸಿದ ನೆನಪು ನನಗಿಲ್ಲ, ಕಾಂಗ್ರೆಸ್ ಪಕ್ಷದೊಳಗಿನ ಯಾರನ್ನೇ ಆಗಲಿ ನಾನು 'ಪ್ರತಿಗಾಮಿ' ಎಂದು ಕರೆದಿಲ್ಲ. ಹಿತಾಸಕ್ತಿಗಳ ವಿರುದ್ಧ, ನನ್ನ ಮತ್ತು ನಮ್ಮ ಧೋರಣೆಗಳ ಮೇಲೆ ಪತ್ರಿಕೆಗಳಲ್ಲಿ ಮಾಡಿದ ಆರೋಪಗಳ ಬಗ್ಗೆ ನಾನು ಮಾತನಾಡಿದ್ದೇನೆ, ಅಷ್ಟೆ.

ಆದರೆ, ಬ್ಯಾಂಕ್ ರಾಷ್ಟ್ರೀಕರಣ, ಮಹಾರಾಜರ ಪೊಗದಿ ರದ್ದತಿ ಮುಂತಾದ ಕಾಂಗ್ರೆಸ್‌ನ ಒಪ್ಪಿತ ನೀತಿಗಳ ವಿರುದ್ಧ ಶ್ರೀ ಎಸ್.ಕೆ. ಪಾಟೀಲ್ ಅವರು ಸಾರ್ವಜನಿಕ ಹೇಳಿಕೆಗಳನ್ನು ನೀಡಿರುವುದನ್ನು ಯಾರೂ ಕಡೆಗಣಿಸುವಂತಿಲ್ಲ. ದುರದೃಷ್ಟದ ವಿಷಯ ವೆಂದರೆ, ಫರೀದಾಬಾದ್ ಅಧಿವೇಶನದ ನಿಮ್ಮ ಅಧ್ಯಕ್ಷ ಭಾಷಣವೇ ನಮ್ಮ ಪಕ್ಷ ದೀರ್ಘಕಾಲದಿಂದ ಬೆಂಬಲಿಸಿದ್ದ ಹಲವಾರು ನೀತಿಗಳ ಖಂಡನೆಯಿಂದ ಕೂಡಿತ್ತು. ಫರೀದಾಬಾದ್ ಅಧಿವೇಶನದ ನಿಮ್ಮ ಅಧ್ಯಕ್ಷ ಭಾಷಣ ಸ್ವತಂತ್ರ ಪಕ್ಷದ ಒಬ್ಬ ನಾಯಕನದರ ಹಾಗಿತ್ತೆಂದು ಅನೇಕರು ಹೇಳಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿನ ಈ ಪ್ರವೃತ್ತಿಗಳನ್ನು ನಾವು ಸಂಪೂರ್ಣವಾಗಿ ಬದಿಗಿರಿಸಲು ಸಾಧ್ಯವಿಲ್ಲ.

ಬ್ಯಾಂಕ್ ರಾಷ್ಟ್ರೀಕರಣವು ನನ್ನ ಯೋಜನೆಯೆಂದು ನಾನೆಂದೂ ಹೇಳಿಕೊಂಡಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ, ಕಾಂಗ್ರೆಸ್ ಪಕ್ಷದ ಹಳೆಯ ನೀತಿಯೊಂದನ್ನು ಜಾರಿಗೊಳಿಸುತ್ತಿದ್ದೇನೆ ಅಷ್ಟೆ ಎಂದು ನಾನು ಅನೇಕ ಬಾರಿ ಹೇಳಿದ್ದೇನೆ. ಆದರೆ ನಾನು ಬ್ಯಾಂಕ್ ರಾಷ್ಟ್ರೀಕರಣ ವನ್ನು ವಿರೋಧಿಸಿದ್ದೆ ಎಂಬ ಸುಳ್ಳು ಪ್ರಚಾರವನ್ನು ನಿವಾರಿಸಬೇಕಾದುದು ಆವಶ್ಯಕ ಎಂದು ಭಾವಿಸುತ್ತೇನೆ. ಶ್ರೀ ಮೊರಾರ್ಜಿ ದೇಸಾಯಿಯವರು ಅದಕ್ಕೆ ಕಟ್ಟಾ ವಿರೋಧಿಗಳು ಎಂಬುದು ನಿಮಗೆ ಚೆನ್ನಾಗಿಯೇ ತಿಳಿದಿದೆ. ಅಂಥ ಕಾರ್ಯಕ್ರಮವೊಂದಕ್ಕೆ ಒತ್ತಾಯಿಸಿ ದರೆ ತಾವು ರಾಜೀನಾಮೆ ನೀಡುವುದಾಗಿಯೂ ಶ್ರೀ ದೇಸಾಯಿ ಅವರು ಹೆದರಿಸಿದ್ದರು.

ಈ ಪ್ರಬಲ ಒತ್ತಡವೇ ನಮ್ಮ ದೇಶದ ಅಭಿವೃದ್ಧಿಗೆ ಅತ್ಯಂತ ಆವಶ್ಯಕ ಎಂದು ಯಾವಾಗಲೂ ಭಾವಿಸಿದ್ದ ಕಾರ್ಯಕ್ರಮದ ಜಾರಿಯನ್ನು ನಾನು ಸ್ಥಗಿತಗೊಳಿಸಲು ಕಾರಣವಾದುದು; ಆದರೆ, ಬೆಂಗಳೂರು ಎಐಸಿಸಿ ಅಧಿವೇಶನದ ಬಳಿಕ, ಇದನ್ನು ಜಾರಿಗೊಳಿಸುವ ಉದ್ದೇಶದಿಂದ ಶ್ರೀ ಮೊರಾರ್ಜಿ ದೇಸಾಯಿಯವರನ್ನು ಹಣಕಾಸು ಸಚಿವ ಸ್ಥಾನದಿಂದ ಮುಕ್ತಗೊಳಿಸಲು ನಿರ್ಧರಿಸಿದೆ.

ನನ್ನ ಸುತ್ತಲ ವಿಭೂತಿ ಪೂಜೆಯನ್ನು ನಾನು ಉತ್ತೇಜಿಸುತ್ತಿದ್ದೇನೆ ಎಂಬ ನಿಮ್ಮ ಮಾತುಗಳು ಎಷ್ಟು ಬುಡವಿಲ್ಲದ್ದೆಂದರೆ, ಅವುಗಳು ನೋವುಂಟುಮಾಡುತ್ತವೆ ಎನ್ನುವುದಕ್ಕಿಂತ ದುಃಖವುಂಟುಮಾಡುವಂಥವು ಎಂದು ಬಣ್ಣಿಸಬೇಕಾಗಿದೆ. ನಿಮಗೇ ಗೊತ್ತಿರುವಂತೆ, ಸರ್ಕಾರ ಮತ್ತು ನೀತಿರೂಪಣೆ ಮಾಡುವ ಪಕ್ಷಗಳ ನಡುವಣ ಸಂಬಂಧ ತುಂಬ ಸಂಕೀರ್ಣವಾದದು, ಇದರ ಬಗ್ಗೆ ನಮ್ಮ ದೇಶದಲ್ಲಿ ಮಾತ್ರವಲ್ಲದೆ ನಮ್ಮದರಂತಹ ಇತರ ಅನೇಕ ದೇಶಗಳಲ್ಲಿಯೂ ಅನೇಕ ಬಾರಿ ಚರ್ಚೆಗಳು ನಡೆದಿವೆ.

ಈ ಸಂಬಂಧವನ್ನು ಉಳಿಸಬೇಕಾದುದು ಕೆಲವು ಮೂಲಭೂತ ತತ್ವಗಳು. ಈ ತತ್ವಗಳ ವ್ಯಾವಹಾರಿಕ ಕಾರ್ಯಸ್ವರೂಪವನ್ನು ನಮ್ಮ ದೇಶದ ಇಂದಿನ ಪರಿಸ್ಥಿತಿಗಳಿಗೆ ತಕ್ಕನಾದ ರೀತಿಯಲ್ಲಿ ನಾವು ನಿಗದಿಗೊಳಿಸಬೇಕಾಗಿದೆ.

ನಾನು ಗುಂಪು ಮನೋಭಾವವನ್ನು ಬೆಳೆಸಿಕೊಂಡಿದ್ದೇನೆಂದು ನೀವು ಆರೋಪಿಸಿದ್ದೀರಿ. ನನ್ನ ಬಗ್ಗೆ ಟೀಕೆ ಮಾಡುವ ಮನೋಭಾವವುಳ್ಳ ಹಲವಾರು ಮಂದಿಯನ್ನು ಕೂಡ ಮುಖ್ಯವಾದ ಸಮಿತಿಗಳು, ಮಂಡಳಿಗಳು ಇತ್ಯಾದಿಗಳಿಗೆ ನಾನು ನೇಮಿಸಿದ್ದೇನೆ. ಆದರೆ ಸರ್ಕಾರದ ನೀತಿಯನ್ನು ಎತ್ತಿ ಹಿಡಿಯಬೇಕಾದ ನಿಯೋಗಗಳಲ್ಲಿ ನಮ್ಮ ಧೋರಣೆಗಳನ್ನು ಮನಃಪೂರ್ವಕವಾಗಿ ಒಪ್ಪಿಕೊಳ್ಳದವರನ್ನು ನೇಮಿಸುವುದು ಸಾಧ್ಯವಾಗುವುದಿಲ್ಲ.

ಯಾವುದಾದರೊಬ್ಬ ವ್ಯಕ್ತಿ ತಪ್ಪು ಮಾಡಿದರೆ, ನಿಯಮ ಮತ್ತು ವಿಧಿಗಳಿಗೆ ಅನುಗುಣವಾಗಿ ಅಧಿಕಾರಯುತ ಸಾಧನವು ಅಂಥ ಸಂದರ್ಭಗಳಲ್ಲಿ ಸೂಕ್ತ ಕ್ರಮ ಕೈಗೊಳ್ಳುತ್ತದೆ. ನಿಯಮ ಅಥವಾ ಕ್ರಮಗಳಿಗೆ ವಿರುದ್ಧವಾಗಿ ನಡೆದುಕೊಂಡ ಯಾರ ಪರವಾಗಿಯೂ ನಾನೆಂದೂ ಮಧ್ಯಪ್ರವೇಶಮಾಡಿಲ್ಲ.

ಪಕ್ಷದ ಪರವಾಗಿ ನಿಧಿಸಂಗ್ರಹ ಮಾಡಿ ಲೆಕ್ಕ ಒಪ್ಪಿಸದವರ ಬಗ್ಗೆ ಪ್ರಸ್ತಾಪಿಸಲಾಗಿದೆ. ಈ ವಿಷಯದಲ್ಲಿ, ಕೆಲವು ರಾಜ್ಯಗಳಲ್ಲಿ ನಡೆಯುತ್ತಿರುವುದೇನು ಎಂಬುದನ್ನು ಆಸಕ್ತಿಯಿಂದ ಗಮನಿಸುತ್ತಿದ್ದೇನೆ. ಮಹಾ ಚುನಾವಣೆಗಳು ಹಾಗೂ ಉಪಚುನಾವಣೆಗಳ ಸಂದರ್ಭಗಳಲ್ಲಿ ನಿಧಿಸಂಗ್ರಹ ಮಾಡಿದ ಕಾರ್ಯಕಾರಿ ಸಮಿತಿ ಸದಸ್ಯರ ಪೈಕಿ ಯಾರಾದರೂ ಲೆಕ್ಕ ಒಪ್ಪಿಸಿದ್ದಾರೆಯೇ?

೧೯೬೭ ರ ಮಹಾಚುನಾವಣೆಗಳ ಕಾಲದಲ್ಲಿ ತಾವು ಭಾರಿ ಮೊತ್ತದ ಹಣವನ್ನು ಸಂಗ್ರಹ ಮಾಡಿದುದಾಗಿ ಶ್ರೀ ಎಸ್.ಕೆ ಪಾಟೀಲರು ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ. ಇದಕ್ಕೆ ಲೆಕ್ಕವಿದೆಯೆ? ಈ ಹಣ ಎಐಸಿಸಿಗೆ ತಲುಪಿತೇ? ಹಣಸಂಗ್ರಹದ ವಿಷಯದಲ್ಲಿ ಸರಿಯಾಗಿ ನಡೆದುಕೊಳ್ಳದ ಯಾರ ಬಗ್ಗೆಯಾಗಲೀ ನೀವು ಕ್ರಮ ಕೈಗೊಳ್ಳುವುದಕ್ಕೆ

ನನ್ನ ಅಭ್ಯಂತರವೇನೂ ಇಲ್ಲ, ಆದರೆ ಅಂಥ ಕ್ರಮವನ್ನು ಪಕ್ಷಪಾತ ಅಥವಾ ಭಯವಿಲ್ಲದೆ ತೆಗೆದುಕೊಳ್ಳಬೇಕು ಎಂಬುದಷ್ಟೇ ನನ್ನ ಕೋರಿಕೆ.

ಪಕ್ಷ ಹಾಗೂ ಸರ್ಕಾರಗಳಲ್ಲಿ ಏಕವ್ಯಕ್ತಿ ಆಡಳಿತ ರೂಪುಗೊಳ್ಳುತ್ತಿರುವ ಬಗ್ಗೆ ನೀವು ಆತಂಕ ವ್ಯಕ್ತಪಡಿಸಿದ್ದೀರಿ. ಸರ್ಕಾರದ ಮುಖ್ಯಸ್ಥರು ಪೂರ್ಣ ಅಧಿಕಾರ ಹೊಂದಿರ ದಿದ್ದರೆ ಸರ್ಕಾರದ ಕಾರ್ಯನಿರ್ವಹಣೆ ಸಾಧ್ಯವಾಗಲಾರದು. ಆದರೆ, ಸಂವಿಧಾನ ದಲ್ಲಿಯೇ ಈ ಬಗ್ಗೆ ಅನೇಕ ರಕ್ಷಣಾಕ್ರಮಗಳು ಅಂತರ್ನಿಹಿತವಾಗಿವೆ, ಜೊತೆಗೆ ಇಂತಹ ಅನಾರೋಗ್ಯಕರ ಮನೋಭಾವವನ್ನು ತಹಬಂದಿಗೆ ತರಲು ಸದಾ ತೆರೆದ ಕಣ್ಣಿಂದ ನೋಡುವ ಸಂಸತ್ತೂ ಇದೆ.

ಆದರೆ ಈ ಮಾತುಗಳನ್ನು ನಾನು ಪಕ್ಷದ ಪರವಾಗಿ ಹೇಳಲಾರೆ. ಖೋಟ ಸದಸ್ಯತ್ವ, ಅಸಮಂಜಸ ಚುನಾವಣೆಗಳು ಮತ್ತು ಹಿರಿಯಣ್ಣನ ಮನೋಭಾವಗಳಿದ್ದು, ಪಕ್ಷದ ಅಧ್ಯಕ್ಷರೇ ಕಾಂಗ್ರೆಸ್‌ನ ಸಂವಿಧಾನದ ತಡೆಗಳ ನಡುವೆಯೂ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಬೇಕಾಬಿಟ್ಟಿ ತೆಗೆದುಹಾಕುವ ಪರಿಪಾಟವಿರುವ ಕಡೆ ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆ ಸಾಧ್ಯವೇ?

ಸ್ಥಳೀಯ ನಾಯಕನ ಜೊತೆ ಹೆಜ್ಜೆ ಇಡಲಾರರು ಎಂಬುದೊಂದೇ ಕಾರಣಕ್ಕಾಗಿ ಪಕ್ಷದ ಒಳ್ಳೆಯ ಹಾಗೂ ಪ್ರಾಮಾಣಿಕ ಕಾರ್ಯಕರ್ತರನ್ನು ತೆಗೆದುಹಾಕಿರುವ ಅಸಂಖ್ಯ ನಿದರ್ಶನಗಳಿವೆ. ಇಂಥ ಪರಿಸ್ಥಿತಿ ಕೊನೆಗೊಳ್ಳಬೇಕು. ಆದರೆ ಇಂಥ ನ್ಯೂನತೆಗಳು ಹಾಗೂ ದೋಷಗಳ ಬಗ್ಗೆ ಎಷ್ಟು ಜನ ತಲೆಕೆಡಿಸಿಕೊಂಡಿದ್ದಾರೆ?

ನನಗೆ ಯಾವುದೇ ವೈಯಕ್ತಿಕ ಲಾಭವಾಗಲೀ ಅನುಕೂಲವಾಗಲೀ ಬೇಕಾಗಿಲ್ಲ ಎಂದು ಪ್ರಾಮಾಣಿಕ ಪ್ರಾಂಜಲ ಮನಸ್ಸಿನಿಂದ ನಿಮಗೂ ಪಕ್ಷಕ್ಕೂ ಭರವಸೆ ನೀಡುತ್ತೇನೆ. ಕಾಂಗ್ರೆಸ್ ಪಕ್ಷ ಸದೃಢವಾಗಿಯೂ ಐಕಮತ್ಯದಿಂದ ಕೂಡಿಯೂ ಇರಬೇಕು, ಪ್ರಜಾ ಪ್ರಭುತ್ವ, ಧರ್ಮನಿರೇಕ್ಷತೆ ಮತ್ತು ಸಮಾಜವಾದಗಳಿಗೆ ಬದ್ಧವಾಗಿರಬೇಕು ಎಂಬುದು ನನ್ನ ಬಯಕೆ. ಪಕ್ಷದ ಈ ಒಪ್ಪಿತ ಆದರ್ಶಗಳು ಮತ್ತು ಧೋರಣೆಗಳ ವಿರುದ್ಧವಿರುವ ಶಕ್ತಿಗಳನ್ನು ಕಿತ್ತೊಗೆಯೋಣ. ಪಕ್ಷದ ಆರೋಗ್ಯಕರ ಕಾರ್ಯನಿರ್ವಹಣೆಗೆ ನಾವು ಮಾರ್ಗ ಗಳನ್ನು ರೂಪಿಸೋಣ.

ಈ ದೃಷ್ಟಿಕೋನದಿಂದಲೇ ಐಸಿಸಿಯ ಬಹುಸಂಖ್ಯಾತ ಸದಸ್ಯರು ಎಐಸಿಸಿಯ ವಿಶೇಷ ಅಧಿವೇಶವನ್ನು ಕರೆಯುವಂತೆ ಕೇಳಿಕೊಂಡಿದ್ದಾರೆ. ಪಕ್ಷದ ಸದಸ್ಯರ ಮನವಿಗೆ ಸೂಕ್ತವಾಗಿ ಪ್ರತಿಕ್ರಿಯಿಸಬೇಕಾದದ್ದು ಪಕ್ಷದ ಮುಖ್ಯಸ್ಥರ ಕರ್ತವ್ಯ. ಪಕ್ಷದ ಆಶಯವನ್ನು ಪ್ರತಿನಿಧಿಸುವ ಪರಮ ಅಂಗಸಂಸ್ಥೆಯಾದ ಎಐಸಿಸಿಗಿಂತ ಹೊರತಾದ ಬೇರಾವುದೇ

ವಿಶೇಷ ಜವಾಬ್ದಾರಿಯಾಗಲೀ ಕರ್ತವ್ಯವಾಗಲೀ ಅವರಿಗಿಲ್ಲ. ಪಕ್ಷದ ಆಶಯಗಳು ಹಾಗೂ ನಿರ್ಧಾರವನ್ನು ಬದಿಗಿರಿಸುವವರು ಯಾರೇ ಆಗಿರಲಿ ತಾವು ಪ್ರಜಾಸತ್ತಾತ್ಮಕ ವಾಗಿದ್ದೇವೆಂದಾಗಲೀ, ಅದಕ್ಕಿಂತ ಹೆಚ್ಚಾಗಿ ಪಕ್ಷದ ಐಕಮತ್ಯವನ್ನೂ ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಯನ್ನು ರಕ್ಷಿಸುವೆವೆಂದಾಗಲೀ ಹೇಳಿಕೊಳ್ಳಲು ಸಾಧ್ಯವಿಲ್ಲ.

ಈ ಮೇಲೆ ವಿವರಿಸಿರುವ ಅಂಶಗಳೆಲ್ಲವನ್ನೂ ಪ್ರಸ್ತುತ ಪರಿಸ್ಥಿತಿಯ ಮೂಲಭೂತ ಕಾರಣದ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕು. ಕಾಂಗ್ರೆಸ್ ಪಕ್ಷವು ಎದುರಿಸುತ್ತಿರುವ ಬಿಕ್ಕಟ್ಟು ಅದರ ಸಾರದಲ್ಲಿ ದೇಶವೇ ಎದುರಿಸುತ್ತಿರುವ ಬಿಕ್ಕಟ್ಟು, ಅದನ್ನು ಈ ಮಾತುಗಳು ಪ್ರತಿಬಿಂಬಿಸುತ್ತವೆ. ಅಭಿವೃದ್ಧಿಯ ಕಠಿಣ ಸಮಸ್ಯೆಗಳು ದೇಶದ ಜನರ ಮುಂದೆ ಹೊಸ ಸವಾಲುಗಳನ್ನೆಸೆದಿವೆ. ಈ ಹೊಸ ಸವಾಲಿಗೆ ತೀರ ವಿಭಿನ್ನವಾದ ಪ್ರತಿಕ್ರಿಯೆಗಳಿರುವುದನ್ನು ಫರೀದಾಬಾದ್‌ನ ಎಐಸಿಸಿ ಅಧಿವೇಶನವು ತೋರಿಸಿಕೊಟ್ಟಿತು, ಒಂದೆಡೆ, ಅಧ್ಯಕ್ಷರಾದ ನಿಮ್ಮ ಭಾಷಣ ಮತ್ತು ಇನ್ನೊಂದೆಡೆ, ಎಐಸಿಸಿ ಅಳವಡಿಸಿಕೊಂಡ ಕಾರ್ಯಕ್ರಮ.

ಬೆಂಗಳೂರು ಎಐಸಿಸಿ ಅಧಿವೇಶನದ ಚರ್ಚೆಗಳು ಈ ಭಿನ್ನತೆಯನ್ನು ಮತ್ತಷ್ಟು ಖಚಿತಗೊಳಿಸಿದುವು. ಭಾರತವನ್ನು ಕಾಡುತ್ತಿರುವ ಹೊಸ ಸವಾಲುಗಳನ್ನು ಪರಿಣಾಮ ಕಾರಿಯಾಗಿ ಎದುರಿಸಬಲ್ಲ ಏಕೈಕ ಮಾರ್ಗವಾಗಿ ಸಕಾರಾತ್ಮಕವೂ ಕ್ರಾಂತಿಕಾರಕವೂ ಆದ ಪರಿಹಾರಗಳನ್ನು ಮುಂದಿಡಲು ನನ್ನ ಟಿಪ್ಪಣಿಯು ಪ್ರಯತ್ನಿಸಿತು; ತಮ್ಮ ಟಿಪ್ಪಣಿಗಳ ಮೇಲೆ ಆಧರಿಸಿದ ನಿರ್ಣಯಗಳನ್ನು ಬೆಂಬಲಿಸುವ ನೆಪದಲ್ಲಿ ಅದರ ಮಾರ್ಗವನ್ನು ಸಂಪೂರ್ಣವಾಗಿ ಬುಡಮೇಲು ಮಾಡುವಂತಹ ಮೊರಾರ್ಜಿ ದೇಸಾಯಿಯವರ ಭಾಷಣದ ತಿರುಳಿನ ವಿರುದ್ಧವಾಗಿತ್ತು ನನ್ನ ಟಿಪ್ಪಣಿ.

ಈ ಹಿನ್ನೆಲೆಯಲ್ಲಿ, ಬ್ಯಾಂಕ್ ರಾಷ್ಟ್ರೀಕರಣದ ಮೂಲಕ ಸರ್ಕಾರವು ಒಪ್ಪಿತ ತತ್ತ್ವ ಗಳನ್ನು ಅನುಷ್ಠಾನಗೊಳಿಸಲು ನಿರ್ಧರಿಸಿದಾಗ, ಕಾಂಗ್ರೆಸ್‌ನೊಳಗಿನ ಬಿಕ್ಕಟ್ಟು ಉಲ್ಬಣ ಗೊಂಡಿತು.

ಬೆಂಗಳೂರು ಎಐಸಿಸಿ ಅಧಿವೇಶನವು ಕೈಗೊಂಡ ನಿರ್ಣಯ ಮತ್ತು ಹತ್ತು ಅಂಶ ಗಳ ಕಾರ್ಯಕ್ರಮವನ್ನು ಪಕ್ಷದ ಹೊಣೆ ಹೊತ್ತಿರುವ ನಾಯಕರೆಲ್ಲ ಇದಕ್ಕೆ ಅಡ್ಡಿಮಾಡ ಲಾರದಾದ್ದರಿಂದ, ಪಕ್ಷದ ಪ್ರಸ್ತುತ ನಾಯಕತ್ವದ ವಿರೋಧವನ್ನು ಲೆಕ್ಕಿಸದೆ, ಸರ್ಕಾರದಲ್ಲಿನ ನಾಯಕರುಗಳು ಯಾಕೆ ಅನುಷ್ಠಾನಗೊಳಿಸಬಾರದು – ಎಂಬುದು ಈಗ ಕೇಳಿಬರು ತ್ತಿರುವ ಪ್ರಶ್ನೆ. ಆದರೆ ಸತ್ಯವೆಂದರೆ, ಅಂಥ ಕ್ರಾಂತಿಕಾರಕ ಕಾರ್ಯಕ್ರಮದ ಅನುಷ್ಠಾನವು ಸರ್ಕಾರದಿಂದ ಮಾತ್ರವೇ ನೆರವೇರಲಾರದು ಎಂಬುದು.

ವಾಸ್ತವದಲ್ಲಿ ಬೇಕಾಗಿರುವುದು ಒಂದೆಡೆಯಲ್ಲಿ, ತನ್ನ ಮುಂದಿರುವ ವಿಷಯಗಳ ಬಗ್ಗೆ ಖಚಿತ ನಿರ್ಧಾರಗಳನ್ನು ತೆಗೆದುಕೊಳ್ಳಬಲ್ಲ ಸರ್ಕಾರದಲ್ಲಿನ ಓಜಸ್ವೀ ನಾಯಕತ್ವ,

ಮತ್ತು ಇನ್ನೊಂದೆಡೆಯಲ್ಲಿ, ಅದರ ಹೊರಗೆ, ಭಾರತದ ಪುನರುಜ್ಜೀವನಕ್ಕೆ, ಧರ್ಮ ನಿರಪೇಕ್ಷಕತೆ, ದೇಶದ ಸಮಗ್ರತೆ ಮತ್ತು ಐಕಮತ್ಯಗಳನ್ನು ರಕ್ಷಿಸಲು ಆವಶ್ಯಕವಾದ ಹೊಸ ಕಾರ್ಯಕ್ರಮಗಳಿಗೆ ಜನರ ಬೆಂಬಲವನ್ನು ಒಗ್ಗೂಡಿಸಬಲ್ಲ ಸ್ಪಷ್ಟತೆ ಮತ್ತು ಸ್ಫೂರ್ತಿದಾಯಕತೆಯಿಂದ ಕೂಡಿದ ಪಕ್ಷದ ನಾಯಕತ್ವ, ಈ ಇಮ್ಮುಖ ಆವಶ್ಯಕತೆಗಳೇ ನಮ್ಮ ಪಕ್ಷವನ್ನು ಕಾಡುತ್ತಿರವ ಬಿಕ್ಕಟ್ಟಿಗೆ ಕಾರಣ. ನಮ್ಮ ದೇಶದ ಅನೇಕ ಭಾಗಗಳಲ್ಲಿ ನಮ್ಮ ಪಕ್ಷವು ವಾಸ್ತವವಾಗಿ ಸ್ಥಗಿತಗೊಂಡಿದೆ ಎಂಬುದನ್ನಾರೂ ಅಲ್ಲಗಳೆಯಲಾರರು. ಹೊಸ ಸಮಸ್ಯೆಗಳಿಗೆ ಅದು ಸ್ಪಂದಿಸಲಾರದು, ಜನರು ಯಾವ ಮಾರ್ಗದಲ್ಲಿ ಸಾಗುತ್ತಿದ್ದಾರೆ ಎಂಬುದನ್ನು ಗುರುತಿಸಲಾರದು, ಸರ್ಕಾರದ ನಿರ್ಧಾರಗಳಿಗೆ ಜನಬೆಂಬಲವನ್ನು ಕ್ರೋಡೀಕರಿಸಲಾರದು. ಇವುಗಳೇ ನಮ್ಮ ಮುಂದಿರುವ ಸಮಸ್ಯೆಗಳನ್ನು ಎದುರಿಸುವುದಕ್ಕೆ ಅತ್ಯವಶ್ಯಕವಾದ ಸಮಂಜಸ ಪರಿಹಾರೋಪಾಯಗಳು.

ಪ್ರಸ್ತುತದ ಬಿಗುವಿನ ವಾತಾವರಣವು ಹೆಚ್ಚು ಕಾಲ ಉಳಿಯಬಾರದು ಮತ್ತು ಅದನ್ನು ಪರಿಹರಿಸಲು ಇರುವ ಒಂದೇ ಪ್ರಜಾಸತ್ತಾತ್ಮಕ ಪರಿಹಾರೋಪಾಯವೆಂದರೆ ಆದಷ್ಟು ಬೇಗ ವಿಷಯವನ್ನು ಎಐಸಿಸಿಯ ಮುಂದೆ ತೆಗೆದುಕೊಂಡು ಹೋಗುವುದು. ಆದ್ದರಿಂದ, ಕೇವಲ ತಾಂತ್ರಿಕತೆಗಳನ್ನು ಅವಲಂಬಿಸದೆ, ಸಂವಿಧಾನವನ್ನು ಉಲ್ಲಂಘಿಸಿ ಎಐಸಿಸಿ ಅಧಿವೇಶನವನ್ನು ಕರೆಯಲಾಗಿದೆ ಎಂದು ದೂರದೆ, ಆ ಸಭೆಯ ಅಧ್ಯಕ್ಷತೆಯನ್ನು ನೀವು ವಹಿಸಿ, ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸದಸ್ಯರಿಗೆ ಅವಕಾಶವಿತ್ತು ಪಕ್ಷದ ನಿರ್ಧಾರಕ್ಕೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ಬದ್ಧವಾಗಿರಬೇಕೆಂದು ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ವ್ಯಕ್ತಿಗಳನ್ನು ಮುಖ್ಯಮಾಡದೆ, ನಮ್ಮ ಪಕ್ಷದ ಹಾಗೂ ದೇಶದ ಪರಮ ಹಿತಕ್ಕೆ ನಮ್ಮ ಪಕ್ಷವು ನಿರ್ಣಯಗಳನ್ನು ಕೈಗೊಳ್ಳಲಿ.

ಎಐಸಿಸಿ ಅಧಿವೇಶನವನ್ನು ವಿಧಿವತ್ತಾಗಿ ನಿಮ್ಮ ಪರಿಪತ್ರದ ಮೂಲಕವೇ ಕರೆಯಬೇಕೆಂಬ ಇಚ್ಛೆಯಿರುವುದಾದರೆ, ದೆಹಲಿಯಲ್ಲಿ ಈ ತಿಂಗಳ ೨೨ ಮತ್ತು ೨೩ ರಂದು ಅಧಿವೇಶನವನ್ನು ನೀವೇ ಕರೆಯಿರೆಂಬ ಮನವಿಯೊಂದಿಗೆ ಈ ಪತ್ರವನ್ನು ಮುಗಿಸುತ್ತಿದ್ದೇನೆ.

ನೀವು ನಿಮ್ಮ ಪತ್ರವನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿರುವುದರಿಂದಾಗಿ, ನಾನೂ ಹಾಗೆಯೇ ಮಾಡುತ್ತಿದ್ದೇನೆ.

ಗೌರವಪೂರ್ವಕವಾಗಿ,

ತಮ್ಮ ವಿಶ್ವಾಸದ

ಸಹಿ/- ಇಂದಿರಾ ಗಾಂಧಿ

* * *

(ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರಿಗೆ ನವೆಂಬರ್ ೪, ೧೯೬೯ ರಂದು ಬರೆದ ಪತ್ರ)

ಪ್ರಿಯ ಶ್ರೀ ನಿಜಲಿಂಗಪ್ಪ,

ಪಕ್ಷದ ಸಂವಿಧಾನ ಹಾಗೂ ಕಾರ್ಯಕಾರಿ ಸಮಿತಿಗಳ ನಿರ್ಣಯಗಳನ್ನು ಉಲ್ಲಂಘಿಸಿ ನಿಮ್ಮ ಪ್ರಕಾರ ನಿಯಮಬಾಹಿರವೂ ಸಂವಿಧಾನವಿರೋಧಿಯೂ ಆದ ಎಐಸಿಸಿ ಸಭೆಯನ್ನು ಕರೆಯುವುದರೊಡನೆ ಇರುವ ನನ್ನ ಸಂಬಂಧವನ್ನು ಕುರಿತು ವಿವರಣೆ ನೀಡುವಂತೆ ಕೇಳಿ ನನಗೆ ಇದೇ ಎರಡರಂದು ನೀವು ಬರೆದ ಪತ್ರವನ್ನು ಕಂಡು ನನಗೆ ಆಶ್ಚರ್ಯವಾಯಿತು. ೨೮ನೇ ನವೆಂಬರ್, ೧೯೬೯ ರ ನಿಮ್ಮ ಪತ್ರಕ್ಕೆ ಉತ್ತರವಾಗಿ ನಿನ್ನೆಯ ತಾರೀಕಿನ ನನ್ನ ಪತ್ರದಲ್ಲಿ, ಈಚಿನ ದಿನಗಳಲ್ಲಿ ನಮ್ಮ ಪಕ್ಷವು ಎದರುರಿಸುತ್ತಿರುವ ಬಿಕ್ಕಟ್ಟಿನ ಹುಟ್ಟು ಮತ್ತು ಸ್ವರೂಪಗಳನ್ನು ಕುರಿತು ವಿವರಿಸಿದ್ದೇನೆ. ಅಲ್ಲಿ ಒತ್ತಿ ಹೇಳಿರುವ ಅಂಶಗಳನ್ನು ಪುನರುಕ್ತಿ ಮಾಡುವ ಬದಲು, ನಾನು ಹೇಳ ಬಯಸುವ ಅಂಶವೆಂದರೆ, ನಾವಿಲ್ಲಿ ಕೇವಲ ತಾಂತ್ರಿಕ ಹಾಗೂ ಕಾನೂನಾತ್ಮಕ ಸಮಸ್ಯೆಯ ಬಗ್ಗೆ ಮಾತ್ರ ಪ್ರಸ್ತಾಪಿಸುತ್ತಿಲ್ಲ ಎಂಬುದನ್ನು. ನಾವು ಎದುರಿಸುತ್ತಿರುವುದು ಸಾರತಃ ಒಂದು ರಾಜಕೀಯ ಬಿಕ್ಕಟ್ಟನ್ನು. ನಮ್ಮ ಪಕ್ಷದ ಸಂವಿಧಾನದ ಯಾವುದೋ ಒಂದು ವಿಧಿ ಅಥವಾ ವಾಕ್ಯದ ಬಗ್ಗೆ ವ್ಯಾಖ್ಯಾನಮಾಡುವುದೆಂದರೆ ಕಾಗದದ ಮೇಲೆ ಗೀಚುವ ವಿಫಲ ಪ್ರಯತ್ನ, ಅಷ್ಟೆ. ದೇಶವು ಇಂದು ಎದುರಿಸುತ್ತಿರುವ ಸಾಮಾಜಿಕ ಆರ್ಥಿಕ ಸಮಸ್ಯೆಗಳನ್ನು ನೋಡುವ ದೃಷ್ಟಿಕೋನದಲ್ಲಿನ ತೀವ್ರ ಭಿನ್ನತೆ ಎಂಬುದನ್ನು ನಾವು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕಾಗಿದೆ.

ನಾನು ಈಚೆಗೆ ಕೈಗೊಂಡಿರುವ ಕ್ರಮಗಳನ್ನು ಬಹುಸಂಖ್ಯಾತ ಜನರೂ ಪಕ್ಷದ ವಿವಿಧ ವರ್ಗದ ಕಾರ್ಯಕರ್ತರೂ ಪ್ರಬಲವಾಗಿ ಬೆಂಬಲಿಸಿದ್ದಾರೆಂಬುದರಲ್ಲಿ ಸಂಶಯವೇ ಇಲ್ಲ. ಒಂದು ಪ್ರಜಾಸತ್ತಾತ್ಮಕ ಸಂಘಟನೆಯಾದ ಕಾಂಗ್ರೆಸ್ ಪಕ್ಷವು ನಮ್ಮ ದೇಶದ ಬಹುಜನರ ಹಾಗೂ ಪಕ್ಷದ ಸದಸ್ಯರ ಆಶೋತ್ತರಗಳಿಗೆ ಸ್ಪಂದಿಸಿ ಪ್ರತಿಕ್ರಿಯಿಸಬೇಕಾದುದು ಆವಶ್ಯವಾಗಿದೆ. ಪ್ರಸ್ತುತ ಸನ್ನಿವೇಶದಲ್ಲಿ ನನ್ನಿಂದ ನಿರೀಕ್ಷಿಸಲಾಗುವ ಕರ್ತವ್ಯಗಳನ್ನು ಕಾಂಗ್ರೆಸ್‌ನ ಸಂಸದೀಯ ಪಕ್ಷದ ನಾಯಕಿಯಾಗಿ ನಿರ್ವಹಿಸುವುದರಿಂದ ನಾನು ನುಣುಚಿಕೊಳ್ಳಲಾರೆ. ನಾನು ಪ್ರತಿಪಾದಿಸುತ್ತಿರುವ ನೀತಿಗಳನ್ನೂ ಕಾರ್ಯಕ್ರಮಗಳನ್ನೂ ಎಐಸಿಸಿಯ ಸದಸ್ಯರುಗಳು ಹಾಗೂ ಪ್ರತಿನಿಧಿಗಳಲ್ಲಿ ಬಹುಮಂದಿ ಬೆಂಬಲಿಸುವರೆಂಬ ಬಗ್ಗೆ ನನಗೆ ಅನುಮಾನವೇ ಇಲ್ಲ. ಅನಿವಾರ್ಯವೇ ಆದರೆ, ಇದನ್ನು ಪರೀಕ್ಷೆಗೊಡ್ಡ ಬಹುದಾದ ಐಕ್ಯಕ ವೇದಿಕೆಯಾದ ಎಐಸಿಸಿ ಅಥವಾ ಕಾಂಗ್ರೆಸ್‌ನ ಸರ್ವಸದಸ್ಯರ ಸಭೆಯನ್ನು ಕರೆದು ಪ್ರಜಾಸತ್ತಾತ್ಮಕ ರೀತಿಯಲ್ಲಿ ನಿರ್ಧಾರವನ್ನು ತೆಗೆದುಕೊಳ್ಳುವುದು.

ಎಐಸಿಸಿಯ ೪೦೦ಕ್ಕೂ ಹೆಚ್ಚು ಮಂದಿ ಸದಸ್ಯರುಗಳು ಎಐಸಿಸಿ ಅಧಿವೇಶನವನ್ನು ಕರೆದು, ಬೇಡಿಕೆಯ ಪತ್ರದಲ್ಲಿ ಸೂಚಿಸಿರುವ ನಿರ್ದಿಷ್ಟ ನಿರ್ಣಯವನ್ನು ಚರ್ಚಿಸಲು ಸಂವಿಧಾನದ ವಿಧಿ ೧೨ (ಬಿ) (ಡಿ)ಗಳಡಿಯಲ್ಲಿ ಕಾರ್ಯಕಾರಿ ಸಮಿತಿಯನ್ನು ಕೇಳಿ ಕೊಂಡಿರುವುದು ಈಗ ಸರ್ವವಿದಿತ ವಿಷಯವಾಗಿದೆ. ರಾಷ್ಟ್ರದ ಸಮಸ್ಯೆಗಳಿಗೆ ಕುರಿತ ನಮ್ಮ ದೃಷ್ಟಿಕೋನದ ಬಗ್ಗೆ ಬಹುಸಂಖ್ಯಾತ ಸದಸ್ಯರು ಬೇಡಿಕೆ ಪತ್ರದಲ್ಲಿ ಸ್ಪಷ್ಟವಾಗಿ ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ವಿಶೇಷ ಸಭೆ ನಡೆಸಬೇಕೆಂದು ಕೋರುವ ಎಐಸಿಸಿ ಸದಸ್ಯರ ಪ್ರಜಾಸತ್ತಾತ್ಮಕವೂ ಸಂವಿಧಾನಬದ್ಧವೂ ಆದ ಹಕ್ಕನ್ನು ನೀವು ಮತ್ತು ನಿಮ್ಮನ್ನು ಬೆಂಬಲಿಸುವ ಕಾರ್ಯಕಾರಿ ಸಮಿತಿಯ ಸದಸ್ಯರುಗಳು ಅಸಮರ್ಥ ನೀಯವೂ ಕ್ಷುಲ್ಲಕವೂ ಆದ ರೀತಿಯಲ್ಲಿ ಹಾಗೂ ಈ ಬಗೆಯ ಜಾಣತನದ ನೆಲೆಯಲ್ಲಿ ಕಡೆಗಣಿಸುವಿರಿ ಎಂಬದನ್ನು ಯಾರೂ ನಿರೀಕ್ಷಿಸಿರಲಿಲ್ಲ.

ಹೀಗಾಗಿ ಪಕ್ಷದ ಸಂವಿಧಾನವನ್ನು ಉಲ್ಲಂಘಿಸಿರುವುರು ಯಾರು ಎಂಬುದನ್ನು ನಾನು ವಿನಮ್ರವಾಗಿ ಕೇಳಬಯಸುತ್ತೇನೆ. ಸಂವಿಧಾನಬದ್ಧವಾದ ರೀತಿಯಲ್ಲಿ ನಿಮಗೆ ಬೇಡಿಕೆ ಪತ್ರವನ್ನು ಸಲ್ಲಿಸಿರುವವರೋ ಅಥವಾ ಬೇಡಿಕೆಯಂತೆ ಅಧಿವೇಶನವನ್ನು ಕರೆಯುವ ಕರ್ತವ್ಯವನ್ನು ನಿರ್ಲಜ್ಜೆಯಿಂದ ಮಾಡದಿರುವ ನೀವೋ? ವಿಧಿ ೧೨ (ಬಿ)(ಡಿ) ಯು ಈ ಕೆಳಗಿನಂತಿದೆ:

"ಎಐಸಿಸಿಯು ಕಾರ್ಯಕಾರಿ ಸಮಿತಿಯು ಬಯಸಿದಷ್ಟು ಸಲ ಅಥವಾ ಸಂಪೂರ್ಣ ಮತದಾನದ ಹಕ್ಕನ್ನು ಹೊಂದಿರುವ ಎಐಸಿಸಿಯ ಒಟ್ಟು ಸದಸ್ಯಬಲದಲ್ಲಿ ಶೇಕಡ ೨೦ಕ್ಕೆ ಕಡಿಮೆ ಇಲ್ಲದಷ್ಟು ಸಂಖ್ಯೆಯ ಸದಸ್ಯರು ಬಯಸಿ ಒಟ್ಟಾಗಿ ಪತ್ರವನ್ನು ಸಲ್ಲಿಸಿದಾಗ, ಸೇರಬಹುದು. ಅಂತಹ ಬೇಡಿಕೆ ಪತ್ರದಲ್ಲಿ ಬಯಸಿರುವ ಎಐಸಿಸಿ ಸಭೆಯು ಏತಕ್ಕೆ ಸೇರಬೇಕೆಂಬ ಉದ್ದೇಶವನ್ನು ನಿರ್ದಿಷ್ಟಪಡಿಸಿರಬೇಕು. ಅಂಥ ಬೇಡಿಕೆ ಪತ್ರವು ತಲುಪಿದ ಎರಡು ತಿಂಗಳೊಳಗಾಗಿ ಸದರಿ ಸಭೆಯನ್ನು ಕರೆಯತಕ್ಕದ್ದು, ಆದರೆ ಒಂದು ವರ್ಷಧಲ್ಲಿ ಇಂತಹ ಒಂದಕ್ಕಿಂತ ಹೆಚ್ಚು ಸಭೆಯನ್ನು ಕರೆಯಲಾಗದು. ಹೀಗೆ ಬಯಸಿದ ಸಭೆಯಲ್ಲಿ ಕಾರ್ಯಕಾರಿ ಸಮಿತಿಯು ಮಿಕ್ಕ ವಿಷಯಗಳನ್ನೂ ಚರ್ಚೆಗೆಂದು ಕೈಗೆತ್ತಿಕೊಳ್ಳಬಹುದು."

ಈ ವಿಧಿಯನ್ನು ಅರ್ಥಮಾಡಿಕೊಳ್ಳಲು ಕಾನೂನಿನ ವಿಶೇಷ ತಿಳಿವಳಿಕೆಯ ಆವಶ್ಯಕತೆಯೇನೂ ಇಲ್ಲ, ಬೇಡಿ ಬಯಸಿದ ಸಭೆಯನ್ನು ಕರೆಯದಿರುವ ಯಾರದೇ ವಿವೇಚನೆಗೆ ಈ ವಿಧಿಯು ಅವಕಾಶ ನೀಡುವುದಿಲ್ಲ.

ಎಐಸಿಸಿಯ ಶೇಕಡ ೫೦ ಕ್ಕಿಂತಲೂ ಹೆಚ್ಚಿನ ಪ್ರಮಾಣದ ಸದಸ್ಯರು ಸಭೆಗಾಗಿ ಒತ್ತಾಯಿಸಿದಾಗ, ಅದನ್ನು ತಿರಸ್ಕರಿಸುವ ಆವಶ್ಯಕತೆಯಿತ್ತೇ? ಈ ನಿರ್ಣಏವು ನಿಮ್ಮ

ಮೇಲಿನ ಅವಿಶ್ವಾಸವಾಗುವುದೆಂದು ಆರೋಪಿಸಿದ್ದೀರಿ. ನೀವು ಹಾಗೆ ಭಾವಿಸುವುದಾದರೆ, ಒಂದು ರಾಜಕೀಯ ಪಕ್ಷದ ಮುಖ್ಯಸ್ಥರಾಗಿ, ಸದಸ್ಯರ ಅಭಿಪ್ರಾಯಗಳನ್ನು ತಿಳಿಯಲೋಸುಗ ಸಭೆಯನ್ನು ಕರೆಯುವುದು ಮತ್ತಷ್ಟು ಆವಶ್ಯಕವಾಗುವುದಿಲ್ಲವೇ? ನಿರ್ಣಯವನ್ನು ನಿಮ್ಮ ವಿರುದ್ಧದ ಅವಿಶ್ವಾಸ ನಿರ್ಣಯ ಎಂದು ವರ್ಣಿಸುವುದು ವಸ್ತುಸ್ಥಿತಿಯನ್ನು ತಿರುಚುವ ಪ್ರಯತ್ನ ಎಂದು ಭಾವಿಸಬೇಕಾಗುತ್ತದೆ. ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಯ ಬಗ್ಗೆ ಕಾಳಜಿಯಿರುವ ಮತ್ತು ನಮ್ಮ ಪಕ್ಷ ಮತ್ತದರ ನಾಯಕರು ಕಾರ್ಯನಿರ್ವಹಿಸಬೇಕೆಂದು ನಿರೀಕ್ಷಿಸುವ ನನಗಾಗಲೀ ಬೇರೆ ಯಾರಿಗೇ ಆಗಲಿ, ಸಭೆ ಸೇರಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ನಮ್ಮ ಸದಸ್ಯರ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸುವುದನ್ನು ಕಂಡು ಸುಮ್ಮನೆ ಕುಳಿತಿರುವುದು ಸಾಧ್ಯವಿಲ್ಲ.

ನಾನು ಮತ್ತು ನನ್ನ ಸಹೋದ್ಯೋಗಿಗಳು ಈಗ ಮಾಡಿರುವಂತೆ ಯಾವುದೇ ಬಗೆಯಲ್ಲಿ ಪ್ರತಿಕ್ರಿಯಿಸದೆ ಬಾಯಿ ಮುಚ್ಚಿಕೊಂಡು ಕುಳಿತಿದ್ದರೆ ನಮ್ಮ ಕರ್ತವ್ಯನಿರ್ವಹಣೆಯಲ್ಲಿ ಸೋತಂತಾಗುತ್ತಿತ್ತು. ಇದಕ್ಕೆ ನಮ್ಮ ಪಕ್ಷದ ಬಹುತೇಕ ಸದಸ್ಯರ ಮತ್ತು ಜನತೆಯ ಸಂಪೂರ್ಣ ಬೆಂಬಲವಿದೆಯೆಂಬ ಬಗ್ಗೆ ನನಗೆ ಯಾವುದೇ ಅನುಮಾನವಿಲ್ಲ. ಪಕ್ಷದ ಶಿಸ್ತನ್ನು ಮುರಿದ ಹಾಗೂ ಸಂವಿಧಾನವನ್ನು ಗಂಭೀರ ರೀತಿಯಲ್ಲಿ ಉಲ್ಲಂಘಿಸಿರುವ ಆರೋಪವನ್ನು ನನ್ನ ಮೇಲೆ ಹೊರಿಸಿರುವ ನಿಮ್ಮ ಆರೋಪವನ್ನು, ಕುತಂತ್ರದ್ದು ಎನ್ನುವುದಕ್ಕಿಂತ ದುರದೃಷ್ಟಕರ ಎನ್ನಬೇಕು. ವಿಚಿತ್ರ ತರ್ಕವನ್ನೊಡ್ಡಿ, ಬೇಡಿಕೆಯಿಟ್ಟಿರುವ ಸಭೆಯನ್ನು ಕರೆದಿರುವುದನ್ನು ಕಾನೂನುಬಾಹಿರ, ಸಂವಿಧಾನಬಾಹಿರ ಹಾಗೂ ಪಕ್ಷದ ಸಂವಿಧಾನದ ಮತ್ತು ಕಾರ್ಯಕಾರಿ ಸಮಿತಿಯ ನಿರ್ಣಯದ ಉಲ್ಲಂಘನೆ ಎಂದು ನೀವು ವರ್ಣಿಸಿರುವಿರಿ.

ನಿಮ್ಮ ಆಪಾದನೆಯನ್ನು ಖಂಡತುಂಡವಾಗಿ ಅಲ್ಲಗಳೆದು, ಅದಕ್ಕೆ ವ್ಯತಿರಿಕ್ತವಾಗಿ, ನೀವು ಮತ್ತು ಕಾರ್ಯಕಾರಿ ಸಮಿತಿಯಲ್ಲಿನ ನಿಮ್ಮ ಬೆಂಬಲಿಗರು, ಎಐಸಿಸಿ ಸಭೆಯನ್ನು ಕರೆಯುವಂತೆ ಮಾಡಿಕೊಂಡ ನ್ಯಾಯಯುತ ಕೋರಿಕೆಯನ್ನು ತಿರಸ್ಕರಿಸಿ ನಮ್ಮ ಪಕ್ಷದ ಸಂವಿಧಾನವನ್ನು ತೀವ್ರ ಸ್ವರೂಪದಲ್ಲಿ ಮುರಿದಿದ್ದೀರಿ ಎಂದು ಹೇಳಬಯಸುತ್ತೇನೆ. ಅಲ್ಲದೆ, ನಿಮ್ಮ ನ್ಯಾಯಬಾಹಿರ ಉದ್ದೇಶ ಸಾಧನೆಗಾಗಿ, ಮೂವರು ಗೌರವಯುತ ಸದಸ್ಯರನ್ನು ಕಾರ್ಯಕಾರಿ ಸಮಿತಿಯಿಂದ ತೆಗೆದುಹಾಕಲು ಸನ್ನಾಹ ಮಾಡುವ ತಪ್ಪನ್ನೆಸಗಿದ್ದೀರಿ. ಅನ್ಯಾಯದ ಮಾರ್ಗದಲ್ಲಿ ಸದಸ್ಯರನ್ನು ಹೊರಹಾಕಿದರೆ ಕಾರ್ಯಕಾರಿ ಸಮಿತಿಯ ಯಾವುದೇ ಸಭೆಯು ಸಿಂಧುವಾಗುವುದಿಲ್ಲವೆಂದು ನಿಮ್ಮನ್ನು ಎಚ್ಚರಿಸುತ್ತಿದ್ದೇನೆ.

ನಾವು ಮಾಡಿರುವ ಯಾವ ಕಾರ್ಯವೂ ನ್ಯಾಯಬಾಹಿರವೂ ಅಯುಕ್ತವೂ ಆಗಿರದ ಕಾರಣದಿಂದಾಗಿ ನಾನು ಯಾವುದೇ ವಿವರಣೆಯನ್ನು ನೀಡುವ ಆವಶ್ಯಕತೆ

ಯಿಲ್ಲವೆಂದು ತಿಳಿದಿದ್ದೇನೆ. ಅದರ ಬದಲು, ಎಐಸಿಸಿ ಸದಸ್ಯರ ಹಕ್ಕುಗಳನ್ನು ಮೊಟಕು ಗೊಳಿಸಿ ಬಾಯಿ ಮುಚ್ಚಿಸುವ ಪ್ರಯತ್ನ ಮಾಡುವ ಮೂಲಕ ಪಕ್ಷದ ಸಂವಿಧಾನವನ್ನು ಉಲ್ಲಂಘಿಸಿ ಮತ್ತು ಪ್ರಜಾಸತ್ತಾತ್ಮಕ ತತ್ವಗಳನ್ನು ಗಾಳಿಗೆ ತೂರಿ ಪಕ್ಷದಲ್ಲಿಯೂ ದೇಶ ದಲ್ಲಿಯೂ ಬಿಕ್ಕಟ್ಟನ್ನು ಸೃಷ್ಟಿಸಿರುವವರು, ವಿವರಣೆ ನೀಡಬೇಕಾಗಿದೆ. ನೀವು ನನ್ನಿಂದ ವಿವರಣೆಯನ್ನು ಬಯಸಿರುವುದೇ, ಪಕ್ಷವು ಒಡೆಯುವ ಸಂಭವವನ್ನೂ ಲೆಕ್ಕಿಸದೆ, ಪಕ್ಷದ ಬಹುಸಂಖ್ಯಾತ ಸದಸ್ಯರ ಅಭಿಪ್ರಾಯವನ್ನು ಪ್ರತಿನಿಧಿಸುತ್ತಿದ್ದರೂ ನಿಮ್ಮ ಮೂಗಿನ ನೇರಕ್ಕೆ ನಡೆದುಕೊಳ್ಳದವರನ್ನು ಪಕ್ಷದಿಂದ ಹೊರಹಾಕುವ ಹುನ್ನಾರ ಮಾಡುತ್ತಿದ್ದಾರೆ ಎಂಬ ಸಾಮಾನ್ಯ ಭಾವನೆಗೆ ಪುಷ್ಟಿಕೊಡುತ್ತದೆ. ನಿಮ್ಮೊಡನೆ ಭಿನ್ನಾಭಿಪ್ರಾಯ ಹೊಂದಿದವ ರನ್ನು ಮತ್ತು ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸುವವರನ್ನು ಬೆದರಿಸುವುದೇ ನಿಮ್ಮ ಆಸೆಯಾಗಿದ್ದರೆ ನಿಮಗೆ ನಿರಾಶೆ ಕಾದಿದೆ.

ಪತ್ರವನ್ನು ಮುಗಿಸುವ ಮುನ್ನ, ನೀವು ತೆಗೆದುಕೊಳ್ಳುತ್ತಿರುವ ಕ್ರಮಗಳ ಬಗ್ಗೆ ಮತ್ತೊಮ್ಮೆ ಆಲೋಚನೆ ಮಾಡಿ ಪುನರ್‌ಪರಿಶೀಲನೆ ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ. ಪಕ್ಷವೊಂದರ ಪ್ರಮುಖರಾಗಿ ನಿಮ್ಮ ಮೇಲೆ ಗುರುತರವಾದ ಹೊಣೆಗಾರಿಕೆಯಿದೆ; ಆದಷ್ಟು ಬೇಗ ನಮ್ಮ ಪಕ್ಷದ ನಿರ್ಧಾರವನ್ನು ಪಡೆದು ಅದಕ್ಕೆ ಬದ್ಧರಾಗಿರಲು ಈಗಲೂ ಸಾಧ್ಯವಿಲ್ಲವೇ ಎಂದು ನಿಮ್ಮಲ್ಲಿ ಅತ್ಯಂತ ಪ್ರಾಮಾಣಿಕ ಮನಸ್ಸಿನಿಂದ ಮನವಿ ಮಾಡಿಕೊಳ್ಳುತ್ತೇನೆ.

ಗೌರವಾದರಗಳೊಂದಿಗೆ,

ನಿಮ್ಮ ವಿಶ್ವಾಸದ,
ಸಹಿ/ ಇಂದಿರಾ ಗಾಂಧಿ

* * *

(ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರಿಗೆ ನವೆಂಬರ್ ೧೧, ೧೯೬೯ ರಂದು ಬರೆದ ಪತ್ರ)

ಪ್ರಿಯ ಇಂದಿರಾಜಿ,

ಅಕ್ಟೋಬರ್ ೨೮ ನೇ ತಾರೀಕಿನ ನನ್ನ ಪತ್ರಕ್ಕೆ ಉತ್ತರವಾಗಿ ನೀವು ನವೆಂಬರ್, ೩ ರಂದು ಬರೆದ ಪತ್ರವು ಕೆಲವು ಗಂಟೆಗಳ ಹಿಂದೆಯಷ್ಟೇ ನನ್ನ ಕೈಸೇರಿತು. ಆ ಹೊತ್ತಿಗಾಗಲೇ ಅದರಲ್ಲಿನ ವಿವರಗಳನ್ನು ಆಕಾಶವಾಣಿಯ ಸುದ್ದಿ ಪ್ರಸಾರದಲ್ಲಿ ಬಿತ್ತರಿಸಿ ದ್ದನ್ನು ನಾನು ಕೇಳಿದ್ದೆ. ತಕ್ಷಣವೇ ಅದಕ್ಕೆ ನಾನು ಉತ್ತರಿಸುವವನಿದ್ದೆ. ಆದರೆ ನಮ್ಮ ಕೆಲವು ಮಿತ್ರರು ಮಾಡುತ್ತಿರುವ ಪ್ರಯತ್ನಗಳು, ನಾನು ನಿಮಗೆ ಅಕ್ಟೋಬರ್,

೨೮ ನೇ ತಾರೀಕಿನಂದು ಬರೆದ ಪತ್ರದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಹಾಗೂ ಭಯಗಳ ಬಗ್ಗೆ ಚರ್ಚೆ ಮಾಡಲು ಅವಕಾಶ ಉಂಟುಮಾಡಬಹುದೆಂದು ನಿರೀಕ್ಷಿಸುತ್ತಿದ್ದೆ. ನಾವು ಭೋಜನಕೂಟದಲ್ಲಿ ಭೇಟಿಯಾದಾಗಲೂ ಆ ಮೂಲಭೂತ ಪ್ರಶ್ನೆಗಳ ಬಗ್ಗೆ ಪ್ರಸ್ತಾಪಿಸುವುದು ಆವಶ್ಯಕವೆಂದು ನಿಮಗೆ ಅನ್ನಿಸದಿದ್ದುದು ವಿಷಾದಕರ. ಆ ಕಾರಣ ದಿಂದಲೇ ಈ ಪತ್ರವನ್ನು ಬರೆಯುವುದು ಅನಿವಾರ್ಯವಾಗಿದೆ.

ನಿಮ್ಮ ಪತ್ರವನ್ನು ತುಂಬ ಎಚ್ಚರಿಕೆಯಿಂದಲೂ ಗಮನ ಹರಿಸಿಯೂ ಓದಿದ್ದೇನೆ. ಅದನ್ನು ಓದುವಾಗ, ತಂತ್ರಗಾರಿಕೆ ಹಾಗೂ ಅಶಿಸ್ತುಗಳು ಪಕ್ಷಕ್ಕೆ ತಂದೊದಗಿಸಿರುವ ದುಸ್ಥಿತಿಯ ಬಗ್ಗೆ ಎಲ್ಲಾದರೂ ಕಿಂಚಿತ್ ವಿಷಾದವು ಕಾಣಿಸುತ್ತದೆಯೇ, ನೀವು ಹೋಗಿ ತಲುಪಿರುವ ಅಂಚಿನಿಂದ ನೀವು ಹಿಂದಿರುಗಬಹುದೇ ಎಂಬ ಎಂಬ ಆಶಾಕಿರಣ ವೊಂದು ಮೂಡುವುದೇ ಎಂದು ಕಾತರಿಸುತ್ತಿದ್ದೆ. ಆದರೆ ನನ್ನ ನಿರೀಕ್ಷೆ ಭರವಸೆಗಳು ಹುಸಿಯಾದವು ಎಂಬುದು ನಿಮ್ಮ ಪತ್ರವನ್ನು ಓದಿದ ಮೇಲೆ ಖಾತರಿಯಾಯಿತು. ನಿಮ್ಮ ಮನೋಭಾವ ಹಾಗೂ ಕೃತಿಗಳ ಬಗ್ಗೆ ನಮ್ಮಲ್ಲಿನ ಕೆಲವರಿಗಿರುವ ಆತಂಕಗಳನ್ನು ನಿವಾರಿಸುವ ಪ್ರಯತ್ನ ಮಾಡುವ ಬದಲು, ನಾನು ಪ್ರಸ್ತಾಪಿಸಿರುವ ಮೂಲ ಪ್ರಶ್ನೆಗಳನ್ನು ನೀವು ಗಮನಿಸಿಯೇ ಇಲ್ಲ, ಅಸತ್ಯದ ಪುನರಾವರ್ತನೆಯು ಕೊನೆಗೆ ವಾಸ್ತವ ಹಾಗೂ ಕಲ್ಪನೆಗಳ ನಡುವಣ ವ್ಯತ್ಯಾಸವನ್ನು ಅಳಿಸಿಹಾಕುವುದೆಂಬ ಆಸೆಯಿಂದ, ಅದರ ಬದಲು ಅರ್ಧಸತ್ಯ ಮತ್ತು ಅಸತ್ಯಗಳನ್ನು ಸುಳಿದಾಡಿಸಿದ್ದೀರಿ.

ಐಕಮತ್ಯಕ್ಕಾಗಿ ಮನವಿ ಮಾಡಿಕೊಳ್ಳುತ್ತಲೇ "ಪಕ್ಷದ ಐಕಮತ್ಯವನ್ನು ಕಡೆಗಣಿಸುವ" ರೀತಿಯ ಕ್ರಮಗಳನ್ನು ನಾನು ತೆಗೆದುಕೊಳ್ಳುತ್ತಿದ್ದೇನೆಂದು ಆರೋಪಿಸಿದ್ದೀರಿ. ಶ್ರೀ ಫಕ್ರುದ್ದೀನ್ ಆಲಿ ಅಹಮದ್, ಶ್ರೀ ಸುಬ್ರಹ್ಮಣ್ಯಂ ಮತ್ತು ಡಾ. ಶಂಕರ ದಯಾಳ ಶರ್ಮ ಇವರುಗಳ ಮೇಲೆ ನಾನು ತೆಗೆದುಕೊಂಡ ಕ್ರಮಗಳನ್ನು ಐನಾತಿ ಕಾನೂನುಬಾಹಿರ ವಾದವು ಎಂದು ಬಣ್ಣಿಸಿದ್ದೀರಿ. ನಾನು ಶ್ರೀ ಸುಬ್ರಹ್ಮಣ್ಯಂ ಅವರನ್ನು ತೆಗೆದುಹಾಕಲಿಲ್ಲ ವೆಂಬುದು ನಿಮಗೆ ಚೆನ್ನಾಗಿಯೇ ತಿಳಿದಿದೆ. ಶ್ರೀ ಸುಬ್ರಹ್ಮಣ್ಯಂ ಅವರು ತಮಿಳು ನಾಡು ಕಾಂಗ್ರೆಸ್ ಸಮಿತಿಯ ಅಧ್ಯಕ್ಷಸ್ಥಾನದಿಂದ ತಾವೇ ಹೊರಬಂದದ್ದರಿಂದ ತಮ್ಮ ಪದನಿಮಿತ್ತ ಸದಸ್ಯತ್ವವನ್ನು, ಹೀಗಾಗಿ ಕಾರ್ಯಕಾರಿ ಸಮಿತಿಯ ಚುನಾಯಿತ ಸದ್ಯತ್ವ ವನ್ನೂ ಕಳೆದುಕೊಂಡರು. ನವೆಂಬರ್ ೧ ರಂದು ಕಾರ್ಯಕಾರಿ ಸಮಿತಿಯ ಸಭೆ ನಡೆಯುವ ಮೊದಲು ನಾನು ಡಾ. ಶಂಕರ ದಯಾಳ ಶರ್ಮ ಅವರನ್ನು ಸದಸ್ಯತ್ವದಿಂದ ತೆಗೆದುಹಾಕಲಿಲ್ಲವೆಂಬುದೂ ನಿಮಗೆ ಚೆನ್ನಾಗಿ ಗೊತ್ತಿದೆ. ಅವರು ಆ ದಿನ ಕಾರ್ಯಕಾರಿ ಸಮಿತಿಯ ಸಭೆಗೆ ಹಾಜರಾಗಬಹುದಿತ್ತು. ಆದರೆ ಗೈರುಹಾಜರಾದರು. ಇಂತಹ ಮುಂದು

ವರಿದ ಅವರ ವರ್ತನೆಯು ವಿಶ್ವಸನೀಯತೆ ಹಾಗೂ ಶಿಸ್ತುಗಳ ಉಲ್ಲಂಘನೆಯಾಗಿ ಪ್ರಧಾನ ಕಾರ್ಯದರ್ಶಿ ಸ್ಥಾನವನ್ನು ತಾವು ಕಳೆದುಕೊಳ್ಳುವ ಬಗ್ಗೆ ಅವರಿಗೆ ಅರಿವಿದ್ದಿರಬೇಕು. ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಲು ಅನುಕೂಲವಾಗುವಂತೆ ಡಾ. ಶಂಕರ ದಯಾಳ ಶರ್ಮ ಅವರನ್ನು ಕಾರ್ಯಕಾರಿ ಸಮಿತಿಗೆ ನಾಮಕರಣ ಮಾಡಿದವನು ನಾನೇ ಎಂಬುದನ್ನು ನಿಮಗೆ ನೆನಪಿಸಬಯಸುತ್ತೇನೆ. ಹೀಗಾಗಿ ಪ್ರಧಾನ ಕಾರ್ಯದರ್ಶಿ ಸ್ಥಾನವನ್ನು ಕಳೆದುಕೊಂಡದ್ದರಿಂದ ಅವರು ತಮ್ಮ ಸಮಿತಿಯ ಸದಸ್ಯತ್ವದಲ್ಲಿ ಮುಂದುವರಿಯಲು ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಗಿದೆ. ಶ್ರೀ ಫಕ್ರುದ್ದೀನ್ ಆಲಿ ಅಹಮದ್ ಅವರನ್ನು ಕಾರ್ಯಕಾರಿ ಸಮಿತಿಯ ಸದಸ್ಯತ್ವದಿಂದ ತೆಗೆದುಹಾಕುವ ಕ್ರಮವನ್ನು ನೀವು ಅಸಾಧಾರಣ ಹಾಗೂ ನ್ಯಾಯಬಾಹಿರ ಎಂದು ವರ್ಣಿಸಿದ್ದೀರಿ. ಆದರೆ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದ ಅವರ ವರ್ತನೆಯು ಅಸಾಧಾರಣ ಹಾಗೂ ನ್ಯಾಯಬಾಹಿರವಾಗಿರಲಿಲ್ಲವೇ ಎಂದು ನಿಮ್ಮನ್ನು ಕೇಳಬೇಕಾಗಿದೆ. ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಸುದೀರ್ಘ ಇತಿಹಾಸದಲ್ಲಿ ಕಾರ್ಯಕಾರಿ ಸಮಿತಿಯ ಸದಸ್ಯರೊಬ್ಬರು, ಶ್ರೀ ಫಕ್ರುದ್ದೀನ್ ಆಲಿ ಅಹಮದ್ ಅವರು ಮಾಡಿದಂತೆ, ನವೆಂಬರ್ ೧ ರಂದು ಕಾರ್ಯಕಾರಿ ಸಮಿತಿಯ ಸಭೆಯು ನಡೆಯುವ ಕೆಲಲವು ದಿನಗಳ ಹಿಂದೆಯಷ್ಟೇ ಪತ್ರಿಕಾ ಗೋಷ್ಠಿಯೊಂದನ್ನು ನಡೆಸಿ, ಅದರಲ್ಲಿ ಪಕ್ಷದ ಅಧ್ಯಕ್ಷರ ವಿರುದ್ಧ ಸಾರ್ವಜನಿಕವಾಗಿ ಅಪಪ್ರಚಾರ ಮಾಡುವಂಥ ಆಶಿಸ್ತನ್ನು ಮುಂದುವರಿಸಿಕೊಂಡು ಬಂದ ಬೇರಾವುದಾದರೂ ಘಟನೆಯಿದೆಯೇ? ಅಸಾಧಾರಣ ಸ್ವರೂಪದ ಆಶಿಸ್ತು ಮತ್ತು ಪಕ್ಷದ್ರೋಹಗಳು ಅಸಾಧಾರಣ ಶಿಕ್ಷೆಗೆ ಅರ್ಹವಾಗುತ್ತವೆ.

ಶ್ರೀ ಕಮಲಾಪತಿ ತ್ರಿಪಾಠಿ, ಶ್ರೀ ವೆಂಕಟರತ್ನಂ ಮತ್ತು ಶ್ರೀ ಎ.ಪಿ. ಶರ್ಮ ಅವರ ವಿರುದ್ಧ ನಾನು "ಸ್ಪಷ್ಟವಾದ ಕಾನೂನುಬಾಹಿರ ಕ್ರಮ"ವನ್ನು ಕೈಗೊಂಡೆನೆಂದು ನೀವು ಹೇಳಿ, ಹಾಗೆ ಮಾಡಿದ್ದು ಅವರು ನಿಮ್ಮ ಬೆಂಬಲಿಗರು ಎಂಬ ಕಾರಣಕ್ಕೆ ಎಂಬ ಇಂಗಿತ ವ್ಯಕ್ತಪಡಿಸಿದ್ದೀರಿ. ಸಚಿವರಾಗುವ ಯಾರೇ ಆಗಲಿ ಪಿಸಿಸಿಯ ಅಧ್ಯಕ್ಷ ಅಥವಾ ಬೇರಾವುದೇ ಪದಾಧಿಕಾರಿಯಾಗಲು ಅವಕಾಶವಿಲ್ಲ ಎಂಬ ಕಾಂಗ್ರೆಸ್ ನಿರ್ಣಯದ ಬಗ್ಗೆ ನಿಮಗೆ ಅರಿವಿಲ್ಲವೇ? ನಿಮ್ಮ ಹಾಗೂ ನಿಮ್ಮ ಬೆಂಬಲಿಗರ ವಿರುದ್ಧ ಕ್ರಮಕೈಗೊಳ್ಳಲು ಈ ನಿರ್ಣಯವನ್ನು ಈಚೆಗೆ ಮಾಡಲಾಯಿತೆಂಬುದು ನಿಮ್ಮ ಭಾವನೆಯೇ? ಹಾಗೆ ನೋಡಿದರೆ, ನಿಮ್ಮ ೮ ನೇ ಅಕ್ಟೋಬರ್ ಪತ್ರದಲ್ಲಿ ನೀವೇ ಇದು ದಶಕಗಳ ಹಿಂದೆ ಕೈಗೊಂಡದ್ದು ಎಂಬ ಮೂಲಕ ಈ ನಿರ್ಣಯದ ಕಡೆ ಗಮನ ಸೆಳೆದಿದ್ದೀರಿ. ಸಚಿವರಾದ ಪಿಸಿಸಿ ಅಧ್ಯಕ್ಷರುಗಳಿಗೆ ಈ ರೀತಿ ಪತ್ರ ಬರೆದ ಅನೇಕ ಪ್ರಸಂಗಗಳು ಹಿಂದೆಯೂ ನಡೆದಿವೆಯೆಂಬುದನ್ನು ನೀವು ನೆನೆಪಿಸಿಕೊಳ್ಳಬಹುದು.

ಎಸ್.ಪಿ. ಶರ್ಮ ಅವರ ವಿರುದ್ಧ ಯಾವುದೇ ಕ್ರಮವನ್ನೂ ಜರುಗಿಸಿದ ಬಗ್ಗೆ ನನ್ನ ನೆನಪಿಗೆ ಬರುತ್ತಿಲ್ಲ ಎಂಬುದನ್ನೂ ನಾನಿಲ್ಲಿ ಹೇಳಬೇಕಾಗಿದೆ. ಹೀಗಾಗಿ ಶ್ರೀ ಕಮಲಾಪತಿ ತ್ರಿಪಾಠಿ, ಶ್ರೀ ವೆಂಕಟರತ್ನಂ ಮತ್ತು ಶ್ರೀ ಎಸ್.ಪಿ. ಶರ್ಮ ಅವರುಗಳ ವಿರುದ್ಧ ನಾನು ಕಾನೂನುವಾಹಿರ ಕ್ರಮ ತೆಗೆದುಕೊಂಡಿದ್ದೇನೆಂದು ಹೇಗೆ ಹೇಳುವಿರಿ? ಕಾಂಗ್ರೆಸ್‌ನ ನಿರ್ಣಯಗಳನ್ನು ಎತ್ತಿ ಹಿಡಿಯುವುದೇ ಕಾನೂನು ಬಾಹಿರ ಕ್ರಮ ಎಂಬಂತೆ ನಿಮಗೆ ಕಾಣುತ್ತದೆಯೇ?

ನೀವು ಐಕಮತ್ಯ ನಿರ್ಣಯವನ್ನು ಉಲ್ಲಂಘಿಸಿಲ್ಲ ಹಾಗೂ ನೀವಾಗಲೀ ಬೇರಾವ 'ಜವಾಬ್ದಾರಿಯುತ ವ್ಯಕ್ತಿ'ಯಾಗಲೀ ಯಾವ ವ್ಯಕ್ತಿಯ ವಿರುದ್ಧವೂ ಒಂದೇ ಒಂದು ಮಾತನ್ನೂ ಆಡಿಲ್ಲ ಎಂದಿದ್ದೀರಿ. ನೀವು, ಶ್ರೀ ಜಗಜೀವನರಾಂ ಮತ್ತು ಶ್ರೀ ಫಕ್ರುದ್ದೀನ್ ಆಲಿ ಅಹಮದ್ ಅವರುಗಳು ನಿಮ್ಮ ಅನೇಕ ಭಾಷಣಗಳು ಮತ್ತು ಹೇಳಿಕೆಗಳಲ್ಲಿ ಹೇಳಿರುವ ಮಾತುಗಳನ್ನು ಉದ್ಧೃತಗೊಳಿಸುವ ಮೂಲಕ ಈ ಪತ್ರವನ್ನು ಲಂಬಿಸುವ ಇಚ್ಛೆ ನನಗಿಲ್ಲ. ಆದರೆ ಐಕಮತ್ಯ ನಿರ್ಣಯವನ್ನು ಅಂಗೀಕರಿಸಿದ ನಾಲ್ಕೇ ದಿನಗಳಲ್ಲಿ, ಆಗಸ್ಟ್ ೨೯ ರಂದು ಶ್ರೀ ಜಗಜೀವನರಾಂ ಅವರು ಪಟ್ನಾದಲ್ಲಿ ನೀಡಿದ, ಮತ್ತು ಮುಂಬಯಿಯಲ್ಲಿ ಕಾಂಗ್ರೆಸ್‌ನ ಐಕಮತ್ಯ ಮತ್ತು ನಾಯಕತ್ವದ ಬಗ್ಗೆ ನೀವು ನೀಡಿರುವ ಹೇಳಿಕೆ ಹಾಗೂ ಶ್ರೀ ಫಕ್ರುದ್ದೀನ್ ಆಲಿ ಅಹಮದ್ ಅವರು ಈಗಾಗಲೇ ಉಲ್ಲೇಖಿಸಿರುವ ದೆಹಲಿಯ ಪತ್ರಿಕಾ ಗೋಷ್ಠಿ– ಇವುಗಳ ಕಡೆಗೆ ಮಾತ್ರ ನಿಮ್ಮ ಗಮನವನ್ನು ಸೆಳೆಯಲು ಇಷ್ಟಪಡುತ್ತೇನೆ.

ರಾಷ್ಟ್ರಪತಿ ಚುನಾವಣೆಯ ಸಂದರ್ಭದಲ್ಲಿನ ನಿಮ್ಮ ಪಾತ್ರದ ಬಗ್ಗೆ ನಾನು ಎತ್ತಿರುವ ಪ್ರಶ್ನೆಗೆ, "ಅದೇ ಜಾಗದಲ್ಲಿ ಮತ್ತೆ ಮತ್ತೆ ಹೋಗುವುದು ಅರ್ಥವಿಲ್ಲದ್ದು" ಎಂದು ನುಡಿಯುವ ಮೂಲಕ ನೀವು ಜಾರಿಕೊಂಡಿದ್ದೀರಿ. ಈ ಪ್ರಶ್ನೆಯ ವಿಷಯದಲ್ಲಿ ನುಣುಚಿಕೊಳ್ಳುವ ನಿಮ್ಮ ಪ್ರಯತ್ನವು ಈ ವಿಷಯದ ಬಗೆಗಿನ ವಾಸ್ತವಾಂಶಗಳು ಸರ್ವವಿದಿತವಾದವು ಮತ್ತು ಅಲ್ಲಗಳೆಯಲು ಅಸಾಧ್ಯವಾದವು ಎಂಬ ಅಂಶವು ನಿಮಗೇ ಮನವರಿಕೆಯಾಗಿರುವುದರ ಕಾರಣದಿಂದಲೇ ಎಂದು ನನಗನ್ನಿಸುತ್ತದೆ. ಮೇ, ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ನಾನು ನಿಮ್ಮೊಡನೆ ಮಾತನಾಡಿದಾಗ, ರಾಷ್ಟ್ರಪತಿ ಸ್ಥಾನದ ಅಭ್ಯರ್ಥಿಯ ಆಯ್ಕೆಯ ಬಗೆಗಿನ ಚರ್ಚೆಯನ್ನು ಮುಂದಕ್ಕೆ ಹಾಕಿ ಎಂದು ನೀವು ಹೇಳಿದಿರೆಂಬ ನನ್ನ ಹೇಳಿಕೆಯನ್ನು ನೀವು ಅಲ್ಲಗಳೆದಿರುವುದರ ಕಡೆಗೆ ನಿಮ್ಮ ಗಮನ ಸೆಳೆಯಬೇಕಾಗಿದೆ. ನಿಮ್ಮ ಜ್ಞಾಪಕಶಕ್ತಿ ನಿಮಗೆ ಕೈಕೊಡುತ್ತಿರುವಂತೆ ಕಾಣುತ್ತದೆ. ಆದರೆ ಈ ವಿಷಯದ ಬಗ್ಗೆ ನಾನು ನಿಮ್ಮೊಡನೆ ಮೇ, ಜೂನ್ ಮತ್ತು ಜುಲೈ ತಿಂಗಳು

ಗಳಲ್ಲಿ ಮಾತನಾಡಿರುವುದು ನಿಶ್ಚಿತ. ಪ್ರತಿ ಬಾರಿಯೂ ನೀವು ಮುಂದಕ್ಕೆ ಹಾಕುತ್ತ, ನಿಮ್ಮ ಮನಸ್ಸಿನಲ್ಲಿ ಏನಿದೆ ಎಂಬ ಬಗ್ಗೆ ಬೆಂಗಳೂರಿನಲ್ಲಿ ಸಂಸದೀಯ ಮಂಡಳಿಯು ಸಭೆ ನಡೆಯುವ ಎರಡು ಗಂಟೆಗಳ ಮುನ್ನವಷ್ಟೇ ನಿಮ್ಮ ಒಲವು ಎತ್ತ ಕಡೆಗಿದೆ ಎಂಬ ಬಗ್ಗೆ ಸುಳಿವು ನೀಡಿದಿರಿ. ನಿಮ್ಮ ಸ್ವಂತ ಪಕ್ಷವನ್ನೇ ವಿಶ್ವಾಸಕ್ಕೆ ತೆಗೆದುಕೊಂಡು ಅಲ್ಲಿ ಒಮ್ಮತ ಮೂಡಿಸುವ ಪ್ರಯತ್ನ ಮಾಡುವ ಮುಂಚೆಯೇ ವಿರೋಧ ಪಕ್ಷಗಳ ಜೊತೆ ಚರ್ಚಿಸಿ ಒಮ್ಮತ ಮೂಡಿಸಲು ಮಾಡಿದ ನಿಮ್ಮ ಪ್ರಯತ್ನವು ಅಸಾಧಾರಣ ವಾದುದೇ ಸರಿ. ಶ್ರೀ ಗಿರಿಯವರ ಗೆಲವಿಗೆ ನೀವು ಪ್ರಯತ್ನಪಟ್ಟಿಲ್ಲವೆಂದು ಹೇಳಿದ್ದೀರಿ. ಇಂಥ ಹೇಳಿಕೆ ನೀಡಲು ನಿಮ್ಮ ಆತ್ಮಸಾಕ್ಷಿಯಾದರೂ ಹೇಗೆ ಅವಕಾಶವಿತ್ತಿತು ಎಂಬುದು ನನಗೆ ತಿಳಿಯದಾಗಿದೆ.

ಬೇಡಿಕೆಯನ್ನು ಪುರಸ್ಕರಿಸದ ಕಾರ್ಯಕಾರಿ ಸಮಿತಿಯ ಕ್ರಮವು ಸಂವಿಧಾನ ಬಾಹಿರವೆಂದೂ ಪ್ರಜಾಸತ್ತಾತ್ಮಕತೆಗೆ ವಿರುದ್ಧವಾದುದೆಂದೂ ಹೇಳಿದ್ದೀರಿ. ಈ ಬೇಡಿಕೆ ಯನ್ನು ಕಾರ್ಯಕಾರಿ ಸಮಿತಿಯು ತಿರಸ್ಕರಿಸಿದ್ದು ಏಕೆಂಬುದು ನಿಮಗೆ ಚೆನ್ನಾಗಿಯೇ ಗೊತ್ತಿದೆ. ಎಐಸಿಸಿಯ ಸಂವಿಧಾನಬದ್ಧ ವಿಷಯದ ಬಗ್ಗೆ ಚರ್ಚಿಸುವುದಾಗಿದ್ದರೆ ಎಐಸಿಸಿ ಸಭೆಯನ್ನು ಕರೆಯುವ ಬೇಡಿಕೆಯನ್ನು ಕಾರ್ಯಕಾರಿ ಸಮಿತಿಯು ಅಮಾನ್ಯ ಮಾಡುತ್ತಿರಲಿಲ್ಲ. ಮನವಿದಾರರ ನಿರ್ಣಯವನ್ನು ಅಡಗಿಸಿಕೊಂಡದ್ದರಿಂದಾಗಿ ಅದು ಅಧ್ಯಕ್ಷರ ವಿರುದ್ಧದ ಅವಿಶ್ವಾಸ ನಿರ್ಣಯವಾಗಿತ್ತು. ಅಧ್ಯಕ್ಷರನ್ನು ಚುನಾಯಿಸುವುದು ಮಹಾಧಿವೇಶನವೇ ಹೊರತು ಎಐಸಿಸಿ ಸದಸ್ಯರಲ್ಲ ಎಂಬ ವಿಷಯ ನಿಮಗೆ ತಿಳಿದಿರು ವಂಥದೇ ಆಗಿದೆ. ಹೀಗಾಗಿ, ಅಧ್ಯಕ್ಷರ ವಿರುದ್ಧದ ಅವಿಶ್ವಾಸ ನಿರ್ಣಯವನ್ನು ಪರಿಗಣಿಸ ಬೇಕಾದುದು, ಯಾವುದು ಅವರನ್ನು ವಿಧ್ಯುಕ್ತವಾಗಿ ಚುನಾಯಿಸಿತ್ತೋ ಆ ಮಹಾಧಿವೇಶನ ಮಾತ್ರ ಎಂಬುದು ನಿಮಗೂ ಎಲ್ಲರಿಗೂ ಸ್ಪಷ್ಟಡಿಸಬೇಕಾದ ಅಂಶ. ಅಂಥದ್ದರಲ್ಲಿ, ಕಾಂಗ್ರೆಸ್‌ನ ಮಹಾಧಿವೇಶನದ ಹಕ್ಕಿನ ಮೇಲೆ ಅತಿಕ್ರಮಣ ಮಾಡಲು ಎಐಸಿಸಿಗೆ ಅವಕಾಶ ನೀಡುವ ಪ್ರಯತ್ನಕ್ಕೆ ಕಾರ್ಯಕಾರಿ ಸಮಿತಿಯು ಹೇಗೆ ತಾನೇ ಅವಕಾಶ ನೀಡಬಹುದಾಗಿತ್ತು? ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಬಹುಸಂಖ್ಯೆಯ ಸದಸ್ಯರು ಮನವಿಗೆ ಸಹಿ ಹಾಕಿರುವುದರಿಂದ ಕಾರ್ಯಕಾರಿ ಸಮಿತಿಯು ಅನುಮತಿಯನ್ನು ನಿರಾಕರಿಸಬಾರದಾಗಿತ್ತು ಎಂಬುದು ನಿಮ್ಮ ವಾದ. ಎಐಸಿಸಿ ಸದಸ್ಯರ ಸಹಿಗಳನ್ನು ಸಂಗ್ರಹಿಸುವ ಕ್ರಮವು ನಿಮಗೆ ತಿಳಿಯದು ಎಂದು ನಾನು ಭಾವಿಸಬೇಕೇ? ಅನೇಕ ಸಹಿಗಳು ನಕಲಿ ಎಂಬುದೂ, ಕೆಲವು ಸಹಿಗಳು ಅಮಿತ ಅಧಿಕಾರ ಹೊಂದಿರುವ ಅನುಗ್ರಹಶಕ್ತಿಯಿರುವವರ ಬಯಕೆಗೆ ವಿರುದ್ಧವಾಗಿ ನಡೆದರೆ ಉಂಟಾಗಬಹುದಾದ ಪರಿಣಾಮಗಳ ಭಯವನ್ನೊಡ್ಡಿ ಪಡೆದವು ಎಂಬಿವು ನಿಮಗೆ ಗೊತ್ತಿಲ್ಲದ ವಿಷಯಗಳೇ?

ಮನವಿಯೊಂದಕ್ಕೆ ಬೇಕಾದಷ್ಟು ಜನರು ಸ್ವಯಮೇಚ್ಛೆಯಿಂದ ಸಹಿಗಳನ್ನು ಮಾಡಿದ್ದರೂ, ಮಹಾಧಿವೇಶನದ ಹಕ್ಕುಗಳನ್ನು ಎಐಸಿಸಿಯ ಸಭೆಯು ಬಳಸಿಕೊಳ್ಳಬಹುದೇ?

ಪಕ್ಷದ ಮೇಲೆ ಕ್ರಿಯಾಹೀನತೆ ಮತ್ತು ನಿರಾಸಕ್ತಿಗಳನ್ನು ಆರೋಪಿಸಿದ್ದೀರಿ. ಅಹಮದಾಬಾದ್‌ನಲ್ಲಿ ಹಿಂಸಾಚಾರ, ಅಸ್ಸಾಂನ ತೈಲಶುದ್ಧೀಕರಣಸಂಬಂಧಿತ ಮುಷ್ಕರ, ಚಂದೀಗಡದ ಪ್ರತಿಭಟನೆ ಮತ್ತು ಆಂಧ್ರ ಪ್ರದೇಶದಲ್ಲಿ ತೆಲಂಗಾಣಕ್ಕೆ ಸಂಬಂಧಿಸಿದ ಪ್ರತಿಭಟನೆಗಳ ಕಾಲದಲ್ಲಿ ಪಕ್ಷದ ಕೇಂದ್ರ ನಾಯಕತ್ವವು ಏನು ಮಾಡುತ್ತಿತ್ತು ಎಂದು ಪ್ರಶ್ನಿಸಿದ್ದೀರಿ. ನಿಮ್ಮ ನಾಯಕತ್ವದಲ್ಲಿನ ಆಡಳಿತವು ತೋರಿಸಿದ ನಿಷ್ಕ್ರೀಯತೆ ಮತ್ತು ಹೊಯ್ದಾಟಗಳಿಂದಲೂ, ನಿರೀಕ್ಷೆಗಳನ್ನು ಹೆಚ್ಚಿಸುತ್ತ ನಿಮ್ಮ ವೈಯಕ್ತಿಕ ವರ್ಚಸ್ಸನ್ನು ಬೆಳೆಸಿಕೊಳ್ಳುವ ನಿಮ್ಮ ಮಹತ್ವಾಕಾಂಕ್ಷೆ ಹಾಗೂ ಪರಸ್ಪರ ವಿರುದ್ಧ ಬೇಡಿಕೆಗಳನ್ನು ಪೂರೈಸಬೇಕಾದ ದಿನವನ್ನು ಮುಂದೂಡಬಹುದೆಂಬ ನಿಮ್ಮ ನಿರೀಕ್ಷೆಯೇ ಇವುಗಳಲ್ಲಿ ಕೆಲವು ಸಂಭವಿಸಲು ಕಾರಣ ಎಂಬುದು ನಿಮಗೆಂದಾದರೂ ಅನ್ನಿಸಿದೆಯೇ? ಕೋಮುಗಲಭೆಗಳ ಪರಿಣಾಮವಾಗಿ ಗುಜರಾತಿನಲ್ಲಿ ಉದ್ಭವಿಸಿದ ಸಂದರ್ಭವನ್ನೆದುರಿಸಲು ಕಾಂಗ್ರೆಸ್ ಪಕ್ಷವು ಶ್ರೀ ಮೊರಾರ್ಜಿ ದೇಸಾಯಿಯವರ ನಾಯಕತ್ವದಲ್ಲಿ ಏನು ಮಾಡಿತು ಎಂಬುದನ್ನು ನಾನು ನಿಮಗೆ ನೆನಪಿಸಬೇಕಾಗಿಲ್ಲ.

ನಿಮ್ಮ ನಿರಂತರ ಅಶಿಸ್ತಿನ ಕಾರ್ಯಗಳನ್ನು ಕಾಂಗ್ರೆಸ್‌ನಲ್ಲಿನ ಸೈದ್ಧಾಂತಿಕ ಭಿನ್ನಾಭಿಪ್ರಾಯದ ಪರಿಣಾಮವೆಂಬ ನೆವದಲ್ಲಿ ಸಮರ್ಥಿಸಿಕೊಳ್ಳಲು ನೀವು ಪ್ರಯತ್ನಿಸಿದ್ದೀರಿ. ಫರೀದಾಬಾದ್ ಅಧಿವೇಶನದ ನನ್ನ ಭಾಷಣ, ಶ್ರೀ ಪಾಟೀಲ್‌ರ ಭಾಷಣಗಳು ಹಾಗೂ ಬ್ಯಾಂಕ್ ರಾಷ್ಟ್ರೀಕರಣದ ವಿಷಯದಲ್ಲಿನ ಶ್ರೀ ಮೊರಾರ್ಜಿಭಾಯಿ ಅವರ ಮನೋಭಾವದ ಕಡೆಗೆ ಗಮನ ಸೆಳೆದು ಅದರಡಿಯಲ್ಲಿ ಸೈದ್ಧಾಂತಿಕ ಹೋರಾಟದ ಬಣ್ಣ ನೀಡಲು ಹಾಗೂ ನೀವು ಪ್ರಗತಿಪರತೆ ಮತ್ತು ಸಮಾಜವಾದದ ಧ್ವಜವನ್ನು ಎತ್ತಿ ಹಿಡಿದಿದ್ದೀರಿ ಎಂದು ಬಿಂಬಿಸಲು ಪ್ರಯತ್ನಿಸಿದ್ದೀರಿ. ಫರೀದಾಬಾದ್ ಅಧಿವೇಶನದ ಭಾಷಣದಲ್ಲಿ ನಾನು ಕಾಂಗ್ರೆಸ್‌ನ ಒಪ್ಪಿತ ಧೋರಣೆಗಳ ವಿರುದ್ಧ ಮಾತನಾಡಿದ್ದೇನೆಂದು ಹೇಳಿರುವುದು ಸತ್ಯದ ತಿರುಚುವಿಕೆ. ದೇಶದ ವ್ಯಕ್ತಿಯಷ್ಟೇ ನಾನೂ ಒಬ್ಬ ಸಮಾಜವಾದಿ. ಪಕ್ಷದಲ್ಲಿನ ಹಾಗೂ ಮೈಸೂರು ಮುಖ್ಯಮಂತ್ರಿಯಾಗಿ ಮಾಡಿದ ನನ್ನ ಕಾರ್ಯಗಳು ನಾನು ಎಷ್ಟರಮಟ್ಟಿಗೆ ಸಮಾಜವಾದ ಹಾಗೂ ಸಾರ್ವಜನಿಕ ವಲಯಗಳಿಗೆ ಬದ್ಧನಾಗಿರುವೆನೆಂಬುದರ ಪುರಾವೆಗಳು. ಒಬ್ಬ ಸಮಾಜವಾದಿಯು ಅಪೇಕ್ಷಿಸುವುದು ಸಾರ್ವಜನಿಕ ವಲಯದ ವಿಸ್ತರಣೆಯನ್ನು ಮಾತ್ರವೇ ಹೊರತು ಸಾರ್ವಜನಿಕ ವಲಯದಲ್ಲಿನ ದಕ್ಷತೆಯನ್ನಲ್ಲ ಎಂದು ನೀವು ಆಲೋಚಿಸುವಂತೆ ಕಾಣುತ್ತದೆ. ಶ್ರೀ ಮೊರಾರ್ಜಿ ದೇಸಾಯಿ

ಹಾಗೂ ಶ್ರೀ ಪಾಟೀಲರು ಬೆಂಗಳೂರಿನಲ್ಲಿ ಮಾಡಿದ ಭಾಷಣಗಳ ವಿಷಯ ಪ್ರಸ್ತಾಪಿಸಲು ನನಗೆ ಇಷ್ಟವಿಲ್ಲ. ತಾವೆಂದೂ ಬ್ಯಾಂಕ್ ರಾಷ್ಟ್ರೀಕರಣವನ್ನು ವಿರೋಧಿಸಿದವರಲ್ಲವೆಂದು ಶ್ರೀ ಮೊರಾರ್ಜಿ ದೇಸಾಯಿ ಅವರೇ ಹೇಳಿದ್ದಾರೆ. ಕಟ್ಟುನಿಟ್ಟಾದ ಸಾಮಾಜಿಕ ನಿಯಂತ್ರಣಾ ಕ್ರಮಗಳನ್ನು ಜಾರಿಗೆ ತಂದು, ಸಾಮಾಜಿಕ ನಿಯಂತ್ರಣವು ಸಾಲದೇ ಹೋದರೆ ಬ್ಯಾಂಕ್ ರಾಷ್ಟ್ರೀಕರಣಕ್ಕೆ ಕ್ರಮ ಕೈಗೊಳ್ಳಬೇಕೆಂದವರೇ ಅವರು. ಪಕ್ಷ ಹಾಗೂ ಸರ್ಕಾರಗಳಲ್ಲಿನ ಏಕವ್ಯಕ್ತಿ ಪರಮಾಧಿಕಾರವನ್ನು ಸಾಧಿಸುವ ಛಲವನ್ನು ಕಾಂಗ್ರೆಸ್‌ನಲ್ಲಿನ ಪ್ರಗತಿಪರರು ಮತ್ತು ಕ್ರಾಂತಿಕಾರಿಗಳು ಎನಿಸಿಕೊಂಡವರ ಹಾಗೂ ಪ್ರತಿಗಾಮಿಗಳ ನಡುವಣ ಸಂಘರ್ಷ ಎಂದು ಚಿತ್ರಿಸಲು ನೀವು ಮಾಡುವ ಪ್ರಯತ್ನಗಳು ಬಂಡುಕೋರ ಬಣದವರನ್ನು ಬಿಟ್ಟು ಬೇರಾರನ್ನೂ ದಾರಿತಪ್ಪಿಸಲಾರದು. ನಿರಂಕುಶಪ್ರಭುವಾಗಬಯಸುವ ಇಪ್ಪತ್ತನೆಯ ಶತಮಾನದ ಯಾವುದೇ ವ್ಯಕ್ತಿಯು ಸಮಾಜವಾದದ ಮುಖವಾಡ ಧರಿಸುವುದನ್ನು ಮರೆಯುವದಿಲ್ಲ.

ಪಕ್ಷದ ನಿಧಿಗೆ ಹಣಸಂಗ್ರಹ ಮಾಡಿರುವ ಬಗ್ಗೆ ನೀವು ಪ್ರಸ್ತಾಪಿಸಿ, ತಾವು ದೊಡ್ಡ ಮೊತ್ತದ ಹಣ ಸಂಗ್ರಹಿಸಿದ್ದರೂ ಲೆಕ್ಕ ನೀಡಿಲ್ಲ ಎಂದು ಶ್ರೀ ಪಾಟೀಲ್ ಅವರು ಬಹಿರಂಗ ವಾಗಿ ಒಪ್ಪಿಕೊಂಡುದನ್ನು ಉಲ್ಲೇಖಿಸಿದ್ದೀರಿ. ನಿಮ್ಮ ಈ ಆರೋಪಕ್ಕೆ ಶ್ರೀ ಪಾಟೀಲ್ ಈಗಾಗಲೇ ಉತ್ತರಿಸಿ, ತಾವು ಪಕ್ಷಕ್ಕೆ ಮಾತ್ರವಲ್ಲದೆ ಮುಂಬಯಿ ಉಚ್ಚ ನ್ಯಾಯಾಲಯಕ್ಕೂ ಲೆಕ್ಕ ಒಪ್ಪಿಸಿರುವುದಾಗಿ ಹೇಳಿದ್ದಾರೆ. ಪಕ್ಷದ ಹೆಸರಿನಲ್ಲಿ ರಾಜಕೀಯ ಕಾರ್ಯಗಳಿಗಾಗಿ ನೀವೂ ಮತ್ತು ನಿಮ್ಮ ಆಪ್ತ ಸಹಚರರೂ ದೊಡ್ಡ ಮೊತ್ತದ ಹಣವನ್ನು ಸಂಗ್ರಹಿಸಿರುವುದು ನಿಜವಲ್ಲವೇ ಎಂದು ನಾನು ಕೇಳಬಯಸುತ್ತೇನೆ. ಸಚಿವರು ಹಣಸಂಗ್ರಹದ ಬಗ್ಗೆ, ಅದು ಎಐಸಿಸಿಯ ದಾನಕಾರ್ಯಗಳಿಗಾಗಿದ್ದರೂ ಸರಿಯೇ, ಪಕ್ಷಕ್ಕೆ ಲೆಕ್ಕ ಒಪ್ಪಿಸುವುದು ಕರ್ತವ್ಯ ಎಂಬ ಕಾಂಗ್ರೆಸ್ ನಿರ್ಣಯದ ಬಗ್ಗೆ ನಿಮಗೆ ಗೊತ್ತಿದೆ. ಎಐಸಿಸಿಯ ನಿಯಮ ಗಳ ಪ್ರಕಾರ, ಸಚಿವರುಗಳು ಅಥವಾ ಸಂಸತ್ ಮತ್ತು ಶಾಸನ ಸಭೆಗಳ ಸದಸ್ಯರುಗಳು ತಮ್ಮ ಆಸ್ತಿಯ ವಿವರಗಳನ್ನು ಎಐಸಿಸಿಗೆ ಒಪ್ಪಿಸಬೇಕು. ಆದರೆ, ನೀವು ಇನ್ನೂ ಏಕೆ ಹಣಸಂಗ್ರಹದ ಲೆಕ್ಕವನ್ನಾಗಲೀ ಆಸ್ತಿಯ ವಿವರವನ್ನಾಗಲೀ ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಒಪ್ಪಿಸಿಲ್ಲ ಎಂದು ಕೇಳಬಹುದೇ?

ಪಕ್ಷದ ನಕಲಿ ಸದಸ್ಯತ್ವ ಹಾಗೂ ಪಾಳೆಗಾರಿಕೆಗಳ ಬಗ್ಗೆ ಮಾತನಾಡಿದ್ದೀರಿ. ನೀವೇ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದವರು. ಕಾಂಗ್ರೆಸ್ ಪಕ್ಷವು ಸಮಸ್ಯೆಗಳ ನಿವಾರಣೆಗಾಗಿ ಪ್ರಯತ್ನಿಸುತ್ತಿದೆ ಹಾಗೂ ನಕಲಿ ಸದಸ್ಯತ್ವದ ಸಮಸ್ಯೆಯನ್ನು ಎದುರಿಸುವಲ್ಲಿ ಗಣನೀಯ ಯಶಸ್ಸು ಸಾಧಿಸಿದೆ ಎಂಬುದು ನಿಮಗೆ ತಿಳಿದಿದೆ. ಆದರೆ

ಈ ಬಗ್ಗೆ ನೀವು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಯಾವುದೇ ಕ್ರಮವನ್ನು ಕೈಗೊಂಡ ತಿಳಿವಳಿಕೆ ನನಗಿಲ್ಲ. ನಿಮಗೂ ಪಕ್ಷದ ಕಾರ್ಯನಿರ್ವಹಣೆಯ ಮತ್ತು ನಕಲಿ ಸದಸ್ಯತ್ವ ಮತ್ತು ಪಾಳೇಗಾರಿಕೆಗಳಂಥ ಸಮಸ್ಯೆಗಳನ್ನು ನಿವಾರಿಸುವ ಹೊಣೆಗಾರಿಕೆ ಇತ್ತಲ್ಲವೇ?

ಏಕವ್ಯಕ್ತಿ ಆಡಳಿತ ಮತ್ತು ವಿಭೂತಿಪೂಜೆಯ ಬಗ್ಗೆ ನಾನು ಎತ್ತಿದ ಪ್ರಶ್ನೆಗೆ ನೀವು ಕೊಟ್ಟಿರುವ ಉತ್ತರ ಅರ್ಥಗರ್ಭಿತವಾಗಿದೆ. 'ಆರೋಪವು ವಿಷಾದನೀಯವೇ ಹೊರತು ಘಾಸಿಗೊಳಿಸುವುದಲ್ಲ' ಎಂದು ಹೇಳಿದ್ದೀರಿ. ಏಕವ್ಯಕ್ತಿ ಆಡಳಿತವನ್ನು ಸ್ಥಾಪಿಸುವ ಬಯಕೆಯನ್ನು ನಿಮ್ಮ ಕೃತಿಗಳು ಮತ್ತು ಮನೋಭಾವಗಳು ತೋರಿಸುತ್ತವೆ ಎಂಬ ನನ್ನ ಹೇಳಿಕೆಯನ್ನು ನೀವು ಅಲ್ಲಗಳೆಯದಿರುವುದು ಅರ್ಥಗರ್ಭಿತವಾಗಿದೆ. ಏಕವ್ಯಕ್ತಿ ಆಡಳಿತದ ವಿರುದ್ಧ ದೇಶದ ಸಂವಿಧಾನದಲ್ಲಿ ಅಂತರ್ನಿಹಿತವಾದ ರಕ್ಷಣೋಪಾಯಗಳಿವೆ ಎಂದು ಹೇಳಿದ್ದೀರಿ. ಜರ್ಮನಿಯ ವೀಮರ್ ಗಣತಂತ್ರದಲ್ಲಿಯೂ ಇಂಥದೇ ರಕ್ಷಣೋಪಾಯಗಳಿದ್ದುವು. ಇದಕ್ಕೆ ಅನುರೂಪವಾದ ನಿದರ್ಶನಗಳಿಗೆ ನಾವು ದೂರ ಭೂತಕಾಲಕ್ಕೇನೂ ಹೋಗಬೇಕಾಗಿಲ್ಲ. ಜನಪ್ರಿಯತೆಯ ಅಲೆಯ ಕಾರಣ ದಿಂದಲೋ ಒಂದು ಪ್ರಜಾಸತ್ತಾತ್ಮಕ ಪಕ್ಷದ ಬೆಂಬಲದಿಂದಲೋ ಅಧಿಕಾರಕ್ಕೇರಿದ ನಾಯಕನು, ರಾಜಕೀಯ ಆತ್ಮರತಿಗೆ ಬಲಿಯಾಗಿ ಮತ್ತು ಸುತ್ತಲಿನ ವಂದಿಮಾಗಧ ಬಣದ ಸ್ತುತಿಗೆ ತುತ್ತಾಗಿ, ಭ್ರಷ್ಟಾಚಾರ ಮತ್ತು ಬೆದರಿಕೆಗಳಿಂದ ಜನಾಭಿಪ್ರಾಯವು ಅಧಿಕಾರಸ್ಥರ ಪ್ರತಿಧ್ವನಿಯಾಗುವಂತೆ ಮಾಡಿ, ಪ್ರಜಾಪ್ರಭುತ್ವವನ್ನು ಬಲಿ ತೆಗೆದುಕೊಳ್ಳುವ ನಿದರ್ಶನಗಳು ಇಪ್ಪತ್ತನೆಯ ಶತಮಾನದ ಉದ್ದಕ್ಕೂ ತುಂಬಿವೆ. ಪ್ರಜಾಪ್ರಭುತ್ವ ಮತ್ತು ಸಮಾಜವಾದಗಳಿಗೆ ಬದ್ಧವಾಗಿರುವ ಕಾಂಗ್ರೆಸ್ ಪಕ್ಷವು ಅಂತಹ ಮನೋವೃತ್ತಿಯನ್ನು ವಿರುದ್ಧ ಹೋರಾಡಬೇಕಾಗಿದೆ.

ಗೌರವಾದರಗಳೊಂದಿಗೆ,

ನಿಮ್ಮ ವಿಶ್ವಾಸದ,
ಸಹಿ/- ಎಸ್. ನಿಜಲಿಂಗಪ್ಪ

* * *

೩. ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ೭೧ನೇ ಅಧಿವೇನದಲ್ಲಿ ನಿಜಲಿಂಗಪ್ಪನವರು ಮಾಡಿದ ಅಧ್ಯಕ್ಷ ಭಾಷಣ

[೧೯೬೮ ನೇ ಜನವರಿಯಲ್ಲಿ ಹೈದರಾಬಾದ್‌ನ ಲಾಲ್ ಬಹಾದ್ದೂರ್ ನಗರದಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ೭೧ ನೇ ಅಧಿವೇಶನದಲ್ಲಿ ಶ್ರೀ ನಿಜಲಿಂಗಪ್ಪನವರು ಮಾಡಿದ ಭಾಷಣ]

ಸಹ ಪ್ರತಿನಿಧಿಗಳೇ ಮತ್ತು ಕಾರ್ಯಕರ್ತರೇ,

ಬಹಳ ಕಡಿಮೆಯ ಅವಧಿಯಲ್ಲಿ ಈ ಮಹಾಧಿವೇಶನವನ್ನು ನಡೆಸಲು ಸಾಧ್ಯವಾಗುವಂತೆ ಏರ್ಪಾಟು ಮಾಡಿರುವ ಸ್ವಾಗತ ಸಮಿತಿಯನ್ನು ಅಭಿನಂದಿಸುವ ಮೂಲಕ ನಾನು ನನ್ನ ಭಾಷಣವನ್ನು ಆರಂಭಿಸುತ್ತೇನೆ. ನಿಮಗೆಲ್ಲ ತಿಳಿದಿರುವಂತೆ, ಈ ಅಧಿವೇಶನವು ಮಹಾರಾಷ್ಟ್ರದ ಸಾಂಗಲಿಯಲ್ಲಿ ನಡೆಯಬೇಕಾಗಿತ್ತು. ಆದರತೆ ೧೧-೧೧-೧೯೬೭ ರಂದು ಅಲ್ಲಿ ಸಂಭವಿಸಿದ ವಿನಾಶಕಾರಕ ಭೂಕಂಪದಿಂದಾಗಿ ಪ್ರಾಣ ಮತ್ತು ಆಸ್ತಿಪಾಸ್ತಿ ನಷ್ಟ ಉಂಟಾದ ಹಿನ್ನೆಲೆಯಲ್ಲಿ ಈ ಅಧಿವೇಶನವನ್ನು ಅಲ್ಲಿ ನಡೆಸುವುದು ಸಾಧ್ಯವಾಗಲಿಲ್ಲ. ಮೃತರ ಕುಟುಂಬಗಳಿಗೆ ಸಂತಾಪ ಮತ್ತು ಇತರ ಬಗೆಗಳಲ್ಲಿ ಸಂಕಷ್ಟಕ್ಕೊಳಗಾದವರಿಗೆ ಸಹಾನುಭೂತಿಗಳನ್ನು ಸೂಚಿಸುವುದು ನಮ್ಮ ಕರ್ತವ್ಯವಾಗಿದೆ.

ಪಿಸಿಸಿ ಅಧ್ಯಕ್ಷರ ಹಾಗೂ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ಆಂಧ್ರ ಪ್ರದೇಶ ಕಾಂಗ್ರೆಸ್ ಸಮಿತಿಯು ಸಂದರ್ಭಕ್ಕನುಗುಣವಾಗಿ ಸಿದ್ಧರಾಗಿ ಕೇವಲ ಮೂರು ವಾರ ಗಳೊಳಗಾಗಿ ಐತಿಹಾಸಿಕ ನಗರ ಹಾಗೂ ವಿವಿಧ ಸಂಸ್ಕೃತಿಗಳ ಸಂಗಮವಾದ ಹೈದರಾ ಬಾದ್‌ನಲ್ಲಿ ಈ ಅಧಿವೇಶನವನ್ನು ನಡೆಸಲು ಅತ್ಯುತ್ತಮ ಏರ್ಪಾಟುಗಳನ್ನು ಮಾಡಿದೆ. ಅವರಿಗೆ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸೋಣ.

ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷತೆಯ ಹೊರೆಯನ್ನು ಹೊರಲು ನೀವು ಕೇಳಿಕೊಂಡಿದ್ದೀರಿ. ಸ್ವಾತಂತ್ರ್ಯ ಹೋರಾಟಗಾರರು, ಮುತ್ಸದ್ದಿಗಳು, ವಿದ್ವಾಂಸರು, ಚಿಂತಕರು ಮತ್ತು ಆಡಳಿತಗಾರರು ಈ ಹುದ್ದೆಯನ್ನು ಅಲಂಕರಿಸಿ ದೇಶವನ್ನು ಮುನ್ನಡೆಸಿರುವುದನ್ನು ಪರಿಗಣಿಸಿದರೆ, ಒಂದು ಬಗೆಯ ಅಲ್ಪತೆ ಮತ್ತು ವಿಮ್ರತೆಗಳು ನನ್ನನ್ನಾವರಿಸುತ್ತವೆ. ಈ ಸ್ಥಾನವನ್ನು ತುಂಬಲು ನಾನು ಹಿಂದೆ ಮುಂದೆ ನೋಡಿದುದು ತಿಳಿದ ಸಂಗತಿಯೇ, ಅದಕ್ಕೆ ಕಾರಣ ನನ್ನ ಕೊರತೆಗಳು ಮಾತ್ರವಾಗಿರದೆ, ಪ್ರಸ್ತುತ ಸಂದರ್ಭದಲ್ಲಿ ತುಂಬಿ ಕೊಂಡಿರುವ ಸಂಕೀರ್ಣ ಸಮಸ್ಯೆಗಳ ಗುಚ್ಛ. ಎರಡು ಮೂರು ದಶಕಗಳ ಕಾಲ ನಾನು ಕೆಲಸ ಮಾಡುವ ಸದವಕಾಶ ಕಲ್ಪಿಸಿದ್ದ ನನ್ನ ಗೆಳೆಯರ ಒತ್ತಾಯವು ಈ ಹೊಣೆಗಾರಿಕೆಯನ್ನು ಹೊರಲು ನಾನು ಒಪ್ಪಿಕೊಳ್ಳುವಂತೆ ಮಾಡಿತು. ಆ ಗೆಳೆಯರ, ಅದಕ್ಕಿಂತ ಹೆಚ್ಚಾಗಿ, ಇಡೀ ಪ್ರತಿನಿಧಿಗಳ ಸಮೂಹ ನನ್ನ ಮೇಲಿಟ್ಟಿರುವ ವಿಶ್ವಾಸವು ಇದನ್ನು ಹೊರಲು ನನಗೆ ಚೈತನ್ಯ ನೀಡಿದೆ. ನನ್ನನ್ನು ಸರ್ವಾನುಮತದಿಂದ ಆಯ್ಕೆ ಮಾಡಿರುವ ನೀವೆಲ್ಲರೂ ನನಗೆ ಸಂಪೂರ್ಣ ಸಹಕಾರವನ್ನೂ, ಮಾರ್ಗದರ್ಶನವನ್ನೂ, ಬೆಂಬಲವನ್ನೂ ನೀಡಿ ನನ್ನ ಕಡುತರ ಕರ್ತವ್ಯ ನಿರ್ವಹಣೆಯನ್ನು ಸುಗಮಗೊಳಿಸು ವಿರೆಂಬ ನಂಬಿಕೆ ನನಗಿದೆ.

ಶ್ರೀ ಗ್ಯಾನಿ ಜೈಲ್‌ಸಿಂಗ್ ಮತ್ತಿತರ ಪಂಜಾಬ್ ಕಾಂಗ್ರೆಸ್ ಮುಖಂಡರೊಡನೆ ಎಸ್ಸೆನ್

ದೇಶದ ಇತಿಹಾಸಿದಲ್ಲಿನ ಒಂದು ಸಂದಿಗ್ಧ ಸನ್ನಿವೇಶದಲ್ಲಿ ನಾವಿಲ್ಲಿ ಸೇರಿದ್ದೇವೆ. ನಾವು ಸದಸ್ಯರೆಂದು ಹೆಮ್ಮೆಪಟ್ಟುಕೊಳ್ಳುವ ಕಾಂಗ್ರೆಸ್‌ಗೂ ಇದು ಸಂದಿಗ್ಧದ ಪರ್ವವಾಗಿದೆ. ಸ್ವಾತಂತ್ರ್ಯಾನಂತರದ ಕಳೆದ ಇಪ್ಪತ್ತು ವರ್ಷಗಳಲ್ಲಿ ನಾವು ಗಣನೀಯ ಸಾಧನೆಯನ್ನು ಮಾಡಿರುವುದು ನಿಜ. ದೇಶದಲ್ಲಿ ಉತ್ಪಾದನೆ ಹೆಚ್ಚಿದೆ, ರಾಷ್ಟ್ರೀಯ ವರಮಾನ ಜಾಸ್ತಿ ಯಾಗಿದೆ, ದೇಶದ ಮತ್ತಷ್ಟು ಜನರು ಸಾಕ್ಷರರಾಗಿದ್ದಾರೆ, ಶಿಕ್ಷಣದ ಅವಕಾಶಗಳು ಸಾಕಷ್ಟು ವಿಸ್ತರಿಸಿವೆ, ಶಿಶು ಹಾಗೂ ತಾಯಂದಿರ ಮರಣಪ್ರಮಾಣ ಇಳಿದಿದೆ, ಸರಾಸರಿ ಜೀವಿತಾವಧಿ ಸಾಕಷ್ಟು ಹೆಚ್ಚಿದೆ, ನಮ್ಮ ಕೃಷಿಪದ್ಧತಿಗಳು ಕ್ರಮೇಣ ಹೆಚ್ಚು ಆಧುನಿಕ ವಾಗುತ್ತಿವೆ, ಕೈಗಾರಿಕಾ ವಲಯ ವೈವಿಧ್ಯಪೂರ್ಣವಾಗುತ್ತಿದೆ, ನಮ್ಮ ರಕ್ಷಣಾದಳಗಳು ಹೆಚ್ಚು ಆತ್ಮವಿಶ್ವಾಸ, ಸಾಮರ್ಥ್ಯ ಮತ್ತು ಆಧುನಿಕ ಯುದ್ಧೋಪಕರಣಗಳನ್ನು ಹೊಂದಿ ದೇಶದ ಗಡಿಗಳನ್ನು ಕಾಯುತ್ತಿವೆ, ಆದರೂ ದೇಶದೊಳಗಡೆ ಎಲ್ಲವೂ ಸುಸೂತ್ರವಾಗಿದೆ ಎಂದು ಹೇಳುವಂತಿಲ್ಲ. ಇನ್ನೂ ಕಷ್ಟಪರಿಸ್ಥಿಯಲ್ಲಿದ್ದಾಗಿಗಿಂತ ನಾವೀಗ ಹೆಚ್ಚು ಅತೃಪ್ತಿ ಯಿಂದ ಕೂಡಿದ್ದೇವೆ. ಈ ಹಾದಿಯಲ್ಲಿ ಕಾಂಗ್ರೆಸ್ ಕೂಡ ಸಂಕಷ್ಟವನ್ನೆದುರಿಸಿದೆ; ಕಳೆದ ಮಹಾ ಚುನಾವಣೆಗಳು ಚಿಂತನೆ ಹಾಗೂ ಆತ್ಮಾವಲೋಕನಗಳನ್ನು ನಡೆಸಲು ಕಾರಣವಾಗಿವೆ. ದೇಶದ ಪರಿಸ್ಥಿತಿಯನ್ನು ಮತ್ತೊಮ್ಮೆ ಪರಿಶೀಲಿಸುವುದು, ನಾವೆಲ್ಲಿ ತಪ್ಪು ಮಾಡಿದ್ದೇವೆ ಎಂದು ಹುಡುಕುವುದು, ಜನತೆಯಲ್ಲಿ ಆತ್ಮವಿಶ್ವಾಸವನ್ನು ತುಂಬುವ ಕೆಲಸವನ್ನು ಮತ್ತೆ ಮಾಡುವುದು, ಬಡತನ, ನಿರುದ್ಯೋಗ, ರೋಗಗಳು ಮತ್ತು ಅನಕ್ಷರತೆಗಳ ವಿರುದ್ಧದ ನಮ್ಮ ಹೋರಾಟದಲ್ಲಿ ದೃಢತೆಯಿಂದ ಮುನ್ನಡೆಯುವುದು, ಮತ್ತು ಸ್ವಾತಂತ್ರ್ಯ ಗಳಿಸಿದ ಬಳಿಕ ಮತ್ತಷ್ಟು ಪೂರ್ಣವೂ ಮುಕ್ತವೂ ಆದ ಬದುಕನ್ನು ಸಾಗಿಸುವ ತಮ್ಮ ಹಕ್ಕನ್ನು ಹೊಂದಲು ಜನರಿಗೆ ಅನುವು ಮಾಡಿಕೊಡಲು ಹೆಣಗ ಬೇಕಾದುದು, ಈಗ ಅನಿವಾರ್ಯವಾಗಿದೆ.

ಕಳೆದ ಇಪ್ಪತ್ತು ವರ್ಷಗಳಿಂದ, ಕೇಂದ್ರ ಮತ್ತು ರಾಜ್ಯಗಳಲ್ಲಿ, ಕಾಂಗ್ರೆಸ್ ಅಧಿಕಾರ ದಲ್ಲಿದೆ; ಇದು ದೇಶದ ಮುನ್ನಡೆಗೆ ಖಂಡಿತ ಸಹಕಾರಿಯಾಗಿದೆ ಮತ್ತು ಆರ್ಥಿಕ ಮತ್ತು ಸಾಮಾಜಿಕ ರಂಗಗಳಲ್ಲಿ ಮಹತ್ವದ ಅಭಿವೃದ್ಧಿಗಳನ್ನು ಸಾಧಿಸಲು ನೆರವಾಗಿದೆ. ಮೊದಲ ಮೂರು ಮಹಾಚುನಾವಣೆಗಳಲ್ಲಿ ದೇಶದ ಮಹಾಜನತೆಗೆ ನಮಗೆ ಬೆಂಬಲ ನೀಡಿದ್ದಾರೆ, ಇದಕ್ಕೆ ಕಾರಣ ನಾವು ಮಾಡುತ್ತಿರುವ ಕೆಲಸ ಮತ್ತು ನಮ್ಮನ್ನವರು ಕಾಣುತ್ತಿರುವ ಗೌರವ ಮನೋಭಾವ ಮಾತ್ರವಲ್ಲ, ಭಾರತದಲ್ಲಿ ರಾಜಕಾರಣ ಮಾಡು ತ್ತಿರುವ ಏಕೈಕ ಸುಸಂಘಟಿತ ಪಕ್ಷ ಎಂಬ ಕಾರಣಕ್ಕೂ ಹೌದು. ಇನ್ನಿತರ ಪಕ್ಷಗಳಿದ್ದರೂ, ಅವೆಲ್ಲ ಬಹುತೇಕ ಕಾಂಗ್ರೆಸ್‌ನಿಂದ ಮೂಡಿದವು ಹೀಗಾಗಿ ಕಾಂಗ್ರೆಸ್ ಸಿದ್ಧಾಂತಗಳಿಂದ ಅವು ಮೂಲಭೂತವಾಗಿ ಭಿನ್ನವಾದವಲ್ಲ.

ಆದರೆ ನಾಲ್ಕನೆಯ ಮಹಾಚುನಾವಣೆಗಳ ಬಳಿಕ, ಮೂಡಿರುವ ಅದರ ಚಿತ್ರವೆಂದರೆ, ಕಳೆದ ಹತ್ತು ತಿಂಗಳಿನಿಂದ ಅದರ ವಿನ್ಯಾಸ ಮತ್ತು ಬಣ್ಣಗಳು ನಿರಂತರವಾಗಿ ಬದಲಾಗುತ್ತಿವೆ ಎಂಬುದು. ಎಂಟು ರಾಜ್ಯಗಳಲ್ಲಿ ಮಾತ್ರವೇ ಕಾಂಗ್ರೆಸ್ ಬಹುಮತ ಸಾಧಿಸಿ ಸರ್ಕಾರಗಳನ್ನು ರಚಿಸಲು ಸಾಧ್ಯವಾದುದು. ರಾಜಾಸ್ತಾನದಲ್ಲಿ, ವಿರೋಧ ಪಕ್ಷಗಳಿಂದ ಮತಾಂತರಗೊಂಡ ಕೆಲವು ಸದಸ್ಯರುಗಳಿಂದಾಗಿ ಬಹುಮತ ಪಡೆದು ಸರ್ಕಾರವನ್ನು ರಚಿಸಿತು. ಮಿಕ್ಕ ರಾಜ್ಯಗಳಲ್ಲಿ, ಮದರಾಸ್ ವಿಧಾನಸಭೆಯಲ್ಲಿ ಸ್ಪಷ್ಟ ಬಹುಮತ ಪಡೆದ ಡಿಎಂಕೆ ಪಕ್ಷವೊಂದನ್ನು ಹೊರತುಪಡಿಸಿ, ವಿವಿಧ ಪಕ್ಷಗಳ ಸದಸ್ಯರು ಸೇರಿ ಆವಶ್ಯಕವಾದ ಬಹುಮತವನ್ನು ಪಡೆದು 'ಸಂಯುಕ್ತ ರಂಗ' ಎಂಬ ಹೆಸರಿನಲ್ಲಿ ಸರ್ಕಾರಗಳನ್ನು ರಚಿಸಿತು. ಆನಂತರ, ಹರಿಯಾಣ, ಮಧ್ಯಪ್ರದೇಶ ಮತ್ತು ಯುಪಿಗಳಲ್ಲಿ ನಡೆದ ದೊಡ್ಡ ಪ್ರಮಾಣದ ಮತಾಂತರಗಳಿಂದ ಕಾಂಗ್ರೆಸ್ ಅಧಿಕಾರವನ್ನು ಕಳೆದುಕೊಳ್ಳುವಂತಾಯಿತು. ಪಕ್ಷಾಂತರ ಎಂಬುದು ದೊಡ್ಡ ಪಿಡುಗಾಗಿದೆ. ಹರಿಯಾಣದಲ್ಲಿ ಗಮನಿಸಬಹುದಾದ ಕ್ರಮಬದ್ಧ ಸರ್ಕಾರವೊಂದರ ರಚನೆ ಸಾಧ್ಯವಾಗಲಿಲ್ಲ, ಹೀಗಾಗಿ ಸರ್ಕಾರವನ್ನು ವಜಾಗೊಳಿಸಿ, ವಿಧಾನಸಭೆಯನ್ನು ವಿಸರ್ಜಿಸಿ ರಾಷ್ಟ್ರಪತಿ ಆಳ್ವಿಕೆಯನ್ನು ಜಾರಿಗೊಳಿಸಲಾಯಿತು. ಪಂಜಾಬ್‌ನಲ್ಲಿ ನಡೆದ ಪಕ್ಷಾಂತರಗಳಿಂದಾಗಿ ಸಂಯುಕ್ತರಂಗ ಸರ್ಕಾರ ರಾಜೀನಾಮೆ ನೀಡಿ ಕಾಂಗ್ರೆಸ್‌ನ ಬೆಂಬಲದಿಂದ ಮತ್ತೊಂದು ಸಂಪುಟವು ಅಧಿಕಾರಕ್ಕೆ ಬಂದು ಈಗ ಮುಂದುವರಿಯುತ್ತಿದೆ. ಪಶ್ಚಿಮ ಬಂಗಾಳದ ಸಂವಿಧಾನ ಬಿಕ್ಕಟ್ಟು ಜನ ಜನಿತವಾದುದು, ಅಲ್ಲಿ ಸಂಯುಕ್ತ ರಂಗ ಸರ್ಕಾರವನ್ನು ವಜಾ ಮಾಡಿ ಕಾಂಗ್ರೆಸ್ ಬೆಂಬಿಲಿತ ಹೊಸ ಸಂಪುಟ ಅಧಿಕಾರಕ್ಕೆ ಬಂತು.

ಕಾಂಗ್ರೆಸ್ ಸರ್ಕಾರಗಳಿಗೆ ಪರ್ಯಾಯವಾಗಿ ರಚಿತವಾದ ಸಂಯುಕ್ತರಂಗ ಸರ್ಕಾರಗಳ ಅನುಭವದ ಸ್ವರೂಪವೆಂಥದು? ಈ ಸರ್ಕಾರಗಳು ರಚಿತವಾದುದು ಯಾವುದೇ ದೃಢ ಸೈದ್ಧಾಂತಿಕ ನೆಲೆ ಅಥವಾ ಕಾರ್ಯಕ್ರಮಗಳಿಲ್ಲದೆ ಕೇವಲ ಅನುಕೂಲ ಸಿಂಧು ದೃಷ್ಟಿಯಿಂದ ಒಂದಾದ ಪಕ್ಷಗಳಿಂದ. ಒಟ್ಟಾಗಿರುವ ರಾಜಕೀಯ ಘಟಕಗಳು ತಮ್ಮ ವಿಶಿಷ್ಟ ಸ್ವರೂಪವನ್ನು ಉಳಿಸಿಕೊಂಡು, ಸಂಯುಕ್ತರಂಗ ಸರ್ಕಾರದಂತೆ ಕಾರ್ಯ ನಿರ್ವಹಿಸುತ್ತಿದ್ದರೂ, ಪ್ರತಿಯೊಂದೂ ರಾಜ್ಯದಲ್ಲಿ ತನ್ನ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಪ್ರಯತ್ನಿಸುತ್ತ ಕೆಲವು ವೇಳೆ ಸಂಪುಟದಲ್ಲಿನ ಸಂಘರ್ಷಗಳಿಗೆ ಕಾರಣವಾದವು. ಬಲಪಂಥೀಯ ಹಾಗೂ ಎಡಪಂಥೀಯ ಅತಿರೇಕ ಸಿದ್ಧಾಂತಗಳ ರಾಜಕೀಯ ಪಕ್ಷಗಳ ಈ ಅವಕಾಶವಾದಿ ಒಗ್ಗೂಡುವಿಕೆಯು, ಯಾವುದೇ ತತ್ವಕ್ಕೆ ಬದ್ಧವಾಗಿಲ್ಲದೆ ಕೇವಲ ವೈಯಕ್ತಿಕ ಲಾಭಗಳಿಗಾಗಿ, ಪಕ್ಷ ಬದಲಾಯಿಸಲು ವ್ಯಕ್ತಿ ಸದಸ್ಯರುಗಳಿಗೂ ಉತ್ತೇಜನ ನೀಡಿದುದರಿಂದ ಅನೇಕ ರಾಜ್ಯ ಸರ್ಕಾರಗಳು ಅಸ್ಥಿರಗೊಳ್ಳುವಂತಾಯಿತು, ತಮ್ಮ ಉಳಿವಿನ

ಬಗ್ಗೆಯೇ ಹೆಚ್ಚಿನ ಯೋಚನೆ ಮಾಡುವಂತಾಯಿತು. ಇದು ಆಡಳಿತಾತ್ಮಕ ವೈಫಲ್ಯ ಮತ್ತು ಅದಕ್ಷತೆಗಳಿಗೂ ಕಾರಣವಾಗುವಂತಾಯಿತು; ಇದರಿಂದಾಗಿ ಬಿದ್ದ ಮೊದಲ ಹೊಡೆತವೆಂದರೆ ಅಭಿವೃದ್ಧಿ ಕಾರ್ಯಗಳ ಮೇಲೆ. ಅದರ ಪರಿಣಾಮ ಆರ್ಥಿಕ ಪರಿಸ್ಥಿತಿಯ ಅಧಃಪತನ.

ಇದರಿಂದ ಕಲಿಯಬೇಕಾದ ಒಂದು ಪಾಠವೆಂದರೆ ಸಂಯುಕ್ತರಂಗಗಳು ಕಾಂಗ್ರೆಸ್ ಸರ್ಕಾರಗಳಿಗೆ ತಾರ್ಕಿಕ ಪರ್ಯಾಯಗಳಲ್ಲ ಎಂಬುದು. ಸರ್ಕಾರ ರಚಿಸಲು ಬೇಕಾದ ಸ್ಪಷ್ಟ ಬಹುಮತವಿಲ್ಲದಿದ್ದಾಗ, ಸೀಮಿತ ಸಂಖ್ಯೆಯ ರಾಜಕೀಯ ಪಕ್ಷಗಳು ಕೆಲವು ಸಾಮಾನ್ಯ ಒಪ್ಪಿತ ಸಿದ್ಧಾಂತಗಳ ಹಾಗೂ ಕಾರ್ಯಕ್ರಮಗಳ ನೆಲಗಟ್ಟಿನ ಮೇಲೆ ಸ್ಥಾಪಿಸಿ ಕೊಂಡ ಬಿಗಿಯಾದ ಅರ್ಥಪೂರ್ಣ ಸಮ್ಮಿಶ್ರ ಬಣದ ಸರ್ಕಾರ ರಚನೆ ಆಗಬೇಕು.

ಇಂದು ರಾಜ್ಯಗಳಲ್ಲಿ ಕಾಣಬರುತ್ತಿರುವ ಈ ದುರದೃಷ್ಟಕರ ಪರಿಸ್ಥಿತಿಯು, ಕೆಲವರು ಬಯಸುವಂತೆ, ಬೇರೆಡೆಯೂ ಪುನರಾವರ್ತಿತವಾಗುವಂತಾದರೆ, ದೇಶವು ತಳಾತಳಕ್ಕಿಳಿದು, ಪ್ರಜಾಸತ್ತಾತ್ಮಕ ಸಂರಚನೆ ಹಾಗೂ ದೇಶದ ಸಮಗ್ರತೆಗಳು ಅಪಾಯಕ್ಕೀಡಾಗ ಬಹುದು.

ಇದು ಸದ್ಯದ ಪರಿಸ್ಥಿತಿಯ ಸಂಪೂರ್ಣ ಚಿತ್ರವೇನೂ ಅಲ್ಲ. ಸದಭಿಪ್ರಾಯದ ಕೆಲವು ಜನರು ಕೂಡ ಗಂಭೀರವಾಗಿ ಪೋಷಿಸುತ್ತಿರುವ, ಕೆಲವೊಮ್ಮೆ ವಿನೋದಕರ ವೆನಿಸಿದರೂ, ಅಪಾಯಕಾರಿಯಾದ ಮನೋಭಾವವೆಂದರೆ, ಕಾಂಗ್ರೆಸ್‌ವಿರೋಧಿ ಮನೋಭಾವವು ಮೂಲತಃ ಪ್ರಜಾಸತ್ತಾತ್ಮಕವಾದುದು ಮತ್ತು ಕಾಂಗ್ರೆಸ್‌ಪರ ಎಂದರೆ ಅದಕ್ಕೆ ಹೊರತಾದುದು ಎಂಬುದು. ಕಾಂಗ್ರೆಸ್ಸಿಗರ ಕಾಂಗ್ರೆಸ್‌ನಿಂದ ಪಕ್ಷಾಂತರಗೊಂಡಾಗ, ಅವರನ್ನು ಪ್ರಜಾಪ್ರಭುತ್ವರಕ್ಷಕರು ಎಂದು ಘೋಷಿಸುತ್ತ, ಕೆಲವೊಮ್ಮೆ ಮುಖ್ಯಮಂತ್ರಿ ಅಥವಾ ಮಂತ್ರಿ ಪದವಿಯಂತಹ ಸ್ಥಾನಗಳನ್ನು ನೀಡಲಾಯಿತು. ಅದಕ್ಕೆ ಬದಲಾಗಿ, ಕಾಂಗ್ರೆಸ್ಸೇತರ ಪಕ್ಷಗಳಿಂದ ಅಥವಾ ಸಂಯುಕ್ತರಂಗಗಳಿಂದ ಪಕ್ಷಾಂತರಗಳು ನಡೆದಾಗ ಅದನ್ನು ಪ್ರಜಾಪ್ರಭುತ್ವವಿರೋಧಿ, ದೇಶವಿದ್ರೋಹಿ ಹಾಗೂ ಅನೈತಿಕ ಎಂದು ಬಣ್ಣಿಸಲಾಯಿತು, ಹಲವೊಮ್ಮೆ ಈ ಪಕ್ಷಾಂತರಿಗಳ ಮೇಲೆ ಹಲ್ಲೆಗಳ ಬೆದರಿಕೆಗಳೂ ಬಂದವು. ಈ ಮನೋಭಾವವೇ ಪಶ್ಚಿಮ ಬಂಗಾಳದಲ್ಲಿನ ಸದ್ಯದ ಪರಿಸ್ಥಿತಿಗೆ ಕಾರಣ; ಅಲ್ಲಿ ಸಂವಿಧಾನಾತ್ಮಕ ವಿಚಾರಗಳನ್ನು ಬೀದಿಗಳಲ್ಲಿ, ಸುಸಂಘಟಿತ ಹಿಂಸಾಚಾರಗಳ ಮೂಲಕ, ಇತ್ಯರ್ಥಮಾಡುವ ಪ್ರಯತ್ನಗಳು ನಡೆಯುತ್ತಿವೆ. ಇಂದಿನ ಸಂಪುಟದ ಸಿಂಧುತ್ವದ ಬಗ್ಗೆ ಸಭಾಧ್ಯಕ್ಷರು ನೀಡಿದ ವಿಚಿತ್ರ ರೂಲಿಂಗ್‌ನಿಂದಾಗಿ ಬಂಗಾಳದಲ್ಲಿನ ವಿಧಾನಸಭೆಯು ನಿಷ್ಕ್ರಿಯಗೊಳಿಸಲ್ಪಟ್ಟಿದೆ, ಜನಗಳನ್ನು ನಾಗರಿಕ ಅವಿಧೇಯತೆಯ ಹೆಸರಿನಲ್ಲಿ ದೊಡ್ಡ

ಪ್ರಮಾಣದ ಪತ್ರಿಭಟನೆಗಳನ್ನು ನಡೆಸಲು, ಒಂದರ್ಥದಲ್ಲಿ ಸಶಸ್ತ್ರ ಬಂಡಾಯಕ್ಕೆ ಪ್ರಚೋದಿಸಲಾಗುತ್ತಿದೆ. ಪರಿಸ್ಥಿತಿಯ ಮೇಲೆ ವಾಮಪಂಥೀಯ ಕಮ್ಯುನಿಸ್ಟ್ ಪಕ್ಷದ ಬಿಗಿಹಿಡಿತವಿದೆ ಎಂಬುದನ್ನು ನೋಡೊದರೆ ಅದರ ಗಂಭಿರತೆ ಎಂತಹುದು ಎಂಬುದನ್ನು ಊಹಿಸಿಕೊಳ್ಳಬಹುದು. ಸಂಯುಕ್ತರಂಗ ಸರ್ಕಾರದ ಕಾರ್ಯವೈಖರಿಯ ಬಗ್ಗೆ ಆಡುತ್ತಿರುವ ಈ ಮಾತುಗಳು ಉದ್ದೇಶಪೂರ್ವಕವಾದವಲ್ಲ, ಅಲ್ಲಿ ಕಾನೂನು ಸುವ್ಯವಸ್ಥೆಗಳು ಹದಗಟ್ಟಿದೆ, ಕಾರ್ಮಿಕ – ಆಡಳಿತಗಳ ನಡುವಣ ವಿವಾದಗಳನ್ನು ಕುಖ್ಯಾತವಾದ ಘೇರಾವ್ ಚಳವಳಿ ಮೂಲಕ ಸರ್ವೇಸಾಮಾನ್ಯವಾದ ಬಗೆಹರಿಸಲು ಪ್ರಯತ್ನಿಸಲಾಗುತ್ತಿದೆ, ಇದನ್ನು ವಿವಾದಗಳಿರುವ ಬೇರೆ ರಂಗಗಳಿಗೂ ವಿಸ್ತರಿಸಲಾಗುತ್ತಿದೆ.

ರಾಜಕೀಯ ರಂಗದಲ್ಲಿನ ಈ ಸವಾಲುಗಳ ಬಗ್ಗೆ ಹೆಚ್ಚಿನ ಗಂಭೀರ ಚಿಂತನೆ ಅಗತ್ಯವಾಗಿದೆ. ಏನೇ ಬೆಲೆ ತೆತ್ತಾಗಲೀ ಕಾನೂನು ಸುವ್ಯವಸ್ಥೆಯನ್ನು ಕಾಪಾಡಬೇಕಾಗಿದೆ. ಕಾನೂನುರಾಹಿತ್ಯ ಮತ್ತು ಹಿಂಸೆಗಳನ್ನೂ ಈಗಲೂ ಉತ್ತೇಜಿಸುವ ಪ್ರಯತ್ನಗಳು ನಡೆಯುತ್ತಿರುವುದು ದುರದೃಷ್ಟಕರ. ಎಲ್ಲ ದೃಷ್ಟಿಗಳಿಂದಲೂ ಇದು ಅತ್ಯಂತ ಅಪಾಯಕಾರಿಯಾದ ನಡೆ, ಅದನ್ನು ಪ್ರೋತ್ಸಾಹಿಸುತ್ತಿರುವ ರಾಜಕೀಯ ಪಕ್ಷಗಳಿಗೂ ಅದು ಅಪಾಯಕಾರಿಯಾದುದು ಎಂದು ಹೇಳಿದರೆ ತಪ್ಪಾಗಲಾರದು. ಉದ್ದೇಶಪೂರ್ವಕವಾಗಿ ಒಮ್ಮೆ ಕಾನೂನಿನ ಬಗ್ಗೆ ಅಗೌರವ ತೋರುವುದಕ್ಕೆ ಹಾಗೂ ಊಹೆಯದೋ ವಾಸ್ತವದ್ದೋ ಆದ ಸಮಸ್ಯೆಗಳ ಪರಿಹಾರಕ್ಕೆ ಏಕೈಕ ಸಾಧನವೆಂದು ಹಿಂಸಾಚಾರಕ್ಕಿಳಿಯಲು ಪ್ರೇರಿಸಿ ಅದಕ್ಕೆ ಅವಕಾಶವಿತ್ತರೆ, ಸಮಾಜದ ಅಸ್ತಿವಾರವೇ ಸಡಿಲಗೊಳ್ಳುತ್ತದೆ, ಪ್ರಜಾಪ್ರಭುತ್ವವಷ್ಟೇ ಅಲ್ಲ, ದೇಶದ ಉಳಿವಿಗೇ ಕಂಟಕಪ್ರಾಯವಾಗಿ, ಸ್ವಾತಂತ್ರ್ಯ ಸಂಗ್ರಾಮದ ಮೂಲಕ ಪಡೆದಿರುವ ಎಲ್ಲವನ್ನೂ ಕಳೆದುಕೊಳ್ಳಬೇಕಾಗುತ್ತದೆ. ಹೀಗಾಗಿ, ತಮ್ಮ ಆಲೋಚನೆ ಮತ್ತು ಕಾರ್ಯಗಳಿಂದ ಹಿಂಸೆಯನ್ನು ಕಿತ್ತೊಗೆಯಬೇಕೆಂದು, ನಮ್ಮ ಸ್ವತಂತ್ರ ಸಾರ್ವಭೌಮ ದೇಶದ ಬುನಾದಿಯನ್ನು ಕೆಡಹುವುದನ್ನು ನಿಲ್ಲಿಸಬೇಕೆಂದು ರಾಜಕೀಯ ಪಕ್ಷಗಳಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ರಾಜಕೀಯ ಭಿನ್ನಾಭಿಪ್ರಾಯಗಳು ಎಷ್ಟಾದರೂ ಧಾರಾಳವಾಗಿರಲಿ, ಪ್ರಜಾಸತ್ತಾತ್ಮಕ ಚುನಾವಣೆಗಳಲ್ಲಿ ಕಾಂಗ್ರೆಸ್ಸೇತರ ಪಕ್ಷಗಳು ಗೆಲವು ಪಡೆಯುವುದರ ಬಗ್ಗೆ ನನಗೆ ಮತ್ಸರವಿಲ್ಲ. ಆದರೆ ಪಕ್ಷಸಂಘರ್ಷಗಳು ನಿಯಮಾನುಸಾರವೇ ನಡೆಯಲಿ. ಅಂದರೆ ಹಿಂಸಾಚಾರ, ದ್ವೇಷ, ದೇಶದ್ರೋಹದ ಪ್ರಚೋದನೆ, ದೇಶದ ಆತೀಕ ವ್ಯವಸ್ಥೆಯನ್ನು ಹಾಳುಗೆಡುವುದು– ಇವುಗಳನ್ನು ತೊರೆಯಬೇಕೆಂಬುದು ಅದರ ಅರ್ಥ. ಅಂತಹ ಪ್ರಜಾಪ್ರಭುತ್ವವಿರೋಧಿ ಹಾಗೂ ದೇಶದ್ರೋಹಿ ಚಟುವಟಿಕೆಗಳನ್ನು ದೇಶ ಸಹಿಸದು. ಅವುಗಳನ್ನು ಹತ್ತಿಕ್ಕಲು ಅಗತ್ಯವಾದ ಎಲ್ಲ ಕ್ರಮಗಳನ್ನೂ

ಕೈಗೊಳ್ಳಲಾಗುತ್ತದೆ, ದೇಶದ ಸಮಗ್ರತೆ ಮತ್ತು ಉಳಿವುಗಳಿಗೆ ಆವಶ್ಯಕವಾದರೆ ಅಂತಹ ಚಟುವಟಿಕೆಗಳಲ್ಲಿ ತೊಡಗಿರುವ ಸಂಘಟನೆಗಳನ್ನು ಬಹಿಷ್ಕರಿಸಲೂ ಬೇಕಾಗಬಹುದು.

ಆರ್ಥಿಕಾಭಿವೃದ್ಧಿ ಮತ್ತು ರಾಜಕೀಯ ಸ್ಥಿರತೆಗಳು ಭಾರತದ ಇಂದಿನ ಅತ್ಯಂತ ಪ್ರಮುಖ ಆವಶ್ಯಕತೆಗಳು. ಇವು ವಾಸ್ತವವಾಗಿ ಪರಸ್ಪರಾವಲಂಬಿಗಳಾದರೂ, ಆರ್ಥಿಕಾಭಿವೃದ್ಧಿಯಿಲ್ಲದೆ ರಾಜಕೀಯ ಸ್ಥಿರತೆ ಇರಲು ಸಾಧ್ಯವಾಗುವ ಸನ್ನಿವೇಶವನ್ನು ಕಲ್ಪಿಸಿಕೊಳ್ಳಬಹುದು; ಆದರೆ, ರಾಜಕೀಯ ಸ್ಥಿರತೆಯಿಲ್ಲದೆ ಆರ್ಥಿಕಾಭಿವೃದ್ಧಿಯಂತೂ ಆಗಲು ಸಾಧ್ಯವೇ ಇಲ್ಲ. ಇಂತಹ ಸನ್ನಿವೇಶದಲ್ಲಿ ನಾವು ಚುನಾವಣೋತ್ತರ ಬೆಳವಣಿಗೆಗಳ ಬಗ್ಗೆ ಪರಿಶೀಲಿಸಿ ತೀರ್ಮಾನಿಸಬೇಕಾಗಿದೆ.

ಕೇಂದ್ರದ ಅಧಿಕೃತ ಭಾಷೆಯ ಸಮಸ್ಯೆಯು ಸದಾ ಕ್ಲಿಷ್ಟಕರವೂ ಗೊಂದಲಮಯವೂ ಆದ ಸಮಸ್ಯೆಯಾಗಿದೆ. ಸಾಕಷ್ಟು ಚರ್ಚೆ– ಪರಿಶೀಲನೆಗಳ ನಂತರವೇ ದಿವಂಗತ ಪ್ರಧಾನ ಮಂತ್ರಿ ಜವಹರಲಾಲ್ ನೆಹರೂ ಅವರು ಈ ವಿಷಯಲ್ಲಿ ಒಮ್ಮತದ ಸೂತ್ರವೊಂದನ್ನು ರೂಪಿಸಿ, ಹಿಂದಿಯನ್ನು ಅಧಿಕೃತ ಭಾಷೆಯಾಗಿ ಅಳವಡಿಸಿಕೊಳ್ಳಲಾಗದ ಅನನುಕೂಲಕರ ಸನ್ನಿವೇಶದಲ್ಲಿ, ಅವರು ಬಯಸುವವರೆಗೂ ಒತ್ತಾಯಿಸಲಾಗುವುದಿಲ್ಲವೆಂದು ಹಿಂದೀತರ ಜನರಿಗೆ ಆಶ್ವಾಸನೆಯಿತ್ತರು. ಕೇಂದ್ರ ಸರ್ಕಾರದ ಆಡಳಿತಕ್ಕೆ ದ್ವಿಭಾಷಾ ಬಳಕೆ ಮತ್ತು ಪೂರಕವಾಗಿ ಆವಶ್ಯಕವಾದಂತೆ ಶಿಕ್ಷಣ ಕ್ಷೇತ್ರದಲ್ಲಿ ತ್ರಿಭಾಷಾ ಸೂತ್ರ ಇವು ಪರಿಹಾರದ ಮೂಲಶ್ರುತಿ. ಈಚಿನ ಸಂಸತ್ ಅಧಿವೇಶನದಲ್ಲಿ ಅಧಿಕೃತ ಭಾಷಾ (ತಿದ್ದುಪಡಿ) ಮಸೂದೆಯನ್ನು ಒಪ್ಪಿ ನೆಹರೂ ಅವರ ಆಶ್ವಾಸನೆಗೆ ಕಾನೂನುಬದ್ಧ ನೆಲೆಯನ್ನೂ ಒದಗಿಸಿರುವುದು ನಮಗೆ ಸಂತಸ ತರಬೇಕಾಗಿದೆ. ನಿರ್ಣಯಕ್ಕೆ ಸೂಚಿಸಿ ಮಸೂದೆಯೊಡನೆ ಒಪ್ಪಿತಗೊಂಡ ಕೆಲವು ತಿದ್ದುಪಡಿಗಳ ವಿಷಯದಲ್ಲಿ ಕೆಲವು ವಿವಾದಗಳೂ ಎದ್ದಿವೆ. ಈ ವಿಷಯದ ಬಗ್ಗೆ ಇನ್ನೂ ಚರ್ಚೆಗಳು ನಡೆಯಬಹುದು, ಈ ವಿಷಯದ ಬಗ್ಗೆ ಕೇಂದ್ರ ಸರ್ಕಾರದೊಡನೆ ಪ್ರಸ್ತಾಪಿಸಲು ನಾನು ಸಿದ್ಧನಿದ್ದೇನೆ. ವ್ಯಾವಹಾರಿಕ ಉಪಯೋಗದಲ್ಲೇನಾದರೂ ತೊಂದರೆಗಳಿದ್ದರೆ, ಅವುಗಳ ಬಗ್ಗೆ ಸಮಂಜಸ ಹಂತಗಳಲ್ಲಿ ಚರ್ಚೆ ನಡೆಸಿ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳಬೇಕು. ಆದ್ದರಿಂದ, ಎಲ್ಲ ಹಿಂದೀತರ ಭಾಷಿಕವರ್ಗಗಳಲ್ಲಿ ನಾನು ಮಾಡಿಕೊಳ್ಳುವ ಮನವಿಯೇನೆಂದರೆ, ಪ್ರತಿಭಟನೆಯ ಹಾದಿಯನ್ನು ಬಿಟ್ಟು, ಸಂಬಂಧಿಸಿದ ಎಲ್ಲರಿಗೂ ಒಪ್ಪಿತವಾಗುವ ಪರಿಹಾರವನ್ನು ಕಂಡುಕೊಳ್ಳಬಹುದಾದ ಪರಿಸ್ಥಿತಿಯ ನಿರ್ಮಾಣಕ್ಕೆ ಬೇಕಾದ ವಾತಾವರಣವನ್ನು ನಿರ್ಮಾಣಮಾಡಿ ಎಂದು. ಹಿಂದಿ ಜನರಿಗೂ ನನ್ನ ವಿಶೇಷ ಮನವಿಯೊಂದಿದೆ. ಹಿಂದಿಯನ್ನು ಕೇಂದ್ರದ ಅಧಿಕೃತ ಭಾಷೆಯೆಂದು ಸಂವಿಧಾನದಲ್ಲಿ ಒಪ್ಪಿಕೊಳ್ಳಲಾಗಿದೆ. ಹಿಂದಿಯನ್ನು ವಿರೋಧಿಸುವವರು

ಕೂಡ ಹಾಗೆ ಮಾಡುವುದು ದ್ವಿಭಾಷಿಕ ಸಂಕ್ರಮಣ ಕಾಲವೊಂದಿರಬೇಕೆಂಬ ಕಾರಣಕ್ಕಾಗಿ, ಇದು ದೀರ್ಘವಾದುದಾಗಿರಬಹುದು, ಅದಕ್ಕೆ ಕಾರಣ ಹಿಂದೀತರ ಜನಗಳಿಗೆ ಕಷ್ಟವಾಗ ಬಾರದು, ಅವರನ್ನು ಹೀಗಳೆಯಬಾರದು ಎಂಬ ಉದ್ದೇಶ. ಇತರರು ಒಪ್ಪಿಕೊಳ್ಳಬೇಕೆಂದು ಕೇಳುತ್ತಿರುವ ತಮ್ಮ ಭಾಷೆಯಾದ ಹಿಂದಿಯ ಬಗ್ಗೆ ವಿನಾಯಿತಿಗಳನ್ನು ತೋರಿಸಿ, ಹಿಂದಿಯೇತರ ಜನಗಳ ಮನಸ್ಸಿನಲ್ಲಿರಬಹುದಾದ ಎಲ್ಲ ಸಂದೇಹಗಳನ್ನು ನಿವಾರಿಸ ಬಲ್ಲಂತಹ ರಕ್ಷಣಾಕ್ರಮಗಳನ್ನು ಕೈಗೊಳ್ಳಬೇಕಾದುದು ಅನಿವಾರ್ಯ. ದುರದೃಷ್ಟವಶಾತ್, ಈ ಭಾಷಾ ಸಮಸ್ಯೆಗಳನ್ನು ಅನ್ಯ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ, ಈ ಪ್ರಕ್ರಿಯೆಯಲ್ಲಿ ಎಲ್ಲ ದೇಶಭಕ್ತ ಭಾರತೀಯನಿಗೂ ಪರಮಮಾನ್ಯವಾದ ದೇಶದ ಸಮಗ್ರತೆಗೇ ಧಕ್ಕೆ ಒದಗುವಂತಾಗಿದೆ. ಈಗ ಉತ್ತರ ಹಾಗೂ ದಕ್ಷಿಣ ಭಾರತದ ಭಾಗಗಳಲ್ಲಿ ಆಗುತ್ತಿರುವಂತೆ ತೀವ್ರ ಹಿಂಸೆಯಲ್ಲಿ ಪರ್ಯವಸಾನವಾಗಬಹುದಾದ ಪ್ರತಿಭಟನೆಯಲ್ಲಿ ತೊಡಗಿ ತಮ್ಮ ಶಕ್ತಿಯನ್ನು ವ್ಯರ್ಥಮಾಡಿಕೊಳ್ಳುವ ಬದಲು, ಬಗೆಹರಿಸಲು ದೇಶದ ಮುಂದೆ ಇರುವ ಅನೇಕ ಮುಖ್ಯ ಸಮಸ್ಯೆಗಳ ಪರಿಹಾರಕ್ಕಾಗಿ ಎಲ್ಲ ಪ್ರಜೆಗಳು ಹೆಣಗಬೇಕಾಗಿದೆ. ಸಮಗ್ರತೆ ಮತ್ತು ಒಗ್ಗಟ್ಟನ್ನು ಬಲಪಡಿಸುವ ಪ್ರಯತ್ನಗಳಿಗೆ ವಿರೋಧವೆನಿಸುವ ಇಂತಹ ಚಟುವಟಿಕೆ ಗಳಿಗೆ ಕೊನೆ ಹಾಡಿರೆಂದು ಪ್ರಾಂಜಲತೆ ವಿನಮ್ರತೆಗಳಿಂದ ನಾನು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ.

ಕೆಲವು ರಾಜ್ಯಗಳ ನಡುವೆ ಗಡಿ ವಿವಾದಗಳಿಗೆ ಸಂಬಂಧಿಸಿದಂತಹ ಸಮಸ್ಯೆಗಳೂ ಇವೆ. ಬಹು ಹಿಂದೆಯೇ, ೧೯೨೧ ರಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ, ಭಾಷಾವಾರು ಪ್ರಾಂತಗಳ ರಚನೆಯ ಧೋರಣೆಯನ್ನು ಕಾಂಗ್ರೆಸ್ ಅಂಗೀಕರಿಸಿತು. ಕಾಂಗ್ರೆಸ್ ಅನ್ನು ಉತ್ತಮವಾಗಿ ಸಂಘಟಿಸಲು ಸಾಧ್ಯವಾಗುವಂತೆ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ಮತ್ತು ಆಂಧ್ರ ಪ್ರದೇಶ್ ಪ್ರಾಂತೀಯ ಕಾಂಗ್ರೆಸ್ ಸಮಿತಿಗಳಂತಹ ಪ್ರಾಂತೀಯ ಕಾಂಗ್ರೆಸ್‌ಗಳು ರಚಿತವಾದವು. ಇದಕ್ಕು ಮೊದಲೇ ಉತ್ತರದಲ್ಲಿ ಭಾಷಾಧಾರಿತವಾಗಿ ಸಿಂಧ್ ಮತ್ತು ಒರಿಸ್ಸಾದಂತಹ ಕೆಲವು ರಾಜ್ಯಗಳು ರೂಪುಗೊಂಡಿದ್ದುವು. ಆದರೆ ಅಂತಿಮವಾಗಿ ಇಡೀ ದೇಶವು ಭಾಷಾಧಾರಿತವಾಗಿ ರಾಜ್ಯಗಳಾಗಿ ವಿಂಗಡಣೆಗೊಂಡದ್ದು ೧೯೫೬ರಲ್ಲಿ. ಇದರಿಂದಾಗಿ ಪ್ರಜಾಸತ್ತಾತ್ಮಕ ಕಾರ್ಯವಿಧಾನ ಹಾಗೂ ಜನಗಳ ತೊಡಗು ವಿಕೆಗಳು ಮತ್ತಷ್ಟು ಪರಿಣಾಮಕಾರಿಯಾಗಿ ಅವರ ಆರ್ಥಿಕಾಭಿವೃದ್ಧಿಯು ಹೆಚ್ಚಿರುವದರಲ್ಲಿ ಸಂಶಯವಿಲ್ಲ. ಆದರೆ ಎರಡು ಮೂರು ರಾಜ್ಯಗಳಲ್ಲಿ ಅಲ್ಪಸ್ವಲ್ಪ ಗಡಿಹೊಂದಾಣಿಕೆಗಾಗಿ ಚಳವಳಿಗಳು ಇನ್ನೂ ನಡೆಯುತ್ತಿವೆ. ಈ ಗಡಿಗಳ ಹೊಂದಾಣಿಕೆಯನ್ನು ಅಂತಿಮವಾಗಿ ಪರಿಹರಿಸಬೇಕಾದುದು ಆವಶ್ಯಕವಾದರೂ, ರಾಜಕೀಯ ಅಥವಾ ಪಕ್ಷ ಹಿತಸಾಧನೆಗೆ ಅದನ್ನು ಬಂಡವಾಳವನ್ನಾಗಿ ಮಾಡಿಕೊಳ್ಳಬಾರದೆಂಬುದನ್ನು ಅರಿತುಕೊಳ್ಳಬೇಕು.

ಈ ಸಮಸ್ಯೆಗೆ ವ್ಯಾಪಕವೂ ಉದಾರವೂ ಆದ ಮನೋಭಾವ ಅಗತ್ಯ. ಗಡಿಗಳುದ್ದಕ್ಕೂ ಪರಸ್ಪರರ ಭಾಷೆಗಳನ್ನಾಡುವ ಹಾಗೂ ಅರಿತುಕೊಳ್ಳುವ ಪ್ರವೃತ್ತಿಯಿರುವುದರಿಂದ ಖಡಾಖಂಡಿತವಾಗಿ ಗೆರೆಗಳನ್ನೆಳೆದು ಗಡಿಗಳನ್ನು ನಿರ್ಧರಿಸಿವುದು ಸಾಧ್ಯವಿಲ್ಲ. ಹಾಗೆಯೇ ಕೆಲವು ನದಿಗಳ ನೀರಿನ ಹಂಚಿಕೆಯ ಬಗ್ಗೆಯೂ ವಿವಾದಗಳಿವೆ. ಇಂತಹ ಸಣ್ಣಮಟ್ಟ ವೆನ್ನಬಹುದಾದ ಭಿನ್ನಾಭಿಪ್ರಾಯಗಳನ್ನು ಚರ್ಚೆ – ಸದ್ಭಾವನೆಗಳ ಮೂಲಕ ಬಗೆಹರಿಸಿ ಕೊಳ್ಳಬಹುದು; ಅದಕ್ಕೆ ಹಿಂಸಾತ್ಮಕ ಚಳವಳಿಗಳ ಅಥವಾ ಅಂಥ ಚಳವಳಿಗಳ ಬೆದರಿಕೆಯ ಆವಶ್ಯಕತೆಯಿಲ್ಲ. ಅಂತಹವು ಇಬ್ಬಾಯ ಕತ್ತಿಗಳಾದ್ದರಿಂದ ಮಾಡಿದವರಿಗೇ ಮುಳುವಾಗ ಬಹುದು.

ಕಳೆದ ಐದು ವರ್ಷಗಳು ಎಂದರೆ ದೇಶವು ಬಿಕ್ಕಟ್ಟನ್ನು ಎದುರಿಸಿದ ಅವಧಿ. ಚೀನೀ ಆಕ್ರಮಣದಿಂದ ಹಿಡಿದು, ಪಾಕಿಸ್ತಾನದೊಡಗಿನ ಘರ್ಷಣೆ ಮತ್ತು ಐದು ವರ್ಷಗಳ ನಿರಂತರ ಗಂಭೀರ ಬರ ಪರಿಸ್ಥಿತಿ ಇವುಗಳಿಂದಾಗಿ ದೇಶದ ಆರ್ಥಿಕ ಪರಿಸ್ಥಿತಿಯು ಅನೇಕ ದೃಷ್ಟಿಗಳಿಂದ ಸಂದಿಗ್ಧಕ್ಕೊಳಗಾಗಿದೆ. ಕೃಷಿ ಉತ್ಪಾದನೆ ಕುಂಠಿತ ಗೊಂಡಿದ್ದರಿಂದಾಗಿ ಪದಾರ್ಥಗಳ, ಅದರಲ್ಲೂ ಆಹಾರಧಾನ್ಯಗಳು ಮತ್ತಿತರ ಆವಶ್ಯಕ ವಸ್ತುಗಳ, ಬೆಲೆಗಳು ಏರಿದೆ; ಈ ಹಣದುಬ್ಬರದ ಜೊತೆಗೆ ಆರ್ಥಿಕ ಹಿಂಜರಿತದ ಕಾರಣದಿಂದಾಗಿ ಆವಶ್ಯಕ ವಸ್ತುಗಳ ಹಾಗೂ ಇಂಜಿನಿಯರಿಂಗ್ ಕ್ಷೇತ್ರಗಳನ್ನೊಳ ಗೊಂಡಂತೆ ವ್ಯಾಪಕ ಕೈಗಾರಿಕಾ ವಲಯವು ಆಘಾತಕ್ಕೊಳಗಾಗಿದೆ. ಆದರೆ ಅದೃಷ್ಟಕ್ಕೆಂ ಬಂತೆ, ಈ ನಡೆಯಲ್ಲಿ ಆರೋಗ್ಯಕರ ಬದಲಾವಣೆಯೂ ಕಾಣಿಸಿಕೊಂಡಿದೆ, ಇದಕ್ಕೆ ಕಾರಣ ಕೃಷಿ ಉತ್ಪಾದನೆಯ ಹೆಚ್ಚಳ. ಈ ವರ್ಷ ಸುಮಾರು ಒಂಬತ್ತೂವರೆ ಕೋಟಿ ಟನ್‌ಗಳಷ್ಟು ಆಹಾರಧಾನ್ಯ ಮತ್ತು ಅದಕ್ಕೆ ಸಂವಾದಿಯಾಗಿ ನಾರು ಮತ್ತು ಎಣ್ಣೆಬೀಜಗಳ ಉತ್ಪಾದನೆಯ ಪ್ರಮಾಣ ದಾಖಲೆ ಮಟ್ಟ ತಲುಪುವ ನಿರೀಕ್ಷೆಯಿದೆ. ಇದಕ್ಕೆ ಕಾರಣ ಕೇವಲ ಅನುಕೂಲಕರ ಹವಾಮಾನ ಪರಿಸ್ಥಿತಿಯಲ್ಲ, ಅದರೊಡನೆ ಕೃಷಿ ಕ್ಷೇತ್ರದಲ್ಲಿನ ಸುಧಾರಿತ ವಿಧಾನಗಳು. ಗೋಧಿ, ಬತ್ತ, ಮೆಕ್ಕೆಜೋಳ, ಜೋಳ, ಬಜ್ರ ಮತ್ತಿತರ ಆಹಾರಧಾನ್ಯಗಳ ಹೆಚ್ಚು ಇಳುವರಿಯ ತಳಿಗಳು, ಜೊತೆಗೆ ಕೃತಕ ಗೊಬ್ಬರಗಳ ಬಳಕೆ ಮತ್ತು ಪೈರು ಸಂರಕ್ಷಣ ವಿಧಾನಗಳು ಆಗಲಿರುವ ಕೃಷಿ ಉತ್ಪಾದನಾ ಕ್ರಾಂತಿಗೆ ಕಾರಣಗಳು. ಹೊಸ ವಿಧಾನಗಳಿಂದಾಗಿ ಹತ್ತಿ, ಸೆಣಬು ಮತ್ತು ಎಣ್ಣೆಕಾಳುಗಳ ಉತ್ಪಾದನೆ ಯಲ್ಲಿಯೂ ಹಿತಕರ ಬದಲಾವಣೆಗಳಾಗುತ್ತಿವೆ. ಕಾಣ್ಕೆ ಮತ್ತು ದೃಢನಿಶ್ಚಯಗಳಿಂದ ಮುಂದುವರಿದರೆ ಕೃಷಿ ಕ್ಷೇತ್ರದಲ್ಲಿ ನಾವು ಬಯಸುವ ಕ್ರಾಂತಿಯನ್ನು ವಾಸ್ತವಕ್ಕಿಳಿಸ ಬಹುದು. ಇದರಿಂದ ಆಹಾರದ ಸ್ವಯಂಪೂರ್ಣತೆಯಲ್ಲದೆ, ಕೈಗಾರಿಕೋತ್ಪನ್ನಗಳು, ಕಚ್ಚಾ ಸಾಮಗ್ರಿಗಳು ಹಾಗೂ ಇತರ ಪದಾರ್ಥಗಳ ಉತ್ಪಾದನೆಯಲ್ಲಿಯೂ ಹೆಚ್ಚಳ

ವುಂಟಾಗಿ ರಫ್ತು ಮಾಡಲೂ ಅನುಕೂಲಕರವಾಗುತ್ತದೆ. ಇದರಿಂದ ಒಟ್ಟಾರೆ ನಮ್ಮ ಆರ್ಥಿಕತೆಗೆ ಹೊಸ ಹಾರುನೆಲೆ ಒದಗಿದಂತಾಗುತ್ತದೆ. ಉತ್ತಮ ಕೃಷಿ ಉತ್ಪಾದನೆಯ ಅನುಕೂಲವನ್ನು ಬಳಸಿಕೊಂಡು ದೇಶದ ಒಟ್ಟಾರೆ ಆರ್ಥಿಕ ವ್ಯವಸ್ಥೆಗೆ ಬೇಕಾದ ವಿಧಾನಗಳನ್ನು ಅನುಸರಿಸಬೇಕು.

ಕೃಷಿ ವಲಯದ ಈ ಉತ್ತಮ ಸಾಧನೆಯು ಮತ್ತೊಂದು ದೃಷ್ಟಿಯಿಂದಲೂ ಉತ್ತೇಜನಕರವಾಗಿದೆ, ಅದೆಂದರೆ ಹಳ್ಳಿಗಾಡುಗಳಲ್ಲಿ ದುಡಿಯುವ ಕೋಟ್ಯಂತರ ಜನರ ಬದುಕಿಗೆ ಹೊಸ ಭರವಸೆ. ಕೃಷಿ ಉತ್ಪಾದನೆಯಿಂದ ರೈತಾಪಿ ಜನಗಳ ಬಾಳು ಹಸನಾಗು ವುದರ ಜೊತೆಗೆ, ಹಳ್ಳಿ ಪ್ರದೇಶಗಳ ಅಭಿವೃದ್ಧಿಗೆ ಹೊಸ ನೆಲೆಗಳನ್ನು ಸೃಷ್ಟಿಸಲು ಕಾರಣವೂ ಆಗುತ್ತದೆ. ಹೊಸ ಬಗೆಯ ಆಹಾರ ಸಂಸ್ಕರಣ ಘಟಕಗಳು, ಉಗ್ರಾಣ ವ್ಯವಸ್ಥೆ, ಸಾಗಾಣಿಕೆ ಸೌಲಭ್ಯ ಮುಂತಾದವು ಕೂಡ ಆಗಬೇಕಾಗಿದೆ. ಹೊಸ ಗ್ರಾಮೀಣ ಭಾರತ ನಿರ್ಮಾಣಕ್ಕೆ ನಾಯಕತ್ವ ಒದಗಿಸಲು ನಿಷ್ಠೆ ಮತ್ತು ಉತ್ಸಾಹಗಳಿಂದ ಕೂಡಿದ ಹೊಸ ಪೀಳಿಗೆಯ ಸುಸಂಘಟಿತ ಪಡೆಯೊಂದು ಸಿದ್ಧಗೊಳ್ಳಬೇಕಾಗಿದೆ.

ಆದರೆ ಇದರ ಸಾಧನೆಗಾಗಿ ಕೆಲವು ಮೂಲಭೂತ ಅಂಶಗಳು ಆವಶ್ಯಕ. ಗೊಬ್ಬರ ಗಳೂ, ಒಳ್ಳೆಯ ಬಿತ್ತನೆ ಬೀಜ, ಕೀಟನಾಶಕಗಳು, ಸಹಕಾರಿ ಸಂಗ್ರಹಣಪದ್ಧತಿ ಮತ್ತು ಹಂಚಿಕೆ ಇವುಗಳನ್ನು ಪ್ರೋತ್ಸಾಹಿಸಿ, ಅವು ಕೃಷಿಯ ಭಾಗಗಳಗುತ್ತ ಇದ್ದರೂ, ಎರಡು ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಒಂದು, ಕಡಿಮೆ ಬಡ್ಡಿ ದರದಲ್ಲಿ ಸಾಲಸೌಲಭ್ಯ. ಬೇಸಾಯಗಾರರಿಗೆ ಸಾಲ ಸೌಲಭ್ಯವನ್ನು ಸಹಕಾರ ಸಂಘಗಳ ಮೂಲಕ ಒದಗಿಸುವ ಸೌಕರ್ಯಗಳು ತಕ್ಕಮಟ್ಟಿಗೆ ಉತ್ತಮಗೊಂಡಿದ್ದರೂ, ಇನ್ನೂ ಮಾಡಬೇಕಾ ದುದು ಬಹಳವಿದೆ. ರೈತನಿಗೆ ಬೇಕಾದ ಸಾಲವೆಲ್ಲ ಸುಲಭವಾಗಿಯೂ, ಸಮಯಕ್ಕೆ ಸರಿಯಾಗಿಯೂ, ಶೀಘ್ರವಾಗಿಯು, ತನ್ನ ಹಳ್ಳಿಯ ಹತ್ತಿರದಲ್ಲಿಯೂ ಸಿಕ್ಕುವ ಹಾಗೆ ಆಗುವ ಕಾಲ ಬೇಗ ಬರಬೇಕಾಗಿದೆ. ಅಲ್ಲದೆ, ಕೃಷಿಯನ್ನು ಒಂದು ಕೈಗಾರಿಕೆಯೆಂದು ಮನ್ನಣೆ ಮಾಡಿ, ಸಾಲದ ವಿಷಯದಲ್ಲಿ ಆ ರೀತಿ ಪರಿಗಣಿಸಬೇಕಾಗಿದೆ. ಬೇಸಾಯಗಾರ ಪ್ರಾಮಾಣಿಕ, ಸಾಲಗಾರರನ್ನು ನಂಬಬಹುದು. ಖಾಸಗಿಯಾಗಲೀ ಸಾರ್ವಜನಿಕ ಕ್ಷೇತ್ರ ದವಾಗಲೀ ಬ್ಯಾಂಕುಗಳು ನೀಡುವ ಸಾಲಸೌಲಭ್ಯವು ನಗರ ಪ್ರದೇಶಗಳೊಂದಿಗೆ ಹೋಲಿಸಿದರೆ ಹಳ್ಳಿಗಳಲ್ಲಿ ನೀಡುತ್ತಿರುವುದು ತೀರ ಕಡಿಮೆ. ಇದು ಬದಲಾವಣೆಗೊಂಡು ಹೆಚ್ಚು ಸಾಲವು ಹಳ್ಳಿಗಳ ಕಡೆಗೆ ಹರಿಯಬೇಕಾಗಿದೆ. ಕೃಷಿಯು ಕೈಗಾರಿಕೆಯೆಂಬ ಮಾನ್ಯತೆ ಪಡೆದು ಗರಿಷ್ಠ ಸಾಲ ಸೌಲಭ್ಯಗಳನ್ನು ಪಡೆಯುವಂತಾಗಬೇಕು. ಇದರ ಆವಶ್ಯಕತೆಯು ಸರ್ಕಾರ ಮತ್ತು ಬ್ಯಾಂಕುಗಳಿಗೆ ಹೆಚ್ಚು ಮನವರಿಕೆಯಾಗುತ್ತಿರುವುದನ್ನು ಕಂಡು ನನಗೆ ಸಂತಸವಾಗಿದೆ. ನಗರದ ದೊಡ್ಡ ದೊಡ್ಡ ಕೈಗಾರಿಕೆಗಳಲ್ಲಿ ಹಣ ಹೂಡಲು

ಖಾಸಗಿಯದಾಗಲೀ ಸಾರ್ವಜನಿಕ ಕ್ಷೇತ್ರದವಾಗಲೀ ಬ್ಯಾಂಕುಗಳು ತೋರುತ್ತಿರುವ ಉತ್ಸಾಹವನ್ನು ಹಳ್ಳಿಗಳಲ್ಲಿ ಹೂಡಲು ತೋರುತ್ತಿಲ್ಲ. ಇದು ಎಷ್ಟು ಬೇಗ ಬದಲಾವಣೆಗೊಂಡರೆ ಅಷ್ಟೂ ಒಳ್ಳೆಯದು. ಈ ಪ್ರಮುಖ ಸಾಮಾಜಿಕ ಮತ್ತು ಆರ್ಥಿಕ ಆವಶ್ಯಕತೆಯನ್ನು ಪೂರೈಸಲು ಕೇಂದ್ರ ಸರ್ಕಾರದ ಅರ್ಥ ಸಚಿವಾಲಯವು ಹೆಚ್ಚು ಒತ್ತಡ ಹೇರುತ್ತಿರುವಂತೆ ಕಾಣುತ್ತದೆ. ಎರಡೂ ವಲಯಗಳ ಬ್ಯಾಂಕುಗಳು ತಮ್ಮ ಮಾರ್ಗ ಮತ್ತು ಮನೋಭಾವಗಳನ್ನು ಬದಲಾಯಿಸುವ ಆವಶ್ಯಕತೆಯನ್ನು ಅರಿತುಕೊಳ್ಳುವರೆಂದು ನನಗೆ ಭರವಸೆಯಿದೆ. ಇಲ್ಲದಿದ್ದರೆ ಅಪೇಕ್ಷಣೀಯ ಮಾರ್ಗವನ್ನು ಅನುಸರಿಸಲು ಸರ್ಕಾರವು ತನಗೆ ಲಭ್ಯವಿರುವ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಕೃಷಿ ಉತ್ಪಾದನೆಗಳಿಗೆ ದೊರೆಯುತ್ತಿರುವ ಉತ್ತಮ ಬೆಲೆಗಳಿಂದಾಗಿ ಗ್ರಾಮೀಣ ವಲಯವು ಬ್ಯಾಂಕುಗಳಲ್ಲಿ ಹಾಗೂ ಸಹಕಾರಿ ಸಂಸ್ಥೆಗಳಲ್ಲಿ ಹೆಚ್ಚು ಹಣವಿಡಲು ಸಾಧ್ಯವಾಗುತ್ತಿರುವುದು ಗೋಚರಿಸುತ್ತಿದೆ. ಇದನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಇಂತ ಹಣ ಹೂಡಿಕೆಯನ್ನು ಉತ್ತೇಜಿಸಲು ಬೇಕಾದ ಕ್ರಮಗಳನ್ನು ಕೈಗೊಳ್ಳಬೇಕು.

ಇಷ್ಟೇ ಮುಖ್ಯವಾದುದು, ಹೆಚ್ಚು ಪ್ರದೇಶವನ್ನು ನೀರಾವರಿಗೆ ಒಳಪಡಿಸುವುದು. ನಮ್ಮ ದೇಶದಲ್ಲಿ ಬೇಸಾಯ ಎಂಬುದು ಮಳೆಯ ತಿಕ್ಕಲುತನದಿಂದಾಗಿ ಜೂಜಿನಂತಾಗಿದೆ. ಹವಾಮಾನದ ಬಗ್ಗೆ ದೂರಿಕೊಳ್ಳುತ್ತಿದ್ದರೆ ಹೆಚ್ಚು ಪ್ರಯೋಜನವಾಗದು, ಹಾಗಾಗಿ ಇತರ ನಂಬಲರ್ಹ ಮಾರ್ಗೋಪಾಯಗಳನ್ನು ಕೈಗೊಳ್ಳಬೇಕು. ಮಳೆಯ ನೀರಿನ ಪ್ರತಿ ಹನಿಯನ್ನು ಕಾಪಿಟ್ಟುಕೊಳ್ಳುವ ಕ್ರಮಗಳನ್ನು ಕೈಗೊಂಡು ಹೆಚ್ಚು ಹೆಚ್ಚು ಭೂಮಿಯನ್ನು ನೀರಾವರಿಗೆ ಅಳವಡಿಸಬೇಕು. ನೀರಾವರಿ ಬಾವಿಗಳು, ಬದುಗಳ ಭದ್ರಪಡಿಸುವಿಕೆ, ಅರಣ್ಯೀಕರಣ, ಕೆರೆಗಳ ಮೂಲಕ ಸಣ್ಣ ನೀರಾವರಿ ಯೋಜನೆಗಳು ಮುಂತಾದವನ್ನು ಕೈಗೊಂಡು ಇದನ್ನು ಸಾಕಾರಗೊಳಸಿಬೇಕು. ಆದರೆ ಇವುಗಳಿಂದ ಸಮಸ್ಯೆಯ ಒಂದು ಭಾಗ ಮಾತ್ರವೇ ಪರಿಹಾರಗೊಳ್ಳಬಹುದು. ಮಳೆ ಕೈಕೊಟ್ಟರೆ ಉಂಟಾಗುವ ಸಮಸ್ಯೆಗಳನ್ನೆದುರಿಸಲು ಬೇಕಾದುದೆಂದರೆ ಮಧ್ಯಮ ಮತ್ತು ಭಾರಿ ನೀರಾವರಿ ಯೋಜನೆಗಳ ನಿರ್ಮಾಣ. ಇದರಿಂದ ನೀರಾವರಿ ಸಮಸ್ಯೆಗಳು ನೇರವಾಗಿ ಪರಿಹಾರಗೊಳ್ಳುವುದಲ್ಲದೆ, ಬರಗಾಲದಂತಹ ಪರಿಸ್ಥಿತಿಗಳಲ್ಲಿ ಪೂರಕ ಆಕರವಾಗುತ್ತದೆ.

ನಮ್ಮ ದೊಡ್ಡ ನದಿಗಳನ್ನು ಈ ದಿಸೆಯಲ್ಲಿ ಬಳಕೆಮಾಡಿಕೊಳ್ಳಬೇಕು. ಅವುಗಳಲ್ಲಿನ ಶೆಕಡ ಹತ್ತು ಭಾಗದಷ್ಟು ನೀರನ್ನೂ ಬಳಕೆಮಾಡಿಕೊಳ್ಳುತ್ತಿಲ್ಲ ಎಂದು ಹೇಳಲಾಗುತ್ತದೆ. ನೀರಾವರಿಯ ಈ ದೊಡ್ಡ ಸಮಸ್ಯೆಯ ಕಡೆಗೆ ನಮ್ಮ ಗಮನ ಹರಿದಿದ್ದರೆ, ನಾವು ಭವನಾಸಿ ಹಿಡಿದು ಮಾನವನ ಮೂಲಭೂತ ಆವಶ್ಯಕತೆಯಾದ ಆಹಾರಕ್ಕಾಗಿ ಬಿಕ್ಕೆ ಬೇಡುವ ಪರಿಸ್ಥಿತಿ ಬರುತ್ತಿರಲಿಲ್ಲ.

ಈಗಲೂ, ಈ ಮಧ್ಯಮ ಮತ್ತು ಭಾರಿ ನೀರಾವರಿ ಯೋಜನೆಗಳ ನಿರ್ಮಾಣಕ್ಕಾಗಿ ಬೇಕಾದ ಹಣಕಾಸಿನ ಹೆಚ್ಚಿನ ಪಾಲನ್ನು ರಾಜ್ಯಗಳು ವಹಿಸಿಕೊಳ್ಳಲು ಪರದಾಡುವ ಬದಲು, ಯೋಜನಾ ಆಯೋಗ ಮತ್ತು ಕೇಂದ್ರ ಸರ್ಕಾರಗಳು ಸೇರಿ ಈ ಕಡೆಗೆ ತಮ್ಮ ಗಮನ ಹರಿಸಿ ಈ ದೊಡ್ಡ ಯೋಜನೆಗಳನ್ನು ರಾಷ್ಟ್ರೀಯ ಯೋಜನೆಗಳೆಂದು ಪರಿಗಣಿಸಿ ಅವುಗಳನ್ನು ಪೂರೈಸಲು ಬೇಕಾದ ಹಣದ ನೆಲೆಯನ್ನು ಹುಡುಕಬೇಕು. ನೀರಾವರಿಯಂತಹ ಯೋಜನೆಗಳನ್ನು ನಿರ್ವಹಿಸಲು ಕೊರತೆಯ ಅರ್ಥವ್ಯವಸ್ಥೆಯನ್ನೂ ನಾನು ಸೂಚಿಸಲಿಚ್ಛಿಸುತ್ತೇನೆ. ಇದರಿಂದ ಈಗಿಗಿಂತ ಎರಡು ಮೂರು ಪಟ್ಟು ಆಹಾರ ಧಾನ್ಯಗಳು ಹಾಗೂ ವಾಣಿಜ್ಯ ಬೆಳೆಗಳನ್ನು ತೆಗೆಯಲು ಸಹಕಾರಿಯಗುತ್ತದೆ.

ಹಳ್ಳಿಗಳು, ಪಟ್ಟಣಗಳು ಹಾಗೂ ನಗರಗಳಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯ ಕಾರಣದಿಂದಾಗಿ ವಸತಿ ಯೋಜನೆಗಳಿಗಾಗಿ ಹೆಚ್ಚು ಭೂಪ್ರದೇಶಗಳನ್ನು ಬಳಸಿಕೊಳ್ಳಲಾಗುತ್ತಿದೆ. ರಸ್ತೆಗಳು, ಕೆರೆಗಳು ಮತ್ತು ಕೈಗಾರಿಕೆಗಳ ಗಣನೀಯ ಪ್ರಮಾಣದ ಪ್ರದೇಶಗಳನ್ನು ಕೂಡ ವಶಪಡಿಸಿಕೊಳ್ಳಲಾಗುತ್ತಿದೆ. ಇದರಿಂದ ಈ ಪ್ರದೇಶಗಳನ್ನು ನಾವು ಕೃಷಿಗೆ ವಿಸ್ತರಿಸುವಂತಿಲ್ಲ. ಭಾರತದ ಅರಣ್ಯ ಪ್ರದೇಸದ ಪ್ರಮಾಣವು ಹೆಚ್ಚಬೇಕೆಂಬುದು ಎಲ್ಲೆಡೆಯೂ ಕೇಳಿಬರುತ್ತಿರುವ ಮಾತು, ಅದನ್ನು ಕಡಿಮೆಮಾಡಿದರೆ ಅದು ನಮ್ಮ ವಿನಾಶಕ್ಕೆ ಕಾರಣವಾದೀತು. ಅಲ್ಲದೆ, ಅರಣ್ಯಗಳು ಕೈಗಾರಿಕೆಗಳ ಅಸಂಖ್ಯ ಕಚ್ಚಾ ವಸ್ತುಗಳನ್ನು ಒದಗಿಸುತ್ತವೆ. ಇದು ಸೀಮಿತವಾಗಿದ್ದರೆ, ನಾವು ಬದುಕುಳಿಯಬಹುದಷ್ಟೇ; ಆದರೆ ಈಗಿನ ಕೃಷಿ ಪ್ರದೇಶದಲ್ಲಿ ಕನಿಷ್ಠ ಪಕ್ಷ ಎರಡರಷ್ಟು ಪ್ರಮಾಣದಲ್ಲಿ ಆಹಾರಗಳನ್ನು ಬೆಳೆಯದಿದ್ದರೆ ನಾವು ಆಹಾರದ ವಿಷಯದಲ್ಲಿ ಸ್ವಯಂಪೂರ್ಣವಾಗಲು ಸಾಧ್ಯವಿಲ್ಲ. ನೀರಾವರಿ ಭೂಪ್ರದೇಶವನ್ನು ಹೆಚ್ಚಿಸುವುದರ ಮೂಲಕ ಮಾತ್ರವೇ ಇದನ್ನು ಸಾಧಿಸಬಹುದು. ನೀರಾವರಿಯಿಂದ ಉದ್ಯೋಗಾವಕಾಶಗಳು ಹೆಚ್ಚುತ್ತವೆ. ಒಬ್ಬ ವ್ಯಕ್ತಿ ಬೇಸಾಯ ಮಾಡಲು ಸಾಕಾದ ಒಂದು ಪ್ರದೇಶಕ್ಕೆ, ನೀರಾವರಿಯಾದರೆ ಮೂವರ ನೆರವು ಬೇಕಾಗುತ್ತದೆ. ಈ ಮತ್ತು ಇತರ ಕಾರಣಗಳಿಂದಾಗಿ ನೀರಾವರಿಗೆ ಪ್ರಥಮ ಆದ್ಯತೆಯನ್ನು ನೀಡಲು ನಾನು ಒತ್ತಾಯಿಸುತ್ತೇನೆ.

ಮಳೆಯ ನೀರನ್ನು ಬಳಸಿಕೊಳ್ಳುವುದರ ಜೊತೆಗೆ, ದೇಶದ ಅನೇಕ ಕಡೆಗಳಲ್ಲಿ ಇನ್ನೂ ಬಳಕೆಯಾಗದ ಅಂತರ್ಜಲವೂ ಇದೆ. ದೊರೆಯುವ ಅಂತರ್ಜಲದ ಪ್ರಮಾಣವೆಷ್ಟು ಎಂಬ ಅಂದಾಜು ಮಾಡುವ ಮತ್ತು ಅದನ್ನು ಬಳಕೆಮಾಡಿಕೊಳ್ಳುವ ಯಾವುದೇ ಪ್ರಯತ್ನಗಳು ಇನ್ನೂ ಆದಂತಿಲ್ಲ; ನೀರಾವರಿಯ ಪ್ರದೇಶವನ್ನು ಹೆಚ್ಚಿಸುವ ದಿಸೆಯಲ್ಲಿ. ಇದನ್ನೂ ಹೆಚ್ಚು ಹೆಚ್ಚು ಕೈಗೊಳ್ಳಬೇಕಾಗಿದೆ.

ಕೃಷಿಗೆ ಸಂಬಂಧಿಸಿದ ಮೂಲಭೂತ ಅಂಶವೊಂದನ್ನು ಕುರಿತಂತೆ ನಾನಿಲ್ಲಿ ಸೂಚಿಸಬಯಸುವ ಮತ್ತೊಂದು ಬಹು ಮುಖ್ಯವಾದ ವಿಚಾರವೆಂದರೆ ಯಾವುದೇ ರಾಜ್ಯವೂ ಭೂಸುಧಾರಣೆಯನ್ನು ಸಂಪೂರ್ಣವಾಗಿ ಜಾರಿಗೊಳಿಸಿಲ್ಲ ಎಂಬುದು. ಇದು ಅಸಮಾಧಾನದ ವಿಷಯ. ಇನ್ನು ಒಂದು ವರ್ಷದೊಳಗಾಗಿ ಎಲ್ಲ ರಾಜ್ಯ ಸರ್ಕಾರಗಳು 'ಉಳುವವನೇ ಭೂಮಿಯ ಒಡೆಯ' ಎಂಬ ಬೇಡಿಕೆಯನ್ನು ಪೂರೈಸಬಹುದು. ಈ ದಿಸೆಯಲ್ಲಿ ಇದುವರೆಗಾಗಿರುವ ಪ್ರಯತ್ನಗಳ ನೆರವು ಪಡೆದು ಅದರ ಮೇಲೆ ನಿರ್ಧಾರಗಳನ್ನು ಕೈಗೊಂಡು, ಆವಶ್ಯಕವಾದರೆ ಅದರ ಅನುಷ್ಠಾನಕ್ಕೆ ಸೂಕ್ತ ಕಾನೂನು ಬದಲಾವಣೆಗಳನ್ನು ತರಬೇಕು.

ದೇಶದ ಅನೇಕ ಭಾಗಗಳಲ್ಲಿ ಭಾರಿ ಹಾಗೂ ಕೇಂದ್ರೀಕೃತ ಕೈಗಾರಿಕೆಗಳನ್ನು ಸ್ಥಾಪಿಸಲಾಗುತ್ತಿದೆ. ಇಂತಹ ಹೆಚ್ಚು ಹೆಚ್ಚು ಕೈಗಾರಿಕೆಗಳನ್ನು ಸ್ಥಾಪಿಸಬೇಕು. ಕೆಲವು ಕಡೆಗಳಲ್ಲಿ ಪ್ರಚಲಿತವಿರುಂತಹ ದೈತ್ಯತೆಯ ಬಗೆಗಿನ ಗೀಳು ಸರಿಯಲ್ಲ. ಗಾತ್ರದ ದೃಷ್ಟಿಯಿಂದ ಈ ವಿಶಾಲ ದೇಶದ ಎಲ್ಲ ಆವಶ್ಯಕತೆಗಳನ್ನೂ ಪೂರೈಸಬಲ್ಲ ಎರಡೊ ಮೂರೊ ದೈತ್ಯ ಘಟಕಗಳನ್ನು ಹೊಂದಲು ನಮಗೆ ಆರ್ಥಿಕ ನೆಲೆಯಲ್ಲಿ ಸಾಧ್ಯವಾಗದು. ಅದರ ಬದಲು, ಕೆಲವೇ ಕಲವೆಡೆಗಳಲ್ಲಿ ಅಂಥವು ಕೇಂದ್ರೀಕೃತವಾಗುವುದನ್ನು ತಡೆಗಟ್ಟಬೇಕು, ಕಚ್ಚಾ ಸಾಮಗ್ರಿಗಳ ದೊರಕುವಿಕೆ, ನೀರು, ವಿದ್ಯುತ್ತು, ಸ್ಥಳೀಯ ಕಾರ್ಮಿಕಬಲ ಮತ್ತು ಸಾಗಾಣಿಕೆಗಳ ದೃಷ್ಟಿಯಿಂದ ಅದು ಎಲ್ಲ ಕಡೆಗೆ ಸಮಾನವಾಗಿ ಹರಡಿಕೊಳ್ಳುವಂತೆ ನೋಡಿಕೊಳ್ಳಬೇಕು. ಜೊತೆಗೆ ಮಾರುಕಟ್ಟೆಯ ಸನಿಹತೆಯೂ ಒಂದು ಮುಖ್ಯ ಅಂಶ, ಆದರೆ ಅದು ಅನಿವಾರ್ಯವೇನೂ ಅಲ್ಲ.

ಖಾಸಗಿಯದಾಗಲೀ ಸಾರ್ವಜನಿಕ ಕ್ಷೇತ್ರದ್ದಾಗಲೀ ಕಾರ್ಮಿಕರಲ್ಲಿ ಸಾಕಷ್ಟು ಮಟ್ಟಿಗಿನ ಅಸಮಾಧಾನ ಇರುವುದು ಗೋಚರಿಸುತ್ತದೆ, ಎಷ್ಟೋ ವೇಳೆ ಅವರು ಹಿಂಸಾಚಾರಕ್ಕೂ ಇಳಿಯುತ್ತಾರೆ. ಕಾರ್ಮಿಕರಿಗೆ ಮಾಲೀಕರಿಂದ ನ್ಯಾಯ ದೊರಕಬೇಕು ಹಾಗೂ ಅವರ ಜೀವನ ಮಟ್ಟ ಸುಧಾರಿಸಬೇಕು ಎಂಬುದು ನಮಗೂ ಉಪಾದೇಯವೇ. ಆದರೆ ಅವರನ್ನು ಕುಚೇಷ್ಟೆ ಹಾಗೂ ದೇಶಭಕ್ತಿರಹಿತ ನಾಯಕರುಗಳು ಬಹುವೇಳೆ ದಾರಿ ತಪ್ಪಿಸುತ್ತಾರೆ, ಯಾಕಂದರೆ ಅಂಥ ಹಿತಾಸಕ್ತಿಗಳಿಗೆ ಬೇಕಾಗಿರುವುದು ದೇಶದಲ್ಲಿ ಅರಾಜಕತೆಯುಂಟುಮಾಡುವುದು ಮತ್ತು ಸಮಾಜದಲ್ಲಿ ಅಸ್ಥಿರತೆಯನ್ನು ತರುವುದು. ಈಚಿನ ವರ್ಷಗಳಲ್ಲಿ ಉದ್ಭವಿಸಿರುವ ವಿವಿಧ ಕಾರ್ಮಿಕ ವಿವಾದಗಳನ್ನು ಪರಿಶೀಲಿಸಿ, ಅಂಥ ಹಿತಾಸಕ್ತಿಗಳ ಪಾತ್ರ ಎಂತಹುದು ಎಂಬುದನ್ನು ಕಂಡುಹಿಡಿಯುವುದು ಅತ್ಯಂತ ಮುಖ್ಯ. ತಮ್ಮ ಸೌಲಭ್ಯಗಳನ್ನು ಹೆಚ್ಚಿಸಿಕೊಳ್ಳಲು ಕಾರ್ಮಿಕರಿಗೆ ಹಕ್ಕಿದೆ, ಆದರೆ ಉತ್ಪಾದನೆ ಮತ್ತು

ಉತ್ಪಾದಕತೆಗಳನ್ನು ಹೆಚ್ಚಿಸುವ ಮೂಲಕ ಇದನ್ನು ಸಾಧಿಸಬೇಕಾಶದ ಜವಾಬ್ದಾರಿಯೂ ಅವರ ಮೇಲಿದೆ.

ದೇಶದ ಆರ್ಥಿಕತೆಯನ್ನು ಕಟ್ಟುವಲ್ಲಿ ಸಣ್ಣ ಹಾಗೂ ಗೃಹ ಕೈಗಾರಿಕೆಗಳು ವಹಿಸುವ ಪಾತ್ರವೂ ಇಷ್ಟೇ ಮುಖ್ಯವಾದುದು, ಕೊಂಚ ಹೆಚ್ಚಿನದು ಕೂಡ. ಅತ್ಯಂತ ದೊಡ್ಡ ಕೈಗಾರಿಕೆಯಾದರೂ, ಕೃಷಿಯೊಂದೇ ಎಲ್ಲರಿಗೂ ಉದ್ಯೋಗ ಒದಗಿಸಲಾರದು. ಕೃಷಿಯ ಯಾಂತ್ರೀಕರಣವು ನಿರೀಕ್ಷಿಸಿದಂತೆ ಜನಪ್ರಿಯಗೊಂಡರೆ, ಹಳ್ಳಿಯ ಕಾರ್ಮಿಕರಿಗೆ ಉದ್ಯೋಗವು ಮತ್ತಷ್ಟು ಸೀಮಿತಗೊಳ್ಳುತ್ತದೆ. ಆಧುನಿಕ ಭಾರಿ ಕೈಗಾರಿಕೆಗಳು ಹೆಚ್ಚು ಜನರಿಗೆ ಉದ್ಯೋಗ ನೀಡಲು ಸಾಧ್ಯವಾಗಲಾರದು. ನಮ್ಮದರಂತಹ ದೇಶದಲ್ಲಿ ಕೋಟ್ಯಂತರ ಜನರು ಇಲ್ಲವೇ ಪೂರ್ಣ ನಿರುದ್ಯೋಗಿಗಳಾಗಿದ್ದಾರೆ, ಇಲ್ಲ ಅಲ್ಪಾವಧಿ ಉದ್ಯೋಗಿಗಳಾಗಿದ್ದಾರೆ. ಇಂತಹ ಕಡೆ ಸಣ್ಣ ಹಾಗೂ ಗೃಹ ಕೈಗಾರಿಕೆಗಳು ಬಹು ಮಹತ್ವದ ಪಾತ್ರವನ್ನು ವಹಿಸಬಲ್ಲವು. ಬ್ಯಾಂಕುಗಳೂ ಇತರ ಹಣಕಾಸು ಸಂಸ್ಥೆಗಳೂ ಅವರ ನೆರವಿಗೆ ಬರಬೇಕು. ಕೃಷಿಯ ಬಗ್ಗೆ ಹೇಳಿರುವುದು ಅಷ್ಟರ ಮಟ್ಟಿಗೆ ಸಣ್ಣ ಹಾಗೂ ಗೃಹ ಕೈಗಾರಿಕೆಗಳಿಗೂ ಅನ್ವಯಿಸುತ್ತದೆ. ಹೀಗಾಗಿಯೇ ಬೇರೆಲ್ಲರಿಗಿಂತ ತಮ್ಮ ದೇಶದ ಬಗ್ಗೆ ಆಳವಾದ ಅರಿವಿದ್ದ ಗಾಂಧೀಜಿಯವರು ಸಣ್ಣ ಹಾಗೂ ಗೃಹ ಕೈಗಾರಿಕೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕೆಂದು ಒತ್ತಿ ಹೇಳುತ್ತಿದ್ದುದು.

ಗಾಂಧೀಜಿಯವರು ಸ್ವಾತಂತ್ರ್ಯ ಗಳಿಕೆಗೆ ಬಳಸಿದಂತಹ ಅಹಿಂಸಾತ್ಮಕವೂ ಸತ್ಯದಿಂದ ಕೂಡಿದ್ದೂ ಆದ ಮಾರ್ಗಗಳನ್ನು ಅನುಸರಿಸಿದರೋ ಅಂತೆಯೇ ನಮ್ಮ ದೇಶದ ಆರ್ಥಿಕತೆಯನ್ನು ಕಟ್ಟಬೇಕೆಂದು ಅವರು ತಿಳಿಸಿಕೊಟ್ಟರೋ, ಹಾಗೆಯೇ ಧರ್ಮ ಹಾಗೂ ಪಂಥಗಳನ್ನು ಮೀರಿ ಸಮಾಜದಲ್ಲಿನ ಎಲ್ಲ ಜನರಲ್ಲಿ ಸಮಾನತೆಯುಂಟುಮಾಡಲು ಅವರು ಬೇರೆಲ್ಲರಿಗಿಂತ ಹೆಚ್ಚಾಗಿ ಶ್ರಮಿಸಿದರು. ಹೀಗಾಗಿಯೇ ಅವರು ಹರಿಜನ ಮತ್ತಿತರ ದುರ್ಬಲ ವರ್ಗಗಳವರ ಉದ್ಧಾರಕ್ಕೆಂದು ತಮ್ಮ ಜೀವನವನ್ನೇ ತೇಯ್ದರು. ಅವರಿಗೆ ಮಾಡಿರುವುದು ಎದ್ದು ಕಾಣುವಂಥದಿರಬಹುದು, ಅಸ್ಪೃಶ್ಯತೆಯ ವಿರುದ್ಧದ ಶಾಸನ ಜಾರಿಯಾಗಿದೆ. ಆದರೆ ಪರಿಶಿಷ್ಟ ಜಾತಿ ಹಾಗೂ ವರ್ಗಗಳವರ ಜೀವನ ಮಟ್ಟವನ್ನು ಸುಧಾರಿಸಲು ಮತ್ತಷ್ಟು ಪರಿಣಾಮಕಾರಿ ಮಾರ್ಗೋಪಾಯಗಳನ್ನು ಕೈಗೊಂಡು, ಇನ್ನೂ ಉಳಿದಿರುವ, ವಿಶೇಷವಾಗಿ ಹಳ್ಳಿಗಳಲ್ಲಿ, ಅವರ ಅಸೌಕರ್ಯಗಳನ್ನು ನಿವಾರಿಸಲು ಪ್ರಯತ್ನಗಳನ್ನು ನಡೆಸಬೇಕಾಗಿದೆ. ಇದನ್ನು ಮಾಡಬೇಕಾದುದು ಅವರನ್ನು ನಮ್ಮ ಜೊತೆಗೆ ಬಾಳಲು ಅವಕಾಶ ಮಾಡಿಕೊಡುವುದುರ ಮೂಲಕ, ಹಳ್ಳಿಗಳಲ್ಲಿ, ಅಥವಾ ಸಣ್ಣ ಪಟ್ಟಣಗಳಲ್ಲಿ ಹೊಸ ಬಡಾವಣೆಗಳನ್ನು ಮಾಡಿ ನಿವೇಶನಗಳನ್ನು ಹಂಚುವಾಗ,

ಯಾವುದೋ ಒಂದೇ ಕಡೆ ಅವರಿಗೆ ನಿವೇಶನಗಳನ್ನು ಮೀಸಲಾಗಿಡದೆ ಬೇರೆಲ್ಲ ಜಾತಿ ಧರ್ಮಗಳ ಜನರ ನಡುವೆ ಯಾವುದೇ ಬಗೆಯ ಕೀಳರಿಮೆಯಿಲ್ಲದೆ ಸಮಾನರಂತೆ ಬಾಳಲು ಸಹಕಾರಿಯಾಗುವಂತೆ ಚದುರಿದ ಹಾಗೆ ಅವರಿಗೆ ನಿವೇಶನಗಳನ್ನು ಕೊಡುವ ಪದ್ಧತಿ ಬರಬೇಕು. ಹಾಗೆಯೇ ಹರಿಜನ ವಿದ್ಯಾರ್ಥಿ ನಿಲಯಗಳನ್ನು ಅವರಿಗೇ ಮೀಸಲಿಡದೆ, ಎಲ್ಲ ವಿದ್ಯಾರ್ಥಿ ನಿಲಯಗಳಲ್ಲಿಯೂ ಹರಿಜನ ವಿದ್ಯಾರ್ಥಿಗಳಿಗೆ ಅವಕಾಶ ನೀಡಿ, ಅವರ ಖರ್ಚುವೆಚ್ಚಗಳನ್ನು ಸರ್ಕಾರವೇ ಭರಿಸಬೇಕು.

ಕೆಲವು ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ಸವಾಲುಗಳನ್ನು ಒಳಗೇ ಎದುರಿಸಬೇಕು, ಎದುರಿಸಿ ಗೆಲ್ಲಬೇಕು. ನೆರೆಹೊರೆಯವರ ಜೊತೆ ಹಾಗೂ ಹೊರ ಜಗತ್ತಿನ ಜೊತೆಗಿನ ಸವಾಲುಗಳು ಕೂಡ ಇಷ್ಟೇ ದೊಡ್ಡದಾದವು ಮತ್ತು ಗಂಭೀರವಾದವು

ನಮ್ಮ ನೆರೆಹೊರೆಯವರೊಡನೆ ಸೌಹಾರ್ದದಿಂದ ಬಾಳುವ ವಿಷಯದಲ್ಲಿ ನಮಗೆ ಹಿರಿಮೆಯ ಪ್ರಾಚೀನ ಪರಂಪರೆಯೊಂದಿದೆ, ನಮ್ಮನ್ನು ಆಕ್ರಮಣಕಾರಿಗಳೆಂದು ಯಾರೂ ಆಕ್ಷೇಪಿಸಲಾರರು. ಇದು ನಮ್ಮ ಸಹಬಾಳ್ವೆ ಮತ್ತು ತಟಸ್ಥ ಧೋರಣೆಗೆ ಅನುಗುಣವಾಗಿದೆ. ನಮ್ಮ ಸಂಸ್ಕೃತಿಯ ಅತ್ಯಂತ ಪಕ್ವ ಫಲವಾದ ಪಂಡಿತ್ ನೆಹರೂ ಅವರು ಪ್ರಪಂಚ ರಾಜಕೀಯದ ಅತ್ಯಂತ ಮೇಧಾವಿ ವಿದ್ಯಾರ್ಥಿ ಹಾಗೂ ಜಗತ್ತು ಕಂಡ ಎಲ್ಲ ಕಾಲದ ಅತ್ಯಂತ ಶ್ರೇಷ್ಠ ಮುತ್ಸದ್ಧಿಗಳಲ್ಲಿ ಒಬ್ಬರು. ಈ ವಿಷಯದಲ್ಲಿ ನಾವು ಅನುಸರಿಸಬೇಕಾದ ಬೆಲೆಬಾಳುವ ಪಾಠಗಳನ್ನು ಅವರು ತೋರಿಸಿ ಕೊಟ್ಟು ಹೋಗಿದ್ದಾರೆ. ಬೇರಾರ ಮೇಲೂ ಆಕ್ರಮಣ ನಡೆಸಿದ ಉದಾಹರಣೆಗಳು ನಮ್ಮ ಮಟ್ಟಿಗಿಲ್ಲ, ಆದರೆ ಹಿಂದೆ ಮತ್ತು ಈಚಿನ ದಿನಗಳಲ್ಲಿ ಇಂಥ ಆಕ್ರಮಣಗಳಿಗೆ ನಾವೇ ಒಳಗಾಗಿದ್ದೇವೆ, ಅವುಗಳನ್ನು ನಾವು ಪರಾಕ್ರಮದಿಂದ ಎದುರಿಸಿದ್ದೇವೆ. ಚೀನಾ ಸಿಡಿಸಿದ ಅಣುಬಾಂಬುಗಳ ಸರಣಿಯು ಜಗತ್ತಿನ ಶಾಂತಿಗೆ ದೊಡ್ಡ ಸವಾಲಾಗಿದೆ, ಅದರಲ್ಲಿಯೂ ಈ ಭಾಗದ ಶಾಂತಿಯನ್ನು ಕದಡಿ ಅದರಿಂದಾಗಿ ಅಂತರರಾಷ್ಟ್ರೀಯ ವಾತಾವರಣವನ್ನು ಕದಡಿದೆ. ಅಂತಹ ಚಟುವಟಿಕೆಗಳನ್ನು ದಮನ ಮಾಡಲು ನಾವು ನಿರಂತರವಾಗಿ ಎಚ್ಚರದಿಂದಿದ್ದು, ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಜೊತೆಗೆ ಚೀನಾ ವಿಶೇಷವಾಗಿ ನಮ್ಮ ವಿರುದ್ಧ ಹಾಗೂ ಇತರ ಕೆಲವರ ವಿರುದ್ಧ ನಿರಂತರ ಶೀತಲ ಸಮರವನ್ನು ಮುಂದುವರಿಸಿದೆ. ಭಾರತ ಮತ್ತು ಚೀನಾ ಗಳೆರಡೂ ಅಭಿವೃದ್ಧಿಶೀಲ ದೇಶಗಳು, ನಮ್ಮ ನೆರೆಹೊರಿಕೆಯಲ್ಲಿ ಪರಸ್ಪರ ಅನುಕೂಲಕರ ವಾಗಬಹುದಾದ ಅವಕಾಶಗಳಿವೆ. ಎರಡು ಸಾವಿರ ವರ್ಷಗಳಷ್ಟು ದೀರ್ಘ ಕಾಲ ನಾವು ಆಪ್ತ ಸಾಂಸ್ಕೃತಿಕ ಸಂಬಂಧವನ್ನು ಹೊಂದಿ ಯಾವುದೇ ತಪ್ಪು ತಿಳಿವಳಿಕೆಗೆ

ಆಸ್ಪದವಿರದಿದ್ದ ಚೀನಾ ದುರದೃಷ್ಟಕರ ಭಿನ್ನಾಭಿಪ್ರಾಯಗಳನ್ನು ಮುಂದುವರಿಸುವುದರ ವ್ಯರ್ಥತೆಯನ್ನು ಬಹು ಬೇಗ ಮನಗಾಣುವುದೆಂದು ನಾವು ಆಶಿಸಬೇಕಾಗಿದೆ. ನಮ್ಮೆರಡು ದೇಶಗಳದ್ದು ಅತ್ಯಂತ ಪ್ರಾಚೀನವಾದ ಮತ್ತು ಶ್ರೀಮಂತವಾದ ನಾಗರಿಕತೆಗಳು, ಇಬ್ಬರೂ ಪ್ರಬುದ್ಧತೆಗೆ ಮತ್ತು ವಿವೇಕಗಳಿಗೆ ಹೆಸರಾದವರು. ಹೀಗಾಗಿ ಭಿನ್ನತೆಗಳನ್ನು ದೊಡ್ಡದು ಮಾಡುವುದು ಇಬ್ಬರಿಗೂ ಸಲ್ಲದು. ಚೀನದ ಜನತೆಯೊಂದಿಗಂತೂ ನಮಗೆ ಯಾವುದೇ ಜಗಳವಿಲ್ಲ. ಚೀನದಲ್ಲಿ ಸ್ಥಾಪನೆರಗೊಂಡಿರುವ ಕಮ್ಯುನಿಸ್ಟ್ ಪಕ್ಷದ ನಿರಂಕುಶ, ಸರ್ವಾಧಿಕಾರಿ ಹಾಗೂ ವಿಸ್ತರಣಾವಾದಿ ನಾಯಕತ್ವವು ತನಗೆ ಅನುಕೂಲಕರವಾದ ರೀತಿಯಲ್ಲಿ ಕಮ್ಯುನಿಸ್ಟ್ ಸಿದ್ಧಾಂತವನ್ನು ತಿರಿಚುತ್ತಿದೆ. ನ್ಯಾಯಯುತ ಮತ್ತು ನಿಷ್ಪಕ್ಷಪಾತವಾದ ಪರಿಹಾರವನ್ನು ನಾವು ಕಂಡುಕೊಳ್ಳಬೇಕಾಗಿದೆ.

ಇದು ಪಾಕಿಸ್ತಾನದ ಮಟ್ಟಿಗೂ ನಿಜ. ಭಾರತ ಮತ್ತು ಪಾಕಿಸ್ತಾನಗಳು ಅಣ್ಣ ತಮ್ಮಂದರ ಮಕ್ಕಳು, ನಮ್ಮಿಬ್ಬರ ನಾಳಗಳಲ್ಲಿ ಹರಿಯುತ್ತಿರುವುದು ಒಂದೇ ರಕ್ತ. ತಮ್ಮ ಸಂಶಯ ಮನೋಭಾವವನ್ನು ತೊರೆದು ಅವರು ಎರಡೂ ದೇಶಗಳ ಜನತೆಯ ಹಿತಕ್ಕಾಗಿ ಸಹಕಾರವನ್ನು ತೋರಿಸಬೇಕಾಗಿದೆ. ಜೊತೆಗೆ, ಇಬ್ಬರಿಗೂ ಕಾಲಾನುಕಾಲದಿಂದ ಭೌಗೋಳಿಕ ಒತ್ತಡಗಳು ಇವೆ. ವಿಷಯುಕ್ತ ದ್ವೇಷಕ್ಕಿಂತ ದೊಡ್ಡ ತಪ್ಪು ಮತ್ತೊಂದಿಲ್ಲ ಎಂಬುದನ್ನು ಪಾಕಿಸ್ತಾನ ಎಷ್ಟು ಬೇಗ ಅರಿತುಕೊಳ್ಳುತ್ತದೋ ಅಷ್ಟೂ ಅದಕ್ಕೇ ಒಳ್ಳೆಯದು. ನಮ್ಮೆಲ್ಲ ಪ್ರಾಮಾಣಿಕತೆಯಿಂದ ನಾವು ಬಯಸುವುದೂ ಅದನ್ನೇ, ನಮ್ಮ ಅನುಕೂಲಕ್ಕೂ ಸಹ.

ಇತರ ದೇಶಗಳ ಜೊತೆಗಿನ ನಮ್ಮ ಸಂಬಂಧದ ಬಗ್ಗೆ ಹೇಳುವುದಾದರೆ, ದಿವಂಗತ ಪ್ರಧಾನ ಮಂತ್ರಿಗಾಳಾದ ಪಂಡಿತ್ ಜವಹರಲಾಲ್ ನೆಹರೂ ಅವರ ಪ್ರಯತ್ನಗಳಿಂದ ಅವುಗಳ ನಡುವಣ ನಮ್ಮ ಬಾಂಧವ್ಯ ಸೌಹಾರ್ದಯುತವೂ ಸ್ನೇಹಯುತವೂ ಆಗಿದೆ. ಈ ಸುಮಧುರ ಸಂಬಂಧಕ್ಕೆ ತಟಸ್ಥ ನೀತಿಯೇ ಕಾರಣವೆಂಬುದು ನನ್ನ ಭಾವನೆ. ಇದರಿಂದ ನಮ್ಮ ದೇಶಕ್ಕೆ ಮಾತ್ರವಲ್ಲದೆ, ಇತರರಿಗೂ ಪ್ರಗತಿಯ ದೃಷ್ಟಿಯಿಂದ ಅನುಕೂಲಕರ. ವಿಜ್ಞಾನ ಮತ್ತು ತಂತ್ರಜ್ಞಾನಗಳ ಬೆಳವಣಿಗೆಯ ಈ ಯುಗದಲ್ಲಿ ದೂರವು ಕ್ಷೀಣಿಸುತ್ತಿದೆ, ಜಗತ್ತಿನ ಯಾವೆಡೆ ಸಂಭವಿಸುವ ಪ್ರಮುಖ ಘಟನೆಯೂ ಜಗತ್ತಿನ ಮಿಕ್ಕೆಲ್ಲ ಭಾಗಗಳ ಮೇಲೆ ಪರಿಣಾವುಂಟುಮಾಡುತ್ತದೆ. ಯಾವ ದೇಶವೂ ತನ್ನ ದೃಷ್ಟಿಕೋನದಲ್ಲಿ ಇದರಿಂದ ಹೊರತಾಗಲಾರದು. ನಮ್ಮ ಜಗತ್ತಿನಲ್ಲಿ ಶಾಂತಿ ಮತ್ತು ಪ್ರಗತಿಗಳನ್ನು ಹೊಂದಲು ಪರಸ್ಪರ ಸೌಹಾರ್ದ ಮತ್ತು ಸ್ನೇಹಮಯತೆಗಳು ಬಹು ಮುಖ್ಯವಾದವು. ಮಾನವ ಜನಾಂಗವೇ ತನ್ನ ಹಾದಿಯ ತಿರುವಿನಲ್ಲಿದೆ. ಪರ

ಕೃತಿಯ ಮೇಲಿನ ಮನುಷ್ಯನ ಅಪಾರ ಹಿಡಿತದ ಮೇಲೆ ನೈತಿಕ ಆಧ್ಯಾತ್ಮಿಕ ಶಕ್ತಿಗಳ ಹತೋಟಿಯಿಲ್ಲದಿದ್ದರೆ ಅವುಗಳ ವಿವೇಕಹೀನ ಬಳಕೆಯಿಂದ ಜಗತ್ತು ವಿನಾಶದೆಡೆಗೆ ಸಾಗಬಹುದು, ಆದರೆ ಅವುಗಳನ್ನು ವಿವೇಕಯುತವಾಗಿ ಬಳಸಿಕೊಂಡರೆ ಮಾನವ ಜನಾಂಗದ ಪ್ರಗತಿ, ಮತ್ತು ಮಾನವ ಮೌಲ್ಯಗಳನ್ನು ನೆಲೆಗೊಳಸಿಲು ಸಹಕಾರಿಯಾಗುತ್ತದೆ. ಹೀಗಾಗಿಯೇ ವಿಜ್ಞಾನ ಮತ್ತು ಅಧ್ಯಾತ್ಮಗಳು ಜೊತೆಯಾಗಿ ಸಾಗಬೇಕೆಂದು ವಿನೋಬಾಜಿ ಹೇಳುವುದು. ತಮ್ಮ ಬದುಕಿನ ಕೊನೆಯ ವರ್ಷಗಳಲ್ಲಿ ಪಂಡಿತ್‌ಜಿ ಈ ಅಪೇಕ್ಷಣೀಯ ದಿಕ್ಕಿನತ್ತ ಸಾಗಲು ಆಕರ್ಷಿತರಾಗಿದ್ದರು. ಬಂಡವಾಳಶಾಹಿ ಮತ್ತು ಕಮ್ಯುನಿಸಂಗಳ ಮೊನಚುಗಳು ಕ್ರಮೇಣ ನುಣುಪುಗೊಂಡು ಎರಡೂ ಪರಸ್ಪರ ಅರಿವಿನ ಕಡೆಗೆ ಸಾಗಿ ಸಂಘರ್ಷಕ್ಕೆ ಹಾದಿಯಿಲ್ಲದಂತಾಗುವುದೆಂಬ ಭರವಸೆ ನನ್ನಲ್ಲಿ ಈಚೆಗೆ ಹೆಚ್ಚಾಗುತ್ತಿದೆ.

ಅಮೆರಿಕ, ರಷ್ಯಾ, ಇಂಗ್ಲಂಡ್, ಜಪಾನ್ ಮತ್ತು ಜರ್ಮನಿಯಂತಹ ಅನೇಕ ದೇಶಗಳು ದೇಶದ ಕೈಗಾರಿಕೆಗಳು ಹಾಗೂ ವಿದ್ಯುತ್ ಉತ್ಪಾದನೆ ನೀರಾವರಿ ಮುಂತಾದವುಗಳ ನಿರ್ಮಾಣಕ್ಕೆ ನೀಡುತ್ತಿರುವ ಆರ್ಥಿಕ ಸಹಾಯದ ಜೊತೆಗೆ ಮಿಕ್ಕ ಅನೇಕ ಬಗೆಯಲ್ಲಿಯೂ ನೆರವನ್ನು ನೀಡುತ್ತಿವೆ ಎಂಬುದು ನಿಜ. ನಾವು ಅವರಿಗೆ ಕೃತಜ್ಞರಾಗಿದ್ದೇವೆ. ಹಿಂದೆಂದೂ ಕಾಣದ ಬರ ಪರಿಸ್ಥಿತಿಯುಂಟಾಗಿ ಈಗಲೂ ನಮ್ಮನ್ನು ಕಾಡಿಸುತ್ತಿರುವ ಪರಿಸ್ಥಿತಿಯಲ್ಲಿ ಕಳೆದ ಅನೇಕ ವರ್ಷಗಳಿಂದ ನಮಗೆ ಆಹಾರ ಧಾನ್ಯಗಳನ್ನು ನೀಡುತ್ತಿರುವುದರಿಂದಾಗಿ ಅಮೆರಿಕಕ್ಕೆ ನಮ್ಮ ವಿಶೇಷ ಕೃತಜ್ಞತೆಗಳು ಸಲ್ಲಬೇಕು. ಸಾರ್ವಜನಿಕ ವಲಯವನ್ನು ವಿಸ್ತರಿಸಲು ಹಾಗೂ ಆರ್ಥಿಕಾಭಿವೃದ್ಧಿಗೆ ಅತ್ಯವಶ್ಯಕವಾದ ಭಾರಿ ಕೈಗಾರಿಕೆಗಳ ಸ್ಥಾಪನೆಗೆಂದು ನಮಗೆ ನೀಡುತ್ತಿರುವ ವಿಶೇಷ ನೆರವಿಗಾಗಿ ನಾವು ಸೋವಿಯತ್ ಒಕ್ಕೂಟಕ್ಕೂ ವಿಶೇಷವಾಗಿ ಕೃತಜ್ಞರಾಗಿರಬೇಕು. ಜೊತೆಗೆ, ಇವು ಇತರ ದೇಶಗಳೊಡನೆ ನಮಗೆ ತಂತ್ರಜ್ಞಾನದ ನೆರವನ್ನೂ ನೀಡುತ್ತಿವೆ.

ಈ ನೆರವಿಗೆ ನಾವು ಕೃತಜ್ಞರಾಗಿದ್ದರೂ, ಮುಂದೆಯೂ ಹಾಗೆ ಮಾಡುವುದನ್ನು ನಿರೀಕ್ಷಿಸಿದರೂ, ಸ್ವಯಮಾಧಾರಿತವಾಗುವುದನ್ನು ಕಲಿಯಲು ಇದು ಸಕಾಲ. ಎಲ್ಲ ಕಾಲಕ್ಕೂ ಎಲ್ಲ ವಿಷಯಗಳಲ್ಲಿಯೂ ಅನ್ಯದೇಶಗಳ ನೆರವನ್ನೇ ಆಶ್ರಯಿಸಿರಲು ಸಾಧ್ಯವಿಲ್ಲ. ಇದನ್ನು ಈಗೀಗ ಅರ್ಥಮಾಡಿಕೊಳ್ಳುತ್ತಿರುವುದು ಸಂತೋಷದ ವಿಷಯ; ನಾವು ನಮ್ಮ ಒಳಗನ್ನೇ ಹುಡುಕುತ್ತ ಬೇರೆ ಬೇರೆ ಕೈಗಾರಿಕಾ ಹಾಗೂ ವೈಜ್ಞಾನಿಕ ರಂಗಗಗಲ್ಲಿ ಸಂಶೋಧನೆಯ ಮೂಲಕ ತಾಂತ್ರಿಕ ಕೌಶಲವನ್ನು ಕಂಡುಕೊಳ್ಳಬೇಕು. ನಮ್ಮ ಯುವ ವಿಜ್ಞಾನಿಗಳಿಗೆ ಅವಶ್ಯಕವಾದ ಉತ್ತೇಜನ, ನೆರವು ಮತ್ತು ಅವಕಾಶಗಳನ್ನು ಒದಗಿಸುವುದರ ಮೂಲಕ ಇದನ್ನು ಆಗುಮಾಡಬಹುದು.

ನಮ್ಮ ಹಿನ್ನೆಲೆ ಹಾಗೂ ಶಾಂತಿಪ್ರಿಯತೆ ಮತ್ತು 'ಸರ್ವೇಜನಾಃ ಸುಖಿನೋ ಭವಂತು' ಎಂಬ ಸದ್ಭಾವನೆಗಳಿಂದಾಗಿ, ಹೆಚ್ಚು ಶಾಂತಿಯಿಂದ ಹಾಗೂ ಮಾನವೀಯತೆಯಿಂದ ಕೂಡಿದ ಮತ್ತು ರಾಜಕೀಯ ಅಥವಾ ಇನ್ನಾವದೇ ಬಗೆಯ ಘರ್ಷಣೆಗಳಿಲ್ಲದೆ ಸಂತೋಷ ಯುಕ್ತವಾದ ಸಮಾಜವನ್ನು ಈ ಜಗತ್ತಿನಲ್ಲಿ ನಿರ್ಮಾಣ ಮಾಡಲು ನಾವು ದ್ರವ್ಯರೂಪದ ಕಾಣಿಕೆಯನ್ನೂ ನೀಡಬಹುದು.

ಮುಂಚೆಯೇ ಹೇಳಿದಂತೆ, ಸ್ವಾತಂತ್ರ್ಯವನ್ನು ಗಳಿಸಿದ ಬಳಿಕ ನಾವು ಕಳೆದ ೨೦ ವರ್ಷಗಳಲ್ಲಿ, ಕಾಂಗ್ರೆಸ್‌ನ ಸಲಹೆ ಮತ್ತು ಸಕ್ರಿಯ ಮಾರ್ಗದರ್ಶನದಲ್ಲಿ, ದೇಶದ ಆರ್ಥಿಕತೆಯ ಸುಭದ್ರತೆಗೆ ಸಾಕಷ್ಟು ಕೆಲಸವನ್ನು ಮಾಡಿದ್ದೇವೆ. ಪ್ರಾಯಶಃ ವಿದೇಶಿ ಆಡಳಿತದ ಕಳೆದ ೨೦೦ ವರ್ಷಗಳಲ್ಲಿ ಆಗಿರುವುದಕ್ಕಿಂತ ಹೆಚ್ಚಿನದನ್ನೇ ಸಾಧಿಸಿದ್ದೇವೆ. ಆದರೆ ಈ ಮಹಾಪ್ರಯತ್ನಗಳ ಫಲಗಳು ಜನಸಂಖ್ಯೆಯ ಸ್ಫೋಟದಿಂದ ಇಲ್ಲಣ ಗೊಂಡಿದೆ. ಆದ್ದರಿಂದಾಗಿ, ಕುಟುಂಬ ಯೋಜನೆಯ ಬಗ್ಗೆ ಒಂದು ದೊಡ್ಡ ಪ್ರಚಾರಾಂದೋಲನವು ಈಗ ಅತ್ಯಗತ್ಯವಾಗಿದೆ. ಅದರ ಆವಶ್ಯಕತೆಯನ್ನು ಹೆಚ್ಚು ಹೆಚ್ಚು ಜನರು ಮನಗಂಡು ಅನುಸರಿಸುತ್ತಿರುವುದು ಸಂತಸದ ಸಂಗತಿ. ಈ ಯೋಜನೆಯು ನಗರ ಪ್ರದೇಶಗಳಿಗಿಂತ ಹಳ್ಳಿಗಳಲ್ಲಿ ಹೆಚ್ಚು ಜನಪ್ರಿಯವಾಗಿರುವುದು ಮಹತ್ವದ ವಿಷಯ. ಇದಕ್ಕೆ ಕಾರಣ ಹಳ್ಳಿಗಳಲ್ಲಿನ ಕೆಳಮಟ್ಟದ ಆರ್ಥಿಕ ಸ್ಥಿತಿ. ಏನೇ ಆಗಲಿ, ಜಾತಿಮತಭೇದ ಗಳಿಲ್ಲದೆ ಪ್ರಾಮಾಣಿಕತೆಯಿಂದ ಇದನ್ನು ಕೈಗೊಂಡು ಜನಪ್ರಿಯಗೊಳಿಸುವುದು ಎಲ್ಲರ ಮೇಲೆ ಬಿದ್ದಿರುವ ಹೊಣೆಗಾರಿಕೆ.

ದೇಶದಲ್ಲಿ ಅತೃಪ್ತಿಯನ್ನುಂಟುಮಾಡಿರುವ ಕೆಲವು ಅಂಶಗಳ ಕುರಿತು ಹೇಳಿ ಆ ದಿಸೆಯಲ್ಲಿ ನಾವು ಮುಂದುವರಿಯಬೇಕಾದ ಬಗ್ಗೆ ನನಗೆ ತೋಚಿದ ಮಾರ್ಗವನ್ನು ಈವರೆಗೆ ನಾನು ಪ್ರಸ್ತಾಪಿಸಿದ್ದೇನೆ. ನಮ್ಮ ಅಂತರ್ದೃಷ್ಟಿಯು ಇನ್ನೂ ಗಾಢವಾಗಬೇಕು. ವಿವಿಧ ಸರ್ಕಾರಗಳು ಮಾಡಿರುವ ಕೆಲಸವನ್ನೆಲ್ಲ ಪರಾಮರ್ಶೆಗೊಳಪಡಿಸುವ ಹಾಗೂ ನಾವು ಎಲ್ಲಿ ಮತ್ತು ಹೇಗೆ ತಪ್ಪಿದ್ದೇವೆ ಎಂದು ಕಂಡುಕೊಳ್ಳುವ, ನಾವು ತಪ್ಪಿರುವುದೆಲ್ಲಿ, ಜನರ ಅತೃಪ್ತಿಗೆ ಕಾರಣಗಳೇನು, ಪ್ರಜಾಸತ್ತಾತ್ಮಕ ಸಮಾಜವಾದದ ಕಲ್ಯಾಣ ರಾಜ್ಯಕ್ಕೆ ಬದ್ಧವಾದ ಸರ್ಕಾರದಲ್ಲಿ ಪೊಲೀಸ್ ರಾಜ್ಯದಿಂದ ನೇರವಾಗಿ ಉತ್ತರಾಧಿಕಾರಿಯಾಗಿ ಬಂದಿರುವ ನಮ್ಮ ಆಡಳಿತ ಯಂತ್ರವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸ ಬಲ್ಲುದೇ, ಕಳೆದ ಇಪ್ಪತ್ತು ವರ್ಷಗಳ ನಮ್ಮ ಅನುಭವದ ಹಿನ್ನೆಲೆಯಲ್ಲಿ ನಮ್ಮ ವ್ಯವಸ್ಥೆಯಲ್ಲಿ ಮಾಡಿಕೊಳ್ಳಬೇಕಾದ ಬದಲಾವಣೆಗಳೇನು, ನಮ್ಮ ಆಡಳಿತಯಂತ್ರವು ತಲೆಭಾರವಾಗಿದ್ದು ಮುಜುಗರಕ್ಕೆ ಕಾರಣವಾಗಿದೆಯೇ; ಈ ಯಂತ್ರದಲ್ಲಿ ತೀರ ವಿಳಂಬ ಮತ್ತು ನಿರ್ಲಕ್ಷ್ಯ

ಗಳಿದ್ದು ಅದನ್ನು ಬದಲಾಯಿಸುವ ಆವಶ್ಯಕತೆಯಿಲ್ಲವೇ ಇತ್ಯಾದಿ ಪ್ರಶ್ನೆಗಳನ್ನು ಕೇಳಿಕೊಳ್ಳ ಬೇಕಾಗಿದೆ. ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಹೆಚ್ಚು ಗುಣಾತ್ಮಕವಾದ ಹಾಗೂ ಪರಿಣಾಮಕಾರಿಯಾದ ರೀತಿಯಲ್ಲಿ ಜನತೆಯನ್ನು ತೊಡಗಿಸಿಕೊಳ್ಳುವ ಮಾರ್ಗವನ್ನು ನಾವು ಕಂಡುಕೊಳ್ಳಬೇಕಾಗಿದೆ. ಇವು ನಮ್ಮ ಪ್ರಾಮಾಣಿಕ ಪರಾಮರ್ಶೆಯನ್ನು ನಿರೀಕ್ಷಿಸುವ ಕೆಲವು ವಿಷಯಗಳಾಗಿವೆ; ಆವಶ್ಯಕವೆನಿಸಿದರೆ, ಬೇಕಾದ ಬದಲಾವಣೆಗಳನ್ನು ಧೈರ್ಯ ದಿಂದಲೂ ಹಿಂದೆ ಮುಂದೆ ನೋಡದೆಯೂ ಅಳವಡಿಸಿಕೊಳ್ಳಬೇಕಾಗಿದೆ. ಈ ವಿಷಯ ದಲ್ಲಿ ಆಡಳಿತ ಸುಧಾರಣ ಆಯೋಗವು ಸೂಕ್ತ ಮಾರ್ಗದರ್ಶನವನ್ನು ನೀಡುವುದೆಂದು ನಿರೀಕ್ಷಿಸುತ್ತೇನೆ. ಆದರೆ ಒಂದು ಪಕ್ಷವಾಗಿ ನಾವು ಕೂಡ ಈ ಪ್ರಶ್ನೆಗಳನ್ನು ಪರಿಶೀಲಿಸಿ ನಾವು ಮಾಡಬಹುದಾದುದು ಏನು ಎಂದು ಆಲೋಚಿಸಬೇಕಾಗಿದೆ.

ನಾವು ಪರಾಮರ್ಶಿಸಬೇಕಾದ ಇನ್ನೂ ಮಹತ್ವದ ಪ್ರಶ್ನೆಯೆಂದರೆ, ಪ್ರಜಾಪ್ರಭುತ್ವ, ವ್ಯಕ್ತಿಘನತೆ ಮತ್ತು ಸಾಮಾಜಿಕ ನ್ಯಾಯಗಳನ್ನಾಧರಿಸಿದ 'ಪ್ರಜಾಸತ್ತಾತ್ಮಕ ಸಮಾಜವಾದ'ದ ಬಗೆಗೆ ನಾವು ಭುವನೇಶ್ವರದಲ್ಲಿ ಅಂಗೀಕರಿಸಿದ ನಿರ್ಣಯದ ಅನುಷ್ಠಾನವು ಎಷ್ಟರ ಮಟ್ಟಿಗೆ ನಡೆದಿದೆ ಎಂಬುದರ ಪರಿಶೀಲನೆ. ನಮ್ಮ ಸಮಾಜದಲ್ಲಿ ಅಂತಹ ಕ್ರಾಂತಿಕಾರಕ ಬದಲಾವಣೆಯನ್ನು ತರುವುದಕ್ಕೆ ಕಾಲ ಬೇಕು, ಆದರೆ ಆ ದಿಸೆಯಲ್ಲಿ ನಾವು ಸೂಕ್ತ ಹೆಜ್ಜೆಗಳನ್ನಿಡಲು ತೊಡಗಿದ್ದೇವೆಯೇ? ನಾವು ಸಮಂಜಸವಾದ ದಾರಿಯಲ್ಲಿ ಸಾಗುತ್ತಿದ್ದೇ ವೆಯೇ? ಬಡವ ಬಲ್ಲಿದರ ನಡುವಣ ಕಂದಕವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ನಾವು ಯಶಸ್ವಿಗಳಾಗಿದ್ದೇವೆಯೇ? ಆರ್ಥಿಕಾಧಿಕಾರದ ಕೇಂದ್ರೀಕರಣವನ್ನು ತಡೆಗಟ್ಟಲು ನಾವು ಸಮರ್ಥರಾಗಿದ್ದೇವೆಯೇ ಅಥವಾ ಆರ್ಥಿಕತೆಯಲ್ಲಿನ ಏಕಸ್ವಾಮ್ಯ ಪ್ರವೃತ್ತಿಯನ್ನು ಕುಂಠಿತಗೊಳಿಸುವಲ್ಲಿ ಸಫಲರಾಗಿದ್ದೇವೆಯೇ? ಈ ಯಾವುದರ ಬಗ್ಗೆಯೂ ಹೆಚ್ಚಿನದನ್ನು ಸಾಧಿಸಿಲ್ಲ ಎಂಬುದನ್ನು ನಾವು ಒಪ್ಪಿಕೊಳ್ಳಬೇಕು. ಅನುಷ್ಠಾನದ ವಿಷಯದಲ್ಲಿ ನಮಗಿನ್ನೂ ಸ್ಪಷ್ಟತೆ ಸಾಲದು, ಪ್ರಜಾಸತ್ತಾತ್ಮಕ ಸಮಾಜವಾದ ಸಮಾಜ ನಿರ್ಮಾಣದ ಹಾದಿಯ ಗುಂಟ ಸಾಗುವಲ್ಲಿ ಇನ್ನೂ ಯಾವುದೇ ಎದ್ದು ಕಾಣುವ ಲಕ್ಷಣವು ಕಾಣುತ್ತಿಲ್ಲ. ಕೆಲವು ಕಾಂಗ್ರೆಸ್ಸಿಗರಲ್ಲಿ ಮಾತ್ರವಲ್ಲದೆ, ಸಮಾಜವಾದಕ್ಕೆ ಜೋತುಬಿದ್ದಿರುವ ಕೆಲವು ಪಕ್ಷಗಳವರ ವಿಷಯದಲ್ಲಿಯೂ ಇದು ಸತ್ಯ. ಸರ್ಕಾರದ ವಹಿವಾಟು, ಬ್ಯಾಂಕ್‌ಗಳ ರಾಷ್ಟ್ರೀಕರಣ ಅಥವಾ ಸಾಮಾಜೀಕರಣ, ಖಾಸಗಿ ಹಾಗೂ ಸಾರ್ವಜನಿಕ ವಲಯದ ಕೈಗಾರಿಕೆಗಳು ಮುಂತಾದ ವಿಷಯಗಳ ಬಗ್ಗೆ ಮುಂದಾಳುಗಳಲ್ಲಿ, ಉನ್ನತ ನಾಯಕವರ್ಗದಲ್ಲಿ ಕೂಡ, ಇನ್ನೂ ವಿಭಿನ್ನ ದೃಷ್ಟಿಕೋನಗಳು ಕಂಡುಬರುತ್ತವೆ. ನಮ್ಮದು ವಿಸ್ತೃತಗೊಳ್ಳುತ್ತಿರುವ ಆರ್ಥಿಕತೆಯಾದ್ದರಿಂದ ಅಭಿಪ್ರಾಯ ಭಿನ್ನತೆಯಲ್ಲೇನೂ ಆಶ್ಚರ್ಯವಿಲ್ಲ. ಜನತೆಯ ಆರ್ಥಿಕ ಮಟ್ಟವು ಸುಧಾರಿಸಿ, ಜೀವನವು ಇನ್ನಷ್ಟು ಪೂರ್ಣವೂ ಶ್ರೀಮಂತವೂ ಉತ್ತಮವೂ

ಆಗಲು ಕಾರಣವಾಗಬೇಕು; ಆದಾಯಗಳಲ್ಲಿನ ವ್ಯತ್ಯಾಸಗಳು ಕಡಿಮೆಯಾಗಬೇಕು, ಸಂಪತ್ತಿನ ಕೇಂದ್ರೀಕರಣ ನಿಲ್ಲುವಂತಾಗಬೇಕು, ಸಾಧ್ಯವಾದ ಮಟ್ಟಿಗೂ ಉತ್ಪಾದನಾ ಆಕರಗಳನ್ನು ಮತ್ತು ಅಧಿಕಾರವನ್ನು ವಿಕೇಂದ್ರೀಕರಣಗೊಳಿಸಬೇಕು– ಇವೇ ಮುಂತಾದ ಗುರಿಗಳನ್ನು ನಮ್ಮ ಕಣ್ಣ ಮುಂದಿರಿಸಿಕೊಳ್ಳಬೇಕಾದುದು ಆವಶ್ಯಕ. ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಅಳವಡಿಸಿಕೊಂಡಿರುವ ಹತ್ತು ಅಂಶಗಳ ಕಾರ್ಯಕ್ರಮವು ನಮಗೆ ಕ್ರಿಯಾಯೋಜನೆಯೊಂದನ್ನು ನೀಡುತ್ತದೆ. ಇದರಲ್ಲಿನ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಗುರಿಗಳ ಸಾಧನೆಗೆ ಜನರ ತಿಳಿವಳಿಕೆಯಿಂದ ಕೂಡಿದ ಸಹಕಾರ ಅತ್ಯಗತ್ಯ. ಈ ದಿಸೆಯಲ್ಲಿ ಕಾಂಗ್ರೆಸ್ ಪಕ್ಷವು ಗಮನಹರಿಸಬೇಕು, ಮತ್ತೆ ತನ್ನನ್ನು ಅದಕ್ಕೆ ಸಮರ್ಪಣೆ ಮಾಡಿಕೊಳ್ಳಬೇಕು. ಪಕ್ಷವು ಕೇಂದ್ರ ಹಾಗೂ ರಾಜ್ಯಗಳಲ್ಲಿನ ಕಾಂಗ್ರೆಸ್ ಸರ್ಕಾರಗಳೊಡನೆ ನಿರಂತರ ಸಂಪರ್ಕವನ್ನು ಸಾಧಿಸಿಕೊಂಡು, ಪ್ರಗತಿಯನ್ನು ಗಮನಿಸುತ್ತ ಅನುಷ್ಠಾನಕ್ಕೆ ತೇಜವನ್ನು ನೀಡಬೇಕು. ಈ ಉದ್ದೇಶಕ್ಕಾಗಿ ಸ್ಥಾಪಿಸಬೇಕಾಗಿರುವ ಸಂಪರ್ಕ ಯಂತ್ರದ ಸ್ವರೂಪವೇನು ಎಂಬುದನ್ನು ನಾನು ಆಲೋಚನೆ ಮತ್ತು ಸಲಹೆಗಳ ಮೂಲಕ ನಿರ್ದಿಷ್ಟವಾಗಿ ಮುಂದೆ ಸೂಚಿಸುವವನಿದ್ದೇನೆ.

ಸ್ವಾತಂತ್ರ್ಯಾನಂತರ ಇಡೀ ದೇಶದ ಎಲ್ಲೆಡೆ ತನ್ನ ಬೇರುಗಳನ್ನು ಇಳಿಬಿಟ್ಟಿರುವ ಏಕೈಕ ಪಕ್ಷ ಕಾಂಗ್ರೆಸ್. ಆದರೆ, ಜನಸಮುದಾಯದ ಮೇಲಿನ ಅದರ ಹಿಡಿತ ಮತ್ತು ಪ್ರಭಾವಗಳು ನಿಧಾನವಾಗಿ ಕಡಿಮೆಯಾಗುತ್ತಿದೆ. ರಾಜ್ಯ ಅಥವಾ ಕೇಂದ್ರ ಶಾಸಕಾಂಗಕ್ಕೆ ಅಥವಾ ಸ್ಥಳಿಯ ಸಂಸ್ಥೆಗಳಿಗೆ ನಡೆಯುವ ಚುನಾವಣೆಗಳ ಸಮಯದಲ್ಲಿ ಮತ್ತು ಸದಸ್ಯತ್ವ ಆಂದೋಳನ ಮತ್ತು ಕಾಂಗ್ರೆಸ್ ಸಮಿತಿಗಳಿಗೆ ನಡೆಯುವ ಚುನಾವಣೆಗಳ ಹೊರತು ನಾವು ಇತರ ಬೇರಾವುದೇ ಸೃಜನಾತ್ಮಕ ಕಾರ್ಯಗಳ ಬಗ್ಗೆ ಆಸಕ್ತಿ ತೋರುತ್ತಿಲ್ಲ. ಈ ಕ್ರಿಯಾಹೀನತೆಗೆ ಅನೇಕ ಕಾರಣಗಳಿವೆ. ನನ್ನ ದೃಷ್ಟಿಯಲ್ಲಿ ಇದಕ್ಕಿರುವ ಪ್ರಮುಖ ಕಾರಣವೆಂದರೆ ಯುವಯುವತಿಯರನ್ನು ನಾವು ಕಾಂಗ್ರೆಸ್ ತೆಕ್ಕೆಗೆ ಬರಮಾಡಿಕೊಳ್ಳದಿರುವುದು. ನನ್ನ ಹಿರೀಕರಲ್ಲಿ ಕೆಲವರಿಗೆ ಅವರನ್ನು ಬರಮಾಡಿಕೊಳ್ಳುವ ಉತ್ಸಾಹವೇ ಇಲ್ಲ. ಯುವಜನತೆಯನ್ನು ಆಕರ್ಷಿಸಿ ತರಬೇತಿ ನೀಡುತ್ತಿಲ್ಲ. ಕಾಲದ ಅತ್ಯಂತ ಶ್ರೇಷ್ಠ ವ್ಯಕ್ತಿಗಳಲ್ಲೊಬ್ಬರ ನೇತೃತ್ವದಲ್ಲಿ ನಡೆದ ಭಾರತ ಸ್ವಾತಂತ್ರ್ಯ ಸಂಗ್ರಾಮದ ವೈಭವಯುತ ಚರಿತ್ರೆಯನ್ನು ಮತ್ತು ಅವರು ಹೇಗೆ ಪ್ರತಿಭೆ, ಸನ್ನಡತೆ ಮತ್ತು ದೇಶಭಕ್ತಿಗಳ ಯುವ ಜನರನ್ನು ತಯಾರಿಸಿ ಅವರಿಗೆ ಅಹಿಂಸೆ ಮತ್ತು ಸತ್ಯಮಾರ್ಗವನ್ನು ಬೋಧಿಸಿ, ಗುರಿಯಷ್ಟೇ ಸಾಧನಾಮಾರ್ಗವೂ ಮುಖ್ಯವೆಂದು ಮನವರಿಕೆ ಮಾಡಿಕೊಟ್ಟ ಬಗೆಯನ್ನು ತಿಳಿಸಿ ಹೇಳದಿದ್ದರೆ, ನಾವು ಯಾವ ಮುನ್ನಡೆಯನ್ನೂ ಸಾಧಿಸಲಾರೆವು. ಹಿಂದಿನ ಪದ್ಧತಿಯಂತೆ ಆಗಾಗ್ಗೆ ಜಿಲ್ಲಾ ಮತ್ತು ರಾಜ್ಯ ಮಟ್ಟದ ರಾಜಕೀಯ ಸಮ್ಮೇಳನಗಳನ್ನು

ನಡೆಸಿ ನಮ್ಮ ಗುರಿಗಳನ್ನು ಶ್ರುತಪಡಿಸಿ, ಪ್ರಗತಿಯ ಅನುಷ್ಠಾನವನ್ನು ಪರಿಶೀಲಿಸಿ, ನಮ್ಮ ತೆಕ್ಕೆಗೆ ಯುವಜನರನ್ನು ಆಕರ್ಷಿಸಿ, ಯುವಜನತೆಯ ಭುಜಗಳ ಮೇಲೆ ನಾಯಕತ್ವದ ಹೊಣೆಗಾರಿಕೆಯ ಅವಕಾಶವನ್ನು ನಾವು ಒದಗಿಸಬೇಕು. ಗಾಂಧೀಜಿ ಅವರು ತೋರಿಸಿದ ಸತ್ಯ, ಅಹಿಂಸೆಗಳನ್ನು ನಮ್ಮ ವೃತ್ತಿಗಳಲ್ಲಿ ಅಳವಡಿಸಿಕೊಂಡು ಯುವ ಸಹೋದ್ಯೋಗಿಗಳಲ್ಲಿ ಗಾಂಧೀಜಿಯನ್ನು ಅರಿಯುವ ಅವಕಾಶವನ್ನು ಒದಗಿಸ ಬೇಕು. ಗಾಂಧೀಜಿಯರ ಬೋಧನೆಗಳನ್ನು ನಾವು ಮರೆಯುವಂತಿಲ್ಲ, ಹಾಗೇನಾದರೂ ಮಾಡಿದರೆ, ಶಾಂತಿ ಸ್ಥಿರತೆಗಳಿಂದ ಸಾಮಾಜಿಕ ಪರಿವರ್ತನೆಯನ್ನು ಉಂಟುಮಾಡುವ ನಮ್ಮ ಪ್ರಯೋಗಕ್ಕೆ ಕುತ್ತು ತಂದುಕೊಳ್ಳುತ್ತೇವೆ.

ಸಂದಿಗ್ಧವೂ ಕಷ್ಟಕರ ಕಾಲವೂ ಆದ ಕಾಂಗ್ರೆಸ್‌ನ ಪ್ರಸ್ತುತ ಪರಿಸ್ಥಿತಿಯಲ್ಲಿ ಪ್ರತಿ ಯೊಬ್ಬ ಕಾಂಗ್ರೆಸ್ಸಿಗನೂ ಅಂತರ್ನಿರೀಕ್ಷಣೆ ಮಾಡಿಕೊಂಡು, ತಾನು ಗಾಂಧೀಜಿ ಹೇಳಿ ಕೊಟ್ಟ ಉನ್ನತ ಆದರ್ಶಗಳನ್ನು ಪಾಲಿಸುತ್ತಿದ್ದೇನೆಯೇ ಎಂದು ಕೇಳಿಕೊಳ್ಳಬೇಕು. ನಿರೀಕ್ಷಿತ ಮಟ್ಟದ ಸನ್ನಡತೆ ಮತ್ತು ಸಜ್ಜನಿಕೆಗಳನ್ನು ಅಳವಡಿಸಿಕೊಂಡು, ಸಮಸ್ಯೆಗಳ ಪರಿಹಾರ ಮಾರ್ಗದಲ್ಲಿ ತನ್ನ ನಡಾವಳಿಯು ವ್ಯಕ್ತಿನಿಷ್ಠವಾಗಿರದೆ ವಸ್ತುನಿಷ್ಠವಾಗಿದೆಯೇ ಎಂಬುದನ್ನು ಕೇಳಿಕೊಳ್ಳಬೇಕು. ನಾವು ಉನ್ನತ ಮಟ್ಟವನ್ನು ಕಾಯ್ದುಕೊಳ್ಳಬೇಕೆಂದು ನಾನು ಎಲ್ಲ ಕಾಂಗ್ರೆಸ್ಸಿಗರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಯಾವುದೇ ಪಕ್ಷವಾಗಲೀ ಗುಂಪಾಗಲೀ ಸಮಾಜವಿರೋಧಿ ಮತ್ತು ಪ್ರಜಾಪ್ರಭುತ್ವ ವಿರೋಧಿ ಮತ್ತು ದೇಶವಿರೋಧಿ ಚಟುವಟಿಕೆಗಳಲ್ಲಿ ತೊಡಗಲು ಮಾಡುವ ಪ್ರಯತ್ನ ಗಳನ್ನು ನಾವು ತಡೆಗಟ್ಟಬೇಕು. ಹಾಗೆಯೇ ದೇಶದ ಸಮಗ್ರತೆಗೆ ಒಗ್ಗಟ್ಟಿಗೆ ಧಕ್ಕೆ ತರುವ ಭಾಷೆ, ಜಾತಿ ಮತ್ತು ಸಮುದಾಯಗಳೆಂಬ ಕ್ಷುಲ್ಲಕ ಮನೋಭಾವವನ್ನು ತೊರೆಯಬೇಕು. ನಮ್ಮ ಈ ರಾಷ್ಟ್ರ ಪುನರುಜ್ಜೀವನ, ಅಷ್ಟೇಕೆ ರಾಷ್ಟ್ರದ ಉಳಿವಿನ ಕಾರ್ಯದಲ್ಲಿ ಹೃತ್ಪೂರ್ವಕ ವಾಗಿ ಸಹಕರಿಸಿ ಕಾರ್ಯೋನ್ಮುಖವಾಗಬೇಕೆಂದು ಪ್ರತಿಯೊಬ್ಬನಲ್ಲಿಯೂ ನಾನು ಮನವಿ ಮಾಡಿಕೊಳ್ಳುತ್ತೇನೆ.

ರಾಜ್ಯ ಮತ್ತು ಕೇಂದ್ರಗಳ ನಡುವಣ ಹಾಗೂ ವಿವಿಧ ರಾಜ್ಯಗಳ ನಡುವಣ ಸಂಬಂಧದ ಪ್ರಶ್ನೆಯು ಬಹು ಪ್ರಾಮುಖ್ಯವನ್ನು ತಾಳಿದೆ, ಇದಕ್ಕೆ ಕಾರಣ ಕೆಲವು ರಾಜ್ಯ ಗಳಲ್ಲಿ ಭಿನ್ನ ರಾಜಕೀಯ ಪಕ್ಷಗಳು ಆಡಳಿತ ನಡೆಸುತ್ತಿರುವುದು. ಇವುಗಳಲ್ಲಿ ಮೊದಲು ಯಾವುದನ್ನು ಎಲ್ಲರಿಗೂ ತೃಪ್ತಿಕರವಾಗುವಂತೆ ಪರಿಹರಿಸಬೇಕು ಎಂಬುದೊಂದು ಚಕ್ರಬಂಧ ಸಮಸ್ಯೆಯಾಗಿದೆ. ಇದಕ್ಕೆ ಮೂಲ ಪರಿಗಣನೆಯೆಂದರೆ ದೇಶದ ಸರ್ವಾಂಗೀಣ ಪ್ರಗತಿ, ಸಮಗ್ರತೆಯ ರಕ್ಷಣೆ ಮತ್ತು ಸಾಮರ್ಥ್ಯ-ಘನತೆಗಳ ಪರಿಪಾಲನೆ.

ಕೇಂದ್ರವಿರೋಧಿ ಭಾವನೆಯು ರಾಜಕೀಯ ಅಥವಾ ಪಕ್ಷದ ಶೋಷಣೆಯ ಮಟ್ಟಕ್ಕೆ ಬೆಳೆಯಬಾರದು. ಈ ಉದ್ದೇಶಕ್ಕಾಗಿ ನಾವು ಕೇಂದ್ರ-ರಾಜ್ಯ ಸಂಬಂಧದ ಪ್ರಶ್ನೆಯನ್ನು ಪುನರ್‌ಪರಿಶೀಲಿಸಬೇಕಾಗಿದೆ, ರಾಜ್ಯಗಳಿಗೆ ಈಗಿರುವುದಕ್ಕಿಂತ ಹೆಚ್ಚಿನ ಸಂಪನ್ಮೂಲ ಮತ್ತು ಅಧಿಕಾರಗಳನ್ನು ವಹಿಸಬೇಕಾಗಿದೆ, ಆ ಮೂಲಕ ಹೆಚ್ಚಿನ ಹೊಣೆಗಾರಿಕೆಯನ್ನು ಹೊರಿಸಬೇಕಾಗಿದೆ, ಮತ್ತು ಇದರಿಂದ ಅವು ತಮ್ಮೆಲ್ಲ ಲೋಪದೋಷಗಳನ್ನು ಕೇಂದ್ರದ ಮುಖಕ್ಕೆ ಮಸಿ ಬಳಿಯುವ ಮೂಲಕ ಮುಚ್ಚಿಕೊಳ್ಳುವ ಸಾಧ್ಯತೆಯನ್ನು ಹೋಗಲಾಡಿಸಬೇಕಾಗಿದೆ.

ಈಗಾಗಲೇ ನಾನು ಹೇಳಿದಂತೆ, ದೇಶದ ಎಲ್ಲೆಡೆ ತನ್ನ ಬೇರುಗಳನ್ನು ಹೊಂದಿರುವ ಪಕ್ಷವೆಂದರೆ ಕಾಂಗ್ರೆಸ್ ಒಂದೇ. ಯಾವುದೇ ಕಾರಣದಿಂದ ಅದರ ಸಾಮರ್ಥ್ಯವಾಗಲೀ ಪ್ರಭಾವವಾಗಲೀ ಕಡಿಮೆಯಾದರೆ, ಅದು ತಾನೇ ಒಡೆದ ಮನೆಯಾಗಿಬಿಟ್ಟರೆ, ಆ ದಿನ ದೇಶಕ್ಕೊಂದು ದುರ್ದಿನವಾಗುತ್ತದೆ. ಕೇಂದ್ರದಲ್ಲಾಗಲೀ ಬಹುತೇಕ ರಾಜ್ಯಗಳಲ್ಲಾಗಲೀ ಸರ್ಕಾರವನ್ನು ನಡೆಸುವ ಹೊರೆಯನ್ನು ಹೊರಬಲ್ಲ ಸಾಮರ್ಥ್ಯವಿರುವ ಬೇರಾವುದೇ ಒಂದು ಪಕ್ಷ ಕಾಣುತ್ತಿಲ್ಲ. ಹೀಗಾಗಿ, ಕಟ್ಟಿಕೊಂಡಿರುವ ಇಲ್ಲಣಗಳನ್ನು ಗುಡಿಸಿ ಹಾಕಿ ನಮ್ಮ ಮನೆಯನ್ನು ಸುಸ್ಥಿತಿಯಲ್ಲಿರಿಸಿಕೊಳ್ಳುವುದು ಬಹು ಮುಖ್ಯವಾದ ಹಾಗೂ ತುರ್ತಾದ ಕರ್ತವ್ಯವಾಗಿದೆ. ನಮ್ಮ ಧ್ವನಿಗಳಲ್ಲಿ ಭಿನ್ನತೆಯಿಲ್ಲದಿರಲಿ. ಸಾಕಷ್ಟು ಚರ್ಚೆ ನಡೆಸಿದ ಬಳಿಕ ತೀರ್ಮಾನಗಳನ್ನು ಕೈಗೊಂಡು ಅವುಗಳನ್ನು ಒಗ್ಗಟ್ಟು ಮತ್ತು ತಿಳಿವಳಿಕೆಯಿಂದ ಅನುಷ್ಠಾನಗೊಳಿಸೋಣ. ಇದಕ್ಕೆ ಬೇಕಾಗಿರುವುದು ಕೇಂದ್ರ ಹಾಗೂ ರಾಜ್ಯ ಮಟ್ಟಗಳಲ್ಲಿ ಕಾಂಗ್ರೆಸ್ ಸಂಘಟನೆಯನ್ನು ಸುಬದ್ಧಗೊಳಿಸುವುದು. ಕಾಂಗ್ರೆಸ್ ಈಗ ವ್ಯಹಾರಸೂತ್ರಗಳಿಗೆ ಬದ್ಧವಾಗಿ ಕಾರ್ಯನಿರ್ವಹಿಸಬೇಕಾಗಿದೆ. ಅದರ ಕಚೇರಿಯ ಕಾರ್ಯವಿಧಾನವು ಚುರುಕುಗೊಳ್ಳಬೇಕು, ಹೆಚ್ಚು ಸಾಮರ್ಥ್ಯ ಹೊಂದಬೇಕು; ಅದರಲ್ಲೊಂದು ಪ್ರಬುದ್ಧವಾದ ಸಂಶೋಧನಾ ಘಟಕವಿರಬೇಕು; ಶಿಸ್ತುಬದ್ಧ ಕಾರ್ಯಪಡೆಯಿರಬೇಕು; ಅದು ದೇಶದ ಕಾಂಗ್ರೆಸ್ ಸರ್ಕಾರಗಳೊಡನೆ ಸೂಕ್ಷ್ಮತೆಯುಳ್ಳ ಸಂಪರ್ಕ, ಸಂಯೋಜಕತ್ವ, ಮತ್ತು ಸಹಕಾರಗಳನ್ನು ಹೊಂದಿರಬೇಕು. ಈ ಸಂಕೀರ್ಣ ಸಮಸ್ಯೆಯ ಸ್ವರೂಪವನ್ನು ನಾನು ಅಧ್ಯಯನ ಮಾಡಿದ ಬಳಿಕ, ಕಾಂಗ್ರೆಸ್‌ನ ಕಾರ್ಯವಿಧಾನದ ಬಗ್ಗೆ ನಿಮ್ಮ ಸಲಹೆಗಳನ್ನು ಪಡೆದು, ಈ ಕುರಿತು ಸೂಕ್ತ ಕ್ರಮಗಳನ್ನು ನಾನು ಕೈಗೊಳ್ಳಬಯಸುತ್ತೇನೆ.

ಇಷ್ಟೇ ಮುಖ್ಯವಾದುದು, ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ತನ್ನ ಕರ್ತವ್ಯಗಳೇನೆಂಬುದರ ಬಗ್ಗೆ ಸಾಮಾನ್ಯ ಜನರಿಗೆ ತಿಳಿವಳಿಕೆ ಕೊಡುವುದು. ಏನೇನೆಲ್ಲ ಒಳ್ಳೆಯ ಕೆಲಸಗಳಾಗಿವೆ, ಆಗಬೇಕಾಗಿರುವುದು ಏನು ಹಾಗೂ ಅವನಿಂದ ನಿರೀಕ್ಷಿಸಲಾಗುವುದು

ಏನನ್ನು ಎಂಬುದರ ಅರಿವು ಅವನಿಗುಂಟಾಗಬೇಕು. ಕರ್ಮ ಎಂದರೆ ಏನೆಂಬುದನ್ನು ಅವನಿಗೆ ನಾವು ವಿವರಿಸಿ ಹೇಳಬೇಕು. ಕರ್ಮ ಎಂದರೆ ವಿಷಾದಪೂರ್ಣ ತೃಪ್ತಿಯಾಗಲೀ ಇರುವುದರೊಡನೆ ಹೊಂದಿಕೊಂಡು ಹೋಗುವುದಾಗಲೀ ಅಲ್ಲ ಎಂದು ಅವನಿಗೆ ಹೇಳಬೇಕು. ಕರ್ಮ ಎಂಬುದು ಸಕ್ರಿಯವಾದ ಚಟುವಟಿಕೆ, ಸಾಧನೆ ಹಾಗೂ ಹೆಚ್ಚು ಸಂಪದ್ಭರಿತವಾದ ಮತ್ತು ಪರಿಪೂರ್ಣವಾದ ಜೀವನೆದೆಡಗಿನ ಕಾರ್ಯ ಎಂಬುದನ್ನು ಅವನಿಗೆ ಸ್ಪಷ್ಟಪಡಿಸಬೇಕು. ತನ್ನ ಸರ್ಕಾರವನ್ನು ತಾನೇ ಆಯ್ಕೆ ಮಾಡಿಕೊಳ್ಳುವುದು ಎಂದರೇನೆಂಬುದನ್ನು ಅವನಿಗೆ ತಿಳಿಸಿಕೊಡಬೇಕು. ತನ್ನ ದೇಶ, ಅದರ ಇತಿಹಾಸ, ಅದರ ದಾರ್ಶನಿಕತೆ, ಅದರ ಹಿರಿಯ ಸಾಂಸ್ಕೃತಿಕ ಪರಂಪರೆ ಇವುಗಳ ಬಗ್ಗೆ ಅವನಲ್ಲಿ ಹೆಮ್ಮೆ ಮೂಡುವಂತೆ, ಆ ಮೂಲಕ ಅವನಲ್ಲಿ ರಾಷ್ಟ್ರದ ಹೆಚ್ಚಿನ ವೈಭವದ ಅಪೇಕ್ಷೆಯುಂಟಾಗುವಂತೆ ಮಾಡಬೇಕು, ಹೆಚ್ಚು ಸಾರ್ಥಕ ಸೃಜನಶೀಲತೆಯಿಂದ ಕಾರ್ಯಶೀಲವಾಗುವಂತೆ ಪ್ರೇರಿಸಬೇಕು.

ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಮುಂದಿರುವ ಕರ್ತವ್ಯವೆಂದರೆ, ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿನ ಈ ಸವಾಲುಗಳನ್ನೆದುರಿಸಲು ನಮ್ಮನ್ನು ನಾವು ಮತ್ತೆ ತೆತ್ತುಕೊಳ್ಳಬೇಕು. ಬದಲಾಗುತ್ತಿರುವ ಭಾರತದಲ್ಲಿನ ಹೊಸ ಸವಾಲುಗಳಿವು. ಸ್ಥಗಿತ ಸಮುದಾಯದಲ್ಲಿ ಸಮಸ್ಯೆಗಳೂ ಹಳೆಯವೇ ಆಗಿರುತ್ತವೆ, ಹೀಗಾಗಿ ಹೊಸ ಅರಿವು, ಕೌಶಲ ಅಥವಾ ಮನೋಭಾವ ಉಂಟಾಗಲು ಸಾಧ್ಯವಿಲ್ಲ. ಆದರೆ ಪ್ರಗತಿ ಎಂದರೇ ಬದಲಾವಣೆ, ಅಂದರೆ ಹೊಸವೂ, ಪ್ರಾಯಶಃ ಹೆಚ್ಚು ಕಷ್ಟಕರವೂ ಆದ ಸಮಸ್ಯೆಗಳನ್ನೆದುರಿಸುವುದು ಎಂದರ್ಥ. ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಕಾಲಗಳಲ್ಲಿ ಅಂಥ ಐತಿಹಾಸಿಕ ಪಾತ್ರ ವಹಿಸಿದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪ್ರಗತಿ ಮತ್ತು ಬದಲಾವಣೆಗಳ ಹೊಸ ಸನ್ನಿವೇಶದಲ್ಲಿನ ಸವಾಲುಗಳನ್ನೆದುರಿಸಲು ಭಯಪಡಬೇಕಾಗಿಲ್ಲ. ಈ ಉದ್ದೇಶಕ್ಕಾಗಿ, ಆವಶ್ಯಕವಾದರೆ ಕಾಂಗ್ರೆಸ್‌ನ ಸ್ವರೂಪವನ್ನು ಪುನಾರೂಪಿಸಬೇಕು, ಅದಕ್ಕೊಂದು ಹೊಸ ಆಕೃತಿಯನ್ನು ನೀಡಬೇಕು.

ಕಾಂಗ್ರೆಸ್‌ನಲ್ಲಿಯೇ ಸೃಜನಶೀಲ ಚಿಂತನೆಗೆ ಹಾಗೂ ಹೊಸ ಆವಿಷ್ಕರಣಕ್ಕೆ ನಾವು ಪ್ರೋತ್ಸಾಹ ನೀಡಬೇಕು. ಕೆಲ ಕಾಲ ನಮ್ಮಲ್ಲಿ ಈ ಸೃಜನಶೀಲ ಚಿಂತನೆಗೆ ಹಾಗೂ ಹೊಸ ಆವಿಷ್ಕರಣಗಳಿಗೆ ಅವಕಾಶವಿಲ್ಲದೇ ಹೋಗಿರಬಹುದು. ಇಲ್ಲಿಯೇ ಯುವ ಪೀಳಿಗೆಯು ಪ್ರಮುಖ ಪಾತ್ರವನ್ನು ವಹಿಸಬೇಕಾಗಿರುವುದು. ಇದು ಸಾಧ್ಯವಾಗುವುದು ನಾವು ಹೊಸ ಪೀಳೀಗೆಯನ್ನು, ಅದರಲ್ಲಿಯೂ ವಿದ್ಯಾವಂತ ಯುವಪೀಳಿಗೆಯನ್ನು, ನಮ್ಮ ತೆಕ್ಕೆಗೆ ಆಕರ್ಷಿಸಲು ಸಮರ್ಥರಾದಾಗ. ಇದರಲ್ಲಿ ನಾವು ಸಫಲರಾಗುವುದು,

ಬುದ್ಧಿಜೀವಿಗಳು ಹಾಗೂ ಪ್ರಜ್ಞಾವಂತರಲ್ಲಿ ನಮ್ಮ ಪಕ್ಷದ ಬಗ್ಗೆ ಇನ್ನೂ ಉತ್ತಮ ಭಾವನೆಯನ್ನು ಮೂಡಿಸುವುದರಲ್ಲಿ ಯಶಸ್ವಿಗಳಾದಾಗ ಮಾತ್ರ.

ಕಾಂಗ್ರೆಸ್ ಸೇರಿ ಅದನ್ನು ಮತ್ತಷ್ಟು ಸಾರ್ಥಕ ಪಕ್ಷವಾಗಿ ಮಾಡುವಂತೆ ನಾನು ಯುವಜನತೆಯಲ್ಲಿ ಮನವಿ ಮಾಡಿಕೊಳ್ಳುವುದರ ಜೊತೆಗೇ, ಕಾಂಗ್ರೆಸ್ಸಿನಲ್ಲಿಯೇ ಎಲ್ಲ ಕ್ರಿಯಾತ್ಮಕ ಕ್ಷೇತ್ರಗಳಲ್ಲಿಯೂ ಕರ್ತವ್ಯನಿಷ್ಠರಾದ ಶಾಶ್ವತ ಕಾರ್ಯಕರ್ತರ ಪಡೆಯೊಂದು ನಿರ್ಮಾಣಗೊಳ್ಳಬೇಕಾಗಿದೆ ಎಂದು ನನಗನ್ನಿಸುತ್ತದೆ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಮತ್ತು ಆನಂತರವೂ ಶಿಸ್ತುಬದ್ಧತೆಗೆ ಹೆಸರಾಗಿದ್ದ ಸೇವಾದಳವನ್ನೀಗ ಬಲಪಡಿಸಬೇಕಾಗಿದೆ. ಮಹಿಳಾ ಘಟಕವನ್ನು ಮತ್ತಷ್ಟು ಚುರುಕುಗೊಳಿಸಬೇಕಾಗಿದೆ. ಯುವಜನತೆಯಲ್ಲಿ ಸೇವಾ ಮನೋಭಾವವನ್ನದು ತುಂಬಬೇಕಾದ ಯುವ ಕಾಂಗ್ರೆಸ್ ಮತ್ತಷ್ಟು ಸುಸಜ್ಜಿತ ವಾಗಬೇಕಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ, ನಮ್ಮ ಕಾರ್ಯಕರ್ತರು ಹಳ್ಳಿಗಳ ಹಾಗೂ ನಗರ ಪ್ರದೇಶಗಳ ಜನಸಾಮಾನ್ಯರೊಡನೆ ಸದಾ ಕಾಲ ಸಂಪರ್ಕದಲ್ಲಿರಬೇಕಾಗಿದೆ. ಅವರ ಕರ್ತವ್ಯವೆಂದರೆ, ಜನಗಳಿಗೆ ತಮ್ಮ ಕರ್ತವ್ಯಗಳ ಬಗ್ಗೆ, ಹೊಣೆಗಾರಿಕೆಗಳ ಬಗ್ಗೆ ಹಾಗೆಯೇ ಅವರ ಹಕ್ಕುಗಳ ಬಗ್ಗೆಯೂ ತಿಳಿಯ ಹೇಳುವುದು, ಇದರಿಂದ ಅವರು ದೇಶದಲ್ಲಿನ ಆಗುಹೋಗುಗಳ ಬಗ್ಗೆ ಪೂರ್ಣ ಅರಿವನ್ನು ಹೊಂದಲು ಸಾಧ್ಯ ವಾಗುತ್ತದೆ. ಅದಕ್ಕೂ ಮಿಗಿಲಾದುದೆಂದರೆ, ಜನತೆಯ ನೈತಿಕಸ್ಥೈರ್ಯವನ್ನು ಹೆಚ್ಚಿಸಿ, ದೇಶಕ್ಕೆ ಆವಶ್ಯಕವಾದ ಎಲ್ಲವನ್ನೂ ಇನ್ನಷ್ಟು ಹೆಚ್ಚು ಉತ್ಪಾದಿಸಲು ಮತ್ತಷ್ಟು ಶ್ರಮವಹಿಸಿ ದುಡಿಯುವಂತೆ ಮಾಡುವುದು. ಇವೆಲ್ಲವನ್ನೂ ಅವರು ಮಾಡಲು ಸಾಧ್ಯವಾಗುವುದು, ಸದಾ ಜನತೆಯೊಡನೆ ಸಂಪರ್ಕದಲ್ಲಿದ್ದು, ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಮಾಡಿ ದಂತೆಯೇ, ಅವರ ವಿಶ್ವಾಸವನ್ನು ಸಂಪಾದಿಸಿದಾಗ ಮಾತ್ರ.

ಸಾಮಾನ್ಯರ ಜೀವನವು ಹೆಚ್ಚು ಅರ್ಥಪೂರ್ಣವೂ ಉತ್ತಮವೂ ಆಗುವಂತೆ ಮಾಡಲು ಕಾಂಗ್ರೆಸ್ ಕೈಗೊಂಡಿರುವ ಯೋಜನೆಗಳು ಅನೇಕವಿವೆ. ನಿಮ್ಮ ಗಂಭೀರ ಪರಿಶೀಲನೆಯನ್ನು ಸೆಳೆಯಬಯಸುವ ಮತ್ತೊಂದು ಯೋಜನೆಯಿದೆ; ಅದೆಂದರೆ, ಉತ್ತಮ ಹಳ್ಳಿಗಳ ನಿರ್ಮಾಣ, ಈಗಿನ ಕಸ, ಗಬ್ಬುನಾತ ಮತ್ತು ಕಂದಾಚಾರಗಳು ತುಂಬಿರುವ ಹಳ್ಳಿಗಳ ಬದಲು ಆರೋಗ್ಯಪೂರ್ಣವೂ, ಶುಚಿಯಾದುದೂ ಮತ್ತು ಹೆಚ್ಚು ಸುಂದರವೂ ಆದ ಹಳ್ಳಿಗಳ ನಿರ್ಮಾಣ. ಯೋಜನಾ ಆಯೋಗ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಸೇರಿ ಒಟ್ಟಾಗಿ ಕುಳಿತು, ಇನ್ನು ಹದಿನೈದು ವರ್ಷಗಳಲ್ಲಿ, ಹೆಚ್ಚು ಶುಚಿಯಾದ ಮತ್ತು ವೈಜ್ಞಾನಿಕವಾದ ಹಾಗೂ ಸಕಲ ಸೌಕರ್ಯ ಗಳನ್ನು ಹೊಂದಿದ ವಿನ್ಯಾಸವುಳ್ಳ ಉತ್ತಮ ಮನೆಗಳಿರುವ ಹಳ್ಳಿಗಳನ್ನು ನಿರ್ಮಿಸಬೇಕು, ನಗರ ಪ್ರದೇಶಗಳಲ್ಲಿ ಕೊಳೆಗೇರಿಗಳು ಹೆಚ್ಚಾಗದಂತೆ ಎಚ್ಚರವಹಿಸುವ ದಿಸೆಯಲ್ಲಿ

ನಿರ್ಮಾಣ ಕಾರ್ಯವನ್ನು ಕೈಗೊಳ್ಳಬೇಕು. ಹಳ್ಳಿಗಳ ಕಡೆಯಿಂದ ಪಟ್ಟಣಗಳ ಕಡೆಗೆ 'ಬೌದ್ಧಿಕತೆ ಹರಿಯುವ' ಬದಲು ನಗರ ಪ್ರದೇಶಗಳಿಂದ ಉತ್ಕೃಷ್ಟವಾದ ಹಾಗೂ ಉತ್ತಮ ಸೌಕರ್ಯಗಳ ಆಕರ್ಷಣೆಯಿಂದಾಗಿ ಹಳ್ಳಿಗಳ ಕಡೆಗೆ ಪ್ರತಿಭೆ ಹಾಗೂ ಕೌಶಲ ಗಳು ಹರಿದು ಹೋಗುವ ಕಾಲ ಬರಬೇಕು.

ಕೊನೆಯದಾಗಿ, ನಮ್ಮ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಗುರಿಗಳನ್ನು ತಲುಪಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಉತ್ತಮ ಬಾಂಧವ್ಯವಿರಬೇಕು. ಎಲ್ಲ ಸರ್ಕಾರಗಳು ಒಂದೇ ರಾಜಕೀಯ ಪಕ್ಷದವಲ್ಲದ ಪರಿಸ್ಥಿತಿಯಲ್ಲಿ ಇದು ಮತ್ತಷ್ಟು ಆವಶ್ಯಕವಾಗುತ್ತದೆ. ಪಕ್ಷ ಯಾವುದೇ ಆಗಿರಲಿ, ದೇಶದ ಆರ್ಥಿಕತೆಯನ್ನು ನಿರ್ಮಾಣ ಮಾಡುವಲ್ಲಿ, ಜನತೆಗೆ ಉತ್ತಮ ಜೀವನ ಮಟ್ಟವನ್ನು ಕಲ್ಪಿಸುವಲ್ಲಿ ಹಾಗೂ ಒಕ್ಕೂಟದ ಸಮಗ್ರತೆಯನ್ನು ಕಾಪಾಡುವಲ್ಲಿ ಸಂಪೂರ್ಣ ಸಹಕಾರ ಹಾಗೂ ಸಂಯೋಜನೆಗಳು ಆವಶ್ಯಕವೆಂಬುದನ್ನು ಎಲ್ಲರೂ ಒಪ್ಪುವರೆಂಬ ಭರವಸೆ ನನಗಿದೆ. ಈ ದಿಸೆಯಲ್ಲಿ ನನ್ನ ಕೈಲಾದುದನ್ನು ಮಾಡುವ ಆಸೆ ನನ್ನದು.

ಕೆಲವರು ನಿರಾಶಾ ಮಹೋದಯರುಗಳು, ಮುಂದೆ ಕಗ್ಗತ್ತಲೇ ಕಾದಿದೆ ಎಂದು ಭವಿಷ್ಯ ನುಡಿಯುವವರು. ಅದಕ್ಕೆ ಕಾರಣ ಅವರ ಸ್ವಭಾವವೇ ಅಂತಹದು ಎಂಬುದಾ ಗಿರಬಹುದು, ಅಥವಾ ಹಾಗೆ ಹೇಳುವುದರಲ್ಲಿ ಅವರಿಗೆ ಒಂದು ವಿಚಿತ್ರ ರೀತಿಯ ಸಂತೋಷ ಉಂಟಾಗಬಹುದು. ನನಗೆ ಅಂತಹ ಭಾವನೆಯಿಲ್ಲ. ಉತ್ತಮ ಭವಿಷ್ಯದೆಡೆಗೆ ಹಾಗೂ ನಮ್ಮ ಕನಸುಗಳ ಸಾಕಾರದೆಡೆಗೆ ಕೊಂಡೊಯ್ದು ಬಲಿಷ್ಠವೂ, ಒಗ್ಗಟ್ಟಿನದೂ, ಆರೋಗ್ಯಪೂರ್ಣವೂ ಆದ ಮತ್ತು ಹಿಂದೆಂದಿಗಿಂತಲೂ ಹೆಚ್ಚು ವೈಭವಯುತವಾದ ಸುಖೀ ಭಾರತವವನ್ನು ನಿರ್ಮಿಸಬಲ್ಲ ಏಕೈಕ ಪಕ್ಷವೆಂದರೆ ಕಾಂಗ್ರೆಸ್ ಮಾತ್ರವೇ. ಅದು ನನಸಾಗಲು ನಾವೆಲ್ಲ ಒಂದಾಗೋಣ.

ಸ್ನೇಹಿತರೇ, ನನಗೆ ತೋಚಿದ ವಿಷಯಗಳನ್ನು ನಾನು ಮುಕ್ತವಾಗಿಯೂ ಬಿಚ್ಚು ಮನಸ್ಸಿನಿಂದಲೂ ಹೇಳಿದ್ದೇನೆ. ಕಳೆದ ಮೂರು ದಶಕಗಳಿಂದಲೂ ವಿವಿಧ ನೆಲೆಗಳಲ್ಲಿಯೂ ವಿವಿಧ ಜವಾಬ್ದಾರಿಗಳಲ್ಲಿಯೂ ಕಾರ್ಯ ನಿರ್ವಹಿಸುತ್ತ ತಕ್ಕಮಟ್ಟಿಗಿನ ಆಡಳಿತಾತ್ಮಕ ಅನುಭವವನ್ನು ಹೊಂದಿರುವ ಕಾಂಗ್ರೆಸ್‌ನ ಒಬ್ಬ ಸೇವಕ ಹಾಗೂ ಸಿಪಾಯಿಯಾಗಿ ನಾನು ಮುಂದೆಯೂ ಸೇವೆಗೆಯ್ಯಲು ಸಿದ್ಧನಿದ್ದೇನೆ. ನಿಮ್ಮಿಂದಲೇ ನನಗೆ ಮಾರ್ಗದರ್ಶನ, ಮತ್ತು ಸ್ಫೂರ್ತಿಗಳು ದೊರೆಯಬೇಕು, ಅದನ್ನು ನೀವು ಯಥೇಚ್ಛವಾಗಿ ನೀಡುವಿರೆಂಬ ಭರವಸೆ ನನ್ನದು.

ಜೈ ಹಿಂದ್

* * *

೪. ನಿಜಲಿಂಗಪ್ಪನವರ ಅತುಲ್ಯ ಘೋಷ್ ಸ್ಮಾರಕೋಪನ್ಯಾಸ

ಭಾರತದ ಆರ್ಥಿಕ ವ್ಯವಸ್ಥೆಯಲ್ಲಿನ ಅಸಮತೋಲನಗಳು ಮತ್ತವುಗಳ ಪರಿಹಾರೋಪಾಯಗಳು

ಅತುಲ್ಯ ಘೋಷ್ ಸ್ಮಾರಕ ಸಮಿತಿಯ ಗೆಳೆಯರು ಮೊದಲನೆಯ ಸ್ಮಾರಕೋಪನ್ಯಾಸವನ್ನು ನೀಡಲು ಆಹ್ವಾನಿಸಿರುವುದು ನನಗೆ ಸಿಕ್ಕಿದ ಒಂದು ಸದವಕಾಶವೆಂದು ನಾನು ಭಾವಿಸುತ್ತೇನೆ. ಅತುಲ್ಯ ಘೋಷ್ ಅವರ ವ್ಯಕ್ತಿತ್ವ, ಸಾಧನೆಗಳು, ರಾಷ್ಟ್ರೀಯ ಸಮಸ್ಯೆಗಳ ಬಗೆಗಿನ ಅವರ ಅಲೋಚನಾಮಾರ್ಗ, ಸದೃಢ ಬಾಹ್ಯ ಹಾಗೂ ವ್ಯವಹಾರ ಜ್ಞಾನ, ಸಭ್ಯತೆ, ಎಲ್ಲಕ್ಕಿಂತ ಮಿಗಿಲಾಗಿ, ಅವರ ನ್ಯಾಯಪರತೆ ಮತ್ತು ಸಜ್ಜನಿಕೆಗಳ ಬಗ್ಗೆ ನಾನು ಮಾತನಾಡಿದ್ದರೆ ಸೂಕ್ತವಾಗುತ್ತಿತ್ತು. ನಾನು ಅವರನ್ನು ಪ್ರೀತಿಯಿಂದ ಅತುಲ್ಯ ದಾ ಎಂದು ಕರೆಯುತ್ತಿದ್ದೆ. ಇಪ್ಪತ್ತು ವರ್ಷಗಳ ಕಾಲ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಅವರೊಡನೆ ಸದಸ್ಯನಾಗಿ, ಇಂದಿರಾ ಗಾಂಧಿ ಮತ್ತವರ ಸಹಚರರ ಅಶಿಸ್ತು ಮತ್ತು ಇತರ ಅನರ್ಹತೆಗಳ ಕಾರಣದಿಂದ ಉಂಟಾದ ಕುಖ್ಯಾತ ಕಾಂಗ್ರೆಸ್ ಇಬ್ಭಾಗದ ಮುಂಚೆ ಮತ್ತು ಆನಂತರ ನಾನು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷನಾಗಿದ್ದಾಗಲೂ ನನ್ನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಅವರನ್ನು ನಾನು ಬಲ್ಲೆ ಎಂಬುದು ನಿಜ. ಇಬ್ಭಾಗದ ಬಳಿಕ ಅವರು ಆ ಬಗ್ಗೆ 'ಇಬ್ಭಾಗ' ಎಂಬ ಲೇಖನವನ್ನು ಬರೆದು ಪ್ರಕಟಿಸಿದರು. ಆ ಕಾದಲ್ಲಿ ಏನು ನಡೆಯಿತು ಎಂದು ತಿಳಿಯಬಯಸುವವರೆಲ್ಲ ಆ ಲೇಖನವನ್ನು ಓದಬೇಕು. ಆಗ ನನ್ನನ್ನು ಬೆಂಬಲಿಸಿದ ಅತುಲ್ಯ ಘೋಷ್ ಮತ್ತಿತರ ಸ್ನೇಹಿತರಿಗೆ ನಾನು ಋಣಿಯಾಗಿದ್ದೇನೆ.

ನನ್ನನ್ನು ಆಕರ್ಷಿಸಿ ನನ್ನ ಮೇಲೆ ಪ್ರಭಾವ ಬೀರಿದ ಅವರ ಒಂದು ಗುಣವೆಂದರೆ ಅವರು ಮಕ್ಕಳ ಬಗ್ಗೆ ಹೊಂದಿದ್ದ ಗಾಢವಾದ ಪ್ರೀತಿವಾತ್ಸಲ್ಯಗಳು. ದೆಹಲಿಯಲ್ಲಿ ನನ್ನ ಜತೆಯಲಿ ನನ್ನ ಪುಟ್ಟ ಮೊಮ್ಮಗಳಿದ್ದಳು. ನನ್ನ ಪ್ರಾರ್ಥನೆಯ ಮೇರೆಗೆ ಅವರು ನಮ್ಮ ಮನೆಗೆ ಬೆಳಗಿನ ತಿಂಡಿಗಾಗಿ ಎಷ್ಟೋ ವೇಳೆ ಬರುತ್ತಿದ್ದರು. ಬಂದವರೇ ಅವರು 'ಸಂಧ್ಯಾ' ಎಂದು ಕೂಗುತ್ತಿದ್ದರು, ಅವರ ಗಡಸು ದನಿಯನ್ನು ಕೇಳಿದ ಕೂಡಲೇ ಅವರ ಬಳಿ ಧಾವಿಸುತ್ತಿದ್ದ ಮಗು ಅವರ ಭಾರಿ ತೊಡೆಯನ್ನೇರುತ್ತಿತ್ತು, ಅವರು ಅವಳನ್ನು ಮುದ್ದಾಡುತ್ತಿದ್ದರು. ಅವರು ಕೊಟ್ಟ ಉಡುಗೊರೆ ಈಗಲೂ ಅವಳ ಹತ್ತಿರ ಹೆಮ್ಮೆಯ ಕುರುಹಾಗಿ ಉಳಿದಿದೆ – ಒಂದು ದೀಪ – ಅವಳ ಹುಟ್ಟು ಹಬ್ಬದಂದು ಅವರದನ್ನು ಕೊಡುಗೆಯಾಗಿ ನೀಡಿದ್ದರು. ಈ ನಗರದಲ್ಲಿ ಅವರು ಮಕ್ಕಳಿಗಾಗಿ ಅತ್ಯುತ್ತಮ ಸಂಸ್ಥೆಯೊಂದನ್ನು ಸ್ಥಾಪಿಸಿದುದರಲ್ಲಿ ಆಶ್ಚರ್ಯವೇನಿಲ್ಲ. ಹೂಗಳ ಬಗೆಗಿನ ಅವರ

ಮೋಹ, ಅದರಲ್ಲಿಯೂ ಗುಲಾಬಿ, ದೊಡ್ಡದು. ತಮ್ಮ ಹಳ್ಳಿಯ ಮನೆಗೆ ಅವರು ನನ್ನನ್ನು ಆಹ್ವಾನಿಸಿದ್ದರು. ದುರದೃಷ್ಟವಶಾತ್ ನನಗೆ ಹೋಗಲಾಗಲಿಲ್ಲ. ಎಲ್ಲ ಬಂಗಾಳಿಗಳಂತೆಯೇ ಅವರೂ ಒಳ್ಳೆಯ ಅತಿಥಿ ಉಪಚಾರಕರು.

ಈ ಮೊದಲ ಸ್ಮಾರಕೋಪನ್ಯಾಸದ ವಿಷಯವನ್ನು ಅವರ ಬಗ್ಗೆಯೇ ಮಾತನಾಡಲು ಆರಿಸಿಕೊಳ್ಳದಿರಲು ಕಾರಣ ನನಗಿಂತ ಅವರನ್ನು ಚೆನ್ನಾಗಿ ಬಲ್ಲ ಗೆಳೆಯರು ಇಲ್ಲಿ ಬೇಕಾದಷ್ಟು ಮಂದಿ ಇದ್ದಾರೆ ಎಂಬುದು. ಹಾಗೆ ಮಾಡಿದ್ದರೆ ಗುಡ್ಡಕ್ಕೆ ಕಲ್ಲು ಹೊತ್ತ ಹಾಗಾಗುತ್ತಿತ್ತು, ಅಷ್ಟೆ. ಆದ್ದರಿಂದಲೇ ನಾನು 'ಭಾರತದ ಆರ್ಥಿಕ ವ್ಯವಸ್ಥೆಯಲ್ಲಿನ ಅಸಮತೋಲನಗಳು ಮತ್ತವುಗಳ ಪರಿಹಾರೋಪಾಯಗಳು' ಎಂಬ ವಿಷಯವನ್ನು ಆರಿಸಿಕೊಂಡೆ. ಸಾಮಾನ್ಯವಾಗಿ ತಿಳಿದ ಅರ್ಥದಲ್ಲಿ ನಾನು ಅರ್ಥಶಾಸ್ತ್ರಜ್ಞನಲ್ಲ. ನಾನಿಲ್ಲಿ ಸೂಚಿಸಿರುವ ಅನೇಕ ಪರಿಹಾರೋಪಾಯಗಳು ಕಳೆದ ಐವತ್ತು ವರ್ಷಗಳ ನನ್ನ ರಾಜಕೀಯ ಅನುಭವದಿಂದ, ಅನಿಸಿಕೆಗಳಿಂದ ಮತ್ತು ಗಂಭೀರ ಆಲೋಚನೆಗಳಿಂದ ಮೂಡಿಬಂದವು. ಸ್ವಾತಂತ್ರ್ಯಾನಂತರದ ಕಳೆದ ಅರವತ್ತು ವರ್ಷಗಳಲ್ಲಿ ದೇಶದಲ್ಲಿನ ಅಸಮಾನತೆಗಳು ಹೆಚ್ಚುತ್ತಿವೆ ಎಂಬುದು ಎಂತಹವರಿಗಾದರೂ ಖಿನ್ನತೆಯನ್ನು ತರುವಂಥದು. ಆರ್ಥಿಕ ಪ್ರಗತಿಯು ಭಿನ್ನ ರೀತಿಯದೂ ಉತ್ತಮವೂ ಆಗಬಹುದಿತ್ತು. ಅದನ್ನು ಅಧ್ಯಯನ ಮತ್ತು ವಿಶ್ಲೇಷಣೆಗಳಿಗೆ ಒಳಪಡಿಸಬೇಕಾಗಿದೆ. ಒಂದೆಡೆ, ಬೃಹತ್ ಕೈಗಾರಿಕಾ ನಗರಗಳಲ್ಲಿ ಸುತ್ತಾಡುವ, ಮತ್ತು ಮತ್ತೊಂದೆಡೆ ಹಳ್ಳಗಾಡಿನಲ್ಲಿ ಓಡಾಡುವ ಯಾರಿಗೇ ಆಗಲೀ ಈ ಎರಡೂ ಪ್ರದೇಶಗಳಲ್ಲಿನ ಜೀವನಶೈಲಿಯ ವ್ಯತ್ಯಾಸಗಳು ಗಾಬರಿಯುಂಟುಮಾಡುವಂತಹುದು.

ಮಹಾತ್ಮಾ ಗಾಂಧಿಯವರ ಎರಡು ಮಾತುಗಳನ್ನು ನಾನಿಲ್ಲಿ ಉದ್ಧೃತಗೊಳಸ ಬಯಸುತ್ತೇನೆ: "ಎಲ್ಲಿಯವರೆಗೆ ಶ್ರೀಮಂತ ಮತ್ತು ಹಸಿದ ಲಕ್ಷಾಂತರ ಬಡವರ ನಡುವಣ ಕಂದಕವು ಮುಂದುವರಿಯುತ್ತದೆಯೋ ಅಲ್ಲಿವರೆಗೂ ಅಹಿಂಸಾತ್ಮಕ ಸರ್ಕಾರದ ವ್ಯವಸ್ಥೆಯ ಸ್ಥಾಪನೆ ಖಂಡಿತ ಸಾಧ್ಯವಿಲ್ಲ. ನವದೆಹಲಿಯ ಅರಮನೆಗಳು ಮತ್ತು ಸನಿಹದಲ್ಲೇ ಇರುವ ಬಡ ಕಾರ್ಮಿಕರ ಜೋಬದ್ರ ಗುಡಿಸಲುಗಳು ಸ್ವತಂತ್ರ ಭಾರತದಲ್ಲಿ ಒಂದು ದಿನವೂ ಉಳಿಯಲಾರದು, ಅಲ್ಲಿ ದೇಶದ ಶ್ರೀಮಂತರಷ್ಟೇ ಅಧಿಕಾರವನ್ನು ಬಡವರೂ ಹೊಂದಿರುತ್ತಾರೆ. ಶ್ರೀಮಂತಿಕೆ ಮತ್ತು ಶ್ರೀಮಂತಿಕೆಯಿಂದ ಬರುವ ಅಧಿಕಾರಗಳನ್ನು ಎಲ್ಲರ ಒಳಿತಿಗೆ ಬಳಸಿಕೊಳ್ಳುವ ಕಾಲ ಬರದಿದ್ದರೆ ಒಂದಲ್ಲ ಒಂದು ದಿನ ಹಿಂಸಾತ್ಮಕವೂ ರಕ್ತಪಾತದಿಂದ ಕೂಡಿದುದೂ ಆದ ಕ್ರಾಂತಿ ಸಂಭವಿಸುವುದು ನಿಶ್ಚಿತ."

"ಮೇಲ್ವರ್ಗ ಮತ್ತು ಕೆಳವರ್ಗ, ರಾಜಕುಮಾರ-ಭಿಕಾರಿ ಇವರುಗಳ ನಡುವೆ ಮೊದಲ ವರ್ಗಕ್ಕೆ ಇನ್ನೂ ಹೆಚ್ಚಿನದು ಬೇಕು ಎಂದು ಹೇಳಿ ಆ ವ್ಯತ್ಯಾಸಗಳನ್ನು ಯಾರೂ ವೈಭವೀಕರಿಸಬಾರದು. ಅದು ವ್ಯರ್ಥ ತರ್ಕ ಮತ್ತು ನನ್ನ ವಾದವನ್ನು ತಿರಿಚಿದಂತೆ. ಇಂದು ಕಾಣುವ ಬಡವ-ಬಲ್ಲಿದರ ನಡುವಣ ವ್ಯತ್ಯಾಸವು ನೋವುಂಟು ಮಾಡುವಂತಹುದು. ವಿದೇಶಿ ಸರ್ಕಾರಗಳು ಬಡಪಾಯಿ ಹಳ್ಳಿಗರನ್ನು ಸುಲಿಗೆ ಮಾಡುತ್ತಿವೆ, ಜೊತೆಗೆ ಅವರನ್ನು ನಗರವಾಸಿಗಳಾದ ಸ್ವದೇಶದವರೂ ಹಾಗೇ ಮಾಡುತ್ತಿದ್ದಾರೆ. ಕಾಳು ಬೆಳೆದರೂ ಅವರು ಹಸಿವಿನಿಂದ ಬಳಲಬೇಕು. ಇದಂತೂ ತಲೆತಗ್ಗಿಸುವಂಥ ವಿಷಯ. ಎಲ್ಲರಿಗೂ ಸಮತೋಲನದ ಆಹಾರ ಬೇಕು, ವಾಸಿಸಿಲು ಸೌಕರ್ಯಯುಕ್ತ ಮನೆ ಬೇಕು, ಮಕ್ಕಳ ವಿದ್ಯಾಭ್ಯಾಸಕ್ಕೆ ಸೌಕರ್ಯಗಳು ಬೇಕು, ಮತ್ತು ಎಲ್ಲರಿಗೂ ವೈದ್ಯಕೀಯ ಸೌಲಭ್ಯಗಳು ದೊರೆಯಬೇಕು." ಅವರ ಕಾಣ್ಕೆಯ ಆರ್ಥಿಕ ಸಮಾನತೆಯ ಚಿತ್ರ ಅದು. ಕನಿಷ್ಠ ಆವಶ್ಯಕತೆಗಳಿಗಿಂದ ಹೆಚ್ಚಿನ ಎಲ್ಲವನ್ನೂ ಅವರು ಎಂದೂ ಬಹಿಷ್ಕರಿಸಿದವರಲ್ಲ, ಆದರೆ ಅದು ಬಡವರು ಅತ್ಯಗತ್ಯಗಳ ಪೂರೈಕೆಯಿಂದ ತೃಪ್ತಿಹೊಂದಿದ ನಂತರ ಬರಬೇಕು. ಆವಶ್ಯಕ ವಸ್ತುಗಳಿಗೆ ಮೊದಲ ಆದ್ಯತೆ.

ಮೊದಲ ಹೇಳಿಕೆ ಬಂದದ್ದು ೧೯೪೬ರಲ್ಲಿ, ಎರಡನೆಯದು ೧೯೪೭ರಲ್ಲಿ. ಈ ಹೇಳಿಕೆಗಳು ಇಂದಿಗೂ ಪ್ರಸ್ತುತವೇ ಆಗಿವೆ. ಅವರ ನಿರೀಕ್ಷೆಗಳು ನನಸಾಗಿಲ್ಲ, ಅದರ ಬದಲು ನಡೆದಿರುವುದು ತದ್ವಿರುದ್ಧವಾದುದು. ಅಲ್ಲದೆ ಈ ಬಡಪಾಯಿ ದೇಶದಲ್ಲಿ ಶ್ರೀಮಂತರಿಗೆ ಅನುಕೂಲಕರವಾಗುವಂತಹುದೇ ಮತ್ತು ಬಡವರಿಗೆ ಮಾರಕವಾಗುವಂತಹುದೇ ನಡೆಯುತ್ತಿವೆ. ಸ್ವಾತಂತ್ರ್ಯ ಗಳಿಸಿದ ಒಂದೂವರೆ ವರ್ಷದೊಳಗೇ, ಅಹಿಂಸೆಯ ಆಧಾರದ ಮೇಲೆ ದೇಶದ ಸ್ವಾತಂತ್ರ್ಯ ಸಂಗ್ರಾಮದ ನಾಯಕತ್ವ ವಹಿಸಿ ಅದನ್ನು ಸಾಧಿಸಿದ, ಉತ್ಪಾದನೆ ಅಧಿಕಾರ ಸಂಪತ್ತುಗಳ ವಿಕೇಂದ್ರೀಕರಣವನ್ನು ಪ್ರತಿಪಾದಿಸಿದ ಮಹಾತ್ಮಾ ಗಾಂಧಿಯವರನ್ನು ದುರಭಿಮಾನಿ ಹಿಂದೂ ಒಬ್ಬ ಕೊಲೆಗೈದ.

ಆನಂತರ ಇನ್ನೆರಡು ವರ್ಷಗಳಲ್ಲಿ, ತನ್ನ ದೃಢವೂ ದೂರದೃಷ್ಟಿಪೂರಿತವೂ ಕೌಶಲಯುಕ್ತವೂ ಆದರೆ ಕರುಣಾಮಯವೂ ಆದ ರೀತಿಯಲ್ಲಿ ೫೬೨ ರಷ್ಟು ರಾಜ್ಯಗಳಿದ್ದ ದೇಶದ ಸಂಕೀರ್ಣ ಸಮಸ್ಯೆಯನ್ನು ಪರಿಹರಿಸಿ, ದೇಶದ ಐಕಮತ್ಯ ಮತ್ತು ಸಮಗ್ರತೆಗೆ ನೇರವಾಗಿ ನೆರವಾದ ವ್ಯಕ್ತಿಯು ಅನಾರೋಗ್ಯದಿಂದ ದಿವಂಗತರಾದರು. ಅವರೇ ಸರ್ದಾರ್ ವಲ್ಲಭಭಾಯ್ ಪಟೇಲ್. ಅವರಿಬ್ಬರಂತೆ ಭಾರತವನ್ನು ಅರಿತಿದ್ದ ನಾಯಕರು ಕೆಲವೇ ಮಂದಿ. ಹಳ್ಳಿಗಳಲ್ಲಿನ ಕೋಟಿ ಕೋಟಿ ಜನರ ದಾರಿದ್ರ್ಯ, ಅನಾರೋಗ್ಯ, ಅನಕ್ಷರತೆ ಮತ್ತು ಎಲ್ಲಕ್ಕಿಂತ ಮಿಗಿಲಾಗಿ, ನಿರುದ್ಯೋಗ ಇವುಗಳ ಅರಿವು ಅವರಿಗಿತ್ತು.

ಅವರು ಇದ್ದಿದ್ದರೆ, ಈಗ ದೇಶವನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ನೈತಿಕವಾಗಿ ಅಧಃಪತನಕ್ಕೆ ಕೊಂಡೊಯ್ಯುತ್ತಿರುವ ತಪ್ಪು ಆರ್ಥಿಕ ನೀತಿಗಳು ಮತ್ತು ರಾಜಕಾರಣವನ್ನು, ಆರೋಗ್ಯಪೂರ್ಣವೂ ಆವಶ್ಯಕವೂ ಆದ ನಿರ್ಬಂಧಗಳಿಂದ ತಡೆಗಟ್ಟುತ್ತಿದ್ದರು. ನಿರೀಕ್ಷಿತ ರೀತಿಯಲ್ಲಿಯೇ, ಸ್ವಾತಂತ್ರ್ಯ ಗಳಿಸಿದ ತಕ್ಷಣವೇ ನಾವು ಸಂವಿಧಾನ ಸಭೆಗೆ ಸದಸ್ಯರುಗಳನ್ನು ಚುನಾಯಿಸಿದೆವು, ಮೂರು ವರ್ಷಗಳ ಕಾಲ ಎಲ್ಲ ವಿಭಾಗಗಳಲ್ಲಿನ ಮತ್ತು ವಿವಿಧ ರಾಜಕೀಯ ಪಕ್ಷಗಳ ಅತ್ಯಂತ ಶ್ರೇಷ್ಠ ವ್ಯಕ್ತಿಗಳಿಂದ ನಡೆದ ತೀವ್ರ ಚರ್ಚೆಗಳ ಬಳಿಕ ಅದು, ಅತ್ಯಂತ ಶ್ರೇಷ್ಠವೂ ನಮ್ಮ ಸಂಸ್ಕೃತಿ, ಇತಿಹಾಸಮತ್ತು ಪ್ರತಿಭೆಗೆ ತಕ್ಕನಾದುದೂ ಆದ, ಸಂವಿಧಾನವೊಂದನ್ನು ರೂಪಿಸಿತು. ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ ಪಟ್ಟಿಯಿದೆ, ಸರ್ಕಾರದ ನೀತಿಗಳ ನಿರ್ದೇಶಕ ತತ್ವಗಳಿವೆ. ಇಲ್ಲಿ ನಾನು ಹೇಳಬಯಸುವುದೇನೆಂದರೆ, ಮೂಲಭೂತ ಹಕ್ಕುಗಳಲ್ಲಿ ನೌಕರಿಯ ಹಕ್ಕು ಮತ್ತು ಮಾಹಿತಿಯ ಹಕ್ಕು ಸೇರಬೇಕಾಗಿತ್ತು ಎಂದು.

ಮೂಲಭೂತ ಹಕ್ಕುಗಳ ಮತ್ತು ಸರ್ಕಾರದ ನೀತಿಗಳ ನಿರ್ದೇಶಕ ತತ್ವಗಳ ಬಗ್ಗೆ ನ್ಯಾಯಾಂಗವು ನೀಡಿರುವ ಹೇಳಿಕೆಗಳನ್ನಿಲ್ಲಿ ನಾನು ಉದ್ಧೃತಗೊಳಿಸಬಯಸುತ್ತೇನೆ. "ಮೂಲಭೂತ ಹಕ್ಕುಗಳು ಮತ್ತು ಸರ್ಕಾರದ ನೀತಿಗಳ ನಿರ್ದೇಶಕ ತತ್ವಗಳು ನಮ್ಮ ಸಂವಿಧಾನದ 'ಪ್ರಜ್ಞೆ'ಯನ್ನು ಒಳಗೊಂಡವು. ಮೂಲಭೂತ ಹಕ್ಕುಗಳ ಉದ್ದೇಶವೆಂದರೆ ಸಮಾನತೆಯ ಆಧಾರದ ಸಮಾಜ ನಿರ್ಮಾಣ, ಸಮಾಜದ ಬಲವಂತ ಅಥವಾ ಬಲಪ್ರಯೋಗದಿಂದ ಎಲ್ಲ ಪ್ರಜೆಗಳನ್ನು ಮುಕ್ತಗೊಳಿಸಿ ಎಲ್ಲರಿಗೂ ಸ್ವಾತಂತ್ರ್ಯವನ್ನು ಒದಗಿಸುವುದು. ಸರ್ಕಾರದ ನೀತಿಗಳ ನಿರ್ದೇಶಕ ತತ್ವಗಳ ಉದ್ದೇಶವೆಂದರೆ, ಅಹಿಂಸಾತ್ಮಕ ಸಾಮಾಜಿಕ ಕ್ರಾಂತಿಯ ಮೂಲಕ ಕೆಲವು ಸಾಮಾಜಿಕ ಮತ್ತು ಆರ್ಥಿಕ ಗುರಿಗಳನ್ನು ತಕ್ಷಣವೇ ಗಳಿಸುವುದು. ಸಂವಿಧಾನ ನೆರವೇರಿಸಬಯಸುವ ಅಂಥ ಸಾಮಾಜಿಕ ಕ್ರಾಂತಿಯು ಸಂವಿಧಾನವು ಸಾಮಾನ್ಯ ಜನರ ಮೂಲಭೂತ ಆವಶ್ಯಕತೆಗಳನ್ನು ಪೂರೈಸ ಬಯಸುತ್ತದೆ, ಮತ್ತು ನಮ್ಮ ಸಮಾಜದ ಸಂರಚನೆಯನ್ನು ಬದಲಿಸಬಯಸುತ್ತದೆ. ಅದರ ಉದ್ದೇಶ ಭಾರತದ ಜನಸಾಮಾನ್ಯರನ್ನು ಗುಣಾತ್ಮಕವಾಗಿ ಮುಕ್ತರನ್ನಾಗಿಸುವುದು. ಸರ್ಕಾರದ ನೀತಿಗಳ ನಿರ್ದೇಶಕ ತತ್ವಗಳನ್ನು ಪ್ರಾಮಾಣಿಕತೆಯಿಂದ ಅನುಷ್ಠಾನಗೊಳಿಸದೆ, ಸಂವಿಧಾನವು ಧ್ಯಾನಿಸುವ ಕಲ್ಯಾಣ ರಾಜ್ಯವನ್ನು ಸ್ಥಾಪಿಸುವುದು ಅಸಾಧ್ಯ."

ನನ್ನ ಮಟ್ಟಿಗೆ, ಇವು ನಮ್ಮ ಸಂವಿಧಾನದ ತಲೆ ಮತ್ತು ಹೃದಯಗಳು.

ಸ್ವಾತಂತ್ರ್ಯದ ಬಳಿಕ ಆಗಿರುವ ನಮ್ಮ ಆರ್ಥಿಕ ಬೆಳವಣಿಗೆಯ ಇತಿಹಾಸವನ್ನು ಗಮನಿಸಿದರೆ, ಅತ್ಯಂತ ಮುಖ್ಯವಾದ ನಿರ್ದೇಶಕ ತತ್ವಗಳನ್ನು ಅನುಷ್ಠಾನಕ್ಕೆ ತಂದಿಲ್ಲ,

ಗೌರವಿಸಿಲ್ಲ ಮತ್ತು ಅವುಗಳನ್ನು ತಿರಸ್ಕಾರವಲ್ಲದಿದ್ದರೂ ನಿರ್ಲಕ್ಷ್ಯದಿಂದ ಕಾಣಲಾಗಿದೆ ಎಂಬುದು ವೇದ್ಯವಾಗುತ್ತದೆ.

ಜನಸಮುದಾಯದ ಕಲ್ಯಾಣದ ಸಾಧನೆಯ ಕಡೆಗೆ ಗಮನವನ್ನು ಹರಿಸದೆ ಸರ್ಕಾರವು ಕೈಗಾರಿಕೀಕೃತ ಪಶ್ಚಿಮದಿಂದ ಅಕರ್ಷಿತವಾಗಿ ಅದನ್ನು ಅನುಸರಿಸುತ್ತ ಬಂಡವಾಳಾಧಾರಿತ ಭಾರಿ ಕೈಗಾರಿಕೆಗಳ ಬಗ್ಗೆ ಆಸಕ್ತವಾಗಿ ಅದಕ್ಕೆ ಸಾಧ್ಯವಾದ ಎಲ್ಲ ಸಹಾಯ ಮತ್ತು ಉತ್ತೇಜನಗಳನ್ನು ನೀಡುತ್ತಿದೆ. ಬೇಕಾದ ಬಂಡವಾಳಕ್ಕೆ ಆಂತರಿಕ ಸಂಪನ್ಮೂಲಗಳ ಕ್ರೋಡೀಕರಣವಲ್ಲದೆ, ಯಂತ್ರಗಳು ಹಾಗೂ ತಂತ್ರಜ್ಞಾನದೊಡನೆ ವಿದೇಶದ ಹಣವೂ ಹರಿದು ಬರಲು ಅವಕಾಶ ನೀಡುತ್ತಿದೆ. ಭಾರತವು ಅತ್ಯುಚ್ಚ ಮಟ್ಟ ತಾಂತ್ರಿಕ ಕೌಶಲ ಮತ್ತು ಅಮೆರಿಕ ಮತ್ತು ರಷ್ಯಾಗಳನ್ನು ಬಿಟ್ಟರೆ ಅತ್ಯಂತ ಹೆಚ್ಚಿನ ಸಂಖ್ಯೆಯ ತಂತ್ರಜ್ಞರನ್ನು ಹೊಂದಿದ ದೇಶವೆಂಬ ಹೆಗ್ಗಳಿಕೆಯನ್ನು ಗಳಿಸಿದ್ದರೂ, ಅವುಗಳನ್ನು ಸರಿಯಾಗಿ ಬಳಸಿಕೊಳ್ಳುತ್ತಲೂ ಇಲ್ಲ, ಅವುಗಳಿಗೆ ಸೂಕ್ತ ಉತ್ತೇಜನವನ್ನು ನೀಡುತ್ತಲೂ ಇಲ್ಲ. ಸಾವಿರಾರು ಕೋಟಿ ರೂಪಾಯಿಗಳ ಋಣಭಾರ ನಮ್ಮ ಮೇಲಿದೆ, ನಮಗೆ ಸಾಲ ನೀಡಿರುವವರು ಬಹುತೇಕ ಎಲ್ಲ ಮುಂದುವರಿದ ದೇಶಗಳು, ಅತ್ಯಂತ ಕಿರಿದನ್ನೂ ಒಳಗೊಂಡಂತೆ. ಅದರ ವಿವರಗಳು ಇಲ್ಲಿ ಅನವಶ್ಯಕ. ಏಕೆಂದರೆ ಅದು ಸರ್ವವಿದಿತ. ದೊಡ್ಡ ಕೈಗಾರಿಕೋದ್ಯಮಿಗಳು ಉದಯಿಸುತ್ತಿದ್ದಾರೆ, ಮತ್ತು ಕೆಲವೇ ವರ್ಷಗಳ ಹಿಂದೆ ಸಣ್ಣ ಬಂಡವಾಳ ಹೂಡಿದ್ದ ಕೈಗಾರಿಕೆಗಳು ತಮ್ಮ ಬಂಡವಾಳವನ್ನು ಅನೇಕ ಪಟ್ಟು ಹೆಚ್ಚಿಸಿಕೊಂಡಿವೆ. ಈ ಪ್ರಕ್ರಿಯೆ ಸಾಗುತ್ತಲೇ ಇದೆ. ಹಾಗೆಯೇ ಉದ್ಯಮಗಳು ಕೂಡ ಹೆಚ್ಚುತ್ತಿವೆ. ಆಮದು ರಫ್ತು ಪರವಾನಿಗೆಗಳು ಎರ್ರಾಬಿರ್ರಿ ಹೆಚ್ಚುತ್ತಿವೆ. ಇದರ ಜೊತೆಗೆ, ೧೯೬೯ರ ಕಾಂಗ್ರೆಸ್ ಇಬ್ಭಾಗದ ಬಳಿಕ, ತತತ್ವಗಳಿಗೆ ಮರ್ಯಾದೆ ಇಲ್ಲದ್ದರಿಂದಾಗಿ ಆಡಳಿತಯಂತ್ರವು ಭ್ರಷ್ಟಗೊಂಡಿದೆ. ಅಧಿಕಾರಶಾಹಿಯು ಸರ್ವಶಕ್ತವಾಗಿಬಿಟ್ಟಿದೆ. ಇದರಿಂದಾಗಿ ಕಂಡು ಕೇಳರಿಯದಷ್ಟು ಪ್ರಮಾಣದಲ್ಲಿ ತೆರಿಗೆವಂಚಕರು, ಕಾಳಸಂತೆ ಕೋರರು, ಕಳ್ಳ ಸಾಗಾಣಿಕೆದಾರರು, ಕೂಡಿಡುವವರು ಮತ್ತಿತರ ಸಮಾಜವಿದ್ರೋಹಿ ಶಕ್ತಿಗಳು ಹೆಚ್ಚಿವೆ. ರಾಷ್ಟ್ರೀಯ ಜೀವನದ ಇವತ್ತಿನ ಎರಡು ಲಕ್ಷಣಗಳೆಂದರೆ: ೧) ಅಧಿಕಾರವೇ ನನ್ನ ದೇವರು, ಹೀಗಾಗಿ ಅದನ್ನು ಪಡೆಯುವುದು, ಉಳಿಸಿಕೊಳ್ಳುವುದು ನನ್ನ ಧರ್ಮವಾಗಿದೆ. ೨) ಹಣವೇ ನನ್ನ ದೇವರು, ಅದನ್ನು ಗಳಿಸುವುದೇ ನನ್ನ ಧರ್ಮ. ಹೀಗಾಗಿ ಲಂಚಗುಳಿತನವು ದೇಶದ ಜೀವನದ ಪ್ರತಿ ವಲಯದಲ್ಲಿಯೂ ಮನೆಮಾಡಿದೆ. ಇದು ದೇಶದ ಉದ್ದಗಲಕ್ಕೂ ವ್ಯಾಪಿಸಿದೆ. ಮೇಲೆ ಹೇಳಿದ ವರ್ಗಗಳ ಜನರು ಮತ್ತು ಎಲ್ಲ ಹಂತದ ಅಧಿಕಾರಿವರ್ಗ, ಸಹಜವಾಗಿಯೇ ಬಹಳ ಕಡಿಮೆ ಪ್ರಮಾಣದ ಜನರನ್ನು ಬಿಟ್ಟು, ತಮ್ಮ ಮಟ್ಟಕ್ಕೆ ಅನುಸಾರವಾಗಿ ಹೆಚ್ಚೆಚ್ಚು ಹಣವಂತ

ರಾಗುತ್ತಿದ್ದಾರೆ. ಅವರ ಪ್ರಮಾಣ ಜನಸಂಖ್ಯೆಯ ಸುಮಾರು ಶೇಕಡ ೧೦ ಇರಬಹುದು. ಬಹುತೇಕ ನಗರಗಳಲ್ಲಿ ವಾಸಿಸುತ್ತ, ಅವರು ನಡೆಸುವ ಜೀವನ ಶ್ರೀಮಂತ ದೇಶಗಳವರ ರೀತಿಯದು. ಈ ಹಣವಂತರ ಮತ್ತು ಹಳ್ಳಿಯ ಬಡವರ ವ್ಯತ್ಯಾಸವನ್ನು ಒಂದು ಹೇಳಿಕೆಯು ಪ್ರಾಯಶಃ ಬಿಂಬಿಸಬಲ್ಲುದು. ಅದೆಂದರೆ, ಈ ವರ್ಗದ ಮಹಿಳೆಯೊಬ್ಬಳು ದಿನವೊಂದಕ್ಕೆ ಸ್ವಂತ ಖರ್ಚಿಗೆ ಮಾಡುವ ವೆಚ್ಚವು ಹಳ್ಳಿಯ ಒಂದು ಬಡ ಕುಟುಂಬದ ಒಂದು ತಿಂಗಳಿಗೆ ಸಾಕಾದೀತು.

ಇದಕ್ಕೆ ವ್ಯತಿರಿಕ್ತವಾಗಿ, ಹಳ್ಳಿಗಳಲ್ಲಿ ನಾವು ಕಾಣುವುದೇನು? ವ್ಯತ್ಯಾಸ ಆಘಾತ ಗೊಳಿಸುವಂಥದ್ದು, ಈ ಎರಡೂ ವಲಯಗಳ ನಡುವಣ ಕಂದರ ದಿನದಿನಕ್ಕೆ ಹೆಚ್ಚುತ್ತಿದೆ ಬೇರೆ. ಈ ವಲಯದ ಜನರು ಶೇಕಡ ಸುಮಾರು ೬೦ ರಿಂದ ೭೦ ರಷ್ಟು, ಉಳಿದ ಶೇಕಡ ೨೦ ರಿಂದ ೨೫ ರಷ್ಟು ಜನರು ಮಧ್ಯಮ ವರ್ಗಕ್ಕೆ ಸೇರಿದವರು, ಅವರು ತಮ್ಮ ಪಾಡನ್ನು ತಾವು ನೋಡಿಕೊಳ್ಳಬಲ್ಲವರು. ಹಳ್ಳಿಗಳಲ್ಲಿನ ೮೦-೯೦% ರಷ್ಟು ಜನರಲ್ಲಿ ಅತೀವ ಬಡತನವಿರುವುದರ ಜೊತೆಗೆ, ಅವರಿಗೆ ಉದ್ಯೋಗವಿಲ್ಲ, ಕಳೆಯುವ ಪ್ರತಿ ದಿನವೂ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುತ್ತದೆ. ತಿನ್ನಲು ಬೇಕಾದಷ್ಟು ಅನ್ನವೂ ಅವರಿಗಿಲ್ಲ. ಬಟ್ಟೆಯೋ ಚೂರು ಪಾರು. ಬಹುತೇಕ ಅವರ ಮನೆಗಳು ಬಿಸಿಲು ಮಳೆಗಾಳಿಗಳ ಹೊಡೆತಕ್ಕೆ ಸಿಲುಕಿ ನಲುಗುವಂತಹವು. ಹಳ್ಳಿಯ ಜೀವನದ ಬಹು ಮುಖ್ಯ ಲಕ್ಷಣ ಅನಕ್ಷರತೆ. ಸರ್ಕಾರದ ನಿರ್ದೇಶಕ ತತ್ವಗಳಲ್ಲಿ ಅತ್ಯಂತ ಪ್ರಮುಖ ವಾದುದೆಂದರೆ, ಪ್ರತಿ ಮಗುವೂ ಹದಿನಾಲ್ಕು ವರ್ಷವಾಗುವವರೆಗೆ ಕಡ್ಡಾಯ ಮತ್ತು ಉಚಿತ ಶಿಕ್ಷಣವನ್ನು ಪಡೆಯಬೇಕೆಂಬುದು. ಸಂವಿಧಾನವನ್ನು ಒಪ್ಪಿಕೊಂಡಾಕ್ಷಣವೇ ಇದನ್ನು ಜಾರಿ ಮಾಡಿದ್ದರೆ, ಈಗ್ಗೆ ಸುಮಾರು ೭೫% ಭಾಗದಷ್ಟು ಜನರು ವಿದ್ಯಾವಂತ ರಾಗಿರುತ್ತಿದ್ದರು. ಸಂವಿಧಾನವನ್ನು ಒಪ್ಪಿಕೊಂಡು ಈಗಾಗಲೇ ನಲವತ್ತು ವರ್ಷಗಳು ಸಂದಿವೆ, ಆದರೆ ಈ ನಿರ್ದೇಶಕ ತತ್ವಗಳ ಅನುಷ್ಠಾನಕ್ಕೆ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಇದು ಜನತೆಯ ಅಜ್ಞಾನಕ್ಕೆ ಮತ್ತಷ್ಟು ಪೂರಕವಾಗಿದೆ, ತಮ್ಮ ಪರವಾಗಲೀ ವಿರುದ್ಧ ವಾಗಲೀ ಜರುಗುವ ಯಾವುದನ್ನೂ ಅವರು ಅರಿಯಲಾರರು.

ಮೊದಲು ಗ್ರಾಮೀಣ ಭಾರತವನ್ನು ಕುರಿತು ಚರ್ಚಿಸೋಣ.

ಆರ್ಥಿಕ ಜೀವನ, ಅದರ ಪ್ರಗತಿ ಮತ್ತು ರಾಷ್ಟ್ರೀಯ ಅಭಿವೃದ್ಧಿಯನ್ನು ನಿಯಂತ್ರಿಸುವ ಮೂಲ ಕ್ಷೇತ್ರವೆಂದರೆ ಕೃಷಿ. ನಾವು ಹೆಚ್ಚು ಗಮನವಿಟ್ಟು ವೈಜ್ಞಾನಿಕವಾಗಿ ಪೋಷಿಸಬೇಕಾದ ಅದು ಒಂದು ಕೈಗಾರಿಕೆಯೆಂಬುದೇ ನನ್ನ ಖಚಿತ ಅಭಿಪ್ರಾಯ. ದೇಶದ ಒಟ್ಟು ಭೂಪ್ರದೇಶ ಸುಮಾರು ೯೧ ಕೋಟಿ ಎಕರೆಗಳು. ಇದರಲ್ಲಿ ಸುಮಾರು

೩೫% ಭಾಗವನ್ನು ಅರಣ್ಯಕ್ಕೆಂದು ನಾವು ತೆಗೆದಿರಿಸಬೇಕು. ಉಳಿದ ೫೨ ರಿಂದ ೫೩ ಕೋಟಿ ಎಕರೆಗಳಲ್ಲಿ ಮೂರು ಕೋಟಿ ಎಕರೆಗಳಷ್ಟು ಪ್ರದೇಶ ಸಾಗುವಳಿ ಸಾಧ್ಯವಾಗದ ವ್ಯರ್ಥಪ್ರದೇಶ. ಉಳಿಯುವುದು ೫೦ ಕೋಟಿ ಎಕರೆಗಳಷ್ಟು ಮಾತ್ರ. ಇದರಲ್ಲಿ ಸುಮಾರು ೭ ಕೋಟಿ ಎಕರೆಗಳು ಸ್ವಾತಂತ್ರ್ಯಕ್ಕೆ ಮುನ್ನವೇ ನೀರಾವರಿಗೆ ಒಳಪಟ್ಟಿತ್ತು. ಆದರೆ, ಸಾಕಷ್ಟು ಗಮನಹರಿಸದೆ, ಸರ್ಕಾರಕ್ಕೆ ಅದರ ಪ್ರಾಮುಖ್ಯ ಮನವರಿಕೆಯಾಗದೆ, ಆಗಿನಿಂದ ಈವರೆಗೂ ಕೇವಲ ೬ ಕೋಟಿ ಎಕರೆಗಳಷ್ಟನ್ನು ಮಾತ್ರ ಅದಕ್ಕೆ ಸೇರಿಸಿದ್ದೇವೆ. ಹೀಗಾಗಿ ಈಗ ನೀರಾವರಿಯಾಗಿರುವುದು ಒಟ್ಟು ೧೩ ಕೋಟಿ ಎಕರೆಗಳು ಮಾತ್ರ. ದೇಶಕ್ಕೆ ಸ್ವಾತಂತ್ರ್ಯ ಬಂದು ನಲವತ್ತು ವರ್ಷಗಳೇ ಆಗಿವೆ. ಕೃಷಿಗೆ, ನೀರಾವರಿಗೆ ಕೂಡ, ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆಯೆಂದು ಸರ್ಕಾರಗಳು ಘೋಷಿಸಿದ್ದೇ ಘೋಷಿಸಿದ್ದು. ಆದರೆ ಆಗಿರುವುದು ಸೊನ್ನೆ, ಅಥವಾ ತೀರ ಕಡಿಮೆ ಮಾತ್ರ. ಈ ಹೊತ್ತಿಗೆ ಉಳಿದವಲ್ಲಿ ೧೨ ರಿಂದ ೧೩ ಕೋಟಿ ಎಕರೆಗಷ್ಟು ಪ್ರದೇಶವನ್ನು ನೀರಾವರಿಗೆ ಒಳಪಡಿಸಬಹುದಿತ್ತು. ನದಿ, ಅಂತರ್ಜಲ, ಏತಗಳು, ಮುಂತಾದ ಜಲಸಂಪನ್ಮೂಲ ಗಳನ್ನೆಲ್ಲ ಪೂರ್ಣಪ್ರಮಾಣದಲ್ಲಿ ಬಳಸಿಕೊಳ್ಳಬಹುದಾಗಿತ್ತು. ಒಂದು ಲಕ್ಷ ಎಕರೆ ಭೂಮಿಯನ್ನು ನೀರಾವರಿಯಡಿಯಲ್ಲಿ ತಂದರೆ ದೇಶದ ರೈತರಿಗೆ ೪೦ ಕೋಟಿ ರೂಪಾಯಿಗಳ ಹೆಚ್ಚಿನ ವರಮಾನ ದೊರಕುತ್ತದೆ. ದೇಶದ ವರಮಾನ ಎಷ್ಟು ಏರುತ್ತಿತ್ತು ಎಂಬುದನ್ನು ಊಹಿಸಿಕೊಳ್ಳಿ. ಕೈಗಾರಿಕೆ ಎಂದು ಅದಕ್ಕೇ ಪ್ರಾಶಸ್ತ್ಯ ನೀಡುವಂತಹ ತಪ್ಪು ದಾರಿ ತುಳಿದಿರದಿದ್ದರೆ, ಈ ಕಡೆಗೆ ಗಮನ ಹರಿಸಬಹುದಾಗಿತ್ತು. ಮತ್ತೊಂದು ವಿಷಯವೂ ಇದರಲ್ಲಿ ಅಡಗಿದೆ; ಹೆಚ್ಚಿನ ಭೂಪ್ರದೇಶವನ್ನು ನೀರಾವರಿಗೊಳಪಡಿಸಿದ್ದಿದ್ದರೆ, ಸುಮಾರು ೨೦೦% ರಷ್ಟು ಉದ್ಯೋಗಾವಕಾಶಗಳು ಹೆಚ್ಚುತ್ತಿದ್ದುವು. ಒಂದು ಎಕರೆ ಭೂಮಿಯನ್ನು ನೀರಾವರಿಗೆ ಒಳಪಡಿಸಲು ತಗಲುವ ವೆಚ್ಚ ಹತ್ತರಿಂದ ಹದಿನೈದು ಸಾವಿರ ರೂಪಾಯಿಗಳು. ಈ ೧೧ ರಿಂದ ೧೨ ಕೋಟಿ ಎಕರೆಗಳಷ್ಟು ಭೂಮಿಯನ್ನು ಹೊಸದಾಗಿ ನೀರಾವರಿಯಡಿಗೆ ತರಲು ಬೇಕಾದ ಹಣವನ್ನು ಮೀಸಲಿರಿಸಿದರೆ, ಮುಂದಿನ ಹತ್ತು ವರ್ಷಗಳಲ್ಲಿ ಇದನ್ನು ಸಾಧಿಸಬಹುದು. ಈಗ ನಡೆಯುತ್ತಿರುವ ದೊಡ್ಡ, ಮಧ್ಯಮ ಗಾತ್ರದ ಮತ್ತು ಸಣ್ಣ ನೀರಾವರಿ ಯೋಜನೆಗಳು ಕಳೆದ ೨೫-೩೦ ವರ್ಷಗಳಿಂದ ಕುಂಟಿಕೊಂಡು ಸಾಗಿವೆ. ೧೦ ರಿಂದ ೧೫ ಲಕ್ಷ ಎಕರೆಗಳಷ್ಟನ್ನು ನೀರಾವರಿಯಾಗಿಸಬಹುದಾದ ರಾಜಾಸ್ತಾನ ಕಾಲುವೆಯನ್ನು ಮೂವತ್ತು ವರ್ಷಗಳ ಹಿಂದೆಯೇ ಮುಗಿಸುವ ಯೋಜನೆಯಿತ್ತು. ಆದರೆ ಅದರ ನಿರ್ಮಾಣಕಾರ್ಯ ಇನ್ನೂ ಸಾಗುತ್ತಿದೆ, ಹೊಸದಾಗಿ ನೀರಾವರಿಯಡಿ ಬಂದ ಪ್ರದೇಶ ನಗಣ್ಯವಾದಷ್ಟು ಮಾತ್ರ. ಹಾಗೆಯೇ, ಕರ್ನಾಟಕದ ಮುಖ್ಯಮಂತ್ರಿಯಾಗಿದ್ದಾಗ ನಾನು ಆರು ದೊಡ್ಡ ಯೋಜನೆ

ಗಳು ಮತ್ತು ಅನೇಕ ಸಣ್ಣ ಯೋಜನೆಗಳಿಗೆ ಚಾಲನೆಯಿತ್ತಿದ್ದೆ. ಆದರೆ ಆ ಬಳಿಕ ೨೫ ವರ್ಷಗಳೇ ಕಳೆದುಹೋಗಿದ್ದರೂ, ಇವೆಲ್ಲವೂ ಇನ್ನೂ ಪೂರ್ಣಗೊಳ್ಳಬೇಕಿದೆ. ಪ್ರಾಯಶಃ ಬಹುತೇಕ ರಾಜ್ಯಗಳಲ್ಲಿಯೂ ಇಂತಹ ಉದಾಹರಣೆಗಳೇ ತುಂಬಿರಬೇಕು. ಇದರಿಂದಾಗಿರಬಹುದಾದ ನಷ್ಟ ಎಷ್ಟೆಂಬುದನ್ನು ನಾವು ಲೆಕ್ಕಹಾಕಬಹುದು. ಹತ್ತು ಹದಿನೈದು ವರ್ಷದೊಳಗಾಗಿ ಅವೆಲ್ಲವನ್ನೂ ಪೂರ್ಣಗೊಳಿಸಬಹುದಾಗಿತ್ತು. ಇವುಗಳನ್ನು ಮಾಡಲು ರಾಜ್ಯ ಸರ್ಕಾರಗಳೇ ಸಂಪನ್ಮೂಲಗಳನ್ನು ಹುಡುಕಿಕೊಳ್ಳಬೇಕು, ಇವೆಲ್ಲ ಅವುಗಳ ಜವಾಬ್ದಾರಿ ಎಂದು ಕೇಂದ್ರ ಸರ್ಕಾರ ಯೋಚಿಸುವಂತಿದೆ. ಇದು ಶುದ್ಧಾಂಗ ತಪ್ಪು. ದೇಶದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವ ಹಾಗೂ ಹಳ್ಳಿಗಳಲ್ಲಿನ ಸುಮಾರು ೬೦ ಕೋಟಿ ಜನಗಳ ಆರ್ಥಿಕ ಮಟ್ಟವನ್ನು ಸುಧಾರಿಸುವ ಬಗೆಯನ್ನು ಗಂಭೀರವಾಗಿ ಆಲೋಚಿಸಿದರೆ, ನೀರಾವರಿ ದೇಶದ ಮೊದಲ ಮತ್ತು ಅತ್ಯಂತ ಪ್ರಮುಖ ಕರ್ತವ್ಯವಾಗಿದೆ. ನನ್ನ ಸಲಹೆಗೆ ಸೂಕ್ತ ಪ್ರತಿಕ್ರಿಯೆ ದೊರೆತೀತೆಂಬುದು ನನ್ನ ಬಯಕೆ. ಒಂದು ಎಕರೆಗೆ ೧೫,೦೦೦ ರೂಪಾಯಿಗಳಂತೆ ನೀರಾವರಿಗೆಂದು ವೆಚ್ಚ ಮಾಡಿದರೆ, ವರ್ಷಕ್ಕೆ ४೦೦೦ ರೂಪಾಯಿಗಳ ಹೆಚ್ಚಿನ ಆದಾಯ ದೊರಕುತ್ತದೆ ಎಂಬುದನ್ನೂ ನಾನು ಹೇಳಬೇಕು. ಕೃಷಿ ಉತ್ಪಾದನೆ ಎಂದರೆ ವರ್ಷಕ್ಕೆ ಸುಮಾರು ೨೫% ಆದಾಯ ಎಂದರ್ಥ. ಸಾರ್ವಜನಿಕ ವಲಯದಲ್ಲಾಗಲೀ ಖಾಸಗೀ ವಲಯದಲ್ಲಾಗಲೀ ಹಾಕಿದ ಬಂಡವಾಳಕ್ಕೆ ಇಷ್ಟರ ಮಟ್ಟಿಗೆ ಆದಾಯ ತರುವ ಯಾವುದಾದರೂ ಕೈಗಾರಿಕೆಯಿದೆಯೇ ಎಂಬುದನ್ನು ನಾನು ತಿಳಿಯಬಯಸುತ್ತೇನೆ. ಈಗಲೂ, ಇನ್ನು ಹತ್ತು ವರ್ಷಗಳಲ್ಲಿ ಉಳಿದ ೧೨ ಕೋಟಿ ಎಕರೆಗಳನ್ನು ನೀರಾವರಿಗೆ ಅಳವಡಿಸಬಹುದು. ಆಗುತ್ತದೆಯೇ?

ನೀರಾವರಿಯ ನಂತರ, ಹಳ್ಳಿಗಳಲ್ಲಿ ಜನರು ಜೀವನ ನಡೆಸುವ ರೀತಿಯ ಬಗ್ಗೆ. ಹಳ್ಳಿಗಳೆಲ್ಲ ಜೈವಿಕವಾಗಿ ಅನಾರೋಗ್ಯಕರವಾದವು. ಸಣ್ಣದಾಗಲೀ ದೊಡ್ಡದಾಗಲೀ, ಪ್ರತಿ ಹಳ್ಳಿಯೂ, ಸಣ್ಣ ಪಟ್ಟಣ ಕೂಡ, ಸಂಜೆಯ ಹೊತ್ತು ನಮ್ಮಲ್ಲಿ ಜಿಗುಪ್ಸೆ ತರುವಂತಹುದು, ಅಸಹ್ಯವನ್ನು ಕೂಡ. ಬೆಳಗಿನ ಹೊತ್ತು ಎಲ್ಲ ವಯಸ್ಸಿನ ಗಂಡಸರು, ಹೆಂಗಸರು ಮತ್ತು ಮಕ್ಕಳು ಜಾಗವನ್ನೆಲ್ಲ ಹೊಲಸು ಮಾಡುವ ರೀತಿ ಮತ್ತಷ್ಟು ಬೇಸರವುಂಟು ಮಾಡುವಂತಹುದು. ಲಕ್ಷಾಂತರ ಟನ್ ತೂಕದ ಅಮೇಧ್ಯವು ಈ ರೀತಿ ಪೋಲಾಗುತ್ತಿದೆ.

ಇದರೊಡನೆ, ಭಾರತದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯ ಪ್ರಾಣಿಗಳು, ಎತ್ತುಗಳು, ಹಸುಗಳು, ಎಮ್ಮೆಗಳು, ಒಂಟೆಗಳು ಇವೆ ಎಂಬುದರ ಬಗ್ಗೆ ಹೆಮ್ಮೆ ತಾಳಬೇಕು. ಅವುಗಳ ಸಂಖ್ಯೆ ೨೫–೩೦ ಕೋಟಿಗಳಷ್ಟಿರಬಹುದು. ಅವುಗಳ ಸಗಣಿಯನ್ನು ಬಹುತೇಕ ವ್ಯರ್ಥಗೊಳಿಸಲಾಗುತ್ತಿದೆ. ಜಗತ್ತಿನ ಜಾನುವಾರುಗಳಲ್ಲಿ ಅರ್ಧದಷ್ಟು ಪಾಲು ಭಾರತದಲ್ಲಿಯೇ ಇದೆ ಎಂಬುದು ಒಂದು ಅಂದಾಜು.

ಈ ಎರಡೂ ಬೆಲೆಬಾಳುವ ಕಸಗಳನ್ನು ಜೈವಿಕ ಅನಿಲದ ಉತ್ಪಾದನೆಗೆ ಬಳಸಿಕೊಂಡರೆ, ನಮ್ಮ ಹಳ್ಳಿಗಳಲ್ಲಿ ಈಗ ಬಳಸುತ್ತಿರುವ ಸಾಕಷ್ಟು ಪ್ರಮಾಣದ ಸೀಮೆಎಣ್ಣೆಗೆ ಬದಲು ಅನಿಲ ಉತ್ಪಾನೆಯಾಗುತ್ತದೆ. ಜೈವಿಕ ಅನಿಲ ಅಥವಾ ಗೊಬ್ಬರ ಅನಿಲ ಸ್ಥಾವರಗಳ ಬಗ್ಗೆ ಆಲೋಚನೆ ಮೂಡಿ ನಮ್ಮ ಸಂಶೋಧಕರು ಅಥವಾ ವಿಜ್ಞಾನಿಗಳು ಆವಿಷ್ಕಾರಗೊಳಿಸಿದ್ದು ಸುಮಾರು ಮೂವತ್ತು ವರ್ಷಗಳ ಹಿಂದೆ. ಚೀನಾ ಕೂಡ ಜೈವಿಕ ಅನಿಲ ಸ್ಥಾವರಗಳ ಸ್ಥಾಪನೆಯನ್ನು ಕೈಗೊಂಡು, ಈ ಅವಧಿಯಲ್ಲಿ ಅದು ಸುಮಾರು ಐದು ದಶಲಕ್ಷ ಘಟಕಗಳನ್ನು ಸ್ಥಾಪಿಸಿದೆಯೆಂದು, ನನಗೆ ಎರಡು ವರ್ಷಗಳ ಹಿಂದೆ ಸಿಕ್ಕ ಮಾಹಿತಿ. ಮತ್ತೊಂದೆಡೆ, ಅತ್ಯಂತ ಹೆಚ್ಚಿನ ಸಂಖ್ಯೆಯ ಪ್ರಾಣಿಗಳನ್ನು ಹೊಂದಿರುವ ಹಾಗೂ ಸುಮಾರು ೬೦ ಕೋಟಿ ಜನ ವಾಸಿಸುವ ನಮ್ಮ ಹಳ್ಳಿಗಳಲ್ಲಿ ಇರುವುದು ಸುಮಾರು ಐದು ಲಕ್ಷ ಘಟಕಗಳನ್ನಷ್ಟೇ ಎಂದು ಕೇಳಿದ್ದೇನೆ. ಎಂತಹ ವ್ಯತ್ಯಾಸ? ಈ ಜೈವಿಕ ಅನಿಲವು ಇನ್ನೂ ನಾವು ಬಳಸಿಕೊಳ್ಳದೇ ಇರುವ ಶಾಶ್ವತವಾದ ವಾಣಿಜ್ಯೇತರ ಇಂಧನ ಮೂಲ. ಇಂತಹ ಅಪಾರ ಪ್ರಮಾಣದ ಇಂಧನಮೂಲವನ್ನು ಬಳಸಿಕೊಳ್ಳದೆ ನಾವು ಪಾತಕವನ್ನೇ ಮಾಡಿದ್ದೇವೆ. ಅನಿಲದೊಡನೆ ಸಂಬಂಧವಿರುವ ಮತ್ತೂ ಅನೇಕ ವಿಷಯಗಳಿವೆ. ಹಳ್ಳಿಗಳಲ್ಲಿ ಬೆಳಿಗ್ಗೆ ಸಂಜೆಗಳ ಹೊತ್ತು ಜನರು ಶೌಚಾಲಯಗಳಿಲ್ಲದ ಕಾರಣದಿಂದಾಗಿ ಬಹಿರ್ದೆಶೆಗೆ ಹೋಗುವ ಹಾಗೂ ಗಂಡಸರು ಹೆಂಗಸರು ಬತ್ತಲಾಗುವ ಅನಾಗರಿಕವೂ ಅನಾರೋಗ್ಯಕರವೂ ಆದ ಪದ್ಧತಿಯನ್ನು ಇದು ತೊಡೆದು ಹಾಕುತ್ತದೆ. ಇದು ಅತ್ಯಂತ ಅಸಂಸ್ಕೃತ ಅಭ್ಯಾಸ. ಮಲ, ಗೊಬ್ಬರ ಮತ್ತಿತರ ಗೃಹಕಸಗಳನ್ನು ಈ ಸ್ಥಾವರಗಳಿಗೆ ಕಚ್ಚಾ ವಸ್ತುಗಳನ್ನಾಗಿ ಬಳಸಿಕೊಂಡರೆ, ಸುಮಾರು ಏಳೆಂಟು ಟನ್ ಮೊದಲ ದರ್ಜೆಯ ಗೊಬ್ಬರವನ್ನೂ ಉತ್ಪಾದಿಸಬಹುದು. ಏಕೆಂದರೆ ಯಾವುದೇ ಮಲದಲ್ಲಿ ಸಾಮಾನ್ಯ ಹೊಲದ ಗೊಬ್ಬರದಲ್ಲಿಗಿಂತ ಸುಮಾರು ಮೂರು ಪಟ್ಟು ಹೆಚ್ಚು ನೈಟ್ರೋಜನ್ ಇರುತ್ತದೆ. ಜೊತೆಗೆ, ಬೀಜಗಳನ್ನು ಇದು ಅರಗಿಸಿಕೊಂಡು ಬೆಳೆಗಳನ್ನು ಕುಂಠಿತಗೊಳಿಸುವ ಕಳೆಗಳೂ ಉಳಿದಿರುವುದಿಲ್ಲ. ಇವೆಲ್ಲ ಪ್ರಯೋಜನಗಳಲ್ಲದೆ, ಜೈವಿಕ ಅನಿಲವನ್ನು ಬೆಳಕು ಹಾಗೂ ಅಡುಗೆಗಳಿಗೂ ಉಪಯೋಗಿಸಬಹುದು. ಉರುವಲಿಗಾಗಿ ಕಾಡು ಕಡಿಯುವುದನ್ನು ಈ ಮೂಲಕ ತಡೆಗಟ್ಟಬಹುದು.

ಬೆಲೆಬಾಳುವ ಇಂಧನ ಮತ್ತು ಗೊಬ್ಬರಗಳನ್ನು ಉತ್ಪಾದಿಸುವ ಈ ಕಾರ್ಯಕ್ರಮಕ್ಕಾಗಿ ಬೇಕಾಗುವ ಹಣವು, ನನ್ನ ಅಂದಾಜಿನಂತೆ, ಸುಮಾರು ೬೦೦೦ ಕೋಟಿ. ಹಳ್ಳಿಯ ಜನರಿಗೆ ಉಪಯುಕ್ತವಾಗಬೇಕೆಂಬ ಶ್ರದ್ಧೆ ಮತ್ತು ಬಯಕೆಗಳಿದ್ದರೆ ಇಡೀ ಈ ಕಾರ್ಯಕ್ರಮವನ್ನು ಕೈಗೊಳ್ಳಬಹುದು. ವರ್ಷಕ್ಕೆ ೬೦೦ ಕೋಟಿಯಂತೆ ಸುಮಾರು ಹತ್ತು ವರ್ಷಗಳ ಕಾಲ ಇದನ್ನು ಮುಂದುವರಿಸಬಹುದು. ಈ ಉಪಯುಕ್ತ ಕಾರ್ಯ

ಕ್ರಮದ ಅನೇಕ ಅನುಕೂಲಗಳನ್ನು ಮನಗಂಡು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಖರ್ಚನ್ನು ಹಂಚಿಕೊಳ್ಳಬೇಕು. ಈ ಜೈವಿಕ ಅನಿಲವನ್ನು ವಿದ್ಯುತ್ ಉತ್ಪಾದನೆಗೂ ಉಪಯುಕ್ತವಾದ ರೀತಿಯಲ್ಲಿ ಬಳಸಿಕೊಳ್ಳಬಹುದು. ಈ ದಿಸೆಯಲ್ಲಿ ಏನಾದರೂ ಸಂಶೋಧನೆಗಳಾಗಿವೆಯೇ? ನಾನು ತಿಳಿಯಬಯಸುತ್ತೇನೆ. ಹಳ್ಳಿಗಳ ಬಗೆಗಿನ ನಿರ್ಲಕ್ಷ್ಯವನ್ನು ಕಂಡರೆ ಅಂಥದ್ದೇನೂ ನಡೆದಿಲ್ಲವೆಂದೇ ಅನ್ನಿಸುತ್ತದೆ. ಈ ಕುರಿತ ಸಂಶೋಧೆಗಳನ್ನೇಕೆ ಕೈಗೊಳ್ಳಬಾರದು?

ಅತ್ಯುತ್ತಮ ಬೇಸಾಯ ಕ್ರಮಗಳನ್ನನುಸರಿಸಿದರೂ, ನೀರಾವರಿಯೊಂದೇ ನಿರುದ್ಯೋಗ ಸಮಸ್ಯೆಯನ್ನು ನೀಗಲಾರದು. ಭಾರತದಲ್ಲಿ ದಿನವೊಂದಕ್ಕೆ ವ್ಯರ್ಥವಾಗುತ್ತಿರುವ ಶ್ರಮವು ೨೦೦೦ ದಶಲಕ್ಷ ಮಾನವ ಗಂಟೆಗಳೆಂದು ಶ್ರೀ ಪಾಲ್ಖೀವಾಲ ಅಂದಾಜು ಮಾಡಿದಂತೆ ನೆನಪು. ಅಂದರೆ ದಿನಕ್ಕೆ ಎಂಟು ಗಂಟೆಯಂತೆ ೧೨೫ ದಶಲಕ್ಷ ಅಥವಾ ೧೨.೫ ಕೋಟಿ ಜನರು ಉದ್ಯೋಗವಿಲ್ಲದೆ ಇದ್ದಾರೆ ಎಂದಾಯಿತು. ನಿರುದ್ಯೋಗದಿಂದಾಗಿ ಹಳ್ಳಿಗಳಲ್ಲಿ, ನಗರಗಳಲ್ಲಿ ಕೂಡ, ಆಗುತ್ತಿರುವ ಶ್ರಮದ ಈ ಅಪಾರ ವ್ಯರ್ಥವನ್ನು ಉಪಯುಕ್ತ ರೀತಿಯಲ್ಲಿ ಬಳಕೆಮಾಡಿಕೊಳ್ಳಬಹುದು. ಈ 'ಉಪಯುಕ್ತಾ ಕಾರ್ಯಕ್ರಮ'ದ ಮೇಲೆಯೇ ಗಾಂಧೀಜಿ ತುಂಬ ಒತ್ತನ್ನು ಹಾಕುತ್ತಿದ್ದುದು. ಅದೇ ಗೃಹ ಕೈಗಾರಿಕೆ. ಜನಸಾಮಾನ್ಯರಲ್ಲಿನ ಬಡತನಕ್ಕೆ ಬಹುತೇಕ ಕಾರಣ ಈ ನಿರುದ್ಯೋಗವೇ ಎಂಬುದು ಎಲ್ಲರಿಗೂ ವಿದಿತವಾಗಿರುವ ವಿಚಾರ. ನಿರುದ್ಯೋಗಿಗಳು ಬಹುಪಾಲು ಉಪವಾಸವಿರಬೇಕು, ಅರೆ ಬಟ್ಟೆ ಹಾಕಿಕೊಳ್ಳಬೇಕು, ಅವರು ತಮ್ಮ ಮಕ್ಕಳಿಗೆ ಓದು ಕಲಿಸಲಾರರು. ಈಗ ತಾನೇ ಹೇಳಿದಂತೆ ಇದರ ನಿವಾರಣೆಗೆ ತಕ್ಕ ಉಪಾಯ ಗೃಹ ಕೈಗಾರಿಕೆಗಳು. ಬೇಸಾಯವನ್ನು ಬಿಟ್ಟರೆ, ಮಾನವನನ ಎರಡು ಮೂಲಭೂತ ಬೇಕುಗಳಲ್ಲಿ ಒಂದನ್ನು ಪೂರೈಸುವ ಅತ್ಯಂತ ದೊಡ್ಡ ಕೈಗಾರಿಕೆಯೆಂದರೆ ಬಟ್ಟೆಯ ತಯಾರಿಕೆ. ಇತ್ತೀಚೆಗೆ ಜವಳಿಯ ಬಗೆಗೆ ತೆಗೆದುಕೊಂಡ ನಿರ್ಣಯದಲ್ಲಿ ಕೈಮಗ್ಗ ಮತ್ತು ಖಾದಿಯ ಬಗ್ಗೆ ಒಂದೇ ಒಂದು ಮಾತನ್ನೂ ಆಡದಿರುವುದು ದುರದೃಷ್ಟಕರ, ಮತ್ತು ಸರ್ಕಾರ ಈ ದಿಸೆಯಲ್ಲಿ ಮಾಡುವ ಆಲೋಚನೆಯ ರೀತಿಯನ್ನು ಸೂಚಿಸುವಂಥದು. ಗಾಂಧೀಜಿ ಹೇಳಿದ್ದರು: "ನೂಲು ತೆಗೆಯುವುದು ಗೃಹ ಕೈಗಾರಿಕೆಗಳ ರಾಣಿ" ಎಂದು. ಪ್ರತಿ ವರ್ಷ ಗಾಂಧಿ ಜಯಂತಿಯಾದ ಅಕ್ಟೋಬರ್ ಎರಡರಂದು ಪ್ರಮುಖ ಕಾಂಗ್ರೆಸ್ ನಾಯಕರು ಮಾಡುತ್ತಿದ್ದುದೆಂದರೆ ತಮ್ಮ ಮುಂದೆ ಚರಕವನ್ನಿರಿಸಿಕೊಂಡು ನೂಲು ತೆಗೆಯುವುದು. ಹಾಗೆ ಮಾಡುತ್ತಿದ್ದುದು ಮಹಾತ್ಮರನ್ನು ತೃಪ್ತಿಗೊಳಿಸಲು. ಅಧಿಕಾರಕ್ಕೆ ಬಂದ ಬಳಿಕ ಅವರ ಮನೋಭಾವವು ಖಾದಿಯ ಬಗ್ಗೆ ಆಲೋಚಿಸುವುದನ್ನೇ

ನಿಲ್ಲಿಸಿದೆ. ಇದರ ಅರ್ಥವೆಂದರೆ, ಗೃಹಕೈಗಾರಿಕೆಗಳ ಮೂಲಕ ಮನುಷ್ಯನ ಮೂಲಭೂತ ಆವಶ್ಯಕತೆಗಳನ್ನು ಪೂರೈಸುವ ತತ್ವದಲ್ಲಿ ಇವರಿಗೆ ನಂಬಿಕೆಯೇ ಇರಲಿಲ್ಲ ಎಂಬುದು.

ನಾನಿಲ್ಲಿ ಗಾಂಧೀಜಿಯವರ ಸೃಜನಾತ್ಮಕ ಕಾರ್ಯಕ್ರಮದ ಬಗ್ಗೆ ವಿಶೇಷ ಗಮನೀಯುತ್ತಿದ್ದೇನೆ; ಹಲವರ ಪ್ರಕಾರ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿನ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಇರುವ ಒಂದೇ ರಾಮಬಾಣವೆಂದರೆ ಇದೇ ಆಗಿದೆ. ಸುಮಾರು ೮೦ ಕೋಟಿ ಜನಸಂಖ್ಯೆಯನ್ನು ಹೊಂದಿರುವ ಭಾರತದ ಸುಮಾರು ೮೦%, ಅಂದರೆ ಸುಮಾರು ೬೦ ಕೋಟಿ ಜನರು ಹಳ್ಳಿಗಳಲ್ಲಿದ್ದಾರೆ. ಕೈಗಾರಿಕೆಗಳು ಎಲ್ಲರೂ ಬಲ್ಲಂತೆ ಬಂಡವಾಳಾಧಾರಿತವಾದವು, ತಂತ್ರಜ್ಞಾನ ಆಧುನಿಕಗೊಳ್ಳುತ್ತ ಹೋದಂತೆ ಅದರ ಕಾರ್ಮಿಕಾಧಾರವು ಕಡಿಮೆಯಾಗುತ್ತ ಹೋಗುತ್ತದೆ. ಯೋಚನೆಯಿಲ್ಲದ ಸರ್ಕಾರ ಹಾಗೂ ಶ್ರೀಮಂತ ಬಂಡವಾಳದಾರರು ಒಟ್ಟಾಗಿ ಇಂತಹ ಹೆಚ್ಚು ಹೆಚ್ಚು ಕೈಗಾರಿಕೆಗಳ ಸ್ಥಾಪನೆಗೆ ಮುಂದಾಗಿದ್ದಾರೆ. ಬ್ರಿಟಿಷ್ ಸಾಮ್ರಾಜ್ಯಶಾಹಿ ಸರ್ಕಾರದ ನೀತಿಯು ವಸ್ತುತಃ ಸ್ಥಳೀಯ ಗ್ರಾಮಕೈಗಾರಿಕೆಗಳನ್ನು ನಾಶಮಾಡುತ್ತಿದೆ. ಅದರಲ್ಲಿಯೂ ಬಟ್ಟೆ ತಯಾರಿಕೆಯನ್ನು ಸ್ವಾತಂತ್ರ್ಯಾನಂತರ ಇದರಡಿ ಹೆಚ್ಚು ತೀವ್ರವಾಗಿ ತರಲಾಗಿದೆ. ಗೃಹ ಕೈಗಾರಿಕೆಯಾದ ಖಾದಿ, ಅಂದರೆ ಕೈಯಲ್ಲಿ ನೂತು ಕೈಯಿಂದಲೇ ನೇಯ್ದಿರುವ ಬಟ್ಟೆಯ ತಯಾರಿಕೆ, ಎಣ್ಣೆಗಾಣ, ಮರಗೆಲಸ, ಕುಂಬಾರಿಕೆ, ಕಮ್ಮಾರಿಕೆ, ಚರ್ಮ ಹದಮಾಡುವುದು, ಚಮ್ಮಾರಿಕೆ ಮುಂತಾದವನ್ನು ಕೊಲ್ಲಲಾಗಿದೆ ಅಥವಾ ವಸ್ತುತಃ ಅವು ಸಾಯುತ್ತಿವೆ. ಅವುಗಳ ಜಾಗದಲ್ಲಿ ಕೆಲವೇ ಕೇಂದ್ರೀಕೃತ ಬಂಡವಾಳಾಧಾರಿತ ಕೈಗಾರಿಕೆಗಳು ತಲೆಯೆತ್ತಿವೆ. ಇಂಥ ಕೇಂದ್ರೀಕೃತ ಕೈಗಾರಿಕೆಗಳು ಹೇಗೆ ಲಕ್ಷಾಂತರ ಜನಗಳ ಉದ್ಯೋಗಾವಕಾಶಗಳನ್ನು ಹಾಳುಮಾಡುತ್ತವೆ ಎಂಬುದನ್ನು ತೋರಿಸಲು ಒಂದೆರಡು ಉದಾಹರಣೆಗಳನ್ನು ನೀಡುತ್ತೇನೆ. ತಯಾರಾಗುವ ಬಟ್ಟೆಯ ೧೦೦% ಭಾಗದಲ್ಲಿ ೯೯% ಗಿರಣಿಗಳಲ್ಲಿ ತಯಾರಾದದ್ದು, ಉಳಿದ ೧% ಖಾದಿ. ೯೯% ಬಟ್ಟೆಯನ್ನು ತಯಾರಿಸುವ ಕೈಗಾರಿಕೆಗಳು ೧೩ ಲಕ್ಷ ಕಾರ್ಮಿಕಬಲವನ್ನು ಹೊಂದಿದೆ; ಪ್ರತಿ ಕಾರ್ಮಿಕನಿಗೂ ತಿಂಗಳಿಗೆ ರೂ. ೧೫೦೦/-ರಂತೆ ಲೆಕ್ಕ ಹಾಕಿದರೆ, ೧% ಬಟ್ಟೆ ತಯಾರಿಸುವ ಖಾದಿಯೂ ೧೩ ಲಕ್ಷ ಜೋಡಿ ಕೈಗಳಿಗೆ ಕೆಲಸ ನೀಡುತ್ತದೆ, ಪ್ರತಿ ಕೆಲಸಗಾರನಿಗೆ ತಿಂಗಳಿಗೆ ೩೦೦–೪೦೦ ರೂಪಾಯಿಗಳ ವರಮಾನ ತರುತ್ತಿದೆ. ನೂಲುವ ಗಿರಣಿಯು ಸರಾಸರಿ ೧೦ ಕೋಟಿ ಬೆಲೆಬಾಳುವಂಥದು, ಅದರಲ್ಲಿ ೮೦೦–೧೦೦೦ ಮಂದಿ ಕೆಲಸಗಾರರಿರುತ್ತಾರೆ. ಆದರೆ ಚರಕದಲ್ಲಿ ನೂಲುವವರು ಇತ್ತೀಚಿನ ಅಂಬರ ಚರಕಾಕ್ಕೆ ೧೦೦೦ ರೂಪಾಯಿಗಳ ಬಂಡವಾಳ ಹಾಕುತ್ತಾರೆ. ಅಂದರೆ ಒಂದು ಲಕ್ಷ ಮಂದಿ, ವಿಶೇಷವಾಗಿ ಮಹಿಳೆಯರು, ಅಷ್ಟು ಹಣ ಹೂಡಿ ಉದ್ಯೋಗ ಸಂಪಾದಿಸಬಲ್ಲರು. ನಿಮಗೆ ಯಾವುದು ಬೇಕು? ಅದಕ್ಕೆ ಗಾಂಧೀಜಿ ಉತ್ತರ

ವಿತ್ತಿದ್ದಾರೆ. ನಾನು ಮತ್ತೊಂದು ಉದಾಹರಣೆ ಕೊಡುತ್ತೇನೆ. ಅಡುಗೆಗೆ ಅತ್ಯವಶ್ಯಕವಾದ ಖಾದ್ಯತೈಲ ತಯಾರಿಕೆಗೆ ಬೇಕಾದ ಆಧುನಿಕ ಯಂತ್ರಗಾಣಕ್ಕೆ ಎಂಟರಿಂದ ಹತ್ತು ಕೋಟಿ ರೂಪಾಯಿಗಳು ಬೇಕು. ಆದರೆ ಎಣ್ಣೆಗಾಣವೊಂದನ್ನು ಹೊಂದಿರುವ ವ್ಯಕ್ತಿಗೆ ಅಬ್ಬಬ್ಬ ಅಂದರೆ ೨೦,೦೦೦ ರೂಪಾಯಿಗಳು ಸಾಕು. ಅಂದರೆ ಒಂದು ಯಂತ್ರಗಾಣದ ಸ್ಥಾನದಲ್ಲಿ ೫೦೦೦ ಗಾಣಗಳ ಒಡೆಯರಿರಬಹುದು ಎಂದಂತಾಯಿತು. ಮತ್ತೆ ಪ್ರಶ್ನೆ, ನಿಮಗೆ ಯಾವುದು ಬೇಕು? ಮತ್ತೂ ಒಂದು ನಿದರ್ಶನ: ಚರ್ಮ ಕೈಗಾರಿಕೆಯದು. ಕಚ್ಚಾ ವಸ್ತುವಾದ ಚರ್ಮವು ಕೈಗಾರಿಕೆಗೆ ದೂರದ ಹಳ್ಳಿಪ್ರದೇಶಗಳಿಂದ ಬರಬೇಕು. ಒಟ್ಟಾರೆ ಹತ್ತೋ ಹನ್ನೆರಡೋ ಅಂಥ ದೊಡ್ಡ ಕೈಗಾರಿಕೆಗಳಿರಬಹುದು. ಅವಕ್ಕೇ ಈ ಎಲ್ಲ ಚರ್ಮವೂ ಬೇಕು, ಜೊತೆಗೆ ಉಳಿದುದನ್ನು ಆಮದು ಮಾಡಿಕೊಳ್ಳುತ್ತವೆ. ಭಾರತವು ಅತ್ಯಂತ ಹೆಚ್ಚಿನ ಕಚ್ಚಾ ತೊಗಲನ್ನು ತಯಾರು ಮಾಡುವ ದೇಶವಾಗಿದೆ. ಮೂಲೆಯ ಹಳ್ಳಿಯಿಂದ ೫೦೦ ರಿಂದ ೧೦೦೦ ಕಿಲೋಮೀಟರ್ ದೂರದ ಚರ್ಮ ಕೈಗಾರಿಕೆಯ ಜಾಗಕ್ಕೆ ಟ್ರಕ್‌ಗಳ ಮೂಲಕ ಕಚ್ಚಾ ತೊಗಲನ್ನು ಸಾಗಣೆ ಮಾಡಿ ಉದ್ದಕ್ಕೂ ವಾತಾವರಣವನ್ನು ಹಾಳುಮಾಡುವಂತಾಗಿದೆ.

ಇದರಿಂದಾಗಿ, ಈ ದೊಡ್ಡ ವಿಕೇಂದ್ರೀಕೃತ ತೊಗಲು ಸಾಮಾನು ತಯಾರಿಕೆಯನ್ನೇ ಸಂಪೂರ್ಣವಾಗಿ ಅವಲಂಬಿಸಿದ್ದ ಲಕ್ಷಾಂತರ ಹರಿಜನರು ನಿರುದ್ಯೋಗ ಮತ್ತು ಬಡತನ ಗಳಿಗೆ ಪಕ್ಕಾಗಿದ್ದಾರೆ. ನಿಮಗೆ ಯಾವುದು ಲೇಸು ಅನ್ನಿಸುತ್ತದೆ? ಪ್ಲಾಸ್ಟಿಕ್ ಶೂಗಳ ತಯಾರಿಕೆಗೆಂದು ಸರ್ಕಾರವು ವಿದೇಶೀ ಬಂಡವಾಳ ಮತ್ತು ತಂತ್ರಜ್ಞಾನ ಹೊಂದಿದ ಆತ್ಯಾಧುನಿಕ ಕಾರ್ಖಾನೆಯೊಂದಕ್ಕೆ ಪರವಾನಗಿ ನೀಡಿದೆಯೆಂದು ಕೇಳಿದ್ದೇನೆ. ಇದಂತೂ ಅಸಹನೀಯ. ಇದರಿಂದಾಗಿ, ಹೊರದೇಶಗಳಿಂದ ಯಂತ್ರಗಳನ್ನು ಆಮದು ಮಾಡಿ ಕೊಂಡು ಹರಿಜನರನ್ನು ಪೂರ್ಣ ನಿರುದ್ಯೋಗಿಗಳನ್ನಾಗಿಸುವ ಸರ್ಕಾರದ ಧೋರಣೆಯು ಬಯಲಾದಂತಾಗಿದೆ. ಖಾಸಗಿಯಾಗಲೀ ಸಾರ್ವಜನಿಕ ಕ್ಷೇತ್ರದ್ದಾಗಲೀ ಕೇಂದ್ರೀಕೃತ ತಯಾರಿಕಾ ಘಟಕಗಳು ಕೋಟ್ಯಂತರ ಜನರನ್ನು ನಿರುದ್ಯೋಗಿಗಳನ್ನಾಗಿ ಮಾಡುವತ್ತ ದಾಪುಗಾಲು ಹಾಕುತ್ತವೆ ಎಂಬುದನ್ನು ತೋರಿಸಲು ಪ್ರಾಯಶಃ ಇಷ್ಟು ಸಾಕು.

ನಮ್ಮದು ಕಡಿಮೆ ಜನಸಂಖ್ಯೆಯಿರುವ ದೇಶವಲ್ಲ, ಇಲ್ಲಿ ಕೆಲಸಗಾರರಿಗೆ ಕೊರತೆ ಯಿಲ್ಲ. ಉದ್ಯೋಗಸಹಜ ವಯೋಮಾನದ ಸುಮಾರು ೩೦ ರಿಂದ ೩೫ ಕೋಟಿ ಜನರಿಗೆ ಕೆಲಸವಿತ್ತು ಹೊಟ್ಟೆ ತುಂಬಿಸುವ ಕರ್ತವ್ಯವನ್ನು ನಾವು ನಿರ್ವಹಿಸಬೇಕಾಗಿದೆ. ನಿತ್ಯೋಪಯೋಗಿ ವಸ್ತುಗಳನ್ನು, ಈಗಾಗಲೇ ನಾನು ಉಲ್ಲೇಖಿಸಿರುವ ಮೂರು ಕೈಗಾರಿಕೆ ಗಳೊಡನೆ, ಹಳ್ಳಿಗಳಲ್ಲಿಯೇ ತಯಾರಿಸಬಹುದು. ಕಮ್ಮಾರರು, ಬಡಗಿಗಳು, ಕುಂಬಾರರು,

ಸಾಬೂನು ತಯಾರಕರು, ಕಾಗದ ತಯಾರಕರು ಮತ್ತಿತರ ಅನೇಕ ನಿತ್ಯಾವಶ್ಯಕ ಕೈಕಸಬುದಾರರಿಗೆ ಹಳ್ಳಿಗರೇ ಉದ್ಯೋಗ ಒಗಿಸಬಲ್ಲರು. ಭಾರತಕ್ಕೆ ಬೇಕಾಗಿರುವುದು ಕಾರ್ಮಿಕಾಧಾರಿತ ತಯಾರಿಕಾ ಘಟಕಗಳು ಎಂದು ಅನೇಕ ಮಂದಿ ಅರ್ಥಶಾಸ್ತ್ರಜ್ಞರು ಹೇಳಿರುವುದರಲ್ಲಿ ಅಚ್ಚರಿಯೇನಿಲ್ಲ.

ನಿರುದ್ಯೋಗ ಮತ್ತು ಅದರ ಫಲಿತವಾದ ಬಡತನದ ಈ ಸಮಸ್ಯೆಗೇ ಸಂಬಂಧಿಸಿದಂತೆ, ಹಸಿರು ಕ್ರಾಂತಿಯ ಮೂಲಕ ದೇಶವು ೧೫೦ ದಶಲಕ್ಷ ಟನ್ ಆಹಾರಧಾನ್ಯಗಳನ್ನು ಬೆಳೆಯುತ್ತಿದೆ ಎಂದು ಸರ್ಕಾರವು ಸಾಧ್ಯವಾದ ಎಲ್ಲ ಪ್ರಚಾರ ಮಾಧ್ಯಮಗಳ ಮೂಲಕ ಜಾಹೀರಾತು ಮಾಡುತ್ತಿರುವ ವಿಚಾರ. ಈ ಉತ್ಪಾದನೆಯ ಕಾರಣದಿಂದಾಗಿ ಆವಶ್ಯಕತೆಗಿಂತ ೨೦ ರಿಂದ ೩೦ ದಶಲಕ್ಷ ಟನ್ ಧಾನ್ಯವು ಹೆಚ್ಚಿಗೆ ಇದೆಯಂತೆ. ಇದು ಸತ್ಯದ ವಿಕಾರರೂಪ. ವಾಸ್ತವ ಸ್ಥಿತಿಯೇನೆಂದರೆ, ನಿರುದ್ಯೋಗ ಮತ್ತು ಬಡತನದ ಕಾರಣದಿಂದಾಗಿ ಹಳ್ಳಿಗಳಲ್ಲಿನ ಬಡಜನರು ತಮಗೆ ಬೇಕಾದಷ್ಟು ಧಾನ್ಯ ಹಾಗೂ ಬಟ್ಟೆಗಳನ್ನು ಕೊಳ್ಳಲಾರರು. ಇದರಿಂದಾಗಿ ಹಳ್ಳಿಗಳಲ್ಲಿ ಉಳಿದ ಧಾನ್ಯವು ಹೆಚ್ಚಿನದೆಂದು ಮಾರುಕಟ್ಟೆಗೆ ಹೋಗುತ್ತದೆ. ಈ ಜನರಿಗೆ ಉದ್ಯೋಗವಿದ್ದಿದ್ದರೆ, ಈ ಆಹಾರವೂ ಸಾಕಾಗುತ್ತಿರಲಿಲ್ಲವೇನೋ.

ಒಬ್ಬ ಸಕ್ರಿಯ ವ್ಯಕ್ತಿಗೆ ಬೇಕಾದ ದೈಹಿಕಶಕ್ತಿ ದಿನವೊಂದಕ್ಕೆ ೩೧೦೦ ರಿಂದ ೩೨೦೦ ಕ್ಯಾಲೋರಿಗಳು. ಆದರೆ ಕೇವಲ ೨೦೦೦ ಕ್ಯಾಲೋರಿಗಳಷ್ಟನ್ನು ಮಾತ್ರ ಅವನು ಈಗ ಕೊಳ್ಳಬಲ್ಲ. ಹೆಚ್ಚಿನ ಆಹಾರಧಾನ್ಯ ಉತ್ಪಾದನೆಯಾಗಿದೆ ಎಂಬ ಮಾತಿನ ಅಂತರಾಳ ಇದೇ. ಈ ವಿಷಯ ಯೋಜನೆ ಮಾಡುವವರಿಗೂ ಸರ್ಕಾರಕ್ಕೂ ಗೊತ್ತಿದೆಯೇ? ಹಾಗೆಯೇ, ಹಳ್ಳಿಗಳ ಜನರು ತಮ್ಮ ಆರೋಗ್ಯ ಕಾಪಾಡಿಕೊಳ್ಳಲು ಬೇಕಾದಷ್ಟು ಬಟ್ಟೆಗಳನ್ನು ಕೊಳ್ಳಲಾರರು. ಇದರಿಂದಾಗಿ ಬಟ್ಟೆಯ ತಯಾರಿಕೆಯೂ ಉಳಿದು, ಅದನ್ನು ರಫ್ತು ಮಾಡುವುದು ಸಾಧ್ಯವಾಗಬಹುದು. ಇದರಿಂದಾಗಿ ನಮ್ಮ ಋಣಭಾರ ಒಂದಷ್ಟು ಕಡಿಮೆಯಾಗಬಹುದು! ನಮ್ಮ ಹಳ್ಳಿಗರ ಬದುಕಿನ ಈ ಸ್ಥಿತಿಯನ್ನು ನಾವು ಮುಂದುವರಿಸಬೇಕೇ?

ಈಗ ನಾನು ಕೃಷಿಭೂಮಿಯ ವಿಚಾರಕ್ಕೇ ಬರುತ್ತೇನೆ. ನಾವು ಅರಣ್ಯಗಳನ್ನು ಎಷ್ಟರಮಟ್ಟಿಗೆ ಕಡಿದು ಹಾಕಿದ್ದೇವೆಂದರೆ, ೩೩% ಅರಣ್ಯಪ್ರದೇಶದಲ್ಲಿ ಹೆಚ್ಚು ಅಂದರೆ ೨೦% ರಷ್ಟು ಮಾತ್ರ ಅಥವಾ ಅದಕ್ಕೂ ಕಡಿಮೆ ಉಳಿದಿದೆ. ನಾವು ಅವುಗಳನ್ನು ಬೆಳೆಸಬೇಕು. ಈ ಮಹತ್ವದ ಅಂಶವನ್ನು ಮರೆತರೆ ಅದು ನಮಗೇ ಮಾರಕ. ಭೂಸುಧಾರಣೆ ಮತ್ತು ಭೂಛಿದ್ರೀಕರಣ ನಿರ್ಬಂಧ ವಿಧಿಗಳು ಜಾರಿಯಲ್ಲಿದ್ದರೂ, ಭೂಮಿಯನ್ನು ಭಾಗ ಮಾಡಿಕೊಂಡು ಸರಾಸರಿ ಭೂಹಿಡುವಳಿಯು ಎರಡೂವರೆಯಿಂದ ಮೂರು

ಎಕರೆಗಳಷ್ಟಕ್ಕೇ ಸೀಮಿತವಾಗಿದೆ. ಶ್ರೀಮಂತ ಜಮೀನುದಾರರು ಮತ್ತು ಪ್ರಭಾವೀ ವ್ಯಕ್ತಿಗಳು ಈ ವಿಧಿಗಳನ್ನು ಕಡೆಗಣಿಸಿ ನೂರಾರು ಎಕರೆಗಳಿಗೆ ಒಡೆಯರಾಗಿರುವ ಕೆಲವು ಮಂದಿ ಇದ್ದಾರೆನ್ನುವುದು ನಿಜ. ಆದರೆ ಅಂಥವರ ಸಂಖ್ಯೆ ತೀರ ಕಡಿಮೆ. ಇಂಥ ಗಿಟ್ಟದ ಭೂಹಿಡುವಳಿಯಿಂದ ನಮಗೆ ಬೇಕಾದಷ್ಟು ಆಹಾರಧಾನ್ಯಗಳನ್ನು ನಾವು ಬೆಳೆಯಲಾರೆವು, ಕೈಗಾರಿಕೆಗಳಿಗೆ ಆವಶ್ಯಕವಾದಷ್ಟು ಕಚ್ಚಾ ಸಾಮಗ್ರಿಯನ್ನು ತಯಾರಿಸಲಾರೆವು. ನನಗೆ ತೋಚುವ ಪ್ರಕಾರ, ಇರುವ ಒಂದು ಪರಿಹಾರವೆಂದರೆ ಭೂಮಿಯನ್ನು ಆರ್ಥಿಕವಾಗಿ ಕಾರ್ಯಸಿಂಧುವೂ ನಿರ್ವಹಣಾಸುಲಭವೂ ಆದ ಹಿಡುವಳಿಗಳನ್ನಾಗಿ ವಿಭಾಗ ಮಾಡುವುದು. ಈ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಸಂಪೂರ್ಣ ಸಹಕಾರ ಪಡೆಯಬೇಕು. ನೀರಾವರಿ ಪ್ರದೇಶವಾದರೆ ಈ ಹಿಡುವಳಿಯು ಆರು ಎಕರೆಗಳು, ಖುಷ್ಕಿಗಾದರೆ, ಮಣ್ಣಿನ ಗುಣಮಟ್ಟ ಮತ್ತು ಬೀಳುವ ಮಳೆಯನ್ನಾಧರಿಸಿ, ೨೦ ರಿಂದ ೩೦ ಎಕರೆಗಳಿರಬಹುದು. ಇವುಗಳಿಗೆ ಸಂಖ್ಯೆಗಳನ್ನೀಯಬೇಕು, ಸದಸ್ಯರು ಮಾತ್ರ ಶಾಶ್ವತರಾದವರು. ಒಬ್ಬನು ಮಾತ್ರವೇ ಅದರ ಒಡೆಯನಾಗಿರಬೇಕು. ಇದನ್ನು ಅನುಷ್ಠಾನಗೊಳಿಸಲು ಬೇಕಾದ ಕಾನೂನುಗಳನ್ನು ಮಾಡಬೇಕು. ಇದನ್ನು ಮಾಡುವುದು ಸಾಧ್ಯ, ಅದರಿಂದ ದುಷ್ಪರಿಣಾಮಗಳೇನೂ ಆಗಲಾರದು. ಏಕೆಂದರೆ ಬಹುಸಂಖ್ಯಾತರು ಸಣ್ಣ ಹಿಡುವಳಿದಾರರು ಅಥವಾ ಕೃಷಿಕಾರ್ಮಿಕರು. ಇದಕ್ಕೆ ಸಂಬಂಧಿಸಿದಂತೆ, ನನ್ನ ಮತ್ತೊಂದು ಸಲಹೆಯಿದೆ. ಒಬ್ಬ ವ್ಯಕ್ತಿಗೆ ಒಂದಕ್ಕಿಂತ ಹೆಚ್ಚು ಆದಾಯಮೂಲವಿರಬಾರದು. ಅವನು ಸರ್ಕಾರಿ ನೌಕರನಾಗಿದ್ದರೆ, ತನ್ನ ಭೂ ಒಡೆತನವನ್ನು ಅವನು ಬಿಟ್ಟುಕೊಡಬೇಕು. ಇದು ಇತರ ವೃತ್ತಿಗಳವರಿಗೂ ಅನ್ವಯಿಸತಕ್ಕದ್ದು. ಈಗಂತೂ ಅನೇಕ ಆದಾಯಮೂಲಗಳನ್ನು ಹೊಂದಿದ ಸಾಕಷ್ಟು ಮಂದಿಯಿದ್ದಾರೆ. ಇದು ಸಾಮಾಜೀಕರಣ ಪ್ರಕ್ರಿಯೆಯ ಪ್ರಯತ್ನದ ದಿಸೆಯಲ್ಲಿ ಸಾರ್ಥಕವೆನಿಸೀತು.

ಇದುವರೆಗೂ ನಾನು ಹಳ್ಳಿಗಳಿಗೆ ಸಂಬಂಧಿಸಿದ ಅನೇಕ ಸಮಸ್ಯೆಗಳು ಮತ್ತವುಗಳ ಪರಿಹಾರಗಳ ಕುರಿತು ಮಾತನಾಡಿದ್ದೇನೆ. ಮತ್ತಷ್ಟು ಇವೆ, ಅವಕ್ಕೂ ಪರಿಹಾರಗಳು ಒದಗಬೇಕಾಗಿವೆ. ಆದರೆ ನನಗೆ ಸಮಯವೂ ಇಲ್ಲ ಅವಕಾಶವೂ ಇಲ್ಲ.

ನಗರಗಳು ಹೇಗೆ ದೊಡ್ಡದಾಗಿ ಬೆಳೆಯುತ್ತಿವೆ ಎಂಬುದರ ಚಿತ್ರಣವನ್ನು ನಾನು ಆರಂಭದಲ್ಲಿಯೇ ಮಾಡಿದ್ದೇನೆ. ಅದಕ್ಕಿರುವ ಒಂದು ಕಾರಣವೆಂದರೆ, ಖಾಸಗಿಯಾಗಲೀ ಸಾರ್ವಜನಿಕ ಕ್ಷೇತ್ರದ್ದಾಗಲೀ ಬಹುತೇಕ ಕೈಗಾರಿಕೆಗಳು, ಒಂದೆರಡು ಅಪವಾದಗಳ ಹೊರತಾಗಿ, ನಗರಗಳಲ್ಲಿ ಕೇಂದ್ರೀಕರಣಗೊಂಡಿರುವುದು. ಇದರಿಂದಾಗಿ, ಅವುಗಳ ಜನಸಂಖ್ಯೆ ಹೆಚ್ಚುತ್ತಲೇ ಹೋಗುತ್ತದೆ. ಆದ್ದರಿಂದ ಸಾಮಾಜಿಕ ಹಾಗೂ ನಗರಸೇವೆಗಳು

ಹದಗೆಟ್ಟಿವೆ. ನಾಗರಿಕರ ಆವಶ್ಯಕತೆಗಳನ್ನು ಪೂರೈಸುವ ಜವಾಬ್ದಾರಿ ಬೇರೆ ನಗರಪಾಲಿಕೆಗಳ ಮೇಲಿದೆ. ಪ್ರತಿ ನಗರಕ್ಕೂ ಎರಡು ಮುಖಗಳು: ದೊಡ್ಡ ಅರಮನೆಗಳು, ಅಂತಹವೇ ಸುಸಜ್ಜಿತ ಕಟ್ಟಡಗಳು, ವಿಶಾಲವಾದ ರಸ್ತೆಗಳು, ಉದ್ಯಾನಗಳು, ತೋಟಗಳು ಮತ್ತಿತರ ಎಲ್ಲ ಸೌಲಭ್ಯಗಳಿಂದ ಕೂಡಿ ಶ್ರೀಮಂತರ ಬದುಕನ್ನು ವೈಭವಪೂರ್ಣ ವಾಗಿಸಲು ಬೇಕಾದ ಸಕಲವನ್ನೂ ಹೊಂದಿರುವ ಒಂದು ಮುಖ. ಮತ್ತೊಂದು ಮುಖವೆಂದರೆ, ಬಡವರೂ, ಕಾರ್ಮಿಕ ಜನರೂ ವಾಸಿಸುವ ಕೊಳೆಗೇರಿಗಳು, ಬದುಕಲು ಬೇಕಾದ ಕನಿಷ್ಠ ಸೌಲಭ್ಯಗಳೂ ಇಲ್ಲದ ಪ್ರದೇಶಗಳು. ನಾನು ಕಾಂಗ್ರೆಸ್ ಅಧ್ಯಕ್ಷನಾಗಿದ್ದಾಗ ಒಮ್ಮೆ ಕಲ್ಕತ್ತದ ಒಂದು ಕೊಳೆಗೇರಿಗೆ ಹೋಗಿದ್ದೆ. ಅಲ್ಲಿನ ಪರಿಸರ ಎಷ್ಟು ಕೊಳಕಾಗಿ ತ್ತೆಂದರೆ, ಜನರು ಅತ್ಯಂತ ಬಡವರು, ವರ್ಣನಾತೀತ ಗುಡಿಸಲುಗಳಲ್ಲಿ ಅವರ ವಾಸ, ಕೆಲವರನ್ನು ಹೊರತುಪಡಿಸಿದರೆ ಗಂಡಸರು ಹೆಂಗಸರು ಮಕ್ಕಳು ಎಲ್ಲ ಚಿಂದಿ ತೊಟ್ಟವರು, ಹೀಗಾಗಿ ಅಲ್ಲಿ ನಾನು ಹೆಚ್ಚು ಕಾಲ ಉಳಿಯಲು ಸಾಧ್ಯವಾಗಲಿಲ್ಲ. ಆ ಕಡುತಮ ಅನುಭವವನ್ನು ನಾನು ಮರೆಯಲಾರೆ. ಕಲ್ಕತ್ತದ ಕೊಳೆಗೇರಿಯ ಬದುಕಿನ ಬಗ್ಗೆ ಬರೆದ ಒಂದು ಪುಸ್ತಕವನ್ನು ಪ್ರತಿಯೊಬ್ಬರೂ ಕಾದಂಬರಿಯಂತೆ ಓದಬೇಕೆಂದು ನನ್ನ ಮನವಿ. ಆ ಪುಸ್ತಕದ ಹೆಸರು 'ಆನಂದನಗರ' ಎಂದು, ಅದರ ಲೇಖಕ 'ಮಧ್ಯ ರಾತ್ರಿಯಲ್ಲಿ ಸ್ವಾತಂತ್ರ್ಯ' ಕೃತಿಯ ಕರ್ತೃಗಳಲ್ಲಿ ಒಬ್ಬರು. ಅವರೊಬ್ಬ ಫ್ರೆಂಚ್‌ಮನ್, ಆ ಆನಂದನಗರದಲ್ಲಿ ಕೆಲವು ತಿಂಗಳ ಕಾಲ ಬಾಳಿದವರು. ಅದರಲ್ಲಿ ಕೊಳೆಗೇರಿವಾಸದ ಪ್ರತಿಯೊಂದು ಮುಖವೂ ದಾಖಲಾಗಿದೆ. ಈ ಸಮಸ್ಯೆಗಳಿಗೆ ಬಹುತೇಕ ಕಾರಣ, ನಗರ ಗಳಲ್ಲಿ ಕೇಂದ್ರೀಕರಣಗೊಂಡ ಭಾರಿ ಮತ್ತು ದೊಡ್ಡ ಕೈಗಾರಿಕೆಗಳು. ಒಂದು ಕಾರ್ಖಾನೆ ಸ್ಥಾಪಿತವಾಗಿ ಕಾರ್ಯನಿರ್ವಹಿಸಲು ಬೇಕಾದವೆಂದರೆ, ಕಚ್ಚಾ ಸಾಮಗ್ರಿಗಳು, ನೀರು, ಸಾರಿಗೆ ಸೌಲಭ್ಯ ಮತ್ತು ವಿದ್ಯುತ್ತು. ಅವುಗಳಲ್ಲಿ ಕೆಲವಕ್ಕೆ ಸಾಕಾದಷ್ಟು ನೀರು ದೊರೆ ಯುತ್ತಿಲ್ಲ. ಅನೇಕ ಕಡೆಗಳಲ್ಲಿ ರಸ್ತೆ ಮತ್ತು ರೈಲುಗಳಿಗಾಗಿ ಊರ ಹೊರಗೆ ಹೋಗಬೇಕು. ವಿದ್ಯುತ್ತನ್ನು ಎಲ್ಲಿಗೆ ಬೇಕಾದರೂ ಕೊಂಡೊಯ್ಯಬಹುದು. ಅತ್ಯಂತ ನಿಕೃಷ್ಟವಾದದ್ದೆಂದರೆ ಕಾರ್ಮಿಕ ಸಮಸ್ಯೆ. ನಗರಗಳಲ್ಲಿ ಯಾವುದೇ ಕೈಗಾರಿಕೆಯನ್ನು ಸ್ಥಾಪಿಸದಿರುವುದು ಮಾತ್ರವೇ ಅಲ್ಲ, ವರ್ಗಾಯಿಸಬಹುದಾದ ಹಳೆಯ ಕಾರ್ಖಾನೆಗಳನ್ನು ಬೇರೆಡೆಗೆ ಸಾಗಿಸಬೇಕು ಎಂಬುದು ನನ್ನ ಸಲಹೆ. ಇವುಗಳನ್ನು ನಗರಗಳಿಂದ ಸುಮಾರು ೨೫ ಮೈಲಿಗಳಷ್ಟು ದೂರದಲ್ಲಿ ಸ್ಥಾಪಿಸಬೇಕು. ಒಂದು ಕಾರ್ಖಾನೆಗೂ ಮತ್ತೊಂದಕ್ಕೂ ಕನಿಷ್ಠ ಪಕ್ಷ ೨೫ ಮೈಲಿಗಳ ಅಂತರವಿರಬೇಕು. ಮೇಲೆ ಹೇಳಿದ ನಾಲ್ಕು ಮೂಲ ಆವಶ್ಯಕತೆ ಗಳನ್ನು ಗಮನದಲ್ಲಿರಿಸಿಕೊಂಡು ಇವುಗಳನ್ನು ಆದಷ್ಟು ಮಟ್ಟಿಗೆ ಹಳ್ಳಿಪ್ರದೇಶಗಳಲ್ಲಿ ಸ್ಥಾಪಿಸಬೇಕು. ಅದರಿಂದ ಕಾರ್ಮಿಕ ಸಮಸ್ಯೆಯೂ ನಿವಾರಣೆಯಾಗುತ್ತದೆ. ಹತ್ತಿರ

ದಲ್ಲಿಯೇ ಕಚ್ಚಾ ಸಾಮಗ್ರಿಗಳು ದೊರೆಯುತ್ತವೆ. ಪೂರ್ಣವಾಗಿ ನಿವಾರಣೆಯಾಗದಿದ್ದರೂ, ಸಾಮಾಜಿಕ ಹಾಗೂ ಪೌರಸೌಲಭ್ಯ ಸಮಸ್ಯೆಗಳು ಕನಿಷ್ಠಗೊಳ್ಳುತ್ತವೆ. ಹಳ್ಳಿಗಳ ಜನರಿಗೆ ಉದ್ಯೋಗ ಸಿಗುತ್ತದೆ, ಜೊತೆಗೆ ಇದು ನಮ್ಮೂರಿನದು ಎಂಬ ಭಾವನೆ ವರಲ್ಲಿ ಬಲಿಯುತ್ತದೆ. ಇತರ ದೇಶಗಳಲ್ಲಿ ಹೀಗೆ ಕೈಗಾರಿಕಾ ವಿಕೇಂದ್ರೀಕರಣ ಪ್ರಕ್ರಿಯೆ ನಡೆಯುತ್ತಿದೆಯೆಂದು ಕೇಳಿದ್ದೇನೆ. ಅಲ್ಲಿ ಇರಲಿ ಇಲ್ಲದಿರಲಿ, ಭಾರತದಲ್ಲಂತೂ ಇದು ಆಗಲೇಬೇಕು. ದೊಡ್ಡ ಹಾಗೂ ರಾಜಧಾನಿ ಪಟ್ಟಣಗಳು ಆಡಳಿತ ಮತ್ತು ಮಾರುಕಟ್ಟೆಯ ಕೇಂದ್ರಸ್ಥಾನವಾಗಬೇಕು, ಅಷ್ಟೆ. ಕೇಂದ್ರೀಕರಣದ ಕೆಡುಕುಗಳ ನಿವಾರಣೆಗೆ ಮತ್ತು ಹೆಚ್ಚು ಆರೋಗ್ಯಪೂರ್ಣವಾದ ಜೀವನಕ್ಕೆ ಇದೊಂದು ದಾರಿ ನನಗೆ ಕಾಣಿಸುತ್ತಿದೆ.

ದಿನಬಳಕೆಯ ವಸ್ತುಗಳನ್ನೆಲ್ಲ ವಿಕೇಂದ್ರೀಕರಣ ಪ್ರಕ್ರಿಯೆಯ ಮೂಲಕ ಹಳ್ಳಿಯ ನೆಲೆಯಲ್ಲಿಯೇ ತಯಾರಿಸಬೇಕಾದರೆ, ಈಗಿರುವ ಗಿರಣಿಗಳ ಗತಿಯೇನು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕಿರುವ ಪರಿಹಾರವೆಂದರೆ, ನನ್ನ ಮಟ್ಟಿಗೆ, ಬೇರೆಯ ಕೆಲವರೂ ಈ ರೀತಿಯಲ್ಲಿಯೇ ಆಲೋಚಿಸಬಹುದು, ತಯಾರಿಕೆಯ ಮೀಸಲಾತಿ. ಎಲ್ಲ ಬಗೆಯ ಬಟ್ಟೆಗಳನ್ನೂ ೫೦ ಕೌಂಟ್ ಮತ್ತು ಕೆಳಗಿನ ನೂಲಿನ ಖಾದಿಗೆ ಮೀಸಲಿರಿಸುವುದು. ೫೦ ಕೌಂಟ್‌ಗಳಿಗಿಂತ ಮೇಲ್ಮಟ್ಟದ ಬಟ್ಟೆಯನ್ನು ಗಿರಣಿಗಳು ತಯಾರಿಸಬಹುದು. ಆಗ ಕೈನೂಲುವಿಕೆ ಮತ್ತು ಕೈಮಗ್ಗಗಳು ಸಹಾಯಧನಕ್ಕೆ ಕೈಚಾಚಬೇಕಾಗುವುದಿಲ್ಲ, ತಮ್ಮ ಕಾಲ ಮೇಲೆಯೇ ತಾವು ನಿಂತುಕೊಳ್ಳಬಹುದು. ಗಿರಣಿಗಳು ತಮ್ಮಷ್ಟಕ್ಕೆ ತಾವಿರಬಹುದು. ಸ್ವಾತಂತ್ರ್ಯ ಬಂದ ಹೊಸತರಲ್ಲಿ ಪಂಚೆಗಳು ಮತ್ತು ಸೀರೆಗಳನ್ನು ಈ ರೀತಿ ಮೀಸಲಾತಿಗೆ ಒಳಪಡಿಸಲಾಗಿತ್ತು. ಆಗ ಇನ್ನೂ ಗಾಂಧೀಜಿಯವರ ಪ್ರಭಾವವಿತ್ತು. ಅನ್ಯ ಪ್ರಭಾವಗಳ ಕಾರಣದಿಂದ ಆ ಪ್ರಯತ್ನ ಕೊನೆಯುಸಿರೆಳೆಯಿತು.

ಹಾಗೆಯೇ, ಗಾಣದೆಣ್ಣೆಗೇ ಖಾದ್ಯ ತೈಲ ಸಂಪೂರ್ಣವಾಗಿ ಮೀಸಲಾಗಬೇಕು. ಒಂದು ಹಳ್ಳಿಗೆ ಎರಡು ಗಾಣಗಳಂತೆ ಆದರೂ, ಹತ್ತರಿಂದ ಹನ್ನೆರಡು ಲಕ್ಷ ಗಾಣಗಳು ಕೆಲಸ ನಿರ್ವಹಿಸಲು ಸಾಧ್ಯವಾಗಬಹುದು, ಅರ್ಧ ಕೋಟಿ ಜನರ ಹೊಟ್ಟೆ ತುಂಬಲು ಅದು ಸಾಕಾಗಬಹುದು. ಅಂತೆಯೇ, ಸೈನ್ಯ ಮತ್ತು ಪೊಲೀಸರ ಚರ್ಮವಸ್ತುಗಳನ್ನು ಗಿರಣಿಗಳಿಗೆ ಮೀಸಲಿರಿಸಲಿ. ಗಿರಣಿಗಳು ಯಾವುದೇ ಬಗೆಯ ಪಾದರಕ್ಷೆಗಳನ್ನು ತಯಾರಿಸದೆ, ಅವೆಲ್ಲ ಉಳಿದ ಸಮಾಜಕ್ಕೆ ಮೀಸಲಾಗಿರಲಿ. ಇದರಿಂದ ಹರಿಜನರ ಒಟ್ಟು ಸಂಖ್ಯೆಯಲ್ಲಿ ಅರ್ಧದಷ್ಟು ಜನರು ಚರ್ಮದ ಹದಗಾರಿಕೆ ಮತ್ತು ಪಾದರಕ್ಷೆ ಮತ್ತಿತರ ಆವಶ್ಯಕ ವಸ್ತುಗಳ ನಿರ್ಮಾಣದಲ್ಲಿ ಉದ್ಯೋಗ ಕಾಣುತ್ತಾರೆ.

ಇಂತಹ ಉದಾಹರಣೆಗಳನ್ನು ಕೊಡುತ್ತ ಹೋಗಬಹುದು. ಹಳ್ಳಿಗಳಲ್ಲಿಯೇ ತಯಾರಿಸಬಹುದಾದ ಅಗತ್ಯ ವಸ್ತುಗಳಿಗಾಗಿ ತಿಂಗಳಿಗೆ ಈಗಿನ ಬೆಲೆಗಳ ಪ್ರಕಾರ ಪ್ರತಿ

ಹಳ್ಳಿಗನೂ ಸರಾಸರಿ ೩೦೦ ರೂಪಾಯಿಗಳನ್ನು ವೆಚ್ಚಮಾಡುತ್ತಾನೆ. ಒಂದು ಸಾವಿರ ಜನಸಂಖ್ಯೆಯಿರುವ ಹಳ್ಳಿಯ ವೆಚ್ಚ ಮೂರು ಲಕ್ಷ ರೂಪಾಯಿಗಳು. ಅದನ್ನು ತಡೆಗಟ್ಟಬಹುದಾದರೆ, ಬಹುತೇಕ ಹಳ್ಳಿಗರನ್ನು ಆದಾಯ ತರುವ ಕೆಲಸಗಳಲ್ಲಿ ತೊಡಗಿಸಬಹುದು, ಹಳ್ಳಿಗಳೂ ಸ್ವಯಂಪೂರ್ಣವಾಗುತ್ತವೆ. ಅದಕ್ಕಿಂತ ಮುಖ್ಯವಾದುದು ಮತ್ತು ಅರ್ಥಪೂರ್ಣವಾದುದು ಎಂದರೆ, ಅವು ಸ್ವಾವಲಂಬಿಗಳಾಗುತ್ತವೆ. ಅಸಮತೋಲನವನ್ನು ಹೋಗಲಾಡಿಸುವ ಒಂದು ಸಕಾರಾತ್ಮಕ ಪರಿಹಾರವಿದು. ಅವಕಾಶ ಮತ್ತು ಸಮಯಗಳ ಕಾರಣದಿಂದ ನಾನಿದನ್ನು ಲಂಬಿಸಹೋಗುವುದಿಲ್ಲ.

ಇದಕ್ಕೆ ಸಂಬಂಧಪಟ್ಟ ಕೆಲವು ವಿಷಯಗಳ ಬಗ್ಗೆ ಈಗ ಚರ್ಚಿಸಬಯಸುತ್ತೇನೆ. ಪ್ರಧಾನ ಮಂತ್ರಿ, ಉಳಿದ ಎಲ್ಲ ಮಂತ್ರಿಗಳು, ಕೇಂದ್ರ ಹಾಗೂ ರಾಜ್ಯಗಳ ಶಾಸಕಾಂಗದ ಸದಸ್ಯರು– ಇವರೆಲ್ಲ ಭ್ರಷ್ಟಾಚಾರ, ಲಂಚಗುಳಿತನ, ಆಮಿಷ ಮುಂತಾದವುಗಳ ವಿರುದ್ಧ ಹೋರಾಡಬೇಕಾದುದರ ಬಗ್ಗೆ ಉತ್ಸಾಹದಿಂದ ಮಾತನಾಡುತ್ತಾರೆ. ಇಂತಹ ಮಾತುಗಳಲ್ಲಿ ತೊಡಗಿರುವ ಇವರಲ್ಲಿ ಬಹು ಮಂದಿಯೇ ಮನೆಗೆ ಹೋಗಿ ಇವುಗಳಲ್ಲಿ ತೊಡಗುತ್ತಾರೆ ಎಂಬುದು ಸ್ವಾರಸ್ಯಕರ ವಿಷಯ, ಮಿಕ್ಕವರಿಗೂ ಹೀಗೇ ಅನ್ನಿಸಬಹುದು. ಲಂಚವನ್ನು ಹೋಗಲಾಡಿಸಲು ಕಾನೂನುಗಳನ್ನು ಮಾಡುವುದು ಒಳ್ಳೆಯದೇ. ಜೊತೆಗೆ ನಾನು ಕಳಕಳಿಯಿಂದ ನಿವೇದಿಸಿಕೊಳ್ಳುವುದೇನೆಂದರೆ, ದಕ್ಷ, ಪ್ರಾಮಾಣಿಕ ಹಾಗೂ ಆದರ್ಶಯುತ ಸಂಸ್ಥೆಯೊಂದನ್ನು ರಚಿಸಿ, ಈಗಿನ ಮತ್ತು ಹಿಂದಿನ ಪ್ರತಿಯೊಬ್ಬ ಮಂತ್ರಿ, ಪ್ರಧಾನ ಮಂತ್ರಿ ಹಾಗೂ ಕೇಂದ್ರ ಮತ್ತು ರಾಜ್ಯಗಳ ಶಾಸಕಾಂಗದ ಸದಸ್ಯರುಗಳ, ಸರ್ಕಾರಿ ಉದ್ಯಮಗಳ ಅಧ್ಯಕ್ಷರುಗಳು ಮೇಲಿನಿಂದ ಕೆಳವರ್ಗದವರೆಗಿನ ಅಧಿಕಾರಿಗಳ ಸ್ವಂತ ಹೆಸರಿನಲ್ಲಾಗಲೀ ಬೇನಾಮಿ ಹೆಸರಿನಲ್ಲಾಗಲಿ ಕಳೆದ ೨೦ ವರ್ಷಗಲ್ಲಿ ಇರುವ ಆಸ್ತಿಗಳನ್ನೂ, ಬ್ಯಾಂಕ್‌ನಲ್ಲಿನ ಹಣವನ್ನೂ ಗದ್ದಲ–ಗೊಂದಲಗಳಿಲ್ಲದೆ ತನಿಖೆ ಮಾಡುವ ವ್ಯವಸ್ಥೆಯಾಗಬೇಕು. ಈ ವಿವರಗಳನ್ನು ಒಂದು ವರ್ಷದಲ್ಲಿ ಕಲೆಹಾಕಬಹುದು. ನನ್ನ ಅಂದಾಜಿನ ಪ್ರಕಾರ ೭೦,೦೦೦ ಕೋಟಿ, ಕನಿಷ್ಠ ಪಕ್ಷ ೫೦,೦೦೦ ಕೋಟಿ ರೂಪಾಯಿಗಳನ್ನು ಸಂಗ್ರಹಿಸಬಹುದು. ಇದನ್ನು ತಕ್ಷಣವೇ ಜಾರಿಗೊಳಿಸಬೇಕು.

ಸರ್ಕಾರಿ ನೌಕಕರರಿಗೆ ಸಂಬಂಧಿಸಿದಂತೆ. ನಲವತ್ತು ವರ್ಷಗಳ ನಂತರವೂ, ಅವರಿನ್ನೂ ಜನರ ಮತ್ತು ದೇಶದ ಬಗ್ಗೆ ಸೇವಾ ಮನೋಭಾವವನ್ನು ಬೆಳೆಸಿಕೊಳ್ಳಬೇಕಾಗಿದೆ. ಅವರಿಗೆ ಇದು ಇದೆಯೋ ಇಲ್ಲವೋ ಅನುಮಾನ. ಕೆಲವು ಅಪವಾದಗಳಿರಬಹುದು. ಎಲ್ಲ ಇಲಾಖೆಗಳೂ, ಅತ್ಯುಚ್ಚ ಮಟ್ಟದ ನ್ಯಾಯಾಂಗವನ್ನು ಹೊರತುಪಡಿಸಿ, ಭ್ರಷ್ಟಗೊಂಡವೇ. ಇಡೀ ಆಡಳಿತಯಂತ್ರವೇ ಅದರ ಹಿಡಿತದಲ್ಲಿದೆ. ಸೇವೆಗಳಲ್ಲಿ ಉತ್ತರ

ದಾಯಿತ್ವವೇ ಇಲ್ಲ, ಅದಕ್ಕೆ ಶಿಕ್ಷೆಯೂ ಇಲ್ಲವಾಗಿದೆ. ಇದಕ್ಕೆ ಪರಿಹಾರ ಒದಗಿಸಬೇಕು. ಕೆಲವು ಇಲಾಖೆಗಳಲ್ಲಿ 'ಬಳಸಿ ಕಳಿಸಿ' (Hire and Fire) ನೀತಿಯನ್ನು ಅನುಸರಿಸ ಬಹುದೆನ್ನಿಸುತ್ತದೆ.

ದೊಡ್ಡ ಮತ್ತು ನಿವಾರಣೀಯ ನಷ್ಟವನ್ನು ಉಂಟುಮಾಡುತ್ತಿರುವ ವಲಯವೆಂದರೆ ಕೇಂದ್ರ ಮತ್ತು ರಾಜ್ಯಸರ್ಕಾರಗಳ ಒಡೆತನದ ಕೈಗಾರಿಕೆಗಳು ಮತ್ತು ಉದ್ಯಮಗಳು. ಸ್ಪರ್ಧೆಯೇ ಇಲ್ಲದವುಗಳನ್ನು ಹೊರತುಪಡಿಸಿದಂತೆ, ಬೇರೆ ಯಾವ ಉದ್ದಿಮೆಗಳು ಲಾಭ ಮಾಡಿವೆ, ಬಂಡವಾಳದ ಮೇಲಿನ ಎಷ್ಟರ ಮಟ್ಟಿಗಿನ ಬಡ್ಡಿಯನ್ನು ಅವು ತೀರಿಸಲು ಸಾಧ್ಯವಾಗಿದೆ, ತೆರಿಗೆ ಮತ್ತಿತರ ವೆಚ್ಚಗಳನ್ನು ಭರಿಸುತ್ತಿವೆ ಎಂದು ತಿಳಿಯ ಬಯಸುತ್ತೇನೆ. ಇವುಗಳಿಂದಾಗುತ್ತಿರುವ ನಷ್ಟ ಭಾರಿ ಪ್ರಮಾಣದ್ದು, ಸಾವಿರಾರು ಕೋಟಿ ರೂಪಾಯಿಗಳಷ್ಟು. ಇದಕ್ಕೆ ಕಾರಣವಾದ ಅಂಶಗಳೆಂದರೆ, ಬೇಕಾದುದಕ್ಕಿಂತ ಅನೇಕ ಪಟ್ಟು ಉದ್ಯೋಗಿಗಳನ್ನು ತೆಗೆದುಕೊಂಡಿರುವುದು, ತಾಂತ್ರಿಕ ಸಿಬ್ಬಂದಿಯಿರಬೇಕಾದ ಕಡೆ, ಕೇವಲ ಐ.ಎ.ಎಸ್. ಅಥವಾ ಐ.ಪಿ.ಎಸ್. ಎಂಬ ಕಾರಣಕ್ಕಾಗಿಯೋ ರಾಜಕೀಯ ಒತ್ತಡದ ಕಾರಣದಿಂದಲೋ, ಅದಕ್ಷ ಹಾಗೂ ಮೂರ್ಖ ಅಧಿಕಾರಿವರ್ಗದ ಕೈಯಲ್ಲಿ ಅವುಗಳ ಆಡಳಿತವನ್ನು ವಹಿಸಿರುವುದು. ಅದಕ್ಕೆ ಎತ್ತಿ ತೋರಿಸಬಹುದಾದ ಉದಾಹರಣೆ ಯೆಂದರೆ ಪ್ರತಿ ರಾಜ್ಯದಲ್ಲಿನ ರಸ್ತೆ ಸಾರಿಗೆ. ನಿರುದ್ಯೋಗಿ ವಿದ್ಯಾವಂತ ವ್ಯಕ್ತಿಗಳಿಗೆ ಬಸ್ಸುಗಳ ಜವಾಬ್ದಾರಿಯನ್ನು ವಹಿಸಿಕೊಡುವ ಮೂಲಕ ಸಾವಿರಾರು ಕೋಟಿ ರೂಪಾಯಿ ಗಳ ನಷ್ಟವನ್ನು ತಡೆಗಟ್ಟಬಹುದು. ಮರ್ಯಾದೆಯಿಂದ ಬಾಳುವಷ್ಟು ಆದಾಯ ತರುವ ಒಂದು ಲಕ್ಷ ಮಂದಿ ಉದ್ಯೋಗಿಗಳನ್ನು ಇದರಲ್ಲಿ ತೊಡಗಿಸಬಹುದು. ಖಾಸಗಿ ಬಸ್ಸುಗಳಲ್ಲಿ ಟಿಕೆಟ್ ದರ ಕಡಿಮೆ, ಅವು ಓಡಾಡುವುದು ಒರಟು ರಸ್ತೆಗಳ ಮೇಲೆ, ಮತ್ತಷ್ಟು ಉತ್ತಮವಲ್ಲದಿದ್ದರೂ ಅಷ್ಟೇ ಒಳ್ಳೆಯ ಸೇವೆ ಸಲ್ಲಿಸುತ್ತವೆ, ಮತ್ತು ಒಳ್ಳೆಯ ಲಾಭ ಮಾಡುತ್ತವೆ. ಹೆಚ್ಚು ವಸೂಲು ಮಾಡಿ, ಒಳ್ಳೆಯ ರಸ್ತೆಗಳ ಮೇಲೆ ಓಡಾಡುತ್ತ, ಸರ್ಕಾರ ಭರಿಸುತ್ತಿರುವ ನಷ್ಟ ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳು. ಕಾರಣ, ಭ್ರಷ್ಟತೆ ಇರುವುದು. ನಷ್ಟವೇಕೆ? ಯಾರಪ್ಪನ ದುಡ್ಡು? ಕೆಲವೇ ಭ್ರಷ್ಟ ಜನರಿಗೆ ಅನುಕೂಲ ಮಾಡಲೆಂದೇ?

ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿನ ಭಾರಿ ನಷ್ಟದ ಮತ್ತೊಂದು ಬಾಬತ್ತೆಂದರೆ, ಅವುಗಳಲ್ಲಿನ ದುಬಾರಿ ಆಡಳಿತಯಂತ್ರ ಮತ್ತು ಧಾರಾಳ ಸಂಬಳಶ್ರೇಣಿಗಳು. ಆಡಳಿತ ವನ್ನು ನಡೆಸಲು ಆಗುತ್ತಿರುವ ವೆಚ್ಚ ಒಟ್ಟು ಆಯವ್ಯಯದ ೪೫% ರಷ್ಟು. ಅಬ್ಬಬ್ಬ ಎಂದರೆ ಅದು ೨೫% ಗಿಂತ ಹೆಚ್ಚಿರಬಾರದು. ಇದಕ್ಕೆ ಕಾರಣ ಆವಶ್ಯಕವಾದುದಕ್ಕಿಂತ

ಮೂರ್‍ನಾಲ್ಕು ಪಟ್ಟು ನೌಕರರಿರುವುದು. ಹೊಸ ನೇಮಕಾತಿಯನ್ನು ಮಾಡಿಕೊಳ್ಳದಿದ್ದರೆ, ಇನ್ನು ಹತ್ತು ವರ್ಷಗಳಲ್ಲಿ ಇದನ್ನು ತಹಬಂದಿಗೆ ತರಬಹುದು. ಇದನ್ನು ಅನುಷ್ಠಾನಗೊಳಿಸಲು ನಾನೇನೋ ಪ್ರಯತ್ನಿಸಿದೆ, ಆದರೆ ನಾನು ಬಹು ಬೇಗ ಮುಖ್ಯ ಮಂತ್ರಿ ಸ್ಥಾನವನ್ನೇ ತೆರವು ಮಾಡಬೇಕಾಯಿತು. ಸರ್ಕಾರಿ ಸೇವೆಯೆಂದರೆ ಪಿಂಜ್ರಾಪೋಲ್ ಅಲ್ಲವಲ್ಲ!

ಸಂವಿಧಾನವು ಆಲೋಚನೆಯನ್ನೇ ಮಾಡದಿದ್ದ ಯೋಜನಾ ಆಯೋಗವು ಬಂಡಿಯ ಅರ್ಥರಹಿತವೂ ದುಬಾರಿಯೂ ಆದ ಐದನೆಯ ಗಾಲಿಯಾಗಿದೆ. ಅದರ ಅವಾಸ್ತವಿಕತೆ, ದೇಶದ ಬಗೆಗಿನ, ಅದರಲ್ಲಿಯೂ ಹಳ್ಳಿಗಳಲ್ಲಿನ, ಸಮಸ್ಯೆಗಳ ಅಜ್ಞತೆಯನ್ನು ಮನವರಿಕೆ ಮಾಡಿಕೊಡಲು ಎಷ್ಟು ಬೇಕಾದರೂ ಕಾರಣಗಳನ್ನು ಕೊಡಬಹುದು. ಎಷ್ಟು ಬೇಗ ಅದು ರದ್ದಾಗುವುದೋ ಅಷ್ಟೂ ಒಳ್ಳೆಯದು. ನೆಲದಲ್ಲಿ ಅದರ ಬೇರುಗಳಿಲ್ಲ.

ಹೆಚ್ಚಿನ ಉಳಿತಾಯ ಹಾಗೂ ಆವಶ್ಯಕ ಹಣದ ಉಳಿತಾಯಗಳನ್ನು ಸಾಧಿಸಲು ಒಪ್ಪುವುದಾದರೆ ನಾನು ಕೆಲವು ಸಲಹೆಗಳನ್ನು ನೀಡಬಲ್ಲೆ.

ಒಟ್ಟಾರೆ, ನಮ್ಮ ಅರ್ಥವ್ಯವಸ್ಥೆಯಲ್ಲಿನ ಅಸಮತೋಲನಗಳನ್ನು ಸರಿಸುಮಾರು ಹೀಗೆ ಪಟ್ಟಿ ಮಾಡಬಹುದು:

೧. ಬಂಡವಾಳಾಧಾರಿತ ಉದ್ಯಮಗಳಿಗೆ ಪ್ರೋತ್ಸಾಹ ನೀಡಬಾರದು. ಕಾರ್ಮಿಕಾಧಾರಿತ ಯೋಜನೆಗಳಿಗೆ ಆದ್ಯತೆಯಿರಲಿ.

೨. ಹತ್ತು ವರ್ಷಗಳಲ್ಲಿ ೧೦ ರಿಂದ ೧೨ ಕೋಟಿ ಎಕರೆಗಳಷ್ಟು ಹೆಚ್ಚಿನ ಜಮೀನನ್ನು ನೀರಾವರಿಗೆ ಒಳಪಡಿಸಿ, ಹಣ ಮತ್ತು ವೇಳೆಗಳ ಅಪವ್ಯಯವನ್ನು ನಿವಾರಿಸಿಕೊಂಡರೆ ಇದು ಸಾಧ್ಯ.

೩. ಎಲ್ಲೆಲ್ಲಿ ಕೇಂದ್ರೀಕೃತ ಹಾಗೂ ವಿಕೇಂದ್ರೀಕೃತ ಉತ್ಪಾದನೆಗಳಲ್ಲಿ ಸಂಘರ್ಷವಿದೆಯೋ ಅಲ್ಲೆಲ್ಲ ಎರಡನೆಯ ಬಗೆಗಿನದಕ್ಕೆ ಉತ್ತೇಜನ ನೀಡಿ.

೪. ಗಾಂಧೀಜಿಯವರ ಸೃಜನಾತ್ಮಕ ಕಾರ್ಯಕ್ರಮಕ್ಕೆ ಆದಷ್ಟೂ ಬೆಂಬಲ ನೀಡಿ, ಇದರಿಂದ ಹಳ್ಳಿಗಳು ಸ್ವಯಂಪೂರ್ಣವಲ್ಲದೆ ಸ್ವಾವಲಂಬಿಗಳೂ ಆಗುತ್ತವೆ.

೫. ಮೇಲೆ ಉಕ್ತವಾದ ರೀತಿಯಲ್ಲಿ ಸಾಧ್ಯವಾದೆಡೆಯಲ್ಲೆಲ್ಲ ಗೃಹಕೈಗಾರಿಕೆಗಳ ಉತ್ಪಾದನೆಗೆ ಮೀಸಲಾತಿ ನೀಡಿ.

೬. ಜೈವಿಕ ಹಾಗೂ ಮಾನವ ಅನಿಲಗಳ ಇಂಧನಗಳನ್ನು ಹಾಗೆಯೇ ಜಾನುವಾರು ಸಾಮರ್ಥ್ಯವನ್ನು ನಿರುದ್ಯೋಗ ನಿವಾರಣೆಗಾಗಿ ಪೂರ್ಣಪ್ರಮಾಣದಲ್ಲಿ ಬಳಸಿ

ಕೊಳ್ಳಿ. ಹಳ್ಳಿಗಳಿಂದ ಹತ್ತಿರದ ಮಾರುಕಟ್ಟೆಗಳಿಗೆ ಕೃಷಿ ಉತ್ಪಾದನೆಗಳ ಸಾಗಾಟ ಮಾಡಲು ಎತ್ತಿನ ಗಾಡಿಗಳನ್ನೇ ಬಳಸಿಕೊಳ್ಳಬೇಕು; ಟ್ರಕ್‌ಗಳನ್ನಲ್ಲ. ಆಗ ಇಂಧನ ಉಳಿತಾಯ ಸಾಧ್ಯ.

೭. ಎಲ್ಲ ಸರ್ಕಾರಿ ನೌಕರರ ಅಪ್ರಾಮಾಣಿಕ ಸಂಪಾದನೆಯನ್ನು ಬಯಲು ಮಾಡಿ, ಅವುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಆವಶ್ಯಕವಾದ ಕಾನೂನು ರಚಿಸಿ. ಅಂತೆಯೇ ಮೇಲೆ ಉಲ್ಲೇಖಿಸಿದ ಇತರವುಗಳ ಬಗ್ಗೆಯೂ.

೮. ತಪ್ಪು ಮಾಡುವ ಸರ್ಕಾರಿ ನೌಕರರಿಗೆ ಕಠಿಣ ಶಿಕ್ಷೆ ವಿಧಿಸಿ. ಸಾಧ್ಯವಾದ ಕಡೆಗಳಲ್ಲೆಲ್ಲ 'ಬಳಸಿ ಕಳಿಸಿ' ನೀತಿಯನ್ನು ಅನುಸರಿಸಿ. ಉತ್ತರದಾಯಿತ್ವ ಹಾಗೂ ಶಿಕ್ಷೆಗಳನ್ನು ಜಾರಿಗೊಳಿಸಬೇಕು

೯. ಸಂಪತ್ತು ಮತ್ತು ಅಧಿಕಾರಗಳ ಕೇಂದ್ರೀಕರಣವನ್ನು ತಪ್ಪಿಸಿ.

೧೦. ಗಾಂಧೀಜಿಯವರನ್ನು ನೆನಪಿಸಿಕೊಳ್ಳಿ ಹಾಗೂ ಅವರನ್ನು ಅನುಸರಿಸಿ.

ಸತ್ಯಂ ಶಿವಂ ಸುಂದರಂ

'ಕರ್ನಾಟಕ ಶಿಲ್ಪಿ'

"ಶ್ರೀಮಾನ್ ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರನ್ನು ನೆನೆದಾಗ ಏಕೀಕೃತ ಕರ್ನಾಟಕವೂ, ಕರ್ನಾಟಕವನ್ನು ನೆನೆದಾಗ ನಿಜಲಿಂಗಪ್ಪನವರೂ ನೆನಪಿಗೆ ಬಂದರೆ ಆಶ್ಚರ್ಯವಿಲ್ಲ. ಕರ್ನಾಟಕ ಏಕೀಕರಣವನ್ನು ಸಾಧಿಸಿ, ಸಾವಿರಾರು ವರ್ಷಗಳ ಕನ್ನಡಿಗರ ಅಭೀಷ್ಟವನ್ನು ಪೂರೈಸಿದವರಲ್ಲಿ ನಿಜಲಿಂಗಪ್ಪನವರು ಅಗ್ರಗಣ್ಯರು. 'ಕರ್ನಾಟಕ ಶಿಲ್ಪಿ' ಎಂಬ ಪ್ರಶಸ್ತಿ ಅವರಿಗೆ ಸಮುಚಿತವಾಗಿ ಸಲ್ಲುತ್ತದೆ.

ಅವರು ರಾಜಕಾರಣಿಯಾಗಿಯೂ ಸತ್ಯಸಂಧರು, ತತ್ವನಿಷ್ಠರು; ಮುಖ್ಯಮಂತ್ರಿಯಾಗಿಯೂ ದರ್ಪಾಹಂಕಾರ ವರ್ಜಿತರು ಹಾಗೂ ಸರಳ ಜೀವಿಗಳು. ಕಾಂಗ್ರೆಸ್ ಅಧ್ಯಕ್ಷರಾಗಿ, ರಾಷ್ಟ್ರಮಟ್ಟದ ನಾಯಕರಾಗಿ ಅಧಿಕಾರ ಲಾಲಸೆಯಿಂದ ಎಂದೂ ಅನ್ಯಾಯಕ್ಕೆ ಮಣಿದವರಲ್ಲ. ಬಸವೇಶ್ವರ, ಮಹಾತ್ಮಗಾಂಧೀಜಿ ಯವರ ತತ್ವವನ್ನು ಅರಗಿಸಿಕೊಂಡು ಅದರ ಬೆಳಕಿನಲ್ಲಿ ಬದುಕನ್ನು ನೇರ್ಪಡಿಸಿಕೊಂಡು, ಆತ್ಮಗೌರವವನ್ನು ಬಿಟ್ಟುಕೊಡದೆ ಹಸನಾಗಿ ಸಮಾಧಾನದಿಂದ ಬಾಳಿದವರು. ಆ ಹಸನು ಸಮಾಧಾನಗಳು ಅವರ ನಡೆ-ನುಡಿಗಳಲ್ಲಿ, ಅವರ ನಿಷ್ಕಪಟ ಮುಗ್ಧ ಮಂದಹಾಸದಲ್ಲಿ ಪ್ರತಿಬಿಂಬಿಸುತ್ತವೆ."

– ಕುವೆಂಪು

ಶ್ರೀ ಎಸ್. ನಿಜಲಿಂಗಪ್ಪ ರಾಷ್ಟ್ರೀಯ ಪ್ರತಿಷ್ಠಾನ

ಬೆಂಗಳೂರು – 560 001